ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ ಸಂಖ್ಯಾ ೧೪

ಶ್ರೀ ಸ್ಕಾಂದಮಹಾಪುರಾಣಂ

೭

ಪ್ರಭಾಸಖಂಡ

ಪ್ರಭಾಸಕ್ಷೇತ್ರಮಾಹಾತ್ಮ್ಯ

(ಉತ್ತರ ಭಾಗ)

(ಮೂಲ ಮತ್ತು ಅನುವಾದ ಸಹಿತ)

ಅನುವಾದಕ

ಆಸ್ಥಾನ ವಿದ್ವಾನ್

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,

ಮೈಸೂರು.

೧೯೫೭

ಅರಿಕೆ

ಪ್ರಭಾಸ ಕ್ಷೇತ್ರದ ವಿಷಯವಾಗಿ ಹೇಳಬೇಕಾದ ಒಂದೆರಡು ಸಂಗತಿಗಳನ್ನು ಈ ಖಂಡದ ಮೊದಲಭಾಗದ ಅರಿಕೆಯಲ್ಲಿಯೇ ಹೇಳಿಯಾಗಿದೆ. ಈ ಭಾಗದಲ್ಲಿ ಪ್ರಭಾಸ ಖಂಡದ " ಪ್ರಭಾಸ ಕ್ಷೇತ್ರಮಾಹಾತ್ಮ್ಯ "ವು ಸಂಪೂರ್ಣವಾಗಿರುತ್ತದೆ. ಬರಲಿರುವ ಕಡೆಯ ಮುವ್ವತ್ತನೆಯ ಸಂಪುಟದಲ್ಲಿ ಈ ಖಂಡದ ಉಳಿದೆರಡು ಭಾಗಗಳೂ ಮುದ್ರಿತವಾಗಿ ಅಖಂಡಸ್ಕಾಂದ ಮಹಾಪುರಾಣವು ಈಶ್ವರಕೃಪೆಯಿಂದ ಮುಗಿಯುತ್ತದೆಂದು ತಿಳಿಸಲು ಅತ್ಯಂತ ಸಂತೋಷವಾಗುತ್ತದೆ.

ಇಂತಹ ಅನೇಕಾನೇಕ ಕ್ಷೇತ್ರಮಾಹಾತ್ಮ್ಯಗಳ ಸಂಪುಟವೆನಿಸಿರುವ ಈ ಮಹಾಪುರಾಣವನ್ನು ಕನ್ನಡದ ಅನುವಾದದೊಡನೆ ಪ್ರಕಟಿಸಲು ಪ್ರೇರೇಪಿಸಿ ಕನ್ನಡಿಗರೆಲ್ಲರಿಗೂ ಮಹೋಪಕೃತಿಯೆನ್ನಸಗಿ ಅವರೆಲ್ಲರ ಚಿರಕೃತಜ್ಞತೆಗೆ ಪಾತ್ರರಾಗಿರುವ ನಮ್ಮನ್ನಾಳುವ ಶ್ರೀಮದ್ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೆ ಪರಮೇಶ್ವರನು ಇತೋಽಪ್ಯತಿಶಯವಾದ ಸಮಸ್ತ ಸನ್ಮಂಗಳಗಳನ್ನೂ ದಯೆಪಾಲಿಸಿ ಸಂರಕ್ಷಿಸಲೆಂದು ಸಂಪ್ರಾರ್ಥಿಸುತ್ತೇನೆ.

ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರೀ

॥ ಶ್ರೀಃ ॥

ಅಥ ಮಂಗಳಾಚರಣಶ್ಲೋಕಃ

ಯಸ್ಯಾಜ್ಞಯಾ ಜಗತ್ಸ್ರಷ್ಟಾ ವಿರಿಂಚಿಃ ಪಾಲಕೋ ಹರಿಃ ।
ಸಂಹರ್ತಾ ಕಾಲರುದ್ರಾಖ್ಯೋ ನಮಸ್ತಸ್ಮೈಪಿನಾಕಿನೇ ॥

ತಾತ್ಪರ್ಯ

ಯಾವ ಪ್ರಭುವಿನ ಅಪ್ಪಣೆಯಿಂದ
ಬ್ರಹ್ಮನು ಜಗತ್ತನ್ನು ಸೃಜಿಸುವವನಾಗಿಯೂ
ಶ್ರೀಮನ್ನಾರಾಯಣಮೂರ್ತಿಯು ಸಂರಕ್ಷಿಸುವವನಾಗಿಯೂ
ಕಾಲರುದ್ರನೆಂದು ಹೆಸರಾದ ಸ್ವಾಮಿಯು ಸಂಹಾರಕರ್ತನಾಗಿಯೂ ಇರುವರೋ
ಆ ಪಿನಾಕಪಾಣಿಯಾದ ಪರಮಶಿವನಿಗೆ
ನಮಸ್ಕಾರವು

ವಿಷಯಾನುಕ್ರಮಣಿಕೆ

	ಪುಟಸಂಖ್ಯೆ
ನೂರ ಇಪ್ಪತ್ತಾರನೆಯ ಅಧ್ಯಾಯ—	
ಶಾಂಡಿಲ್ಯೇಶ್ವರಮಾಹಾತ್ಮ್ಯವರ್ಣನಂ	೭೮೫_೭೮೬
ನೂರ ಇಪ್ಪತ್ತೇಳನೆಯ ಅಧ್ಯಾಯ—	
ಕ್ಷೇಮಂಕರೇಶ್ವರಮಾಹಾತ್ಮ್ಯವರ್ಣನಂ	೭೮೭_೭೮೮
ನೂರ ಇಪ್ಪತ್ತೆಂಟನೆಯ ಅಧ್ಯಾಯ—	
ಸಾಗರಾದಿತ್ಯಮಾಹಾತ್ಮ್ಯವರ್ಣನಂ	೭೮೯_೭೯೩
ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ—	
ಉಗ್ರಸೇನೇಶ್ವರಮಾಹಾತ್ಮ್ಯವರ್ಣನಂ	೭೯೪_೮೦೨
ನೂರ ಮೂವತ್ತನೆಯ ಅಧ್ಯಾಯ—	
ಪಾಶುಪತೇಶ್ವರಮಾಹಾತ್ಮ್ಯವರ್ಣನಂ	೮೦೩_೮೧೬
ನೂರ ಮೂವತ್ತೊಂದನೆಯ ಅಧ್ಯಾಯ—	
ಧ್ರುವೇಶ್ವರಮಾಹಾತ್ಮ್ಯವರ್ಣನಂ	೮೧೭_೮೨೧
ನೂರ ಮೂವತ್ತೆರಡನೆಯ ಅಧ್ಯಾಯ—	
ಸಿದ್ಧಲಕ್ಷ್ಮೀಮಾಹಾತ್ಮ್ಯವರ್ಣನಂ	೮೨೨_೮೨೪
ನೂರ ಮೂವತ್ತಮೂರನೆಯ ಅಧ್ಯಾಯ—	
ಮಹಾಕಾಲೀಮಾಹಾತ್ಮ್ಯವರ್ಣನಂ	೮೨೫_೮೨೭
ನೂರ ಮೂವತ್ತನಾಲ್ಕನೆಯ ಅಧ್ಯಾಯ—	
ಪುಷ್ಕರಾವರ್ತಕಾನದೀಮಾಹಾತ್ಮ್ಯವರ್ಣನಂ	೮೨೮_೮೩೦

	ಪುಟಸಂಖ್ಯೆ
ನೂರ ಮೂವತ್ತೈದನೆಯ ಅಧ್ಯಾಯ—	
ದುಃಖಾಂತಕಾರಿಣೀಶೀತಲಾಗೌರೀಮಾಹಾತ್ಮ್ಯವರ್ಣನಂ	೮೩೧_೮೩೨
ನೂರ ಮೂವತ್ತಾರನೆಯ ಅಧ್ಯಾಯ—	
ಸೋಮೇಶ್ವರಮಾಹಾತ್ಮ್ಯವರ್ಣನಂ	೮೩೩_೮೩೪
ನೂರ ಮೂವತ್ತೇಳನೆಯ ಅಧ್ಯಾಯ—	
ಕಂಕಾಲಭೈರವಕ್ಷೇತ್ರಪಾಲಮಾಹಾತ್ಮ್ಯವರ್ಣನಂ	೮೩೫
ನೂರ ಮೂವತ್ತೆಂಟನೆಯ ಅಧ್ಯಾಯ—	
ತೃಣಬಿಂದ್ವೀಶ್ವರಮಾಹಾತ್ಮ್ಯವರ್ಣನಂ	೮೩೬
ನೂರ ಮೂವತ್ತೊಂಬತ್ತನೆಯ ಅಧ್ಯಾಯ—	
ಚಿತ್ರಾದಿತ್ಯಮಾಹಾತ್ಮ್ಯವರ್ಣನಂ	೮೩೭_೮೪೩
ನೂರ ನಲವತ್ತನೆಯ ಅಧ್ಯಾಯ—	
ಚಿತ್ರಪಥಾನದೀಮಾಹಾತ್ಮ್ಯವರ್ಣನಂ	೮೪೪_೮೪೬
ನೂರ ನಲವತ್ತೊಂದನೆಯ ಅಧ್ಯಾಯ—	
ಕಪರ್ದಿಚಿಂತಾಮಣಿಮಾಹಾತ್ಮ್ಯವರ್ಣನಂ	೮೪೭
ನೂರ ನಲವತ್ತೆರಡನೆಯ ಅಧ್ಯಾಯ—	
ಚಿತ್ರೇಶ್ವರಮಾಹಾತ್ಮ್ಯವರ್ಣನಂ	೮೪೮
ನೂರ ನಲವತ್ತಮೂರನೆಯ ಅಧ್ಯಾಯ—	
ವಿಚಿತ್ರೇಶ್ವರಮಾಹಾತ್ಮ್ಯವರ್ಣನಂ	೮೪೯
ನೂರ ನಲವತ್ತನಾಲ್ಕನೆಯ ಅಧ್ಯಾಯ—	
ಪುಷ್ಕರಕುಂಡಮಾಹಾತ್ಮ್ಯವರ್ಣನಂ	೮೫೦_೮೫೧

	ಪುಟಸಂಖ್ಯೆ
ನೂರ ನಲವತ್ತೈದನೆಯ ಅಧ್ಯಾಯ—	
ಗಜಕುಂಭೋದರಮಾಹಾತ್ಮ್ಯವರ್ಣನಂ	೮೫೨
ನೂರ ನಲವತ್ತಾರನೆಯ ಅಧ್ಯಾಯ—	
ಯಮೇಶ್ವರಮಾಹಾತ್ಮ್ಯವರ್ಣನಂ	೮೫೩_೮೫೪
ನೂರ ನಲವತ್ತೇಳನೆಯ ಅಧ್ಯಾಯ—	
ಬ್ರಹ್ಮಕುಂಡಮಾಹಾತ್ಮ್ಯವರ್ಣನಂ	೮೫೫_೮೬೬
ನೂರ ನಲವತ್ತೆಂಟನೆಯ ಅಧ್ಯಾಯ—	
ಕುಂಡಲಕೂಪಮಾಹಾತ್ಮ್ಯವರ್ಣನಂ	೮೬೭_೮೭೫
ನೂರ ನಲವತ್ತೊಂಬತ್ತನೆಯ ಅಧ್ಯಾಯ—	
ಭೈರವೇಶ್ವರಮಾಹಾತ್ಮ್ಯವರ್ಣನಂ	೮೭೬_೮೭೭
ನೂರ ಐವತ್ತನೆಯ ಅಧ್ಯಾಯ—	
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ	೮೭೮
ನೂರ ಐವತ್ತೊಂದನೆಯ ಅಧ್ಯಾಯ—	
ಸಾವಿತ್ರೀಶ್ವರಭೈರವಮಾಹಾತ್ಮ್ಯವರ್ಣನಂ	೮೭೯_೮೮೦
ನೂರ ಐವತ್ತೆರಡನೆಯ ಅಧ್ಯಾಯ—	
ನಾರದೇಶ್ವರಭೈರವಮಾಹಾತ್ಮ್ಯವರ್ಣನಂ	೮೮೧_೮೮೩
ನೂರ ಐವತ್ತಮೂರನೆಯ ಅಧ್ಯಾಯ—	
ಹಿರಣ್ಯೇಶ್ವರಮಾಹಾತ್ಮ್ಯವರ್ಣನಂ	೮೮೪_೮೮೮
ನೂರ ಐವತ್ತನಾಲ್ಕನೆಯ ಅಧ್ಯಾಯ—	
ಗಾಯತ್ರೀಶ್ವರಮಾಹಾತ್ಮ್ಯವರ್ಣನಂ	೮೮೯_೮೯೦
ನೂರ ಐವತ್ತೈದನೆಯ ಅಧ್ಯಾಯ—	
ರತ್ನೇಶ್ವರಮಾಹಾತ್ಮ್ಯವರ್ಣನಂ	೮೯೧_೮೯೨

	ಪುಟಸಂಖ್ಯೆ
ನೂರ ಐವತ್ತಾರನೆಯ ಅಧ್ಯಾಯ—	
ಗರುಡೇಶ್ವರಮಾಹಾತ್ಮ್ಯವರ್ಣನಂ	೮೯೩_೮೯೪
ನೂರ ಐವತ್ತೇಳನೆಯ ಅಧ್ಯಾಯ—	
ಸತ್ಯಭಾಮೇಶ್ವರಮಾಹಾತ್ಮ್ಯವರ್ಣನಂ	೮೯೫_೮೯೬
ನೂರ ಐವತ್ತೆಂಟನೆಯ ಅಧ್ಯಾಯ—	
ಅಸಂಗೇಶ್ವರಮಾಹಾತ್ಮ್ಯವರ್ಣನಂ	೮೯೭_೮೯೮
ನೂರ ಐವತ್ತೊಂಬತ್ತನೆಯ ಅಧ್ಯಾಯ—	
ರತ್ನಕುಂಡಮಾಹಾತ್ಮ್ಯವರ್ಣನಂ	೮೯೯_೯೦೦
ನೂರ ಅರುವತ್ತನೆಯ ಅಧ್ಯಾಯ—	
ರೈವಂತಕರಾಜಭಟ್ಟಾರಕಮಾಹಾತ್ಮ್ಯವರ್ಣನಂ	೯೦೧_
ನೂರ ಅರುವತ್ತೊಂದನೆಯ ಅಧ್ಯಾಯ—	
ಅನಂತೇಶ್ವರಮಾಹಾತ್ಮ್ಯವರ್ಣನಂ	೯೦೨_೯೦೩
ನೂರ ಅರುವತ್ತೆರಡನೆಯ ಅಧ್ಯಾಯ—	
ಅಷ್ಟಕುಲೇಶ್ವರಮಾಹಾತ್ಮ್ಯವರ್ಣನಂ	೯೦೪_
ನೂರ ಅರುವತ್ತಮೂರನೆಯ ಅಧ್ಯಾಯ—	
ನಾಸತ್ಯೇಶ್ವರಮಾಹಾತ್ಮ್ಯವರ್ಣನಂ	೯೦೫_
ನೂರ ಅರುವತ್ತನಾಲ್ಕನೆಯ ಅಧ್ಯಾಯ—	
ಅಶ್ವಿನೇಶ್ವರಮಾಹಾತ್ಮ್ಯವರ್ಣನಂ	೯೦೬_೯೦೭
ನೂರ ಅರುವತ್ತೈದನೆಯ ಅಧ್ಯಾಯ—	
ಸಾವಿತ್ರೀಮಾಹಾತ್ಮ್ಯವರ್ಣನಂ	೯೦೮_೯೩೩
ನೂರ ಅರುವತ್ತಾರನೆಯ ಅಧ್ಯಾಯ—	
ಸಾವಿತ್ರೀವ್ರತವಿಧಿಪೂಜನಪ್ರಕಾರೋದ್ಯಾಪನಾದಿಕಥನಂ	೯೩೪_೯೫೪

ಪುಟಸಂಖ್ಯೆ

ನೂರ ಅರುವತ್ತೇಳನೆಯ ಅಧ್ಯಾಯ—
ಭೂತಮಾತೃಕಾಮಾಹಾತ್ಮ್ಯವರ್ಣನಂ ೯೫೫_೯೭೩

ನೂರ ಅರುವತ್ತೆಂಟನೆಯ ಅಧ್ಯಾಯ—
ಶಾಲಕಂಟಕಟಾಮಾಹಾತ್ಮ್ಯವರ್ಣನಂ ೯೭೪_೯೭೫

ನೂರ ಅರುವತ್ತೊಂಬತ್ತನೆಯ ಅಧ್ಯಾಯ—
ವೈವಸ್ವತೇಶ್ವರಮಾಹಾತ್ಮ್ಯವರ್ಣನಂ ೯೭೬

ನೂರ ಎಪ್ಪತ್ತನೆಯ ಅಧ್ಯಾಯ—
ಮಾತೃಗಣಬಲದೇವೀಮಾಹಾತ್ಮ್ಯವರ್ಣನಂ ೯೭೭

ನೂರ ಎಪ್ಪತ್ತೊಂದನೆಯ ಅಧ್ಯಾಯ—
ದಶರಥೇಶ್ವರಮಾಹಾತ್ಮ್ಯವರ್ಣನಂ ೯೭೮_೭೯

ನೂರ ಎಪ್ಪತ್ತೆರಡನೆಯ ಅಧ್ಯಾಯ—
ಭರತೇಶ್ವರಮಾಹಾತ್ಮ್ಯವರ್ಣನಂ ೯೮೦_೮೧

ನೂರ ಎಪ್ಪತ್ತಮೂರನೆಯ ಅಧ್ಯಾಯ—
ಕುಶಕಾದಿಲಿಂಗಚತುಷ್ಟಯಮಾಹಾತ್ಮ್ಯವರ್ಣನಂ ೯೮೨_೯೮೪

ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ—
ಕುಂತೀಶ್ವರಮಾಹಾತ್ಮ್ಯವರ್ಣನಂ ೯೮೫_೯೮೬

ನೂರ ಎಪ್ಪತ್ತೈದನೆಯ ಅಧ್ಯಾಯ—
ಅರ್ಕಸ್ಥಲಮಾಹಾತ್ಮ್ಯವರ್ಣನಂ ೯೮೭_೯೮೮

ನೂರ ಎಪ್ಪತ್ತಾರನೆಯ ಅಧ್ಯಾಯ—
ಸಿದ್ಧೇಶ್ವರಮಾಹಾತ್ಮ್ಯವರ್ಣನಂ ೯೮೯

ನೂರ ಎಪ್ಪತ್ತೇಳನೆಯ ಅಧ್ಯಾಯ—
ಲಕುಲೀಶಮಾಹಾತ್ಮ್ಯವರ್ಣನಂ ೯೯೦

	ಪುಟಸಂಖ್ಯೆ
ನೂರ ಎಪ್ಪತ್ತೆಂಟನೆಯ ಅಧ್ಯಾಯ—	
ಭಾರ್ಗವೇಶ್ವರಮಾಹಾತ್ಮ್ಯವರ್ಣನಂ	೯೯೧
ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ—	
ಮಾಂಡಲ್ಯೇಶ್ವರಮಾಹಾತ್ಮ್ಯವರ್ಣನಂ	೯೯೨—
ನೂರ ಎಂಬತ್ತನೆಯ ಅಧ್ಯಾಯ—	
ಪುಷ್ಪದಂತೇಶ್ವರಮಾಹಾತ್ಮ್ಯವರ್ಣನಂ	೯೯೩—
ನೂರ ಎಂಬತ್ತೊಂದನೆಯ ಅಧ್ಯಾಯ—	
ಕ್ಷೇತ್ರಪಾಲೇಶ್ವರಮಾಹಾತ್ಮ್ಯವರ್ಣನಂ	೯೯೪—
ನೂರ ಎಂಬತ್ತೆರಡನೆಯ ಅಧ್ಯಾಯ—	
ವಸುನಂದಾಮಾತೃಗಣಶ್ರೀಮುಖವಿವರಮಾಹಾತ್ಮ್ಯವರ್ಣನಂ	೯೯೫—೯೯೬
ನೂರ ಎಂಬತ್ತಮೂರನೆಯ ಅಧ್ಯಾಯ—	
ತ್ರಿಸಂಗಮಮಾಹಾತ್ಮ್ಯವರ್ಣನಂ	೯೯೭—೯೯೯
ನೂರ ಎಂಬತ್ತನಾಲ್ಕನೆಯ ಅಧ್ಯಾಯ—	
ಮಂಕೀಶ್ವರಮಾಹಾತ್ಮ್ಯವರ್ಣನಂ	೧೦೦೦—೧೦೦೧
ನೂರ ಎಂಬತ್ತೈದನೆಯ ಅಧ್ಯಾಯ—	
ದೇವಮಾತೃಗೌರೀಮಾಹಾತ್ಮ್ಯವರ್ಣನಂ	೧೦೦೨—೩
ನೂರ ಎಂಬತ್ತಾರನೆಯ ಅಧ್ಯಾಯ—	
ನಾಗಸ್ಥಾನಮಾಹಾತ್ಮ್ಯವರ್ಣನಂ	೧೦೦೪—೬
ನೂರ ಎಂಬತ್ತೇಳನೆಯ ಅಧ್ಯಾಯ—	
ಪ್ರಭಾಸಪಂಚಕಮಾಹಾತ್ಮ್ಯವರ್ಣನಂ	೧೦೦೭—೧೪
ನೂರ ಎಂಬತ್ತೆಂಟನೆಯ ಅಧ್ಯಾಯ—	
ರುದ್ರೇಶ್ವರಮಾಹಾತ್ಮ್ಯವರ್ಣನಂ	೧೦೧೫—

	ಪುಟಸಂಖ್ಯೆ
ನೂರ ಎಂಬತ್ತೊಂಬತ್ತನೆಯ ಅಧ್ಯಾಯ—	
ಕರ್ಮಕೋಟೀಶಮಾಹಾತ್ಮ್ಯವರ್ಣನಂ	೧೦೧೬—
ನೂರ ತೊಂಬತ್ತನೆಯ ಅಧ್ಯಾಯ—	
ಮೋಕ್ಷಸ್ವಾಮಿಮಾಹಾತ್ಮ್ಯವರ್ಣನಂ	೧೦೧೭—
ನೂರ ತೊಂಬತ್ತೊಂದನೆಯ ಅಧ್ಯಾಯ—	
ಅಜೀಗರ್ತೇಶ್ವರಮಾಹಾತ್ಮ್ಯವರ್ಣನಂ	೧೦೧೮—
ನೂರ ತೊಂಬತ್ತೆರಡನೆಯ ಅಧ್ಯಾಯ—	
ವಿಶ್ವಕರ್ಮೇಶ್ವರಮಾಹಾತ್ಮ್ಯವರ್ಣನಂ	೧೦೧೯—
ನೂರ ತೊಂಬತ್ತಮೂರನೆಯ ಅಧ್ಯಾಯ—	
ಯಮೇಶ್ವರಮಾಹಾತ್ಮ್ಯವರ್ಣನಂ	೧೦೨೦—
ನೂರ ತೊಂಬತ್ತನಾಲ್ಕನೆಯ ಅಧ್ಯಾಯ—	
ಅಮರೇಶ್ವರಮಾಹಾತ್ಮ್ಯವರ್ಣನಂ	೧೦೨೧—
ನೂರ ತೊಂಬತ್ತೈದನೆಯ ಅಧ್ಯಾಯ—	
ವೃದ್ಧಪ್ರಭಾಸಮಹಾತ್ಮ್ಯವರ್ಣನಂ	೧೦೨೨—
ನೂರ ತೊಂಬತ್ತಾರನೆಯ ಅಧ್ಯಾಯ—	
ಜಲಪ್ರಭಾಸಮಾಹಾತ್ಮ್ಯವರ್ಣನಂ	೧೦೨೩—೨೭
ನೂರ ತೊಂಬತ್ತೇಳನೆಯ ಅಧ್ಯಾಯ—	
ಜಮದಗ್ನೀಶ್ವರಮಾಹಾತ್ಮ್ಯವರ್ಣನಂ	೧೦೨೮—೨೯
ನೂರ ತೊಂಬತ್ತೆಂಟನೆಯ ಅಧ್ಯಾಯ—	
ಪಂಚಮಪ್ರಭಾಸಕ್ಷೇತ್ರಮಾಹಾತ್ಮ್ಯವರ್ಣನಂ	೧೦೩೦—೩೩
ನೂರ ತೊಂಬತ್ತೊಂಬತ್ತನೆಯ ಅಧ್ಯಾಯ—	
ದಕ್ಷಯಜ್ಞವಿಧ್ವಂಸನವರ್ಣನಂ	೧೦೩೪—೪೨

ಪುಟಸಂಖ್ಯೆ

ಇನ್ನೂರನೆಯ ಅಧ್ಯಾಯ—
ಕಾಮಕುಂಡಮಾಹಾತ್ಮ್ಯವರ್ಣನಂ ೧೦೪೩_೪೮

ಇನ್ನೂರ ಒಂದನೆಯ ಅಧ್ಯಾಯ—
ಕಾಲಭೈರವಸ್ಮಶಾನಮಾಹಾತ್ಮ್ಯವರ್ಣನಂ ೧೦೪೯_೫೦

ಇನ್ನೂರ ಎರಡನೆಯ ಅಧ್ಯಾಯ—
ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನಂ ೧೦೫೧_೧೦೬೧

ಇನ್ನೂರ ಮೂರನೆಯ ಅಧ್ಯಾಯ—
ಮಂಕೀಶ್ವರಮಾಹಾತ್ಮ್ಯವರ್ಣನಂ ೧೦೬೨_೬೬

ಇನ್ನೂರ ನಾಲ್ಕನೆಯ ಅಧ್ಯಾಯ—
ಸರಸ್ವತೀಸಂಗಮಮಾಹಾತ್ಮ್ಯವರ್ಣನಂ ೧೦೬೭_೭೧

ಇನ್ನೂರ ಐದನೆಯ ಅಧ್ಯಾಯ—
ಶ್ರಾದ್ಧಾನರ್ಹಬ್ರಾಹ್ಮಣಪರೀಕ್ಷಣಕಥನಂ ೧೦೭೨_೧೦೮೪

ಇನ್ನೂರ ಆರನೆಯ ಅಧ್ಯಾಯ—
ಶ್ರಾದ್ಧವಿಧಿವರ್ಣನಂ ೧೦೮೫_೧೧೦೪

ಇನ್ನೂರ ಏಳನೆಯ ಅಧ್ಯಾಯ—
ಪಾತ್ರಾಪಾತ್ರವರ್ಣನಂ ೧೧೦೫_೧೧೧೮

ಇನ್ನೂರ ಎಂಟನೆಯ ಅಧ್ಯಾಯ—
ದಾನಪಾತ್ರಬ್ರಾಹ್ಮಣಮಾಹಾತ್ಮ್ಯವರ್ಣನಂ ೧೧೧೯_೧೧೨೭

ಇನ್ನೂರ ಒಂಬತ್ತನೆಯ ಅಧ್ಯಾಯ—
ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನಂ ೧೧೨೮_೧೧೩೫

ಇನ್ನೂರ ಹತ್ತನೆಯ ಅಧ್ಯಾಯ—
ಪುಲಸ್ತ್ಯೇಶ್ವರಮಾಹಾತ್ಮ್ಯವರ್ಣನಂ ೧೧೩೬

ಪುಟಸಂಖ್ಯೆ

ಇನ್ನೂರ ಹನ್ನೊಂದನೆಯ ಅಧ್ಯಾಯ—
ಪುಲಹೇಶ್ವರಮಾಹಾತ್ಮ್ಯವರ್ಣನಂ ೧೧೩೭–

ಇನ್ನೂರ ಹನ್ನೆರಡನೆಯ ಅಧ್ಯಾಯ—
ಕ್ರತ್ವೀಶ್ವರಮಾಹಾತ್ಮ್ಯವರ್ಣನಂ ೧೧೩೮–

ಇನ್ನೂರ ಹದಿಮೂರನೆಯ ಅಧ್ಯಾಯ—
ಕಶ್ಯಪೇಶ್ವರಮಾಹಾತ್ಮ್ಯವರ್ಣನಂ ೧೧೩೯–

ಇನ್ನೂರ ಹದಿನಾಲ್ಕನೆಯ ಅಧ್ಯಾಯ—
ಕೌಶಿಕೇಶ್ವರಮಾಹಾತ್ಮ್ಯವರ್ಣನಂ ೧೧೪೦–

ಇನ್ನೂರ ಹದಿನೈದನೆಯ ಅಧ್ಯಾಯ—
ಕುಮಾರೇಶ್ವರಮಾಹಾತ್ಮ್ಯವರ್ಣನಂ ೧೧೪೧–೧೧೪೨

ಇನ್ನೂರ ಹದಿನಾರನೆಯ ಅಧ್ಯಾಯ—
ಗೌತಮೇಶ್ವರಮಾಹಾತ್ಮ್ಯವರ್ಣನಂ ೧೧೪೩–

ಇನ್ನೂರ ಹದಿನೇಳನೆಯ ಅಧ್ಯಾಯ—
ದೇವರಾಜೇಶ್ವರಮಾಹಾತ್ಮ್ಯವರ್ಣನಂ ೧೧೪೪–

ಇನ್ನೂರ ಹದಿನೆಂಟನೆಯ ಅಧ್ಯಾಯ—
ಮಾನವೇಶ್ವರಮಾಹಾತ್ಮ್ಯವರ್ಣನಂ ೧೧೪೫–

ಇನ್ನೂರ ಹತ್ತೊಂಬತ್ತನೆಯ ಅಧ್ಯಾಯ—
ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನಂ ೧೧೪೬–೪೯

ಇನ್ನೂರ ಇಪ್ಪತ್ತನೆಯ ಅಧ್ಯಾಯ—
ವೃಷಭಧ್ವಜೇಶ್ವರಮಾಹಾತ್ಮ್ಯವರ್ಣನಂ ೧೧೫೦–೫೨

ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ—
ಋಣಮೋಚನಮಾಹಾತ್ಮ್ಯವರ್ಣನಂ ೧೧೫೩–೫೫

	ಪುಟಸಂಖ್ಯೆ
ಇನ್ನೂರ ಇಪ್ಪತ್ತೆರಡನೆಯ ಅಧ್ಯಾಯ—	
ರುಕ್ಮವತೀಶ್ವರಮಾಹಾತ್ಮ್ಯವರ್ಣನಂ	೧೧೫೬—
ಇನ್ನೂರ ಇಪ್ಪತ್ತಮೂರನೆಯ ಅಧ್ಯಾಯ —	
ಪ್ರೇತತೀರ್ಥಮಾಹಾತ್ಮ್ಯವರ್ಣನಂ	೧೧೫೭—೧೧೭೨
ಇನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ—	
ಇಂದ್ರೇಶ್ವರಮಾಹಾತ್ಮ್ಯವರ್ಣನಂ	೧೧೭೩—೭೫
ಇನ್ನೂರ ಇಪ್ಪತ್ತೈದನೆಯ ಅಧ್ಯಾಯ—	
ಅನರಕೇಶ್ವರಮಾಹಾತ್ಮ್ಯವರ್ಣನಂ	೧೧೭೬—೧೧೮೪
ಇನ್ನೂರ ಇಪ್ಪತ್ತಾರನೆಯ ಅಧ್ಯಾಯ—	
ಮೋಕ್ಷೇಶ್ವರಮಾಹಾತ್ಮ್ಯವರ್ಣನಂ	೧೧೮೫—
ಇನ್ನೂರ ಇಪ್ಪತ್ತೇಳನೆಯ ಅಧ್ಯಾಯ—	
ಬಲಭದ್ರೇಶ್ವರಮಾಹಾತ್ಮ್ಯವರ್ಣನಂ	೧೧೮೬—
ಇನ್ನೂರ ಇಪ್ಪತ್ತೆಂಟನೆಯ ಅಧ್ಯಾಯ—	
ಭೈರವೇಶ್ವರಮಾತೃಗಣಮಾಹಾತ್ಮ್ಯವರ್ಣನಂ	೧೧೮೭—
ಇನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ—	
ಗಂಗಾಮಾಹಾತ್ಮ್ಯವರ್ಣನಂ	೧೧೮೮—೮೯
ಇನ್ನೂರ ಮೂವತ್ತನೆಯ ಅಧ್ಯಾಯ—	
ಗಣಪತಿಮಾಹಾತ್ಮ್ಯವರ್ಣನಂ	೧೧೯೦—
ಇನ್ನೂರ ಮೂವತ್ತೊಂದನೆಯ ಅಧ್ಯಾಯ—	
ಜಾಂಬವತೀನದೀಮಾಹಾತ್ಮ್ಯವರ್ಣನಂ	೧೧೯೧—೧೧೯೨
ಇನ್ನೂರ ಮೂವತ್ತೆರಡನೆಯ ಅಧ್ಯಾಯ—	
ಪಾಂಡವಕೂಪಮಾಹಾತ್ಮ್ಯವರ್ಣನಂ	೧೧೯೩—೯೬

ಪುಟಸಂಖ್ಯೆ

ಇನ್ನೂರ ಮೂವತ್ತಮೂರನೆಯ ಅಧ್ಯಾಯ—
ಪಾಂಡವೇಶ್ವರಮಾಹಾತ್ಮ್ಯವರ್ಣನಂ ೧೧೯೭—

ಇನ್ನೂರ ಮೂವತ್ತನಾಲ್ಕನೆಯ ಅಧ್ಯಾಯ—
ದಶಾಶ್ವಮೇಧಮಾಹಾತ್ಮ್ಯವರ್ಣನಂ ೧೧೯೮—೧೨೦೦

ಇನ್ನೂರ ಮೂವತ್ತೈದನೆಯ ಅಧ್ಯಾಯ—
ಶತಮೇಧಾದಿಲಿಂಗತ್ರಯಮಾಹಾತ್ಮ್ಯವರ್ಣನಂ ೧೨೦೧—೨

ಇನ್ನೂರ ಮೂವತ್ತಾರನೆಯ ಅಧ್ಯಾಯ—
ದುರ್ವಾಸಾದಿತ್ಯಮಾಹಾತ್ಮ್ಯವರ್ಣನಂ ೧೨೦೩—೮

ಇನ್ನೂರ ಮೂವತ್ತೇಳನೆಯ ಅಧ್ಯಾಯ—
ವಜ್ರೇಶ್ವರಮಾಹಾತ್ಮ್ಯವರ್ಣನಂ ೧೨೦೯—೧೨೨೪

ಇನ್ನೂರ ಮೂವತ್ತೆಂಟನೆಯ ಅಧ್ಯಾಯ—
ಇಂದ್ರೇಶ್ವರಮಾಹಾತ್ಮ್ಯವರ್ಣನಂ ೧೨೨೫—೨೬

ಇನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ—
ನಾಗರಾರ್ಕಮಾಹಾತ್ಮ್ಯವರ್ಣನಂ ೧೨೨೭—೩೨

ಇನ್ನೂರ ನಲವತ್ತನೆಯ ಅಧ್ಯಾಯ—
ಬಲಭದ್ರಸುಭದ್ರಾಕೃಷ್ಣಮಾಹಾತ್ಮ್ಯವರ್ಣನಂ ೧೨೩೩—

ಇನ್ನೂರ ನಲವತ್ತೊಂದನೆಯ ಅಧ್ಯಾಯ—
ಶೇಷಮಾಹಾತ್ಮ್ಯವರ್ಣನಂ ೧೨೩೪—೩೫

ಇನ್ನೂರ ನಲವತ್ತೆರಡನೆಯ ಅಧ್ಯಾಯ—
ಕುಮಾರೀಮಾಹಾತ್ಮ್ಯವರ್ಣನಂ ೧೨೩೬—೪೧

ಇನ್ನೂರ ನಲವತ್ತಮೂರನೆಯ ಅಧ್ಯಾಯ—
ಮಂತ್ರಾವಲಿಕ್ಷೇತ್ರಪಾಲಮಾಹಾತ್ಮ್ಯವರ್ಣನಂ ೧೨೪೨—

	ಪುಟಸಂಖ್ಯೆ
ಇನ್ನೂರ ನಲವತ್ತನಾಲ್ಕನೆಯ ಅಧ್ಯಾಯ—	
ವಿಚಿತ್ರೇಶ್ವರಮಾಹಾತ್ಮ್ಯವರ್ಣನಂ	೧೨೪೩—
ಇನ್ನೂರ ನಲವತ್ತೈದನೆಯ ಅಧ್ಯಾಯ—	
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ	೧೨೪೪—
ಇನ್ನೂರ ನಲವತ್ತಾರನೆಯ ಅಧ್ಯಾಯ—	
ಪಿಂಗಾನದೀಮಾಹಾತ್ಮ್ಯವರ್ಣನಂ	೧೨೪೫—೪೬
ಇನ್ನೂರ ನಲವತ್ತೇಳನೆಯ ಅಧ್ಯಾಯ—	
ಪಿಂಗಳಾದಿತ್ಯಪಿಂಗಾದೇವೀಶುಕ್ರೇಶ್ವರಮಾಹಾತ್ಮ್ಯವರ್ಣನಂ	೧೨೪೭—
ಇನ್ನೂರ ನಲವತ್ತೆಂಟನೆಯ ಅಧ್ಯಾಯ—	
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ	೧೨೪೮—೫೦
ಇನ್ನೂರ ನಲವತ್ತೊಂಬತ್ತನೆಯ ಅಧ್ಯಾಯ—	
ಸಂಗಮೇಶ್ವರಮಾಹಾತ್ಮ್ಯವರ್ಣನಂ	೧೨೫೧—೫೨
ಇನ್ನೂರ ಐವತ್ತನೆಯ ಅಧ್ಯಾಯ—	
ಗಂಗೇಶ್ವರಮಾಹಾತ್ಮ್ಯವರ್ಣನಂ	೧೨೫೩—೫೪
ಇನ್ನೂರ ಐವತ್ತೊಂದನೆಯ ಅಧ್ಯಾಯ—	
ಶಂಕರಾದಿತ್ಯಮಾಹಾತ್ಮ್ಯವರ್ಣನಂ	೧೨೫೫—೫೬
ಇನ್ನೂರ ಐವತ್ತೆರಡನೆಯ ಅಧ್ಯಾಯ—	
ಶಂಕರನಾಥಮಾಹಾತ್ಮ್ಯವರ್ಣನಂ	೧೨೫೭—
ಇನ್ನೂರ ಐವತ್ತಮೂರನೆಯ ಅಧ್ಯಾಯ—	
ಗುಫೇಶ್ವರಮಾಹಾತ್ಮ್ಯವರ್ಣನಂ	೧೨೫೮—
ಇನ್ನೂರ ಐವತ್ತನಾಲ್ಕನೆಯ ಅಧ್ಯಾಯ—	
ಘಂಟೇಶ್ವರಮಾಹಾತ್ಮ್ಯವರ್ಣನಂ	೧೨೫೯—

ಪುಟಸಂಖ್ಯೆ

ಇನ್ನೂರ ಐವತ್ತೈದನೆಯ ಅಧ್ಯಾಯ—
ಋಷಿತೀರ್ಥಮಾಹಾತ್ಮ್ಯವರ್ಣನಂ ೧೨೬೦—೧೨೭೧

ಇನ್ನೂರ ಐವತ್ತಾರನೆಯ ಅಧ್ಯಾಯ—
ಸಂಪಾದಿತಮ್ಮಾಹಾತ್ಮ್ಯವರ್ಣನಂ ೧೨೭೨—೭೮

ಇನ್ನೂರ ಐವತ್ತೇಳನೆಯ ಅಧ್ಯಾಯ—
ಶ್ರೀತಕೂಪಮಾಹಾತ್ಮ್ಯವರ್ಣನಂ ೧೨೭೯—೮೪

ಇನ್ನೂರ ಐವತ್ತೆಂಟನೆಯ ಅಧ್ಯಾಯ—
ಶಶಪಾನಮಾಹಾತ್ಮ್ಯವರ್ಣನಂ ೧೨೮೫—೮೯

ಇನ್ನೂರ ಐವತ್ತೊಂಬತ್ತನೆಯ ಅಧ್ಯಾಯ—
ಪರ್ಣಾದಿತ್ಯಮಾಹಾತ್ಮ್ಯ ವರ್ಣನಂ ೧೨೯೦—೯೨

ಇನ್ನೂರ ಅರುವತ್ತನೆಯ ಅಧ್ಯಾಯ—
ಸಿದ್ಧೇಶ್ವರಮಾಹಾತ್ಮ್ಯವರ್ಣನಂ ೧೨೯೩—೯೪

ಇನ್ನೂರ ಅರುವತ್ತೊಂದನೆಯ ಅಧ್ಯಾಯ—
ಸ್ವಂಕುಮತೀಮಾಹಾತ್ಮ್ಯವರ್ಣನಂ ೧೨೯೫—

ಇನ್ನೂರ ಅರುವತ್ತೆರಡನೆಯ ಅಧ್ಯಾಯ—
ಪರಾಹಸ್ವಾಮಿಮಾಹಾತ್ಮ್ಯವರ್ಣನಂ ೧೨೯೬—

ಇನ್ನೂರ ಅರುವತ್ತಮೂರನೆಯ ಅಧ್ಯಾಯ—
ಛಾಯಾಲಿಂಗಮಾಹಾತ್ಮ್ಯವರ್ಣನಂ ೧೨೯೭—

ಇನ್ನೂರ ಅರುವತ್ತನಾಲ್ಕನೆಯ ಅಧ್ಯಾಯ—
ನಂದೀಗುಹಾಮಾಹಾತ್ಮ್ಯವರ್ಣನಂ ೧೨೯೮—

ಇನ್ನೂರ ಅರುವತ್ತೈದನೆಯ ಅಧ್ಯಾಯ—
ಕನಕನಂದಾಮಾಹಾತ್ಮ್ಯವರ್ಣನಂ ೧೨೯೯—

	ಪುಟಸಂಖ್ಯೆ
ಇನ್ನೂರ ಅರುವತ್ತಾರನೆಯ ಅಧ್ಯಾಯ—	
ಕುಂಭೀಶ್ವರಮಾಹಾತ್ಮ್ಯವರ್ಣನಂ	
ಇನ್ನೂರ ಅರುವತ್ತೇಳನೆಯ ಅಧ್ಯಾಯ—	
ಗಂಗಾಪಥಗಂಗೇಶ್ವರಮಾಹಾತ್ಮ್ಯವರ್ಣನಂ	೧೩೦೧
ಇನ್ನೂರ ಅರುವತ್ತೆಂಟನೆಯ ಅಧ್ಯಾಯ—	
ಚಮಸೋದ್ಭೇದಮಾಹಾತ್ಮ್ಯವರ್ಣನಂ	೧೩೦೨
ಇನ್ನೂರ ಅರುವತ್ತೊಂಬತ್ತನೆಯ ಅಧ್ಯಾಯ—	
ವಿದುರಾಶ್ರಮಮಾಹಾತ್ಮ್ಯವರ್ಣನಂ	೧೩೦೩
ಇನ್ನೂರ ಎಪ್ಪತ್ತನೆಯ ಅಧ್ಯಾಯ—	
ಪ್ರಾಚೀಸರಸ್ವತೀಮಂಕೀಶ್ವರಮಹಾತ್ಮ್ಯವರ್ಣನಂ	೧೩೦೪_೧೩೧೧
ಇನ್ನೂರ ಎಪ್ಪತ್ತೊಂದನೆಯ ಅಧ್ಯಾಯ—	
ಜ್ವಾಲೇಶ್ವರಮಾಹಾತ್ಮ್ಯವರ್ಣನಂ	೧೩೧೨
ಇನ್ನೂರ ಎಪ್ಪತ್ತೆರಡನೆಯ ಅಧ್ಯಾಯ—	
ತ್ರಿಪುರಲಿಂಗತ್ರಯಮಾಹಾತ್ಮ್ಯವರ್ಣನಂ	೧೩೧೩
ಇನ್ನೂರ ಎಪ್ಪತ್ತಮೂರನೆಯ ಅಧ್ಯಾಯ—	
ಶಂಖತೀರ್ಥಮಾಹಾತ್ಮ್ಯವರ್ಣನಂ	೧೩೧೪_೧೬
ಇನ್ನೂರ ಎಪ್ಪತ್ತನಾಲ್ಕನೆಯ ಅಧ್ಯಾಯ—	
ಸೂರ್ಯಪ್ರಾಚೀಮಾಹಾತ್ಮ್ಯವರ್ಣನಂ	೧೩೧೭
ಇನ್ನೂರ ಎಪ್ಪತ್ತೈದನೆಯ ಅಧ್ಯಾಯ—	
ತ್ರಿನೇತ್ರೇಶ್ವರಮಾಹಾತ್ಮ್ಯವರ್ಣನಂ	೧೩೧೮_೧೯
ಇನ್ನೂರ ಎಪ್ಪತ್ತಾರನೆಯ ಅಧ್ಯಾಯ—	
ಉಮಾಪತಿಮಾಹಾತ್ಮ್ಯವರ್ಣನಂ	೧೩೨೦_೨೨

	ಪುಟಸಂಖ್ಯೆ
ಇನ್ನೂರ ಎಪ್ಪತ್ತೇಳನೆಯ ಅಧ್ಯಾಯ—	
ಭೂಧರಯಜ್ಞವರಾಹಮಾಹಾತ್ಮ್ಯವರ್ಣನಂ	೧೩೨೩—೨೫
ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯ—	
ಶೂಲಸ್ಥಾನಮಾಹಾತ್ಮ್ಯವರ್ಣನಂ	೧೩೨೬—೧೩೩೮
ಇನ್ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ—	
ಚ್ಯವನಾದಿತ್ಯಮಾಹಾತ್ಮ್ಯೆ—ಸೂರ್ಯಾಷ್ಟೋತ್ತರ ಶತನಾಮಮಾಹಾತ್ಮ್ಯವರ್ಣನಂ	೧೩೩೯—೪೨
ಇನ್ನೂರ ಎಂಬತ್ತನೆಯ ಅಧ್ಯಾಯ—	
ಚ್ಯವನೇಶ್ವರಮಾಹಾತ್ಮ್ಯವರ್ಣನಂ	೧೩೪೩—೪೮
ಇನ್ನೂರ ಎಂಬತ್ತೊಂದನೆಯ ಅಧ್ಯಾಯ—	
ಚ್ಯವನೇಶ್ವರಮಾಹಾತ್ಮ್ಯವರ್ಣನಂ	೧೩೪೯—೫೩
ಇನ್ನೂರ ಎಂಬತ್ತೆರಡನೆಯ ಅಧ್ಯಾಯ—	
ಚ್ಯವನಕೃತಮದಾಸುರಸೃಷ್ಟಿವರ್ಣನಂ	೧೩೫೪—೫೮
ಇನ್ನೂರ ಎಂಬತ್ತಮೂರನೆಯ ಅಧ್ಯಾಯ—	
ಚ್ಯವನೇಶ್ವರಮಾಹಾತ್ಮ್ಯವರ್ಣನಂ	೧೩೫೯—೬೧
ಇನ್ನೂರ ಎಂಬತ್ತನಾಲ್ಕನೆಯ ಅಧ್ಯಾಯ—	
ಸುಕನ್ಯಾಸರೋಮಾಹಾತ್ಮ್ಯವರ್ಣನಂ	೧೩೬೨
ಇನ್ನೂರ ಎಂಬತ್ತೈದನೆಯ ಅಧ್ಯಾಯ—	
ಅಗಸ್ತ್ಯಾಶ್ರಮಗಂಗೇಶ್ವರಮಾಹಾತ್ಮ್ಯವರ್ಣನಂ	೧೩೬೩—೬೭
ಇನ್ನೂರ ಎಂಬತ್ತಾರನೆಯ ಅಧ್ಯಾಯ—	
ಬಾಲಾರ್ಕಮಾಹಾತ್ಮ್ಯವರ್ಣನಂ	೧೩೬೯
ಇನ್ನೂರ ಎಂಬತ್ತೇಳನೆಯ ಅಧ್ಯಾಯ—	
ಅಜಾಪಾಲೇಶ್ವರೀಮಾಹಾತ್ಮ್ಯವರ್ಣನಂ	೧೩೭೦

ಪುಟಸಂಖ್ಯೆ

ಇನ್ನೂರ ಎಂಬತ್ತೆಂಟನೆಯ ಅಧ್ಯಾಯ—
ಬಾಲಾರ್ಕಾದಿತ್ಯಮಾಹಾತ್ಮ್ಯವರ್ಣನಂ ೧೩೭೧—೭೨

ಇನ್ನೂರ ಎಂಬತ್ತೊಂಬತ್ತನೆಯ ಅಧ್ಯಾಯ—
ಪಾತಾಳಗಂಗೇಶ್ವರ ವಿಶ್ವಾಮಿತ್ರೇಶ್ವರ ಬಾಲೇಶ್ವರಾಭಿಧಲಿಂಗತ್ರಯ
ಮಾಹಾತ್ಮ್ಯವರ್ಣನಂ ೧೩೭೪

ಇನ್ನೂರ ತೊಂಬತ್ತನೆಯ ಅಧ್ಯಾಯ—
ಕುಬೇರನಗರೋತ್ಪತ್ತಿ ಕುಬೇರಸ್ಥಾಪಿತ ಸೋಮನಾಥ ಮಾಹಾತ್ಮ್ಯ
ವರ್ಣನಂ ೧೩೭೫—೮೧

ಇನ್ನೂರ ತೊಂಬತ್ತೊಂದನೆಯ ಅಧ್ಯಾಯ—
ಭದ್ರಕಾಲೀಮಾಹಾತ್ಮ್ಯವರ್ಣನಂ ೧೩೮೨

ಇನ್ನೂರ ತೊಂಬತ್ತೆರಡನೆಯ ಅಧ್ಯಾಯ—
ಭದ್ರಕಾಲೀ ಬಾಲಾರ್ಕಮಹಾತ್ಮ್ಯವರ್ಣನಂ ೧೩೮೩

ಇನ್ನೂರ ತೊಂಬತ್ತಮೂರನೆಯ ಅಧ್ಯಾಯ—
ಕುಬೇರಮಾಹಾತ್ಮ್ಯವರ್ಣನಂ ೧೩೮೪

ಇನ್ನೂರ ತೊಂಬತ್ತನಾಲ್ಕನೆಯ ಅಧ್ಯಾಯ—
ಪುಷ್ಕರಮಾಹಾತ್ಮ್ಯ ಅಜೋಗಂಧೇಶ್ವರಮಾಹಾತ್ಮ್ಯವರ್ಣನಂ ೧೩೮೫—೮೮
ಚಂದ್ರೋದಕ ತೀರ್ಥಮಾಹಾತ್ಮ್ಯ ಇಂದ್ರೇಶ್ವರ ಮಾಹಾತ್ಮ್ಯ
ವರ್ಣನಂ ೧೩೮೯—೧೩೯೦

ಇನ್ನೂರ ತೊಂಬತ್ತೈದನೆಯ ಅಧ್ಯಾಯ—
ಸುಹಿತೋಯಾನದೀಮಾಹಾತ್ಮ್ಯವರ್ಣನಂ ೧೩೯೧—೯೨

ಇನ್ನೂರ ತೊಂಬತ್ತಾರನೆಯ ಅಧ್ಯಾಯ—
ಸುಹಿತೋಯಾಮಾಹಾತ್ಮ್ಯವರ್ಣನಂ ೧೩೯೩—೯೯

ಪುಟಸಂಖ್ಯೆ

ಇನ್ನೂರ ತೊಂಬತ್ತೇಳನೆಯ ಅಧ್ಯಾಯ—
ಗುಪ್ತಪ್ರಯಾಗಮಾಹಾತ್ಮ್ಯವರ್ಣನಂ ೧೪೦೧_೧೪೦೫

ಇನ್ನೂರ ತೊಂಬತ್ತೆಂಟನೆಯ ಅಧ್ಯಾಯ—
ಮಾಧವಮಾಹಾತ್ಮ್ಯವರ್ಣನಂ ೧೪೦೬_೭

ಇನ್ನೂರ ತೊಂಬತ್ತೊಂಬತ್ತನೆಯ ಅಧ್ಯಾಯ—
ಸಂಗಾಲೇಶ್ವರಮಾಹಾತ್ಮ್ಯವರ್ಣನಂ ೧೪೦೮_೧೦

ಮುನ್ನೂರನೆಯ ಅಧ್ಯಾಯ—
ಸಿದ್ಧೇಶ್ವರಮಾಹಾತ್ಮ್ಯವರ್ಣನಂ ೧೪೧೧_೧೨

ಮುನ್ನೂರ ಒಂದನೆಯ ಅಧ್ಯಾಯ—
ಗಂಧರ್ವೇಶ್ವರಮಾಹಾತ್ಮ್ಯವರ್ಣನಂ ೧೪೧೩

ಮುನ್ನೂರ ಎರಡನೆಯ ಅಧ್ಯಾಯ—
ಉತ್ತರೇಶ್ವರಮಾಹಾತ್ಮ್ಯವರ್ಣನಂ ೧೪೧೪_೧೫

ಮುನ್ನೂರ ಮೂರನೆಯ ಅಧ್ಯಾಯ—
ಸಂಗಾಲೇಶ್ವರಸಮೀಪವರ್ತಿ ಗಂಗಾಮಾಹಾತ್ಮ್ಯವರ್ಣನಂ ೧೪೧೬_೧೪೨೧

ಮುನ್ನೂರ ನಾಲ್ಕನೆಯ ಅಧ್ಯಾಯ—
ನಾರದಾದಿತ್ಯಮಾಹಾತ್ಮ್ಯವರ್ಣನಂ ೧೪೨೨_೧೪೨೬

ಮುನ್ನೂರ ಐದನೆಯ ಅಧ್ಯಾಯ—
ಸಾಂಬಾದಿತ್ಯಮಾಹಾತ್ಮ್ಯವರ್ಣನಂ ೧೪೨೭_೩೧

ಮುನ್ನೂರ ಆರನೆಯ ಅಧ್ಯಾಯ—
ಅಪರನಾರಾಯಣಮಾಹಾತ್ಮ್ಯವರ್ಣನಂ ೧೪೩೨

ಮುನ್ನೂರ ಏಳನೆಯ ಅಧ್ಯಾಯ—
ಮೂಲಚಂಡೀಶೋತ್ಪತ್ತಿಮಾಹಾತ್ಮ್ಯವರ್ಣನಂ ೧೪೩೩_೪೪

ಪ್ರಟಸಂಖ್ಯೆ

ಮುನ್ನೂರ ಎಂಟನೆಯ ಅಧ್ಯಾಯ—

ಚತುರ್ಮುಖವಿನಾಯಕಮಾಹಾತ್ಮ್ಯವರ್ಣನಂ ೧೪೪೫

ಮುನ್ನೂರ ಒಂಬತ್ತನೆಯ ಅಧ್ಯಾಯ—

ಕಲಂಜೇಶ್ವರಮಾಹಾತ್ಮ್ಯವರ್ಣನಂ ೧೪೪೬

ಮುನ್ನೂರ ಹತ್ತನೆಯ ಅಧ್ಯಾಯ—

ಗೋಪಾಲಸ್ವಾಮಿಹರಿಮಾಹಾತ್ಮ್ಯವರ್ಣನಂ ೧೪೪೭

ಮುನ್ನೂರ ಹನ್ನೊಂದನೆಯ ಅಧ್ಯಾಯ—

ಬಕುಲಸ್ವಾಮಿಮಾಹಾತ್ಮ್ಯವರ್ಣನಂ ೧೪೪೮

ಮುನ್ನೂರ ಹನ್ನೆರಡನೆಯ ಅಧ್ಯಾಯ—

ಉತ್ತರಾರ್ಕಮಾಹಾತ್ಮ್ಯವರ್ಣನಂ ೧೪೪೯

ಮುನ್ನೂರ ಹದಿಮೂರನೆಯ ಅಧ್ಯಾಯ—

ಋಷಿತೀರ್ಥಸಂಗಮಮಾಹಾತ್ಮ್ಯವರ್ಣನಂ ೧೪೫೦—೫೧

ಮುನ್ನೂರ ಹದಿನಾಲ್ಕನೆಯ ಅಧ್ಯಾಯ—

ಮರುದಾರ್ಯಾದೇವೀಮಾಹಾತ್ಮ್ಯವರ್ಣನಂ ೧೪೫೨

ಮುನ್ನೂರ ಹದಿನೈದನೆಯ ಅಧ್ಯಾಯ—

ಕ್ಷೇಮಾದಿತ್ಯಮಾಹಾತ್ಮ್ಯವರ್ಣನಂ ೧೪೫೩

ಮುನ್ನೂರ ಹದಿನಾರನೆಯ ಅಧ್ಯಾಯ—

ಕಂಟಕಶೋಷಣೀಮಾಹಾತ್ಮ್ಯವರ್ಣನಂ ೧೪೫೪—೫೫

ಮುನ್ನೂರ ಹದಿನೇಳನೆಯ ಅಧ್ಯಾಯ—

ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ ೧೪೫೮

ಮುನ್ನೂರ ಹದಿನೆಂಟನೆಯ ಅಧ್ಯಾಯ—

ಉನ್ನತಸ್ಥಾನಮಾಹಾತ್ಮ್ಯವರ್ಣನಂ ೧೪೫೯—೬೦

ಪುಟಸಂಖ್ಯೆ

ಮುನ್ನೂರ ಹತ್ತೊಂಬತ್ತನೆಯ ಅಧ್ಯಾಯ—
ಲಿಂಗದ್ವಯಮಾಹಾತ್ಮ್ಯವರ್ಣನಂ ೧೪೭೧—೭೩

ಮುನ್ನೂರ ಇಪ್ಪತ್ತನೆಯ ಅಧ್ಯಾಯ—
ಬ್ರಹ್ಮಮಾಹಾತ್ಮ್ಯವರ್ಣನಂ ೧೪೭೪—೭೫

ಮುನ್ನೂರ ಇಪ್ಪತ್ತೊಂದನೆಯ ಅಧ್ಯಾಯ—
ದುರ್ಗಾದಿತ್ಯಮಾಹಾತ್ಮ್ಯವರ್ಣನಂ ೧೪೭೬—೭೭

ಮುನ್ನೂರ ಇಪ್ಪತ್ತೆರಡನೆಯ ಅಧ್ಯಾಯ—
ಕ್ಷೇಮೇಶ್ವರಮಾಹಾತ್ಮ್ಯವರ್ಣನಂ ೧೪೭೮

ಮುನ್ನೂರ ಇಪ್ಪತ್ತಮೂರನೆಯ ಅಧ್ಯಾಯ—
ಗಣನಾಥಮಾಹಾತ್ಮ್ಯವರ್ಣನಂ ೧೪೭೯

ಮುನ್ನೂರ ಇಪ್ಪತ್ತನಾಲ್ಕನೆಯ ಅಧ್ಯಾಯ—
ಉನ್ನತಸ್ವಾಮಿಮಾಹಾತ್ಮ್ಯವರ್ಣನಂ ೧೪೮೦

ಮುನ್ನೂರ ಇಪ್ಪತ್ತೈದನೆಯ ಅಧ್ಯಾಯ—
ಮಹಾಕಾಲಮಾಹಾತ್ಮ್ಯವರ್ಣನಂ ೧೪೮೧

ಮುನ್ನೂರ ಇಪ್ಪತ್ತಾರನೆಯ ಅಧ್ಯಾಯ—
ಮಹೋದಯಮಾಹಾತ್ಮ್ಯವರ್ಣನಂ ೧೪೮೨—೮೩

ಮುನ್ನೂರ ಇಪ್ಪತ್ತೇಳನೆಯ ಅಧ್ಯಾಯ—
ಸಂಗಮೇಶ್ವರಮಾಹಾತ್ಮ್ಯವರ್ಣನಂ ೧೪೮೪—೮೫

ಮುನ್ನೂರ ಇಪ್ಪತ್ತೆಂಟನೆಯ ಅಧ್ಯಾಯ—
ಉನ್ನತವಿನಾಯಕಮಾಹಾತ್ಮ್ಯವರ್ಣನಂ ೧೪೮೬

ಮುನ್ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ—
ತಿಲಸ್ವಾಮಿಮಾಹಾತ್ಮ್ಯವರ್ಣನಂ ೧೪೮೭

	ಪುಟಸಂಖ್ಯೆ
ಮುನ್ನೂರ ಮೂವತ್ತನೆಯ ಅಧ್ಯಾಯ—	
ಕಾಲಮೇಘಮಾಹಾತ್ಮ್ಯವರ್ಣನಂ	೧೪೮೮
ಮುನ್ನೂರ ಮೂವತ್ತೊಂದನೆಯ ಅಧ್ಯಾಯ—	
ರುಕ್ಮಿಣೀಮಾಹಾತ್ಮ್ಯವರ್ಣನಂ	೧೪೮೯
ಮುನ್ನೂರ ಮೂವತ್ತೆರಡನೆಯ ಅಧ್ಯಾಯ—	
ಪಿಂಗೇಶ್ವರಭದ್ರಾಮಾಹಾತ್ಮ್ಯವರ್ಣನಂ	೧೪೯೦—೯೧
ಮುನ್ನೂರ ಮೂವತ್ತಮೂರನೆಯ ಅಧ್ಯಾಯ—	
ತಲಸ್ವಾಮಿಮಾಹಾತ್ಮ್ಯವರ್ಣನಂ	೧೪೯೨—೧೫೦೩
ಮುನ್ನೂರ ಮೂವತ್ತನಾಲ್ಕನೆಯ ಅಧ್ಯಾಯ—	
ಶಂಖಾವರ್ತತೀರ್ಥಮಾಹಾತ್ಮ್ಯವರ್ಣನಂ	೧೫೦೪—೫
ಮುನ್ನೂರ ಮೂವತ್ತೈದನೆಯ ಅಧ್ಯಾಯ—	
ಗೋಷ್ಪದತೀರ್ಥಮಾಹಾತ್ಮ್ಯವರ್ಣನಂ	೧೫೦೬—೧೫೪೬
ಮುನ್ನೂರ ಮೂವತ್ತಾರನೆಯ ಅಧ್ಯಾಯ—	
ನಾರಾಯಣಗೃಹಮಾಹಾತ್ಮ್ಯವರ್ಣನಂ	೧೫೪೭—೪೮
ಮುನ್ನೂರ ಮೂವತ್ತೇಳನೆಯ ಅಧ್ಯಾಯ—	
ಜಾಲೇಶ್ವರಮಾಹಾತ್ಮ್ಯವರ್ಣನಂ	೧೫೪೯-೧೫೬೧
ಮುನ್ನೂರ ಮೂವತ್ತೆಂಟನೆಯ ಅಧ್ಯಾಯ—	
ಹುಂಕಾರಕೂಪಮಾಹಾತ್ಮ್ಯವರ್ಣನಂ	೧೫೬೨-೬೪
ಮುನ್ನೂರ ಮೂವತ್ತೊಂಬತ್ತನೆಯ ಅಧ್ಯಾಯ—	
ಚಂಡೀಶ್ವರಮಾಹಾತ್ಮ್ಯವರ್ಣನಂ	೧೫೬೫
ಮುನ್ನೂರ ನಲವತ್ತನೆಯ ಅಧ್ಯಾಯ—	
ಆಶಾಪೂರವಿಘ್ನರಾಜಮಾಹಾತ್ಮ್ಯವರ್ಣನಂ	೧೫೬೬—೬೭

	ಪುಟಸಂಖ್ಯೆ
ಮುನ್ನೂರ ನಲವತ್ತೊಂದನೆಯ ಅಧ್ಯಾಯ—	
ಚಂದ್ರೇಶ್ವರಕಲಾಕುಂಡತೀರ್ಥಮಾಹಾತ್ಮ್ಯವರ್ಣನಂ	೧೪೬೮
ಮುನ್ನೂರ ನಲವತ್ತೆರಡನೆಯ ಅಧ್ಯಾಯ—	
ಕಪಿಲಾಧಾರಾಕಪಿಲೇಶ್ವರಮಾಹಾತ್ಮ್ಯೇ ಕಪಿಲಾಷಷ್ಠಿವ್ರತವಿಧಾನ ಮಾಹಾತ್ಮ್ಯವರ್ಣನಂ	೧೫೬೯_೭೪
ಮುನ್ನೂರ ನಲವತ್ತಮೂರನೆಯ ಅಧ್ಯಾಯ—	
ಜಠರದ್ಗವೇಶ್ವರಮಾಹಾತ್ಮ್ಯವರ್ಣನಂ	೧೫೭೫_೭೬
ಮುನ್ನೂರ ನಲವತ್ತನಾಲ್ಕನೆಯ ಅಧ್ಯಾಯ—	
ನಲೇಶ್ವರಮಾಹಾತ್ಮ್ಯವರ್ಣನಂ	೧೫೭೭
ಮುನ್ನೂರ ನಲವತ್ತೈದನೆಯ ಅಧ್ಯಾಯ—	
ಕರ್ಕೋಟಕಾರ್ಕಮಾಹಾತ್ಮ್ಯವರ್ಣನಂ	೧೫೭೮
ಮುನ್ನೂರ ನಲವತ್ತಾರನೆಯ ಅಧ್ಯಾಯ—	
ಹಾಟಕೇಶ್ವರಮಾಹಾತ್ಮ್ಯವರ್ಣನಂ	೧೫೭೯_೮೭
ಮುನ್ನೂರ ನಲವತ್ತೇಳನೆಯ ಅಧ್ಯಾಯ—	
ನಾರದೇಶ್ವರೀಮಾಹಾತ್ಮ್ಯವರ್ಣನಂ	೧೫೮೮
ಮುನ್ನೂರ ನಲವತ್ತೆಂಟನೆಯ ಅಧ್ಯಾಯ—	
ಮಂತ್ರವಿಭೂಷಣಾಗೌರೀಮಾಹಾತ್ಮ್ಯವರ್ಣನಂ	೧೫೮೯
ಮುನ್ನೂರ ನಲವತ್ತೊಂಬತ್ತನೆಯ ಅಧ್ಯಾಯ—	
ದುರ್ಗಕೂಟಗಣಪತಿಮಹಾತ್ಮ್ಯವರ್ಣನಂ	೧೫೯೦
ಮುನ್ನೂರ ಐವತ್ತನೆಯ ಅಧ್ಯಾಯ—	
ಕೌರವೇಶ್ವರೀಮಾಹಾತ್ಮ್ಯವರ್ಣನಂ	೧೫೯೧

	ಪುಟಸಂಖ್ಯೆ
ಮುನ್ನೂರ ಐವತ್ತೊಂದನೆಯ ಅಧ್ಯಾಯ— ಸುಪರ್ಣೇಲಾಮಾಹಾತ್ಮ್ಯವರ್ಣನಂ	೧೫೯೨— ೯೩
ಮುನ್ನೂರ ಐವತ್ತೆರಡನೆಯ ಅಧ್ಯಾಯ— ಭಲ್ಲತೀರ್ಥಮಾಹಾತ್ಮ್ಯವರ್ಣನಂ	೧೫೯೪—೯೯
ಮುನ್ನೂರ ಐವತ್ತಮೂರನೆಯ ಅಧ್ಯಾಯ— ಕರ್ದ್ದಮಾಲಮಾಹಾತ್ಮ್ಯವರ್ಣನಂ	೧೬೦೦—೫
ಮುನ್ನೂರ ಐವತ್ತನಾಲ್ಕನೆಯ ಅಧ್ಯಾಯ— ಗುಪ್ತೇಶ್ವರಮಾಹಾತ್ಮ್ಯವರ್ಣನಂ	೧೬೦೬—೭
ಮುನ್ನೂರ ಐವತ್ತೈದನೆಯ ಅಧ್ಯಾಯ— ಬಹುಸುವರ್ಣೇಶ್ವರಮಾಹಾತ್ಮ್ಯವರ್ಣನಂ	೧೬೦೮—೯
ಮುನ್ನೂರ ಐವತ್ತಾರನೆಯ ಅಧ್ಯಾಯ— ಶೃಂಗೇಶ್ವರಮಾಹಾತ್ಮ್ಯವರ್ಣನಂ	೧೬೧೦
ಮುನ್ನೂರ ಐವತ್ತೇಳನೆಯ ಅಧ್ಯಾಯ— ಕೋಟೀಶ್ವರಮಾಹಾತ್ಮ್ಯವರ್ಣನಂ	೧೬೧೧
ಮುನ್ನೂರ ಐವತ್ತೆಂಟನೆಯ ಅಧ್ಯಾಯ— ನಾರಾಯಣತೀರ್ಥಮಾಹಾತ್ಮ್ಯವರ್ಣನಂ	೧೬೧೨
ಮುನ್ನೂರ ಐವತ್ತೊಂಬತ್ತನೆಯ ಅಧ್ಯಾಯ— ಶೃಂಗಾರೇಶ್ವರಮಾಹಾತ್ಮ್ಯವರ್ಣನಂ	೧೬೧೩
ಮುನ್ನೂರ ಅರುವತ್ತನೆಯ ಅಧ್ಯಾಯ— ಮಾರ್ಕಂಡೇಶ್ವರಮಾಹಾತ್ಮ್ಯವರ್ಣನಂ	೧೬೧೪
ಮುನ್ನೂರ ಅರುವತ್ತೊಂದನೆಯ ಅಧ್ಯಾಯ— ಕೋಟಹ್ರದಮುಂಡೋಕೇಶ್ವರಮಾಹಾತ್ಮ್ಯವರ್ಣನಂ	೧೬೧೫—೧೬

	ಪುಟಸಂಖ್ಯೆ
ಮುನ್ನೂರ ಅರುವತ್ತೆರಡನೆಯ ಅಧ್ಯಾಯ—	
ಹಿರಣ್ಯಾತಟಂಡಪುರಘರ್ಘರಪ್ರದಕಂದೇಶ್ವರಮಾಹಾತ್ಮ್ಯವರ್ಣನಂ	೧೬೧೭
ಮುನ್ನೂರ ಅರುವತ್ತಮೂರನೆಯ ಅಧ್ಯಾಯ—	
ಸಂವರ್ತೇಶ್ವರಮಾಹಾತ್ಮ್ಯವರ್ಣನಂ	೧೬೧೮
ಮುನ್ನೂರ ಅರುವತ್ತನಾಲ್ಕನೆಯ ಅಧ್ಯಾಯ—	
ಪ್ರಕೀರ್ಣಸ್ಥಾನಲಿಂಗಮಾಹಾತ್ಮ್ಯವರ್ಣನಂ	೧೬೧೯
ಮುನ್ನೂರ ಅರುವತ್ತೈದನೆಯ ಅಧ್ಯಾಯ—	
ಪ್ರಭಾಸಕ್ಷೇತ್ರಮಾಹಾತ್ಮ್ಯಸಂಪೂರ್ಣಂ	೧೬೨೦—೨೦

॥ ಶ್ರೀಃ ॥
॥ ಶ್ರೀ ಶಂಕರಃ ಶಂಕರಃ ॥

ಶ್ರೀ ಸ್ಕಾಂದ ಮಹಾಪುರಾಣಂ

ಅಥ ಪ್ರಭಾಸಖಂಡೇ

ಪ್ರಭಾಸಕ್ಷೇತ್ರಮಾಹಾತ್ಮ್ಯೇ ದ್ವಿತೀಯೋ ಭಾಗಃ

ಷಡ್ವಿಂಶತ್ಯುತ್ತರಶತತಮೋಽಧ್ಯಾಯಃ

ಶಾಂಡಿಲ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶಾಂಡಿಲ್ಯೇಶ್ವರಮುತ್ತಮಂ ।
ಬ್ರಹ್ಮಣಃ ಪಶ್ಚಿಮೇ ಭಾಗೇ ಧನುಷಾಂ ಷೋಡಶಾಂತರೇ ॥ ೧ ॥
ಮಹಾಪ್ರಭಾವಂ ಲಿಂಗಂ ತದ್ದರ್ಶನಾತ್ಪಾಪನಾಶನಂ ॥ ೨ ॥
ಶಾಂಡಿಲ್ಯೋ ನಾಮ ಬ್ರಹ್ಮರ್ಷಿಃ ಸಾರಥಿಃ ಬ್ರಹ್ಮಣಃ ಸ್ಮೃತಃ ।
ತಪಸ್ವೀ ಸ ಮಹಾತೇಜಾ ಜ್ಞಾನನಿಷ್ಠೋ ಜಿತೇಂದ್ರಿಯಃ ॥ ೩ ॥

ಕನ್ನಡದ ಅನುವಾದ

ಶಾಂಡಿಲ್ಯೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಬ್ರಹ್ಮನ ಪಶ್ಚಿಮ ದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿರುವ ಶಾಂಡಿಲ್ಯನೆಡೆಗೆ ಹೋಗಬೇಕು.

೨. ಅತಿಶಯ ಮಾಹಾತ್ಮ್ಯವುಳ್ಳ ಆ ಲಿಂಗದ ದರ್ಶನದಿಂದ ಪಾಪವು ಪರಿಹಾರವಾಗುವುದು.

೩. ಅತ್ಯಂತ ತೇಜಸ್ಸುಳ್ಳವನೂ, ಜ್ಞಾನಿಯೂ, ಜಿತೇಂದ್ರಿಯನೂ ಆದ ಶಾಂಡಿಲ್ಯನೆಂಬ ಬ್ರಹ್ಮರ್ಷಿಯು ಬ್ರಹ್ಮನಿಗೆ ಸಾರಥಿಯಾಗಿರುವನು.

ಸ ಪ್ರಭಾಸಂ ಸಮಾಸದ್ಯ ತಪಸ್ತೇಪ್ತೇ ಸುದಾರುಣಂ ।
ಪ್ರತಿಷ್ಠಾಪ್ಯ ಮಹಾಲಿಂಗಂ ಸೋಮೇಶಾದುತ್ತರೇ ಸ್ಥಿತಃ ॥ ೪ ॥
ಸ ಸ್ವಯಂ ಪೂಜಯಾಮಾಸ ದಿವ್ಯಾಬ್ದಾನಾಂ ಶತಂ ಪ್ರಿಯೇ ।
ತತೋಽಭಿಲಷಿತಂ ಪ್ರಾಪ್ಯ ಕೃತಕೃತ್ಯೋ ಬಭೂವ ಹ ॥ ೫ ॥
ನಂದೀಶ್ವರಪ್ರಸಾದೇನ ಅಣಿಮಾದಿಗುಣೈರ್ಯುತಃ ।
ತಂ ದೃಷ್ಟ್ವಾ ತು ನರಃ ಸದ್ಯೋ ವಿಪಾಪಃ ಸಂಪ್ರಜಾಯತೇ ॥ ೬ ॥
ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕ್ಯೇ ಯೌವನೇಽಪಿ ವಾ ।
ಅಜ್ಞಾನಾತ್ ಜ್ಞಾನತೋ ವಾಽಪಿ ಯಃ ಕರೋತಿ ನರಃ ಪ್ರಿಯೇ ।
ತತ್ಸರ್ವಂ ನಾಶಮಾಯಾತಿ ಶಾಂಡಿಲ್ಯೇಶ್ವರದರ್ಶನಾತ್ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಾಂಡಿಲ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಟ್ತ್ರಿಂಶತ್ಯುತ್ತರಶತತಮೋಽಧ್ಯಾಯಃ ॥

೪-೬. ಅವನು ಪ್ರಭಾಸಕ್ಷೇತ್ರಕ್ಕೆ ಬಂದು ಘೋರ ತಪಸ್ಸನ್ನು ಮಾಡಿ ಸೋಮೇಶನ ಉತ್ತರ ದಿಕ್ಕಿನಲ್ಲಿ ಮಹಾಲಿಂಗವನ್ನು ಪ್ರತಿಷ್ಠೆಮಾಡಿ ಅದನ್ನು ದಿವ್ಯ ನೂರು ವರ್ಷಗಳ ಕಾಲ ಪೂಜಿಸಿ ನಂದೀಶ್ವರನ ಅನುಗ್ರಹದಿಂದ ಅಣಿಮಾದ್ಯೈಶ್ವರ್ಯ ಸಂಪನ್ನನಾಗಿ ಇಷ್ಟಾರ್ಥವನ್ನು ಪಡೆದು ಕೃತಕೃತ್ಯನಾದನು. ಮನುಷ್ಯನು ಅವನನ್ನು ನೋಡಿ ಕೂಡಲೆ ಮಾನವನು ಪಾಪಮುಕ್ತನಾಗುವನು

೭. ಮಾನವನು ಬಾಲ್ಯ, ಯೌವನ, ಮುಪ್ಪುಗಳಲ್ಲಿ ಜ್ಞಾನದಿಂದಾಗಲಿ, ಅಜ್ಞಾನದಿಂದಾಗಲಿ ಮಾಡಿದ ಪಾಪವೆಲ್ಲ ಶಾಂಡಿಲ್ಯೇಶ್ವರನ ದರ್ಶನದಿಂದ ಪರಿಹಾರವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಾಂಡಿಲ್ಯೇಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತವಿಂಶತ್ಯುತ್ತರಶತತಮೋಽಧ್ಯಾಯಃ

ಕ್ಷೇಮಂಕರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ —: ಉವಾಚ

ತತೋ ಗಚ್ಛೇನ್ಮಹಾದೇವಿ ಕ್ಷೇಮೇಶ್ವರಮನುತ್ತಮಂ ।
ತಸ್ಮಾದುತ್ತರಕೋಣಸ್ಥಂ ಕಪಾಲೇಶಾಗ್ನಿಗೋಚರೇ ॥ ೧ ॥
ಧನುಷಾಂ ಪಂಚದಶಕೇ ಕಪಾಲೇಶ್ವರತಃ ಸ್ಥಿತಂ ।
ಲಿಂಗಂ ಮಹಾಪ್ರಭಾವಂ ಹಿ ಸರ್ವಪಾತಕನಾಶನಂ ॥ ೨ ॥
ಕ್ಷೇಮಮೂರ್ತಿಃ ಪುರಾ ರಾಜಾ ಬಭೂವ ಸ ಮಹಾಬಲಃ ।
ತೇನ ತತ್ರ ತಪಸ್ತಪ್ತಂ ಚಿರಕಾಲಂ ಮಹಾತ್ಮನಾ ॥ ೩ ॥
ತತಃ ಸಂಸ್ಥಾಪಿತೋ ಲಿಂಗಂ ಭಕ್ತ್ಯಾ ಭಾವಿತಚೇತಸಾ ।
ತದ್ದೃಷ್ಟ್ವಾ ಕ್ಷೇಮಮಾಯಾತಿ ಕಾರ್ಯಂ ಕ್ಷೇಮೇಣ ಸಿದ್ಧ್ಯತಿ ॥ ೪ ॥
ಸರ್ವಕಾಮಸಮೃದ್ಧಾತ್ಮಾ ಭೂಯಾಜ್ಜನ್ಮನಿ ಜನ್ಮನಿ ।
ಏವಂ ಕ್ಷೇಮೇಶ್ವರಂ ಲಿಂಗಂ ಖ್ಯಾತಂ ಪಾತಕನಾಶನಂ ॥ ೫ ॥

ಕನ್ನಡದ ಅನುವಾದ

ಕ್ಷೇಮಂಕರೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ದೇವಿ! ಅನಂತರ ಶಾಂಡಿಲ್ಯೇಶ್ವರನ ಉತ್ತರದ ಮೂಲೆಯಲ್ಲೂ, ಕಪಾಲೇಶ್ವರನ ಆಗ್ನೇಯ ದಿಕ್ಕಿನಲ್ಲಿ ಹದಿನೈದು ಬಿಲ್ಲುಗಳ ದೂರದಲ್ಲಿಯೂ ಇರುವ ಮಹಾಪ್ರಭಾವದಿಂದ ಕೂಡಿ, ಎಲ್ಲ ಪಾಪಗಳನ್ನೂ ನಿವಾರಿಸುವ ಕ್ಷೇಮಂಕರೇಶ್ವರನೆಡೆಗೆ ಹೋಗಬೇಕು.

೩–೫. ಪೂರ್ವದಲ್ಲಿ ಮಹಾಬಲಶಾಲಿಯಾದ ಕ್ಷೇಮಮೂರ್ತಿ ಎಂಬ ರಾಜನು ಇದ್ದನು. ಆ ಮಹಾತ್ಮನು ಬಹುಕಾಲ ಅಲ್ಲಿ ತಪಸ್ಸುಮಾಡಿ ಬಳಿಕ ಭಕ್ತಿಯಿಂದ ಆ ಕ್ಷೇಮಂಕರೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿದನು. ಸಕಲ ಪಾಪಗಳನ್ನೂ ನೀಗಿಸುವುದರಲ್ಲಿ ಪ್ರಸಿದ್ಧಿಗೊಂಡ ಆ ಕ್ಷೇಮಂಕರೇಶ್ವರನನ್ನು ದರ್ಶನ ಮಾಡಿದವನ ಸಕಲ ಕಾರ್ಯಗಳೂ ಸಿದ್ಧಿಗೊಳ್ಳುವುವು. ಮತ್ತು ಪ್ರತಿಜನ್ಮದಲ್ಲೂ ಸಕಲ ಇಷ್ಟಾರ್ಥಗಳಿಂದ ಕೂಡಿದವನೂ ಆಗುವನು.

ಸರ್ವಕಾಮಪ್ರದಂ ನೃಣಾಂ ಶ್ರುತಂ ಸೌಭಾಗ್ಯದಾಯಕಂ ।
ದರ್ಶನೇನಾಪಿ ದಾನಸ್ಯ ಗೋಶತಸ್ಯ ಫಲಂ ಸ್ಮೃತಂ ॥ ೬ ॥
ತಸ್ಮಾತ್ ಕ್ಷೇತ್ರಫಲಾಕಾಂಕ್ಷೀ ನಿತ್ಯಂ ತಲ್ಲಿಂಗಮಾಶ್ರಯೇತ್ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕ್ಷೇಮಂಕರೇಶ್ವರಮಾಹಾತ್ಮ್ಯವರ್ಣನಂನಾಮ
ಸಪ್ತವಿಂಶತ್ಯುತ್ತರಶತತಮೋಽಧ್ಯಾಯಃ ॥

೬—೭. ಮನುಷ್ಯರಿಗೆ ಸರ್ವವಿಧವಾದ ಇಚ್ಛೆಗಳನ್ನೂ, ಸೌಭಾಗ್ಯವನ್ನೂ ಕೊಡುವ ಆ ಲಿಂಗದ ದರ್ಶನದಿಂದ ನೂರು ಗೋವುಗಳ ದಾನದ ಫಲವು ಲಭಿಸುವುದು. ಆದುದರಿಂದ ಕ್ಷೇತ್ರ ಫಲವನ್ನು ಅಪೇಕ್ಷಿಸುವವರು ನಿತ್ಯವೂ ಕ್ಷೇಮಂಕರೇಶ್ವರನನ್ನು ಆಶ್ರಯಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕ್ಷೇಮಂಕರೇಶ್ವರಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟವಿಂಶತ್ಯುತ್ತರಶತತಮೋಽಧ್ಯಾಯಃ

ಸಾಗರಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಾಗರಾದಿತ್ಯಮುತ್ತಮಂ ।
ಭೈರವೇಶಾತ್ಪಶ್ಚಿಮತೋ ರುದ್ರಾನ್ಮೃತ್ಯುಂಜಯಾತ್ತಥಾ ॥ ೧ ॥
ಕಾಮೇಶಾದ್ದಕ್ಷಿಣಾಗ್ನೇಯೇ ನಾತಿದೂರೇ ವ್ಯವಸ್ಥಿತಂ ।
ಸರ್ವರೋಗಪ್ರಶಮನಂ ದಾರಿದ್ರ್ಯೌಘವಿಘಾತಕಂ ।
ಪ್ರತಿಷ್ಠಿತಂ ಮಹಾದೇವಿ ಸಾಗರೇಣ ಮಹಾತ್ಮನಾ ॥ ೨ ॥
ಷಷ್ಟಿಪುತ್ರಸಹಸ್ರಾಣಿ ಯಃ ಪ್ರಾಪಾರಾತಿಸೂದನಃ ।
ಸೂರ್ಯಂ ತತ್ರ ಸಮಾರಾಧ್ಯ ಸಗರಃ ಪೃಥಿವೀಪತಿಃ ॥ ೩ ॥
ಯ ಏಷ ಸಾಗರೋ ದೇವಿ ಯೋಜನಾಯುತವಿಸ್ತರಃ ।
ಆಯತೋಽಶೀತಿಸಾಹಸ್ರಂ ಯೋಜನಾನಾಂ ಪ್ರಕೀರ್ತಿತಃ ॥ ೪ ॥
ಅಸ್ಮಿನ್ಮನ್ವಂತರೇ ಕ್ಷಿಪ್ತಃ ಸಾಗರೈಶ್ಚ ಚತುರ್ದಿಶಂ ।
ತಸ್ಯೇದಂ ಕೀರ್ತಿತಂ ದೇವಿ ನಾಮ ಸಾಗರಸಂಜ್ಞಿತಂ ॥ ೫ ॥

ಕನ್ನಡದ ಅನುವಾದ

ಸಾಗರಾದಿತ್ಯಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಭೈರವೇಶ್ವರನ ಪಶ್ಚಿಮದಲ್ಲಿ ಕಾಮೇಶನ ದಕ್ಷಿಣಾಗ್ನೇಯಕ್ಕೆ ಬಹು ಸಮೀಪದಲ್ಲಿರುವುದೂ ಸಕಲ ರೋಗಗಳನ್ನು ಪರಿಹರಿಸುವವನೂ ಬಡತನವನ್ನು ನೀಗಿಸುವವನೂ ಆದ ಮಹಾತ್ಮನಾದ ಸಗರನು ಪ್ರತಿಷ್ಠೆಮಾಡಿರುವುದೂ ಆದ ಸಾಗರಾದಿತ್ಯನನ್ನು ಹೊಂದಬೇಕು.

೩. ಅಲ್ಲಿ ದೊರೆಯಾದ ಸಗರನು ಭಾಸ್ಕರನನ್ನಾರಾಧಿಸಿ ಅರುವತ್ತು ಸಾವಿರ ಮಕ್ಕಳನ್ನು ಪಡೆದನು.

೪–೫. ಈ ಮನ್ವಂತರದಲ್ಲಿ ಆ ಸಗರನ ಅರುವತ್ತು ಸಾವಿರ ಮಂದಿ ಮಕ್ಕಳು ಹತ್ತುಸಾವಿರ ಗಾವುದ ಅಗಲವೂ ಎಂಬತ್ತು ಸಾವಿರ ಗಾವುದ ಉದ್ದವೂ ಆಗಿರುವ ಸಮುದ್ರವನ್ನು ನಾಲ್ಕು ದಿಕ್ಕುಗಳಲ್ಲಿ ತೋಡಿರುವುದರಿಂದ ಸಮುದ್ರವು ಸಾಗರವೆಂಬ ನಾಮವನ್ನು ಪಡೆದಿರುವುದು.

ಯಸ್ಯಾದ್ಯಾಪೀಹ ಗಾಯಂತಿ ಪುರಾಣೇ ಪ್ರಥಿತಂ ಯಶಃ ।
ತೇನಾಯಂ ಸ್ಥಾಪಿತೋ ದೇವೋ ಭಾಸ್ಕರೋ ವಾರಿತಸ್ಕರಃ ॥ ೬ ॥
ತಂ ದೃಷ್ಟ್ವಾ ನ ಜಡೋ ನಾಂಧೋ ನ ದರಿದ್ರೋ ನ ದುಃಖಿತಃ ।
ನ ಚೈವೇಷ್ಟವಿಯೋಗೀ ಸ್ಯಾನ್ನ ರೋಗೀ ನೈವ ಪಾಪಕೃತ್ ॥ ೭ ॥
ಮಾಘೇ ಮಾಸಿ ಮಹಾದೇವಿ ಸಿತೇ ಪಕ್ಷೇ ಜಿತೇಂದ್ರಿಯಃ ।
ಷಷ್ಠ್ಯಾಮುಪೋಷಿತೋ ಭೂತ್ವಾ ರಾತ್ರೌ ತಸ್ಯಾಗ್ರತಃ ಸ್ವಪೇತ್ ॥ ೮ ॥
ವಿಬುದ್ಧಸ್ತ್ವಥ ಸಪ್ತಮ್ಯಾಂ ಭಕ್ತ್ಯಾ ಭಾನುಂ ಸಮರ್ಚಯೇತ್ ।
ಬ್ರಾಹ್ಮಣಾನ್ಭೋಜಯೇದ್ಭಕ್ತ್ಯಾ ವಿತ್ತಶಾಠ್ಯಂ ವಿವರ್ಜಯೇತ್ ॥ ೯ ॥
ಸುತಪ್ತೇನೇಹ ತಪಸಾ ಯಜ್ಞೈರ್ವಾ ಬಹುದಕ್ಷಿಣೈಃ ।
ತಾಂ ಗತಿಂ ನ ನರಾ ಯಾಂತಿ ಯಾಂ ಗತಾಃ ಸೂರ್ಯಮಾಶ್ರಿತಾಃ ॥ ೧೦ ॥
ಭಕ್ತ್ಯಾ ತು ಪುರುಷೈಃ ಪೂಜಾ ಕೃತಾ ದೂರ್ವಾಂಕುರೈರಪಿ ।
ಭಾನುರ್ದದಾತಿ ಹಿ ಫಲಂ ಸರ್ವಯಜ್ಞೈಃ ಸುದುರ್ಲಭಂ ॥ ೧೧ ॥

---

೬. ಯಾವನ ಪ್ರಸಿದ್ಧವಾದ ಕೀರ್ತಿಯನ್ನು ಈಗಲೂ ಪುರಾಣಗಳು ಗಾನ ಮಾಡುವುವೊ ಆ ಸಗರನು ಈ ಆದಿತ್ಯನನ್ನು ಪ್ರತಿಷ್ಠೆಮಾಡಿರುತ್ತಾನೆ.

೭. ಅವನನ್ನು ದರ್ಶನಮಾಡಿದ ಮಾನವನು ಮೂಢನೂ, ಕುರುಡನೂ, ಬಡವನೂ, ದುಃಖಿಯೂ, ಇಷ್ಟರನ್ನಗಲಿದವನೂ, ರೋಗಿಯೂ, ಪಾಪಿಯೂ ಆಗುವುದಿಲ್ಲ.

೮. ಮಹಾದೇವಿ! ಮಾಘಮಾಸದ ಶುಕ್ಲಪಕ್ಷದ ಷಷ್ಠೀ ದಿನ ಮಾನವನು ಜಿತೇಂದ್ರಿಯನಾಗಿ ಉಪವಾಸಮಾಡಿ ರಾತ್ರಿ ಆ ಆದಿತ್ಯನ ಮುಂದೆ ನಿದ್ರಿಸಬೇಕು.

೯. ಬಳಿಕ ಸಪ್ತಮೀದಿನ ಬೆಳಗ್ಗೆ ಎದ್ದು ಸೂರ್ಯನನ್ನರ್ಚಿಸಿ ದ್ರವ್ಯಲೋಭ ಮಾಡದೆ ಭಕ್ತಿಯಿಂದ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು.

೧೦. ಈ ಸೂರ್ಯನ ಭಕ್ತರು ಪಡೆಯುವ ಗತಿಯನ್ನು ಮಾನವರು ಅತಿಶಯ ತಪಸ್ಸಿನಿಂದಲೂ ಬಹು ದಕ್ಷಿಣೆಯನ್ನು ಕೊಟ್ಟು ಮಾಡುವ ಯಜ್ಞಗಳಿಂದಲೂ ಹೊಂದುವುದಿಲ್ಲ.

೧೧. ಮನುಷ್ಯನು ಗರಿಕೆಯ ಮೊಳಕೆಯಿಂದಾದರೂ ಭಕ್ತಿಯಿಂದ ಸೂರ್ಯನನ್ನು ಪೂಜಿಸಿದರೆ ಆ ಸೂರ್ಯನು ಅವನಿಗೆ ಸಕಲ ಯಜ್ಞಗಳಿಂದ ಲಭಿಸದ ಅಪೂರ್ವ ಫಲವನ್ನೀಯುವನು.

ತಸ್ಮಾತ್ಸರ್ವಪ್ರಯತ್ನೇನ ಸೂರ್ಯಮೇವಾಭಿಪೂಜಯೇತ್ ।
ಜನಕಾದಯೋ ಯಥಾ ಸಿದ್ಧಿಂ ಗತಾ ಭಾನುಂ ಪ್ರಪೂಜ್ಯ ಚ ॥ ೧೨ ॥
ಸರ್ವಾತ್ಮಾ ಸರ್ವಲೋಕೇಶೋ ದೇವದೇವಃ ಪ್ರಜಾಪತಿಃ ।
ಸೂರ್ಯ ಏವ ತ್ರಿಲೋಕಸ್ಯ ಮೂಲಂ ಪರಮದೈವತಂ ॥ ೧೩ ॥
ವಸಂತೇ ಕಪಿಲಃ ಸೂರ್ಯೋ ಗ್ರೀಷ್ಮೇ ಕಾಂಚನಸಪ್ರಭಃ ।
ಶ್ವೇತವರ್ಣಶ್ಚ ವರ್ಷಾಸು ಪಾಂಡುಃ ಶರದಿ ಭಾಸ್ಕರಃ ॥ ೧೪ ॥
ಹೇಮಂತೇ ತಾಮ್ರವರ್ಣಸ್ತು ಶಿಶಿರೇ ಲೋಹಿತೋ ರವಿಃ ।
ಏವಂ ವರ್ಣವಿಶೇಷೇಣ ಧ್ಯಾಯೇತ್ಸೂರ್ಯಂ ಯಥಾಕ್ರಮಂ ॥ ೧೫ ॥
ಪೂಜಯಿತ್ವಾ ವಿಧಾನೇನ ಯತಾತ್ಮಾ ಸಂಯತೇಂದ್ರಿಯಃ ।
ಪಠೇನ್ನಾಮಸಹಸ್ರಂ ತು ಸರ್ವಪಾತಕನಾಶನಂ ॥ ೧೬ ॥

ದೇವ್ಯುವಾಚ :—

ನಾಮ್ನಾಂ ಸಹಸ್ರಂ ಮೇ ಬ್ರೂಹಿ ಪ್ರಸಾದಾತ್ ಶಂಕರಪ್ರಭೋ ।
ತುಲ್ಯಂ ನಾಮಸಹಸ್ರಸ್ಯ ಕಿಮಪ್ಯನ್ಯತ್ಪ್ರಕೀರ್ತಯ ॥ ೧೭ ॥

---

೧೨. ಆದುದರಿಂದ ಸಕಲ ಯತ್ನಗಳಿಂದ ಸೂರ್ಯನನ್ನೇ ಪೂಜಿಸಬೇಕು. ಜನಕಾದಿರಾಜರ್ಷಿಗಳೂ ಸೂರ್ಯನನ್ನು ಆರಾಧಿಸಿ ಸಿದ್ಧಿಯನ್ನೈದಿರುವರು.

೧೩. ಸಕಲ ಸ್ವರೂಪನೂ, ಸಮಸ್ತ ಲೋಕಗಳಿಗೊಡೆಯನೂ, ದೇವತೆಗಳಿಗೆ ದೇವತೆಯೂ, ಬ್ರಹ್ಮನೂ ಆದ ಸೂರ್ಯನೆ ಮೂರುಲೋಕಗಳಿಗೆ ಉತ್ತಮ ದೇವತೆಯು.

೧೪–೧೫. ಈ ಸೂರ್ಯನು ವಸಂತರ್ತುವಿನಲ್ಲಿ ಹಳದಿಯಬಣ್ಣದವನೂ, ಗ್ರೀಷ್ಮರ್ತುವಿನಲ್ಲಿ ಚಿನ್ನದಂತೆ ಕಾಂತಿಯುಳ್ಳವನೂ, ಮಳೆಗಾಲದಲ್ಲಿ ಶ್ವೇತವರ್ಣನೂ, ಶರತ್ಕಾಲದಲ್ಲಿ ಬೆಳ್ಳಗೂ, ಹೇಮಂತರ್ತುವಿನಲ್ಲಿ ತಾಮ್ರ ಬಣ್ಣದವನೂ, ಶಿಶಿರರ್ತುವಿನಲ್ಲಿ ಕೆಂಪಗೂ, ಇರುವನು. ಆದುದರಿಂದ ಈ ವಿಶೇಷ ವರ್ಣಗಳಿಂದ ಆ ಸೂರ್ಯನನ್ನು ಕ್ರಮವಾಗಿ ಧ್ಯಾನಮಾಡಬೇಕು.

೧೬. ಮನುಷ್ಯನು ಆ ಆದಿತ್ಯನನ್ನು ಸ್ಥಿರಚಿತ್ತನೂ, ಜಿತೇಂದ್ರಿಯನೂ ಆಗಿ ವಿಧಿಯಂತೆ ಪೂಜಿಸಿ ಸಕಲ ಪಾಪಗಳ ಪರಿಹರಿಸುವ ಅವನ ಸಹಸ್ರನಾಮಗಳನ್ನು ಪಠಿಸಬೇಕು.

೧೭. ದೇವಿಯು ಹೇಳುತ್ತಾಳೆ :—ಶಂಕರ ! ನನ್ನಲ್ಲಿ ಅನುಗ್ರಹಮಾಡಿ ಆ ಸೂರ್ಯನ ಸಹಸ್ರನಾಮಗಳನ್ನು ಹೇಳು. ಅಥವಾ ಆ ಸಹಸ್ರನಾಮಗಳಿಗೆ ಸರಿಯಾದ ಬೇರೆ ಯಾವುದನ್ನಾದರೂ ಹೇಳು.

ಈಶ್ವರ ಉವಾಚ :—
ಅಲಂ ನಾಮಸಹಸ್ರೇಣ ಪಠಸ್ವೈವಂ ಶುಭಂ ಸ್ತವಂ ।
ಯಾನಿ ಗುಹ್ಯಾನಿ ನಾಮಾನಿ ಪವಿತ್ರಾಣಿ ಶುಭಾನಿ ಚ ।
ತಾನಿ ತೇ ಕೀರ್ತಯಿಷ್ಯಾಮಿ ಪ್ರಯತ್ನಾದವಧಾರಯ ॥ ೧೮ ॥
ವಿಕರ್ತನೋ ವಿವಸ್ವಾಂಶ್ಚ ಮಾರ್ತಂಡೋ ಭಾಸ್ಕರೋ ರವಿಃ ।
ಲೋಕಪ್ರಕಾಶಕಃ ಶ್ರೀಮಾನ್ ಲೋಕಚಕ್ಷುಃ ಗ್ರಹೇಶ್ವರಃ ॥ ೧೯ ॥
ಲೋಕಸಾಕ್ಷೀ ತ್ರಿಲೋಕೇಶಃ ಕರ್ತಾ ಹರ್ತಾ ತಮಿಸ್ರಹಾ ।
ತಪನಸ್ತಾಪನಶ್ಚೈವ ಶುಚಿಃ ಸಪ್ತಾಶ್ವವಾಹನಃ ॥ ೨೦ ॥
ಗಭಸ್ತಿಹಸ್ತೋ ಬ್ರಹ್ಮಾ ಚ ಸರ್ವದೇವನಮಸ್ಕೃತಃ ।
ಏಕವಿಂಶತಿರಿತ್ಯೇಷಸ್ತವ ಇಷ್ಟೋ ಮಹಾತ್ಮನಃ ॥ ೨೧ ॥
ಶರೀರಾರೋಗ್ಯದಶ್ಚೈವ ಧನವೃದ್ಧಿಯಶಸ್ಕರಃ ।
ಸ್ತವರಾಜ ಇತಿ ಖ್ಯಾತಃ ತ್ರಿಷು ಲೋಕೇಷು ವಿಶ್ರುತಃ ॥ ೨೨ ॥
ಯಶ್ಚಾನೇನ ಮಹಾದೇವಿ ದ್ವೇ ಸಂಧ್ಯೇಽಸ್ತಮನೋದಯೇ ।
ಸ್ತೌತ್ಯರ್ಕಂ ಪ್ರಯತೋ ಭೂತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೨೩ ॥
ಸರ್ವಕಾಮಸಮೃದ್ಧಾತ್ಮಾ ಸೂರ್ಯಲೋಕಂ ಸ ಗಚ್ಛತಿ ।

---

೧೮. ಈಶ್ವರನು ಹೇಳುತ್ತಾನೆ :—ಸಹಸ್ರನಾಮಗಳು ಬೇಡ. ಈ ಶುಭ ಸ್ತೋತ್ರವನ್ನು ಪಠಿಸು. ರಹಸ್ಯವೂ, ಪರಿಶುದ್ಧವೂ, ಮಂಗಳಕರವೂ ಆದ ಆ ನಾಮಗಳನ್ನು ನಿನಗೆ ಹೇಳುವೆನು, ಮನಸ್ಸಿಟ್ಟು ಕೇಳು.

೧೯—೨೧. ವಿಕರ್ತನ, ವಿವಸ್ವಾನ್, ಮಾರ್ತಂಡ, ಭಾಸ್ಕರ, ರವಿ, ಲೋಕಪ್ರಕಾಶಕ, ಶ್ರೀಮಾನ್, ಲೋಕಚಕ್ಷು, ಗ್ರಹೇಶ್ವರ, ಲೋಕಸಾಕ್ಷೀ, ತ್ರಿಲೋಕೇಶ, ಕರ್ತಾ, ಹರ್ತಾ, ತಮಿಸ್ರಹಾ, ತಪನ, ತಾಪನ, ಶುಚಿ, ಸಪ್ತಾಶ್ವವಾಹನ, ಗಭಸ್ತಿಹಸ್ತ, ಬ್ರಹ್ಮಾ, ಸರ್ವದೇವನಮಸ್ಕೃತ ಎಂದು ಈ ಇಪ್ಪತ್ತೊಂದು ನಾಮಗಳು ಆ ಮಹಾತ್ಮನಿಗೆ ಇಷ್ಟವಾದುವು.

೨೨. ಮೂರು ಲೋಕಗಳಲ್ಲಿ ಪ್ರಸಿದ್ಧವಾದ ಈ ಉತ್ತಮ ಸ್ತೋತ್ರವು ಶರೀರಾರೋಗ್ಯವನ್ನೂ, ಧನವೃದ್ಧಿ, ಯಶಸ್ಸುಗಳನ್ನೂ ಕೊಡುವುದು.

೨೩. ಮಹಾದೇವಿ ! ಮನುಷ್ಯನು ಪ್ರಾತಃಕಾಲ ಸೂರ್ಯನು ಉದಯಿಸುವ ಸಮಯದಲ್ಲಿಯೂ, ಸಾಯಂಕಾಲ ಅಸ್ತಂಗತನಾಗುವಕಾಲದಲ್ಲಿಯೂ ಶುದ್ಧನಾಗಿ ಸೂರ್ಯನನ್ನು ಸ್ತೋತ್ರಮಾಡಿದರೆ ಸಕಲ ಪಾಪಮುಕ್ತನಾಗಿ ಸಮಸ್ತೇಷ್ಟಾರ್ಥಗಳನ್ನು ಪಡೆದು ಸೂರ್ಯಲೋಕವನ್ನು ಸೇರುವನು.

ಇತ್ಯೇವಂ ಕಥಿತಂ ದೇವಿ ಮಾಹಾತ್ಮ್ಯಂ ಸಾಗರಾರ್ಕಜಂ ||
ಶ್ರುತಂ ದುಃಖೌಘಶಮನಂ ಮಹಾಪಾತಕನಾಶನಂ || ೨೪ ||

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾಗರಾದಿತ್ಯಮಾಹಾತ್ಮ್ಯವರ್ಣನಂ ನಾಮ
ಅಷ್ಟಾವಿಂಶತ್ಯುತ್ತರಶತತಮೋಽಧ್ಯಾಯಃ

---

೨೪. ದೇವಿ ! ಹೀಗೆ ಶ್ರವಣಮಾಡುವುದರಿಂದ ದುಃಖಗಳನ್ನೂ, ಪಾಪಗಳನ್ನೂ ಪರಿಹರಿಸುವ ಸಾಗರಾದಿತ್ಯನ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಾಗರಾದಿತ್ಯಮಾಹಾತ್ಮ್ಯವರ್ಣನವೆಂಬ
ನೂರಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ಅಕ್ಷಮಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅಕ್ಷಮಾಲೇಶ್ವರಂ ಪರಂ ।
ಸಾಗರಾರ್ಕಾದೀಶಕೋಣೇ ಪಂಚಾಶದ್ಧನುಷಾಂತರೇ ॥ ೧ ॥
ಸಂಸ್ಥಿತಂ ಪಾಪಶಮನಂ ಯುಗಲಿಂಗಂ ಮಹಾಪ್ರಭಂ ।
ಅಕ್ಷಮಾಲೇಶ್ವರಂ ನಾಮ ಪುರಾ ತಸ್ಯ ಪ್ರಕೀರ್ತಿತಂ ॥
ಉಗ್ರಸೇನೇಶ್ವರಂ ನಾಮ ಖ್ಯಾತಂ ತಸ್ಯೈವ ಸಾಂಪ್ರತಂ ॥ ೨ ॥

ದೇವ್ಯುವಾಚ :—

ಅಕ್ಷಮಾಲೇಶ್ವರಂ ನಾಮ ಯತ್ಪೂರ್ವಂ ಸಮುದಾಹೃತಂ ।
ಕಥಂ ತದಭವದ್ದೇವ ಕಥಯಸ್ವ ಪ್ರಸಾದತಃ ॥ ೩ ॥

ಈಶ್ವರ ಉವಾಚ :—

ಆಸೀತ್ಪುರಾ ಮಹಾದೇವಿ ಸತೀ ಚಾಧಮಯೋನಿಜಾ ।
ಅಕ್ಷಮಾಲೇತಿ ವೈ ನಾಮ್ನಾ ಸತೀಧರ್ಮಪರಾಯಣಾ ॥ ೪ ॥

ಕನ್ನಡದ ಅನುವಾದ

ಅಕ್ಷಮಾಲೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಸಾಗರಾದಿತ್ಯನ ಈಶಾನ್ಯಮೂಲೆಯಲ್ಲಿ ಐವತ್ತು ಬಿಲ್ಲುಗಳ ದೂರದಲ್ಲಿರುವ ಪಾಪವನ್ನು ಪರಿಹರಿಸುವುದೂ ಅತಿಶಯಕಾಂತಿಯುಳ್ಳುದೂ ಆದ ಅಕ್ಷಮಾಲೇಶ್ವರನೆಂಬ ಯುಗಲಿಂಗದೆಡೆಗೆ ಹೋಗಬೇಕು. ಹಿಂದೆ ಆ ಲಿಂಗಕ್ಕೆ ಅಕ್ಷಮಾಲೇಶ್ವರನೆಂದೂ, ಈಗ ಉಗ್ರಸೇನೇಶ್ವರನೆಂದೂ ಹೆಸರು ಪ್ರಸಿದ್ಧವಾಗಿದೆ.

೩. ದೇವಿಯು ಹೇಳುತ್ತಾಳೆ :—ಸ್ವಾಮಿ ! ಹಿಂದೆ ಈ ಲಿಂಗಕ್ಕೆ ಅಕ್ಷಮಾಲೇಶ್ವರನೆಂದು ಹೆಸರಾಗಿರುವುದೆಂದು ಹೇಳಿರುವೆ. ಈ ಹೆಸರು ಹೇಗಾಯಿತೆಂಬುದನ್ನು ಅನುಗ್ರಹಿಸಿ ಹೇಳು.

೪. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಹಿಂದೆ ಚಂಡಾಲಜಾತಿಯಲ್ಲಿ ಜನಿಸಿದ ಅಕ್ಷಮಾಲೆಯೆಂಬ ಸಾಧ್ವಿಯೋರ್ವಳಿದ್ದಳು.

ಕದಾಚಿತ್ಸಮನುಪ್ರಾಪ್ತೇ ದುರ್ಭಿಕ್ಷೇ ಕಾಲಪರ್ಯಯಾತ್ ।
ಋಷಯಶ್ಚ ಮಹಾದೇವಿ ಕ್ಷುಧಾಕ್ರಾಂತಾ ವಿಚೇತಸಃ ॥ ೫ ॥
ಸರ್ವೇ ಚಾನ್ನಂ ಪರೀಪ್ಸಂತೋ ಗತಾಶ್ಚಂಡಾಲವೇಶ್ಮನಿ ।
ಜ್ಞಾತ್ವಾನ್ನಸಂಗ್ರಹಂ ತಸ್ಯ ಪ್ರಾರ್ಥಯಾಂಚಕ್ರುರಂತ್ಯಜಂ ॥ ೬ ॥
ಭೋ ಭೋಽಂತ್ಯಜ ಮಹಾಬುದ್ಧೇ ರಕ್ಷಾಸ್ಮಾನನ್ನದಾನತಃ
ಪ್ರಾಣಸಂದೇಹಮಾಪನ್ನಾನ್ ಕೃಶಾಂಗಾನ್ ಕ್ಷುತ್ಪ್ರಪೀಡಿತಾನ್ ॥ ೭ ॥
ಅಹೋ ಧನ್ಯೋಽಸಿ ಪೂಜ್ಯೋಽಸಿ ನ ತ್ವಮಂತ್ಯಜ ಉಚ್ಯಸೇ ।
ಯದಸ್ಮಿನ್ಪ್ರಲಯೇ ಯಾತೇ ಸ್ಥಿತಂ ಧಾನ್ಯಂ ಗೃಹೇ ತವ ॥ ೮ ॥
ಅನಾವೃಷ್ಟಿಹತೇ ದೇಶೇ ಸಸ್ಯೇ ಚ ಪ್ರಲಯಂ ಗತೇ ।
ಏಕಂ ಯೋ ಭೋಜಯೇದ್ವಿಪ್ರಂ ಕೋಟಿರ್ಭವತಿ ಭೋಜಿತಾ ॥ ೯ ॥

ಅಂತ್ಯಜ ಉವಾಚ :—

ಅಹೋ ಆಶ್ಚರ್ಯಮತುಲಂ ಯದೇತದ್ದೃಶ್ಯತೇಽಧುನಾ ।
ಯದೇತನ್ಮದ್ಗೃಹಂ ಪ್ರಾಪ್ತಾ ಋಷಯಶ್ಚಾನ್ನಕಾಂಕ್ಷಿಣಃ ॥ ೧೦ ॥
ಶೂದ್ರಾನ್ನಮಪಿ ನಾದೇಯಂ ಬ್ರಾಹ್ಮಣೈಃ ಕಿಮುತಾಂತ್ಯಜಾತ್ ॥ ೧೧ ॥

೫–೬. ಒಂದಾನೊಂದುದಿನ ಕಾಲವ್ಯತ್ಯಾಸದಿಂದ ದುರ್ಭಿಕ್ಷವೊದಗಲು ಮುನಿಗಳು ಹಸಿವಿನಿಂದ ಕಂಗೆಟ್ಟು ಎಲ್ಲರೂ ಚಂಡಾಲನ ಮನೆಯಲ್ಲಿ ಅನ್ನವಿರುವುದನ್ನು ತಿಳಿದು ಅವನ ಮನೆಗೆ ಹೋಗಿ ಅನ್ನವನ್ನು ಬೇಡಿದರು.

೭. "ಜ್ಞಾನಿಯಾದ ಎಲೈ ಚಂಡಾಲನೇ! ಪ್ರಾಣಸಂದೇಹವನ್ನು ಹೊಂದಿದವರೂ, ಕೃಶಾಂಗರೂ, ಹಸಿವಿನಿಂದ ಪೀಡಿಸಲ್ಪಟ್ಟವರೂ ಆದ ನಮಗೆ ಅನ್ನವನ್ನಿತ್ತು ಕಾಪಾಡು.

೮. ಇಂತಹ ನಾಶಕಾಲದಲ್ಲಿಯೂ ನಿನ್ನ ಮನೆಯಲ್ಲಿ ಧಾನ್ಯವಿರುವುದರಿಂದ ನೀನು ಪುಣ್ಯವಂತನೂ, ಪೂಜ್ಯನೂ ಆಗಿರುವೆ. ನೀನು ಚಂಡಾಲನಲ್ಲ.

೯. ದೇಶವು ಅನಾವೃಷ್ಟಿಯಿಂದ ಹಾಳಾಗಿ ಸಸ್ಯಗಳು ನಾಶವಾಗಿರಲು ಒಬ್ಬ ಬ್ರಾಹ್ಮಣನನ್ನು ಭೋಜನಮಾಡಿಸಿದವನು ಕೋಟಿ ಬ್ರಾಹ್ಮಣರನ್ನು ಭೋಜನಮಾಡಿಸಿದವನಂತಾಗುವನು."

೧೦. ಅಂತ್ಯಜನು ಹೇಳುತ್ತಾನೆ:—ಈಗ ಋಷಿಗಳಾದ ತಾವು ಅನ್ನದ ಅಪೇಕ್ಷೆಯಿಂದ ನನ್ನ ಮನೆಗೆ ಬಂದಿರುವುದು ನನಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡುತ್ತಿದೆ.

೧೧. ಬ್ರಾಹ್ಮಣರು ಶೂದ್ರಾನ್ನವನ್ನೂ ತೆಗೆದುಕೊಳ್ಳಬಾರದು. ಚಂಡಾಲನ ಅನ್ನದ ವಿಷಯದಲ್ಲಿ ಏನು ಹೇಳತಕ್ಕದು ?

ಆಮಂ ವಾ ಯದಿ ವಾ ಪಕ್ವಂ ಶೂದ್ರಾನ್ನಂ ಯಸ್ತು ಭಕ್ಷತಿ ।
ಸ ಭವೇಚ್ಛೂಕರೋ ಗ್ರಾಮಸ್ತಸ್ಯ ವಾ ಜಾಯತೇ ಕುಲೇ ॥ ೧೨ ॥
ಅಮೃತಂ ಬ್ರಾಹ್ಮಣಸ್ಯಾನ್ನಂ ಕ್ಷತ್ರಿಯಾನ್ನಂ ಪಯಃ ಸ್ಮೃತಂ ।
ವೈಶ್ಯಾನ್ನಮನ್ನಮಿತ್ಯಾಹುಃ ಶೂದ್ರಾನ್ನಂ ರುಧಿರಂ ಸ್ಮೃತಂ ॥ ೧೩ ॥
ಶೂದ್ರಾನ್ನಂ ಶೂದ್ರಸಂಪರ್ಕಂ ಶೂದ್ರೇಣ ಚ ಸಹಾಸನಂ ।
ಶೂದ್ರಾದನ್ನಾಗಮಶ್ಚೈವ ಜ್ವಲಂತಮಪಿ ಪಾತಯೇತ್ ॥ ೧೪ ॥
ಅಗ್ನಿಹೋತ್ರೀ ತು ಯೋ ವಿಪ್ರಃ ಶೂದ್ರಾನ್ನಾನ್ನ ನಿವರ್ತತೇ ।
ಏತೇ ತಸ್ಯ ಪ್ರಣಶ್ಯಂತಿ ಆತ್ಮಾ ಬ್ರಹ್ಮ ತ್ರಯೋಽಗ್ನಯಃ ॥ ೧೫ ॥
ಶೂದ್ರಾನ್ನೇನೋದರಸ್ಥೇನ ಬ್ರಾಹ್ಮಣೋ ಮ್ರಿಯತೇ ಯದಿ ।
ಷಣ್ಮಾಸಾಭ್ಯಂತರೇ ವಿಪ್ರಃ ಪಿಶಾಚಃ ಸೋಽಭಿಜಾಯತೇ ॥ ೧೬ ॥
ಶೂದ್ರಾನ್ನೇನ ದ್ವಿಜೋ ಯಸ್ತು ಅಗ್ನಿಹೋತ್ರಂ ಜುಹೋತಿ ಚ ।
ಚಂಡಾಲೋ ಜಾಯತೇ ಪ್ರೇತ್ಯ ಶೂದ್ರಾಚ್ಚೈವೇಹ ದೈವತಃ ॥ ೧೭ ॥

---

೧೨. ಶೂದ್ರನು ಬೇಯಿಸದ ಅಥವಾ ಬೇಯಿಸಿದ ಅನ್ನವನ್ನು ಭಕ್ಷಿಸಿದ ಮಾನವನು ಹಂದಿಯಾಗಿ ಜನಿಸುವನು. ಅಥವಾ ಆ ಶೂದ್ರನ ವಂಶದಲ್ಲಿ ಹುಟ್ಟುವನು.

೧೩. ಬ್ರಾಹ್ಮಣನ ಅನ್ನವು ಅಮೃತವೆಂದೂ, ಕ್ಷತ್ರಿಯನ ಅನ್ನವು ಹಾಲೆಂದೂ, ವೈಶ್ಯನ ಅನ್ನವು ಅನ್ನಮಾತ್ರವೆಂದೂ, ಶೂದ್ರನ ಅನ್ನವು ರಕ್ತವೆಂದೂ ಹೇಳಿಸಿ ಕೊಳ್ಳುವುದು.

೧೪. ಶೂದ್ರನ ಅನ್ನ, ಅವನ ಸಹವಾಸ, ಅವನೊಡನೆ ಒಂದೇ ಆಸನವಲ್ಲಿ ಕುಳಿತುಕೊಳ್ಳುವುದು, ಅವನಿಂದ ಅನ್ನವನ್ನು ತೆಗೆದುಕೊಳ್ಳುವುದು ಇವುಗಳು ತಪಸ್ಸಿನಿಂದ ಜ್ವಲಿಸಿತ್ತಿರುವವನನ್ನೂ ಪಾತಕಿಯನ್ನಾಗಿ ಮಾಡುವುವು.

೧೫. ಅಗ್ನಿಹೋತ್ರಿಯಾದ ವಿಪ್ರನು ಶೂದ್ರಾನ್ನವನ್ನು ತ್ಯಜಿಸದಿದ್ದರೆ ಅವನ ಆತ್ಮ, ವೇದ, ಮತ್ತು ಮೂರುಅಗ್ನಿಗಳು ನಷ್ಟವಾಗುವುವು.

೧೬. ಬ್ರಾಹ್ಮಣನು ಶೂದ್ರನ ಅನ್ನವು ಹೊಟ್ಟೆಯಲ್ಲಿರುವಾಗಲೆ ಮೃತನಾದರೆ ಆರುತಿಂಗಳೊಳಗೆ ಪಿಶಾಚವಾಗುವನು.

೧೭. ದ್ವಿಜನು ಶೂದ್ರನ ಅನ್ನದಿಂದ ಅಗ್ನಿಹೋತ್ರಗೈದರೆ ಮೃತನಾಗಿ ಚಂಡಾಲ ಜಾತಿಯಲ್ಲಿ ಹುಟ್ಟುವನು. ಅಥವಾ ಅದೃಷ್ಟವಶದಿಂದ ಈ ಲೋಕದಲ್ಲಿ ಶೂದ್ರನಿಂದಲೆ ಹುಟ್ಟುವನು.

ಯಸ್ತು ಭುಂಜತಿ ಶೂದ್ರಾನ್ನಂ ಮಾಸಮೇಕಂ ನಿರಂತರಂ ।
ಇಹ ಜನ್ಮನಿ ಶೂದ್ರತ್ವಂ ಮೃತಃ ಶೂದ್ರೋಽಭಿಜಾಯತೇ ॥ ೧೮ ॥
ರಾಜಾನ್ನಂ ತೇಜ ಆದತ್ತೇ ಶೂದ್ರಾನ್ನಂ ಬ್ರಹ್ಮವರ್ಚಸಂ ।
ಆಯುಃ ಸುವರ್ಣಕಾರಾನ್ನಂ ಯಶಶ್ಚರ್ಮಾವಕರ್ತಿನಃ ॥ ೧೯ ॥
ಕಾರುಕಾನ್ನಂ ಪ್ರಜಾ ಹಂತಿ ಬಲಂ ನಿರ್ಣೇಜಕಸ್ಯ ಚ ।
ಗಣಾನ್ನಂ ಗಣಿಕಾನ್ನಂ ಚ ಲೋಕೇಭ್ಯಃ ಪರಿಕೃಂತತಿ ॥ ೨೦ ॥
ಪೂಯಂ ಚಿಕಿತ್ಸಕಸ್ಯಾನ್ನಂ ಪುಂಶ್ಚಲ್ಯಾಶ್ಚಾನ್ನಮಿಂದ್ರಿಯಂ ।
ವಿಷ್ಠಾ ವಾರ್ಧುಷಿಕಸ್ಯಾನ್ನಂ ಶಸ್ತ್ರವಿಕ್ರಯಿಣೋ ಮಲಂ ॥ ೨೧ ॥
ಸಹಸ್ರಕೃತ್ವಸ್ತ್ವೇತೇಷಾಮನ್ನೇ ಯದ್ಭಕ್ಷಿತೇ ಭವೇತ್ ।
ತದೇಕವಾರಂ ಭುಕ್ತೇನ ಕನ್ಯಾವಿಕ್ರಯಿಣೋ ಭವೇತ್ ॥ ೨೨ ॥
ಸಹಸ್ರಕೃತ್ವಸ್ತಸ್ಯೈವ ಭುಕ್ತೇಽನ್ನೇ ಯತ್ಫಲಂ ಭವೇತ್ ।
ತದಂತ್ಯಜಾನಾಮನ್ನೇನ ಸಕೃದ್ಭುಕ್ತೇನ ವೈ ಭವೇತ್ ॥ ೨೩ ॥
ತತ್ಕಥಂ ಮಮ ವಿಪ್ರೇಂದ್ರಾಶ್ಚಂಡಾಲಸ್ಯಾಧಮಾತ್ಮನಃ ।
ಧರ್ಮಮೇವಂ ವಿಜಾನಂತೋ ನೂನಮನ್ನಂ ಜಿಹೀರ್ಷಥ ॥ ೨೪ ॥

---

೧೮. ಒಂದು ತಿಂಗಳು ಎಡೆಬಿಡದೆ ಶೂದ್ರಾನ್ನವನ್ನು ಭುಂಜಿಸಿದವನು ಈ ಜನ್ಮದಲ್ಲಿ ಶೂದ್ರನಾಗುವನು. ಮೃತನಾಗಿಯೂ ಶೂದ್ರನಾಗಿಯೆ ಹುಟ್ಟುವನು.

೧೯. ರಾಜನ ಅನ್ನವು ತೇಜಸ್ಸನ್ನೂ, ಶೂದ್ರಾನ್ನವು ಬ್ರಹ್ಮವರ್ಚಸ್ಸನ್ನೂ, ಸ್ವರ್ಣಕಾರಣನ ಅನ್ನವು ಆಯುಷ್ಯವನ್ನೂ, ಚರ್ಮಕಾರನ ಅನ್ನವು ಕೀರ್ತಿಯನ್ನೂ ಹಾಳುಮಾಡುವುದು.

೨೦. ಬಡಗಿಯ ಅನ್ನವು ಪ್ರಜೆಗಳನ್ನೂ, ಅಗಸನ ಅನ್ನವು ಬಲವನ್ನೂ ಹಾಳು ಮಾಡುವುದು. ಸಮೂಹಾನ್ನವೂ, ಸೂಳೆಯ ಅನ್ನವೂ ಉತ್ತಮ ಲೋಕಗಳ ಲಾಭವನ್ನು ತಡೆಯುವುದು.

೨೧. ವೈದ್ಯನ ಅನ್ನವು ಪೂಯವೂ (ಕೀವೂ) ವ್ಯಭಿಚಾರಿಣಿಯ ಅನ್ನವು ರೇತಸ್ಸೂ, ಬಡ್ಡಿಯಿಂದ ಜೀವಿಸುವವನ ಅನ್ನವು ಅಮೇಧ್ಯವೂ, ಆಯುಧವನ್ನು ಮಾರುವವನ ಅನ್ನವು ಮಲವೂ ಆಗಿರುವುದು.

೨೨. ಇವರ ಅನ್ನವನ್ನು ಸಾವಿರಸಾರಿ ಭಕ್ಷಿಸಿದ ಪಾಪವು ಕನ್ಯೆಯನ್ನು ಮಾರುವವನ ಅನ್ನವನ್ನು ಒಂದುಸಲ ತಿನ್ನುವುದರಿಂದುಂಟಾಗುವುದು.

೨೩. ಕನ್ಯೆಯನ್ನು ಮಾರುವವನ ಅನ್ನವನ್ನು ಸಾವಿರಸಾರಿ ಭುಂಜಿಸಿದ ಫಲವು ಚಂಡಾಲನ ಅನ್ನವನ್ನು ಒಂದುಸಾರಿ ತಿನ್ನುವುದರಿಂದುಂಟಾಗುವುದು.

೨೪. ಆದುದರಿಂದ ಹೀಗೆ ಧರ್ಮವನ್ನರಿತ ಎಲೈ ಬ್ರಾಹ್ಮಣರೆ! ನೀವು ನೀಚ ಚಂಡಾಲನಾದ ನನ್ನ ಅನ್ನವನ್ನು ಹೇಗೆ ತೆಗೆದುಕೊಳ್ಳಲು ಬಯಸುವಿರಿ ?

ಋಷಯ ಊಚು ಃ—
ಜೀವಿತಾತ್ಯಯಮಾಪನ್ನೋ ಯೋಽನ್ನಮಾದ್ರಿಯತೇ ತತಃ ।
ಆಕಾಶ ಇವ ಪಂಕೇನ ನ ಸ ಪಾಪೇನ ಲಿಪ್ಯತೇ ॥ ೨೫ ॥
ಅಜೀಗರ್ತಃ ಸುತಂ ಹಂತುಮುಪಸರ್ಪನ್ ಬುಭುಕ್ಷಿತಃ ।
ನ ಚಾಲಿಪ್ಯತ ಪಾಪೇನ ಕ್ಷುತ್ಪ್ರತೀಘಾತಮಾಚರನ್ ॥ ೨೬ ॥
ಭಾರದ್ವಾಜಃ ಕ್ಷುಧಾರ್ತಸ್ತು ಸಪುತ್ರೋ ವಿಜನೇ ವನೇ ।
ಬಹ್ವೀರ್ಗಾ ಉಪಜಗ್ರಾಹ ಬೃಹಜ್ಜ್ಯೋತಿರ್ಮಹಾಮನಾಃ ॥ ೨೭ ॥
ಕ್ಷುಧಾರ್ತೋ ಗೀತಮಭ್ಯಾಗಾದ್ವಿಶ್ವಾಮಿತ್ರಃ ಶ್ವಜಾಘನೀಂ ।
ಚಂಡಾಲಹಸ್ತಾದಾದಾಯ ಧರ್ಮಾಧರ್ಮವಿಚಕ್ಷಣಃ ॥ ೨೮ ॥
ಶ್ವಮಾಂಸಮಿಚ್ಛನ್ನಾರ್ತೋ ತು ಧರ್ಮಾನ್ನ ಚ್ಯವತೇ ಸ್ಮ ಸಃ ।
ಪ್ರಾಣಾನಾಂ ಪರಿರಕ್ಷಾರ್ಥಂ ವಾಮದೇವೋ ನ ಲಿಪ್ತವಾನ್ ॥ ೨೯ ॥
ಏವಂ ಜ್ಞಾತ್ವಾ ಧರ್ಮಬುದ್ಧೇ ಸಾಂಪ್ರತಂ ಮಾ ವಿಚಾರಯ ।
ದದಸ್ವಾನ್ನಂ ದದಸ್ವಾನ್ನಮಸ್ಮಾಕಮಿಹ ಯಾಚತಾಂ ॥ ೩೦ ॥

---

೨೫. ಋಷಿಗಳು ಹೇಳುತ್ತಾರೆ :—ಪ್ರಾಣಾಪಾಯದ ಆಪತ್ತಿನಲ್ಲಿ ಚಂಡಾಲನ ಅನ್ನವನ್ನು ತೆಗೆದುಕೊಂಡವನು ಆಕಾಶವು ಕೆಸರಿನಿಂದ ಲಿಪ್ತವಾಗದಂತೆ ಪಾಪದಿಂದ ಲಿಪ್ತನಾಗುವುದಿಲ್ಲ.

೨೬. ಅಜೀಗರ್ತನು ಹಸಿವಿನಿಂದ ಪೀಡಿತನಾಗಿ ಪುತ್ರನನ್ನು ಕೊಂದು ಹಸಿವನ್ನು ನೀಗಿಸಿಕೊಂಡು ಪಾಪಲಿಪ್ತನಾಗಲಿಲ್ಲ.

೨೭. ಜ್ಞಾನಿಯಾದ ಭಾರದ್ವಾಜನು ಹಸಿವಿನಿಂದ ನೊಂದವನಾಗಿ ಮಗನೊಡನೆ ಕಾಡಿನಲ್ಲಿ ಅನೇಕ ಗೋವುಗಳನ್ನು ವಧಿಸಿ ಅವುಗಳ ಮಾಂಸವನ್ನು ತಿಂದನು.

೨೮. ಧರ್ಮಾಧರ್ಮಗಳಲ್ಲಿ ನಿಪುಣನಾದ ವಿಶ್ವಾಮಿತ್ರನು ಹಸಿವಿನಿಂದ ಪೀಡಿತನಾಗಿ ಚಂಡಾಲನ ಕೈಯಿಂದ ನಾಯಿಯ ಜಘನದ ಮಾಂಸವನ್ನು ತೆಗೆದುಕೊಂಡರೂ ಸ್ತುತ್ಯನಾಗಿರುವನು.

೨೯. ವಾಮದೇವನು ಪ್ರಾಣಾಪಾಯದ ಕಾಲದಲ್ಲಿ ನಾಯಿಯ ಮಾಂಸವನ್ನು ತಿಂದರೂ ಧರ್ಮಭ್ರಷ್ಟನೂ ಪಾಪಲಿಪ್ತನೂ ಆಗಲಿಲ್ಲ.

೩೦. ಧರ್ಮಬುದ್ಧಿಯುಳ್ಳ ಚಂಡಾಲನೆ! ಇದನ್ನರಿತು ಈಗ ವಿಚಾರಮಾಡದೆ ಬೇಡುತ್ತಿರುವ ನಮಗೆ ಅನ್ನವನ್ನು ನೀಡು, ನೀಡು.

ಚಂಡಾಲ ಉವಾಚ :—
ಯದ್ಯೇವಂ ಭವತಾಂ ಕಾರ್ಯಮಿದಮಂಗೀಕೃತಂ ಧ್ರುವಂ ।
ತದಿಯಂ ಮತ್ಸುತಾ ಕನ್ಯಾ ಭವದ್ಭಿಃ ಪರಿಗೃಹ್ಯತಾಂ ॥ ೩೧ ॥
ಭವತಾಂ ಯೋಗ್ರಣೀರ್ಜ್ಯೇಷ್ಠಃ ಸ ಚೇಮಾಮುದ್ವಹೇದ್ಧ್ರುವಂ ।
ದಾಸ್ಯೇ ವರ್ಷಾಶನಂ ಪಶ್ಚಾದೀಪ್ಸಿತಂ ಭವತಾಂ ದ್ವಿಜಾಃ ॥ ೩೨ ॥
ಈಶ್ವರ ಉವಾಚ :—
ಇತ್ಯುಕ್ತಾ ಋಷಯೋ ದೇವಿ ಲಜ್ಜಯಾಽಽನತಕಂಧರಾಃ ।
ಪ್ರತ್ಯಾಲೋಚ್ಯ ಯಥಾನ್ಯಾಯಂ ವಸಿಷ್ಠಂ ಸಮನೂದ್ವಹನ್ ॥ ೩೩ ॥
ವಸಿಷ್ಠೋಽಪಿ ಸಮಾಖ್ಯಾಯ ಆಪದ್ಧರ್ಮಂ ಮಹಾಮುನಾಃ ।
ಕಾಲಸ್ಯಾನಂತರಜ್ಞೋ ತ್ರೈಲೋಕ್ಯೇ ಪ್ರೋದ್ವಹಾಹಾಽಂತ್ಯಜಾಂಗನಾಂ ।
ಅಕ್ಷಮಾಲೇತಿ ವೈ ನಾಮ್ನೀಂ ಪ್ರಸಿದ್ಧಾಂ ಭುವನತ್ರಯೇ ॥ ೩೪ ॥
ಯದಾ ಸ್ವಕೀಯತೇಜೋಭಿರರ್ಕಬಿಂಬಮರುಂಧತಃ ।
ಅರುಂಧತೀ ತದಾ ಜಾತಾ ದೇವದಾನವವಂದಿತಾ ॥ ೩೫ ॥
ಯಾದೃಶೇನ ತು ಭರ್ತ್ರಾ ಸ್ತ್ರೀ ಸಂಯುಜ್ಯೇತ ಯಥಾವಿಧಿ ।
ಸಾ ತಾದೃಗೇವ ಭವತಿ ಸಮುದ್ರೇಣೇವ ನಿಮ್ನಗಾ ॥ ೩೬ ॥

---

೩೧. ಚಂಡಾಲನು ಹೇಳುತ್ತಾನೆ :—ಹೀಗಾದರೆ ನಿಮ್ಮ ಅಭಿಪ್ರಾಯವನ್ನು ಒಪ್ಪಿರುವೆನು. ನನ್ನ ಈ ಕನ್ಯೆಯನ್ನು ನೀವು ಸ್ವೀಕರಿಸಿರಿ.

೩೨. ಬ್ರಾಹ್ಮಣರೆ! ನಿಮ್ಮಲ್ಲಿ ಶ್ರೇಷ್ಠನಾದವನು ಈ ಕನ್ಯೆಯನ್ನು ಮದುವೆ ಮಾಡಿಕೊಳ್ಳಲಿ. ಅನಂತರ ನಾನು ನಿಮಗೆ ನಿಶ್ಚಯವಾಗಿಯೂ ವರ್ಷಾಶನವನ್ನು ಕೊಡುವೆನು.

೩೩. ಈಶ್ವರನು ಹೇಳುತ್ತಾನೆ :—ದೇವಿ ! ಚಂಡಾಲನು ಹೀಗೆನ್ನಲು ಋಷಿಗಳು ನಾಚಿಕೆಯಿಂದ ತಲೆತಗ್ಗಿಸಿಕೊಂಡು ನ್ಯಾಯರೀತಿಯಿಂದಾಲೋಚಿಸಿ ವಸಿಷ್ಠನನ್ನು ಕುರಿತು ಆ ಕನ್ಯೆಯನ್ನು ವಿವಾಹ ಮಾಡಿಕೊಳ್ಳುವಂತೆ ಹೇಳಿದರು.

೩೪. ಮುಂದಿನ ವೃತ್ತಾಂತವನ್ನರಿತ ಜ್ಞಾನಿಯಾದ ವಸಿಷ್ಠನೂ ಆಪದ್ಧರ್ಮವನ್ನನುಸರಿಸಿ ಮೂರು ಲೋಕಗಳಲ್ಲಿ ಅಕ್ಷಮಾಲಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ಆ ಚಂಡಾಲ ಕನ್ಯೆಯನ್ನು ಮದುವೆ ಮಾಡಿಕೊಂಡನು.

೩೫. ಆ ಅಕ್ಷಮಾಲೆಯು ತನ್ನ ತೇಜಸ್ಸಿನಿಂದ ಸೂರ್ಯಬಿಂಬವನ್ನು ತಡೆದಾಗ ದೇವ ದಾನವರಿಂದ ಪೂಜ್ಯಳಾದ ಅರುಂಧತಿಯಾದಳು.

೩೬. ಹೆಂಗಸು ಶಾಸ್ತ್ರರೀತಿಯಿಂದ ಎಂತಹ ಪುರುಷನನ್ನು ಸೇರುವಳೊ; ಅವಳು ಸಮುದ್ರದೊಡನೆ ಸೇರಿದ ನದಿಯಂತೆ ಪತಿಯಂತೆಯೇ ಆಗುವಳು.

ಅಕ್ಷಮಾಲಾ ವಸಿಷ್ಠೇನ ಸಂಯುಕ್ತಾಽಧಮಯೋನಿಜಾ ।
ಶಾರ್ಙ್ಗೀವ ಮಂದಪಾಲೇನ ಜಗಾಮ ಹ್ಯರ್ಹಣೀಯತಾಂ || ೩೭ ||
ಏವಂ ಕಾಲಕ್ರಮೇಣೈವ ಪ್ರಭಾಸಂ ಕ್ಷೇತ್ರಮಾಗತಾಃ ।
ಸಪ್ತರ್ಷಯೋ ಮಹಾತ್ಮಾನೋ ಹ್ಯರುಂಧತ್ಯಾ ಸಮನ್ವಿತಾಃ || ೩೮ ||
ತೀರ್ಥಾನಿ ಪ್ರೇಷಯಾಮಾಸುಃ ಸರ್ವಸಿದ್ಧಿಪ್ರದಾನಿ ತಾಂ || ೩೯ ||
ಏಷಾಮನ್ವೇಷಮಾಣಾನಾಂ ತತ್ರ ದೇವೀ ಹ್ಯರುಂಧತೀ ।
ಅಪಶ್ಯಲ್ಲಿಂಗಮೇಕಂ ತು ವೃಕ್ಷಜಾಲಾಂತರೇ ಸ್ಥಿತಂ || ೪೦ ||
ತಂ ದೃಷ್ಟ್ವಾ ದೇವದೇವೇಶಮೇವಂ ಜಾತಿಸ್ಮರಾಽಭವತ್ ।
ಪೂರ್ವಸ್ಮಿನ್ ಜನ್ಮನಿ ಮಯಾ ರಜೋಭಾವಾಂತರಸ್ಥಯಾ || ೪೧ ||
ಅಜ್ಞಾನಭಾವಾದ್ದೇವೇಶೋ ನೂನಂ ಚಾತ್ರಾರ್ಚಿತಃ ಶಿವಃ ।
ತಸ್ಮಾತ್ಕರ್ಮಫಲಂ ಪ್ರಾಪ್ತಮಂತ್ಯಜತ್ವಂ ದ್ವಿಜನ್ಮನಾ || ೪೨ ||
ಕಸ್ತೇನ ಸದೃಶೋ ದೇವಃ ಶಂಭುನಾ ಭುವನತ್ರಯೇ ।
ರಾಜ್ಯಂ ನಿಯಮಿನಾಮೇವಂ ಯೋ ರುಷ್ಟೋಽಪಿ ಪ್ರಯಚ್ಛತಿ || ೪೩ ||

---

೩೭. ನೀಚ ಜಾತಿಯಲ್ಲಿ ಜನಿಸಿದ ಅಕ್ಷಮಾಲೆಯು ವಸಿಷ್ಠನೊಡನೆ ಸೇರಿ ಮಂದಪಾಲನೊಡನೆ ಕೂಡಿದ ಶಾರ್ಙ್ಗಿಯಂತೆ ಪೂಜ್ಯಳಾದಳು.

೩೮. ಹೀಗೆ ಕಾಲಕ್ರಮದಿಂದ ಮಹಾತ್ಮರಾದ ಸಪ್ತರ್ಷಿಗಳು ಅರುಧಂತಿಯೊಡನೆ ಪ್ರಭಾಸಕ್ಷೇತ್ರಕ್ಕೆ ಬಂದರು.

೩೯. ಅವರು ಆ ಅರುಂಧತಿಯನ್ನು ಅಲ್ಲಿರುವ ಸಕಲ ಸಿದ್ಧಿಯನ್ನೀಯುವ ತೀರ್ಥಗಳಿಗೆ ಕಳುಹಿಸಿದರು.

೪೦. ಆ ಮುನಿಗಳು ಹೀಗೆ ತೀರ್ಥಗಳನ್ನು ಹುಡುಕುತ್ತಿರಲು ಅರುಂಧತಿಯು ಮರಗಳ ಸಮೂಹದ ಮಧ್ಯದಲ್ಲಿರುವ ಒಂದು ಲಿಂಗವನ್ನು ಕಂಡಳು.

೪೧–೪೨. ಅವಳು ಆ ಲಿಂಗವನ್ನು ನೋಡಿದ ಕೂಡಲೆ ತನ್ನ ಹಿಂದಿನ ಜಾತಿಯನ್ನು ಸ್ಮರಿಸಿ "ನಾನು ಹಿಂದಿನ ಜನ್ಮದಲ್ಲಿ ರಜೋಗುಣದಿಂದ ಮೂಢಳಾಗಿ ಶಿವನನ್ನಾರಾಧಿಸಿರುವೆನು. ಅದರಿಂದ ಬ್ರಾಹ್ಮಣಳಾದ ನಾನು ಕರ್ಮಾನುಸಾರವಾಗಿ ಚಂಡಾಲ ಜಾತಿಯಲ್ಲಿ ಜನಿಸಿದೆನು.

೪೩. ಮೂರು ಲೋಕಗಳಲ್ಲಿ ಶಿವನಿಗೆ ಸಮಾನವಾದ ದೇವತೆಯಿಲ್ಲ. ಈ ಶಿವನು ಕುಪಿತನಾದರೂ ತಪಸ್ವಿಗಳಿಗೆ ರಾಜ್ಯವನ್ನೀಯವನು.

ಇತಿ ಸಂಚಿಂತ್ಯ ಮನಸಾ ತತ್ರೈವ ನಿರತಾಽಭವತ್ ।
ಪೂಜಯಾಮಾಸ ತಲ್ಲಿಂಗಂ ದಿವ್ಯಾಬ್ದಾನಾಂ ಶತಂ ಪ್ರಿಯೇ ॥ ೪೪ ॥
ಏವಂ ತಸ್ಯ ಪ್ರಭಾವೇನ ದೃಶ್ಯತೇ ಗಗನಾಂತರೇ ।
ಅರುಂಧತೀ ಸತೀ ಹ್ಯೇಷಾ ದೃಷ್ಟ್ವಾ ದುಷ್ಕೃತನಾಶಿನೀ ॥ ೪೫ ॥
ಅಕ್ಷಮಾಲೇಶ್ವರಸ್ತ್ವೇವಂ ಯಥಾವತ್ಕಥಿತಸ್ತವ ।
ತತಸ್ತು ದ್ವಾಪರಸ್ಯಾಂತೇ ಕಲೌ ಸಂಧ್ಯಾಂಶಕೇ ಗತೇ ॥ ೪೬ ॥
ಅಂಧಾಸುರಸುತಶ್ಚಾಸೀದುಗ್ರಸೇನ ಇತಿ ಶ್ರುತಃ ।
ಸ ಪ್ರಭಾಸಂ ಸಮಾಸಾದ್ಯ ಪುತ್ರಾರ್ಥಂ ಲಿಂಗಮೇಯಿವಾನ್ ॥ ೪೭ ॥
ಅಕ್ಷಮಾಲೇಶ್ವರಂ ನಾಮ ಜ್ಞಾತ್ವಾ ಮಾಹಾತ್ಮ್ಯಮದ್ಭುತಂ ।
ಸಮಾರಾಧ್ಯ ಮಹಾದೇವಂ ನವ ವರ್ಷಾಣಿ ಪಂಚ ಚ ।
ಸಂಪ್ರಾಪ್ತವಾಂಸ್ತದಾ ಪುತ್ರಂ ಕಂಸಾಸುರಮಿತಿ ಶ್ರುತಂ ॥ ೪೮ ॥
ತತ್ಕಾಲಾಂತರಮಾರಭ್ಯ ಉಗ್ರಸೇನೇಶ್ವರೋಽಭವತ್ ।
ಪಾಪಘ್ನಂ ಸರ್ವಜಂತೂನಾಂ ದರ್ಶನಾತ್ಸ್ಪರ್ಶನಾದಪಿ ॥ ೪೯ ॥
ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।
ಮಹಾಂತಿ ಪಾತಕಾನ್ಯಾಹುರ್ನಶ್ಯಂತಿ ತಸ್ಯ ದರ್ಶನಾತ್ ॥ ೫೦ ॥

---

೪೪. ಅವಳು ಹೀಗೆ ಆಲೋಚಿಸಿ ಆ ಲಿಂಗದಲ್ಲಿಯೇ ಆಸಕ್ತಳಾಗಿ ಭಕ್ತಿಯಿಂದ ಅದನ್ನು ನೂರು ದಿವ್ಯ ವರ್ಷಗಳಕಾಲ ಪೂಜಿಸಿದಳು.

೪೫. ಪತಿವ್ರತೆಯಾದ ಆ ಅರುಂಧತಿಯು ಹೀಗೆ ತಪಸ್ಸಿನ ಪ್ರಭಾವದಿಂದ ಆಕಾಶದಲ್ಲಿ ನೆಲಸಿ ದರ್ಶನಗೈದ ಮಾನವರ ಪಾಪವನ್ನು ಪರಿಹರಿಸುತ್ತಿರುವಳು.

೪೬-೪೮. ಪ್ರಿಯಳೆ! ಹೀಗೆ ನಿನಗೆ ಅಕ್ಷಮಾಲೇಶ್ವರನ ವಿಷಯವನ್ನು ಹೇಳಿರುವೆನು. ತರುವಾಯ ದ್ವಾಪರಯುಗದ ಕೊನೆಯಲ್ಲಿ ಕಲಿಯುಗದ ಸಂಧ್ಯಾಂಶವು ಕಳೆಯಲು ಅಂಧಾಸುರನ ಮಗನಾದ ಉಗ್ರಸೇನನು ಪ್ರಭಾಸಕ್ಷೇತ್ರಕ್ಕೆ ಬಂದು ಮಗನನ್ನು ಪಡೆಯಲು ಆ ಅಕ್ಷಮಾಲೇಶ್ವರನ ಅದ್ಭುತ ಮಾಹಾತ್ಮ್ಯವನ್ನರಿತು ಅವನನ್ನು ಹದಿನಾಲ್ಕು ವರ್ಷಗಳ ಕಾಲ ಪೂಜಿಸಿ ಕಂಸಾಸುರನೆಂದು ಪ್ರಸಿದ್ಧನಾದ ತನಯನನ್ನು ಪಡೆದನು.

೪೯. ಅದು ಮೊದಲ್ಗೊಂಡು ದರ್ಶನ ಸ್ಪರ್ಶನಗಳಿಂದ ಸಕಲ ಪ್ರಾಣಿಗಳ ಪಾಪವನ್ನು ನಿವಾರಿಸುವ ಆ ಲಿಂಗವು ಉಗ್ರಸೇನೇಶ್ವರನೆಂದು ವಿಖ್ಯಾತವಾಯಿತು.

೫೦. ಆ ಲಿಂಗದ ದರ್ಶನದಿಂದ ಬ್ರಹ್ಮಹತ್ಯೆ, ಮದ್ಯಪಾನ, ಸ್ವರ್ಣಸ್ತೇಯ, ಗುರುಭಾರ್ಯಾಗಮನ ಎಂಬ ಮಹಾಪಾತಕಗಳು ನಾಶವಾಗುವುವು.

ತತ್ರೈವ ಋಷಿಪಂಚಮ್ಯಾಂ ಪ್ರಾಪ್ತೇ ಭಾದ್ರಪದೇ ಶುಭೇ ।
ಅಕ್ಷಮಾಲೇಶ್ವರಂ ಪೂಜ್ಯ ಮುಚ್ಯತೇ ನರಕಾದ್ಭಯಾತ್ ॥ ೫೧ ॥
ಗೋಪ್ರದಾನಂ ಪ್ರಶಂಸಂತಿ ತತ್ರಾನ್ನಮುದಕಂ ತಥಾ ।
ಸರ್ವಪಾಪವಿನಾಶಾಯ ಪ್ರೇತ್ಯಾನಂತಸುಖಾಯ ಚ ॥ ೫೨ ॥
ಇತಿ ತೇ ಕಥಿತಂ ದೇವಿ ಹ್ಯಕ್ಷಮಾಲೇಶ್ವರೋದ್ಭವಂ ।
ಮಾಹಾತ್ಮ್ಯಂ ಪಾಪಶಮನಂ ಶ್ರುತಂ ದುಃಖನಿಬರ್ಹಣಂ ॥ ೫೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉಗ್ರಸೇನೇಶ್ವರವರ್ಣನಂ ನಾಮ
॥ ಏಕೋನತ್ರಿಂಶದುತ್ತರಶತತಮೋಽಧ್ಯಾಯಃ ॥

---

೫೧. ಅಲ್ಲಿಯೇ ಭಾದ್ರಪದ ಶುದ್ಧ ಋಷಿಪಂಚಮಿ ದಿನ ಅಕ್ಷಮಾಲೇಶ್ವರನನ್ನು ಪೂಜಿಸಿದ ಮಾನವನು ಭಯಂಕರ ನರಕದಿಂದ ಮುಕ್ತನಾಗುವನು.

೫೨. ಸಕಲ ಪಾಪ ವಿನಾಶಕ್ಕಾಗಿಯೂ, ಮರಣಾನಂತರ ಮೋಕ್ಷಸುಖವನ್ನು ಪಡೆಯುವುದಕ್ಕಾಗಿಯೂ ಅಲ್ಲಿ ಗೋವು, ಅನ್ನ, ನೀರು, ಇವುಗಳ ದಾನ ಮಾಡುವುದು ಶ್ಲಾಘ್ಯವಾದುದು.

೫೩. ದೇವಿ! ಹೀಗೆ ನಿನಗೆ ಶ್ರವಣಮಾತ್ರದಿಂದ ಪಾಪವನ್ನೂ ದುಃಖವನ್ನೂ ನಿವಾರಿಸುವ ಅಕ್ಷಮಾಲೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉಗ್ರಸೇನೇಶ್ವರವರ್ಣನವೆಂಬ
ನೂರಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಂಶದುತ್ತರಶತತಮೋಽಧ್ಯಾಯಃ

ಪಾಶುಪತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಪಾಶುಪತೇಶ್ವರಂ ।
ಉಗ್ರಸೇನೇಶ್ವರಾದ್ದೇವಿ ಪೂರ್ವಭಾಗೇ ವ್ಯವಸ್ಥಿತಂ ॥ ೧ ॥
ಗೋಪಾದಿತ್ಯಾಥಾಗ್ನೇಯಾಂ ಧ್ರುವೇಶಾದ್ದಕ್ಷಿಣಾಂ ಶ್ರಿತಂ ।
ಸರ್ವಪಾಪಹರಂ ದೇವಿ ಪೂರ್ವಭಾಗೇ ವ್ಯವಸ್ಥಿತಂ ॥ ೨ ॥
ಗೋಪಾದಿತ್ಯಾತ್ತಥಾ ಲಿಂಗಂ ದರ್ಶನಾತ್ಸರ್ವಕಾಮದಂ ।
ಅಸ್ಮಿನ್ಯುಗೇ ಸಮಾಖ್ಯಾತಂ ಸಂತೋಷೇಶ್ವರಸಂಜ್ಞಿತಂ ॥ ೩ ॥
ಸಂತುಷ್ಟೋ ಭಗವಾನ್ಯಸ್ಮಾತ್ತೇಷಾಂ ತತ್ರ ತಪಸ್ವಿನಾಂ ।
ತೇನ ಸಂತೋಷನಾಮ್ನಾ ತು ಪ್ರಖ್ಯಾತಂ ಧರಣೀತಲೇ ॥ ೪ ॥
ಯುಗಲಿಂಗಂ ಮಹಾದೇವಿ ಸಿದ್ಧಿಸ್ಥಾನಂ ಮಹಾಪ್ರಭಂ ।
ಸ್ಥಾನಂ ಪಾಶುಪತಾನಾಂ ಚ ಭೇಷಜಂ ಪಾಪರೋಗಿಣಾಂ ॥ ೫ ॥

ಕನ್ನಡದ ಅನುವಾದ

ಪಾಶುಪತೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಉಗ್ರಸೇನೇಶ್ವರನ ಪೂರ್ವಭಾಗದಲ್ಲಿಯೂ, ಗೋಪಾದಿತ್ಯನ ಆಗ್ನೇಯದಲ್ಲಿಯೂ, ಧ್ರುವೇಶ್ವರನಿಗಿಂತ ದಕ್ಷಿಣದಲ್ಲಿಯೂ ಇರುವ ದರ್ಶನದಿಂದ ಸಕಲಪಾಪವನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ, ಈ ಯುಗದಲ್ಲಿ ಸಂತೋಷೇಶ್ವರನೆಂದು ಹೆಸರನ್ನು ಪಡೆದಿರುವುದೂ ಆದ ಲಿಂಗದ ಸಮೀಪಕ್ಕೆ ಹೋಗಬೇಕು.

೪. ಅಲ್ಲಿರುವ ತಪಸ್ವಿಗಳಿಗೆ ಆ ಮಹೇಶ್ವರನು ಸಂತುಷ್ಟನಾದುದರಿಂದ ಆ ಲಿಂಗವು ಭೂಮಿಯಲ್ಲಿ ಸಂತೋಷೇಶ್ವರನೆಂಬ ಹೆಸರನ್ನು ಪಡೆದಿರುವುದು.

೫. ಮಹಾದೇವಿ! ಆ ಲಿಂಗವು ಸಿದ್ಧಿಸ್ಥಾನವೂ, ಅತಿಶಯಕಾಂತಿಯುಳ್ಳದ್ದೂ, ಪಾಶುಪತರಿಗೆ ಆಶ್ರಯಸ್ಥಾನವೂ, ಪಾಪವೆಂಬ ರೋಗವುಳ್ಳವರಿಗೆ ಔಷಧವೂ ಆಗಿರುವುದು.

ಚತ್ವಾರೋ ಮುನಯಃ ಸಿದ್ಧಾಸ್ತಸ್ಮಿನ್ ಲಿಂಗೇ ಯಶಸ್ವಿನಿ ।
ವಾಮದೇವಸ್ತು ಸಾವರ್ಣಿರಘೋರಃ ಕಪಿಲಸ್ತಥಾ ।
ತಸ್ಮಿಂಲ್ಲಿಂಗೇ ತು ಸಂಸಿದ್ಧಾ ಅನಾದೀಶೇ ನಿರಂಜನೇ ॥ ೬ ॥
ತಸ್ಯ ದೇವಸ್ಯ ಸಮೀಪಸ್ಥೇ ವನೇ ಶ್ರೀಮುಖಸಂಜ್ಞಿತಂ ।
ಲಕ್ಷ್ಮೀಸ್ಥಾನಂ ಮಹಾದೇವಿ ಸಿದ್ಧಯೋಗೈಸ್ತು ಸೇವಿತಂ ॥ ೭ ॥
ತತ್ರ ಪಾಶುಪತಾಃ ಶ್ರೇಷ್ಠಾ ಮಮ ಲಿಂಗಾರ್ಚನೇ ರತಾಃ ।
ತೇಷಾಂ ಚೈವ ನಿವಾಸಾರ್ಥಂ ತದ್ದೇವ್ಯಾ ನಿರ್ಮಿತಂ ವನಂ ॥ ೮ ॥
ತಸ್ಯ ಮಧ್ಯೇ ತು ಸುಶ್ರೋಣಿ ಲಿಂಗಂ ಪೂರ್ವಮುಖಂ ಸ್ಥಿತಂ ।
ತಸ್ಮಿನ್ಪಾಶುಪತಾಃ ಸಿದ್ಧಾ ಅಘೋರಾದ್ಯಾ ಮಹರ್ಷಯಃ ।
ಅನೇನೈವ ಶರೀರೇಣ ಗತಾಸ್ತೇ ಶಿವಮಂದಿರಂ ॥ ೯ ॥
ತತ್ರ ಪ್ರಾಭಾಸಿಕೇ ಕ್ಷೇತ್ರೇ ಸುರಸಿದ್ಧನಿಷೇವಿತೇ ।
ರೋಚತೇ ಮೇ ಸದಾ ವಾಸಸ್ತಸ್ಮಿನ್ನಾಯತನೇ ಶುಭೇ ।
ಸರ್ವೇಷಾಮೇವ ಸ್ಥಾನಾನಾಮತಿರಮ್ಯಮತಿಪ್ರಿಯಂ ॥ ೧೦ ॥
ತತ್ರ ಪಾಶುಪತಾ ದೇವಿ ಮಮ ಧ್ಯಾನಪರಾಯಣಾಃ ।
ಮಮ ಪುತ್ರಾಸ್ತು ತೇ ಸರ್ವೇ ಬ್ರಹ್ಮಚರ್ಯೇಣ ಸಂಯುತಾಃ ॥ ೧೧ ॥

---

೬. ಕೀರ್ತಿವತಿಯೆ! ನಿರ್ದುಷ್ಟವಾದ ಆ ಅನಾದಿ ಲಿಂಗದಲ್ಲಿ ವಾಮದೇವ, ಸಾವರ್ಣಿ, ಅಘೋರ, ಕಪಿಲ ಎಂಬ ನಾಲ್ಕುಮಂದಿ ಮುನಿಗಳು ಸಿದ್ಧಿಯನ್ನು ಪಡೆದಿರುವರು.

೭. ಮಹಾದೇವಿ! ಆ ಮಹೇಶ್ವರನ ಸಮೀಪದಲ್ಲಿರುವ ವನದಲ್ಲಿ ಸಿದ್ಧಯೋಗಿಗಳು ಸೇವಿಸಿರುವ ಶ್ರೀಮುಖವೆಂಬ ಲಕ್ಷ್ಮೀಸ್ಥಾನವಿರುವುದು.

೮. ಅಲ್ಲಿ ನನ್ನ ಲಿಂಗಾರ್ಚನೆಯಲ್ಲಿ ನಿರತರಾದ ಉತ್ತಮ ಪಾಶುಪತರಿರುವರು. ಅವರ ನಿವಾಸಕ್ಕಾಗಿ ದೇವಿಯು ಆ ವನವನ್ನು ನಿರ್ಮಿಸಿರುವಳು.

೯. ಸುಂದರಿ! ಆ ವನದ ನಡುವೆ ಶಿವಲಿಂಗವು ಪೂರ್ವಾಭಿಮುಖವಾಗಿ ನೆಲಸಿರುವುದು. ಅಲ್ಲಿ ಪಾಶುಪತರೂ, ಸಿದ್ಧರೂ ಆದ ಅಘೋರಾದಿ ಮಹರ್ಷಿಗಳು ಶರೀರದಿಂದಲೇ ಸ್ವಶಿವಮಂದಿರವನ್ನು ಸೇರಿರುವರು.

೧೦. ದೇವಿ! ಸುರರೂ, ಸಿದ್ಧರೂ ಸೇವಿಸಿದ ಆ ಪ್ರಾಭಾಸಿಕ ಕ್ಷೇತ್ರದಲ್ಲಿರುವ ಸಕಲಸ್ಥಾನಗಳಲ್ಲಿ ಅತಿಮನೋಹರವೂ, ಅತಿಪ್ರಿಯವೂ ಆದ ಆ ಶುಭಮಂದಿರದಲ್ಲಿ ಯಾವಾಗಲೂ ವಾಸಿಸಲು ನಾನು ಅಪೇಕ್ಷಿಸುತ್ತೇನೆ.

೧೧–೧೨. ಅಲ್ಲಿ ಪಾಶುಪತರೂ, ನನ್ನ ಧ್ಯಾನದಲ್ಲಿ ನಿರತರೂ, ಬ್ರಹ್ಮಚಾರಿಗಳೂ, ಇಂದ್ರಿಯ ನಿಗ್ರಹವುಳ್ಳವರೂ, ಶಾಂತರೂ, ಸಿಟ್ಟಿಲ್ಲದವರೂ, ತಪಸ್ವಿ

ದಾಂತಾಃ ಶಾಂತಾ ಜಿತಕ್ರೋಧಾ ಬ್ರಾಹ್ಮಣಾಸ್ತೇ ತಪಸ್ವಿನಃ ।
ತಲ್ಲಿಂಗಸ್ಯ ಪ್ರಭಾವೇನ ಸಿದ್ಧಿಂ ತೇ ಪರಮಾಂ ಗತಾಃ ॥ ೧೨ ॥
ತಸ್ಮಾತ್ತಂ ಪೂಜಯೇನ್ನಿತ್ಯಂ ಕ್ಷೇತ್ರವಾಸೀ ದ್ವಿಜೋತ್ತಮಃ ॥ ೧೩ ॥
ದೇವ್ಯುವಾಚ :—
ಭಗವನ್ದೇವದೇವೇಶ ಸಂಸಾರಾರ್ಣವತಾರಕ ।
ಪ್ರಭಾಸೇ ತು ಮಹಾಕ್ಷೇತ್ರೇ ತ್ವದೀಯವ್ರತಚಾರಿಣಾಂ ॥ ೧೪ ॥
ಸ್ಥಾನಂ ತೇಷಾಂ ಮಹತ್ಪುಣ್ಯಂ ಯೋಗಂ ಪಾಶುಪತಂ ತಥಾ ।
ಕಥಯಸ್ವ ಪ್ರಸಾದೇನ ಲಿಂಗಮಾಹಾತ್ಮ್ಯಮುತ್ತಮಂ ॥ ೧೫ ॥
ಕಿಮಾದಿನಾಮ ದೇವಸ್ಯ ಕಥಂ ಪೂಜ್ಯೋ ನರೋತ್ತಮೈಃ ।
ಕಥಂ ಪಾಶುಪತಾಸ್ತತ್ರ ಸದೇಹಾಃ ಸ್ವರ್ಗಮಾಗತಾಃ ॥ ೧೬ ॥
ಏತತ್ಕಥಯ ದೇವೇಶ ದಯಾಂ ಕೃತ್ವಾ ಮಮ ಪ್ರಭೋ ॥ ೧೭ ॥
ಈಶ್ವರ ಉವಾಚ :—
ಯಸ್ತ್ವಯಾ ಪೃಚ್ಛ್ಯತೇ ಭದ್ರೇ ಯೋಗಃ ಪಾಶುಪತೋ ಮಹಾನ್ ।
ತೇಷಾಂ ಚೈವ ಪ್ರಭಾವೋ ಯಸ್ತಥಾ ಲಿಂಗಸ್ಯ ಸುವ್ರತೇ ॥ ೧೮ ॥

ಗಳೂ ನನ್ನ ಪುತ್ರರೂ ಆದ ಬ್ರಾಹ್ಮಣರು ಆ ಲಿಂಗದ ಪ್ರಭಾವದಿಂದ ಉತ್ತಮ ಸಿದ್ಧಿಯನ್ನು ಪಡೆದಿರುವರು.

೧೩. ಆದುದರಿಂದ ಆ ಕ್ಷೇತ್ರದಲ್ಲಿ ವಾಸಿಸುವ ಬ್ರಾಹ್ಮಣೋತ್ತಮನು ಯಾವಾಗಲೂ ಆ ಲಿಂಗವನ್ನು ಪೂಜಿಸಬೇಕು.

೧೪–೧೫. ದೇವಿಯು ಹೇಳುತ್ತಾಳೆ :—ದೇವತೆಗಳಿಗೆ ಒಡೆಯನೂ, ಸಂಸಾರ ಸಾಗರವನ್ನು ದಾಟಿಸುವವನೂ ಆದ ಸ್ವಾಮಿಯೇ! ಪ್ರಭಾಸಕ್ಷೇತ್ರದಲ್ಲಿರುವ ನಿನ್ನ ವ್ರತಾನುಷ್ಠಾನಮಾಡುವ ಆ ಬ್ರಾಹ್ಮಣರ ಪವಿತ್ರವಾದ ಸ್ಥಾನವನ್ನೂ ಪಾಶುಪತ ಯೋಗವನ್ನೂ, ಉತ್ತಮವಾದ ಆ ಶಿವಲಿಂಗಮಾಹಾತ್ಮ್ಯವನ್ನೂ ಹೇಳು.

೧೬. ಪಾಶುಪತೇಶ್ವರನ ಪ್ರಥಮನಾಮವಾವುದು? ಮಾನವೋತ್ತಮರು ಅವನನ್ನು ಹೇಗೆ ಪೂಜಿಸಬೇಕು? ಅಲ್ಲಿ ಪಾಶುಪತರು ದೇಹ ಸಹಿತರಾಗಿ ಹೇಗೆ ಸ್ವರ್ಗಕ್ಕೆ ಹೋದರು?

೧೭. ನಾಥ! ದಯೆಯಿಟ್ಟು ಇದನ್ನು ನನಗೆ ಹೇಳು.

೧೮–೨೦. ಈಶ್ವರನು ಹೇಳುತ್ತಾನೆ :—ಮಂಗಳಕರಳೆ! ನೀನು ಮಹಾ ಪಾಶುಪತರ ಮತ್ತು ಆ ಶಿವಲಿಂಗದ ಪ್ರಭಾವವನ್ನೂ, ಅನಾದಿಯಾದ ಆ ಪಾಶುಪತೇಶ್ವರನ

ಅನಾದೀಶಸ್ಯ ದೇವಸ್ಯ ಆದಿನಾಮ ಮಹಾಪ್ರಭೇ ।
ತಸ್ಮಿಂಲ್ಲಿಂಗೇ ತು ಯೇ ದೇವಿ ಮದೀಯವ್ರತಮಾಶ್ರಿತಾಃ ॥ ೧೯ ॥
ಚಿರಂ ನಿಯೋಗಂ ಸುಶ್ರೋಣಿ ವ್ರತಂ ಪಾಶುಪತಂ ಮಹತ್ ।
ಧಾರಯಂತಿ ಯಥೋಕ್ತಂ ತು ಮಮ ವಿಸ್ಮಯಕಾರಕಂ ।
ತೇಷಾಮನುಗ್ರಹಾರ್ಥಾಯ ಮಮ ಚಿತ್ತಂ ಪ್ರಧಾವತಿ ॥ ೨೦ ॥

ಸೂತ ಉವಾಚ :—

ಹರಸ್ಯ ವಚನಂ ಶ್ರುತ್ವಾ ದೇವೀ ವಿಸ್ಮಯಮಾಗತಾ ।
ಉವಾಚ ವಚನಂ ವಿಪ್ರಾಃ ಸರ್ವಲೋಕಪತಿಂ ಪತಿಂ ॥ ೨೧ ॥
ಮಮಾಪಿ ಕೌತುಕಂ ದೇವ ಕಿಮಕಾರ್ಷೀಸ್ತತೋ ಭವಾನ್ ।
ತದ್ಬ್ರೂಹಿ ಮೇ ಮಹಾದೇವ ಯದ್ಯಹಂ ತವ ವಲ್ಲಭಾ ॥ ೨೨ ॥
ತಸ್ಯಾಸ್ತದ್ವಚನಂ ಶ್ರುತ್ವಾ ಮಹಾದೇವೋ ಜಗಾದ ತಾಂ ।
ಶೃಣು ದೇವಿ ಪ್ರವಕ್ಷ್ಯಾಮಿ ಮಮ ಭಕ್ತವಿಚೇಷ್ಟಿತಂ ॥ ೨೩ ॥
ದೃಷ್ಟ್ವಾ ಚೈವ ತಪೋನಿಷ್ಠಾಂ ಸ್ತೇಷಾಮಾದ್ಯಃ ಸುರೇಶ್ವರಃ ।
ಉವಾಚ ವಚನಂ ದೇವಃ ಪ್ರಣತಾನ್ಪಾರ್ಶ್ವತಃ ಸ್ಥಿತಾನ್ ॥ ೨೪ ॥

ಮೊದಲನೆಯ ನಾಮಗಳನ್ನೂ ಕೇಳುತ್ತಿದ್ದೀಯೆ. ದೇವಿ ! ಆ ಲಿಂಗದಲ್ಲಿ ಬಹುಕಾಲದಿಂದ ನನಗೆ ಆಶ್ಚರ್ಯವನ್ನುಂಟುಮಾಡುವ ಮಹಾಪಾಶುಪತ ಯೋಗವನ್ನು ಅನುಷ್ಠಾನ ಮಾಡುವ ಭಕ್ತರಿಗೆ ಅನುಗ್ರಹ ಮಾಡುವುದಕ್ಕಾಗಿ ನನ್ನ ಮನಸ್ಸು ತ್ವರೆಗೊಳ್ಳುತ್ತಿದೆ.

೨೧. ಸೂತನು ಹೇಳುತ್ತಾನೆ :—ಬ್ರಾಹ್ಮಣರೆ! ದೇವಿಯು ಶಿವನ ಮಾತನ್ನು ಕೇಳಿ ಸಕಲ ಲೋಕದೊಡೆಯನಾದ ಆತನ್ನನ್ನು ಕುರಿತು ಇಂತೆಂದಳು.

೨೨. ದೇವ! ನೀನು ಆಮೇಲೆ ಏನು ಮಾಡಿದೆ ಎಂಬುದನ್ನು ತಿಳಿಯಲು ನನಗೂ ಕುತೂಹಲವುಂಟಾಗಿದೆ. ನಾನು ನಿನಗೆ ಪ್ರಿಯಳಾಗಿದ್ದರೆ ಅದನ್ನು ನನಗೆ ಹೇಳು.

೨೩. ಮಹಾದೇವನು ಅವಳ ಆ ಮಾತನ್ನು ಕೇಳಿ ಅವಳನ್ನು ಕುರಿತು ಇಂತೆಂದನು. "ದೇವಿ ! ನನ್ನ ಭಕ್ತರ ಕಾರ್ಯವನ್ನು ಹೇಳುವೆನು ಕೇಳು."

೨೪. ಶಂಕರನು ಆ ಪಾಶುಪತರ ತಪೋನಿಷ್ಠೆಯನ್ನು ನೋಡಿ ನಮಸ್ಕಾರ ಮಾಡಿ ಪಾರ್ಶ್ವದಲ್ಲಿರುವವರನ್ನು ಕುರಿತು ಹೀಗೆಂದನು.

ಈಶ್ವರ ಉವಾಚ :—

ಗಚ್ಛ ಶೀಘ್ರಂ ನಂದಿಕೇಶ ಯತ್ರ ತೇ ಮಮ ಪುತ್ರಕಾಃ ।
ಚರಂತಿ ಚ ವ್ರತಂ ಘೋರಂ ಮದೀಯಂ ಚಾತಿದುಷ್ಕರಂ ॥ ೨೫ ॥
ತತ್ಕ್ಷೇತ್ರಸ್ಯ ಪ್ರಭಾವೇನ ಭಕ್ತ್ಯಾ ಚ ಮಮ ನಿತ್ಯಶಃ ।
ತೇನ ತೇ ಮುನಯಃ ಸಿದ್ಧಾಃ ಸ್ವಶರೀರೇಣ ಸುವ್ರತಾಃ ॥ ೨೬ ॥
ತಸ್ಮಾನ್ಮದ್ವಚನಾನ್ನಂದಿನ್ಗಚ್ಛ ಪ್ರಾಭಾಸಿಕಂ ಶುಭಂ ।
ಆಮಂತ್ರಯ ತ್ವಂ ತಾನ್ಸರ್ವಾನ್ಕೈಲಾಸಂ ಶೀಘ್ರಮಾನಯ ॥ ೨೭ ॥
ಇದಂ ಪದ್ಮಂ ಗೃಹಾಣ ತ್ವಂ ಸನಾಲಂ ಕಲಿಕೋಜ್ಜ್ವಲಂ ।
ಲಿಂಗಸ್ಯ ಮೂರ್ಧ್ನಿ ದತ್ವೇದಂ ಪದ್ಮನಾಲಮಿಹಾನಯ ॥ ೨೮ ॥
ಮುಕ್ತಸ್ತದಾ ಸ ವೈ ನಂದೀ ದೇವದೇವೇನ ಶಂಭುನಾ ।
ಕೈಲಾಸನಿಲಯಾತ್ತಸ್ಮಾತ್ಪ್ರಭಾಸಂ ಕ್ಷೇತ್ರಮಾಗತಃ ॥ ೨೯ ॥
ದೃಷ್ಟ್ವಾ ಚೈವ ಪುನರ್ಲಿಂಗಂ ದೇವದೇವಸ್ಯ ಶೂಲಿನಃ ।
ದೃಷ್ಟ್ವಾ ತಾಂಶ್ಚೈವ ಯೋಗೀಂದ್ರಾನ್ಪರಂ ವಿಸ್ಮಯಮಾಗತಃ ॥ ೩೦ ॥
ಕೇಚಿದ್ಧ್ಯಾನರತಾಸ್ತತ್ರ ಕೇಚಿದ್ಯೋಗಂ ಸಮಾಶ್ರಿತಾಃ ।
ಕೇಚಿದ್ವ್ಯಾಖ್ಯಾಂ ಪ್ರಕುರ್ವಂತಿ ವಿಚಾರಮಪಿ ಚಾಪರೇ ॥ ೩೧ ॥

---

೨೫. ಈಶ್ವರನು ಹೇಳುತ್ತಾನೆ:— ನಂದಿಕೇಶ ! ಪುತ್ರರು ಅತಿ ದುಷ್ಕರವಾದ ಪಾಶುಪತ ವ್ರತವನ್ನಾಚರಿಸುವ ಸ್ಥಳಕ್ಕೆ ಶೀಘ್ರವಾಗಿ ಹೋಗು.

೨೬-೨೭. ಆ ಪ್ರಭಾಸ ಕ್ಷೇತ್ರದ ಮಾಹಾತ್ಮ್ಯದಿಂದಲೂ, ನನ್ನ ಭಕ್ತಿಯಿಂದಲೂ ಸಿದ್ಧರಾಗಿರುವ ಆ ಮುನಿಗಳನ್ನೆಲ್ಲ ನನ್ನ ಅಪ್ಪಣೆಯಂತೆ ಶರೀರದೊಡನೆಯೆ ಕೈಲಾಸಕ್ಕೆ ಶೀಘ್ರವಾಗಿ ಕರೆದುಕೊಂಡು ಬಾ.

೨೮. ನಾಳ ಸಹಿತವಾದ ಈ ಕಮಲದ ಮೊಗ್ಗನ್ನು ತೆಗೆದುಕೊಂಡು ಹೋಗಿ ಆ ಲಿಂಗದ ತಲೆಯ ಮೇಲಿಟ್ಟು ನಾಳವನ್ನು ಮರಳಿ ತೆಗೆದುಕೊಂಡು ಬಾ.

೨೯. ಮಹೇಶ್ವರನು ಆ ನಂದಿಯನ್ನು ಕಳುಹಿಸಲು ಅವನು ಆ ಕೈಲಾಸದಿಂದ ಪ್ರಭಾಸಕ್ಷೇತ್ರಕ್ಕೆ ಬಂದನು.

೩೦. ಅಲ್ಲಿ ಶಂಕರನ ಲಿಂಗವನ್ನೂ, ಆ ಯೋಗಿವರ್ಯರನ್ನೂ ನೋಡಿ ಅವನು ಅತ್ಯಾಶ್ಚರ್ಯಗೊಂಡನು.

೩೧-೩೫. ಆ ಯೋಗಿಗಳಲ್ಲಿ ಕೆಲವರು ಧ್ಯಾನಾಸಕ್ತರೂ, ಕೆಲವರು ಯೋಗವನ್ನಾಶ್ರಯಿಸಿದವರೂ, ಕೆಲವರು ವ್ಯಾಖ್ಯಾನ ಮಾಡುವವರೂ, ಇನ್ನು ಕೆಲವರು ವಿಚಾರ ಮಾಡುವವರೂ, ಇತರರು ಲಿಂಗವನ್ನು ಪೂಜಿಸುವವರೂ, ಮತ್ತೆ ಕೆಲವರು

ಕುರ್ವಂತ್ಯನ್ಯೇ ಲಿಂಗಪೂಜಾಂ ಪ್ರಣಾಮಂ ಚ ತಥಾಽಪರೇ ।
ಪ್ರದಕ್ಷಿಣಂ ಪ್ರಕುರ್ವಂತಿ ಸಾಷ್ಟಾಂಗಂ ಪ್ರಣಮಂತಿ ಚ ॥ ೩೨ ॥
ಕೇಚಿತ್ಸ್ತುತಿಂ ಪ್ರಕುರ್ವಂತಿ ಭಾವಯಜ್ಞೈಸ್ತಥಾ ಪರೇ ।
ಕೇಚಿತ್ಪೂಜಾಂ ಚ ಕುರ್ವಂತಿ ಅಹಿಂಸಾಕುಸುಮೈಃ ಶುಭೈಃ ॥ ೩೩ ॥
ಭಸ್ಮಸ್ನಾನಂ ಪ್ರಕುರ್ವಂತಿ ಗಂಡುಕೈಃ ಸ್ನಾಪಯಂತಿ ಚ ।
ಏವಂ ವ್ಯಾಕುಲತಾಂ ಯಾತಂ ತಪಸ್ವಿಗಣಮಂಡಲಂ ॥ ೩೪ ॥
ತತ್ತಾದೃಶಮಥಾಲೋಕ್ಯ ನಂದೀ ವಿಸ್ಮಯಮಾಗತಃ ।
ಚಿಂತಯಾಮಾಸ ಮನಸಾ ಸರ್ವಂ ತೇಷಾಂ ನಿರೀಕ್ಷ್ಯ ಚ ॥ ೩೫ ॥
ಆಗತೋಽಹಮಿಮಂ ದೇಶಂ ನ ಕಶ್ಚಿನ್ಮಾಂ ನಿರೀಕ್ಷತೇ ।
ನ ಕೇನಚಿದಹಂ ಪೃಷ್ಟೋಽಭ್ಯಾಗತಃ ಕುತ್ರ ಕಸ್ಯ ಚ ॥ ೩೬ ॥
ಅಹಂಕಾರಾವೃತಾಃ ಸರ್ವೇ ನ ವದಂತಿ ಚ ಮಾಂ ಕ್ವಚಿತ್ ।
ಏವಂ ಮನಸಿ ಸಂಧಾಯ ಲಿಂಗಪಾರ್ಶ್ವಮುಪಾಗತಃ ॥ ೩೭ ॥
ವೃತ್ತಂ ಲಿಂಗಸ್ಯ ತತ್ಪದ್ಮನಾಲಂ ಛಿತ್ವಾ ತು ನಂದಿನಾ ।
ಅರ್ಚಯಿತ್ವಾ ತು ತನ್ನಂದೀ ಲಿಂಗಂ ಪಾಶುಪತೇಶ್ವರಂ ॥
ನಾಲಂ ಗೃಹೀತ್ವಾ ಯತ್ನೇನ ಋಷೀನ್ವಚನಮಬ್ರವೀತ್ ॥ ೩೮ ॥

ಪ್ರದಕ್ಷಿಣ ನಮಸ್ಕಾರ ಮಾಡುವವರೂ, ಕೆಲವರು ಸ್ತುತಿಸುವವರೂ, ಇನ್ನು ಕೆಲವರು ಭಕ್ತಿಯಿಂದ ಪೂಜಿಸುವವರೂ, ಕೆಲವರು ಮಂಗಳಕರವಾದ ಅಹಿಂಸಾ ಪುಷ್ಪಗಳಿಂದ ಪೂಜಿಸುವವರೂ, ಕೆಲವರು ಭಸ್ಮಸ್ನಾನವನ್ನು ಮಾಡುವವರೂ, ಕೆಲವರು ಕಲಶಗಳಿಂದ ಅಭಿಷೇಕಮಾಡುವವರೂ ಆಗಿದ್ದರು. ನಂದಿಯು ಹಾಗೆ ಪವಿತ್ರ ಕಾರ್ಯಗಳಲ್ಲಿ ಆಸಕ್ತರಾದ ಅಂತಹ ಮುನಿಗಳ ವೃಂದವನ್ನು ಕಂಡು ಆಶ್ಚರ್ಯಗೊಂಡು ಅವರ ಕೃತಿಗಳನ್ನೆಲ್ಲ ಈಕ್ಷಿಸಿಮನಸ್ಸಿನಲ್ಲಿ ಆಲೋಚಿಸಿದನು.

೩೬. ಈ ಸ್ಥಳಕ್ಕೆ ಬಂದಿರುವ ನನ್ನನ್ನು ಯಾರೂ ನೋಡಲಿಲ್ಲ. ಯಾರು ಎಲ್ಲಿಯವನೆಂದು ಯಾರೂ ಪ್ರಶ್ನಿಸಲಿಲ್ಲ.

೩೭. ಅಹಂಕಾರಗೊಂಡ ಈ ಮುನಿಗಳು ಒಂದೆಡೆಯಲ್ಲಿಯೂ ನನ್ನೊಡನೆ ಸಂಭಾಷಣೆಮಾಡುವುದಿಲ್ಲ, ಎಂದಾಲೋಚಿಸಿ ಲಿಂಗದ ಪಾರ್ಶ್ವವನ್ನು ಹೊಂದಿದನು.

೩೮. ಅವನು ತಾವರೆ ಹೂವಿನ ದಂಟನ್ನು ಮುರಿದು ಆ ಹೂವಿನಿಂದ ಪಾಶುಪತೇಶ್ವರನನ್ನರ್ಚಿಸಿ ದಂಟನ್ನು ತೆಗೆದುಕೊಂಡು ಮುನಿಗಳನ್ನು ಕುರಿತು ಇಂತೆಂದನು.

ನಂದಿಕೇಶ್ವರ ಉವಾಚ :—
ಶಾಸನಾದ್ದೇವದೇವಸ್ಯ ಭವತಾಂ ಪಾರ್ಶ್ವಮಾಗತಃ ।
ಆಜ್ಞಾಪಯತಿ ದೇವೇಶಸ್ತಪಸ್ವಿಗಣಮಂಡಲಂ ॥ ೩೯ ॥
ಯುಷ್ಮಾಭಿಸ್ತತ್ರ ಗಂತವ್ಯಂ ಯತ್ರ ದೇವಃ ಸನಾತನಃ ।
ಯುಷ್ಮಾನ್ಸರ್ವಾನ್ಸಮಾದಾಯ ಗಮಿಷ್ಯಾಮಿ ಭವಾಲಯಂ ॥ ೪೦ ॥
ಉತ್ತಿಷ್ಠತಾಶು ಗಚ್ಛಾಮಃ ಕೈಲಾಸಂ ಪರ್ವತೋತ್ತಮಂ ।
ತೂಷ್ಣೀಂಭೂತಾಸ್ತತಃ ಸರ್ವೇ ಪ್ರೋಚುಸ್ತೇ ಸಂಜ್ಞಯಾ ದ್ವಿಜಾಃ ।
ಗಮ್ಯತಾಮಗ್ರತೋ ನಂದಿನ್ಪಶ್ಚಾದೇಷ್ಯಾಮಹೇ ವಯಂ ॥ ೪೧ ॥
ಏವಮುಕ್ತಸ್ತು ಮುನಿಭಿರ್ನಂದೀ ಶೀಘ್ರತರಂ ಗತಃ ।
ಕಥಯಾಮಾಸ ತತ್ಸರ್ವಂ ಕುಪಿತೇನಾಂತರಾತ್ಮನಾ ॥ ೪೨ ॥
ನಂದಿಕೇಶ್ವರ ಉವಾಚ :—
ದೇವ ತತ್ರ ಗತೋಽಹಂ ವೈ ಯತ್ರ ತೇ ಯೋಗಿನಃ ಸ್ಥಿತಾಃ ।
ಸಂತೋಷತೋ ನ ಚೈವಾಹಂ ಕೇನಚಿತ್ತತ್ರ ಸಂಸ್ಥಿತಃ ॥ ೪೩ ॥
ನ ಮಾಂ ದೇವ ನಿರೀಕ್ಷಂತೇ ನಾಲಪಂತಿ ಕಥಂಚನ ।
ಪದ್ಮಂ ತತ್ರ ಮಯಾ ದೇವ ಸ್ಥಾಪಿತಂ ಲಿಂಗಮೂರ್ಧನಿ ॥ ೪೪ ॥

೩೯–೪೧. ನಂದಿಕೇಶ್ವರನು ಹೇಳುತ್ತಾನೆ :—ಮುನಿಗಳೆ ! ನಾನು ಮಹದೇವನ ಅಪ್ಪಣೆಯಿಂದ ನಿಮ್ಮೆಡೆಗೆ ಬಂದಿರುವೆನು. ನೀವೆಲ್ಲರೂ ಮಹೇಶ್ವರನ ಸಮೀಪಕ್ಕೆ ಬರಬೇಕೆಂದು ಶಂಕರನು ಅಪ್ಪಣೆಮಾಡಿರುತ್ತಾನೆ. ನಾನು ನಿಮ್ಮನ್ನೆಲ್ಲ ಕರೆದು ಕೊಂಡು ಕೈಲಾಸಕ್ಕೆ ತೆರಳುವೆನು. ಜಾಗ್ರತೆಯಾಗಿ ಏಳಿರಿ. ಕೈಲಾಸಕ್ಕೆ ಹೋಗೋಣ. “ ನಂದಿಯು ಹೀಗೆ ಹೇಳಲು ಆ ಬ್ರಾಹ್ಮಣರೆಲ್ಲರೂ ಮೌನವಾಗಿ ಸಂಜ್ಞೆಯಿಂದ ” “ ನಂದಿಯೆ ! ನೀನು ಮುಂದೆ ಹೋಗು. ನಾವು ಹಿಂದಿನಿಂದ ಬರುವೆವು” ಎಂದರು.

೪೨. ಮುನಿಗಳು ಹೀಗೆನ್ನಲು ನಂದಿಯು ತ್ವರೆಯಿಂದ ಹೊರಟು ಹೋಗಿ ಕುಪಿತವಾದ ಮನಸ್ಸಿನಿಂದ ಅದನ್ನೆಲ್ಲ ಶಂಕರನಿಗೆ ತಿಳಿಸಿದನು.

೪೩. ನಂದಿಕೇಶ್ವರನು ಹೇಳುತ್ತಾನೆ :—ಸ್ವಾಮಿ ! ನಾನು ಯೋಗಿಗಳಿರುವ ಸ್ಥಳಕ್ಕೆ ಹೋದೆನು. ಅಲ್ಲಿರುವ ನನ್ನನ್ನು ಯಾರೂ ಸಂತೋಷಗೊಳಿಸಲಿಲ್ಲ.

೪೪. ನನ್ನನ್ನು ಯಾರೂ ನೋಡಲಿಲ್ಲ. ನನ್ನೊಡನೆ ಮಾತನಾಡಲೂ ಇಲ್ಲ. ನಾನು ತಾವರೆ ಹೂವನ್ನು ಲಿಂಗದ ಮಸ್ತಕದಲ್ಲಿಟ್ಟೆನು.

ಉಕ್ತಂ ದೇವ ಮಯಾ ತೇಷಾಂ ಯೋಗೀಂದ್ರಾಣಾಂ ಮಹೇಶ್ವರ ।
ಆಜ್ಞಪ್ತಾ ದೇವದೇವೇನ ಇಹಾಗಚ್ಛತ ಮಾಂ ॥ ೪೫ ॥
ಏತಚ್ಛ್ರುತ್ವಾ ವಚಃ ಸ್ವಾಮಿನ್ಸರ್ವೇ ತತ್ರ ಮಹರ್ಷಯಃ ।
ಆಗಮಿಷ್ಯಾಮಿ ಇತಿ ವೈ ಪೃಷ್ಠತೋ ಗಚ್ಛ ಮಾ ಚಿರಂ ॥ ೪೬ ॥
ಇತ್ಯುಕ್ತೇ ತೈಸ್ತಥಾ ದೇವ ಅಹಂ ಶೀಘ್ರಮಿಹಾಗತಃ ।
ನಾಲಂ ಚೇಮಂ ಗೃಹಾಣ ತ್ವಂ ಯಥೇಷ್ಟಂ ಕುರು ಮೇ ಪ್ರಭೋ ॥ ೪೭ ॥
ಏಕಂ ಮೇ ಸಂಶಯಂ ದೇವ ಛೇತ್ತುಮರ್ಹಸಿ ಸಾಂಪ್ರತಂ ।
ಮಯಾ ವಿನಾ ಮಹಾದೇವ ಆಗಮಿಷ್ಯಂತಿ ತೇ ಕಥಂ ।
ಸಂಶಯೋ ಮೇ ಮಹಾದೇವ ಕಥಮುಸ್ವ ಮಹೇಶ್ವರ ॥ ೪೮ ॥

ಈಶ್ವರ ಉವಾಚ :—

ಶೃಣು ನಂದಿನ್ನಥಾಶ್ಚರ್ಯಂ ತೇಷಾಂ ವೈ ಭಾವಿತಾತ್ಮನಾಂ ।
ನ ದೃಶ್ಯಂತ ಇಮೇ ಸಿದ್ಧಾ ಮಾಂ ಮುಕ್ತ್ವಾನ್ಯೈಃ ಸುರೈರಪಿ ॥ ೪೯ ॥
ಮದ್ಭಾವಭಾವಿತಾಸ್ತೇ ವೈ ಯೋಗಂ ವಿಂದಂತಿ ಶಾಂಕರಂ ।
ಪಶ್ಯೈತತ್ಕೌತುಕಂ ನಂದಿನ್ದರ್ಶಯಾಮಿ ತವಾಧುನಾ ॥ ೫೦ ॥

---

೪೫. ಮಹೇಶ್ವರ! ಮುನಿಗಳನ್ನು ಕುರಿತು, "ನೀವೆಲ್ಲ ಶಂಕರನ ನಿವಾಸ ಸ್ಥಾನಕ್ಕೆ ಬೇಗನೆ ಬರಬೇಕೆಂದು ಶಿವನು ಆಜ್ಞಾಪಿಸಿರುತ್ತಾನೆ" ಎಂದೆನು.

೪೬. ಸ್ವಾಮಿ! ನನ್ನೀಮಾತನ್ನು ಕೇಳಿ ಎಲ್ಲ ಮಹರ್ಷಿಗಳೂ, "ನಾವು ಹಿಂದಿನಿಂದ ಬರುತ್ತೇವೆ. ನೀನು ಜಾಗ್ರತೆಯಾಗಿ ಹೋಗು" ಎಂದರು.

೪೭. ಅವರು ಹಾಗೆನ್ನಲು ನಾನು ಶೀಘ್ರವಾಗಿ ಬಂದೆನು. ಈ ತಾವರೆ ದಂಟನ್ನು ತೆಗೆದುಕೊ ಸ್ವಾಮಿ! ನಿನ್ನಿಷ್ಟದಂತೆ ಮಾಡು.

೪೮. ದೇವ! ನನಗೊಂದು ಸಂದೇಹವುಂಟಾಗಿದೆ. ಈಗ ಇದನ್ನು ನೀನು ಪರಿಹರಿಸಬೇಕು. ನನ್ನನ್ನು ಬಿಟ್ಟು ಆ ಮುನಿಗಳು ಇಲ್ಲಿಗೆ ಹೇಗೆ ಬರುವರು ?

೪೯. ಈಶ್ವರನು ಹೇಳುತ್ತಾನೆ:—ನಂದಿಕೇಶ್ವರ! ಜ್ಞಾನಿಗಳಾದ ಆ ಮುನಿಗಳ ಅದ್ಭುತಕಾರ್ಯವನ್ನು ಕೇಳು. ನನ್ನ ಹೊರತು ಬೇರೆ ದೇವತೆಗಳು ಈ ಸಿದ್ಧ ಮುನಿಗಳನ್ನು ನೋಡುವುದಿಲ್ಲ.

೫೦. ನನ್ನಲ್ಲಿ ಭಕ್ತಿಯುಳ್ಳ ಈ ಮುನಿಗಳು ಪಾಶುಪತಯೋಗವನ್ನರಿತಿರುವರು. ನಂದಿಕೇಶ್ವರ! ಈ ಆಶ್ಚರ್ಯವನ್ನು ನೋಡು ಈಗ ಅದನ್ನು ನಿನಗೆ ತೋರಿಸುವೆನು.

ಆನೀತಂ ಯತ್ತ್ವಯಾ ನಾಲಂ ತಸ್ಮಿನ್ನಾಲೇ ತು ಸೂಕ್ಷ್ಮವತ್ ।
ಪ್ರವಿಶ್ಯ ಚಾಗತಾಃ ಸರ್ವೇ ಯೋಗೈಶ್ವರ್ಯಬಲೇನ ಚ ॥ ೫೧ ॥
ಏವಮುಕ್ತಸ್ತದಾ ನಂದೀ ವಿಸ್ಮಯೋತ್ಫುಲ್ಲಲೋಚನಃ ।
ಅಪಶ್ಯನ್ನಾಲಮಧ್ಯಸ್ಥಾನ್ಮಹರ್ಷೀನ್ಪರಮಾಣುವತ್ ॥ ೫೨ ॥
ಯಥಾರ್ಕರಶ್ಮಿಮಧ್ಯಸ್ಥಾ ದೃಶ್ಯಂತೇ ಪರಮಾಣವಃ ।
ಏವಂ ತನ್ನಾಲಮಧ್ಯಸ್ಥಾ ದೃಶ್ಯಂತ ಋಷಯಃ ಪೃಥಕ್ ॥ ೫೩ ॥
ಏವಂ ದೃಷ್ಟ್ವಾ ತದಾ ನಂದೀ ವಿಸ್ಮಯೋತ್ಫುಲ್ಲಲೋಚನಃ ।
ಆಶ್ಚರ್ಯಂ ಪರಮಂ ಗತ್ವಾ ಕಿಂಚಿನ್ನೈವಾಬ್ರವೀತ್ಪುನಃ ॥ ೫೪ ॥
ಏವಂ ತತ್ಕೌತುಕಂ ದೃಷ್ಟ್ವಾ ದೇವೀ ವಚನಮಬ್ರವೀತ್ ।
ಕಿಂ ದೃಶ್ಯತೇ ಮಹಾದೇವ ಹೃಷ್ಟಃ ಕಸ್ಮಾನ್ಮಹೇಶ್ವರ ॥ ೫೫ ॥
ಇತ್ಯುಕ್ತೇ ವಚನೇ ದೇವ್ಯಾ ಪ್ರೋವಾಚೇದಂ ಮಹೇಶ್ವರಃ ॥ ೫೬ ॥

ಈಶ್ವರ ಉವಾಚ :—

ಯೋಗಯುಕ್ತಾ ಮಹಾತ್ಮಾನೋ ಯೋಗೇ ಪಾಶುಪತೇ ಸ್ಥಿತಾಃ ।
ಏತೇ ಮಾಂ ಚ ಸಮಾರಾಧ್ಯ ಪ್ರಭಾಸಕ್ಷೇತ್ರವಾಸಿನಂ ।
ಈದೃಶೀಂ ಸಿದ್ಧಿಮಾಪನ್ನಾಃ ಸ್ವಚ್ಛಂದಗತಿಚಾರಿಣಃ ॥ ೫೭ ॥

---

೫೧. ನೀನು ತಂದಿರುವ ಈ ನಾಳದಲ್ಲಿ ಆ ಮುನಿಗಳು ಯೋಗಬಲದಿಂದ ಸೂಕ್ಷ್ಮವಾಗಿ ಪ್ರವೇಶಿಸಿ ಇಲ್ಲಿಗೆ ಬಂದಿರುವರು.

೫೨. ಶಂಕರನು ಹೀಗೆನ್ನಲು ನಂದಿಯು ಆಶ್ಚರ್ಯದಿಂದರಳಿದ ಕಣ್ಣುಳ್ಳವನಾಗಿ ಪರಮಾಣುವಿನಂತೆ ನಾಳದ ಮಧ್ಯದಲ್ಲಿರುವ ಮಹರ್ಷಿಗಳನ್ನು ಕಂಡನು.

೫೩. ಸೂರ್ಯಕಿರಣಗಳ ನಡುವೆ ಪರಮಾಣುಗಳು ಕಾಣಿಸುವಂತೆ ಆ ನಾಳದ ಮಧ್ಯದಲ್ಲಿ ಮುನಿಗಳು ಬೇರೆ ಬೇರೆಯಾಗಿ ಕಾಣಿಸಿದರು.

೫೪. ನಂದಿಯು ಹೀಗಿರುವ ಮುನಿಗಳನ್ನು ಕಂಡು ಆಶ್ಚರ್ಯಗೊಂಡು ಮರಳಿ ಏನನ್ನೂ ಮಾತನಾಡಲಿಲ್ಲ.

೫೫. ದೇವಿಯು ಈ ರೀತಿ ಆಶ್ಚರ್ಯವನ್ನು ಕಂಡು, ಮಹೇಶ್ವರ! ಏನನ್ನು ನೋಡಿದೆ? ಏತಕ್ಕೆ ಆಶ್ಚರ್ಯಗೊಂಡಿರುವೆ" ಎಂದು ಕೇಳಿದಳು.

೫೬. ದೇವಿಯು ಹೀಗೆ ಕೇಳಲು ಮಹೇಶ್ವರನು ಇಂತೆಂದನು.

೫೭. ಈಶ್ವರನು ಹೇಳುತ್ತಾನೆ :—ಯೋಗಾಭ್ಯಾಸ ನಿರತರಾದ ಈ ಮಹಾತ್ಮರು ಪಾಶುಪತಯೋಗವನ್ನು ಅನುಷ್ಠಾನಮಾಡುತ್ತ ಪ್ರಭಾಸದಲ್ಲಿರುವ ನನ್ನನ್ನು ಆರಾಧಿಸಿ ಇಂತಹ ಸಿದ್ಧಿಯನ್ನು ಪಡೆದು ಸ್ವೇಚ್ಛಾಚಾರಿಗಳಾಗಿರುವರು. ಎಂದನು.

ಇತ್ಯುಕ್ತವತಿ ದೇವೇಶ ಋಷಯಸ್ತೇ ಮಹಾಪ್ರಭಾಃ ।
ಪದ್ಮನಾಲಾದ್ವಿನಿಃಸೃತ್ಯ ಸರ್ವೇ ವೈ ಯೋಗಮಾಯಯಾ ।
ಪ್ರದಕ್ಷಿಣಾಂ ಪ್ರಕುರ್ವಂತಿ ದೇವಂ ದೇವ್ಯಾ ಬಹಿಷ್ಕೃತಂ ॥ ೫೮ ॥

ದೇವ್ಯುವಾಚ :—

ಕಿಮರ್ಥಂ ಮಾಂ ನ ಪಶ್ಯಂತಿ ದುರಾಚಾರಾ ಇಮೇ ದ್ವಿಜಾಃ ।
ವಿಸ್ಮಯೋಽಯಂ ಮಹಾದೇವ ಕಥಯಸ್ವ ಪ್ರಸಾದತಃ ॥ ೫೯ ॥

ಈಶ್ವರ ಉವಾಚ :—

ಪ್ರಕೃತಿತ್ವಾನ್ನ ಪಶ್ಯಂತಿ ಸಿದ್ಧಾಹ್ಯೇತೇ ಮಹಾತಪಾಃ ।
ಏವಮುಕ್ತಾ ತು ಗಿರಿಜಾ ದೇವದೇವೇನ ಶೂಲಿನಾ ॥ ೬೦ ॥
ಚುಕೋಪ ತೇಷಾಂ ಸುಶ್ರೋಣೀ ಶಶಾಪ ಕ್ರೋಧಿತಾನನಾ ।
ಸ್ತ್ರೀಲೌಲ್ಯೇನ ದುರಾಚಾರಾ ನಾಶಮೇಷ್ಯಥ ಗರ್ವಿಣಃ ॥ ೬೧ ॥
ರಾಜಪ್ರತಿಗ್ರಹಾಸಕ್ತಾ ವೃತ್ತ್ಯಾ ದೇವಾರ್ಚನೇ ರತಾಃ ।
ಭವಿಷ್ಯಥ ಕಲೌ ಪ್ರಾಪ್ತೇ ಲಿಂಗದ್ರವ್ಯೋಪಜೀವಿನಃ ॥ ೬೨ ॥
ವೇಶ್ಯಾಸಕ್ತಾಶ್ಚ ಸಂಭ್ರಾಂತಾಃ ಸರ್ವಲೋಕಬಹಿಷ್ಕೃತಾಃ ।
ದೇವದ್ರವ್ಯವಿನಾಶಾಯ ಭವಿಷ್ಯಥ ಕಲೌ ಯುಗೇ ॥ ೬೩ ॥

---

೫೮. ಶಂಕರನು ಹೀಗೆನ್ನಲು ಅತಿಶಯಕಾಂತಿಯುಳ್ಳ ಆ ಋಷಿಗಳು ಯೋಗ ಶಕ್ತಿಯಿಂದ ಪದ್ಮನಾಳದಿಂದ ಹೊರಗೆ ಹೊರಟು ಪಾರ್ವತಿಯನ್ನು ಬಿಟ್ಟು ಮಹೇಶ್ವರ ನೊಬ್ಬನಿಗೆ ಪ್ರದಕ್ಷಿಣೆಮಾಡಿದರು.

೫೯. ದೇವಿಯು ಹೇಳುತ್ತಾಳೆ:—ಮಹಾದೇವ! ದುಷ್ಟವಾದ ಆಚಾರವುಳ್ಳ ಈ ಬ್ರಾಹ್ಮಣರು ಏತಕ್ಕೆ ನನ್ನನ್ನು ನೋಡುವುದಿಲ್ಲ. ನನಗೆ ಬಹಳ ಆಶ್ಚರ್ಯವುಂಟಾ ಗಿದೆ. ಅನುಗ್ರಹಮಾಡಿ ಅದನ್ನು ನನಗೆ ಹೇಳು.

೬೦-೬೧. ಈಶ್ವರನು ಹೇಳುತ್ತಾನೆ:—ನೀನು ಪ್ರಕೃತಿಯಾಗಿರುವುದರಿಂದ ಸಿದ್ಧರಾದ ಈ ತಪಸ್ವಿಗಳು ನಿನ್ನನ್ನು ನೋಡುವುದಿಲ್ಲ. ಹೀಗೆ ಈಶ್ವರನು ಹೇಳಲು ಗಿರಿಜೆಯು ಅವರಲ್ಲಿ ಕುಪಿತಳಾಗಿ, "ಗರ್ವಿಷ್ಠರಾದ ಮುನಿಗಳೆ! ದುರಾಚಾರಿಗಳಾದ ನೀವು ಸ್ತ್ರೀಚಾಪಲ್ಯದಿಂದ ನಾಶವಾಗುವಿರಿ.

೬೨-೬೩. ನೀವು ಕಲಿಯುಗದಲ್ಲಿ ದೇವದ್ರವ್ಯನಾಶಕ್ಕಾಗಿ ಜನಿಸಿ ರಾಜನಿಂದ ದಾನವನ್ನು ತೆಗೆದುಕೊಳ್ಳುವರೂ, ಜೀವನಕ್ಕಾಗಿ ದೇವಪೂಜಾಸಕ್ತರೂ, ಲಿಂಗ ದ್ರವ್ಯದಿಂದ ಜೀವಿಸುವವರೂ, ವೇಶ್ಯಾಸಕ್ತರೂ, ಭ್ರಾಂತಿಯುಳ್ಳವರೂ, ಸಮಸ್ತ ಜನರಿಂದ ಬಹಿಷ್ಕೃತರೂ ಆಗುವಿರಿ" ಎಂದು ಶಪಿಸಿದಳು.

ಇತಿ ದತ್ತೇ ತದಾ ಶಾಪ ಋಷೀಣಾಂ ಚ ಮಹಾತ್ಮನಾಂ ।
ಗೌರೀಂ ಪ್ರಸಾದಯಾಮಾಸುಸ್ತೇ ಚ ಸರ್ವೇ ಸುರೇಶ್ವರಾಃ । ॥ ೬೪ ॥
ದೇವದೇವಸ್ಯ ವಚನಾತ್ಪ್ರಸನ್ನಾ ಸ್ವಭವತ್ಪುನಃ ।
ನಾಲಂ ದೇವೋಽಪಿ ಸಂಗೃಹ್ಯ ದಕ್ಷಿಣಾಶಾಂ ಸಮುಕ್ಷಿಪತ್ ॥ ೬೫ ॥
ಪತಿತಂ ತಚ್ಚ ನೈ ನಾಲಂ ಪ್ರಭಾಸಕ್ಷೇತ್ರಮಧ್ಯತಃ ।
ತದೇವ ಲಿಂಗಂ ಸಂಜಾತಂ ಮಹಾನಾಲೇತಿ ವಿಶ್ರುತಂ । ॥ ೬೬ ॥
ಕಲೌ ಯುಗೇ ಚ ಸಂಪ್ರಾಪ್ತೇ ತದ್ಧ್ರುವೇಶ್ವರಸಂಜ್ಞಿತಂ ।
ಸಂಸ್ಥಿತಂ ಚೋತ್ತರೇಶಾನೇ ತಸ್ಮಾತ್ಪಾಶುಪತೇಶ್ವರಾತ್ ॥ ೬೭ ॥
ಪುರಾಽನಾದೀಶನಾಮೇತಿ ಪಶ್ಚಾತ್ಪಾಶುಪತೇಶ್ವರಃ ।
ಪ್ರಭಾಸೇ ತು ಮಹಾಕ್ಷೇತ್ರೇ ಸ್ಥಿತಃ ಪಾತಕನಾಶನಃ ॥ ೬೮ ॥
ಇದಂ ಸ್ಥಾನಂ ಪರಂ ಶ್ರೇಷ್ಠಂ ಮಮ ವ್ರತನಿಷೇವಣಂ ।
ಇದಂ ಲಿಂಗಂ ಪರಂ ಬ್ರಹ್ಮ ಅನಾದೀಶೇತಿ ಸಂಜ್ಞಿತಂ । ॥ ೬೯ ॥
ಅತ್ರ ಸಿದ್ಧಿಶ್ಚ ಮುಕ್ತಿಶ್ಚ ಬ್ರಾಹ್ಮಣಾನಾಂ ನ ಸಂಶಯಃ ।
ಅನೇನೈವ ಶರೀರೇಣ ಷಡ್ಭಿರ್ಮಾಸಸ್ತು ಸಿದ್ಧ್ಯತಿ ॥ ೭೦ ॥

---

೬೪. ಗೌರಿಯು ಹೀಗೆ ಮಹಾತ್ಮರಾದ ಋಷಿಗಳಿಗೆ ಶಾಪವನ್ನೀಯಲು ಆ ಎಲ್ಲ ದೇವತೆಗಳೂ ಆಕೆಯನ್ನು ಸಮಾಧಾನಗೊಳಿಸಿದರು.

೬೫. ಗೌರಿಯು ಶಿವನ ಮಾತಿನಿಂದ ಪ್ರಸನ್ನಳಾಗಲು ಶಿವನು ಆ ತಾವರೆ ದಂಟನ್ನು ದಕ್ಷಿಣ ದಿಕ್ಕಿಗೆ ಎಸೆದನು.

೬೬. ಆ ನಾಳವು ಪ್ರಭಾಸಕ್ಷೇತ್ರದ ನಡುವೆ ಬೀಳಲು ಅದೇ ಮಹಾನಾಳವೆಂಬ ಪ್ರಸಿದ್ಧ ಲಿಂಗವಾಯಿತು.

೬೭. ಪಾಶುಪತೇಶ್ವರನ ಉತ್ತರೇಶಾನ್ಯ ದಿಕ್ಕಿನಲ್ಲಿರುವ ಆ ಲಿಂಗವು ಕಲಿಯುಗದಲ್ಲಿ ಧ್ರುವೇಶ್ವರನೆಂದು ಹೆಸರನ್ನು ಪಡೆಯಿತು.

೬೮. ಈ ಲಿಂಗವು ಮೊದಲು ಅನಾದೀಶನೆಂದೂ, ಅನಂತರ ಪಾಶುಪತೇಶ್ವರನೆಂದೂ ಪ್ರಸಿದ್ಧವಾಗಿ ಪ್ರಭಾಸ ಮಹಾಕ್ಷೇತ್ರದಲ್ಲಿ ಭಕ್ತರ ಪಾಪವನ್ನು ಪರಿಹರಿಸುತ್ತಿರುವುದು.

೬೯. ಈ ಸ್ಥಳವೂ, ನನ್ನ ಪಾಶುಪತವ್ರತಾನುಷ್ಠಾನವೂ ಅತ್ಯುತ್ತಮವಾದುವು. ಅನಾದೀಶನೆಂದು ಪ್ರಸಿದ್ಧವಾದ ಈ ಲಿಂಗವು ಪರಬ್ರಹ್ಮಸ್ವರೂಪವಾದುದು.

೭೦. ಬ್ರಾಹ್ಮಣರಿಗೆ ಈ ಶರೀರದಿಂದಲೇ ಆರು ತಿಂಗಳಲ್ಲಿ ಇಲ್ಲಿ ಸಿದ್ಧಿಯೂ, ಮುಕ್ತಿಯೂ ಲಭಿಸುವುವು.

ಸಂಸಾರಸ್ಯ ವಿಮೋಕ್ಷಾರ್ಥಮಿದಂ ಲಿಂಗಂ ತು ದೃಶ್ಯತಾಂ ।
ದುರ್ಲಭಂ ಸರ್ವಲೋಕಾನಾಮಿದಂ ಮೋಕ್ಷಪ್ರದಂ ಪರಂ ।
ಇದಂ ಪಾಶುಪತಂ ಜ್ಞಾನಂ ಯಸ್ಮಿಂಲ್ಲಿಂಗೇ ಪ್ರತಿಷ್ಠಿತಂ ॥ ೭೧ ॥
ಯಶ್ಚೈನಂ ಪೂಜಯೇದ್ಭಕ್ತ್ಯಾ ಮಾಘೇ ಮಾಸಿ ನಿರಂತರಂ ।
ಸರ್ವೇಷಾಂ ವೈ ಕ್ರತೂನಾಂ ಚ ದಾನಾನಾಂ ಲಭತೇ ಫಲಂ ॥ ೭೨ ॥
ಹಿರಣ್ಯಂ ತತ್ರ ದಾತವ್ಯಂ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೭೩ ॥
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಪಶುಪಾಶುವಿಮೋಕ್ಷಾರ್ಥಂ ಸಮ್ಯಕ್ಪಾಶುಪತೇಶ್ವರಂ ॥ ೭೪ ॥
ಚತುರ್ಣಾಮಪಿ ವರ್ಣಾನಾಂ ಪೂಜ್ಯೋ ಬ್ರಾಹ್ಮಣ ಉಚ್ಯತೇ ।
ತಸ್ಯ ಚೈವಾಧಿಕಾರೋಽಸ್ತಿ ಚಾಸ್ಮಿನ್ಪಾಶುಪತೇಶ್ವರೇ ॥ ೭೫ ॥

ಯದ್ದೇವತಾನಾಂ ಪ್ರಥಮಂ ಪವಿತ್ರಂ
ವಿಶ್ವವ್ರತಂ ಪಾಶುಪತಂ ಬಭೂವ ।
ಅಯಂ ಪಂಥಾ ನೈಷ್ಠಿಕೋ ವೈ ಮಯೋಕ್ತೋ
ಯೇನ ದೇವಾ ಯಾಂತಿ ಭವನಾನಿ ವಿಶ್ವಾ ॥ ೭೬ ॥

---

೭೧. ಸಂಸಾರದ ಮೋಕ್ಷಕ್ಕಾಗಿ ಈ ಪಾರಮೇಶ್ವರ ಲಿಂಗವನ್ನು ನೋಡಬೇಕು. ಮೋಕ್ಷವನ್ನೀಯುವ ಈ ಲಿಂಗವು ಸಕಲ ಜನರಿಗೆ ದುರ್ಲಭವಾದುದು. ಪಾಶುಪತ ಜ್ಞಾನವು ಈ ಲಿಂಗದಲ್ಲಿ ನೆಲೆಸಿರುವುದು.

೭೨. ಮಾಘಮಾಸದಲ್ಲಿ ಎಡೆಬಿಡದೆ ಈ ಲಿಂಗವನ್ನು ಪೂಜಿಸುವವನು ಸಕಲ ಯಜ್ಞಗಳ ಮತ್ತು ದಾನಗಳ ಫಲವನ್ನು ಪಡೆಯುವನು.

೭೩. ಯಾತ್ರಾಫಲವನ್ನಪೇಕ್ಷಿಸುವವರು ಅಲ್ಲಿ ಸುವರ್ಣವನ್ನು ದಾನಮಾಡಬೇಕು.

೭೪. ದೇವಿ! ಹೀಗೆ ಪ್ರಾಣಿಗಳ ಸಂಸಾರ ಬಂಧನದ ನಾಶಕ್ಕಾಗಿ ಪಾಪವನ್ನು ಪರಿಹರಿಸುವ ಪಾಶುಪತೇಶ್ವರ ಮಾಹಾತ್ಮ್ಯವನ್ನು ಹೇಳಿರುವೆನು.

೭೫. ನಾಲ್ಕು ಜಾತಿಗಳಲ್ಲಿ ಬ್ರಾಹ್ಮಣನೇ ಪೂಜ್ಯನೆನಿಸಿಕೊಳ್ಳುವನು. ಅವನಿಗೆ ಮಾತ್ರ ಈ ಪಾಶುಪತವ್ರತದಲ್ಲಿ ಅಧಿಕಾರವಿರುವುದು.

೭೬. ದೇವತೆಗಳಿಗೆ ಈ ಪಾಶುಪತವ್ರತವು ಮೊದಲನೆಯ ಪವಿತ್ರ ವ್ರತವಾಗಿರುವುದು. ದೇವತೆಗಳು ಅಖಿಲ ಲೋಕಗಳಿಗೆ ಹೋಗಲು ಈ ವ್ರತವೇ ದಾರಿಯಾಗಿರುವುದು.

ಸುರಾಂ ಪೀತ್ವಾ ಗುರುದಾರಾಂಶ್ಚ ಗತ್ವಾ
ಸ್ತೇಯಂ ಕೃತ್ವಾ ಬ್ರಾಹ್ಮಣಂ ಚಾಪಿ ಹತ್ವಾ ।
ಭಸ್ಮಚ್ಛನ್ನೋ ಭಸ್ಮಶಯ್ಯಾಶಯಾನೋ
ರುದ್ರಾಧ್ಯಾಯೀ ಮುಚ್ಯತೇ ಪಾತಕೇಭ್ಯಃ ॥ ೭೭ ॥

ಅಗ್ನಿರಿತ್ಯಾದಿನಾ ಭಸ್ಮ ಗೃಹೀತ್ವಾಂಗಾನಿ ಸಂಸ್ಪೃಶೇತ್ ।
ಗೃಹ್ಣೀಯಾತ್ಸಂಯತೇ ಚಾಗ್ನೌ ಭಸ್ಮ ತದ್ಗೃಹಸಾಸಿನಾಂ ॥ ೭೮ ॥

ಅಗ್ನಿರಿತಿ ಭಸ್ಮ ವಾಯುರಿತಿ ಭಸ್ಮ ಜಲಮಿತಿ ಭಸ್ಮ ।
ಸ್ಥಲಮಿತಿ ಭಸ್ಮ ಸರ್ವಂ ಹ ವಾ ಇದಂ ಭಸ್ಮಾಭವತ್ ।
ಏತಾನಿ ಚಕ್ಷೂಂಷಿ ನಾದೀಕ್ಷಿತಃ ಸಂಸ್ಪೃಶೇತ್ ॥ ೭೯ ॥

ಬ್ರಾಹ್ಮಣೈಶ್ಚ ಸಮಾದೇಯಂ ನ ತು ಶೂದ್ರೈಃ ಕದಾಚನ ।
ನಾಧಿಕಾರೋಸ್ತಿ ಶೂದ್ರಸ್ಯ ವ್ರತೇ ಪಾಶುಪತೇ ಸದಾ ॥ ೮೦ ॥

ಬ್ರಾಹ್ಮಣೇಷ್ವಧಿಕಾರೋಽಸ್ತಿ ವ್ರತೇ ಪಾಶುಪತೇ ಶುಭೇ ।
ಬ್ರಾಹ್ಮಣೀಂ ತನುಮಾಸ್ಥಾಯ ಸಂಭವಾಮಿ ಯುಗೇ ಯುಗೇ ॥ ೮೧ ॥

---

೭೭. ಭಸ್ಮಲಿಪ್ತನೂ, ಭಸ್ಮದ ಹಾಸಿಗೆಯಲ್ಲಿ ಮಲಗುವವನೂ, ರುದ್ರಾಧ್ಯಾಯವನ್ನು ಪಾರಾಯಣ ಮಾಡುವವನೂ ಮದ್ಯಪಾನ, ಗುರುತಲ್ಪಗಮನ, ಸ್ವರ್ಣಸ್ತೇಯ, ಬ್ರಹ್ಮಹತ್ಯೆಗಳೆಂಬ ಮಹಾಪಾತಕಗಳಿಂದ ಮುಕ್ತನಾಗುವನು.

೭೮. ಅಗ್ನಿರಿತ್ಯಾದಿ ಮಂತ್ರದಿಂದ ಭಸ್ಮವನ್ನು ತೆಗೆದುಕೊಂಡು ಅಂಗಗಳಿಗೆ ಹಚ್ಚಿಕೊಳ್ಳಬೇಕು. ಆ ಭಸ್ಮವನ್ನು ಗೃಹಸ್ಥನ ಪವಿತ್ರಾಗ್ನಿಯಿಂದ ತಗದುಕೊಳ್ಳಬೇಕು.

೭೯. ಅಗ್ನಿ, ವಾಯು, ನೀರು, ಭೂಮಿ, ಎಲ್ಲವೂ ಭಸ್ಮವಾಗಿರುವುವು. ಪಾಶುಪತ ದೀಕ್ಷೆಯಿಲ್ಲದವನು ಕಣ್ಣುಗಳಂತಿರುವ ಇವುಗಳನ್ನು ಮುಟ್ಟಬಾರದು.

೮೦. ಬ್ರಾಹ್ಮಣರು ಅಗ್ನಿಯಿಂದ ಭಸ್ಮವನ್ನು ತೆಗೆದುಕೊಳ್ಳಬೇಕು. ಶೂದ್ರರು ತೆಗೆದುಕೊಳ್ಳಬಾರದು. ಶೂದ್ರರಿಗೆ ಪಾಶುಪತ ವ್ರತದಲ್ಲಿ ಅಧಿಕಾರವಿಲ್ಲ.

೮೧. ಬ್ರಾಹ್ಮಣರಿಗೆ ಮಂಗಳಕರವಾದ ಪಾಶುಪತವ್ರತದಲ್ಲಿ ಅಧಿಕಾರವಿರುವುದು. ನಾನು ಪ್ರತಿಯುಗದಲ್ಲಿಯೂ ಬ್ರಾಹ್ಮಣನಾಗಿ ಅವತರಿಸುವೆನು.

ಚಂಡಾಲವೇಶ್ಮನ್ಯಥ ವಾ ಸ್ಮಶಾನೇ ।
ರಾಜ್ಞಶ್ಚ ಮಾರ್ಗೇಷ್ವಥ ವರ್ತ್ಮಮಧ್ಯೇ ।
ಕರೀಷಮಧ್ಯೇ ನಿಃಸೃತಾ ನರಾಧಮಾಃ ।
ಶೈವಂ ಪದಂ ಯಾಂತಿ ನ ಸಂಶಯೋಽತ್ರ ॥ ೮೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾಶುಪತೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿಂಶದುತ್ತರಶತತಮೋಽಧ್ಯಾಯಃ ॥

---

೮೨. ನೀಚ ಬ್ರಾಹ್ಮಣನು ಚಂಡಾಲನ ಮನೆಯಲ್ಲಾಗಲಿ, ಸ್ಮಶಾನದಲ್ಲಾಗಲಿ, ರಾಜಬೀದಿಯಲ್ಲಾಗಲಿ, ದಾರಿಯ ನಡುವೆಯಾಗಲಿ, ಬೆರಣಿಯ ಮಧ್ಯದಲ್ಲಾಗಲಿ ಪಾಶುಪತ ಯೋಗವನ್ನಾಶ್ರಯಿಸಿದರೆ ನಿಶ್ಚಯವಾಗಿಯೂ ಶಿವನ ನಿವಾಸಸ್ಥಾನವನ್ನು ಸೇರುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಾಶುಪತೇಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕತ್ರಿಂಶದುತ್ತರಶತತಮೋऽಧ್ಯಾಯಃ

ಧ್ರುವೇಶ್ವರಮಾಹಾತ್ಮ್ಯವರ್ಣನಂ

ಶ್ರೀ ದೇವ್ಯುವಾಚ :—

ಯದೇತದ್ಭವತಾ ಪ್ರೋಕ್ತಂ ನಾಲೇಶ್ವರಮಿತಿ ಶ್ರುತಂ ।
ಧ್ರುವೇಶ್ವರೇತಿ ತಲ್ಲಿಂಗಂ ಕಥಂ ವೈ ಸಂಬಭೂವ ಹ ॥ ೧ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಧ್ರುವೇಶ್ವರಮಹೋದಯಂ ।
ಯಚ್ಛ್ರುತ್ವಾ ಮಾನವೋ ದೇವಿ ಮುಚ್ಯತೇ ಭವಬಂಧನಾತ್ ॥ ೨ ॥
ಉತ್ತಾನಪಾದನೃಪತೇಃ ಪುತ್ರೋऽಭೂದ್ಧ್ರುವಸಂಜ್ಞಿತಃ ।
ಮಹಾತ್ಮಾ ಜ್ಞಾನಸಂಪನ್ನಃ ಸರ್ವಜ್ಞಃ ಪ್ರಿಯದರ್ಶನಃ ॥ ೩ ॥
ಸ ಕಥಾಚಿತ್ಸಿಮಾಸಾದ್ಯ ಪ್ರಭಾಸಂ ಕ್ಷೇತ್ರಮುತ್ತಮಂ ।
ತತಾಪ ವಿಪುಲಂ ದೇವಿ ತಪಃ ಪರಮದಾರುಣಂ ॥ ೪ ॥
ದಿವ್ಯಂ ವರ್ಷಸಹಸ್ರಂ ತು ಪ್ರತಿಷ್ಠಾಪ್ಯ ಮಹೇಶ್ವರಂ ।
ಸಂಪೂಜಯತಿ ಸದ್ಭಕ್ತ್ಯಾ ಸ್ತೌತಿ ಸ್ತೋತ್ರೈಃ ಪೃಥಗ್ವಿಧೈಃ ॥ ೫ ॥

ಕನ್ನಡದ ಅನುವಾದ

ಧ್ರುವೇಶ್ವರಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ:—ನೀನು ನಾಳೇಶ್ವರನೆಂದು ಹೇಳಿದೆಯಷ್ಟೆ. ಆ ಲಿಂಗವು ಧ್ರುವೇಶ್ವರನೆಂದು ಹೇಗೆ ಹೆಸರನ್ನು ಪಡೆಯಿತು?

೨. ಈಶ್ವರನು ಹೇಳುತ್ತಾನೆ:—ದೇವಿ! ಧ್ರುವೇಶ್ವರನ ಮಾಹಾತ್ಮ್ಯವನ್ನು ಹೇಳುವೆನು ಕೇಳು. ಇದನ್ನು ಕೇಳಿದ ಮಾನವನು ಸಂಸಾರ ಬಂಧನದಿಂದ ಮುಕ್ತನಾಗುವನು.

೩. ಉತ್ತಾನಪಾದ ರಾಜನಿಗೆ ಮಹಾತ್ಮನೂ, ಜ್ಞಾನಿಯೂ, ಸರ್ವಜ್ಞನೂ, ಸುಂದರನೂ ಆದ ಧ್ರುವನೆಂಬ ಮಗನಿದ್ದನು.

೪–೫. ಅವನು ಒಂದಾನೊಂದುದಿನ ಪ್ರಭಾಸಕ್ಷೇತ್ರವನ್ನು ಹೊಂದಿ ಮಹೇಶ್ವರನನ್ನು ಪತಿಷ್ಠೆಮಾಡಿ ದಿವ್ಯ ಸಹಸ್ರ ವರ್ಷಗಳಕಾಲ ಅತಿಭಯಂಕರವಾದ ತಪಸ್ಸನ್ನು ಮಾಡಿದನು. ಮತ್ತು ನಾನಾಬಗೆಯ ಸ್ತೋತ್ರಗಳಿಂದ ಭಕ್ತಿಯಿಂದ ಸ್ತುತಿಸಿದನು.

ತತ್ ಸ್ತೋತ್ರಂ ತೇ ಪ್ರವಕ್ಷ್ಯಾಮಿ ಯೇನಾಹಂ ತುಷ್ಟಿಮಾಗತಃ ॥ ೬ ॥

ಧ್ರುವ ಉವಾಚ :—

ಕೈಲಾಸತುಂಗಶಿಖರಂ ಪ್ರವಿಕಂಪ್ಯಮಾನಂ
ಕೈಲಾಸಶೃಂಗಸದೃಶೇನ ದಶಾನನೇನ ।
ಯಃ ಪಾದಪದ್ಮ ಪರಿಪೀಡನಯಾ ದಧಾರ
ತಂ ಶಂಕರಂ ಶರಣದಂ ಶರಣಂ ವ್ರಜಾಮಿ ॥ ೭ ॥

ಯೇನಾಸುರಾಶ್ಚಾಪಿ ದನೋಶ್ಚ ಪುತ್ರಾ
ವಿದ್ಯಾಧರೋರಗಗಣೈಶ್ಚ ವೃತಾಃ ಸಮಗ್ರಾಃ ।
ಸಂಯೋಜಿತಾ ನ ತು ಫಲಂ ಫಲಮೂಲಮುಕ್ತಾಃ
ತಂ ಶಂಕರಂ ಶರಣದಂ ಶರಣಂ ವ್ರಜಾಮಿ ॥ ೮ ॥

ಯಸ್ಯಾಖಿಲಂ ಜಗದಿದಂ ವಶವರ್ತಿ ನಿತ್ಯಂ
ಯೋಽಷ್ಟಾಭಿರೇವ ತನುಭಿರ್ಭುವನಾನಿ ಭುಂಕ್ತೇ ।
ಯತ್ಕಾರಣಂ ಪರಮಕಾರಣಕಾರಣಾನಾಂ
ತಂ ಶಂಕರಂ ಶರಣದಂ ಶರಣಂ ವ್ರಜಾಮಿ ॥ ೯ ॥

---

೬. ನನ್ನನ್ನು ಸಂತೋಷಗೊಳಿಸಿರುವ ಆ ಸ್ತೋತ್ರವನ್ನು ನಿನಗೆ ಹೇಳುವೆನು.

೭. ಧ್ರುವನು ಹೇಳುತ್ತಾನೆ :—ಕೈಲಾಸಶಿಖರದಂತಿರುವ ರಾವಣನು ಕೈಲಾಸ ಶಿಖರವನ್ನು ಅಲ್ಲಾಡಿಸಲು ತನ್ನ ಅಡಿದಾವರೆಗಳಿಂದ ಮೆಟ್ಟಿತಡೆದಿರುವ ಶರಣಾಗತ ರಕ್ಷನಾದ ಶಂಕರನನ್ನು ಮರೆಹೋಗುವೆನು.

೮. ಅಸುರರನ್ನೂ, ದಾನವರನ್ನೂ, ವಿದ್ಯಾಧರ, ಉರಗಗಳನ್ನೂ ಸಂಪೂರ್ಣ ಫಲವುಳ್ಳವರನ್ನಾಗಿಯೂಮಾಡಿರುವ ಶರಣಾಗತರಕ್ಷನಾದ ಆ ಶಂಕರನನ್ನು ಮರೆ ಹೋಗುವೆನು.

೯. ಈ ಸಮಸ್ತ ಪ್ರಪಂಚವನ್ನೂ ತನ್ನ ವಶದಲ್ಲಿರಿಸಿಕೊಂಡಿರುವವನೂ, ಎಂಟು ಶರೀರಗಳಿಂದ ಲೋಕಗಳನ್ನು ಕಾಪಾಡುವವನೂ, ಉತ್ತಮಕಾರಣರಾದವರಿಗೂ ಕಾರಣನೂ ಶರಣಾಗತರಕ್ಷಕನೂ ಆದ ಶಂಕರನನ್ನು ಮರೆಹೋಗುವೆನು.

ಯಃ ಸರ್ವ್ವಪ್ರಾಣಿಕಮಲಾಗ್ರನಖೇನ ದೇವ
ಸ್ತತ್ಪಂಚಮಂ ಚ ಸಹಸೈವ ಪುರಾತಿರುಷ್ಟಃ ।
ಬ್ರಾಹ್ಮಂ ಶಿರಸ್ತ್ರರಣಪದ್ಮನಿಭಂ ಚಕರ್ತ
ತಂ ಶಂಕರಂ ಶರಣದಂ ಶರಣಂ ವ್ರಜಾಮಿ ॥ ೧೦ ॥
ಯಸ್ಯ ಪ್ರಣಮ್ಯ ಚರಣಾ ವರದಸ್ಯ ಭಕ್ತ್ಯಾ
ಶ್ರುತ್ವಾ ಚ ವಾಗ್ಭಿರಮಲಾಭಿರತಂದ್ರಿತಾಭಿಃ ।
ದೀಪ್ತಸ್ತಮಾಂಸಿ ನುದತಿ ಸ್ವಕರೈರ್ವಿವಸ್ವಾಂ
ಸ್ತಂ ಶಂಕರಂ ಶರಣದಂ ಶರಣಂ ವ್ರಜಾಮಿ ॥ ೧೧ ॥
ಯಃ ಪಠೇತ್ಸ್ತವಮಿದಂ ರುಚಿರಾರ್ಥಂ
ಮಾನವೋ ಧ್ರುವಕೃತಂ ನಿಯತಾತ್ಮಾ ।
ವಿಪ್ರಸಂಸದಿ ಸದಾ ಶುಚಿಸಿದ್ಧಃ
ಸ ಪ್ರಯಾತಿ ಶಿವಲೋಕಮನಾದಿಂ ॥ ೧೨ ॥
ತಸ್ಯೈವಂ ಸ್ತುವತೋ ದೇವಿ ತುಷ್ಟೋಽಹಂ ಭಾವಿತಾತ್ಮನಃ ।
ಪೂರ್ಣೇ ವರ್ಷಸಹಸ್ರಾಂತೇ ಧ್ರುವಸ್ಯಾಹ ಮಹಾತ್ಮನಃ ॥ ೧೩ ॥

---

೧೦. ಕುಪಿತನಾಗಿ ತನ್ನ ಎಡಗೈಯ ಉಗುರಿನ ಕೊನೆಯಿಂದ ಚತುರ್ಮುಖನ ಪದ್ಮದಂತಿರುವ ಐದನೆಯ ತಲೆಯನ್ನು ಕತ್ತರಿಸಿದ ಶರಣಾಗತರಕ್ಷನಾದ ಶಂಕರನನ್ನು ಮರೆಹೋಗುವೆನು.

೧೧. ವರವನ್ನೀಯುವ ಯಾವನ ಕಾಲುಗಳನ್ನು ಭಕ್ತಿಯಿಂದ ನಮಸ್ಕರಿಸಿ ಶುದ್ಧವಾದ ಮಾತುಗಳಿಂದ ಯಾವನ ಮಾಹಾತ್ಮ್ಯವನ್ನು ಕೇಳಿ ಪ್ರಕಾಶಗೊಂಡಿರುವ ಸೂರ್ಯನು ಕತ್ತಲೆಯನ್ನು ಪರಿಹರಿಸುವನೋ, ಆ ಶರಣಾಗತರಕ್ಷಕನಾದ ಶಂಕರನನ್ನು ಮರೆಹೋಗುವೆನು.

೧೨. ಧ್ರುವನು ಮಾಡಿದ ಮನೋಹರವಾದ ಅರ್ಥವುಳ್ಳ ಈ ಸ್ತೋತ್ರವನ್ನು ಬ್ರಾಹ್ಮಣ ಸಭೆಯಲ್ಲಿ ಜಿತೇಂದ್ರಿಯನಾಗಿ ಪಠಿಸಿದವನು ಶಾಶ್ವತವಾದ ಶಿವಲೋಕವನ್ನು ಸೇರುವನು.

೧೩. ಹೀಗೆ ಸ್ತುತಿಸುತ್ತಿರುವ ಜ್ಞಾನಿಯಾದ ಆ ಧ್ರುವನಲ್ಲಿ ಸಾವಿರ ವರ್ಷಗಳ ಕೊನೆಯಲ್ಲಿ ನಾನು ಸಂತುಷ್ಟನಾಗಿ ಅವನನ್ನು ಕುರಿತು ಇಂತೆಂದೆನು.

ಪುತ್ರ ತುಷ್ಟೋಽಸ್ಮಿ ಭದ್ರಂ ತೇ ಜಾತಸ್ತ್ವಂ ನಿರ್ಮಲೋಽಧುನಾ ।
ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮಾಂ ವಿಗತಜ್ವರಃ ॥ ೧೪ ॥
ಯಚ್ಚ ತೇ ಮನಸಾ ಕಿಂಚಿತ್ಕಾಂಕ್ಷಿತಂ ಫಲಮುತ್ತಮಂ ।
ತತ್ಸರ್ವಂ ತೇ ಪ್ರದಾಸ್ಯಾಮಿ ಬ್ರೂಹಿ ಶೀಘ್ರಂ ಮಮಾಗ್ರತಃ ॥ ೧೫ ॥
ಬ್ರಾಹ್ಮ್ಯಂ ವಾ ವೈಷ್ಣವಂ ಶಾಕ್ರಂ ಪದಮನ್ಯತ್ಸುದುರ್ಲಭಂ ।
ದದಾಮಿ ನಾತ್ರ ಸಂದೇಹೋ ಭಕ್ತ್ಯಾ ಸಂಪ್ರೀಣಿತಸ್ತವ ॥ ೧೬ ॥

ಧ್ರುವ ಉವಾಚ :—

ಬ್ರಾಹ್ಮ್ಯಂ ವೈಷ್ಣವಂ ಮಾಹೇಂದ್ರಂ ಪದಮಾವೃತ್ತಿಲಕ್ಷಣಂ ।
ವಿದಿತಂ ಮಮ ತತ್ಸರ್ವಂ ಮನಸಾಽಪಿ ನ ಕಾಮಯೇ ॥ ೧೭ ॥
ಯದಿ ತುಷ್ಟೋಽಸಿ ಮೇ ದೇವ ಭಕ್ತಿಂ ದೇಹಿ ಸುನಿರ್ಮಲಾಂ ।
ಅಸ್ಮಿಂಲ್ಲಿಂಗೇ ಸದಾ ವಾಸಂ ಕುರು ದೇವ ವೃಷಧ್ವಜ ॥ ೧೮ ॥

ಈಶ್ವರ ಉವಾಚ :—

ಇತಿ ಯತ್ಪ್ರಾರ್ಥಿತಂ ಸರ್ವಂ ತದ್ದತ್ತಂ ಸರ್ವಮೇವ ಹಿ ।
ಸ್ಥಾನಂ ಚ ತಸ್ಯ ತದ್ಧ್ರೌವ್ಯಂ ತದ್ವಿಷ್ಣೋಃ ಪರಮಂ ಪದಂ ॥ ೧೯ ॥

---

೧೪. ಮಗು ! ನಾನು ನಿನ್ನ ವಿಷಯದಲ್ಲಿ ಸಂತುಷ್ಟನಾಗಿರುವೆನು. ನಿನಗೆ ಮಂಗಳವಾಗಲಿ. ಈಗ ನೀನು ಶುದ್ಧನಾಗಿರುವೆ ನಿನಗೆ ದಿವ್ಯ ಚಕ್ಷುಸ್ಸನ್ನು ಕೊಡುವೆನು. ವ್ಯಥೆಯಿಲ್ಲದೆ ನನ್ನನ್ನು ನೋಡು.

೧೫. ನಿನಗೆ ಇಷ್ಟವಾದ ಫಲಗಳನ್ನೆಲ್ಲ ಕೊಡುವೆನು. ಶೀಘ್ರವಾಗಿ ಅವುಗಳನ್ನು ನನ್ನಮುಂದೆ ಹೇಳು.

೧೬. ನಾನು ನಿನ್ನ ಭಕ್ತಿಗೆ ಮೆಚ್ಚಿರುವೆನು. ನಿನಗೆ ಬ್ರಹ್ಮ, ವಿಷ್ಣು, ಇಂದ್ರರ ಸ್ಥಾನವನ್ನೂ, ಇತರ ದುರ್ಲಭವಾದ ಸ್ಥಾನವನ್ನೂ ಕೊಡುವೆನು. ಈ ವಿಷಯದಲ್ಲಿ ಸಂದೇಹಪಡಬೇಡ.

೧೭. ಧ್ರುವನು ಹೇಳುತ್ತಾನೆ:—ಮರಳಿ ಹಿಂದಿರುಗಬೇಕಾದ ಬ್ರಹ್ಮ, ವಿಷ್ಣು, ಮಹೇಂದ್ರರ ಪದವಿಯನ್ನು ಅರಿತಿರುವೆನು. ಅವನ್ನೆಲ್ಲ ಮನಸ್ಸಿನಿಂದಲೂ ಅಪೇಕ್ಷಿಸುವುದಿಲ್ಲ.

೧೮. ಸ್ವಾಮಿ! ನನ್ನ ವಿಷಯದಲ್ಲಿ ನೀನು ಸಂತುಷ್ಟನಾಗಿದ್ದರೆ ನಿನ್ನಲ್ಲಿ ನಿರ್ಮಲ ಭಕ್ತಿಯನ್ನು ನೀಡು. ಮತ್ತು ಯಾವಾಗಲೂ ಈ ಶಿವಲಿಂಗದಲ್ಲಿ ಸನ್ನಿಹಿತನಾಗಿರು.

೧೯. ಈಶ್ವರನು ಹೇಳುತ್ತಾನೆ:—ಧ್ರುವ! ನೀನು ಕೇಳಿದ್ದನ್ನೆಲ್ಲ ಕೊಟ್ಟಿರುವೆನು. ಆಕಾಶದಲ್ಲಿ ಶಾಶ್ವತಸ್ಥಾನವನ್ನಿತ್ತಿರುವೆನು.

ಶ್ರಾವಣಸ್ಯ ತ್ವಮಾವಾಸ್ಯಾಂ ಯಸ್ತಲ್ಲಿಂಗಂ ಪ್ರಪೂಜಯೇತ್ ।
ಆಶ್ವಯುಕ್ಯಾಮಾಸ್ಯಾಂ ವಾ ಸೋಽಶ್ವಮೇಧಫಲಂ ಲಭೇತ್ ॥ ೨೦ ॥
ಅಪುತ್ರೋ ಲಭತೇ ಪುತ್ರಂ ಧನಾರ್ಥೀ ಲಭತೇ ಧನಂ ।
ರೂಪವಾನ್ ಸುಭಗೋ ಭೋಗೀ ಸರ್ವಶಾಸ್ತ್ರವಿಶಾರದಃ ।
ಹಂಸಯುಕ್ತವಿಮಾನೇನ ರುದ್ರಲೋಕೇ ಮಹೀಯತೇ ॥ ೨೧ ॥
ಅಸುರಸುರಗಣಾನಾಂ ಪೂಜಿತಸ್ಯ ಧ್ರುವಸ್ಯ
ಕಥಯತಿ ಕಮನೀಯಾಂ ಕೀರ್ತಿಮೇತಾಂ ಶೃಣೋತಿ ।
ಸಕಲಸುಖನಿಧಾನಂ ರುದ್ರಲೋಕಂ ಸುಶಾಂತಃ ।
ಸುರಗಣದನುಜಾದ್ಯೈರರ್ಚಿತಂ ಯಾತ್ಯನಂತಂ ॥೨೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಧ್ರುವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕತ್ರಿಂಶದುತ್ತರಶತತಮೋಽಧ್ಯಾಯಃ ॥

---

೨೦. ಶ್ರಾವಣಮಾಸದ ಅಮಾವಾಸ್ಯೆಯದಿನವಾಗಲಿ, ಆಶ್ವಿನಪೂರ್ಣಿಮಾದಿನವಾಗಲಿ ಆ ಲಿಂಗವನ್ನು ಪೂಜಿಸಿದರೆ ಅಶ್ವಮೇಧಯಾಗದ ಫಲವು ಲಭಿಸುವುದು.

೨೧. ಸುತನಿಲ್ಲದವನು ಸುತನನ್ನು ಪಡೆಯುವನು. ಧನವನ್ನಪೇಕ್ಷಿಸುವವನು ಧನವನ್ನು ಪಡೆಯುವನು. ಸೌಂದರ್ಯವುಳ್ಳವನೂ, ಸೌಭಾಗ್ಯವುಳ್ಳವನೂ, ಸುಖಿಯೂ, ಸಕಲ ಶಾಸ್ತ್ರಗಳಲ್ಲಿ ಕುಶಲನೂ ಆಗಿ ಹಂಸಗಳಿಂದ ಎಳೆಯಲ್ಪಟ್ಟ ವಿಮಾನದಿಂದ ರುದ್ರಲೋಕವನ್ನು ಸೇರಿ ಪೂಜ್ಯನಾಗುವನು.

೨೨. ಅಸುರರೂ, ಸುರರೂ ಪೂಜಿಸುವ ಧ್ರುವನ ಈ ಮನೋಹರವಾದ ಕೀರ್ತಿಯನ್ನು ಹೇಳುವವನೂ, ಕೇಳುವವನೂ ಶಾಂತನಾಗಿ ಸಮಸ್ತ ಸುಖಗಳಿಗಾಶ್ರಯವಾಗಿ ಸುರಾಸುರರಿಂದ ಮಾನ್ಯವಾದ ಶಾಶ್ವತ ರುದ್ರಲೋಕವನ್ನು ಸೇರುವರು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಧ್ರುವೇಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾತ್ರಿಂಶದುತ್ತರಶತತಮೋಽಧ್ಯಾಯಃ

ಸಿದ್ಧಲಕ್ಷ್ಮೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವೈಷ್ಣವೀಂ ಶಕ್ತಿಮುತ್ತಮಾಂ ।
ಸೋಮೇಶಾದೀಶದಿಗ್ಭಾಗೇ ನಾತಿದೂರೇ ವ್ಯವಸ್ಥಿತಾಂ ॥ ೧ ॥
ಸಿದ್ಧಲಕ್ಷ್ಮೀತಿ ವಿಖ್ಯಾತಾ ಹ್ಯತ್ರ ಪೀಠಾಧಿದೇವತಾ ॥ ೨ ॥
ಬ್ರಹ್ಮಾಂಡೇ ಪ್ರಥಮಂ ಪೀಠಂ ಯತ್ಪ್ರಭಾಸಂ ವ್ಯವಸ್ಥಿತಂ ।
ತತ್ರ ದೇವಿ ಮಹಾಪೀಠೇ ಯೋಗಿನ್ಯೋ ಭೂಚರಾಃ ಖಗಾಃ ।
ಭೈರವೇಣ ಸಮೇತಾಸ್ತು ಕ್ರೀಡಂತೇ ಸ್ವೇಚ್ಛಯಾ ಪ್ರಿಯೇ ॥ ೩ ॥
ಜಾಲಂಧರಂ ಮಹಾಪೀಠಂ ಕಾಮರೂಪಂ ತಥೈವ ಚ ।
ಶ್ರೀಮದ್ರುದ್ರನೃಸಿಂಹಂ ಚ ಚತುರ್ಥಂ ಪೀಠಮುತ್ತಮಂ ॥ ೪ ॥
ರತ್ನವೀರ್ಯಂ ಮಹಾಪೀಠಂ ಕಾಶ್ಮೀರಂ ಪೀಠಮೇವ ಚ ।
ಏತಾನಿ ದೇವಿ ಪೀಠಾನಿ ಯೋ ವೇತ್ತಿ ಸ ಚ ಮಂತ್ರವಿತ್ ॥ ೫ ॥

ಕನ್ನಡದ ಅನುವಾದ

ಸಿದ್ಧಲಕ್ಷ್ಮೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಸೋಮೇಶ್ವರನಿಗೆ ಈಶಾನ್ಯದಿಕ್ಕಿನಲ್ಲಿ ಸಮೀಪದಲ್ಲಿರುವ ಉತ್ತಮ ವೈಷ್ಣವೀಶಕ್ತಿಯೆಡೆಗೆ ಹೋಗಬೇಕು.

೨. ಇಲ್ಲಿರುವ ಪೀಠಾಧಿದೇವತೆಯು ಸಿದ್ಧಲಕ್ಷ್ಮಿಯೆಂದು ಪ್ರಖ್ಯಾತಳಾಗಿರುವಳು.

೩. ಬ್ರಹ್ಮಾಂಡದಲ್ಲಿರುವ ಮೊದಲನೆಯ ಪೀಠವಾದ ಪ್ರಭಾಸಕ್ಷೇತ್ರದಲ್ಲಿ ಭೂಮ್ಯಾಕಾಶಗಳಲ್ಲಿ ಸಂಚರಿಸುವ ಯೋಗಿನಿಯರು ಭೈರವನೊಡನೆ ಸ್ವೇಚ್ಛೆಯಿಂದ ವಿಹರಿಸುತ್ತಿರುವರು.

೪–೫. ಹೀಗೆ ಜಾಲಂಧರ, ಕಾಮರೂಪ, ರುದ್ರನೃಸಿಂಹ, ರತ್ನವೀರ್ಯ, ಕಾಶ್ಮೀರವೆಂಬ ಪೀಠಗಳನ್ನು ತಿಳಿದವನು ಮಂತ್ರವನ್ನರಿತವನೆನಿಸುವನು.

ಸರ್ವೇಷಾಂ ಚೈವ ಪೀಠಾನಾಮಾಧಾರಂ ಪೀಠಮುತ್ತಮಂ ।
ಸೌರಾಷ್ಟ್ರೇ ತು ಮಹಾದೇವಿ ನಾಮ್ನಾ ಖ್ಯಾತಂ ಮಹೋದಯಂ ॥
ಕಾಮರೂಪಧರಂ ಜ್ಞಾನಂ ಯತ್ರಾದ್ಯಾಪಿ ಪ್ರವರ್ತತೇ ॥ ೬ ॥

ತತ್ರ ಪೀಠೇ ಸ್ಥಿತಾ ದೇವೀ ಮಹಾಲಕ್ಷ್ಮೀತಿ ವಿಶ್ರುತಾ ।
ಸರ್ವಪಾಪಪ್ರಶಮನೀ ಸರ್ವಕಾರ್ಯಶುಭಪ್ರದಾ ॥ ೭ ॥

ಶ್ರೀಪಂಚಮ್ಯಾ ನರೋ ಯಸ್ತು ಪೂಜಯೇತ್ತಾಂ ವಿಧಾನತಃ ।
ಗಂಧಪುಷ್ಪಾದಿಭಿರ್ಭಕ್ತ್ಯಾ ತಸ್ಯಾಽಲಕ್ಷ್ಮೀಭಯಂ ಕುತಃ ॥ ೮ ॥

ಉತ್ತರಾಂ ದಿಶಮಾಸ್ಥಾಯ ಮಹಾಲಕ್ಷ್ಮ್ಯಾಸ್ತು ಸನ್ನಿಧೌ ।
ಯೋ ಜಪೇನ್ಮಂತ್ರರಾಜ್ಞೀಂ ತಾಂ ಸಿದ್ಧಲಕ್ಷ್ಮೀತಿ ವಿಶ್ರುತಾಂ ॥ ೯ ॥

ಲಕ್ಷಜಾಪ್ಯವಿಧಾನೇನ ದೀಕ್ಷಾಸ್ನಾನಾದಿಪೂರ್ವಕಂ ।
ದಶಾಂಶಹೋಮಸಂಯುಕ್ತಂ ತ್ರಿಮಧುಶ್ರೀಫಲಾದಿಭಿಃ ॥ ೧೦ ॥

ಏವಂ ಪ್ರತ್ಯಕ್ಷತಾಂ ಯಾತಿ ತಸ್ಯ ಲಕ್ಷ್ಮೀರ್ನ ಸಂಶಯಃ ।
ದದಾತಿ ವಾಂಛಿತಾಂ ಸಿದ್ಧಿಮಿಹ ಲೋಕೇ ಪರತ್ರ ಚ ॥ ೧೧ ॥

---

೬. ಸಕಲ ಪೀಠಗಳಿಗೆ ಆಧಾರಭೂತವಾದ ಮಹೋದಯವೆಂಬ ಉತ್ತಮ ಪೀಠವು ಸೌರಾಷ್ಟ್ರದೇಶದಲ್ಲಿ ನೆಲೆಸಿರುವುದು. ಇದರಲ್ಲಿ ಈಗಲೂ ಜ್ಞಾನವು ನಾನಾ ಬಗೆಯಿಂದ ಉಂಟಾಗುವುದು.

೭. ಆ ಪೀಠದಲ್ಲಿ ಸಕಲ ಪಾಪಗಳನ್ನು ಪರಿಹರಿಸುವವಳೂ, ಸಮಸ್ತ ಕಾರ್ಯಗಳಲ್ಲಿ, ಶುಭಗಳನ್ನೀಯುವಳೂ ಆದ ಮಹಾಲಕ್ಷ್ಮಿಯು ನೆಲಸಿರುವಳು.

೮. ಶ್ರೀಮಹಾಲಕ್ಷ್ಮಿಯನ್ನು ಶ್ರೀ ಪಂಚಮಿಯ ದಿನ ವಿಧ್ಯುಕ್ತವಾಗಿ ಗಂಧಪುಷ್ಪ ಮೊದಲಾದವುಗಳಿಂದ ಪೂಜಿಸುವ ಮನುಷ್ಯನಿಗೆ ಅಲಕ್ಷ್ಮಿಯ ಭಯವಿರುವುದಿಲ್ಲ.

೯–೧೧. ಸಂಪತ್ತನ್ನು ಬಯಸುವವರು ಈ ಮಹಾಲಕ್ಷ್ಮಿಯ ಸನ್ನಿಧಿಯಲ್ಲಿ ನಿಂತು ಉತ್ತರಾಭಿಮುಖವಾಗಿ ದೀಕ್ಷಾಸ್ನಾನಪೂರ್ವಕವಾಗಿ ಲಕ್ಷಜಪದ ವಿಧಾನದಿಂದ ಸಿದ್ಧಲಕ್ಷ್ಮಿಯೆಂದು ಪ್ರಸಿದ್ಧವಾದ ಶ್ರೇಷ್ಠ ಮಂತ್ರವನ್ನು ದಶಾಂಶಹೋಮದೊಡನೆ ಜಪಿಸಿದರೆ ಲಕ್ಷ್ಮಿಯು ಪ್ರತ್ಯಕ್ಷಳಾಗಿ ಇಹಪರಗಳಲ್ಲಿ ಇಷ್ಟಸಿದ್ಧಿಯನ್ನೀಯುವಳು.

ತೃತೀಯಾಯಾಮಥಾಷ್ಟಮ್ಯಾಂ ಚತುರ್ದಶ್ಯಾಂ ವಿಧಾನತಃ ।
ಯಸ್ತಾಂ ಪೂಜಯತೇ ಭಕ್ತ್ಯಾ ತಸ್ಯ ಸಿದ್ಧಿಃ ಕರೇ ಸ್ಥಿತಾ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧಲಕ್ಷ್ಮೀಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಾತ್ರಿಂಶದುತ್ತರಶತತಮೋಽಧ್ಯಾಯಃ ॥

---

೧೨. ತೃತೀಯಾ, ಅಷ್ಟಮಿ, ಚತುರ್ದಶೀದಿನಗಳಲ್ಲಿ ವಿಧಿಯನ್ನನುಸರಿಸಿ ಭಕ್ತಿಯಿಂದ ಆಕೆಯನ್ನು ಪೂಜಿಸಿದವನಿಗೆ ಇಷ್ಟಾರ್ಥವು ಹಸ್ತಗತವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸಿದ್ಧಲಕ್ಷ್ಮೀಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯಸ್ತ್ರಿಂಶದುತ್ತರಶತತಮೋಽಧ್ಯಾಯಃ

ಮಹಾಕಾಲೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಾ ದೇವೀ ಮಹಾಕಾಲೀತಿ ವಿಶ್ರುತಾ ।
ಅಧಃ ಸ್ಥಿತೇ ಮಹಾಪೀಠೇ ಪಾತಾಲವಿವರಾನ್ವಿತೇ ॥ ೧ ॥
ಸರ್ವದುಃಖಪ್ರಶಮನೀ ಸರ್ವಶತ್ರುಕ್ಷಯಂಕರೀ ।
ಪೂಜನೀಯಾ ವಿಧಾನೇನ ಕೃಷ್ಣಾಷ್ಟಮ್ಯಾಂ ಮಹಾನಿಶಿ ।
ಗಂಧೈಃ ಪುಷ್ಪೈಸ್ತಥಾ ಧೂಪೈಃ ಕ್ರವ್ಯೈರ್ಬಲಿಭಿರೇವ ಚ ॥ ೨ ॥
ಫಲತೃತೀಯಾಂ ನಾರೀ ಚ ಕುರ್ಯಾದ್ಭಕ್ತ್ಯಾ ತತ್ರ ಭಾವಿತಾ ।
ವರ್ಷಮೇಕಂ ಸಿತೇ ಪಕ್ಷೇ ದೇವೀಂ ಪೂಜ್ಯ ವಿಧಾನತಃ ।
ಫಲಾನಿ ಬ್ರಾಹ್ಮಣೇ ದೇಯಾನ್ಯೇವ ನೂನಂ ವಿಧಾನತಃ ॥ ೩ ॥
ಏತಾನಿ ವರ್ಜಯೇನ್ನಕ್ತೇ ಹ್ಯನ್ನಾನಿ ಸುರಸುಂದರಿ ।
ನಿಷ್ಪಾವಾ ಆಢಕೀ ಮುದ್ಗಾ ಮಾಷಾಶ್ಚೈವ ಕುಲಿತ್ಥಕಾಃ ॥ ೪ ॥

ಕನ್ನಡದ ಅನುವಾದ

ಮಹಾಕಾಲೀಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ದೇವಿ ! ಅಲ್ಲಿಯೇ ಪಾತಾಲರಂಧ್ರದಿಂದ ಕೂಡಿದ ಆ ದೇವಿಯ ಅಡಿಯಲ್ಲಿರುವ ಮಹಾ ಪೀಠದಲ್ಲಿ ಸಕಲದುಃಖಗಳನ್ನು ಪರಿಹರಿಸುವವಳೂ, ಸಮಸ್ತ ಶತ್ರುಗಳನ್ನು ನಾಶಗೊಳಿಸುವವಳೂ ಆದ ಮಹಾಕಾಳಿಯು ನೆಲಸಿರುವಳು. ಈಕೆಯನ್ನು ಕೃಷ್ಣಾಷ್ಟಮಿಯ ದಿನ ರಾತ್ರಿ ವಿಧಿಯನ್ನನುಸರಿಸಿ ಗಂಧ, ಪುಷ್ಪ, ಧೂಪ, ಮಾಂಸಬಲಿಗಳಿಂದ ಪೂಜಿಸಬೇಕು.

೩. ಸ್ತ್ರೀಯು ಭಕ್ತಿಯಿಂದ ಶುಕ್ಲಪಕ್ಷದಲ್ಲಿ ಒಂದು ವರ್ಷಕಾಲ ದೇವಿಯನ್ನು ವಿಧಿಯಿಂದಾರಾಧಿಸಿ ಫಲತೃತೀಯಾವ್ರತವನ್ನು ಆಚರಿಸಿ ಬ್ರಾಹ್ಮಣರಿಗೆ ಫಲಗಳನ್ನು ದಾನಮಾಡಬೇಕು.

೪-೬. ಸುಂದರಿ ! ನಾರಿಯು ಈ ಗೌರೀವ್ರತವನ್ನಾಚರಿಸುವಷ್ಟುಕಾಲ ರಾತ್ರಿ ಅನ್ನವನ್ನೂ, ಅವರೆ, ತೊಗರಿ, ಹೆಸರು, ಉದ್ದು, ಹುರುಳಿ, ಕಡಲೆ, ಅಲಸಂದೀ,

ಮಸೂರಾ ರಾಜಮಾಷಾಶ್ಚ ಗೋಧೂಮಾಸ್ತ್ರಿಪುಟಾಸ್ತಥಾ ।
ಚಣಕಾ ವರ್ತಲಾ ವಾಪಿ ಮಕುಷ್ಠಾಶ್ಚೈವಮಾದಯಃ ॥ ೫ ॥

ನ ಭಕ್ಷ್ಯಾಸ್ತಾವತ್ತೇ ದೇವಿ ಯಾವದ್ಗೌರೀವ್ರತಂ ಚರೇತ್ ।
ತಸ್ಯಾಃ ಪುಣ್ಯಫಲಂ ವಕ್ಷ್ಯೇ ಕಥ್ಯಮಾನಂ ಶೃಣುಷ್ವಮೇ ॥ ೬ ॥

ಧನಂ ಧಾನ್ಯಂ ಗೃಹೇ ತಸ್ಯಾ ನ ಕದಾಚಿತ್ಕ್ಷಯಂ ವ್ರಜೇತ್ ।
ದುಃಖಿತಾ ದುರ್ಭಗಾ ದೀನಾ ಸಪ್ತ ಜನ್ಮಾನಿ ನೋ ಭವೇತ್ ॥ ೭ ॥

ಮಹಾಕಾಲೀವ್ರತಂ ಪ್ರೋಕ್ತಂ ದೇವ್ಯಾ ಮಾಹಾತ್ಮ್ಯಸಂಯುತಂ ।
ಕೃತಂ ಪಾತಕನಾಶಾಯ ಸರ್ವಕಾಮಸಮೃದ್ಧಯೇ ॥ ೮ ॥

ಏವಂ ದೇವಿ ಸಮಾಖ್ಯಾತಂ ಮಹಾಕಾಲೀಮಹೋದಯಂ ।
ಕ್ಷೇತ್ರಪೀಠಂ ಮಹಾದೇವಿ ಮಂತ್ರಸಿದ್ಧಿಪ್ರದಾಯಕಂ ॥ ೯ ॥

ಗೋಧಿ, ಸಣ್ಣಯಾಲಕ್ಕಿ, ಕಡಲೆ, ವರ್ತಲ, ಕಾಡು ಹೆಸರು ಮೊದಲಾದ ಧಾನ್ಯಗಳನ್ನೂ ತಿನ್ನಬಾರದು. ಈ ವ್ರತವನ್ನಾಚರಿಸುವವಳಿಗುಂಟಾಗುವ ಫಲವನ್ನು ಹೇಳುವೆನು ಕೇಳು.

೭. ಅವಳ ಮನೆಯಲ್ಲಿ ಒಂದುಸಾರಿಯೂ ಧನ, ಧಾನ್ಯಗಳು ನಾಶವಾಗುವುದಿಲ್ಲ. ಏಳು ಜನ್ಮಗಳಲ್ಲಿ ಅವಳು ದುಃಖಗೊಂಡವಳೂ, ದೌರ್ಭಾಗ್ಯವುಳ್ಳವಳೂ, ದೀನಳೂ ಆಗುವುದಿಲ್ಲ.

೮. ದೇವಿಯ ಮಾಹಾತ್ಮ್ಯದಿಂದ ಕೂಡಿದ ಮಹಾಕಾಲೀವ್ರತವನ್ನು ನಿನಗೆ ಹೇಳಿರುವೆನು. ಇದನ್ನು ಮಾಡಿದರೆ ಪಾತಕಗಳು ನಾಶವಾಗಿ ಸಕಲೇಷ್ಟಾರ್ಥಗಳು ಸಿದ್ಧಿಸುವುವು.

೯. ದೇವಿ! ಹೀಗೆ ಮಹಾಕಾಳಿಯ ಮಾಹಾತ್ಮ್ಯವನ್ನೂ, ಮಂತ್ರಸಿದ್ಧಿಯನ್ನೀಯುವ ಕ್ಷೇತ್ರಪೀಠವನ್ನೂ ನಿನಗೆ ಹೇಳಿರುವೆನು.

ಆಶ್ವಯುಕ್ಛುಕ್ಲಪಕ್ಷೇ ತು ನವಮ್ಯಾಂ ತತ್ರ ಜಾಗೃಯಾತ್ ।
ಪೀಠೇ ಪೂಜಾಬಲಿಂ ದತ್ವಾ ಮಂತ್ರಂ ಕಾಮ ಜಪನ್ನಿಶಿ ।
ಸೌಮ್ಯಚಿತ್ತಃ ಸಮಾಪ್ನೋತಿ ವಾಂಛಿತಾಂ ಸಿದ್ಧಿಮುತ್ತಮಾಂ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಹಾಕಾಲೀಮಾಹಾತ್ಮ್ಯವರ್ಣನಂ ನಾಮ
॥ ತ್ರಯಸ್ತ್ರಿಂಶದುತ್ತರಶತತಮೋಽಧ್ಯಾಯಃ ॥

---

೧೦. ಆಶ್ವಿನ ಶುಕ್ಲಪಕ್ಷ ನವಮಿದಿನ ಅಲ್ಲಿ ರಾತ್ರಿ ಜಾಗರಣೆಮಾಡಿ ಪೀಠದಲ್ಲಿ ಬಲಿಯನ್ನಿತ್ತು ಸೌಮ್ಯಮನಸ್ಸಿನಿಂದ ಯಥೇಚ್ಛವಾಗಿ ಮಂತ್ರವನ್ನು ಜಪಿಸಿದವನು ಇಷ್ಟಸಿದ್ಧಿಯನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಮಹಾಕಾಳೀಮಾಹಾತ್ಮ್ಯವರ್ಣನವೆಂಬ
ನೂರಮೂವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಸ್ತ್ರಿಂಶದುತ್ತರಶತತಮೋಽಧ್ಯಾಯಃ

ಪುಷ್ಕರಾವರ್ತಕಾನದೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುಷ್ಕರಾವರ್ತಕಾಂ ನದೀಂ ।
ಬ್ರಹ್ಮಕುಂಡಾದುತ್ತರತೋ ನಾತಿದೂರೇ ವ್ಯವಸ್ಥಿತಾಂ ॥ ೧ ॥

ಪುರಾ ಯಜ್ಞೇ ವರ್ತಮಾನೇ ಸೋಮಸ್ಯ ತು ಮಹಾತ್ಮನಃ ।
ಬ್ರಹ್ಮಾ ಸುರಗಣೈಃ ಸಾರ್ಧಂ ಪ್ರಭಾಸಂ ಕ್ಷೇತ್ರಮಾಗತಃ ॥ ೨ ॥

ಸೋಮನಾಥಪ್ರತಿಷ್ಠಾರ್ಥಮೃಕ್ಷರಾಜನಿಮಂತ್ರಿತಃ ।
ಪ್ರತಿಜ್ಞಾತಂ ಪುರಾ ತೇನ ಬ್ರಹ್ಮಣಾ ಲೋಕಕಾರಿಣಾ ॥ ೩ ॥

ಯಾವತ್ಸಾಸ್ಥಾಮ್ಯಹಂ ಮರ್ತ್ಯೇ ಕಸ್ಮಿಂಶ್ಚಿತ್ಕಾರಣಾಂತರೇ ।
ತಾವತ್ಸಂಧ್ಯಾತ್ರಯಂ ವಂದ್ಯಂ ನಿತ್ಯಮೇವ ತ್ರಿಪುಷ್ಕರೇ ॥ ೪ ॥

ಕನ್ನಡದ ಅನುವಾದ

ಪುಷ್ಕರಾವರ್ತಕಾನದೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಬ್ರಹ್ಮಕುಂಡದ ಉತ್ತರದಲ್ಲಿ ಸಮೀಪದಲ್ಲಿರುವ ಪುಷ್ಕರಾವರ್ತಕನದಿಯನ್ನು ಹೊಂದಬೇಕು.

೨-೪. ಹಿಂದೆ ಚಂದ್ರನ ಯಜ್ಞವು ನಡೆಯುತ್ತಿರಲು ಸೋಮನಾಥನ ಪ್ರತಿಷ್ಠೆಗಾಗಿ ಚಂದ್ರನಿಂದ ಕರೆಯಿಸಲ್ಪಟ್ಟ ಬ್ರಹ್ಮನು ದೇವತೆಗಳೊಡನೆ ಪ್ರಭಾಸಕ್ಷೇತ್ರಕ್ಕೆ ಬಂದನು. ಹಿಂದೆ ಆ ಲೋಕವನ್ನು ಸೃಷ್ಟಿಸುವ ಬ್ರಹ್ಮನು "ನಾನು ಯಾವುದಾದರೊಂದುಕೆಲಸಕ್ಕಾಗಿ ಭೂಲೋಕದಲ್ಲಿರುವುದಾದರೆ ಅಲ್ಲಿರುವಷ್ಟುಕಾಲ ಮೂರು ಸಂಧ್ಯಾಕಾಲದಲ್ಲಿ ನಿತ್ಯವೂ ಪುಷ್ಕರಕ್ಷೇತ್ರದಲ್ಲಿ ಸಂಧ್ಯಾವಂದನೆ ಮಾಡುವೆನು" ಎಂದು ಪ್ರತಿಜ್ಞೆ ಮಾಡಿರುವನು.

ಏತಸ್ಮಿನ್ನೇವ ಕಾಲೇ ತು ಲಗ್ನಕಾಲ ಉಪಸ್ಥಿತೇ ।
ಆದಿಷ್ಟಂ ಶೋಭನಂ ಕಾಲಂ ಬ್ರಾಹ್ಮಣೈರ್ದೈವಚಿಂತಕೈಃ ॥ ೫ ॥
ತತಸ್ತಂ ಪ್ರಸ್ಥಿತಂ ಜ್ಞಾತ್ವಾ ಪುಷ್ಕರೇ ತು ಪಿತಾಮಹಂ ।
ಸಂಧ್ಯಾರ್ಥಂ ರಾತ್ರಿನಾಥೋ ವೈ ವಾಕ್ಯಮೇತದುವಾಚ ಹ ॥ ೬ ॥
ದೈವಜ್ಞೈಃ ಕಲಿತಂ ಕಾಲ ಏಷ ಏವ ಶುಭೋದಯಃ ।
ಯಥಾ ಕಾಲಾತ್ಯಯೋ ನ ಸ್ಯಾತ್ತಥಾ ನೀತಿರ್ವಿಧೀಯತಾಂ ॥ ೭ ॥
ತಂ ಜ್ಞಾತ್ವಾ ಸಾಂಪ್ರತಂ ಕಾಲಂ ಬ್ರಹ್ಮಾ ಲೋಕಪಿತಾಮಹಃ ।
ಮನಸಾ ಚಿಂತಯಾಮಾಸ ಪುಷ್ಕರಾಣಿ ಸಮಾಹಿತಃ ॥ ೮ ॥
ತಾನಿ ವೈ ಸ್ಮೃತಮಾತ್ರಾಣಿ ಬ್ರಹ್ಮಣಾ ವರವರ್ಣಿನಿ ।
ಪ್ರಾದುರ್ಭೂತಾನಿ ತತ್ರೈವ ನದ್ಯಾಸ್ತೀರೇ ಸುಶೋಭನೇ ॥ ೯ ॥
ಆವರ್ತಾಸ್ತತ್ರ ಸಂಜಾತಾ ಜ್ಯೇಷ್ಠಮಧ್ಯಕನೀಯಸಃ ।
ಅಥ ನಾಮಾಕರೋತ್ತಸ್ಯಾ ಬ್ರಹ್ಮಾ ಲೋಕಪಿತಾಮಹಃ ॥ ೧೦ ॥
ಪುಷ್ಕರಾವರ್ತಕಾ ನಾಮ್ನಾ ಅದ್ಯಪ್ರಭೃತಿ ಶೋಭನಾ ।
ನದೀ ಪ್ರಯಾಸ್ಯತೇ ಲೋಕೇ ಖ್ಯಾತಿಂ ಮಮ ಪ್ರಸಾದತಃ ॥ ೧೧ ॥

೫–೬. ಇಷ್ಟರಲ್ಲಿ ಜ್ಯೋತಿಷ್ಕರಾದ ಬ್ರಾಹ್ಮಣರು ಹೇಳಿರುವ ಪ್ರತಿಷ್ಠಾ ಲಗ್ನಕಾಲವೊದಗಲು ಚಂದ್ರನು ಪುಷ್ಕರಕ್ಷೇತ್ರಕ್ಕೆ ಸಂಧ್ಯಾವಂದನೆಗಾಗಿ ಹೊರಟ ಬ್ರಹ್ಮನನ್ನು ನೋಡಿ ಇಂತೆಂದನು.

೭. " ಜೋಯಿಸರು ಇದು ಪ್ರತಿಷ್ಠೆಗೆ ಶುಭವಾದ ಕಾಲವೆಂದು ಹೇಳುವರು. ಈ ಲಗ್ನವು ಮೀರದಂತೆ ನೀನು ನ್ಯಾಯವನ್ನನುಸರಿಸಿ ಕಾರ್ಯತತ್ಪರನಾಗು."

೮. ಪಿತಾಮಹನು ಆ ಕಾಲವು ಯುಕ್ತವಾದುದೆಂದರಿತು ಮನಸ್ಸಿನಿಂದ ಪುಷ್ಕರಗಳನ್ನು ಸ್ಮರಿಸಿದನು.

೯. ಪ್ರಿಯಳೆ! ಸ್ಮರಿಸಿದಕೂಡಲೆ ಆ ಪುಷ್ಕರಗಳು ಮಂಗಳಕರವಾದ ನದಿಯ ದಡದಲ್ಲಿ ಆವಿರ್ಭವಿಸಿದುವು.

೧೦–೧೧. ಅದರಿಂದ ಅಲ್ಲಿ ದೊಡ್ಡವೂ, ಮಾಸಾನ್ಯವೂ, ಚಿಕ್ಕದೂ ಆದ ಸುಳಿಗಳುಂಟಾದುವು. ಬಳಿಕ ಲೋಕಪಿತಾಮಹನಾದ ಬ್ರಹ್ಮನು " ನನ್ನ ಅನುಗ್ರಹದಿಂದ ಮಂಗಳಕರವಾದ ಈ ನದಿಯು ಇದು ಮೊದಲ್ಗೊಂಡು ಪುಷ್ಕರಾವರ್ತಕವೆಂದು ಲೋಕದಲ್ಲಿ ಪ್ರಸಿದ್ಧವಾಗುವುದು " ಎಂದು ಆ ನದಿಗೆ ಹೆಸರನ್ನಿಟ್ಟನು.

ಅತ್ರ ಸ್ನಾತ್ವಾ ನರೋ ಭಕ್ತ್ಯಾ ತರ್ಪಯಿಷ್ಯತಿ ಯಃ ಪಿತೄನ್ ।
ತ್ರಿಪುಷ್ಕರಸಮಂ ಪುಣ್ಯಂ ಲಪ್ಸ್ಯಸೇ ಸ ತಥೇಪ್ಸಿತಂ ॥ ೧೨॥
ಶ್ರಾವಣೇ ಶುಕ್ಲಪಕ್ಷಸ್ಯ ತೃತೀಯಾಯಾ ನರೋತ್ತಮಃ ।
ಯಃ ಪಿತ್ರ್ಯಾಂಸ್ತರ್ಪಯೇತ್ತತ್ರ ತೃಪ್ತಿಃ ಕಲ್ಪಾಯುತಂ ಭವೇತ್ ॥ ೧೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಷ್ಕರಾವರ್ತಕಾನದೀಮಾಹಾತ್ಮ್ಯವರ್ಣನಂ ನಾಮ
॥ ಚತುಸ್ತ್ರಿಂಶದುತ್ತರಶತತಮೋಽಧ್ಯಾಯಃ ॥

---

೧೨. ಮನುಷ್ಯನು ಭಕ್ತಿಯಿಂದ ಇಲ್ಲಿ ಮಿಂದು ಪಿತೃಗಳಿಗೆ ತರ್ಪಣಗೈದರೆ ತ್ರಿಪುಷ್ಕರಕ್ಕೆ ಸಮವಾದ ಪುಣ್ಯವು ಲಭಿಸುವುದು.

೧೩. ಮಾನವನು ಶ್ರಾವಣಮಾಸದ ಶುಕ್ಲಪಕ್ಷದ ತದಿಗೆಯದಿನ ಇಲ್ಲಿ ಪಿತರ್ಪಣ್ಣೃತ ಮಾಡಿದರೆ ಆ ಪಿತೃಗಳು ಹತ್ತು ಸಾವಿರ ಕಲ್ಪಗಳವರೆಗೆ ತೃಪ್ತಿಗೊಳ್ಳುವರು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪುಷ್ಕರಾವರ್ತಕಾನದೀಮಾಹಾತ್ಮ್ಯವರ್ಣನವೆಂಬ
ನೂರಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚತ್ರಿಂಶದುತ್ತರಶತತಮೋಽಧ್ಯಾಯಃ

ದುಃಖಾಂತಕಾರಿಣೀಶೀತಲಾಗೌರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಾಂ ಪಶ್ಯೇದ್ದೇವೀಂ ದುಃಖಾಂತಕಾರಿಣೀಂ ।
ಶೀತಲೇತಿ ಪುರಾ ಖ್ಯಾತಂ ಯುಗೇ ದ್ವಾಪರ ಸಂಜ್ಞಿತೇ ।
ಕಲೌ ಪುನಃ ಸಮಾಖ್ಯಾತಂ ಕಲಿದುಃಖಾಂತಕಾರಿಣೀಂ ॥ ೧ ॥
ಶೀತಲಂ ಕುರುತೇ ದೇಹಂ ಬಾಲಾನಾಂ ರೋಗವರ್ಜಿತಂ ।
ಪೂಜಿತಾ ಭಕ್ತಿಭಾವೇನ ತೇನ ಸಾ ಶೀತಲಾ ಸ್ಮೃತಾ ॥ ೨ ॥
ವಿಸ್ಫೋಟಾನಾಂ ಪ್ರಶಾಂತ್ಯರ್ಥಂ ಬಾಲಾನಾಂ ಚೈವ ಕಾರಣಾತ್ ।
ಮಾನೇನ ಮಾಪಿತಾನ್ಕೃತ್ವಾ ಮಸೂರಾಂಸ್ತತ್ರ ಕುಟ್ಟಯೇತ್ ॥ ೩ ॥
ಶೀತಲಾಪುರತೋ ದತ್ವಾ ಬಾಲಾಃ ಸಂತು ನಿರಾಮಯಾಃ ।
ವಿಸ್ಫೋಟಚರ್ಚಿಕಾದೀನಾಂ ವಾತಾದೀನಾಂ ಶಮೋ ಭವೇತ್ ॥ ೪ ॥
ಶ್ರಾದ್ಧಂ ತತ್ರೈವ ಕುರ್ವೀತ ಬ್ರಾಹ್ಮಣಾಂಸ್ತತ್ರ ಭೋಜಯೇತ್ ॥ ೫ ॥

ಕನ್ನಡದ ಅನುವಾದ

ದುಃಖಾಂತಕಾರಿಣೀಶೀತಲಾಗೌರೀಮಾಹಾತ್ಮ್ಯವರ್ಣನ

ಈಶ್ವರನು ಹೇಳುತ್ತಾನೆ :—ಬಳಿಕ ಅಲ್ಲಿಯೇ ಇರುವ ದ್ವಾಪರಯುಗದಲ್ಲಿ ಶೀತಳೆಯೆಂದೂ, ಕಲಿಯುಗದಲ್ಲಿ ದುಃಖಾಂತಕಾರಿಣಿಯೆಂದೂ ವಿಖ್ಯಾತಳಾದ ದುಃಖಾಂತಕಾರಿಣೀಗೌರಿಯನ್ನು ಹೊಂದಬೇಕು.

೨. ಅವಳು ಭಕ್ತಿಯಿಂದ ಪೂಜಿಸಿದಬಾಲಕರ ರೋಗವನ್ನು ಪರಿಹರಿಸಿ ರೋಗವನ್ನು ಪರಿಹರಿಸಿ ದೇಹವನ್ನು ತಣ್ಣಗೆ ಮಾಡುವುದರಿಂದ ಶೀತಳೆಯೆಂದು ಪ್ರಸಿದ್ಧಳಾದಳು.

೩–೪. ಬಾಲಕರ ಸಿಡುಬಿನ ನಿವಾರಣೆಗಾಗಿ ಕಾಡುಕಡಲೆಗಳನ್ನು ಆ ದೇವಿಯ ಮುಂದೆ ಕುಟ್ಟಿ ಸಮರ್ಪಿಸಿದರೆ ಬಾಲಕರು ವಿಸ್ಫೋಟ ಮೊದಲಾದ ರೋಗ ವಿಲ್ಲದವರಾಗುವರು.

೫. ಅಲ್ಲಿ ಶ್ರಾದ್ಧವನ್ನು ಮಾಡಿ ಬ್ರಾಹ್ಮಣರನ್ನು ಭೋಜನಮಾಡಿಸಬೇಕು.

ಕರ್ಪೂರಂ ಕುಸುಮಂ ಚೈವ ಮೃಗನಾಭಿಂ ಸುಚಂದನಂ ।
ಪುಷ್ಪಾಣಿ ಚ ಸುಗಂಧಾನಿ ನೈವೇದ್ಯಂ ಘೃತಪಾಯಸಂ ॥
ನಿವೇದ್ಯ ದೇವ್ಯೈ ತತ್ಸರ್ವಂ ದಂಪತ್ಯೋಃ ಪರಿಧಾಪಯೇತ್ ॥ ೬ ॥
ನವಮ್ಯಾಂ ಶುಕ್ಲಪಕ್ಷೇ ತು ಮಾಲಾಂ ಬಿಲ್ವಮಯೀಂ ಶುಭಾಂ ।
ಭಕ್ತ್ಯಾ ನಿವೇದ್ಯ ತಾಂ ದೇವ್ಯೈ ಸರ್ವಸಿದ್ಧಿಮವಾಪ್ನುಯಾತ್ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದುಃಖಾಂತಕಾರಿಣೀ ಶೀತಲಾಗೌರೀಮಾಹಾತ್ಮ್ಯವರ್ಣನಂ ನಾಮ
॥ ಪಂಚತ್ರಿಂಶದುತ್ತರಶತತಮೋಽಧ್ಯಾಯಃ ॥

---

೬. ದೇವಿಗೆ ಕರ್ಪೂರ, ಫಲ ಕಸ್ತೂರಿ, ಗಂಧ, ಸುವಾಸನೆಯಾದ ಹೂವುಗಳು, ತುಪ್ಪ, ಪಾಯಸ, ಇವುಗಳನ್ನು ಸಮರ್ಪಿಸಿ ಅವುಗಳನ್ನೆಲ್ಲ ದಂಪತಿಗಳಿಗೆ ಕೊಡುಬೇಕು.

೭. ಶುಕ್ಲಪಕ್ಷದ ನವಮಿಾದಿನ ಭಕ್ತಿಯಿಂದ ದೇವಿಗೆ ಬಿಲ್ವಪತ್ರಿಯಮಾಲೆಯನ್ನು ಸಮರ್ಪಿಸಿದವನು ಸಕಲೇಷ್ಟಾರ್ಥಗಳನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದುಃಖಾಂತಕಾರಿಣೀಶೀತಲಾಗೌರೀಮಾಹಾತ್ಮ್ಯವರ್ಣನವೆಂಬ
ನೂರಮೂವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶದುತ್ತರಶತತಮೋಽಧ್ಯಾಯಃ

ಲೋಮಶೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲೋಮಶೇಶ್ವರಮುತ್ತಮಂ ।
ದುಃಖಾಂತಕಾರಿಣೀಪೂರ್ವೇ ಧನುಷಾಂ ಸಪ್ತಕೇ ಸ್ಥಿತಂ ॥ ೧ ॥
ಸ್ಥಾಪಿತಂ ತತ್ರ ದೇವೇಶಿ ಲೋಮಶೇನ ಮಹರ್ಷಿಣಾ ।
ಗುಹಾಮಧ್ಯೇ ಮಹಾಲಿಂಗಂ ತಪಃ ಕೃತ್ವಾ ಸುದಶ್ಚರಂ ॥ ೨ ॥
ಕೋಟೀನಾಂ ತ್ರಿತಯಂ ಸಾರ್ಧಮಿಂದ್ರಾದ್ಯಾಃ ಸ್ವರ್ಭುಜಃ ಪ್ರಿಯೇ ।
ಯದಾ ನಾಶಂ ಗಮಿಷ್ಯಂತಿ ತದಾ ತಸ್ಯ ಕ್ಷಯೋ ಧ್ರುವಂ ॥ ೩ ॥
ಯಾವಂತಿ ದೇಹರೋಮಾಣಿ ಇಂದ್ರಾಸ್ತಾವಂತ ಏವ ಚ ।
ಕ್ರಮಾದಿಂದ್ರೇ ವಿನಷ್ಟೇ ತು ತಲ್ಲೋಮಪತನಂ ಭವೇತ್ ॥ ೪ ॥
ಏವಮೀಶಪ್ರಸಾದೇನ ಚಿರಾಯುರ್ಲೋಮಶೋಽಭವತ್ ।
ಬ್ರಹ್ಮಾಣಃ ಷಡ್ವಿನಶ್ಯಂತಿ ಸಮಗ್ರಾಯುಷಿ ಲೋಮಶೇ ॥ ೫ ॥

ಕನ್ನಡದ ಅನುವಾದ

ಲೋಮಶೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ದುಃಖಾಂತಕಾರಿಣಿಯ ಪೂರ್ವದಲ್ಲಿ ಏಳು ಬಿಲ್ಲುಗಳ ದೂರದಲ್ಲಿರುವ ಲೋಮಶೇಶ್ವರನಲ್ಲಿಗೆ ಹೋಗಬೇಕು.

೨. ಅಲ್ಲಿ ಲೋಮಶ ಮಹರ್ಷಿಯು ಗುಹೆಯ ನಡುವೆ ಘೋರತಪಸ್ಸನ್ನಾಚರಿಸಿ ಈ ಮಹಾಲಿಂಗವನ್ನು ಸ್ಥಾಪಿಸಿರುವನು.

೩. ಮೂರು ಕೋಟಿ ಮಂದಿ ಇಂದ್ರಾದಿ ದೇವತೆಗಳು ನಾಶವಾದಾಗ ಆ ಲೋಮಶೇಷಶನು ನಾಶವಾಗುವನು.

೪. ದೇಹದಲ್ಲಿ ರೋಮಗಳಿರುವಷ್ಟು ಇಂದ್ರರಿರುವರು. ಅವರು ಕ್ರಮವಾಗಿ ಒಬ್ಬೊಬ್ಬ ಇಂದ್ರನು. ನಾಶವಾಗುವಾಗ ಆತನ ಒಂದೊಂದು ರೋಮವು ಉದುರುತ್ತದೆ.

೫. ಹೀಗೆ ಈಶ್ವರನ ಅನುಗ್ರಹದಿಂದ ಲೋಮಶನು ಚಿರಂಜೀವಿಯಾದನು. ಲೋಮಶನ ಆಯುಃ ಪ್ರಮಾಣದಲ್ಲಿ ಆರು ಮಂದಿ ಬ್ರಹ್ಮರು ನಾಶವಾಗುವರು.

ಯ ಏವಂ ಪೂಜಯೇದ್ಭಕ್ತ್ಯಾ ತಲ್ಲಿಂಗಂ ಲೋಮಶಾರ್ಚಿತಂ ।
ಸೋಽಪಿ ದೀರ್ಘಾಯುರಾಪ್ನೋತಿ ನಿರ್ವ್ಯಾಧಿರ್ನೀರುಜಃ ಸುಖೀ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲೋಮಶೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಟ್ತ್ರಿಂಶದುತ್ತರಶತತಮೋಽಧ್ಯಾಯಃ ॥

---

೬. ಇಂಥ ಲೋಮಶ ಮಹರ್ಷಿಯು ಪೂಜಿಸಿದ ಆ ಲಿಂಗವನ್ನು ಭಕ್ತಿಯಿಂದ ಪೂಜಿಸಿದವನು ವ್ಯಾಧಿಗಳಿಲ್ಲದೆ ಸುಖವುಳ್ಳವನಾಗಿ ಚಿರಂಜೀವಿಯಾಗುವನು

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಲೋಮಶೇಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತತ್ರಿಂಶದುತ್ತರಶತತಮೋಽಧ್ಯಾಯಃ

ಕಂಕಾಲಭೈರವಕ್ಷೇತ್ರಪಾಲಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇತ್ ಕ್ಷೇತ್ರಪಾಲಮನುತ್ತಮಂ ।
ಕಂಕಾಲಭೈರವಂ ನಾಮ ಭೈರವೇಣ ನಿಯೋಜಿತಂ ॥ ೧ ॥
ತಸ್ಯ ಕ್ಷೇತ್ರಸ್ಯ ರಕ್ಷಾರ್ಥಂ ಪ್ರಾಣಿನಾಂ ದುಷ್ಟಚೇತಸಾಂ ।
ಶ್ರಾವಣೇ ಶುಕ್ಲಪಂಚಮ್ಯಾಮಷ್ಟಮ್ಯಾಮಾಶ್ವಿನಸ್ಯ ಚ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಬಲಿಪುಷ್ಪಾದಿಭಿಃ ಕ್ರಮಾತ್ ।
ತಸ್ಯ ಕ್ಷೇತ್ರೇ ನಿವಸತಃ ಪುಷ್ಕರಸ್ಯ ಮಹಾತ್ಮನಃ ॥ ೩ ॥
ನಿರ್ವಿಘ್ನಕಾರೀ ಭವತಿ ತಥಾ ರಕ್ಷತಿ ಪುತ್ರವತ್ ।

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಂಕಾಲಭೈರವಕ್ಷೇತ್ರಮಾಹಾತ್ಮ್ಯವರ್ಣನಂ ನಾಮ
॥ ಸಪ್ತತ್ರಿಂಶದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕಂಕಾಲಭೈರವಕ್ಷೇತ್ರಪಾಲಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ಆ ಕ್ಷೇತ್ರವನ್ನು ದುಷ್ಟಪ್ರಾಣಿಗಳಿಂದ ರಕ್ಷಿಸುವುದಕ್ಕಾಗಿ ಭೈರವನೆಂಬ ಕ್ಷೇತ್ರಪಾಲನನ್ನು ನೋಡಬೇಕು.

೨-೩. ಶ್ರಾವಣ ಶುಕ್ಲ ಪಂಚಮಿಯದಿನವೂ, ಆಶ್ವಿನ ಶುಕ್ಲಪಕ್ಷದ ಅಷ್ಟಮಿಯ ದಿನವೂ ಅವನನ್ನು ಭಕ್ತಿಯಿಂದ ಪೂಜಿಸುವ ಆ ಪುಷ್ಕರ ಕ್ಷೇತ್ರವಾಸಿಯನ್ನು ಕ್ಷೇತ್ರಪಾಲನು ವಿಘ್ನವನ್ನು ಪರಿಹರಿಸಿ ಮಗನಂತೆ ರಕ್ಷಿಸುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಂಕಾಲಭೈರವಕ್ಷೇತ್ರಮಾಹಾತ್ಮ್ಯವರ್ಣನವೆಂಬ
ನೂರಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಶ್ರೀಃ

ಅಷ್ಟತ್ರಿಂಶದುತ್ತರಶತತಮೋಽಧ್ಯಾಯಃ

ತೃಣಬಿಂದ್ವೀಶ್ವರಮಾಹಾತ್ಮ್ಯವರ್ಣನಮ್

ಈಶ್ವರ ಉವಾಚ :—

ತಸ್ಯೈವ ಪಶ್ಚಿಮೇ ಭಾಗೇ ಧನುಷಾಂ ಪಞ್ಚಕೇ ಸ್ಥಿತಂ ।
ತೃಣಬಿಂದ್ವೀಶ್ವರಂ ನಾಮ ತೀವ್ರಭಕ್ತ್ಯಾ ಪ್ರತಿಷ್ಠಿತಮ್ ॥ ೧ ॥
ಕೃತ್ವಾ ಮಹತ್ತಪೋ ದೇವಿ ತೃಣಬಿಂದುರ್ಮುನೀಶ್ವರಃ ।
ಮಾಸಿ ಮಾಸಿ ಕುಶಾಗ್ರೇಣ ಜಲಬಿಂದುಂ ನಿಪೀಯ ವೈ ॥ ೨ ॥
ಸಂವತ್ಸರಾಣ್ಯನೇಕಾನಿ ಏವಮಾರಾಧ್ಯ ಚೇಶ್ವರಂ ।
ಸಂಪ್ರಾಪ್ಯ ಪರಮಾಂ ಸಿದ್ಧಿಂ ಕ್ಷೇತ್ರೇ ಪ್ರಾಭಾಸಿಕೇ ಶುಭೇ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತೃಣಬಿಂದೀಶ್ವರಮಾಹಾತ್ಮ್ಯವರ್ಣನಂ ನಾಮ
ಅಷ್ಟತ್ರಿಂಶದುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ತೃಣಬಿಂದ್ವೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:— ದೇವಿ ! ಆ ಕ್ಷೇತ್ರಪಾಲನ ಪಶ್ಚಿಮದಲ್ಲಿ ಐದು ಬಿಲ್ಲುಗಳ ದೂರದಲ್ಲಿ ತೃಣಬಿಂದುವೆಂಬ ಮುನಿಯು ಅತಿಶಯ ಭಕ್ತಿಯಿಂದ ಪ್ರತಿಷ್ಠೆಮಾಡಿರುವ ತೃಣಬಿಂದ್ವೀಶ್ವರನೆಂಬ ಲಿಂಗವಿರುವುದು.

೨-೩. ತೃಣಬಿಂದು ಮುನಿಯು ಆ ಶುಭ ಪ್ರಾಭಾಸಿಕ ಕ್ಷೇತ್ರದಲ್ಲಿ ಪ್ರತಿ ತಿಂಗಳೂ ದರ್ಭೆಯ ಕೊನೆಯಿಂದ ನೀರಿನ ಹನಿಗಳನ್ನು ಕುಡಿದು ಘೋರ ತಪಸ್ಸನ್ನಾಚರಿಸಿ ಅನೇಕ ವರ್ಷಕಾಲ ಶಂಕರನನ್ನಾರಾಧಿಸಿ ಉತ್ತಮ ಸಿದ್ಧಿಯನ್ನು ಪಡೆದಿರುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತೃಣಬಿಂದ್ವೀಶ್ವರಮಾಹಾತ್ಮ್ಯವರ್ಣನವೆಂಬ
ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನತ್ರಿಂಶದುತ್ತರಶತತಮೋಽಧ್ಯಾಯಃ

ಚಿತ್ರಾದಿತ್ಯಮಾಹಾತ್ಮ್ಯವರ್ಣನಂ

ತತೋ ಗಚ್ಛೇನ್ಮಹಾದೇವಿ ಚಿತ್ರಾದಿತ್ಯಮನುತ್ತಮಮ್ ।
ತಸ್ಯೈವ ದಕ್ಷಿಣೇ ಭಾಗೇ ಬ್ರಹ್ಮಕುಣ್ಡಸಮೀಪತಃ ॥ ೧ ॥
ಮಹಾಪ್ರಭಾವೋ ದೇವೇಶಿ ಸರ್ವದಾರಿದ್ರ್ಯನಾಶನಃ ।
ಮಿತ್ರೋ ನಾಮ ಪುರಾ ದೇವಿ ಧರ್ಮಾತ್ಮಾಽಭೂದ್ಧರಾತಲೇ ॥ ೨ ॥
ಕಾಯಸ್ಥಃ ಸರ್ವಭೂತಾನಾಂ ನಿತ್ಯಂ ಭೂತಹಿತೇ ರತಃ ।
ತಸ್ಯಾಪತ್ಯದ್ವಯಂ ಭುಞ್ಜ್ಞಾತೇ ಋತುಕಾಲಾಭಿಗಾಮಿನಃ ॥ ೩ ॥
ಪುತ್ರಃ ಪರಮತೇಜಸ್ವೀ ಚಿತ್ರೋ ನಾಮ ವರಾನನೇ ।
ತಥಾ ಚಿತ್ರಾಽಭವತ್ಕನ್ಯಾ ರೂಪಾಢ್ಯಾ ಶೀಲಮಣ್ಡನಾ ॥ ೪ ॥
ಆಭ್ಯಾಂ ತು ಜಾತಮಾತ್ರಾಭ್ಯಾಂ ಮಿತ್ರಃ ಪಞ್ಚತ್ವಮೇಯಿವಾನ್ ।
ಅಥ ತಸ್ಯ ವರಾ ಭಾರ್ಯಾ ಸಹ ತೇನಾಗ್ನಿಮಾವಿಶತ್ ॥ ೫ ॥

ಕನ್ನಡದ ಅನುವಾದ

ಚಿತ್ರಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ತೃಣಬಿಂದ್ವೀಶ್ವರನ ದಕ್ಷಿಣಭಾಗದಲ್ಲಿ ಬ್ರಹ್ಮಕುಂಡದ ಹತ್ತಿರದಲ್ಲಿರುವ ಚಿತ್ರಾದಿತ್ಯನೆಡೆಗೆ ಹೋಗಬೇಕು.

೨. ದೇವೇಶಿ ! ಹಿಂದೆ ಭೂಮಿಯಲ್ಲಿ ಸಕಲ ದಾರಿದ್ರ್ಯವನ್ನು ಪರಿಹರಿಸುವವನೂ ಅತಿಶಯಮಾಹಾತ್ಮ್ಯವುಳ್ಳವನೂ, ಸಕಲ ಪ್ರಾಣಿಗಳ ಹಿತದಲ್ಲಿ ನಿರತನೂ ಆದ ಮಿತ್ರನೆಂಬ ಬಡಗಿಯೊಬ್ಬನಿದ್ದನು.

೩–೪. ಋತುಕಾಲದಲ್ಲಿ ಸತಿಯನ್ನು ಸೇರುತ್ತಿದ್ದ ಅವನಿಗೆ ಚಿತ್ರನೆಂಬ ಅತ್ಯಂತ ತೇಜಸ್ವಿಯಾದ ಪುತ್ರನೂ, ಸುಂದರಿಯೂ, ಶೀಲಸಂಪನ್ನೆಯೂ ಆದ ಚಿತ್ರೆಯೆಂಬ ಕನ್ಯೆಯೂ ಹುಟ್ಟಿದರು.

೫. ಈ ಮಕ್ಕಳು ಹುಟ್ಟಿದಕೂಡಲೆ ಮಿತ್ರನು ಮಡಿದನು. ತರುವಾಯ ಉತ್ತಮಳಾದ ಆತನ ಪತ್ನಿಯೂ ಪತಿಯೊಡನೆ ಅಗ್ನಿಯನ್ನು ಪ್ರವೇಶಮಾಡಿದಳು.

ಅಥ ತೌ ಬಾಲಕೌ ದೀನಾವೃಷಿಭಿಃ ಪರಿಪಾಲಿತೌ ।
ವೃದ್ಧಿಂಗತೌ ಮಹಾರಣ್ಯೇ ಬಾಲಾವೇಶಸ್ಥಿತೌ ವ್ರತೇ ॥ ೬ ॥
ಪ್ರಭಾಸಂ ಕ್ಷೇತ್ರಮಾಸಾದ್ಯ ತಪಃ ಪರಮಮಾಸ್ಥಿತೌ ।
ಪ್ರತಿಷ್ಠಾಪ್ಯ ಮಹಾದೇವಂ ಭಾಸ್ಕರಂ ವಾರಿತಸ್ಕರಮ್ ॥ ೭ ॥
ಪೂಜಯಾಮಾಸ ಧರ್ಮಾತ್ಮಾ ಧೂಪಮಾಲ್ಯಾನುಲೇಪನೈಃ ।
ವಸಿಷ್ಠಕಥಿತೈಶ್ಚೈವ ಹ್ಯಷ್ಟಷಷ್ಠಿಸಮನ್ವಿತೈಃ ।
ನಾಮಭಿಃ ಸೂರ್ಯದೇವೇಶಂ ತುಷ್ಟಾವ ಪ್ರಾಞ್ಜಲಿಃ ಪ್ರಭುಮ್ ॥ ೮ ॥

ಚಿತ್ರ ಉವಾಚ :—

ಪ್ರಣಮ್ಯ ಶಿರಸಾ ದೇವಂ ಭಾಸ್ಕರಂ ಗಗನಾಧಿಪಂ ।
ಆದಿದೇವಂ ಜಗನ್ನಾಥಂ ಪಾಪಘ್ನಂ ರೋಗನಾಶನಂ ॥ ೯ ॥
ಸಹಸ್ರಾಕ್ಷಂ ಸಹಸ್ರಾಂಶುಂ ಸಹಸ್ರಕಿರಣದ್ಯುತಿಂ ॥ ೧೦ ॥
ತಮಹಂ ಸಂಸ್ತವಿಷ್ಯಾಮಿ ಸಂತೃಪ್ತಂ ಗುಹ್ಯನಾಮಭಿಃ ।
ಮುಂಡೀರಸ್ವಾಮಿನಂ ಪ್ರಾತರ್ಗಂಗಾಸಾಗರಸಂಗಮೇ ।
ಕಾಲಪ್ರಿಯಂ ತು ಮಧ್ಯಾಹ್ನೇ ಯಮುನಾತೀರಮಾಶ್ರಿತಂ ॥ ೧೧ ॥
ಮೂಲಸ್ಥಾನಂ ಚಾಸ್ತಮನೇ ಚಂದ್ರಭಾಗಾತಟೇ ಸ್ಥಿತಂ ।
ಯತ್ರ ಸಾಂಬಃ ಸ್ವಯಂ ಸಿದ್ಧ ಉಪವಾಸಪರಾಯಣಃ ॥ ೧೨ ॥

---

೬. ಅನಂತರ ದೀನರಾದ ಆ ಬಾಲಕರನ್ನು ಋಷಿಗಳು ಕಾಪಾಡುತ್ತಿರಲು ಅವರು ಕಾಡಿನಲ್ಲಿ ಬೆಳೆಯುತ್ತ ಬಾಲ್ಯದಲ್ಲಿಯೇ ವ್ರತಾನುಷ್ಠಾನಮಾಡತೊಡಗಿದರು.

೭–೮. ಚಿತ್ರನು ಪ್ರಭಾಸಕ್ಷೇತ್ರವನ್ನು ಸೇರಿ ತಪಸ್ಸನ್ನು ಮಾಡುತ್ತ ಸೂರ್ಯನನ್ನು ಪ್ರತಿಷ್ಠೆಮಾಡಿ ಧೂಪ, ಮಾಲೆ, ಲೇಪನದ್ರವ್ಯಗಳಿಂದ ಅವನನ್ನು ಪೂಜಿಸಿದನು. ಅಲ್ಲದೆ ವಸಿಷ್ಠನು ಹೇಳಿದ ಅರುವತ್ತೆಂಟುನಾಮಗಳಿಂದ ಕೈಮುಗಿದುಕೊಂಡು ಸೂರ್ಯದೇವನನ್ನು ಸ್ತುತಿಸಿದನು.

೯–೩೦. ಚಿತ್ರನು ಹೇಳುತ್ತಾನೆ :—ಆಕಾಶದೊಡೆಯನೂ, ಆದಿದೇವನೂ, ಜಗನ್ನಾಯಕನೂ, ಪಾಪನಿವಾರಕನೂ, ರೋಗನಾಶಕನೂ, ಸಾವಿರ ಕಣ್ಣುಗಳುಳ್ಳವನೂ, ಸಹಸ್ರಕಿರಣನೂ ಆದ ಭಾಸ್ಕರನನ್ನು ತಲೆಬಾಗಿ ವಂದಿಸಿ ರಹಸ್ಯನಾಮಗಳಿಂದ ಸ್ತುತಿಸುವೆನು. ಬೆಳಗ್ಗೆ ಗಂಗಾಸಾಗರಗಳ ಸಂಮೇಳನ ಸ್ಥಳದಲ್ಲಿ ಮುಂಡೀರಸ್ವಾಮಿಯನ್ನೂ ಮಧ್ಯಾಹ್ನದಲ್ಲಿ ಯಮುನಾತೀರವನ್ನಾಶ್ರಯಿಸಿದ ಕಾಲಪ್ರಿಯನನ್ನೂ, ಅಸ್ತಮಯದಲ್ಲಿ ಸಾಂಬನು ಉಪವಾಸನಿರತನಾಗಿ ಸಿದ್ಧಿಯನ್ನು ಪಡೆದಿರುವ ಚಂದ್ರಭಾಗಾತಟದಲ್ಲಿರುವ ಮೂಲಸ್ಥಾನನನ್ನೂ, ಕಾಶಿಯಲ್ಲಿ ಲೋಹಿತಾಕ್ಷನನ್ನೂ,

ವಾರಾಣಸ್ಯಾಂ ಲೋಹಿತಾಕ್ಷಂ ಗೋಭಿಲಾಕ್ಷೇ ಬೃಹನ್ಮುಖಂ ।
ಪ್ರಯಾಗೇಷು ಪ್ರತಿಷ್ಠಾನಂ ವೃದ್ಧಾದಿತ್ಯಂ ಮಹಾದ್ಯುತಿಂ ॥ ೧೩ ॥
ಕೋಟ್ಯಕ್ಷೇ ದ್ವಾದಶಾದಿತ್ಯಂ ಗಂಗಾದಿತ್ಯಂ ಚತುರ್ಘಟೇ ।
ನೈಮಿಷೇ ಚೈವ ಗೋಷ್ಪ್ನೇ ಚ ಭದ್ರಂ ಭದ್ರಪುಟೇ ಸ್ಥಿತಂ ॥ ೧೪ ॥
ಜಯಾಯಾಂ ವಿಜಯಾದಿತ್ಯಂ ಪ್ರಭಾಸೇ ಸ್ವರ್ಣವೇತಸಂ ।
ಕುರುಕ್ಷೇತ್ರೇ ಚ ಸಾಮಂತಂ ತ್ರಿಮಂತ್ರಂ ಚ ಇಲಾವೃತೇ ॥ ೧೫ ॥
ಮಹೇಂದ್ರೇ ಕ್ರಮಣಾದಿತ್ಯಮೃಣೇ ಸಿದ್ಧೇಶ್ವರಂ ವಿದುಃ ।
ಕೌಶಾಂಬ್ಯಾಂ ಪದ್ಮಬೋಧಂ ಚ ಬ್ರಹ್ಮಬಾಹೌ ದಿವಾಕರಂ ॥ ೧೬ ॥
ಕೇದಾರೇ ಚಂಡಕಾಂತಿಂ ಚ ನಿತ್ಯೇ ಚ ತಿಮಿರಾಪಹಂ ।
ಗಂಗಾಮಾರ್ಗೇ ಶಿವದ್ವಾರಮಾದಿತ್ಯಂ ಭೂಪ್ರದೀಪನೇ ॥ ೧೭ ॥
ಹಂಸಂ ಸರಸ್ವತೀತೀರೇ ವಿಶ್ವಾಮಿತ್ರಂ ಪೃಥೂದಕೇ ।
ಉಜ್ಜಯಿನ್ಯಾಂ ನರದ್ವೀಪಂ ಸಿದ್ಧಾಯಾಮಮಲದ್ಯುತಿಂ ॥ ೧೮ ॥
ಸೂರ್ಯಂ ಕುಂತೀಕುಮಾರೇ ಚ ಪಂಚನದ್ಯಾಂ ವಿಭಾವಸುಂ ।
ಮಥುರಾಯಾಂ ವಿಮಲಾದಿತ್ಯಂ ಸಂಜ್ಞಾದಿತ್ಯಂ ತು ಸಂಜ್ಞಿಕೇ ॥ ೧೯ ॥

ಗೋಭಿಲಾಕ್ಷದಲ್ಲಿ ಬೃಹನ್ಮುಖನನ್ನೂ, ಪ್ರಯಾಗದಲ್ಲಿ ಅತಿಶಯಕಾಂತಿಯುಳ್ಳ ವೃದ್ಧಾದಿತ್ಯನನ್ನೂ, ಕೋಟ್ಯಕ್ಷದಲ್ಲಿ ದ್ವಾದಶಾದಿತ್ಯನನ್ನೂ, ಚತುರ್ಘಟದಲ್ಲಿ ಗಂಗಾದಿತ್ಯನನ್ನೂ, ನೈಮಿಷಗೋಷ್ಪಗಳಲ್ಲಿ ಭದ್ರನನ್ನೂ. ಜಯೆಯಲ್ಲಿ ವಿಜಯಾದಿತ್ಯನನ್ನೂ, ಪ್ರಭಾಸದಲ್ಲಿ ಸ್ವರ್ಣವೇತಸನನ್ನೂ, ಕುರುಕ್ಷೇತ್ರದಲ್ಲಿ ಸಾಮಂತನನ್ನೂ, ಇಳಾವೃತದಲ್ಲಿ ತ್ರಿಮಂತ್ರನನ್ನೂ, ಮಹೇಂದ್ರದಲ್ಲಿ ಕ್ರಮಣಾದಿತ್ಯನನ್ನೂ, ಋಣದಲ್ಲಿ ಸಿದ್ಧೇಶ್ವರನನ್ನೂ, ಕೌಶಾಂಬಿಯಲ್ಲಿ ಪದ್ಮಬೋಧನನ್ನೂ, ಬ್ರಹ್ಮಬಾಹುವಿನಲ್ಲಿ ದಿವಾಕರನನ್ನೂ, ಕೇದಾರದಲ್ಲಿ ಚಂಡಕಾಂತಿಯನ್ನೂ, ನಿತ್ಯದಲ್ಲಿ ತಿಮಿರಾಪಹನನ್ನೂ, ಗಂಗಾಮಾರ್ಗದಲ್ಲಿ ಶಿವದ್ವಾರನನ್ನೂ, ಭೂಪ್ರದೀಪನದಲ್ಲಿ ಆದಿತ್ಯನನ್ನೂ, ಸರಸ್ವತೀ ತೀರದಲ್ಲಿ ಹಂಸನನ್ನೂ, ಪೃಥೂದಕದಲ್ಲಿ ವಿಶ್ವಾಮಿತ್ರನನ್ನೂ, ಉಜ್ಜಯಿನಿಯಲ್ಲಿ ನರದ್ವೀಪನನ್ನೂ, ಸಿದ್ಧೆಯಲ್ಲಿ ಅಮಲದ್ಯುತಿಯನ್ನೂ, ಕುಂತೀಕುಮಾರದಲ್ಲಿ ಸೂರ್ಯನನ್ನೂ, ಪಂಚನದಿಯಲ್ಲಿ ವಿಭಾವಸುವನ್ನೂ, ಮಥುರೆಯಲ್ಲಿ ವಿಮಲಾದಿತ್ಯನನ್ನೂ, ಸಂಜ್ಞಿಕದಲ್ಲಿ ಸಂಜ್ಞಾದಿತ್ಯನನ್ನೂ, ಶ್ರೀಕಂಠದಲ್ಲಿ ಮಾರ್ತಂಡನನ್ನೂ, ವರ್ಣದಲ್ಲಿ ದಂಶಕನನ್ನೂ, ಗೋಧನದಲ್ಲಿ ಗೋಪತಿಯನ್ನೂ, ಮರುಸ್ಥಳದಲ್ಲಿ ಕರ್ಣನನ್ನೂ. ದೇವಪುರದಲ್ಲಿ ಪುಷ್ಪನನ್ನೂ, ಲೋಹಿತದಲ್ಲಿ ಕೇಶಾವಾರ್ಕನನ್ನೂ, ವೈದಿಶದಲ್ಲಿ

ಶ್ರೀಕಂಠೇ ಚೈವ ಮಾರ್ತಂಡಂ ದಶಾರ್ಣೇ ದಶಕಂ ಸ್ಮೃತಂ ।
ಗೋಧನೇ ಗೋಪತಿಂ ದೇವಂ ಕರ್ಣಂ ಚೈವ ಮರುಸ್ಥಲೇ ॥ ೨೦ ॥
ಪುಷ್ಪಂ ದೇವಪುರೇ ಚೈವ ಕೇಶವಾರ್ಕಂ ತು ಲೋಹಿತೇ ।
ನೈರಿಶೇ ಚೈವ ಶಾರ್ದೂಲಂ ಶೋಣೇ ವಾರುಣಿವಾಸಿನಂ ॥ ೨೧ ॥
ವರ್ಧಮಾನೇ ಚ ಸಾಂಬಾಖ್ಯಂ ಕಾಮರೂಪೇ ಶುಭಂಕರಂ ।
ಮಿಹಿರಂ ಕಾನ್ಯಕುಬ್ಜೇ ಚ ಮಂದಾರಂ ಪುಣ್ಯವರ್ಧನೇ ॥ ೨೨ ॥
ಗಂಧಾರೇ ಕ್ಷೋಭಣಾದಿತ್ಯಂ ಲಂಕಾಯಾಮಮರದ್ಯುತಿಂ ।
ಕರ್ಣಾದಿತ್ಯಂ ಚ ಚಂಪಾಯಾಂ ಪ್ರಬೋಧೇ ಶುಭದರ್ಶಿನಂ ॥ ೨೩ ॥
ದ್ವಾರವತ್ಯಾಂ ತು ಪಾರ್ವತ್ಯಂ ಹಿಮವಂತೇ ಹಿಮಾವಹಂ ।
ಮಹಾತೇಜಂ ತು ಲೌಹಿತ್ಯೇ ಅಮಲಾಂಗೇ ಚ ಧೂರ್ಜಟಿಂ ॥ ೨೪ ॥
ರೋಹಿಕೇ ತು ಕುಮಾರಾಖ್ಯಂ ಪದ್ಮಾಯಾಂ ಪದ್ಮಸಂಭವಂ ।
ಧರ್ಮಾದಿತ್ಯಂ ತು ಲಾಟಾಯಾಂ ಮರ್ದಕೇ ಸ್ಥವಿರಂ ವಿದುಃ ॥ ೨೫ ॥
ಸುಖಪ್ರದಂ ತು ಕಾಬೇರ್ಯಾಂ ಕೋಸಲೇ ಗೋಪತಿಂ ತಥಾ ।
ಕೌಂಕಣೇ ತು ಪದ್ಮದೇವಂ ತಾಪನಂ ವಿಂಧ್ಯಪರ್ವತೇ ॥ ೨೬ ॥

ಶಾರ್ದೂಲನನ್ನೂ, ಶೋಣದಲ್ಲಿ ವಾರುಣವಾಸಿಯನ್ನೂ, ವರ್ಧಮಾನದಲ್ಲಿ ಸಾಂಬನನ್ನೂ, ಕಾಮರೂಪದಲ್ಲಿ ಶುಭಂಕರನನ್ನೂ, ಕಾನ್ಯಕುಬ್ಜದಲ್ಲಿ ಮಿಹಿರನನ್ನೂ, ಪುಣ್ಯವರ್ಧನದಲ್ಲಿ ಮಂದಾರನನ್ನೂ, ಗಂಧಾರದಲ್ಲಿ ಕ್ಷೋಭಣಾದಿತ್ಯನನ್ನೂ, ಲಂಕೆಯಲ್ಲಿ ಅಮರದ್ಯುತಿಯನ್ನೂ, ಚಂಪೆಯಲ್ಲಿ ಕರ್ಣಾದಿತ್ಯನನ್ನೂ, ಪ್ರಬೋಧದಲ್ಲಿ ಶುಭದರ್ಶಿಯನ್ನೂ, ದ್ವಾರಾವತಿಯಲ್ಲಿ ಪಾರ್ವತ್ಯನನ್ನೂ, ಹಿಮವಂತದಲ್ಲಿ ಹಿಮಾಪಹನನ್ನೂ, ಲೌಹಿತ್ಯದಲ್ಲಿ ಮಹಾತೇಜನನ್ನೂ, ಅಮಲಾಂಗದಲ್ಲಿ ಧೂರ್ಜಟಿಯನ್ನೂ, ರೋಹಿಕೆಯಲ್ಲಿ ಕುಮಾರನನ್ನೂ, ಪದ್ಮೆಯಲ್ಲಿ ಪದ್ಮಸಂಭವನನ್ನೂ, ಲಾಟಿಯಲ್ಲಿ ಧರ್ಮಾದಿತ್ಯನನ್ನೂ, ಮರ್ದಕದಲ್ಲಿ ಸ್ಥವಿರನನ್ನೂ, ಕಾಬೇರಿಯಲ್ಲಿ ಸುಖಪ್ರದನನ್ನೂ, ಕೋಸಲದಲ್ಲಿ ಗೋಪತಿಯನ್ನೂ, ಕೌಂಕಣದಲ್ಲಿ ಪದ್ಮದೇವನನ್ನೂ, ವಿಂಧ್ಯಪರ್ವತದಲ್ಲಿ ತಾಪನನನ್ನೂ, ಕಾಶ್ಮೀರದಲ್ಲಿ ತ್ವಷ್ಟನನ್ನೂ ಚರಿತ್ರೆಯಲ್ಲಿ ರತ್ನಸಂಭವನನ್ನೂ, ಪುಷ್ಕರದಲ್ಲಿ ಹೇಮಗರ್ಭಸ್ಥನನ್ನೂ, ಗಭಸ್ತಿಕದಲ್ಲಿ ಸೂರ್ಯನನ್ನೂ, ಪ್ರಕಾಶಿಯಲ್ಲಿ ಮುಜ್ಞಾಲನನ್ನೂ, ತೀರ್ಥಗ್ರಾಮದಲ್ಲಿ ಪ್ರಭಾಕರನನ್ನೂ, ಕಾಂಪಿಲ್ಯದಲ್ಲಿ ರಿಲ್ಲಕಾದಿತ್ಯನನ್ನೂ, ಧನಕದಲ್ಲಿ ಧನವಾಸಿಯನ್ನೂ, ನರ್ಮದಾತೀರದಲ್ಲಿ ಅನಲನನ್ನೂ, ಎಲ್ಲೆಡೆಯಲ್ಲಿಯೂ ಗಮನಾಧಿಕನನ್ನೂ ಹೀಗೆ ಭಾಸ್ಕರನ ಅರುವತ್ತೆಂಟು ನಾಮಗಳನ್ನು ಬೆಳಗ್ಗೆ

ತ್ವಷ್ಟಾರಂ ಚೈವ ಕಾಶ್ಮೀರೇ ಚರಿತ್ರೇ ರತ್ನಸಂಭವಂ ।
ಪುಷ್ಕರೇ ಹೇಮಗರ್ಭಸ್ಥಂ ವಿದ್ಯಾತ್ಸೂರ್ಯಂ ಗಭಸ್ತಿಕೇ ॥ ೨೭ ॥
ಪ್ರಕಾಶಾಯಾಂ ತು ಮುಜ್ಞಾಲಂ ತೀರ್ಥಗ್ರಾಮೇ ಪ್ರಭಾಕರಂ ।
ಕಾಂಪಿಲ್ಯೇ ರಿಲ್ಲಕಾದಿತ್ಯಂ ಧನಕೇ ಧನವಾಸಿನಂ ॥ ೨೮ ॥
ಅನಲಂ ನರ್ಮದಾತೀರೇ ಸರ್ವತ್ರ ಗಮನಾಧಿಕಂ ।
ಅಷ್ಟಷಷ್ಟಿಂ ತು ದೇವಸ್ಯ ಭಾಸ್ಕರಸ್ಯಾಮಿತದ್ಯುತೇಃ ॥ ೨೯ ॥
ಸ್ನಾತುರುತ್ಥಾಯ ವೈ ನಿತ್ಯಂ ಶಕ್ತಿಮಾನ್ ಶುಚಿರ್ಮಾನ್ನರಃ ।
ಯಃ ಪಠೇತ್ ಶೃಣುಯಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ ॥ ೩೦ ॥
ರಾಜ್ಯಾರ್ಥೀ ಲಭತೇ ರಾಜ್ಯಂ ಧನಾರ್ಥೀ ಲಭತೇ ಧನಂ ।
ಪುತ್ರಾರ್ಥೀ ಲಭತೇ ಪುತ್ರಾನ್ ಸೌಖ್ಯಾರ್ಥೀ ಲಭತೇ ಸುಖಂ ॥ ೩೧ ॥
ರೋಗಾರ್ತೋ ಮುಚ್ಯತೇ ರೋಗಾತ್ ಬದ್ಧೋ ಮುಚ್ಯೇತ ಬಂಧನಾತ್ ।
ಯಾನ್ಯಾನ್ಪ್ರಾರ್ಥಯತೇ ಕಾಮಾಂಸ್ತಾಂಸ್ತಾನ್ಪ್ರಾಪ್ನೋತಿ ಮಾನವಃ ॥ ೩೨ ॥

ಈಶ್ವರ ಉವಾಚ :—

ಏವಂ ಚ ಸ್ತುವತಸ್ತಸ್ಯ ಚಿತ್ರಸ್ಯ ವಿಮಲಾತ್ಮನಃ ।
ತತಸ್ತುಷ್ಟಃ ಸಹಸ್ರಾಂಶುಃ ಕಾಲೇನ ಮಹತಾ ವಿಭುಃ ॥ ೩೩ ॥
ಅಬ್ರವೀದ್ವತ್ಸ ಭದ್ರಂ ತೇ ವರಂ ವರಯ ಸುವ್ರತ ॥ ೩೪ ॥

ಎದ್ದು ಶಕ್ತಿಯುಳ್ಳ ಮನುಷ್ಯನು ಪಠಿಸಿದರೆ ಅಥವಾ ಕೇಳಿದರೆ ಸಕಲ ಪಾಪಗಳಿಂದ ಮುಕ್ತನಾಗುವನು.

೩೧. ರಾಜ್ಯವನ್ನು ಬಯಸುವವನು ರಾಜ್ಯವನ್ನೂ, ಧನಾರ್ಥಿಯು ಧನವನ್ನೂ ಪುತ್ರಾರ್ಥಿಯು ಪುತ್ರರನ್ನೂ, ಸೌಖ್ಯಾರ್ಥಿಯು ಸೌಖ್ಯವನ್ನೂ, ಪಡೆಯುವನು.

೩೨. ರೋಗಪೀಡಿತನು ರೋಗಮುಕ್ತನಾಗುವನು. ಬಂಧನದಲ್ಲಿ ಸಿಕ್ಕಿಕೊಂಡವನು ಬಂಧರಹಿತನಾಗುವನು. ಹೀಗೆ ಮನುಷ್ಯನು ಅಪೇಕ್ಷಿಸಿದ ಇಷ್ಟಾರ್ಥಗಳನ್ನೆಲ್ಲ ಹೊಂದುವನು.

೩೩–೩೪. ಶುದ್ಧಮನಸ್ಸುಳ್ಳ ಚಿತ್ರನು ಹೀಗೆ ಸ್ತುತಿಸುತ್ತಿರಲು ಬಹಳ ಕಾಲದ ಮೇಲೆ ಸೂರ್ಯನು ಸಂತುಷ್ಟನಾಗಿ " ಮಗು ! ನಿನಗೆ ಮಂಗಳವಾಗಲಿ. ವರವನ್ನು ಕೇಳಿಕೊ " ಎಂದನು.

ಸೋಽಬ್ರವೀದ್ಯದಿ ಮೇ ತುಷ್ಟೋ ಭಗವಂಸ್ತೀಕ್ಷ್ಣದೀಧಿತೇ ।
ಪ್ರೌಢತ್ವಂ ಸರ್ವಕಾರ್ಯೇಷು ನಯ ಮಾಂ ಜ್ಞಾನಿತಾ ತಥಾ ॥ ೩೫ ॥
ತತ್ತಥೇತಿ ಪ್ರತಿಜ್ಞಾತಂ ಸೂರ್ಯೇಣ ವರವರ್ಣಿನಿ ।
ತತಃ ಸರ್ವಜ್ಞತಾಂ ಪ್ರಾಪ್ತಶ್ಚಿತ್ರೋ ಮಿತ್ರಕುಲೋದ್ಭವಃ ॥ ೩೬ ॥
ತಂ ಜ್ಞಾತ್ವಾ ಧರ್ಮರಾಜಸ್ತು ಬುದ್ಧ್ಯಾ ಪರಮಯಾ ಯುತಂ ।
ಚಿಂತಯಾಮಾಸ ಮೇಧಾವೀ ಲೇಖಕೋಽಯಂ ಭವೇದ್ಯದಿ ॥ ೩೭ ॥
ತತೋ ಮೇ ಸರ್ವಸಿದ್ಧಿಃ ಸ್ಯಾನ್ನಿರ್ವೃತಿಶ್ಚ ಪರಾ ಭವೇತ್ ।
ಏವಂ ಚಿಂತಯತಸ್ತಸ್ಯ ಧರ್ಮರಾಜಸ್ಯ ಭಾಮಿನಿ ॥ ೩೮ ॥
ಅಗ್ನಿತೀರ್ಥೇ ಗತೇ ಚಿತ್ರೇ ಸ್ನಾನಾರ್ಥಂ ಲವಣಾಂಭಸಿ ।
ಸ ತತ್ರ ಪ್ರವಿಶನ್ನೇವ ನೀತಸ್ತು ಯಮಕಿಂಕರೈಃ ॥ ೩೯ ॥
ಸಶರೀರೋ ಮಹಾದೇವಿ ಯಾಮಾದೇಶಪರಾಯಣೈಃ ।
ಸ ಚಿತ್ರಗುಪ್ತನಾಮಾಽಭೂದ್ವಿಶ್ವಚಾರಿತ್ರಲೇಖಕಃ ॥ ೪೦ ॥
ಚಿತ್ರಾದಿತ್ಯೇತಿ ನಾಮಾಽಭೂತ್ತತೋ ಲೋಕೇ ವರಾನನೇ ॥ ೪೧ ॥

---

೩೫. ಆಗ ಆ ಚಿತ್ರನು "ಪೂಜ್ಯನಾದ ಸೂರ್ಯನೆ! ನೀನು ನನ್ನಲ್ಲಿ ತೃಪ್ತನಾಗಿದ್ದರೆ ನನಗೆ ಎಲ್ಲ ಕಾರ್ಯಗಳಲ್ಲಿಯೂ ಪ್ರೌಢಿಮೆಯನ್ನೂ, ಜ್ಞಾನವನ್ನೂ ಕೊಡು" ಎಂದು ಬೇಡಿಕೊಂಡನು.

೩೬. ಸೂರ್ಯನು ಹಾಗಯೇ ಆಗಲೆಂದು ಹೇಳಿದನು. ಬಳಿಕ ಮಿತ್ರನ ಮಗನಾದ ಆ ಚಿತ್ರನು ಸರ್ವಜ್ಞನಾದನು.

೩೭–೪೦. ಯಮಧರ್ಮನು ಆ ಚಿತ್ರಗುಪ್ತನನ್ನು ಅತ್ಯಂತ ಬುದ್ಧಿವಂತನನ್ನಾಗಿ ತಿಳಿದು "ಬುದ್ಧಿಶಾಲಿಯಾದ ಇವನು ನನಗೆ ಲೇಖಕನಾದರೆ ನನ್ನ ಸಮಸ್ತ ಕಾರ್ಯಗಳೂ ಸಿದ್ಧಿಸಿ ಅತ್ಯಂತ ಸುಖವುಂಟಾಗುವುದು" ಎಂದಾಲೋಚಿಸಿದನು. ಅವನು ಹೀಗೆ ಆಲೋಚಿಸುತ್ತಿರಲು ಚಿತ್ರನು ಸ್ನಾನಕ್ಕಾಗಿ ಲವಣ ಸಮುದ್ರದಲ್ಲಿರುವ ಅಗ್ನಿತೀರ್ಥಕ್ಕೆ ಹೋದನು. ಅವನು ಆ ತೀರ್ಥವನ್ನು ಪ್ರವೇಶಿಸುತ್ತಿರುವಾಗಲೆ ಯಮನ ಭಟರು ಸ್ವಾಮಿಯ ಅಪ್ಪಣೆಯಂತೆ ಶರೀರದಿಂದ ಸಹಿತನಾದ ಚಿತ್ರನನ್ನು ಯಮಲೋಕಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವನು ಪ್ರಪಂಚದ ಚರಿತ್ರೆಯನ್ನು ಬರೆಯುವವನಾಗಿ ಚಿತ್ರಗುಪ್ತನೆಂಬ ಹೆಸರನ್ನು ಪಡೆದನು.

೪೧. ಸುಂದರಿ! ಆ ಚಿತ್ರನು ಪೂಜಿಸಿದ್ದರಿಂದ ಸೂರ್ಯನು ಚಿತ್ರಾದಿತ್ಯನೆಂಬ ಹೆಸರನ್ನು ಪಡೆದಿರುವನು.

ಸಪ್ತಮ್ಯಾಂ ನಿಯತಾಹಾರೋ ಯಸ್ತಂ ಪೂಜಯತೇ ನರಃ ।
ಸಪ್ತ ಜನ್ಮಾನಿ ದಾರಿದ್ರ್ಯಂ ನ ದುಃಖಂ ತಸ್ಯ ಜಾಯತೇ ॥ ೪೨ ॥
ತತ್ರೈವ ಚಾಶ್ವೋ ದಾತವ್ಯಃ ಸಕೋಷಂ ಖಡ್ಗಮೇವ ಚ ।
ಹಿರಣ್ಯಂ ಚೈವ ವಿಪ್ರಾಯ ಏವಂ ಯಾತ್ರಾಫಲಂ ಲಭೇತ್ ॥ ೪೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಿತ್ರಾದಿತ್ಯಮಾಹಾತ್ಮ್ಯವರ್ಣನಂ ನಾಮ
ಏಕೋನಚತ್ವಾರಿಂಶದುತ್ತರಶತತಮೋಽಧ್ಯಾಯಃ

---

೪೨. ಸಪ್ತಮಿಯದಿನ ನಿಯತಾಹಾರನಾಗಿ ಆ ಚಿತ್ರಾದಿತ್ಯನನ್ನು ಪೂಜಿಸಿದ ಮನುಷ್ಯನಿಗೆ ಏಳು ಜನ್ಮಗಳಲ್ಲಿ ಬಡತನವೂ, ದುಃಖವೂ ಉಂಟಾಗುವುದಿಲ್ಲ.

೪೩. ಅಲ್ಲಿಯೇ ಬ್ರಾಹ್ಮಣನಿಗೆ ಕುದುರೆ, ಒರೆಯಿಂದ ಸಹಿತವಾದ ಕತ್ತಿ, ಚಿನ್ನಗಳನ್ನು ದಾನಮಾಡಿದರೆ ಯಾತ್ರೆಯ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಿತ್ರಾದಿತ್ಯ ಮಾಹಾತ್ಮ್ಯವರ್ಣನವೆಂಬ
ನೂರಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತ್ವಾರಿಂಶದುತ್ತರಶತತಮೋಽಧ್ಯಾಯಃ

ಚಿತ್ರಪಥಾನದೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ನದೀಂ ಚಿತ್ರಪ್ರಥಾಂ ತತಃ ।
ಬ್ರಹ್ಮಕುಂಡಸಮೀಪಸ್ಥಾಂ ಚಿತ್ರಾದಿತ್ಯಸ್ಯ ಮಧ್ಯತಃ ॥ ೧ ॥
ಯದಾ ಚ ಚಿತ್ರಃ ಸಂನೀತೋ ಯಮದೂತೈಃ ಸುರಪ್ರಿಯೇ ।
ಸಶರೀರೋ ಮಹಾಪ್ರಾಜ್ಞೋ ಯಮಾದೇಶಪರಾಯಣೈಃ ॥ ೨ ॥
ಏವಂ ಜ್ಞಾತ್ವಾ ತು ತತ್ರಸ್ಥಾ ಭಗಿನೀ ತಸ್ಯ ದುಃಖಿತಾ ।
ಚಿತ್ರಾ ನದೀ ತತೋ ಭೂತ್ವಾ ಸ್ವಸಾ ತಸ್ಯ ಮಹಾತ್ಮನಃ ॥ ೩ ॥
ಪ್ರವಿಷ್ಟಾ ಸಾಗರೇ ದೇವಿ ಅನ್ವೇಷಂತೀ ಚ ಬಾಂಧವಂ ।
ತತಶ್ಚಿತ್ರಪಥಾ ನಾಮ ತಸ್ಯಾಶ್ಚಕ್ರುರ್ದ್ವಿಜಾತಯಃ ॥ ೪ ॥
ಏವಂ ತತ್ರ ಸಮುತ್ಪನ್ನಾ ಸ ನದೀ ವರವರ್ಣಿನಿ ॥ ೫ ॥
ತಸ್ಯಾಂ ಸ್ನಾತ್ವಾ ನರೋ ಯಸ್ತು ಚಿತ್ರಾದಿತ್ಯಂ ಪ್ರಪಶ್ಯತಿ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ದಿವಾಕರಃ ॥ ೬ ॥

ಕನ್ನಡದ ಅನುವಾದ

ಚಿತ್ರಪಥಾನದೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಚಿತ್ರಾದಿತ್ಯನ ಮಧ್ಯದಲ್ಲಿ ಬ್ರಹ್ಮಕುಂಡದ ಹತ್ತಿರದಲ್ಲಿರುವ ಚಿತ್ರಪಥಾನದಿಗೆ ಹೋಗಬೇಕು.

೨-೪. ಪ್ರಿಯಳೆ! ಯಮದೂತರು ತಮ್ಮ ಸ್ವಾಮಿಯ ಅಪ್ಪಣೆಯಂತೆ ಪ್ರಾಜ್ಞನಾದ ಚಿತ್ರನನ್ನು ಶರೀರಸಹಿತವಾಗಿ ಯಮಪುರಿಗೆ ಕರೆದುಕೊಂಡು ಹೋಗಲು ಅವನ ತಂಗಿಯಾದ ಚಿತ್ರೆಯು ದುಃಖಗೊಂಡು ನದಿಯಾಗಿ ಅಣ್ಣನನ್ನು ಹುಡುಕುತ್ತ ಸಮುದ್ರವನ್ನು ಹೊಕ್ಕಳು. ಅದರಿಂದ ಬ್ರಾಹ್ಮಣರು ಆ ನದಿಗೆ ಚಿತ್ರಪಥೆಯೆಂದು ಹೆಸರನ್ನಿಟ್ಟರು.

೫. ದೇವಿ! ಹೀಗೆ ಅಲ್ಲಿ ಆ ನದಿಯುಂಟಾಯಿತು.

೬. ಆ ನದಿಯಲ್ಲಿ ಮಿಂದು ಚಿತ್ರಾದಿತ್ಯನನ್ನು ದರ್ಶನಮಾಡುವ ಮಾನವನು ಆದಿತ್ಯಲೋಕಕ್ಕೆ ಹೋಗುವನು.

ಅಸ್ಮಿನ್ಕಲಿಯುಗೇ ದೇವಿ ಅಂತರ್ಧಾನಂ ಗತಾ ನದೀ ।
ಪ್ರಾವೃಟ್ಕಾಲೇ ಚ ದೃಶ್ಯೇತ ದುರ್ಲಭಂ ತತ್ರ ದರ್ಶನಂ ॥ ೭ ॥
ಸ್ನಾನಂ ದಾನಂ ವಿಶೇಷೇಣ ಸರ್ವಪಾತಕನಾಶನಂ ॥ ೮ ॥

ಭುಕ್ತೋ ವಾಪ್ಯಥವಾಽಭುಕ್ತೋ ರಾತ್ರೌ ವಾ ಯದಿ ವಾ ದಿವಾ ।
ಪರ್ವಕಾಲೇಽಥವಾಽಕಾಲೇ ಪವಿತ್ರೋಽಪ್ಯಥವಾಽಶುಚಿಃ ॥ ೯ ॥

ಯದೈವ ದೃಶ್ಯತೇ ತತ್ರ ನದೀ ಚಿತ್ರಪಥಾ ಪ್ರಿಯೇ ।
ಪ್ರಮಾಣಂ ದರ್ಶನಂ ತಸ್ಯಾ ನ ಕಾಲಸ್ತತ್ರ ಕಾರಣಂ ॥ ೧೦ ॥

ದೃಷ್ಟ್ವಾ ನದೀಂ ಮಹಾದೇವಿ ಪಿತರಃ ಸ್ವರ್ಗಸಂಸ್ಥಿತಾಃ
ಗಾಯಂತಿ ತತ್ರ ಸಾಮಾನಿ ನೃತ್ಯಂತಿ ಚ ಹಸಂತಿ ಚ ॥ ೧೧ ॥

ಅಸ್ಮಾಕಂ ವಂಶಜಃ ಕಶ್ಚಿಚ್ಛ್ರಾದ್ಧಮತ್ರ ಕರಿಷ್ಯತಿ ।
ಯಾವತ್ಕಾಲಂ ತಥಾಽಸ್ಮಾಕಂ ಪ್ರೀತಿಮುತ್ಪಾದಯಿಷ್ಯತಿ ॥ ೧೨ ॥

ಏವಂ ಜ್ಞಾತ್ವಾ ನರಸ್ತತ್ರ ಸ್ನಾನ ಶ್ರಾದ್ಧಂ ಚ ಕಾರಯೇತ್ ।
ಸರ್ವಪಾಪವಿನಾಶಾರ್ಥಂ ಪಿತ್ರ್ಣಾಂ ಪ್ರೀತಯೇ ತಥಾ ॥ ೧೩ ॥

---

೭. ದೇವಿ ! ಈ ಕಲಿಯುಗದಲ್ಲಿ ಆ ನದಿಯು ಅಡಗಿಹೋಗಿರುವುದು. ಮಳೆಗಾಲದಲ್ಲಿ ಕಾಣಿಸೀತು. ಆದರೆ ಅದರ ದರ್ಶನವು ದುರ್ಲಭವಾದುದು.

೮. ಅಲ್ಲಿ ಸ್ನಾನದಾನಗಳು ಅತಿಶಯವಾಗಿ ಪಾಪಗಳನ್ನು ಪರಿಹರಿಸುವುವು.

೯–೧೨. ಆ ನದಿಯ ದರ್ಶನವಾದ ಕೂಡಲೆ ಮನುಷ್ಯನು ಊಟಮಾಡಿರಲಿ, ಮಾಡದಿರಲಿ, ರಾತ್ರಿಯಾಗಲಿ, ಹಗಲಾಗಲಿ, ಪರ್ವಕಾಲವಾಗಲಿ, ಅಲ್ಲದಿರಲಿ, ಶುದ್ಧನಾಗಿರಲಿ, ಅಶುದ್ಧನಾಗಿರಲಿ, ಕಾಲವನ್ನು ಕಾರಣವನ್ನಾಗಿ ಭಾವಿಸದೆ ದರ್ಶನವನ್ನೆ ಪ್ರಮಾಣವನ್ನಾಗಿರಿಸಿಕೊಂಡು ಸ್ನಾನ, ಶ್ರಾದ್ಧ ಮೊದಲಾದುವುಗಳನ್ನು ಮಾಡಿದರೆ ಸ್ವರ್ಗದಲ್ಲಿರುವ ಅವನ ಪಿತೃಗಳು "ನಮ್ಮ ವಂಶದಲ್ಲಿ ಹುಟ್ಟಿದ ಒಬ್ಬನು ಇಲ್ಲಿ ಶ್ರಾದ್ಧವನ್ನುಮಾಡಿ ಕಲ್ಪಾವಸಾನದವರೆಗೆ ನಮಗೆ ಪ್ರೀತಿಯನ್ನುಂಟುಮಾಡುವನೆ'ಂದು ಸಂತೋಷದಿಂದ ಸಾಮಗಾನಮಾಡುವರು, ಕುಣಿಯುವರು, ನಗುವರು.

೧೩. ಇದನ್ನರಿತ ಮಾನವನು ಅಲ್ಲಿ ಸಕಲ ಪಾಪಗಳ ನಾಶಕ್ಕಾಗಿಯೂ, ಪಿತೃಗಳ ಪ್ರೀತಿಗಾಗಿಯೂ ಸ್ನಾನ ಮತ್ತು ಶ್ರಾದ್ಧಗಳನ್ನು ಮಾಡಬೇಕು.

ಇತ್ಯೇತ್ಕಥಿತಂ ದೇವಿ ಯಥಾ ಚಿತ್ರಪಥಾ ನದೀ ।
ಪ್ರಭಾಸಕ್ಷೇತ್ರಮಾಸಾದ್ಯ ಸಂಸ್ಥಿತಾ ಪಾಪನಾಶಿನೀ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಿತ್ರಪಥಾನದೀವರ್ಣನಂ ನಾಮ
ಚತ್ವಾರಿಂಶದುತ್ತರಶತತಮೋಽಧ್ಯಾಯಃ

---

೧೪. ದೇವಿ! ಹೀಗೆ ಪಾಪವನ್ನು ನೀಗಿಸುವ ಚಿತ್ರಪಥಾನದಿಯು ಹೇಗೆ ಪ್ರಭಾಸಕ್ಷೇತ್ರವನ್ನು ಹೊಂದಿ ನೆಲೆಸಿರುವುದೆಂಬುದನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಿತ್ರಪಥಾನದೀಮಾಹಾತ್ಮ್ಯವರ್ಣನವೆಂಬ
ನೂರನಲವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಪಂಚಾಶದುತ್ತರಶತತಮೋಽಧ್ಯಾಯಃ

ಗಾಯತ್ರೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕಪರ್ದೀ ಯತ್ರ ಸಂಸ್ಥಿತಃ ।
ತಸ್ಯೈವ ಉತ್ತರೇ ಭಾಗೇ ನಾತಿದೂರೇ ವ್ಯವಸ್ಥಿತಃ ।
ಚಿಂತಿತಾರ್ಥಪ್ರದೋ ದೇವಿ ಚಿಂತಾಮಣಿರಿವಾಪರಃ ॥ ೧ ॥
ಚತುರ್ಥ್ಯಾಂ ತಂ ತು ದೇವೇಶಿ ಅಂಗಾರಕದಿನೇ ಪುನಃ ।
ಸ್ನಾಪಯಿತ್ವಾ ತು ಸಂಪೂಜ್ಯ ನೈವೇದ್ಯೈರ್ವಿವಿಧೈಃ ಶುಭೈಃ ।
ಸಂತರ್ಪ್ಯ ವಿಘ್ನರಾಜೇಶಂ ಸರ್ವಾನ್ಕಾಮಾನವಾಪ್ನುಯಾತ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪರ್ದಿಚಿಂತಾಮಣಿಮಾಹಾತ್ಮ್ಯವರ್ಣನಂ ನಾಮ
॥ ಏಕಚತ್ವಾರಿಂಶತದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕಪರ್ದಿಚಿಂತಾಮಣಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ! ಬಳಿಕ ಚಿತ್ರಪಥಾನದಿಯ ಉತ್ತರ ಭಾಗದಲ್ಲಿ ಹತ್ತಿರದಲ್ಲಿರುವ ಚಿಂತಾಮಣಿಯಂತೆ ಇಷ್ಟಾರ್ಥವನ್ನೀಯುವ ಕಪರ್ದಿ ವಿಘ್ನರಾಜನ ಸನ್ನಿಧಿಗೆ ಹೋಗಬೇಕು.

೨. ದೇವೇಶಿ! ಮನುಷ್ಯನು ಮಂಗಳವಾರ ಚೌತಿದಿನ ಆ ವಿಘ್ನರಾಜನಿಗೆ ಅಭಿಷೇಕಮಾಡಿ ಪೂಜಿಸಿ ವಿವಿಧ ನೈವೇದ್ಯಗಳಿಂದ ತೃಪ್ತಿಗೊಳಿಸಿದರೆ ಸಕಲೇಷ್ಟಾರ್ಥಗಳೂ ಲಭಿಸುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪರ್ದಿಚಿಂತಾಮಣಿಮಾಹಾತ್ಮ್ಯವರ್ಣನವೆಂಬ
ನೂರನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಚತ್ವಾರಿಂಶದುತ್ತರಶತತಮೋಽಧ್ಯಾಯಃ

ಚಿತ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚಿತ್ರೇಶ್ವರಮನುತ್ತಮಂ ।
ಧನುಷಾಂ ಸಪ್ತಕೇ ತಸ್ಯ ಸ್ಥಿತಮಾಗ್ನೇಯದಕ್ಷಿಣೇ ॥ ೧ ॥
ಲಿಂಗಂ ಮಹಾಪ್ರಭಾವಂ ಹಿ ಸರ್ವಪಾತಕನಾಶನಂ ।
ತತ್ರ ಚಿತ್ರೇಶ್ವರಂ ಪೂಜ್ಯ ನರಕಾನ್ನ ಭವೇದ್ಭಯಂ ॥ ೨ ॥
ಪಟಸ್ಥಿತಂ ತಸ್ಯ ಪಾಪಂ ಚಿತ್ರೋ ಮಾರ್ಜಯತಿ ಪ್ರಿಯೇ ।
ತಸ್ಮಾತ್ಸರ್ವಪ್ರಯತ್ನೇನ ಚಿತ್ರೇಶಂ ಪೂಜಯೇತ್ಸದಾ ।
ಯಃ ಸ್ಯಾತ್ಪಾಪಯುತೋ ವಾಪಿ ನರಕಂ ನೈವ ಪಶ್ಯತಿ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಿತ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಿಚತ್ವಾರಿಂಶದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಚಿತ್ರೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಆ ಕಪರ್ದಿ ಚಿಂತಾಮಣಿಯ ಆಗ್ನೇಯದಿಕ್ಕಿನಲ್ಲಿ ಏಳು ಬಿಲ್ಲುಗಳ ದೂರದಲ್ಲಿರುವ ಸಕಲ ಪಾಪವನ್ನು ನಿವಾರಿಸುವ ಅತಿಶಯಮಾಹಾತ್ಮ್ಯಯುಳ್ಳ ಚಿತ್ರೇಶ್ವರನೆಡೆಗೆ ಹೋಗಬೇಕು. ಆ ಚಿತ್ರೇಶ್ವರನನ್ನು ಪೂಜಿಸಿದವನಿಗೆ ನರಕಭಯವಿರುವುದಿಲ್ಲ. ಯಮಪಟದಲ್ಲಿರುವ ಅವನ ಪಾಪವನ್ನೆಲ್ಲ ಚಿತ್ರನು ಅಳಿಸುವನು. ಆದುದರಿಂದ ಯಾವಾಗಲೂ ಚಿತ್ರೇಶ್ವರನನ್ನು ಪೂಜಿಸಬೇಕು. ಹಾಗೆ ಪೂಜಿಸಿದವನು ಪಾಪಯುಕ್ತನಾಗಿದ್ದರೂ ನರಕವನ್ನು ನೋಡುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಿತ್ರೇಶರ್ವಮಾಹಾತ್ಮ್ಯವರ್ಣನವೆಂಬ
ನೂರನಲವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಚತ್ವಾರಿಂಶದುತ್ತರಶತತಮೋಽಧ್ಯಾಯಃ

ವಿಚಿತ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿಚಿತ್ರೇಶ್ವರಮುತ್ತಮಂ ।
ತಸ್ಯೈವ ಪೂರ್ವದಿಗ್ಭಾಗೇ ಕಿಂಚಿದಾಗ್ನೇಯಗೋಚರೇ ।
ಧನುಷಾಂ ದಶಕೇ ತತ್ರ ಸ್ಥಿತಂ ಪಾಪಪ್ರಣಾಶನಂ ॥ ೧ ॥
ವಿಚಿತ್ರೇಣ ಮಹಾದೇವಿ ಲೇಖಕೇನ ಯಮಸ್ಯ ಚ ।
ಸ್ಥಾಪಿತಂ ತನ್ಮಹಾಲಿಂಗಂ ತಪಃ ಕೃತ್ವಾ ಸುದುಶ್ಚರಂ ॥ ೨ ॥
ತಂ ದೃಷ್ಟ್ವಾ ಪೂಜಿತಂ ಚೈವ ಮುಕ್ತಃ ಸ್ಯಾತ್ಸರ್ವಪಾತಕೈಃ ।
ಸಂಪೂಜ್ಯ ಚ ವಿಧಾನೇನ ನ ದುಃಖೀ ಜಾಯತೇ ನರಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಿಚಿತ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿಚತ್ವಾರಿಂಶದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ವಿಚಿತ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಆ ಚಿತ್ರೇಶ್ವರನ ಪೂರ್ವದಲ್ಲಿ ಸ್ವಲ್ಪ ಆಗ್ನೇಯದಿಕ್ಕಿನಲ್ಲಿ ಹತ್ತು ಬಿಲ್ಲುಗಳ ದೂರದಲ್ಲಿರುವ ವಿಚಿತ್ರೇಶ್ವರನನ್ನು ಹೊಂದಬೇಕು.

೨. ಯಮನ ಲೇಖಕನಾದ ವಿಚಿತ್ರನು ಘೋರ ತಪಸ್ಸನ್ನಾಚರಿಸಿ ಆ ಲಿಂಗವನ್ನು ಪ್ರತಿಷ್ಠೆಮಾಡಿರುವನು.

೩. ಆ ಲಿಂಗವನ್ನು ದರ್ಶನಮಾಡಿ ವಿಧಿಯಿಂದ ಪೂಜಿಸಿದವನು ಸಕಲ ಪಾಪ ಮುಕ್ತನಾಗಿ ದುಃಖರಹಿತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಿಚಿತ್ರೇಶ್ವರಮಾಹಾತ್ಮ್ಯವರ್ಣನವೆಂಬ
ನೂರನಲವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಶ್ಚತ್ವಾರಿಂಶದುತ್ತರಶತತಮೋಽಧ್ಯಾಯಃ

ಪುಷ್ಕರಕುಂಡಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತೃತೀಯಂ ಪುಷ್ಕರಂ ಮಹತ್ ।
ತಸ್ಯೈವ ಪೂರ್ವದಿಗ್ಭಾಗೇ ಕಿಂಚಿದೀಶಾನಗೋಚರೇ ।
ಕನೀಯಃ ಸಂಸ್ಕೃತಂ ಕುಂಡಂ ಪುಷ್ಕರಂ ನಾಮ ನಾಮತಃ ॥ ೧ ॥

ಯತ್ರ ಮಧ್ಯಾಹ್ನಸಮಯೇ ಬ್ರಹ್ಮಣಾ ಸಮುಪಾಸಿತಾ ।
ಸಂಧ್ಯಾ ತ್ರೈಲೋಕ್ಯಜನನೀ ಪ್ರತಿಷ್ಠಾರ್ಥಂ ಗತೇನ ಚ ॥ ॥ ೨ ॥

ತತ್ರ ಯಃ ಕುರುತೇ ಸ್ನಾನಂ ಪೌರ್ಣಮಾಸ್ಯಾಂ ಸಮಾಹಿತಃ ।
ಸಮ್ಯಕ್ಕೃತಂ ಭವೇತ್ತೇನ ಸ್ನಾನಂ ತತ್ರಾದಿಪುಷ್ಕರೇ ॥ ೩ ॥

ಹಿರಣ್ಯಂ ತತ್ರ ದಾತವ್ಯಂ ಸರ್ವಪಾಪಾಪನುತ್ತಯೇ ॥ ೪ ॥

ಕನ್ನಡದ ಅನುವಾದ

ಪುಷ್ಕರಕುಂಡಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ತರುವಾಯ ಆ ವಿಚಿತ್ರೇಶ್ವರನ ಪೂರ್ವದಲ್ಲಿ ಸ್ವಲ್ಪ ಈಶಾನ್ಯದಿಕ್ಕಿನಲ್ಲಿ ಪುಷ್ಕರವೆಂಬ ಕುಂಡವಿಡೆಗೆ ಹೋಗಬೇಕು.

೨. ಅಲ್ಲಿ ಸೋಮೇಶ್ವರನ ಪ್ರತಿಷ್ಠೆಗಾಗಿ ಬಂದಿರುವ ಬ್ರಹ್ಮನು ಮಧ್ಯಾಹ್ನ ಸಂಧ್ಯಾವಂದನೆಯನ್ನು ಮಾಡಿರುವನು.

೩. ಹುಣ್ಣಿಮೆಯ ದಿನ ಸಾವಧಾನ ಮನಸ್ಸಿನಿಂದ ಅಲ್ಲಿ ಮಿಂದ ಮನುಷ್ಯನು ಆದಿಪುಷ್ಕರದಲ್ಲಿ ಮಿಂದವನಂತಾಗುವನು.

೪. ಅಲ್ಲಿ ಸಕಲ ಪಾಪನಿವೃತ್ತಿಗಾಗಿ ಸುವರ್ಣ ದಾನಮಾಡಬೇಕು.

ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ತವ ಪೌಷ್ಕರಂ ।
ಶ್ರುತಂ ಪಾಪಹರಂ ನೄಣಾಂ ಸರ್ವಕಾಮಪ್ರದಂ ತಥಾ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಷ್ಕರಕುಂಡಮಾಹಾತ್ಮ್ಯವರ್ಣನಂ ನಾಮ
॥ ಚತುಶ್ಚತ್ವಾರಿಂಶದುತ್ತರಶತತಮೋಽಧ್ಯಾಯಃ ॥

---

೫. ಹೀಗೆ ಶ್ರವಣ ಮಾತ್ರದಿಂದ ಮನುಷ್ಯರ ಪಾಪವನ್ನು ಪರಿಹರಿಸಿ ಸಕಲೇಷ್ಟಾರ್ಥಗಳನ್ನೀಯುವ ಪುಷ್ಕರ ಮಾಹಾತ್ಮ್ಯೆಯನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪುಷ್ಕರಕುಂಡಮಾಹಾತ್ಮ್ಯವರ್ಣನವೆಂಬ
ನೂರನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಚತ್ವಾರಿಂಶದುತ್ತರಶತತಮೋಽಧ್ಯಾಯಃ

ಗಜಕುಂಭೋದರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇದ್ವಿಘ್ನೇಶಂ ಪಾಪನಾಶನಂ ।
ಗಜಕುಂಭೋದರಂ ನಾಮ ಸರ್ವಸಿದ್ಧಿಪ್ರದಾಯಕಂ ॥ ೧ ॥
ತತ್ರ ಕುಂಡೇ ನರಃ ಸ್ನಾತ್ವಾ ಚತುರ್ಥ್ಯಾಂ ಪ್ರಯತಾತ್ಮವಾನ್ ।
ಪೂಜಯೇದ್ಯಸ್ತು ತಂ ಭಕ್ತ್ಯಾ ವಿಘ್ನೇಶಸ್ತಸ್ಯ ತುಷ್ಯತಿ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಜಕುಂಭೋದರಮಾಹಾತ್ಮ್ಯವರ್ಣನಂ ನಾಮ
ಪಂಚಚತ್ವಾರಿಂಶದುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಗಜಕುಂಭೋದರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಅಲ್ಲಿಯೇ ಇರುವ ಸಕಲ ಸಿದ್ಧಿಯನ್ನೀಯುವ ಗಜಕುಂಭೋದರನೆಂಬ ವಿಘ್ನೇಶ್ವರನನ್ನು ನೋಡಬೇಕು.

೨. ಮನುಷ್ಯನು ಚತುರ್ಥಿಯ ದಿನ ಆ ಕುಂಡದಲ್ಲಿ ಮಿಂದು ಆ ವಿಘ್ನೇಶ್ವರನನ್ನು ಭಕ್ತಿಯಿಂದ ಪೂಜಿಸಿದರೆ ಆ ವಿಘ್ನೇಶ್ವರನು ಸಂತುಷ್ಟನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಜಕುಂಭೋದರಮಾಹಾತ್ಮ್ಯವರ್ಣನವೆಂಬ
ನೂರನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ಚತ್ವಾರಿಂಶದುತ್ತರಶತತಮೋಽಧ್ಯಾಯಃ

ಯಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಧರ್ಮರಾಜಪ್ರತಿಷ್ಠಿತಂ ।
ಯಮೇಶ್ವರಂ ಮಹಾದೇವಂ ತಸ್ಯೈವೋತ್ತರತಃ ಸ್ಥಿತಂ ॥ ೧ ॥
ಯದಾ ಶಪ್ತೋ ಧರ್ಮರಾಜಶ್ಛಾಯಯಾ ವರವರ್ಣಿನಿ ।
ತದಾ ತಸ್ಯಾಪತತ್ಪಾದಃ ಸ ಚ ದುಃಖಾನ್ವಿತೋಽಭವತ್ ॥ ೨ ॥
ತತಃ ಪ್ರಾಭಾಸಿಕೇ ಕ್ಷೇತ್ರೇ ತಪಸ್ತೇಪೇ ಮಹಾತಪಾಃ ।
ಸ್ಥಾಪಯಾಮಾಸ ಲಿಂಗಂ ತು ತತ್ರ ದೇವಸ್ಯ ಶೂಲಿನಃ ॥ ೩ ॥
ತಸ್ಯ ತುಷ್ಟೋ ಮಹಾದೇವಸ್ತತಃ ಪ್ರತ್ಯಕ್ಷತಾಂ ಗತಃ ।
ಅಬ್ರವೀದ್ಧರ್ಮ ಭದ್ರಂ ತೇ ವರಂ ವರಯ ಚೇಪ್ಸಿತಂ ॥ ೪ ॥
ತದಾಽಬ್ರವೀದ್ಧರ್ಮರಾಜಃ ಪಾದಃ ಪ್ರಪತಿತೋ ಮಮ ।
ಪ್ರಸಾದಾತ್ತವ ದೇವೇಶ ಜಾಯತಾಂ ಪುನರೇವ ಹಿ ॥ ೫ ॥

ಕನ್ನಡದ ಅನುವಾದ

ಯಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ಗಜಕುಂಭೋದರನ ಉತ್ತರದಲ್ಲಿ ಧರ್ಮರಾಜನು ಪ್ರತಿಷ್ಠೆಮಾಡಿರುವ ಯಮೇಶ್ವರನೆಡೆಗೆ ಹೋಗಬೇಕು.

೨. ಪ್ರಿಯಳೆ! ಛಾಯೆಯು ಧರ್ಮರಾಜನಿಗೆ ಶಪಿಸಿದ ಕೂಡಲೇ ಅವನ ಕಾಲು ಬಿದ್ದಿತು. ಅದರಿಂದವನು ದುಃಖಗೊಂಡನು.

೩. ಅನಂತರ ಧರ್ಮರಾಜನು ಪ್ರಾಭಾಸಿಕ ಕ್ಷೇತ್ರದಲ್ಲಿ ತಪಸ್ಸನ್ನು ಮಾಡಿ ಮಾಹೇಶ್ವರಲಿಂಗವನ್ನು ಪ್ರತಿಷ್ಠೆಮಾಡಿದನು.

೪. ಆ ಧರ್ಮರಾಜನಲ್ಲಿ ಸಂತುಷ್ಟನಾದ ಮಹೇಶ್ವರನು ಪ್ರತ್ಯಕ್ಷನಾಗಿ "ಧರ್ಮರಾಜ! ನಿನಗೆ ಮಂಗಳವಾಗಲಿ. ನಿನಗಿಷ್ಟವಾದ ವರವನ್ನು ಕೇಳಿಕೊ" ಎಂದನು.

೫. ಆಗ ಧರ್ಮರಾಜನು "ದೇವೇಶ! ನನ್ನ ಪಾದವು ಬಿದ್ದುಹೋಗಿರುವುದು. ನಿನ್ನ ಅನುಗ್ರಹದಿಂದ ಮರಳಿ ಇದು ಸರಿಯಾಗಲಿ.

ಏತಲ್ಲಿಂಗಂ ಸುರಶ್ರೇಷ್ಠ ಯನ್ಮಯಾ ನಿರ್ಮಿತಂ ತವ ।
ಏತದ್ಯೇ ಭಕ್ತಿಸಂಯುಕ್ತಾಃ ಪಶ್ಯಂತಿ ಪ್ರಾಣಿನೋ ಭುವಿ ॥ ೬ ॥
ತೇಷಾಂ ತವ ಪ್ರಸಾದೇನ ಭೂಯಾತ್ಪಾಪವಿಮೋಕ್ಷಣಂ ॥ ೭ ॥
ಏವಂ ಭವಿಷ್ಯತೀತ್ಯುಕ್ತ್ವಾ ಹ್ಯಂತರ್ಧಾನಂ ಗತೋ ಹರಃ ।
ಯಮೋಽಪಿ ಲಬ್ಧಪಾದಸ್ತು ಪುನರೇವ ದಿವಂ ಯಲೌ ॥ ೮ ॥
ತಸ್ಮಿನ್ದೃಷ್ಟೇ ಸುರಶ್ರೇಷ್ಠ ಯಮಲೋಕಸಮುದ್ಭವಂ ।
ನ ಭಯಂ ವಿದ್ಯತೇ ನೄಣಾಮಪಿ ದುಷ್ಕೃತಕಾರಿಣಾಂ ॥ ೯ ॥
ಭ್ರಾತೃದ್ವಿತೀಯಾಸಂಯೋಗೇ ಸ್ನಾತ್ವಾ ಪುಷ್ಕರಿಣೀಜಲೇ ।
ಯಮೇಶ್ವರಸಮೀಪಸ್ಥೋ ಯಮೇಶಮವಲೋಕಯೇತ್ ॥ ೧೦ ॥
ತಿಲಪಾತ್ರಂ ಪ್ರದಾತವ್ಯಂ ದೀಪಂ ಗಾಃ ಕಾಂಚನಾದಿಕಂ ।
ಯಮದೇವಂ ಸಮುದ್ದಿಶ್ಯಂ ಮುಚ್ಯತೇ ಸರ್ವಪಾತಕೈಃ ॥ ೧೧ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಯಮೇಶ್ವರಮಾಹಾತ್ಮ್ಯವರ್ಣನಂ ನಾಮ
ಷಟ್ಚತ್ವಾರಿಂಶದುತ್ತರಶತತಮೋಽಧ್ಯಾಯಃ

೬–೭. ನಾನು ಪ್ರತಿಷ್ಠೆಮಾಡಿರುವ ಈ ನಿನ್ನ ಶುಭಲಿಂಗವನ್ನು ಭಕ್ತಿಯಿಂದ ದರ್ಶನಮಾಡುವ ಪ್ರಾಣಿಗಳ ಪಾಪವು ಪರಿಹಾರವಾಗಲಿ.

೮. ಶಂಕರನು ಹೀಗೆಯೇ ಆಗುವುದೆಂದುಸುರಿ ಮಾಯವಾದನು. ಯಮನೂ ಮರಳಿ ಪಾದವನ್ನು ಪಡೆದು ದೇವಲೋಕಕ್ಕೆ ತೆರಳಿದನು.

೯. ಆ ಶಂಕರನನ್ನು ನೋಡಿದ ಮಾನವರಿಗೆ ಪಾಪವನ್ನು ಮಾಡಿದ್ದರೂ ಯಮಲೋಕದ ಭಯವಿರುವುದಿಲ್ಲ.

೧೦. ಭ್ರಾತೃದ್ವಿತೀಯಾದಿನ ಪುಷ್ಕರಣೀ ನೀರಿನಲ್ಲಿ ಮಿಂದು ಯಮೇಶ್ವರನ ಹತ್ತಿರವಿದ್ದು ಯಮೇಶನನ್ನು ನೋಡಬೇಕು.

೧೧. ಯಮನನ್ನುದ್ದೇಶಿಸಿ ತಿಲಪಾತ್ರ, ದೀಪ, ಗೋವು, ಸುವರ್ಣ ಮೊದಲಾದುವನ್ನು ದಾನಮಾಡಿದವನು ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಯಮೇಶ್ವರಮಾಹಾತ್ಮ್ಯವರ್ಣನವೆಂಬ
ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಚತ್ವಾರಿಂಶದುತ್ತರಶತತಮೋಽಧ್ಯಾಯಃ

ಬ್ರಹ್ಮಕುಂಡಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಬ್ರಹ್ಮಕುಂಡಮನುತ್ತಮಂ ।
ತಸ್ಯೈವ ನೈಋತೇ ಭಾಗೇ ಬ್ರಹ್ಮಣಾ ನಿರ್ಮಿತಂ ಪುರಾ ॥ ೧ ॥
ಯದಾ ತು ಋಕ್ಷರಾಜೇನ ಸೋಮನಾಥಃ ಪ್ರತಿಷ್ಠಿತಃ ।
ತದಾ ಬ್ರಹ್ಮಾದಯೋ ದೇವಾಃ ಸರ್ವೇ ತತ್ರ ಸಮಾಗತಾಃ ।
ಪ್ರತಿಷ್ಠಾರ್ಥಂ ಹಿ ದೇವಸ್ಯ ಶಶಾಂಕೇನ ನಿಮಂತ್ರಿತಾಃ ॥ ೨ ॥
ಅಥಾಽಬ್ರವೀನ್ನಿಶಾನಾಥೋ ಬ್ರಹ್ಮಾಣಂ ವಿನಯಾನ್ವಿತಃ ॥ ೩ ॥
ಕೃತಂ ಭವದ್ಭಿರ್ಜಾನಾತಿ ಸ್ಥಾಪನಂ ವೈ ಯಥಾ ಜನಃ ।
ತಥಾ ಕುರು ಸುರಶ್ರೇಷ್ಠ ಚಿಹ್ನಮಾತ್ಮಸಮುದ್ಭವಂ ॥ ೪ ॥
ಏವಂ ಶ್ರುತ್ವಾ ತದಾ ಬ್ರಹ್ಮಾ ಧ್ಯಾನಂ ಕೃತ್ವಾ ತು ನಿಶ್ಚಲಂ ।
ಆಹ್ವಯತ್ಸರ್ವತೀರ್ಥಾನಿ ಪುಷ್ಕರಾದೀನಿ ಸರ್ವಶಃ ॥ ೫ ॥

ಕನ್ನಡದ ಅನುವಾದ

ಬ್ರಹ್ಮಕುಂಡಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಯಮೇಶ್ವರನ ನೈರ್ಋತ್ಯ ಭಾಗದಲ್ಲಿ ಹಿಂದೆ ಬ್ರಹ್ಮನು ನಿರ್ಮಿಸಿದ ಉತ್ತಮವಾದ ಬ್ರಹ್ಮಕುಂಡವನ್ನು ಹೊಂದಬೇಕು.

೨. ಚಂದ್ರನು ಸೋಮನಾಥನನ್ನು ಪ್ರತಿಷ್ಠೆ ಮಾಡುವಾಗ ಅವನ ಆಹ್ವಾನದಂತೆ ಬ್ರಹ್ಮಾದಿ ಸಮಸ್ತ ದೇವತೆಗಳು ಪ್ರತಿಷ್ಠೆಗಾಗಿ ಅಲ್ಲಿಗೆ ಬಂದರು.

೩–೪. ಆಗ ನಿಶಾಕರನು ಬ್ರಹ್ಮನನ್ನು ಕುರಿತು ವಿನಯದಿಂದ “ಸುರೋತ್ತಮ! ನೀನು ಸೋಮನಾಥನನ್ನು ಪ್ರತಿಷ್ಠೆಮಾಡಿರುವುದನ್ನು ಜನರು ತಿಳಿಯುವುದಕ್ಕಾಗಿ ನಿನ್ನ ಚಿಹ್ನೆಯೊಂದನ್ನು ಇಲ್ಲಿ ನಿರ್ಮಿಸು” ಎಂದನು.

೫. ಇದನ್ನು ಕೇಳಿ ಬ್ರಹ್ಮನು ಸ್ಥಿರಚಿತ್ತನಾಗಿ ಧ್ಯಾನಮಾಡಿ ಪುಷ್ಕರಾದಿ ಸಕಲ ತೀರ್ಥಗಳನ್ನು ಅಲ್ಲಿಗೆ ಕರೆದನು.

ಸ್ವರ್ಗೇ ವೈ ಯಾನಿ ತೀರ್ಥಾನಿ ತಥೈವ ಚ ರಸಾತಲೇ ।
ತಪಃ ಸಾಮರ್ಥ್ಯಯೋಗೇನ ಬ್ರಹ್ಮಣಾಽಽಕರ್ಷಿತಾನಿ ಚ ।
ಅತಸ್ತಸ್ಯೈವ ನಾಮ್ನಾ ತು ಬ್ರಹ್ಮಕುಂಡಂ ತು ಗೀಯತೇ ॥ ೬ ॥

ಗಣಾನಾಂ ಚ ಸಹಸ್ರೈಸ್ತು ಚತುರ್ದಶಭಿರೀಕ್ಷ್ಯತೇ ।
ಅತಶ್ಚಾಭಕ್ತಿಯುಕ್ತಾನಾಂ ದುಷ್ಪ್ರಾಪ್ಯಂ ತೀರ್ಥಮುತ್ತಮಂ ॥ ೭ ॥

ಅಥಾಬ್ರವೀತ್ಸರ್ವದೇವಾನ್ಬ್ರಹ್ಮಾ ಲೋಕಪಿತಾಮಹಃ ॥ ೮ ॥
ಅತ್ರ ಕುಂಡೇ ನರಃ ಸ್ನಾತ್ವಾ ಯಃ ಪಿತೄಂಸ್ತರ್ಪಯಿಷ್ಯತಿ ।
ಅಗ್ನಿಷ್ಟೋಮಫಲಂ ಸರ್ವಂ ಲಪ್ಸ್ಯತೇ ಸ ಚ ಮಾನವಃ ।
ತತ್ಪ್ರಸಾದಾತ್ಸ್ವರ್ಗಲೋಕೇ ವಿಮಾನೇನ ಚರಿಷ್ಯತಿ ॥ ೯ ॥

ಗೋದಾನಂ ಚಾಶ್ವದಾನಂ ಚ ತಥಾ ಸ್ವರ್ಣಕಮಂಡಲುಂ ।
ದದ್ಯಾದ್ವಿಪ್ರಾಯ ವಿದುಷೇ ಸರ್ವಪಾಪಾಪನುತ್ತಯೇ ॥ ೧೦ ॥

ಪೌರ್ಣಮಾಸ್ಯಾಂ ಮಹಾದೇವಿ ತಥಾ ಚ ಪ್ರತಿಪದ್ದಿನೇ ।
ಸರ್ವಪಾಪವಿನಾಶಾರ್ಥಂ ತತ್ರ ಸ್ನಾತಿ ಸರಸ್ವತೀ ॥ ೧೧ ॥

---

೬. ಬ್ರಹ್ಮನ ತಪಸ್ಸಾಮರ್ಥ್ಯದಿಂದ ಸ್ವರ್ಗ, ಪಾತಾಳಗಳಲ್ಲಿರುವ ಸಕಲ ತೀರ್ಥಗಳೂ ಅಲ್ಲಿಗೆ ಬಂದುವು. ಅದರಿಂದ ಆ ಕುಂಡವು ಬ್ರಹ್ಮನ ಹೆಸರಿನಿಂದ ಬ್ರಹ್ಮಕುಂಡವೆಂದು ಪ್ರಸಿದ್ಧವಾಯಿತು.

೭. ಹದಿನಾಲ್ಕು ಸಾವಿರ ಗಣಗಳು ಆ ಕುಂಡವನ್ನು ನೋಡುತ್ತಿರುವುದರಿಂದ ಭಕ್ತಿಹೀನರಿಗೆ ಅದು ಹೊಂದಲಶಕ್ಯವಾದುದು.

೮–೯. ಬಳಿಕ ಲೋಕಪಿತಾಮಹನಾದ ಬ್ರಹ್ಮನು ಸಕಲ ದೇವತೆಗಳನ್ನು ಕುರಿತು "ಈ ತೀರ್ಥದಲ್ಲಿ ಮಿಂದು ಪಿತೃಗಳಿಗೆ ತರ್ಪಣಗೈದ ಮಾನವನು ಅಗ್ನಿಷ್ಟೋಮ ಫಲವನ್ನು ಹೊಂದಿ ಅದರ ಪ್ರಭಾವದಿಂದ ಸ್ವರ್ಗಲೋಕದಲ್ಲಿ ವಿಮಾನದಿಂದ ಸಂಚರಿಸುವನು" ಎಂದನು.

೧೦. ಮನುಷ್ಯನು ಇಲ್ಲಿ ಸಕಲ ಪಾಪಗಳ ಪರಿಹಾರಕ್ಕಾಗಿ ವಿದ್ವಾಂಸನಾದ ಬ್ರಾಹ್ಮಣನಿಗೆ ಗೋವು, ಕುದುರೆ, ಸ್ವರ್ಣ ಕಮಂಡಲುಗಳನ್ನು ದಾನಮಾಡಬೇಕು.

೧೧. ಮಹಾದೇವಿ! ಅಲ್ಲಿ ಸರಸ್ವತಿಯು ಸಕಲ ಪಾಪಗಳ ಪರಿಹಾರಕ್ಕಾಗಿ ಹುಣ್ಣಿಮೆ, ಪಾಡ್ಯ ದಿನಗಳಲ್ಲಿ ಸ್ನಾನಮಾಡುವಳು.

ಸಿದ್ಧಂ ರಸಾಯನಂ ದೇವಿ ತತ್ರ ವೈ ಹ್ಯುದಕಂ ಪ್ರಿಯೇ ।
ನಾನಾವರ್ಣಸಮಾಯುಕ್ತಮುಪದೇಶೇನ ಸಿದ್ಧ್ಯತಿ ॥ ೧೨ ॥
ದಾರಿದ್ರ್ಯದುಃಖರುಕ್ಛೋಕಾನ್ಮಾನವಃ ಸೇವತೇ ಕಥಂ ।
ಬ್ರಹ್ಮಕುಂಡಮನುಪ್ರಾಪ್ಯ ಕಲ್ಪವೃಕ್ಷಮಿವಾಪರಂ ॥ ೧೩ ॥

ದೇವ್ಯುವಾಚ :—

ಭಗವನ್ವಿಸ್ತರಾದ್ಬ್ರೂಹಿ ಬ್ರಹ್ಮಕುಂಡಮಹೋದಯಂ ।
ಸರ್ವಪ್ರಾಣಿಹಿತಾರ್ಥಾಯ ವಿಸ್ತರಾದ್ವದ ಮೇ ಪ್ರಭೋ ॥ ೧೪ ॥
ಬ್ರಹ್ಮಕುಂಡಸ್ಯ ಮಾಹಾತ್ಮ್ಯಂ ಶ್ರೋತುಂ ಮೇ ಕೌತುಕಂ ಮಹತ್ ।
ಲೋಕಾನಾಂ ದುಃಖನಾಶಾಯ ದಾರಿದ್ರ್ಯಕ್ಷಯಹೇತವೇ ॥ ೧೫ ॥
ಭಗವನ್ಮಾನುಷಾಃ ಸರ್ವೇ ದುಃಖಶೋಕನಿಪೀಡಿತಾಃ ।
ಭ್ರಮಂತಿ ಸಕಲಂ ಜನ್ಮ ರಸಾಯನವಿಮೋಹಿತಾಃ ॥ ೧೬ ॥
ತೇಷಾಂ ಹಿತಾಯ ಮೇ ಬ್ರೂಹಿ ನಿರ್ವಾಣಂ ರಸಮುತ್ತಮಂ ।
ಆದಾವಿಹ ಶರೀರಂ ತು ಅಕ್ಷಯ್ಯಂ ತು ಯಥಾ ಭವೇತ್ ॥ ೧೭ ॥

---

೧೨. ದೇವಿ! ಅಲ್ಲಿರುವ ನೀರು ಸಿದ್ಧರಸಾಯನೌಷಧವು. ಅಲ್ಲಿ ನಾನಾ ವರ್ಣಗಳಿಂದ ಕೂಡಿದ ಮಂತ್ರವನ್ನು ಉಪದೇಶ ತೆಗೆದುಕೊಳ್ಳುವುದರಿಂದಲೇ ಸಿದ್ಧಿಸುವುದು.

೧೩. ಮತ್ತೊಂದು ಕಲ್ಪವೃಕ್ಷದಂತಿರುವ ಬ್ರಹ್ಮಕುಂಡವನ್ನು ಹೊಂದಿದ ಮಾನವನು ದಾರಿದ್ರ್ಯ, ದುಃಖ, ರೋಗ, ಶೋಕಗಳನ್ನು ಹೇಗೆ ಹೊಂದುವನು?

೧೪. ದೇವಿಯು ಹೇಳುತ್ತಾಳೆ:—ಸ್ವಾಮಿ! ಸಕಲ ಪ್ರಾಣಿಗಳ ಹಿತಕ್ಕಾಗಿ ಬ್ರಹ್ಮಕುಂಡದ ಮಾಹಾತ್ಮ್ಯವನ್ನು ವಿಸ್ತಾರವಾಗಿ ನನಗೆ ಹೇಳು.

೧೫. ಜನರ ದುಃಖ ದಾರಿದ್ರ್ಯಗಳ ನಾಶಕ್ಕಾಗಿ ಬ್ರಹ್ಮಕುಂಡದ ಮಹಾತ್ಮ್ಯವನ್ನು ಕೇಳಲು ನನಗೆ ಬಹಳ ಕೌತೂಹಲವುಂಟಾಗಿದೆ.

೧೬. ಪೂಜ್ಯನೆ! ಸಮಸ್ತ ಮಾನವರೂ ದುಃಖಗಳಿಂದ ಪೀಡಿತರೂ, ರಸಾಯನದಿಂದ ಮೋಹಗೊಂಡವರೂ ಆಗಿ ಸಕಲ ಜನ್ಮಗಳಲ್ಲಿಯೂ ಸಂಚರಿಸುವರು.

೧೭—೨೦. ಅವರ ಹಿತಕ್ಕಾಗಿ ನನಗೆ ಮೋಕ್ಷವೆಂಬ ಉತ್ತಮ ರಸವನ್ನು ಹೇಳು. ಮೊದಲು ಮಾನವನ ಶರೀರವು ನಾಶವಿಲ್ಲದುದೂ, ಅಷ್ಟಸಿದ್ಧಿ, ಸಕಲ ವಿದ್ಯೆಗಳಿಂದ

ಅಷ್ಟಸಿದ್ಧಿಸಮಾಯುಕ್ತಂ ಸರ್ವವಿದ್ಯಾಸಮನ್ವಿತಂ ।
ಕಾಮರೂಪಂ ಕ್ರಿಯಾಯುಕ್ತಂ ಸರ್ವವ್ಯಾಧಿವಿವರ್ಜಿತಂ ॥ ೧೮ ॥
ತತಸ್ತು ಪರಮಂ ದೇವ ನಿರ್ವಾಣಂ ಯೇನ ವೈ ಲಭೇತ್ ।
ಮಾನವಃ ಕೃತಕೃತ್ಯಶ್ಚ ಜಾಯತೇ ಚ ಯಥಾ ಪ್ರಭೋ ॥ ೧೯ ॥
ತಥಾ ಕಥಯ ಮೇ ದೇವ ದಯಾಂ ಕೃತ್ವಾ ಜಗತ್ಪ್ರಭೋ ।
ನಿರ್ವಾಣಪರಮಂ ಕಲ್ಪಂ ಸರ್ವಭ್ರಾಂತಿವಿವರ್ಜಿತಂ ।
ಪ್ರಸಿದ್ಧಂ ಸುಖದಂ ದಿವ್ಯಂ ಸಮಾಚಕ್ಷ್ವ ಮಹೇಶ್ವರ ॥ ೨೦ ॥

ಈಶ್ವರ ಉವಾಚ :—

ಸಾಧು ಸಾಧು ಮಹಾದೇವಿ ಲೋಕಾನಾಂ ಹಿತಕಾರಿಣಿ ।
ಮರ್ತ್ಯಲೋಕೇ ಮಹಾದೇವಿ ತೀರ್ಥಂ ತೀರ್ಥವರಂ ಶುಭಂ ॥ ೨೧ ॥
ಪ್ರಭಾಸಂ ಪರಮಂ ಖ್ಯಾತಂ ತಚ್ಚ ದ್ವಾದಶಯೋಜನಂ ।
ತತ್ರ ಸೋಮೇಶ್ವರೋ ದೇವಸ್ತ್ರಿಷು ಲೋಕೇಷು ವಿಶ್ರುತಃ ॥ ೨೨ ॥
ತಸ್ಯ ಪೂರ್ವೇ ಸಮಾಖ್ಯಾತಃ ಶ್ರೀಕೃಷ್ಣೋ ದೈತ್ಯಸೂದನಃ ।
ಚಂಡಿಕಾ ಯೋಗಿನೀ ತತ್ರ ಸಖೀಭಿಃ ಪರಿವಾರಿತಾ ॥ ೨೩ ॥

ಕೂಡಿದುದೂ, ಸ್ವೇಚ್ಛಾರೂಪವುಳ್ಳುದೂ, ಕ್ರಿಯೆಯಿಂದ ಸಹಿತವಾದುದೂ, ಸಮಸ್ತ ರೋಗವಿಲ್ಲದುದೂ ಹೇಗೆ ಆದೀತು? ಅನಂತರ ಮೋಕ್ಷವು ಹೇಗೆ ಲಭಿಸೀತು? ಮನುಷ್ಯನು ಹೇಗೆ ಧನ್ಯನಾದಾನು? ಅದರ ಕ್ರಮವನ್ನು ನನಗೆ ಹೇಳು. ಮತ್ತು ಸಮಸ್ತ ಭ್ರಾಂತಿಯಿಲ್ಲದಿರುವುದೂ, ಪ್ರಸಿದ್ಧವೂ, ಸುಖವನ್ನು ಕೊಡುವುದೂ, ದಿವ್ಯವೂ ಆದ ಮೋಕ್ಷವನ್ನು ಹೇಳು.

೨೧–೨೨. ಈಶ್ವರನು ಹೇಳುತ್ತಾನೆ :—ಲೋಕಗಳಿಗೆ ಹಿತವನ್ನುಂಟುಮಾಡುವ ಮಹಾದೇವಿ! ಭೂಲೋಕದಲ್ಲಿ ಹನ್ನೆರಡು ಯೋಜನಗಳುಳ್ಳ ಪ್ರಭಾಸವೆಂಬ ಉತ್ತಮ ತೀರ್ಥವಿರುವುದು. ಅಲ್ಲಿ ಮೂರು ಲೋಕಗಳಲ್ಲಿ ಪ್ರಸಿದ್ಧನಾದ ಸೋಮೇಶ್ವರನಿರುವನು.

೨೩. ಅವನ ಪೂರ್ವಭಾಗದಲ್ಲಿ ದೈತ್ಯನಾಶಕನಾದ ಶ್ರೀ ಕೃಷ್ಣನೂ, ಸಖಿಯರಿಂದ ಸಹಿತಳಾದ ಚಂಡಿಕಾಯೋಗಿನಿಯೂ ಇರುವರು.

ತತಃ ಪೂರ್ವೇ ದಿಶಾಂ ಭಾಗೇ ಚತುರ್ವಕ್ತ್ರೇಣ ನಿರ್ಮಿತಂ ।
ತೀರ್ಥಾತ್ತೀರ್ಥಂ ವರಂ ದಿವ್ಯಂ ಸರ್ವಾಶ್ಚರ್ಯಮಯಂ ಶುಭಂ ॥ ೨೪ ॥
ಸೇವಿತಂ ಸರ್ವದೇವೈಸ್ತು ಸಿದ್ಧೈಃ ಸಾಧ್ಯೈರ್ಗ್ರಹೈಸ್ತಥಾ ।
ಅಪ್ಸರೋಮುನಿಭಿರ್ದಿವ್ಯೈರ್ಯಕ್ಷೈಶ್ಚ ಪನ್ನಗೈಃ ಸದಾ ॥ ೨೫ ॥
ಸಿದ್ಧ್ಯರ್ಥಂ ಸರ್ವಕಾಮಾರ್ಥಂ ದಿವ್ಯಭೋಗಾವಹಂ ಶುಭಂ ।
ಬ್ರಹ್ಮಕುಂಡಮಿತಿ ಖ್ಯಾತಂ ಬ್ರಹ್ಮಣಾ ನಿರ್ಮಿತಂ ಯತಃ ॥ ೨೬ ॥
ತಸ್ಯ ವಾಯವ್ಯಕೋಣೇ ತು ಹಿರಣ್ಯೇಶಃ ಸ್ವಯಂ ಸ್ಥಿತಃ ।
ತಮಾರಾಧ್ಯ ಮಹಾದೇವಂ ಹಿರಣ್ಯೇಶ್ವರಮುತ್ತಮಂ ॥ ೨೭ ॥
ಮಹಾಮಂತ್ರಂ ಜಪೇತ್ ಕ್ಷಿಪ್ರಂ ದಶಾಂಶಂ ಹೋಮಯೇತ್ಸುಧೀಃ ।
ಹೋಮೇನ ಸಿದ್ಧ್ಯತೇ ಮಂತ್ರಃ ಸತ್ಯಂ ಸತ್ಯಂ ವರಾನನೇ ॥ ೨೮ ॥
ತಸ್ಯೋತ್ತರೇ ತು ದಿಗ್ಭಾಗೇ ಕಿಂಚಿದೀಶಾನಮಾಶ್ರಿತಃ ।
ಚತುರ್ವಕ್ತ್ರೋ ಮಹಾದೇವಿ ಕ್ಷೇತ್ರಪೋ ಲಿಂಗರೂಪಧೃಕ್ ॥ ೨೯ ॥
ತತ್ಸ್ಥಾನಂ ರಕ್ಷತೇ ದೇವಿ ಲಿಂಗರೂಪೇಣ ಶಂಕರಃ ।
ತಮಾರಾಧ್ಯ ಪ್ರಯತ್ನೇನ ತತಃ ಕುಂಡಂ ಸಮಾಶ್ರಯೇತ್ ॥ ೩೦ ॥

೨೪—೨೬. ಅದರಿಂದ ಪೂರ್ವದಲ್ಲಿ ಬ್ರಹ್ಮನು ನಿರ್ಮಿಸಿರುವುದೂ, ಸಕಲ ತೀರ್ಥಗಳಿಗಿಂತಲೂ ಉತ್ತಮವಾದುದೂ, ಸಕಲರಿಗೂ ಆಶ್ಚರ್ಯವನ್ನುಂಟುಮಾಡುವುದೂ, ಮಂಗಳಕರವೂ, ಸಕಲ ದೇವತೆಗಳಿಂದಲೂ, ಸಿದ್ಧ, ಸಾಧ್ಯ, ಗ್ರಹಗಳಿಂದಲೂ, ಅಪ್ಸರರು, ಮುನಿಗಳು, ಯಕ್ಷರು, ಪನ್ನಗರು ಇವರಿಂದಲೂ ಸೇವಿಸಲ್ಪಟ್ಟುದೂ. ಇಷ್ಟಸಿದ್ಧಿಯನ್ನೀಯುವುದೂ, ದಿವ್ಯಭೋಗಗಳನ್ನುಂಟುಮಾಡುವುದೂ ಆದ ಬ್ರಹ್ಮಕುಂಡವಿರುವುದು.

೨೭—೨೮. ಅದರ ವಾಯವ್ಯಕೋಣದಲ್ಲಿ ಹಿರಣ್ಯೇಶನಿರುವನು. ಅವನನ್ನು ಪೂಜಿಸಿ ಹಿರಣ್ಯೇಶ್ವರಮಹಾಮಂತ್ರವನ್ನು ಜಪಿಸಿ ಶೀಘ್ರವಾಗಿ ಅದರ ಹತ್ತನೆಯ ಒಂದಂಶವನ್ನು ಹೋಮಮಾಡಬೇಕು. ಆ ಹೋಮದಿಂದ ಮಂತ್ರವು ನಿಶ್ಚಯವಾಗಿಯೂ ಸಿದ್ಧಿಸುವುದು.

೨೯. ಆ ಹಿರಣ್ಯೇಶ್ವರನ ಉತ್ತರಭಾಗದಲ್ಲಿ ಸ್ವಲ್ಪ ಈಶಾನ್ಯದಿಕ್ಕಿನಲ್ಲಿ ನಾಲ್ಕು ಮುಖಗಳುಳ್ಳ ಲಿಂಗರೂಪವನ್ನು ಧರಿಸಿದ ಕ್ಷೇತ್ರಪಾಲನಿರುವನು.

೩೦—೩೫. ದೇವಿ! ಆ ಸ್ಥಳವನ್ನು ಶಂಕರನು ಲಿಂಗರೂಪದಿಂದ ರಕ್ಷಿಸುತ್ತಿರುವನು. ಅವನನ್ನು ಆರಾಧಿಸಿ ಬಳಿಕ ಸಮಸ್ತೈಶ್ವರ್ಯರೂಪವೂ, ಅನೇಕ ಬಣ್ಣ

ಸರ್ವೈಶ್ವರ್ಯಮಯಂ ದೇವಿ ನಾನಾವರ್ಣವಿಚಿತ್ರಿತಂ ।
ಕುಂಡಸ್ಯಾಸ್ಯೇಶದಿಗ್ಭಾಗೇ ಭೈರವೇಶ್ವರಮುತ್ತಮಂ ॥ ೩೧ ॥
ದುರ್ಗಂಧಾ ಭಾಸುರಾ ದೇವಿ ವಹತೇ ರಸರೂಪಿಣೀ ।
ತಸ್ಯಾ ರಸೇನ ಸಂಯುಕ್ತಂ ಪೃಥಗ್ವರ್ಣಂ ಹಿ ಕರ್ಬುರಂ ॥ ೩೨ ॥
ಮೇಘವರ್ಣಂ ಮಹಾದಿವ್ಯಂ ರಾಜತಂ ಚ ಪುನಃ ಶುಭಂ ।
ಕಪಿಲಂ ದುಗ್ಧವರ್ಣಂ ಚ ಕರ್ಪೂರಾಭಂ ಸುಶೋಭನ ॥ ೩೩ ॥
ಸದಾ ಕಸ್ತೂರಿಕಾಭಾಸಂ ಕುಂಕುಮಚ್ಛವಿಕಾವಹಂ ।
ಸೌಗಂಧಂ ಚಂದನೋಪೇತಂ ಕದಾಚಿದ್ರುಧಿರೋದಕಂ ॥ ೩೪ ॥
ಏತೇ ರಸಾಶ್ಚ ವಿವಿಧಾ ದೃಶ್ಯಂತೇ ತತ್ರ ಸರ್ವದಾ ।
ಯಸ್ಯ ತುಷ್ಟೋ ಮಹಾದೇವಃ ಸಿಧ್ಯಂತೇ ತಸ್ಯ ತತ್ಕ್ಷಣಾತ್ ।
ರಜತಂ ಕ್ಷಿಪ್ಯತೇ ತತ್ರ ಸುವರ್ಣಮಿವ ಜಾಯತೇ । ॥ ೩೫ ॥
ಪ್ರತ್ಯಕ್ಷಮೇವ ತತ್ರೈವ ರಸಾಯನಮನುತ್ತಮಂ ॥ ೩೬ ॥
ಪಶ್ಯಂತಿ ಮಾನವಾ ದೇವಿ ಕೌತುಕಂ ತತ್ಕ್ಷಣಾದ್ಭೃಶಂ ।
ರಸಂ ಹಿ ಪರಮಂ ದಿವ್ಯಂ ತತ್ರಸ್ಥಂ ಚ ಕಲೌ ಯುಗೇ ॥ ೩೭ ॥
ಸಿದ್ಧಂ ಸಿದ್ಧರಸಂ ಪುಂಸಾಂ ವ್ಯಾಧೀನಾಂ ಕ್ಷಯಕಾರಕಂ ।
ಹೇಮಬೀಜಮಯಂ ದಿವ್ಯಂ ಬ್ರಹ್ಮಕುಂಡೋದ್ಭವಂ ಮಹತ್ ॥ ೩೮ ॥

ಗಳಿಂದ ಆಶ್ಚರ್ಯಕರವೂ ಆದ ಬ್ರಹ್ಮಕುಂಡವನ್ನಾಶ್ರಯಿಸಬೇಕು. ಆ ಕುಂಡದ ಈಶಾನ್ಯದಿಕ್ಕಿನಲ್ಲಿರುವ ಭೈರವೇಶ್ವರನನ್ನು ದುರ್ಗಂಧಳೂ, ರಸರೂಪಳೂ, ಆದ ಭಾಸುರೆಯು ಹೊತ್ತುಕೊಂಡಿರುತ್ತಾಳೆ. ಅವಳಲ್ಲಿ ಧೂಮಮೇಘ, ರಜತ, ಹಳದಿ, ಕ್ಷೀರ, ಕರ್ಪೂರ, ಕಸ್ತೂರಿ, ಕುಂಕುಮವರ್ಣವುಳ್ಳುದೂ, ಸುಗಂಧವೂ, ರಕ್ತವರ್ಣವೂ ಆದ ರಸಗಳೂ ಇನ್ನೂ ಇತರ ಬಣ್ಣದ ರಸಗಳೂ ಕಾಣಿಸುವುವು. ಶಂಕರನು ಸಂತುಷ್ಟನಾದವನಲ್ಲಿ ಈ ರಸಗಳು ಕೂಡಲೆ ಸಿದ್ಧಿಸುವುವು.

೩೬. ಅಲ್ಲಿ ಎಸೆದ ಬೆಳ್ಳಿಯು ಚಿನ್ನದಂತಾಗುವುದು. ಅಲ್ಲಿ ಉತ್ತಮ ರಸಾಯನವು ಪ್ರತ್ಯಕ್ಷನಾಗಿ ಕಾಣುವುದು.

೩೭. ದೇವಿ! ಮನುಷ್ಯರು ಅತಿಶಯವಾದ ಅದನ್ನು ಕುತೂಹಲದಿಂದ ಕೂಡಲೆ ನೋಡುವರು. ಕಲಿಯುಗದಲ್ಲಿ ದಿವ್ಯ ಸಿದ್ಧ ರಸವು ಅಲ್ಲಿ ನೆಲಸಿರುವುದು.

೩೮. ಬ್ರಹ್ಮಕುಂಡದಲ್ಲಿರುವ ಸುವರ್ಣ ಬೀಜರೂಪವಾದ ದಿವ್ಯ ಸಿದ್ಧರಸವು ಮನುಷ್ಯರ ವ್ಯಾಧಿಗಳನ್ನು ನಾಶಗೊಳಿಸುವುದು.

ಇದಾನೀಂ ತೇ ಪ್ರವಕ್ಷ್ಯಾಮಿ ಮನುಷ್ಯಾಣಾಂ ಹಿತಾಯ ವೈ ।
ದಾರಿದ್ರ್ಯಂ ಕ್ಷಯಮಾಪ್ನೋತಿ ತತ್ ಕ್ಷಣಾಚ್ಚ ಯಶಸ್ವಿನಿ ॥ ೩೯ ॥
ಆದಾವೇವ ಪ್ರಕುರ್ವಂತಿ ತಾಮ್ರಕುಂಭಂ ದೃಢಂ ಶುಭಂ ।
ತೀರ್ಥೋದಕಂ ಕ್ಷಿಪೇತ್ತತ್ರ ಪತ್ರೈಸ್ತಾಮ್ರೈಸ್ತಥಾಯುತಂ ॥ ೪೦ ॥
ನಿಕ್ಷಿಪ್ಯ ಭೂಮೌ ತತ್ಕುಂಭಂ ಜ್ವಾಲಯೇದನಲಂ ತತಃ ।
ಚುಲ್ಲೀಸೂಪೇಣ ಷಣ್ಮಾಸಂ ಪಾಚಯೇತ್ತಂ ಶನೈಃ ಶನೈಃ ॥ ೪೧ ॥
ಪಶ್ಚಾದುದ್ಧೃತ್ಯ ತಂ ಕುಂಭಂ ಪುನರೇವ ಜಲಂ ಕ್ಷಿಪೇತ್ ।
ಮಾಸಮೇಕಂ ಪುನಃ ಕುರ್ಯಾನ್ಮಾಸಮೇಕಂ ಪುನರ್ಭೃಶಂ ॥ ೪೨ ॥
ತತಃ ಸರ್ವಾಣಿ ಖಂಡಾನಿ ಏಕೀಕೃತ್ಯ ಪ್ರಯತ್ನತಃ ।
ಪುನರೇವೋದಕೇನೈವ ಪ್ಲಾವ್ಯ ಚಾವರ್ತಯೇತ್ಪುನಃ ॥ ೪೩ ॥
ಕಾಂಚನಂ ಜಾಯತೇ ತತ್ರ ಯದಿ ತುಷ್ಟೋ ಮಹೇಶ್ವರಃ ॥ ೪೪ ॥
ಸಿದ್ಧಿಂ ಶರೀರಜಾಂ ದೇವಿ ಯದೀಚ್ಛೇನ್ಮಾನವೋತ್ತಮಃ ।
ಸ ಸ್ನಾನಮಾದಿತಃ ಕೃತ್ವಾ ಸಂವತ್ಸರತ್ರಯಂ ಪುನಃ ॥ ೪೫ ॥
ಮೌನೇನ ನಿಯಮೇನೈವ ಮಹಾಮಂತ್ರಜಪಾನ್ವಿತಃ ।
ಪೂಜಯೇಚ್ಚ ಹಿರಣ್ಯೇಶಂ ಕ್ಷೇತ್ರಪಾಲಂ ಪ್ರಯತ್ನತಃ ॥ ೪೬ ॥

---

೩೯. ಈಗ ಮನುಷ್ಯರ ಹಿತಕ್ಕಾಗಿ ಕೂಡಲೆ ದಾರಿದ್ರ್ಯವನ್ನು ಪರಿಹರಿಸುವ ರಸ ವಿಷಯವನ್ನು ಹೇಳುವೆನು.

೪೦–೪೧. ಮೊದಲು ಗಟ್ಟಿಯಾದ ತಾಮ್ರದ ಕಲಶವನ್ನು ನಿರ್ಮಿಸಿ ಅದರಲ್ಲಿ ಆ ತೀರ್ಥದ ನೀರನ್ನು ತುಂಬಿ ಭೂಮಿಯೊಳಗಿಟ್ಟು ಅದರ ಮೇಲೆ ಒಲೆಯನಿಟ್ಟು, ಆರು ತಿಂಗಳು ಹತ್ತು ಸಾವಿರ ಎಲೆಗಳ ಬೆಂಕಿಯಿಂದ ಮೆಲ್ಲನೆ ಕಾಯಿಸಬೇಕು.

೪೨. ಬಳಿಕ ಆ ಕಲಶವನ್ನು ಮೇಲಕ್ಕೆ ತೆಗೆದು ಮರಳಿ ನೀರನ್ನು ತುಂಬಿ ಪುನಃ ಪುನಃ ಒಂದೊಂದು ತಿಂಗಳು ಮೊದಲಿನಂತೆ ಕಾಯಿಸಬೇಕು.

೪೩. ಅನಂತರ ಎಲ್ಲ ತುಂಡುಗಳನ್ನು ಒಟ್ಟಿಗೆ ಸೇರಿಸಿ ನೀರಿನಿಂದ ತೊಳೆಯಬೇಕು.

೪೪. ಮಹೇಶ್ವರನು ಹೀಗೆ ಮಾಡುವವನಲ್ಲಿ ಸಂತುಷ್ಟನಾಗಿದ್ದರೆ ಆ ಕಲಶವು ಸುವರ್ಣವಾಗುವುದು.

೪೫–೪೬. ದೇವಿ! ಮನುಷ್ಯನು ದೇಹ ಸಿದ್ಧಿಯನ್ನು ಬಯಸುವುದಾದರೆ ಆ ತೀರ್ಥದಲ್ಲಿ ಮೂರು ವರ್ಷ ಮಿಂದು ಮೌನದಿಂದಲೂ, ನಿಯಮದಿಂದಲೂ ಮಹಾ ಮಂತ್ರವನ್ನು ಜಪಿಸುತ್ತ ಕ್ಷೇತ್ರಪಾಲನಾದ ಹಿರಣ್ಯೇಶನನ್ನು ಪಂಚೋಪಚಾರ

ಪಂಚೋಪಚಾರಸಂಯುಕ್ತಂ ಧ್ಯಾನಧಾರಣಸಂಯುತಂ ।
ತೀರ್ಥೋದಕೇನ ಪಾಕಂ ವೈ ಪೇಯಂ ತದ್ವದುದುಂಬರೇ ॥ ೪೮ ॥
ಏವಂ ವರ್ಷತ್ರಯೇಣೈವ ದಿವ್ಯದೇಹಃ ಪ್ರಜಾಯತೇ ।
ತೇಜಸ್ವೀ ಬಲವಾನ್ಪ್ರಾಜ್ಞಃ ಸರ್ವವ್ಯಾಧಿವಿವರ್ಜಿತಃ ॥ ೪೯ ॥
ಜೀವೇದ್ವರ್ಷಶತಾನ್ಯೇವ ತ್ರೀಣಿ ದುಃಖವಿವರ್ಜಿತಃ ।
ವರ್ಷತ್ರಯಮವಿಚ್ಛಿನ್ನಂ ಯಸ್ತತ್ರ ಸ್ನಾನಮಾಚರೇತ್
ವಾಗೀಶ್ವರೀಂ ಜಪೇನ್ನಿತ್ಯಂ ಪೂಜಾಹೋಮಸಮನ್ವಿತಃ ।
ತಸ್ಯ ಪ್ರವರ್ತತೇ ವಾಣೀ ಸಿದ್ಧಿಃ ಸಾರಸ್ವತೀ ಭವೇತ್ ॥ ೫೦ ॥
ಸಂಸ್ಕೃತಂ ಪ್ರಾಕೃತಂ ಚೈವಾಪಭ್ರಂಶಂ ಭೂತಭಾಷಿತಂ ।
ಗಾಂಗಸ್ರೋತ್ರಃಪ್ರವಾಹೇಣ ಉದ್ಗಿರೇದ್ಗಿರಮಾತ್ಮವಾನ್ ॥
ಅಶ್ರಾಂತಾಂ ಚ ವರಾರೋಹೇ ಹ್ಯವಿಚ್ಛಿನ್ನಾಂ ಚ ಸಂತತಂ ॥ ೫೧ ॥
ವದೇದ್ವಾದಿಸಹಸ್ರೈಸ್ತು ನ ಶ್ರಮಸ್ತಸ್ಯ ಜಾಯತೇ ।
ತೀರ್ಥಸ್ಯಾಸ್ಯ ಪ್ರಭಾವೇಣ ಸರ್ವಶಾಸ್ತ್ರವಿಶಾರದಾಃ ॥ ೫೨ ॥
ಪಂಡಿತಾ ಗರ್ವಿತಾಃ ಸರ್ವೇ ತರ್ಕಶಾಸ್ತ್ರವಿಶಾರದಾಃ ।
ಆಗಚ್ಛಂತಿ ಸಮಂ ತಾತ ವಿದ್ಯಯೋದ್ಧತಕಂಧರಾಃ ॥
ನ ಶಕ್ನುವಂತಿ ತೇ ವಕ್ತುಂ ದ್ರಷ್ಟುಂ ವಕ್ತ್ರಮಪಿ ಪ್ರಿಯೇ ॥ ೫೩ ॥

ಗಳಿಂದಲೂ, ಧ್ಯಾನ, ಧಾರಣಗಳಿಂದಲೂ. ಪೂಜಿಸಿ ಅತ್ತಿಯ ಎಲೆಯಲ್ಲಿ ತೀರ್ಥೋದಕದಿಂದ ಪಾಕಮಾಡಿದ ಪಾಯಸ ಮೊದಲಾದುದನ್ನು ಕುಡಿಯಬೇಕು.

೪೯–೫೦. ಹೀಗೆ ಮೂರು ವರ್ಷಕಾಲ ಮಾಡಿದರೆ ದಿವ್ಯ ದೇಹವುಳ್ಳವನೂ, ತೇಜಸ್ವಿಯೂ, ಬಲಿಷ್ಠನೂ, ಬುದ್ಧಿಶಾಲಿಯೂ, ಸಕಲ ರೋಗವಿಲ್ಲದವನೂ ಆಗಿ ನೂರ ಮೂರು ವರ್ಷ ಕಾಲ ಬದುಕುವನು. ಅಲ್ಲಿ ಮೂರು ವರ್ಷ ಕಾಲ ಎಡೆಬಿಡದೆ ಸ್ನಾನ ಮಾಡುತ್ತ ಪೂಜೆ, ಹೋಮಗಳೊಡನೆ ವಾಗೀಶ್ವರೀ ಮಂತ್ರವನ್ನು ನಿತ್ಯವೂ ಜಪಿಸಿದರೆ ವಾಕ್ಸಿದ್ಧಿಯುಂಟಾಗುವುದು.

೫೧–೫೩. ಜ್ಞಾನಿಯಾದ ಅವನು ಈ ತೀರ್ಥದ ಪ್ರಭಾವದಿಂದ ಪ್ರಾಕೃತ, ಅಪಭ್ರಂಶ, ಭೂತಭಾಷೆಗಳನ್ನು ಗಂಗಾ ಪ್ರವಾಹದಂತೆ ವೇಗವಾಗಿ ಎಡೆಬಿಡದೆ ಉಚ್ಚರಿಸುವನು. ಅವನಿಗೆ ಅನೇಕ ಮಂದಿ ವಾದಿಗಳೊಡನೆ ವಾದಿಸಿದರೂ ಶ್ರಮವುಂಟಾಗುವುದಿಲ್ಲ. ಸಮಸ್ತ ಶಾಸ್ತ್ರ ಕುಶಲರೂ, ಅಹಂಕಾರಗೊಂಡವರೂ, ತರ್ಕಶಾಸ್ತ್ರ ನಿಪುಣರೂ, ವಿದ್ಯೆಯಿಂದ ಮೇಲಕ್ಕೆತ್ತಿದ ಕುತ್ತಿಗೆಯುಳ್ಳವರೂ ಆದ ಪಂಡಿತರೂ ಅವನೊಡನೆ ಮಾತಾಡಲೂ ಸಹ ಅವನ ಮುಖವನ್ನು ನೋಡಲೂ ಸಮರ್ಥರಾಗುವುದಿಲ್ಲ.

ವಾದಿನಾಂ ಚ ಸಹಸ್ರಾಣಿ ಭವನ್ತ್ಯೇವಂ ನಿರೀಕ್ಷಣಾತ್ ॥ ೫೪ ॥
ಉದ್ಗ್ರಾಹಯತಿ ಶಾಸ್ತ್ರಾಣಿ ವಿಬುದ್ಧಾರ್ಥಾನಿ ಸತ್ವರಂ ।
ವಿಮಲಂ ಪಾಂಚರಾತ್ರಂ ಚ ವೈಷ್ಣವಂ ಶೈವಮೇವ ಚ ॥ ೫೫ ॥
ಇತಿಹಾಸಪುರಾಣಂ ಚ ಭೂತತಂತ್ರಂ ಚ ಗಾರುಡಂ ।
ಭೈರವಂ ಚ ಮಹಾತಂತ್ರಂ ಕುಲಮಾರ್ಗಂ ದ್ವಿಧಾ ಪ್ರಿಯೇ ॥ ೫೬ ॥
ರಥಪ್ರವರವೇಗೇನ ವಾಣೀ ಚಾಸ್ಖಲಿತಾ ಭವೇತ್ ।
ನಶ್ಯಂತಿ ವಾದಿನಃ ಸರ್ವೇ ಗರುಡಸ್ಯೇವ ಪನ್ನಗಾಃ ॥ ೫೭ ॥
ನ ದಾರಿದ್ರ್ಯಂ ನ ರೋಗಶ್ಚ ನ ದುಃಖಂ ಮಾನಸಂ ಪುನಃ ।
ರಾಜಮಾನ್ಯೋ ಮಹಾಮಾನೀ ಭವೇದ್ಬ್ರಹ್ಮಪ್ರಸಾದತಃ ॥ ೫೮ ॥
ಉತ್ಸಾಹಬಲಸಂಯುಕ್ತೋ ದೇವವಜ್ಜೀವತೇ ಸುಧೀಃ ।
ದಾತಾ ಭೋಕ್ತಾ ಚ ವಾಗ್ಮೀ ಚ ತೀರ್ಥಸ್ಯಾಸ್ಯ ಪ್ರಸಾದತಃ ॥ ೫೯ ॥
ತೈಲಾಭ್ಯಕ್ತಸ್ಯ ಯತ್ತೇಜೋ ಜಾಯತೇ ಮನುಜೇಷು ಚ ।
ಸ್ನಾತಮಾತ್ರೇ ತಥಾ ತೇಜಸ್ತೀರ್ಥಸ್ಯೈವ ಪ್ರಸಾದತಃ ॥ ೬೦ ॥

---

೫೪. ಅವನು ನೋಡುವುದರಿಂದಲೇ ಅನೇಕ ಮಂದಿ ವಾದಿಗಳನ್ನು ಜಯಿಸುವನು.

೫೫–೫೬. ಅರ್ಥಸಹಿತವಾದ ಶಾಸ್ತ್ರಗಳನ್ನೂ, ಪಾಂಚರಾತ್ರ, ವೈಷ್ಣವ, ಶೈವಾಗಮಗಳನ್ನೂ, ಇತಿಹಾಸ, ಪುರಾಣಗಳನ್ನೂ, ಭೂತ, ಗಾರುಡ ಭೈರವ ಮಹಾ ಮಂತ್ರಗಳನ್ನೂ, ದ್ವಿವಿಧವಾದ ಕುಳಮಾರ್ಗಗಳನ್ನೂ ತಿಳಿಯುವನು.

೫೭. ಅವನ ವಾಣಿಯು ಉತ್ತಮ ರಥವೇಗದಂತೆ ಅಸ್ಖಲಿತವಾಗಿ ಹೊರಡುವುದು. ವಾದಿಗಳು ಗರುಡನನ್ನು ನೋಡಿ ಸರ್ಪಗಳು ಅಡಗಿಹೋಗುವಂತೆ ಅದೃಶ್ಯರಾಗುವರು.

೫೮. ಅವನಿಗೆ ಬ್ರಹ್ಮನ ಅನುಗ್ರಹದಿಂದ ಬಡತನವೂ, ರೋಗವೂ, ಮಾನಸಿಕ ದುಃಖವೂ ಉಂಟಾಗುವುದಿಲ್ಲ. ಅವನು ರಾಜಪೂಜ್ಯನಾಗುವನು.

೫೯. ಅವನು ಈ ತೀರ್ಥದ ಅನುಗ್ರಹದಿಂದ ಜ್ಞಾನಿಯಾಗಿ ಉತ್ಸಾಹಬಲಗಳಿಂದ ಕೂಡಿ ದೇವತೆಯಂತೆ ಜೀವಿಸುತ್ತಾನೆ. ಮತ್ತು ದಾನಶೀಲನೂ, ಭೋಕ್ತನೂ, ವಾಚಾಲನೂ ಆಗುವನು.

೬೦. ತೈಲಾಭ್ಯಂಜನಮಾಡಿಕೊಂಡ ಮನುಷ್ಯನಿಗೆ ತೇಜಸ್ಸುಂಟಾಗುವಂತೆ ಈ ತೀರ್ಥದಲ್ಲಿ ಮಿಂದವನಿಗೆ ತೇಜಸ್ಸುಂಟಾಗುವುದು.

ಯತ್ಪಾಪಂ ಕುರುತೇ ಜಂತುಃ ಪೈಶುನ್ಯಂ ಚ ಕೃತಘ್ನತಾಂ ।
ಮಿತ್ರದ್ರೋಹೇ ಚ ಯತ್ಪಾಪಂ ಯತ್ಪಾಪಂ ಪಾರದಾರಿಕಂ ॥
ತತ್ಸರ್ವಂ ವಿಲಯಂ ಯಾತಿ ಕುಂಡಸ್ನಾನರತಸ್ಯ ಚ ॥ ೬೧ ॥
ಮುಶಲಂ ಲಂಘಯೇದ್ಯಸ್ತು ಯೋಗಾಸ್ತ್ಯಜತಿ ವೈ ದ್ವಿಜಃ ।
ತತ್ಪಾಪಂ ಕ್ಷಯಮಾಪ್ನೋತಿ ಬ್ರಹ್ಮಕುಂಡಸ್ಯ ದರ್ಶನಾತ್ ॥ ೬೨ ॥
ಪೃಥಿವ್ಯಾಂ ಯಾನಿ ತೀರ್ಥಾನಿ ದೈವಾನಿ ತಥಾ ಪುನಃ ।
ಪೂಜಿತಾನಿ ಚ ಸರ್ವಾಣಿ ಕುಂಡಸ್ನಾನಪ್ರಭಾವತಃ ॥ ೬೩ ॥
ಸಪ್ತಜನ್ಮಾರ್ಜಿತಂ ಪಾಪಂ ದರ್ಶನಾತ್ಕ್ಷಯಮಾವ್ರಜೇತ್ ॥ ೬೪ ॥
ಯತ್ಪಾಪಂ ಗುರುಗೋಘ್ನೇ ಚ ಪರಸ್ವಹರಣೇಷು ಚ ।
ತತ್ಪಾಪಂ ಕ್ಷಯಮಾಪ್ನೋತಿ ಬ್ರಹ್ಮಕುಂಡನಿಷೇವಣಾತ್ ॥ ೬೫ ॥
ಪ್ರದಕ್ಷಿಣಂ ಚ ಯಃ ಕುರ್ಯಾತ್ ಸ್ನಾತ್ವಾ ಕುಂಡಸ್ಯ ನಾಮತಃ ।
ಸಂಖ್ಯಯಾ ಪಂಚದಶ ವೈ ಶೃಣು ತಸ್ಯಾಪಿ ಯತ್ಫಲಂ ॥ ೬೬ ॥
ಪ್ರದಕ್ಷಿಣೀಕೃತಾ ತೇನ ಸಪ್ತದ್ವೀಪಾ ವಸುಂಧರಾ ।
ಸಪ್ತಪಾತಾಲಸಹಿತಾ ತೀರ್ಥಕೋಟಿಭಿರಾವೃತಾ ॥ ೬೭ ॥

---

೬೧. ಈ ಬ್ರಹ್ಮಕುಂಡದಲ್ಲಿ ಮಿಂದವನ ಚಾಡಿ ಹೇಳುವುದು, ಕೃತಘ್ನತೆ, ಮಿತ್ರದ್ರೋಹ, ಪರಪತ್ನೀಗಮನ ಇವುಗಳಿಂದುಂಟಾದ ಪಾಪಗಳು ಪರಿಹಾರ ವಾಗುವುವು.

೬೨. ಈ ಬಹ್ಮಕುಂಡವನ್ನು ನೋಡುವುದರಿಂದ ಒನಕೆಯನ್ನು ದಾಟುವುದು, ಗೋವುಗಳನ್ನು ತ್ಯಜಿಸುವುದು ಇವುಗಳಿಂದುಂಟಾದ ಪಾಪವು ನೀಗುವುದು.

೬೩. ಮನುಷ್ಯನು ಈ ಬ್ರಹ್ಮಕುಂಡದಲ್ಲಿ ಸ್ನಾನಮಾಡುವುದರಿಂದ ಭೂಮಿ ಯಲ್ಲಿರುವ ಸಕಲ ತೀರ್ಥಗಳಲ್ಲಿ ಮಿಂದವನಂತೆಯೂ ಸಮಸ್ತ ದೇವತೆಗಳನ್ನು ಪೂಜಿಸಿದವನಂತೆಯೂ, ಆಗುವನು.

೬೪. ಈ ಕುಂಡದ ದರ್ಶನದಿಂದ ಏಳು ಜನ್ಮಗಳಲ್ಲೆಸಗಿದ ಪಾಪವು ಕ್ಷಯಿಸು ವುದು.

೬೫. ಈ ಬ್ರಹ್ಮಕುಂಡದ ಸೇವೆಯಿಂದ ಗುರು, ಗೋವುಗಳನ್ನು ಕೊಲ್ಲುವುದ ರಿಂದಲೂ, ಪರರಸ್ವವನ್ನು ಅಪಹರಿಸುವುದರಿಂದಲೂ ಉಂಟಾಗುವ ಪಾಪವು ಪರಿಹಾರವಾಗುವುದು.

೬೬. ಈ ಬ್ರಹ್ಮಕುಂಡದಲ್ಲಿ ಮಿಂದು ಇದರ ನಾಮಸಂಕೀರ್ತನೆಯಿಂದ ಹದಿನೈದು ಪ್ರದಕ್ಷಿಣೆಮಾಡುವುದರಿಂದುಂಟಾಗುವ ಫಲವನ್ನು ಕೇಳು.

೬೭. ಅವನು ಏಳು ದ್ವೀಪಗಳು, ಏಳು ಪಾತಾಳಗಳು, ಕೋಟಿತೀರ್ಥಗಳು ಇವುಗಳಿಂದ ಕೂಡಿರುವ ಭೂಮಿಯನ್ನು ಪ್ರದಕ್ಷಿಣೆಮಾಡಿದವನಂತಾಗುವನು.

ಆಹಾರಮಾತ್ರಂ ಯೋ ದದ್ಯಾತ್ತತ್ರ ವೇದವಿದಾಂ ವರೇ ।
ಲಕ್ಷಭೋಜ್ಯಂ ಕೃತಂ ತೇನ ತೀರ್ಥಸ್ಯಾಸ್ಯ ಪ್ರಭಾವತಃ ॥ ೬೮ ॥
ಬ್ರಹ್ಮೇಶ್ವರಂ ಚ ಸಂಪೂಜ್ಯ ಹಿರಣ್ಯೇಶ್ವರಮುತ್ತಮಂ ।
ಕ್ಷೇತ್ರಪಾಲಂ ಚತುರ್ವಕ್ತ್ರಂ ಪೂಜಯೇಚ್ಚಿಂತಿತಂ ಲಭೇತ್ ॥ ೬೯ ॥
ಏಕವಿಂಶತ್ಕುಲೈರ್ಯುಕ್ತಃ ಸರ್ವಪಾಪವಿವರ್ಜಿತಃ ।
ಬ್ರಹ್ಮಲೋಕಂ ಸ ವೈ ಯಾತಿ ನಾತ್ರ ಕಾರ್ಯಾ ವಿಚಾರಣಾ ॥ ೭೦ ॥
ವಿರಂಚಿಕುಣ್ಡೇ ಸ್ನಾತ್ವಾ ವಾ ಯೋ ಜಪೇದ್ವೇದಮಾತರಮ್ ।
ಲಕ್ಷಜಾಪ್ಯವಿಧಾನೇನ ಸ ಮುಕ್ತಃ ಪಾತಕೈರ್ಭವೇತ್ ॥ ೭೧ ॥
ಸ ಏವ ಪುಣ್ಯಕರ್ತಾ ಚ ಸ ಏವ ಪುರುಷೋತ್ತಮಃ ।
ಯಾತ್ರಾ ತತ್ರ ಕೃತಾ ತೇನ ಬ್ರಹ್ಮಕುಣ್ಡೇ ವರಾನನೇ ॥ ೭೨ ॥
ಅಷ್ಟಾಶೀತಿಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ ॥
ಬ್ರಹ್ಮಕುಣ್ಡಂ ಸಮಾಶ್ರಿತ್ಯ ಬ್ರಹ್ಮದೇವಮುಪಾಸತೇ ॥ ೭೩ ॥
ತಾವದ್ಗರ್ಜಂತಿ ತೀರ್ಥಾನಿ ತ್ರೈಲೋಕ್ಯೇ ಸಚರಾಚರೇ ।
ಯಾವದ್ಬ್ರಹ್ಮೇಶ್ವರಂ ತೀರ್ಥಂ ನ ಪಶ್ಯಂತಿ ನರಾಃ ಪ್ರಿಯೇ ॥ ೭೪ ॥

---

೬೮. ವೇದಜ್ಞರಾದ ಬ್ರಾಹ್ಮಣರಲ್ಲಿ ಉತ್ತಮನಾದವನಿಗೆ ಆಹಾರಮಾತ್ರವನ್ನು ಕೊಟ್ಟವನು ಈ ತೀರ್ಥದ ಪ್ರಭಾವದಿಂದ ಲಕ್ಷಮಂದಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದವನಂತಾಗುವನು.

೬೯. ಬ್ರಹ್ಮೇಶ್ವರ, ಹಿರಣ್ಯೇಶ್ವರ, ಚತುರ್ಮುಖನಾದ ಕ್ಷೇತ್ರಪಾಲ ಇವರನ್ನು ಪೂಜಿಸಿದವನು ಆಲೋಚಿಸಿದ ಇಷ್ಟಾರ್ಥವನ್ನು ಪಡೆಯುವನು.

೭೦. ಅವನು ಇಪ್ಪತ್ತೊಂದು ಕುಲದವರೊಡನೆ ಸಕಲ ಪಾಪಮುಕ್ತನಾಗಿ ಬ್ರಹ್ಮಲೋಕವನ್ನು ಸೇರುವನು.

೭೧. ಬ್ರಹ್ಮಕುಂಡದಲ್ಲಿ ಮಿಂದು ಲಕ್ಷಜಪದ ಕ್ರಮದಿಂದ ಗಾಯತ್ರಿಯನ್ನು ಜಪಿಸಿದವನು ಪಾಪಮುಕ್ತನಾಗುವನು.

೭೨. ಸುಂದರಿ! ಬ್ರಹ್ಮಕುಂಡದ ಯಾತ್ರೆ ಮಾಡಿದವನೇ ಪುಣ್ಯಶಾಲಿಯು. ಅವನೇ ಮನುಷ್ಯೋತ್ತಮನು.

೭೩. ಬ್ರಹ್ಮಚಾರಿಗಳಾದ ಎಂಬತ್ತೆಂಟು ಸಾವಿರಮಂದಿ ಮುನಿಗಳು ಬ್ರಹ್ಮ ಕುಂಡವನ್ನು ಆಶ್ರಯಿಸಿ ಬ್ರಹ್ಮದೇವನನ್ನು ಸೇವಿಸುತ್ತಿರುತ್ತಾರೆ.

೭೪. ಮನುಷ್ಯರು ಬ್ರಹ್ಮೇಶ್ವರತೀರ್ಥವನ್ನು ನೋಡದಿರುವವರೆಗೆ ಚರಾ ಚರಾತ್ಮಕಗಳಾದ ಮೂರುಲೋಕಗಳಲ್ಲಿರುವ ತೀರ್ಥಗಳೂ ಮೆರೆಯುವುವು.

ಬ್ರಹ್ಮಕುಣ್ಡೇ ಚ ಪಾನೀಯಂ ಯೇ ಪಿಬನ್ತಿ ನರಾಃ ಸಕೃತ್ ।
ನ ತೇಷಾಂ ಸಂಕ್ರಮೇತ್ಪಾಪಂ ವಾಚಿಕಂ ಮಾನಸಂ ತಥಾ ॥ ೭೫ ॥
ಬ್ರಹ್ಮಾಂಡೋತ್ತರಮಧ್ಯೇ ತು ಯಾನಿ ತೀರ್ಥಾನಿ ಸಂತಿ ವೈ ।
ತೇಷಾಂ ಪುಣ್ಯಮವಾಪ್ನೋತಿ ಬ್ರಹ್ಮಕುಣ್ಡೇ ಪ್ರದಕ್ಷಿಣಾತ್ ॥ ೭೬ ॥
ಯಾಜ್ಞವಲ್ಕ್ಯೋ ಮಹಾತ್ಮಾ ಚ ಪರಬ್ರಹ್ಮಸ್ವರೂಪವಾನ್ ।
ಸೋಽಪಿ ಕುಣ್ಡಂ ನ ಮುಂಚೇತ ನಿಕುಂಭಸ್ತು ಗಣಸ್ತಥಾ ॥ ೭೭ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಮಾಹಾತ್ಮ್ಯಂ ಬ್ರಹ್ಮಕುಂಡಜಮ್ ।
ತವಸ್ನೇಹೇನ ದೇವೇಶಿ ಕಿಮನ್ಯತ್ ಪರಿಪೃಚ್ಛಸಿ ॥ ೭೮ ॥
ಯ ಇದಂ ಶೃಣುಯಾನ್ಮರ್ತ್ಯಃ ಸಮ್ಯಕ್ಶ್ರದ್ಧಾಸಮನ್ವಿತಃ ।
ಸ ಮುಕ್ತಃ ಪಾತಕೈಃ ಸರ್ವೈರ್ಬ್ರಹ್ಮಲೋಕಂ ಚ ಗಚ್ಛತಿ ॥ ೭೯ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮಕುಂಡಮಾಹಾತ್ಮ್ಯವರ್ಣನಂ ನಾಮ
॥ ಸಪ್ತಚತ್ವಾರಿಂಶದುತ್ತರಶತತಮೋಽಧ್ಯಾಯಃ ॥

---

೭೫. ಬ್ರಹ್ಮಕುಂಡದ ನೀರನ್ನು ಒಂದುಸಾರಿ ಕುಡಿದ ಮನುಷ್ಯರ ದೇಹದಲ್ಲಿ ವಾಚಿಕ ಮಾನಸಿಕ ಪಾಪಗಳು ಸೇರುವುದಿಲ್ಲ.

೭೬. ಬ್ರಹ್ಮಕುಂಡವನ್ನು ಪ್ರದಕ್ಷಿಣೆಮಾಡುವುದರಿಂದ ಬ್ರಹ್ಮಾಂಡದ ಉತ್ತರ ಮಧ್ಯದಲ್ಲಿರುವ ತೀರ್ಥಗಳನ್ನು ಪ್ರದಕ್ಷಿಣೆಮಾಡಿದ ಪುಣ್ಯವನ್ನು ಪಡೆಯುವನು.

೭೭. ಪರಬ್ರಹ್ಮಸ್ವರೂಪಿಯಾದ ಯಾಜ್ಞವಲ್ಕ್ಯನೂ, ನಿಕುಂಭನೆಂಬ ಶಿವ ಗಣೇಶ್ವರನೂ ಈ ಬ್ರಹ್ಮಕುಂಡವನ್ನು ಎಂದಿಗೂ ಬಿಡಲಾರರು.

೭೮. ದೇವೇಶಿ! ಹೀಗೆ ನಿನ್ನಲ್ಲಿರುವ ಪ್ರೀತಿಯಿಂದ ಬ್ರಹ್ಮಕುಂಡದ ಮಾಹಾತ್ಮ್ಯವನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು. ಬೇರೆ ಯಾವುದನ್ನು ಕೇಳಲಪೇಕ್ಷಿಸುವೆ ?

೭೯. ಇದನ್ನು ಶ್ರದ್ಧೆಯಿಂದ ಕೇಳುವ ಮನುಷ್ಯನು ಸಕಲ ಪಾಪಮುಕ್ತನಾಗಿ ಬ್ರಹ್ಮಲೋಕವನ್ನು ಸೇರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬ್ರಹ್ಮಕುಂಡಮಾಹಾತ್ಮ್ಯವರ್ಣನವೆಂಬ
ನೂರನಲವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಚತ್ವಾರಿಂಶದುತ್ತರಶತತಮೋಽಧ್ಯಾಯಃ

ಕುಂಡಲಕೂಪಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೂಪಂ ಕುಂಡಲಸಂಭವಂ ।
ತಸ್ಯೈವ ಚೋತ್ತರೇ ಭಾಗೇ ಬ್ರಹ್ಮಕುಂಡಸಮೀಪತಃ ॥ ೧ ॥
ಯತ್ರ ಸಿದ್ಧೋ ಮಹಾದೇವಿ ರೂಪಕುಂಡಲಹಾರಕಃ ।
ತತ್ರ ಸ್ನಾತ್ವಾ ನರೋ ದೇವಿ ಮುಚ್ಯೇತ್ಸ್ತೇಯಕೃತಾದಘಾತ್ ॥ ೨ ॥
ಸಪ್ತ ಜನ್ಮಾನಿ ದೇವೇಶಿ ನ ತಸ್ಯಾನ್ವಯಸಂಭವಃ ।
ಚೌರಃ ಕಶ್ಚಿದ್ಭವೇತ್ಕ್ರೂರಸ್ತತ್ರ ಸ್ನಾನಪ್ರಭಾವತಃ ॥ ೩ ॥
ಶಿವರಾತ್ರ್ಯಾಂ ವಿಶೇಷೇಣ ಪಿಂಡದಾನಾದಿಕಾಂ ಕ್ರಿಯಾಂ ।
ಕುರ್ಯಾಚ್ಛಸ್ತ್ರಹತಾನಾಂ ಚ ಪಾಪಿನಾಂ ತತ್ರ ಮುಕ್ತಯೇ ॥ ೪ ॥

ಕನ್ನಡದ ಅನುವಾದ

ಕುಂಡಲಕೂಪಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಆ ಬ್ರಹ್ಮಕುಂಡದ ಉತ್ತರದಲ್ಲಿ ಸಮೀಪದಲ್ಲಿಯೇ ಇರುವ ಕುಂಡಲದಿಂದುಂಟಾದ ಕೂಪ (ಬಾವಿ) ವನ್ನು ಹೊಂದಬೇಕು.

೨. ಅಲ್ಲಿ ಕುಂಡಲವನ್ನು ಅಪಹರಿಸಿದ ಶೂದ್ರನೊಬ್ಬನು ಸಿದ್ಧಿಯನ್ನು ಪಡೆದಿರುವನು. ಅಲ್ಲಿ ಮಿಂದ ಮನುಷ್ಯನು ಕಳ್ಳತನದಿಂದುಂಟಾದ ಪಾಪದಿಂದ ಮುಕ್ತನಾಗುವನು.

೩. ದೇವೇಶಿ! ಅಲ್ಲಿ ಸ್ನಾನಮಾಡುವವನ ವಂಶದಲ್ಲಿ ಏಳು ಜನ್ಮಗಳಲ್ಲಿಯೂ ಯಾರೊಬ್ಬನೂ ಸಹ ಕಳ್ಳನೂ ಕ್ರೂರನೂ ಆಗುವುದಿಲ್ಲ.

೪. ಅಲ್ಲಿ ಶಿವರಾತ್ರಿಯ ದಿನ ಆಯುಧದಿಂದ ಮೃತರಾದ ಪಾಪಿಗಳ ಮೋಕ್ಷಕ್ಕಾಗಿ ಪಿಂಡಪ್ರದಾನ ಮೊದಲಾದುವುಗಳನ್ನು ಮಾಡಬೇಕು.

ದೇವ್ಯುವಾಚ :—

ಕಥಂ ಕುಂಡಲರೂಪಂ ತು ಪೃಥಿವ್ಯಾಂ ಖ್ಯಾತಿಮಾಗತಂ ।
ಏತತ ಥಯ ಮೇ ದೇವ ವಿಸ್ತರಾದ್ವದತಾಂ ವರ ॥ ೫ ॥

ಈಶ್ವರ ಉವಾಚ :—

ಶೃಣು ದೇವಿ ಮಹಾಪುಣ್ಯಾಂ ಕಥಾಂ ಪಾಪಪ್ರಣಾಶಿನೀಂ ।
ಯಾಂ ಶ್ರುತ್ವಾ ಮುಚ್ಯತೇ ಪಾಪಾನ್ನರೋ ಜನ್ಮಶತಾರ್ಜಿತಾತ್ ॥ ೬ ॥
ಪ್ರಭಾಸಕ್ಷೇತ್ರಮಾಹಾತ್ಮ್ಯಚ್ಛಿವರಾತ್ರ್ಯಮುಪೋಷಿತಃ ।
ಆಸೀತ್ಸುದರ್ಶನೋ ರಾಜಾ ಪೃಥಿವ್ಯಾಮೇಕರಾಟ್ ಸುಧೀಃ ॥ ೭ ॥
ಧನ್ಯೋ ಹಿ ಸಧನಾಢ್ಯಶ್ಚ ಪ್ರಜಾ ಯತ್ನೈರಪಾಲಯತ್ ।
ರಾಜ್ಯಂ ತಸ್ಯ ಸುಸಂಪನ್ನಂ ಬ್ರಾಹ್ಮಣೈರುಪಶೋಭಿತಂ ।
ಸಮೃದ್ಧಮೃದ್ಧಿಸಂಯುಕ್ತಂ ವಿಟತಸ್ಕರವರ್ಜಿತಂ ॥ ೮ ॥
ತಸ್ಮಿನ್ ಜನಪದೇ ರಮ್ಯೇ ಪುರೀ ಭಗವತೀ ಶುಭಾ ।
ಚಾತುರ್ವರ್ಣ್ಯಸಮಾಯುಕ್ತಾ ಪುರಪ್ರಾಕಾರ ಮಂಡಿತಾ ॥ ೯ ॥

---

೫. ದೇವಿಯು ಹೇಳುತ್ತಾಳೆ:—ಭೂಮಿಯಲ್ಲಿ ಕುಂಡಲಕೂಪವು ಹೀಗೆ ಪ್ರಖ್ಯಾತವಾಯಿತು ? ಸ್ವಾಮಿ ! ಇದನ್ನು ನನಗೆ ವಿಸ್ತಾರವಾಗಿ ಹೇಳು.

೬. ಈಶ್ವರನು ಹೇಳುತ್ತಾನೆ.—ದೇವಿ ! ಅತಿಶಯಪುಣ್ಯಕರವೂ, ಪಾಪವನ್ನು ನೀಗಿಸುವುದೂ ಆದ ಈ ಕಥೆಯನ್ನು ಹೇಳುವೆನು, ಕೇಳು. ಇದನ್ನುಕೇಳಿದ ಮನುಷ್ಯನು ಅನೇಕ ಜನ್ಮಗಳಲ್ಲಿ ಮಾಡಿದ ಪಾಪದಿಂದ ಮುಕ್ತನಾಗುವನು.

೭. ಶಿವರಾತ್ರಿಯದಿನ ಇಲ್ಲಿ ಉಪವಾಸಮಾಡಿದ ಸುದರ್ಶನನೆಂಬ ದೊರೆಯು ಈ ಪ್ರಭಾಸಕ್ಷೇತ್ರದಮಾಹಾತ್ಮ್ಯದಿಂದ ಭೂಮಿಯಲ್ಲಿ ಸಾರ್ವಭೌಮನಾದನು.

೮. ಪುಣ್ಯವಂತನೂ, ಹಣಗಾರನೂ ಆದ ಆ ಸುದರ್ಶನನು ಪ್ರಜೆಗಳನ್ನು ಅತಿಪ್ರಯತ್ನದಿಂದ ಕಾಪಾಡುತ್ತಿದ್ದನು. ಅವನ ರಾಜ್ಯವು ಬ್ರಾಹ್ಮಣರಿಂದ ವಿರಾಜಿಸುವುದೂ, ಸಂಪತ್ತಿನ ಸಮೃದ್ಧಿಯುಳ್ಳುದೂ, ಜಾರ, ಚೋರರಿಲ್ಲದುದೂ ಆಗಿದ್ದಿತು.

೯. ಮನೋಹರವಾದ ಅವನ ದೇಶದಲ್ಲಿ ನಾಲ್ಕು ಜಾತಿಯ ಜನರುಳ್ಳುದೂ, ಕೋಟೆಕೊತ್ತಲಗಳುಳ್ಳುದೂ, ಮಂಗಳಕರವೂ ಆದ ಒಂದು ಪಟ್ಟಣವಿದ್ದಿತು.

ತಸ್ಮಿನ್ಪುರವರೇ ರಮ್ಯೇ ರಾಜ್ಯಂ ನಿಹತಕಂಟಕಂ ।
ಕರೋತಿ ಬಾಂಧವೈಃ ಸಾರ್ಧಮೃದ್ಧಿಯುಕ್ತಃ ಸುದರ್ಶನಃ ।
ಹಿರಣ್ಯದತ್ತಸ್ಯ ಸುತೋ ಜಾತೋ ಗಾಂಧಾರಕನ್ಯಯಾ ॥ ೧೦ ॥
ತಸ್ಯ ಭಾರ್ಯಾ ಪ್ರಿಯಾ ಸಾಧ್ವೀ ಭರ್ತೃವ್ರತಪರಾಯಣಾ ।
ಸುನಂದಾ ನಾಮ ವಿಖ್ಯಾತಾ ಕಾಶಿರಾಜಸುತಾ ಶುಭಾ ॥ ೧೧ ॥
ತಯಾ ಸಾರ್ಧಂ ಹಿ ರಾಜೇಂದ್ರೋ ಭೋಗಾನ್ಸಂ ಬುಭುಜೇ ಸದಾ ।
ಭುಂಜಮಾನಸ್ಯ ಭೋಗಾನ್ವೈ ಚಿರಕಾಲೋ ಗತಸ್ತದಾ ॥ ೧೨ ॥
ಅಕರೋತ್ಸ ಮಹಾಯಜ್ಞಾನ್ದದೌ ದಾನಾನಿ ಭೂರಿಶಃ ।
ಏವಂ ಕಾಲೋ ಗತಸ್ತಸ್ಯ ಭಾರ್ಯಯಾ ಸಹ ಸುವ್ರತೇ ॥ ೧೩ ॥
ಕದಾಚಿನ್ಮಾಘಮಾಸೇ ತು ಶಿವರಾತ್ರ್ಯಾಂ ವರಾನನೇ ।
ಸಸ್ಮಾರ ಪೂರ್ವಜಾತಿಂ ಸ ಭಾರ್ಯಾಮಹೂಯ ಚಾಬ್ರವೀತ್ ॥ ೧೪ ॥

ಸುದರ್ಶನ ಉವಾಚ :—

ಶಿವರಾತ್ರಿವ್ರತಂ ದೇವಿ ಮಯಾ ಕಾರ್ಯಂ ವರಾನನೇ ।
ವ್ರತಸ್ಯಾಸ್ಯ ಪ್ರಭಾವೇನ ಪ್ರಾಪ್ತಃ ರಾಜ್ಯಂ ಮಯಾ ಕಿಲ ॥ ೧೫ ॥

---

೧೦. ಆ ರಮ್ಯನಗರದಲ್ಲಿ ಹಿರಣ್ಯದತ್ತನಿಂದ ಗಾಂಧಾರರಾಜನ ಮಗಳಲ್ಲಿ ಜನಿಸಿದ ಹಣಗಾರನಾದ ಸುದರ್ಶನನು ಬಾಂಧವರೊಡನೆ ಶತ್ರುಗಳಿಲ್ಲದಂತೆ ರಾಜ್ಯವನ್ನು ಆಳುತ್ತಿದ್ದನು.

೧೧. ಅವನಿಗೆ ಕಾಶಿರಾಜನ ಮಗಳಾದ ಸುನಂದೆಯೆಂಬ ಸಾಧ್ವೀಮಣಿಯು ಪತ್ನಿಯಾದಳು.

೧೨. ಆ ಸುದರ್ಶನರಾಜನು ಆ ಪತ್ನಿಯೊಡನೆ ಯಾವಾಗಲೂ ಸುಖವನ್ನನುಭವಿಸುತ್ತಿದ್ದನು. ಹೀಗೆ ಅವನು ಭೋಗಗಳನ್ನನುಭವಿಸುತ್ತ ಬಹಳಕಾಲವನ್ನು ಕಳೆದನು.

೧೩. ಅವನು ಭಾರ್ಯೆಯೊಡನೆ ಮಹಾಯಜ್ಞಗಳನ್ನೂ, ಅನೇಕ ದಾನಗಳನ್ನೂ ಮಾಡುತ್ತಿರಲು ಬಹುಕಾಲ ಕಳೆದುಹೋಯಿತು.

೧೪. ಅವನು ಒಂದಾನೊಂದುವೇಳೆ ಮಾಘಮಾಸದಲ್ಲಿ ಶಿವರಾತ್ರಿಯದಿನ ಹಿಂದಿನಜನ್ಮವನ್ನು ಸ್ಮರಿಸಿ ಪತ್ನಿಯನ್ನು ಕರೆದು ಇಂತೆಂದನು.

೧೫. ಸುದರ್ಶನನು ಹೇಳುತ್ತಾನೆ :—ದೇವಿ ! ನಾನು ಶಿವರಾತ್ರಿವ್ರತವನ್ನಾಚರಿಸಬೇಕು. ಈ ವ್ರತದ ಮಾಹಾತ್ಮ್ಯದಿಂದ ನಾನು ರಾಜ್ಯವನ್ನು ಪಡೆದಿರುವೆನು.

ರಾಜ್ಞ್ಯುವಾಚ :—

ಮಹಾಪ್ರಭಾವೋ ರಾಜೇಂದ್ರ ಏವಮುಕ್ತಂ ತ್ವಯಾ ಮಮ ।
ಏತನ್ಮೇ ಕಾರಣಂ ಬ್ರೂಹಿ ಆಶ್ಚರ್ಯಂ ಹೃದಿ ವರ್ತತೇ ॥ ೧೬ ॥

ರಾಜೋವಾಚ :—

ಶೃಣು ತೀರ್ಥಸ್ಯ ಮಾಹಾತ್ಮ್ಯಂ ಶಿವರಾತ್ರಿಮುಪೋಷಣಾತ್ ।
ತಸ್ಮಿಂಛಿವಪುರೇ ರಮ್ಯೇ ಸ್ವರ್ಗದ್ವಾರೇ ಸುಶೋಭನೇ ॥ ೧೭ ॥
ಆದಿತೀರ್ಥೇ ಪ್ರಭಾಸೇ ತು ಕಾಮಿಕೇ ತೀರ್ಥ ಉತ್ತಮೇ ॥ ೧೮ ॥
ಋದ್ಧಿಯುಕ್ತೇ ಪುರೇ ತಸ್ಮಿನ್ನಿತ್ಯಂ ಧರ್ಮಾನುಸೇವಿತೇ ।
ಶಿವರಾತ್ರ್ಯಾಂ ಗತೋ ರಾಜ್ಞೀ ತಿಥೀನಾಮುತ್ತಮಾ ತಿಥಿಃ ॥ ೧೯ ॥
ಮಾನವಾಸ್ತತ್ರ ಯೇ ಕೇಚಿತ್ಪುರರಾಷ್ಟ್ರನಿವಾಸಿನಃ ।
ತತ್ರಾಗತಾ ವರಾರೋಹೇ ಶಿವರಾತ್ರ್ಯಾಮುಪೋಷಿತುಂ ॥ ೨೦ ॥
ಧನನಾಮಾ ವಣಿಕ್ಕಶ್ಚಿತ್ತತ್ರೈವ ವಸತೇ ಸದಾ ।
ಧನಾಢ್ಯಃ ಸ ತು ಧರ್ಮಾತ್ಮಾ ಸದಾ ಧರ್ಮಪರಾಯಣಃ ॥ ೨೧ ॥
ಸ ಭಾರ್ಯಾಸಹಿತಸ್ತತ್ರ ಶಿವರಾತ್ರಿಮುಪೋಷಿತಃ ।
ತಸ್ಯ ಭಾರ್ಯಾಽಭವತ್ಸಾಧ್ವೀ ರೂಪಯೌವನಸಂವೃತಾ ॥ ೨೨ ॥

---

೧೬. ರಾಣಿಯು ಹೇಳುತ್ತಾಳೆ :—ರಾಜೇಂದ್ರ ! ನೀನು ಮಹಾಪ್ರಭಾವ ಸಹಿತವಾದ ವಿಷಯವನ್ನು ಹೇಳಿರುವೆ. ಇದಕ್ಕೆ ಕಾರಣವೇನು ? ಹೇಳು ನನ್ನ ಮನಸ್ಸಿಗೆ ತುಂಬ ಆಶ್ಚರ್ಯವುಂಟಾಗಿದೆ.

೧೭–೧೯. ರಾಜನು ಹೇಳುತ್ತಾನೆ :—ಆ ಪ್ರಭಾಸತೀರ್ಥದ ಮಾಹಾತ್ಮ್ಯವನ್ನೂ, ಶಿವರಾತ್ರಿಯಲ್ಲಿ ಉಪವಾಸ ಮಾಡಿದ ಫಲವನ್ನೂ ಕೇಳು. ನಾನು ಉತ್ತಮವಾದ ಶಿವರಾತ್ರಿದಿನ ಸ್ವರ್ಗಕ್ಕೆ ಬಾಗಿಲೂ, ಇಷ್ಟಾರ್ಥವನ್ನೀಯುವುದೂ, ಸಂಪತ್ತಿನಿಂದ ಸಮೃದ್ಧಿಗೊಂಡುದೂ, ಧರ್ಮಸಹಿತವಾದುದೂ ಆದ ಆ ಉತ್ತಮ ಪ್ರಭಾಸ ಕ್ಷೇತ್ರಕ್ಕೆ ಹೋದೆನು.

೨೦. ಪಟ್ಟಣ ದೇಶಗಳಲ್ಲಿ ವಾಸಮಾಡುವ ಅನೇಕ ಜನರು ಶಿವರಾತ್ರಿಯ ದಿನ ಉಪವಾಸಮಾಡಲು ಅಲ್ಲಿಗೆ ಬಂದಿದ್ದರು.

೨೧. ಹಣಗಾರನೂ, ಧರ್ಮಿಷ್ಠನೂ ಆದ ಧನನೆಂಬ ಒಬ್ಬ ವರ್ತಕನು ಅಲ್ಲಿ ಯಾವಾಗಲೂ ವಾಸಮಾಡುತ್ತಿದ್ದನು.

೨೨–೨೪. ಅವನಿಗೆ ಪತಿವ್ರತೆಯೂ, ಸೌಂದರ್ಯ ಯೌವನಗಳುಳ್ಳವಳೂ, ಡಾಬು, ಹಾರ ಮೊದಲಾದ ಒಡವೆಗಳಿಂದ ಅಲಂಕಾರಗೊಂಡವಳೂ, ಆದ ಪತ್ನಿ

ಪ್ರಚಲನ್ಮೇಖಲಾಹಾರಾ ಸರ್ವಾಭರಣಭೂಷಿತಾ ।
ಸ ತಯಾ ಭಾರ್ಯಯಾ ಸಾರ್ಧಂ ಕಾಮಕ್ರೋಧವಿವರ್ಜಿತಃ ॥ ೨೩ ॥
ಪ್ರಭಾಸಸ್ಯಾಗ್ರತೋ ಭೂತ್ವಾ ಸ್ನಾತಃ ಶುಕ್ಲಾಂಬರಃ ಶುಚಿಃ ।
ಯಥೋಕ್ತೇನ ವಿಧಾನೇನ ಭಕ್ತ್ಯಾ ನಿದ್ರಾವಿವರ್ಜಿತಃ ॥ ೨೪ ॥
ತತ್ರಾಹಂ ಚೌರರೂಪೇಣ ಪಾಪಃ ಸ್ತೈನ್ಯಂ ಸಮಾಶ್ರಿತಃ ।
ಸಚ್ಛೂದ್ರಾಣಾಂ ಕುಲೇ ಜಾತೋ ದೇವಬ್ರಾಹ್ಮಣಪೂಜಕಃ ॥ ೨೫ ॥
ಪೂರ್ವಕರ್ಮಾನುಸಂಯೋಗಾದ್ವಿಕರ್ಮಣಿ ರತಃ ಸದಾ ।
ತಸ್ಯಾಂ ರಾತ್ರ್ಯಾಮಹಂ ತತ್ರ ಜನಮಧ್ಯೇ ತು ಸಂಸ್ಥಿತಃ ॥ ೨೬ ॥
ಕುಂಡಲೀನಃ ಸ್ಥಿತಸ್ತತ್ರ ರಂಧ್ರಾಪೇಕ್ಷೀ ವರಾನನೇ ।
ವಣಿಜಸ್ತಸ್ಯ ಭಾರ್ಯಾಯಾಶ್ಛಿದ್ರಾನ್ವೇಷಣತತ್ಪರಃ ॥ ೨೭ ॥
ಸಾ ರಾತ್ರಿರ್ಜಾಗ್ರತಸ್ತಸ್ಯ ಗತಾ ಮೇ ವಿಜನೇ ತಥಾ ।
ಗೀತನೃತ್ಯಾದಿನಿರ್ಘೋಷೈರ್ವೇದ ಮಂಗಲ ಪಾಠಕೈಃ ॥ ೨೮ ॥
ತಾಲಶಬ್ದೈಸ್ತಥಾ ಶಬ್ದೈಃ ಪುಸ್ತಕಾನಾಂ ಚ ವಾಚಕೈಃ ।
ಏವಂ ರಾತ್ರ್ಯಾಂ ತು ಶೇಷಾಯಾಂ ಯಾವತ್ತಿಷ್ಠತಿ ತತ್ರ ವೈ ॥ ೨೯ ॥
ನಿರೋಧೇನ ಸಮಾಯುಕ್ತಾ ಪೀಡ್ಯಮಾನಾ ಶುಚಿಸ್ಮಿತಾ ।
ಧನಿಭಾರ್ಯಾ ನಿರೋಧಾರ್ತಾ ದೇವಾಗಾರಾದ್ಬಹಿರ್ಗತಾ ॥ ೩೦ ॥

ಯಿದ್ದಳು. ಅವನು ಆ ಪತ್ನಿಯೊಡನೆ ಶಿವರಾತ್ರಿ ದಿನ ಪ್ರಭಾಸದ ಮುಂಭಾಗದಲ್ಲಿದ್ದು ವಿಧಿಯಂತೆ ಮಿಂದು ಉಪವಾಸಮಾಡಿ ರಾತ್ರಿ ಜಾಗರಣೆಗೈದನು.

೨೫–೨೬. ಸಚ್ಛೂದ್ರರ ವಂಶದಲ್ಲಿ ಹುಟ್ಟಿದವನೂ, ದೇವ ಬ್ರಾಹ್ಮಣರನ್ನು ಪೂಜಿಸುವವನೂ. ಪೂರ್ವಕರ್ಮವಶದಿಂದ ಯಾವಾಗಲೂ ಕಳ್ಳತನವನ್ನು ಆಶ್ರಯಿಸಿದವನೂ ಆದ ನಾನು ಆ ರಾತ್ರಿ ಅಲ್ಲಿ ಜನರ ಮಧ್ಯದಲ್ಲಿದ್ದೆನು.

೨೭–೩೦. ಪ್ರಿಯಳೆ! ನಾನು ರಹಸ್ಯವಾಗಿ ಕುಂಡದಲ್ಲಿ ಅಡಗಿಕೊಂಡು ಆ ವೈಶ್ಯನ ಪತ್ನಿಯ ಒಡವೆಗಳನ್ನು ಕದಿಯಲು ನಿದ್ರೆಯಿಲ್ಲದೆ ಅವಕಾಶವನ್ನು ನಿರೀಕ್ಷಿಸುತ್ತಿರಲು ಆ ರಾತ್ರಿಯು ಕಳೆಯಿತು. ಸಂಗೀತ, ನೃತ್ಯ, ವೇದಪಾಠ, ತಾಳ, ಪುಸ್ತಕವಾಚನ ಶಬ್ದಗಳಿಂದ ರಾತ್ರಿಯು ಕಳೆಯಲು ಅಲ್ಲಿರುವ ವೈಶ್ಯನ ಸತಿಯು ಮೂತ್ರ ವಿಸರ್ಜನೆಗಾಗಿ ಹೊರಗೆ ಬಂದಳು.

ತಸ್ಯಾಃ ಕರ್ಣೌ ತ್ರೋಟಯಿತ್ವಾ ಪ್ರವಿಷ್ಟೋಽಹಂ ಜಲೇ ಸ್ಥಿತಃ ।
ತತಃ ಕೋಲಾಹಲಸ್ತತ್ರ ಕೃತಸ್ತತ್ಪುರವಾಸಿಭಿಃ ॥ ೩೧ ॥
ಶ್ರುತ್ವಾ ಕೋಲಾಹಲಂ ಶಬ್ದಂ ಕರ್ಣತ್ರೋಟನಜಂ ತದಾ ।
ಧಾವಿತಾ ರಕ್ಷಕಾಸ್ತತ್ರ ರಾಜಶಾಸನಕಾರಕಾಃ ॥ ೩೨ ॥
ತೈರಹಂ ತಸ್ತ್ರಹಸ್ತೈಶ್ಚ ಉಲ್ಕಾಹಸ್ತೈಃ ಸಮಂತತಃ ॥
ನಿರೀಕ್ಷಿತೋಽಥ ನ ಪ್ರಾಪ್ತಂ ಸುವರ್ಣಂ ಮನ್ಮುಖೇ ಸ್ಥಿತಂ ॥ ೩೩ ॥
ಖಡ್ಗೇನ ತೀಕ್ಷ್ಣಧಾರೇಣ ಛಿತ್ವಾ ಶೀರ್ಷಂ ತದಾ ಮಮ ।
ಉಲ್ಕಾಹಸ್ತಾ ನಿರೀಕ್ಷಂತೋ ನಾಪಶ್ಯನ್ಸ್ವರ್ಣಮಣ್ವಪಿ ॥ ೩೪ ॥
ಹಿತ್ವಾ ಮಾಂ ತೇ ಗತಾಃ ಸರ್ವೇ ಗತ್ವಾ ರಾಜ್ಞೇ ನ್ಯವೇದಯನ್ ।
ನ ಕಿಂಚಿತ್ತತ್ರ ಸಂಪ್ರಾಪ್ತಂ ಹತೋಽಸ್ಮಾಭಿಶ್ಚ ತತ್ಕ್ಷಣಾತ್ ॥ ೩೫ ॥
ಕಥಾಯಿತ್ವಾ ತು ತೇ ಸರ್ವೇ ಯಥಾದೇಶಂ ಗತಾಃ ಪುನಃ ।
ತತೋ ವೈ ಬಂಧುನಾ ತತ್ರ ಭಯಭೀತೇನ ಚೇತಸಾ ॥ ೩೬ ॥
ನಿಖಾತಂ ಮಮ ತತ್ರೈವ ಶಿರಃ ಕಾಯೇನ ಸಂಯುತಂ ।
ಖಾತಂ ಕೃತ್ವಾ ಪ್ರಿಯೇ ತತ್ರ ಬ್ರಹ್ಮತೀರ್ಥಸ್ಯ ಚೋತ್ತರೇ ॥ ೩೭ ॥

---

೩೧. ಆಗ ನೀರಿನಲ್ಲಿ ಅಡಗಿಕೊಂಡಿರುವ ನಾನು ಅವಳ ಕಿವಿಗಳನ್ನು ಕತ್ತರಿಸಿಕೊಂಡು ಓಡಿದೆನು. ಬಳಿಕ ಆ ಪಟ್ಟಣಿಗರು ಗದ್ದಲ ಮಾಡಿದರು.

೩೨. ಆಗ ಕಿವಿ ಕತ್ತರಿಸಿದ್ದರಿಂದುಂಟಾದ ಗದ್ದಲವನ್ನು ಕೇಳಿ ನಗರ ರಕ್ಷಕರಾದ ರಾಜ ಪುರುಷರು ಅಲ್ಲಿಗೆ ಓಡಿಬಂದರು.

೩೩. ಆಯುಧ, ಬೆಂಕಿಯ ಕೊಳ್ಳಿಗಳನ್ನು ಹಿಡಿದಿರುವ ಆ ರಾಜ ಪುರುಷರು ಸುತ್ತಲೂ ಹುಡುಕಿ ಕಡೆಗೆ ನನ್ನನ್ನು ನೋಡಿದರು. ಆದರೆ ನನ್ನ ಬಾಯಿಯಲ್ಲಿರುವ ಚಿನ್ನವು ಅವರಿಗೆ ಸಿಗಲಿಲ್ಲ.

೩೪. ಅವರು ಹರಿತವಾದ ಅಲಗುಳ್ಳ ಕತ್ತಿಯಿಂದ ನನ್ನ ತಲೆಯನ್ನು ಕತ್ತರಿಸಿ ಬೆಂಕಿಯಕೊಳ್ಳಿಗಳನ್ನು ಹಿಡಿದುಕೊಂಡು ನೋಡಿದರೂ ಸ್ವಲ್ಪ ಚಿನ್ನವೂ ಕಾಣಿಸಲಿಲ್ಲ.

೩೫–೩೭. ಆ ರಾಜಪುರುಷರು ನನ್ನನ್ನು ಅಲ್ಲಿಯೇ ಬಿಟ್ಟು ರಾಜನ ಹತ್ತಿರ ಹೋಗಿ "ನಾವು ಆ ಕಳ್ಳನನ್ನು ಕೊಂದೆವು. ಆದರೆ ಅವನಲ್ಲಿ ಏನೂ ಸಿಗಲಿಲ್ಲ" ಎಂದು ಹೇಳಿ ತಮ್ಮ ಸ್ಥಳಕ್ಕೆ ಹೊರಟುಹೋದರು. ಬಳಿಕ ಹೆದರಿದ ನನ ಬಂಧುವು

ಪಿಹಿತೋಽಹಂ ತು ತತ್ರೈವ ಪ್ರಭಾಸೇ ತೀರ್ಥ ಉತ್ತಮೇ ।
ಶಿವರಾತ್ರಿಪ್ರಭಾವೇನ ತಜ್ಜಾತಿಸ್ಮರತಾಂ ಗತಃ ॥ ೩೮ ॥
ರಾಜ್ಯಂ ನಿಷ್ಕಂಟಕಂ ಪ್ರಾಪ್ತಂ ಸಮೃದ್ಧಂ ವರವರ್ಣಿನಿ ।
ಏತತ್ಪ್ರಭಾಸಮಾಹಾತ್ಮ್ಯಂ ಶಿವರಾತ್ರೇರುಪೋಷಣಾತ್ ॥
ಏತತ್ಫಲಂ ಮಯಾ ಲಬ್ಧಂ ಗತ್ವಾ ತಸ್ಮಾದುಪೋಷಯೇ ॥ ೩೯ ॥

ರಾಜ್ಞ್ಯುವಾಚ :—

ಗಚ್ಛಾವಸ್ತತ್ರ ಯತ್ರೈವ ಕಪಾಲಂ ಪತಿತಂ ತವ ।
ಸ್ಫೋಟಿತೇ ಚ ಕಪಾಲೇ ಚ ಹಿರಣ್ಯಂ ದೃಶ್ಯತೇಯದಿ ॥
ಪ್ರತ್ಯಯೋ ಮೇ ಭವೇತ್ಪಶ್ಚಾತ್ತವ ವಾಕ್ಯೇ ನ ಸಂಶಯಃ ॥ ೪೦ ॥

ರಾಜೋವಾಚ :—

ಕಲ್ಪಂ ಹಿ ತಿಷ್ಠತೇ ಚಾಸ್ಥಿ ಯಾವದ್ಭೂಮಿವಿಪರ್ಯಯಃ ।
ಉತ್ತಿಷ್ಠ ವ್ರಜ ಭದ್ರಂ ತೇ ಪ್ರಭಾಸಂ ಕ್ಷೇತ್ರಮುತ್ತಮಂ ॥ ೪೧ ॥
ತಸ್ಯ ತದ್ವಚನಂ ಶ್ರುತ್ವಾ ಯದ್ರಾಜ್ಞಾ ಸಮುದೀರಿತಂ ।
ಗಮನಾಯ ಮತಿಂ ಚಕ್ರೇ ಶಿವರಾತ್ರ್ಯಾ ಉಪೋಷಣೇ ॥ ೪೨ ॥

ಆ ಬ್ರಹ್ಮತೀರ್ಥದ ಉತ್ತರವಲ್ಲಿ ಕುಣಿಯನ್ನು ತೋಡಿ ನನ್ನ ದೇಹದೊಡನೆ ತಲೆಯನು ಹೂತನು.

೩೮. ಆ ಪ್ರಭಾಸತೀರ್ಥದಲ್ಲಿ ಅಡಗಿಕೊಂಡಿದ್ದ ನಾನು ಶಿವರಾತ್ರಿಯ ಮಾಹಾತ್ಮ್ಯದಿಂದ ಹಿಂದಿನ ಜನ್ಮವನ್ನು ಸ್ಮರಿಸುವೆನು.

೩೯. ಈ ಪ್ರಭಾಸಮಾಹಾತ್ಮದಿಂದಲೂ, ಶಿವರಾತ್ರಿದಿನ ಉಪವಾಸಮಾಡಿದ್ದರಿಂದಲೂ ಇವರ ಫಲರೂಪವಾದ ಶತ್ರುಗಳಿಲ್ಲದ ರಾಜ್ಯವನ್ನು ಪಡೆದೆನು. ಆದುದರಿಂದ ನಾನು ಅಲ್ಲಿಗೆ ಹೋಗಿ ಉಪವಾಸಮಾಡುವೆನು.

೪೦. ರಾಣಿಯು ಹೇಳುತ್ತಾಳೆ :—ನಿನ್ನ ಕಪಾಲವು ಬಿದ್ದಿರುವ ಆ ಸ್ಥಳಕ್ಕೆ ಹೋಗೋಣ. ಕಪಾಲವನ್ನು ಒಡೆದಾಗ ಸುವರ್ಣವು ಕಾಣಿಸಿಕೊಂಡರೆ ನಿನ್ನ ಮಾತಿನಲ್ಲಿ ನನಗೆ ನಂಬಿಕೆಯುಂಟಾಗುವುದು. ಸಂದೇಹವಿಲ್ಲ.

೪೧. ರಾಜನು ಹೇಳುತ್ತಾನೆ :—ಭೂಮಿಯು ವ್ಯತ್ಯಾಸಗೊಳ್ಳುವವರೆಗೆ ಕಲ್ಪಕಾಲದತನಕ ಮೂಳೆಯು ಇರುವುದು, ಏಳು. ಆ ಮಂಗಳಕರವಾದ ಪ್ರಭಾಸ ಕ್ಷೇತ್ರಕ್ಕೆ ನಡೆ.

೪೨. ರಾಣಿಯು ರಾಜನು ಹೇಳಿದ ಆ ಮಾತನ್ನು ಕೇಳಿ ಆ ಪ್ರಭಾಸಕ್ಕೆ ಯಾತ್ರೆಹೋಗುವುದನ್ನೂ ಶಿವರಾತ್ರಿದಿನದ ಉಪವಾಸವನ್ನೂ ನಿಶ್ಚಯಿಸಿದಳು.

ತತೋಽಶ್ವೈರ್ಜವನೈರ್ಯುಕ್ತಂ ರಥಂ ಹೇಮವಿಭೂಷಿತಂ ।
ಆಸ್ಥಾಯ ಸಹ ಪತ್ನ್ಯಾ ಚ ಪ್ರಭಾಸಂ ಕ್ಷೇತ್ರಮೇಯಿವಾನ್ ॥ ೪೩ ॥
ವ್ರತಂ ಕೃತ್ವಾ ಪ್ರಭಾಸೇ ತು ಯಥೋಕ್ತಂ ವರವರ್ಣಿನಿ ।
ಬ್ರಹ್ಮತೀರ್ಥೇ ಸಮಾಗತ್ಯ ಉದ್ಧೃತ್ಯ ಸಕಲಂ ತತಃ ॥ ೪೪ ॥
ಹಿರಣ್ಯಂ ದರ್ಶಯಾಮಾಸ ಸ್ಫೋಟಯಿತ್ವಾ ಶವಂ ಸ್ವಯಂ ॥ ೪೫ ॥

ಈಶ್ವರ ಉವಾಚ :—

ಜಾತಸಂಪ್ರತ್ಯಯಾ ಭಾರ್ಯಾ ತಸ್ಯ ರಾಜ್ಞೋ ಬಭೂವ ಹ ।
ಜಗಾಮ ಪರಮಂ ಸ್ಥಾನಂ ಯತ್ರ ಕಲ್ಯಾಣಮುತ್ತಮಂ ॥ ೪೬ ॥
ಜನೋಽಪಿ ವಿಸ್ಮಿತಃ ಸರ್ವೋ ದೃಷ್ಟ್ವಾ ಚಿತ್ರಂ ತದದ್ಭುತಂ ॥ ೪೭ ॥
ನದೀ ಚಿತ್ರಪಥಾನಾಮ ತತ್ರೋತ್ಪನ್ನಾ ವರಾನನೇ ।
ಚಿತ್ರಾದಿತ್ಯಸ್ಯ ಪೂರ್ವೇಣ ಬ್ರಹ್ಮತೀರ್ಥಸ್ಯ ಚೋತ್ತರೇ ॥ ೪೮ ॥
ತಸ್ಯಾಂ ತತ್ತಿಷ್ಠತೇ ತತ್ರ ಸರ್ವಪಾಪಪ್ರಣಾಶನಂ ॥ ೪೯ ॥

---

೪೩. ತರುವಾಯ ಆ ದೊರೆಯು ಪತ್ನಿಯೊಡನೆ ವೇಗವುಳ್ಳ ಕುದುರೆಗಳನ್ನು ಕಟ್ಟಿರುವುದೂ, ಸುವರ್ಣದಿಂದ ಅಲಂಕಾರಗೊಂಡುದೂ ಆದ ರಥದಲ್ಲಿ ಕುಳಿತು ಪ್ರಭಾಸಕ್ಷೇತ್ರವನ್ನು ಹೊಂದಿದನು.

೪೪-೪೫. ಅವನು ಪ್ರಭಾಸಕ್ಷೇತ್ರದಲ್ಲಿ ವಿಧಿಯಂತೆ ವ್ರತವನ್ನಾಚರಿಸಿ ಬ್ರಹ್ಮತೀರ್ಥಕ್ಕೆ ಬಂದು ಶವವನ್ನು ಮೇಲಕ್ಕೆತ್ತಿ ಅದರ ಕಪಾಲವನ್ನು ಒಡೆದು ಚಿನ್ನವನ್ನು ತೋರಿಸಿದನು.

೪೬. ಈಶ್ವರನು ಹೇಳುತ್ತಾನೆ :—ಅದರಿಂದ ಅವನ ರಾಣಿಯು ನಂಬಿಕೆಯುಳ್ಳವಳಾಗಿ ಮಂಗಳಕರವಾದ ಉತ್ತಮಸ್ಥಾನಕ್ಕೆ ತೆರಳಿದಳು.

೪೭. ಅಲ್ಲಿರುವ ಜನರೆಲ್ಲರೂ ಆ ಆಶ್ಚರ್ಯ ವಿಷಯವನ್ನು ಕಂಡು ವಿಸ್ಮಿತರಾದರು.

೪೮. ಸುಂದರಿ ! ಚಿತ್ರಾದಿತ್ಯನ ಪೂರ್ವದಲ್ಲಿಯೂ ಬ್ರಹ್ಮತೀರ್ಥದ ಉತ್ತರಲ್ಲಿಯೂ ಚಿತ್ರಪಥಾ ಎಂಬ ನದಿಯು ಹುಟ್ಟಿರುವುದು.

೪೯. ಸಕಲ ಪಾಪವನ್ನು ನೀಗಿಸುವ ಆ ಕುಂಡಲಕೂಪತೀರ್ಥವು ಆ ನದಿಯಲ್ಲಿರುವುದು.

ಶ್ರಾವಣೇ ಮಾಸಿ ಸಂಪ್ರಾಪ್ತೇ ತಸ್ಮಿನ್ಕೂಪೇ ವಿಧಾನತಃ ।
ಯಃ ಸ್ನಾನಂ ಕುರುತೇ ದೇವಿ ಶ್ರಾದ್ಧಂ ತತ್ರ ವಿಶೇಷತಃ ॥ ೫೦ ॥
ಚಿತ್ರಾದಿತ್ಯಂ ತು ಸಂಪೂಜ್ಯ ಶಿವಲೋಕೇ ಮಹೀಯತೇ ॥ ೫೧ ॥
ಏತತ್ತೇ ಕಥಿತಂ ಸರ್ವಂ ಶಿವರಾತ್ರ್ಯಾ ಮಹತ್ಫಲಂ ।
ಭುಕ್ತಿಮುಕ್ತಿಪ್ರದಂ ಪುಣ್ಯಂ ಸರ್ವಪಾಪಪ್ರಣಾಶನಂ ॥ ೫೨ ॥
ಯ ಇದಂ ಪಠತೇ ನಿತ್ಯಂ ಶೃಣುಯಾದ್ವಾಪಿ ಮಾನವಃ ।
ಸರ್ವಪಾಪವಿನಿರ್ಮುಕ್ತೋ ರುದ್ರಲೋಕೇ ಮಹೀಯತೇ ॥ ೫೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಂಡಲಕೂಪವರ್ಣನಂ ನಾಮ
॥ ನಾಮಾಷ್ಟಚತ್ವಾರಿಂಶದುತ್ತರಶತತಮೋಽಧ್ಯಾಯಃ ॥

೫೦–೫೧. ದೇವಿ! ಶ್ರಾವಣಮಾಸವು ಬರಲು ಆ ಕೂಪದಲ್ಲಿ ಮಿಂದು, ಶ್ರಾದ್ಧ ಮಾಡಿ ಚಿತ್ರಾದಿತ್ಯನನ್ನು ಪೂಜಿಸಿದವನು ಶಿವಲೋಕದಲ್ಲಿ ಪೂಜ್ಯನಾಗುವನು.

೫೨. ಹೀಗೆ ಭುಕ್ತಿಮುಕ್ತಿಗಳನ್ನೀಯುವುದೂ, ಸಕಲ ಪಾಪಗಳನ್ನು ಪರಿಹರಿಸುವುದೂ ಆದ ಈ ಶಿವರಾತ್ರಿಯ ಮಹಾಫಲವನ್ನು ನಿನಗೆ ಹೇಳಿರುವೆನು.

೫೩. ಇದನ್ನು ನಿತ್ಯವೂ ಪಠಿಸಿದವನಾಗಲಿ, ಕೇಳಿದವನಾಗಲಿ ಸಕಲ ಪಾಪ ಮುಕ್ತನಾಗಿ ರುದ್ರಲೋಕದಲ್ಲಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಂಡಲಕೂಪಮಾಹಾತ್ಮ್ಯವರ್ಣನವೆಂಬ
ನೂರನಲವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನತ್ರಿಂಶದುತ್ತರಶತತಮೋಽಧ್ಯಾಯಃ

ಭೈರವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಭೈರವೇಶ್ವರಮುತ್ತಮಂ ।
ಬ್ರಹ್ಮಕುಂಡಸ್ಯ ಈಶಾನೇ ಸ್ಥಿತಂ ಪಾಪಪ್ರಣಾಶನಂ ।
ಚತುರ್ವಕ್ತ್ರಂ ಮಹಾದೇವಂ ಸಂಸ್ಥಿತಂ ತೀರ್ಥರಕ್ಷಣೇ ॥ ೧ ॥
ತತ್ರ ಸ್ನಾತ್ವಾ ಮಹಾಕುಂಡೇ ಯಸ್ತಂ ಪೂಜಯತೇ ನರಃ ।
ಪಂಚೋಪಚಾರವಿಧಿನಾ ಭಕ್ತಿಯುಕ್ತೋ ಯತೇಂದ್ರಿಯಃ ॥ ೨ ॥
ಕುಲಾನಿ ಯಾನ್ಯತೀತಾನಿ ಭವಿಷ್ಯಾಣಿ ಚ ಯಾನಿ ವೈ ।
ಕಾರಯೇತ್ಸ ನರೋ ದೇವಿ ನಾತ್ರ ಕಾರ್ಯಾ ವಿಚಾರಣಾ ॥ ೩ ॥
ನ ಚಾತ್ರ ಸಂಭವಸ್ತಸ್ಯ ವಿನಾಶೋ ನೈವ ಜಾಯತೇ ।
ವಿಮಾನೈಶ್ಚರತೇ ನಿತ್ಯಂ ದಿವಾಕರಸಮಪ್ರಭೈಃ ॥ ೪ ॥
ಸ್ತ್ರೀ ಸಹಸ್ರೈರ್ವೃತೋ ನಿತ್ಯಂ ಕ್ರೀಡತೇ ದೇವವದ್ದಿವಿ ॥ ೫ ॥

ಕನ್ನಡದ ಅನುವಾದ

ಭೈರವೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯು ಬ್ರಹ್ಮಕುಂಡದ ಈಶಾನ್ಯದಿಕ್ಕಿನಲ್ಲಿ ಪಾಪಗಳನ್ನು ನಿವಾರಿಸುವವನೂ, ನಾಲ್ಕುಮುಖವುಳ್ಳವನೂ, ಆದ ಭೈರವೇಶ್ವರನ ತೀರ್ಥರಕ್ಷಣೆಗಾಗಿ ನೆಲಸಿರುವನು. ಆ ಭೈರವೇಶ್ವರನನ್ನು ಹೊಂದಬೇಕು.

೨–೩. ಆ ಮಹಾಕುಂಡದಲ್ಲಿ ಮಿಂದು ಪಂಚೋಪಚಾರ ಕ್ರಮದಿಂದ ಜಿತೇಂದ್ರಿಯನಾಗಿ ಭಕ್ತಿಯಿಂದ ಆತನನ್ನು ಪೂಜಿಸುವವನು ಹಿಂದಿನ ಮತ್ತು ಮುಂದಿನ ವಂಶದವರನ್ನು ಉದ್ಧರಿಸುವನು. ಈ ವಿಷಯದಲ್ಲಿ ವಿಚಾರಮಾಡಬೇಕಾಗಿಲ್ಲ.

೪. ಆ ಮನುಷ್ಯನು ತಿರುಗಿ ಈ ಲೋಕದಲ್ಲಿ ಜನಿಸುವುದಿಲ್ಲ. ನಾಶವಾಗುವುದೂ ಇಲ್ಲ. ಅವನು ಯಾವಾಗಲೂ ಸೂರ್ಯನಂತೆ ಕಾಂತಿಯುಳ್ಳ ವಿಮಾನಗಳಿಂದ ಸಂಚರಿಸುವನು.

೫. ದೇವಲೋಕದಲ್ಲಿ ಅನೇಕ ಸ್ತ್ರೀಯರೊಡನೆ ದೇವತೆಯಂತೆ ಯಾವಾಗಲೂ ವಿನೋದಪಡುವನು.

ಏತಲ್ಲಿಂಗಂ ಮಹಾದೇವಿ ಚತುರ್ವಕ್ತ್ರಂ ಮಹಾಪ್ರಭಂ ।
ದೃಷ್ಟ್ವಾಪಿ ತದ್ವಿಮುಚ್ಯೇತ ಸರ್ವಪಾಪೈಸ್ತು ಮಾನವಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೈರವೇಶ್ವರಮಾಹಾತ್ಮ್ಯವರ್ಣನಂ
ನಾಮೈಕೋನಪಂಚಾದುತ್ತರಶತತಮೋಽಧ್ಯಾಯಃ

---

೬. ಮನುಷ್ಯನು ನಾಲ್ಕುಮುಖವುಳ್ಳದಾದ ಈ ಭೈರವೇಶ್ವರ ಲಿಂಗವನ್ನು ದರ್ಶನ ಮಾಡಿದ ಮಾತ್ರದಿಂದ ಸಕಲ ಪಾಪಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೈರವೇಶ್ವರಮಾಹಾತ್ಮ್ಯವರ್ಣನವೆಂಬ
ನೂರನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಶದುತ್ತರಶತತಮೋಽಧ್ಯಾಯಃ

ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಬ್ರಹ್ಮೇಶ್ವರಂ ಗಚ್ಛೇತ್ತಸ್ಯ ದಕ್ಷಿಣತಃ ಸ್ಥಿತಂ ।
ಬ್ರಹ್ಮಣಾ ಸ್ಥಾಪಿತಂ ಪೂರ್ವಂ ಬ್ರಹ್ಮಕುಂಡಸಮೀಪತಃ ।
ತ್ರಿಷು ಲೋಕೇಷು ವಿಖ್ಯಾತಂ ರಕ್ಷ್ಯಮಾಣಂ ಗಣೈರ್ಮಮ ॥ ೧ ॥
ತತ್ರ ಸ್ನಾತ್ವಾ ಚತುರ್ದಶ್ಯಾಮಮಾವಾಸ್ಯಾಂ ವಿಶೇಷತಃ ।
ಶ್ರಾದ್ಧಂ ಚ ವಿಧಿವತ್ಕೃತ್ವಾ ಬ್ರಹ್ಮೇಶಂ ಪೂಜಯೇತ್ತತಃ ॥ ೨ ॥
ವಿಪ್ರೇಭ್ಯಃ ಕಾಂಚನಂ ದದ್ಯಾತ್ಪ್ರೀತಯೇ ಶಂಕರಸ್ಯ ಚ ॥ ೩ ॥
ಏವಂ ಕೃತ್ವಾ ನರೋ ದೇವಿ ಲಭತೇ ಜನ್ಮನಃ ಫಲಂ ।
ವಿಪುಲಾಂ ಕೀರ್ತಿಮಾಯಾತಿ ಮೋದತೇ ಬ್ರಹ್ಮಣಾ ಪ್ರಿಯೇ ॥ ೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ ನಾಮ
ಪಂಚಾಶದುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಬ್ರಹ್ಮೇಶ್ವರಮಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಬಳಿಕ ಆ ಭೈರವೇಶ್ವರನ ದಕ್ಷಿಣದಲ್ಲಿ ಬ್ರಹ್ಮಕುಂಡದ ಹತ್ತಿರ ಹಿಂದೆ ಬ್ರಹ್ಮನು ಪ್ರತಿಷ್ಠೆಮಾಡಿರುವುದೂ, ಮೂರುಲೋಕಗಳಲ್ಲಿ ಪ್ರಖ್ಯಾತವಾದುದೂ ನನ್ನಗಣಗಳು ರಕ್ಷಿಸುತ್ತಿರುವುದೂ ಆದ ಬ್ರಹ್ಮೇಶ್ವರನೆಡೆಗೆ ಹೋಗಬೇಕು.

೨. ಅಲ್ಲಿ ಚತುರ್ದಶೀ, ಅಮಾವಾಸ್ಯೆದಿನಗಳಲ್ಲಿ ಮಿಂದು ವಿಶೇಷವಾಗಿ ವಿಧಿಯಂತೆ ಶ್ರಾದ್ಧಗೈದು ಬಳಿಕ ಬ್ರಹ್ಮೇಶನನ್ನಾರಾಧಿಸಬೇಕು.

೩. ಶಂಕರನ ಪ್ರೀತಿಗಾಗಿ ಬ್ರಾಹ್ಮಣರಿಗೆ ಸುವರ್ಣದಾನಮಾಡಬೇಕು.

೪. ದೇವಿ ! ಹೀಗೆ ಮಾಡಿದ ಮಾನವನು ಜನ್ಮ ಫಲಸ್ಯಾವನ್ನು ಹೊಂದಿ ಅತಿಶಯ ಕೀರ್ತಿಯನ್ನು ಪಡೆದು ಬ್ರಹ್ಮನೊಡನೆ ಆನಂದಪಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬ್ರಹೇಶ್ವರಮಾಹಾತ್ಮ್ಯ ವರ್ಣನವೆಂಬ
ನೂರಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಪಂಚಾಶದುತ್ತರಶತತಮೋಽಧ್ಯಾಯಃ

ಸಾವಿತ್ರೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ದಕ್ಷಿಣೇ ಭಾಗೇ ತೃತೀಯೋ ಭೈರವಃ ಸ್ಥಿತಃ ।
ಬ್ರಹ್ಮಕುಂಡಸಮೀಪೇ ತು ಸಾವಿತ್ರ್ಯಾ ಸಂಪ್ರತಿಷ್ಠಿತಃ ॥ ೧ ॥
ಆರಾಧ್ಯ ತತ್ರ ದೇವೇಶಂ ದೇವಾನಾಂ ಪ್ರಪಿತಾಮಹಂ ।
ವಾಯುಭಕ್ಷಾ ನಿರಾಹಾರಾ ತೋಷಯಾಮಾಸ ಶಂಕರಂ ॥ ೨ ॥
ತುಷ್ಟಃ ಪ್ರಾಹೇಶ್ವರೋ ದೇವಿ ಶಂಕರಸ್ತಾಂ ವರಾನನಾಂ ॥ ೩ ॥
ಯೋಽಸ್ಮಿನ್ಕುಂಡೇ ನರಃ ಸ್ನಾತ್ವಾ ಮಲ್ಲಿಂಗಂ ಪೂಜಯಿಷ್ಯತಿ ।
ಪೌರ್ಣಮಾಸ್ಯಾಂ ವಿಧಾನೇನ ಗಂಧಪುಷ್ಪಾದಿಭಿಃ ಕ್ರಮಾತ್ ॥ ೪ ॥
ದಾಸ್ಯೇ ತಸ್ಯ ವರಾನಿಷ್ಟಾನ್ಮನಸಾಽಭೀಪ್ಸಿತಾನ್ ಶುಭಾನ್ ॥ ೫ ॥
ಮಹಾಪಾತಕಯುಕ್ತೋಽಪಿ ಮುಕ್ತೋ ಭವತಿ ಪಾತಕೈಃ ।
ಸರ್ವಕಾಮಸಮೃದ್ಧಾತ್ಮಾ ಸ ಭೂಯಾದ್ವೃಷಧ್ವಜಃ ॥ ೬ ॥

ಕನ್ನಡದ ಅನುವಾದ

ಸಾವಿತ್ರೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಬ್ರಹ್ಮೇಶ್ವರನ ದಕ್ಷಿಣದಲ್ಲಿ ಬ್ರಹ್ಮಕುಂಡದ ಹತ್ತಿರ ಸಾವಿತ್ರಿಯು ಸ್ಥಾಪಿಸಿರುವ ಮೂರನೆಯ ಭೈರವನಿರುವನು.

೨. ಅಲ್ಲಿ ಸಾವಿತ್ರಿಯು ವಾಯುಭಕ್ಷಳಾಗಿ ಉಪವಾಸಮಾಡಿ ದೇವತೆಗಳ ಪ್ರಪಿತಾಮಹನಾದ ಶಂಕರನನ್ನಾರಾಧಿಸಿ ಸಂತೋಷಗೊಳಿಸಿದಳು.

೩. ಸಂತುಷ್ಟನಾದ ಶಂಕರನು ಅವಳನ್ನು ಕುರಿತು ಇಂತೆಂದನು.

೪. ಹುಣ್ಣಿಮೆಯದಿನ ಈ ಕುಂಡದಲ್ಲಿ ಮಿಂದು ಕ್ರಮದಂತೆ ನನ್ನ ಲಿಂಗವನ್ನು ಗಂಧಪುಷ್ಪಾದಿಗಳಿಂದ ಪೂಜಿಸಿದ ಮನುಷ್ಯನಿಗೆ ನಾನು ಅಭೀಪ್ಸಿತವರಗಳನ್ನೀಯುವೆನು.

೬. ಅತಿಶಯಪಾಪವುಳ್ಳವನೂ ಪಾಪಮುಕ್ತನಾಗಿ ಸಮಸ್ತೇಷ್ಟಾರ್ಥಗಳನ್ನು ಪಡೆದು ಶಂಕರನಾಗುವನು.

ಇತ್ಯೇವಮುಕ್ತ್ವಾ ದೇವೇಶಿ ತತೋಽಂತರ್ಧಾನಮಾಗತಃ ।
ಸಾವಿತ್ರೀ ಬ್ರಹ್ಮಲೋಕೇ ತು ಗತಾ ಸಂಸ್ಥಾಪ್ಯ ಶಂಕರಂ ॥ ೭ ॥
ಇತಿ ಸಂಕ್ಷೇಪತಃ ಪ್ರೋಕ್ತಂ ಸಾವಿತ್ರೀಶಮಹೋದಯಂ ।
ಶೃಣುಯಾದ್ಯಸ್ತು ಮತಿಮಾನ್ಸ ಮುಕ್ತಃ ಪಾತಕೈರ್ಭವೇತ್ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾವಿತ್ರೀಶ್ವರ ಭೈರವಮಾಹಾತ್ಮ್ಯವರ್ಣನಂ ನಾಮ
॥ ಏಕಪಂಚಾಶದುತ್ತರಶತತಮೋಽಧ್ಯಾಯಃ ॥

---

೭. ಶಂಕರನು ಹೀಗೆಂದುನುಡಿದುಅದೃಶ್ಯನಾದನು. ಸಾವಿತ್ರಿಯು ಶಂಕರನನ್ನು ಪ್ರತಿಷ್ಠೆಮಾಡಿ ಬ್ರಹ್ಮಲೋಕಕ್ಕೆ ಹೊರಟು ಹೋದಳು.

೮. ಹೀಗೆ ಸಾವಿತ್ರೀಶ್ವರನಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳಿದ ಜ್ಞಾನಿಯು ಪಾತಕಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಾವಿತ್ರೀಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಪಂಚಾಶದುತ್ತರಶತತಮೋಽಧ್ಯಾಯಃ

ನಾರದೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತೃತಿಯೋ ಭೈರವಃ ಪ್ರೋಕ್ತಶ್ಚತುರ್ಥಂ ಭೈರವಂ ಶೃಣು ।
ಬ್ರಹ್ಮೇಶಾತ್ಪಶ್ಚಿಮೇ ಭಾಗೇ ಧನುಷಾಂ ತ್ರಿತಯೇ ಸ್ಥಿತಂ ॥ ೧ ॥
ಸರ್ವಪಾಪಪ್ರಶಮನಂ ಸರ್ವಕಾಮಪ್ರದಂ ನೃಣಾಂ ।
ನಾರದೇಶ್ವರನಾಮಾನಂ ಸ್ಥಾಪಿತಂ ನಾರದೇನ ವೈ ॥ ೨ ॥
ಬ್ರಹ್ಮಲೋಕೇ ಸ್ಥಿತಃ ಪೂರ್ವಂ ನಾರದೋ ಭಗವಾನೃಷಿಃ ।
ತತ್ರ ದೃಷ್ಟ್ವಾ ಮಹಾವೀಣಾಂ ದಿವ್ಯಾಂ ತಂತ್ರ್ಯಯುತೈರ್ಯುತಾಂ ॥ ೩ ॥
ಸರಸ್ವತ್ಯಾ ವಿನಿರ್ಮುಕ್ತಾಂ ಬ್ರಹ್ಮಲೋಕೇ ಮಹಾಪ್ರಭಾಂ ।
ತೇನಾಸೌ ಕೌತುಕಾವಿಷ್ಟೋ ವಾದಯಾಮಾಸ ತಾಂ ಸದಾ ॥ ೪ ॥
ತಂತ್ರೀಭ್ಯೋ ವಾದ್ಯಮಾನೇಭ್ಯೋ ಬ್ರಾಹ್ಮಣಾಃ ಪತಿತಾ ಭುವಿ ।
ಸಪ್ತ ಸ್ವರಾಸ್ತೇ ವಿಖ್ಯಾತಾ ಮೂರ್ಛಿತಾಃ ಷಡ್ಜಕಾದಯಃ ॥ ೫ ॥

ಕನ್ನಡದ ಅನುವಾದ

ನಾರದೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮೂರನೆಯ ಭೈರವನನ್ನು ಹೇಳಿರುತ್ತೇನೆ. ಬ್ರಹ್ಮೇಶನಿಗಿಂತ ಪಶ್ಚಿಮದಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವ ಸಕಲ ಪಾಪವನ್ನು ನಿವಾರಿಸುವವನೂ, ಸಮಸ್ತೇಷ್ಟಗಳನ್ನು ಕೊಡುವವನೂ, ನಾರದನಿಂದ ಪ್ರತಿಷ್ಠೆ ಮಾಡಲ್ಪಟ್ಟವನೂ ಆದ ನಾರದೇಶ್ವರನೆಂಬ ನಾಲ್ಕನೆಯ ಭೈರವನವಿಷಯನ್ನುಕೇಳು.

೩–೪. ಬ್ರಹ್ಮಲೋಕದಲ್ಲಿರುವ ನಾರದಮುನಿಯು ಹತ್ತುಸಾವಿರ ತಂತಿಗಳಿಂದ ಕೂಡಿದ ಸರಸ್ವತಿಯು ಇಟ್ಟಿರುವ ದಿವ್ಯವೀಣೆಯನ್ನು ಕಂಡು ಕುತೂಹಲಗೊಂಡವನಾಗಿ ಅದನ್ನು ನುಡಿಸಿದನು.

೫. ಆಗ ನುಡಿಸುತ್ತಿರುವ ತಂತಿಗಳಿಂದ ಬ್ರಾಹ್ಮಣರು ಭೂಮಿಯಮೇಲೆ ಬಿದ್ದರು. ಅವರು ಆರೋಹಾವರೋಹಗಳಿಂದ ಕೂಡಿದ ಷಡ್ಜ ಮೊದಲಾದ ಏಳು ಸ್ವರಗಳಾದರು.

ತಾನ್ದೃಷ್ಟ್ವಾ ವಿಸ್ಮಯಾವಿಷ್ಟೋ ಮುಕ್ತ್ವಾ ವೀಣಾಂ ಪ್ರಯತ್ನತಃ ।
ಪಪ್ರಚ್ಛ ದೇವಂ ಬ್ರಹ್ಮಾಣಂ ಕಿಮಿದಂ ಕೌತುಕಂ ವಿಭೋ ॥ ೬ ॥
ವಾದ್ಯಮಾನಾಸು ತಂತ್ರೀಷು ಪತಿತಾ ಬ್ರಾಹ್ಮಣಾ ಭುವಿ ।
ಕ ಏತೇ ಬ್ರಾಹ್ಮಣಾ ದೇವ ಕಿಂ ಮೃತಾ ಇವ ಶೇರತೇ ॥ ೭ ॥

ಬ್ರಹ್ಮೋವಾಚ :—

ಏತೇ ಸ್ವರಾ ಮಹಾಭಾಗ ಮೂರ್ಛಿತಾಃ ಪತಿತಾ ಭುವಿ ।
ಅಜ್ಞಾನವಾದನೇನೈವ ಪಾಪಂ ಜಾತಂ ತವಾಧುನಾ ॥ ೮ ॥
ಸಪ್ತಬ್ರಾಹ್ಮಣವಿಧ್ವಂಸಪಾತಕಂ ತೇ ಸಮಾಗತಂ ।
ತಸ್ಮಾತ್ ಶೀಘ್ರಂ ವ್ರಜ ಮುನೇ ಪ್ರಭಾಸಂ ಕ್ಷೇತ್ರಮುತ್ತಮಂ ॥ ೯ ॥
ಸಮಾರಾಧಯ ದೇವೇಶಂ ಸರ್ವಪಾಪವಿಶುದ್ಧಯೇ ।
ಇತ್ಯುಕ್ತೋ ನಾರದಸ್ತತ್ರ ಸಂತಪ್ಯ ಚ ಮುಹುರ್ಮುಹುಃ ॥ ೧೦ ॥
ಕೃತ್ವಾ ವಿಷಾದಂ ಬಹುಶಃ ಪ್ರಭಾಸಂ ಕ್ಷೇತ್ರಮಾಗತಃ ।
ತತ್ರೈವ ಬ್ರಹ್ಮಕುಂಡಂ ತು ಸಮಾಸಾದ್ಯ ಪ್ರಯತ್ನತಃ ॥ ೧೧ ॥
ಭೈರವಂ ಪೂಜಯಾಮಾಸ ದಿವ್ಯಾಬ್ದಾನಾಂ ಶತಂ ಪ್ರಿಯೇ ।
ತತೋ ನಿಷ್ಕಲ್ಮಷೋ ಭೂತ್ವಾ ಗೀತಜ್ಞಶ್ಚಾಭವತ್ತಥಾ ॥ ೧೨ ॥
ತತಃ ಪ್ರಭೃತಿ ತಲ್ಲಿಂಗಂ ನಾರದೇಶ್ವರಭೈರವಂ ।
ಖ್ಯಾತಂ ಲೋಕೇ ಮಹಾದೇವಿ ಸರ್ವಪಾತಕನಾಶನಂ ॥ ೧೩ ॥

---

೬. ನಾರದನು ಅವರನ್ನು ನೋಡಿ ಆಶ್ಚರ್ಯಗೊಂಡು ಪ್ರಯತ್ನದಿಂದ ವೀಣೆಯನ್ನು ಬಿಟ್ಟು ಬ್ರಹ್ಮದೇವನನ್ನು ಇದೇನು ಕೌತುಕವೆಂದು ಕೇಳಿದನು.

೭. "ಸ್ವಾಮಿ! ತಂತಿಗಳನ್ನು ನುಡಿಸಲು ಬ್ರಾಹ್ಮಣರು ಭೂಮಿಯಲ್ಲಿ ಬಿದ್ದರು. ಈ ಬ್ರಾಹ್ಮಣರಾರು ? ಏತಕ್ಕೆ ಮೃತರಂತೆ ಮಲಗಿರುವರು".

೮. ಬ್ರಹ್ಮನು ಹೇಳುತ್ತಾನೆ:—ಮಹಾಭಾಗ್ಯವಂತನೆ! ಭೂಮಿಯಲ್ಲಿ ಬಿದ್ದಿರುವ ಇವು ಸಪ್ತಸ್ವರಗಳು. ಈಗ ನೀನು ತಿಳಿಯದೆ ನುಡಿಸಿದ್ದರಿಂದ ನಿನಗೆ ಪಾಪವುಂಟಾಗಿರುವುದು.

೯. ನಿನಗೆ ಏಳು ಜನ ಬ್ರಾಹ್ಮಣರನ್ನು ಕೊಂದ ಪಾಪವು ಸಂಭವಿಸುವುದು. ನಾರದ! ಆದ್ದರಿಂದ ನೀನು ಪ್ರಭಾಸಕ್ಷೇತ್ರಕ್ಕೆ ತೆರಳು.

೧೦–೧೨. ಅಲ್ಲಿ ಸಮಸ್ತ ಪಾಪಗಳ ಶುದ್ಧಿಗಾಗಿ ಈಶ್ವರನನ್ನು ಪೂಜಿಸು. ಬ್ರಹ್ಮನು ಹೀಗೆನ್ನಲು ನಾರದನು ಬಹಳವಾಗಿ ವ್ಯಥೆಗೊಂಡು ಪ್ರಭಾಸಕ್ಷೇತ್ರಕ್ಕೆ ಬಂದು ಅಲ್ಲಿ ಬ್ರಹ್ಮಕುಂಡವನ್ನು ಸೇರಿ ದಿವ್ಯ ಶತ ವರ್ಷಗಳಕಾಲ ಭೈರವನನ್ನು ಪೂಜಿಸಿದನು. ಬಳಿಕ ಪಾಪರಹಿತನಾಗಿ ಸಂಗೀತವನ್ನು ಅರಿತನು.

೧೩. ಮಹಾದೇವಿ! ಅದು ಮೊದಲ್ಗೊಂಡು ಆ ಲಿಂಗವು ಲೋಕದಲ್ಲಿ ಸಮಸ್ತ ಪಾಪಗಳನ್ನು ಪರಿಹರಿಸುವ ನಾರದೇಶ್ವರ ಭೈರವನೆಂದು ಪ್ರಸಿದ್ಧವಾಯಿತು.

ಅಜ್ಞಾನಾದ್ವಾದಯೇದ್ಯಸ್ತು ವೀಣಾಂ ಚೈವ ತಥಾ ಸ್ವರಾನ್ ।
ಸ ತತ್ಪಾತಕಶುದ್ಧ್ಯರ್ಥಂ ತತ್ರ ಗಚ್ಛೇನ್ಮಹೇಶ್ವರಿ ॥ ೧೪ ॥
ಮಾಘೇ ಮಾಸಿ ಜಿತಾಹಾರಸ್ತ್ರಿಕಾಲಂ ಯೋಽರ್ಚಯೇತ್ತತಃ ।
ನಾರದೇಶಂ ಭೈರವಂ ಸಸ್ವರ್ಗರಾಮಾಮನೋಹರಃ ॥ ೧೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾರದೇಶ್ವರಭೈರವಮಾಹಾತ್ಮ್ಯವರ್ಣನಂ ನಾಮ
॥ ದ್ವಿಪಂಚಾಶದುತ್ತರಶತತಮೋಽಧ್ಯಾಯಃ ॥

---

೧೪. ಮಹೇಶ್ವರಿ ! ಅಜ್ಞಾನದಿಂದ ವೀಣೆಯನ್ನು ನುಡಿಸಿದವನು ಆ ಪಾಪ ಶುದ್ಧಿಗಾಗಿ ಆ ನಾರದ ಭೈರವೇಶ್ವರನನ್ನು ಹೊಂದಬೇಕು.

೧೫. ಮಾಘ ಮಾಸದಲ್ಲಿ ಉಪವಾಸಮಾಡಿ ಮೂರು ಹೊತ್ತು ನಾರವೇಶ ಭೈರವನನ್ನು ಪೂಜಿಸಿದವನು ಸ್ವರ್ಗಸ್ತ್ರೀಯರೊಡನೆ ವಿನೋದ ಪಡುವನು.

ಇಲ್ಲಿಗೆ ಎಂಬಂತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾರದೇಶ್ವರಭೈರವಮಾಹಾತ್ಮ್ಯವರ್ಣನವೆಂಬ
ನೂರೈವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಂಶಂಚಾಶದುತ್ತರಶತತಮೋಽಧ್ಯಾಯಃ

ಹಿರಣ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯೇಶ್ವರಮುತ್ತಮಂ ।
ಬ್ರಹ್ಮಕುಂಡಸ್ಯ ವಾಯವ್ಯೇ ಧನುಷಾಂ ದ್ವಿತಯೇ ಸ್ಥಿತಂ । ॥ ೧ ॥
ಸರ್ವಪಾಪಪ್ರಶಮನಂ ದಾರಿದ್ರ್ಯೌಘವಿನಾಶನಂ ।
ಕೃತಸ್ಮರಾಚ್ಚ ಪರತೋ ಹ್ಯಗ್ನಿತೀರ್ಥಾಚ್ಚ ಪೂರ್ವತಃ ॥ ೨ ॥
ಯಮೇಶ್ವರಾಚ್ಚ ನೈರ್ಋತ್ಯೇ ಸಮುದ್ರಸ್ಯೋತ್ತರೇ ತಥಾ ।
ತಸ್ಯಲಿಂಗಸ್ಯ ಪ್ರಾಗ್ಭಾಗೇ ಬ್ರಹ್ಮಾ ತೇಪೇ ಮಹತ್ತಪಃ ।
ಆರಾಧಯಾಮಾಸ ತದಾ ದೇವದೇವಂ ತ್ರಿಲೋಚನಂ ॥ ೩ ॥
ತತಸ್ತುಷ್ಟೋ ಮಹಾದೇವೋ ಬ್ರಹ್ಮನ್ಬ್ರೂಹಿ ವರೋ ಮಮ ॥ ೪ ॥

ಬ್ರಹ್ಮೋವಾಚ :—

ಯದಿ ತುಷ್ಟೋಽಸಿ ಮೇ ದೇವ ಯಜಯಾಮೀತಿ ಮೇ ಮತಿಃ ।
ಸ್ಥಾನಂ ಚ ಯನ್ಮಹಾಪುಣ್ಯಂ ತನ್ಮಮಾಖ್ಯಾತುಮರ್ಹಸಿ ॥ ೫ ॥

ಕನ್ನಡದ ಅನುವಾದ

ಹಿರಣ್ಯೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಬ್ರಹ್ಮಕುಂಡದ ವಾಯುವ್ಯದಲ್ಲಿ ಎರಡು ಬಿಲ್ಲುಗಳ ದೂರದಲ್ಲಿರುವವನೂ, ಸಕಲ ಪಾಪವನ್ನು ಪರಿಹರಿಸುವವನೂ, ಬಡತನವನ್ನು ನಿವಾರಿಸುವವನೂ ಆದ ಹಿರಣ್ಯೇಶ್ವರನೆಡೆಗೆ ಹೋಗಬೇಕು. ಬ್ರಹ್ಮನು ಕೃತಸ್ಮರ ಪರ್ವತದ ಪಶ್ಚಿಮದಲ್ಲಿ ಅಗ್ನಿತೀರ್ಥದ ಪೂರ್ವದಲ್ಲಿ ಯಮೇಶ್ವರನ ನೈರ್ಋತ್ಯದಲ್ಲಿ ಸಮುದ್ರದ ಉತ್ತರದಲ್ಲಿ ಆ ಹಿರಣ್ಯೇಶ್ವರ ಲಿಂಗದ ಪೂರ್ವಭಾಗದಲ್ಲಿ ಮಹಾತಪಸ್ಸನ್ನಾಚರಿಸಿ ಮಹೇಶ್ವರನನ್ನು ಸಂತೋಷಗೊಳಿಸಿದನು.

೪. ಅನಂತರ ಸಂತುಷ್ಟನಾದ ಮಹಾದೇವನು "ಎಲೈ ಬ್ರಹ್ಮನೆ! ನನ್ನಿಂದ ವರವನ್ನು ಕೇಳಿಕೋ" ಎಂದನು.

೫. "ಸ್ವಾಮಿ! ನೀನು ಮೆಚ್ಚಿದ್ದರೆ ನಾನು ಯಾಗ ಮಾಡಬೇಕೆಂದಾಲೋಚಿಸಿರುವೆನು. ಆದಕ್ಕೆ ಯೋಗ್ಯವೂ ಪುಣ್ಯಕರವೂ ಆದ ಸ್ಥಳವನ್ನು ನನಗೆ ಹೇಳು." ಎಂದನು.

ಈಶ್ವರ ಉವಾಚ :—

ಕೃತಸ್ಮರಾದ್ಬ್ರಹ್ಮಕುಂಡಂ ಯಮೇಶಾತ್ಸಾಗರಾವಧಿ ।
ಏತದಂತರಮಾಸಾದ್ಯ ಪಾಪೀ ಚಾಪಿ ವಿಮುಚ್ಯತೇ ॥ ೬ ॥
ವಹೇದ್ವಿಷುವತೀ ತತ್ರ ಸದಾ ಪುಣ್ಯಾತ್ಮನಾಂ ನೃಣಾಂ ।
ಯತ್ರ ತತ್ರ ಕುರು ವಿಭೋ ಮನಸಾ ತೇ ಯಥೇಪ್ಸಿತಂ ॥ ೭ ॥
ಇತ್ಯುಕ್ತಃ ಸ ತದಾ ಬ್ರಹ್ಮಾ ಪ್ರಾರೇಭೇ ಯಜ್ಞಮುತ್ತಮಂ ॥ ೮ ॥
ತತೋ ಭೋಗಾರ್ಥಿನೋ ದೇವಾ ಇಂದ್ರಾದ್ಯಾಸ್ತತ್ರಚಾಗತಾಃ ।
ಋಷಯೋ ಭಾಗ್ಯಕಾಮಾಸ್ತು ಸರ್ವೇ ತತ್ರ ಸಮಾಗತಾಃ ॥ ೯ ॥
ತತೋ ಯಜ್ಞಾಗತೇಭ್ಯಃ ಸ ದಕ್ಷಿಣಾಮದದಾತ್ಪುನಃ ।
ತತೋಽಥ ದಕ್ಷಿಣಾ ಕ್ಷೀಣಾ ದೀಯಮಾನಾ ಯಶಸ್ವಿನಿ ॥ ೧೦ ॥
ತತೋ ಬ್ರಹ್ಮಾ ಬಹೂದ್ವಿಗ್ನೋ ದಧ್ಯೌ ವೈ ಮನಸಾ ತದಾ ।
ಬದ್ಧಾಂಜಲಿಪುಟೋ ಭೂತ್ವಾ ಇದಂ ವಚನಮಬ್ರವೀತ್ ॥ ೧೧ ॥
ಭಗವನ್ತ್ವೈ ವಿರೂಪಾಕ್ಷ ಕ್ರತುರ್ನೈವ ಸಮಾಪ್ಯತೇ ।
ದಕ್ಷಿಣಾದ್ರವ್ಯತೋ ದೇವ ನ ಯಾತಿ ಪರಿಪೂರ್ಣತಾಂ ॥ ೧೨ ॥

---

೬. ಈಶ್ವರನು ಹೇಳುತ್ತಾನೆ :—ಕೃತಸ್ಮರಪರ್ವತದಿಂದ ಬ್ರಹ್ಮಕುಂಡದ ವರೆಗೂ, ಯಮೇಶನಿಂದ ಸಮುದ್ರದವರೆಗೂ ಇರುವ ಪ್ರದೇಶವನ್ನು ಹೊಂದಿದ ಮಾನವನು ಪಾಪಿಯಾಗಿದ್ದರೂ ಪಾಪಮುಕ್ತನಾಗುವನು.

೭. ಅಲ್ಲಿ ಪುಣ್ಯಾತ್ಮರಾದ ಮನುಷ್ಯರಿಗಾಗಿ ವಿಷುವತೀ ನದಿಯು ಹರಿಯುತ್ತಿದೆ. ಅಲ್ಲಿ ಎಲ್ಲಿಯಾದರೂ ನಿನಗಿಷ್ಟವಾದ ಸ್ಥಳದಲ್ಲಿ ಯಾಗಮಾಡು.

೮. ಈಶ್ವರನು ಹೀಗೆನ್ನಲು ಬ್ರಹ್ಮನು ಉತ್ತಮವಾದ ಯಜ್ಞವನ್ನಾರಂಭಿಸಿದನು.

೯. ಬಳಿಕ ಯಜ್ಞಭಾಗವನ್ನಪೇಕ್ಷಿಸುವ ಇಂದ್ರಾದಿದೇವತೆಗಳು ಅಲ್ಲಿಗೆ ಬಂದರು. ಋಷಿಗಳೂ ಭಾಗವನ್ನಪೇಕ್ಷಿಸುವವರಾಗಿ ಅಲ್ಲಿಗೆ ಬಂದರು.

೧೦. ಬಳಿಕ ಆ ಬ್ರಹ್ಮನು ಯಜ್ಞಕ್ಕೆ ಬಂದವರಿಗೆ ದಕ್ಷಿಣೆಯನ್ನಿತ್ತನು. ಅನಂತರ ದಕ್ಷಿಣೆಯು ಕಡಿಮೆಯಾಯಿತು.

೧೧. ತರುವಾಯ ಬ್ರಹ್ಮನು ಅತ್ಯಂತ ವ್ಯಥೆಗೊಂಡವನಾಗಿ ಕೈಮುಗಿದುಕೊಂಡು ಮನಸ್ಸಿನಿಂದಲೇ ಧ್ಯಾನಿಸಿ ಇಂತೆಂದನು.

೧೨. "ಮಹೇಶ್ವರ! ದಕ್ಷಿಣಾದ್ರವ್ಯವಿಲ್ಲದ್ದರಿಂದ ಯಜ್ಞವು ಪೂರ್ತಿಗೊಳ್ಳದೆ ಮುಗಿಯುವುದಿಲ್ಲ.

ದಕ್ಷಿಣಾಸಹಿತಾಃ ಸರ್ವೇ ಯಥಾ ಯಾಂತಿ ತಥಾ ಕುರು ।
ಪಿತಾಮಹವಚಃ ಶ್ರುತ್ವಾ ಕೃತ್ವಾ ಧ್ಯಾನಂ ತದಾ ಮಯಾ ॥ ೧೩ ॥
ಸ್ಮೃತಾ ಸರಸ್ವತೀ ದೇವೀ ದೇವಾನಾಂ ಹಿತಕಾಮ್ಯಯಾ ।
ಆಗತಾ ಸಾ ಮಹಾಪುಣ್ಯಾ ಉಕ್ತಾ ದೇವೀ ಮಯಾ ತದಾ ॥ ೧೪ ॥
ಪದ್ಮಯೋನೇರ್ಧನಂ ಕ್ಷೀಣಂ ಕ್ರತುರ್ನೈ ನ ಸಮಾಪ್ಯತೇ ।
ತಸ್ಮಾತ್ತ್ವಮ ಪ್ರಸಾದೇನ ಭವ ಕಾಂಚನವಾಹಿನೀ ॥ ೧೫ ॥
ಸರಸ್ವತ್ಯಾಸ್ತತಃ ಸ್ರೋತ ಉತ್ಥಿತಂ ಪಶ್ಚಿಮಾಮುಖಂ ।
ಕಾಂಚನಾನಾಂ ತು ಪದ್ಮಾನಿ ಉಚ್ಛ್ರಿತಾನಿ ಸಹಸ್ರಶಃ ॥ ೧೬ ॥
ಕಾಂಚನೇನ ಪ್ರವಾಹೇಣ ತೋಯಂ ಸಾರಸ್ವತಂ ಶುಭಂ ।
ದೈತ್ಯಸೂದನಮಾಸಾದ್ಯ ಅಗ್ನಿತೀರ್ಥಾವಧಿ ಪ್ರಿಯೇ ।
ಪೂರಯಾಮಾಸ ಪದ್ಮೈಶ್ಚ ಕೋಟಿಶಶ್ಚ ಸಮಂತತಃ ॥ ೧೭ ॥
ಕಾಂಚನಾನಿ ತು ತಾನ್ಯೇವ ದತ್ವಾ ವಿಪ್ರೇಷು ದಕ್ಷಿಣಾಂ ।
ಯಜ್ಞಂ ನಿರ್ವರ್ತಯಾಮಾಸ ಹೃಷ್ಟೋ ಬ್ರಹ್ಮಾ ದ್ವಿಜೈಃ ಸಹ ॥ ೧೮ ॥
ಶೇಷಾಣಿ ಯಾನಿ ಪದ್ಮಾನಿ ತಾನಿ ನಿಕ್ಷಿಪ್ಯ ಭೂತಲೇ ।
ತದೂರ್ಧ್ವಂ ಸ್ಥಾಪಯಾಮಾಸ ಲಿಂಗಂ ತು ಕನಕೇಶ್ವರಂ ॥ ೧೯ ॥

೧೩-೧೪. ಎಲ್ಲರೂ ದಕ್ಷಿಣಾಸಹಿತರಾಗಿ ಹೋಗುವಂತೆ ಮಾಡು," ಎಂದನು. ಆಗ ನಾನು ಬ್ರಹ್ಮನ ಮಾತನ್ನು ಕೇಳಿ ದೇವತೆಗಳ ಹಿತಕ್ಕಾಗಿ ಧ್ಯಾನ ಮಾಡಿ ಸರಸ್ವತೀನದಿಯನ್ನು ಸ್ಮರಿಸಿದನು. ಅವಳು ಬರಲು ಹೀಗೆಂದನು.

೧೫. ಸರಸ್ವತಿ! ಬ್ರಹ್ಮನ ಧನವು ಮುಗಿದುದರಿಂದ ಯಜ್ಞವು ಮುಗಿಯು ವುದಿಲ್ಲ. ಆದ್ದರಿಂದ ನೀನು ನನ್ನ ಅನುಗ್ರಹದಿಂದ ಸುವರ್ಣಪ್ರವಾಹವುಳ್ಳವಳಾಗು.

೧೬. ತರುವಾಯ ಸರಸ್ವತೀನದಿಯ ಪ್ರವಾಹವು ಪಶ್ಚಿಮಾಭಿಮುಖವಾಗಿ ಉಂಟಾಯಿತು. ಸಾವಿರಾರು ಸುವರ್ಣಕಮಲಗಳು ಮೇಲಕ್ಕೆದ್ದುವು.

೧೭. ಸರಸ್ವತೀನದಿಯ ಸುವರ್ಣಪ್ರವಾಹವು ಕೋಟಿಸಂಖ್ಯೆಯ ಚಿನ್ನದ ತಾವರೆಹೂವುಗಳೊಡನೆ ದೈತ್ಯಸೂದನನ್ನಾರಂಭಿಸಿ ಅಗ್ನಿತೀರ್ಥದವರೆಗೆ ತುಂಬಿತು.

೧೮. ಅದರಿಂದ ಹರ್ಷಗೊಂಡ ಬ್ರಹ್ಮನು ಸುವರ್ಣವನ್ನು ಬ್ರಾಹ್ಮಣರಿಗೆ ದಕ್ಷಿಣೆಯಾಗಿಕೊಟ್ಟು ಅವರೊಡನೆ ಯಜ್ಞವನ್ನು ನೆರವೇರಿಸಿದನು.

೧೯. ಅವನು ಉಳಿದ ಕಮಲಗಳನ್ನು ಭೂಮಿಯಲ್ಲಿಟ್ಟು ಅದರಮೇಲೆ ಕನಕೇಶ್ವರಲಿಂಗವನ್ನು ಪ್ರತಿಷ್ಠೆಮಾಡಿದನು.

ತತ್ರ ಲಿಂಗಂ ಪ್ರತಿಷ್ಠಾಪ್ಯ ಸರ್ವದೇವನಮಸ್ಕೃತಂ ।
ಋಷಿಭ್ಯೋ ದಕ್ಷಿಣಾಂ ಪ್ರಾದಾದೇಕೈಕಸ್ಯ ಯಥಾಕ್ರಮಂ ।
ಕಾಂಚನಾನಾಂ ಚ ಪದ್ಮಾನಾಂ ಪ್ರತ್ಯೇಕಮಯುತಂ ದದೌ ॥ ೨೦ ॥
ತತಃ ಶೇಷಾಣಿ ಪದ್ಮಾನಿ ನಿಹಿತಾನಿ ಧರಾತಲೇ ।
ಬ್ರಹ್ಮಕುಂಡಸ್ಯ ಮಧ್ಯೇ ತು ನಾಪುಣ್ಯೋ ಲಭತೇ ನರಃ ॥ ೨೧ ॥
ತತ್ಕುಂಡ ತೋಯಮದ್ಯಾಪಿ ನಾನಾವರ್ಣಂ ಪ್ರದೃಶ್ಯತೇ ।
ತತ್ರಾಧಃ ಪದ್ಮಸಂಯೋಗಾನ್ನೀರಂ ಸ್ವರ್ಣಾಯತೇ ಕ್ಷಣಾತ್ ॥ ೨೨ ॥
ಹಿರಣ್ಮಯಾನಿ ಪದ್ಮಾನಿ ಅಧಃ ಕೃತ್ವಾ ಪ್ರಜಾಪತಿಃ ।
ಲಿಂಗಮೂರ್ಧ್ವಂ ಪ್ರತಿಷ್ಠಾಪ್ಯ ಸ್ವಯಂ ಪೂಜಿತವಾಂಸ್ತದಾ ।
ಹಿರಣ್ಯಕಮಲೈರ್ದಿವ್ಯೈರ್ಹಿರಣ್ಯೇಶಸ್ತತೋಽಭವತ್ ॥ ೨೩ ॥
ಸರ್ವಪಾಪಪ್ರಶಮನಂ ತಥಾ ದಾರಿದ್ರ್ಯನಾಶನಂ ।
ದೃಷ್ಟ್ವಾ ಹಿರಣ್ಮಯೇಶಾನಂ ಸರ್ವಪಾಪೈಃ ಪ್ರಮುಚ್ಯತೇ ॥ ೨೪ ॥
ಮಾಘಮಾಸೇ ಚತುರ್ದಶ್ಯಾಂ ಯಸ್ತಲ್ಲಿಂಗಂ ಪ್ರಪೂಜಯೇತ್ ।
ಪೂಜಿತಂ ತೇನ ಸಕಲಂ ಬ್ರಹ್ಮಾಂಡಂ ಸಚರಾಚರಂ ॥ ೨೫ ॥

---

೨೦. ಬ್ರಹ್ಮನು ಅಲ್ಲಿ ಸಕಲ ದೇವತೆಗಳಿಂದ ನಮಸ್ಕೃತನಾದ ಕನಕೇಶ್ವರನನ್ನು ಪ್ರತಿಷ್ಠೆಮಾಡಿ ಋಷಿಗಳಲ್ಲಿ ಒಬ್ಬೊಬ್ಬನಿಗೂ ಕ್ರಮವಾಗಿ ಹತ್ತುಸಾವಿರ ಸುವರ್ಣಕಮಲಗಳನ್ನಿತ್ತನು.

೨೧. ಬಳಿಕ ಉಳಿದ ಕಮಲಗಳನ್ನು ಭೂಮಿಯಲ್ಲಿ ಬ್ರಹ್ಮಕುಂಡದ ಮಧ್ಯದಲ್ಲಿಟ್ಟನು. ಇವನ್ನು ಪಾಪಿಯಾದ ಮಾನವನು ಹೊಂದಲಾರನು.

೨೨. ಈಗಲೂ ಆ ಬ್ರಹ್ಮಕುಂಡದ ನೀರು ನಾನಾ ಬಣ್ಣವಾಗಿ ಕಾಣುವುದು. ಕೆಳಗಡೆ ಕಮಲಗಳಿರುವುದರಿಂದ ನೀರು ಕ್ಷಣಕಾಲದಲ್ಲಿ ಚಿನ್ನದಂತಾಗುವುದು.

೨೩. ಬ್ರಹ್ಮನು ಹೀಗೆ ಸುವರ್ಣಕಮಲಗಳನ್ನು ಕೆಳಗಿಟ್ಟು ಮೇಲೆ ಲಿಂಗವನ್ನು ಪ್ರತಿಷ್ಠೆಮಾಡಿ ತಾನೇ ಹಿರಣ್ಯಕಮಲಗಳಿಂದ ಆ ಶಿವಲಿಂಗವನ್ನು ಪೂಜಿಸಿದನು. ಅದರಿಂದ ಅದು ಹಿರಣ್ಯೇಶನೆಂದಾಯಿತು.

೨೪. ಸಮಸ್ತ ಪಾಪಗಳನ್ನು ಪರಿಹರಿಸುವವನೂ, ಬಡತನವನ್ನು ನೀಗಿಸುವವನೂ ಆದ ಹಿರಣ್ಯೇಶನನ್ನು ದರ್ಶನಮಾಡಿದ ಮನುಷ್ಯನು ಸಕಲ ಪಾಪಮುಕ್ತನಾಗುವನು.

೨೫. ಮಾಘಮಾಸದ ಚತುರ್ದಶೀದಿನ ಆ ಲಿಂಗವನ್ನು ಪೂಜಿಸಿದವನು ಚರಾಚರಾತ್ಮಕವಾದ ಸಕಲ ಬ್ರಹ್ಮಾಂಡವನ್ನು ಪೂಜಿಸಿದಂತಾಗುವನು.

ಸರ್ವದಾನಾನಿ ದತ್ತಾನಿ ಸರ್ವೇ ದೇವಾಶ್ಚ ತೋಷಿತಾಃ ।
ಬ್ರಹ್ಮಾಂಡಂ ತೇನ ದತ್ತಂ ಸ್ಯಾದ್ಯೇನ ತಲ್ಲಿಂಗಮರ್ಚಿತಮ್ ॥ ೨೬ ॥
ಏತನ್ಮಯಾ ತೇ ಕಥಿತಂ ಸ್ನೇಹೇನ ವರವರ್ಣಿನಿ ।
ನ ಕಸ್ಯಚಿನ್ಮಯಾಽಽಖ್ಯಾತಂ ಮಹಾಗೋಪ್ಯಂ ವರಾನನೇ ॥ ೨೭ ॥
ಯ ಇದಂ ಶೃಣುಯಾದ್ಭಕ್ತ್ಯಾ ಪಠೇದ್ವಾ ಭಕ್ತಿಸಂಯುತಃ ।
ಸ ತಚ್ಛೇದ್ದೇವಲೋಕಂ ತು ಮುಕ್ತಃ ಸರ್ವೈಸ್ತು ಪಾತಕೈಃ ॥ ೨೮ ॥
ಇತಿ ತೇ ಚಾತಿವಿಖ್ಯಾತಾಃ ಪವಿತ್ರಾಃ ಪಂಚ ಭೈರವಾಃ ।
ಬ್ರಹ್ಮಕುಂಡಸಮೀಪಸ್ಥಾಃ ಕಥಿತಾಸ್ತವ ಸುಂದರಿ ॥ ೨೯ ॥

ಪಂಚಭೈರವಮಾಹಾತ್ಮ್ಯಂ ಸಮಾಪ್ತಂ

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಹಿರಣ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿಪಂಚಾಶದುತ್ತರಶತತಮೋಽಧ್ಯಾಯಃ ॥

---

೨೬. ಆ ಲಿಂಗವನ್ನು ಪೂಜಿಸಿದರೆ ಸಕಲ ದಾನಗಳನ್ನು ಕೊಟ್ಟಂತೆಯೂ, ಸಕಲ ದೇವತೆಗಳನ್ನು ಸಂತೋಷಗೊಳಿಸಿದಂತೆಯೂ, ಬ್ರಹ್ಮಾಂಡವನ್ನೇ ದಾನಮಾಡಿದಂತೆಯೂ ಆಗುವುದು.

೨೭. ಸುಂದರಿ! ನಾನು ಇದನ್ನು ನಿನಗೆ ಪ್ರೀತಿಯಿಂದ ಹೇಳಿರುವೆನು. ಅತಿ ರಹಸ್ಯವಾದ ಈ ವಿಷಯವನ್ನು ನಾನು ಯಾರಿಗೂ ಹೇಳಲಿಲ್ಲ.

೨೮. ಇದನ್ನು ಭಕ್ತಿಯಿಂದ ಕೇಳಿದವನಾಗಲಿ, ಹೇಳಿದವನಾಗಲಿ ಸಕಲ ಪಾಪಮುಕ್ತನಾಗಿ ದೇವಲೋಕಕ್ಕೆ ಹೋಗುವನು.

೨೯. ಸುಂದರಿ! ಹೀಗೆ ನಿನಗೆ ಅತಿ ವಿಖ್ಯಾತರೂ, ಪರಿಶುದ್ಧರೂ, ಬ್ರಹ್ಮಕುಂಡದ ಸಮೀಪದಲ್ಲಿರುವವರೂ ಆದ ಐದು ಮಂದಿ ಭೈರವರನ್ನು ಹೇಳಿರುವೆನು.

ಪಂಚಭೈರವಮಾಹಾತ್ಮ್ಯವು ಸಮಾಪ್ತವಾದುದು

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಹಿರಣ್ಯೇಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಪಂಚಾಶದುತ್ತರಶತತಮೋಽಧ್ಯಾಯಃ

ಗಾಯತ್ರೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಪಾಪವಿಮೋಚನಂ ।
ಹಿರಣ್ಯೇಶ್ವರವಾಯವ್ಯೇ ಧನುಷಾಂ ತ್ರಿತಯೇ ಸ್ಥಿತಂ ॥ ೧ ॥
ಪಾಪಘ್ನಂ ಸರ್ವಜಂತೂನಾಂ ದರ್ಶನಾತ್ಸ್ಪರ್ಶನಾದಪಿ ।
ಆದ್ಯಂ ಲಿಂಗಂ ಮಹಾದೇವಿ ಗಾಯತ್ರ್ಯಾ ಸಂಪ್ರತಿಷ್ಠಿತಂ ॥ ೨ ॥
ತಲ್ಲಿಂಗಂ ಸಮನುಪ್ರಾಪ್ಯ ಗಾಯತ್ರೀಂ ಜಪತೇ ತು ಯಃ
ಬ್ರಾಹ್ಮಣಸ್ತು ಶುಚಿರ್ಭೂತ್ವಾ ಮುಚ್ಯತೇ ದುಷ್ಪ್ರತಿಗ್ರಹಾತ್ ॥ ೩ ॥
ಜ್ಯೇಷ್ಠಸ್ಯ ಪೂರ್ಣಿಮಾಯಾಂ ತು ದಂಪತೀ ಯಸ್ತು ಭೋಜಯೇತ್ ।
ಪರಿಧಾಪ್ಯ ಯಥಾಶಕ್ತ್ಯಾ ದೌರ್ಭಾಗ್ಯೈರ್ಮುಚ್ಯತೇ ನರಃ ॥ ೪ ॥
ಗಂಧಪುಷ್ಪೋಪಹಾರೈಶ್ಚ ಪೌರ್ಣಿಮಾಸ್ಯಾಂ ತು ಯೋಽರ್ಚಯೇತ್ ।
ಬ್ರಾಹ್ಮಣ್ಯಂ ಜಾಯತೇ ತಸ್ಯ ಸಪ್ತಜನ್ಮನಿ ಸುಂದರಿ ॥ ೫ ॥

ಕನ್ನಡದ ಅನುವಾದ

ಗಾಯತ್ರೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ದರ್ಶನ ಸ್ಪರ್ಶನಗಳಿಂದ ಸಕಲ ಪ್ರಾಣಿಗಳ ಪಾಪವನ್ನು ನಿವಾರಿಸುವುದೂ, ಹಿರಣ್ಯೇಶ್ವರನ ವಾಯವ್ಯದಿಕ್ಕಿನಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವುದೂ, ಗಾಯತ್ರೀ ದೇವಿಯು ಪ್ರತಿಷ್ಠೆಮಾಡಿರುವುದೂ ಆದ ಆದಿ ಶಿವಲಿಂಗವಾದ ಗಾಯತ್ರೀಶ್ವರನೆಡೆಗೆ ಹೋಗಬೇಕು.

೩. ಬ್ರಾಹ್ಮಣನು ಶುದ್ಧನಾಗಿ ಆ ಲಿಂಗವನ್ನು ಹೊಂದಿ ಗಾಯತ್ರಿಯನ್ನು ಜಪಿಸಿದರೆ ದುಷ್ಪ್ರತಿಗ್ರಹದ ದೋಷದಿಂದ ಮುಕ್ತನಾಗುವನು.

೪. ಮನುಷ್ಯನು ಜ್ಯೇಷ್ಠಮಾಸದ ಹುಣ್ಣಿಮೆಯ ದಿನ ದಂಪತಿಗಳಿಗೆ ಶಕ್ತ್ಯನುಸಾರ ವಸ್ತ್ರದಾನ ಮಾಡಿ ಭೋಜನ ಮಾಡಿಸಿದರೆ ದೌರ್ಭಾಗ್ಯ ಮುಕ್ತನಾಗುವನು.

೫. ಸುಂದರಿ! ಹುಣ್ಣಿಮೆಯ ದಿನ ಆ ಲಿಂಗಕ್ಕೆ ಗಂಧಪುಷ್ಪಗಳನ್ನರ್ಪಿಸಿ ಪೂಜಿಸಿದವನು ಏಳು ಜನ್ಮಗಳಲ್ಲಿ ಬ್ರಾಹ್ಮಣನಾಗುವನು.

ಇತ್ಯೇವಂ ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಬ್ರಹ್ಮಕುಂಡಪ್ರಸಾದೇನ ಸಾರಾತ್ಸಾರತಂ ಪ್ರಿಯೇ । ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಾಯತ್ರೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಪಂಚಾಶದುತ್ತರಶತತಮೋಽಧ್ಯಾಯಃ ॥

---

೬. ದೇವಿ ! ಬ್ರಹ್ಮಕುಂಡದ ಅನುಗ್ರಹದಿಂದ ಹೀಗೆ ನಿನಗೆ ಅತ್ಯುತ್ತಮವಾದ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಾಯತ್ರೀಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಪಂಚಾಶದುತ್ತರಶತತಮೋಽಧ್ಯಾಯಃ

ರತ್ನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರತ್ನೇಶ್ವರಮನುತ್ತಮಂ ।
ತತ್ರ ತಪ್ತ್ವಾ ತಪೋ ದೇವಿ ವಿಷ್ಣುನಾ ಪ್ರಭವಿಷ್ಣುನಾ ।
ಸ್ಥಾಪಿತಂ ತತ್ರ ತಲ್ಲಿಂಗಂ ಸರ್ವಕಾಮಪ್ರದಂ ಪ್ರಿಯೇ ॥ ೧ ॥
ರತ್ನಕುಂಡೇ ನರಃ ಸ್ನಾತ್ವಾ ಯಸ್ತಂ ಪೂಜಯತೇ ಸದಾ ।
ಸರ್ವೋಪಚಾರೈರ್ಭಕ್ತ್ಯಾ ಸ ಪ್ರಾಪ್ನುಯಾದೀಪ್ಸಿತಂ ಫಲಂ ॥ ೨ ॥
ಅತ್ರ ಕೃತ್ವಾ ತಪೋ ಘೋರಂ ಕೃಷ್ಣೇನಾಮಿತತೇಜಸಾ ।
ಪ್ರಾಪ್ತಂ ಸುದರ್ಶನಂ ಚಕ್ರಂ ಸರ್ವದೈತ್ಯಾಂತಕಾರಕಂ ॥ ೩ ॥
ಏತತ್ಸ್ಥಾನಂ ಮಹಾದೇವಿ ಸದಾ ಪ್ರಿಯತರಂ ಮಮ ।
ವಸಾಮಿ ತತ್ರ ದೇವೇಶಿ ಪ್ರಲಯೇಽಪಿ ನ ಸಂತ್ಯಜೇ ॥ ೪ ॥
ಸ್ಮೃತಂ ತದ್ವೈಷ್ಣವಂ ಕ್ಷೇತ್ರಂ ನಾಮ್ನಾ ದೇವಿ ಸುದರ್ಶನಂ ।
ಧನ್ವಂತರಾಣಿ ಷಟ್ತ್ರಿಂಶತ್ಸಮಂತಾತ್ಪರಿಮಂಡಲಂ ॥ ೫ ॥

ಕನ್ನಡದ ಅನುವಾದ

ರತ್ನೇಶ್ವರಮಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ತರುವಾಯ ರತ್ನೇಶ್ವರನೆಡೆಗೆ ಹೋಗಬೇಕು. ಅಲ್ಲಿ ಸಮರ್ಥನಾದ ವಿಷ್ಣುವು ತಪಸ್ಸನ್ನು ಮಾಡಿ ಸಕಲೇಷ್ಟಾರ್ಥಗಳನ್ನೀಯುವ ಆ ಮಾಹೇಶ್ವರಲಿಂಗವನ್ನು ಸ್ಥಾಪಿಸಿರುವನು.

೨ ಮನುಷ್ಯನು ಅಲ್ಲಿನ ರತ್ನ ಕುಂಡದಲ್ಲಿ ಮಿಂದು ಭಕ್ತಿಯಿಂದ ಆ ಶಿವಲಿಂಗವನ್ನು ಸಮಸ್ತೋಪಚಾರಗಳಿಂದ ಪೂಜಿಸಿದರೆ ಅಭೀಪ್ಸಿತ ಫಲವನ್ನು ಪಡೆಯುವನು.

೩. ಅತಿಶಯವಾದ ತೇಜಸ್ಸುಳ್ಳ ಕೃಷ್ಣನು ಇಲ್ಲಿ ಘೋರ ತಪಸ್ಸನ್ನಾಚರಿಸಿ ಸಕಲ ದೈತ್ಯರನ್ನೂ ಕೊಲ್ಲುವ ಚಕ್ರವನ್ನು ಪಡೆದನು.

೪. ಮಹಾದೇವಿ! ಈ ಸ್ಥಳವು ಯಾವಾಗಲೂ ನನಗೆ ಪ್ರಿಯವಾದುದು. ಇಲ್ಲಿ ನಾನು ವಾಸ ಮಾಡುತ್ತೇನೆ. ಪ್ರಳಯಕಾಲದಲ್ಲಿಯೂ ನಾನು ಇದನ್ನು ಬಿಡುವುದಿಲ್ಲ.

೫. ದೇವಿ! ಈ ಸುದರ್ಶನ ಕ್ಷೇತ್ರವು ವೈಷ್ಣವಕ್ಷೇತ್ರವಾಗಿರುವುದು. ಇದು ಸುತ್ತಲೂ ಆರುವತ್ತಾರು ಬಿಲ್ಲುಗಳ ವಿಸ್ತೀರ್ಣವಾಗಿರುವುದು.

ಏತದಂತರಮಾಸಾದ್ಯ ಯೇ ಕೇಚಿತ್ಪ್ರಾಣಿನೋಽಧಮಾಃ ।
ಮೃತಾಃ ಕಾಲವಶಾದ್ದೇವಿ ತೇ ಯಾಸ್ಯಂತಿ ಪರಂ ಪದಂ ॥ ೬ ॥
ಕಾಂಚನಂ ತತ್ರ ಗರುಡಂ ಪೀತಾನಿ ವಸನಾನಿ ಚ ।
ವಿಷ್ಣುಮುದ್ದಿಶ್ಯ ಯೋ ದದ್ಯಾತ್ಸ ತು ಯಾತ್ರಾಫಲಂ ಲಭೇತ್ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರತ್ನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚಪಂಚಾಶದುತ್ತರಶತತಮೋಽಧ್ಯಾಯಃ ॥

---

೬. ಯಾವ ನೀಚಪ್ರಾಣಿಗಳಾದರೂ ಸರಿಯೆ ಈ ಸ್ಥಳವನ್ನು ಹೊಂದಿ ಕಾಲವಶದಿಂದ ಮೃತಪಟ್ಟರೆ ಉತ್ತಮಸ್ಥಾನವನ್ನು ಹೊಂದುವುವು

೭. ಇಲ್ಲಿ ಸುವರ್ಣ ಗರುಡನನ್ನೂ; ಪೀತಾಂಬರಗಳನ್ನೂ ವಿಷ್ಣುವನ್ನುದ್ದೇಶಿಸಿ ದಾನಮಾಡಿದರೆ ಯಾತ್ರಾಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರತ್ನೇಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶಾಶದುತ್ತರಶತತಮೋಽಧ್ಯಾಯಃ

ಗರುಡೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವೈನತೇಯಪ್ರತಿಷ್ಠಿತಂ ।
ರತ್ನೇಶ್ವರಾದುತ್ತರತೋ ಧನುಷಾಂ ತ್ರಿತಯೇ ಸ್ಥಿತಂ ॥ ೧ ॥

ವೈನತೇಯಶ್ಚ ದೇವೇಶಿ ಜ್ಞಾತ್ವಾ ಕ್ಷೇತ್ರಂ ತು ವೈಷ್ಣವಂ ।
ಲಿಂಗಂ ಪ್ರತಿಷ್ಠಯಾಮಾಸ ಸರ್ವಪಾಪಪ್ರಣಾಶನಂ ॥ ೨ ॥

ಯಸ್ತಂ ಪೂಜಯತೇ ಭಕ್ತ್ಯಾ ಪಂಚಮ್ಯಾಂ ತು ವಿಧಾನತಃ ।
ನ ವಿಷಂ ಕ್ರಮತೇ ತಸ್ಯ ಸಪ್ತ ಜನ್ಮಾನಿ ಸರ್ಪಜಂ ॥ ೩ ॥

ಕನ್ನಡದ ಅನುವಾದ

ಗರುಡೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ರತ್ನೇಶ್ವರದ ಉತ್ತರದಲ್ಲಿ ಮೂರು ಬಿಲ್ಲುಗಳ ದೂರದಲ್ಲಿ ಗರುಡನು ಪ್ರತಿಷ್ಠೆಮಾಡಿರುವ ಗರುಡೇಶ್ವರನೆಡೆಗೆ ಹೋಗಬೇಕು.

೨. ದೇವೇಶ್ವರಿ ! ಗರುಡನು ಅದು ವೈಷ್ಣವ ಕ್ಷೇತ್ರವೆಂದರಿತು ಸಕಲಪಾಪಗಳನ್ನು ನೀಗಿಸುವ ಶಿವಲಿಂಗವನ್ನು ಪ್ರತಿಷ್ಠೆಮಾಡಿದನು.

೩. ಪಂಚಮೀ ದಿನ ವಿಧಿಯಂತೆ ಆ ಲಿಂಗವನ್ನು ಭಕ್ತಿಯಿಂದ ಪೂಜಿಸಿದ ಮಾನವನನ್ನು ಏಳು ಜನ್ಮಗಳಲ್ಲಿ ಸರ್ಪದಿಂದುಂಟಾದ ವಿಷವು ಪೀಡಿಸುವುದಿಲ್ಲ.

ಪಂಚಾಮೃತೇನ ಸಂಸ್ನಾಪ್ಯ ಪೂಜಯಿತ್ವಾ ವಿಧಾನತಃ ।
ಪ್ರಾಪ್ನುಯಾತ್ಸಕಲಂ ಪುಣ್ಯಂ ಮೋದತೇ ದಿವಿ ದೇವವತ್ ॥ ೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗರುಡೇಶ್ವರಮಾಹಾತ್ಮ್ಯವರ್ಣನಂ ನಾಮ
ಷಟ್ಪಂಚಾಶದುತ್ತರಶತತಮೋಽಧ್ಯಾಯಃ

---

೪. ಆ ಲಿಂಗವನ್ನು ಪಂಚಾಮೃತದಿಂದ ಅಭಿಷೇಕಮಾಡಿ ವಿಧಿಯಿಂದ ಪೂಜಿಸಿದವನು ಸಕಲ ಪುಣ್ಯಗಳನ್ನು ಪಡೆದು ದೇವಲೋಕದಲ್ಲಿ ದೇವತೆಯಂತೆ ಆನಂದ ಪಡುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗರುಡೇಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಪಂಚಾಶದುತ್ತರಶತತಮೋಽಧ್ಯಾಯಃ

ಸತ್ಯಭಾಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸತ್ಯಭಾಮೇಶ್ವರಂ ಶುಭಂ ।
ರತ್ನೇಶ್ವರಾದ್ದಕ್ಷಿಣೇ ತು ಧನುಷಾಂತರಮಾಸ್ಥಿತಂ ॥ ೧ ॥
ಸರ್ವಪಾಪಪ್ರಶಮನಂ ಸ್ಥಾಪಿತಂ ಸತ್ಯಭಾಮಯಾ ।
ಕೃಷ್ಣಸ್ಯ ಕಾಂತಯಾ ದೇವಿ ರೂಪೌದಾರ್ಯಸಮೇತಯಾ ॥ ೨ ॥
ಸ್ನಾತ್ವಾ ತದ್ವೈಷ್ಣವಂ ಸ್ಥಾನಂ ನೃಣಾಂ ಪಾತಕನಾಶನಂ ॥ ೩ ॥
ಮಾಘೇ ಮಾಸಿ ತೃತೀಯಾಯಾಂ ನಾರೀ ವಾ ಪುರುಷೋಽಪಿ ವಾ ।
ಯಸ್ತಂ ಪೂಜಯತೇ ಭಕ್ತ್ಯಾ ಸ ಮುಕ್ತಃ ಪಾತಕೈರ್ಭವೇತ್ ॥ ೪ ॥

ಕನ್ನಡದ ಅನುವಾದ

ಸತ್ಯಭಾಮೇಶ್ವರ ಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ರತ್ನೇಶ್ವರನ ದಕ್ಷಿಣದಲ್ಲಿ ಒಂದು ಬಿಲ್ಲಿನ ದೂರದಲ್ಲಿ ಸೌಂದರ್ಯವತಿಯೂ ಕೃಷ್ಣನ ಪತ್ನಿಯೂ ಆದ ಸತ್ಯಭಾಮೆಯು ಪ್ರತಿಷ್ಠೆ ಮಾಡಿರುವ ಸಕಲ ಪಾಪಗಳನ್ನೂ ನೀಗಿಸುವ ಸತ್ಯಭಾಮೇಶ್ವರನೆಡೆಗೆ ಹೋಗಬೇಕು.

೩. ಆ ವೈಷ್ಣವ ಸ್ಥಾನದಲ್ಲಿ ಮಿಂದ ಮಾನವರ ಪಾಪಗಳು ಪರಿಹಾರವಾಗುವುದು.

೪. ಮಾಘ ಮಾಸದ ತದಿಗೆಯ ದಿನ ಹೆಂಗಸಾಗಲಿ, ಗಂಡಸಾಗಲಿ ಭಕ್ತಿಯಿಂದ ಆ ಸತ್ಯಭಾಮೇಶ್ವರನನ್ನು ಪೂಜಿಸಿದರೆ ಪಾತಕಗಳು ಪರಿಹಾರವಾಗುವುವು.

ದೌರ್ಭಾಗ್ಯದುಃಖಶೋಕೇಭ್ಯಸ್ತಥಾ ವಿಘ್ನೈಶ್ಚ ದುಃಖಿತಃ ।
ಮುಚ್ಯತೇ ನಾತ್ರ ಸಂದೇಹಃ ಸತ್ಯಭಾಮಾನ್ವಿತೋ ಭವೇತ್ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸತ್ಯಭಾಮೇಶ್ವರಮಾಹಾತ್ಮ್ಯವರ್ಣನಂ
ಸಪ್ತಪಂಚಾಶದುತ್ತರಶತತಮೋಽಧ್ಯಾಯಃ

---

೫. ಇಷ್ಟೆಯಲ್ಲದೆ ಅಂತಹನು ದೌರ್ಭಾಗ್ಯ, ದುಃಖ ವಿಘ್ನಗಳಿಂದ ಮುಕ್ತನಾಗಿ ಸತ್ಯ, ಕಾಂತಿ, ಸಂಪತ್ತುಗಳಿಂದ ಸಹಿತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸತ್ಯಭಾಮೇಶ್ವರಮಾಹಾತ್ಮ್ಯವರ್ಣನವೆಂಬ
ನೂರೈವತ್ತೇಳನೆಯ ಅಧ್ಯಾಯವು ಮಗಿದುದು.

ಶ್ರೀಃ

ಅಷ್ಟಪಂಚಾಶದುತ್ತರಶತತಮೋಽಧ್ಯಾಯಃ

ಅನಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅನಂಗೇಶ್ವರಮುತ್ತಮಂ ।
ರತ್ನೇಶ್ವರಾದಗ್ರತಃಸ್ಥಂ ಧನುಷಾಂತರಮಾಸ್ಥಿತಂ ॥ ೧ ॥
ಸ್ಥಾಪಿತಂ ಕಾಮದೇವೇನ ತಲ್ಲಿಂಗಂ ವಿಷ್ಣುಸೂನುನಾ ।
ಜ್ಞಾತ್ವಾ ತದ್ವೈಷ್ಣವಂ ಸ್ಥಾನಂ ಕಲೌ ಪಾತಕನಾಶನಂ ॥ ೨ ॥
ತಂ ದೃಷ್ಟ್ವಾ ಪೂಜಯಿತ್ವಾ ತು ಕಾಮದೇವಸಮೋ ಭವೇತ್ ।
ಸ್ವರ್ಗವಿದ್ಯಾಧರೀಣಾಂ ಚ ಜಾಯತೇ ಚಿತ್ತಮೋಹಕಃ ॥ ೩ ॥
ತಸ್ಯಾನ್ವಯೇಽಪಿ ನ ಭವೇತ್ಕುರೂಪೋ ದುರ್ಭಗೋಽಪಿ ವಾ ॥ ೪ ॥
ತತ್ರಾನಂಗತ್ರಯೋದಶ್ಯಾಂ ವ್ರತೇನ ವರವರ್ಣಿನಿ ।
ವಿಶೇಷಾರಾಧನಂ ತತ್ರ ಜನ್ಮಸಾಫಲ್ಯಕಾರಣಂ ॥ ೫ ॥

ಕನ್ನಡದ ಅನುವಾದ

ಅನಂಗೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ರತ್ನೇಶ್ವರನಿಂದ ಮುಂದಕ್ಕೆ ಒಂದು ಬಿಲ್ಲಿನ ದೂರದಲ್ಲಿರುವ ಅನಂಗೇಶ್ವರನ ಸನ್ನಿಧಿಗೆ ಹೋಗಬೇಕು.

೨. ವಿಷ್ಣುತನಯನಾದ ಮನ್ಮಥನು ಅದು ವೈಷ್ಣವಸ್ಥಾನವೆಂದರಿತು ಕಲಿಯುಗದಲ್ಲಿ ಪಾಪವನ್ನು ನೀಗಿಸುವ ಆ ಲಿಂಗವನ್ನು ಅಲ್ಲಿ ಪ್ರತಿಷ್ಠೆಮಾಡಿದನು.

೩. ಆ ಲಿಂಗವನ್ನು ದರ್ಶನ ಮಾಡಿದವನು ಮನ್ಮಥನಂತಾಗುವನು. ಮತ್ತು ಅವನು ಸ್ವರ್ಗದಲ್ಲಿರುವ ವಿದ್ಯಾಧರ ಸ್ತ್ರೀಯರಿಗೆ ಚಿತ್ತಮೋಹಕನಾಗುವನು.

೪. ಅವನ ವಂಶದಲ್ಲಿ ಕುರೂಪಿಯಾಗಲಿ, ದೌರ್ಭಾಗ್ಯವುಳ್ಳವನಾಗಲಿ, ಜನಿಸುವುದಿಲ್ಲ.

೫. ಓ ಉತ್ತಮಾಂಗನೆ! ಅಲ್ಲಿ ಅನಂಗತ್ರಯೋದಶೀ ವ್ರತವನ್ನಾಚರಿಸಿ ಅನಂಗೇಶ್ವರನನ್ನು ವಿಶೇಷವಾಗಿ ಆರಾಧಿಸಿದರೆ ಜನ್ಮ ಫಲವಾಗುವುದು.

ಶಯ್ಯಾದಾನಂ ತು ದಾತವ್ಯಂ ತತ್ರ ವಿಪ್ರಾಯ ಶೀಲಿನೇ ।
ವಿಶೇಷಾದ್ವಿಷ್ಣುಭಕ್ತಾಯ ಸಮ್ಯಗ್ಯಾತ್ರಾಫಲಂ ಲಭೇತ್ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅನಂಗೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಪಂಚಾಶದುತ್ತರಶತತಮೋಽಧ್ಯಾಯಃ ॥

---

೬. ಅಲ್ಲಿ ವಿಷ್ಣು ಭಕ್ತನು ಸದಾಚಾರವುಳ್ಳವನೂ ಆದ ಬ್ರಾಹ್ಮಣನಿಗೆ ಶಯ್ಯಾದಾನವನ್ನಿತ್ತರೆ ಸರಿಯಾದ ಯಾತ್ರಾ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಅನಂಗೇಶ್ವರಮಾಹಾತ್ಮ್ಯವರ್ಣನವೆಂಬ
ನೂರಐವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಷಷ್ಟ್ಯುತ್ತರಶತತಮೋಽಧ್ಯಾಯಃ

ರತ್ನಕುಂಡಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರತ್ನಕುಂಡಮನುತ್ತಮಂ ।
ರತ್ನೇಶಾದ್ದಕ್ಷಿಣೇ ಭಾಗೇ ಧನುಷಾಂ ಸಪ್ತಕೇ ಸ್ಥಿತಂ ।
ಮಹಾಪಾಪೋಪಶಮನಂ ವಿಷ್ಣುನಾ ನಿರ್ಮಿತಂ ಸ್ವಯಂ ॥ ೧ ॥
ಅಷ್ಟಕೋಟಿಸ್ತು ತೀರ್ಥಾನಿ ಭೂದ್ಯೋಽಂತರಿಕ್ಷಗಾಣಿತು ।
ಸಮಾನೀಯ ತು ಕೃಷ್ಣೇನ ತತ್ರ ಕ್ಷಿಪ್ತಾನಿ ಭೂರಿಶಃ ॥ ೨ ॥
ಗಣಾನಾಂ ಕೋಟಿರೇಕಾ ತು ತತ್ಕುಂಡಂ ರಕ್ಷತಿ ಪ್ರಿಯೇ ।
ಕಲೌ ಯುಗೇ ತು ಸಂಪ್ರಾಪ್ತೇ ದುಷ್ಪ್ರಾಪ್ಯಮಕೃತಾತ್ಮಭಿಃ ॥ ೩ ॥
ತತ್ರ ಸ್ನಾತ್ವಾ ಮಹಾದೇವಿ ವಿಧಿದೃಷ್ಟೇನ ಕರ್ಮಣಾ ।
ಪ್ರಾಪ್ನುಯಾದಶ್ವಮೇಧಸ್ಯ ಫಲಂ ಶತಗುಣೋತ್ತರಂ ॥ ೪ ॥

ಕನ್ನಡದ ಅನುವಾದ

ರತ್ನಕುಂಡಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ರತ್ನೇಶ್ವರನಿಗಿಂತ ದಕ್ಷಿಣದಲ್ಲಿ ಏಳು ಬಿಲ್ಲುಗಳ ದೂರದಲ್ಲಿರುವುದೂ, ವಿಷ್ಣುವು ತಾನೇ ನಿರ್ಮಿಸಿರುವುದೂ ಮಹಾ ಪಾಪಗಳನ್ನು ನೀಗಿಸುವುದೂ, ಆದ ಉತ್ತಮವಾದ ರತ್ನಕುಂಡವನ್ನು ಹೊಂದಬೇಕು.

೨. ಕೃಷ್ಣನು ಅಲ್ಲಿ ಭೂಮಿ, ಸ್ವರ್ಗ, ಆಕಾಶಗಳಲ್ಲಿರುವ ಎಂಟು ಕೋಟಿ ತೀರ್ಥಗಳನ್ನು ತಂದು ಹಾಕಿರುವನು.

೩. ಪ್ರಿಯಳೆ! ಅಲ್ಲಿ ಒಂದು ಕೋಟಿ ಗಣಗಳು ಆ ಕುಂಡವನ್ನು ಕಾಪಾಡುತ್ತಿವೆ. ಕಲಿಯುಗದಲ್ಲಿ ಪಾಪಿಗಳಿಗೆ ಅದು ಹೊಂದಲಶಕ್ಯವಾದುದು.

೪. ಮಹಾದೇವಿ! ಅಲ್ಲಿ ವಿಧಿಯಂತೆ ಮಿಂದ ಮಾನವನು ಅಶ್ವಮೇಧಯಾಗವ ನೂರು ಮಡಿಯಷ್ಟು ಹೆಚ್ಚಾದ ಫಲವನ್ನು ಪಡೆಯುವನು.

ಏಕಾದಶ್ಯಾಂ ವಿಶೇಷೇಣ ಪಿಂಡಂ ತತ್ರ ಪ್ರದಾಪಯೇತ್ ।
ಅಕ್ಷಯ್ಯಾಂ ತೃಪ್ತಿಮಾಯಾಂತಿ ಪಿತರಸ್ತಸ್ಯ ಭಾಮಿನಿ ॥ ೫ ॥
ಕುರ್ಯಾಜ್ಜಾಗರಣಂ ತತ್ರ ಏಕಾದಶ್ಯಾಂ ವಿಧಾನತಃ ।
ವಾಂಛಿತಂ ಲಭತೇ ದೇವಿ ಯದಿ ಶ್ರದ್ಧಾ ದೃಢಾ ಭವೇತ್ ॥ ೬ ॥
ದೇಯಾನಿ ಪೀತವಸ್ತ್ರಾಣಿ ತಥಾ ಧೇನುಃ ಪಯಸ್ವಿನೀ ।
ತತ್ರ ವಿಷ್ಣುಂ ಸಮುದ್ದಿಶ್ಯ ಸಮ್ಯಗ್ಯಾತ್ರಾಫಲಾಪ್ತಯೇ ॥ ೭ ॥
ಹೇಮಕುಂಡಂ ಕೃತೇ ಪ್ರೋಕ್ತಂ ತ್ರೇತಾಯಾ ರೌಪ್ಯನಾಮಕಂ ।
ದ್ವಾಪರೇ ಚಕ್ರಕುಂಡಂ ತು ರತ್ನಕುಂಡಂ ಕಲೌ ಸ್ಮೃತಂ ॥ ೮ ॥
ಪಾತಾಲವಾಹಿನೀ ಗಂಗಾ ಸ್ರೋತಾಂಸಿ ತತ್ರ ಭೂರಿಶಃ ।
ಸಮಾನೀತಾನಿ ಹರಿಣಾ ತತ್ರ ತಿಷ್ಠಂತಿ ಭಾಮಿನಿ ॥ ೯ ॥
ತತ್ರ ಸ್ನಾನೇನ ದೇವೇಶಿ ಸರ್ವತೀರ್ಥಾಭಿಷೇಚನಂ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರತ್ನಕುಂಡಮಾಹಾತ್ಮ್ಯವರ್ಣನಂ ನಾಮ
॥ ಏಕೋನಸಪ್ತತ್ಯುತ್ತರಶತತಮೋಽಧ್ಯಾಯಃ ॥

---

೫. ಪ್ರಿಯಳೆ! ಅಲ್ಲಿ ಏಕಾದಶೀ ದಿನ ವಿಶೇಷವಾಗಿ ಪಿಂಡ ಪ್ರದಾನವನ್ನು ಮಾಡಬೇಕು. ಅದರಿಂದ ಪಿತೃಗಳು ಅಕ್ಷಯವಾದ ತೃಪ್ತಿಯನ್ನು ಹೊಂದುವರು.

೬. ದೇವಿ! ಏಕಾದಶೀದಿನ ದೃಢವಾದ ಶ್ರದ್ಧೆಯಿಂದ ಅಲ್ಲಿ ವಿಧಿಯಂತೆ ಜಾಗರಣೆ ಮಾಡಿದವನು ಇಷ್ಟಾರ್ಥವನ್ನು ಪಡೆಯುವನು.

೭. ಅಲ್ಲಿ ಯಾತ್ರೆಯ ಫಲವನ್ನು ಪಡೆಯುವುದಕ್ಕಾಗಿ ವಿಷ್ಣುವನ್ನುದ್ದೇಶಿಸಿ ಪೀತಾಂಬರಗಳನ್ನೂ, ಹಾಲನ್ನು ಕರೆಯುವ ಹಸುಗಳನ್ನೂ ದಾನಮಾಡಬೇಕು.

೮. ಇದು ಕೃತಯುಗದಲ್ಲಿ ಹೇಮಕುಂಡವೆಂದೂ, ತ್ರೇತಾಯುಗದಲ್ಲಿ ರೌಪ್ಯ ಕುಂಡವೆಂದೂ, ದ್ವಾಪರದಲ್ಲಿ ಚಕ್ರಕುಂಡವೆಂದೂ, ಕಲಿಯುಗದಲ್ಲಿ ರತ್ನಕುಂಡವೆಂದೂ ಪ್ರಸಿದ್ಧವಾಗಿರುವುದು.

೯. ಪ್ರಿಯಳೆ! ಅಲ್ಲಿ ವಿಷ್ಣುವು ತಂದ ಪಾತಾಳ ವಾಹಿನಿಯಾದ ಗಂಗಾ ಪ್ರವಾಹವು ಬಹಳವಾಗಿರುವುವು.

೧೦. ದೇವೇಶಿ! ಅಲ್ಲಿ ಸ್ನಾನ ಮಾಡುವುದರಿಂದ ಸಕಲ ತೀರ್ಥಗಳಲ್ಲಿಯೂ ಮಿಂದಂತಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರತ್ನಕುಂಡಮಾಹಾತ್ಮ್ಯವರ್ಣನವೆಂಬ
ನೂರೈವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಷ್ಟ್ಯುತ್ತರಶತತಮೋಽಧ್ಯಾಯಃ

ರೈವಂತಕರಾಜಭಟ್ಟಾರಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರಾಜಭಟ್ಟಾರಕಂ ಪರಂ ।
ರೈವಂತಕಂ ಸೂರ್ಯಪುತ್ರಮಶ್ವಾರೂಢಂ ಮಹಾಬಲಂ ॥ ೧ ॥
ಸಂಸ್ಥಿತಂ ಕ್ಷೇತ್ರಮಧ್ಯೇ ತು ಸಾವಿತ್ರ್ಯಾ ನೈರ್ಋತೇ ಪ್ರಿಯೇ ।
ತಂ ದೃಷ್ಟ್ವಾ ಮಾನವೋ ದೇವಿ ಸರ್ವಾಪದ್ಭ್ಯೋ ವಿಮುಚ್ಯತೇ ॥ ೨ ॥
ರವಿವಾರೇಣ ಸಪ್ತಮ್ಯಾಂ ಯಸ್ತಂ ಪೂಜಯತೇ ನರಃ ।
ತಸ್ಯಾಽನ್ವಯೇಽಪಿ ನೋ ದೇವಿ ದರಿದ್ರೋ ಜಾಯತೇ ನರಃ ॥ ೩ ॥
ತಸ್ಮಾತ್ಸರ್ವಪ್ರಯತ್ನೇನ ತಮೇವಾರಾಧಯೇನ್ನರಾಃ ।
ನಿರ್ವಿಘ್ನಂ ಕ್ಷೇತ್ರವಾಸಾರ್ಥಂ ರಾಜಾ ವಾಽಶ್ವವಿವೃದ್ಧಯೇ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ರೈವಂತಕರಾಜಭಟ್ಟಾರಕಮಾಹಾತ್ಮ್ಯವರ್ಣನಂ ನಾಮ ಷಷ್ಟ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ರೈವಂತಕರಾಜಭಟ್ಟಾರಕಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಸಾವಿತ್ರಿಯ ನೈರ್ಋತ್ಯದಿಕ್ಕಿನಲ್ಲಿ ಕ್ಷೇತ್ರ ಮಧ್ಯದಲ್ಲಿರುವವನೂ, ಅತ್ಯಂತ ಬಲವುಳ್ಳವನೂ, ಅಶ್ವವನ್ನೇರಿದವನೂ, ಸೂರ್ಯನ ಮಗನೂ ಆದ ರೈವಂತಕ ರಾಜ ಭಟ್ಟಾರಕನೆಡೆಗೆ ಹೋಗಬೇಕು. ಮಾನವನು ಅವನನ್ನು ನೋಡಿದರೆ ಸಕಲಾಪತ್ತುಗಳಿಂದಲೂ ಮುಕ್ತನಾಗುವನು.

೩. ಭಾನುವಾರ ಸಪ್ತಮಿಯ ದಿನ ಅವನನ್ನು ಪೂಜಿಸಿದ ಮನುಷ್ಯನ ವಂಶದಲ್ಲಿ ಬಡವನು ಜನಿಸುವುದಿಲ್ಲ.

೪. ಆದುದರಿಂದ ನಿರ್ವಿಘ್ನವಾಗಿ ಕ್ಷೇತ್ರವಾಸವುನೆರವೇರುವುದಕ್ಕೋಸುಗ ನರನು ಸಕಲಪ್ರಯತ್ನದಿಂದ ಅವನನ್ನು ಪೂಜಿಸಬೇಕು. ದೊರೆಯು ತನ್ನ ಕುದುರೆಗಳ ಅಭಿವೃದ್ಧಿಗಾಗಿ ಅವನನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ರೈವಂತಕರಾಜಭಟ್ಟಾರಕಮಾಹಾತ್ಮ್ಯವರ್ಣನವೆಂಬ ನೂರರವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಷಷ್ಟ್ಯುತ್ತರಶತತಮೋಽಧ್ಯಾಯಃ

ಅನಂತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ:—

ತತೋ ಗಚ್ಛೇನ್ಮಹಾದೇವಿ ತಸ್ಯ ದಕ್ಷಿಣತಃ ಸ್ಥಿತಂ ।
ಈಶಾನೇ ಲಕ್ಷ್ಮಣೇಶಾಚ್ಚ ಧನುಷಾಂ ಷೋಡಶೇ ಪ್ರಿಯೇ ॥ ೧ ॥
ಅನಂತೇಶ್ವರನಾಮಾನಮನಂತೇನ ಪ್ರತಿಷ್ಠಿತಂ ।
ನಾಗರಾಜೇನ ದೇವೇಶಿ ಜ್ಞಾತ್ವಾ ಕ್ಷೇತ್ರಂ ತು ಪಾವನಂ ॥ ೨ ॥
ಯಸ್ತು ತಂ ಪೂಜಯೇದ್ದೇವಿ ಪಂಚಮ್ಯಾಂ ಫಾಲ್ಗುನೇ ಸಿತೇ ।
ಪಂಚೋಪಚಾರವಿಧಿನಾ ಜಿತಾಹಾರೋ ಜಿತೇಂದ್ರಿಯಃ ॥ ೩ ॥
ನ ತಂ ದಂಶಂತಿ ಫಣಿನೋ ದಶವರ್ಷಾಣಿ ಪಂಚ ಚ ।
ವಿಷಂ ನ ಕ್ರಮತೇ ದೇವಿ ದೇಹೇ ತ್ವಚರಮೇವ ವಾ ॥ ೪ ॥

ತಸ್ಮಾತ್ತಂ ಪೂಜಯೇದ್ಯತ್ನಾತ್ಪಂಚಮ್ಯಾಂ ಚ ವಿಶೇಷತಃ ॥ ೫ ॥

ಕನ್ನಡದ ಅನುವಾದ

ಅನಂತೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಆ ರೈವಂತಕ ರಾಜಭಟ್ಟಾರಕನ ದಕ್ಷಿಣದಲ್ಲಿ ಲಕ್ಷ್ಮಣೇಶ್ವರನ ಈಶಾನ್ಯದಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿರುವವನೂ ಅನಂತನೆಂಬ ನಾಗರಾಜನು ಆ ಪವಿತ್ರ ಕ್ಷೇತ್ರವನ್ನರಿತು ಪ್ರತಿಷ್ಠೆ ಮಾಡಿರುವವನೂ ಆದ ಅನಂತೇಶ್ವರನೆಡೆಗೆ ಹೋಗಬೇಕು.

೩-೪. ದೇವಿ! ಫಾಲ್ಗುನ ಶುಕ್ಲಪಕ್ಷದ ಪಂಚಮೀ ದಿನ ಉಪವಾಸ ಮಾಡಿದವನೂ, ಜಿತೇಂದ್ರಿಯನೂ ಆಗಿ ಆ ಅನಂತೇಶ್ವರನನ್ನು ಪಂಚೋಪಚಾರ ವಿಧಿಯಿಂದ ಪೂಜಿಸಿದ ಮನುಷ್ಯನನ್ನು ಸರ್ಪಗಳು ಹದಿನೈದು ವರ್ಷಗಳಕಾಲ ಕಚ್ಚುವುದಿಲ್ಲ. ಕಡಿದರೂ ದೇಹದಲ್ಲಿ ವಿಷವು ವ್ಯಾಪಿಸುವುದಿಲ್ಲ.

೫. ಆದುದರಿಂದ ಆ ಅನಂತೇಶ್ವರನನ್ನು ಪಂಚಮೀ ದಿನ ವಿಶೇಷವಾಗಿ ಪೂಜಿಸಬೇಕು.

ತತ್ರಾನಂತವ್ರತಂ ಕಾರ್ಯಂ ಮಧುಪಾಯಸಸಂಯುತಂ ।
ಪಾಯಸಂ ಮಧುಸಂಯುಕ್ತಂ ದೇಯಂ ವಿಪ್ರಾಯ ಭೋಜನಂ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅನಂತೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕಸಪ್ತತ್ಯುತ್ತರಶತತಮೋಽಧ್ಯಾಯಃ ॥

---

೬. ಅಲ್ಲಿ ಜೇನು, ಪಾಯಿಸಗಳೊಡನೆ ಅನಂತವ್ರತವನ್ನಾಚರಿಸಬೇಕು. ಜೇನು, ಪಾಯಸ, ಇವುಗಳೊಡನೆ ಬ್ರಾಹ್ಮಣನಿಗೆ ಭೋಜನ ಮಾಡಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅನಂತೇಶ್ವರಮಾಹಾತ್ಮ್ಯವರ್ಣನವೆಂಬ
ನೂರಅರುವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಷಷ್ಟ್ಯುತ್ತರಶತತಮೋಽಧ್ಯಾಯಃ

ಅಷ್ಟಕುಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಮಾದ್ದಕ್ಷಿಣತಃ ಸ್ಥಿತಂ ।
ಲಕ್ಷ್ಮಣೇಶಾಚ್ಚ ಪೂರ್ವಸ್ಮಿಂಲ್ಲಿಂಗಮಷ್ಟಕುಲೇಶ್ವರಂ ॥ ೧ ॥
ಸರ್ವಪಾಪಪ್ರಶಮನಂ ಮಹಾವಿಷಪ್ರಣಾಶನಂ ।
ಪೂಜಿತಂ ಸಿದ್ಧಗಂಧರ್ವೈರ್ವಾಂಛಿತಾರ್ಥಪ್ರದಾಯಕಂ ॥ ೨ ॥
ಯಸ್ತಂ ಪೂಜಯತೇ ಮರ್ತ್ಯಃ ಕೃಷ್ಣಾಷ್ಟಮ್ಯಾಂ ವಿಧಾನತಃ ।
ಸ ಮುಕ್ತಃ ಪಾತಕೈರ್ಘೋರೈರ್ನಾಗಲೋಕೇ ಮಹೀಯತೇ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಷ್ಟಕುಲೇಶ್ವರ ಮಾಹಾತ್ಮ್ಯವರ್ಣನಂ ನಾಮ
॥ ದ್ವಿಷಷ್ಟ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಅಷ್ಟಕುಲೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಆ ಅನಂತೇಶ್ವರನ ದಕ್ಷಿಣದಲ್ಲಿಯೂ, ಲಕ್ಷ್ಮಣೇಶ್ವರನಿಗೆ ಪೂರ್ವಕ್ಕೂ ಇರುವುದೂ, ಸಮಸ್ತ ಪಾಪಗಳನ್ನು ನೀಗಿಸುವುದೂ, ಸಕಲ ಪಾಪಗಳನ್ನು ಪರಿಹರಿಸುವುದೂ, ಇಷ್ಟಾರ್ಥವನ್ನೀಯುವುದೂ, ಆದ ಅಷ್ಟಕುಲೇಶ್ವರ ಲಿಂಗದೆಡೆಗೆ ಹೋಗಬೇಕು.

೩. ಮನುಷ್ಯನು ಕೃಷ್ಣಾಷ್ಟಮೀ ದಿನ ವಿಧಿಯಿಂದ ಆ ಲಿಂಗವನ್ನು ಪೂಜಿಸಿದರೆ ಘೋರಪಾಪಗಳಿಂದ ಮುಕ್ತನಾಗಿ ನಾಗಲೋಕದಲ್ಲಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಷ್ಟಕುಲೇಶ್ವರಮಾಹಾತ್ಮ್ಯವರ್ಣನವೆಂಬ
ನೂರಅರವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ತ್ರಿಷಷ್ಟ್ಯುತ್ತರಶತತಮೋಽಧ್ಯಾಯಃ

ನಾಸತ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಮಾತ್ಪೂರ್ವೇಣ ಸಂಸ್ಥಿತಂ ।
ನಾಸತ್ಯೇಶ್ವರನಾಮಾನಂ ಮಹಾಕಲ್ಮಷನಾಶನಂ ॥ ೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾಸತ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಪಂಚಾಶದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ನಾಸತ್ಯೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಆ ಅಷ್ಟಕುಲೇಶ್ವರನಿಗೆ ಪೂರ್ವದಲ್ಲಿರುವ ಮಹಾಪಾಪವನ್ನು ನೀಗಿಸುವ ನಾಸತ್ಯೇಶ್ವರನೆಡೆಗೆ ಹೋಗಬೇಕು,

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾಸತ್ಯೇಶ್ವರಮಾಹಾತ್ಮ್ಯವರ್ಣನವೆಂಬ
ನೂರಅರುವತ್ತಮೂರನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಚತುಃಷಷ್ಟ್ಯುತ್ತರಶತತಮೋಽಧ್ಯಾಯಃ

ಅಶ್ವಿನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಮಾತ್ಪೂರ್ವೇಣ ಸಂಸ್ಥಿತಂ ।
ಮಹಾಪಾಪೌಘಶಮನಂ ಪೂಜಿತಂ ಸರ್ವಕಾಮದಂ || ೧ ||

ಅಶ್ವಿನೇಶ್ವರನಾಮಾನಂ ಧನುಷಾಂ ಪಂಚಕೇ ಸ್ಥಿತಂ ।
ಸರ್ವರೋಗಪ್ರಶಮನಂ ದೃಷ್ಟಂ ಸರ್ವಾರ್ಥಸಾಧಕಂ || ೨ ||

ಯೇ ಕೇಚಿದ್ರೋಗಿಣೋ ಲೋಕೇ ತೇಷಾಂ ತದ್ಭೇಷಜಂ ಮಹತ್ ।
ಮಾಘಮಾಸೇ ದ್ವಿತೀಯಾಯಾಂ ದರ್ಶನಂ ತಸ್ಯ ದುರ್ಲಭಂ || ೩ ||

ತಸ್ಮಾತ್ಪಶ್ಯೇಚ್ಚ ತದ್ಭಕ್ತ್ಯಾ ಯದಿ ಶ್ರೇಯೋಽಭಿಕಾಂಕ್ಷಿತಂ ।
ಮಹಾಪಾಪೌಘಶಮನಂ ಪೂಜಿತಂ ಸರ್ವಕಾಮದಂ || ೪ ||

ಕನ್ನಡದ ಅನುವಾದ

ಅಶ್ವಿನೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ನಾಸತ್ಯೇಶ್ವರನ ಪೂರ್ವದಲ್ಲಿ ಐದು ಬಿಲ್ಲುಗಳ ದೂರದಲ್ಲಿರುವವನೂ, ಮಹಾಪಾತಕಗಳನ್ನು ನಾಶ ಮಾಡುವವನೂ, ಪೂಜಿಸಿದವರಿಗೆ ಸಕಲೇಷ್ಟಾರ್ಥಗಳನ್ನೀಯುವವನೂ, ದರ್ಶನದಿಂದ ಸಮಸ್ತ ರೋಗಗಳನ್ನು ಪರಿಹರಿಸುವವನೂ, ಸಕಲಾರ್ಥ ಸಾಧಕನೂ ಆದ ಅಶ್ವಿನೇಶ್ವರನನ್ನು ಹೊಂದಬೇಕು.

೩. ಪ್ರಪಂಚದಲ್ಲಿ ರೋಗಿಗಳಾದವರಿಗೆ ಅವನು ಔಷಧದಂತಿರುವವನು. ಮಾಘ ಮಾಸದ ದ್ವಿತೀಯಾ ದಿನ ಅವನ ದರ್ಶನವು ದುರ್ಲಭವಾದುದು.

೪–೫. ಆದುದರಿಂದ ಆ ದ್ವಿತೀಯಾ ದಿನ ಶ್ರೇಯಸ್ಸನ್ನು ಬಯಸುವವನು

ಇತಿ ಲಿಂಗದ್ವಯಂ ದೇವಿ ಸೂರ್ಯಪುತ್ರಪ್ರತಿಷ್ಠಿತಂ ।
ತಸ್ಮಿನ್ನೇವ ದಿನೇ ಪಶ್ಯೇತ್ಸಂಯತಾತ್ಮಾ ನರೋತ್ತಮಃ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಆಶ್ವಿನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಃಷಷ್ಟ್ಯುತ್ತರಶತತಮೋಽಧ್ಯಾಯಃ ॥

ಜಿತೇಂದ್ರಿಯನಾಗಿ ಸೂರ್ಯನ ಮಗನು ಪ್ರತಿಷ್ಠೆಮಾಡಿರುವ ಪಾಪವನ್ನು ನೀಗಿಸಿ ಇಷ್ಟಾರ್ಥವನ್ನೀಯುವ ಆ ಲಿಂಗವನ್ನು ನೋಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಆಶ್ವಿನೇಶ್ವರಮಾಹಾತ್ಮ್ಯವರ್ಣನವೆಂಬ
ನೂರಅರುವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಷಷ್ಟ್ಯುತ್ತರಶತತಮೋಽಧ್ಯಾಯಃ

ಸಾವಿತ್ರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಾವಿತ್ರೀಂ ಲೋಕಮಾತರಂ ।
ಮಹಾಪಾಪಪ್ರಶಮನೀಂ ಸೋಮೇಶಾದೀಶದಿಕ್ಸ್ಥಿತಾಂ ॥ ೧ ॥
ಸಂಯತಾತ್ಮಾ ನರಃ ಪಶ್ಯೇತ್ತತ್ರ ತಾಂ ನಿಯತಾತ್ಮವಾನ್ ॥ ೨ ॥
ಬ್ರಹ್ಮಣಾ ಯಷ್ಟುಕಾಮೇನ ಸಾವಿತ್ರೀ ಸಹಧರ್ಮಿಣೀ ।
ಕೃತಾ ತಾಂ ಬಲತೋ ಜ್ಞಾತ್ವಾ ಗಾಯತ್ರೀಂ ಕೋಪಮಾವಿಶತ್ ॥ ೩ ॥
ತತಃ ಸಂತ್ಯಜ್ಯ ಸಾ ದೇವೀಂ ಬ್ರಹ್ಮಾಣಂ ಕಮಲೋದ್ಭವಂ ।
ಸಪತ್ನೀರೋಷ ಸಂತಪ್ತಾ ಪ್ರಭಾಸಂ ಕ್ಷೇತ್ರಮಾಶ್ರಿತಾ ॥ ೪ ॥
ತಪಃ ಕರೋತಿ ವಿಪುಲಂ ದೇವೈರಪಿ ಸುದುಃಸಹಂ ।
ತತ್ರ ಸ್ಥಲೇ ಸ್ಥಿತಾ ದೇವಿ ಸಾಽದ್ಯಾಪಿ ಪ್ರಿಯದರ್ಶನಾ ॥ ೫ ॥

ಕನ್ನಡದ ಅನುವಾದ

ಸಾವಿತ್ರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಸೋಮೇಶ್ವರನ ಈಶಾನ್ಯ ದಿಕ್ಕಿನಲ್ಲಿರುವ ಮಹಾಪಾಪವನ್ನು ನಿವಾರಿಸುವ ಸಾವಿತ್ರಿಯೆಂಬ ಲೋಕಮಾತೆ ಯೆಡೆಗೆ ಹೋಗಬೇಕು.

೨. ಮನುಷ್ಯನು ಅಲ್ಲಿ ಆಕೆಯ ಆತ್ಮಸಂಯಮವುಳ್ಳವನಾಗಿ ನೋಡಬೇಕು.

೩. ಯಾಗ ಮಾಡಲಪೇಕ್ಷಿಸುವ ಬ್ರಹ್ಮನು ಗಾಯತ್ರಿಯನ್ನು ಸಹಧರ್ಮಿಣಿ ಯನ್ನಾಗಿ ಮಾಡಲು ಅದನ್ನು ತಿಳಿದು ಸಾವಿತ್ರಿಯು ಕುಪಿತಳಾದಳು.

೪. ಬಳಿಕ ಆ ದೇವಿಯು ಬ್ರಹ್ಮನನ್ನು ತ್ಯಜಿಸಿ ಸವತಿಯ ಮೇಲಣ ರೋಷದಿಂದ ವ್ಯಥೆಗೊಂಡವಳಾಗಿ ಪ್ರಭಾಸಕ್ಷೇತ್ರವನ್ನಾಶ್ರಯಿಸಿದಳು.

೫. ಸುಂದರಿಯಾದ ಸಾವಿತ್ರೀದೇವಿಯು ಈಗಲೂ ಆ ಪ್ರಭಾಸ ಕ್ಷೇತ್ರದಲ್ಲಿ ನೆಲಸಿ ದೇವತೆಗಳಿಗೂ ಸಹಿಸಲಾಗದ ಮಹಾ ತಪಸ್ಸನ್ನಾಚರಿಸುತ್ತಿರುವಳು.

ಶ್ರೀ ದೇವ್ಯುವಾಚ :—
ಕಿಮರ್ಥಂ ಸಾ ಪರಿತ್ಯಕ್ತಾ ಸಾವಿತ್ರೀ ಬ್ರಹ್ಮಣಾ ಪುರಾ ।
ಗಾಯತ್ರೀ ಚ ಕಥಂ ಪ್ರಾಪ್ತಾ ಕೇನ ಚಾಸ್ಯ ನಿವೇದಿತಾ ॥ ೬ ॥
ಕೀದೃಶೀಂ ತಾಂ ಚ ಗಾಯತ್ರೀಂ ಲಬ್ಧವಾನ್ ಪದ್ಮಸಂಭವಃ ।
ಯಸ್ಯಾಂ ಪತ್ನೀಂ ಸಮುತ್ಸೃಜ್ಯ ತಸ್ಯಾಮೇವ ಮನೋ ದಧೌ ॥ ೭ ॥
ತಸ್ಯ ಸಾ ದುಹಿತಾ ದೇವ ಕಿಮರ್ಥಂ ಚ ವಿವಾಹಿತಾ ।
ಏತನ್ಮೇ ಕೌತುಕಂ ಸರ್ವಂ ಯಥಾವದ್ವಕ್ತುಮರ್ಹಸಿ ॥ ೮ ॥
ಈಶ್ವರ ಉವಾಚ :—
ಶೃಣು ದೇವಿ ಪ್ರವಕ್ಷ್ಯಾಮಿ ಸಾವಿತ್ರ್ಯಾಶ್ಚರಿತಂ ಮಹತ್ ।
ಯಥಾ ಸಾ ಬ್ರಹ್ಮಣಾ ತ್ಯಕ್ತಾ ಗಾಯತ್ರೀ ಚ ವಿವಾಹಿತಾ ॥ ೯ ॥
ಪುರಾ ಬುದ್ಧಿಃ ಸಮುತ್ಪನ್ನಾ ಬ್ರಹ್ಮಣೋಽವ್ಯಕ್ತಜನ್ಮನಃ ।
ಇತಿ ವೇದಾ ಮಯಾ ಪ್ರೋಕ್ತಾ ಯಜ್ಞಾರ್ಥಂ ನಾತ್ರ ಸಂಶಯಃ ॥ ೧೦ ॥
ಯಜ್ಞೈಃ ಸಂತರ್ಪಿತಾ ದೇವಾ ವೃಷ್ಟಿಂ ದಾಸ್ಯಂತಿ ಭೂತಲೇ ।
ತತಶ್ಚೌಷಧಯಃ ಸರ್ವಾ ಭವಿಷ್ಯಂತಿ ಧರಾತಲೇ ॥ ೧೧ ॥

---

೬. ಶ್ರೀ ದೇವಿಯು ಹೇಳುತ್ತಾಳೆ :—ಹಿಂದೆ ಬ್ರಹ್ಮನು ಆ ಸಾವಿತ್ರಿಯನ್ನು ಏಕೆ ತ್ಯಜಿಸಿದನು? ಗಾಯತ್ರಿಯನ್ನು ಹೇಗೆ ಪಡೆದನು. ಅವಳ ವಿಷಯವನ್ನು ಅವನಿಗೆ ಯಾರು ಹೇಳಿದರು.

೭. ಬ್ರಹ್ಮನು ಸರಸ್ವತಿಯನ್ನು ಬಿಟ್ಟು ಗಾಯತ್ರಿಯಲ್ಲಿ ಅನುರಕ್ತನಾದನಷ್ಟೆ. ಆ ಗಾಯತ್ರಿಯು ಹೇಗಿರುವಳು ?

೮. ಸ್ವಾಮಿ ! ಅವಳು ಯಾರ ಮಗಳು ? ಬ್ರಹ್ಮನು ಏಕೆ ಅವಳನ್ನು ವಿವಾಹ ಮಾಡಿಕೊಂಡನು ? ಈ ವಿಷಯದಲ್ಲಿ ನನಗೆ ಕುತೂಹಲವುಂಟಾಗಿದೆ. ಇದನ್ನು ನನಗೆ ಹೇಳು.

೯. ಈಶ್ವರನು ಹೇಳುತ್ತಾನೆ :—ದೇವಿ ಬ್ರಹ್ಮನು ಸಾವಿತ್ರಿಯನ್ನು ತ್ಯಜಿಸಿ ಗಾಯತ್ರೀಯನ್ನು ಹೇಗೆ ವಿವಾಹ ಮಾಡಿಕೊಂಡನೆಂಬುದನ್ನೂ, ಸಾವಿತ್ರಿಯ ಮಹಾ ಚರಿತೆಯನ್ನೂ ಹೇಳುವೆನು; ಕೇಳು.

೧೦. ಹಿಂದೆ ಸ್ವಯಮುತ್ಪನ್ನನಾದ ಬ್ರಹ್ಮನು ಹೀಗೆ ಆಲೋಚಿಸಿದನು. ನಾನು ಹೀಗೆ ವೇದಗಳನ್ನು ಯಜ್ಞಕ್ಕಾಗಿ ಹೇಳಿರುವೆನು.

೧೧. ಯಜ್ಞಗಳಿಂದ ತೃಪ್ತಿಗೊಳಿಸಲ್ಪಟ್ಟ ದೇವತೆಗಳು ಭೂಮಿಯಲ್ಲಿ ಮಳೆ ಸುರಿಸುವರು. ಅದರಿಂದ ಸಮಸ್ತೌಷಧಿಗಳೂ ಹುಟ್ಟುವುವು.

ತಸ್ಮಾತ್ತ್ವಂ ಜಾಯತೇ ಶುಕ್ರಂ ಶುಕ್ರಾತ್ಸೃಷ್ಟಿಃ ಪ್ರವರ್ತತೇ ।
ಸೃಷ್ಟ್ಯರ್ಥಂ ಸರ್ವಲೋಕಾನಾಂ ತತೋ ಯಜ್ಞಂ ಕರೋಮ್ಯಹಂ ॥ ೧೨ ॥

ದೃಷ್ಟ್ವಾ ಮಾಂ ಯಜ್ಞ ಆಸಕ್ತಂ ಯೇ ಚ ವಿಪ್ರಾ ಧರಾತಲೇ ।
ತೇ ಯಜ್ಞಾನ್ ಪ್ರಚರಿಷ್ಯಂತಿ ಶತಶೋಽಥ ಸಹಸ್ರಶಃ ॥ ೧೩ ॥

ಏವಂ ಸ ನಿಶ್ಚಯಂ ಕೃತ್ವಾ ಯಜ್ಞಾರ್ಥಂ ಸುರಸುಂದರಿ ।
ತೀರ್ಥಂ ನಿವೇಶಯಾಮಾಸ ಪುಷ್ಕರಂ ನಾಮ ನಾಮತಃ ॥ ೧೪ ॥

ಯಜ್ಞವಾಟೋ ಮಹಾಂಸ್ತತ್ರ ಆಸೀತ್ತಸ್ಯ ಮಹಾತ್ಮನಃ ।
ತತ್ರ ದೇವರ್ಷಯಃ ಸರ್ವೇ ದೇವಾಃ ಸೇಂದ್ರಪುರೋಗಮಾಃ ॥ ೧೫ ॥

ಸಮಾಯಾತಾ ಮಹಾದೇವಿ ಯಜ್ಞೇ ಪೈತಾಮಹೇ ತದಾ ।
ಪುಣ್ಯಾಸ್ತೇಽಪಿ ದ್ವಿಜಶ್ರೇಷ್ಠಾಸ್ತತ್ರರ್ತ್ವಿಜಃ ಪ್ರಜಜ್ಞಿರೇ ॥ ೧೬ ॥

ಸಾವಿತ್ರೀ ಲೋಕಜನನೀ ಪತ್ನೀ ತಸ್ಯ ಮಹಾತ್ಮನಃ ।
ಗೃಹಕಾರ್ಯೇ ಸಮಾಸಕ್ತಾ ದೀಕ್ಷಾಕಾಲವ್ಯತಿಕ್ರಮಾತ್ ।
ಅಧ್ವರ್ಯುಣಾ ಸಮಾಹೂತಾ ಸಾವಿತ್ರೀ ವಾಕ್ಯಮಬ್ರವೀತ್ ॥ ೧೭ ॥

---

೧೨. ಆದರಿಂದ ರೇತಸ್ಸೂ, ಆ ರೇತಸ್ಸಿನಿಂದ ಸೃಷ್ಟಿಯೂ, ಆಗುವುದು. ಆದ್ದರಿಂದ ನಾನು ಸಕಲ ಲೋಕಗಳ ಸೃಷ್ಟಿಗಾಗಿ ಯಜ್ಞವನ್ನು ಮಾಡುವೆನು.

೧೩. ಯಜ್ಞದಲ್ಲಿ ಆಸಕ್ತನಾದ ನನ್ನನ್ನು ನೋಡಿ ಭೂಮಿಯಲ್ಲಿರುವ ಸಾವಿರಾರು ಮಂದಿ ಬ್ರಾಹ್ಮಣರು ಯಜ್ಞವನ್ನಾಚರಿಸುವರು.

೧೪. ಸುಂದರಿ! ಬ್ರಹ್ಮನು ಹೀಗೆ ಯಜ್ಞ ಮಾಡುವುದಾಗಿ ನಿಶ್ಚಯಿಸಿ ಅಲ್ಲಿ ಪುಷ್ಕರವೆಂಬ ತೀರ್ಥವನ್ನು ನಿರ್ಮಿಸಿದನು.

೧೫–೧೬. ಅಲ್ಲಿ ಮಹಾತ್ಮನಾದ ಬ್ರಹ್ಮನ ಮಹಾ ಯಜ್ಞ ಶಾಲೆಯು ನಿರ್ಮಿತವಾಯಿತು. ಬ್ರಹ್ಮನ ಆ ಯಜ್ಞಕ್ಕೆ ಇಂದ್ರನೇ ಮೊದಲಾದ ಸಮಸ್ತ ದೇವತೆಗಳೂ, ದೇವರ್ಷಿಗಳೂ ಬಂದರು. ಪವಿತ್ರರಾದ ಬ್ರಾಹ್ಮಣೋತ್ತಮರು ಋತ್ವಿಜರಾದರು.

೧೭. ಮಹಾತ್ಮನಾದ ಆ ಬ್ರಹ್ಮನ ರಾಣಿಯಾದ ಸಾವಿತ್ರಿಯು ಗೃಹಕಾರ್ಯದಲ್ಲಿ ನಿರತಳಾಗಿ ದೀಕ್ಷಾಕಾಲವನ್ನು ಮೀರುತ್ತಿರಲು ಅಧ್ವರ್ಯುವು ಅವಳನ್ನು ಕರೆದನು. ಆಗ ಅವಳು ಹೀಗೆಂದಳು.

ಸಾವಿತ್ರ್ಯುವಾಚ :—

ಅದ್ಯಾಪಿ ನ ಕೃತೋ ವೇಷಃ ನ ಗೃಹೇ ಗೃಹಮಂಡನಂ ।
ಲಕ್ಷ್ಮೀರ್ನಾದ್ಯಾಪಿ ಸಂಪ್ರಾಪ್ತಾ ನ ಭವಾನೀ ನ ಜಾಹ್ನವೀ ॥ ೧೮ ॥
ನ ಸ್ವಾಹಾ ನ ಸ್ವಧಾ ಚೈವ ತಥಾ ಚೈವಾಪ್ಯರುಂಧತೀ ।
ಇಂದ್ರಾಣೀ ದೇವಪತ್ನ್ಯೋಽನ್ಯಾಃ ಕಥಮೇಕಾಕಿನೀ ವ್ರಜೇ ॥ ೧೯ ॥
ಉಕ್ತಃ ಪಿತಾಮಹೋ ಗತ್ವಾ ಪುಲಸ್ತ್ಯೇನ ಮಹಾತ್ಮನಾ ।
ಸಾವಿತ್ರೀ ದೇವ ನಾಯಾತಿ ಪ್ರಸಕ್ತಾ ಗೃಹಕರ್ಮಣಿ ॥ ೨೦ ॥
ತ್ವತ್ಪತ್ನೀ ಕಿಮಿದಂ ಕರ್ಮ ಫಲೇನ ಸಂಪ್ರವರ್ತತೇ ।
ತಚ್ಛ್ರುತ್ವಾ ದೀಕ್ಷಿತೋ ವಾಚಂ ಶಿಖೀ ಮುಂಡೀ ಮೃಗಾಜಿನೀ ॥ ೨೧ ॥
ಪತ್ನೀಕೋಪೇನ ಸಂತಪ್ತಃ ಪ್ರಾಹ ದೇವಂ ಪುರಂದರಂ ॥ ೨೨ ॥
ಗಚ್ಛ ಮದ್ವಚನಾಚ್ಛಕ್ರ ಪತ್ನೀಮನ್ಯಾಂ ಕುತಶ್ಚನ ।
ಗೃಹೀತ್ವಾ ಶೀಘ್ರಮಾಗಚ್ಛ ನ ಸ್ಯಾತ್ಕಾಲಾತ್ಯಯೋ ಯಥಾ ॥ ೨೩ ॥
ಜಗಾಮ ಬಲಹಾ ತೂರ್ಣಂ ವಚನಾತ್ಪರಮೇಷ್ಠಿನಃ ।
ಅಪಶ್ಯಮಾನಃ ಕಾಂಚಿತ್‌ಸ್ತ್ರೀಂ ಯಾ ಯೋಗ್ಯಾ ಹಂಸವಾಹನೇ ॥ ೨೪ ॥

೧೮–೧೯. ಸಾವಿತ್ರಿಯು ಹೇಳುತ್ತಾಳೆ :—ನಾನು ಇನ್ನೂ ಬಟ್ಟೆಯನ್ನುಟ್ಟು ಅಲಂಕಾರ ಮಾಡಿಕೊಳ್ಳಲಿಲ್ಲ. ಮನೆಯ ಅಲಂಕಾರವೂ ಮುಗಿಯಲಿಲ್ಲ. ಇನ್ನೂ ಲಕ್ಷ್ಮಿ, ಭವಾನಿ, ಜಾಹ್ನವಿ, ಸ್ವಾಹಾ, ಸ್ವಧಾ, ಅರುಂಧತಿ, ಇಂದ್ರಾಣಿ, ಇತರ ದೇವತೆಗಳ ಪತ್ನಿಯರು ಇವರು ಯಾರೂ ಬರಲಿಲ್ಲ. ನಾನೊಬ್ಬಳೇ ಹೇಗೆ ಬರಲಿ. ಎಂದಳು.

೨೦–೨೨. ಪುಲಸ್ತ್ಯನು ಬ್ರಹ್ಮನನ್ನು ಕುರಿತು ಮನೆಯ ಕೆಲಸದಲ್ಲಿ ತೊಡಗಿದ ನಿನ್ನ ಸಾವಿತ್ರಿಯು ಬರುವುದಿಲ್ಲ. ಈ ಯಾಗದಿಂದೇನು ಫಲವುಂಟಾಗುವುದು ? ಎಂದು ಹೇಳಲು ಅದನ್ನು ಕೇಳಿ ಶಿಖೆಯುಳ್ಳವನೂ, ವಪನ ಮಾಡಿಕೊಂಡಿರುವವನೂ, ಕೃಷ್ಣಾಜಿನವನ್ನು ಧರಿಸಿದವನೂ, ದೀಕ್ಷಿತನೂ, ಆದ ಬ್ರಹ್ಮನು ಪತ್ನಿಯಲ್ಲಿ ಸಿಟ್ಟುಗೊಂಡು ಇಂದ್ರನನ್ನು ಕುರಿತು ಹೀಗೆಂದನು.

೨೩. "ದೇವರಾಜ ! ಕಾಲವು ಮೀರಿದಂತೆ ನನ್ನ ಮಾತಿನಿಂದ ಎಲ್ಲಿಂದಾದರೂ ಬೇರೆ ಯೊಬ್ಬಳನ್ನು ಕರೆದುಕೊಂಡು ಬಾ."

೨೪. ಇಂದ್ರನು ಬ್ರಹ್ಮನ ಮಾತಿನಿಂದ ಶೀಘ್ರವಾಗಿ ಹೊರಟು ಹೋಗಿ ಹಂಸವಾಹನನಿಗೆ ಅರ್ಹಳಾದ ಸ್ತ್ರೀಯನ್ನು ಎಲ್ಲಿ ಹುಡುಕಿದರೂ ನೋಡಲಿಲ್ಲ.

ಅಥ ಶಾಪಾದ್ವಿಭೀತೇನ ಸಹಸ್ರಾಕ್ಷೇಣ ಧೀಮತಾ ।
ದೃಷ್ಟ್ವಾ ಗೋಪಾಲಕನ್ಯೈಕಾ ರೂಪಯೌವನ ಶಾಲಿನೀ ॥ ೨೫ ॥
ಬಿಭ್ರತೀ ತತ್ರ ಪೂರ್ಣಂ ಸಾ ಕುಂಭಂ ಕನ್ಯೈತ್ಸಚೋದಯತ್ ।
ತಾಂ ಗೃಹೀತ್ವಾ ತತಃ ಶಕ್ರಃ ಸಮಾಯಾದ್ಯತ್ರ ದೀಕ್ಷಿತಃ ॥ ೨೬ ॥
ದೇವದೇವಶ್ಚತುರ್ವಕ್ತ್ರೋ ವಿಷ್ಣುರುದ್ರಸಮನ್ವಿತಃ ।
ಸಂಪ್ರದಾನಂ ತು ಕೃತವಾನ್ ಕನ್ಯಾಯಾ ಮಧುಸೂದನಃ ॥ ೨೭ ॥
ಪ್ರೇರಿತಃ ಶಂಕರೇಣೈವ ಬ್ರಹ್ಮಾ ದೇವರ್ಷಿಭಿಸ್ತಥಾ ।
ಪರಿಣೀಯ ತಾಂ ತತೋ ದೀಕ್ಷಾಂ ತಸ್ಯಾಶ್ಚಕ್ರೇ ಯಥಾತ್ಮನಃ ॥ ೨೮ ॥
ತತಃ ಪ್ರವರ್ತಿತೋ ಯಜ್ಞಃ ಸರ್ವಕಾಮಸಮನ್ವಿತಃ ॥ ೨೯ ॥
ಅತ್ರಿರ್ಹೋತಾರ್ಚಿಕಸ್ತತ್ರ ಪುಲಸ್ತ್ಯೋಽಧ್ವರ್ಯುರೇವ ಚ ।
ಉದ್ಗಾತಾಽಥೋ ಮರೀಚಿಶ್ಚ ಬ್ರಹ್ಮಾಹಂ ಸುರಪುಂಗವಃ ॥ ೩೦ ॥
ಸನತ್ಕುಮಾರಪ್ರಮುಖಾಃ ಸದಸ್ಯಾಸ್ತಸ್ಯ ನಿರ್ಮಿತಾಃ ।
ವಸ್ತ್ರೈರಾಭರಣೈಯುಕ್ತಾ ಮುಕುಟೈರಂಗುಲೀಯಕೈಃ ॥ ೩೧ ॥
ಭೂಷಿತಾ ಭೂಷಣೋಪೇತಾ ಏಕೈಕಸ್ಯ ಪೃಥಕ್ ಪೃಥಕ್ ।
ತ್ರಯಸ್ತ್ರಯಃ ಪೃಷ್ಠತೋಽನ್ಯೇ ತೇ ಚೈವಂ ಷೋಡಶರ್ತ್ವಿಜಃ ॥ ೩೨ ॥

೨೫–೨೬. ಅನಂತರ ಬ್ರಹ್ಮನ ಶಾಪದಿಂದ ಭಯಗೊಂಡ ಶಕ್ರನು ಪೂರ್ಣ ಕುಂಭವನ್ನು ಧರಿಸಿ ಸೌಂದರ್ಯಯೌವನಗಳಿಂದ ಪ್ರಕಾಶಿಸುತ್ತಿರುವ ಒಬ್ಬ ಗೊಲ್ಲರ ಕನ್ಯೆಯನ್ನು ನೋಡಿ ಅವಳನ್ನು ಕರೆದುಕೊಂಡು ದೀಕ್ಷಿತನಾಗಿ ವಿಷ್ಣು ರುದ್ರರೊಡನೆ ಕುಳಿತಿರುವ ಬ್ರಹ್ಮನೆಡೆಗೆ ಬಂದನು.

೨೭. ವಿಷ್ಣುವು ಆ ಕನ್ಯೆಯನ್ನು ಬ್ರಹ್ಮನಿಗೆ ದಾನಮಾಡಿದನು.

೨೮. ಬ್ರಹ್ಮನು ಶಂಕರ ಮತ್ತು ದೇವರ್ಷಿಗಳ ಪ್ರೇರಣೆಯಂತೆ ಆ ಕನ್ಯೆಯನ್ನು ಮದುವೆ ಮಾಡಿಕೊಂಡು ತನ್ನಂತೆಯೇ ಅವಳನ್ನು ದೀಕ್ಷೆಗೊಳಿಸಿದನು.

೨೯. ಬಳಿಕ ಸಕಲ ಕಾಮಗಳಿಂದ ಕೂಡಿದ ಯಜ್ಞವು ಆರಂಭವಾಯಿತು.

೩೦–೩೨. ಆ ಯಜ್ಞದಲ್ಲಿ ಅತ್ರಿಯು ಹೋತನೂ, ಪುಲಸ್ತ್ಯನು ಅಧ್ವರ್ಯುವೂ, ಮರೀಚಿಯು ಉದ್ಗಾತನೂ, ಸುರೋತ್ತಮನಾದ ನಾನು ಬ್ರಹ್ಮನೂ, ಸನತ್ಕುಮಾರರೇ ಮೊದಲಾದವರು ಸದಸ್ಯರೂ ಆದರು. ಇವರ ಹಿಂಭಾಗದಲ್ಲಿ ಒಬ್ಬೊಬ್ಬರಿಗೆ ಮೂರು ಮೂರು ಮಂದಿಯಂತೆ ವಸ್ತ್ರ, ಒಡವೆ, ಕಿರೀಟ, ಉಂಗುರ ಇವುಗಳಿಂದ ಅಲಂಕಾರಗೊಂಡ ಹದಿನಾರು ಜನ ಋತ್ವಿಜರು ಕುಳಿತುಕೊಂಡರು.

ಪ್ರೋಕ್ತಾ ಭವದ್ಭಿರ್ಯಜ್ಞೇಽಸ್ಮಿನ್ನನುಗೃಹ್ಯೋಽಸ್ಮಿ ಸರ್ವದಾ ।
ಪತ್ನೀಮಮೇಯಂ ಗಾಯತ್ರೀ ಯಜ್ಞೇಽಸ್ಮಿನ್ನನುಗೃಹ್ಯತಾಮ್ ॥ ೩೩ ॥
ಮೃದುವಸ್ತ್ರಧರಾಂ ಸಾಕ್ಷಾತ್ ಕ್ಷೌಮವಸ್ತ್ರಾವಗುಂಠಿತಾಂ ।
ನಿಷ್ಕ್ರಮ್ಯ ಪತ್ನೀಶಾಲಾತಃ ಋತ್ವಿರ್ವೇದಪಾರಗೈಃ ॥ ೩೪ ॥
ಔದುಂಬರೇಣ ದಂಡೇನ ಸಂವೃತೋ ಮೃಗಚರ್ಮಣಾ ।
ತಯಾ ಸಾರ್ಧಂ ಪ್ರವಿಷ್ಟಶ್ಚ ಬ್ರಹ್ಮಾ ತಾಂ ಯಜ್ಞಮಂಡಪಮ್ ॥ ೩೫ ॥

ಈಶ್ವರ ಉವಾಚ :—

ಏತಸ್ಮಿನ್ನೇವ ಕಾಲೇ ತು ಸಂಪ್ರಾಪ್ತಾ ದೇವಯೋಷಿತಃ ।
ಸಂಪ್ರಾಪ್ತಾ ಯತ್ರ ಸಾವಿತ್ರೀ ಯಜ್ಞೇ ತಸ್ಮಿನ್ನಿಮಂತ್ರಿತಾಃ ॥ ೩೬ ॥
ಭೃಗೋಃ ಖ್ಯಾತಾಂ ಸಮುತ್ಪನ್ನಾ ವಿಷ್ಣುಪತ್ನೀ ಯಶಸ್ವಿನೀ ।
ಆಮಂತ್ರಿತಾ ಸಾ ಲಕ್ಷ್ಮೀಶ್ಚ ತತ್ರಾಯಾತಾ ತ್ವರಾನ್ವಿತಾ ॥ ೩೭ ॥
ತತ್ರದೇವೀ ಮಹಾಭಾಗಾ ಯೋಗನಿದ್ರಾವಿಭೂಷಿತಾ ।
ದೇವೀ ಕಾಂತಿಸ್ತಥಾ ಶ್ರದ್ಧಾ ದ್ಯುತಿಸ್ತುಷ್ಟಿಸ್ತಥೈವ ಚ ॥ ೩೮ ॥
ಸತೀ ಯಾ ದಕ್ಷತನಯಾ ಉಮಾ ಯಾ ಪಾರ್ವತೀ ಶುಭಾ ।
ತ್ರೈಲೋಕ್ಯಸುಂದರೀ ದೇವೀ ಸ್ತ್ರೀಣಾಂ ಸೌಭಾಗ್ಯದಾಯಕಾ ॥ ೩೯ ॥
ಜಯಾ ಚ ವಿಜಯಾ ಚೈವ ಗೌರೀಚೈವ ಮಹಾಧನಾ ।
ಮನೋಜವಾ ವಾಯುಪತ್ನೀ ಋದ್ಧಿಶ್ಚ ಧನದಪ್ರಿಯಾ ॥ ೪೦ ॥

೩೩–೩೫. ಬ್ರಹ್ಮನು "ಋತ್ವಿಜರೆ! ಈ ಯಜ್ಞದಲ್ಲಿ ನನ್ನನ್ನೂ, ನನ್ನ ಪತ್ನಿಯಾದ ಈ ಗಾಯತ್ರಿಯನ್ನೂ ಅನುಗ್ರಹಿಸಿರಿ" ಎಂದು ತೆಳುವಾದ ಬಟ್ಟೆಯನ್ನುಟ್ಟು ವಸ್ತ್ರವನ್ನು ಹೊದ್ದಿರುವ ಆ ಗಾಯತ್ರಿಯನ್ನು ವೇದಪಾರಂಗತರಾದ ಋತ್ವಿಜರಿಂದ ಪತ್ನೀಶಾಲೆಯಿಂದ ಕರೆಯಿಸಿ ಅವಳೊಡನೆ ಅತ್ತಿಯ ದಂಡವನ್ನು ಹಿಡಿದು ಕೊಂಡು. ಕೃಷ್ಣಾಂಜವನ್ನು ಹೊದ್ದು ಕೊಂಡು ಯಜ್ಞಶಾಲೆಯನ್ನು ಹೊಕ್ಕನು.

೩೬. ಈಶ್ವರನು ಹೇಳುತ್ತಾನೆ :—ಈ ಸಮಯದಲ್ಲಿ ಯಜ್ಞಕ್ಕೆ ಕರೆಯಲ್ಪಟ್ಟ ದೇವಾಂಗನೆಯರು ಸಾವಿತ್ರಿಯ ಬಳಿಗೆ ಬಂದರು.

೩೭–೫೧. ಹಾಗೆಯೇ ಭೃಗುಮುನಿಯಿಂದ ಖ್ಯಾತಿ ದೇವಿಯಲ್ಲಿ ಜನಿಸಿದ ವಿಷ್ಣುವಿನ ಪತ್ನಿಯಾದ ಲಕ್ಷ್ಮಿಯೂ,ಯೋಗನಿದ್ರಾದಿಗಳಿಂದ ಅಲಂಕಾರಗೊಂಡ ಕಾಂತಿ ಶ್ರದ್ಧಾ, ದ್ಯುತಿ, ತುಷ್ಟಿ ದೇವಿಯರೂ, ತ್ರೈಲೋಕ್ಯ ಸುಂದರಿಯೂ, ದಕ್ಷನ ಮಗಳೂ ಸ್ತ್ರೀಯರಿಗೆ ಸೌಭಾಗ್ಯವನ್ನೀಯುವವಳೂ ಆದ ಪಾರ್ವತಿಯೂ, ಜಯಾ, ವಿಜಯಾ, ಗೌರಿ, ಮಹಾಧನಾ, ವಾಯುಪತ್ನಿಯಾದ ಮನೋಜವಾ, ಕುಬೇರನ ಹೆಂಡತಿಯಾದ ಋದ್ಧಿ, ದೇವ ಕನ್ಯೆಯರು, ದನುವಂಶಜರಾದ ದಾನವಸ್ತ್ರೀಯರು, ಸಪ್ತರ್ಷಿಗಳ

ದೇವಕನ್ಯಾಸ್ತಥಾಯಾತಾ ದಾನವ್ಯೋ ಧನುವಂಶಜಾಃ ।
ಸಪ್ತರ್ಷೀಣಾಂ ತಥಾ ಪತ್ನ್ಯ ಋಷೀಣಾಂ ಚ ತಥೈವ ಚ ॥ ೪೧ ॥
ಪ್ಲವಾ ಮಿತ್ರಾ ದುಹಿತರೋ ವಿದ್ಯಾಧರಗಣಾಸ್ತಥಾ ।
ಪಿತರೋ ರಕ್ಷಸಾಂ ಕನ್ಯಾಸ್ತಥಾನ್ಯಾ ಲೋಕಮಾತರಃ ॥ ೪೨ ॥
ವಧೂಭಿಶ್ಚೈವ ಮುಖ್ಯಾಭಿಃ ಸಾವಿತ್ರೀ ಗಂತುಮಿಚ್ಛತಿ ।
ಆದಿತ್ಯಾದ್ಯಾಸ್ತಥಾ ದೇವ್ಯೋ ದಕ್ಷಕನ್ಯಾಃ ಸಮಾಗತಾಃ ॥ ೪೩ ॥
ತಾಭಿಃ ಪರಿವೃತಾ ಸಾರ್ಧಂ ಬ್ರಹ್ಮಾಣೀ ಕಮಲಾಲಯಾ ।
ಕಾಶ್ಚಿನ್ಮೋದಕಮಾದಾಯ ಕಾಶ್ಚಿತ್ಪೂಪಂ ವರಾನನೇ ॥ ೪೪ ॥
ಫಲಾನಿ ತು ಸಮಾದಾಯ ಪ್ರಯಾತಾ ಬ್ರಹ್ಮಣೋಽನ್ತಿಕಂ ।
ಆಡಕೀಶ್ಚೈವ ನಿಷ್ಪಾವಾನ್ರಾಜಮಾಷಾಂಸ್ತಥಾಽಪರಾಃ ॥ ೪೫ ॥
ದಾಡಿಮಾನಿ ವಿಚಿತ್ರಾನಿ ಮಾತುಲಿಂಗಾನಿ ಶೋಭನೇ ।
ಕರೀರಾಣಿ ತಥಾಚಾನ್ಯಾ ಗೃಹೀತ್ವಾ ಕರಮರ್ದಕಾನ್ ॥ ೪೬ ॥
ಕೌಸುಂಭಂ ಜೀರಕಂ ಚೈವ ಖರ್ಜೂರಂ ಚಾಪರಾಸ್ತಥಾ ।
ಉತತೀಶ್ಚಾಪರಾ ಗೃಹ್ಯ ನಾಲಿಕೇರಾಣಿ ಚಾಪರಾಃ ॥ ೪೭ ॥
ದ್ರಾಕ್ಷಯಾ ಪೂರಿತಂ ಚಾಮ್ರಂ ಶೃಂಗಾರಾಯ ಯಥಾಪುರಾ ।
ಕರ್ಬುರಾಣಿ ವಿಚಿತ್ರಾಣಿ ಜಂಬೂಕಾನಿ ಶುಭಾನಿ ಚ ॥ ೪೮ ॥
ಅಕ್ಷೋಡಮಲಕಾರ್ ಗೃಹ್ಯ ಜಂಬೀರಾಣಿ ತಥಾ ಪರಾಃ ।
ಬಿಲ್ವಾನಿ ಪರಿಪಕ್ವಾನಿ ಚಿರ್ಭಟಾನಿ ವರಾನನೇ ॥ ೪೯ ॥
ಅನ್ನಪಾನಾಧಿಕಾರಾಣಿ ಬಹೂನಿ ವಿವಿಧಾನಿ ಚ ।
ಶರ್ಕರಾಪುತ್ತಲೀಂ ಚಾನ್ಯಾ ವಸ್ತ್ರೇ ಕೌಸುಂಭಕೇ ತಥಾ ॥ ೫೦ ॥

ಮತ್ತು ಇತರ ಮುನಿಗಳ ಪತ್ನಿಯರು, ಮಕ್ಕಳಾದ ಪ್ಲವಾ, ಮಿತ್ರಾ ಇವರೂ, ವಿದ್ಯಾಧರ ಸ್ತ್ರೀಯರೂ, ಪಿತೃಗಳು, ರಾಕ್ಷಸ ಕನ್ಯೆಯರು, ಲೋಕಮಾತೆಯರೇ ಮೊದಲಾದ ಮುಖ್ಯಸ್ತ್ರೀಯರೂ ಬಂದರು. ಸಾವಿತ್ರಿಯು ಅವರೊಡನೆ ಹೊರಡಲು ಅಪೇಕ್ಷಿಸಿದಳು. ಆಗ ಆದಿತ್ಯಾ ಮೊದಲಾದ ದಕ್ಷ ಕನ್ಯೆಯರೂ ಬಂದರು. ಅವರಲ್ಲಿ ಕೆಲವರು ಮೋದಕವನ್ನೂ, ಕೆಲವರು ಅಪೂಪವನ್ನೂ, ಇತರರು ತೊಗರಿ, ಅವರೆ, ಅಲಸಂದಿ, ನಾನಾಬಗೆಯ ದಾಳಿಂಬದ ಹಣ್ಣುಗಳು, ಮಾದಳ ಹಣ್ಣುಗಳು, ಬಿದರ ಮೊಳಕೆಗಳು, ಕಮರಿಕೆ ಹಣ್ಣುಗಳು, ಮರದರಸಿನ, ಜೀರಿಗೆ, ಖರ್ಜೂರ, ಉತತೀ, ತೆಂಗಿನಕಾಯಿ, ದ್ರಾಕ್ಷೆ, ಮಾವಿನ ಹಣ್ಣುಗಳು, ನಾನಾಬಗೆಯ ನೇರಳೆ ಹಣ್ಣುಗಳು, ಅಕ್ಷೋಟ, ನೆಲ್ಲಿ, ನಿಂಬೆ, ಬಿಲ್ವ, ಚಿರ್ಭಟ ಫಲಗಳು, ಬಗೆಬಗೆಯ ಅನ್ನ ಪಾನೀಯ

ಏವಮಾದೀನಿ ಚಾನ್ಯಾನಿ ಗೃಹ್ಯ ಪೂರ್ವೇ ವರಾನನೇ ।
ಸಾವಿತ್ರ್ಯಾ ಸಹಿತಾಃ ಸರ್ವಾಃ ಸಂಪ್ರಾಪ್ತಾಸ್ತು ತದಾ ಶುಭಾಃ ॥ ೩೧ ॥
ಸಾವಿತ್ರೀಮಾಗತಾಂ ದೃಷ್ಟ್ವಾ ಭೀತಸ್ತತ್ರ ಪುರಂದರಃ ।
ಅಧೋಮುಖಃ ಸ್ಥಿತೋ ಬ್ರಹ್ಮಾ ಕಿಮೇಷಾ ಮಾಂ ವದಿಷ್ಯತಿ ॥ ೩೨ ॥
ತ್ರಪಾನ್ವಿತೌ ವಿಷ್ಣುರುದ್ರೌ ಸರ್ವೇಚಾನ್ಯೇ ದ್ವಿಜಾತಯಃ ।
ಸಭಾಸದಸ್ತಥಾ ಭೀತಾಸ್ತಥೈವಾನ್ಯೇ ದಿವೌಕಸಃ ॥ ೩೩ ॥
ಪುತ್ರಪೌತ್ರಾ ಭಾಗಿನೇಯಾ ಮಾತುಲಾ ಭ್ರಾತರಸ್ತಥಾ ।
ಋತವೋ ನಾಮ ಯೇ ದೇವಾ ದೇವಾನಾಮಪಿ ದೇವತಾಃ ॥ ೩೪ ॥
ವಿಲಕ್ಷಾಸ್ತು ತಥಾ ಸರ್ವೇ ಸಾವಿತ್ರೀ ಕಿಂ ವದಿಷ್ಯತಿ ।
ಬ್ರಹ್ಮವಾಕ್ಯಾನಿ ವಾಚ್ಯಾನಿ ಕಿಂ ನು ವೈ ಗೋಪಕನ್ಯಯಾ ॥ ೩೫ ॥
ಮೌನೀಭೂತಾಸ್ತು ಶೃಣ್ವಾನಾಃ ಸರ್ವೇಷಾಂ ವದತಾಂ ಗಿರಃ ।
ಅಧ್ವರ್ಯುಣಾ ಸಮಾಹೂತಾ ನಾಗತಾ ವರವರ್ಣಿನೀ ॥ ೩೬ ॥
ಶಕ್ರೇಣಾನ್ಯಾ ತಥಾ ನೀತಾ ದತ್ತಾ ಸಾ ವಿಷ್ಣುನಾ ಸ್ವಯಂ ।
ಅನುಮೋದಿತಾ ಚ ರುದ್ರೇಣ ಪಿತ್ರಾ ದತ್ತಾ ಸ್ವಯಂ ತಥಾ ॥ ೩೭ ॥

ಗಳು, ಸಕ್ಕರೆ, ಪುತ್ತಲಿ, ಹಳದಿ ಬಟ್ಟೆ ಇವುಗಳನ್ನೂ, ಇತರ ವಸ್ತುಗಳನ್ನೂ ತೆಗೆದುಕೊಂಡು ಸಾವಿತ್ರಿಯೊಡನೆ ಬಂದರು.

೩೨. ಶಕ್ರನು ಬಂದಿರುವ ಸಾವಿತ್ರಿಯನ್ನು ಕಂಡು ಭಯಗೊಂಡನು. ಬ್ರಹ್ಮನು ಏನನ್ನು ಹೇಳುವಳೊ ಎಂದು ಮುಖ ತಗ್ಗಿಸಿ ಕುಳಿತನು.

೩೩. ವಿಷ್ಣುರುದ್ರರು ಲಜ್ಜಿತರಾದರು. ಸಭೆಯಲ್ಲಿರುವ ಇತರ ಬ್ರಾಹ್ಮಣರೂ, ದೇವತೆಗಳೂ ಭಯಗೊಂಡರು.

೩೪–೩೮. ಪುತ್ರರೂ, ಪೌತ್ರರೂ, ಭಾಗಿನೇಯರೂ, ಸೋದರಮಾವಂದಿರೂ, ಸಹೋದರರೂ, ದೇವತೆಗಳಿಗೂ ದೇವತೆಗಳಾದ ಋತುಗಳೆಂಬ ದೇವತೆಗಳೂ "ಬ್ರಹ್ಮನು ಹೇಳಿದ ಮಾತನ್ನು ಸಾವಿತ್ರಿಗೆ ಹೇಳಬೇಕು. ಗೋಪ ಕನ್ಯೆಯಿಂದೇನು ಪ್ರಯೋಜನ?" ಎಂದು ಹೇಳುತ್ತಿರುವವರ ಮಾತನ್ನು ಮೌನವಾಗಿ ಕೇಳುತ್ತ ಸಾವಿತ್ರಿಯು ಏನನ್ನು ಹೇಳುವಳೊ ಎಂದು ವಿಸ್ಮಿತರಾದರು. ಅವರು ಅಧ್ವರ್ಯುವು ಕರೆದಾಗ ಸಾವಿತ್ರಿಯು ಬರಲಿಲ್ಲ. ಆದರಿಂದ ಇಂದ್ರನು ಮತ್ತೊಬ್ಬಳನ್ನು ಕರೆತಂದನು, ಅವಳನ್ನು ವಿಷ್ಣುವು ದಾನಮಾಡಿದನು. ತಂದೆಯು ದಾನಮಾಡಿದ್ದನ್ನು ರುದ್ರನು ಅನುಮೋದಿಸಿದನು.

ಕಥಂ ಸಾ ಭವಿತಾ ಯಜ್ಞಃ ಸಮಾಪ್ತಿಂ ವಾ ಕಥಂ ವ್ರಜೇತ್ ।
ಏವಂ ಚಿಂತಯತಾಂ ತೇಷಾಂ ಪ್ರವಿಷ್ಟಾ ಕಮಲಾಲಯಾ ॥ ೫೮ ॥
ವೃತೋ ಬ್ರಹ್ಮಾ ಭಾರ್ಯಯಾ ಸ ಋತ್ವಿಗ್ಭಿರ್ವೇದಪಾರಗೈಃ ।
ಹೂಯಂತೇ ಚಾಗ್ನಯಸ್ತತ್ರ ಬ್ರಾಹ್ಮಣೈರ್ವೇದಪಾರಗೈಃ ॥ ೫೯ ॥
ಪತ್ನೀಶಾಲೇ ತಥಾ ಗೋಪೀ ತಾಪ್ಯಶೃಂಗಾ ಸಮೇಖಲಾ ।
ಕ್ಷೌಮವಸ್ತ್ರಪರೀಧಾನಾ ಧ್ಯಾಯಂತೀ ಪರಮೇಶ್ವರಂ ॥ ೬೦ ॥
ಪತಿವ್ರತಾ ಪತಿಪ್ರಾಣಾ ಪ್ರಾಧಾನ್ಯೇನ ನಿವೇಶಿತಾ ।
ಕೃಪಾನ್ವಿತಾ ವಿಶಾಲಾಕ್ಷೀ ತೇಜಸಾ ಭಾಸ್ಕರೋಪಮಾ ॥ ೬೧ ॥
ದ್ಯೋತಯಂತೀ ಸದಸ್ತತ್ರ ಸೂರ್ಯಸ್ಯೇವ ಯಥಾಪ್ರಭಾ ।
ಜ್ವಲಮಾನಸ್ತಥಾ ವಹ್ನಿರ್ಭ್ರಮಂತೇ ಚರ್ತ್ವಿಜಸ್ತಥಾ ॥ ೬೨ ॥
ಪಶೂನಾಮವದಾನಾನಿ ಗೃಹ್ಣಂತಿ ದ್ವಿಜಸತ್ತಮಾಃ ।
ಪ್ರಾಪ್ತಾ ಭಾಗಾರ್ಥಿನೋ ದೇವಾ ವಿಲಂಬಸಮಯೋಽಭವತ್ ॥ ೬೩ ॥
ಕಾಲಹೀನಂ ನ ಕರ್ತವ್ಯಂ ಕೃತಂ ನ ಫಲದಂ ಭವೇತ್ ।
ವೇದೇಷ್ವಯಮಧೀಕಾರೋ ದೃಷ್ಟಃ ಸರ್ವೋ ಮುನೀಷಿಭಿಃ ॥ ೬೪ ॥

ಹಾಗೆ ಮಾಡದಿದ್ದಲ್ಲಿ ಯಜ್ಞವು ಹೇಗೆ ನಡೆದೀತು? ಹೇಗೆ ಮುಗಿದೀತು?" ಎಂದು ಅವರೆಲ್ಲರೂ ಆಲೋಚಿಸುತ್ತಿರಲು ಸಾವಿತ್ರಿಯು ಪ್ರವೇಶಿಸಿದಳು.

೫೯. ಬ್ರಹ್ಮನು ಪತ್ನಿಯಿಂದಲೂ, ವೇದಪಾರಂಗತರಾದ ಋತ್ವಿಜರಿಂದಲೂ, ಬ್ರಾಹ್ಮಣರಿಂದಲೂ, ಅಲ್ಲಿ ಹೋಮ ಮಾಡುತ್ತಿದ್ದನು.

೬೦–೬೨. ಹಾಗೆಯೇ ಪತ್ನೀಶಾಲೆಯಲ್ಲಿ ಬೆಳ್ಳಿಯಶೃಂಗ, ಡಾಬುಗಳುಳ್ಳವಳೂ, ಕ್ಷೌಮವಸ್ತ್ರವನ್ನುಟ್ಟವಳೂ, ಪರಮೇಶ್ವರನನ್ನು ಧ್ಯಾನಿಸುವವಳೂ, ಪತಿವ್ರತೆಯೂ, ದಯೆಯುಳ್ಳವಳೂ, ಕಾಂತಿಯಿಂದ ಸೂರ್ಯನಿಗೆ ಸಮಾನಳೂ, ಸೂರ್ಯನ ಪ್ರಭೆಯಿಂದ ಸದಸ್ಸನ್ನು ಪ್ರಕಾಶಗೊಳಿಸುವವಳೂ ಆದ ಗೋಪಕನ್ಯೆಯು ಕುಳಿತಿದ್ದಳು. ಋತ್ವಿಜರು ಉರಿಯುತ್ತಿರುವ ಅಗ್ನಿಯನ್ನು ಪ್ರದಕ್ಷಿಣೆ ಮಾಡುತ್ತಿದ್ದರು.

೬೩. ದ್ವಿಜವರ್ಯರು ಪಶುಗಳ ಕತ್ತರಿಸಿದ ವಪೆಯನ್ನು ತೆಗೆದುಕೊಳ್ಳುತ್ತಿದ್ದರು. ಭಾಗಾರ್ಥಿಗಳಾದ ದೇವತೆಗಳು ಬಂದರು. ಕಾಲವು ವಿಳಂಬವಾಯಿತು.

೬೪. ಕಾಲಾತಿಕ್ರಮವನ್ನು ಮಾಡಬಾರದು. ಹಾಗೆ ಮಾಡಿದರೆ ಸಫಲವಾಗಲಾರದು. ವೇದಗಳಲ್ಲಿರುವ ಈ ವಿಧಿಗಳನ್ನು ಜ್ಞಾನಿಗಳು ನೋಡಿರುವರು.

ಪ್ರವರ್ಗ್ಯೇ ಕ್ರಿಯಮಾಣೇ ತು ಬ್ರಾಹ್ಮಣೈರ್ವೇದಪಾರಗೈಃ ।
ಕ್ಷೀರದ್ವಯೇ ಹೂಯಮಾನೇ ಮಂತ್ರೇಣಾಧ್ವರ್ಯುಣಾ ತಥಾ ॥ ೬೫ ॥
ಉಪಹೂತೋಪಹೂತೇನ ಆಗತೇಷು ದ್ವಿಜನ್ಮಸು ।
ಕ್ರಿಯಮಾಣೇ ತಥಾ ಭಕ್ಷ್ಯೇ ದೃಷ್ಟ್ವಾ ದೇವೀ ಕ್ರುಧಾನ್ವಿತಾ ।
ಉವಾಚ ದೇವೀ ಬ್ರಹ್ಮಾಣಂ ಸದೋಮಧ್ಯೇ ತು ಮೌನಿನಂ ॥ ೬೬ ॥
ಕಿಮೇವಂ ಬುಧ್ಯತೇ ದೇವ ಕೃತಮೇತದ್ವಿಚೇಷ್ಟಿತಮ್ ।
ಮಾಂ ಪರಿತ್ಯಜ್ಯ ಯಃ ಕಾಮಾತ್ ಕೃತವಾನಸಿ ಕಿಲ್ಬಿಷಮ್ ॥ ೬೭ ॥
ನ ತುಲ್ಯಾ ಪಾದರಜಸಾ ಸಮಾ ಸಾಧಿಶಿರಃ ಕೃತಾ ॥ ೬೮ ॥
ಯದ್ವದಂತಿ ನರಾಃ ಸರ್ವೇ ಸಂಗತಾಃ ಸದಸಿ ಸ್ಥಿತಾಃ ।
ಆಶ್ಚರ್ಯಂ ಚ ಪ್ರಭೂಣಾಂ ತು ಕುರುತೇ ಯಂ ಯಮಿಚ್ಛತಿ ॥ ೬೯ ॥
ಭವತಾ ರೂಪಲೋಭೇನ ಕೃತಂ ಕರ್ಮ ವಿಗರ್ಹಿತಂ ॥ ೭೦ ॥
ನ ಪುತ್ರೇಷು ಕೃತಾ ಲಜ್ಜಾ ಪೌತ್ರೇಷು ನ ಚ ತೇ ವಿಭೋ ।
ಕಾಮಕಾರಕೃತಂ ಮನ್ಯೇ ಹ್ಯೇತತ್ಕರ್ಮ ವಿಗರ್ಹಿತಮ್ ॥ ೭೧ ॥

೬೫–೬೬. ವೇದಪಾರಂಗತರಾದ ಬ್ರಾಹ್ಮಣರು ಪ್ರವರ್ಗ್ಯವನ್ನು ಮಾಡುತ್ತಿರಲು, ಅಧ್ವರ್ಯುವು ಕ್ಷೀರದ್ವಯವನ್ನು ಹೋಮಿಸುತ್ತಿರಲು, ಆಹೂತರೂ, ಅನಾಹೂತರೂ ಆದ ಬ್ರಾಹ್ಮಣರು ಬಂದಿರಲು, ಭಕ್ಷ್ಯವು ಮಾಡಲ್ಪಡುತ್ತಿರಲು ಸಾವಿತ್ರಿಯು ಅವುಗಳನ್ನೆಲ್ಲ ನೋಡಿ ಕುಪಿತಳಾಗಿ ಸಭೆಯ ಮಧ್ಯದಲ್ಲಿ ಮೌನವಾಗಿ ಕುಳಿತಿರುವ ಬ್ರಹ್ಮನನ್ನು ಕುರಿತು ಇಂತೆಂದಳು.

೬೭. "ನಾಥ ! ನೀನು ಮಾಡಿರುವ ದುಶ್ಚೇಷ್ಟೆಯನ್ನು ಅರಿವೆಯೊ? ನೀನು ನನ್ನನ್ನು ತ್ಯಜಿಸಿ ಕಾಮವಶದಿಂದ ಪಾಪವನ್ನಾಚರಿಸಿರುವೆ.

೬೮. ನನ್ನ ಪಾದ ಧೂಳಿಗೂ ಸಮಾನಳಲ್ಲದವಳನ್ನು ತಲೆಯ ಮೇಲಿಟ್ಟಿರುವೆ.

೬೯. ಸಭೆಯಲ್ಲಿರುವ ಮನುಷ್ಯರೆಲ್ಲ ಏನನ್ನು ಹೇಳುವರು? ಅವರು ಪ್ರಭುವು ಅಪೇಕ್ಷಿಸಿದ್ದನ್ನೆಲ್ಲ ಮಾಡುವರು.

೭೦. ನೀನು ಸೌಂದರ್ಯ ಮೋಹಿತನಾಗಿ ನಿಂದಿತವಾದ ಕಾರ್ಯವನ್ನು ಮಾಡಿರುವೆ.

೭೧. ನೀನು ಪುತ್ರಪೌತ್ರರನ್ನು ನೋಡಿ ಲಜ್ಜೆಗೊಳ್ಳಲಿಲ್ಲ. ಕಾಮವಶದಿಂದ ನಿಂದಿತವಾದ ಈ ಕೆಲಸವನ್ನು ಮಾಡಿರುವೆ ಎಂದು ತಿಳಿಯುತ್ತೇನೆ.

ಪಿತಾಮಹೋಽಸಿ ದೇವಾನಾಂ ಋಷೀಣಾಂ ಪ್ರಪಿತಾಮಹಃ ।
ಕಥಂ ನ ತೇ ತ್ರಪಾ ಜಾತಾ ಆತ್ಮನಃ ಪಶ್ಯತಸ್ತನುಮ್ ॥ ೭೨ ॥
ಲೋಕಮಧ್ಯೇ ಕೃತಂ ಹಾಸ್ಯಂ ಇಹ ಚೈವ ವಿಗರ್ಹಿತಃ ।
ಯದ್ಯೇಷ ತೇ ಸ್ಥಿತೋ ಭಾವಃ ತಿಷ್ಠ ದೇವ ನಮೋಽಸ್ತು ತೇ ॥ ೭೩ ॥
ಅಹಂ ಕಥಂ ಸಖೀನಾಂ ತು ದರ್ಶಯಿಷ್ಯಾಮಿ ವೈ ಮುಖಮ್ ।
ಭರ್ತ್ರಾ ಮೇ ವಿಹಿತಾ ಪತ್ನೀ ಕಥಮೇಕದಹಂ ವದೇ ॥ ೭೪ ॥

ಬ್ರಹ್ಮೋವಾಚ :—

ಋತ್ವಿಗ್ಭಿರಹಮಾಜ್ಞಪ್ತೋ ದೀಕ್ಷಾಕಾಲೋಽತಿವರ್ತತೇ ।
ಪತ್ನೀಂ ವಿನಾ ನ ಹೋಮೋಽತ್ರ ಶೀಘ್ರಂ ಪತ್ನೀಮಿಹಾನಯ ॥ ೭೫ ॥
ಶಕ್ರೇಣೈಷಾ ಸಮಾನೀತಾ ದತ್ತಾ ಚೈವಾಥ ವಿಷ್ಣುನಾ ।
ಗೃಹೀತಾ ಚ ಮಯಾ ತ್ವಂ ಹಿ ಕ್ಷಮಸ್ವೈಕಂ ಮಯಾ ಕೃತಮ್ ।
ನ ಚಾಪರಾಧ್ಯಂ ಭೂಯೋಽನ್ಯಂ ಕರಿಷ್ಯೇ ತವ ಸುವ್ರತೇ ॥ ೭೬ ॥

ಈಶ್ವರ ಉವಾಚ :—

ಏವಮುಕ್ತಾ ತದಾ ಕ್ರುದ್ಧಾ ಬ್ರಹ್ಮಾಣಂ ಶಪ್ತುಮುದ್ಯತಾ ।
ಯದಿ ಮೇಽಸ್ತಿ ತಪಸ್ತಪ್ತಂ ಗುರವೋ ಯದಿ ತೋಷಿತಾಃ ॥ ೭೭ ॥

---

೭೨. ದೇವತೆಗಳಿಗೆ ಪಿತಾಮಹನೂ, ಋಷಿಗಳಿಗೆ ಪ್ರಪಿತಾಮಹನೂ, ಆಗಿರುವೆ. ನಿನ್ನ ಶರೀರವನ್ನು ನೋಡಿ ನಿನಗೆ ಹೇಗೆ ನಾಚಿಕೆಯಾಗಲಿಲ್ಲ.

೭೩. ಜನರೆಲ್ಲ ಹಾಸ್ಯಮಾಡುವರು. ಇಲ್ಲಿಯೂ ನಿಂದಿತನಾಗಿರುವೆ. ನಿನಗೆ ಇಂತಹ ಅಭಿಪ್ರಾಯವಿದ್ದರೆ ಹೀಗೆಯೇ ಇರು. ನಿನಗೆ ನಮಸ್ಕಾರ.

೭೪. ನಾನು ಸಖಿಯರಿಗೆ ಹೇಗೆ ಮುಖವನ್ನು ತೋರಿಸಲಿ. ನನ್ನ ಪತಿಯು ಬೇರೆ ಮದುವೆ ಮಾಡಿಕೊಂಡಿರುವನೆಂದು ಹೇಗೆ ಹೇಳಲಿ.

೭೫. ಬ್ರಹ್ಮನು ಹೇಳುತ್ತಾನೆ :—ಋತ್ವಿಜರು "ದೀಕ್ಷಾಕಾಲವು ಮೀರುವುದು. ಪತ್ನಿಯಿಲ್ಲದೆ ಹೋಮಮಾಡಲಾಗದು. ಶೀಘ್ರವಾಗಿ ಪತ್ನಿಯನ್ನು ಇಲ್ಲಿಗೆ ಕರೆಯಿಸು" ಎಂದು ಅಪ್ಪಣೆ ಮಾಡಿದರು.

೭೬. ದೇವೇಂದ್ರನು ಈ ಗೋಪಕನ್ಯೆಯನ್ನು ಕರೆತಂದನು. ವಿಷ್ಣುವು ಕನ್ಯಾದಾನಮಾಡಿದನು. ನಾನು ಇವಳನ್ನು ಪರಿಗ್ರಹಿಸಿದೆನು. ನಾನು ಮಾಡಿದ ಈ ಅಪರಾಧವನ್ನು ಕ್ಷಮಿಸು. ಮರಳಿ ಇಂತಹ ತಪಸ್ಸನ್ನು ಮಾಡುವುದಿಲ್ಲ.

೭೭–೭೯. ಈಶ್ವರನು ಹೇಳುತ್ತಾನೆ:—ಬ್ರಹ್ಮನು ಹೀಗೆನ್ನಲು ಸಾವಿತ್ರಿಯು ಶಪಿಸಲುದ್ಯುಕ್ತಳಾಗಿ "ನಾನು ತಪಸ್ಸನ್ನು ಮಾಡಿದ್ದರೆ, ಗುರುಗಳನ್ನು ಸಂತೋಷ

ಸರ್ವಬ್ರಾಹ್ಮಣಶಾಲಾಸು ಸ್ಥಾನೇಷು ವಿವಿಧೇಷ್ವಪಿ ।
ನ ತು ತೇ ಬ್ರಾಹ್ಮಣಾಃ ಪೂಜಾಂ ಕರಿಷ್ಯಂತಿ ಕದಾಚನ ॥ ೭೮ ॥
ಋತೇ ವೈ ಕಾರ್ತಿಕೀಮೇಕಾಂ ಪೂಜಾಂ ಸಾಂವತ್ಸರೀಂ ತವ ।
ಕರಿಷ್ಯಂತಿ ದ್ವಿಜಾಃ ಸರ್ವೇ ಸತ್ಯೇನಾನೇನ ತೇ ಶಪೇ ।
ಏತದ್ಬುದ್ಧ್ವಾ ನ ಕೋಪೋಽಸ್ತು ಹತೋ ಹಂತಿ ನ ಸಂಶಯಃ ॥ ೭೯ ॥

ಸಾವಿತ್ರ್ಯುವಾಚ :—

ಭೋಭೋಃ ಶಕ್ರ ತ್ವಯಾನೀತಾ ಆಭೀರೀ ಬ್ರಹ್ಮಣೋಽನ್ತಿಕಮ್ ।
ಯಸ್ಮಾದೀದೃಕ್ಕೃತಂ ಕರ್ಮ ತಸ್ಮಾತ್ತ್ವಂ ಲಪ್ಸ್ಯಸೇ ಫಲಮ್ ॥ ೮೦ ॥
ಯದಾ ಸಂಗ್ರಾಮಮಧ್ಯೇ ತ್ವಂ ಸ್ಥಾತಾ ಶಕ್ರ ಭವಿಷ್ಯಸಿ ।
ತದಾ ತ್ವಂ ಶತ್ರುಭಿರ್ಬದ್ಧೋ ನೀತಃ ಪರಿಮಿಕಾಂ ದಶಾಮ್ ॥ ೮೧ ॥
ಅಂಕಿಚನೋ ನಷ್ಟಸುತಃ ಶತ್ರೂಣಾಂ ನಗರೇ ಸ್ಥಿತಃ ।
ಪರಾಭವಂ ಮಹತ್ಪ್ರಾಪ್ಯ ಅಚಿರಾದೇವ ಮೋಕ್ಷ್ಯಸೇ ॥ ೮೨ ॥
ಶಕ್ರಂ ಶಪ್ತ್ವಾ ತದಾ ದೇವೀ ವಿಷ್ಣುಂ ಚಾಥ ವಚೋಽಬ್ರವೀತ್ ॥ ೮೩ ॥

ಗೊಳಿಸಿದ್ದರೆ ಸಕಲ ಬ್ರಾಹ್ಮಣ ಶಾಲೆಗಳಲ್ಲಿಯೂ, ವಿವಿಧ ಸ್ಥಾನಗಳಲ್ಲಿಯೂ ವರ್ಷಕ್ಕೊಮ್ಮೆ ಕಾರ್ತಿಕ ಮಾಸದ ಹುಣಿಮೆದಿನವನ್ನು ಬಿಟ್ಟು ಇತರ ದಿನಗಳಲ್ಲಿ ಬ್ರಾಹ್ಮಣರು ನಿನ್ನನ್ನು ಪೂಜಿಸದಿರಲಿ. ಇದನ್ನರಿತು ನೀನು ಕುಪಿತನಾಗಬೇಡ. ಲೋಕದಲ್ಲಿ ಹಿಂಸೆಗೊಂಡವನು ಹಿಂಸೆಮಾಡುವನು; ಸಂದೇಹವಿಲ್ಲ," ಎಂದು ಶಪಿಸಿದಳು.

೮೦. ಸಾವಿತ್ರಿಯು ಹೇಳುತ್ತಾಳೆ :—ಇಂದ್ರ! ನೀನು ಈ ಗೊಲ್ಲರ ಹುಡುಗಿಯನ್ನು ಬ್ರಹ್ಮನ ಹತ್ತಿರಕ್ಕೆ ಕರೆತಂದು ಇಂತಹ ದುಷ್ಕೃತ್ಯವನ್ನು ಮಾಡಿದ್ದರಿಂದ ಇದರ ಫಲವನ್ನು ಪಡೆಯುವೆ.

೮೧. ನೀನು ಯುದ್ಧಕ್ಕೆ ನಿಂತಾಗ ಶತ್ರುಗಳು ನಿನ್ನನ್ನು ಸೆರೆಹಿಡಿದು ನೀಚದಶೆಯನ್ನು ಹೊಂದಿಸುವರು.

೮೨. ನೀನು ಸೋಲನ್ನು ಹೊಂದಿ ಬಡವನೂ, ಮಕ್ಕಳಿಲ್ಲದವನೂ ಆಗಿ ಶತ್ರು ನಗರದಲ್ಲಿ ವಾಸಿಸುತ್ತ ಸ್ವಲ್ಪಕಾಲದಲ್ಲಿಯೇ ಬಿಡುಗಡೆಯನ್ನು ಹೊಂದುವೆ.

೮೩. ಸಾವಿತ್ರಿಯು ಶಕ್ರನನ್ನು ಹೀಗೆ ಶಪಿಸಿ ವಿಷ್ಣುವನ್ನು ಕುರಿತು ಇಂತೆಂದಳು.

ಗುರುವಾಕ್ಯೇನ ತೇ ಜನ್ಮ ಯದಾ ಮರ್ತ್ಯೇ ಭವಿಷ್ಯತಿ ।
ಭಾರ್ಯಾ ವಿರಹಜಂ ದುಃಖಂ ತದಾ ತ್ವಂ ತತ್ರ ಭೋಕ್ಷ್ಯಸೇ ॥ ೮೪ ॥
ಹೃತಾಂ ಶತ್ರುಗಣೈಃ ಪತ್ನೀಂ ಪಾರೇ ಪಾರೇ ಮಹೋದಧೇಃ ।
ನ ಚ ತಸ್ಯಾ ಜ್ಞಾಯಸೇ ಸೀತಾಂ ಶೋಕೋಪಹತಚೇತನಃ ॥ ೮೫ ॥
ಭ್ರಾತ್ರಾ ಸಹ ಪರಾಕಾಷ್ಠಾಂ ಆಪದಂ ದುಃಖಿತಸ್ತಥಾ ।
ಪಶೂನಾಂ ಚೈವ ಸಂಯೋಗಶ್ಚಿರಕಾಲಂ ಭವಿಷ್ಯತಿ ॥ ೮೬ ॥
ತಥಾಽಽಹ ರುದ್ರಂ ಕುಪಿತಾ ಯದಾ ದಾರುವನೇ ಸ್ಥಿತಃ ।
ತದಾ ತೇ ಮುನಯಃ ಕ್ರುದ್ಧಾಃ ಶಾಪಂ ದಾಸ್ಯತಿ ತೇಹರ ॥ ೮೭ ॥
ಭೋ ಭೋಃ ಕಾಪಾಲಿಕ ಕ್ಷುದ್ರ ಪ್ರತ್ನ್ಯೋಽಸ್ಮಾಕಂ ಜಿಹೀರ್ಷಸಿ ।
ತದೇಷ್ಯದ್ಭೂಷಿತಂ ಲಿಂಗಂ ಭೂಮೌ ರುದ್ರ ಪತಿಷ್ಯತಿ ॥ ೮೮ ॥
ವಿಹೀನಃ ಪೌರುಷೇಣ ತ್ವಂ ಮುನಿಶಾಪಾಚ್ಚ ಪೀಡಿತಃ ।
ಗಂಗಾತೀರೆ ಸ್ಥಿತಾ ಪತ್ನೀ ಸಾ ತ್ವಾಮಾಶ್ವಾಸಯಿಷ್ಯತಿ ॥ ೮೯ ॥

---

೮೪. ಗುರುವಿನ ಮಾತಿನಿಂದ ನೀನು ಭೂಲೋಕದಲ್ಲಿ ಜನಿಸಿದಾಗ ಪತ್ನೀ ವಿರಹದಿಂದುಂಟಾದ ದುಃಖವನ್ನನುಭವಿಸುವೆ.

೮೫. ಸಮುದ್ರದ ಮತ್ತೊಂದು ದಡದಲ್ಲಿರುವ ಶತ್ರುಗಳು ಪತ್ನಿಯಾದ ಸೀತೆಯನ್ನು ಅಪಹರಿಸಲು ದುಃಖಗೊಂಡ ನೀನು ಅವಳ ಸ್ಥಿತಿಯನ್ನು ತಿಳಿಯು ವುದಿಲ್ಲ.

೮೬. ಹಾಗೆಯೇ ಸಹೋದರನೊಡನೆ ಅತಿಶಯಾಪತ್ತನ್ನು ಹೊಂದಿ ದುಃಖ ಗೊಂಡವನಾಗಿ ಬಹುಕಾಲದವರೆಗೆ ಪಶುಗಳಾದ ಕಪಿಗಳ ಸಹವಾಸವನ್ನು ಮಾಡುವೆ.

೮೭. ಹಾಗೆಯೇ ಕೋಪಗೊಂಡವಳಾಗಿ ರುದ್ರನನ್ನು ಕುರಿತು “ ನೀನು ದಾರುವನದಲ್ಲಿರುವಾಗ ಮುನಿಗಳು ಕೋಪಗೊಂಡು ಹೀಗೆ ಶಪಿಸುವರು.

೮೮. “ ಎಲೈ ಕಪಾಲಧಾರಿಯಾದ ರುದ್ರನೆ ! ನೀನು ನಮ್ಮ ಪತ್ನಿಯರನ್ನು ಅಪಹರಿಸಲಪೇಕ್ಷಿಸುತ್ತಿರುವುದರಿಂದ ನಿನ್ನೀಲಿಂಗವು ಭೂಮಿಯಲ್ಲಿ ಬೀಳುವುದು.

೮೯. ಪುರುಷತ್ವವಿಲ್ಲದ ನೀನು ಮುನಿಶಾಪದಿಂದ ಪೀಡಿತನಾಗುವೆ. ಆಗ ಗಂಗಾನದಿಯ ದಡದಲ್ಲಿರುವ ನಿನ್ನ ಪತ್ನಿಯು ನಿನ್ನನ್ನು ಸಮಾಧಾನಗೊಳಿಸುವಳು.

ಅಗ್ನೇ ತ್ವಂ ಸರ್ವಭಕ್ಷ್ಯೋಽಸಿ ಪೂರ್ವಂ ಪುತ್ರೇಣ ಮೇ ಕೃತಃ ।
ಭ್ರೂಣಹಾ ಧರ್ಮ ಇತ್ಯೇಷ ಕಥಂ ದಗ್ಧಂ ದಹಾಮ್ಯಹಮ್ ॥ ೯೦ ॥

ಜಾತವೇದಸ ರುದ್ರಸ್ತ್ವಾಂ ರೇತಸಾ ಪ್ಲಾವಯಿಷ್ಯತಿ ।
ಮೇಧ್ಯೇಷು ಚ ಕೃತಜ್ವಾಲಾ ಜ್ವಾಲಯಾ ತ್ವಾ ನ ಜ್ವಲಿಷ್ಯತಿ ॥ ೯೧ ॥

ಬ್ರಾಹ್ಮಣಾನೃತ್ವಿಜಃ ಸರ್ವಾನ್ ಸಾವಿತ್ರೀ ಹ್ಯಶಪತ್ತದಾ ॥ ೯೨ ॥
ಪ್ರತಿಗ್ರಹಾಗ್ನಿಹೋತ್ರಾಶ್ಚ ವೃಥಾ ದಾರಾ ವೃಥಾ ಶ್ರಮಾಃ ।
ಸದಾ ಕ್ಷೇತ್ರಾಣಿ ತೀರ್ಥಾನಿ ಲೋಭಾದೇವ ಗಮಿಷ್ಯಥ ॥ ೯೩ ॥

ಪರಾನ್ನೇಷು ಸದಾ ತೃಪ್ತಾ ಅತೃಪ್ತಾಃ ಸ್ವಗೃಹೇಷು ಚ ।
ಅಯಾಜ್ಯಯಾಜನಂ ಕೃತ್ವಾ ಕುತ್ಸಿತಸ್ಯ ಪ್ರತಿಗ್ರಹಂ ॥ ೯೪ ॥
ವೃಥಾ ಧನಾರ್ಜನಂ ಕೃತ್ವಾ ವ್ಯಯಶ್ಚೈವ ತಥಾ ವೃಥಾ ।
ಮೃತಾನಾಂ ತೇನ ಪ್ರೇತತ್ವಂ ಭವಿಷ್ಯತಿ ನ ಸಂಶಯಃ ॥ ೯೫ ॥

---

೯೦. "ಅಗ್ನಿಯೆ ! ಹಿಂದೆ ನನ್ನ ಮಗನು ನಿನ್ನನ್ನು ಸರ್ವಭಕ್ಷಕನನ್ನಾಗಿ ಮಾಡಿರುವನು. ಈ ಭ್ರೂಣಹತ್ಯೆಯು ಧರ್ಮವೊ? ನಾನು ಸುಡಲ್ಪಟ್ಟವನನ್ನು ಹೇಗೆ ಸುಡಲಿ.

೯೧. ಅಗ್ನಿಯೇ ! ನಿನ್ನನ್ನು ರುದ್ರನು ತನ್ನ ರೇತಸ್ಸಿನಿಂದ ನೆನೆಯಿಸುವನು. ಅನಂತರ ಪರಿಶುದ್ಧ ಸ್ಥಳದಲ್ಲಿ ಜ್ವಲಿಸಿದ ಜ್ವಾಲೆಯು ನಿನ್ನನ್ನು ಉರಿಯುವಂತೆ ಮಾಡುವುದು."

೯೨-೯೩. ತರುವಾಯ ಸಾವಿತ್ರಿಯು ಬ್ರಾಹ್ಮಣರನ್ನೂ, ಋತ್ವಿಜರನ್ನೂ ಹೀಗೆ ಶಪಿಸಿದಳು. "ನೀವು ಅಗ್ನಿ ಹೋತ್ರದಲ್ಲಿ ಪ್ರತಿಗ್ರಹವನ್ನು ಮಾಡುತ್ತ ನಿಷ್ಫಲರಾದ ಪತ್ನಿಯರೂ, ಆಯಾಸವುಳ್ಳವರೂ ಆಗುವಿರಿ. ಯಾವಾಗಲೂ ತೀರ್ಥಕ್ಷೇತ್ರಗಳಿಗೆ ಲೋಭದಿಂದಲೆ ಹೋಗುವಿರಿ.

೯೪. ಯಾವಾಗಲೂ ಪರಾನ್ನಗಳಿಂದ ತೃಪ್ತರೂ, ತಮ್ಮ ಮನೆಗಳಲ್ಲಿ ಅತೃಪ್ತರೂ ಆಗಿ ಯಾಗ ಮಾಡಲನರ್ಹನಾದವನಿಂದ ಯಾಗಮಾಡಿಸಿ ನೀಚ ವಸ್ತು ವನ್ನು ಪ್ರತಿಗ್ರಹಮಾಡುವಿರಿ.

೯೫. ನಿಷ್ಫಲವಾಗಿ ಹಣವನ್ನು ಗಳಿಸಿ ವೆಚ್ಚಮಾಡುತ್ತ ಮೃತರಾಗಿ ಪ್ರೇತ ಗಳಾಗುವಿರಿ.

ಏವಂ ಶಕ್ರಂ ತಥಾ ವಿಷ್ಣುಂ ರುದ್ರಂ ವೈ ಪಾವಕಂ ತಥಾ ।
ಬ್ರಹ್ಮಾಣಂ ಬ್ರಾಹ್ಮಣಾಂಶ್ಚೈವ ಸರ್ವಾಂಸ್ತಾನಶಪತ್ತದಾ ॥ ೯೬ ॥
ಶಾಪಂ ದತ್ವಾ ತಥಾ ತೇಷಾಂ ತದಾ ಸಾವಸ್ಥಿತಾ ಸ್ಥಿರಾ ॥ ೯೭ ॥
ಲಕ್ಷ್ಮೀಃ ಪ್ರಾಹ ಸಖೀಂ ತಾಂ ಚ ಇಂದ್ರಾಣೀ ಚ ವರಾನನಾ ।
ಅನ್ಯಾ ದೇವ್ಯಸ್ತಥಾ ಪ್ರಾಹುಃ ಸಾಽಽಹಂಸ್ಥಾಸ್ಯಾಮಿ ನಾತ್ರ ವೈ ।
ತತ್ರ ಚಾಹಂ ಗಮಿಷ್ಯಾಮಿ ಯತ್ರ ಶ್ರೋಷ್ಯೇ ನ ತು ಧ್ವನಿಮ್ ॥ ೯೮ ॥
ತತಸ್ತಾಃ ಪ್ರಮುದಾಃ ಸರ್ವಾಃ ಪ್ರಯಾತಾಃ ಸ್ವಂ ನಿಕೇತನಮ್ ।
ಸಾವಿತ್ರೀ ಕುಪಿತಾ ತಾಸಾಂ ಪುನಶ್ಶಾಪಾಯ ಚೋದ್ಯತಾ ॥ ೯೯ ॥
ಯಸ್ಮಾನ್ಮಾಂ ಸಂಪರಿತ್ಯಜ್ಯ ಗತಾಸ್ತಾ ದೇವಯೋಷಿತಃ ।
ತಾಸಾಮಪಿ ತಥಾ ಶಾಪಂ ಪ್ರದಾಸ್ಯೇ ಕುಪಿತಾ ಭೃಶಂ ॥ ೧೦೦ ॥
ನೈಕತ್ರ ವಾಸೋ ಲಕ್ಷ್ಮ್ಯಾಸ್ತು ಭವಿಷ್ಯತಿ ಕದಾಚನ ।
ರುದ್ಧಾಪಿ ಚಂಚಲಾ ತಾವನ್ಮೂರ್ಖೇಷು ಚ ಗಮಿಷ್ಯತಿ ॥ ೧೦೧ ॥
ಮ್ಲೇಚ್ಛೇಷು ಪರ್ವತೀಯೇಷು ಕುತ್ಸಿತೇ ಕುಷ್ಠಿತೇ ತಥಾ ।
ವಾಚಾಟೇ ಚಾಽವಲಿಪ್ತೇ ಚ ಅಭಿಶಸ್ತೇ ದುರಾತ್ಮನಿ ।
ಏವಂ ವಿಧೇ ನರೇ ತುಭ್ಯಂ ವಸತಿಃ ಶಾಪಕಾರಿತಾ ॥ ೧೦೨ ॥

---

೯೬. ಹೀಗೆ ಅವಳು ಇಂದ್ರ, ವಿಷ್ಣು, ರುದ್ರ, ಅಗ್ನಿ, ಬ್ರಹ್ಮ, ಬ್ರಾಹ್ಮಣರು, ಇವರನ್ನೆಲ್ಲ ಶಪಿಸಿದಳು.

೯೭. ಅವಳು ಅವರಿಗೆ ಶಾಪವನ್ನಿತ್ತು ತರುವಾಯ ಸ್ಥಿರಮನಸ್ಕಳಾದಳು.

೯೮. ಆಗ ಅವಳ ಸಖಿಯಾದ ಲಕ್ಷ್ಮಿಯೂ, ಶಚಿಯೂ, ಇತರ ಸ್ತ್ರೀಯರೂ, ನೀನಿಲ್ಲಿರು ಎಂದರು. ಅವಳು ಅದನ್ನು ಒಪ್ಪದೆ ಶಬ್ದವು ಕೇಳದ ಸ್ಥಳಕ್ಕೆ ನಾನು ಹೋಗುವೆನೆಂದಳು.

೯೯. ಬಳಿಕ ಆ ಹೆಂಗಸರೆಲ್ಲ ತಮ್ಮ ತಮ್ಮ ಮನೆಗೆ ತೆರಳಿದರು. ಸಾವಿತ್ರಿಯು ಕೋಪಗೊಂಡು ಅವರನ್ನು ಶಪಿಸಲುದ್ಯುಕ್ತಳಾದಳು.

೧೦೦. ನನ್ನನ್ನು ಆ ದೇವಾಂಗನೆಯರು ತ್ಯಜಿಸಿ ಹೊರಟು ಹೋದುದರಿಂದ ನಾನು ಕುಪಿತಳಾಗಿ ಅವರನ್ನು ಶಪಿಸುವೆನು?

೧೦೧–೧೦೨. "ಎಲೆ ಲಕ್ಷ್ಮಿ! ನೀನು ತಡೆಯಲ್ಪಟ್ಟರೂ ಚಂಚಲಳಾಗಿ ಒಂದೆಡೆಯಲ್ಲಿ ವಾಸಮಾಡದಿರು. ನೀನು ಮೂರ್ಖರು, ಮ್ಲೇಚ್ಛರು, ಪರ್ವತವಾಸಿಗಳು, ದುಷ್ಟ, ಕುಷ್ಠರೋಗಿ, ನಿಂದ್ಯವಾದ ಮಾತನ್ನಾಡುವವನು, ಅಹಂಕಾರಿ, ಪರಸ್ತ್ರೀಗಮನಮಾಡಿದವನು, ದುರಾತ್ಮ ಇಂತಹವರಲ್ಲಿ ನನ್ನ ಶಾಪದಿಂದ ವಾಸಮಾಡು.

ಶಾಪಂ ದತ್ವಾ ತತಸ್ತಸ್ಯಾ ಇಂದ್ರಾಣೀಮಶಪತ್ತದಾ ॥ ೧೦೩ ॥
ತ್ವಷ್ಟುರ್ವಾರ್ಚಾ ಗೃಹೀತೇಂದ್ರೇ ಪತ್ಯೌ ತೇ ದುಷ್ಟಕಾರಿಣಿ ।
ನಹುಷಾಯ ಗತೇ ರಾಜ್ಯೇದೃಷ್ಟ್ವಾ ತ್ವಾಂ ಯಾಚಯಿಷ್ಯತಿ ॥ ೧೦೪ ॥
ಅಹಮಿಂದ್ರಃ ಕಥಂ ಚೈಷಾ ನೋಪತಿಷ್ಠತಿ ಚಾಲಸಾ ।
ಸರ್ವಾನ್ ದೇವಾನ್ ಹನಿಷ್ಯಾಮಿ ಲಪ್ಸ್ಯೇ ನಾಹಂ ಶಚೀಂ ಯದಿ ॥ ೧೦೫ ॥
ನಷ್ಟಾ ತ್ವಂ ಚ ತದಾ ಶಾಸ್ತವನೇ ಮಹತಿ ದುಃಖಿತಾ ।
ವಸಿಷ್ಯಸಿ ದುರಾಚಾರೇ ಶಾಪೇನ ಮಮ ಗರ್ವಿತೇ ॥ ೧೦೬ ॥
ದೇವಭಾರ್ಯಾಸು ಸರ್ವಾಸು ತದಾ ಶಾಪಮಯುಚ್ಛತ ॥ ೧೦೭ ॥
ನ ಚಾಪತ್ಯಕೃತಾ ಪ್ರೀತಿಃ ಸರ್ವಾಸ್ವೇವ ಭವಿಷ್ಯತಿ ।
ದಹ್ಯಮಾನಾ ದಿವಾರಾತ್ರೌ ವಂಧ್ಯಾ ಶಬ್ದೇನ ದುಃಖಿತಾಃ ॥ ೧೦೮ ॥
ಗೌರೀಮೇವಂ ತಥಾ ಶಪ್ತ್ವಾ ಸಾ ದೇವೀ ವರವರ್ಣಿನೀ ।
ಉಚ್ಚೈ ರುರೋದ ಸಾವಿತ್ರೀ ಭರ್ತೃಯಜ್ಞಾದ್ಬಹಿಸ್ಥಿತಾ ॥ ೧೦೯ ॥

---

೧೦೩. ಹೀಗೆ ಲಕ್ಷ್ಮಿಯನ್ನು ಶಪಿಸಿ ಬಳಿಕ ಶಚಿಗೆ ಶಾಪವಿತ್ತಳು.

೧೦೪. ದುಷ್ಟಕಾರ್ಯವನ್ನೆಸಗಿದ ನಿನ್ನ ಪತಿಯಾದ ಇಂದ್ರನನ್ನು ತ್ವಷ್ಟೃವು ಶಪಿಸಲು ದೇವರಾಜ್ಯವು ನಹುಷನ ಪಾಲಾಗಲು ಅವನು ನಿನ್ನನ್ನು ಹೀಗೆ ಯಾಚಿಸುವನು.

೧೦೫. ನಾನೀಗ ಇಂದ್ರನಾಗಿರುವೆನು. ಈ ಶಚಿಯನ್ನು ಏಕೆ ಅಲಸಳಾಗಿ ನನ್ನನ್ನು ಸೇವಿಸುವುದಿಲ್ಲ? ನಾನು ಶಚಿಯನ್ನು ಪಡೆಯದಿದ್ದರೆ ಸಕಲ ದೇವತೆಗಳನ್ನೂ ವಧಿಸುವೆನು.

೧೦೬. ಆಗ ಗರ್ವಿತಳಾದ ನೀನು ನನ್ನ ಶಾಪದಿಂದ ಘೋರಕಾನನದಲ್ಲಿ ಅತಿ ದುಃಖದಿಂದ ವಾಸಮಾಡುವೆ.

೧೦೭–೧೦೯. ತರುವಾಯ ಆ ಸಾವಿತ್ರಿಯು ಸಮಸ್ತ ದೇವತೆಗಳ ಪತ್ನಿಯರನ್ನೂ "ನಿಮಗೆಲ್ಲ ಮಕ್ಕಳ ಪ್ರೀತಿಯಿಲ್ಲದಿರಲಿ. ಬಂಜೆಯರೆಂಬ ಹೆಸರಿನಿಂದ ಯಾವಾಗಲೂ ವ್ಯಥೆಗೊಳ್ಳುವವರಾಗಿರಿ" ಎಂದು ಶಪಿಸಿ ಗೌರಿಗೂ ಹಾಗೆಯೇ ಶಾಪವಿತ್ತು ಪತಿಯು ಮಾಡುತ್ತಿರುವ ಯಜ್ಞದಿಂದ ಹೊರಗಡೆ ನಿಂತು ಗಟ್ಟಿಯಾಗಿ ಅತ್ತಳು.

ರೋದಮಾನಾ ಚ ಸಾ ದೃಷ್ಟ್ವಾ ವಿಷ್ಣುನಾ ಚ ಪ್ರಸಾದಿತಾ ।
ಮಾ ರೋದೀಸ್ತ್ವಂ ವಿಶಾಲಾಕ್ಷಿ ಏಹ್ಯಾಗಚ್ಛ ಸದಃ ಶುಭೇ ॥ ೧೧೦ ॥
ಪ್ರವಿಷ್ಟಾ ಚ ಶುಭೇ ಯಾಗೇ ಮೇಖಲಾಂ ಕ್ಷೌಮವಾಸಸೀ ।
ಗೃಹಾಣ ದೀಕ್ಷಾಂ ಬ್ರಹ್ಮಾಣಿ ಪಾದೌ ತೇ ಪ್ರಣಮೇ ಶುಭೇ ॥ ೧೧೧ ॥
ಏವಮುಕ್ತಾಽಬ್ರವೀದೇನಂ ನಾಽಹಂ ಕುರ್ಯಾಂ ವಚಸ್ತವ ।
ತತ್ರಾಹಂ ಚ ಗಮಿಷ್ಯಾಮಿ ಯತ್ರ ಶ್ರೋಷ್ಯೇ ನ ಚಾಧ್ವನಿಮ್ ॥ ೧೧೨ ॥
ಏವಮುಕ್ತ್ವಾ ವ್ಯರಮದುಚ್ಚೈಃ ಸ್ಥಾನೇ ಕ್ಷಿತೌ ಸ್ಥಿತಾ ॥ ೧೧೩ ॥
ವಿಷ್ಣುಸ್ತದಗ್ರತಃ ಸ್ಥಿತ್ವಾ ಬದ್ಧ್ವಾ ಚ ಕರಸಂಪುಟಂ ।
ತುಷ್ಟಾವ ಪ್ರಣತೋ ಭೂತ್ವಾ ಭಕ್ತ್ಯಾ ಪರಮಯಾ ಯತಃ ॥ ೧೧೪ ॥

ವಿಷ್ಣುರುವಾಚ :—

ನಮೋಽಸ್ತು ತೇ ಮಹಾದೇವಿ ಭೂರ್ಭುವಃ ಸ್ವಸ್ತ್ರಯೀಮಯಿ ।
ಸಾವಿತ್ರಿ ದುರ್ಗತಾರಿಣಿ ತ್ವಂವಾಣೀ ಸಪ್ತಧಾಸ್ಮೃತಾ ॥ ೧೧೫ ॥
ಸರ್ವಾಣಿ ಸ್ತುತಿಶಾಸ್ತ್ರಾಣಿ ಲಕ್ಷಣಾನಿ ತಥೈವ ಚ ।
ಭವಿಷ್ಯಾ ಸರ್ವಶಾಸ್ತ್ರಾಣಾಂ ತ್ವಂತು ದೇವಿ ನಮೋಽಸ್ತುತೇ ॥ ೧೧೬ ॥

೧೧೦–೧೧೧. ಹಾಗೆ ಅಳುತ್ತಿರುವ ಅವಳನ್ನು ವಿಷ್ಣುವು ನೋಡಿ “ ಮಂಗಳ ಕರಳೆ ! ನೀನು ಅಳಬೇಡ. ಯಾಗಶಾಲೆಯನ್ನು ಪ್ರವೇಶಿಸಿ ಮೇಖಲೆ, ಕ್ಷೌಮವಸ್ತ್ರಗಳನ್ನು ತೆಗೆದುಕೊಂಡು ದೀಕ್ಷಾಬದ್ಧಳಾಗು. ಸಾವಿತ್ರಿ ! ನಿನ್ನನ್ನು ವಂದಿಸುವೆನು.” ಎಂದು ಸಮಾಧಾನಗೊಳಿಸಿದನು.

೧೧೨. ವಿಷ್ಣುವು ಹೀಗೆನ್ನಲು ಆ ಸಾವಿತ್ರಿಯು ಇಂತೆಂದಳು. ನಾನು ನಿನ್ನ ಮಾತನ್ನು ಕೇಳುವುದಿಲ್ಲ. ಧ್ವನಿಯೇ ಕಿವಿಗೆ ಬೀಳದ ಸ್ಥಳಕ್ಕೆ ಹೋಗುವೆನು.

೧೧೩. ಅವಳು ಹೀಗೆಂದು ಸುಮ್ಮನಾಗಿ ಭೂಮಿಯಲ್ಲಿ ಉನ್ನತಸ್ಥಳದಲ್ಲಿ ನಿಂತಳು.

೧೧೪. ವಿಷ್ಣುವು ಅವಳ ಮುಂದೆ ನಿಂತು ಕೈಜೋಡಿಸಿಕೊಂಡು ನಮಸ್ಕಾರ ಮಾಡಿ ಅತಿಶಯವಾದಭಕ್ತಿಯಿಂದ ಹೀಗೆ ಸ್ತುತಿಸಿದನು.

೧೧೫. ವಿಷ್ಣುವು ಹೇಳುತ್ತಾನೆ :—ಭೂಮ್ಯಂತರಿಕ್ಷಸ್ವರ್ಗರೂಪಳೂ, ವೇದಮಯಿಯೂ ಕಷ್ಟವನ್ನು ನಿವಾರಿಸುವವಳೂ ಆದ ನೀನು ಸಪ್ತ ವಿಧಳಾಗಿರುವೆ. ನಿನಗೆ ನಮಸ್ಕಾರವು.

೧೧೬. ದೇವಿ! ನೀನು ಸಮಸ್ತ ಸ್ತುತಿಶಾಸ್ತ್ರರೂಪಳೂ, ಲಕ್ಷಣಸ್ವರೂಪಳೂ, ಸಕಲ ಶಾಸ್ತ್ರಗಳನ್ನುಂಟುಮಾಡುವವಳೂ ಆಗಿರುವೆ. ನಿನಗೆ ನಮಸ್ಕಾರವಾಗಲಿ.

ಶ್ವೇತಾ ತ್ವಂ ಶ್ವೇತರೂಪಾಸಿ ಶಶಾಂಕೇನ ಸಮಾನನಾ ।
ಶಶಿರಶ್ಮಿಪ್ರಕಾಶೇನ ಹರಿಣೋರಸಿ ರಾಜಸೇ ।
ದಿವ್ಯಕುಂಡಲಪೂರ್ಣಾಭ್ಯಾಂಶ್ರವಣಾಭ್ಯಾಂ ವಿಭೂಷಿತಾ ॥ ೧೧೭ ॥
ತ್ವಂ ಸಿದ್ಧಿಸ್ತ್ವಂ ತಥಾ ಋದ್ಧಿಃ ಕೀರ್ತಿಃ ಶ್ರೀಃ ಸಂತತಿರ್ಮತಿಃ ।
ಸಂಧ್ಯಾ ರಾತ್ರಿ ಪ್ರಭಾತಸ್ತ್ವಂ ಕಾಲರಾತ್ರಿಸ್ತ್ವಮೇವ ಚ ॥ ೧೧೮ ॥
ಕರ್ಷಕಾಣಾಂ ಯಥಾ ಸೀತಾ ಭೂತಾನಾಂ ಧಾರಿಣೀ ಯಥಾ ।
ಏವಂ ಸ್ತುವಂತಂ ಸಾವಿತ್ರೀ ವಿಷ್ಣುಂ ಪ್ರೋವಾಚ ಸುವ್ರತಾ ॥ ೧೧೯ ॥
ಸಮ್ಯಕ್ಸ್ತುತಾ ತ್ವಯಾ ಪುತ್ರ ಅಜೇಯಸ್ತ್ವಂ ಭವಿಷ್ಯಸಿ ।
ಅವತಾರೇ ಸದಾ ವತ್ಸ ಪಿತೃಮಾತೃಸುವಲ್ಲಭಃ ॥ ೧೨೦ ॥
ಅನೇನ ಸ್ತವರಾಜೇನ ಸ್ತೋಷ್ಯತೇ ಯಸ್ತು ಮಾಂ ಸದಾ ।
ಸರ್ವದೋಷವಿನಿರ್ಮುಕ್ತಃ ಪರಂ ಸ್ಥಾನಂ ಗಮಿಷ್ಯತಿ ॥ ೧೨೧ ॥
ಗಚ್ಛ ಯಜ್ಞಂ ಚಿರಂ ತಸ್ಯ ಸಮಾಪ್ತಿಂ ನಯ ಪುತ್ರಕ ॥ ೧೨೨ ॥

---

೧೧೭. ನೀನು ಶ್ವೇತವರ್ಣಳೂ, ಶ್ವೇತರೂಪಳೂ, ಚಂದ್ರನಕಾಂತಿಯಂತಿರುವ ತೇಜಸ್ಸಿನಿಂದ ಚಂದ್ರಮುಖಿಯೂ, ಜಿಂಕೆಯ ಎದೆಯಂತೆ ಎದೆಯುಳ್ಳವಳೂ ಆಗಿ ದಿವ್ಯಕುಂಡಲಗಳುಳ್ಳ ಕಿವಿಯಿಂದ ವಿರಾಜಿಸುತ್ತಿರುವೆ.

೧೧೮. ಸಿದ್ಧಿ, ಋದ್ಧಿ, ಕೀರ್ತಿ, ಶ್ರೀ, ಸಂತತಿ, ಮತಿ, ಸಂಧ್ಯಾ, ರಾತ್ರಿ, ಪ್ರಭಾತ, ಕಾಳರಾತ್ರಿ ಇವುಗಳ ಸ್ವರೂಪಗಳಾಗಿರುವೆ.

೧೧೯. ನೀನು ವ್ಯವಸಾಯಗಾರರಿಗೆ ನೇಗಿಲಿನ ರೇಖೆಯಂತೆಯೂ, ಪಂಚ ಭೂತಗಳಿಗೆ ಭೂಮಿಯಂತೆಯೂ ಇರುವೆ. ಹೀಗೆ ವಿಷ್ಣುವು ಸ್ತುತಿಸುತ್ತಿರಲು ಸಾವಿತ್ರಿಯು ಇಂತೆಂದಳು.

೧೨೦. "ಮಗು ! ನೀನು ಚೆನ್ನಾಗಿ ಸ್ತುತಿಸಿರುವೆ. ನೀನು ಯಾರಿಂದಲೂ ಜಯಿಲಸಕ್ಯನೂ, ಅವತಾರಗಳಲ್ಲಿ ತಂದೆ ತಾಯಿಗಳಿಗೆ ಪ್ರಿಯನೂ ಆಗುವೆ.

೧೨೧. ಈ ಸ್ತೋತ್ರದಿಂದ ನನ್ನನ್ನು ಸ್ತುತಿಸುವವನು ಸಮಸ್ತ ದೋಷಮುಕ್ತನಾಗಿ ಉತ್ತಮಸ್ಥಾನಕ್ಕೆ ಹೋಗುವನು.

೧೨೨. ಮಗು ! ನೀನು ಹೊರಡು. ಆ ಬ್ರಹ್ಮನ ಯಜ್ಞವನ್ನು ಮುಗಿಸು.

ಕುರುಕ್ಷೇತ್ರೇ ಪ್ರಯಾಗೇ ಚ ಭವಿಷ್ಯೇ ಯಜ್ಞಕರ್ಮಣಿ ।
ಸಮೀಪಗಾ ಸ್ಥಿತಾ ಭರ್ತುಃ ಕರಿಷ್ಯೇ ತವ ಭಾಷಿತಮ್ ॥ ೧೨೩ ॥
ಏವಮುಕ್ತೋ ಗತೋ ವಿಷ್ಣುರ್ಬ್ರಹ್ಮಣಃ ಸದ ಉತ್ತಮಮ್ ।
ಸಾವಿತ್ರೀ ತು ಸಮಾಯಾತಾ ಪ್ರಭಾಸೇ ವರವರ್ಣಿನೀ ॥ ೧೨೪ ॥
ಗತಾಯಾಮಥ ಸಾವಿತ್ರ್ಯಾಂ ಗಾಯತ್ರೀ ವಾಕ್ಯಮಬ್ರವೀತ್ ॥ ೧೨೫ ॥
ಶೃಣ್ವಂತು ಮುನಯೋ ವಾಕ್ಯಂ ಮಮೇಯಂ ಭರ್ತೃಸನ್ನಿಧೌ ।
ಯದಹಂ ವಚ್ಮಿ ಸಂತುಷ್ಟಾ ವರದಾನಾಯ ಚೋದ್ಯತಾ ॥ ೧೨೬ ॥
ಬ್ರಹ್ಮಾಣಂ ಪೂಜಯಿಷ್ಯಂತಿ ನರಾ ಭಕ್ತಸಮನ್ವಿತಾಃ ।
ತೇಷಾಂ ವಸ್ತ್ರಂ ಧನಂ ಧಾನ್ಯ ದಾರಾಃ ಸೌಖ್ಯಂ ಸುತಾಶ್ಚ ವೈ ॥ ೧೨೭ ॥
ಅವಿಚ್ಛಿನ್ನಂ ತಥಾ ಸೌಖ್ಯಂ ಗೃಹಂ ವೈ ಪುತ್ರಪೌತ್ರಿಕಮ್ ।
ಭುಕ್ತ್ವಾಽಸೌ ಸುಚಿರಂ ಕಾಲಂ ತತೋ ಮೋಕ್ಷಂ ಗಮಿಷ್ಯತೇ ॥ ೧೨೮ ॥
ಶಕ್ರಾಹಂ ತೇ ವರಂ ವಚ್ಮಿ ಸಂಗ್ರಾಮೇ ಶತ್ರುಭಿಃ ಸಹ ।
ತದಾ ಬ್ರಹ್ಮಾ ಮೋಚಯಿತಾ ಗತ್ವಾ ಶತ್ರುನಿಕೇತನಮ್ ॥ ೧೨೯ ॥

---

೧೨೩. ಕುರುಕ್ಷೇತ್ರ, ಪ್ರಯಾಗಗಳಲ್ಲಿ ಮುಂದೆ ನಡೆಯುವ ಯಜ್ಞಗಳಲ್ಲಿ ನಾನು ಪತಿಯ ಬಳಿಯಲ್ಲಿದ್ದು ನಿನ್ನ ಮಾತುಗಳನ್ನು ನಡೆಯಿಸುವೆನು.

೧೨೪. ಸಾವಿತ್ರಿಯು ಹೀಗೆನ್ನಲು ವಿಷ್ಣುವು ಬ್ರಹ್ಮನ ಉತ್ತಮ ಸದಸ್ಸಿಗೆ ತೆರಳಿದನು. ಸಾವಿತ್ರಿಯು ಪ್ರಭಾಸಕ್ಕೆ ಬಂದಳು.

೧೨೫–೧೨೬. ಸಾವಿತ್ರಿಯು ಹೊರಟುಹೋಗಲು ಗಾಯತ್ರಿಯು ಇಂತೆಂದಳು, "ಮುನಿಗಳೆ ! ಸಂತುಷ್ಟಳಾಗಿ ವರವನ್ನೀಯಲು ಉದ್ಯುಕ್ತಳಾದ ನಾನು ಪತಿಯ ಸಮೀಪದಲ್ಲಿ ಹೇಳುವ ಈ ಮಾತನ್ನು ಕೇಳಿರಿ.

೧೨೭–೧೨೮. " ಬ್ರಹ್ಮನನ್ನು ಭಕ್ತಿಯಿಂದ ಪೂಜಿಸುವ ಮನುಷ್ಯರು ವಸ್ತ್ರ, ಧನ, ಧಾನ್ಯ, ಪತ್ನೀ, ಸುಖ, ಮನೆ, ಮಕ್ಕಳು, ಮೊಮ್ಮಕ್ಕಳು ಇವರಿಂದ ಸಮೃದ್ಧಿಗೊಂಡು ಬಹುಕಾಲ ಸುಖವನ್ನನುಭವಿಸಿ ಮೋಕ್ಷವನ್ನು ಪಡೆಯುವರು.

೧೨೯. ಇಂದ್ರ ! ನಾನು ನಿನಗೆ ವರವನ್ನು ಕೊಡುವೆನು. ನೀನು ಯುದ್ಧದಲ್ಲಿ ಶತ್ರುಗಳಿಂದ ಪರಾಜಯವನ್ನು ಹೊಂದಿದಾಗ ಬ್ರಹ್ಮನು ಶತ್ರುಗಳ ಮನೆಗೆ ಹೋಗಿ ನಿನ್ನನ್ನು ಬಿಡಿಸುವನು.

ಸ ಪುತ್ರಶತ್ರುನಾಶಾತ್ತ್ವಂ ಲಪ್ಸ್ಯಸೇ ಚ ಪರಾಂ ಮುದಮ್ ।
ಅಕಂಟಕಂ ಮಹದ್ರಾಜ್ಯಂ ತ್ರೈಲೋಕ್ಯೇ ತೇ ಭವಿಷ್ಯತಿ ॥ ೧೩೦ ॥

ಮರ್ತ್ಯಲೋಕೇ ಯದಾ ವಿಷ್ಣೋ ಹ್ಯವತಾರಂ ಕರಿಷ್ಯಸಿ ।
ಭ್ರಾತ್ರಾ ಸಹ ಪರಂ ದುಃಖಂ ಸ್ವಭಾರ್ಯಾಹರಣಂ ಚ ಯತ್ ॥ ೧೩೧ ॥

ಹತ್ವಾ ಶತ್ರುಂ ಪುನರ್ಭಾರ್ಯಾಂ ಲಪ್ಸ್ಯಸೇ ಸುರಸನ್ನಿಧೌ ।
ಗೃಹೀತ್ವಾ ತಾಂ ಪುನಃ ಸ್ವಾರಾಜ್ಯಂ ರಾಜ್ಯಂ ಕೃತ್ವಾ ಗಮಿಷ್ಯಸಿ ॥ ೧೩೨ ॥

ಏಕಾದಶಸಹಸ್ರಾಣಿ ಕೃತ್ವಾ ರಾಜ್ಯಂ ಪುನರ್ದಿವಮ್ ।
ಖ್ಯಾತಿಸ್ತೇ ವಿಪುಲಾ ಲೋಕೇ ಚಾನುರಾಗೋ ಭವಿಷ್ಯತಿ ॥ ೧೩೩ ॥

ಗಾಯತ್ರೀ ಬ್ರಾಹ್ಮಣಾಂಸ್ತಾಂಶ್ಚ ಸರ್ವಾನೇವಾಬ್ರವೀದಿದಮ್ ॥ ೧೩೪ ॥

ಯುಷ್ಮಾಕಂ ಪ್ರೀಣನಂ ಕೃತ್ವಾ ತೃಪ್ತಿಂ ಯಾಸ್ಯಂತಿ ದೇವತಾಃ ।
ಭವಂತೋ ಭೂಮಿದೇವಾ ವೈ ಸರ್ವೇ ಪೂಜ್ಯಾ ಭವಿಷ್ಯಥ ॥ ೧೩೫ ॥

ಯುಷ್ಮಾಕಂ ಪೂಜನಂ ಕೃತ್ವಾ ದತ್ವಾ ದಾನಾನ್ಯನೇಕಶಃ ।

---

೧೩೦. ಶತ್ರುಗಳು ಪುತ್ರರೊಡನೆ ನಾಶಗೊಳ್ಳುವುದರಿಂದ ನೀನು ಅತಿಶಯ ಸಂತೋಷವನ್ನು ಪಡೆಯುವೆ. ಮೂರುಲೋಕಗಳಲ್ಲಿ ನಿನ್ನ ರಾಜ್ಯವು ನಿಷ್ಕಂಟಕ ವಾಗುವುದು.

೧೩೧–೧೩೩. ವಿಷ್ಣುವೆ! ನೀನು ಭೂಲೋಕದಲ್ಲಿ ಅವತಾರ ಮಾಡಿದಾಗ ಸಹೋದರನೊಡನೆ ಭಾರ್ಯಾಪಹಾರದಿಂದುಂಟಾದ ದುಃಖವನ್ನನುಭವಿಸಿದರೂ ಶತ್ರುವನ್ನು ಕೊಂದು ಮರಳಿ ಪತ್ನಿಯನ್ನು ದೇವತೆಗಳ ಸನ್ನಿಧಿಯಲ್ಲಿ ಪಡೆದು ಹನ್ನೊಂದು ಸಾವಿರ ವರ್ಷಗಳಕಾಲ ರಾಜ್ಯಭಾರಮಾಡಿ ತಿರುಗಿ ದೇವಲೋಕವನ್ನು ಸೇರುವೆ. ನಿನ್ನ ಕೀರ್ತಿಯು ಲೋಕದಲ್ಲಿ ಅತಿಶಯವಾಗಿ ಹರಡುವುದು. ಜನರು ನಿನ್ನಲ್ಲಿ ಪ್ರೀತಿಯುಳ್ಳವರಾಗುವರು.

೧೩೪. ಹಾಗೆಯೇ ಗಾಯತ್ರಿಯು ಆ ಬ್ರಾಹ್ಮಣರನ್ನೆಲ್ಲ ಕುರಿತು ಹೀಗೆಂದಳು.

೧೩೫. "ಬ್ರಾಹ್ಮಣರೆ! ದೇವತೆಗಳು ನಿಮ್ಮನ್ನು ಸಂತೋಷಗೊಳಿಸಿ ತಾವು ತೃಪ್ತಿಗೊಳ್ಳುವರು. ಭೂದೇವತೆಗಳಾದ ನೀವೆಲ್ಲರೂ ಪೂಜ್ಯರಾಗುವಿರಿ.

ಪ್ರಾಣಾಯಾಮೇನ ಚೈಕೇನ ಸರ್ವಮೇತತ್ತರಿಷ್ಯಥ ॥ ೧೩೬ ॥
ಪ್ರಭಾಸೇ ತು ವಿಶೇಷೇಣ ಜಪ್ತ್ವಾ ಮಾಂ ವೇದಮಾತರಂ ।
ಪ್ರತಿಗ್ರಹಕೃತಾರ್ ದೋಷಾರ್ ನ ಪ್ರಾಪ್ಸ್ಯಥ್ವಂ ದ್ವಿಜೋತ್ತಮಾಃ ॥ ೧೩೭ ॥
ಪುಷ್ಕರೇ ಚಾನ್ನದಾನೇನ ಪ್ರೀತಾಃ ಸರ್ವೇ ಚ ದೇವತಾಃ ।
ಏಕಸ್ಮಿನ್ಭೋಜಿತೇ ವಿಪ್ರೇ ಕೋಟಿರ್ಭವತಿ ಭೋಜಿತಾ ॥ ೧೩೮ ॥
ಬ್ರಹ್ಮಹತ್ಯಾದಿ ಪಾಪಾನಿ ದುರಿತಾನಿ ಚ ಯಾನಿ ಚ ।
ಕರಿಷ್ಯಂತಿ ನರಾಃ ಸರ್ವೇ ದತ್ತೇ ಯುಷ್ಮತ್ಕರೇ ಧನೇ ॥ ೧೩೯ ॥
ಮಹೀಯಧ್ವೇ ತು ಜಾಪ್ಯೇನ ಪ್ರಾಣಾಯಾಮೈಸ್ತ್ರಿಭಿಃ ಕೃತೈಃ ।
ಬ್ರಹ್ಮಹತ್ಯಾ ಸಮಂ ಪಾಪಂ ತತ್ಕ್ಷಣಾದೇವ ನಶ್ಯತಿ ॥ ೧೪೦ ॥
ದಶಭಿರ್ಜನ್ಮಜನಿತಂ ಶತೇನ ತು ಪುರಾಕೃತಂ ।
ತ್ರಿಯುಗಂ ತು ಸಹಸ್ರೇಣ ಗಾಯತ್ರೀ ಹಂತಿ ಕಿಲ್ಬಿಷಂ ॥ ೧೪೧ ॥

---

೧೩೬. ನೀವು ಪೂಜೆಯನ್ನೂ, ಅನೇಕ ದಾನಗಳನ್ನೂ ಪರಿಗ್ರಹಿಸಿದರೂ ಅವುಗಳ ದೋಷಗಳನ್ನೆಲ್ಲ ಒಂದು ಪ್ರಾಣಾಯಾಮದಿಂದಲೇ ನಿವಾರಿಸಿಕೊಳ್ಳುವಿರಿ.

೧೩೭. ದ್ವಿಜವರ್ಯರೆ! ನೀವು ಪ್ರಭಾಸಕ್ಷೇತ್ರದಲ್ಲಿ ವೇದಮಾತೆಯಾದ ನನ್ನನ್ನು ವಿಶೇಷವಾಗಿ ಜಪಿಸಿದರೆ ಪ್ರತಿಗ್ರಹದಿಂದುಂಟಾದ ದೋಷಗಳನ್ನು ಹೊಂದುವುದಿಲ್ಲ.

೧೩೮. ಪುಷ್ಕರಕ್ಷೇತ್ರದಲ್ಲಿ ಅನ್ನದಾನ ಮಾಡುವುದರಿಂದ ಸಕಲ ದೇವತೆಗಳೂ ಸಂತುಷ್ಟರಾಗುವರು. ಅಲ್ಲಿ ಒಬ್ಬ ಬ್ರಾಹ್ಮಣನನ್ನು ಭೋಜನ ಮಾಡಿಸಿದರೆ ಕೋಟಿ ಬ್ರಾಹ್ಮಣರನ್ನು ಭೋಜನಮಾಡಿಸಿದಂತಾಗುವುದು.

೧೩೯. ಮನುಷ್ಯರು ನಿಮ್ಮ ಹಸ್ತದಲ್ಲಿ ದಾನವನ್ನಿತ್ತರೆ ಬ್ರಹ್ಮಹತ್ಯಾದಿ ಪಾಪಗಳೂ ಪರಿಹಾರವಾಗುವುವು.

೧೪೦. ಜಪದಿಂದ ನೀವು ಪೂಜ್ಯರಾಗುವಿರಿ. ಮೂರು ಪ್ರಾಣಾಯಾಮಗಳಿಂದ ನಿಮ್ಮ ಬ್ರಹ್ಮಹತ್ಯೆಗೆ ಸಮವಾದ ಪಾಪವು ಕೂಡಲೆ ನಾಶವಾಗುವುದು.

೧೪೧. ಗಾಯತ್ರಿಯನ್ನು ಹತ್ತು ಸಾರಿ ಜಪಿಸುವುದರಿಂದ ಈ ಜನ್ಮದ ಪಾಪವೂ, ನೂರಾವೃತ್ತಿ ಜಪಮಾಡಿದರೆ ಹಿಂದಿನ ಜನ್ಮದ ಪಾಪವೂ, ಸಾವಿರಸಲ ಜಪಿಸುವುದರಿಂದ ಮೂರು ಯುಗಗಳ ಪಾಪವೂ ಪರಿಹಾರವಾಗುವುದು.

ಏವಂ ಜ್ಞಾತ್ವಾ ಸದಾ ಪೂಜಾ ಜಾಪ್ಯೇ ಚ ಮಮ ವೈ ಕೃತೇ ।
ಭವಿಷ್ಯಥ್ವಂ ನ ಸಂದೇಹೋ ನಾತ್ರ ಕಾರ್ಯಾ ವಿಚಾರಣಾ ॥ ೧೪೨ ॥
ಓಂಕಾರೇಣ ತ್ರಿಮಾತ್ರೇಣ ಸಾರ್ಧೇನ ಚ ವಿಶೇಷತಃ ।
ಪೂಜ್ಯಾಃ ಸರ್ವೇ ನ ಸಂದೇಹೋ ಜಪ್ತ್ವಾ ಮಾಂ ಶಿರಸಾ ಸಹ ॥ ೧೪೩ ॥
ಅಷ್ಟಾಕ್ಷರಸ್ಥಿತಾ ಚಾಹಂ ಜಗದ್ವ್ಯಾಪ್ತಂ ಮಯಾ ತ್ವಿದಂ ।
ಮಾತಾಽಹಂ ಸರ್ವವೇದಾನಾಂ ವೇದ್ಯೈಃ ಸರ್ವೈರಲಂಕೃತಾ ॥ ೧೪೪ ॥
ಜಪ್ತ್ವಾ ಮಾಂ ಪರಮಾಂ ಸಿದ್ಧಿಂ ಪಶ್ಯಂತಿ ದ್ವಿಜಸತ್ತಮಾಃ ।
ಪ್ರಾಧಾನ್ಯಂ ಮಮ ಜಾಪ್ಯೇನ ಸರ್ವೇಷಾಂ ವೋ ಭವಿಷ್ಯತಿ ॥ ೧೪೫ ॥
ಗಾಯತ್ರೀಸಾರಮತ್ರೋಽಪಿ ವರಂ ವಿಪ್ರಃ ಸುಯಂತ್ರಿತಃ ।
ನಾಯಂತ್ರಿತಶ್ಚತುರ್ವೇದಃ ಸರ್ವಾಶೀ ಸರ್ವವಿಕ್ರಯೀ ॥ ೧೪೬ ॥
ಯಸ್ಮಾದ್ಭವತಾಂ ಸಾವಿತ್ರ್ಯಾ ಶಾಪೋ ದತ್ತೋ ಸದೇ ತ್ವಿಹ ।
ಅತ್ರ ದತ್ತಂ ಹುತಂ ಚಾಪಿ ಸರ್ವಮಕ್ಷಯಕಾರಕಂ ।
ದತ್ತೋ ವರೋ ಮಯಾ ತೇನ ಯುಷ್ಮಾಕಂ ದ್ವಿಜಸತ್ತಮಾಃ ॥ ೧೪೭ ॥
ಅಗ್ನಿಹೋತ್ರಪರಾ ವಿಪ್ರಾಸ್ತ್ರಿಕಾಲಂ ಹೋಮದಾಯಿನಃ ।
ಸ್ವರ್ಗಂ ತೇ ತು ಗಮಿಷ್ಯಂತಿ ಏಕವಿಂಶತಭಿಃ ಕುಲೈಃ ॥ ೧೪೮ ॥

---

೧೪೨. ಹೀಗೆ ನೀವು ನನ್ನನ್ನು ಜಪಿಸುವುದರಿಂದ ಯಾವಾಗಲೂ ಪೂಜ್ಯರಾಗುವಿರಿ, ಸಂದೇಹವಿಲ್ಲ.

೧೪೩. ತ್ರಿಮಾತ್ರವುಳ್ಳ ಓಂಕಾರದೊಡನೆ ನನ್ನನ್ನು ಜಪಿಸುವವರು ಪೂಜ್ಯರಾಗುವರು, ಸಂದೇಶವಿಲ್ಲ.

೧೪೪. ನಾನು ಅಷ್ಟಾಕ್ಷರಮಂತ್ರದಲ್ಲಿರುವೆನು. ನನ್ನಿಂದ ಈ ಜಗತ್ತು ವ್ಯಾಪ್ತವಾಗಿರುವುದು. ನಾನು ಸಕಲ ವೇದಗಳ ಮಾತೆಯು. ಸಮಸ್ತ ವೇದಗಳಿಂದ ಅಲಂಕಾರಗೊಂಡಿರುವೆನು.

೧೪೫. ದ್ವಿಜವರ್ಯರು ನನ್ನನ್ನು ಜಪಿಸಿ ಉತ್ತಮಸಿದ್ಧಿಯನ್ನು ನೋಡುವರು. ನಿಮಗೆ ನನ್ನ ಜಪದಿಂದ ಶ್ರೇಷ್ಠತೆಯು ಲಭಿಸುವುದು.

೧೪೬. ನಿಯಮದಿಂದ ಗಾಯಿತ್ರೀಸಾರ ಮಾತ್ರವನ್ನರಿತ ವಿಪ್ರನೂ ಶ್ರೇಷ್ಠನು. ನಿಯಮವಿಲ್ಲದೆ ನಾಲ್ಕು ವೇದಗಳನ್ನು ಅಧ್ಯಯನಮಾಡಿದರೂ ಅವನು ಸರ್ವಭಕ್ಷನೂ, ಸಮಸ್ತವನ್ನು ವಿಕ್ರಯಿಸುವವನೂ ಆಗುವನು.

೧೪೭. ಈ ಸಭೆಯಲ್ಲಿ ಸಾವಿತ್ರಿಯು ನಿಮಗೆ ಶಾಪವನ್ನು ಕೊಟ್ಟಿದ್ದರೂ ನಾನು ನಿಮಗೆ ಕೊಟ್ಟವರದಿಂದ ನಿಮ್ಮ ದಾನ, ಹೋಮಗಳೆಲ್ಲವೂ ಅಕ್ಷಯವಾಗುವುವು.

೧೪೮. ಅಗ್ನಿಹೋತ್ರನಿರತರೂ, ಮೂರುಕಾಲಗಳಲ್ಲಿ ಹೋಮಿಸುವವರೂ ಆದ ದ್ವಿಜರು ಇಪ್ಪತ್ತೊಂದುಕುಲದವರೊಡನೆ ಸ್ವರ್ಗಕ್ಕೆ ತೆರಳುವರು.

ಏವಂ ಶಕ್ರೇ ಚ ವಿಷ್ಣೌ ಚ ರುದ್ರೇ ವೈ ಪಾವಕೇ ತಥಾ ।
ಬ್ರಹ್ಮಣೋ ಬ್ರಾಹ್ಮಣಾನಾಂ ಚ ಗಾಯತ್ರೀ ಸಾ ವರಂ ದದೌ ।
ತಸ್ಮಿನ್ಕಾಲೇ ವರಂ ದತ್ವಾ ಬ್ರಹ್ಮಣಃ ಪಾರ್ಶ್ವಗಾಽಭವತ್ ॥ ೧೪೯ ॥
ಹರಿಣಾ ತು ಸಮಾಖ್ಯಾತಂ ಲಕ್ಷ್ಮ್ಯಾಃ ಶಾಪಸ್ಯ ಕಾರಣಂ ।
ಯುವತೀನಾಂ ಚ ಸರ್ವಾಸಾಂ ಶಾಪಸ್ತಾಸಾಂ ಪೃಥಕ್ ಪೃಥಕ್ ॥ ೧೫೦ ॥
ಲಕ್ಷ್ಮ್ಯಾಸ್ತದಾ ವರಂ ಪ್ರಾದಾದ್ಗಾಯತ್ರೀ ಬ್ರಹ್ಮಣಃ ಪ್ರಿಯಾ ॥ ೧೫೧ ॥
ಅಕುತ್ಸಿತಾಃ ಸದಾ ಪುತ್ರಿ ತವ ವಾಸೇನ ಶೋಭನೇ ।
ಭವಿಷ್ಯಂತಿ ನ ಸಂದೇಹಃ ಸರ್ವೇಭ್ಯಃ ಪ್ರೀತಿದಾಯಕಾಃ ॥ ೧೫೨ ॥
ಯೇ ತ್ವಯಾ ವೀಕ್ಷಿತಾಃ ಸರ್ವೇ ವೈ ಪುಣ್ಯಭಾಜನಾಃ ।
ತೇಷಾಂ ಜಾತಿಃ ಕುಲಂ ಶೀಲಂ ಧರ್ಮಶ್ಚೈವ ವರಾನನೇ ॥ ೧೫೩ ॥
ಪರಿತ್ಯಕ್ತಾಸ್ತ್ವಯಾ ಯೇ ತು ತೇ ನರಾ ದುಃಖಭಾಗಿನಃ ।
ಸಭಾಯಾಂ ತೇ ನ ಶೋಭಂತೇ ಮನ್ಯಂತೇ ನ ಚ ಪಾರ್ಥಿವೈಃ ॥ ೧೫೪ ॥
ಆಶಿಷಶ್ಚೈವ ತೇಷಾಂ ತು ಕುರ್ವತೇ ವೈ ದ್ವಿಜೋತ್ತಮಾಃ ।
ಸೌಜನ್ಯಂ ತೇಷು ಕುರ್ವಂತಿ ನಪ್ತಾ ಭ್ರಾತಾ ಪಿತಾ ಗುರುಃ ॥ ೧೫೫ ॥

---

೧೪೯. ಆ ಗಾಯತ್ರಿಯು ಹೀಗೆ ಇಂದ್ರ, ವಿಷ್ಣು, ರುದ್ರ, ಅಗ್ನಿ, ಬ್ರಹ್ಮ, ಬ್ರಾಹ್ಮಣರು ಇವರಿಗೆ ವರವನ್ನಿತ್ತು ಬ್ರಹ್ಮನ ಪಾರ್ಶ್ವದಲ್ಲಿದ್ದಳು.

೧೫೦. ವಿಷ್ಣುವು ಆ ಗಾಯತ್ರಿಗೆ ಲಕ್ಷ್ಮೀಮೊದಲಾದ ಹೆಂಗಸರಿಗೆ ಸಾವಿತ್ರಿಯು ಕೊಟ್ಟಿರುವ ಶಾಪವನ್ನು ತಿಳಿಸಿದನು.

೧೫೧. ಆಗ ಬ್ರಹ್ಮಪತ್ನಿಯಾದ ಗಾಯತ್ರಿಯು ಲಕ್ಷ್ಮಿಗೆ ವರವನ್ನಿತ್ತಳು.

೧೫೨. ಮಗು ! ಜನರು ನಿನ್ನ ವಾಸದಿಂದ ಅನಿಂದ್ಯರೂ, ಸಮಸ್ತ ಜನರಿಗೆ ಪ್ರೀತಿಯನ್ನುಂಟುಮಾಡುವವರೂ ಆಗುವರು.

೧೫೩. ನಿನ್ನಿಂದ ನೋಡಲ್ಪಟ್ಟ ಜನರೆಲ್ಲ ಪುಣ್ಯವಂತರೂ, ಜಾತಿ, ಕುಲ, ಶೀಲ, ಧರ್ಮ ಇವುಗಳುಳ್ಳವರೂ ಆಗುವರು.

೧೫೪. ನಿನ್ನಿಂದ ಬಿಡಲ್ಪಟ್ಟ ಮನುಷ್ಯರು ದುಃಖಿಗಳಾಗುವರು. ಅವರು ಸಭೆಯಲ್ಲಿ ಪ್ರಕಾಶಗೊಳ್ಳುವುದಿಲ್ಲ. ಅವರನ್ನು ರಾಜರು ಸನ್ಮಾನಿಸುವುದಿಲ್ಲ.

೧೫೫. ನಿನ್ನ ಅನುಗ್ರಹವುಳ್ಳವರಿಗೆ ದ್ವಿಜವರ್ಯರು ಆಶೀರ್ವಾದ ಮಾಡುವರು. ಅವರಲ್ಲಿ ಮೊಮ್ಮಕ್ಕಳು, ಸಹೋದರ, ತಂದೆ, ಗುರು ಇವರು ಸ್ನೇಹಮಾಡುವರು.

ಬಾಂಧವೋಽಸಿ ನ ಸಂದೇಹೋ ನ ಜೀವೇಽಹಂ ತ್ವಯಾ ವಿನಾ ।
ತ್ವಯಿ ದೃಷ್ಟೇ ಪ್ರಸನ್ನಾ ಮೇ ದೃಷ್ಟಿರ್ಭವತಿ ಶೋಭನಾ ।
ಮನಃ ಪ್ರಸೀದತೇಽತ್ಯರ್ಥಂ ಸತ್ಯಂ ಸತ್ಯಂ ವದಾಮಿ ತೇ ॥ ೧೫೬ ॥
ಏವಂ ವಿಧಾನಿ ವಾಕ್ಯಾನಿ ತ್ವಯಾ ದೃಷ್ಟ್ವಾ ನಿರೀಕ್ಷಿತೇ ।
ಸಜ್ಜನಾಸ್ತೇ ವದಿಷ್ಯಂತಿ ಜನಾನಾಂ ಪ್ರೀತಿದಾಯಕಾಃ ॥ ೧೫೭ ॥
ಇಂದ್ರಾಣಿ ನಹುಷಃ ಪ್ರಾಪ್ಯ ಸ್ವರ್ಗಂ ತ್ವಾಂ ಯಾಚಯಿಷ್ಯತಿ ।
ಅದೃಷ್ಟ್ವಾ ತು ಹತಃ ಪಾಪೋ ಅಗಸ್ತ್ಯವಚನಾದ್ದ್ರುತಮ್ ॥ ೧೫೮ ॥
ಸರ್ಪತ್ವಂ ಸಮನುಪ್ರಾಪ್ಯ ಪ್ರಾರ್ಥಯಿಷ್ಯತಿ ತಂ ಮುನಿಂ ।
ದರ್ಪೇಣಾಹಂ ವಿನಷ್ಟೋಽಸ್ಮಿ ಶರಣಂ ಮೇ ಮುನೇ ಭವ ॥ ೧೫೯ ॥
ವಾಕ್ಯೇನ ತೇನ ತಸ್ಯಾಸೌ ನೃಪಸ್ಯ ಭಗವಾನೃಷಿಃ ।
ಕೃತ್ವಾ ಮನಸಿ ಕಾರುಣ್ಯಂ ಇದಂ ವಚನಮಬ್ರವೀತ್ ॥ ೧೬೦ ॥
ಉತ್ಪತ್ಸ್ಯತಿ ಕುಲೇ ರಾಜಾ ತ್ವದೀಯೇ ಕುರುನಂದನ ।
ಸಾರ್ಪಂ ಕಾಲೇವರಂ ದೃಷ್ಟ್ವಾ ಪ್ರಶ್ನೈಸ್ತ್ವಾಮುದ್ಧರಿಷ್ಯತಿ ॥ ೧೬೧ ॥

---

೧೫೬. ಆ ಧನಿಕನನ್ನು ಮೊಮ್ಮಕ್ಕಳು ಮೊದಲಾದವರು "ನೀನು ನನಗೆ ಬಂಧುವಾಗಿದ್ದೀಯೆ. ನಿನ್ನನ್ನು ಬಿಟ್ಟರೆ ನಾನು ಬದುಕಲಾರೆನು. ನಿನ್ನನ್ನು ನೋಡಿದರೆ ನನ್ನ ದೃಷ್ಟಿಯು ಪ್ರಸನ್ನವಾಗುವುದು. ನನ್ನ ಮನಸ್ಸು ಬಹಳ ಆನಂದ ಗೊಳ್ಳುವುದು. ನಿಜವಾಗಿ ಹೇಳುತ್ತೇನೆ".

೧೫೭. ನಿನ್ನದೃಷ್ಟಿಗೆ ವಿಷಯನಾದವನನ್ನು ಕುರಿತು ಜನರನ್ನು ಆನಂದ ಗೊಳಿಸುವ ಸಜ್ಜನರು ಇಂತಹ ಮಾತನ್ನಾಡುವರು.

೧೫೮–೧೫೯. ಶಚಿಯೆ! ನುಹುಷನು ಸ್ವರ್ಗವನ್ನು ಹೊಂದಿ ನಿನ್ನನ್ನು ಬೇಡುವನು. ಪಾಪಿಯಾದ ಅವನು ನಿನ್ನನ್ನು ಕಾಣದೆ ಅಗಸ್ತ್ಯನ ಮಾತಿನಿಂದ ಕೂಡಲೇ ಸರ್ಪನಾಗಿ ಆ ಮುನಿಯನ್ನು ಕುರಿತು "ಮುನಿಯೆ! ನಾನು ಅಹಂಕಾರ ದಿಂದ ಹಾಳಾದೆನು. ನನ್ನನ್ನು ರಕ್ಷಿಸು" ಎಂದು ಬೇಡಿಕೊಳ್ಳುವನು.

೧೬೦. ನಹುಷನ ಆ ಮಾತಿನಿಂದ ಪೂಜ್ಯನಾದ ಅಗಸ್ತ್ಯನು ದಯೆಗೊಂಡು ಹೀಗೆನ್ನುವನು.

೧೬೧. ನಿನ್ನ ವಂಶದಲ್ಲಿ ಒಬ್ಬ ರಾಜನು ಜನಿಸುವನು. ಅವನು ನಿನ್ನ ಸರ್ಪ ಶರೀರವನ್ನು ಕಂಡು ಪ್ರಶ್ನೆಮಾಡಿ ನಿನ್ನನ್ನು ಉದ್ಧಾರಮಾಡುವನು.

ಸೋಽಪ್ಯಜಗರತಾಂ ತ್ಯಕ್ತ್ವಾ ಪುನಃ ಸ್ವರ್ಗಂ ಗಮಿಷ್ಯತಿ ।
ಅಶ್ವಮೇಧೇ ಕೃತೇ ಭರ್ತ್ರಾ ಸಹ ಯಾಸಿ ಪುನರ್ದಿವಿ ।
ಪ್ರಾಪ್ಸ್ಯಸೇ ವರದಾನೇನ ಮಮಾನೇನ ಸುಲೋಚನೇ ॥ ೧೬೨ ॥
ದೇವಪತ್ನ್ಯಸ್ತದಾ ಸರ್ವಾಸ್ತುಷ್ಟಯಾ ಪರಿಭಾಷಿತಾಃ ।
ಅಪತ್ಯೈರಪಿ ಹೀನಾಸ್ಸ್ಯುರ್ನೈವ ದುಃಖಂ ಭವಿಷ್ಯತಿ ॥ ೧೬೩ ॥
ಇತಿ ದತ್ವಾ ವರಾನ್ದೇವ ಗಾಯತ್ರೀ ಲೋಕಸಂಮತಾ ।
ಜಗಾಮಾದರ್ಶನಂ ದೇವಿ ಸರ್ವೇಷಾಂ ಪಶ್ಯತಾಂ ತದಾ ॥ ೧೬೪ ॥
ಸಾವಿತ್ರೀ ತು ತದಾ ದೇವೀ ಪ್ರಭಾಸಂ ಕ್ಷೇತ್ರಮಾಗತಾ ।
ಕೃತಸ್ಮರಸ್ಯ ಶೃಂಗೇ ತು ಶ್ರೀ ಸೋಮೇಶ್ವರಪೂರ್ವತಃ ॥ ೧೬೫ ॥
ಮನ್ವಂತರೆ ಚಾಕ್ಷುಷೇ ಚ ದ್ವಿತೀಯೇ ದ್ವಾಪರೇ ಶುಭೇ ।
ತತ್ರ ಯಜ್ಞಃ ಸಮಾರಬ್ಧೋ ಬ್ರಹ್ಮಣಾ ಲೋಕಕಾರಿಣಾ ॥ ೧೬೬ ॥
ಯಜ್ಞೇ ಯಾತಾ ಮಹಾತ್ಮಾನೋ ದೇವಾ ಸಪ್ತರ್ಷಯೋ ವರಾಃ ।
ಸ್ವಾಯಂಭುವೇ ತು ಯೇ ಶಸ್ತಾಃ ಶಪ್ತಾಸ್ತೇಚಾಭವನ್ಪುರಾ ॥ ೧೬೭ ॥
ತಸ್ಮಾತ್ಕಾಲಾತ್ಸಮಾರಭ್ಯ ಪ್ರಭಾಸಂ ಕ್ಷೇತ್ರಮಾಸ್ಥಿತಾಃ ॥ ೧೬೮ ॥

---

೧೬೨. ನೀನು ಅಜಗರದೇಹವನ್ನು ತ್ಯಜಿಸಿ ಮರಳಿ ಸ್ವರ್ಗವನ್ನು ಸೇರುವೆ" ಎನ್ನುವನು. ಶಚಿಯೆ ! ನಿನ್ನ ಪತಿಯು ಅಶ್ವಮೇಧಯಾಗಗೈಯಲು ನೀನು ನನ್ನ ಈ ವರದಿಂದ ತಿರುಗಿ ಪತಿಯೊಡನೆ ಸ್ವರ್ಗವನ್ನು ಸೇರುವೆ.

೧೬೩. ಸಂತುಷ್ಟಳಾದ ಆ ಗಾಯತ್ರಿಯು ಸಮಸ್ತ ದೇವಪತ್ನಿಯರನ್ನು ಕುರಿತು " ನೀವು ಮಕ್ಕಳಿಲ್ಲದಿದ್ದರೂ ಸುಖಗೊಳ್ಳುವಿರಿ " ಎಂದಳು.

೧೬೪. ಲೋಕಪೂಜ್ಯಳಾದ ಗಾಯತ್ರಿಯು ಹೀಗೆ ವರವನ್ನಿತ್ತು ಎಲ್ಲರೂ ನೋಡುತ್ತಿರುವಾಗಲೆ ಅದೃಶ್ಯಳಾದಳು.

೧೬೫–೧೬೬. ಸಾವಿತ್ರಿಯು ಪ್ರಭಾಸಕ್ಷೇತ್ರಕ್ಕೆ ಬಂದಳು. ಲೋಕಗಳನ್ನು ಸೃಷ್ಟಿಸುವ ಬ್ರಹ್ಮನು ಎರಡನೆಯ ದ್ವಾಪರಯುಗದ ಚಾಕ್ಷುಷಮನ್ವಂತರದಲ್ಲಿ ಶ್ರೀ ಸೋಮೇಶ್ವರನ ಪೂರ್ವದಲ್ಲಿರುವ ಕೃತಸ್ಮರ ಪರ್ವತದ ಶಿಖರದಲ್ಲಿ ಯಜ್ಞವನ್ನಾರಂಭಿಸಿದನು.

೧೬೭–೧೬೮. ಆ ಯಜ್ಞಕ್ಕೆ ಸ್ವಾಯಂಭುವ ಮನ್ವಂತರದಲ್ಲಿ ಸಾವಿತ್ರಿಯಿಂದ ಶಾಪವನ್ನು ಹೊಂದಿ ಪ್ರಭಾಸಕ್ಷೇತ್ರವನ್ನಾಶ್ರಯಿಸಿದ ಉತ್ತಮರು, ಮಹಾತ್ಮರೂ ಆದ ದೇವತೆಗಳೂ, ಸಪ್ತರ್ಷಿಗಳೂ ಬಂದರು.

ಸಾವಿತ್ರೀ ಲೋಕಜನನೀ ಲೋಕಾನುಗ್ರಹಕಾರಿಣೀ ।
ಯಸ್ತ್ವಾಂ ಪೂಜಯತೇ ಭಕ್ತ್ಯಾ ಪಕ್ಷಮೇಕಂ ನಿರಂತರಂ ।
ಬ್ರಹ್ಮಪೂಜಾವಿಧಾನೇನ ತಸ್ಯ ಪುತ್ರೋ ಧ್ರುವೋ ಭವೇತ್ ॥ ೧೬೯ ॥
ಪಾಂಡುಕೂಪೇ ನರಃ ಸ್ನಾತ್ವಾ ದೃಷ್ಟ್ವಾ ಲಿಂಗಾನಿ ಪಂಚ ವೈ ।
ಪಾಂಡವೈಃ ಸ್ಥಾಪಿತಾನೀಹ ದೃಷ್ಟ್ವಾ ಯಜ್ಞಫಲಂ ಲಭೇತ್ ॥ ೧೭೦ ॥
ಜ್ಯೇಷ್ಠಸ್ಯ ಪೂರ್ಣಿಮಾಯಾಂ ತು ಸಾವಿತ್ರೀ ಸ್ಥಲಸಂನಿಧೌ ।
ಪಠೇದ್ಯೋ ಬ್ರಹ್ಮಸೂಕ್ತಾನಿ ಮುಚ್ಯತೇ ಸರ್ವಪಾತಕೈಃ ॥ ೧೭೧ ॥
ಏತತ್ತೇ ಸರ್ವಮಾಖ್ಯಾತಂ ವಿಖ್ಯಾತಂ ಕಲ್ಮಷಾಪಹಂ ।
ಯಶ್ಚೇದಂ ಶೃಣುಯಾದ್ಭಕ್ತ್ಯಾ ಸಗಚ್ಛೇತ್ಪರಮಂ ಪದಂ ॥ ೧೭೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾವಿತ್ರೀಮಾಹಾತ್ಮ್ಯವರ್ಣನಂ ನಾಮ
॥ ಪಂಚಷಷ್ಟ್ಯುತ್ತರಶತತಮೋಽಧ್ಯಾಯಃ ॥

---

೧೬೯. ಲೋಕಮಾತೆಯೂ, ಲೋಕವನ್ನು ಅನುಗ್ರಹಿಸುವವಳೂ ಆದ ಸಾವಿತ್ರಿಯನ್ನು ಭಕ್ತಿಯಿಂದ ಒಂದು ಪಕ್ಷಕಾಲ ಎಡೆಬಿಡದೆ ಬ್ರಹ್ಮನನ್ನು ಪೂಜಿಸುವ ಕ್ರಮದಿಂದ ಪೂಜಿಸಿದವನಿಗೆ ನಿಶ್ಚಯವಾಗಿಯೂ ಪುತ್ರಲಾಭವಾಗುವುದು.

೧೭೦. ಮನುಷ್ಯನು ಪಾಂಡುಕೂಪದಲ್ಲಿ ಮಿಂದು ಪಾಂಡವರು ಸ್ಥಾಪಿಸಿರುವ ಪಂಚಲಿಂಗಗಳನ್ನು ದರ್ಶನಗೈದರೆ ಯಜ್ಞಫಲವನ್ನು ಪಡೆಯುವನು.

೧೭೧. ಜ್ಯೇಷ್ಠ ಶುದ್ಧ ಹುಣ್ಣಿಮೆಯದಿನ ಸಾವಿತ್ರೀಸ್ಥಳದ ಹತ್ತಿರ ಬ್ರಹ್ಮಸೂಕ್ತವನ್ನು ಪಠಿಸಿದವನು ಸಕಲ ಪಾಪಮುಕ್ತನಾಗುವನು.

೧೭೨. ನಿನಗೆ ಸರ್ವತ್ರಪ್ರಸಿದ್ಧವೂ, ಪಾಪವನ್ನು ನೀಗಿಸುವುದೂ ಆದ ಈ ಸಾವಿತ್ರೀ ಚರಿತೆಯನ್ನು ಹೇಳಿರುವೆನು. ಇದನ್ನು ಭಕ್ತಿಯಿಂದ ಕೇಳಿದವನು ಉತ್ತಮ ಸ್ಥಾನವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಾವಿತ್ರೀಮಾಹಾತ್ಮ್ಯವರ್ಣನವೆಂಬ
ನೂರಅರುವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ಸಪ್ತತ್ಯುತ್ತರಶತತಮೋಽಧ್ಯಾಯಃ

ಸಾವಿತ್ರೀವ್ರತವಿಧಿಪೂಜನಪ್ರಕಾರೋದ್ಯಾಪನವಿಧಿಕಥನಂ

ದೇವ್ಯುವಾಚ :—

ಪ್ರಭಾಸೇ ಸಂಸ್ಥಿತಾ ಯಾ ತು ಸಾವಿತ್ರೀ ಬ್ರಹ್ಮಣಃ ಪ್ರಿಯಾ ।
ತಸ್ಯಾಶ್ಚರಿತ್ರಂ ಮೇ ಬ್ರೂಹಿ ದೇವದೇವ ಜಗತ್ಪತೇ ॥ ೧ ॥
ವ್ರತಮಾಹಾತ್ಮ್ಯಸಂಯುಕ್ತಂ ಇತಿಹಾಸಸಮನ್ವಿತಂ ।
ಪಾತಿವ್ರತ್ಯಕರಂ ಸ್ತ್ರೀಣಾಂ ಮಹಾಭಾಗ್ಯಂ ಮಹೋದಯಂ ॥ ೨ ॥

ಈಶ್ವರ ಉವಾಚ :—

ಕಥಯಾಮಿ ಮಹಾದೇವಿ ಸಾವಿತ್ರ್ಯಾಶ್ಚರಿತಂ ಮಹತ್ ।
ಪ್ರಭಾಸಕ್ಷೇತ್ರಸಂಸ್ಥಾಯಾಃ ಸ್ಥಲಸ್ಥಾನೇ ಮಹೇಶ್ವರಿ ।
ಯಥಾ ಚೀರ್ಣಂ ವ್ರತಕರಂ ಸಾವಿತ್ರ್ಯಾ ರಾಜಕನ್ಯಯಾ ॥ ೩ ॥
ಆಸೀನ್ಮದ್ರೇಷು ಧರ್ಮಾತ್ಮಾ ಸರ್ವಭೂತಹಿತೇ ರತಃ ।
ಪಾರ್ಥಿವೋಽಶ್ವಪತಿರ್ನಾಮ ಪೌರಜಾನಪದಪ್ರಿಯಃ ॥ ೪ ॥

ಕನ್ನಡದ ಅನುವಾದ

ಸಾವಿತ್ರೀವ್ರತವಿಧಿಪೂಜನಪ್ರಕಾರೋದ್ಯಾಪನವಿಧಿಕಥನ

೧-೨. ದೇವಿಯು ಹೇಳುತ್ತಾಳೆ:—ಜಗದೊಡೆಯನೆ! ಬ್ರಹ್ಮನ ರಾಣಿಯಾದ ಸಾವಿತ್ರಿಯ ವ್ರತ ಮಾಹಾತ್ಮ್ಯದಿಂದಲೂ, ಇತಿಹಾಸದಿಂದಲೂ, ಕೂಡಿರುವುದೂ; ಹೆಂಗಸರಿಗೆ ಪಾತಿವ್ರತ್ಯವನ್ನುಂಟುಮಾಡುವುದೂ, ಅತಿಶಯ ಭಾಗ್ಯಕರವೂ ಆದ ಚರಿತೆಯನ್ನು ನನಗೆ ಹೇಳು.

೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಪ್ರಭಾಸಕ್ಷೇತ್ರದಲ್ಲಿರುವ ಮಹಾ ಚರಿತೆಯನ್ನೂ, ರಾಜಪುತ್ರಿಯಾದ ಸಾವಿತ್ರಿಯು ವ್ರತವನ್ನು ಹೇಗೆ ಆಚರಿಸಿದ ಳೆಂಬುದನ್ನೂ ನಿನಗೆ ಹೇಳುತ್ತೇನೆ.

೪. ಮದ್ರದೇಶದಲ್ಲಿ ಧರ್ಮಾತ್ಮನೂ, ಸಕಲ ಪ್ರಾಣಿಗಳ ಹಿತದಲ್ಲಿ ನಿರತನೂ, ಪಟ್ಟಣಿಗರಿಗೂ, ದೇಶದವರಿಗೂ ಪ್ರಿಯನೂ ಆದ ಅಶ್ವಪತಿಯೆಂಬ ದೊರೆಯಿದ್ದನು.

ಕ್ಷಮಾವಾನನಪತ್ಯಶ್ಚ ಸತ್ಯವಾದೀ ಜಿತೇಂದ್ರಿಯಃ ।
ಪ್ರಭಾಸಕ್ಷೇತ್ರಯಾತ್ರಾಯಾಮಾಜಗಾಮ ಸ ಭೂಪತಿಃ ।
ಯಾತ್ರಾಂ ಕುರ್ವನ್ ವಿಧಾನೇನ ಸಾವಿತ್ರೀ ಸ್ಥಲಮಾಗತಃ ॥ ೫ ॥
ಸ ಸಭಾರ್ಯೋ ವ್ರತಮಿದಂ ತತ್ರ ಚಕ್ರೇ ನೃಪಃ ಸ್ವಯಂ ।
ಸಾವಿತ್ರೀತಿ ಪ್ರಸಿದ್ಧಂ ಯತ್ಸರ್ವಕಾಮಫಲಪ್ರದಂ ॥ ೬ ॥
ತಸ್ಯ ತುಷ್ಟಾಽಭವದ್ದೇವೀ ಸಾವಿತ್ರೀ ಬ್ರಹ್ಮಣಃ ಪ್ರಿಯಾ
ಭೂರ್ಭುವಃಸ್ವರಿತೀತ್ಯೇಷಾ ಸಾಕ್ಷಾನ್ಮೂರ್ತಿಮತೀ ಸ್ಥಿತಾ ॥ ೭ ॥
ಕಮಂಡಲುಧರಾ ದೇವಿ ಜಗಾಮಾದರ್ಶನಂ ಪುನಃ ।
ಕಾಲೇನ ಬಹುನಾ ಜಾತಾ ದುಹಿತಾ ದೇವರೂಪಿಣೀ ॥ ೮ ॥
ಸಾವಿತ್ರ್ಯಾ ಪ್ರೀತಯಾ ದತ್ತಾ ಸಾವಿತ್ರ್ಯಾಃ ಪೂಜಯಾ ತಥಾ ।
ಸಾವಿತ್ರೀತ್ಯೇವ ನಾಮಾಸ್ಯಾಶ್ಚಕ್ರೇ ವಿಪ್ರಾಜ್ಞಯಾ ನೃಪಃ ॥ ೯ ॥
ಸಾ ವಿಗ್ರಹವತೀವ ಶ್ರೀಃ ಪ್ರಾವರ್ಧತ ನೃಪಾತ್ಮಜಾ ।
ಸಾವಿತ್ರೀ ಸುಕುಮಾರಾಂಗೀ ಯೌವನಸ್ಥಾ ಬಭೂವ ಹ ॥ ೧೦ ॥
ಯಾ ಸುಮಧ್ಯಾ ಪೃಥುಶ್ರೋಣೀ ಪ್ರತಿಮಾ ಕಾಂಚನೀ ತಥಾ ।
ಪ್ರಾಪ್ತೇಯಂ ದೇವಕನ್ಯಾ ವಾ ದೃಷ್ಟ್ವಾ ತಾಂ ಮೇನಿರೇ ಜನಾಃ ॥ ೧೧ ॥

---

೫. ಕ್ಷಮೆಯುಳ್ಳವನೂ, ಮಕ್ಕಳಿಲ್ಲದವನೂ, ಸತ್ಯವನ್ನೇ ನುಡಿಯುವವನೂ, ಜಿತೇಂದ್ರಿಯನೂ, ಆದ ಆ ರಾಜನು ವಿಧಿಯಂತೆ ಯಾತ್ರೆಮಾಡುತ್ತ ಪ್ರಭಾಸ ಕ್ಷೇತ್ರದಲ್ಲಿರುವ ಸಾವಿತ್ರೀಸ್ಥಳಕ್ಕೆ ಬಂದನು.

೬. ಅಲ್ಲಿ ಅವನು ಪತ್ನಿಯೊಡನೆ ಸಕಲೇಷ್ಟಾರ್ಥಗಳನ್ನೀಯುವ ಸಾವಿತ್ರೀವ್ರತ ವನ್ನಾಚರಿಸಿದನು.

೭. ಅದರಿಂದ ಬ್ರಹ್ಮನ ರಾಣಿ ಸಾವಿತ್ರಿಯು ಸಂತುಷ್ಟಳಾಗಿ ಪ್ರತ್ಯಕ್ಷಳಾದಳು.

೮. ಕಮಂಡಲುವನ್ನು ಧರಿಸಿದ ಅವಳು ಮರಳಿ ಅದೃಶ್ಯಳಾದಳು. ಬಹು ಕಾಲದ ಮೇಲೆ ಆ ಅಶ್ವಪತಿ ರಾಜನಿಗೆ ಮಗಳೊಬ್ಬಳು ಜನಿಸಿದಳು.

೯. ರಾಜನು ಸಾವಿತ್ರಿಯ ಪೂಜೆಯಿಂದ ಸಾವಿತ್ರಿಯು ಕೊಟ್ಟಿರುವ ಆ ಕನ್ಯೆಗೆ ಬ್ರಾಹ್ಮಣರ ಅಪ್ಪಣೆಯಂತೆ ಸಾವಿತ್ರಿಯೆಂದು ಹೆಸರಿಟ್ಟನು.

೧೦. ಆ ನೃಪಕನ್ಯೆಯಾದ ಸಾವಿತ್ರಿಯು ದೇಹವನ್ನು ಧರಿಸಿದ ಲಕ್ಷ್ಮಿಯಂತೆ ಕೋಮಲಾಂಗಿಯಾಗಿ ಬೆಳೆಯುತ್ತ ಯೌವನವನ್ನು ಹೊಂದಿದಳು.

೧೧. ಜನರು ಮನೋಹರವಾದ ನಡುವುಳ್ಳವಳೂ, ವಿಶಾಲನಿತಂಬವುಳ್ಳವಳೂ, ಆಗಿ ಚಿನ್ನದ ಪ್ರತಿಮೆಯಂತಿರುವ ಆ ಸಾವಿತ್ರಿಯನ್ನು ಕಂಡು ದೇವ ಕನ್ಯೆಯೇ ಭೂಮಿಗೆ ಬಂದಿರುವಳೋ? ಎಂದು ತಿಳಿಸಿದರು.

ಸಾ ತು ಪದ್ಮಾ ವಿಶಾಲಾಕ್ಷೀ ಪ್ರಜ್ವಲಂತೀವ ತೇಜಸಾ ।
ಚಚಾರ ಸಾ ಚ ಸಾವಿತ್ರೀ ವ್ರತಂ ಯದ್ಭೃಗುಣೋದಿತಂ ॥ ೧೨ ॥
ಅಥೋಪೋಷ್ಯ ಶಿರಃಸ್ನಾತಾ ದೇವತಾಮಭಿಗಮ್ಯ ಚ ।
ಹುತ್ವಾಗ್ನಿಂ ವಿಧಿವದ್ವಿಪ್ರಾನ್ವಾಚಯೇದ್ವರವರ್ಣಿನೀ ॥ ೧೩ ॥
ತೇಭ್ಯಃ ಸುಮನಸಃ ಶೇಷಾಂ ಪ್ರತಿಗೃಹ್ಯ ನೃಪಾತ್ಮಜಾ ।
ಸಖೀಪರಿವೃತಾಽಭ್ಯೇತ್ಯ ದೇವೀ ಶ್ರೀವತ್ಸರೂಪಿಣೀ ॥ ೧೪ ॥
ಸಾಽಭಿವಾದ್ಯ ಪಿತುಃ ಪಾದೌ ಶೇಷಾಂ ಪೂರ್ವಂ ನಿವೇದ್ಯ ಚ ।
ಕೃತಾಂಜಲಿರ್ವರಾರೋಹಾ ನೃಪತೇಃ ಪಾರ್ಶ್ವತಃ ಸ್ಥಿತಾ ॥ ೧೫ ॥
ತಾಂ ದೃಷ್ಟ್ವಾ ಯೌವನಪ್ರಾಪ್ತಾಂ ಸ್ವಾಂ ಸುತಾಂ ದೇವರೂಪಿಣೀಂ ।
ಉವಾಚ ರಾಜಾ ಸಂಮನ್ತ್ರ್ಯ ಪುತ್ರ್ಯರ್ಥಂ ಸಹಮಂತ್ರಿಭಿಃ ॥ ೧೬ ॥
ಪುತ್ರಿ ಪ್ರದಾನಕಾಲಸ್ತೇ ನ ಹಿಕಶ್ಚಿದತ್ತ್ವೃಣೋತಿ ಮಾಮ್ ।
ವಿಚಾರಯನ್ನ ಪಶ್ಯಾಮಿ ವರಂ ತುಲ್ಯಮಿಹಾತ್ಮನಃ ॥ ೧೭ ॥
ದೇವಾದೀನಾಂ ಯಥಾ ವಾಚ್ಯೋ ನ ಭವೇಯಂ ತಥಾ ಕುರು ।
ಪಠ್ಯಮಾನಂ ಮಯಾ ಪುತ್ರಿ ಧರ್ಮಶಾಸ್ತ್ರೇಷು ಚ ಶ್ರುತಮ್ ॥ ೧೮ ॥

---

೧೨. ವಿಶಾಲ ನಯನಳೂ, ತೇಜಸ್ಸಿನಿಂದ ಜ್ವಲಿಸುವ ಲಕ್ಷ್ಮಿಯಂತಿರುವವಳೂ, ಆದ ಆ ಸಾವಿತ್ರಿಯು ಭೃಗುಮುನಿಯು ಹೇಳಿದ ವ್ರತವನ್ನಾಚರಿಸಿದಳು.

೧೩. ಬಳಿಕ ಅವಳು ಉಪವಾಸ, ಶಿರಃಸ್ನಾನಮಾಡಿ ದೇವತೆಗಳನ್ನು ವಂದಿಸಿ ಅಗ್ನಿಯಲ್ಲಿ ಹೋಮಮಾಡಿ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿದಳು.

೧೪–೧೫. ಬಳಿಕ ಲಕ್ಷ್ಮಿಯಂತೆ ಸುಂದರಿಯಾದ ಆ ಸಾವಿತ್ರಿಯು ಆ ಬ್ರಾಹ್ಮಣರಿಂದ ಪುಷ್ಪಪ್ರಸಾದವನ್ನು ಸ್ವೀಕರಿಸಿ ಸಖಿಯರೊಡನೆ ತಂದೆಯೆಡೆಗೆ ಬಂದು ಅವನ ಪಾದಗಳಿಗೆರಗಿ ಬ್ರಾಹ್ಮಣರಿತ್ತ ಆ ಪುಷ್ಪಪ್ರಸಾದವನ್ನು ಅರ್ಪಿಸಿ ಕೈಮುಗಿದು ಕೊಂಡು ಪಾರ್ಶ್ವದಲ್ಲಿ ನಿಂತಳು.

೧೬. ಅಶ್ವಪತಿ ರಾಜನು ಯೌವನವನ್ನು ಹೊಂದಿ ದೇವತೆಯಂತಿರುವ ತನ್ನ ಮಗಳನ್ನೀಕ್ಷಿಸಿ ಅವಳಿಗಾಗಿ ಮಂತ್ರಿಗಳೊಡನೆ ಆಲೋಚಿಸಿ ಇಂತೆಂದನು.

೧೭. "ಮಗು! ನಿನಗೀಗ ವಿವಾಹ ಸಮಯವು ಒದಗಿದೆ. ಆದರೂ ನನ್ನನ್ನು ಯಾಚಿಸುವುದಿಲ್ಲ. ಆಲೋಚಿಸಿದರೆ ನಿನಗೆ ಸರಿಯಾದ ವರನು ಕಾಣುವುದಿಲ್ಲ.

೧೮. ನಾನು ದೇವತೆಗಳೇ ಮೊದಲಾದವರಿಗೆ ನಿಂದ್ಯನಾಗದಂತೆ ಮಾಡು. ಮಗು! ನಾನು ಧರ್ಮಶಾಸ್ತ್ರವನ್ನು ಓದುವಾಗ ಇದನ್ನು ಕೇಳಿರುವೆನು.

ಪಿತೃಗೇಹೇ ತು ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಬ್ರಹ್ಮಹತ್ಯಾ ಪಿತುಸ್ತಸ್ಯ ಸಾ ಕನ್ಯಾ ವೃಷಲೀ ಸ್ಮೃತಾ ॥ ೧೯ ॥
ಅತೋಽರ್ಥಂ ಪ್ರೇಷಯಾಮಿ ತ್ವಾಂ ಕುರು ಪುತ್ರಿ ಸ್ವಯಂವರಂ ।
ವೃದ್ಧೈರಮಾತ್ಯೈಃ ಸಹಿತಾ ಶೀಘ್ರಂ ಗಚ್ಛಾವಧಾರಯ ॥ ೨೦ ॥
ಏವಮಸ್ತ್ವಿತಿ ಸಾವಿತ್ರೀ ಪ್ರೋಚ್ಯ ತಸ್ಮಾದ್ವಿನಿರ್ಯಯೌ ।
ತಪೋವನಾನಿ ರಮ್ಯಾಣಿ ರಾಜರ್ಷೀಣಾಂ ಜಗಾಮ ಸಾ ॥ ೨೧ ॥
ಮಾನ್ಯಾನಾಂ ತತ್ರ ವೃದ್ಧಾನಾಂ ಕೃತ್ವಾ ಪಾದಾಭಿವಂದನಂ ।
ತತೋಽಭಿಗಮ್ಯ ತೀರ್ಥಾನಿ ಸರ್ವಾಣ್ಯೇವಾಶ್ರಮಾಣಿ ಚ ॥ ೨೨ ॥
ಆಜಗಾಮ ಪುನರ್ವೇಶ್ಮ ಸಾವಿತ್ರೀ ಸಹ ಮಂತ್ರಿಭಿಃ ।
ತತ್ರಾಪಶ್ಯತ ದೇವರ್ಷಿಂ ನಾರದಂ ಪುರತಃ ಶುಚಿಂ ॥ ೨೩ ॥
ಆಸೀನಮಾಸನೇ ವಿಪ್ರಂ ಪ್ರಣಮ್ಯ ಸ್ಮಿತಭಾಷಣೀ ।
ಕಥಯಾಮಾಸ ತತ್ಕಾರ್ಯಂ ಯೇನಾರಣ್ಯಂ ಗತಾ ಚ ಸಾ ॥ ೨೪ ॥

ಸಾವಿತ್ರ್ಯುವಾಚ :—

ಆಸೀಚ್ಛಾಲ್ವೇಷು ಧರ್ಮಾತ್ಮಾ ಕ್ಷತ್ರಿಯಃ ಪೃಥಿವೀಪತಿಃ ।
ದ್ಯುಮತ್ಸೇನ ಇತಿ ಖ್ಯಾತೋ ದೈವಾದಂಧೋ ಬಭೂವ ಸಃ ॥ ೨೫ ॥

---

೧೯. ಕನ್ಯೆಯು ವಿವಾಹವಾಗದೆ ತಂದೆಯ ಮನೆಯಲ್ಲಿ ರಜಸ್ವಲೆಯಾದರೆ ತಂದೆಗೆ ಬ್ರಹ್ಮಹತ್ಯೆಯು ಬರುವುದು. ಆ ಕನ್ಯೆಯು ಶೂದ್ರಸ್ತ್ರೀಯಾಗುವಳು.

೨೦. ಮಗು! ಅದಕ್ಕಾಗಿ ನಿನ್ನನ್ನು ಕಳುಹಿಸುತ್ತೇನೆ. ನೀನೇ ಪತಿಯನ್ನು ವರಿಸು. ವೃದ್ಧಮಂತ್ರಿಗಳೊಡನೆ ಶೀಘ್ರವಾಗಿ ಹೊರಡು. ಈ ವಿಷಯವನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊ.

೨೧. ಸಾವಿತ್ರಿಯು ಹಾಗೆಯೇ ಆಗಲೆಂದು ಅಲ್ಲಿಂದ ಹೊರಟು ರಾಜರ್ಷಿಗಳ ಮನೋಹರವಾದ ತಪೋವನಗಳಿಗೆ ತೆರಳಿದಳು.

೨೨–೨೩. ಅಲ್ಲಿ ಅವಳು ಪೂಜ್ಯರಾದ ಮುದುಕರ ಅಡಿಗಳಿಗೆರಗಿ ಅಲ್ಲಿಂದ ಸಕಲ ತೀರ್ಥಗಳಿಗೂ, ಆಶ್ರಮಗಳಿಗೂ ಹೋಗಿ ಮರಳಿ ಮಂತ್ರಿಗಳೊಡನೆ ತನ್ನ ಮನೆಗೆ ಬಂದು ಅಲ್ಲಿ ಮುಂದಿರುವ ಶುದ್ಧನಾದ ನಾರದಮುನಿಯನ್ನು ಕಂಡಳು.

೨೪. ಮುಗುಳ್ನಗೆಯಿಂದ ಮಾತಾಡುವ ಆ ಸಾವಿತ್ರಿಯು ಆಸನದಲ್ಲಿ ಕುಳಿತಿರುವ ನಾರದನನ್ನು ವಂದಿಸಿ ಅವನಿಗೆ ತಾನು ಕಾಡಿಗೆ ಹೋದ ಕೆಲಸವನ್ನು ಹೇಳಿದಳು.

೨೫. ಸಾವಿತ್ರಿಯು ಹೇಳುತ್ತಾಳೆ :—ಶಾಲ್ವದೇಶದಲ್ಲಿ ಧರ್ಮಾತ್ಮನೂ, ಅದೃಷ್ಟವಶದಿಂದ ಕುರುಡನೂ ಆದ ದ್ಯುಮತ್ಸೇನನೆಂಬ ಕ್ಷತ್ರಿಯ ರಾಜನಿದ್ದನು.

ಆರ್ಯಸ್ಯ ಬಾಲಪುತ್ರಸ್ಯ ದ್ಯುಮತ್ಸೇನಸ್ಯ ರುಕ್ಮಿಣಾ ।
ಸಾಮಂತೇನ ಹೃತಂ ರಾಜ್ಯಂ ಛಿದ್ರೇಽಸ್ಮಿನ್ಪೂರ್ವವೈರಿಣಾ ॥ ೨೬ ॥
ಸ ಬಾಲವತ್ಸಯಾ ಸಾರ್ಧಂ ಭಾರ್ಯಯಾ ಪ್ರಸ್ಥಿತೋ ವನಂ ॥ ೨೭ ॥
ಸ ತಸ್ಯ ಚ ವನೇ ವೃದ್ಧಃ ಪುತ್ರಃ ಪರಮಧಾರ್ಮಿಕಃ ।
ಸತ್ಯವಾಗನುರೂಪೋ ಮೇ ಭರ್ತೇತಿ ಮನಸೇಪ್ಸಿತಃ ॥ ೨೮ ॥

ನಾರದ ಉವಾಚ :—

ಅಹೋ ಬತ ಮಹತ್ಕಷ್ಟಂ ಸಾವಿತ್ರ್ಯಾ ನೃಪತೇ ಕೃತಂ ।
ಬಾಲಸ್ವಭಾವಾದನಯಾ ಗುಣವಾನ್ಸತ್ಯವಾಗ್ವೃತಃ ॥ ೨೯ ॥
ಸತ್ಯಂ ವದತ್ಯಸ್ಯ ಪಿತಾ ಸತ್ಯಂ ಮಾತಾ ಪ್ರಭಾಷತೇ ।
ಸತ್ಯಂ ವದೇತಿ ಮುನಿಭಿಃ ಸತ್ಯವನ್ನಾಮ ವೈ ಕೃತಂ ॥ ೩೦ ॥
ನಿತ್ಯಂ ಚಾಶ್ವಾಃ ಪ್ರಿಯಾಸ್ತಸ್ಯ ಕರೋತ್ಯಶ್ವಾಂಶ್ಚ ಮೃಣ್ಮಯಾನ್ ।
ಚಿತ್ರೇಽಪಿ ಚ ಲಿಖತ್ಯಶ್ವಾಂಶ್ಚಿತ್ರಾಶ್ವ ಇತಿ ಚೋಚ್ಯತೇ ॥ ೩೧ ॥
ಸತ್ಯವಾನ್ರಂತಿದೇವಸ್ಯ ಶಿಷ್ಯೋ ದಾನಗುಣೈಃ ಸಮಃ ।
ಬ್ರಹ್ಮಣ್ಯಃ ಸತ್ಯವಾದೀ ಚ ಶಿಬಿರೌಶೀನರೋ ಯಥಾ ॥ ೩೨ ॥

---

೨೬. ಪೂಜ್ಯನೂ, ಚಿಕ್ಕಮಗನುಳ್ಳವನೂ ಆದ ಆ ದ್ಯುಮತ್ಸೇನನ ರಾಜ್ಯವನ್ನು ಸಾಮಂತ ರಾಜನಾದ ಪೂರ್ವವೈರಿ ರುಕ್ಮಿಯು ಸಮಯವನ್ನರಿತು ಅಪಹರಿಸಿದನು.

೨೭. ಅದರಿಂದ ದ್ಯುಮತ್ಸೇನನು ಎಳೆಮಗನುಳ್ಳ ಪತ್ನಿಯೊಡನೆ ತೆರಳಿದನು.

೨೮. ಕಾಡಿನಲ್ಲಿ ಬೆಳೆದವನೂ, ಅತ್ಯಂತ ಧಾರ್ಮಿಕನೂ, ಸತ್ಯವಂತನೂ ಆದ ಆ ದ್ಯುಮತ್ಸೇನನ ಮಗನು ನನಗೆ ಸರಿಯಾದ ಪತಿಯೆಂದು ಆಲೋಚಿಸಿರುವೆನು.

೨೯. ನಾರದನು ಹೇಳುತ್ತಾನೆ :—ಮಹಾರಾಜ! ಈ ಸಾವಿತ್ರಿಯು ಬಾಲ ಸ್ವಭಾವದಿಂದ ಗುಣಶಾಲಿಯಾದ ಸತ್ಯವಂತನನ್ನು ವರಿಸಿ ಮಹಾಕಷ್ಟವನ್ನುಂಟುಮಾಡಿ ಕೊಂಡಳು.

೩೦. ಇವನ ತಂದೆಯೂ, ತಾಯಿಯೂ ಸತ್ಯವನ್ನು ನುಡಿಯುವರು. ನೀನೂ ಸತ್ಯವನ್ನು ಹೇಳು ಎಂದು ಮುನಿಗಳು ಮಗನಿಗೆ ಸತ್ಯವಾನ್ ಎಂದು ಹೆಸರನ್ನಿಟ್ಟರು.

೩೧. ಆ ಸತ್ಯವಂತನಿಗೆ ಯಾವಾಗಲೂ ಕುದುರೆಗಳು ಪ್ರಿಯವಾದುವು. ಅವನು ಮಣ್ಣಿನ ಕುದುರೆಗಳನ್ನು ನಿರ್ಮಿಸುವನು. ಚಿತ್ರದಲ್ಲಿಯೂ ಕುದುರೆಗಳನ್ನು ಬರೆಯುತ್ತಾನೆ. ಆದ್ದರಿಂದ ಅವನನ್ನು ಚಿತ್ರಾಶ್ವ ಎಂದು ಕರೆಯುವರು.

೩೨. ರಂತಿದೇವನ ಶಿಷ್ಯನಾದ ಸತ್ಯವಂತನು ಬ್ರಹ್ಮಜ್ಞಾನಿಯೂ, ಸತ್ಯವಾದಿಯೂ ಆಗಿ ಉಶೀನರದೇಶದ ದೊರೆಯಾದ ಶಿಬಿಗೆ ದಾನಗುಣಗಳಿಂದ ಸಮನಾದನು.

ಯಯಾತಿರಿವ ಚೋದಾರಃ ಸೋಮವತ್ಪ್ರಿಯದರ್ಶನಃ ।
ರೂಪೇಣಾನ್ಯತಮೋಽಶ್ವಿಭ್ಯಾಂ ದ್ಯುಮತ್ಸೇನ ಸುತೋ ಬಲೀ ॥ ೩೩ ॥
ಏಕೋ ದೋಷೋಽಸ್ತಿ ನಾನ್ಯಶ್ಚ ಸೋಽದ್ಯಪ್ರಭೃತಿ ಸತ್ಯವಾನ್ ।
ಸಂವತ್ಸರೇಣ ಕ್ಷೀಣಾಯುರ್ದೇಹತ್ಯಾಗಂ ಕರಿಷ್ಯತಿ ॥ ೩೪ ॥
ನಾರದಸ್ಯ ವಚಃ ಶ್ರುತ್ವಾ ದುಹಿತಾ ಪ್ರಾಹ ಪಾರ್ಥಿವಂ ॥ ೩೫ ॥

ಸಾವಿತ್ರ್ಯುವಾಚ :—

ಸಕೃಜ್ಜಲ್ಪಂತಿ ರಾಜಾನಃ ಸಕೃಜ್ಜಲ್ಪಂತಿ ಬ್ರಾಹ್ಮಣಾಃ ।
ಸಕೃತ್ಕನ್ಯಾ ಪ್ರದೀಯೇತ ತ್ರೀಣ್ಯೇತಾನಿ ಸಕೃತ್ಸಕೃತ್ ॥ ೩೬ ॥
ದೀರ್ಘಾಯುರಥವಾಲ್ಪಾಯುಃ ಸಗುಣೋ ನಿರ್ಗುಣೋಽಪಿವಾ ।
ಸಕೃದ್ವೃತೋ ಮಯಾ ಭರ್ತಾ ನ ದ್ವಿತೀಯಂ ವೃಣೋಮ್ಯಹಂ ॥ ೩೭ ॥
ಮನಸಾ ನಿಶ್ಚಯಂ ಕೃತ್ವಾ ತತೋ ವಾಚಾಭಿಧೀಯತೇ ।
ಕ್ರಿಯತೇ ಕರ್ಮಣಾ ಪಶ್ಚಾತ್ಪ್ರಮಾಣಂ ಹಿ ಮನಸ್ತತಃ ॥ ೩೮ ॥

---

೩೩. ದ್ಯುಮತ್ಸೇನನ ತನಯನಾದ ಸತ್ಯವಂತನು ಯಯಾತಿಯಂತೆ ಉದಾರನೂ, ಚಂದ್ರನಂತೆ ಸುಂದರನೂ, ರೂಪದಿಂದ ಅಶ್ವಿನಿದೇವತೆಗಳಲ್ಲೊಬ್ಬನಂತೆಯೂ ಇರುವನು.

೩೪. ಬೇರೇನೂ ಇಲ್ಲ. ಒಂದು ದೋಷಮಾತ್ರವಿರುವುದು. ಅಲ್ಪಾಯುಸ್ಸುಳ್ಳ ಅವನು ಇಂದಿನಿಂದ ಒಂದು ವರ್ಷದಲ್ಲಿ ಮೃತನಾಗುವನು."

೩೫. ನಾರದನ ಮಾತನ್ನು ಕೇಳಿ ಮಗಳಾದ ಸಾವಿತ್ರಿಯು ತಂದೆಯನ್ನು ಕುರಿತು ಇಂತೆಂದಳು.

೩೬. ಸಾವಿತ್ರಿಯು ಹೇಳುತ್ತಾಳೆ :—ರಾಜರೂ, ಬ್ರಾಹ್ಮಣರೂ ಒಂದೇ ಸಲ ಒಂದೇ ಮಾತನ್ನಾಡುವರು. ಕನ್ಯೆಯನ್ನು ಒಂದುಸಾರಿ ದಾನಮಾಡುವರು. ಇವು ಮೂರೂ ಒಂದೇಸಾರಿ ನಡೆಯತಕ್ಕವು.

೩೭. ಅವನು ದೀರ್ಘಾಯುವೊ ಅಲ್ಪಾಯುವೊ, ನಾನು ಒಂದುಸಾರಿ ಪತಿಯನ್ನು ವರಿಸಿರುವೆನು. ಎರಡನೆಯವನನ್ನು ವರಿಸುವುದಿಲ್ಲ.

೩೮. ಮನುಷ್ಯನು ಮೊದಲು ಮನಸ್ಸಿನಿಂದ ನಿಶ್ಚಯಿಸಿ ಮಾತನ್ನಾಡುವನು. ಅನಂತರ ಕೆಲಸಮಾಡುವನು. ಆದ್ದರಿಂದ ಮನಸ್ಸು ಪ್ರಮಾಣವು.

ನಾರದ ಉವಾಚ :—

ಯದ್ಯೇತದಿಷ್ಟಂ ಭವತಃ ಶೀಘ್ರಮೇವ ವಿಧೀಯತಾಂ ।
ಅವಿಘ್ನೇನ ತು ಸಾವಿತ್ರ್ಯಾಃ ಪ್ರದಾನಂ ದುಹಿತುಸ್ತವ ॥ ೩೯ ॥
ಏವಮುಕ್ತ್ವಾ ಸಮುತ್ಪತ್ಯ ನಾರದಸ್ತ್ರಿದಿವಂ ಗತಃ ।
ರಾಜಾ ಚ ದುಹಿತುಃ ಸರ್ವಂ ವೈವಾಹಿಕಮಥಾಕರೋತ್ ॥ ೪೦ ॥
ಸಾವಿತ್ರ್ಯಪಿಚ ತಂ ಲಬ್ಧ್ವಾ ಭರ್ತಾರಂ ಮನಸೇಪ್ಸಿತಂ ।
ಮುಮುದೇಽತೀವ ತನ್ವಂತೇ ಸ್ವರ್ಗಂ ಪ್ರಾಪ್ಯೇವ ಪುಣ್ಯಕೃತ್ ॥ ೪೧ ॥
ಏವಂ ತತ್ರಾಶ್ರಮೇ ತೇಷಾಂ ತದಾ ನಿವಸತಾಂ ಸತಾಂ ।
ಕಾಲಸ್ತು ಪಶ್ಯತಾಂ ಕಿಂಚಿದತಿಚಕ್ರಾಮ ಪಾರ್ವತಿ ॥ ೪೨ ॥
ಸಾವಿತ್ರ್ಯಾಸ್ತು ತದಾ ನಾರ್ಯಾಸ್ತಿಷ್ಠಂತ್ಯಾಶ್ಚ ದಿವಾನಿಶಂ ।
ನಾರದೇನ ಯದುಕ್ತಂ ತದ್ವಾಕ್ಯಂ ಮನಸಿ ವರ್ತತೇ ॥ ೪೩ ॥
ತತಃ ಕಾಲೇ ಬಹುತಿಥೇ ವ್ಯತಿಕ್ರಾಂತೇ ಕದಾಚನ ।
ಪ್ರಾಪ್ತಃ ಕಾಲೋಽಥ ಮರ್ತವ್ಯೋ ಯತ್ರ ಸತ್ಯವ್ರತೋ ನೃಪಃ ॥ ೪೪ ॥
ಜ್ಯೇಷ್ಠಮಾಸೇ ಸಿತೇ ಪಕ್ಷೇ ದ್ವಾದಶ್ಯಾಂ ರಜನೀಮುಖೇ ।
ಗಣಯಂತ್ಯಾಶ್ಚ ಸಾವಿತ್ರ್ಯಾ ನಾರದೋಕ್ತಂ ವಚಂ ಹೃದಿ ॥ ೪೫ ॥

---

೩೯. ನಾರದನು ಹೇಳುತ್ತಾನೆ :—ಅರಸ ! ಈ ಸಾವಿತ್ರಿಯು ಹೇಳುವುದು ನಿನಗಭಿಮತವಾದರೆ ಕೂಡಲೆ ಅವಳ ವಿವಾಹವನ್ನು ನೆರವೇರಿಸು. ವಿಘ್ನವಿಲ್ಲದೆ ನಡೆಯಲಿ.

೪೦. ನಾರದನು ಹೀಗೆಂದು ನುಡಿದು ಮೇಲಕ್ಕೆಹಾರಿ ದೇವಲೋಕಕ್ಕೆ ತೆರಳಿದನು. ಅಶ್ವಪತಿಯು ಶುಭಮುಹೂರ್ತದಲ್ಲಿ ಪಾರ್ಶ್ವದಲ್ಲಿರುವ ವೇದಪಾರಂಗತರಾದ ಬ್ರಾಹ್ಮಣರಿಂದ ಸಾವಿತ್ರಿಗೆ ಸಮಸ್ತ ವಿವಾಹಕಾರ್ಯವನ್ನು ಮಾಡಿಸಿದನು.

೪೧. ಸಾವಿತ್ರಿಯೂ ತನಗಿಷ್ಟನಾದ ಪತಿಯನ್ನು ಪಡೆದಂತೆ ಅತ್ಯಂತ ಸಂತೋಷಗೊಂಡಳು.

೪೩. ಸಾವಿತ್ರಿಯು ಹಗಲುರಾತ್ರಿಯೂ ನಾರದನು ನುಡಿದ ಮಾತನ್ನು ಆಲೋಚಿಸುತ್ತಿದ್ದಳು.

೪೪. ಅನಂತರ ಬಹುಕಾಲಕಳೆಯಲು ಸತ್ಯವಂತನ ಮರಣಕಾಲವು ಸಮೀಪಿಸಿತು.

೪೫–೪೬. ಸಾವಿತ್ರಿಯು ಜ್ಯೇಷ್ಠಮಾಸದ ಶುಕ್ಲಪಕ್ಷ ದ್ವಾಶಶಿಯದಿನ ಸಂಜೆಯಲ್ಲಿ ನಾರದನ ಮಾತಿನಂತೆ ದಿನಗಳನ್ನು ಎಣಿಸಿ ಇನ್ನು ನಾಲ್ಕು ದಿವಸಗಳಲ್ಲಿ ಪತಿಯು

ಚತುರ್ಥೇಽಹನಿ ಮರ್ತವ್ಯಮಿತಿ ಸಂಚಿಂತ್ಯ ಭಾಮಿನೀ ।
ವ್ರತಂ ತ್ರಿರಾತ್ರಮುದ್ದಿಶ್ಯ ದಿವಾರಾತ್ರಂ ಸ್ಥಿತಾಶ್ರಮೇ ॥ ೪೬ ॥
ತತಸ್ತ್ರಿರಾತ್ರಂ ನ್ಯವಸತ್ಸ್ನಾತ್ವಾ ಸಂತರ್ಪ್ಯ ದೇವತಾಂ ।
ಶ್ವಶ್ರೂಶ್ವಶುರಯೋಃ ಪಾದೌ ವವಂದೇ ಚಾರುಹಾಸಿನೀ ॥ ೪೭ ॥
ಅಥ ಪ್ರತಸ್ಥೇ ಪರಶುಂ ಗೃಹೀತ್ವಾ ಸತ್ಯವಾನ್ವನಂ ।
ಸಾವಿತ್ರ್ಯಪಿ ಚ ಭರ್ತಾರಂ ಗಚ್ಛಂತಂ ಪೃಷ್ಠತೋಽನ್ವಯಾತ್ ॥ ೪೮ ॥
ತತೋ ಗೃಹೀತ್ವಾ ತರಸಾ ಫಲಪುಷ್ಪಸಮಿತ್ಕುಶಾನ್ ।
ಅಥ ಶುಷ್ಕಾಣಿ ಚಾದಾಯ ಕಾಷ್ಠಭಾರಮಕಲ್ಪಯತ್ ॥ ೪೯ ॥
ಅಥ ಪಾಟಯತಃ ಕಾಷ್ಠಂ ಜಾತಾ ಶಿರಸಿ ವೇದನಾ ।
ಕಾಷ್ಠಭಾರಂ ಕ್ಷಣಾತ್ತ್ಯಕ್ತ್ವಾ ವಟಶಾಖಾವಲಂಬಿತಃ ॥ ೫೦ ॥
ಸಾವಿತ್ರೀಂ ಪ್ರಾಹ ಶಿರಸೋ ವೇದನಾ ಮಾಂ ಪ್ರಬಾಧತೇ ।
ತವೋತ್ಸಂಗೇ ಕ್ಷಣಂ ತಾವತ್ಸ್ವಪ್ತುಮಿಚ್ಛಾಮಿ ಸುಂದರಿ ॥ ೫೧ ॥
ವಿಶ್ರಮಸ್ವ ಮಹಾಬಾಹೋ ಸಾವಿತ್ರೀ ಪ್ರಾಹ ದುಃಖಿತಾ ।
ಪಶ್ಚಾದಪಿ ಗಮಿಷ್ಯಾಮ ಹ್ಯಾಶ್ರಮಂ ಶ್ರಮನಾಶನಂ ॥ ೫೨ ॥

ಮಡಿಯುವನೆಂದಾಲೋಚಿಸಿ ಮೂರು ರಾತ್ರಿಯ ವ್ರತವನ್ನುದ್ದೇಶಿಸಿ ಹಗಲು ರಾತ್ರಿಯೂ ಆಶ್ರಯದಲ್ಲಿಯೇ ಇದ್ದಳು.

೪೭. ಮೂರುರಾತ್ರಿ ವಾಸಮಾಡಿದತರುವಾಯ ಮಿಂದು ದೇವತೆಗಳನ್ನು ಸಂತೋಷಗೊಳಿಸಿ ಅತ್ತೆಮಾವಂದಿರ ಅಡಿಗಳಿಗೆರಗಿದಳು.

೪೮. ಬಳಿಕ ಸತ್ಯವಂತನು ಕೊಡಲಿಯನ್ನು ತೆಗೆದುಕೊಂಡು ಕಾಡಿಗೆ ಹೊರಟನು. ಸಾವಿತ್ರಿಯೂ ಹೋಗುತ್ತಿರುವ ಪತಿಯನ್ನು ಹಿಂಬಾಲಿಸಿದಳು.

೪೯. ಸತ್ಯವಂತನು ತ್ವರೆಯಾಗಿ ಫಲ, ಪುಷ್ಪ, ಕಟ್ಟಿಗೆ, ದರ್ಭೆಗಳನ್ನು ತೆಗೆದು ಕೊಂಡು ಬಳಿಕ ಒಣಗಿದ ಕಟ್ಟಿಗೆಗಳ ಹೊರೆಕಟ್ಟಿದನು.

೫೦. ಹೀಗೆ ಕಟ್ಟಿಗೆಯನ್ನು ಸೀಳುತ್ತಿರುವ ಅವನಿಗೆ ತಲೆನೋವು ಉಂಟಾಯಿತು. ಅವನು ಕೂಡಲೆ ಕಟ್ಟಿಗೆಯನ್ನು ಬಿಟ್ಟು ಆಲದಮರದಕೊಂಬೆಯನ್ನು ಆಶ್ರಯಿಸಿದನು.

೫೧. ಅವನು ಸಾವಿತ್ರಿಯನ್ನು ಕುರಿತು, “ಸುಂದರಿ! ತಲೆನೋವು ನನ್ನನ್ನು ಪೀಡಿಸುತ್ತಿದೆ. ಕ್ಷಣಕಾಲ ನಿನ್ನ ತೊಡೆಯಮೇಲೆ ನಿದ್ರಿಸಲಿಚ್ಛಿಸುವೆನು.”

೫೨. “ಮಹಾಬಾಹುವೆ! ವಿಶ್ರಮಿಸಿಕೊ. ತರುವಾಯ ಶ್ರಮವನ್ನು ನಿವಾರಿಸುವ ಆಶ್ರಮಕ್ಕೆ ಹೋಗೋಣ” ಎಂದು ದುಃಖದಿಂದ ಸಾವಿತ್ರಿಯು ನುಡಿದಳು.

ಯಾವದುತ್ಸಂಗಗಂ ಕೃತ್ವಾ ಶಿರೋಽಸ್ಯ ತು ಮಹೀತಲೇ ।
ತಾವದ್ದದರ್ಶ ಸಾವಿತ್ರೀ ಪುರುಷಂ ಕೃಷ್ಣಪಿಂಗಲಂ ॥ ೩೩ ॥
ಕಿರೀಟಿನಂ ಪೀತವಸ್ತ್ರಂ ಸಾಕ್ಷಾತ್ಸೂರ್ಯಮಿವೋದಿತಂ ।
ತಮುವಾಚಾಽಥ ಸಾವಿತ್ರೀ ಪ್ರಣಮ್ಯ ಮಧುರಾಕ್ಷರಂ ॥ ೩೪ ॥
ಕಸ್ತ್ವಂ ದೇವೋಽಥವಾ ದೈತ್ಯೋ ಯೋ ಮಾಂ ಧರ್ಷಿತುಮಾಗತಃ ।
ನ ಚಾಹಂ ಕೇನಚಿಚ್ಛಕ್ಯಾ ಸ್ವಧರ್ಮಾದ್ದೇವ ರೋಧಿತುಂ ॥ ೩೫ ॥
ವಿದ್ಧಿ ಮಾಂ ಪುರುಷಶ್ರೇಷ್ಠ ದೀಪ್ತಾಮಗ್ನಿಶಿಖಾಮಿವ ॥ ೩೬ ॥

ಯಮ ಉವಾಚ :—

ಯಮಃ ಸಂಯಮನಶ್ಚಾಸ್ಮಿ ಸರ್ವಲೋಕಭಯಂಕರಃ ॥ ೩೭ ॥
ಕ್ಷೀಣಾಯುರೇಷ ತೇ ಭರ್ತಾ ಸಂನಿಧೌ ತೇ ಪತಿವ್ರತೇ ।
ನ ಶಕ್ಯಃ ಕಿಂಕರೈರ್ನೇತುಮತೋಽಹಂ ಸ್ವಯಮಾಗತಃ ॥ ೩೮ ॥
ಏವಮುಕ್ತ್ವಾ ಸತ್ಯವ್ರತಶರೀರಾತ್ ಪಾಶಸಂಯುತಃ ।
ಅಂಗುಷ್ಠಮಾತ್ರಂ ಪುರುಷಂ ನಿಚಕರ್ಷ ಯಮೋ ಬಲಾತ್ ॥ ೩೯ ॥

೩೩–೩೪. ಸಾವಿತ್ರಿಯು ಪತಿಯ ತಲೆಯನ್ನು ತೊಡೆಯಲ್ಲಿಟ್ಟುಕೊಳ್ಳುವಷ್ಟರಲ್ಲಿ ನೆಲದಮೇಲೆ ಕೃಷ್ಣಪಿಂಗಲವರ್ಣನೂ, ಕಿರೀಟಧಾರಿಯೂ, ಪೀತಾಂಬರವನ್ನುಟ್ಟವನೂ, ಪ್ರತ್ಯಕ್ಷವಾಗಿ ಉದಯಿಸಿದ ಸೂರ್ಯನಂತಿರುವವನೂ ಆದ ಪುರುಷನನ್ನು ಕಂಡು ವಂದಿಸಿ ಸವಿನುಡಿಯಿಂದ ಇಂತೆಂದಳು.

೩೫. "ನನ್ನನ್ನು ತಿರಸ್ಕರಿಸಲು ಬಂದ ನೀನು ದೇವತೆಯೊ ? ದೈತ್ಯನೊ ? ಯಾರು ? ನನ್ನನ್ನು ಧರ್ಮದಿಂದ ತಡೆಯಲು ಯಾರಿಗೂ ಸಾಧ್ಯವಿಲ್ಲ.

೩೬. ಪುರುಷವರ್ಯನೆ ! ನನ್ನನ್ನು ಜ್ವಲಿಸುವ ಅಗ್ನಿಜ್ವಾಲೆಯಂತಿರುವವಳನ್ನಾಗಿ ತಿಳಿ".

೩೭. ಯಮನು ಹೇಳುತ್ತಾನೆ:—ನಾನು ಸಕಲ ಲೋಕಭಯಂಕರನಾದ ಯಮರಾಜನಾಗಿರುವೆನು.

೩೮. ಸಾಧ್ವಿಯೆ ! ನಿನ್ನ ಹತ್ತಿರದಲ್ಲಿರುವ ಈ ಪತಿಯು ಕ್ಷೀಣವಾದ ಆಯುಸ್ಸುಳ್ಳವನು. ಇವನನ್ನು ತೆಗೆದುಕೊಂಡುಹೋಗಲು ನನ್ನ ಭೃತ್ಯರು ಶಕ್ತರಲ್ಲವೆಂದು ನಾನೇ ಬಂದಿರುವೆನು".

೩೯. ಯಮನು ಹೀಗೆಂದು ಪಾಶದಿಂದ ಸಹಿತನಾಗಿ ಸತ್ಯವ್ರತನ ಶರೀರದಿಂದ ಅಂಗುಷ್ಠಪರಿಮಾಣವುಳ್ಳ ಆತ್ಮನನ್ನು ಬಲಾತ್ಕಾರದಿಂದ ಸೆಳೆದನು.

ಅಥ ಪ್ರಯಾತುಮಾರೇಭೇ ಪಂಥಾನಂ ಪಿತೃಸೇವಿತಂ ।
ಸಾವಿತ್ರ್ಯಪಿ ವರಾರೋಹಾ ಪೃಷ್ಠತೋಽನುಜಗಾಮ ಹ ॥ ೬೦ ॥
ಪತಿವ್ರತತ್ವಾಚ್ಚಾಶ್ರಾಂತಾಂ ತಾಮುವಾಚ ಯಮಸ್ತಥಾ ।
ನಿವರ್ತ ಗಚ್ಛ ಸಾವಿತ್ರಿ ಮುಹೂರ್ತಂ ತ್ವಮಿಹಾಗತಾ ॥ ೬೧ ॥
ಏಷ ಮಾರ್ಗೋ ವಿಶಾಲಾಕ್ಷಿ ನ ಕೇನಾಪ್ಯನುಗಮ್ಯತೇ ॥ ೬೨ ॥
ಸಾವಿತ್ರ್ಯುವಾಚ :—
ನ ಶ್ರಮೋ ನ ಚ ಮೇ ಗ್ಲಾನಿಃ ಕದಾಚಿದಪಿ ಜಾಯತೇ ।
ಭರ್ತಾರಮನುಗಚ್ಛಂತ್ಯಾ ವಿಶಿಷ್ಟಸ್ಯ ಚ ಸಂನಿಧೌ ॥ ೬೩ ॥
ಸತಾಂ ಸಂತೋ ಗತಿರ್ನಾನ್ಯಾ ಸ್ತ್ರೀಣಾಂ ಭರ್ತಾ ಸದಾ ಗತಿಃ ।
ವೇದೋ ವರ್ಣಾಶ್ರಮಾಣಾಂಚ ಶಿಷ್ಯಾಣಾಂ ಚ ಗತಿರ್ಗುರುಃ ॥ ೬೪ ॥
ಸರ್ವೇಷಾಮೇವ ಭೂತಾನಾಂ ಸ್ಥಾನಮಸ್ತಿ ಮಹೀತಲೇ ।
ಭರ್ತಾರಮೇಕಮುತ್ಸೃಜ್ಯ ಸ್ತ್ರೀಣಾಂ ನಾನ್ಯಃ ಸಮಾಶ್ರಯಃ ॥ ೬೫ ॥
ಏವಮನ್ಯೈಃ ಸುಮಧುರೈರ್ವಾಕ್ಯೈರ್ಧರ್ಮಾರ್ಥಸಂಹಿತೈಃ ।
ತುತೋಷ ಸೂರ್ಯತನಯಃ ಸಾವಿತ್ರೀಂ ವಾಕ್ಯಮಬ್ರವೀತ್ ॥ ೬೬ ॥

---

೬೦. ಬಳಿಕ ಅವನು ಪಿತೃಮಾರ್ಗದಿಂದ ಪ್ರಯಾಣಮಾಡಲು ಆರಂಭಿಸಿದನು. ಪತಿವ್ರತೆಯಾದ ಸಾವಿತ್ರಿಯೂ ಅವನನ್ನು ಹಿಂಬಾಲಿಸಿ ಹೋದಳು.

೬೧. ಯಮನು ಪತಿವ್ರತೆಯಾದ್ದರಿಂದ ಆಯಾಸಗೊಳ್ಳದ ಆ ಸಾವಿತ್ರಿಯನ್ನು ಕುರಿತು, "ಸಾವಿತ್ರಿ ! ಮುಹೂರ್ತಕಾಲದಲ್ಲಿ ಇಲ್ಲಿಗೆ ಬಂದ ನೀನು ಹಿಂದಿರುಗು.

೬೨. ವಿಶಾಲಾಕ್ಷಿ! ಈ ಮಾರ್ಗದಲ್ಲಿ ಯಾರಿಗೂ ಹಿಂಬಾಲಿಸಲು ಸಾಧ್ಯವಿಲ್ಲ.

೬೩. ಸಾವಿತ್ರಿಯು ಹೇಳುತ್ತಾಳೆ :—ಉತ್ತಮನಾದ ನಿನ್ನ ಸನ್ನಿಧಿಯಲ್ಲಿ ಪತಿಯನ್ನು ಹಿಂಬಾಲಿಸುತ್ತಿರುವ ನನಗೆ ಆಯಾಸವೂ, ಗ್ಲಾನಿಯೂ, ಉಂಟಾಗುವುದಿಲ್ಲ.

೬೪. ಸಜ್ಜನರಿಗೆ ಸಜ್ಜನರೂ, ಹೆಂಗಸರಿಗೆ ಪತಿಯೂ, ವರ್ಣಾಶ್ರಮಗಳಿಗೆ ವೇದವೂ, ಶಿಷ್ಯರಿಗೆ ಗುರುವೂ, ಯಾವಾಗಲೂ ಗತಿಯು.

೬೫. ಭೂಮಿಯಲ್ಲಿ ಸಕಲ ಪ್ರಾಣಿಗಳಿಗೂ ಆಶ್ರಯವಿದೆ. ಹೆಂಗಸರಿಗೆ ಪತಿಯನ್ನು ಬಿಟ್ಟು ಬೇರೆ ಅವಲಂಬನೆಯಿಲ್ಲ".

೬೬. ಸಾವಿತ್ರಿಯ ಇಂತಹ ಮಾತಿನಿಂದಲೂ, ಧರ್ಮಾರ್ಥಸಹಿತವಾದ ಇತರ ಸವಿನುಡಿಗಳಿಂದಲೂ, ಸಂತುಷ್ಟನಾದ ಯಮನು ಸಾವಿತ್ರಿಯನ್ನು ಕುರಿತು ಇಂತೆಂದನು.

ಯಮ ಉವಾಚ :—

ತುಷ್ಟೋಽಸ್ಮಿ ತವ ಭದ್ರಂ ತೇ ವರಂ ವರಯ ಭಾಮಿನಿ ।
ಸಾಪಿ ವವ್ರೇ ಚ ರಾಜ್ಯಂ ಸ್ವಂ ವಿನಯಾವನತಾನನಾ ॥ ೧೭ ॥
ಚಕ್ಷುಃ ಪ್ರಾಪ್ತಿಂ ತಥಾ ರಾಜ್ಯಂ ಶ್ವಶುರಸ್ಯ ಮಹಾತ್ಮನಃ ।
ಪಿತುಃ ಪುತ್ರಶತಶ್ಚೈವ ಪುತ್ರಾಣಾಂ ಶತಮಾತ್ಮನಃ ॥ ೧೮ ॥
ಜೀವಿತಂ ಚ ತಥಾ ಭರ್ತುರ್ಧರ್ಮಸಿದ್ಧಿಂ ಚ ಶಾಶ್ವತೀಂ ।
ಧರ್ಮರಾಜೋ ವರಂ ದತ್ವಾ ಪ್ರೇಷಯಾಮಾಸ ತಾಂ ತತಃ ॥ ೧೯ ॥
ಅಥ ಭರ್ತಾರಮಾಸಾದ್ಯ ಸಾವಿತ್ರೀ ಹೃಷ್ಟಮಾನಸಾ ।
ಜಗಾಮ ಸ್ವಾಶ್ರಮಪದಂ ಸಹ ಭರ್ತ್ರಾ ನಿರಾಕುಲಾ ॥ ೨೦ ॥
ಜ್ಯೇಷ್ಠಸ್ಯ ಪೂರ್ಣಿಮಾಯಾಂ ಚ ತಯಾ ಚೀರ್ಣಂ ವ್ರತಂ ತ್ವಿದಂ ।
ಮಾಹಾತ್ಮ್ಯತೋಽಸ್ಯ ನೃಪತೇಶ್ಚಕ್ಷುಃಪ್ರಾಪ್ತಿರಭೂತ್ಪರಃ ॥ ೨೧ ॥
ತತಃ ಸ್ವದೇಶರಾಜ್ಯಂ ಚ ಪ್ರಾಪ ನಿಷ್ಕಂಟಕಂ ನೃಪಃ ।
ಪಿತಾಽಸ್ಯಾ ಪುತ್ರಶತಕಃ ಸಾ ಚ ಲೇಭೇ ಸುತಾಞ್ಛತಮ್ ॥ ೨೨ ॥
ಏವಂ ವ್ರತಸ್ಯ ಮಾಹಾತ್ಮ್ಯಂ ಕಥಿತಂ ಸಕಲಂ ಮಯಾ ॥ ೨೩ ॥

೧೭–೧೯. ಯಮನು ಹೇಳುತ್ತಾನೆ!—ಮಂಗಳಕರಳಾದ ಸಾವಿತ್ರಿಯೆ! ನಾನು ಸಂತುಷ್ಟನಾಗಿರುವೆನು. ವರವನ್ನು ಕೇಳಿಕೊ ಎಂದನು. ಅವಳು ವಿನಯದಿಂದ ತಗ್ಗಿಸಿದ ವದನವುಳ್ಳವಳಾಗಿ ತನಗೆ ರಾಜ್ಯವನ್ನೂ, ಮಹಾತ್ಮನಾದ ಮಾವನಿಗೆ ದೃಷ್ಟಿಯನ್ನೂ, ರಾಜ್ಯವನ್ನೂ, ತಂದೆಗೂ, ತನಗೂ, ನೂರುಮಂದಿ ಮಕ್ಕಳನ್ನೂ, ಪತಿಗೆ ಜೀವದಾನವನ್ನೂ, ಸ್ಥಿರವಾದ ಧರ್ಮಸಿದ್ಧಿಯನ್ನೂ ಬೇಡಿಕೊಂಡಳು, ಯಮನು ಆ ವರಗಳನ್ನು ಕೊಟ್ಟು ಅವಳನ್ನು ಕಳುಹಿಸಿದನು.

೨೦. ಸಾವಿತ್ರಿಯು ಬಳಿಕ ಪತಿಯನ್ನು ಪಡೆದು ಸಂತೋಷಗೊಂಡು ವ್ಯಾಕುಲತೆಯಿಲ್ಲದೆ ತನ್ನ ಆಶ್ರಮಕ್ಕೆ ತೆರಳಿದಳು.

೨೧–೨೨. ಸಾವಿತ್ರಿಯು ಜ್ಯೇಷ್ಠಶುದ್ಧಪೂರ್ಣಿಮಾ ದಿನ ಈ ವ್ರತವನ್ನಾಚರಿಸಿರುವಳು. ಇದರ ಮಾಹಾತ್ಮ್ಯದಿಂದ ಅವಳ ಮಾವನಾದ ದ್ಯುಮತ್ಸೇನನಿಗೆ ಕಣ್ಣೂ, ಶತ್ರುಗಳಿಲ್ಲದ ರಾಜ್ಯವೂ, ಲಭಿಸಿತು. ಅವಳ ತಂದೆಯೂ, ಅವಳೂ, ನೂರುಮಂದಿ ಮಕ್ಕಳನ್ನು ಪಡೆದರು.

೨೩. ಹೀಗೆ ನಾನು ನಿನಗೆ ವ್ರತದ ಮಾಹಾತ್ಮ್ಯವನ್ನು ಸಂಪೂರ್ಣವಾಗಿ ಹೇಳಿರುವೆನು.

ದೇವ್ಯುವಾಚ :—

ಕೀದೃಶಂ ತದ್ವ್ರತಂ ದೇವ ಸಾವಿತ್ರ್ಯಾ ಚರಿತಂ ಮಹತ್ ।
ತಸ್ಮಿಂಸ್ತು ಜ್ಯೇಷ್ಠಮಾಸೇ ಹಿ ವಿಧಾನಂ ತಸ್ಯ ಕೀದೃಶಂ ॥ ೭೪ ॥
ಕಾ ದೇವತಾ ವ್ರತೇ ತಸ್ಮಿನ್ಕೇ ಮಂತ್ರಾಃ ಕಿಂ ಫಲಂ ವಿಭೋ ।
ವಿಸ್ತರೇಣ ಮಹೇಶ ತ್ವಂ ಬ್ರೂಹಿ ಧರ್ಮಂ ಸನಾತನಂ ॥ ೭೫ ॥

ಈಶ್ವರ ಉವಾಚ :—

ಶ್ರೂಯತಾಂ ದೇವದೇವೇಶಿ ಸಾವಿತ್ರೀವ್ರತಮಾದರಾತ್ ।
ಕಥಯಾಮಿ ಯಥಾ ಚೀರ್ಣಂ ತಯಾ ಸತ್ಯಾ ಮಹೇಶ್ವರಿ ॥ ೭೬ ॥
ತ್ರಯೋದಶ್ಯಾಂ ತು ಜ್ಯೇಷ್ಠಸ್ಯ ದಂತಧಾವನಪೂರ್ವಕಂ ।
ತ್ರಿರಾತ್ರಂ ನಿಯಮಂ ಕುರ್ಯಾದುಪವಾಸಸ್ಯ ಭಾಮಿನಿ ॥ ೭೭ ॥
ಅಶಕ್ತಸ್ತು ತ್ರಯೋದಶ್ಯಾಂ ನಕ್ತಂ ಕುರ್ಯಾಜ್ಜಿತೇಂದ್ರಿಯಃ ।
ಅಯಾಚಿತಂ ಚತುರ್ದಶ್ಯಾಂ ಹ್ಯುಪವಾಸೇನ ಪೂರ್ಣಿಮಾಂ ॥ ೭೮ ॥
ನಿತ್ಯಂ ಸ್ನಾತ್ವಾ ತಡಾಗೇ ಚ ಮಹಾನದ್ಯಾಂ ಚ ನಿರ್ಝರೇ ।
ಪಾಂಡುಕೂಪೇ ತು ಸುಶ್ರೋಣಿ ಸರ್ವಸ್ನಾನಫಲಂ ಲಭೇತ್ ॥ ೭೯ ॥
ವಿಶೇಷಾತ್ಪೂರ್ಣಿಮಾಯಾಂತು ಸ್ನಾನಂ ಸರ್ಷಪಮೃಜ್ಜಲೈಃ ॥ ೮೦ ॥

---

೭೪. ದೇವಿಯು ಹೇಳುತ್ತಾಳೆ :—ನಾಥ! ಸಾವಿತ್ರಿಯು ಜ್ಯೇಷ್ಠಮಾಸದಲ್ಲಿ ಆಚರಿಸಿದ ಆ ಮಹಾವ್ರತವು ಯಾವುದು ? ಅದರ ವಿಧಿಯೇನು ?

೭೫. ಆ ವ್ರತಕ್ಕೆ ದೇವತೆಯಾವುದು? ಫಲವೇನು? ಮಹೇಶ! ನೀನು ಸನಾತನಧರ್ಮವನ್ನು ವಿಸ್ತಾರವಾಗಿ ಹೇಳು.

೭೬. ಈಶ್ವರನು ಹೇಳುತ್ತಾನೆ:—ಮಹೇಶ್ವರಿ! ಸಾವಿತ್ರೀವ್ರತವನ್ನೂ, ಆ ಸಾಧ್ವಿಯಾದ ಸಾವಿತ್ರಿಯು ಆಚರಿಸಿದ ವಿಧಾನವನ್ನೂ ಹೇಳುತ್ತೇನೆ, ಕೇಳು.

೭೭. ಜ್ಯೇಷ್ಠಶುದ್ಧತ್ರಯೋದಶೀದಿನ ದಂತಧಾವನ ಪೂರ್ವಕವಾಗಿ ಮೂರು ರಾತ್ರಿ ಉಪವಾಸಮಾಡಬೇಕು.

೭೮. ಅಶಕ್ತರು ತ್ರಯೋದಶಿಯ ರಾತ್ರಿ ಜಿತೇಂದ್ರಿಯರಾಗಿ ಚತುರ್ದಶಿಯದಿನ ಅಯಾಚಿತವ್ರತವನ್ನಾಚರಿಸಿ ಹುಣ್ಣಿಮೆಯದಿನ ಉಪವಾಸಮಾಡಬೇಕು.

೭೯. ನಿತ್ಯವೂ ಕೆರೆಯಲ್ಲಾಗಲಿ, ಮಹಾನದಿಯಲ್ಲಾಗಲಿ, ಗಿರಿನದಿಯಲ್ಲಾಗಲಿ, ಪಾಂಡುಕೂಪದಲ್ಲಾಗಲಿ ಮಿಂದರೆ ಸಮಸ್ತಸ್ನಾನ ಫಲವು ಲಭಿಸುವುದು.

೮೦. ವಿಶೇಷವಾಗಿ ಹುಣ್ಣಿಮೆಯದಿನ ಸಾಸಿವೆ, ಮಣ್ಣು, ನೀರಿನಿಂದ ಸ್ನಾನ ಮಾಡಬೇಕು.

ಗೃಹೀತ್ವಾ ವಾಲುಕಂ ಪಾತ್ರೇ ಪ್ರಸ್ಥಮಾತ್ರೇ ಯಶಸ್ವಿನಿ ।
ಅಥವಾ ಧಾನ್ಯಮಾದಾಯ ಯವಶಾಲಿತಿಲಾದಿಕಂ ॥ ೪೧ ॥
ತತೋ ವಂಶಮಯೇ ಪಾತ್ರೇ ವಸ್ತ್ರಯುಗ್ಮೇನ ವೇಷ್ಟಿತೇ ।
ಸಾವಿತ್ರೀಪ್ರತಿಮಾಂ ಕೃತ್ವಾ ಸರ್ವಾವಯವಶೋಭಿತಾಂ ॥ ೪೨ ॥
ಸೌವರ್ಣೀಂ ಮೃನ್ಮಯೀಂ ವಾಪಿ ಸ್ವಶಕ್ತ್ಯಾ ದಾರುನಿರ್ಮಿತಾಂ ।
ರಕ್ತವಸ್ತ್ರದ್ವಯಂ ದದ್ಯಾತ್ಸಾವಿತ್ರ್ಯೈಃ ಬ್ರಹ್ಮಣಃ ಸಿತಂ ॥ ೪೩ ॥
ಸಾವಿತ್ರೀಂ ಬ್ರಹ್ಮಣಾ ಸಾರ್ಧಂ ಏವಂ ಶಕ್ತ್ಯಾ ಪ್ರಪೂಜಯೇತ್ ।
ಗಂಧೈಃ ಸುಗಂಧಪುಷ್ಪೈಶ್ಚ ಧೂಪನೈವೇದ್ಯದೀಪಕೈಃ ॥ ೪೪ ॥
ಪೂರ್ಣಕೋಶಾತಕೈಃ ಪಕ್ವೈಃ ಕೂಷ್ಮಾಂಡಕರ್ಕಟೀಫಲೈಃ ।
ನಾಲಿಕೇರೈಃ ಸಖರ್ಜೂರೈಃ ಕಾಪಿತ್ಥೈರ್ದಾಡಿಮೈಃ ಶುಭೈಃ ॥ ೪೫ ॥
ಜಂಬೂ ಜಂಬೀರನಾರಂಗೈರಕ್ಷೋಟೈಃ ಪನಸೈಸ್ತಥಾ ।
ಜೀರಕೈಃ ಕಟುಕ ಖಂಡೈಶ್ಚ ಗುಡೇನ ಲವಣೇನ ಚ ॥ ೪೬ ॥
ವಿರೂಢೈಃ ಸಪ್ತಧಾನ್ಯೈಶ್ಚ ವಂಶಪಾತ್ರಪ್ರಕಲ್ಪಿತೈಃ ।
ರಂಜಯೇತ್ಪಟ್ಟಸೂತ್ರೈಶ್ಚ ಶುಭೈಃ ಕುಂಕುಮಕೇಸರೈಃ ॥ ೪೭ ॥
ಅವತಾರಂ ಕರೋತ್ಯೇನಂ ಸಾವಿತ್ರೀ ಬ್ರಹ್ಮಣಃ ಪ್ರಿಯಾ ॥ ೪೮ ॥
ತಾಮರ್ಚಯೀತ ಮಂತ್ರೇಣ ಸಾವಿತ್ರ್ಯಾ ಬ್ರಹ್ಮಣಾ ಸಮಂ ।

೪೧–೪೭. ಕೀರ್ತಿಮತಿಯೆ! ಒಂದು ಸೇರು ಹಿಡಿಯುವ ಪಾತ್ರೆಯಲ್ಲಿ ಮರಳನ್ನಾಗಲಿ, ಯವ, ಭತ್ತ, ಎಳ್ಳು ಮೊದಲಾದ ಧಾನ್ಯವನ್ನಾಗಲಿ ತೆಗೆದುಕೊಂಡು ವಸ್ತ್ರವನ್ನುಸುತ್ತಿದ್ದ ಬಿದಿರಿನ ಪಾತ್ರೆಯಲ್ಲಿ ಹಾಕಿ ಅದರಲ್ಲಿ ಚಿನ್ನ, ಮಣ್ಣು, ಅಥವಾ ಮರದಿಂದ ಮಾಡಿದ ಸರ್ವಾವಯವ ಸುಂದರವಾದ ಸಾವಿತ್ರೀ ಪ್ರತಿಮೆಯನ್ನಿಟ್ಟು, ಸಾವಿತ್ರಿಗೂ ಬ್ರಹ್ಮನಿಗೂ ಬಿಳಿಯಬಣ್ಣದ ವಸ್ತ್ರಯುಗ್ಮವನ್ನರ್ಪಿಸಿ ಬ್ರಹ್ಮನೊಡನೆ ಸಾವಿತ್ರಿಯನ್ನು ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಮಾಗಿದ ಪಡವಲಕಾಯಿ, ಕುಂಬಳಕಾಯಿ, ಸೌತೇಕಾಯಿ, ತೆಂಗಿನಕಾಯಿ, ಖರ್ಜೂರ, ಬೇಲದ ಕಾಯಿ, ದಾಳಿಂಬೆ, ನೇರಿಳೆ, ಕಿತ್ತಳೆ, ಅಕ್ಷೋಟ, ಹಲಸು ಮೊದಲಾದ ಹಣ್ಣುಗಳು, ಜೀರಿಗೆ, ಕಟುಖಂಡ, ಬೆಲ್ಲ, ಉಪ್ಪು, ಸಪ್ತಧಾನ್ಯಗಳು ಇವುಗಳನ್ನು ಮೊರದಲ್ಲಿಟ್ಟು ಅರ್ಪಿಸಿ ಶಕ್ತ್ಯನುಸಾರ ಪೂಜಿಸಬೇಕು. ಪಟ್ಟಸೂತ್ರವನ್ನು ಕಟ್ಟಿ ಕುಂಕುಮಕೇಸರಿಯನ್ನು ಲೇಪಿಸಬೇಕು.

೪೮–೪೯. ಹೀಗೆ ಅವತರಿಸಿದ ಬ್ರಹ್ಮನ ರಾಣಿಯಾದ ಸಾವಿತ್ರಿಯನ್ನು ಬ್ರಹ್ಮನೊಡನೆ ಮಂತ್ರದಿಂದ ಪೂಜಿಸಬೇಕು. ಇತರ ದೇವತೆಗಳ ಪೂಜೆಗೆ ಪುರಾಣೋಕ್ತ ಮಂತ್ರವು ವಿಹಿತವಾಗಿರುವುದು.

ಇತರೇಷಾಂ ಪುರಾಣೋಕ್ತೋ ಮಂತ್ರೋಽಯಂ ಸಮುದಾಹೃತಃ ॥ ೮೯ ॥
ಓಂಕಾರ ಪೂರ್ವಕೇ ದೇವಿ ವೀಣಾಪುಸ್ತಕಧಾರಿಣಿ ।
ವೇದಾಂಬಿಕೇ ನಮಸ್ತುಭ್ಯಂ ಅವೈಧವ್ಯಂ ಪ್ರಯಚ್ಛ ಮೇ ॥ ೯೦ ॥
ಏವಂ ಸಂಪೂಜ್ಯ ವಿಧಿವಜ್ಜಾಗರಂ ತತ್ರ ಕಾರಯೇತ್ ॥
ಗೀತವಾದಿತ್ರಶಬ್ದೇನ ನರನಾರೀಕದಂಬಕಂ ॥
ನೃತ್ಯನ್ನಸನ್ನಯೇ ದಾತ್ರಿಂ ನೃತ್ಯಶಾಸ್ತ್ರವಿಶಾರದೈಃ ॥ ೯೧ ॥
ಸಾವಿತ್ರ್ಯಾಖ್ಯಾನಕಂ ಚಾಪಿ ವಾಚಯೀತ ದ್ವಿಜೋತ್ತಮಾನ್ ॥
ಯಾವತ್ಪ್ರಭಾತಸಮಯಂ ಗೀತಭಾವರಸೈಃ ಸಹ ॥ ೯೨ ॥
ವಿವಾಹಮೇವಂ ಕೃತ್ವಾ ತು ಸಾವಿತ್ರ್ಯಾ ಬ್ರಹ್ಮಣಾ ಸಹ ।
ಪರಿಧಾಪ್ಯ ಸಿತೈರ್ವಸ್ತ್ರೈರ್ದಂಪತೀನಾಂ ತು ಸಪ್ತಕಂ ॥ ೯೩ ॥
ಗೃಹದಾನಂ ಪ್ರದಾತವ್ಯಂ ಸರ್ವೋಪಸ್ಕರ ಸಂಯುತಂ ।
ಬ್ರಾಹ್ಮಣೇ ವೇದವಿದುಷೇ ಸಾವಿತ್ರೀಂ ವಿನಿವೇದಯೇತ್ ॥ ೯೪ ॥
ಅಥ ಸಾವಿತ್ರೀಕಲ್ಪಜ್ಞೇ ಸಾವಿತ್ರ್ಯಾಖ್ಯಾನವಾಚಕೇ ।
ದೈವಜ್ಞೇ ಹ್ಯುಂಛವೃತ್ತಿಸ್ಥೇ ದರಿದ್ರೇ ಚಾಗ್ನಿಹೋತ್ರಿಣಿ ॥ ೯೫ ॥

೯೦–೯೧. “ಓಂಕಾರ ಪೂರ್ವಕಳೂ, ವೀಣಾಪುಸ್ತಕವನ್ನು ಧರಿಸಿದವಳೂ, ವೇದಮಾತೆಯೂ ಆದ ಸಾವಿತ್ರಿ! ನಿನಗೆ ವಂದನೆಯು. ನನಗೆ ಸೌಮಂಗಲ್ಯವನ್ನು ಕೊಡು” ಎಂಬ ಮಂತ್ರದಿಂದ ವಿಧಿಯಂತೆ ಪೂಜಿಸಿ ಜಾಗರಣೆ ಮಾಡಿ ಸಂಗೀತ, ವಾದ್ಯಗಳಿಂದಲೂ, ನೃತ್ಯ ಶಾಸ್ತ್ರಕುಶಲರಾದ ಸ್ತ್ರೀ ಪುರುಷರ ನೃತ್ಯದಿಂದಲೂ ರಾತ್ರಿಯನ್ನು ಕಳೆಯಬೇಕು.

೯೨. ಬೆಳಗಾಗುವವರೆಗೆ ಬ್ರಾಹ್ಮಣೋತ್ತಮರಿಂದ ಸಂಗೀತ, ಭಾವ, ರಸಗಳೊಡನೆ ಸಾವಿತ್ರೀಕಥೆಯನ್ನು ಓದಿಸಬೇಕು.

೯೩–೯೫. ಬ್ರಹ್ಮನೊಡನೆ ಸಾವಿತ್ರಿಗೆ ವಿವಾಹ ಮಾಡಿ ಏಳುಮಂದಿ ದಂಪತಿಗಳಿಗೆ ಸಿತವಸ್ತ್ರಗಳನ್ನು ಹೊದ್ದಿಸಿ ಸಕಲ ಸಾಮಗ್ರಿಗಳೊಡನೆ ಗೃಹವನ್ನು ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ದಾನಮಾಡಬೇಕು. ಬಳಿಕ ಸಾವಿತ್ರೀ ಪ್ರತಿಮೆಯನ್ನು ಸಾವಿತ್ರಿಕಲ್ಪವನ್ನರಿತವನೂ, ಸಾವಿತ್ರೀ ಕಥೆಯನ್ನು ಹೇಳಿದವನೂ, ಜೋಯಿಸನೂ, ಉಂಛವೃತ್ತಿಯಿಂದ ಜೀವಿಸುವವನೂ, ಅಗ್ನಿಹೋತ್ರಿಯೂ ಆದ ಬ್ರಾಹ್ಮಣನಿಗೆ ದಾನ ಮಾಡಬೇಕು.

ಏವಂ ದತ್ವಾ ವಿಧಾನೇನ ತಸ್ಯಾಂ ರಾತ್ರೌ ನಿಮಂತ್ರಯೇತ್ ।
ಪೌರ್ಣಮಾಸ್ಯಾಂ ವಟಾಧಸ್ತಾತ್ ದಂಪತೀನಾಂ ಚತುರ್ದಶ ॥ ೯೬ ॥
ತತಃ ಪ್ರಭಾತಸಮಯೇ ಉಷಃಕಾಲ ಉಪಸ್ಥಿತೇ ।
ಭಕ್ಷ್ಯಭೋಜ್ಯಾದಿಕಂ ಸರ್ವಂ ಸಾವಿತ್ರೀಸ್ಥಲಮಾನಯೇತ್ ॥ ೯೭ ॥
ಪಾಕಂ ಕೃತ್ವಾ ತು ಶುಚಿನಾ ರಕ್ಷಾಂ ಕೃತ್ವಾ ಪ್ರಯತ್ನತಃ ।
ಬ್ರಾಹ್ಮಣಾನ್ ಗೃಹಿಣೀ ಯುಕ್ತಾಂಸ್ತತ ಆಹ್ವಾನಯೇತುಧೀಃ ॥ ೯೮ ॥
ಸಾವಿತ್ರ್ಯಾಃ ಸ್ಥಲಕೇ ತತ್ರ ಕೃತ್ವಾ ಪಾದಾಭಿಷೇಚನಂ ।
ಸುಸ್ನಾತಾನ್ಬ್ರಾಹ್ಮಣಾಂಸ್ತತ್ರ ಸಭಾರ್ಯಾನುಪವೇಶಯೇತ್ ॥ ೯೯ ॥
ಸಾವಿತ್ರ್ಯಾಃ ಪುರತೋ ದೇವಿ ದಂಪತ್ಯೋರ್ಭೋಜನಂ ದದೇತ್ ।
ತೇನಾಹಂ ಭೋಜಿತಸ್ತತ್ರ ಭವಾಮೀಹ ನ ಸಂಶಯಃ ॥ ೧೦೦ ॥
ದ್ವಿತೀಯಂ ಭೋಜಯೇದ್ಯಸ್ತು ಭೋಜಿತಸ್ತತ್ರ ಕೇಶವಃ ।
ಲಕ್ಷ್ಮ್ಯಾಃ ಸಹಾಯೋ ವರದೋ ವರಾಂಸ್ತಸ್ಯ ಪ್ರಯಚ್ಛತಿ ॥ ೧೦೧ ॥
ಸಾವಿತ್ರ್ಯಾ ಸಹಿತೋ ಬ್ರಹ್ಮಾ ತೃತೀಯೇ ಭೋಜಿತೋ ಭವೇತ್ ।
ಏಕೈಕಂ ಭೋಜನಂ ತತ್ರ ಕೋಟಿಭೋಜ್ಯ ಸಮಂ ಸ್ಮೃತಂ ॥ ೧೦೨ ॥

---

೯೬. ಹೀಗೆ ವಿಧಿಯಂತೆ ದಾನವಿತ್ತು ಆ ಪೂರ್ಣಿಮಾ ರಾತ್ರಿ ವಟ ವೃಕ್ಷದ ಕೆಳಗೆ ಹದಿನಾಲ್ಕು ದಂಪತಿಗಳನ್ನು ನಿಮಂತ್ರಣ ಮಾಡಬೇಕು.

೯೭. ತರುವಾಯ ಬೆಳಗ್ಗೆ ಉಷಃಕಾಲದಲ್ಲಿ ಭಕ್ಷ್ಯಭೋಜ್ಯಾದಿಗಳನ್ನೆಲ್ಲ ಸಾವಿತ್ರೀ ಸ್ಥಳಕ್ಕೆ ತರಬೇಕು.

೯೮–೯೯. ಶುಚಿಯಿಂದ ಅಡಿಗೆ ಮಾಡಿ ಅದನ್ನು ರಕ್ಷಿಸಿ ಪತ್ನೀಸಮೇತರಾದ ಬ್ರಾಹ್ಮಣರನ್ನು ಕರೆದು ಆ ಸಾವಿತ್ರೀ ಸ್ಥಳದಲ್ಲಿ ಅವರ ಕಾಲುಗಳನ್ನು ತೊಳೆದು ಮಿಂದ ಬ್ರಾಹ್ಮಣ ದಂಪತಿಗಳನ್ನು ಅಲ್ಲಿ ಕುಳ್ಳಿರಿಸಬೇಕು.

೧೦೦ ಸಾವಿತ್ರಿಯ ಮುಂದೆ ದಂಪತಿಗಳಿಗೆ ಭೋಜನಮಾಡಿಸಿದರೆ ನನಗೆ ಭೋಜನಮಾಡಿಸಿದಂತಾಗುವುದು.

೧೦೧. ಎರಡನೆಯ ದಂಪತಿಯ ಭೋಜನದಿಂದ ಲಕ್ಷ್ಮೀ ಸಹಿತನಾದ ವಿಷ್ಣುವು ಭೋಜನ ಮಾಡಿದಂತಾಗುವನು. ಅವನು ಭೋಜನ ಮಾಡಿಸಿದವನಿಗೆ ಇಷ್ಟವಾದ ವರವನ್ನೀಯುವನು.

೧೦೨. ಮೂರನೆಯ ದಂಪತಿಯ ಭೋಜನದಿಂದ ಸಾವಿತ್ರೀ ಸಹಿತನಾದ ಬ್ರಹ್ಮನು ಭೋಜನವನ್ನು ಮಾಡಿಸಿದಂತಾಗುವನು. ಅಲ್ಲಿ ಒಬ್ಬೊಬ್ಬ ದಂಪತಿಯ ಭೋಜನವು ಕೋಟಿ ದಂಪತಿ ಭೋಜನಕ್ಕೆ ಸಮಾನವಾಗುವುದು.

ಅಷ್ಟಾದಶಪ್ರಕಾರೇಣ ಷಡ್ರಸೀಕೃತಭೋಜನಂ ।
ದೇವ್ಯಾಸ್ತತ್ರ ಮಹಾದೇವಿ ಸಾವಿತ್ರೀಸ್ಥಲಸನ್ನಿಧೌ ॥ ೧೦೩ ॥
ವಿಧವಾ ನ ಕುಲೇ ತತ್ರ ನ ವಂಧ್ಯಾ ಚ ನ ದುರ್ಭಗಾ ।
ನ ಕನ್ಯಾಜನನೀ ಚ ಸ್ಯಾನ್ನ ಚಾಪಿ ಭರ್ತುರಪ್ರಿಯಾ ।
ಅಷ್ಟೌ ದೋಷಾಸ್ತು ನಾರೀಣಾಂ ನಾ ಭವಂತಿ ಕದಾಚನ ॥ ೧೦೪ ॥
ತಸ್ಮಾತ್ಸರ್ವಪ್ರಯತ್ನೇನ ಸಾವಿತ್ರ್ಯಗ್ರೇ ಚ ಭೋಜನಂ ।
ದಾತವ್ಯಂ ಸರ್ವದಾ ದೇವಿ ಕಟುನೀಲವಿವರ್ಜಿತಂ ॥ ೧೦೫ ॥
ನ ಚಾಮ್ಲಂ ನ ಚ ವೈ ಕ್ಷಾರಂ ಸ್ತ್ರೀಣಾಂ ಭೋಜ್ಯಂ ಕದಾಚನ ।
ಪಂಚಪ್ರಕಾರಂ ಮಧುರಂ ಹೃದ್ಯಂ ಸರ್ವಂ ಸುಸಂಸ್ಕೃತಂ ॥ ೧೦೬ ॥
ಘೃತಪೂರ್ಣಾಪೂಪಕಾಶ್ಚ ಬಹುಕ್ಷೀರಸಮನ್ವಿತಾಃ ।
ಪೂಪಕಾಸ್ತಾದೃಶಾಃ ಕಾರ್ಯಾಃ ದ್ವಿತೀಯಾ ಶೋಕವರ್ತಿಕಾ ॥ ೧೦೭ ॥
ತೃತೀಯಾ ಪೂಪಿಕಾ ಕಾರ್ಯಾ ಖರ್ಜುರೇಣ ಸಮನ್ವಿತಾ ।
ಚತುರ್ಥೀಶ್ಚೈವ ಸಂಯಾವೋ ಗುಡುಜ್ಯಾಭ್ಯಾಂ ಸಮನ್ವಿತಃ ॥ ೧೦೮ ॥

೧೦೩–೧೦೪. ಮಹಾದೇವಿ! ಸಾವಿತ್ರೀಸ್ಥಳದಲ್ಲಿ ಹದಿನೆಂಟು ಬಗೆಯ ಷಡ್ರಸಾನ್ನಭೋಜನವನ್ನು ಮಾಡಿಸಿದವನ ವಂಶದಲ್ಲಿ ವಿಧವೆಯೂ, ಬಂಜೆಯೂ, ದೌರ್ಭಾಗ್ಯವುಳ್ಳವಳೂ, ಕನ್ಯೆಯನ್ನೆ ಹಡೆಯುವವಳೂ, ಪತಿಗೆ ಅಪ್ರಿಯಳೂ ಆದ ಸ್ತ್ರೀಯು ಜನಿಸುವುದಿಲ್ಲ. ಮತ್ತು ಸ್ತ್ರೀಯರಿಗೆ ಎಂಟು ಬಗೆಯ ದೋಷಗಳು ಸಂಭವಿಸುವುದಿಲ್ಲ.

೧೦೫. ದೇವಿ! ಆದ್ದರಿಂದ ಸಕಲ ಪ್ರಯತ್ನದಿಂದಲೂ ಸಾವಿತ್ರಿಯ ಮುಂದೆ ಕಟುನೀಲಗಳಿಲ್ಲದ ಭೋಜನವನ್ನು ದಂಪತಿಗಳಿಗೆ ಮಾಡಿಸಬೇಕು.

೧೦೬. ಹುಳಿ, ಒಗರುಪದಾರ್ಥಗಳು ಸ್ತ್ರೀಯರಿಗೆ ಭೋಜ್ಯವಲ್ಲ. ಚೆನ್ನಾಗಿ ಪಾಕಮಾಡಿದ ಐದು ವಿಧವಾದ ಸಿಹಿ ಪದಾರ್ಥಗಳು ಮನೋಹರವಾದುವು.

೧೦೭–೧೦೯. ಅತಿಶಯಕ್ಷೀರಸಹಿತವಾಗಿ ಮಾಡಿದ ತುಪ್ಪದ ಅಪೂಪಗಳು ಮೊದಲನೆಯವು, ಎರಡನೆಯದು ಫೇಣಿಯು, ಮೂರನೆಯದು ಖರ್ಜೂರದಿಂದ ಸಹಿತವಾದ ಅಪೂಪವು. ನಾಲ್ಕನೆಯದು ಬೆಲ್ಲ ತುಪ್ಪಗಳಿಂದ ಕೂಡಿದ ಸಂಯಾವವು. ಐದನೆಯದು ಆಹ್ಲಾದಕಾರಿಣಿ ಅಪೂಪವು. ಪುರುಷರಿಗೂ, ಸ್ತ್ರೀಯರಿಗೂ ಅತ್ಯಂತ

ಆಹ್ಲಾದಕಾರಿಣೀ ಪುಂಸಾಂ ಸ್ತ್ರೀಣಾಂ ಚಾತೀವ ವಲ್ಲಭಾ ।
ಧನಧಾನ್ಯಜನೋಪೇತಂ ನಾರೀನರಶತಾಕುಲಂ ।
ಪೂಪಕೈಸ್ತು ಕುಲಂ ತಸ್ಯ ಜಾಯತೇ ನಾತ್ರ ಸಂಶಯಃ ॥ ೧೦೯ ॥
ನ ಜ್ವರೋ ನ ಚ ಸಂತಾಪೋ ದುಃಖಂ ಚ ನ ವಿಯೋಗಜಂ ।
ಅಶೋಕವರ್ತಿದಾನೇನ ಕುಲಾನಾಂ ಏಕವಿಂಶತಿಃ ॥ ೧೧೦ ॥
ವಧೂಭಿಶ್ಚ ಸುತೈಶ್ಚೈವ ದಾಸೀದಾಸ್ಯೈರನಂತಕೈಃ ।
ಪೂರಿತಂ ಚ ಕುಲಂ ತಸ್ಯ ಪೂರಿಕಾ ಯಾ ಪ್ರಯಚ್ಛತಿ ॥ ೧೧೧ ॥
ಪುತ್ರಿಣ್ಯೋ ವೈ ದುಹಿತರೋ ವಧೂಭಿಃ ಸಹಿತಾಃ ಕುಲೇ ।
ಶಿಖರಿಣೀ ಪ್ರದಾತ್ರೀಣಾಂ ಯುವತೀಚ ನ ಸಂಶಯಃ ॥ ೧೧೨ ॥
ಮೋದತೇ ಚ ಕುಲಂ ಸರ್ವಂ ಸರ್ವಸಿದ್ಧಿಪ್ರಪೂರಿತಂ ।
ಮೋದಕಾನಾಂ ಪ್ರದಾನೇನ ಏವಮಾಹ ಪಿತಾಮಹಃ ॥ ೧೧೩ ॥
ಏತಚ್ಚ ಗೌರಿಣೀನಾಂ ತು ಭೋಜನಂ ಹಿ ವಿಶಿಷ್ಯತೇ ॥ ೧೧೪ ॥
ಸುಭಗಾ ಪುತ್ರಿಣೀ ಸಾಧ್ವೀ ಗುಣಬುದ್ಧಿಸಮನ್ವಿತಾ ।
ಸಹಸ್ರಭೋಜಿನೀ ದೇವಿ ಭವೇಜ್ಜನ್ಮನಿ ಜನ್ಮನಿ ॥ ೧೧೫ ॥

ಸ್ತ್ರಿಯವಾದುದು. ಹೀಗೆ ಅಪೂಪ ದಾನಮಾಡಿದ ಸ್ತ್ರೀಯ ವಂಶವು ಧನಧಾನ್ಯ, ಪುರುಷಸ್ತ್ರೀಯರಿಂದ ಸಮೃದ್ಧಿಗೊಳ್ಳುವುದು. ಇದರಲ್ಲಿ ಸಂದೇಹವಿಲ್ಲ.

೧೧೦. ಫೇಣಿಯನ್ನು ದಾನಮಾಡಿದ ಸ್ತ್ರೀಯ ಇಪ್ಪತ್ತೊಂದು ವಂಶದಲ್ಲಿ ಜ್ವರ, ಸಂತಾಪ, ವಿಯೋಗಜನ್ಯವಾದ ದುಃಖಗಳುಂಟಾಗುವುದಿಲ್ಲ.

೧೧೧. ಪೂರಿಯನ್ನು ದಾನಮಾಡಿದವಳ ವಂಶವು ಅನೇಕಮಂದಿ ಸೊಸೆಯರು, ಸುತರು, ದಾಸಿಯರು, ಸೇವಕರು ಇವರಿಂದ ತುಂಬಿರುವುದು.

೧೧೨. ಶಿಖರಿಣಿಯನ್ನು ದಾನಮಾಡಿದ ಸ್ತ್ರೀಯು, ತನ್ನ ವಂಶದಲ್ಲಿ ಹೆಣ್ಣು ಮಕ್ಕಳು ಪುತ್ರರು, ಸೊಸೆಯರಿಂದ ಸಹಿತರಾಗುವರು.

೧೧೩. ಮೋದಕವನ್ನು ದಾನಮಾಡಿದವರ ವಂಶವು ಸಕಲ ಸಿದ್ಧಿಯಿಂದ ಕೂಡಿ ಆನಂದಪಡುವುದು.

೧೧೪. ಸುವಾಸಿನಿಯರಿಗೆ ಭೋಜನಮಾಡಿಸುವುದು ಉತ್ತಮವಾದುದು, ಎಂದು ಬ್ರಹ್ಮನು ಹೇಳಿರುವನು.

೧೧೫. ಸಹಸ್ರ ಜನರಿಗೆ ಭೋಜನಮಾಡಿಸಿದ ಸ್ತ್ರೀಯು ಪ್ರತಿಜನ್ಮದಲ್ಲಿಯೂ ಸೌಭಾಗ್ಯವುಳ್ಳವಳೂ, ಮಕ್ಕಳುಳ್ಳವಳೂ, ಪತಿವ್ರತೆಯೂ, ಧನಸಮೃದ್ಧಿಯುಳ್ಳವಳೂ ಆಗಿರುವಳು.

ಪಾನಾನಿ ಚೈವ ಮುಖ್ಯಾನಿ ಹೃದ್ಯಾನಿ ಮಧುರಾಣಿ ಚ ।
ದ್ರಾಕ್ಷಾಪಾನಂ ತು ಚಿಂಚಾಯಾಃ ಪಾನಂ ಗುಡಸಮನ್ವಿತಂ ॥ ೧೧೬ ॥
ಸುರಸೇನ ತು ತೋಯೇನ ಕೃತಖಂಡೇನ ವೈ ಶುಭಂ ।
ಸುವಾಸಿನೀನಾಂ ಪೇಯಂ ವೈ ದಾತವ್ಯಂ ಚ ದ್ವಿಜನ್ಮನಾಂ ॥ ೧೧೭ ॥
ಇತರೈರಿತರಾಣ್ಯೇವ ವರ್ಣಯೋಗ್ಯಾನಿ ಯಾನಿ ಚ ।
ಸುರಭೀಣಿ ಚ ದಾನಾನಿ ತಾಸು ಯೋಗ್ಯಾನಿ ದಾಪಯೇತ್ ॥ ೧೧೮ ॥
ಪ್ರತಿಪೂಜ್ಯ ವಿಧಾನೇನ ವಸ್ತ್ರದಾನೈಃ ಸಕಂಚುಕೈಃ ।
ಕುಂಕುಮೇನಾನುಲಿಪ್ತಾಂಗಾಃ ಸ್ರಗ್ದಾಮಾಭಿರಲಂಕೃತಾಃ ।
ಗಂಧೈರ್ಧೂಪೈಶ್ಚ ಸಂಪೂಜ್ಯ ನಾಲಿಕೇರಾನ್ಪ್ರದಾಪಯೇತ್ ॥ ೧೧೯ ॥
ನೇತ್ರಾಣಾಂ ಚಾಂಜನಂ ಕೃತ್ವಾ ಸಿಂಧೂರಂ ಚೈವ ಮಸ್ತಕೇ ।
ಪೂಗೀಫಲಾನಿ ಹೃದ್ಯಾನಿ ವಾಸಿತಾನಿ ಮೃದೂನಿ ಚ ।
ಹಸ್ತೇ ದತ್ವಾ ಸಪಾತ್ರಾಣಿ ಪ್ರಣಿಪತ್ಯ ವಿಸರ್ಜಯೇತ್ ॥ ೧೨೦ ॥
ಸ್ವಯಂ ಚ ಭೋಜಯೇತ್ಪಶ್ಚಾದ್ಬಂಧುಭಿರ್ಬಾಲಕೈಸ್ಸಹ ॥ ೧೨೧ ॥

೧೧೬–೧೧೭. ಮನೋಹರವೂ, ಸಿಹಿಯೂ, ರುಚಿಯೂ ಆದ ನೀರು, ಸಕ್ಕರೆ, ಬೆಲ್ಲದಿಂದ ಕೂಡಿದ ದ್ರಾಕ್ಷಿ, ಹುಣಸೇಹಣ್ಣು ಇವುಗಳಿಂದ ಮಾಡಿದುದೂ ಆದ ಪಾನಕಗಳನ್ನು ಸುವಾಸಿನಿಯರಿಗೂ, ಬ್ರಾಹ್ಮಣರಿಗೂ ದಾನಮಾಡಬೇಕು.

೧೧೮. ಇತರ ಜಾತಿಯವರು ತಮ್ಮ ಜಾತಿಗೆ ಉಚಿತವಾದ ಸುವಾಸನೆಯುಳ್ಳ ಪಾನಕಗಳನ್ನು ದಾನಮಾಡಬೇಕು.

೧೧೯. ಕುಂಕುಮವನ್ನು ಹಚ್ಚಿಕೊಂಡು ಹೂವಿನ ಮಾಲೆಗಳಿಂದ ಅಲಂಕಾರಗೊಂಡ ಸ್ತ್ರೀಯರನ್ನು ವಸ್ತ್ರ, ಕುಪ್ಪಸ, ಗಂಧ, ಧೂಪಗಳಿಂದ ಶಾಸ್ತ್ರೋಕ್ತವಾಗಿ ಪೂಜಿಸಿ ತೆಂಗಿನಕಾಯಿಗಳನ್ನು ಕೊಡಬೇಕು.

೧೨೦. ಮತ್ತು ಅವರ ಕಣ್ಣಿಗೆ ಕಾಡಿಗೆಯನ್ನೂ, ಹಣೆಗೆ ಚಂದ್ರವನ್ನೂ ಹಚ್ಚಿ ಪಾತ್ರೆಯಲ್ಲಿ ಸುವಾಸನೆಯೂ, ಮೃದುವೂ ಆದ ಅಡಿಕೆಗಳನ್ನಿಟ್ಟು ದಾನಮಾಡಿ ನಮಸ್ಕರಿಸಿ ಕಳುಹಿಸಬೇಕು.

೧೨೧. ತರುವಾಯ ತಾನು ಬಂಧುಗಳಿಂದಲೂ, ಬಾಲಕರಿಂದಲೂ ಸಹಿತಳಾಗಿ ಭೋಜನಮಾಡಬೇಕು.

ಅಥವಾ ನೈವ ಸಂಪದ್ಯೇತ್ ತೀರ್ಥೇ ಚೈವ ತು ಭೋಜನಂ ।
ಗೃಹೇ ಗತ್ವಾ ಪ್ರಭೋಕ್ತವ್ಯಂ ತುಷ್ಟಾ ದೇವೀ ಯಥಾ ಭವೇತ್ ॥ ೧೨೨ ॥
ಏವಮೇವ ಪಿತೄಣಾಂ ಚ ಆಗಮ್ಯ ಸ್ವೇ ಚ ಮಂದಿರೇ ।
ಪಿಂಡಪ್ರದಾನಪೂರ್ವಂ ತು ಶ್ರಾದ್ಧಂ ಕೃತ್ವಾ ವಿಧಾನತಃ ।
ಪಿತರಸ್ತಸ್ಯ ತುಷ್ಟಾ ವೈ ಭವಂತಿ ಬ್ರಹ್ಮಣೋ ದಿನಂ ॥ ೧೨೩ ॥
ತೀರ್ಥಾದಷ್ಟಗುಣಂ ಪುಣ್ಯಂ ಸ್ವಗೃಹೇ ದದತಃ ಶುಭೇ ।
ನ ಚ ಪಶ್ಯಂತಿ ವೈ ನೀಚಾಃ ಶ್ರಾದ್ಧಂ ದತ್ತಂ ದ್ವಿಜಾತಿಭಿಃ ॥ ೧೨೪ ॥
ಏಕಾಂತೇ ತು ಗೃಹೇ ಗುಪ್ತೇ ಪಿತೄಣಾಂ ಶ್ರಾದ್ಧಮಿಷ್ಯತೇ ।
ನೀಚಂ ದೃಷ್ಟ್ವಾ ಹತಂ ತತ್ತು ಪಿತೄಣಾಂ ನೋಪತಿಷ್ಠತಿ ॥ ೧೨೫ ॥
ತಸ್ಮಾತ್ಸರ್ವಪ್ರಯತ್ನೇನ ಶ್ರಾದ್ಧಂ ಗುಪ್ತಂ ಚ ಕಾರಯೇತ್ ।
ಪಿತೄಣಾಂ ತೃಪ್ತಿದಂ ಪ್ರೋಕ್ತಂ ಸ್ವಯಮೇವ ಸ್ವಯಂಭುವಾ ॥ ೧೨೬ ॥
ಗೌರೀ ಭೋಜ್ಯಾದಿಕಾ ಯಾತು ಉತ್ಸರ್ಗಾತ್ಕ್ರಿಯತೇ ಕ್ರಿಯಾ ।
ರಾಜಸೀ ಸಾ ಸಮಾಖ್ಯಾತಾ ಜನಾನಾಂ ಕೀರ್ತಿದಾಯಿನೀ ॥ ೧೨೭ ॥

---

೧೨೨. ಅಥವಾ ತೀರ್ಥದಲ್ಲಿ ಭೋಜನಮಾಡಲು ಸಾಧ್ಯವಿಲ್ಲದಿದ್ದರೆ ಮನೆಗೆ ಹೋಗಿ ದೇವಿಯು ಸಂತುಷ್ಟಳಾಗುವಂತೆ ಭೋಜನಮಾಡಬೇಕು.

೧೨೩. ಹೀಗೆಯೇ ಮನೆಗೆ ಬಂದು ವಿಧಿಯಂತೆ ಪಿತೃಗಳಿಗೆ ಪಿಂಡಪ್ರದಾನ ಪೂರ್ವಕವಾಗಿ ಶ್ರಾದ್ಧಮಾಡಬೇಕು. ಅದರಿಂದ ಪಿತೃಗಳು ಬ್ರಹ್ಮನ ಒಂದು ದಿನದ ವರೆಗೆ ಸಂತುಷ್ಟರಾಗುವರು.

೧೨೪. ಮಂಗಳಕರಳೆ! ಮನೆಯಲ್ಲಿ ಬ್ರಾಹ್ಮಣರು ಮಾಡುವ ಶ್ರಾದ್ಧವನ್ನು ನೀಚ ಜಾತಿಯವರು ಕಾಣದಿರುವುದರಿಂದ ಆ ಶ್ರಾದ್ಧವು ತೀರ್ಥ ಶ್ರಾದ್ಧಕ್ಕಿಂತ ಎಂಟರಷ್ಟು ಪುಣ್ಯಕರವಾದುದು.

೧೨೫. ಮನೆಯಲ್ಲಿ ಗುಟ್ಟಾದ ಸ್ಥಳದಲ್ಲಿ ಪಿತೃಗಳಿಗೆ ಶ್ರಾದ್ಧವನ್ನು ಮಾಡಬೇಕು. ನೀಚನನ್ನು ಕಂಡು ಹಾಳಾದ ಶ್ರಾದ್ಧವು ಪಿತೃಗಳಿಗೆ ಸೇರುವುದಿಲ್ಲ.

೧೨೬. ಆದುದರಿಂದ ಪ್ರಯತ್ನಪೂರ್ವಕವಾಗಿ ಶ್ರಾದ್ಧವನ್ನು ಗುಟ್ಟಾಗಿ ಮಾಡಬೇಕು. ಅದೇ ಪಿತೃಗಳಿಗೆ ತೃಪ್ತಿಯನ್ನುಂಟುಮಾಡುವುದೆಂದು ಬ್ರಹ್ಮನು ಹೇಳಿದ್ದಾನೆ.

೧೨೭. ಸ್ವಭಾವದಿಂದ ಮಾಡುವ ಕನ್ಯಾಭೋಜನಾದಿಕಾರ್ಯವು ಜನರಿಗೆ ಕೀರ್ತಿಯನ್ನುಂಟುಮಾಡುವ ರಾಜಸ ಕರ್ಮವಾಗಿರುವುದು.

ಇದಂ ದಾನಂ ಸದಾ ದೇಯಂ ಆತ್ಮನೋ ಹಿತಮಿಚ್ಛತಾ ।
ಶ್ರಾದ್ಧೇ ಚೈವ ವಿಶೇಷೇಣ ಯದೀಚ್ಛೇತ್ಸಾತ್ವಿಕಂ ಫಲಂ ॥ ೧೨೮ ॥
ಇದಮುದ್ಯಾಪನಂ ದೇವಿ ಸಾವಿತ್ರ್ಯಾಸ್ತು ವ್ರತಸ್ಯ ಚ ।
ಸರ್ವಪಾತಕಶುದ್ಧ್ಯರ್ಥಂ ಕಾರ್ಯಂ ದೇವಿ ನರೈಃ ಸದಾ ।
ಅಕಾಮತಃ ಕಾಮತೋ ವಾ ಪಾಪಂ ನಶ್ಯತಿ ತತ್ಕ್ಷಣಾತ್ ॥ ೧೨೯ ॥
ಇಹ ಲೋಕೇ ತು ಸೌಭಾಗ್ಯಂ ಧನಂ ಧಾನ್ಯಂ ವರಾಃ ಸ್ತ್ರಿಯಃ ।
ಭವಂತಿ ವಿವಿಧಾಸ್ತೇಷಾಂ ಯೈರ್ಯಾತ್ರಾ ತತ್ರ ವೈ ಕೃತಾ ॥ ೧೩೦ ॥
ಇದಂ ಯಾತ್ರಾವಿಧಾನಂ ತು ಭಕ್ತ್ಯಾ ಯಃ ಕುರುತೇ ನರಃ ।
ಶೃಣೋತಿ ವಾ ಸ ಪಾಪೈಸ್ತು ಸರ್ವೈರೇವ ಪ್ರಮುಚ್ಯತೇ ॥ ೧೩೧ ॥
ಜ್ಯೇಷ್ಠಸ್ಯ ಪೂರ್ಣಿಮಾಯಾಂ ತು ಸಾವಿತ್ರೀಸ್ಥಲಕೇ ಶುಭೇ ।
ಪ್ರದಕ್ಷಿಣಾ ಯಃ ಕುರುತೇ ಫಲದಾನೈರ್ಯಥಾವಿಧಿ ॥ ೧೩೨ ॥
ಅಷ್ಟೋತ್ತರಶತಂ ವಾಪಿ ತದರ್ಧಾರ್ಧಂ ತದರ್ಧಕಂ ।
ಯಃ ಕರೋತಿ ನರೋ ದೇವಿ ಸ್ಪೃಷ್ಟ್ವಾ ತತ್ರ ಪ್ರದಕ್ಷಿಣಾಂ ॥ ೧೩೩ ॥
ಅಗಮ್ಯಾಗಮನಂ ಯೈಶ್ಚ ಕೃತಂ ಜ್ಞಾನಾಚ್ಚ ಮಾನವೈಃ ।
ಅನ್ಯಾನಿ ಪಾತಕಾನ್ಯೇವಂ ನಶ್ಯಂತೇ ನಾತ್ರ ಸಂಶಯಃ ॥ ೧೩೪ ॥

---

೧೨೮. ತನಗೆ ಹಿತವನ್ನು ಬಯಸುವ ಮನುಷ್ಯನು ಸಾತ್ವಿಕ ಫಲೇಚ್ಛೆಯಿಂದ ಶ್ರಾದ್ಧದಲ್ಲಿ ಅವಶ್ಯವಾಗಿ ಈ ಅನ್ನದಾನವನ್ನು ಮಾಡಬೇಕು.

೧೨೯. ದೇವಿ ! ಈ ಸಾವಿತ್ರೀ ವ್ರತೋದ್ಯಾಪನೆಯನ್ನು ಮನುಷ್ಯರು ಸಕಲ ಪಾಪಶುದ್ಧಿಗಾಗಿ ಯಾವಾಗಲೂ ಮಾಡಬೇಕು. ಫಲೇಚ್ಛೆಯಿಂದಾಗಲಿ ಇಲ್ಲದೆ ಯಾಗಲಿ ಇದನ್ನು ಮಾಡಿದರೆ ಪಾಪವು ಕೂಡಲೆ ನಾಶವಾಗುವುದು.

೧೩೦. ಆ ಸಾವಿತ್ರೀಸ್ಥಳದ ಯಾತ್ರೆಯನ್ನು ಮಾಡಿದವರಿಗೆ ಈ ಲೋಕದಲ್ಲಿ ಸೌಭಾಗ್ಯ, ಧನ, ಧಾನ್ಯ, ಉತ್ತಮ ಸ್ತ್ರೀಯರೇ ಮೊದಲಾದ ಬಗೆಬಗೆಯ ಭೋಗ್ಯ ವಸ್ತುಗಳು ಲಭಿಸುವುವು,

೧೩೧. ಈ ವಿಧಿಯನ್ನನುಸರಿಸಿ ಭಕ್ತಿಯಿಂದ ಯಾತ್ರೆಯನ್ನು ಮಾಡಿದವ ನಾಗಲಿ ಈ ವಿಧಿಯನ್ನು ಕೇಳಿದವನಾಗಲಿ ಸಕಲ ಪಾಪಗಳಿಂದಲೂ ಮುಕ್ತನಾಗುವನು.

೧೩೨–೧೩೪. ಜ್ಯೇಷ್ಠ ಶುದ್ಧ ಹುಣ್ಣಿಮೆಯದಿನ ಸಾವಿತ್ರೀಸ್ಥಳದಲ್ಲಿ ಫಲ ವನ್ನರ್ಪಿಸಿ ವಿಧಿಯಂತೆ ನೂರೆಂಟು ಅಥವಾ ಐವತ್ತನಾಲ್ಕು ಪ್ರದಕ್ಷಿಣೆಮಾಡಿದ ಮನುಷ್ಯರ ಅಗಮ್ಯಾಗಮನ ಮತ್ತು ಇತರ ಪಾಪಗಳು ಪರಿಹಾರವಾಗುವುವು.

ಯೈರ್ಗತ್ವಾ ಸ್ಥಲಕೇ ಸಂಧ್ಯಾ ಸಾವಿತ್ರ್ಯಾಃ ಸಮುಪಾಸಿತಾ ।
ಸ್ವಪತ್ನ್ಯಾಃ ಶ್ಚೈವ ಹಸ್ತೇನ ಪಾಂಡುಕೂಪಜಲೇನ ಚ ॥ ೧೩೫ ॥
ಭೃಂಗಾರ ಕನಕೇನೈವ ಮೃಣ್ಮಯೇನಾಥ ಭಾಮಿನಿ ।
ಆನೀಯ ತು ಜಲಂ ಪುಣ್ಯಂ ಸಂಧ್ಯೋಪಾಸ್ತಿಂ ಕರೋತಿ ಯಃ ।
ತೇನ ದ್ವಾದಶವರ್ಷಾಣಿ ಭವೇತ್ಸಂಧ್ಯಾ ಹ್ಯುಪಾಸಿತಾ ॥ ೧೩೬ ॥
ಅಶ್ವಮೇಧಫಲಂ ಸ್ನಾನೇ ದಾನೇ ದಶಗುಣಂ ತಥಾ ।
ಉಪವಾಸೇ ತ್ವನಂತಂ ಚ ಕಥಾಯಾಃ ಶ್ರವಣೇ ತಥಾ ॥ ೧೩೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಸಾವಿತ್ರೀ ವ್ರತವಿಧಿಪೂಜನಪ್ರಕಾರೋದ್ಯಮನಮಾಹಾತ್ಮ್ಯವರ್ಣನಂ ಷಟ್ಷಷ್ಟ್ಯುತ್ತರಶತತಮೋಽಧ್ಯಾಯಃ

೧೩೫–೧೩೬. ಈ ಸಾವಿತ್ರೀಸ್ಥಳದಲ್ಲಿ ಚಿನ್ನದ ಅಥವಾ ಮಣ್ಣಿನ ಕಲಶದಿಂದ ಪಾಂಡುಕೂಪದ ನೀರನ್ನು ಸ್ವಪತ್ನೀಹಸ್ತದಿಂದ ತರಿಸಿ ಸಂಧ್ಯಾವಂದನೆಯನ್ನು ಮಾಡಿದವನು ಹನ್ನೆರಡುವರ್ಷಕಾಲ ಸಂಧ್ಯಾವಂದನೆ ಮಾಡಿದವನಂತಾಗುವನು.

೧೩೭. ಇಲ್ಲಿ ಸ್ನಾನಮಾಡುವುದರಿಂದ ಅಶ್ವಮೇಧಫಲವೂ, ದಾನದಿಂದ ಆದರ ಹತ್ತರಷ್ಟುಫಲವೂ, ಉಪವಾಸದಿಂದಲೂ, ಕಥಾಶ್ರವಣದಿಂದಲೂ ಅನಂತಫಲವೂ ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಸಾವಿತ್ರೀ ವ್ರತವಿಧಿಪೂಜನಪ್ರಕಾರೋದ್ಯಮನಮಾಹಾತ್ಮ್ಯವರ್ಣನವೆಂಬ ನೂರಅರುವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಷಷ್ಟ್ಯುತ್ತರಶತತಮೋಽಧ್ಯಾಯಃ

ಭೂತಮಾತೃಕಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರಸ್ಥಾಂ ಭೂತಮಾತೃಕಾಂ ।
ಸಾವಿತ್ರ್ಯಾ ವಾರುಣೇ ಭಾಗೇ ಶತಧನ್ವಂತರೇ ಸ್ಥಿತಾಂ ॥ ೧ ॥
ನವಕೋಟಿ ಗಣೈರ್ಯುಕ್ತಾಂ ಪ್ರೇತಭೂತಸಮಾಕುಲಾಂ ।
ಪೂಜಿತಾಂ ಸಿದ್ಧಗಂಧರ್ವೈರ್ದೇವಾದಿಭಿರನೇಕಶಃ ॥ ೨ ॥

ದೇವ್ಯುವಾಚ :—

ಭೂತಮಾತೇತಿ ಸಂಹೃಷ್ಟಾ ಗ್ರಾಮೇ ಗ್ರಾಮೇ ಪುರೇ ಪುರೇ ।
ಗಾಯನ್ ನೃತ್ಯನ್ ಹಸಲ್ಲೋಕಃ ಸರ್ವತಃ ಪರಿಧಾವತಿ ॥ ೩ ॥
ಉನ್ಮತ್ತವತ್ಪ್ರಲಪತೇ ಕ್ಷಿತೌ ಪತತಿ ಮತ್ತವತ್ ।
ಕ್ರುದ್ಧವದ್ಧಾವತಿ ಪರಾನ್ ಮೃತವತ್ಕೃಷ್ಯತೇ ಹಿ ಸಃ ॥ ೪ ॥

ಕನ್ನಡದ ಅನುವಾದ

ಭೂತಮಾತೃಕಾಮಾಹಾತ್ಮ್ಯವರ್ಣನಂ

೧-೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಅಲ್ಲಿ ಸಾವಿತ್ರಿಯ ಪಶ್ಚಿಮದಿಕ್ಕಿನಲ್ಲಿ ನೂರಬಿಲ್ಲುಗಳ ದೂರದಲ್ಲಿರುವವಳೂ ಒಂಬತ್ತು ಕೋಟಿ ಗಣಗಳಿಂದಲೂ, ಭೂತಪ್ರೇತಗಳಿಂದಲೂ ಕೂಡಿ ಸಿದ್ಧ, ಗಂಧರ್ವ, ದೇವಾದಿಗಳಿಂದ ಬಹು ಪೂಜಿತಳೂ ಆದ ಭೂತಮಾತೃಕೆಯನ್ನು ಹೊಂದಬೇಕು.

೩. ಜನರು ಪ್ರತಿ ಗ್ರಾಮಗಳಲ್ಲಿಯೂ, ಪ್ರತಿ ಪಟ್ಟಣದಲ್ಲಿಯೂ ಭೂತಮಾತೆಯೆಂದು ಸಂತೋಷದಿಂದ ಕುಣಿಯುತ್ತಲೂ, ನಗುತ್ತಲೂ ಸುತ್ತಲು ಓಡುತ್ತಾರೆ.

೪. ಹುಚ್ಚರಂತೆ ಮಾತಾಡುತ್ತಾರೆ. ಮತ್ತರಂತೆ ಭೂಮಿಯಲ್ಲಿ ಬೀಳುತ್ತಾರೆ. ಕೋಪಗೊಂಡವರಂತೆ ಓಡುತ್ತಾರೆ. ಸತ್ತವರಂತೆ ಇತರರನ್ನು ಎಳೆಯುತ್ತಾರೆ.

ಸುಖಭಂಗಾಂಶ್ಚ ಕುರುತೇ ಲೋಕೋ ವಾತಗೃಹೀತವತ್ ।
ಭೂತವದ್ಭಸ್ಮಮೂತ್ರಾಂಬು ಕರ್ದಮಾನವಗಾಹತೇ ॥ ೫ ॥
ಕಿಮೇಷ ಶಾಸ್ತ್ರನಿರ್ದಿಷ್ಟೋ ಮಾರ್ಗಃ ಕಿಮುತ ಲೌಕಿಕಃ ।
ಮುಹ್ಯತೇ ಮೇ ಮನೋ ದೇವ ತೇನ ತ್ವಂ ವಕ್ತುಮರ್ಹಸಿ ॥ ೬ ॥
ಕಥಂ ಸಾ ಪುರುಷೈಃ ಪೂಜ್ಯಾ ಪ್ರಭಾಸಕ್ಷೇತ್ರವಾಸಿಭಿಃ ।
ಕಸ್ಮಾತ್ತತ್ರ ಗತಾ ದೇವೀ ತಸ್ಮಿನ್ಕಾಲೇ ಸಮಾಗತಾ ।
ಕಸ್ಮಿನ್ದಿನೇ ತು ಮಾಸೇ ತು ಕರ್ತವ್ಯಃ ಕಾರ್ಯೋ ಮಹೋತ್ಸವಃ ॥ ೭ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಯತ್ತೇ ಕಿಂಚಿನ್ಮನೋಗತಮ್ ।
ಆಸ್ತಿಕಾಃ ಶ್ರದ್ಧಧಾನಾಶ್ಚ ಭವಂತೀತಿ ಮತಿರ್ಮಮ ॥ ೮ ॥
ಚಾಕ್ಷುಷಸ್ಯಾಂತರೇಽತೀತೇ ಪ್ರಾಪ್ತೇ ವೈವಸ್ವತೇಽಂತರೇ ।
ದಕ್ಷಾಪಮಾನಾತ್ಸಂಜಾತಾ ತದಾ ಪರ್ವತಪುತ್ರಿಕಾ ॥ ೯ ॥
ದ್ವಾಪರೇ ತು ದ್ವಿತೀಯೇ ವೈ ದತ್ತಾ ತ್ವಂ ಪರ್ವತೇನ ಮೇ ।
ವಿವಾಹೇ ಚೈವ ಸಂಜಾತೇ ಸರ್ವದೇವಮನೋರಮೇ ॥ ೧೦ ॥

---

೫. ವಾಯುರೋಗವುಳ್ಳವರಂತೆ ದುಃಖಗೊಳಿಸುತ್ತಾರೆ. ಭೂತದಂತೆ ಬೂದಿ, ಮೂತ್ರ, ನೀರು, ಕೆಸರುಗಳಲ್ಲಿ ಪ್ರವೇಶಿಸುತ್ತಾರೆ.

೬. ಈ ಮಾರ್ಗವು ಶಾಸ್ತ್ರೋಕ್ತವಾದುದೊ? ಅಥವಾ ಲೋಕಸಿದ್ಧವಾದುದೊ? ಸ್ವಾಮಿ! ನನ್ನ ಮನಸ್ಸು ಭ್ರಾಂತಿಗೊಳ್ಳುತ್ತಿದೆ. ಆದ್ದರಿಂದ ನೀನು ಇದನ್ನು ನನಗೆ ಹೇಳು.

೭. ಪ್ರಭಾಸಕ್ಷೇತ್ರವಾಸಿಗಳು ಆ ಭೂತಮಾತೃಕೆಯನ್ನು ಹೇಗೆ ಪೂಜಿಸಬೇಕು? ದೇವಿಯು ಏತಕ್ಕೆ ಅಲ್ಲಿಗೆ ಹೋದಳು? ಯಾವಾಗ ಹೋದಳು? ಅವಳ ಉತ್ಸವವನ್ನು ಯಾವ ಮಾಸದ ಯಾವದಿನ ಮಾಡಬೇಕು.

೮. ಈಶ್ವರನು ಹೇಳುತ್ತಾನೆ.—ದೇವಿ! ನಿನ್ನಿಷ್ಟದಂತೆ ಈ ವಿಷಯವನ್ನು ಹೇಳುವೆನು ಕೇಳು. ಲೋಕದಲ್ಲಿ ಆಸ್ತಿಕರೂ, ಶ್ರದ್ಧೆಯುಳ್ಳವರೂ ಇರುವರೆಂದು ತಿಳಿಯುತ್ತೇನೆ.

೯. ಚಾಕ್ಷುಷಮನ್ವಂತರವು ಕಳೆಯಲು ವೈವಸ್ವತಮನ್ವಂತರದಲ್ಲಿ ದಕ್ಷನ ಅಪಮಾನದಿಂದ ಸತಿಯು ಪರ್ವತರಾಜನ ಮಗಳಾಗಿ ಜನಿಸಿದಳು.

೧೦. ಎರಡನೆಯ ದ್ವಾಪರಯುಗದಲ್ಲಿ ಪರ್ವತರಾಜನು ನಿನ್ನನ್ನು ನನಗೆ ಕೊಡಲು ನಮ್ಮಿಬ್ಬರಿಗೆ ಸಕಲ ದೇವತೆಗಳ ಮನಸ್ಸನ್ನು ಸಂತೋಷಗೊಳಿಸುವಂತೆ ವಿವಾಹ ನಡೆಯಿತು.

ತ್ವಯಾ ಚ ಸಹಿತಃ ಪೂರ್ವಂ ಮಂದರೇ ಚಾರುಕಂದರೇ ।
ಅಕ್ರೀಡಂ ಚ ಮುದಾ ಯುಕ್ತೋ ದಿವ್ಯ ಕ್ರೀಡನಕೈಃ ಪ್ರಿಯೇ ।
ಪೀನೋನ್ನತನಿತಂಬೇನ ಭ್ರಾಜಮಾನಾಂ ಕುಚೋನ್ನತಾಂ ॥ ೧೧ ॥
ಸಿತಾಬ್ಜವದನಾಂ ಹೃಷ್ಟಾಂ ದೃಷ್ಟ್ವಾಹಂ ತ್ವಾಂ ಮಹಾಪ್ರಭಾಂ ।
ದಗ್ಧಕಾಮತರೋಃ ಕಂದಕಂದಲೀಮಿವ ನಿಃಸೃತಾಂ ।
ಮಹಾರ್ಹಶಯನಸ್ಥಾಂ ತ್ವಾಂ ತದಾ ಕಾಮಿತವಾನಹಂ ॥ ೧೨ ॥
ಸುರತೇ ತವ ಸಂಜಾತಂ ದಿವ್ಯಂ ವರ್ಷಶತಂ ಯದಾ ।
ತದಾ ದೇವಿ ಸಮುತ್ಥಾಯ ನಿರೋಧಾನ್ನಿರ್ಗತಾ ಬಹಿಃ ॥ ೧೩ ॥
ತವೋದಕಾತ್ಸಮುತ್ತಸ್ಥೌ ನಾರ್ಯೇಕಾ ಗಹ್ವರೋದರಾ ।
ಕೃಷ್ಣಾ ಕರಾಲವದನಾ ಪಿಂಗಾಕ್ಷೀ ಮುಕ್ತಮೂರ್ಧಜಾ ॥ ೧೪ ॥
ಕಪಾಲಮಾಲಾಭರಣಾ ಬುದ್ಧಮುಂಡಾರ್ಧಪಿಂಡಿಕಾ ।
ಖಟ್ವಾಂಗಕಂಕಾಲಧರಾ ರುಂಡಮುಂಡಕರಾ ಶಿವಾ ॥ ೧೫ ॥
ದ್ವೀಪಿಚರ್ಮಾಂಬರಧರಾ ರಣತ್ಕಿಂಕಿಣಿಮೇಖಲಾ ।
ಡಮಡ್ಡಮರುಕಾಕಾರಾ ಫೇತ್ಕಾರ ಪೂರಿತಾಂಬರಾ ॥ ೧೬ ॥

೧೧–೧೨. ನಾನು ಪುಷ್ಟವಾದ ಉನ್ನತಕುಚ ನಿತಂಬಗಳುಳ್ಳವಳೂ, ಶ್ವೇತ ಕಮಲದಂತೆ ಮುಖವುಳ್ಳವಳೂ, ಅತಿಶಯಕಾಂತಿಯುಳ್ಳವಳೂ, ಸುಡಲ್ಪಟ್ಟ ಕಾಮನೆಂಬ ವೃಕ್ಷದಿಂದ ಹೊರಟ ಸುಳಿಯಂತಿರುವವಳೂ, ಶ್ರೇಷ್ಠವಾದ ಹಾಸಿಗೆಯಲ್ಲಿರುವವಳೂ ಆದ ನಿನ್ನನ್ನು ಕಾಮಿಸಿ ನಿನ್ನೊಡನೆ ಮನೋಹರವಾದ ಗುಹೆಗಳುಳ್ಳ ಮಂದರಶೈಲದಲ್ಲಿ ಸಂತೋಷದಿಂದ ದಿವ್ಯಕ್ರೀಡಾವಸ್ತುಗಳಿಂದ ವಿನೋದಪಟ್ಟೆನು.

೧೩. ದೇವಿ! ನಿನ್ನೊಡನೆ ಸುರತಕ್ರೀಡೆಯು ದಿವ್ಯ ಶತ ವರ್ಷಗಳ ಕಾಲ ನಡೆಯಲು ನೀನು ಎದ್ದು ಮೂತ್ರ ವಿಸರ್ಜನೆಗಾಗಿ ಹೊರಗೆ ಹೊರಟೆ.

೧೪–೧೬. ಆದ ನಿನ್ನ ಉದಕದಿಂದ ಗುಹೆಯಂತೆ ಹೊಟ್ಟೆಯುಳ್ಳವಳೂ, ಕೃಷ್ಣ ವರ್ಣಳೂ, ಭಯಂಕರಮುಖಳೂ, ಹಳದಿಯ ಕಣ್ಣುಗಳುಳ್ಳವಳೂ, ಕಟ್ಟದತಲೆಕೂದಲುಳ್ಳವಳೂ, ಕಪಾಲಮಾಲೆಯೆ ಆಭರಣವಾಗುಳ್ಳವಳೂ, ಅರ್ಧ ಮುಂಡಗಳನ್ನು ಕಟ್ಟಿಕೊಂಡಿರುವವಳೂ, ಖಟ್ವಾಂಗ, ಮೂಳೆಗಳನ್ನು ಧರಿಸಿರುವವಳೂ, ರುಂಡ ಮುಂಡಗಳನ್ನು ಕೈಯಲ್ಲಿ ಹಿಡಿದವಳೂ, ಹುಲಿಚರ್ಮದ ಬಟ್ಟೆಯುಟ್ಟವಳೂ, ಧ್ವನಿಗೈಯುತ್ತಿರುವಕಿರುಗಂಟೆಯ ಡಾಬುಳ್ಳವಳೂ, ಶಬ್ದಮಾಡುವ ಡಮರುವಿನ ಆಕೃತಿಯುಳ್ಳವಳೂ, ಫೇತ್ಕಾರದಿಂಡ ತುಂಬಿದ ಆಕಾರವುಳ್ಳವಳೂ ಆದ ಒಬ್ಬಹೆಂಗಸು ಮೇಲಕ್ಕೆದ್ದಳು.

ತಸ್ಯಾಶ್ಚ ಪಾರ್ಶ್ವಗಾ ಅನ್ಯಾ ತಾಸಾಂ ನಾಮಾನಿ ಮೇಶೃಣು ।
ಸಖ್ಯೋ ಬ್ರಾಹ್ಮಣರಾಕ್ಷಸ್ಯಾಃ ತಾಸಾಂ ಚೈವ ಸುದರ್ಶನಾಃ ॥ ೧೭ ॥
ದಶಕೋಟಿ ಪ್ರಭೇದೇನ ಧರಾಂ ವ್ಯಾಪ್ಯ ಸುಸಂಸ್ಥಿತಾ ।
ಮುಖ್ಯಾಸ್ತತ್ರ ಚತ್ರಸೋ ವೈ ಮಹಾಬಲಪರಾಕ್ರಮಾಃ ॥ ೧೮ ॥
ರಕ್ತವರ್ಣಾ ಮಹಾಜಿಹ್ವಾ ಅಕ್ಷಯಾ ವೈ ಪಾಪಕಾರಿಣೀ ।
ಏತಾಸಾಮನ್ವಯೇ ಜಾತಾಃ ಪೃಥಿವ್ಯಾಂ ಬ್ರಹ್ಮರಾಕ್ಷಸಾಃ ॥ ೧೯ ॥
ಶ್ಲೇಷ್ಮಾತಕತಾ ಹ್ಯೇತೇ ಪ್ರಾಯಶಃ ಸುಕೃತಾಲಯಾಃ ।
ಉತ್ತಾಲತಾಲಚಪಲಾ ನೃತ್ಯಂತಿ ಚ ಹಸಂತಿ ಚ ॥ ೨೦ ॥
ವಿಜ್ಞೇಯಾ ಇಹ ಲೋಕೇಸ್ಮಿನ್ ಭೂತಾನಾಂ ಮೂಲನಾಯಕಾಃ ।
ಅತಿಕೃಷ್ಣಾ ಭವಂತ್ಯೇತೇ ವ್ಯಂತರಾಂತರಚಾರಿಣಃ ॥ ೨೧ ॥
ವೃಕ್ಷಾಗ್ರಮಾತ್ರಸಂಕಾಶಂ ತೇ ಚರಂತಿ ನ ಸಂಶಯಃ ॥ ೨೨ ॥
ತಥೈವ ಮಮ ವೀರ್ಯಾತ್ತು ಮುದ್ರಾಪಾಭರಣಃ ಪುನಃ ।
ಕಪಾಲಖಟ್ವಾಂಗಧರೋ ಜಾತಶ್ಚರ್ಮಾವಗುಂಠಿತಃ ॥ ೨೩ ॥

---

೧೭. ಅವಳ ಪಾರ್ಶ್ವದಲ್ಲಿ ಗೆಳತಿಯರೂ, ಸುಂದರಿಯರೂ ಆದ ಬ್ರಾಹ್ಮಣ ರಾಕ್ಷಸಿಯರು ಇದ್ದರು. ಅವರ ಹೆಸರನ್ನು ನನ್ನಿಂದ ಕೇಳು.

೧೮–೧೯. ಹತ್ತುಕೋಟಿ ಮಂದಿ ಅವರು ಭೂಮಿಯನ್ನು ವ್ಯಾಪಿಸಿ ನೆಲಸಿರುವರು. ಅವರಲ್ಲಿ ರಕ್ತವರ್ಣಾ, ಮಹಾಜಿಹ್ವಾ, ಅಕ್ಷಯಾ, ಪಾಪಕಾರಿಣೀ ಎಂಬ ಅತಿಶಯ ಬಲವುಳ್ಳ ನಾಲ್ವರು ಮುಖ್ಯರು. ಭೂಮಿಯಲ್ಲಿರುವ ಬ್ರಹ್ಮರಾಕ್ಷಸರು ಇವರ ವಂಶದಲ್ಲಿ ಹುಟ್ಟಿರುತ್ತಾರೆ.

೨೦. ಈ ಬ್ರಹ್ಮರಾಕ್ಷಸರು ಪ್ರಾಯಶಃ ಚಳ್ಳೆಮರದಲ್ಲಿ ಮನೆಮಾಡಿಕೊಂಡು ಉನ್ನತವಾದ ತಾಳೆಯ ಮರದಂತೆ ಚಂಚಲವಾಗಿ ಕುಣಿಯುತ್ತಲೂ, ನಗುತ್ತಲೂ ಇರುವರು.

೨೧. ಈ ಪ್ರಪಂಚದಲ್ಲಿರುವ ಭೂತಗಳಿಗೆ ಮೂಲನಾಯಕನಾದ ಈ ಬ್ರಹ್ಮ ರಾಕ್ಷಸರು ಅವಕಾಶವಿದ್ದೆಡೆ ಸಂಚರಿಸುತ್ತ ಅತಿಕಪ್ಪಾಗಿರುವರು.

೨೨. ಆ ಬ್ರಹ್ಮರಾಕ್ಷಸಗಳು ಮರದ ತುದಿಯಲ್ಲಿರುವ ಅವಕಾಶದಲ್ಲಿ ಮಾತ್ರ ಸಂಚರಿಸುವುವು.

೨೩–೨೪. ಹಾಗೆಯೇ ನನ್ನ ವೀರ್ಯದಿಂದ ಕಪಾಲಖಟ್ವಾಂಗಗಳನ್ನು ಧರಿಸಿದವನೂ, ಚರ್ಮವನ್ನು ಹೊದ್ದವನೂ, ಸಿಂಹ, ಶಾರ್ದೂಲಗಳಂತೆ ಮುಖವುಳ್ಳವೂ, ಮುಖದಿಂದ ಉಜ್ಜಿದ ಆಕಾಶವುಳ್ಳವೂ ಆಗಿ ಅನೇಕ ಭೂತಗಳಿಂದ

ಅನುಗಮ್ಯಾಗಮಾನೋ ಬಹುಭಿರ್ಭೂತೈರಪಿ ಭಯಂಕರಃ ।
ಸಿಂಹಶಾರ್ದೂಲವದನೈಃ ವದನೋಲ್ಲಿಖಿತಾಂಬರೈಃ ॥ ೨೪ ॥
ಏವಂ ದೇವಿ ತದಾ ಜಾತಃ ಕ್ಷುಧಾಕ್ರಾಂತೋ ಬಭಾಷ ಮಾಂ ।
ಅತೋಽಹಂ ಕ್ಷುಧಿತಂ ದೃಷ್ಟ್ವಾ ವರಂ ಹೀಮ ಚ ದತ್ತವಾನ್ ॥ ೨೫ ॥
ಯುವಯೋರ್ಹಸ್ತಸಂಸ್ಪರ್ಶಾನ್ನಕ್ತಮೇವಾಸ್ತು ಸರ್ವಶಃ ।
ನಕ್ತಂ ಚೈವ ಬಲೀಯಾಂಸಾ ದಿವಾ ನಾತಿಬಲಾವುಭೌ ।
ಪುತ್ರವದ್ರಕ್ಷತಂ ಲೋಕಾನ್ಧರ್ಮಶ್ಚೈವಾನುಪಾಲ್ಯತಾಮ್ ॥ ೨೬ ॥
ಇತ್ಯುಕ್ತೌ ತು ಮಯಾ ತತ್ರ ಭೂತಮಾತೃಗಣಾ ಪ್ರಿಯೆ ।
ಏಕೀಭೂತೌ ಕ್ಷಣೇನೈವ ತೌ ಭವಾನೀಭವೋದ್ಭವೌ ॥ ೨೭ ॥
ದೃಷ್ಟ್ವಾ ಹೃಷ್ಟಮನಾಶ್ಚಾಹಮವೋಚಂ ತ್ವಾಂ ಶುಚಿಸ್ಮಿತೇ ॥ ೨೮ ॥
ಕಲ್ಯಾಣಿ ಪಶ್ಯ ಪಶ್ಯೈತೌ ಮಮಾಂಶಾಚ್ಚ ಸಮುದ್ಭವೌ ।
ಬೀಭತ್ಸಾದ್ಭುತ ಶೃಂಗಾರಧಾರಿಣೌ ಹಾಸ್ಯಕಾರಿಣೌ । ॥ ೨೯ ॥
ಭ್ರಾತೃಭಾಂಡಾ ಭೂತಮಾತ ತಥೈವೋದಕಸೇವಿಕಾ ।
ಸಂಜ್ಞಾತ್ರಯಂ ಸ್ಮೃತಂ ದೇವಿ ಲೋಕೇ ವಿಖ್ಯಾತಪೌರುಷಂ ॥ ೩೦ ॥

ಹಿಂಬಾಲಿಸಲ್ಪಟ್ಟ, ನನ್ನಂತೆಯೇ ರೂಪ ಆಭರಣಗಳುಳ್ಳ ಒಬ್ಬ ಪುರುಷನು ಜನಿಸಿದನು.

೨೫. ಅವನು ಹುಟ್ಟಿದ ಕೂಡಲೆ ಹಸಿವುಗೊಂಡಿದ್ದೇನೆ ಎಂದನು. ನಾನು ಹಸಿವುಗೊಂಡ ಅವನನ್ನು ಕಂಡು ಈ ವರವನ್ನಿತ್ತೆನು.

೨೬. ನಿಮ್ಮಿಬ್ಬರ ಹಸ್ತಸ್ಪರ್ಶದಿಂದ ಎಲ್ಲೆಡೆಯಲ್ಲಿಯೂ ರಾತ್ರಿಯಾಗಲಿ ಹಗಲು ಹೆಚ್ಚು ಬಲವಿಲ್ಲದ ರಾತ್ರಿಯಲ್ಲಿ ಮಾತ್ರ ಅತಿಬಲಿಷ್ಠರಾದ ನೀವಿಬ್ಬರು ಲೋಕಗಳನ್ನು ಮಕ್ಕಳಂತೆ ಕಾಪಾಡಿರಿ. ಧರ್ಮವನ್ನೂ ರಕ್ಷಿಸಿರಿ.

೨೭. ನಾನು ಹೀಗೆನ್ನಲು ಆ ಶಿವಪಾರ್ವತಿಯರಿಂದ ಜನಿಸಿದ ಭೂತಮಾತೃಗಣಗಳು ಕೂಡಲೆ ಒಟ್ಟು ಸೇರಿದುವು.

೨೮. ನಾನು ಅವರನ್ನು ನೋಡಿ ಹರ್ಷಗೊಂಡು ನಿನ್ನನ್ನು ಕುರಿತು ಹೀಗೆಂದನು.

೨೯. "ಮಂಗಳಕರಳೆ! ನನ್ನ ಅಂಶದಿಂದ ಹುಟ್ಟಿದವರೂ, ಬೀಭತ್ಸ, ಅದ್ಭುತ, ಶೃಂಗಾರ, ಹಾಸ್ಯಕರವಾದ ರೂಪವನ್ನು ಧರಿಸಿದವರೂ ಆದ ಇವರಿಬ್ಬರನ್ನು ನೋಡು.

೩೦. ದೇವಿ! ಲೋಕದಲ್ಲಿ ಪ್ರಸಿದ್ಧ ಪರಾಕ್ರಮವುಳ್ಳ ಭ್ರಾತೃಭಾಂಡಾ, ಭೂತಮಾತಾ, ಉದಕ ಸೇವಿತಾ ಎಂಬ ಮೂರು ಹೆಸರುಗಳು ಇವರಿಗೆಸಲ್ಲುತ್ತವೆ." ಎಂದೆನು.

ಪುನಃ ಕೃತಾಂಜಲಿಪುಟೌ ದೃಷ್ಟ್ವಾ ಮಾಮೂಚತುಸ್ತದಾ ।
ಆವಯೋರ್ಭಗವಾನ್ಕುತ್ರ ಸ್ಥಾನೇ ವಾಸೋ ಭವಿಷ್ಯತಿ ॥ ೩೧ ॥

ಇತ್ಯುಕ್ತವಂತೌ ತೌ ತತ್ರ ವರೇಣ ಚ್ಛಂದಿತೌ ಮಯಾ ।
ಅಸ್ತಿ ಸೌರಾಷ್ಟ್ರವಿಷಯೇ ಭಾರತೇ ಕ್ಷೇತ್ರಮುತ್ತಮಂ ॥ ೩೨ ॥

ಪ್ರಭಾಸೇತಿ ಸಮಾಖ್ಯಾತಂ ತತ್ರ ಕ್ಷೇಮಂ ಮಮ ಪ್ರಿಯಂ ।
ಕೂರ್ಮಸ್ಯ ನೈಋತೇ ಭಾಗೇ ಸ್ಥಿತಂ ವೈ ದಕ್ಷಿಣೇ ಪರೇ ॥ ೩೩ ॥

ಸ್ವಾತೀ ವಿಶಾಖಾ ಮೈತ್ರಂ ಚ ಯತ್ರ ಋಕ್ಷತ್ರಯಂ ಸ್ಮೃತಂ ।
ತಸ್ಮಿನ್ಸ್ಥಾನೇ ಸದಾ ಸ್ಥೇಯಂ ಯಾವನ್ಮನ್ವಂತರಾವಧಿ ॥ ೩೪ ॥

ಅನ್ಯದಾ ಜೀವಕಂ ವಚ್ಮಿ ತವ ಭೂತಪ್ರಿಯೇ ಸದಾ ॥ ೩೫ ॥

ಯತ್ರ ಕಂಟಕಿನೋ ವೃಕ್ಷಾ ಯತ್ರ ನಿಷ್ಪಾವವಲ್ಲರೀ ।
ಭಾರ್ಯಾ ಪುನರ್ಭೂರ್ವಲ್ಮೀಕಾಸ್ತಾಸ್ತೇ ವಸತಯಶ್ಚಿರಮ್ ॥ ೩೬ ॥

ಯಸ್ಮಿನ್ಗೃಹೇ ನರಾಃ ಪಂಚ ಸ್ತ್ರೀತ್ರಯಂ ತಾವತೀಶ್ಚ ಗಾಃ ।
ಅಂಧಕಾರೇಂಧನಾಗ್ನಿಶ್ಚ ತದ್ಗೃಹೇ ವಸತಿಸ್ತವ ॥ ೩೭ ॥

---

೩೧. ಮರಳಿ ಅವರಿಬ್ಬರು ಕೈಮುಗಿದುಕೊಂಡು ನನ್ನನ್ನು ನೋಡಿ, "ಪೂಜ್ಯನೆ! ನಮ್ಮಿರ್ವರಿಗೆ ವಾಸಸ್ಥಾನವಾವುದು ?" ಎಂದು ಕೇಳಿದರು.

೩೨–೩೩. ನಾನು ಹೀಗೆಂದು ಅವರಿಗೆ ವರವನ್ನಿತ್ತೆನು. ಭರತಖಂಡದಲ್ಲಿ ಸೌರಾಷ್ಟ್ರ ದೇಶದಲ್ಲಿ ಕೂರ್ಮನ ನೈಋತ್ಯ ದಕ್ಷಿಣದಲ್ಲಿ ಪ್ರಭಾಸವೆಂಬ ನನಗೆ ಪ್ರಿಯವಾದ ಕ್ಷೇತ್ರವಿರುವುದು.

೩೪. ಅಲ್ಲಿ ಸ್ವಾತೀ, ವಿಶಾಖಾ, ಅನುರಾಧಾ, ನಕ್ಷತ್ರಗಳು ನೆಲಸಿರುವುವು. ಆ ಸ್ಥಳದಲ್ಲಿ ನೀವು ಮನ್ವಂತರದವರೆಗೆ ಇರಬೇಕು.

೩೫ ಭೂತಪ್ರಿಯಳೆ! ನಿಮ್ಮ ಜೀವನದ ಕ್ರಮವನ್ನೂ ಹೇಳುವೆನು.

೩೬. ಮುಳ್ಳಿನ ಮರಗಳು, ಅವರೆ ಬಳ್ಳಿ, ಎರಡನೆಯಸಾರಿ ಮದುವೆಯಾದ ಹೆಂಗಸು, ಹುತ್ತ ಇರುವ ಸ್ಥಳಗಳು ನಿಮಗೆ ನಿವಾಸ ಸ್ಥಾನಗಳು.

೩೭. ಐದುಮಂದಿ ಗಂಡಸರು, ಮೂರುಮಂದಿ ಹೆಂಗಸರು, ಅಷ್ಟೇ ಹಸುಗಳು, ಕತ್ತಲೆ, ಕಟ್ಟಿಗೆ, ಬೆಂಕಿ ಇವುಗಳಿರುವ ಮನೆಯು ನಿಮ್ಮ ವಾಸಸ್ಥಾನವು.

ಭೂತೈಃ ಪ್ರೇತೈಃ ಪಿಶಾಚೈಶ್ಚ ಯತ್ಸ್ಥಾನಂ ಸಮಧಿಷ್ಠಿತಂ ।
ಏಕಾವಿ ಚಾಷ್ಟವಾಲೇಯಂ ತ್ರಿಗವಂ ಪಂಚಮಾಹಿಷಂ ।
ಷಡಶ್ವಂ ಸಪ್ತಮಾತಂಗಂ ತದ್ಗೃಹೇ ವಸತಿಸ್ತವ ॥ ೩೮ ॥
ಉದ್ದಾಲಕಾನ್ನಪಿಟಕಂ ತಪ್ತಸ್ಥಾಲ್ಯಾದಿಭಾಜನಂ ।
ಯತ್ರ ತತ್ರೈವ ಕ್ಷಿಪ್ತಂ ಚ ತವ ತಚ್ಚ ಪ್ರತಿಶ್ರಯಂ ॥ ೩೯ ॥
ಮುಸಲೋಲೂಖಲೇ ಸ್ತ್ರೀಣಾಮಾಸ್ಯಂ ತದ್ವದುದುಂಬರೇ ।
ಭಾಷಣಂ ಕಟುಕಂ ಚೈವ ತತ್ರ ದೇವಿ ಸ್ಥಿತಿಸ್ತವ ॥ ೪೦ ॥
ಖಾದ್ಯಂತೇ ಯತ್ರ ಧಾನ್ಯಾನಿ ಪಕ್ವಾಪಕ್ವಾನಿ ವೇಶ್ಮನಿ ।
ತದ್ವಚ್ಚಾಖಾಶ್ಚ ತತ್ರ ತ್ವಂ ಭೂತೈಸ್ಸಹ ಚರಿಷ್ಯಸಿ ॥ ೪೧ ॥
ಸ್ಥಾಲೀಪಿಧಾನೇ ಯತ್ರಾಗ್ನಿಂ ದದತೇ ವಿಕಲಾ ನರಾಃ ।
ಗೃಹೇ ತತ್ರ ದುರಿಷ್ಟಾನಾಮಶೇಷಾಣಾಂ ಸಮಾಶ್ರಯಃ ॥ ೪೨ ॥
ಮಾನುಷ್ಯಾಸ್ಥಿ ಗೃಹೇ ಯತ್ರ ಅಹೋರಾತ್ರೇ ವ್ಯವಸ್ಥಿತಂ ।
ತತ್ರಾಯಂ ಭೂತನಿವಹೋ ಯಥೇಷ್ಟಂ ವಿಚರಿಷ್ಯತಿ ॥ ೪೩ ॥
ಸರ್ವಸ್ಮಾದಧಿಕಂ ಯೇ ನ ಪ್ರವದಂತಿ ಪಿನಾಕಿನಂ ।
ಸಾಧಾರಣಂ ವದಂತ್ಯೇನಂ ತತ್ರ ಭೂತೈಃ ಸಮಾವಿಶ ॥ ೪೪ ॥

---

೩೮. ಭೂತ, ಪ್ರೇತ, ಪಿಶಾಚಿಗಳೂ, ಒಂದು ಕುರಿ, ಎಂಟು ಕತ್ತೆಗಳು, ಮೂರು ಗೋವುಗಳು, ಐದು ಕೋಣಗಳು, ಆರು ಕುದುರೆಗಳು, ಏಳು ಆನೆಗಳು ಇರುವ ಮನೆಯು ನಿನ್ನ ವಾಸಸ್ಥಳವು.

೩೯. ಚಳ್ಳೆಮರ, ಅನ್ನದಪೆಟ್ಟಿಗೆ, ಸ್ಥಾಲ್ಯಾದಿಪಾತ್ರೆ ಇವುಗಳನ್ನು ಎಸೆದಿರುವ ಸ್ಥಳವು ನಿನ್ನ ವಾಸಸ್ಥಾನವು.

೪೦. ಒನಕೆ, ಒರಳು, ದ್ವಾರದಲ್ಲಿ ಸ್ತ್ರೀಯರ ಮುಖ, ಅತ್ತಿಯಮರ, ಕಟುವಾದಮಾತು ಇವುಗಳಿರುವ ಸ್ಥಳದಲ್ಲಿ ನೀನು ವಾಸಿಸು.

೪೧. ಜನರು ಕೆಲವುಭಾಗ ಪಕ್ವವಾಗಿ ಕೆಲವುಭಾಗ ಪಕ್ವವಾಗದಿರುವ ಧಾನ್ಯಗಳನ್ನೂ, ತರಕಾರಿಗಳನ್ನೂ ತಿನ್ನುವ ಮನೆಯಲ್ಲಿ ನೀನು ಭೂತಗಳೊಡನೆ ಸಂಚರಿಸುವೆ.

೪೨. ಬಡಮನುಷ್ಯರು ಗಡಿಗೆ ಮುಚ್ಚಳದಲ್ಲಿ ಅಗ್ನಿಯನ್ನಿಡುವ ಮನೆಯಲ್ಲಿ ಸಮಸ್ತಾರಿಷ್ಟಗಳೂ ನೆಲೆಸುವುವು.

೪೩. ಹಗಲೂ ರಾತ್ರಿಗಳಲ್ಲಿ ಮನುಷ್ಯರ ಮೂಳೆಯಿರುವ ಮನೆಯಲ್ಲಿ ಈ ಭೂತಗಳ ಸಮೂಹವು ಸ್ವೇಚ್ಛೆಯಾಗಿ ಸಂಚರಿಸುವುದು.

೪೪. ಶಿವನನ್ನು ಎಲ್ಲದೇವತೆಗಳಿಗಿಂತ ಅಧಿಕನನ್ನಾಗಿ ಹೇಳದೆ ಸಾಮಾನ್ಯನನ್ನಾಗಿ ಯಾರು ಹೇಳುವರೊ ಅವರ ಮನೆಯಲ್ಲಿ ನೀನು ಭೂತಗಳೊಡನೆ ನೆಲೆಸು.

ಕನ್ಯಾ ಚ ಯತ್ರ ವೈ ವಲ್ಲೀ ರೋಹೀನಾಮ ಜಟೀ ಗೃಹೇ ।
ಅಗಸ್ತ್ಯಪಾದಪೋ ವಾಪಿ ಬಂಧುಜೀವೋ ಗೃಹೇಷು ವೈ ॥ ೪೫ ॥
ಕರವೀರೋ ವಿಶೇಷೇಣ ಸಂದ್ಯಾವರ್ತಸ್ತಥೈವಚ ।
ಮಲ್ಲಿಕಾ ವಾ ಗೃಹೇ ಯೇಷಾಂ ಭೂತಯೋಗ್ಯಂ ಗೃಹಂ ಹಿ ತತ್ ॥ ೪೬ ॥
ತಾಲಂ ತಮಾಲಂ ಭಲ್ಲಾಂತಿ ತಿಂತಿಣೀಖಂಡಮೇವ ವಾ ।
ಬಕುಲಂ ಕದಲೀಖಂಡಂ ಕದಂಬ ಖದಿರೋಽಪಿ ವಾ ॥ ೪೭ ॥
ನ್ಯಗ್ರೋಧೋ ಹಿ ಗೃಹೇ ಯೇಷಾಮಶ್ವತ್ಥ ಚೂತ ಏವ ವಾ ।
ಉದುಂಬರಶ್ಚ ಪನಸಃ ಸರ್ವಭೂತಪ್ರಿಯಂ ಹಿ ತತ್ ॥ ೪೮ ॥
ಯತ್ರ ಕಾಕಗೃಹಂ ವೈ ಸ್ಯಾತ್ ಆರಾಮೋ ವಾ ಗೃಹೇಽಪಿ ವಾ ।
ಭಿಕ್ಷುಬಿಂಬಂ ಚ ವೈ ಯತ್ರ ಗೃಹೇ ದಕ್ಷಿಣಕೇ ತಥಾ ॥ ೪೯ ॥
ಬಿಂಬಮೂರ್ಧ್ವಗಂ ಚ ಯತ್ರಸ್ಥಂ ತತ್ರ ಭೂತನಿವೇಶನಂ ॥ ೫೦ ॥
ಲಿಂಗಾರ್ಚನಂ ನ ಯತ್ರೈವ ಯತ್ರ ನಾಸ್ತಿ ಜಪಾದಿಕಂ ।
ಯತ್ರ ಭಕ್ತಿವಿಹೀನಾ ವೈ ಭೂತಾನಾಂ ತಾನ್ಗೃಹಾನ್ವದೇತ್ ॥ ೫೧ ॥
ಮಲಿನಾಸ್ಯಾಸ್ತು ಯೇ ಮರ್ತ್ಯಾ ಮಲಿನಾಂಬರಧಾರಿಣಃ ।
ಮಲದಂತಾ ಗೃಹಸ್ಥಾ ಯೇ ಗೃಹಂ ತೇಷಾಂ ಸಮಾವಿಶ ॥ ೫೨ ॥

೪೫-೪೬. ಕನ್ಯಾಲತೆ, ರೋಹಿ ಎಂಬ ಜಟೆಯುಳ್ಳಮರ, ಅಗಸ್ತ್ಯವೃಕ್ಷ, ಬಂಧುಜೀವ, ಕಣಗಲೆ, ನಂದ್ಯಾವರ್ತಗಿಡಗಳು, ಮಲ್ಲಿಗೆಬಳ್ಳಿ ಇರುವ ಮನೆಯು ಭೂತವಾಸಕ್ಕೆ ಯೋಗ್ಯವಾದುದು.

೪೭-೪೮. ತಾಳೆ, ಹೊಂಗೆ. ಭಲ್ಲಾತ, ಹುಣಸೆ, ಬಕುಲ, ಬಾಳೆ, ಈಚಲು, ಖದಿರ, ಆಲ, ಅರಳಿ, ಅತ್ತಿ, ಹಲಸು ಈ ಮರಗಳಿರುವ ಮನೆಯು ಸಕಲ ಭೂತಗಳಿಗೆ ಪ್ರಿಯವಾದುದು.

೪೯-೫೦. ಕಾಗೆಯಗೂಡಿರುವ ತೋಟವೂ, ಮನೆಯೂ, ದಕ್ಷಿಣಭಾಗದಲ್ಲಿಯೂ, ಮೇಲ್ಭಾಗದಲ್ಲಿಯೂ ಸನ್ಯಾಸಿಯ ಪ್ರತಿಮೆಯಿರುವ ಮನೆಯೂ ಭೂತಗಳ ನಿವಾಸಸ್ಥಾನವು.

೫೧. ಲಿಂಗಪೂಜೆಯೂ, ಜಪವೂ, ಭಕ್ತಿಯೂ ಇಲ್ಲದಿರುವ ಮನೆಯು ಭೂತಗಳ ಮನೆಯೆನ್ನಬೇಕು.

೫೨. ಕೊಳೆಯಾದ ಮುಖ, ಬಟ್ಟೆ, ಹಲ್ಲುಗಳುಳ್ಳಗೃಹಸ್ಥರ ನೀನು ಮನೆಯನ್ನು ಪ್ರವೇಶಿಸು.

ಅಗಮ್ಯನಿರತಾ ಯೇ ತು ಮೈಥುನೇ ವ್ಯಭಿಚಾರತಃ ।
ಸಂಧ್ಯಾಯಾಂ ಮೈಥುನಂ ಯಾಂ ಗೃಹಂ ತೇಷಾಂತಿ ಸಮಾವಿಶ ॥ ೫೩ ॥
ಬಹುನಾ ಕಿಂ ಪ್ರಲಾಪೇನ ನಿತ್ಯಕರ್ಮಬಹಿಷ್ಕೃತಾಃ ।
ರುದ್ರಭಕ್ತಿವಿಹೀನಾ ಯೇ ಗೃಹಂ ತೇಷಾಂ ಸಮಾವಿಶ ॥ ೫೪ ॥
ಅದತ್ವಾ ಭುಂಜತೇ ಯೋಽನ್ನಂ ಬಂಧುಭ್ಯೋಽನ್ನಂ ತಥೋದಕಂ ।
ಸಪಿಂಡಾನ್ಯೋದಕಾಂಶ್ಚೈವ ತತ್ಕಾಲಾತ್ತಾನ್ನರಾನ್ವ್ರಜ ॥ ೫೫ ॥
ಯತ್ರಾ ಭಾರ್ಯಾ ಚ ಭರ್ತಾ ಚ ಪರಸ್ಪರವಿರೋಧಿನಾ ।
ಸಹ ಭೂತೈರ್ಗೃಹಂ ತಸ್ಯ ವಿಶ ತ್ವಂ ಭಯವರ್ಜಿತಾ ॥ ೫೬ ॥
ವಾಸುದೇವೇ ರತಿರ್ನಾಸ್ತಿ ಯತ್ರ ನಾಸ್ತಿ ಸದಾ ಹರಿಃ ।
ಜಪಹೋಮಾದಿಕಂ ನಾಸ್ತಿ ಭಸ್ಮ ನಾಸ್ತಿ ಗೃಹೇ ನೃಣಾಂ ॥ ೫೭ ॥
ಪರ್ವಸ್ವಪ್ಯರ್ಚನಂ ನಾಸ್ತಿ ಚತುರ್ದಶ್ಯಾಂ ವಿಶೇಷತಃ ॥ ೫೮ ॥
ಕೃಷ್ಣಾಷ್ಟಮ್ಯಾಂ ಚ ಯೇ ಮರ್ತ್ಯಾಃ ಸಂಧ್ಯಾಯಾಂ ಭಸ್ಮವರ್ಜಿತಾಃ ।
ಪಂಚದಶ್ಯಾಂ ಮಹಾದೇವಂ ನ ಯಜಂತಿ ಚ ತತ್ರ ವೈ ॥ ೫೯ ॥
ಪೌರಜಾನಪದೈರ್ಯತ್ರ ಪ್ರಾಕ್ಪ್ರಸಿದ್ಧಾ ಮಹೋತ್ಸವಾಃ ।
ಕ್ರಿಯಂತೇ ಪೂರ್ವವನ್ನೈವ ತದ್ಗೃಹಂ ವಸತಿಸ್ತವ ॥ ೬೦ ॥

---

೫೩. ಅಗಮ್ಯಳಾದ ಸ್ತ್ರೀಯಲ್ಲಿ ವ್ಯಭಿಚಾರಮಾಡುವವರೂ, ಸಂಧ್ಯಾಕಾಲದಲ್ಲಿ ಮೈಥುನನಿರತರೂ ಆದವರ ಮನೆಯನ್ನು ಪ್ರವೇಶಿಸು.

೫೪. ಹೆಚ್ಚಾಗಿ ಹೇಳಿಯೇನು ? ನಿತ್ಯಕರ್ಮಬಹಿಷ್ಕೃತರೂ, ರುದ್ರನಲ್ಲಿ ಭಕ್ತಿಯಿಲ್ಲದವರೂ ಆದ ಮಾನವರ ಮನೆಗಳನ್ನು ನೀನು ಪ್ರವೇಶಿಸು.

೫೫. ಬಂಧುಗಳಿಗೆ ಅನ್ನನೀರುಗಳನ್ನು ನೀಡದೆ ಭುಂಜಿಸುವ ಸಂಪಿಂಡರನ್ನೂ, ಸೋದಕರನ್ನೂ ಹೊಂದು.

೫೬. ಗಂಡಹೆಂಡಿರು ಪರಸ್ಪರ ಜಗಳವಾಡುವ ಮನೆಯನ್ನು ಭೂತಗಳೊಡನೆ ನೀನು ಭಯವಿಲ್ಲದೆ ಪ್ರವೇಶಿಸು.

೫೭–೬೦. ವಿಷ್ಣುಭಕ್ತಿ, ವಿಷ್ಣುಜಪಹೋಮಾದಿಗಳು, ಭಸ್ಮ ಇವುಗಳಿಲ್ಲದಿರುವುದೂ, ಪರ್ವಕಾಲ, ಚತುರ್ದಶೀದಿನಗಳಲ್ಲಿ ಪೂಜೆಯಿಲ್ಲದಿರುವುದೂ ಆದ ಮನೆಯೂ, ಸಂಧ್ಯಾಕಾಲಗಳಲ್ಲಿಭಸ್ಮವಿಲ್ಲದಿರುವವರೂ ಹುಣ್ಣಿಮೆದಿನ ಮಹೇಶ್ವರನನ್ನು ಪೂಜಿಸದಿರುವವರೂ ಪಟ್ಟಣಿಗರು, ದೇಶದವರು ಇವರೊಡನೆ ಹಿಂದಿನಿಂದ ನಡೆದು ಕೊಂಡು ಬಂದ ಮಹೋತ್ಸವಗಳನ್ನು ಮಾಡದಿರುವವರೂ ಇರುವ ಮನೆಯೂ ನಿನಗೆ ವಾಸಸ್ಥಾನವು.

ವೇದಘೋಷೋ ನ ಯತ್ರಾಸ್ತಿ ಗುರುಪೂಜಾದಿಕಂ ನ ಚ ।
ಪಿತೃಕರ್ಮವಿಹೀನಂ ಚ ತದ್ಭೂತಸ್ಯ ಗೃಹಂ ಸ್ಮೃತಂ ॥ ೭೧ ॥
ರಾತ್ರ್ಯರಾತ್ರೌ ಗೃಹೇ ಯಸ್ಮಿನ್ಕಲಹೋ ಜಾಯತೇ ಮಿಥಃ ।
ಬಾಲಾನಾಂ ಪ್ರೇಕ್ಷಮಾಣಾನಾಂ ಯತ್ರ ವೃದ್ಧಶ್ಚ ಪೂರ್ವತಃ ।
ಭಕ್ಷಯೇತ್ತತ್ರ ವೈ ದೃಷ್ಟ್ವಾ ಭೂತೈಸ್ಸಹ ಸಮಾವಿಶ ॥ ೭೨ ॥
ಕಸ್ಮಿನ್ಮಾಸೇ ದಿನೇ ಚಾಪಿ ಭವಿತ್ರೀ ಲೋಕಪೂಜಿತಾ ।
ಇತ್ಯುಕ್ತೋಽಹಂ ತಯಾ ದೇವಿ ತಾಮವೋಚಂ ಪುನಃ ಪ್ರಿಯೇ ॥ ೭೩ ॥
ಅಮಾ ಯಾ ಮಾಧವೇ ಮಾಸಿ ತಸ್ಮಿನ್ಯಾ ಚ ಚತುರ್ದಶೀ ।
ತಸ್ಯಾ ಮಹೋತ್ಸವಸ್ತತ್ರ ಭವಿತಾ ತೇ ಚಿರಂತನಃ ॥ ೭೪ ॥
ಯಾಃ ಸ್ತ್ರಿಯಃ ತಾಂ ಚ ಯಕ್ಷ್ಯಂತಿ ತಸ್ಮಿನ್ಕಾಲೇ ಮಹೋತ್ಸವೇ ।
ಬಲಿಭಿಃ ಪುಷ್ಪಧೂಪೈಶ್ಚ ಮಾ ತಾಸಾಂ ತ್ವಂ ಗೃಹೇ ವಿಶ ॥ ೭೫ ॥
ನಾರಾಯಣ ಹೃಷೀಕೇಶ ಪುಂಡರೀಕಾಕ್ಷ ಮಾಧವ ।
ಅಚ್ಯುತಾನಂತ ಗೋವಿಂದ ವಾಸದೇವ ಜನಾರ್ದನ ॥ ೭೬ ॥
ನೃಸಿಂಹ ವಾಮನಾಚಿಂತ್ಯ ಕೇಶವೇತಿ ಚ ಯೇ ಜನಾಃ ।
ರುದ್ರ ರುದ್ರೇತಿ ರುದ್ರೇತಿ ಶಿವಾಯ ಚ ನಮೋನಮಃ ॥ ೭೭ ॥

---

೭೧. ವೇದಘೋಷವೂ, ಗುರುಪೂಜೆಯೂ, ಪಿತೃಕರ್ಮವೂ ಇಲ್ಲದಿರುವುದು ಭೂತದಮನೆಯು.

೭೨. ಯಾವ ಮನೆಯಲ್ಲಿ ಪ್ರತಿದಿನಹಗಲುರಾತ್ರಿ ಪರಸ್ಪರ ಜಗಳ ನಡೆಯುವುದೋ; ಎಲ್ಲಿ ಬಾಲಕರು ನೋಡುತ್ತಿರುವಾಗ ವೃದ್ಧರು ತಿನ್ನುವರೊ ಆ ಮನೆಯನ್ನು ಭೂತಗಳೊಡನೆ ಸಂತೋಷದಿಂದ ಪ್ರವೇಶಿಸು.

೭೩. ಪ್ರಿಯಳೆ! ಅವಳು ನನ್ನನ್ನು ಜನರು ಯಾವ ಮಾಸದ ಯಾವ ದಿನ ನನ್ನನ್ನು ಪೂಜಿಸುವರೆಂದು ಕೇಳಲು ನಾನು ಮರಳಿ ಇಂತೆಂದನು.

೭೪. ವೈಶಾಖಮಾಸದ ಚತುರ್ದಶೀ, ಅಮಾವಾಸ್ಯೆ ದಿನಗಳಲ್ಲಿ ನಿನ್ನ ಮಹೋತ್ಸವವು ನಡೆಯುವುದು.

೭೫. ಆ ಮಹೋತ್ಸವ ಕಾಲದಲ್ಲಿ ನಿನ್ನನ್ನು ಬಲಿ, ಪುಷ್ಪ, ಧೂಪಗಳಿಂದ ಪೂಜಿಸಿದ ಸ್ತ್ರೀಯರ ಮನೆಯನ್ನು ನೀನು ಪ್ರವೇಶಿಸಬೇಡ.

೭೬–೭೮. ನಾರಾಯಣ, ಹೃಷೀಕೇಶ, ಪುಂಡರೀಕಾಕ್ಷ, ಮಾಧವ, ಅಚ್ಯುತ, ಅನಂತ, ಗೋವಿಂದ, ವಾಸುದೇವ, ಜನಾರ್ದನ, ನೃಸಿಂಹ, ವಾಮನ, ಅಚಿಂತ್ಯ,

ವಕ್ಷ್ಯಂತಿ ಸತತಂ ಹೃಷ್ಟಾಸ್ತೇಷಾಂ ಧನಗೃಹಾದಿಷು ।
ಆರಾಮೇ ಚೈವ ಗೋಷ್ಠೇ ಚ ಮಾ ವಿಶೇಥಾಃ ಕಥಂಚನ ॥ ೬೮ ॥
ದೇಶಾಚಾರಾನ್ ಜ್ಞಾತಿಧರ್ಮಾನ್ ಜಪಂ ಹೋಮಂ ಚ ಮಂಗಲಂ ।
ದೈವತೇಜ್ಯಾಂ ವಿಧಾನೇನ ಶೌಚಂ ಕುರ್ವಂತಿ ಯೇ ಜನಾಃ ।
ಲೋಕಾಪವಾದಭೀತಾ ಯೇ ಪುಮಾಂಸಸ್ತೇಷು ಮಾ ವಿಶ ॥ ೬೯ ॥

ದೇವ್ಯುವಾಚ :—

ಕದಾ ಪೂಜಾ ಪ್ರಕರ್ತವ್ಯಾ ಭೂತಮಾತುಃ ಸುಖಾರ್ಥಿಭಿಃ ।
ಪುರುಷೈರ್ದೇವದೇವೇಶ ಏತನ್ಮೇ ವಕ್ತುಮರ್ಹಸಿ ॥ ೭೦ ॥

ಈಶ್ವರ ಉವಾಚ :—

ಸರ್ವತ್ರೈಷಾ ಭಗವತೀ ಬಾಲಾನಾಂ ಹಿತಕಾರಿಣೀ ।
ನಾಮಭೇದೈಃ ಕಾಲಭೇದೈಃ ಕ್ರಿಯಾಭೇದೈಶ್ಚ ಪೂಜ್ಯತೇ ॥ ೭೧ ॥
ಪ್ರತಿಪತ್ಪ್ರಭೃತಿ ವೈಶಾಖೇ ಯಾವಚ್ಚತುರ್ದಶೀತಿಥಿಃ ।
ತಾವತ್ಪೂಜಾ ಪ್ರಕರ್ತವ್ಯಾ ಪ್ರೇರಣೇ ಪ್ರೇಕ್ಷಣೇಯಕೈಃ ॥ ೭೨ ॥
ಭಗ್ನಾಮಪಿ ಗತಾಂ ಚೈನಾಂ ಜರತ್ತರುತಲೇ ಸ್ಥಿತಾಂ ।
ಸೇಚಯಿಷ್ಯಂತಿ ಯೇ ಭಕ್ತ್ಯಾ ಜಲಸಂಪೂರ್ಣಗಂಡುಕೈಃ ॥ ೭೩ ॥

ಕೇಶವ, ರುದ್ರ, ಶಿವ ನಿಮಗೆ ನಮಸ್ಕಾರ ಎಂದು ಯಾವಾಗಲೂ ಸಂತೋಷದಿಂದ ಹೇಳುವವರ ಮನೆ, ಬೊಕ್ಕಸ, ತೋಟ, ಕೊಟ್ಟಿಗೆ ಇವುಗಳನ್ನು ಪ್ರವೇಶಿಸಬೇಡ.

೬೯. ದೇಶಾಚಾರ, ಜ್ಞಾತಿಧರ್ಮ, ಜಪ, ಹೋಮ, ಮಂಗಳೋತ್ಸವ, ದೇವತಾಪೂಜೆ, ಶೌಚಗಳನ್ನು ವಿಧಿಯಂತೆ ಮಾಡುವ ಮತ್ತು ಲೋಕಾಪವಾದದಿಂದ ಭಯಗೊಂಡ ಪುರುಷರ ಹತ್ತಿರ ಹೋಗಬೇಡ.

೭೦. ದೇವಿಯು ಹೇಳುತ್ತಾಳೆ:—ದೇವದೇವೇಶ! ಸುಖಾರ್ಥಿಗಳು ಭೂತಮಾತೆಯ ಪೂಜೆಯನ್ನು ಯಾವಾಗ ಮಾಡಬೇಕು? ಇದನ್ನು ನನಗೆ ಹೇಳು.

೭೧. ಈಶ್ವರನು ಹೇಳುತ್ತಾನೆ:—ಬಾಲಕರಿಗೆ ಹಿತವನ್ನುಂಟುಮಾಡುವ ಪೂಜ್ಯಳಾದ ಈ ಭೂತಮಾತೆಯನ್ನು ಬೇರೆ ಬೇರೆ ನಾಮ, ಕಾಲ, ಕ್ರಿಯೆಗಳಿಂದ ಎಲ್ಲೆಡೆಯಲ್ಲಿಯೂ ಆರಾಧಿಸಬೇಕು.

೭೨. ವೈಶಾಖಮಾಸದಲ್ಲಿ ಪಾಡ್ಯ ಮೊದಲ್ಗೊಂಡು ಚತುರ್ದಶಿಯವರೆಗೆ ಈ ಭೂತಮಾತೆಯನ್ನು ನಾಟಕ ಮೊದಲಾದುವುಗಳಿಂದ ಪೂಜಿಸಬೇಕು.

೭೩. ಹಳೆಮರದ ಬುಡದಲ್ಲಿರುವ ಇವಳ ಪ್ರತಿಮೆಯು ಮುರಿದಿದ್ದರೂ ಅದನ್ನು ಭಕ್ತಿಯಿಂದ ನೀರಿನ ಕಲಶಗಳಿಂದ ಅಭಿಷೇಕಮಾಡಿ ಕಂಠಸೂತ್ರ (ಕರಿಮಣಿ) ಚಂದ್ರ ಪುಷ್ಪ, ಧೂಪಗಳಿಂದ ಅರ್ಚಿಸಬೇಕು.

ಗ್ರೀವಾಸೂತ್ರಕಸಿಂದೂರೈಃ ಪುಷ್ಪೈರ್ಧೂಪೈಸ್ತಥಾರ್ಚಯೇತ್ ।
ತತ್ರಸಿದ್ಧವಟಃ ಪೂಜ್ಯಃ ಶಾಖಾಂ ಚಾಸ್ಯ ವಿನಿಕ್ಷಿಪೇತ್ ॥ ೭೪ ॥
ಪೂಜಿತಾಂ ತಾಂ ನರೈರ್ಯತ್ನಾದವಲೋಕ್ಯ ಶುಭೇಪ್ಸುಭಿಃ ।
ಭೋಜಯೇತ್ಕ್ಷಿಪ್ರಾ ಸಂಯಾವ ಕೃಶರಾಪೂಪ ಪಾಯಸೈಃ ॥ ೭೫ ॥
ಏವಂ ವಿಧಿಂ ಯಃ ಕುರುತೇ ಪುರುಷೋ ಭಕ್ತಿಭಾವತಃ ।
ಸ ಪುತ್ರಪಶುವೃದ್ಧಿಂ ಚ ಶರೀರಾರೋಗ್ಯಮಾಪ್ನುಯಾತ್ ॥ ೭೬ ॥
ನ ಶಾಕಿನ್ಯೋ ಗೃಹೇ ತಸ್ಯ ನ ಪಿಶಾಚಾ ನ ರಾಕ್ಷಸಾಃ ।
ಪೀಡಾಂ ಕುರ್ವಂತಿ ಶಿಶವೋ ಯಾಂತಿ ವೃದ್ಧಿಮನಾಮಯಾಂ ॥ ೭೭ ॥
ಅಥ ದೇವಿ ಪ್ರವಕ್ಷ್ಯಾಮಿ ಪ್ರತಿಪತ್ಪ್ರಭೃತಿ ಕ್ರಮಾತ್ ।
ಯಥೋತ್ಸವೋ ನರೈಃ ಕಾರ್ಯಃ ಪ್ರೇರಣೀಪ್ರೇಕ್ಷಣೀಯಕೈಃ ॥ ೭೮ ॥
ವಿಕರ್ಮಫಲನಿರ್ದೇಶೈಃ ಪಾಖಂಡಾನಾಂ ವಿಡಂಬನೈಃ ।
ಪ್ರದರ್ಶ್ಯತೇ ಹಾಸ್ಯಪರೈರ್ನರೈರದ್ಭುತಚೇಷ್ಟಿತೈಃ ॥ ೭೯ ॥
ಪಂಚಮ್ಯಾಂ ತು ವಿಶೇಷೇಣ ರಾತ್ರೌ ಕೋಲಾಹಲಃ ಶುಭೇ ।
ಜಾಗರಂ ತತ್ರ ಕುರ್ವೀತ ದೇವೀಂ ಪೂಜ್ಯ ಪ್ರಯತ್ನತಃ ॥ ೮೦ ॥

---

೭೪. ಅಲ್ಲಿರುವ ಸಿದ್ಧವಟ ವೃಕ್ಷವನ್ನು ಪೂಜಿಸಿ ಇದರ ಕೊಂಬೆಯನ್ನು ನೆಡಬೇಕು.

೭೫. ಶುಭವನ್ನು ಬಯಸುವ ಮಾನವರು ಪೂಜಿಸಲ್ಪಟ್ಟ ಆ ದೇವಿಯನ್ನು ದರ್ಶನಗೈದು ಬ್ರಾಹ್ಮಣರನ್ನು ಕ್ಷಿಪ್ರಾ, ಸಂಯಾವ, ಹುಗ್ಗಿ, ಪಾಯಸಗಳಿಂದ ಭೋಜನ ಮಾಡಿಸಬೇಕು.

೭೬. ಹೀಗೆ ಭಕ್ತಿಯಿಂದ ಈ ವಿಧಿಯನ್ನನುಷ್ಠಾನ ಮಾಡುವ ಮಾನವನು ಪುತ್ರ, ಪಶುವೃದ್ಧಿಯನ್ನೂ, ಶರೀರಾರೋಗ್ಯವನ್ನೂ ಹೊಂದುವನು.

೭೭. ಅವನ ಮನೆಯಲ್ಲಿ ಶಾಕಿನಿ, ಪಿಶಾಚ, ರಾಕ್ಷಸರು ಪೀಡಿಸುವುದಿಲ್ಲ ಶಿಶುಗಳು ರೋಗವಿಲ್ಲದೆ ವೃದ್ಧಿಗೊಳ್ಳುವುವು.

೭೮–೭೯. ದೇವಿ! ಬಳಿಕ ಪಾಡ್ಯ ಮೊದಲ್ಗೊಂಡು ಮಾನವರು ದುಷ್ಕರ್ಮ ವನ್ನು ಸೂಚಿಸುವುದು, ಪಾಷಂಡಿಗಳನ್ನು ಅಣಕಿಸುವುದು, ಹಾಸ್ಯಮಾಡುವುದು, ಆಶ್ಚರ್ಯಕಾರ್ಯವನ್ನು ತೋರಿಸುವುದು ಇವುಗಳೇ ಮೊದಲಾದ ಪ್ರೇರಣೀ ಪ್ರೇಕ್ಷಣೀ ಯಕಗಳಿಂದ ಹೇಗೆ ಉತ್ಸವವನ್ನು ಮಾಡಬೇಕೆಂಬುದನ್ನು ಕ್ರಮವಾಗಿ ಹೇಳುವೆನು.

೮೦. ಪಂಚಮಿ ದಿನ ದೇವಿಯನ್ನು ಪೂಜಿಸಿ ರಾತ್ರಿ ಕೋಲಾಹಲದಿಂದ ಜಾಗರಣೆಮಾಡಬೇಕು.

ವಿಶ್ವಸ್ಯ ಧನಲೋಭೇನ ಸ್ವಾಧ್ಯಾಯೀ ನಿಹತಃ ಪತಿಃ ।
ಆರೋಪ್ಯಮಾಣಂ ಶೂಲಾಗ್ರಮೇನಂ ಪಶ್ಯತ ಭೋ ಜನಾಃ ॥ ೮೧ ॥
ದೃಷ್ಟೋ ಭವದ್ಭಿರ್ದುಷ್ಟಃ ಸಃ ಪರದಾರಾವಮರ್ಶಕಃ ।
ಛಿತ್ವಾ ಹಸ್ತೌ ಚ ಖಡ್ಗೇನ ಖರಾರೂಢಸ್ತು ಗಚ್ಛತಿ ॥ ೮೨ ॥
ಶೀರ್ಣಶ್ಚೈವಾಸಿಪತ್ರೇಣ ಅಸ್ಯಾಭರಣಭೂಷಿತಃ ।
ಸುಖಾಸನ ಸಮಾರೂಢಃ ಸುಕೃತೀ ಯಾತ್ಯಸೌ ಸುಖಂ ॥ ೮೩ ॥
ಹೇ ಜನಾಃ ಕಿಂ ಪಶ್ಯಧ್ವಂ ಸ್ವಾಮಿದ್ವೇಷಕರಂ ಪರಂ ।
ಕರಪತ್ರೈರ್ವಿದಾರ್ಯಂತಮುಚ್ಛಲಚ್ಛೋಣಿತಾಂತರಂ ॥ ೮೪ ॥
ಚೌರಃ ಕಿಲಾಯಂ ಸಂಪ್ರಾಪ್ತಃ ಸರ್ವೋದ್ವೇಗಕರಃ ಪರಃ ।
ದಂಡಪ್ರಹಾರಾಭಿಹತೋ ನೀಯತೇ ದಂಡಪಾಶಕೈಃ ॥ ೮೫ ॥
ಪ್ರೇಕ್ಷಕೈಶ್ಚೇಷ್ಟಿತಃ ಶಶ್ವದಾರಟನ್ವಿವಿಧೈಃ ಸ್ವರೈಃ ।
ಸಂಯಮ್ಯ ನೀಯತೇ ಹಂತು ಲಜ್ಜಿತೋಽಧೋಮುಖೋ ಜನಾಃ ॥ ೮೬ ॥
ಸಿತಕೇಶಂ ಸತಶ್ಮಶ್ರುಂ ಸಿತಾಂಬರಧರಧ್ವಜಂ ।
ವಿಟಂಕಾದ್ಯೈಶ್ಚ ಚೇಟೀಭಿಃ ಹನ್ಯಮಾನಂ ನ ಪಶ್ಯಥ ॥ ೮೭ ॥

---

೮೧. ಜನರೇ! ವೇದಾಧ್ಯಯನ ಮಾಡಿದ ವಿಶ್ವಪತಿಯು ಹಣದ ಲೋಭದಿಂದ ಕೊಲ್ಲಲ್ಪಟ್ಟನು. ಶೂಲಾಗ್ರಕ್ಕೆ ಏರಿಸಲ್ಪಡುತ್ತಿರುವ ಇವನನ್ನು ನೋಡಿರಿ.

೮೨–೮೩. ಪರಪತ್ನೀಗಮನ ಮಾಡಿ ದುಷ್ಟನಾದ ಇವನು ಕತ್ತಿಯಿಂದ ಕೈಗಳು ಕತ್ತರಿಸಲ್ಪಟ್ಟು ಕತ್ತೆಯನ್ನೇರಿ ಹೋಗುತ್ತಿದ್ದಾನೆ. ಇವನನ್ನು ನೀವು ನೋಡಿದಿರೊ? ಈ ಪುಣ್ಯವಂತನು ಕತ್ತಿಯ ಆಭರಣದಿಂದ ಅಲಂಕಾರಗೊಂಡು ಸುಖಾಸನದಲ್ಲಿ ಕುಳಿತು ಸೌಖ್ಯವಾಗಿ ಹೋಗುತ್ತಿದ್ದಾನೆ.

೮೪. ಜನರೆ! ಸ್ವಾಮಿ ದ್ರೋಹ ಮಾಡಿದವನೂ, ಗರಗಸದಿಂದ ಸೀಳಲ್ಪಡುತ್ತಿರುವವನೂ, ಚಿಮ್ಮುತ್ತಿರುವ ರಕ್ತವುಳ್ಳವನೂ ಆದ ಈ ಮತ್ತೊಬ್ಬನನ್ನು ನೀವು ನೋಡುವುದಿಲ್ಲವೆ ?

೮೫–೮೬. ಸಕಲರಿಗೂ ವ್ಯಥೆಯನ್ನುಂಟುಮಾಡುವ ಈ ಕಳ್ಳನು ಬಂದನು. ದಂಡ ಮತ್ತು ಹಗ್ಗಗಳನ್ನು ಹಿಡಿದುಕೊಂಡಿರುವ ರಾಜಪುರುಷರಿಂದ ಹೊಡೆಯಲ್ಪಟ್ಟ ಇವನು ಪ್ರೇಕ್ಷಕರು ಹಿಂಸಿಸುವುದರಿಂದ ನಾನಾ ಸ್ವರದಿಂದ ಕೂಗುತ್ತ ಕೊಲ್ಲಲು ಒಯ್ಯಲ್ಪಡುತ್ತಿದ್ದಾನೆ. ಜನರು ಇವನನ್ನು ನೋಡಿ ನಾಚಿಕೆಯಿಂದ ತಲೆ ತಗ್ಗಿಸಿಕೊಂಡಿರುವರು.

೮೭. ಬೆಳ್ಳಗಿರುವ ಕೂದಲು, ಮೀಸೆಗಳುಳ್ಳವನೂ, ಬಿಳಿಬಟ್ಟೆಯನ್ನು ಕಟ್ಟಿರುವ ಧ್ವಜವುಳ್ಳವನೂ ಆದ ವಿಟಚೇಟಿಯರಿಂದ ಹೊಡೆಯಲ್ಪಡುತ್ತಿರುವ ಇವನನ್ನು ನೋಡುವುದಿಲ್ಲವೆ. ?

ಗೃಹಾನ್ನಿಷ್ಕ್ರಮ್ಯ ಮಾಂ ರಂಡಾಂ ಗೃಹಂ ನೀತ್ವಾSಕರೋದ್ರತಿಂ ।
ಕಸ್ಮಾದಸೌ ನ ಕುರುತೇ ಮೂಢೋ ಭರಣಪೋಷಣಂ ॥ ೮೮ ॥
ಭೈರವಾಭರಣೋ ನೇತಾ ಸದಾ ಘೂರ್ಣಿತಲೋಚನಃ ।
ಪ್ರವೃತ್ತತಂದ್ರವನ್ಮೂಢೋ ವಧ್ಯಶ್ಚಾಸಾವಿತಸ್ತತಃ ॥ ೮೯ ॥
ನಿರ್ವೇದಕೋSಸ್ಯ ಹೃದಯೇ ಧನಕ್ಷೇತ್ರಾದಿ ಸಂಭವಃ ।
ಗೃಹೀತಂ ಯದನೇನಾದ್ಯ ಬಾಲೇನಾಪಿ ಮಹಾವ್ರತಂ ।
ರಕ್ತಾಕ್ಷಂ ಕಾಕಕೃಷ್ಣಾಂಗಂ ಸತ್ವರಂ ಕಿಂ ನ ಪಶ್ಯಥ ॥ ೯೦ ॥
ತರುಕೋಟರಗಾನ್ಬದ್ಧ್ವಾ ಅನ್ಯಾನ್ಯ್ಯಂಖಲಯಾ ತಥಾ ।
ಶತಾಘ್ನೈಃ ಕಾಷ್ಠಾಕೈಶ್ಚೈವ ಬಹುಭಿಃ ಶಕಲೀಕೃತಾನ್ ॥ ೯೧ ॥
ವಿಮುಕ್ತಹಕ್ಕಾಹುಂಕಾರಾನ್ ಸುಪ್ರಹಾರಾನ್ನಿರೀಕ್ಷತ ॥ ೯೨ ॥
ಇಮಾಂ ಕೃಷ್ಣಾರ್ಧವದನಾಂ ಗ್ರಹೀಷ್ಯಸಿ ದುರಾತ್ಮಿಕಾಂ ।
ವಿಮುಕ್ತಕೇಶಾಂ ನೃತ್ಯಂತೀಂ ಪಶ್ಯಧ್ವಂ ಯೋಗಿನೀಮಿವ ॥ ೯೩ ॥

---

೮೮. ಮುಂಡೆಯಾದ ನನ್ನನ್ನು ಮನೆಯಿಂದ ಎಳೆದುಕೊಂಡು ಹೋಗಿ ತನ್ನ ಮನೆಯಲ್ಲಿಟ್ಟುಕೊಂಡು ರಮಿಸಿದ ಈ ಮೂಢನು ಏಕೆ ನನ್ನನ್ನು ರಕ್ಷಿಸುವುದೂ, ಪೋಷಣೆಮಾಡುವುದೂ ಇಲ್ಲ.

೮೯. ಭಯಂಕರವಾದ ಆಭರಣಗಳುಳ್ಳವನೂ, ಯಾವಾಗಲೂ ತಿರುಗುತ್ತಿರುವ ಕಣ್ಣುಗಳುಳ್ಳವನೂ, ಮೂಢನೂ ಆದ ಈ ನಾಯಕನು (ಮುಂದಾಳು) ಈ ಕಡೆ ಆ ಕಡೆ ಸಂಚರಿಸುತ್ತಿರುವವನು. ಇವನನ್ನು ವಧಿಸಬೇಕು.

೯೦. ಧನಕ್ಷೇತ್ರಾದಿ ನಾಶದಿಂದುಂಟಾದ ವೈರಾಗ್ಯವುಳ್ಳ ಇವನು ಬಾಲಕನಾದರೂ ಮಹಾವ್ರತವನ್ನು ಕೈಕೊಂಡಿರುವನು. ಕೆಂಪು ಕಣ್ಣುಗಳುಳ್ಳವನೂ, ಕಾಗೆಯಂತೆ ಕಪ್ಪು ಅವಯವಗಳುಳ್ಳವನೂ ಆದ ಇವನನ್ನು ಜಾಗ್ರತೆಯಾಗಿ ಏಕೆ ನೋಡುವುದಿಲ್ಲ.

೯೧-೯೨. ಮರದ ಪೊಟರೆಯಿಂದ ತೆಗೆದು ಸರಪಣಿಯಿಂದ ಕಟ್ಟಲ್ಪಟ್ಟವೂ, ಬಾಣ, ಕಟ್ಟಿಗೆಗಳಿಂದ ಸೀಳಿರುವುವೂ, ಹುಂಕಾರವನ್ನು ಮಾಡುತ್ತಿರುವುವೂ, ಚೆನ್ನಾಗಿ ಪ್ರಹಾರವುಳ್ಳವೂ ಆದ ಈ ಪಕ್ಷಿಗಳನ್ನು ನೋಡಿರಿ.

೯೩. ಕಪ್ಪಾದ ಅರ್ಧಮುಖವುಳ್ಳವಳೂ, ದುರಾತ್ಮಳೂ ಆದ ಇವಳನ್ನು ಹಿಡಿದುಕೊಳ್ಳುವಿರಾ ? ಕೂದಲನ್ನು ಬಿಡಿಸಿಕೊಂಡು ಯೋಗಿನಿಯಂತೆ ಕುಣಿಯುತ್ತಿರುವ ಇವಳನ್ನು ನೋಡಿರಿ.

ಗಂಭೀರನೂಪುರಧ್ವಾನಪ್ರವೃದ್ಧೋದ್ಧತತಾಂಡವಾ ।
ಉನ್ಮತ್ತನೇತ್ರಚರಣಾ ಯಾತ್ಯೇಷಾ ಡಿಂಭಮಂಡಲೀ ॥ ೯೪ ॥

ಕಟೀತಟಸ್ಥಪಿಟಿಕೋಲ್ಲಸತ್ಕಂಬಲಧಾರಿಣೀ ।
ಅಟತೇ ನಟತೀ ಹ್ಯುರ್ವೀಂ ಪರಿತಶ್ಚ ಗುಹಾದ್ಗುಹಂ ॥ ೯೫ ॥

ಇತ್ಯೇವಮಾದಿಭಿರ್ನಿತ್ಯಂ ಪ್ರೇರಣೀಪ್ರೇಕ್ಷಣೀಯಕೈಃ ।
ಪ್ರೇರಯೇತ್ತಾನ್ಮಹಾಸಿದ್ಧ್ಯೈ ಪುತ್ರಭ್ರಾತೃಸುಹೃದ್ವೃತಃ ॥ ೯೬ ॥

ಏಕಾದಶ್ಯಾಂ ನವಮ್ಯಾಂ ವಾ ದೀಪಂ ಪ್ರಜ್ವಾಲ್ಯ ಕುಂಡಕಂ ।
ಮುಖಬಿಂಬಾನಿ ತತ್ರೈವ ಲೋಕದಾರುಕೃತಾನಿ ವೈ ॥ ೯೭ ॥

ವಿಚಿತ್ರಾಣಿ ಮಹಾರ್ಹಾಣಿ ರೌದ್ರಶಾಂತಾನಿ ಕಾರಯೇತ್ ।
ಮಾತೃಣಾಂ ಚಂಡಿಕಾದೀನಾಂ ರಾಕ್ಷಸಾನಾಂ ತಥೈವ ಚ ॥ ೯೮ ॥

ಭೂತಪ್ರೇತಪಿಶಾಚಾನಾಂ ಶಾಕಿನೀನಾಂ ತಥೈವ ಚ ।
ಮುಖಾನಿ ಕಾರಯೇತ್ತತ್ರ ಹಾವ ಭಾವ ಕೃತಾನಿ ಚ ॥ ೯೯ ॥

೯೪–೯೫. ಗಂಭೀರವಾದ ಕಾಲ್ಗೆಜ್ಜೆಯ ಧ್ವನಿಯನ್ನು ಮಾಡುತ್ತ ಉದ್ಧತವಾಗಿ ಕುಣಿಯುತ್ತಿರುವವರೂ, ಹುಚ್ಚನಂತೆ ಕಣ್ಣು, ಕಾಲುಗಳುಳ್ಳವರೂ, ಸೊಂಟದಲ್ಲಿಟ್ಟಿರುವ ಪೆಟ್ಟಿಗೆಯಲ್ಲಿ ವಿರಾಜಿಸುತ್ತಿರುವ ಕಂಬಳಿಯುಳ್ಳವರೂ ಆದ ಬಾಲಕರ ಗುಂಪು ಕುಣಿಯುತ್ತ ಮನೆಯಿಂದ ಮನೆಗೆ ಸಂಚರಿಸುತ್ತಿದೆ.

೯೬. ಇದೇ ಮೊದಲಾಗುಳ್ಳ ಪ್ರೇರಣೀ ಪ್ರೇಕ್ಷಣೀಯಕಗಳಿಂದ ಮಕ್ಕಳು, ಸಹೋದರರು, ಮಿತ್ರರು ಇವರಿಂದ ಸಹಿತನಾಗಿ ಸಾಮಾಜಿಕರನ್ನು ಪ್ರೇರಿಸಬೇಕು. (ಆನಂದಗೊಳಿಸಬೇಕು).

೯೭–೧೦೦. ಏಕಾದಶೀ ಅಥವಾ ನವಮಿಯದಿನ ಕುಂಡದ ಹತ್ತಿರ ದೀಪವನ್ನು ಹೊತ್ತಿಸಬೇಕು. ಚಂಡಿಕಾದಿ ಮಾತೃಗಳು, ರಾಕ್ಷಸರು, ಭೂತ, ಪ್ರೇತ, ಪಿಶಾಚಗಳು, ಶಾಕಿನಿಗಳು ಇವರ ಹಾವಭಾವದಿಂದ ಸಹಿತವಾದುವೂ, ಆಶ್ಚರ್ಯಕರವಾದುದೂ, ಅತ್ಯುತ್ತಮವಾದುವೂ, ಭಯಂಕರವೂ, ಶಾಂತವಾದುವೂ ಆದ ಮುಖಗಳನ್ನು ಮರದಿಂದ ನಿರ್ಮಿಸಿ ಬಣ್ಣವನ್ನು ಹಚಿ

ರಕ್ಷಿಭಿರ್ಬಹುಭಿರ್ಗುಪ್ತಂ ತಿರ್ಯಗ್ಧ್ವನಿಪುರಃಸರಂ ।
ಅಮಾವಾಸ್ಯಾಂ ಮಹಾದೇವಿ ಕ್ಷಿಪೇತ್ಪೂಜಾಕ್ರಮೈರ್ನರಃ ॥ ೧೦೦ ॥
ತತಃ ಪ್ರದೋಷಸಮಯೇ ಯತ್ರ ದೇವೀ ಜನೈರ್ವೃತಾ ।
ತತ್ರ ಗಚ್ಛೇನ್ಮಹಾರಾವೈಃ ಫೇತ್ಕಾರಾಕುಲಕೀರ್ತನೈಃ ॥ ೧೦೧ ॥
ವೀರಚರ್ಯಾವಿಧಾನೇನ ನಗರೇ ಭ್ರಮಯೇನ್ನಿಶಿ ।
ವೀರಚರ್ಯಾ ಸ ಕಥಿತೋ ದೀಪಃ ಸರ್ವಾರ್ಥಸಾಧಕಃ ॥ ೧೦೨ ॥
ನಿತ್ಯಂ ನಿಷ್ಕ್ರಾಮಯೇದ್ದೀಪಂ ಯಾವತ್ಪಂಚದಶೀತಿಥಿಃ ।
ಪಂಚದಶ್ಯಾಂ ಪ್ರಕುರ್ವೀತ ಭೂತಮಾತುರ್ಮಹೋತ್ಸವಂ ।
ತಸ್ಯ ಗೃಹೇಶ್ವರಂ ಯಾವದ್ಗೃಹೇ ವಿಘ್ನಂ ನ ಜಾಯತೇ ॥ ೧೦೩ ॥
ಅಥ ಕಾಲಾಂತರೇಽತೀತೇ ಭೂತಮಾತುಃ ಶರೀರತಃ ।
ಜಾತಾಃ ಪ್ರಸ್ವೇದಬಿಂದುಭ್ಯಃ ಪಿಶಾಚಾಃ ಪಂಚಕೋಟಯಃ ॥ ೧೦೪ ॥
ಸರ್ವೇ ತೇ ಕ್ರೂರವದನಾ ಜಿಹ್ವಾಜ್ವಾಲಾಕೃಶೋದರಾಃ ।
ಪಾಣಿಪಾತ್ರಾಃ ಪಿಶಾಚಾಸ್ತೇ ನಿಸ್ಪೃಷ್ಟಬಲಿಭೋಜನಾಃ ॥ ೧೦೫ ॥

ಅವುಗಳನ್ನು ಅಮಾವಾಸ್ಯೆಯ ದಿನ ಅನೇಕ ಮಂದಿ ರಕ್ಷಕರೊಡನೆ ಧ್ವನಿಗೈಯ್ಯುತ್ತ ಪೂಜಾಕ್ರಮಗಳಿಂದ ಇಡಬೇಕು.

೧೦೧–೧೦೨. ಬಳಿಕ ಪ್ರದೋಷಕಾಲದಲ್ಲಿ ದೇವಿಯಿರುವ ಸ್ಥಳಕ್ಕೆ ಫೇತ್ಕಾರ ಮೊದಲಾದ ಧ್ವನಿಗಳೊಡನೆ ಹೋಗಿ ಆ ಮುಖಬಿಂಬಗಳನ್ನು ರಾತ್ರಿ ಪಟ್ಟಣದಲ್ಲಿ ವೀರಚರ್ಯಾಕ್ರಮದಿಂದ ಸ್ತುತಿಸಬೇಕು. ಸಕಲಾರ್ಥಗಳನ್ನೀಯುವ ದೀಪವೇ ವೀರಚರ್ಯೆಯೆನ್ನಿಸಿಕೊಳ್ಳುವುದು.

೧೦೩. ಹೀಗೆ ಹುಣಿಮೆಯವರೆಗೆ ದೀಪದೊಡನೆ ಸುತ್ತಿಸಿ ಹುಣ್ಣಿಮೆದಿನ ಭೂತಮಾತೆಯ ಮಹೋತ್ಸವವನ್ನು ಮಾಡಬೇಕು. ಇದರಿಂದ ಮನೆಯ ಯಜಮಾನನು ಇರುವವರೆಗೆ ಆ ಮನೆಯಲ್ಲಿ ವಿಘ್ನಗಳುಂಟಾಗುವುದಿಲ್ಲ.

೧೦೪. ತರುವಾಯ ಅನೇಕ ಕಾಲವು ಕಳೆಯಲು ಭೂತಮಾತೆಯ ಶರೀರದ ಬೆವರಿನ ಹನಿಗಳಿಂದ ಐದುಕೋಟಿ ಪಿಶಾಚಗಳು ಹುಟ್ಟಿದುವು.

೧೦೫–೧೦೬. ಅವುಗಳೆಲ್ಲ ಕ್ರೂರಮುಖವುಳ್ಳವೂ, ನಾಲಗೆಯೆಂಬ ಅಗ್ನಿ ಜ್ವಾಲೆಗಳುಳ್ಳವೂ, ಕೃಶವಾದ ಹೊಟ್ಟೆಯುಳ್ಳವೂ, ಕೈಯೆಂಬ ಪಾತ್ರೆಯುಳ್ಳವೂ,

ಧಮನೀಸಂತತಾಃ ಶುಷ್ಕಾಃ ಶ್ಮಶ್ರುಲಾಶ್ಚರ್ಮವಾಸಸಃ ।
ಉಲೂಖಲೈರಾಭರಣೈಃ ಶೂರ್ಪಚ್ಛತ್ರಾಸನಾಂಬರಾಃ ॥ ೧೦೬ ॥

ನಕ್ತಂಜ್ವಲಿತಕೇಶಾಢ್ಯಾಃ ಅಂಗಾರಾನುದ್ಗಿರಂತಿ ವೈ ।
ಅಂಗಾರಕಾಃ ಪಿಶಾಚಾಸ್ತೇ ಮಾತೃಮಾರ್ಗಾನುಸಾರಿಣಃ ॥ ೧೦೭ ॥

ಆಕರ್ಣದಾರಿತಾಸ್ಯಾಶ್ಚ ಲಂಬಭ್ರೂಸ್ಥೂಲನಾಸಿಕಾಃ ।
ಬಲಾಢ್ಯಾಸ್ತೇ ಪಿಶಾಚಾ ವೈ ಸೂತಿಕಾಗೃಹವಾಸಿನಃ ॥ ೧೦೮ ॥

ಪೃಷ್ಠತಃ ಪಾಣಿಪಾದಾಶ್ಚ ಪೃಷ್ಠಗಾ ವಾತರಂಹಸಾ ।
ವಿಷಾದನಾಃ ಪಿಶಾಚಾಸ್ತೇ ಸಂಗ್ರಾಮೇ ಪಿಶಿತಾಶನಾಃ ॥ ೧೦೯ ॥

ಏವಂ ವಿಧಾನ್ಪಿಶಾಚಾಂಸ್ತು ದೃಷ್ಟ್ವಾ ದೀನಾನುಕಂಪಯಾ ।
ತೇಭ್ಯೋಽಹಮವದಂ ಕಿಂಚಿತ್ಕಾರುಣ್ಯಾದಲ್ಪಚೇತಸಾಂ ॥ ೧೧೦ ॥

ಅಂತರ್ಧಾನಂ ಪ್ರಜಾದೇಹೇ ಕಾಮರೂಪಿತ್ವಮೇವಚ ।
ಉಭಯೋಃ ಸಂಧ್ಯಯೋಶ್ಚಾರಂ ಸ್ಥಾನಾನಾಜೀವಿತಂ ತಥಾ ॥ ೧೧೧ ॥

ಬಲಿಯನ್ನು ತಿನ್ನುವುವೂ, ನಾಡಿಗಳಿಂದ ವ್ಯಾಪ್ತವಾದುವೂ, ಒಣಗಿದುವೂ, ಮೀಸೆಯುಳ್ಳುವೂ, ಚರ್ಮದ ಬಟ್ಟೆಯುಳ್ಳುವೂ,ಒರಳಿನ ಒಡವೆಯುಳ್ಳುವೂ, ಮೊರ, ಕೊಡೆ, ಮಣೆಗಳೆ ಬಟ್ಟೆಯಾಗುಳ್ಳವೂ, ರಾತ್ರಿಯಲ್ಲಿ ಉರಿಯುತ್ತಿರುವ ಕೂದಲುಗಳಿಂದ ಕೂಡಿದುವೂ, ಬೆಂಕಿಯಕೆಂಡಗಳನ್ನು ವಮನಮಾಡುವುವೂ, ತಾಯಿಯ ದಾರಿಯನ್ನನುಸರಿಸುವುವೂ, ಕಿವಿಯವರೆಗೆ ಸೀಳಿದ ಮುಖವುಳ್ಳುವೂ, ಜೋಲಾಡುವ ಹುಬ್ಬು, ಸ್ಥೂಲವಾದ ಮೂಗು ಇವುಗಳುಳ್ಳುವೂ, ಬಲವುಳ್ಳುವೂ, ಬಾಣಂತಿಯಮನೆಯಲ್ಲಿ ವಾಸಿಸುವೂ, ಹಿಂಭಾಗದಲ್ಲಿ ಕೈಕಾಲುಳ್ಳುವೂ, ಹಿಂದಕ್ಕೆ ಹೋಗುವುವೂ, ಗಾಳಿಯಂತೆ ವೇಗವುಳ್ಳುವೂ, ವಿಷವನ್ನು ಕುಡಿಯುವೂ, ಯುದ್ಧದಲ್ಲಿ ಮಾಂಸವನ್ನು ತಿನ್ನುವುವೂ ಆಗಿರುವುವು.

೧೧೦. ನಾನು ಇಂತಹ ಪಿಶಾಚಗಳನ್ನು ನೋಡಿ ದೈನ್ಯವುಳ್ಳ ಅವುಗಳಲ್ಲಿ ದಯೆಯಿಂದ ಅವುಗಳನ್ನು ಕುರಿತು ಹೀಗೆಂದನು.

೧೧೧. ಪ್ರಜೆಗಳ ದೇಹದಲ್ಲಿ ಅಡಗಿರುವ ಶಕ್ತಿಯನ್ನೂ, ಸ್ವೇಚ್ಛಾರೂಪವನ್ನೂ, ಎರಡು ಸಂಧ್ಯಾಕಾಲಗಳಲ್ಲಿ ಸಂಚಾರವನ್ನೂಕೊಟ್ಟು ಸ್ಥಳ ಮತ್ತು ಜೀವನವನ್ನು ಹೀಗೆ ಕಲ್ಪಿಸಿದೆನು.

ಗೃಹಾಣಿ ಯಾನಿ ನಗ್ನಾನಿ ಶೂನ್ಯಾನ್ಯಾಯತನಾನಿ ಚ ।
ವಿಧ್ವಸ್ತಾನಿ ಚ ಯಾನಿ ಸ್ಯು ರಚನಾರೋಹಿತಾನಿ ಚ ॥ ೧೧೨ ॥
ರಾಜಮಾರ್ಗೋಪರಥ್ಯಾಶ್ಚ ಚತ್ವರಾಣಿ ತ್ರಿಕಾಣಿ ಚ ।
ದ್ವಾರಾಣ್ಯಟ್ಟಾಲಕಾಂಶ್ಚೈವ ನಿರ್ಗಮಾನ್ಸಂಕ್ರಮಾಂಸ್ತಥಾ ॥ ೧೧೩ ॥
ಪಥೋ ನದೇಶ್ಚ ತೀರ್ಥಾನಿ ಚೈತ್ಯವೃಕ್ಷಾನ್ಮಹಾಪಥಾನ್ ।
ಸ್ಥಾನಾನಿ ತು ಪಿಶಾಚಾನಾಂ ನಿವಾಸಾಯಾದದಾಂ ಪ್ರಿಯೇ ॥ ೧೧೪ ॥
ಅಧಾರ್ಮಿಕಾ ಜನಾಸ್ತೇಷಾಮಾಜೀವ್ಯೋ ವಿಹಿತಃ ಪುರಾ ।
ವರ್ಣಾಶ್ರಮಾಚಾರಹೀನಾಃ ಕಾರುಶಿಲ್ಪಜನಾಸ್ತಥಾ ॥ ೧೧೫ ॥
ಅನುತಾಪಾಶ್ಚ ಸಾಧೂನಾಂ ಚೌರಾ ವಿಶ್ವಾಸಘಾತಿನಃ ।
ಏತೈರನ್ಯೈಶ್ಚ ಬಹುಭಿರನ್ಯಾಯೋಪಾರ್ಜಿತೈರ್ಧನೈಃ ॥ ೧೧೬ ॥
ಆರಭ್ಯತೇ ಕ್ರಿಯಾ ಯಾಸ್ತು ಪಿಶಾಚಾಸ್ತತ್ರ ದೇವತಾಃ ।
ಮಧುಮಾಸದಿನೇ ದಧ್ನಾ ತಿಲಚೂರ್ಣ ಸುರಾಸವೈಃ ॥ ೧೧೭ ॥
ಪೂಪೈರ್ಹಾರಿದ್ರಕೃಶರೈಃ ತಿಲೈರಿಕ್ಷುಗುಡೋದನೈಃ
ಕೃಷ್ಣಾನಿ ಚೈವ ವಾಸಾಂಸಿ ಧೂಮ್ರಾಃ ಸುಮನಸಃ ತಥಾ ॥ ೧೧೮ ॥

೧೧೨–೧೧೪. ಜನರಿಲ್ಲದ ಮನೆಯನ್ನೂ, ಶೂನ್ಯದೇವಾಲಯಗಳನ್ನೂ, ಹಾಳಾದ ಕಲ್ಪನಾಸ್ಥಳಗಳನ್ನೂ, ದೊಡ್ಡರಸ್ತೆ, ಸಣ್ಣರಸ್ತೆ, ಚೌಕ, ಮೂರುದಾರಿ ಸೇರಿದಸ್ಥಳ, ಬಾಗಿಲು, ಕೋಟೆಯಬುರುಜು, ಹೊರಡುವ ಸ್ಥಳ, ಸೇತುವೆಗಳು, ದಾರಿ, ನದಿ, ತೀರ್ಥ, ಸ್ಮಶಾನದ ಮರಗಳು, ಹೆದ್ದಾರಿ ಇವುಗಳನ್ನೂ ವಾಸಕ್ಕಾಗಿ ಕೊಟ್ಟೆನು.

೧೧೫–೧೨೧. ಅಧಾರ್ಮಿಕರೂ, ವರ್ಣ, ಆಶ್ರಮಗಳ ಆಚಾರವಿಲ್ಲದವರೂ, ಶಿಲ್ಪಿಗಳೂ, ಸಜ್ಜನರನ್ನು ವ್ಯಥೆಗೊಳಿಸುವವರೂ, ವಿಶ್ವಾಸಘಾತುಕರೂ, ಕಳ್ಳರೂ ಇನ್ನೂ ಇತರ ಬಹುಮಂದಿಗಳೂ ಅನ್ಯಾಯದಿಂದ ಸಂಪಾದಿಸಿದ ದ್ರವ್ಯಗಳಿಂದ ಮಾಡುವ ಕಾರ್ಯಗಳಲ್ಲಿ ಪಿಶಾಚಗಳು ದೇವತೆಗಳಾಗಿರುವುವು. ಇವರು ವೈಶಾಖ ಮಾಸದಲ್ಲಿ ನಿವೇದಿಸುವ ಮೊಸರು, ಎಳ್ಳಿನಪುಡಿ, ಹೆಂಡ, ಅಪೂಪ, ಹುಗ್ಗಿ, ಎಳ್ಳು, ಬೆಲ್ಲದಅನ್ನ ಇವುಗಳಿಂದ ಈ ಪಿಶಾಚಗಳು ಜೀವಿಸುವುವು. ಮತ್ತು ಈ ಪಿಶಾಚಗಳಿಗೆ ಕಪ್ಪುವಸ್ತ್ರವನ್ನೂ, ಧೂಮ್ರವರ್ಣದ ಹೂವುಗಳನ್ನೂ ಕಲ್ಪಿಸಿರುವೆನು. ಸಮಸ್ತ ಭೂತಗಳಿಂದ ಸಹಿತಳಾದ ಈ ಭೂತಮಾತೆಯು ಸಮುದ್ರದ ಉತ್ತರದಲ್ಲಿರುವ ಪ್ರಭಾಸಕ್ಷೇತ್ರದಲ್ಲಿ ನೆಲೆಸಿರುವಳು. ದೇವಿಯ ಈ ಪಾಪವನ್ನು ನಿವಾರಿಸುವ ಉತ್ಪತ್ತಿ

ಸರ್ವಭೂತಪಿಶಾಚಾನಾಂ ಕೃತಾ ದೇವೀ ಮಯಾ ಶುಭಾ ।
ಏವಂ ವಿಧಾ ಭೂತಮಾತಾ ಸರ್ವಭೂತಗಣೈರ್ವೃತಾ ॥ ೧೧೯ ॥
ಪ್ರಭಾಸೇ ಸಂಸ್ಥಿತಾ ದೇವೀ ಸಮುದ್ರಾದುತ್ತರೇಣ ತು ।
ಯ ಏತಾಂ ವೇದ ವೈ ದೇವ್ಯಾ ಉತ್ಪತ್ತಿಂ ಪಾಪನಾಶಿನೀಂ ॥ ೧೨೦ ॥
ಕುತ್ಸಿತಾ ಸಂತತಿಸ್ತಸ್ಯ ನ ಭವೇಚ್ಚ ಕದಾಚನ ।
ಭೂತಪ್ರೇತಪಿಶಾಚಾನಾಂ ನ ದೋಷೈಃ ಪರಿಭೂಯತೇ ॥ ೧೨೧ ॥
ಸರ್ವಪಾಪವಿನಿರ್ಮುಕ್ತಃ ಸರ್ವಸೌಭಾಗ್ಯಸಂಯುತಃ ।
ಸರ್ವಾನ್ಕಾಮಾನವಾಪ್ನೋತಿ ನಾರೀ ಹೃದಯನಂದನಃ ॥ ೧೨೨ ॥

ಯೇ ಮಾನಯಂತಿ ನಿಜಹಾಸಕಲೈರ್ವಿಲಾಸೈಃ
ಸಂಸೇವಯಾ ಅಭಯದಾಂ ಭವಭೂತಮಾತಾಂ ।
ತೇ ಭ್ರಾತೃಭೃತ್ಯಸುತಬಂಧುಜನೈರ್ಯುತಾಶ್ಚ
ಸರ್ವೋಪಸರ್ಗರಹಿತಾಃ ಸುಖಿನೋ ಭವಂತಿ ॥ ೧೨೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೂತಮಾತೃಕಾಮಾಹಾತ್ಮ್ಯವರ್ಣನಂ ನಾಮ
॥ ಸಪ್ತಷಷ್ಟ್ಯುತ್ತರಶತತಮೋಽಧ್ಯಾಯಃ ॥

ಯನ್ನರಿತವನಿಗೆ ದುಷ್ಟಸಂತತಿಯೂ, ಭೂತಪ್ರೇತ ಪಿಶಾಚಗಳ ದೋಷಗಳೂ ಸಂಭವಿಸುವುದಿಲ್ಲ.

೧೨೨. ಅವನು ಸಕಲ ಪಾಪಮುಕ್ತನೂ, ಸಮಸ್ತ ಸೌಭಾಗ್ಯದಿಂದಕೂಡಿದವನೂ, ಹೆಂಗಸರ ಮನಸ್ಸನ್ನು ಆನಂದಗೊಳಿಸುವವನೂ ಆಗಿ ಸಕಲೇಷ್ಟಾರ್ಥಗಳನ್ನು ಪಡೆಯುವನು.

೧೨೩. ಅಭಯವನ್ನೀಯುವ ಭೂತಮಾತೆಯನ್ನು ತಮ್ಮ ಹಾಸ್ಯವಿಲಾಸ ಮೊದಲಾದುವುಗಳಿಂದ ಸೇವಿಸಿ ಪೂಜಿಸುವ ಮನುಷ್ಯರು ಸಹೋದರ, ಸೇವಕ, ಸುತ, ಬಂಧುಗಳು ಸಹಿತರೂ, ತೊಂದರೆಯಿಲ್ಲದವರೂ ಆಗಿ ಸುಖಗೊಳ್ಳುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೂತಮಾತೃಕಾಮಾಹಾತ್ಮ್ಯವರ್ಣನವೆಂಬ
ನೂರಅರುವತ್ತೇಳನೆಯಅಧ್ಯಾಯವು ಮುಗಿದುದು.

|| ಶ್ರೀಃ ||

ಅಷ್ಟಸಪ್ತತ್ಯುತ್ತರಶತತಮೋಽಧ್ಯಾಯಃ

ಶಾಲಕಟಂಕಟಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವೀಂ ಶಾಲಕಟಂಕಟಾಮ್ ।
ಸಾವಿತ್ರ್ಯಾ ದಕ್ಷಿಣೇ ಭಾಗೇ ರೈವತಾತ್ಪೂರ್ವತಃ ಸ್ಥಿತಾಮ್ ॥ ೧ ॥
ಮಹಾಪಾಪೋಪಶಮನೀಂ ಸರ್ವದುಃಖವಿನಾಶಿನೀಂ ।
ಪೂಜಿತಾಂ ಸರ್ವಗಂಧರ್ವೈಃ ಸ್ಫುರದ್ದಂಷ್ಟ್ರೋಗ್ರಭೀಷಣಾಂ ॥ ೨ ॥
ಮಹಾಪ್ರಚಂಡದೈತ್ಯಘ್ನೀಂ ಪೌಲಸ್ತ್ಯೇನ ಪ್ರತಿಷ್ಠಿತಾಂ ।
ಮಹಿಷಘ್ನೀಂ ಮಹಾಕಾಯಾಂ ಕ್ಷೇತ್ರೇ ಪ್ರಾಭಾಸಿಕೇ ಸ್ಥಿತಾ ॥ ೩ ॥
ಮಾಘೇ ಮಾಸೇ ಚತುರ್ದಶ್ಯಾಂ ಯಸ್ತಾಮಾರಾಧಯೇನ್ನರಃ ।
ಸ ಭವೇತ್ಪಶುಮಾನೀಮಾಂಲ್ಲಕ್ಷ್ಮೀವಾನ್ಪುತ್ರವಾನ್ಸುಧೀಃ ॥ ೪ ॥

ಕನ್ನಡದ ಅನುವಾದ

ಶಾಲಕಟಂಕಟಾಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಸಾವಿತ್ರಿಯ ದಕ್ಷಿಣ ಭಾಗದಲ್ಲಿ ರೈವತ ಪರ್ವತಕ್ಕಿಂತ ಪೂರ್ವದಲ್ಲಿರುವವಳೂ, ಮಹಾಪಾಪವನ್ನೂ, ಸಕಲ ದುಃಖಗಳನ್ನೂ ನೀಗಿಸುವವಳೂ, ಸಕಲ ಗಂಧರ್ವರಿಂದ ಪೂಜಿಸಲ್ಪಟ್ಟವಳೂ, ಪ್ರಕಾಶಮಾನವಾದ ಹಲ್ಲಿನ ಕೊನೆಯಿಂದ ಭಯಂಕರಳೂ, ಅತ್ಯಂತ ಪ್ರಚಂಡನಾದ ಮಹಿಷ ದೈತ್ಯನನ್ನು ಕೊಂದವಳೂ, ರಾವಣನಿಂದ ಪ್ರತಿಷ್ಠೆ ಮಾಡಲ್ಪಟ್ಟವಳೂ, ದೊಡ್ಡ ದೇಹವುಳ್ಳವಳೂ, ಪ್ರಾಭಾಸಿಕ ಕ್ಷೇತ್ರದಲ್ಲಿರುವವಳೂ ಆದ ಶಾಲಕಟಂಕಟಾ ದೇವಿಯನ್ನು ಹೊಂದಬೇಕು.

೪. ಮಾಘಮಾಸದ ಚತುರ್ದಶೀದಿನ ಅವಳನ್ನು ಪೂಜಿಸಿದ ಮಾನವನು ಪಶು, ಬುದ್ಧಿ, ಸಂಪತ್ತು, ಪುತ್ರರುಳ್ಳವನಾಗುವನು.

ಯಸ್ತ್ವಾಂ ಪಶುಪ್ರದಾನೇನ ಸಂತರ್ಪಯತಿ ಭಕ್ತಿತಃ ।
ಬಲಿಪೂಜೋಪಹಾರೈಶ್ಚ ಸ ಸ್ಯಾಚ್ಛತ್ರುವಿವರ್ಜಿತಃ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಾಲಕಟಂಕಟಾಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಷಷ್ಟ್ಯುತ್ತರಶತತಮೋಽಧ್ಯಾಯಃ ॥

---

೫. ಅವಳನ್ನು ಭಕ್ತಿಯಿಂದ ಪೂಜಿಸಿ ಪಶುವನ್ನರ್ಪಿಸಿ ತೃಪ್ತಿಗೊಳಿಸುವ ಮನುಷ್ಯನು ಶತ್ರುಗಳಿಲ್ಲದವನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಾಲಕಟಂಕಟಾಮಾಹಾತ್ಮ್ಯವರ್ಣನವೆಂಬ
ನೂರಅರುವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಸಪ್ತತ್ಯುತ್ತರಶತತಮೋಽಧ್ಯಾಯಃ

ವೈವಸ್ವತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ವೈವಸ್ವತೇಶ್ವರಂ ।
ದೇವ್ಯಾ ದಕ್ಷಿಣದಿಗ್ಭಾಗೇ ಧನುಸ್ತ್ರಿಂಶತಸಂಸ್ಥಿತಂ ॥ ೧ ॥
ವೈವಸ್ವತೇನ ಮನುನಾ ಸ್ಥಾಪಿತಂ ಸರ್ವಕಾಮದಂ ।
ತತ್ಸಮೀಪೇ ದೇವಖಾತಂ ತಿಷ್ಠತೇ ತು ಮಹಾದ್ಭುತಂ ॥ ೨ ॥
ಸ್ನಾತ್ವಾ ತತ್ರ ವರಾರೋಹೇ ಯಸ್ತು ಪೂಜಯತೇ ನರಃ ।
ಪಂಚೋಪಚಾರೈರ್ವಿಧಿನಾ ಭಕ್ತಿಪ್ರಹ್ವೋ ಜಿತೇಂದ್ರಿಯಃ ।
ಜಪೇದಘೋರವಿಧಿನಾ ಸ್ತೋತ್ರಂ ಸಿದ್ಧಿಂ ಸ ಚಾಪ್ನುಯಾತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವೈವಸ್ವತೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕೋನಸಪ್ತತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ವೈವಸ್ವತೇಶ್ವರಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಅನಂತರ ಶಾಲಕಟಂಕಟಾ ದೇವಿಯ ದಕ್ಷಿಣ ದಿಕ್ಕಿನಲ್ಲಿ ಮೂವತ್ತು ಬಿಲ್ಲುಗಳ ದೂರದಲ್ಲಿರುವವನೂ, ವೈವಸ್ವತ ಮನುವಿನಿಂದ ಪ್ರತಿಷ್ಠೆಮಾಡಲ್ಪಟ್ಟವನೂ, ಸಮಸ್ತೇಷ್ಟಾರ್ಥಗಳನ್ನೀಯುವವನೂ ಆದ ವೈವಸ್ವತೇಶ್ವರನನ್ನು ಹೊಂದಬೇಕು. ಅವನ ಹತ್ತಿರ ಅತ್ಯಾಶ್ಚರ್ಯಕರವೂ ದೇವ ನಿರ್ಮಿತವೂ ಆದ ಅದ್ಭುತ ತೀರ್ಥವೊಂದಿರುವುದು.

೩. ಮನುಷ್ಯನು ಅಲ್ಲಿ ಮಿಂದು ವೈವಸ್ವತೇಶ್ವರನನ್ನು ಭಕ್ತಿಯಿಂದ ಜಿತೇಂದ್ರಿಯನಾಗಿ ಪಂಚೋಪಚಾರ ವಿಧಿಯಿಂದ ಪೂಜಿಸಿ ಅಘೋರೇತ್ಯಾದಿ ಸ್ತೋತ್ರವನ್ನು ಜಪಿಸಿದರೆ ಇಷ್ಟಸಿದ್ಧಿಯನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ವೈವಸ್ವತೇಶ್ವರಮಾಹಾತ್ಮ್ಯವರ್ಣನವೆಂಬ
ನೂರಅರುವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಸಪ್ತಸಪ್ತತ್ಯುತ್ತರಶತತಮೋಽಧ್ಯಾಯಃ

ಮಾತೃಗಣಬಲಿದೇವೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರ ಮಾತೃಗಣಾನ್ಸುಧೀಃ ।
ತತ್ರೈವ ಬಲಿದೇವೀಂ ಚ ನಾತಿದೂರೇ ವ್ಯವಸ್ಥಿತಾಂ ॥ ೧ ॥
ಶ್ರಾವಣ್ಯಾಂ ಶ್ರಾವಣೇ ಮಾಸಿ ಯಸ್ತಾಂ ಪೂಜಯತೇ ನರಃ ।
ಪಾಯಸೈರ್ಮಧುನಾ ವಾಪಿ ದಿವ್ಯಪುಷ್ಪೋಪಹಾರಕೈಃ ॥ ೨ ॥
ತಸ್ಯ ವರ್ಷಂ ಮಹಾದೇವಿ ಸುಖಂ ಗಚ್ಛೇತ್ಸುಪೂಜಿತಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾತೃಗಣಬಲದೇವೀಮಾಹಾತ್ಮ್ಯವರ್ಣನಂ ನಾಮ
॥ ಸಪ್ತಸಪ್ತತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮಾತೃಗಣಬಲಿದೇವೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ಅಲ್ಲಿರುವ ಮಾತೃಗಣಗಳನ್ನೂ, ಸಮೀಪದಲ್ಲಿರುವ ಬಲದೇವಿಯನ್ನೂ ಹೊಂದಬೇಕು.

೨–೩. ಶ್ರಾವಣ ಮಾಸದ ಹುಣ್ಣಿಮೆಯ ದಿನ ಪಾಯಸ, ಜೇನುತುಪ್ಪ, ಪುಷ್ಪ ಮೊದಲಾದವುಗಳಿಂದ ಆ ಬಲಿದೇವಿಯನ್ನೂ ಪೂಜಿಸಿದ ಮನುಷ್ಯನು ಒಂದು ವರ್ಷಕಾಲ ಸೌಖ್ಯವನ್ನೂ, ಸನ್ಮಾನವನ್ನೂ ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾತೃಗಣಬಲಿದೇವೀಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಸಪ್ತತ್ಯುತ್ತರಶತತಮೋಽಧ್ಯಾಯಃ

ದಶರಥೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವೀಮೇಕಲ್ಲವೀರಿಕಾಂ ।
ಏಕಲ್ಲವೀರಿಕಾಯಾಮ್ಯೇ ನಾತಿದೂರೇ ವ್ಯವಸ್ಥಿತಾಂ ॥ ೧ ॥
ಪೂರ್ವಂ ದಶರಥೋ ಯೋಽಸೌ ಸೂರ್ಯವಂಶವಿಭೂಷಣಃ ।
ಪ್ರಭಾಸಂ ಕ್ಷೇತ್ರಮಾಸಾದ್ಯ ತಪಶ್ಚಕ್ರೇ ಸುದುಶ್ಚರಂ । ॥ ೨ ॥
ಲಿಂಗಂ ತತ್ರ ಪ್ರತಿಷ್ಠಾಪ್ಯ ತೋಷಯಾಮಾಸ ಶಾಂಕರಂ ।
ಸ ದೇವಂ ಪ್ರಾರ್ಥಯಾಮಾಸ ಪುತ್ರಂ ಚೈವಾಮಿತೌಜಸಂ ॥ ೩ ॥
ದದೌ ತಸ್ಯ ತದಾ ಪುತ್ರಂ ದೇವಂ ತ್ರೈಲೋಕ್ಯಪೂಜಿತಂ ।
ರಾಮೇತಿ ನಾಮ ಯಸ್ಯಾಸೀತ್ತ್ರೈಲೋಕ್ಯೇ ಪ್ರಥಿತಂ ಯಶಃ ॥ ೪ ॥
ಯಸ್ಯಾದ್ಯಾಪೀಹ ಗಾಯಂತಿ ಭೂರ್ಭುವಃಸ್ವರ್ನಿವಾಸಿನಃ ।
ದೇವದೈತ್ಯಾ ಸುರಾಃ ಸರ್ವೇ ವಾಲ್ಮೀಕ್ಯಾದ್ಯಾ ಮಹರ್ಷಯಃ ॥ ೫ ॥

ಕನ್ನಡದ ಅನುವಾದ

ದಶರಥೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಏಕಲ್ಲವೀರಿಕಾದೇವಿಯನ್ನೂ, ಅವಳ ದಕ್ಷಿಣದಲ್ಲಿ ಸಮಾಪದಲ್ಲಿಯೇ ಇರುವ ಶಿವಲಿಂಗವನ್ನೂ ಹೊಂದಬೇಕು

೨. ಹಿಂದೆ ಸೂರ್ಯವಂಶಕ್ಕೆ ಅಲಂಕಾರಪ್ರಾಯನಾದ ದಶರಥರಾಜನು ಪ್ರಭಾಸಕ್ಷೇತ್ರವನ್ನು ಸೇರಿ ದುಷ್ಕರವಾದ ತಪಸ್ಸನ್ನು ಮಾಡಿದನು.

೩. ಅಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿ ಶಂಕರನನ್ನು ಮೆಚ್ಚಿಸಿ ತನಗೆ ಅತಿಶಯ ಬಲವುಳ್ಳ ಪುತ್ರನಾಗಬೇಕೆಂದು ಬೇಡಿಕೊಂಡನು.

೪–೫. ಶಂಕರನು ಅದರಂತೆ ಅವನಿಗೆ ರಾಮನೆಂದು ಹೆಸರುಳ್ಳವನೂ, ಮೂರು. ಲೋಕಗಳಲ್ಲಿ ಪೂಜ್ಯನೂ ಆದ ತನಯನನ್ನು ವರವಾಗಿ ಕೊಟ್ಟನು. ಇವನ ಪ್ರಸಿದ್ಧ ಕೀರ್ತಿಯನ್ನು ಈಗಲೂ ಭೂರ್ಭುವಸ್ವರ್ಲೋಕ ನಿವಾಸಿಗಳಾದ ದೇವ, ದೈತ್ಯ, ಅಸುರರೂ, ವಾಲ್ಮೀಕಿಯೇ ಮೊದಲಾದ ಮಹರ್ಷಿಗಳೂ ಕೊಂಡಾಡುವರು.

ತಲ್ಲಿಂಗಸ್ಯ ಪ್ರಭಾವೇನ ಪ್ರಾಪ್ತಂ ರಾಜ್ಞಾ ಮಹದ್ಯಶಃ ।
ಕಾರ್ತಿಕ್ಯಾಂ ಕಾರ್ತಿಕೇ ಮಾಸಿ ವಿಧಿನಾ ತಂ ಸಮರ್ಚಯೇತ್ ।
ದೀಪಪೂಜೋಪಹಾರೇಣ ಯಶಸ್ವೀ ಸೋಽಪಿ ಜಾಯತೇ ॥ ೬ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಶರಥೇಶ್ವರ ಮಾಹಾತ್ಮ್ಯವರ್ಣನಂ ನಾಮ
॥ ಏಕಸಪ್ತತ್ಯುತ್ತರಶತತಮೋಽಧ್ಯಾಯಃ ॥

---

೬. ದಶರಥರಾಜನು ಆ ಲಿಂಗದ ಮಾಹಾತ್ಮ್ಯಯಿಂದ ಮಹಾಯಶಸ್ಸನ್ನು ಪಡೆದಿರುವನು. ಕಾರ್ತಿಕ ಶುದ್ಧ ಹುಣಿಮೆದಿನ ದೀಪ, ಪೂಜೆ, ಬಲಿಗಳಿಂದ ವಿಧಿಯಂತೆ ಆ ದಶರಥೇಶ್ವರನನ್ನು ಅರ್ಚಿಸಿದವನು ಕೀರ್ತಿಯುಳ್ಳವನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಪ್ರಭಾಸಖಂಡದ ಏಳನೆ ಮೊದಲನೆಯ ಯಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದಶರಥೇಶ್ವರಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಸಪ್ತತ್ಯುತ್ತರಶತತಮೋಽಧ್ಯಾಯಃ

ಭರತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಶದ್ಭರತೇಶ್ವರಂ ।
ತಸ್ಮಾದುತ್ತರಕೋಣಸ್ಥಂ ನಾತಿದೂರೇ ವ್ಯವಸ್ಥಿತಂ ॥ ೧ ॥
ಭರತೋ ನಾಮ ರಾಜಾಽಸೀದಾಗ್ನೀಧ್ರಃ ಪ್ರಥಿತಃ ಕ್ಷಿತೌ ।
ಯಸ್ಯೇದಂ ಭಾರತಂ ವರ್ಷಂ ನಾಮ್ನಾ ಲೋಕೇಷು ಗೀಯತೇ ॥ ೨ ॥
ಸ ಚ ಚಕ್ರೇ ತಪೋ ಘೋರಂ ಕ್ಷೇತ್ರೇಽಸ್ಮಿನ್ಪಾರ್ವತಿ ಪ್ರಿಯೇ ।
ದಿವ್ಯಂ ವರ್ಷಸಹಸ್ರಂ ತು ಪ್ರತಿಷ್ಠಾಪ್ಯ ಮಹೇಶ್ವರಂ ॥ ೩ ॥
ಪುತ್ರಕಾಮೋ ನರಶ್ರೇಷ್ಠಃ ಪೂಜಯಾಮಾಸ ಶಂಕರಂ ।
ತತಸ್ತುಷ್ಟಃ ಸ ಭಗವಾನ್ವರಂ ದಾತುಂ ಸಮುತ್ಸುಕಃ ॥ ೪ ॥
ಅಷ್ಟೌ ಪುತ್ರಾನ್ದದೌ ತಸ್ಮೈ ಕನ್ಯಾಂ ಚೈಕಾಂ ಯಶಸ್ವಿನೀಂ ।
ಸ ತು ಪ್ರಾಪ್ಯಾಭಿಲಷಿತಂ ಕೃತಕೃತ್ಯೋ ನರಾಧಿಪಃ ॥ ೫ ॥

ಕನ್ನಡದ ಅನುವಾದ

ಭರತೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ದಶರಥೇಶ್ವರನ ಉತ್ತರದ ಮೂಲೆಯಲ್ಲಿ ಹತ್ತಿರದಲ್ಲಿಯೇ ಇರುವ ಭರತೇಶ್ವರಲಿಂಗದೆಡೆಗೆ ಹೋಗಬೇಕ .

೨. ಹಿಂದೆ ಭೂಮಂಡಲದಲ್ಲಿ ಭರತನೆಂಬ ಪ್ರಸಿದ್ಧನಾದ ದೊರೆಯಿದ್ದನು. ಇವನ ಹೆಸರಿನಿಂದಲೇ ಈ ದೇಶವು ಭಾರತವೆಂದು ಹೆಸರನ್ನು ಪಡೆಯಿತು.

೩. ಪಾರ್ವತಿ ! ಅವನು ಈ ಪ್ರಭಾಸಕ್ಷೇತ್ರದಲ್ಲಿ ಮಹೇಶ್ವರನನ್ನು ಪ್ರತಿಷ್ಠೆ ಮಾಡಿ ದಿವ್ಯ ಸಹಸ್ರ ವರ್ಷಕಾಲ ಘೋರತಪಸ್ಸನ್ನಾಚರಿಸಿದನು.

೪–೬. ಅವನು ಮಗನನ್ನು ಪಡೆಯಲಿಚ್ಛೆಯಿಂದ ಶಂಕರನನ್ನಾರಾಧಿಸಿದನು. ಅದರಿಂದ ಸಂತುಷ್ಟನಾದ ಶಂಕರನು ವರವನ್ನೀಯಲುದ್ಯುಕ್ತನಾಗಿ ಅವನಿಗೆ ಎಂಟು ಮಂದಿ ಪುತ್ರರನ್ನೂ, ಕೀರ್ತಿಮತಿಯಾದ ಒಬ್ಬ ಕನ್ಯೆಯನ್ನೂ ಕೊಟ್ಟನು. ಆ ಭರತ ರಾಜನು ಇಷ್ಟಾರ್ಥವನ್ನು ಪಡೆದು ಧನ್ಯನಾಗಿ ಭಾರತವರ್ಷವನ್ನು ಒಂಬತ್ತು ಭಾಗ

ಭಾರತಂ ನವಧಾ ಕೃತ್ವಾ ಪುತ್ರೇಭ್ಯಃ ಪ್ರದದೌ ಪೃಥಕ್ ।
ತೇಷಾಂ ನಾಮಾಂಕಿತಾನ್ಯೇವ ತತೋ ದ್ವೀಪಾನಿ ಜಜ್ಞಿರೇ ॥ ೬ ॥
ಇಂದ್ರದ್ವೀಪಃ ಕಸೇರುಶ್ಚ ತಾಮ್ರವರ್ಣೋ ಗಭಸ್ತಿಮಾನ್ ।
ನಾಗದ್ವೀಪಸ್ತಥಾ ಸೌಮ್ಯೋ ಗಾಂಧರ್ವಸ್ತ್ವಥ ದಾರುಣಃ ॥ ೭ ॥
ಅಯಂ ತು ನವಮೋ ದ್ವೀಪಃ ಕುಮಾರ್ಯಾ ಸಂಜ್ಞಿತಃ ಪ್ರಿಯೇ ।
ಅಷ್ಟೌ ದ್ವೀಪಾಃ ಸಮುದ್ರೇಣ ಪ್ಲಾವಿತಾಶ್ಚ ತಥಾ ಪರೇ ॥ ೮ ॥
ಗ್ರಾಮಾದಿದೇಶಸಂಯುಕ್ತಾಃ ಸ್ಥಿತಾಃ ಸಾಗರಮಧ್ಯಗಾಃ ।
ಏಕ ಏವ ಸ್ಥಿತಸ್ತೇಷಾಂ ಕುಮಾರ್ಯಾಖ್ಯಸ್ತು ಸಾಂಪ್ರತಂ ॥ ೯ ॥
ಬಿಂದುಸರಃ ಪ್ರಭೃತ್ಯೇವ ಸಾಗರಾದ್ದಕ್ಷಿಣೋತ್ತರಂ ।
ಯೋಜನಾನಾಂ ಸಹಸ್ರಂ ತು ಏಕಂ ವಿಸ್ತೀರ್ಣ ಏವ ತು ॥ ೧೦ ॥
ಯೋಜನಾನಾಂ ಸಹಸ್ರಾಣಿ ನವ ದೈರ್ಘ್ಯಂ ಪ್ರಕೀರ್ತಿತಂ ।
ತಸ್ಯೈ ತಜ್ಜೃಂಭಿತಂ ದೇವಿ ಭರತಸ್ಯ ಮಹಾತ್ಮನಃ ॥ ೧೧ ॥
ಷಟ್ಪಂಚಾಶದಶ್ವಮೇಧಾನ್ ಗಂಗಾಮನುಚಕಾರ ಯಃ ।
ಯಸ್ತ್ರಿಂಶದ್ಯಮುನಾ ಪ್ರಾಂತೇ ಭರತೋ ಲೋಕಪೂಜಿತಃ ॥ ೧೨ ॥
ಸ ಚೇಶ್ವರ ಪ್ರಭಾವೇನ ಮೋದತೇ ದಿವಿ ದೇವವತ್ ॥ ೧೩ ॥

ಮಾಡಿ ಮಕ್ಕಳಿಗೆ ಪ್ರತ್ಯೇಕವಾಗಿ ಕೊಟ್ಟನು. ಅದರಿಂದ ಅವರ ಹೆಸರಿನಿಂದಲೇ ಒಂಬತ್ತು ದ್ವೀಪಗಳು ಉಂಟಾದುವು.

೭–೯. ಇಂದ್ರ, ಕಸೇರು, ತಾಮ್ರವರ್ಣ, ಗಭಸ್ತಿಮಾನ್, ನಾಗ, ಸೌಮ್ಯ, ಗಾಂಧರ್ವ, ಅರುಣ, ಕುಮಾರೀ ಎಂಬುವೇ ಆ ಒಂಬತ್ತು ದ್ವೀಪಗಳು. ಅವುಗಳಲ್ಲಿ ಕುಮಾರಿ ಎಂಬ ಒಂಬತ್ತನೆ ದ್ವೀಪವನ್ನು ಬಿಟ್ಟು ಉಳಿದ ಎಂಟು ದ್ವೀಪಗಳನ್ನು ಸಮುದ್ರವು ತೇಲಿಸಿರುವುದು. ಅವು ಗ್ರಾಮದೇಶಗಳೊಡನೆ ಸಾಗರದ ನಡುವೆ ಇರುವುವು. ಅವುಗಳಲ್ಲಿ ಕುಮಾರೀದ್ವೀಪವು ಮಾತ್ರ ಭೂಮಿಯಲ್ಲಿರುವುದು.

೧೦–೧೧. ಇದು ಬಿಂದುಸರೋವರನ್ನಾರಂಭಿಸಿ ದಕ್ಷಿಣೋತ್ತರ ಸಮುದ್ರಗಳ ವರೆಗೆ ಒಂದು ಸಾವಿರ ಯೋಜನದಗಲವೂ, ಒಂಬತ್ತು ಸಾವಿರ ಯೋಜನದುದ್ದವೂ ಇರುವುದು. ಇದು ಮಹಾತ್ಮನಾದ ಭರತನ ಪ್ರಯತ್ನದಿಂದಾಗಿದೆ.

೧೨–೧೩. ಈ ಭರತನು ಗಂಗಾನದಿಯ ಹತ್ತಿರ ಐವತ್ತಾರು ಅಶ್ವಮೇಧ ಯಾಗಗಳನ್ನೂ, ಯಮುನಾನದಿಯ ಹತ್ತಿರ ಮೂವತ್ತು ಅಶ್ವಮೇಧಯಾಗಗಳನ್ನೂ ಮಾಡಿ ಲೋಕಪೂಜ್ಯನಾಗಿ ಈಶ್ವರನ ಅನುಗ್ರಹದಿಂದ ದೇವಲೋಕದಲ್ಲಿ ದೇವತೆಯಂತೆ ಆನಂದಪಡುವನು.

ಯಸ್ತತ್ಪ್ರತಿಷ್ಠಿತಂ ಲಿಂಗಂ ಭಾರತಂ ಪೂಜಯಿಷ್ಯತಿ ।
ಸ ಸರ್ವಯಜ್ಞದಾನಾನಾಂ ಫಲಂ ಪ್ರಾಪಯಿತಾ ಧ್ರುವಂ ॥ ೧೪ ॥
ಕಾರ್ತಿಕ್ಯಾಂ ಕೃತ್ತಿಕೇ ಮಾಘೇ ಯಸ್ತಂ ಪಶ್ಯತಿ ಮಾನವಃ ।
ನ ಸ ಪಶ್ಯತಿ ಸ್ವಪ್ನೇಽಪಿ ನರಕಂ ಘೋರದಾರುಣಂ ॥ ೧೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭರತೇಶ್ವರಮಾಹಾತ್ಮ್ಯವರ್ಣನಂ ನಾಮ
ದ್ವಿಸಪ್ತತ್ಯುತ್ತರಶತತಮೋಽಧ್ಯಾಯಃ

---

೧೪. ಆ ಭರತನು ಪ್ರತಿಷ್ಠೆಮಾಡಿದ ಭರತೇಶ್ವರಲಿಂಗವನ್ನು ಪೂಜಿಸಿದವನು ನಿಶ್ಚಯವಾಗಿಯೂ ಸಮಸ್ತ ಯಜ್ಞದಾನಗಳ ಫಲವನ್ನು ಹೊಂದುವನು.

೧೫. ಕಾರ್ತಿಕಮಾಸದ ಕೃತ್ತಿಕಾನಕ್ಷತ್ರದಿಂದ ಕೂಡಿದ ಹುಣ್ಣಿಮೆಯ ದಿನ ಆ ಭರತೇಶ್ವರ ಲಿಂಗವನ್ನು ನೋಡಿದ ಮನುಷ್ಯನು ಸ್ವಪ್ನದಲ್ಲಿಯೂ ಭಯಂಕರವಾದ ನರಕವನ್ನು ನೋಡುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭರತೇಶ್ವರಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಸಪ್ತತ್ಯುತ್ತರಶತತಮೋಽಧ್ಯಾಯಃ

ಕುಶಕಾದಿಲಿಂಗಚತುಷ್ಟಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :— ೯೮೩

ತತೋ ಗಚ್ಛೇನ್ಮಹಾದೇವಿ ಲಿಂಗಾನಾಂ ಚ ಚತುಷ್ಟಯಂ ।
ಏಕಸ್ಥಾನಸ್ಥಿತಾನಾಂ ತು ಸಾವಿತ್ರ್ಯಾಸ್ತತ್ರ ಪಶ್ಚಿಮೇ ॥ ೧ ॥
ಲಿಂಗಾನಾಂ ದ್ವಿತಯಂ ಪೂರ್ವೇ ಪಶ್ಚಿಮೇ ಸಮ್ಮುಖದ್ವಯಂ ।
ಕುಶಕೇಶ್ವರನಾಮೇತಿ ಲಿಂಗಂ ವೈ ಪ್ರಥಮಂ ಸ್ಮೃತಂ ॥ ೨ ॥
ಗರ್ಗೇಶ್ವರಂ ದ್ವಿತೀಯಂ ತು ತೃತೀಯಂ ಪುಷ್ಕರೇಶ್ವರಂ ।
ಮೈತ್ರೇಯೇಶ್ವರನಾಮೇತಿ ಚತುರ್ಥಂ ಸಮುದಾಹೃತಂ ॥ ೩ ॥
ಏತಾನಿ ಯಸ್ತು ಲಿಂಗಾನಿ ಪಶ್ಯೇದ್ಭಕ್ತ್ಯಾ ಜಿತೇಂದ್ರಿಯಃ ।
ಸ ಮುಕ್ತಃ ಪಾತಕೈಃ ಸರ್ವೈರ್ಗಚ್ಛೇಚ್ಛಿವಪುರಂ ಮಹತ್ ॥ ೪ ॥
ಶುಕ್ಲಪಕ್ಷೇ ಚತುರ್ದಶ್ಯಾಂ ವೈಶಾಖೇ ತು ವಿಶೇಷತಃ ।
ಸ್ನಾನಂ ಕೃತ್ವಾ ಪ್ರಯತ್ನೇನ ಬ್ರಾಹ್ಮಣಾಂಸ್ತತ್ರ ಭೋಜಯೇತ್ ॥ ೫ ॥

ಕನ್ನಡದ ಅನುವಾದ

ಕುಶಕಾದಿಲಿಂಗಚತುಷ್ಟಯಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಅಲ್ಲಿ ಸಾವಿತ್ರಿಯ ಪಶ್ಚಿಮದಲ್ಲಿ ಎರಡು ಲಿಂಗಗಳು ಪೂರ್ವಾಭಿಮುಖವಾಗಿಯೂ ಮತ್ತೆರಡು ಲಿಂಗಗಳು ಪಶ್ಚಿಮಾಭಿಮುಖವಾಗಿಯೂ ಹೀಗೆ ಪರಸ್ಪರ ಅಭಿಮುಖವಾಗಿ ಒಂದೇ ಸ್ಥಳದಲ್ಲಿ ನೆಲಸಿರುವ ನಾಲ್ಕು ಶಿವಲಿಂಗಗಳೆಡೆಗೆ ಹೋಗಬೇಕು. ಅವುಗಳಲ್ಲಿ ಮೊದಲನೆಯದು ಕುಶಕೇಶ್ವರನೆಂದೂ, ಎರಡನೆಯದು ಗರ್ಗೇಶ್ವರನೆಂದೂ, ಮೂರನೆಯದು ಪುಷ್ಕರೇಶ್ವರನೆಂದೂ, ನಾಲ್ಕನೆಯದು ಮೈತ್ರೇಯೇಶ್ವರನೆಂದೂ ಪ್ರಸಿದ್ಧವಾಗಿವೆ.

೪. ಈ ಲಿಂಗಗಳನ್ನು ಭಕ್ತಿಯಿಂದ ಜಿತೇಂದ್ರಿಯನಾಗಿ ದರ್ಶನ ಮಾಡುವ ಮಾನವನು ಸಕಲ ಪಾಪಮುಕ್ತನಾಗಿ ಶಿವಪುರಕ್ಕೆ ಹೋಗುವನು.

೫. ವೈಶಾಖ ಶುಕ್ಲಪಕ್ಷದ ಚತುರ್ದಶೀಯದಿನ ಅಲ್ಲಿ ಮಿಂದು ಬ್ರಾಹ್ಮಣರಿಗೆ **ಭೋಜನಮಾಡಿಸಬೇಕು.**

ತೇಭ್ಯೋ ದದ್ಯಾದ್ಯಥಾಶಕ್ತ್ಯಾ ಕಾಂಚನಂ ವಸನಾನಿ ಚ ।
ಏವಂ ಕೃತೇ ಭವೇದ್ಯಾತ್ರಾ ಪರಿಪೂರ್ಣಾ ಸುರೇಶ್ವರಿ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಶಕಾದಿಲಿಂಗಚತುಷ್ಟಯಮಾಹಾತ್ಮ್ಯ ವರ್ಣನಂ
ತ್ರಿಸಪ್ತತ್ಯುತ್ತರಶತತಮೋಽಧ್ಯಾಯಃ

---

೬. ಸುರೇಶ್ವರಿ ! ಬ್ರಾಹ್ಮಣರಿಗೆ ಚಿನ್ನ ವಸ್ತ್ರಗಳನ್ನು ಶಕ್ತ್ಯಾನುಸಾರ ದಾನ ಮಾಡಬೇಕು. ಹೀಗೆ ಮಾಡಿದರೆ ಯಾತ್ರೆಯು ಪೂರ್ತಿಯಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಶಕಾದಿಲಿಂಗಚತುಷ್ಟಯಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಸಪ್ತತ್ಯುತ್ತರಶತತಮೋಽಧ್ಯಾಯಃ

ಕುಂತೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕುಂತೀಶ್ವರಮನುತ್ತಮಂ ।
ಸಾವಿತ್ರ್ಯಾಃ ಪೂರ್ವಭಾಗಸ್ಥಂ ಖಾತಮಧ್ಯೇ ವ್ಯವಸ್ಥಿತಂ ॥ ೧ ॥
ಕುಂತ್ಯಾ ಪ್ರತಿಷ್ಠಿತಂ ದೇವಿ ಕ್ಷೇತ್ರೇ ಪ್ರಾಭಾಸಿಕೇ ಪ್ರಿಯೇ ।
ಪಾಂಡವಾಸ್ತು ಯದಾ ಪೂರ್ವಂ ಪ್ರಭಾಸಕ್ಷೇತ್ರಮಾಗತಾಃ ॥ ೨ ॥
ತೀರ್ಥಯಾತ್ರಾಪ್ರಸಂಗೇನ ಕುಂತ್ಯಾ ಚೈವ ಸಮನ್ವಿತಾಃ ।
ತಸ್ಮಿನ್ಕಾಲೇ ಮಹಾದೇವಿ ಜ್ಞಾತ್ವಾ ಕ್ಷೇತ್ರಮನುತ್ತಮಂ ॥ ೩ ॥
ಕುಂತ್ಯಾ ಪ್ರತಿಷ್ಠಿತಂ ಲಿಂಗಂ ಸರ್ವಪಾಪಭಯಾಪಹಂ ।
ಕಾರ್ತಿಕ್ಯಾಂ ತು ವಿಶೇಷೇಣ ಯಸ್ತಂ ಪೂಜಯತೇ ನರಃ ।
ಸ ಸರ್ವಕಾಮತೃಪ್ತಾತ್ಮಾ ರುದ್ರಲೋಕೇ ಮಹೀಯತೇ ॥ ೪ ॥

ಕನ್ನಡದ ಅನುವಾದ

ಕುಂತೀಶ್ವರಮಾಹಾತ್ಮ್ಯವರ್ಣನ

೧–೪. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಪ್ರಭಾಸ ಕ್ಷೇತ್ರದಲ್ಲಿ ಸಾವಿತ್ರಿಯ ಪೂರ್ವಭಾಗದಲ್ಲಿ ಸರಸ್ವತೀಕೂಪದ ನಡುವೆ ಇರುವ ಕುಂತಿಯು ಪ್ರತಿಷ್ಠೆಮಾಡಿರುವ ಕುಂತೀಶ್ವರನೆಡೆಗೆ ಹೋಗಬೇಕು. ಹಿಂದೆ ಪಾಂಡವರು ಕುಂತಿಯೊಡನೆ ತೀರ್ಥಯಾತ್ರೆಗಾಗಿ ಪ್ರಭಾಸ ಕ್ಷೇತ್ರಕ್ಕೆ ಬಂದರು. ಆಗ ಕುಂತಿಯು ಇದು ಉತ್ತಮ ಕ್ಷೇತ್ರವೆಂದರಿತು ಸಕಲ ಪಾಪಭಯವನ್ನೂ ಪರಿಹರಿಸುವ ಶಿವಲಿಂಗವನ್ನು ಪ್ರತಿಷ್ಠೆಮಾಡಿದಳು. ಕಾರ್ತಿಕಮಾಸದ ಹುಣ್ಣಿಮೆಯ ದಿನ ಆ ಲಿಂಗವನ್ನು ಪೂಜಿಸಿದ ಮನುಷ್ಯನು ಸಕಲೇಷ್ಟಾರ್ಥಪ್ರಾಪ್ತಿಯಿಂದ ತೃಪ್ತನಾಗಿ ರುದ್ರಲೋಕದಲ್ಲಿ ಪೂಜ್ಯನಾಗುವನು.

ವಾಚಿಕಂ ಮಾನಸಂ ಪಾಪಂ ಕರ್ಮಣಾ ಯದುಪಾರ್ಜಿತಂ ।
ತತ್ಸರ್ವಂ ನಶ್ಯತೇ ದೇವಿ ತಸ್ಯ ಲಿಂಗಸ್ಯ ದರ್ಶನಾತ್ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಂತೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚಸಪ್ತತ್ಯುತ್ತರಶತತಮೋಽಧ್ಯಾಯಃ ॥

---

೫. ದೇವಿ ! ಆ ಕುಂತೀಶ್ವರಲಿಂಗದ ದರ್ಶನದಿಂದ ಮಾತು, ಮನಸ್ಸು, ಕರ್ಮ ಇವುಗಳಿಂದ ಮಾಡಿದ ಪಾಪವೆಲ್ಲವೂ ನಾಶವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಂತೀಶ್ವರಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಸಪ್ತತ್ಯುತ್ತರಶತತಮೋಽಧ್ಯಾಯಃ

ಅರ್ಕಸ್ಥಲಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುಣ್ಯಮರ್ಕಸ್ಥಲಂ ಶುಭಂ ।
ತಸ್ಮಾದಾಗ್ನೇಯ ಕೋಣಸ್ಥಂ ಸರ್ವಪಾತಕನಾಶನಂ ॥ ೧ ॥

ತಂ ದೃಷ್ಟ್ವಾ ಮಾನುಷೋ ದೇವಿ ನ ಶೋಚ್ಯಃ ಸಂಪ್ರಜಾಯತೇ ।
ಸಪ್ತ ಜನ್ಮನಿ ದೇವೇಶಿ ದಾರಿದ್ರ್ಯಂ ನೈವ ಜಾಯತೇ ॥ ೨ ॥

ಕುಷ್ಠಾನಿ ನಾಶಮಾಯಾಂತಿ ತಂ ದೃಷ್ಟ್ವಾ ದಶಧಾ ಪ್ರಿಯೇ ।
ಗೋಶತಸ್ಯ ಪ್ರದತ್ತಸ್ಯ ಕುರುಕ್ಷೇತ್ರೇಷು ಯತ್ಫಲಂ ॥ ೩ ॥

ತತ್ಫಲಂ ಸಮವಾಪ್ನೋತಿ ದೃಷ್ಟ್ವಾ ಚಾರ್ಕಸ್ಥಲಂ ರವಿಂ ।
ಸ್ನಾತ್ವಾ ತ್ರಿಸಂಗಮೇ ತೀರ್ಥೇ ಸಪ್ತೈವ ರವಿವಾಸರಾ ॥ ೪ ॥

ಕನ್ನಡದ ಅನುವಾದ

ಅರ್ಕಸ್ಥಲಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಬಳಿಕ ಆ ಕುಂತೀಶ್ವರಲಿಂಗದ ಆಗ್ನೇಯ ಮೂಲೆಯಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಅರ್ಕಸ್ಥಳದೆಡೆಗೆ ಹೋಗಬೇಕು.

೨–೫. ಮನುಷ್ಯನು ಆ ಅರ್ಕಸ್ಥಳವನ್ನು ನೋಡಿದರೆ ದುಃಖಾರ್ಹನೂ, ಏಳು ಜನ್ಮಗಳಲ್ಲಿ ಬಡವನೂ, ಆಗುವುದಿಲ್ಲ. ಅವನ ದರ್ಶನದಿಂದ ಹತ್ತು ವಿಧ ಕುಷ್ಠ ರೋಗವೂ ಪರಿಹಾರವಾಗುವುದು. ಕುರುಕ್ಷೇತ್ರದಲ್ಲಿ ನೂರು ಗೋವುಗಳನ್ನು ದಾನ ಮಾಡಿದ ಫಲವು ಲಭಿಸುವುದು. ತ್ರಿಸಂಗಮ ತೀರ್ಥದಲ್ಲಿ ಏಳು ಭಾನುವಾರಗಳಲ್ಲಿ

ಬ್ರಾಹ್ಮಣಾನ್ಭೋಜಯಿತ್ವಾ ತು ಮಹಿಷೀಂ ತತ್ರ ದಾಪಯೇತ್ ।
ದಿವ್ಯಂ ವರ್ಷಸಹಸ್ರಂ ತು ಸ್ವರ್ಗೇ ಲೋಕೇ ಮಹೀಯತೇ || ೫ ||

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅರ್ಕಸ್ಥಲಮಾಹಾತ್ಮ್ಯವರ್ಣನಂ ನಾಮ
ಪಂಚಸಪ್ತತ್ಯುತ್ತರಶತತಮೋಽಧ್ಯಾಯಃ

ಮಿಂದು ಬ್ರಾಹ್ಮಣರಿಗೆ ಭೋಜನಮಾಡಿಸಿ ಎಮ್ಮೆಯನ್ನು ದಾನಮಾಡಿದರೆ ದಿವ್ಯ ಶತ ವರ್ಷಗಳಕಾಲ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅರ್ಕಸ್ಥಲಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ಸಪ್ತತ್ಯುತ್ತರಶತತಮೋಽಧ್ಯಾಯಃ

ಸಿದ್ಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಿದ್ಧೇಶ್ವರಮಿತಿ ಸ್ಮೃತಂ ।
ಅರ್ಕಸ್ಥಲಾತ್ತಥಾಽಗ್ನೇಯ್ಯಾಂ ನಾತಿದೂರೇ ವ್ಯವಸ್ಥಿತಾಂ ॥ ೧ ॥
ಅಷ್ಟಾದಶ ಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ ।
ತಸ್ಮಿಲ್ಲಿಂಗೇ ತು ಸಿದ್ಧಾನಿ ಸಿದ್ಧೇಶ್ವರಮತಃ ಸ್ಮೃತಂ ॥ ೨ ॥
ಸ್ನಾತ್ವಾಽರ್ಚಯೇನ್ನರೋ ಭಕ್ತ್ಯಾ ಸೋಪವಾಸೋ ಜಿತೇಂದ್ರಿಯಃ ।
ಸಂಪೂಜ್ಯ ವಿಧಿವದ್ದೇವಂ ದದ್ಯಾದ್ವಿಪ್ರೇಷು ದಕ್ಷಿಣಾಂ ।
ಸರ್ವಕಾಮಸಮೃದ್ಧಸ್ತು ಸ ಯಾತಿ ಪರಮಂ ಪದಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಟ್ಸಪ್ತತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಸಿದ್ಧೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಅರ್ಕಸ್ಥಳ ಸೂರ್ಯನಿಗಿಂತ ಆಗ್ನೇಯ ದಿಕ್ಕಿನಲ್ಲಿ ಸಮೀಪದಲ್ಲಿರುವ ಸಿದ್ಧೇಶ್ವರನೆಡೆಗೆ ಹೋಗಬೇಕು.

೨. ಹದಿನೆಂಟು ಸಾವಿರ ಜಿತೇಂದ್ರಿಯರಾದ ಮುನಿಗಳು ಆ ಲಿಂಗದೆಡೆಯಲ್ಲಿ ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದುದರಿಂದ ಅದಕ್ಕೆ ಸಿದ್ಧೇಶ್ವರನೆಂದು ಹೆಸರಾಯಿತು.

೩. ಮನುಷ್ಯನು ಅಲ್ಲಿ ಮಿಂದು ಉಪವಾಸಮಾಡಿ ಜಿತೇಂದ್ರಿಯನಾಗಿ ಭಕ್ತಿಯಿಂದ ಆ ಸಿದ್ಧೇಶ್ವರನನ್ನು ಪೂಜಿಸಿ ಬ್ರಾಹ್ಮಣರಿಗೆ ದಕ್ಷಿಣೆಯನ್ನಿತ್ತರೆ ಸಕಲೇಷ್ಟಾರ್ಥಗಳನ್ನು ಪಡೆದು ಉತ್ತಮಸ್ಥಾನವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಿದ್ಧೇಶ್ವರಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಸಪ್ತತ್ಯುತ್ತರಶತತಮೋಽಧ್ಯಾಯಃ

ಲಕುಲೀಶಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತಸ್ಯೈವ ಪೂರ್ವದಿಗ್ಭಾಗೇ ಲಕುಲೀಶಸ್ತು ಮೂರ್ತಿಮಾನ್ ।
ಸ್ವಯಂ ತಿಷ್ಠತಿ ದೇವೇಶಿ ಕೃತ್ವಾ ಘೋರಂ ತಪಃ ಪುರಾ ॥ ೧ ॥
ಸಂಸ್ಥಿತಃ ಪಾಪಶಮನೇ ತತ್ರ ಸ್ಥಾನೇ ಸ್ಥಲೋಪರಿ ।
ಕಾರ್ತಿಕ್ಯಾಂ ಕೃತ್ತಿಕಾಯೋಗೇ ಯಸ್ತಂ ಪೂಜಯತೇ ನರಃ ॥ ೨ ॥
ಸ ಪೂಜ್ಯತೇ ಮಹಾದೇವಿ ಸರ್ವೈರಪಿ ಸುರಾಸುರೈಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಕುಲೀಶಮಾಹಾತ್ಮ್ಯವರ್ಣನಂ ನಾಮ
ಸಪ್ತಸಪ್ತತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಲಕುಲೀಶಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ:—ಪಾಪವನ್ನು ನೀಗಿಸುವ ಆ ಕ್ಷೇತ್ರದಲ್ಲಿ ಆ ಸಿದ್ಧೇಶ್ವರನ ಪೂರ್ವದಿಕ್ಕಿನಲ್ಲಿ ಲಕುಲೀಶನು ದೇಹವನ್ನು ಧರಿಸಿ ತಾನೇ ಘೋರ ತಪಸ್ಸನ್ನಾಚರಿಸಿ ನೆಲೆಸಿರುವನು. ಕೃತ್ತಿಕಾನಕ್ಷತ್ರದ ಸಂಬಂಧವಿರುವ ಕಾರ್ತಿಕ ಶುದ್ಧ ಪೂರ್ಣಿಮಾದಿನ ಅವನನ್ನು ಪೂಜಿಸಿದ ಮಾನವನು ಸಮಸ್ತ ದೇವಾಸುರ ರಿಂದಲೂ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಲಕುಲೀಶಮಾಹಾತ್ಮ್ಯವರ್ಣನವೆಂಬ
ನೂರಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಅಷ್ಟಸಪ್ತತ್ಯುತ್ತರಶತತಮೋಽಧ್ಯಾಯಃ

ಭಾರ್ಗವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಮಾದ್ದಕ್ಷಿಣತಃ ಸ್ಥಿತಾಂ ।
ಭಾರ್ಗವೇಶ್ವರನಾಮಾನಂ ಸರ್ವಪಾಪಪ್ರಣಾಶನಂ ॥ ೧ ॥
ಯಸ್ತಂ ಪೂಜಯತೇ ದೇವಿ ದಿವ್ಯಪುಷ್ಪೋಪಹಾರಕೈಃ ।
ಸ ಭವೇತ್ಕೃತಕೃತ್ಯಸ್ತು ಸರ್ವಕಾಮೈಃ ಸಮೃದ್ಧಿಮಾನ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭಾರ್ಗವೇಶ್ವರಮಾಹಾತ್ಮ್ಯವರ್ಣನಂನಾಮ
॥ ಅಷ್ಟಸಪ್ತತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಭಾರ್ಗವೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಆ ಲಕುಲೀಶನ ದಕ್ಷಿಣದಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಭಾರ್ಗವೇಶ್ವರನೆಡೆಗೆ ಹೋಗಬೇಕು.

೨. ದೇವಿ ! ಅವನನ್ನು ದಿವ್ಯ ಪುಷ್ಪಗಳಿಂದ ಪೂಜಿಸಿದವನು ಸಕಲೇಷ್ಟಾರ್ಥಗಳಿಂದ ಸಮೃದ್ಧಿಗೊಂಡು ಧನ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭಾರ್ಗವೇಶ್ವರಮಾಹಾತ್ಮ್ಯ ವರ್ಣನನೆಂಬ
ನೂರಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಾಶೀತ್ಯುತ್ತರಶತತಮೋಽಧ್ಯಾಯಃ

ಮಾಂಡವ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಪಾಪಪ್ರಣಾಶನಂ ।
ಸಿದ್ಧೇಶಾದ್ದಕ್ಷಿಣೇ ಕೋಣೇ ಧನುಷಾಂ ತ್ರಿತಯೇ ಸ್ಥಿತಂ ।
ಮಾಂಡವ್ಯೇಶ್ವರನಾಮಾನಂ ಮಹಾಪಾತಕನಾಶನಂ ॥ ೧ ॥
ಮಾಘೇ ಮಾಸಿ ಚತುರ್ದಶ್ಯಾಂ ಪೂಜಾಂ ಜಾಗರಣಂ ತಥಾ ।
ಕುರ್ಯಾದ್ಯೋಽತೀಂದ್ರಿಯೋ ಮರ್ತ್ಯೋ ನ ಸ ಮರ್ತ್ಯೇ ಪುನರ್ವ್ರಜೇತ್॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾಂಡವ್ಯೇಶ್ವರಮಾಹಾತ್ಮ್ಯವರ್ಣನಂನಾಮ
। ಏಕೋನಾಶೀತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮಾಂಡವ್ಯೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಸಿದ್ಧೇಶ್ವರನ ದಕ್ಷಿಣಮೂಲೆಯಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವ ಮಹಾಪಾತಕಗಳನ್ನು ನೀಗಿಸುವ ಮಾಂಡವ್ಯೇಶ್ವರಲಿಂಗದೆಡೆಗೆ ಹೋಗಬೇಕು.

೨. ಮಾಘಮಾಸದ ಚತುರ್ದಶೀದಿನ ಅವನ ಪೂಜೆಯನ್ನು ಮಾಡಿ ಜಾಗರಣೆಗೈದ ಮಾನವನು ಅತೀಂದ್ರಿಯಜ್ಞಾನವುಳ್ಳವನಾಗಿ ಮರಳಿ ಭೂಲೋಕದಲ್ಲಿ ಜನಿಸುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾಂಡವ್ಯೇಶ್ವರಮಾಹಾತ್ಮ್ಯ ವರ್ಣನನೆಂಬ
ನೂರಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಶೀತ್ಯುತ್ತರಶತತಮೋಽಧ್ಯಾಯಃ

ಪುಷ್ಪದಂತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇತ್ಪುಷ್ಪದಂತೇಶ್ವರಂ ಶುಭಂ ।
ಪುಷ್ಪದಂತೇಶ್ವರೋ ನಾಮ ಗಣೇಶಃ ಶಂಕರಸ್ಯ ತು ॥ ೧ ॥
ತೇನ ತಪ್ತಂ ತಪೋ ಘೋರಂ ತತ್ರ ಲಿಂಗಂ ಪ್ರತಿಷ್ಠಿತಂ ॥ ೨ ॥
ತಂ ದೃಷ್ಟ್ವಾ ಮುಚ್ಯತೇ ಜಂತುರ್ಜನ್ಮಸಂಸಾರಬಂಧನಾತ್ ।
ಪ್ರಾಪ್ನುಯಾದೀಪ್ಸಿತಾನ್ಕಾಮಾನಿಹ ಲೋಕೇ ಪರತ್ರ ಚ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಷ್ಪದಂತೇಶ್ವರಮಾಹಾತ್ಮ್ಯವರ್ಣನಂನಾಮ
। ಅಶೀತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಪುಷ್ಪದಂತೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಬಳಿಕ ಅಲ್ಲಿಯೇ ಇರುವ ಪುಷ್ಪದನ್ತೇಶ್ವರನನ್ನು ನೋಡಬೇಕು. ಶಂಕರನ ಗಣಾಧಿಪನಾದ ಪುಷ್ಪದಂತನು ಘೋರತಪಸ್ಸನ್ನಾಚರಿಸಿ ಅಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿರುವನು.

೩. ಆ ಪುಷ್ಪದಂತೇಶ್ವರನನ್ನು ನೋಡಿದ ಪ್ರಾಣಿಯು ಜನ್ಮಸಂಸಾರ ಬಂಧನಗಳಿಂದ ಮುಕ್ತವಾಗಿ ಇಹಪರಗಳಲ್ಲಿ ಸಕಲೇಷ್ಟಾರ್ಥಗಳನ್ನೂ ಪಡೆಯುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪುಷ್ಪದಂತೇಶ್ವರಮಾಹಾತ್ಮ್ಯ ವರ್ಣನವೆಂಬ
ನೂರಎಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಾಶೀತ್ಯುತ್ತರಶತತಮೋಽಧ್ಯಾಯಃ

ಕ್ಷೇತ್ರಪಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕ್ಷೇತ್ರಪೇಶ್ವರಮುತ್ತಮಂ ।
ಸಿದ್ಧೇಶ್ವರಸಮೀಪಸ್ಥ ಪೂರ್ವಸ್ಮಿನ್ನಾತಿದೂರತಃ ॥ ೧ ॥
ತಂ ದೃಷ್ಟ್ವಾ ಶುಕ್ಲಪಂಚಮ್ಯಾಂ ನ ಚ ನಾಗೈಃ ಸ ದಶ್ಯತೇ ॥ ೨ ॥
ಪೂಜಯೇತ್ತಂ ವಿಧಾನೇನ ಗಂಧಪುಷ್ಪಾದಿಭಿಃ ಕ್ರಮಾತ್ ।
ಭೋಜಯೇದ್ಬ್ರಾಹ್ಮಣಾಞ್ಛಕ್ತ್ಯಾ ಭಕ್ಷ್ಯಭೋಜ್ಯೈರನೇಕಶಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕ್ಷೇತ್ರಪಾಲೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕಾಶೀತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಕ್ಷೇತ್ರಪಾಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಸಿದ್ಧೇಶ್ವರನ ಪೂರ್ವದಿಕ್ಕಿನಲ್ಲಿ ಹತ್ತಿರದಲ್ಲಿರುವ ಕ್ಷೇತ್ರಪಾಲೇಶ್ವರನೆಡೆಗೆ ಹೋಗಬೇಕು.

೨. ಶುಕ್ಲಪಕ್ಷದ ಪಂಚಮಿಯದಿನ ಅವನನ್ನು ದರ್ಶನಮಾಡಿದವನು ಸರ್ಪಗಳಿಂದ ಕಚ್ಚಲ್ಪಡುವುದಿಲ್ಲ.

೩. ಅವನನ್ನು ವಿಧಿಯಂತೆ ಗಂಧಪುಷ್ಪಾದಿಗಳಿಂದ ಪೂಜಿಸಬೇಕು. ಮತ್ತು ಭಕ್ಷ್ಯಭೋಜ್ಯಗಳಿಂದ ಶಕ್ತ್ಯನುಸಾರ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕ್ಷೇತ್ರಪಾಲೇಶ್ವರಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾತ್ರಿಂಶತ್ಯುತ್ತರಶತತಮೋಽಧ್ಯಾಯಃ

ವಸುನಂದಾಮಾತೃಗಣ ಶ್ರೀಮುಖವಿವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಮಾತೃಗಣಾನ್ಪಶ್ಯೇದ್ವಸುನಂದಾದಿ ನಾಮತಃ ।
ಅರ್ಕಸ್ಥಲಸಮೀಪಸ್ಥಾನ್ ದಕ್ಷಿಣೇ ನಾತಿದೂರತಃ ॥ ೧ ॥

ಆಶ್ವಯುಕ್ಛುಕ್ಲಪಕ್ಷೇ ತು ನವಮ್ಯಾಂ ನಿಯತಾತ್ಮವಾನ್ ।
ಯಸ್ತಾ ಪೂಜಯತೇ ಮಾತ್ರ್ಯಾವಿಧಿನಾ ಭಾವಿತಾತ್ಮವಾನ್ ॥ ೨ ॥

ಸ ಸಮೃದ್ಧಿಮವಾಪ್ನೋತಿ ದುರಾಪಾಮಕೃತಾತ್ಮಭಿಃ ।
ತತ್ರೈವ ಸಂಸ್ಥಿತಂ ಪಶ್ಯೇಚ್ಛ್ರೀಮುಖಂ ವಿವರಪ್ರಿಯಂ ॥ ೩ ॥

ತಸ್ಮಿನ್ನೇವ ದಿನೇ ಪೂಜ್ಯಂ ಸಿದ್ಧಿಕಾಮೈರ್ನರೈಸ್ಸದಾ ।
ಏತತ್ಪೂರ್ವಂ ಮಯಾಖ್ಯಾತಂ ತವ ವಿಸ್ತರತಃ ಪ್ರಿಯೇ ॥ ೪ ॥

ಕನ್ನಡದ ಅನುವಾದ

ವಸುನಂದಾಮಾತೃಗಣ ಶ್ರೀಮುಖವಿವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ.—ತರುವಾಯ ಅರ್ಕಸ್ಥಳದ ಹತ್ತಿರದಲ್ಲಿ ದಕ್ಷಿಣದಿಕ್ಕಿನಲ್ಲಿರುವ ವಸುನಂದ ಮೊದಲಾದ ನಾಮಗಳುಳ್ಳ ಮಾತೃಗಣಗಳನ್ನು ನೋಡಬೇಕು.

೨–೪. ಆಶ್ವಿನ ಶುಕ್ಲಪಕ್ಷದ ನವಮಿಯದಿನ ಜಿತೇಂದ್ರಿಯನಾಗಿ ಆ ಮಾತೃಗಣ ಗಳನ್ನು ಭಕ್ತಿಯಿಂದ ಪೂಜಿಸಿದ ಮನುಷ್ಯನು ಪುಣ್ಯಮಾಡದವರಿಂದ ಹೊಂದಲ ಸಾಧ್ಯವಾದ ಸಂಪತ್ಸಮೃದ್ಧಿಯನ್ನು ಹೊಂದುವನು. ಇಷ್ಟಸಿದ್ಧಿಯನ್ನು ಬಯಸುವ ನರರು ಅಲ್ಲಿಯೇ ಇರುವ ಶ್ರೀಮುಖವೆಂಬ ವಿವರವನ್ನು ದರ್ಶನಮಾಡಿ ಅದೇ ದಿನ ಆ

ತಸ್ಮಿನ್ನೇವ ದಿನೇ ಪೂಜ್ಯಂ ತೀರ್ಥಯಾತ್ರಾಪ್ರಸಂಗತಃ ॥ ೫ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಸುನಂದಾಮಾತೃಗಣಶ್ರೀಮುಖನಿವರಮಾಹಾತ್ಮ್ಯವರ್ಣನಂ ನಾಮ
ದ್ವ್ಯಶೀತ್ಯುತ್ತರಶತತಮೋಽಧ್ಯಾಯಃ

ವಿವರವನ್ನು ಪೂಜಿಸಬೇಕು. ಇದನ್ನೆಲ್ಲ ನಾನು ನಿನಗೆ ಹಿಂದೆ ವಿಸ್ತಾರವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಸುನಂದಾಮಾತೃಗಣಶ್ರೀಮುಖನಿವರಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರ್ಯಶೀತ್ಯುತ್ತರಶತತಮೋಽಧ್ಯಾಯಃ

ತ್ರಿಸಂಗಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಿಶ್ರತೀರ್ಥಮನುತ್ತಮಂ ।
ತ್ರಿಸಂಗಮೇತಿ ವಿಖ್ಯಾತಂ ಸೌರ ತೀರ್ಥಮನುತ್ತಮಂ ॥ ೧ ॥
ಸರಸ್ವತೀ ಹಿರಣ್ಯಾ ಚ ಸಮುದ್ರಶ್ಚೈವ ಭಾಮಿನಿ ।
ತ್ರಯಾಣಾಂ ಸಂಗಮೋ ಯತ್ರ ದುಷ್ಪ್ರಾಪ್ಯೋ ದೇವತೈರಪಿ ॥ ೨ ॥
ಸರ್ವೇಷಾಂ ತತ್ರ ತೀರ್ಥಾನಾಂ ಪ್ರಧಾನಂ ತೀರ್ಥಮುತ್ತಮಂ ।
ಸೂರ್ಯಪರ್ವಣಿ ಸಂಪ್ರಾಪ್ತೇ ಕುರುಕ್ಷೇತ್ರಾದ್ವಿಶಿಷ್ಯತೇ ॥ ೩ ॥
ಸ್ನಾನಂ ದಾನಂ ಜಪಸ್ತತ್ರ ಸರ್ವಂ ಕೋಟಿಗುಣಂ ಭವೇತ್ ॥ ೪ ॥

ಕನ್ನಡದ ಅನುವಾದ

ತ್ರಿಸಂಗಮಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ತ್ರಿಸಂಗಮವೆಂಬ ಉತ್ತಮವಾದ ಸೂರ್ಯತೀರ್ಥವನ್ನು ಹೊಂದಬೇಕು.

೨. ಸರಸ್ವತೀ, ಹಿರಣ್ಯಾ ನದಿಗಳೂ, ಸಮುದ್ರವೂ ಒಟ್ಟಿಗೆ ಸೇರಿರುವ ಈ ತೀರ್ಥವು ದೇವತೆಗಳಿಗೂ ಹೊಂದಲಶಕ್ಯವಾದುದು.

೩. ಸಮಸ್ತ ತೀರ್ಥಗಳಲ್ಲಿ ಪ್ರಧಾನವಾದ ಆ ಉತ್ತಮತೀರ್ಥವು ಸೂರ್ಯಗ್ರಹಣಕಾಲದಲ್ಲಿ ಕುರುಕ್ಷೇತ್ರಕ್ಕಿಂತ ಶ್ರೇಷ್ಠವಾಗಿರುವುದು.

೪. ಅಲ್ಲಿ ಮಾಡಿದ ಸ್ನಾನ, ದಾನ, ಜಪಗಳೆಲ್ಲ ಕೋಟಿಯಷ್ಟು ಹೆಚ್ಚಾಗುವುವು.

ಮಂಕೀಶ್ವರಾನ್ಮಹಾದೇವಿ ಯಾವಲ್ಲಿಂಗಂ ಕೃತಸ್ಮರಂ ।
ಏತಸ್ಮಿನ್ನಂತರೇ ದೇವಿ ತೀರ್ಥಾನಾಂ ದಶಕೋಟಯಃ ॥ ೫ ॥

ಕೃಮಿಕೀಟಪತಂಗಾಶ್ಚ ಶ್ವಪಚಾ ವಾ ನರಾಧಮಾಃ ।
ಸೋಽಪಿ ಸ್ವರ್ಗಮವಾಪ್ನೋತಿ ಕಿಂಪುನರ್ಭಾವಿತಾತ್ಮವಾನ್ ॥ ೬ ॥

ತತ್ರ ಪೀತಾನಿ ವಸ್ತ್ರಾಣಿ ಕಾಂಚನಂ ಸುರಭಿಸ್ತಥಾ ।
ಬ್ರಾಹ್ಮಣಾಯ ಪ್ರದಾತವ್ಯಾ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೭ ॥

ಕೃಷ್ಣಪಕ್ಷೇ ಚತುರ್ದಶ್ಯಾ ಸ್ನಾತ್ವಾ ಯಸ್ತರ್ಪಯೇತ್ಪಿತೄನ್ ।
ತರ್ಪಿತಾಃ ಪಿತರಸ್ತೇನ ಯಾವಚ್ಚಂದ್ರಾರ್ಕತಾರಕಂ ॥ ೮ ॥

ಏತತ್ತ್ರಿಸಂಗಮಂ ದೇವಿ ಮಹಾಪಾತಕನಾಶನಂ ।
ದುರ್ಲಭಂ ತ್ರಿಷು ಲೋಕೇಷು ವೈಶಾಖ್ಯಾಂ ತು ವಿಶೇಷತಃ ॥ ೯ ॥

೫-೬. ಮಹಾದೇವಿ! ಮಂಕೀಶ್ವರನಿಂದ ಕೃತಸ್ಮರಪರ್ವತದವರೆಗೆ ಇರುವ ಹತ್ತುಕೋಟಿ ತೀರ್ಥಗಳಲ್ಲಿ ಮಿಂದ ಕ್ರಿಮಿ, ಕೀಟ, ಮಿಡತೆಗಳೂ, ನೀಚರಾದ ಚಂಡಾಲರೂ ಸ್ವರ್ಗವನ್ನು ಸೇರುವರು. ಜ್ಞಾನಿಯಾದ ಮನುಷ್ಯನ ವಿಷಯದಲ್ಲಿ ಏನು ಹೇಳತಕ್ಕದು.?

೭. ಅಲ್ಲಿ ಯಾತ್ರಾಫಲವನ್ನಿಚ್ಛಿಸುವವರು ಬ್ರಾಹ್ಮಣರಿಗೆ ಹಳದಿಬಟ್ಟೆ, ಸುವರ್ಣ, ಗೋವು ಇವುಗಳನ್ನು ದಾನಮಾಡಬೇಕು.

೮. ಕೃಷ್ಣಪಕ್ಷದ ಚತುರ್ದಶೀದಿನ ಅಲ್ಲಿ ಮಿಂದು ಪಿತೃಗಳಿಗೆ ತರ್ಪಣವನ್ನು ಮಾಡಿದ ಮನುಷ್ಯನು ಚಂದ್ರ, ಸೂರ್ಯ, ನಕ್ಷತ್ರಗಳಿರುವವರೆಗೆ ಪಿತೃಗಳಿಗೆ ತರ್ಪಣವಿತ್ತವನಂತಾಗುವನು.

೯. ದೇವಿ! ಮಹಾಪಾಪವನ್ನು ನೀಗಿಸುವ ಈ ತ್ರಿಸಂಗಮವು ಮೂರು ಲೋಕಗಳಲ್ಲಿ ದುರ್ಲಭವಾದುದು. ವೈಶಾಖಮಾಸದಲ್ಲಿಯಂತು ಅತ್ಯಂತ ದುರ್ಲಭವಾದುದು.

ವೃಷೋತ್ಸರ್ಗೋ ವಿಶೇಷೇಣ ತತ್ರ ಕಾರ್ಯೋ ನರೋತ್ತಮೈಃ ।
ಸರ್ವಪಾಪವಿನಾಶಾಯ ಪಿತೄಣಾಂ ಪ್ರೀತಯೇ ಪ್ರಿಯೇ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತ್ರಿಸಂಗಮಮಾಹಾತ್ಮ್ಯವರ್ಣನಂ ನಾಮ
॥ ತ್ರ್ಯಶೀತ್ಯುತ್ತರಶತತಮೋಽಧ್ಯಾಯಃ ॥

---

೧೦. ಮಾನವೋತ್ತಮರು ಅಲ್ಲಿ ಸಕಲ ಪಾಪಗಳ ಪರಿಹಾರಕ್ಕಾಗಿಯೂ, ಪಿತೃಗಳ ಪ್ರೀತಿಗಾಗಿಯೂ ವೃಷೋತ್ಸರ್ಗವನ್ನು ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತ್ರಿಸಂಗಮಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರಶೀತ್ಯುತ್ತರಶತತಮೋಽಧ್ಯಾಯಃ

ಮಂಕೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮುಂಕೀಶ್ವರಮನುತ್ತಮಂ ।
ತ್ರಿಸಂಗಮಸಮೀಪಸ್ಥಂ ಸರ್ವಪಾತಕನಾಶನಂ ॥ ೧ ॥
ಮಂಕೀನಾಮ ಋಷಿಃ ಪೂರ್ವಮಾಸೀತ್ತ್ಸ ತಪತಾಂ ವರಃ ।
ಸ ಚ ಜ್ಞಾತ್ವಾ ಮಹಾಕ್ಷೇತ್ರಂ ಪ್ರಭಾಸಂ ಶಂಕರ ಪ್ರಿಯಂ ॥ ೨ ॥
ಅತಪನ್ವೈ ತಪೋ ಘೋರಂ ಕಂದಮೂಲಫಲಾಶನಃ ।
ವರ್ಷಾಣಾಮಯುತಂ ಸಾಗ್ರಂ ಪ್ರತಿಷ್ಠಾಪ್ಯ ಮಹೇಶ್ವರಂ ॥ ೩ ॥
ತತಸ್ತುಷ್ಟೋ ಮಹಾದೇವೋ ದದೌ ಪ್ರೀತೋ ವರಂ ತದಾ ।
ಸ ವವ್ರೇ ಯದಿ ತುಷ್ಟೋಽಸಿ ಅಸ್ಮಿನ್ಸ್ಥಾನೇ ಸ್ಥಿತೋ ಭವ ॥ ೪ ॥
ಮನ್ನಾಮಾಂಕಿತ ಲಿಂಗಸ್ತು ವಸ ಕಲ್ಪಾಯುತಾಯುತಮ್ ।
ಏವಮಸ್ತ್ವಿತ್ಯಥೇತ್ಯುಕ್ತ್ವಾ ತತ್ರೈವಾಂತರಧೀಯತ ॥ ೫ ॥

ಕನ್ನಡದ ಅನುವಾದ

ಮಂಕೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ತ್ರಿಸಂಗಮದ ಹತ್ತಿರದಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಮಂಕೀಶ್ವರನನ್ನು ಹೊಂದಬೇಕು.

೨-೩. ಹಿಂದೆ ತಪಸ್ವಿಗಳಲ್ಲಿ ವರೇಣ್ಯನಾದ ಮಂಕೀ ಎಂಬ ಮುನಿಯು ಶಂಕರ ಪ್ರಿಯವಾದ ಪ್ರಭಾಸಕ್ಷೇತ್ರವನ್ನರಿತು ಗಡ್ಡೆ, ಗೆಣಸು, ಫಲಗಳನ್ನು ತಿನ್ನುತ್ತ ಮಹೇಶ್ವರನನ್ನು ಪ್ರತಿಷ್ಠೆಮಾಡಿ ಹತ್ತುಸಾವಿರ ವರ್ಷಕಾಲ ಘೋರತಪಸ್ಸನ್ನಾಚರಿಸಿದನು.

೪-೫. ಬಳಿಕ ಅವನ ತಪಸ್ಸಿಗೆ ಮೆಚ್ಚಿದ ಮಹೇಶ್ವರನು ವರವನ್ನಿತ್ತನು. ಆ ಮುನಿಯು ಶಂಕರನನ್ನು ಕುರಿತು " ನೀನು ಸಂತುಷ್ಟನಾಗಿದ್ದರೆ ನನ್ನ ನಾಮದಿಂದ ಅಂಕಿತವಾದ ಲಿಂಗಸ್ವರೂಪನಾಗಿ ಒಂದು ಲಕ್ಷ ಕಲ್ಪಕಾಲ ಈ ಸ್ಥಳದಲ್ಲಿ ವಾಸಿಸು " ಎಂದು ವರವನ್ನು ಕೇಳಿಕೊಂಡನು. ಶಂಕರನು ಹಾಗೆಯೇ ಆಗಲೆಂದು ಹೇಳಿ ಅಲ್ಲಿಯೇ ಅಂತರ್ಧಾನವಾದನು.

ತದಾಪ್ರಭೃತಿ ತಲ್ಲಿಂಗಂ ಮಂಕೀಶ್ವರಮಿತಿ ಶ್ರುತಂ ।
ಮಾಘೇ ಮಾಸಿ ತ್ರಯೋದಶ್ಯಾಮಥಾಪಿ ವಾ ॥ ೬ ॥
ಪೂಜ್ಯಾಃ ಪಂಚೋಪಚಾರೇಣ ಪ್ರಾಪ್ನುಯಾದೀಪ್ಸಿತಂ ಫಲಂ ।
ಗೋದಾನಂ ತತ್ರ ವೈ ದೇಯಂ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಂಕೀಶ್ವರಮಾಹಾತ್ಮ್ಯವರ್ಣನಂ ನಾಮ
ಚತುರಶೀತ್ಯುತ್ತರಶತತಮೋಽಧ್ಯಾಯಃ

೬-೭. ಅದು ಮೊದಲ್ಗೊಂಡು ಆ ಲಿಂಗವು ಮಂಕೀಶ್ವರನೆಂದು ವಿಖ್ಯಾತವಾಯಿತು. ಮಾಘಮಾಸದ ತ್ರಯೋದಶೀ, ಅಥವಾ ಚತುರ್ದಶೀದಿನ ಆ ಲಿಂಗವನ್ನು ಪಂಚೋಪಚಾರದಿಂದ ಪೂಜಿಸಿದವನು ಇಷ್ಟಾರ್ಥವನ್ನು ಪಡೆಯುವನು. ಯಾತ್ರಾಫಲವನ್ನು ಬಯಸುವವರು ಅಲ್ಲಿ ಗೋವನ್ನು ದಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಂಕೀಶ್ವರಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಶೀತ್ಯುತ್ತರಶತತಮೋಽಧ್ಯಾಯಃ

ದೇವಮಾತೃಗೌರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಮಾತರಮುವ್ಯಯಾಂ ।
ಮಂಕೇಶಾನ್ನೈರ್ಋತೇ ಭಾಗೇ ಗೌರಿರೂಪಸಮಾಶ್ರಿತಾಂ ।
ದೇವಮಾತಾ ಸರಸ್ವತ್ಯಾ ನಾಮ ಲೋಕೇಷು ಗೀಯತೇ ॥ ೧ ॥
ಪಾದುಕಾಸನಸಂಸ್ಥಾ ಚ ತತ್ರ ದೇವೀ ಸರಸ್ವತೀ ।
ಗೌರೀರೂಪೇಣ ಸಾ ತತ್ರ ವಡವಾಶ್ರಿತವಿಗ್ರಹಾ ॥ ೨ ॥
ಮಾತೃವದ್ರಕ್ಷಿತಾ ದೇವಾ ವಡವಾನಲಭೀತಿತಃ ।
ದೇವಮಾತೇತಿ ಲೋಕೇಽಸ್ಮಿಂಸ್ತತಃ ಸಾ ವಿಬುಧೈಃ ಕೃತಾ ॥ ೩ ॥
ಮಾಘೇ ಮಾಸೀ ತೃತೀಯಾಯಾಂ ಯಸ್ತಾಮರ್ಚಯತೇ ನರಃ ।
ನಾರೀ ವಾ ಸಂಯುತಾ ಸಾಧ್ವೀ ಸರ್ವಾನ್ಕಾಮಾನವಾಪ್ನುಯಾತ್ ॥ ೪ ॥

ಕನ್ನಡದ ಅನುವಾದ

ದೇವಮಾತೃಗೌರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಮಂಕೀಶನಿಂದ ನೈರ್ಋತ್ಯದಿಕ್ಕಿನಲ್ಲಿರುವ ಗೌರೀರೂಪವನ್ನಾಶ್ರಯಿಸಿದ ಶಾಶ್ವತಳಾದ ದೇವಮಾತೆ ಯೆಡೆಗೆ ಹೋಗಬೇಕು. ಸರಸ್ವತಿಯೆ ದೇವಮಾತೆಯೆಂಬ ಹೆಸರಿನಿಂದ ಲೋಕದಲ್ಲಿ ಪ್ರಖ್ಯಾತಳಾಗಿರುವಳು.

೨. ಆ ಸರಸ್ವತಿಯು ಅಲ್ಲಿ ಪಾದುಕೆಯಮೇಲೆ ಗೌರೀರೂಪದಿಂದ ವಡವಾಗ್ನಿ ಯನ್ನು ಹಿಡಿದುಕೊಂಡು ನಿಂತಿರುವಳು.

೩. ಸರಸ್ವತಿಯು ದೇವತೆಗಳನ್ನು ತಾಯಿಯಂತೆ ವಡವಾಗ್ನಿಯ ಭಯದಿಂದ ರಕ್ಷಿಸಿದ್ದರಿಂದ ಆ ದೇವತೆಗಳು ಅವಳಿಗೆ ದೇವಮಾತೆಯೆಂದು ಹೆಸರನ್ನಿತ್ತರು.

೪. ಮಾಘಮಾಸದ ತದಿಗೆದಿನ ಆ ದೇವಮಾತೆಯನ್ನು ಪುರುಷನಾಗಲಿ, ಪತಿವ್ರತೆಯಾದ ಹೆಂಗಸಾಗಲಿ ಜಿತೇಂದ್ರಿಯರಾಗಿ ಪೂಜಿಸಿದರೆ ಸಕಲೇಷ್ಟಾರ್ಥಗಳನ್ನೂ ಪಡೆಯುವರು.

ದಂಪತೀ ಭೋಜಯೇದ್ಯಸ್ತು ಪಾಯಸೈಃ ಶರ್ಕರಾದಿಭಿಃ ।
ಗೌರೀ ಸಹಸ್ರಭೋಜ್ಯಸ್ಯ ದತ್ತಸ್ಯ ಫಲಮಾಪ್ನುಯಾತ್ ॥ ೫ ॥
ಸುವರ್ಣಪಾದುಕಾ ದೇಯಾ ತತ್ರ ವಿಪ್ರಾಯ ಶೀಲಿನೇ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದೇವಮಾತೃಗೌರೀಮಾಹಾತ್ಮ್ಯವರ್ಣನಂನಾಮ
ಪಂಚಾಶೀತ್ಯುತ್ತರಶತತಮೋಽಧ್ಯಾಯಃ

---

೫. ಪಾಯಸ ಸಕ್ಕರೆ ಮೊದಲಾದುವುಗಳಿಂದ ಅಲ್ಲಿ ದಂಪತಿಗಳನ್ನು ಭೋಜನ ಮಾಡಿಸಿದವನು ಸಾವಿರಮಂದಿ ಗೌರಿಯರಿಗೆ ಅನ್ನದಾನ ಮಾಡಿದ ಫಲವನ್ನು ಪಡೆಯುವನು.

೬. ಅಲ್ಲಿ ಸತ್ಸ್ವಭಾವವುಳ್ಳ ಬ್ರಾಹ್ಮಣನಿಗೆ ಸುವರ್ಣಪಾದುಕೆಯನ್ನು ದಾನ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದೇವಮಾತೃಗೌರೀಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡಶೀತ್ಯುತ್ತರಶತತಮೋಽಧ್ಯಾಯಃ

ನಾಗಸ್ಥಾನಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ನಾಗಸ್ಥಾನಮನುತ್ತಮಂ ।
ಮಂಕೀಶಾತ್ಪಶ್ಚಿಮೇ ಭಾಗೇ ಸಂಗಮತ್ರಿತಯಂ ಗತಂ ॥ ೧ ॥
ಪಾಪಘ್ನಂ ಸರ್ವಜಂತೂನಾಂ ಪಾತಾಲವಿವರಂ ಮಹತ್ ॥ ೨ ॥

ಬಲಭದ್ರಃ ಪುರಾ ದೇವಿ ಶ್ರುತ್ವಾ ಕೃಷ್ಣಸ್ಯ ಸಂಚತಾಂ ।
ಭಲ್ಲತೀರ್ಥೇ ತು ಭಲ್ಲೇನ ತತಃ ಪ್ರಭಾಸಮಾಗತಃ ॥ ೩ ॥

ಕ್ಷೇತ್ರಂ ಮಹಾಪ್ರಭಾವಂ ಹಿ ಜ್ಞಾತ್ವಾ ಸರ್ವಾರ್ಥಸಿದ್ಧಿದಂ ।
ಯಾದವಾನಾಂ ಕ್ಷಯಂ ಕೃತ್ವಾ ತತೋ ವೈರಾಗ್ಯಮೇಯಿವಾನ್ ॥ ೪ ॥

ಕನ್ನಡದ ಅನುವಾದ

ನಾಗಸ್ಥಾನಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಮಂಕೀಶನ ಪಶ್ಚಿಮಭಾಗದಲ್ಲಿ ತ್ರಿಸಂಗಮವನ್ನು ಹೊಂದಿದ ಸಕಲ ಪ್ರಾಣಿಗಳ ಪಾಪವನ್ನು ನೀಗಿಸುವ ಮಹಾಪಾತಾಳರಂಧ್ರವಾದ ನಾಗಸ್ಥಾನಕ್ಕೆ ಹೋಗಬೇಕು.

೩–೪. ದೇವಿ ! ಹಿಂದೆ ಬಲರಾಮನು ಭಲ್ಲತೀರ್ಥದಲ್ಲಿ ಕೃಷ್ಣನು ಮಡಿದಿರುವುದನ್ನು ಭಲ್ಲನಿಂದ ಕೇಳಿ ಪ್ರಭಾಸಕ್ಷೇತ್ರವು ಸಕಲೇಷ್ಟಾರ್ಥಗಳನ್ನೀಯುವ ಮಹಾತ್ಮ್ಯಯುಳ್ಳುದೆಂದರಿತು ಅಲ್ಲಿಗೆ ಬಂದನು. ತರುವಾಯ ಯಾದವರನ್ನು ನಾಶಗೊಳಿಸಿ ವೈರಾಗ್ಯವನ್ನು ಹೊಂದಿದನು.

ಶೇಷನಾಗೇಶರೂಪೇಣ ನಿಷ್ಕ್ರಮ್ಯ ಚ ಶರೀರತಃ ।
ಗಚ್ಛನ್ನಗಚ್ಛಂಸ್ತದಾ ಪ್ರಾಪ್ಯ ತೀರ್ಥಂ ತ್ರೈಸಂಗಮಂ ಪರಂ ॥ ೫ ॥
ಪಾತಾಲಸ್ಯ ತದಾ ದೃಷ್ಟ್ವಾ ದ್ವಾರಂ ವಿವರರೂಪಕಂ ।
ಪ್ರವಿಷ್ಟೋಽಥ ಜಗಾಮಾಽಶು ಯತ್ರಾನಂತಃ ಸ್ವಯಂ ಸ್ಥಿತಃ ॥ ೬ ॥
ಯತೋ ನಾಗಸ್ವರೂಪೇಣ ಸ್ಥಾನೇಽಸ್ಮಿಂಶ್ಚ ಸಮಾವಿಶತ್ ।
ತತ್ಪ್ರಭೃತ್ಯೇವ ದೇವೇಶಿ ನಾಗಸ್ಥಾನಮಿತಿ ಶ್ರುತಂ ॥ ೭ ॥
ನಾಗರಾದಿತ್ಯಪೂರ್ವೇಣ ಯತ್ರ ಕಾಯೋ ವಿಸರ್ಜಿತಃ ।
ತದದ್ಯಾಪಿ ಪ್ರಸಿದ್ಧಂ ವೈ ಶೇಷಸ್ಥಾನಮಿತಿ ಶ್ರುತಂ ॥ ೮ ॥
ಅತಃ ಸ್ನಾತ್ವಾ ಮಹಾದೇವಿ ತತ್ರ ತೀರ್ಥೇ ತ್ರಿಸಂಗಮೇ ।
ನಾಗಸ್ಥಾನಂ ಸಮಭ್ಯರ್ಚ್ಯ ಪಂಚಮ್ಯಾಮಕೃತಾಶನಃ ॥ ೯ ॥
ಶ್ರಾದ್ಧಂ ಕೃತ್ವಾ ಯಥಾಶಕ್ತ್ಯಾ ದತ್ವಾ ವಿಪ್ರಾಯ ದಕ್ಷಿಣಾಂ ।
ವಿಮುಕ್ತಃ ಸರ್ವದುಃಖೇಭ್ಯಃ ರುದ್ರಲೋಕಂ ಸ ಗಚ್ಛತಿ ॥ ೧೦ ॥

೫–೬. ಬಳಿಕ ಅವನ ಸ್ವಶರೀರದಿಂದ ಶೇಷನಾಗರೂಪದಿಂದ ಹೊರಹೊರಟು ಮುಂದಕ್ಕೆ ಸರಿಯುತ್ತ ತ್ರಿಸಂಗಮತೀರ್ಥವನ್ನು ಸೇರಿ ಅಲ್ಲಿ ಪಾತಾಳರಂಧ್ರವನ್ನು ಕಂಡು ಅದನ್ನು ಪ್ರವೇಶಿಸಿ ಅನಂತನಾಗನಿರುವ ಪಾತಾಳಲೋಕವನ್ನು ಹೊಂದಿದನು.

೭. ದೇವೇಶಿ! ಆ ಬಲರಾಮನು ಇಲ್ಲಿ ನಾಗಸ್ವರೂಪದಿಂದ ಪ್ರವೇಶಮಾಡಿದುದರಿಂದ ಅದು ಮೊದಲ್ಗೊಂಡು ಆ ಸ್ಥಳವು ನಾಗಸ್ಥಾನವೆಂದು ವಿಖ್ಯಾತವಾಯಿತು.

೮. ಬಲರಾಮನು ನಾಗರಾದಿತ್ಯನ ಪೂರ್ವದಲ್ಲಿ ದೇಹವನ್ನು ತ್ಯಜಿಸಿದ್ದರಿಂದ ಆ ಸ್ಥಳವು ಈಗಲೂ ಶೇಷಸ್ಥಾನವೆಂದು ವಿಖ್ಯಾತವಾಗಿರುವುದು.

೯–೧೦. ಮಹಾದೇವಿ! ಆದ್ದರಿಂದ ಮಾನವನು ಪಂಚಮಿಯದಿನ ಆ ತ್ರಿಸಂಗಮ ತೀರ್ಥದಲ್ಲಿ ಮಿಂದು ನಾಗಸ್ಥಾನವನ್ನು ಪೂಜಿಸಿ ಉಪವಾಸಮಾಡಿ ಶ್ರಾದ್ಧಗೈದು ಬ್ರಾಹ್ಮಣನಿಗೆ ಶಕ್ತ್ಯನುಸಾರ ದಕ್ಷಿಣೆಯನ್ನಿತ್ತರೆ ಸಕಲ ದುಃಖಗಳಿಂದ ಮುಕ್ತನಾಗಿ ರುದ್ರಲೋಕವನ್ನು ಸೇರುವನು.

ಪಾಯಸಂ ಮಧುಸಂಮಿಶ್ರಂ ಭಕ್ಷ್ಯಭೋಜ್ಯೈಃ ಸಮನ್ವಿತಂ ।
ಶೇಷನಾಗಂ ಸಮುದ್ದಿಶ್ಯ ವಿಪ್ರಂ ಯಸ್ತತ್ರ ಭೋಜಯೇತ್ ।
ಕೋಟಿಭೋಜ್ಯಂ ಕೃತಂ ತೇನ ಜಾಯತೇ ನಾತ್ರ ಸಂಶಯಃ ॥ ೧೧ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾಗಸ್ಥಾನ ಮಾಹಾತ್ಮ್ಯವರ್ಣನಂ ನಾಮ
॥ ಷಡಶೀತ್ಯುತ್ತರಶತತಮೋಽಧ್ಯಾಯಃ ॥

---

೧೧. ಜೇನುತುಪ್ಪ, ಭಕ್ಷ್ಯ ಭೋಜ್ಯಗಳೊಡನೆ ಶೇಷನಾಗನನ್ನುದ್ದೇಶಿಸಿ ಪಾಯಸವನ್ನು ಅಲ್ಲಿ ಬ್ರಾಹ್ಮಣನಿಗೆ ಭೋಜನಮಾಡಿಸಿದರೆ ಕೋಟಿ ಮಂದಿ ಬ್ರಾಹ್ಮಣರನ್ನು ಭೋಜನ ಮಾಡಿಸಿದಂತಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಪ್ರಭಾಸಖಂಡದ ಏಳನೆ ಮೊದಲನೆಯ ಯಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾಗಸ್ಥಾನಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಾಶೀತ್ಯುತ್ತರಶತತಮೋಽಧ್ಯಾಯಃ

ಪ್ರಭಾಸಪಂಚಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸರ್ವಕಾಮಫಲಪ್ರದಂ ।
ಪ್ರಭಾಸಪಂಚಕಂ ಪುಣ್ಯಮಾದ್ಯಂ ತತ್ರ ವ್ಯವಸ್ಥಿತಂ ॥ ೧ ॥
ತಸ್ಯೈವ ಪಶ್ಚಿಮೇ ಭಾಗೇ ಪ್ರಭಾಸ ಇತಿ ಚೋಚ್ಯತೇ ।
ವೃದ್ಧಪ್ರಭಾಸಶ್ಚ ತತೋ ದಕ್ಷಿಣೇ ನಾತಿದೂರತಃ ॥ ೨ ॥
ಜಲಪ್ರಭಾಸಶ್ಚ ತತೋ ದಕ್ಷಿಣೇನ ವರಾನನೇ ।
ಕೃತಸ್ಮರಪ್ರಭಾಸಶ್ಚ ಶ್ಮಶಾನಂ ಯತ್ರ ಭೈರವಂ ॥ ೩ ॥
ಏವಂ ಪಂಚಪ್ರಭಾಸಾನ್ಯಃ ಪಶ್ಯೇದ್ಭಕ್ತ್ಯಾ ಸಮನ್ವಿತಃ ।
ಸ ಯಾತಿ ಪರಮಂ ಸ್ಥಾನಂ ಜರಾಮರಣವರ್ಜಿತಂ ॥ ೪ ॥
ನ ನಿವರ್ತತಿ ಯತ್ರಾಪ್ಯ ದುಷ್ಪ್ರಾಪ್ಯಂ ತ್ರಿದಶೈರಪಿ ।
ಪ್ರಭಾಸಂ ಪ್ರಥಮಂ ತೀರ್ಥಂ ತ್ರಿಷು ಲೋಕೇಷು ವಿಶ್ರುತಂ ॥ ೫ ॥

ಪ್ರಭಾಸಪಂಚಕಮಾಹಾತ್ಮ್ಯವರ್ಣನ

ಕನ್ನಡದ ಅನುವಾದ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಸಕಲೇಷ್ಟಾರ್ಥಗಳನ್ನೀಯುವ ಪವಿತ್ರವಾದ ಅಲ್ಲಿಯೇ ಇರುವ ಪ್ರಭಾಸ ಪಂಚಕಕ್ಕೆ ಹೋಗಬೇಕು.

೨-೭. ಆ ನಾಗಸ್ಥಾನದ ಪಶ್ಚಿಮದಲ್ಲಿ ಪ್ರಭಾಸವೆಂದೂ, ಅದರ ಸಮೀಪದಲ್ಲಿ ದಕ್ಷಿಣ ಭಾಗದಲ್ಲಿ ವೃದ್ಧ ಪ್ರಭಾಸವೆಂದೂ, ಅದರ ದಕ್ಷಿಣದಲ್ಲಿ ಜಲ ಪ್ರಭಾಸವೆಂದೂ, ಕೃತಸ್ಮರ ಪ್ರಭಾಸವೆಂದೂ, ಭೈರವಶ್ಮಶಾನವೆಂದೂ ಹೀಗೆ ಐದು ಇತರ ಪ್ರಭಾಸಗಳಿರುವುವು. ಅವುಗಳನ್ನು ಭಕ್ತಿಯಿಂದ ದರ್ಶನಮಾಡಿದವನು ಜನನ ಮರಣಗಳಿಲ್ಲದಿರುವುದೂ, ಪುನರಾವೃತ್ತಿಯಿಲ್ಲದಿರುವುದೂ, ದೇವತೆಗಳಿಗೂ ಹೊಂದಲಶಕ್ಯವಾದುದೂ ಆದ ಉತ್ತಮ ಸ್ಥಾನವನ್ನು ಪಡೆಯುವನು. ಮೂರು ಲೋಕಗಳಲ್ಲಿ ಪ್ರಸಿದ್ಧವಾದ ಮೊದಲನೆಯ ಪ್ರಭಾಸತೀರ್ಥವು ದೇವತೆಗಳಿಗೂ, ಹೊಂದಲಶಕ್ಯ

ದೇವಾನಾಮಪಿ ದುಷ್ಪ್ರಾಪ್ಯಂ ಮಹಾಪಾತಕನಾಶನಂ ।
ಪ್ರಭಾಸೇ ತ್ವೇಕರಾತ್ರೇಣ ಅಮಾವಾಸ್ಯಾಂ ಕೃತೋದಕಃ ॥ ೬ ॥
ಮುಚ್ಯತೇ ಪಾತಕೈಃ ಸರ್ವೈಃ ಶಿವಲೋಕಂ ಸ ಗಚ್ಛತಿ ।
ಸಪ್ತಜನ್ಮಕೃತಂ ಪಾಪಂ ಗಂಗಾಸಾಗರಸಂಗಮೇ ॥ ೭ ॥
ಜನ್ಮನಾಂ ಚ ಸಹಸ್ರೇಣ ಯತ್ಪಾಪಂ ಕುರುತೇ ನರಃ ।
ಸ್ನಾನಾದೇವಾಸ್ಯ ನಶ್ಯೇತ ಸಾಗರೇ ಲವಣಾಂಭಸಿ ॥ ೮ ॥
ಚತುರ್ದಶ್ಯಾಮಮಾವಾಸ್ಯಾಂ ಪಂಚದಶ್ಯಾಂ ವಿಶೇಷತಃ ।
ಅಹೋರಾತ್ರೋಷಿತೋ ಭೂತ್ವಾ ಬ್ರಾಹ್ಮಣಾನ್ಭೋಜ್ಯ ಶಕ್ತಿತಃ ॥ ೯ ॥
ದತ್ವಾ ಗಾಂ ಕಾಂಚನಂ ತೇಭ್ಯಃ ಶಿವಃ ಪ್ರೀತೋ ಭವತ್ವಿತಿ ।
ಏವಂ ಕೃತ್ವಾ ನರೋ ದೇವಿ ಕುಲಾನಾಂ ತಾರಯೇಚ್ಛತಂ ॥ ೧೦ ॥

ದೇವ್ಯುವಾಚ :—

ಪ್ರಭಾಸಪಂಚಕಂ ಹ್ಯೇತದ್ಯತ್ತ್ವಯಾ ಪರಿಕೀರ್ತಿತಂ ।
ಕಥಮತ್ರ ಸಮುದ್ಭೂತಂ ಏತನ್ಮೇ ಕೌತುಕಂ ಮಹತ್ ॥ ೧೧ ॥

ವಾದುದೂ, ಮಹಾಪಾತಕಗಳನ್ನು ನೀಗಿಸುವುದೂ ಆಗಿರುವುದು. ಪ್ರಭಾಸ ಕ್ಷೇತ್ರದಲ್ಲಿ ಅಮಾವಾಸ್ಯೆಯ ದಿನ ತರ್ಪಣ ಮಾಡಿದವನು ಸಮಸ್ತಪಾಪಮುಕ್ತನಾಗಿ ಶಿವ ಲೋಕವನ್ನು ಸೇರುವನು. ಗಂಗೆಯು ಸಮುದ್ರವನ್ನು ಸೇರುವ ಸ್ಥಳದಲ್ಲಿ ಮಿಂದರೆ ಏಳು ಜನ್ಮಗಳಲ್ಲಿ ಮಾಡಿದ ಪಾಪವು ಪರಿಹಾರವಾಗುವುದು.

೮. ಈ ಪ್ರಭಾಸದಲ್ಲಿರುವ ಸಮುದ್ರದಲ್ಲಿ ಸ್ನಾನಮಾಡುವುದರಿಂದಲೆ ಸಹಸ್ರ ಜನ್ಮಗಳಲ್ಲಿ ಮಾಡಿದ ಪಾಪವು ಪರಿಹಾರವಾಗುವುದು.

೯–೧೦. ಮನುಷ್ಯನು ಚತುರ್ದಶೀ, ಅಮಾವಾಸ್ಯೆ, ಹುಣ್ಣಿಮೆಯ ದಿನಗಳಲ್ಲಿ ಹಗಲು ರಾತ್ರಿ ಉಪವಾಸ ಮಾಡಿ ಶಕ್ತ್ಯನುಸಾರ ಬ್ರಾಹ್ಮಣರಿಗೆ ಭೋಜನ ಮಾಡಿಸಿ ಅವರಿಗೆ ಶಿವನು ಪ್ರಿಯವಾಗಲೆಂದು ಸುವರ್ಣಗೋವನ್ನು ದಾನಮಾಡಿದರೆ ನೂರು ಕುಲಗಳನ್ನು ಉದ್ಧಾರ ಮಾಡುವನು.

೧೧. ದೇವಿಯು ಹೇಳುತ್ತಾಳೆ:—ದೇವೇಶ! ನೀನು ಹೇಳಿರುವ ಪ್ರಭಾಸ ಪಂಚಕವು ಇಲ್ಲಿ ಹೇಗೆ ಹುಟ್ಟಿತು? ನನಗೆ ಮಹಾ ಕೌತೂಹಲವುಂಟಾಗಿದೆ.

ಏಕ ಏವ ಶ್ರುತೋಽಸ್ಮಾಭಿಃ ಪ್ರಭಾಸಸ್ತೀರ್ಥವಾಸಿತಃ ।
ಪ್ರಭಾಸಾಃ ಪಂಚ ದೇವೇಶ ಯತ್ತ್ವಯಾ ಪರಿಕೀರ್ತಿತಾಃ ॥ ೧೨ ॥
ಏತನ್ಮೇ ಸಂಶಯಂ ಸರ್ವಂ ಯಥಾವದ್ವಕ್ತುಮರ್ಹಸಿ ॥ ೧೩ ॥
ಈಶ್ವರ ಉವಾಚ :—
ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಯಾಂ ಶ್ರುತ್ವಾ ಮಾನವೋ ಭಕ್ತ್ಯಾ ಪ್ರಾಪ್ನೋತಿ ಪರಮಾಂ ಗತಿಂ ॥ ೧೪ ॥
ಪುರಾ ಮಹೇಶ್ವರೋ ದೇವಶ್ಚಚಾರ ವಸುಧಾಮಿಮಾಂ ।
ದಿವ್ಯರೂಪಧರಃ ಕಾಂತೋ ದಿಗ್ವಾಸಾಃ ಸ ಯದೃಚ್ಛಯಾ ॥ ೧೫ ॥
ಏವಂ ಚ ರಮಮಾಣಸ್ತು ಋಷೀಣಾಮಾಶ್ರಮಂ ಮಹತ್ ।
ಜಗಾಮ ಕೌತುಕಾವಿಷ್ಟೋ ಭಿಕ್ಷಾರ್ಥಂ ದಾರುಕೇ ವನೇ ॥ ೧೬ ॥
ಭ್ರಮಮಾಣಸ್ಯ ತಸ್ಯಾಥ ದೃಷ್ಟ್ವಾ ರೂಪಮನುತ್ತಮಂ ।
ತಾ ನಾರ್ಯಃ ಕಾಮಸಂತಪ್ತಾ ಬಭೂವುರ್ವ್ಯಥಿತೇಂದ್ರಿಯಾಃ ॥ ೧೭ ॥
ಸಾನುರಾಗಾಸ್ತತಃ ಸರ್ವಾ ಅನುಗಚ್ಛಂತಿ ತಂ ಸದಾ ।
ಸಮಾಲಿಂಗಂತಿ ತಾಃ ಕಾಶ್ಚಿತ್ಕಾಶ್ಚ ವೀಕ್ಷಂತಿ ರಾಗತಃ ॥ ೧೮ ॥

೧೨–೧೩. ನಾನು ಒಂದೇ ಪ್ರಭಾಸ ತೀರ್ಥವನ್ನು ಕೇಳಿರುವೆನು. ನೀನು ಐದು ಪ್ರಭಾಸಗಳನ್ನು ಹೇಳಿರುವೆ. ಈ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ. ಇದರ ನಿಜಸ್ಥಿತಿಯನ್ನು ನನಗೆ ಹೇಳು.

೧೪. ಈಶ್ವರನು ಹೇಳುತ್ತಾನೆ :—ದೇವಿ ! ಪಾಪವನ್ನು ನೀಗಿಸುವ ಕಥೆಯನ್ನು ಹೇಳುವೆನು. ಕೇಳು. ಇದನ್ನು ಭಕ್ತಿಯಿಂದ ಕೇಳಿದ ಮನುಷ್ಯನು ಉತ್ತಮ ಗತಿಯನ್ನು ಹೊಂದುತ್ತಾನೆ.

೧೫. ಹಿಂದೆ ದಿವ್ಯ ರೂಪವನ್ನು ಧರಿಸಿದವನೂ, ಮನೋಹರನೂ, ದಿಗಂಬರನೂ ಆದ ಮಹೇಶ್ವರನು ಸ್ವೇಚ್ಛೆಯಾಗಿ ಭೂಮಿಯಲ್ಲಿ ಸಂಚರಿಸಿದನು.

೧೬. ಅವನು ಹೀಗೆ ವಿನೋದ ಪಡುತ್ತ ಕುತೂಹಲದಿಂದ ದಾರುಕ ವನದಲ್ಲಿರುವ ಮುನಿಗಳ ಆಶ್ರಮಕ್ಕೆ ಭಿಕ್ಷೆಗಾಗಿ ಹೋದನು.

೧೭. ಸಂಚರಿಸುತ್ತಿರುವ ಅವನ ಸುಂದರ ರೂಪವನ್ನು ನೋಡಿ ಆ ಮುನಿಗಳ ಪತ್ನಿಯರು ಕಾಮ ಪೀಡಿತರಾಗಿ ವ್ಯಥೆಗೊಂಡ ಇಂದ್ರಿಯಗಳುಳ್ಳವರಾದರು.

೧೮. ಅವರೆಲ್ಲ ಅನುರಾಗ ಸಹಿತರಾಗಿ ಆ ಶಿವನನ್ನು ಹಿಂಬಾಲಿಸಿದರು. ಅವರಲ್ಲಿ ಕೆಲವರು ಅವನನ್ನು ಆಲಿಂಗಿಸಿದರು. ಕೆಲವರು ಅನುರಾಗದಿಂದ ನೋಡಿದರು.

ಪ್ರಾರ್ಥಯಂತಿ ತಥಾ ಚಾನ್ಯಾಃ ಪರಿತ್ಯಜ್ಯ ಗೃಹಾನ್ಸ್ವಕಾನ್ ॥ ೧೯ ॥
ಏವಂ ತಾಸಾಂ ಸ್ವರೂಪಂ ತೇ ದೃಷ್ಟ್ವಾ ಸರ್ವೇ ಮಹರ್ಷಯಃ ।
ಕೋಪೇನ ಮಹತಾ ಯುಕ್ತಾಃ ಶೇಪುಸ್ತಂ ವೃಷಭಧ್ವಜಂ ॥ ೨೦ ॥
ಯಸ್ಮಾತ್ತ್ವಂ ನಗ್ನತಾಮೇತ್ಯ ಆಶ್ರಮೇಽಸ್ಮಿನ್ಸಮಾಗತಃ ।
ಮೋಹಯಾನಃ ಸ್ತ್ರಿಯೋಽಸ್ಮಾಕಂ ಲಜ್ಜಾಂ ನೈವ ಕರೋಷಿ ಚ ।
ತಸ್ಮಾತ್ತೇ ಪತತಾಲ್ಲಿಂಗಂ ಸದ್ಯ ಏವ ವೃಷಧ್ವಜ ॥ ೨೧ ॥
ತತಸ್ತತ್ಪತಿತಂ ಲಿಂಗಂ ತತ್ಕ್ಷಣಾಚ್ಛಂಕರಸ್ಯ ಚ ।
ತಸ್ಮಿನ್ಪ್ರಪತಿತೇ ಭೂಮೌ ಪ್ರಾಕಂಪತ ವಸುಂಧರಾ ॥ ೨೨ ॥
ಕ್ಷುಭಿತಾಃ ಸಾಗರಾಃ ಸರ್ವೇ ಮರ್ಯಾದಾಂ ವಿಜಹುಸ್ತದಾ ।
ಶೀರ್ಣಾನಿ ಗಿರಿಶೃಂಗಾಣಿ ತ್ರಸ್ತಾಃ ಸರ್ವೇ ದಿವೌಕಸಃ ॥ ೨೩ ॥
ತತೋ ದೇವಾಃ ಸಗಂಧರ್ವಾಃ ಸಮಹೋರಗ ಕಿನ್ನರಾಃ ।
ಊಚುಃ ಪಿತಾಮಹಂ ಗತ್ವಾ ಕಿಮೇತತ್ಕಾರಣಂ ವಿಭೋ ॥ ೨೪ ॥

---

೧೯. ಇನ್ನು ಕೆಲವರು ತಮ್ಮ ಮನೆಗಳನ್ನು ತ್ಯಜಿಸಿ ಆ ಶಿವನನ್ನು ಪ್ರಾರ್ಥಿಸಿದರು.

೨೦. ಆಗ ಆ ಮಹರ್ಷಿಗಳು ಆ ಸ್ತ್ರೀಯರ ಸ್ವರೂಪವನ್ನು ಕಂಡು ಅತ್ಯಂತ ಕುಪಿತರಾಗಿ ಆ ಮಹೇಶ್ವರನನ್ನು ಹೀಗೆ ಶಪಿಸಿದರು.

೨೧. "ಮಹೇಶ್ವರ! ನೀನು ಬೆತ್ತಲೆಯಾಗಿ ನಾಚಿಕೆಯಿಲ್ಲದೆ ಈ ಆಶ್ರಮಕ್ಕೆ ಬಂದು ನಮ್ಮ ಸ್ತ್ರೀಯರನ್ನು ಮೋಹಗೊಳಿಸಿದುದರಿಂದ ನಿನ್ನ ಲಿಂಗವು ಕೂಡಲೆ ಬಿದ್ದು ಹೋಗಲಿ".

೨೨. ಬಳಿಕ ಕೂಡಲೆ ಆ ಶಂಕರನ ಲಿಂಗವು ನೆಲದಲ್ಲಿ ಬೀಳಲು ಭೂಮಿಯು ನಡುಗಿತು.

೨೩. ಸಮುದ್ರಗಳು ಅಲ್ಲೋಲ ಕಲ್ಲೋಲಗಳಾಗಿ ತಮ್ಮ ಎಲ್ಲೆಯನ್ನು ತ್ಯಜಿಸಿದುವು. ಶೈಲಶಿಖರಗಳು ಒಡೆದು ಹೋದುವು. ಸಮಸ್ತ ದಿವಿಜರು ಭಯಗೊಂಡರು.

೨೪. ತರುವಾಯ ದೇವತೆಗಳು ಗಂಧರ್ವರು, ಉರಗರು, ಕಿನ್ನರರು ಇವರಿಂದ ಸಹಿತರಾಗಿ ಬ್ರಹ್ಮನ ಬಳಿಗೆ ಹೋಗಿ ಇಂತೆಂದರು. "ಸ್ವಾಮಿ! ಏಕೆ ಹೀಗಾಗಿದೆ? ಇದಕ್ಕೆ ಕಾರಣವೇನು?

ಸಾಗರಾಃ ಕ್ಷುಭಿತಾ ಯೇನ ಪ್ಲಾವಯಂತಿ ವಸುಂಧರಾಮ್ ।
ಶೀರ್ಯಂತೇ ಗಿರಿಶೃಂಗಾಣಿ ಕಂಪತೇ ಚ ವಸುಂಧರಾ ॥ ೨೫ ॥
ಚಿಹ್ನಾನಿ ಲೋಕನಾಶಾಯ ದೃಶ್ಯಂತೇ ದಾರುಣಾನಿ ಚ ।
ತೇಷಾಂ ತದ್ವಚನಂ ಶ್ರುತ್ವಾ ಬ್ರಹ್ಮಲೋಕೇ ಪಿತಾಮಹಃ ॥ ೨೬ ॥
ಧ್ಯಾತ್ವಾ ತು ಸುಚಿರಂ ಕಾಲಂ ವಾಕ್ಯಮೇತದುವಾಚ ಹ ।
ಶಿವಲಿಂಗಂ ನಿಪತಿತಂ ಪೃಥಿವ್ಯಾಂ ಸುರಸತ್ತಮಾಃ ॥ ೨೭ ॥
ಶಾಪೇನ ಋಷಿಪುತ್ರಾಣಾಂ ಭಾರ್ಗವಾಣಾಂ ಮಹಾತ್ಮನಾಮ್ ।
ತಸ್ಮಿನ್ನಿಪತಿತೇ ಭೂಮೌ ತ್ರೈಲೋಕ್ಯಂ ಸಚರಾಚರಮ್ ॥ ೨೮ ॥
ಏತದವಸ್ಥಾಂ ಪ್ರಾಪ್ತಂ ತಸ್ಮಾತ್ತತ್ರೈವ ಗಮ್ಯತಾಮ್ ।
ವಿಷ್ಣುನಾ ಸಹ ಗೀರ್ವಾಣಾಸ್ತಥಾ ನೀತಿರ್ವಿಧೀಯತಾಮ್ ॥ ೨೯ ॥
ತತಃ ಕ್ಷೀರೋದಧಿಂ ಜಗ್ಮುರ್ಬ್ರಹ್ಮಾದ್ಯಾಸ್ತ್ರಿದಿವೌಕಸಃ ।
ಯತ್ರ ಶೇತೇ ಚತುರ್ಬಾಹುರ್ಯೋಗನಿದ್ರಾಂ ಚ ಸಂಗತಃ ॥ ೩೦ ॥
ತಸ್ಮೈ ಸರ್ವಂ ಸಮಾಚಖ್ಯುಸ್ತೇನೈವ ಸಹಿತಾಸ್ತತಃ ।
ಜಗ್ಮುರ್ಯತ್ರ ಮಹಾದೇವೋ ಲಿಂಗೇನ ರಹಿತೋ ವಿಭುಃ ॥ ೩೧ ॥
ಊಚುಃ ಸಮಾಹಿತಾಃ ಸರ್ವೇ ಪ್ರಣಿಪತ್ಯ ದಿವೌಕಸಃ ॥ ೩೨ ॥
ಲಿಂಗಮುತ್ ಕ್ಷಿಪ್ಯತಾಮೇತದ್ಯತ್ ಕ್ಷಿತೌ ಪತಿತಂ ವಿಭೋ ।
ಏತೇ ಮಹಾರ್ಣವಾಃ ಸರ್ವೇ ಪ್ಲಾವಯಂತಿ ವಸುಂಧರಾಮ್ ॥ ೩೩ ॥

---

೨೫. ಸಮುದ್ರಗಳು ಆಲ್ಲೋಲಕಲ್ಲೋಲಗಳಾಗಿ ಭೂಮಿಯನ್ನು ಮುಳುಗಿಸುತ್ತವೆ. ಪರ್ವತಗಳ ಶಿಖರಗಳು ಸೀಳುತ್ತಿವೆ. ಭೂಮಿಯು ನಡುಗುತ್ತಿದೆ.

೨೬–೨೯. ಲೋಕನಾಶಕ್ಕಾಗಿ ಭಯಂಕರ ಚಿಹ್ನೆಗಳು ಕಾಣುತ್ತಿವೆ. ಆ ದೇವತೆಗಳ ಈ ಮಾತನ್ನು ಕೇಳಿ ಪಿತಾಮಹನು ಬಹಳ ಹೊತ್ತು ಆಲೋಚಿಸಿ ಹೀಗೆಂದನು. "ಸುರೋತ್ತಮರೆ! ಭೃಗು ವಂಶದ ಮುನಿಗಳ ಶಾಪದಿಂದ ಶಿವನ ಲಿಂಗವು ಭೂಮಿಯಲ್ಲಿ ಬಿದ್ದಿರುವುದು. ಆ ಲಿಂಗವು ಭೂಮಿಯಲ್ಲಿ ಬೀಳಲು ಚರಾಚರಾತ್ಮಕವಾದ ಮೂರು ಲೋಕಗಳೂ ಈ ಸ್ಥಿತಿಯನ್ನು ಹೊಂದಿರುವುವು. ಎಲೈ ದೇವತೆಗಳೆ! ಆದುದರಿಂದ ಆ ವಿಷ್ಣುವಿನೆಡೆಗೆ ಹೋಗಿ ಇದಕ್ಕೆ ಉಪಾಯವನ್ನು ಮಾಡೋಣ."

೩೦. ಬಳಿಕ ಬ್ರಹ್ಮಾದಿ ದೇವತೆಗಳು ಶ್ರೀಮನ್ನಾರಾಯಣನು ಯೋಗ ನಿದ್ರೆಯಿಂದ ಮಲಗಿರುವ ಕ್ಷೀರ ಸಮುದ್ರಕ್ಕೆ ಹೋದರು.

೩೧–೩೩. ಆ ದೇವತೆಗಳೆಲ್ಲರೂ ಸಾವಧಾನ ಮನಸ್ಸಿನಿಂದ ಶಂಕರನನ್ನು ವಂದಿಸಿ ಅವನನ್ನು ಕುರಿತು, "ನಾಥ! ಭೂಮಿಯಲ್ಲಿ ಬಿದ್ದಿರುವ ಈ ಲಿಂಗವನ್ನು ಮೇಲಕ್ಕೆ ಎತ್ತು. ಈ ಸಮುದ್ರಗಳು ಭೂಮಿಯನ್ನು ಮುಳುಗಿಸುತ್ತವೆ". ಎಂದರು.

ಭಗವಾನುವಾಚ :—

ಋಷಿಭಿಃ ಶಾಪಿತಂ ಹ್ಯೇತನ್ಮಮ ಲಿಂಗಂ ಸುರೇಶ್ವರಾಃ ।
ನ ತು ಶಕ್ಯೋ ಮಯಾ ಕರ್ತುಂ ಬಾಧಸ್ತೇಷಾಂ ಮಹಾತ್ಮನಾಂ ॥ ೩೪ ॥

ಶಾಪೋ ಹಿ ಭಾರ್ಗವೇಂದ್ರಾಣಾಮತೋ ಮೇ ಶ್ರೂಯತಾಂ ವಚಃ ।
ಪೂಜಯಧ್ವಂ ಸುರಾಸ್ಸರ್ವೇ ಬ್ರಹ್ಮವಿಷ್ಣುಪುರಸ್ಸರಾಃ ॥ ೩೫ ॥

ಲಿಂಗಮೇತತ್ತತಃ ಸರ್ವೇ ಸರ್ವಂ ಲಪ್ಸ್ಯಥ ಸತ್ತಮಾಃ ।
ಪ್ರಕೃತಿಂ ಸಾಗರಾಃ ಸರ್ವೇ ಯಾಸ್ಯಂತಿ ಗಿರಯಸ್ತಥಾ ॥ ೩೬ ॥

ಏತತ್ಪುಣ್ಯತಮೇ ಕ್ಷೇತ್ರೇ ಧೃತ್ವಾ ಸರ್ವೇ ಸಮಾಹಿತಾಃ
ಅಥೋದ್ಧೃಷ್ಯ ಸುರಾಃ ಸರ್ವೇ ಪ್ರಭಾಸಂ ಕ್ಷೇತ್ರಮಾಗತಾಃ ॥ ೩೭ ॥

ತತ್ರೈವ ನಿದಧುಃ ಸರ್ವೇ ತತಃ ಪೂಜಾಂ ಪ್ರಚಕ್ರಿರೇ ।
ಬ್ರಹ್ಮಣಾ ಪೂಜಿತಂ ಲಿಂಗಂ ವಿಷ್ಣುನಾ ಪ್ರಭವಿಷ್ಣುನಾ ॥ ೩೮ ॥

ಶಕ್ರೇಣಾಥ ಕುಬೇರೇಣ ಯಮೇನ ವರುಣೇನ ಚ ।
ಊಚುಶ್ಚೈವ ತತೋ ದೇವಾ ಲಿಂಗಂ ಸಂಪೂಜ್ಯ ಭಕ್ತಿತಃ ॥ ೩೯ ॥

---

೩೪. ಭಗವಂತನು ಹೇಳುತ್ತಾನೆ .—ದೇವೋತ್ತಮರೆ! ಈ ನನ್ನ ಲಿಂಗವನ್ನು ಮುನಿಗಳು ಶಾಪದಿಂದ ಕೆಡವಿರುವರು. ನಾನು ಮಹಾತ್ಮರಾದ ಅವರಿಗೆ ತೊಂದರೆ ಮಾಡಲು ಶಕ್ತನಲ್ಲ.

೩೫–೩೬. ಇದು ಅವರ ಶಾಪದ ಪ್ರಭಾವವು. ಆದುದರಿಂದ ನನ್ನ ಮಾತನ್ನು ಕೇಳಿರಿ. ನೀವೆಲ್ಲ ಬ್ರಹ್ಮ ವಿಷ್ಣುಗಳೊಡನೆ ಈ ಲಿಂಗವನ್ನು ಪೂಜಿಸಿದರೆ ನಿಮ್ಮ ಇಷ್ಟಾರ್ಥಗಳು ಲಭಿಸುವುವು. ಹಾಗೆಯೇ ಸಾಗರಗಳೂ, ಬೆಟ್ಟಗಳೂ ಮೊದಲಿನಂತೆಯೇ ಆಗುವುವು.

೩೭–೩೯. ಬಳಿಕ ದೇವತೆಗಳು ಆ ಲಿಂಗವನ್ನು ಎತ್ತಿ ಹಿಡಿದುಕೊಂಡು ಪುಣ್ಯಕರವಾದ ಪ್ರಭಾಸ ಕ್ಷೇತ್ರಕ್ಕೆ ಬಂದು ಅಲ್ಲಿ ಇಟ್ಟು ಪೂಜಿಸಿದರು. ಬ್ರಹ್ಮ, ವಿಷ್ಣು, ದೇವೇಂದ್ರ, ಕುಬೇರ, ಯಮ, ವರುಣರೂ ಆರಾಧಿಸಿದರು. ಹೀಗೆ ದೇವತೆಗಳು ಲಿಂಗವನ್ನು ಭಕ್ತಿಯಿಂದ ಪೂಜಿಸಿ ಇಂತೆಂದರು.

ಅದ್ಯಪ್ರಭೃತಿ ರುದ್ರಸ್ಯ ಲಿಂಗಂ ಸಂಪೂಜ್ಯ ಭಕ್ತಿತಃ ।
ಭವಿಷ್ಯಾಮೋ ನ ಸಂದೇಹಸ್ತಥಾ ಪಿತೃಗಣಾಶ್ಚ ಯೇ ॥ ೪೦ ॥
ಯ ಏನಂ ಪೂಜಯಿಷ್ಯಂತಿ ಭಕ್ತಿಯುಕ್ತಾಶ್ಚ ಮಾನವಾಃ ।
ಯಾಸ್ಯಂತಿ ತೇ ಸುರಾವಾಸಂ ಸಶರೀರಾ ನರೋತ್ತಮಾಃ ॥ ೪೧ ॥
ಅತ್ರೈವ ಪ್ರಥಮಂ ಲಿಂಗಂ ಯತೋಽಸ್ಮಾಭಿಃ ಪ್ರತಿಷ್ಠಿತಂ ।
ಪ್ರಭಾಸಂ ನಾಮ ಚಾಸ್ಯಾಪಿ ಪ್ರಭಾಸೇತಿ ಭವಿಷ್ಯತಿ ॥ ೪೨ ॥
ಏವಮುಕ್ತ್ವಾ ಗತಾಃ ಸರ್ವೇ ತ್ರಿದಿವಂ ಸುರಸತ್ತಮಾಃ ।
ತಂ ದೃಷ್ಟ್ವಾ ತ್ರಿದಿವಂ ಯಾಂತಿ ಭೂಯಾಂಸಃ ಪ್ರಾಣಿನೋ ಭುವಿ ॥ ೪೩ ॥
ತತಸ್ತ್ರಿವಿಷ್ಟಪಂ ವ್ಯಾಪ್ತಂ ಬಹುಭಿಃ ಪ್ರಾಣಿಭಿಃ ಪ್ರಿಯೇ ।
ತದ್ದೃಷ್ಟ್ವಾ ತ್ರಿದಿವಂ ವ್ಯಾಪ್ತಂ ಸಹಸ್ರಾಕ್ಷಃ ಸುದುಃಖಿತಃ ॥ ೪೪ ॥
ಜ್ಞಾತ್ವಾ ಲಿಂಗಪ್ರಭಾವಂ ತು ತತಶ್ಚಾಗತ್ಯ ಭೂತಲಂ ।
ವಜ್ರೇಣಾಚ್ಛಾದಯಾಮಾಸ ಸಮಂತಾತ್ಸ ವರಾನನೇ ॥ ೪೫ ॥

---

೪೦. "ಇದು ಮೊದಲ್ಗೊಂಡು ರುದ್ರನ ಲಿಂಗವನ್ನು ನಾವೂ ಪಿತೃಗಳೂ ಭಕ್ತಿಯಿಂದ ಪೂಜಿಸಿ ಧನ್ಯರಾಗುವೆವು. ಸಂದೇಹವಿಲ್ಲ.

೪೧. ಮನುಷ್ಯರು ಭಕ್ತಿಯಿಂದ ಈ ಲಿಂಗವನ್ನು ಪೂಜಿಸಿದರೆ ಶರೀರಸಹಿತರಾಗಿ ಸ್ವರ್ಗವನ್ನು ಹೊಂದುವರು.

೪೨. ನಾವು ಇಲ್ಲಿಯೇ ಪ್ರಭಾಸವೆಂಬ ಲಿಂಗವನ್ನು ಪ್ರತಿಷ್ಠೆಮಾಡಿದ್ದರಿಂದ ಈ ಕ್ಷೇತ್ರವು ಪ್ರಭಾಸವೆಂದು ವಿಖ್ಯಾತವಾಗುವುದು".

೪೩. ಸುರಶ್ರೇಷ್ಠರು ಹೀಗೆಂದು ಸ್ವರ್ಗಕ್ಕೆ ತೆರಳಿದರು. ಅದು ಮೊದಲ್ಗೊಂಡು ಆ ಲಿಂಗವನ್ನು ನೋಡಿದ ಅನೇಕ ಪ್ರಾಣಿಗಳು ಸ್ವರ್ಗಕ್ಕೆ ಹೋಗುತ್ತಿದ್ದುವು.

೪೪. ಪ್ರಿಯಳೆ! ತರುವಾಯ ದೇವಲೋಕವು ಅನೇಕ ಪ್ರಾಣಿಗಳಿಂದ ವ್ಯಾಪ್ತವಾಗಲು ದೇವೇಂದ್ರನು ಅದನ್ನು ನೋಡಿ ಅತ್ಯಂತ ದುಃಖಗೊಂಡನು.

೪೫. ಅವನು ಆ ಪ್ರಾಣಿಗಳು ಸ್ವರ್ಗಕ್ಕೆ ಬರಲು ಲಿಂಗದಮಾಹಾತ್ಮ್ಯವೇ ಕಾರಣವೆಂದರಿತು ಭೂಮಿಗೆ ಬಂದು ಆ ಲಿಂಗವನ್ನುವಜ್ರಾಯುಧದಿಂದ ಮುಚ್ಚಿದನು.

ತತಃ ಪ್ರಭೃತಿ ನೋ ದೇವಿ ಸ್ವರ್ಗಂ ಗಚ್ಛಂತಿ ಮಾನವಾಃ ।
ಇತಿ ಸಂಕ್ಷೇಪತಃ ಪ್ರೋಕ್ತಃ ಪ್ರಭಾಸಸ್ಯ ಮಹೋದಯಃ ।
ಸರ್ವಪಾಪೋಪ ಶಮನಃ ಸರ್ವಕಾಮಫಲಪ್ರದಃ ॥ ೪೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಭಾಸಪಂಚಕಮಾಹಾತ್ಮ್ಯವರ್ಣನಂ ನಾಮ
॥ ಸಪ್ತಾಶೀತ್ಯುತ್ತರಶತತಮೋಽಧ್ಯಾಯಃ ॥

---

೪೬. ಅಂದು ಮೊದಲ್ಗೊಂಡು ಮಾನವರು ಸ್ವರ್ಗಕ್ಕೆ ಹೋಗುತ್ತಿರಲಿಲ್ಲ. ಹೀಗೆ ಸಂಕ್ಷೇಪವಾಗಿ ಸಕಲ ಪಾಪಗಳನ್ನು ನಿವಾರಿಸುವುದೂ, ಸಮಸ್ತೇಷ್ಟಾರ್ಥಗಳನ್ನೀಯುವುದೂ ಆದ ಪ್ರಭಾಸಕ್ಷೇತ್ರದ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಪ್ರಭಾಸಪಂಚಕಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾಶೀತ್ಯುತ್ತರಶತತಮೋಽಧ್ಯಾಯಃ

ರುದ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರ ಸ್ಥಾನೇ ತು ಸಂಸ್ಥಿತಂ ।
ರುದ್ರೇಶ್ವರೇತಿ ನಾಮಾನಂ ಸ್ವಯಂಭೂತಂ ಧರಾತಲೇ ॥ ೧ ॥
ಆದಿಪ್ರಭಾಸಾತ್ಪೂರತೋ ಧನುಷಾಂ ತ್ರಿತಯೇ ಸ್ಥಿತಂ ।
ರುದ್ರೇಣ ಧ್ಯಾನಮಾಸ್ಥಾಯ ಸ್ವಂ ತೇಜಸ್ತತ್ರ ಯೋಜಿತಂ ॥ ೨ ॥
ತತೋ ರುದ್ರೇಶ್ವರಂ ನಾಮ ಸರ್ವಪಾತಕನಾಶನಂ ।
ತಂ ದೃಷ್ಟ್ವಾ ಪೂಜಯಿತ್ವಾ ಚ ಸರ್ವಾನ್ಕಾಮಾನವಾಪ್ನುಯಾತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರುದ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಾಶೀತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ರುದ್ರೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಅಲ್ಲಿ ಆದಿಪ್ರಭಾಸದ ಮುಂದೆ ಮೂರು ಬಿಲ್ಲುಗಳ ದೂರದಲ್ಲಿರುವ ಭೂಮಿಯಲ್ಲಿ ಸ್ವಯಂವ್ಯಕ್ತವಾದ ರುದ್ರೇಶ್ವರಲಿಂಗವನ್ನು ಹೊಂದಬೇಕು. ರುದ್ರನು ಧ್ಯಾನಿಸಿ ಅಲ್ಲಿ ತನ್ನ ತೇಜಸ್ಸನ್ನು ಸ್ಥಾಪಿಸಿರುವುದರಿಂದ ಅದು ರುದ್ರೇಶ್ವರನೆಂದು ಪ್ರಸಿದ್ಧವಾಯಿತು. ಅದನ್ನು ದರ್ಶನಮಾಡಿ ಪೂಜಿಸಿದ ಮಾನವನು ಸಕಲೇಷ್ಟಾರ್ಥಗಳನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರುದ್ರೇಶ್ವರಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕೋನನವತ್ಯುತ್ತರಶತತಮೋಽಧ್ಯಾಯಃ

ಕರ್ಮಮೋಟೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಪಶ್ಚಿಮೇ ಭಾಗೇ ನಾತಿದೂರೇ ವ್ಯವಸ್ಥಿತಂ ।
ಚಂಡಿಕಾ ಕರ್ಮಮೋಟೀ ಚ ಯೋಗಿನೀ ಕೋಟಿಸಂಯುತಾ ।
ಪೀಠತ್ರಯಂ ಮಹಾದೇವಿ ಆದ್ಯಂ ತ್ರೈಲೋಕ್ಯವಂದಿತಂ ॥ ೧ ॥
ನವಮ್ಯಾಂ ತತ್ರ ಸಂಪೂಜ್ಯ ದೇವಪೀಠಂ ಚ ಯೋಗಿನೀಂ ।
ಸ ಸರ್ವಾನ್ಪ್ರಾಪ್ನುಯಾತ್ಕಾಮಾನ್ಭವೇತ್ಸ್ವರ್ಗಾಂಗನಾಪ್ರಿಯಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕರ್ಮಮೋಟೀಮಾಹಾತ್ಮ್ಯವರ್ಣನಂನಾಮ
ಏಕೋನನವತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಕರ್ಮಮೋಟೀಮಾಹಾತ್ಮ್ಯವರ್ಣನ

೧. ಆ ರುದ್ರೇಶ್ವರನ ಪಶ್ಚಿಮಭಾಗದಲ್ಲಿ ಸಮೀಪದಲ್ಲಿ ಚಂಡಿಕಾ, ಕರ್ಮಮೋಟಿ, ಯೋಗಿನೀ ಎಂಬ ಮೂರುಲೋಕಗಳಲ್ಲಿ ಪೂಜ್ಯವಾದ ಮೂರು ಪೀಠಗಳು ಇರುವುವು.

೨. ನವಮಿದಿನ ಅಲ್ಲಿರುವ ಯೋಗಿನೀ ಎಂಬ ದೇವೀಪೀಠವನ್ನು ಪೂಜಿಸಿದವನು ಸಕಲೇಷ್ಟಾರ್ಥಗಳನ್ನು ಪಡೆದು ಸ್ವರ್ಗಸ್ತ್ರೀಯರಿಗೆ ಪ್ರಿಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕರ್ಮಮೋಟೀಮಾಹಾತ್ಮ್ಯವರ್ಣನವೆಂಬ
ನೂರಎಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವತ್ಯುತ್ತರಶತತಮೋಽಧ್ಯಾಯಃ

ಮೋಕ್ಷಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರ ಮುಕ್ತಿಪ್ರದಂ ಹರಿಂ ।
ಪ್ರಭಾಸ ನೈರ್ಋತೇ ಭಾಗೇ ನಾತಿದೂರೇ ವ್ಯವಸ್ಥಿತಂ ॥ ೧ ॥
ಏಕಾದಶ್ಯಾಂ ಜಿತಾಹಾರೋ ಯಸ್ತಂ ದೇವಿ ಪ್ರಪೂಜಯೇತ್ ।
ಮಾಘೇ ಮಾಸೇ ವಿಶೇಷೇಣ ಸೋಽಗ್ನಿಷ್ಟೋಮಫಲಂ ಲಭೇತ್ ॥ ೨ ॥
ಯಸ್ತತ್ರಾನಶನಂ ಕುರ್ಯಾದ್ವ್ರತಂ ಚಾಂದ್ರಾಯಣಾದಿಕಂ ।
ಸೋಽನ್ಯತೀರ್ಥಾತ್ಕೋಟಿಗುಣಂ ಪ್ರಾಪ್ನುಯಾತ್ಫಲಮೀಪ್ಸಿತಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮೋಕ್ಷಸ್ವಾಮಿಮಾಹಾತ್ಮ್ಯವರ್ಣನಂ ನಾಮ
ನವತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಮೋಕ್ಷಸ್ವಾಮಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಪ್ರಭಾಸದ ನೈರ್ಋತ್ಯದಿಕ್ಕಿನಲ್ಲಿ ಸಮೀಪದಲ್ಲಿರುವ ಮುಕ್ತಿಯನ್ನೀಯುವ ಶ್ರೀ ಹರಿಯನ್ನು ಹೊಂದ ಬೇಕು.

೨. ಮಾಘಮಾಸದ ಏಕಾದಶಿಯದಿನ ಉಪವಾಸಮಾಡಿ ಅವನನ್ನು ಪೂಜಿಸಿದವನು ಅಗ್ನಿಷ್ಟೋಮಯಾಗದ ಫಲವನ್ನು ಪಡೆಯುವನು.

೩. ಅಲ್ಲಿ ಚಾಂದ್ರಾಯಣ ಮೊದಲಾದ ಅನಶನ ವ್ರತವನ್ನನುಷ್ಠಾನಮಾಡಿದವನು ಇತರ ತೀರ್ಥಗಳಿಗಿಂತ ಕೋಟಿಯಷ್ಟು ಹೆಚ್ಚಾದ ಫಲವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮೋಕ್ಷಸ್ವಾಮಿಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಏಕನವತ್ಯುತ್ತರಶತತಮೋಽಧ್ಯಾಯಃ

ಅಜೀಗರ್ತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅಜೀಗರ್ತೇಶ್ವರಂ ಹರಂ ।
ಚಂದ್ರವಾಪೀಸಮೀಪಸ್ಥ ಕರ್ಮವೋಟೀಸಮೀಪತಃ ॥ ೧ ॥
ತಸ್ಯಾಂ ಸ್ನಾತ್ವಾ ಮಹಾದೇವಿ ಯಸ್ತಲ್ಲಿಂಗಂ ಪ್ರಪೂಜಯೇತ್ ।
ಸ ಮುಕ್ತಃ ಪಾತಕೈರ್ಘೋರೈರ್ಗಚ್ಛೇಚ್ಛಿವಪದಂ ಮಹತ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಜೀಗರ್ತೇಶ್ವಮಾಹಾತ್ಮ್ಯವರ್ಣನಂ ನಾಮ
ಏಕನವತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಅಜೀಗರ್ತೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಚಂದ್ರವಾಪಿಯು ಮತ್ತು ಕರ್ಮವೋಟಿದೇವಿಯ ಹತ್ತಿರದಲ್ಲಿರುವ ಅಜೀಗರ್ತೇಶ್ವರನೆಂಬ ಶಿವನನ್ನು ಹೊಂದಬೇಕು.

೨. ಮನುಷ್ಯನು ಆ ಚಂದ್ರವಾಪಿಯಲ್ಲಿ ಮಿಂದು ಅಜಿಗರ್ತೇಶ್ವರನನ್ನು ಪೂಜಿಸಿದರೆ ಘೋರಪಾತಕಗಳಿಂದ ಮುಕ್ತನಾಗಿ ಶಿವಸ್ಥಾನವನ್ನು ಸೇರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಜೀಗರ್ತೇಶ್ವರಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿನವತ್ಯುತ್ತರಶತತಮೋಽಧ್ಯಾಯಃ

ವಿಶ್ವಕರ್ಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿಶ್ವಕರ್ಮಪ್ರತಿಷ್ಠಿತಂ ।
ಲಿಂಗಂ ಮಹಾಪ್ರಭಾವಂ ಹಿ ಮೋಕ್ಷಸ್ವಾಮಿನ ಉತ್ತರೇ ॥ ೧ ॥
ಧನುಷಾಂ ಪಂಚಕೇ ದೇವಿ ಸ್ಥಿತಂ ಪಾತಕನಾಶನಂ ॥ ೨ ॥
ತಂ ದೃಷ್ಟ್ವಾ ಮಾನವಃ ಸಮ್ಯಗ್ಯಾತ್ರಾಫಲಮವಾಪ್ನುಯಾತ್ ।
ವಾಚಿಕಂ ಮಾನಸಂ ಪಾಪಂ ದರ್ಶನಾತ್ತಸ್ಯ ನಶ್ಯತಿ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಿಶ್ವಕರ್ಮೇಶ್ವರಮಾಹಾತ್ಮ್ಯವರ್ಣನಂನಾಮ
ದ್ವಿನವತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ವಿಶ್ವಕರ್ಮೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಮೋಕ್ಷಸ್ವಾಮಿಯ ಉತ್ತರದಲ್ಲಿ ಐದು ಬಿಲ್ಲುಗಳ ದೂರದಲ್ಲಿರುವ ಪಾಪವನ್ನು ನೀಗಿಸುವ ವಿಶ್ವಕರ್ಮನು ಪ್ರತಿಷ್ಠೆಮಾಡಿದ ವಿಶ್ವಕರ್ಮೇಶ್ವರನೆಡೆಗೆ ಹೋಗಬೇಕು.

೩. ಅವನನ್ನು ನೋಡಿದ ಮಾನವನು ಯಾತ್ರಾಫಲವನ್ನು ಹೊಂದುವನು. ಅವನ ಮಾನಸಿಕ, ವಾಚಿಕ ಪಾಪಗಳೂ ಆತನ ದರ್ಶನದಿಂದಲೇ ಪರಿಹಾರವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಿಶ್ವಕರ್ಮೇಶ್ವರಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿನವತ್ಯುತ್ತರಶತತಮೋಽಧ್ಯಾಯಃ

ಯಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯಮೇಶ್ವರಮನುತ್ತಮಂ ।
ತಸ್ಯೈವ ನೈರ್ಋತೇ ಭಾಗೇ ನಾತಿದೂರೇ ವ್ಯವಸ್ಥಿತಂ ॥ ೧ ॥
ದರ್ಶನಾತ್ಪಾಪಶಮನಂ ಸರ್ವಕಾಮಫಲಪ್ರದಂ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಯಮೇಶ್ವರಮಾಹಾತ್ಮ್ಯವರ್ಣನಂ ನಾಮ ತ್ರಿನವತ್ಯುತ್ತರಶತತಮೋಽಧ್ಯಾಯಃ

ಕನ್ನಡದ ಅನುವಾದ

ಯಮೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ವಿಶ್ವಕರ್ಮೇಶ್ವರನ ನೈರ್ಋತ್ಯದಿಕ್ಕಿನಲ್ಲಿ ಸಮೀಪದಲ್ಲಿರುವುದೂ, ದರ್ಶನದಿಂದ ಪಾಪವನ್ನು ನೀಗಿಸುವುದೂ, ಸಕಲೇಷ್ಟಾರ್ಥಗಳನೀಯುವುದೂ, ಆದ ಯಮೇಶ್ವರ ಲಿಂಗವನ್ನು ಹೊಂದಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಯಮೇಶ್ವರಮಾಹಾತ್ಮ್ಯವರ್ಣನವೆಂಬ ನೂರತೊಂಬತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ॥

ಚತುರ್ಣವತ್ಯುತ್ತರಶತತಮೋಽಧ್ಯಾಯಃ

ಅಮರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ದೇವೈಃ ಪ್ರತಿಷ್ಠಿತಂ ।
ಜ್ಞಾತ್ವಾ ಪ್ರಭಾವಂ ಕ್ಷೇತ್ರಸ್ಯ ಸರ್ವಪಾತಕನಾಶನಂ ॥ ೧ ॥
ತತ್ರ ಕೃತ್ವಾ ತಪಶ್ಚೋಗ್ರಂ ತತ್ರ ದೇವೈಃ ಪ್ರತಿಷ್ಠಿತಂ ।
ತಂ ದೃಷ್ಟ್ವಾ ಮಾನವೋ ದೇವಿ ಕೃತಕೃತ್ಯಃ ಪ್ರಜಾಯತೇ ॥ ೨ ॥
ಗೋದಾನಂ ತತ್ರ ದೇಯಂ ತು ಬ್ರಾಹ್ಮಣೇ ವೇದ ಪಾರಗೇ ।
ಸಮ್ಯಕ್ಫಲಭತೇ ದೇವಿ ಯಾತ್ರಾಯಾಃ ಫಲಮೂರ್ಜಿತಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಮರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರ್ಣವತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಅಮರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ದೇವತೆಗಳು ಆ ಕ್ಷೇತ್ರದ ಪ್ರಭಾವವನ್ನರಿತು ಪ್ರತಿಷ್ಠೆ ಮಾಡಿರುವ ಸಕಲ ಪಾಪಗಳನ್ನು ಪರಿಹರಿಸುವ ಅಮರೇಶ್ವರ ಲಿಂಗದೆಡೆಗೆ ಹೋಗಬೇಕು.

೨. ದೇವತೆಗಳು ಉಗ್ರತಪಸ್ಸನ್ನಾಚರಿಸಿ ಪ್ರತಿಷ್ಠೆಮಾಡಿರುವ ಆ ಲಿಂಗವನ್ನು ನೋಡಿದ ಮಾನವನು ಧನ್ಯನಾಗುವನು.

೩. ಅಲ್ಲಿ ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನಿಗೆ ಗೋವನ್ನು ದಾನ ಮಾಡಿದವನು ಯಾತ್ರೆಯ ಉತ್ಕೃಷ್ಟ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಮರೇಶ್ವರಮಾಹಾತ್ಮ್ಯ ವರ್ಣನವೆಂಬ
ನೂರತೊಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಪಂಚನವತ್ಯುತ್ತರಶತತಮೋಽಧ್ಯಾಯಃ

ವೃದ್ಧಪ್ರಭಾಸಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ವೃದ್ಧಪ್ರಭಾಸಂ ತು ಗಚ್ಛೇಚ್ಚ ನಿಯತಾತ್ಮವಾನ್ ।
ಆದಿಪ್ರಭಾಸದ್ದಕ್ಷಿಣತೋ ನಾತಿದೂರೇ ವ್ಯವಸ್ಥಿತಂ ॥ ೧ ॥
ಚತುರ್ಮುಖಂ ಮಹಾಲಿಂಗಂ ದರ್ಶನಾತ್ಪಾಪನಾಶನಂ ॥ ೨ ॥

ಶ್ರೀ ದೇವ್ಯುವಾಚ :—

ಕಥಂ ವೃದ್ಧಪ್ರಭಾಸಂ ತು ನಾಮ ತಸ್ಯಾಭವತ್ಪ್ರಭೋ ।
ತಸ್ಮಿನ್ದೃಷ್ಟೇ ಫಲಂ ಕಿಂ ಸ್ಯಾತ್ಸ್ತುತೇ ಸಂಪೂಜಿತೇ ತಥಾ ॥ ೩ ॥
ಏತತ್ಕಥಯ ಮೇ ದೇವ ಸಂಕ್ಷೇಪಾನ್ನಾತಿವಿಸ್ತರಾತ್ ॥ ೪ ॥

ಈಶ್ವರ ಉವಾಚ :—

ಆದೌ ಸ್ವಾಯಂಭುವೇ ದೇವಿ ಪೂರ್ವಮನ್ವಂತರೇ ಪುರಾ ।
ತ್ರೇತಾಯುಗೇ ಚತುರ್ಥೇ ತು ಪ್ರಭಾಸೇ ಕ್ಷೇತ್ರ ಉತ್ತಮೇ ॥ ೫ ॥

ಕನ್ನಡದ ಅನುವಾದ

ವೃದ್ಧಪ್ರಭಾಸಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ತರುವಾಯ ಜಿತೇಂದ್ರಿಯನಾಗಿ ಆದಿ ಪ್ರಭಾಸದ ದಕ್ಷಿಣ ಭಾಗದಲ್ಲಿ ಸಮೀಪದಲ್ಲಿರುವುದೂ, ದರ್ಶನದಿಂದ ಪಾಪಗಳನ್ನು ನೀಗಿಸುವುದೂ ಆದ ನಾಲ್ಕು ಮುಖವುಳ್ಳ ವೃದ್ಧ ಪ್ರಭಾಸ ಲಿಂಗದೆಡೆಗೆ ಹೋಗಬೇಕು.

೩–೪. ದೇವಿಯು ಹೇಳುತ್ತಾಳೆ:—ನಾಥ! ಆ ಲಿಂಗಕ್ಕೆ ವೃದ್ಧ ಪ್ರಭಾಸವೆಂದು ಹೆಸರಾಗಲು ಕಾರಣವೇನು? ಆ ಲಿಂಗದ ದರ್ಶನ, ಸ್ತೋತ್ರ, ಪೂಜೆಗಳಿಂದಾಗುವ ಫಲವೇನು ? ಇದನ್ನು ಸಂಕ್ಷೇಪವಾಗಿ ನನಗೆ ಹೇಳು.

೫–೯. ಈಶ್ವರು ಹೇಳುತ್ತಾನೆ :—ದೇವಿ ! ಹಿಂದೆ ಸ್ವಾಯಂಭುವ ಮನ್ವಂತರದ ನಾಲ್ಕನೆ ತ್ರೇತಾಯುಗದದಲ್ಲಿ ಪ್ರಭಾಸವೆಂದು ಉತ್ತಮ ಕ್ಷೇತ್ರಕ್ಕೆ ಉತ್ತರಾಪಥದ

ತಸ್ಮಿನ್ಕಾಲೇ ಮಹಾದೇವಿ ಪೂರ್ವಮನ್ವಂತರೇ ಪುರಾ ।
ತ್ರೇತಾಯುಗೇ ಚತುರ್ಥೇ ತು ಋಷಯಸ್ತತ್ರ ಸಂಗತಾಃ ॥ ೬ ॥
ದರ್ಶನಾರ್ಥಂ ಪ್ರಭಾಸಸ್ಯ ಉತ್ತರಾಪಥಗಾಮಿನಃ ।
ತಂ ದೃಷ್ಟ್ವಾಚ್ಛಾದಿತಂ ದೇವಿ ವಜ್ರೇಣ ತು ಮಹೇಶ್ವರಿ ॥ ೭ ॥
ವಿಷಾದಂ ಪರಮಂ ಜಗ್ಮುರ್ವಾಕ್ಯಂ ಚೇದಮಥಾಬ್ರುವನ್ ।
ಅದೃಷ್ಟ್ವಾ ಶಾಂಕರಂ ಲಿಂಗಂ ನ ಯಾಸ್ಯಾಮೋ ವಯಂ ಗೃಹಂ ॥ ೮ ॥
ಸ್ವರ್ಗಾರ್ಥಿನೋ ವಯಂ ಪ್ರಾಪ್ತಾ ಮಹದಧ್ವಾನಮೇವ ಹಿ ।
ತಸ್ಮಾದತ್ರೈವ ತಿಷ್ಠಾಮೋ ಯಾವಲ್ಲಿಂಗಸ್ಯ ದರ್ಶನಂ ॥ ೯ ॥
ಏವಂ ತೇ ನಿಶ್ಚಯಂ ಕೃತ್ವಾ ಪರಸ್ಮಿಂಸ್ತಪಸಿ ಸ್ಥಿತಾಃ ।
ವರ್ಷಾಸ್ವಾಕಾಶಗಾ ಭೂತ್ವಾ ಹೇಮಂತೇ ಸಲಿಲಾಶ್ರಯಾಃ ॥ ೧೦ ॥
ಪಂಚಾಗ್ನಿಸಾಧನಾ ಗ್ರೀಷ್ಮೇ ನಿಯತಾ ಬ್ರಹ್ಮಚಾರಿಣಃ ।
ಬಹೂನ್ವರ್ಷಗಣಾನ್ವಿಪ್ರಾ ಜರಾಗ್ರಸ್ತಾಸ್ತದಾಭವನ್ ॥ ೧೧ ॥
ಏವಂ ವೃದ್ಧತ್ವಮಾಪನ್ನಾಃ ಯದಾ ತೇ ವರವರ್ಣಿನಿ ।
ಛಂದ್ಯಮಾನಾ ವರೈಸ್ತೇ ತು ಶಂಕರೇಣ ಮಹಾತ್ಮನಾ ॥ ೧೨ ॥

ಮಹರ್ಷಿಗಳು ಪ್ರಭಾಸಲಿಂಗದ ದರ್ಶನಕ್ಕಾಗಿ ಬಂದರು. ಅಲ್ಲಿ ಆ ಲಿಂಗವು ವಜ್ರದಿಂದ ಮುಚ್ಚಲ್ಪಟ್ಟಿರುವುದನ್ನು ಕಂಡು ಅವರು ಅತ್ಯಂತ ವಿಶಾದಗೊಂಡು ಇಂತೆಂದರು. "ಸ್ವರ್ಗಾಪೇಕ್ಷಿಗಳಾದ ನಾವು ಬಹುದೂರದಿಂದ ಇಲ್ಲಿಗೆ ಬಂದಿರುವೆವು. ನಾವು ಶಾಂಕರ ಲಿಂಗವನ್ನು ದರ್ಶನಗೈಯದೆ ಮನೆಗೆ ಹೋಗುವುದಿಲ್ಲ. ಆದ್ದರಿಂದ ಆ ಶಿವಲಿಂಗ ದರ್ಶನವಾಗುವವರೆಗೆ ಇಲ್ಲಿಯೇ ಇರುವೆವು".

೧೦–೧೧. ಅವರು ಹೀಗೆ ನಿಶ್ಚಯಿಸಿ ಮಳೆಗಾಲದಲ್ಲಿ ಆಕಾಶದಲ್ಲಿದ್ದವರೂ, ಚಳಿಗಾಲದಲ್ಲಿ ನೀರಿನಲ್ಲಿ ನಿಂತವರೂ, ಉಷ್ಣಕಾಲದಲ್ಲಿ ಪಂಚಾಗ್ನಿ ಮಧ್ಯದಲ್ಲಿ ನೆಲಸಿದವರೂ, ಬ್ರಹ್ಮಚಾರಿಗಳೂ, ಆಗಿ ಬಹುವರ್ಷಕಾಲ ಉತ್ಕೃಷ್ಟ ತಪಸ್ಸನ್ನಾಚರಿಸುತ್ತ ಮುದುಕರಾದರು.

೧೨ ಪ್ರಿಯಳೆ! ಅವರು ಹೀಗೆ ಮುದುಕರಾಗಲು ಶಂಕರನು ಪ್ರಸನ್ನನಾಗಿ ವರವನ್ನು ಕೊಡಲುದ್ಯುಕ್ತನಾದನು.

ಲಿಂಗಸ್ಯ ದರ್ಶನಂ ಮುಕ್ತ್ವಾ ನ ತೇऽನ್ಯಂ ವವ್ರಿರೇ ವರಂ ॥ ೧೩ ॥
ತೇಷಾಂ ತು ನಿಶ್ಚಯಂ ಜ್ಞಾತ್ವಾ ಸರ್ವೇಷಾಂ ವೃಷಭಧ್ವಜಃ ।
ಅನುಕಂಪಾಪರೋ ಭೂತ್ವಾ ಸ್ವಲಿಂಗಂ ತಾನದರ್ಶಯತ್ ॥ ೧೪ ॥
ಏತಸ್ಮಿನ್ನೇವ ಕಾಲೇ ತು ಭಿತ್ವಾ ಚೈವ ವಸುಂಧರಾಂ ।
ಉತ್ಥಿತಂ ಸಹಸಾ ಲಿಂಗಂ ತದೇವ ವರವರ್ಣಿನಿ ॥ ೧೫ ॥
ಋಷಯಸ್ತೇ ಚ ತಂ ದೃಷ್ಟ್ವಾ ಸರ್ವೇ ಚ ತ್ರಿದಿವಂ ಗತಾಃ ।
ಅಥ ತೇಷು ಪ್ರಯಾತೇಷು ಶಕ್ರಸ್ತ್ರಸ್ತಮನಾ ಹ್ಯಭೂತ್ ॥ ೧೬ ॥
ತಮಪಿಚ್ಛಾದಯಾಮಾಸ ವಜ್ರೇಣ ಶತಪರ್ವಣಾ ॥ ೧೭ ॥
ವೃದ್ಧಭಾವೇ ಯತಸ್ತೇಷಾಮೃಷೀಣಾಂ ದರ್ಶನಂ ಗತಃ ।
ಅತೋ ವೃದ್ಧಪ್ರಭಾಸಂ ತತ್ಕೀರ್ತ್ಯತೇ ವಸುಧಾತಲೇ ॥ ೧೮ ॥
ತಸ್ಮಿನ್ದೃಷ್ಟೇ ವರಾರೋಹೇ ಅದ್ಯಾಪಿ ಲಭತೇ ಫಲಂ ।
ರಾಜಸೂಯಾಶ್ವಮೇಧಾನಾಂ ನರೋ ಭಕ್ತಿಸಮನ್ವಿತಃ ॥ ೧೯ ॥
ಏವಂ ತತ್ರ ಸಮುತ್ಪನ್ನಂ ಪ್ರಭಾಸಂ ವೃದ್ಧಸಂಜ್ಞಕಂ ।
ತತ್ರೋಕ್ತಾಃ ಬ್ರಾಹ್ಮಣೇ ದೇಯಾಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೨೦ ॥

---

೧೩. ಆ ಮುನಿಗಳು ಲಿಂಗ ದರ್ಶನವನ್ನುಳಿದು ಇತರ ಯಾವ ವರವನ್ನೂ ಕೇಳಿಕೊಳ್ಳಲಿಲ್ಲ.

೧೪. ಶಂಕರನು ಆ ಮುನಿಗಳ ನಿರ್ಣಯವನ್ನರಿತು ದಯೆಗೊಂಡು ಅವರಿಗೆ ತನ್ನ ಲಿಂಗವನ್ನು ತೋರಿಸಿದನು.

೧೫. ದೇವಿ! ಈ ಸಮಯದಲ್ಲಿಯೇ ಅದೇ ಲಿಂಗವು ಭೂಮಿಯನ್ನು ಭೇದಿಸಿ ಮೇಲಕ್ಕೆದ್ದಿತು.

೧೬. ಆ ಸಮಸ್ತ ಮಹರ್ಷಿಗಳೂ ಆ ಲಿಂಗವನ್ನು ನೋಡಿ ಸ್ವರ್ಗಕ್ಕೆ ತೆರಳಿದರು. ಅವರು ಹೊರಟು ಹೋಗಲು ದೇವೇಂದ್ರನು ವ್ಯಥೆಗೊಂಡನು.

೧೭. ಅವನು ಆ ಲಿಂಗವನ್ನೂ ನೂರು ಪರ್ವಗಳುಳ್ಳ ವಜ್ರದಿಂದ ಮುಚ್ಚಿದನು.

೧೮. ಆ ಲಿಂಗವು ಮುನಿಗಳಿಗೆ ಮುದಿ ತನದಲ್ಲಿ ದರ್ಶನವಿತ್ತುದರಿಂದ ಭೂಮಿಯಲ್ಲಿ ವೃದ್ಧ ಪ್ರಭಾಸವೆಂದು ಪ್ರಖ್ಯಾತವಾಯಿತು.

೧೯. ಮನುಷ್ಯನು ಈಗಲೂ ಆ ಲಿಂಗವನ್ನು ಭಕ್ತಿಯಿಂದ ಕಂಡರೆ ರಾಜಸೂಯ, ಮತ್ತು ಅಶ್ವಮೇಧ ಯಾಗಗಳ ಫಲವನ್ನು ಪಡೆಯುವನು,

೨೦. ಹೀಗೆ ಅಲ್ಲಿ ವೃದ್ಧ ಪ್ರಭಾಸವುಂಟಾಗಿರುವುದು. ಅಲ್ಲಿ ಯಾತ್ರಾ ಫಲವನ್ನು ಬಯಸುವ ಮಾನವರು ಬ್ರಾಹ್ಮಣನಿಗೆ ದಾನಮಾಡಬೇಕು.

॥ ಶ್ರೀಃ ॥

ಷಣ್ಣವತ್ಯುತ್ತರಶತತಮೋಽಧ್ಯಾಯಃ

ಜಲಪ್ರಭಾಸಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತೋ ಗಚ್ಛೇನ್ಮಹಾದೇವಿ ಪ್ರಭಾಸಂ ಜಲಸಂಸ್ಥಿತಂ ।
ವೃದ್ಧಪ್ರಭಾಸಾದ್ದಕ್ಷಿಣತೋ ನಾತಿದೂರೇ ವ್ಯವಸ್ಥಿತಂ ॥ ೧ ॥
ತಸ್ಯೈವ ದೇವಿ ದೇವಸ್ಯ ಶೃಣು ಮಾಹಾತ್ಮ್ಯಮುತ್ತಮಂ ॥ ೨ ॥
ಜಾಮದಗ್ನ್ಯೇನ ರಾಮೇಣ ಯದಾ ಕ್ಷತ್ರವಧಃ ಕೃತಃ ।
ತದಾಸ್ಯ ಪರಮಾ ಜಾತಾ ಘೃಣಾ ಮನಸಿ ಭಾಮಿನಿ ॥ ೩ ॥
ತತಸ್ತ್ವಾರಾಧಯಾಮಾಸ ಮಹಾದೇವಂ ಸುರೇಶ್ವರಂ ।
ಉಗ್ರಂ ತಪಸ್ಸಮಾಸ್ಥಾಯ ಬಹೂನ್ವರ್ಷಗಣಾನ್ಪ್ರಿಯೇ ॥ ೪ ॥
ತತಸ್ತುಷ್ಟೋ ಮಹಾದೇವಸ್ತಸ್ಯ ಪ್ರತ್ಯಕ್ಷತಾಂ ಗತಃ ।
ಅಬ್ರವೀದ್ವರದಸ್ತೇಽಹಂ ವರಂ ವರಯ ಸುವ್ರತ ॥ ೫ ॥

ಕನ್ನಡದ ಅನುವಾದ

ಜಲಪ್ರಭಾಸಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ತರುವಾಯ ವೃದ್ಧ ಪ್ರಭಾಸದ ದಕ್ಷಿಣದಲ್ಲಿ ಸಮೀಪದಲ್ಲಿರುವ ಜಲಪ್ರಭಾಸದೆಡೆಗೆ ಹೋಗಬೇಕು.

೨. ದೇವಿ ! ಆ ಜಲ ಪ್ರಭಾಸದ ಉತ್ತಮ ಮಾಹಾತ್ಮ್ಯವನ್ನು ಕೇಳು.

೩. ಪ್ರಿಯಳೆ ! ಪರಶುರಾಮನು ಕ್ಷತ್ರಿಯರನ್ನೆಲ್ಲ ಕೊಂದು ಮನಸ್ಸಿನಲ್ಲಿ ಅತ್ಯಂತ ದಯೆಗೊಂಡನು.

೪. ಅನಂತರ ಅವನು ಬಹು ವರ್ಷಕಾಲ ತಪಸ್ಸನ್ನಾಚರಿಸುತ್ತ ಮಹೇಶನನ್ನು ಪೂಜಿಸಿದನು.

೫. ಆದರಿಂದ ಸಂತೋಷಗೊಂಡ ಮಹೇಶ್ವರನು ಪ್ರತ್ಯಕ್ಷನಾಗಿ "ಪರಶುರಾಮ! ನಾನು ನಿನಗೆ ವರವನ್ನೀಯುವೆನು. ನಿನಗಿಷ್ಟವಾದುದನ್ನು ಕೇಳಿಕೊ" ಎಂದನು.

ರಾಮ ಉವಾಚ :—

ಯದಿ ತುಷ್ಟೋಽಸಿ ಮೇ ದೇವ ಯದಿ ದೇಯೋ ವರೋ ಮಮ ।
ದರ್ಶಯಸ್ವ ಸ್ವಕಂ ಲಿಂಗಂ ಯತ್ತ್ರೇ ವಜ್ರೇಣ ಛಾದಿತಂ ॥ ೬ ॥
ಘೃಣೇಮಮಾಮಹತೀ ಜಾತಾ ಹತ್ವೈತಾನ್ಕ್ಷತ್ರಿಯಾನ್ಬಹೂನ್ ।
ದರ್ಶನಾತ್ತವ ಲಿಂಗಸ್ಯ ಯೇನ ಮೇ ನಶ್ಯತೇ ಘೃಣಾ ॥ ೭ ॥
ತಥಾ ಮೇ ಪಾತಕಂ ಸರ್ವಂ ಪ್ರಸಾದಾತ್ತವ ಶಂಕರ ॥ ೮ ॥

ಶಂಕರ ಉವಾಚ :—

ಮಮ ಲಿಂಗಂ ಸಹಸ್ರಾಕ್ಷಃ ಉತ್ಥಿತಂ ತು ಪುನಃ ಪುನಃ ।
ವಜ್ರೇಣಾಚ್ಛಾದಯತ್ಯೇವ ಭಯೇನ ಮಹತಾ ವೃತಃ ॥ ೯ ॥
ನ ತೇಽಹಂ ದರ್ಶನಂ ಯಾಸ್ಯೇ ಲಿಂಗರೂಪೀ ಕದಾಚನ ॥ ೧೦ ॥
ಯನ್ಮಾಂ ವದಸಿ ಘೃಣಯಾ ವೃತೋಽಹಂ ಪಾತಕೇನ ತು ।
ತತ್ತೇಽಹಂ ನಾಶಯಿಷ್ಯಾಮಿ ಸ್ಪರ್ಶನಾತ್ತು ದ್ವಿಜೋತ್ತಮ ॥ ೧೧ ॥
ಅಸ್ಮಿನ್‌ಜಲಾಶ್ರಯೇ ಪುಣ್ಯೇ ಜಲಮಧ್ಯೇ ಮಹಾಮತೇ
ಉತ್ಥಾಸ್ಯತಿ ಮಹಾಲಿಂಗಂ ತಸ್ಯ ತ್ವಂ ದರ್ಶನಂ ಕುರು ॥ ೧೨ ॥
ಗಮಿಷ್ಯತಿ ಘೃಣಂ ಸರ್ವಾ ನಿಷ್ಪಾಪಸ್ತ್ವಂ ಭವಿಷ್ಯಸಿ ।
ಉಕ್ತ್ವೈವಮುದತಿಷ್ಠಚ್ಚ ಜಲಮಧ್ಯಾದ್ವರಾನನೇ ॥ ೧೩ ॥

---

೬. ರಾಮನು ಹೇಳುತ್ತಾನೆ:—ಸ್ವಾಮಿ ! ನೀನು ಮೆಚ್ಚಿದ್ದರೆ ನನಗೆ ವರವನ್ನು ಕೊಡುವುದಾದರೆ ವಜ್ರದಿಂದ ಮುಚ್ಚಿರುವ ನಿನ್ನ ಲಿಂಗವನ್ನು ತೋರಿಸು.

೭–೮. ನಾನು ಈ ಕ್ಷತ್ರಿಯರನ್ನು ವಧಿಸಿ ಅತ್ಯಂತ ದಯೆಗೊಂಡಿರುವೆನು. ನಿನ್ನ ಲಿಂಗವನ್ನು ನೋಡಿದುದರಿಂದ ನನ್ನ ಪಾತಕಗಳೆಲ್ಲ ನೀಗಿ ದಯೆಯು ಹೋಗುವಂತೆ ಮಾಡು.

೯. ಶಂಕರನು ಹೇಳುತ್ತಾನೆ:—ಮರಳಿ ಮೇಲಕ್ಕೇಳುತ್ತಿರುವ ನನ್ನ ಲಿಂಗವನ್ನು ದೇವೇಂದ್ರನು ಅತಿಶಯ ಭಯದಿಂದ ವಜ್ರಾಯುಧದಿಂದ ಮುಚ್ಚಿರುವನು.

೧೦. ಅದರಿಂದ ನಾನು ಲಿಂಗರೂಪನಾಗಿ ನಿನಗೆ ಗೋಚರವಾಗುವುದಿಲ್ಲ.

೧೧. ನೀನು ಪಾತಕದಿಂದ ಪಶ್ಚಾತ್ತಾಪಗೊಂಡಿರುವೆನೆಂದು ಹೇಳುತ್ತಿರುವೆ. ನಾನು ನಿನ್ನ ಆ ಪಾತಕವನ್ನು ಸ್ಪರ್ಶದಿಂದ ಪರಿಹರಿಸುವೆನು.

೧೨. ಪ್ರಾಜ್ಞನೆ! ಈ ಪುಣ್ಯಕರವಾದ ಜಲಾಶಯದಲ್ಲಿ ನನ್ನ ಮಹಾಲಿಂಗವು ಮೇಲಕ್ಕೇಳುವುದು. ನೀನು ಅದನ್ನು ಸ್ಪರ್ಶ (ದರ್ಶನ) ಮಾಡು.

೧೩. ಅದರಿಂದ ನಿನ್ನ ದಯೆಯೆಲ್ಲ ನೀಗಿ ನೀನು ಪಾತಕವಿಲ್ಲದವನಾಗುವೆ. ಪ್ರಿಯಳೆ! ಶಂಕರನು ಹೀಗೆಂದು ನೀರಿನ ಮಧ್ಯದಿಂದ ಮೇಲಕ್ಕೆದ್ದನು.

ಜಲಪ್ರಭಾಸ ನಾಮಾಸ್ಯ ತತೋ ಜಾತಂ ಧರಾತಲೇ ।
ತಸ್ಯಾಲಂ ಸ್ಪರ್ಶನಾದ್ದೇವಿ ಶಿವಲೋಕಂ ವ್ರಜೇನ್ನರಃ ॥ ೧೪ ॥
ಏಕಂ ಭೋಜಯತೇ ಯೋಽತ್ರ ಬ್ರಾಹ್ಮಣಂ ಶಂಸಿತವ್ರತಂ ।
ಭೋಜಿತೋಹಂ ಭವೇತ್ತೇನ ಸಪತ್ನೀಕೋ ನ ಸಂಶಯಃ ॥ ೧೫ ॥
ಏಷಾ ಜಲಪ್ರಭಾಸಸ್ಯ ಸಂಭೂತಿಸ್ತೇ ಮಯೋದಿತಾ ।
ಶ್ರುತಾ ಪಾಪೋಪಶಮನೀ ಸರ್ವ ಕಾಮ ಫಲಪ್ರದಾ ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಲಪ್ರಭಾಸಮಾಹಾತ್ಮ್ಯವರ್ಣನಂ ನಾಮ
॥ ಷಣ್ಣವತ್ಯುತ್ತರಶತತಮೋಽಧ್ಯಾಯಃ ॥

---

೧೪ ಆದ್ದರಿಂದ ಆ ಲಿಂಗಕ್ಕೆ ಭೂಮಿಯಲ್ಲಿ ಜಲ ಪ್ರಸಾದವೆಂದು ಹೆಸರಾಯಿತು. ಮನುಷ್ಯನು ಅದನ್ನು ಸ್ಪರ್ಶವಡುವುದರಿಂದ ಶಿವಲೋಕಕ್ಕೆ ಹೋಗುವನು.

೧೫. ಇಲ್ಲಿ ಶ್ಲಾಘ್ಯನಿಯಮವುಳ್ಳ ಒಬ್ಬ ಬ್ರಾಹ್ಮಣನನ್ನು ಭೋಜನಮಾಡಿಸಿದರೆ ಪತ್ನೀಸಹಿತನಾದ ನನ್ನನ್ನು ಭೋಜನಮಾಡಿಸಿದಂತಾಗುವುದು.

೧೬. ಕೇಳುವುದರಿಂದ ಪಾಪವನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ, ಆದ ಈ ಜಲಪ್ರಸಾದ ಉತ್ಪತ್ತಿಯ ಕ್ರಮವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಲಪ್ರಭಾಸಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತನವತ್ಯುತ್ತರಶತತಮೋऽಧ್ಯಾಯಃ

ಜಮದಗ್ನೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಜಮದಗ್ನೀಶ್ವರಂ ಶಿವಂ ।
ವೃದ್ಧಪ್ರಭಾಸಸಾಮೀಪ್ಯೇ ನಾತಿದೂರೇ ವ್ಯವಸ್ಥಿತಂ ॥ ೧ ॥
ಸರ್ವಪಾಪೋಪಶಮನಂ ಸ್ಥಾಪಿತಂ ಜಮದಗ್ನಿನಾ ।
ತಂ ದೃಷ್ಟ್ವಾ ಮಾನವೋ ದೇವಿ ಮುಚ್ಯತೇ ಚ ಋಣತ್ರಯಾತ್ ॥ ೨ ॥
ಸ್ನಾತ್ವಾ ನಿಧಾನವಾಪ್ಯಾಂ ಚ ಸಂಪೂಜ್ಯ ಪ್ರಾಪ್ನುಯಾದ್ಧನಂ ।
ನಿಧಾನಂ ಪಾಂಡವೈರ್ಲಬ್ಧಂ ತತ್ರ ಸ್ಥಾನೇ ಪುರಾ ಪ್ರಿಯೇ ॥ ೩ ॥
ನಿಧಾನೇನೈವ ಸಾ ಖ್ಯಾತಾ ವಾಪೀ ತ್ರೈಲೋಕ್ಯವಂದಿತಾ ॥ ೪ ॥

ಕನ್ನಡದ ಅನುವಾದ

ಜಮದಗ್ನೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ವೃದ್ಧ ಪ್ರಭಾಸದ ಹತ್ತಿರ ಸಮೀಪದಲ್ಲಿರುವ ಜಮದಗ್ನೀಶ್ವರನೆಡೆಗೆ ಹೋಗಬೇಕು.

೨. ಜಮದಗ್ನಿ ಮುನಿಯು ಸ್ಥಾಪಿಸಿರುವ ಸಮಸ್ತ ಪಾಪಗಳನ್ನು ಪರಿಹರಿಸುವ ಆ ಲಿಂಗವನ್ನು ನೋಡಿದ ಮಾನವನು ಋಣತ್ರಯದಿಂದ ಮುಕ್ತನಾಗುವನು.

೩-೪. ಪ್ರಿಯಳೆ! ಹಿಂದೆ ಪಾಂಡವರು ನಿಧಿಯನ್ನು ಪಡೆದಿದುದರಿಂದ ನಿಧಾನವೆಂದು ವಿಖ್ಯಾತವಾದ ತ್ರೈಲೋಕ್ಯ ಪೂಜ್ಯ ವಾಪಿಯಲ್ಲಿ ಮಿಂದು ಜಮದಗ್ನೀಶ್ವರನನ್ನು ಪೂಜಿಸಿದವನು ಹಣವನ್ನು ಪಡೆಯುವನು.

ತಸ್ಯಾಂ ಸ್ನಾತ್ವಾ ಮಹಾದೇವಿ ದುರ್ಭಗಾ ಸುಭಗಾ ಭವೇತ್ ।
ಲಭತೇ ವಾಂಛಿತಾನ್ಕಾಮಾನಿತಿ ಪ್ರೋಕ್ತಂ ಮಯಾ ತವ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಮದಗ್ನೀಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತನವತ್ಯುತ್ತರಶತತಮೋಽಧ್ಯಾಯಃ ॥

---

೫. ಮಹಾದೇವಿ! ಆ ವಾಪಿಯಲ್ಲಿ ಮಿಂದ ದೌರ್ಭಾಗ್ಯವುಳ್ಳ ಸ್ತ್ರೀಯು, ಸೌಭಾಗ್ಯವುಳ್ಳವಳಾಗಿ ಇಷ್ಟಾರ್ಥಗಳನ್ನು ಪಡೆಯುವಳೆಂದು ನಾನು ನಿನಗೆ ಇದನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಮದಗ್ನೀಶ್ವರಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತೇಳನೆಯಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟನವತ್ಯುತ್ತರಶತತಮೋಽಧ್ಯಾಯಃ

ಪಂಚಮ ಪ್ರಭಾಸಕ್ಷೇತ್ರ ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಹಾಪ್ರಭಾಸಮುತ್ತಮಂ ।
ಜಲ ಪ್ರಭಾಸತೋ ಯಾಮ್ಯೇ ಯಮಮಾರ್ಗವಿಘಾತಕಂ ॥ ೧ ॥
ಶೃಣು ತಸ್ಯೈವ ಮಾಹಾತ್ಮ್ಯಂ ಯಥಾ ಜಾತಂ ಧರಾತಲೇ ॥ ೨ ॥
ಪೂರ್ವಂ ತ್ರೇತಾಯುಗೇ ದೇವಿ ಸ್ಪರ್ಶಲಿಂಗಂ ತತಸ್ಸ್ಮೃತಂ ।
ದಿವ್ಯಂ ತೇಜೋಮಯಂ ನೄಣಾಂ ಸ್ಪರ್ಶನಾನ್ಮುಕ್ತಿದಾಯಕಂ ॥ ೩ ॥
ಅಥ ಕಾಲೇ ಚ ಕಸ್ಮಿಂಶ್ಚಿದ್ವಜ್ರೇಣಾಚ್ಛಾದಿತಂ ಪ್ರಿಯೇ ।
ಇಂದ್ರೇಣಾಗತ್ಯ ವಸುಧಾಂ ಭಯೇನಾಗತ್ಯ ಸುಂದರಿ ॥ ೪ ॥

ಕನ್ನಡದ ಅನುವಾದ

ಪಂಚಮ ಪ್ರಭಾಸಕ್ಷೇತ್ರ ಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತೇನೆ:—ಮಹಾದೇವಿ! ಅನಂತರ ಜಲಪ್ರಭಾಸದ ದಕ್ಷಿಣ ದಿಕ್ಕಿನಲ್ಲಿ ಯಮ ಮಾರ್ಗವನ್ನು ನಿರೋಧಿಸುವ ಉತ್ತಮವಾದ ಮಹಾ ಪ್ರಭಾಸಕ್ಕೆ ಹೋಗಬೇಕು.

೨. ಅದು ಭೂಮಿಯಲ್ಲಿ ಹೇಗಾಯಿತೆಂಬುದನ್ನೂ, ಅದರ ಮಾಹಾತ್ಮ್ಯವನ್ನೂ ಕೇಳು.

೩. ದೇವಿ! ಹಿಂದೆ ತ್ರೇತಾಯುಗದಲ್ಲಿ ಸ್ಪರ್ಶಲಿಂಗವೆಂದು ಪ್ರಸಿದ್ಧಿಗೊಂಡ ತೇಜೋಮಯವಾದ ಆ ಲಿಂಗವನ್ನು ಸ್ಪರ್ಶ ಮಾಡಿದವನಿಗೆ ಮುಕ್ತಿಯು ದೊರಕುವುದು.

೪. ಸುಂದರಿ! ತರುವಾಯ ಒಂದಾನೊಂದು ಕಾಲದಲ್ಲಿ ಭಯಗೊಂಡ ಇಂದ್ರನು ಭೂಲೋಕಕ್ಕೆ ಬಂದು ವಜ್ರದಿಂದ ಆ ಲಿಂಗವನ್ನು ಮುಚ್ಚಿದನು.

ಉಷ್ಮಾ ತದುದ್ಭವೋ ದೇವಿ ನಿರ್ಗಚ್ಛನ್ನವರೋಧಿತಃ ।
ದಶಕೋಟಿಪ್ರವಿಸ್ತೀರ್ಣಂ ಜ್ವಾಲಾಗ್ರಂ ಲಿಂಗರೂಪಧೃಕ್ ॥ ೫ ॥
ಪ್ರಭಾಸಕ್ಷೇತ್ರಮಾಸ್ಥಾಯ ಭಿತ್ವಾಽಽವಿರ್ಭವಮಾಸ್ಥಿತಂ ।
ವಜ್ರೇಣ ರುಂಧಿತೇ ದೇವಿ ಭಿತ್ವಾ ಚೈವ ವಸುಂಧರಾ ॥ ೬ ॥
ಧೂಮಸಂಘೈಃ ಸಮೇತಸ್ತು ವ್ಯಾಪಯಾಮಾಸ ತಜ್ಜಗತ್ ।
ತತಸ್ತ್ರೈಲೋಕ್ಯಮಖಿಲಂ ಜ್ವಾಲಾಭಿರ್ವ್ಯಾಕುಲೀ ಕೃತಂ ॥ ೭ ॥
ತತಃ ಸುರಗಣಾಃ ಸರ್ವ ಋಷಯೋ ವೇದಪಾರಗಾಃ ।
ಅಸ್ತುವನ್ವಿವಿಧೈಃ ಸೂಕ್ತೈಃ ವೇದೋಕ್ತೈಃ ಶಶಿಶೇಖರಂ ॥ ೮ ॥
ಸಂಹರಸ್ವ ಸುರಶ್ರೇಷ್ಠ ತೇಜಃ ಸ್ವಂ ದಹನಾತ್ಮಕಂ ।
ತ್ರೈಲೋಕ್ಯಂ ವ್ಯಾಕುಲೀಭೂತಮೇವಂ ಸರ್ವಂ ಚರಾಚರಂ ।
ನ ಯಾವತ್ಪ್ರಲಯಂ ಯಾತಿ ತಾವದ್ರಕ್ಷ ಸುರೇಶ್ವರ ॥ ೯ ॥

ಈಶ್ವರ ಉವಾಚ :—

ಏವಮಾಭಾಷಮಾಣೇಷು ತ್ರಿದಿವೇಷು ಸುರೇಶ್ವರಿ ।
ತತ್ತೇಜಃ ಪಂಚಧಾವಿಷ್ಟಂ ವ್ಯಾಪ್ಯಾಶೇಷಂ ಜಗತ್ತ್ರಯಂ ॥ ೧೦ ॥

೫–೭. ಹೊರಗೆ ಹೊರಟ ಹಬೆಯು ತಡೆಯಲ್ಪಡಲು ಅದರ ಹತ್ತು ಕೋಟಿ ಯೋಜನ ವಿಸ್ತೀರ್ಣವಾದ ಲಿಂಗ ರೂಪವನ್ನು ಧರಿಸಿದ ಜ್ವಾಲೆಯು ಪ್ರಭಾಸ ಕ್ಷೇತ್ರದಲ್ಲಿ ಭೂಮಿಯನ್ನು ಭೇದಿಸಿ ಮೇಲಕ್ಕೆದ್ದು ಹೊಗೆಗಳೊಡನೆ ಮೂರು ಲೋಕ ಗಳನ್ನು ವ್ಯಾಪಿಸಿತು.

೮. ತರುವಾಯ ಸಕಲ ದೇವತೆಗಳೂ, ವೇದ ಪಾರಂಗತರಾದ ಮುನಿಗಳೂ ಶಂಕರನನ್ನು ವೇದೋಕ್ತವಾದ ನಾನಾ ಸೂಕ್ತಗಳಿಂದ ಸ್ತುತಿಸಿದರು.

೯. "ಸುರೋತ್ತಮ! ಮೂರು ಲೋಕಗಳನ್ನು ವ್ಯಾಕುಲಗೊಳಿಸಿದ ನಿನ್ನ ಅಗ್ನಿ ರೂಪವಾದ ತೇಜಸ್ಸನ್ನು ಹಿಂದಕ್ಕೆ ತೆಗೆದುಕೊ". ಜಗತ್ತನ್ನು ಪ್ರಳಯವಾಗದಂತೆ ರಕ್ಷಿಸು.

೧೦–೧೧. ಈಶ್ವರನು ಹೇಳುತ್ತಾನೆ :—ಸುರೇಶ್ವರಿ! ದೇವತೆಗಳು ಹೀಗೆನ್ನಲು ಆ ತೇಜಸ್ಸು ಐದು ಪ್ರಕಾರವಾಗಿ ಜಗತ್ತ್ರಯವನ್ನು ವ್ಯಾಪಿಸಿ ಭೂಮಿಯನ್ನು ಐದು

ಪಂಚಪ್ರಭಾಸರೂಪೇಣ ಭಿತ್ವಾ ತತ್ರ ವಸುಂಧರಾಂ ।
ಯೇನ ಮಾರ್ಗೇಣ ನಿಷ್ಕ್ರಾಂತಂ ತನ್ಮಾರ್ಗೇ ಚ ಮಹನ್ಮಹಃ ॥ ೧೧ ॥
ತತ್ರ ತೈಃ ಸ್ಥಾಪಿತಂ ದ್ವಾರಂ ಸುಪ್ರದೇಶೇಽಶ್ಮಜಂ ಪ್ರಿಯೇ ।
ಪಿಹಿತೇಽಥ ಚ ರಂಧ್ರೇಽಸ್ಮಿನ್ಧೂಮೋ ನಾಶಮುಪೇಯಿವಾನ್ ॥ ೧೨ ॥
ಸ್ವಸ್ಥಾಶ್ಚೈವಾಭವಲ್ಲೋಕಾಸ್ತೇಜಸ್ತತ್ರೈವ ಸಂಸ್ಥಿತಂ ।
ಏವಂ ಮಯಾ ಪ್ರೇರಿತಾಸ್ತೇ ಲಿಂಗಂ ತತ್ರ ಸಮಾದಧುಃ ॥ ೧೩ ॥
ತನ್ಮಹಸ್ತತ್ರ ದೇವೇಶಿ ವಿಶ್ರಾಮಮಕರೋತ್ತದಾ ।
ತತೋ ಮಹಾಪ್ರಭಾಸೇತಿ ಕೀರ್ತ್ಯತೇ ದೇವದಾನವೈಃ ॥ ೧೪ ॥
ಯಸ್ತಂ ಪೂಜಯತೇ ಭಕ್ತ್ಯಾ ಲಿಂಗಂ ಪುಷ್ಪೈಃ ಪೃಥಗ್ವಿಧೈಃ ।
ಸ ಯಾತಿ ಪರಮಂ ಸ್ಥಾನಂ ಜರಾಮರಣವರ್ಜಿತಂ ॥ ೧೫ ॥
ದೃಷ್ಟೇನ ತೇನ ದೇವೇಶಿ ಮುಚ್ಯತೇ ಪಾತಕೈರ್ನರಃ ।
ಲಭತೇ ವಾಂಛಿತಾನ್ಕಾಮಾನ್ಮನಸಾ ಚೇಪ್ಸಿತಾನ್ಪ್ರಿಯೇ ॥ ೧೬ ॥
ಹಿರಣ್ಯಂ ತತ್ರ ದಾತವ್ಯಂ ಬ್ರಾಹ್ಮಣೇ ಶಂಸಿತ ವ್ರತೇ ।
ಗೋದಾನಂ ವಿಧಿವಚ್ಚೈವ ದೇಯಂ ತತ್ರ ದ್ವಿಜನ್ಮನೇ ॥ ೧೭ ॥

ಪ್ರಭಾಸಗಳ ರೂಪದಿಂದ ಭೇದಿಸಿ ಹಿಂದೆ ತಾನು ಬಂದ ದ್ವಾರದಿಂದಲೇ ಹೊರಟು ಹೋಯಿತು.

೧೨. ಅವುಗಳಿಂದಾದ ಕಲ್ಲಿನರಂಧ್ರಗಳನ್ನು ಮುಚ್ಚಲು ಹೊಗೆಯು ಅಡಗಿ ಹೋಯಿತು.

೧೩. ಜನರು ಸುಖಗೊಂಡರು. ತೇಜಸ್ಸು ಅಲ್ಲಿಯೇ ನಿಂತಿತು. ಹೀಗೆ ನನ್ನಿಂದ ಪ್ರೇರಿತರಾದ ಅವರು ಅಲ್ಲಿ ಲಿಂಗವನ್ನು ಶಾಂತಗೊಳಿಸಿದರು.

೧೪. ದೇವೇಶಿ! ಆ ತೇಜಸ್ಸು ಆಗ ಅಲ್ಲಿ ಶಾಂತವಾಯಿತು, ಬಳಿಕ ಅದನ್ನು ದೇವದಾನವರು ಮಹಾಪ್ರಭಾಸವೆಂದುಕರೆದರು.

೧೫. ಆ ಲಿಂಗವನ್ನು ನಾನಾಬಗೆಯ ಹೂವುಗಳಿಂದ ಭಕ್ತಿಯಿಂದ ಪೂಜಿಸಿದವನು ಜರಾಮರಣಗಳಿಲ್ಲದ ಉತ್ತಮಸ್ಥಾನವನ್ನು ಹೊಂದುವನು.

೧೬. ಪ್ರಿಯಳೆ! ಆ ಮಹಾಪ್ರಭಾಸಲಿಂಗವನ್ನು ದರ್ಶನಗೈದ ಮಾನವನು ಪಾತಕಮುಕ್ತನಾಗಿ ಮನಸ್ಸಿನಿಂದ ಆಲೋಚಿಸಿದ ಇಷ್ಟಾರ್ಥಗಳನ್ನು ಪಡೆಯುವನು.

೧೭. ಅಲ್ಲಿ ಶ್ಲಾಘ್ಯನಿಯಮವುಳ್ಳ ಬ್ರಾಹ್ಮಣನಿಗೆ ಚಿನ್ನವನ್ನೂ, ಗೋವನ್ನೂ ದಾನಮಾಡಬೇಕು.

ಏವಂ ಕೃತ್ವಾ ಮಹಾದೇವಿ ಲಭತೇ ಜನ್ಮನಃ ಫಲಂ ।
ರಾಜಸೂಯಾಶ್ವಮೇಧಾನಾಂ ಪ್ರಾಪ್ನುಯಾತ್ಫಲಮೂರ್ಜಿತಂ ॥ ೧೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಂಚಮ ಪ್ರಭಾಸಕ್ಷೇತ್ರಮಾಹಾತ್ಮ್ಯವರ್ಣನಂ ನಾಮ
ಅಷ್ಟನವತ್ಯುತ್ತರಶತತಮೋಽಧ್ಯಾಯಃ

---

೧೮. ಮಹಾದೇವಿ ! ಹೀಗೆ ಮಾಡಿದ ಮನುಷ್ಯನು ತನ್ನ ಜನ್ಮದ ಫಲವನ್ನೂ, ರಾಜಸೂಯ ಮತ್ತು ಅಶ್ವಮೇಧಯಾಗಗಳ ಫಲವನ್ನೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಂಚಮ ಪ್ರಭಾಸಕ್ಷೇತ್ರಮಾಹಾತ್ಮ್ಯವರ್ಣನವೆಂಬ
ನೂರತೊಂಬತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವನವತ್ಯುತ್ತರಶತತಮೋಽಧ್ಯಾಯಃ

ದಕ್ಷಯಜ್ಞವಿಧ್ವಂಸನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಯ ದಕ್ಷಿಣತಃ ಸ್ಥಿತಂ ।
ಸರಸ್ವತ್ಯಾಸ್ತಟೇ ರಮ್ಯೇ ದೇವಂ ತತ್ರ ಕೃತಸ್ಮರಂ ॥ ೧ ॥
ಸ್ವಯಂ ಭೂತಂ ಮಹಾದೇವಿ ಸರ್ವಪಾಪಪ್ರಣಾಶನಂ ।
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಯಥಾ ಜಾತಂ ಮಹೀತಲೇ ॥ ೨ ॥
ಪುರಾ ಕಾಮೋ ಮಯಾದಗ್ಧೋ ಯದಾ ತತ್ರ ವರಾನನೇ ।
ತದಾ ರತಿಃ ಸಮಾಗಮ್ಯ ವಿಲಲಾಪ ಸು ದುಃಖಿತಾ ॥ ೩ ॥
ತಾಂ ತು ಶೋಕಾತುರಾಂ ದೃಷ್ಟ್ವಾ ತತ್ರಾಽಹಂ ಕರುಣಾನ್ವಿತಃ ।
ಅವೋಚಂ ಮಾ ರುದಿಷ್ವೇತಿ ತವ ಭರ್ತಾ ಪುನಃ ಶುಭೇ ।
ಸಮುತ್ಥಾಸ್ಯತಿ ಕಾಲೇನ ಮತ್ಪ್ರಸಾದಾನ್ನ ಸಂಶಯಃ ॥ ೪ ॥

ಕನ್ನಡದ ಅನುವಾದ

ದಕ್ಷಯಜ್ಞವಿಧ್ವಂಸನಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಆ ಮಹಾಪ್ರಭಾಸದ ದಕ್ಷಿಣದಲ್ಲಿ ಸರಸ್ವತೀನದಿಯ ಮನೋಹರವಾದ ದಡದಲ್ಲಿರುವುದೂ ಸ್ವಯಮುತ್ಪನ್ನವಾದುದೂ, ಸಕಲ ಪಾಪವನ್ನು ಪರಿಹರಿಸುವುದೂ ಆದ ಕೃತಸ್ಮರ ಲಿಂಗವನ್ನು ಹೊಂದಬೇಕು ಆ ಲಿಂಗವು ಭೂಮಿಯಲ್ಲಿ ಹೇಗೆ ಉಂಟಾಯಿತೆಂಬುದನ್ನು ಹೇಳುವೆನು.

೩. ಸುಂದರಿ! ಹಿಂದೆ ನಾನು ಮನ್ಮಥನನ್ನು ಸುಡಲು ರತಿಯು ಅಲ್ಲಿಗೆ ಬಂದು ಅತ್ಯಂತ ದುಃಖದಿಂದ ಗೋಳಾಡಿದಳು.

೪. ಹಾಗೆ ಶೋಕಿಸುತ್ತಿರುವ ಆ ರತಿಯನ್ನು ಕಂಡು ನಾನು ದಯೆಯಿಂದ "ಅಳಬೇಡ ನಿನ್ನ ಪತಿಯು ಮರಳಿ ನನ್ನ ಅನುಗ್ರಹದಿಂದ ಬದುಕುವ"ನೆಂದನು.

ದೇವ್ಯುವಾಚ :—

ಕಿಮರ್ಥಂ ಸ ಪುರಾ ದಗ್ಧಃ ಕಾಮದೇವಸ್ತ್ವಯಾ ವಿಭೋ ।
ಕಥಮಾಪ ಪುನರ್ಜನ್ಮ ವಿಸ್ತರಾತ್ಕಥಯಸ್ವ ಮೇ ॥ ೫ ॥

ಈಶ್ವರ ಉವಾಚ :—

ದಕ್ಷಃ ಪ್ರಜಾಪತಿಃ ಪೂರ್ವಂ ಬಭೂವ ತ್ವತ್ಪಿತಾ ಪ್ರಿಯೇ ।
ಶತಂ ಸುತಾನಾಂ ಜಜ್ಞೇಽಸ್ಯ ಗೌರೀಣಾಂ ದೀರ್ಘಚಕ್ಷುಷಾಂ ॥ ೬ ॥
ದದೌ ತ್ವಾಂ ಪ್ರಥಮಂ ಮಹ್ಯಂ ಸತೀನಾಮ್ನಾತಿಕೀರ್ತಿತಾಂ ।
ದದೌ ದಶ ಚ ಧರ್ಮಾಯ ಶ್ರದ್ಧಾ ಮೇಧಾ ಧೃತಿಃ ಕ್ಷಮಾ ॥ ೭ ॥
ಅನಸೂಯಾ ಶುಚಿರ್ಲಜ್ಜಾ ಸ್ಮೃತಿಃ ಶಕ್ತಿಃ ಶ್ರುತಿಸ್ತಥಾ ।
ದ್ವೇ ಭಾರ್ಯೇ ಕಾಮದೇವಾಯ ರತಿಃ ಪ್ರೀತಿಸ್ತಥೈವ ಚ ॥ ೮ ॥
ಏಕಾಂ ಸ್ವಾಹಾಂ ದದೌ ವಹ್ನೇಃ ಪಿತ್ರೂಣಾಂ ಚ ತತಃ ಸ್ವಧಾಂ ।
ಸಪ್ತವಿಂಶಚ್ಛಶಾಂಕಾಯ ಅಶ್ವಿನ್ಯಾದ್ಯಾಃ ಪ್ರಕೀರ್ತಿತಾಃ ॥ ೯ ॥
ತವಾಪಿ ವಿದಿತಾ ದೇವಿ ರೇವತ್ಯಂತಾಸ್ತಥಾ ಜನೇ ।
ಕಶ್ಯಪಾಯ ದದೌ ದೇವಿ ಸ ತು ಕನ್ಯಾಸ್ತ್ರಯೋದಶ ॥ ೧೦ ॥
ಅದಿತಿಶ್ಚ ದಿತಿಶ್ಚೈವ ವಿನತಾ ಕದ್ರುರೇವಚ ।
ಸಿಂಹಿಕಾ ಸುಪ್ರಭಾ ಚೈವ ಉಲೂಕೀ ಯಾ ವರಾನನೇ ॥ ೧೧ ॥

---

೫. ದೇವಿಯು ಹೇಳುತ್ತಾಳೆ :—ಸ್ವಾಮಿ! ನೀನು ಹಿಂದೆ ಮನ್ಮಥನನ್ನು ಏಕೆ ಸುಟ್ಟೆ? ಅವನು ಮರಳಿ ಹೇಗೆ ಹುಟ್ಟಿದನು? ಇದನ್ನು ವಿಸ್ತಾರವಾಗಿ ನನಗೆ ಹೇಳು.

೬. ಪ್ರಿಯಳೆ! ದಕ್ಷಪ್ರಜಾಪತಿಯು ಹಿಂದೆ ನಿನಗೆ ತಂದೆಯಾಗಿದ್ದನು. ಇವನಿಗೆ ನೂರುಮಂದಿ ಹೆಣ್ಣುಮಕ್ಕಳು ಜನಿಸಿದರು.

೭—೨೧. ಅವರಲ್ಲಿ ಮೊದಲನೆಯವಳಾದ ಸತಿಯೆಂಬ ನಿನ್ನನ್ನು ನನಗಿತ್ತನು ಶ್ರದ್ಧಾ, ಮೇಧಾ, ಧೃತಿ, ಕ್ಷಮಾ, ಅನುಸೂಯಾ, ಶುಚಿ, ಲಜ್ಜಾ, ಸ್ಮೃತಿ, ಶಕ್ತಿ, ಶ್ರುತಿ, ಎಂಬ ಹತ್ತುಮಂದಿ ಕನ್ಯೆಯರನ್ನು ಯಮಧರ್ಮರಾಜನಿಗೂ, ರತಿ, ಪ್ರೀತಿ, ಎಂಬ ಇಬ್ಬರು ಕನ್ಯೆಯರನ್ನು ಮನ್ಮಥನಿಗೂ, ಸ್ವಾಹಾ ಎಂಬಳವನ್ನು ಅಗ್ನಿದೇವನಿಗೂ, ಸ್ವಧೆಯನ್ನು ಪಿತೃಗಳಿಗೂ, ಎಲ್ಲರಿಗೂ ತಿಳಿದ ಅಶ್ವಿನ್ಯಾದಿರೇವತ್ಯಂತವಾದ ಇಪ್ಪತ್ತೇಳು ನಕ್ಷತ್ರಗಳನ್ನು ಚಂದ್ರನಿಗೂ, ಅದಿತಿ, ದಿತಿ, ವಿನತಾ, ಕದ್ರು, ಸಿಂಹಿಕಾ, ಸುಪ್ರಭಾ, ಉಲೂಕೀ, ಅನುವಿದ್ಧಾ, ಸಿತಾ ಈಷ್ಯಾ, ಹಿಂಸಾ, ಮಾಯಾ, ನಿಷ್ಕೃತಿ ಎಂಬ

ಅನುವಿದ್ಧಾ ಸಿತಾ ಚೈವ ಈಷ್ಯಾ೯ ಹಿಂಸಾ ತಥಾ ಪರಾ ।
ಮಾಯಾ ನಿಷ್ಕೃತಿಸಂಯುಕ್ತಾ ದಕ್ಷಃ ಪೂರ್ವಂ ಮಹಾಮತಿಃ ॥ ೧೨ ॥
ಗೌರೀ ಚ ಸುಪ್ರಭಾ ಚೈವ ವಾತಾ೯ ಸಾಧ್ವೀ ಸುಮಾಲಿಕಾ ।
ವರುಣಾಯ ದದೌ ಪಂಚ ಶದಾಸೌ ಪರ್ವತಾತ್ಮಜೇ ॥ ೧೩ ॥
ಭದ್ರಾ ಚ ಮದಿರಾ ಚೈವ ವಿದ್ಯಾ ಧನ್ಯಾ ಧನಾ ಶುಭಾ ।
ದದೌ ಪಂಚ ಕುಬೇರಾಯ ಪತ್ನ್ಯರ್ಥಂ ಪರ್ವತಾತ್ಮಜೇ ॥ ೧೪ ॥
ಜಯಾ ಚ ವಿಜಯಾ ಚೈವ ಮಧುಸ್ಪಂದಾ ಇರಾವತೀ ।
ಸುಪ್ರಿಯಾ ಜನಕಾ ಕಾಂತಾ ಸುಭದ್ರಾ ಧಾರ್ಮಿಕಾ ಶುಭಾ ॥ ೧೫ ॥
ರುದ್ರಾಣಾಂ ಪ್ರದದೌ ಕನ್ಯಾ ದಶಾನಾಂ ಧರ್ಮವಿತ್ತದಾ ।
ಪ್ರಭಾವತೀ ಸುಭದ್ರಾ ಚ ವಿಮಲಾ ನಿರ್ಮಲಾಽನೃತಾ ॥ ೧೬ ॥
ತೀವ್ರಾ ದಕ್ಷಾರುಣಾ ವಿದ್ಯಾ ಧಾರಪಾಲಾ ಚ ವರ್ಚಸಾ ।
ಆದಿತ್ಯಾನಾಂ ದದೌ ದಕ್ಷಃ ಕನ್ಯಾದ್ವಾದಶಕಂ ಪ್ರಿಯೇ ॥ ೧೭ ॥
ಯೋಗನಿದ್ರಾಭಿಭೂತಸ್ಯ ಸಂಸರ್ಪಾ ಸರಮಾ ಗುಹಾ ।
ಮಾಲಾ ಚಂಪಾ ತಥಾ ಜ್ಯೋತ್ಸ್ನಾ ಸ ವಿಶ್ವೇಭ್ಯಶ್ಚ ಏವಚ ॥ ೧೮ ॥
ಅಶ್ವಿಭ್ಯಾಂ ದ್ವೇ ತಥಾ ಕನ್ಯೇ ಸುವೇಷಾ ಭೂಷಣಾಶುಭಂ ।
ಏಕಾ ಕನ್ಯಾ ತಥಾ ವಾಯೋರ್ದತ್ತಾ ಏತಾಃ ಪ್ರಕೀರ್ತಿತಾಃ ॥ ೧೯ ॥

ಹದಿಮೂರು ಕನ್ಯೆಯರನ್ನು ಕಶ್ಯಪ ಮಹರ್ಷಿಗೂ, ಗೌರೀ, ಸುಪ್ರಭಾ, ವಾತಾ೯, ಸಾಧ್ವೀ, ಸುಮಾಲಿಕಾ ಎಂಬ ಐದು ಮಂದಿ ಕನ್ಯೆಯರನ್ನು ವರುಣನಿಗೂ, ಭದ್ರಾ, ಮದಿರಾ, ವಿದ್ಯಾ, ಧನ್ಯಾ, ಧನಾ ಎಂಬ ಐದು ಮಂದಿ ಕನ್ಯೆಯರನ್ನು ಕುಬೇರನಿಗೂ ಜಯಾ, ವಿಜಯಾ, ಮಧುಸ್ಪಂದಾ, ಇರಾವತೀ, ಸುಪ್ರಿಯಾ, ಜನಕಾ, ಕಾಂತಾ, ಸುಭದ್ರಾ, ಧಾರ್ಮಿಕಾ, ಶುಭಾ ಎಂಬ ಹತ್ತು ಮಂದಿ ಕನ್ಯೆಯರನ್ನು ದಶರುದ್ರರಿಗೂ, ಪ್ರಭಾವತೀ. ಸುಭದ್ರಾ, ವಿಮಲಾ, ನಿರ್ಮಲಾ, ಅನೃತಾ, ತೀವ್ರಾ ದಕ್ಷಾ, ಅರುಣಾ, ವಿದ್ಯಾ, ಧಾರಾಪಾಲಾ, ವರ್ಚಸಾ ಎಂಬ ಹನ್ನೆರಡು ಮಂದಿ ಕನ್ಯೆಯರನ್ನು ದ್ವಾದಶಾದಿತ್ಯರಿಗೂ, ಸಂಸರ್ಪಾ, ಸರಮಾ, ಗುಹಾ, ಮಾಲಾ, ಚಂಪಾ, ಜ್ಯೋತ್ಸ್ನಾ ಎಂಬುವರನ್ನು ವಿಶ್ವೇದೇವತೆಗಳಿಗೂ, ಸುವೇಷಾ, ಭೂಷಣಾ ಎಂಬವರನ್ನು ಅಶ್ವಿನೀ ದೇವತೆಗಳಿಗೂ, ಒಬ್ಬ ಕನ್ಯೆಯನ್ನು ವಾಯುವಿಗೂ. ಸಾವಿತ್ರಿಯನ್ನು ಬ್ರಹ್ಮನಿಗೂ,

ಸಾವಿತ್ರೀಂ ಬ್ರಹ್ಮಣೇ ಪ್ರಾದಾಲ್ಲಕ್ಷ್ಮೀಂ ವಿಷ್ಣೋರ್ಮಹಾತ್ಮನಃ ।
ಕಸ್ಯಚಿತ್ತ್ವಥ ಕಾಲಸ್ಯ ಸ ಈಜೇ ದಕ್ಷಿಣಾವತಾ ॥ ೨೦ ॥
ಯಜ್ಞೇನ ಪರ್ವತಸುತೇ ಹಿಮವಂತೇ ಮಹಾಗಿರೌ ।
ಯಜ್ಞವಾಟೋ ಹ್ಯಭೂತ್ತಸ್ಯ ಸರ್ವಕಾಮ ಸಮೃದ್ಧಿಮಾ್ ॥ ೨೧ ॥
ತಸ್ಮಿನ್ಯಜ್ಞೇ ಸಮಾಯಾತಾ ಆದಿತ್ಯಾ ವಸವಸ್ತಥಾ ।
ವಿಶ್ವೇದೇವಾಶ್ಚ ಮರುತೋ ಲೋಕಪಾಲಾಶ್ಚ ಸರ್ವಶಃ ॥ ೨೨ ॥
ಬ್ರಹ್ಮಾ ವಿಷ್ಣುಃ ಸಹಸ್ರಾಕ್ಷೋ ವರುಣೋ ಯಮ ಏವ ಚ ।
ಧನದಶ್ಚ ಕುಮಾರಶ್ಚ ತಥಾ ನದ್ಯಶ್ಚ ಸಾಗರಾಃ ॥ ೨೩ ॥
ವಾಪ್ಯಃ ಕೂಪಾಸ್ತಥಾ ಚೈವ ತಡಾಗಾಃ ಪಲ್ವಲಾನಿ ಚ ।
ಸುಪರ್ಣಶ್ಚಾಥ ಯೇ ನಾಗಾಃ ಸರ್ವೇ ಮೂರ್ತಾ ವ್ಯವಸ್ಥಿತಾಃ ॥ ೨೪ ॥
ದಾನವಾಪ್ಸರಸಶ್ಚೈವ ಯಕ್ಷಾಃ ಕಿನ್ನರಗುಹ್ಯಕಾಃ ।
ಸಾನುಗಾಸ್ತೇ ಸಭಾರ್ಯಾಶ್ಚ ವೇದವೇದಾಂಗಪಾರಗಾಃ ॥ ೨೫ ॥
ಮಹರ್ಷಯೋ ಮಹಾಭಾಗಾಸ್ತಥಾ ದೇವರ್ಷಯಶ್ಚ ಯೇ ।
ತೇ ಭಾರ್ಯಾ ಸಹಿತಾಸ್ತತ್ರ ವಸಂತಿ ಚ ವರಾನನೇ ॥ ೨೬ ॥
ಕಪಾಲ ಮಾಲಾಭರಣಶ್ಚಿತಾಭಸ್ಮ ಭಿಭರ್ತಿ ಯಃ ।
ಅಪವಿತ್ರಯಾ ಶಂಭುರ್ನಾಹೂತಸ್ತು ತಥಾವಿಧಃ ॥ ೨೭ ॥

ಲಕ್ಷ್ಮಿಯನ್ನು ಮಹಾತ್ಮನಾದ ವಿಷ್ಣುವಿಗೂ ಮದುವೆ ಮಾಡಿಕೊಟ್ಟನು. ಅವನು ತರುವಾಯ ಒಂದಾನೊಂದು ಕಾಲದಲ್ಲಿ ಹಿಮಾಲಯದಲ್ಲಿ ಬಹು ದಕ್ಷಿಣೆಯಿಂದ ಸಾಧ್ಯವಾದ ಯಜ್ಞವನ್ನಾರಂಭಿಸಿದನು. ಅವನ ಯಜ್ಞಶಾಲೆಯು ಸಕಲೇಷ್ಟಾರ್ಥಗಳಿಂದ ತುಂಬಿದ್ದಿತು.

೨೨–೨೬. ಆ ಯಜ್ಞಕ್ಕೆ ಅವನು ಸಪತ್ನೀಕರಾದ ಆದಿತ್ಯರು, ವಸುಗಳು, ವಿಶ್ವೇದೇವತೆಗಳು, ಮರುತ್ತುಗಳು, ಅಷ್ಟಲೋಕಪಾಲಕರು, ಬ್ರಹ್ಮ, ವಿಷ್ಣು, ಇಂದ್ರ, ವರುಣ, ಯಮ, ಕುಬೇರ, ಸ್ಕಂದ, ದೇಹಧಾರಿಗಳಾದ ನದಿಗಳು, ಸಮುದ್ರಗಳು, ಕೋಳಗಳು, ಬಾವಿಗಳು, ಕೆರೆಗಳು, ಕುಂಟೆಗಳು, ಗರುಡ, ನಾಗಗಳು, ದಾನವರು, ಅಪ್ಸರರು, ಯಕ್ಷರು, ಕಿನ್ನರರು, ಗುಹ್ಯರು ಪರಿವಾರದಿಂದಲೂ, ಪತ್ನಿಯರಿಂದ ಸಹಿತರೂ, ವೇದವೇದಾಂಗ ಪಾರಂಗತರೂ ಆದ ಮಹರ್ಷಿಗಳು, ಭಾಗ್ಯಶಾಲಿಗಳಾದ ದೇವರ್ಷಿಗಳು ಎಲ್ಲರೂ ಕರೆಯಿಸಲ್ಪಟ್ಟರು.

೨೭. ಶಂಭುವು ಕಪಾಲಮಾಲೆಯನ್ನೂ, ಚಿತಾ ಭಸ್ಮವನ್ನೂ ಧರಿಸಿದ್ದರಿಂದ ಅಪವಿತ್ರನೆಂದು ಕರೆಯಿಸಲಿಲ್ಲ.

ಯತಸ್ತತಃ ಸಮಾಯಾತಾಃ ಕೈಲಾಸೇ ಪರ್ವತೋತ್ತಮೇ ।
ಅಶ್ವಿನ್ಯಾದ್ಯಾ ಭಗಿನ್ಯಸ್ತಾಸ್ತ್ವಾಂ ಪ್ರತೀದಂ ವಚೋಽಬ್ರುವನ್ ॥ ೨೮ ॥
ಕಿಂ ತುಷ್ಟೇವ ಚ ಕಲ್ಯಾಣಿ ತಿಷ್ಠಸಿ ತ್ವಂ ಸುಮಧ್ಯಮೇ ।
ವಯಂ ಚ ಪ್ರಸ್ಥಿತಾಃ ಸರ್ವಾಃ ಪಿತುರ್ಯಜ್ಞೇ ಸಭರ್ತೃಕಾಃ ॥ ೨೯ ॥
ವಯಮಾಕಾರಿತಾಸ್ತೇನ ಸುತಾಃ ಸರ್ವಾ ಯಶಸ್ವಿನಿ ।
ನ ತ್ವಾಮಾಹೂತವಾನ್ದಕ್ಷಸ್ತ್ವತ್ಪತೇಃ ಶಂಕರಾದ್ಯತಃ ॥ ೩೦ ॥
ತಸ್ಯಾಂ ವಚನಮಾಕರ್ಣ್ಯ ಸತೀ ಪ್ರಾಹ ಕ್ರುಧಾನ್ವಿತಾ ।
ಹಾ ಧಿಗ್ದಕ್ಷ ದುರಾಚಾರ ಕಿಂ ವದಿಷ್ಯೇ ಮಹೇಶ್ವರಂ ॥ ೩೧ ॥
ಕಥಂ ಸಂದರ್ಶಯೇ ವಕ್ತ್ರಮಿತ್ಯುಕ್ತ್ವಾತ್ಮಾನಮಾತ್ಮನಾ ।
ವಿಸಸರ್ಜ ತಪೋಯೋಗಾತ್ಸಸ್ಮಾರಾನ್ಯನ್ನ ಕಿಂಚನ ॥ ೩೨ ॥
ಅಥ ದೃಷ್ಟ್ವಾ ಮಹಾದೇವಃ ಸತೀಂ ಪ್ರಾಣೈರ್ವಿನಾ ಸ್ಥಿತಾಂ ।
ಅವಮಾನಾತ್ತಥಾತ್ಮಾನಂ ತ್ಯಕ್ತ್ವಾ ಮತ್ವಾ ಕಪಾಲಿನಂ ॥ ೩೩ ॥
ಗಣಾನ್ಸಂಪ್ರೇಷಯಾಮಾಸ ಯಜ್ಞವಿಧ್ವಂಸನಾಯ ಚ ।
ತೇ ಗತಾಶ್ಚ ಗಣಾ ರೌದ್ರಾಃ ಶತಶೋಽಥ ಸಹಸ್ರಶಃ ॥ ೩೪ ॥

---

೨೮. ಆದರಿಂದ ನಿನ್ನ ಸಹೋದರಿಯರಾದ ಅಶ್ವಿನೀ ದೇವತೆಗಳ ಪತ್ನಿಯರೇ ಮೊದಲಾದವರು ಕೈಲಾಸ ಪರ್ವತದಲ್ಲಿರುವ ನಿನ್ನೆಡೆಗೆ ಬಂದು ಇಂತೆಂದರು.

೨೯. "ಮಂಗಳಕರಳೆ ! ಏಕೆ ಸಂತುಷ್ಟಳಾದವಳಂತಿರುವೆ?। ನಾವೆಲ್ಲ ಪತಿಯರೊಡನೆ ತಂದೆಯ ಯಜ್ಞಕ್ಕೆ ಹೊರಟಿದ್ದೇವೆ.

೩೦. ನಮ್ಮ ತಂದೆಯು ಪುತ್ರಿಯರಾದ ನಮ್ಮನ್ನೆಲ್ಲ ಕರೆದಿರುವನು. ನಿನ್ನ ಪತಿಯಾದ ಶಂಕರನಿಂದ ಲಜ್ಜಿತನಾಗಿ ನಿನ್ನನ್ನು ಕರೆಯಲಿಲ್ಲ."

೩೧-೩೨. ಅವರ ಮಾತನ್ನು ಕೇಳಿ ಕೋಪಗೊಂಡ ಸತಿಯು " ಅಯ್ಯೊ ! ದುರಾಚಾರನಾದ ದಕ್ಷನೆ ! ನಾನು ಮಹೇಶ್ವರನಿಗೆ ಏನನ್ನು ಹೇಳಲಿ. ಮುಖವನ್ನು ಹೇಗೆ ತೋರಿಸಲಿ." ಎಂದು ಬೇರೆ ಯಾವುದನ್ನೂ ಸ್ಮರಿಸದೆ ತಪಸ್ಸಿನ ಯೋಗದಿಂದ ಪ್ರಾಣವನ್ನು ತ್ಯಜಿಸಿದಳು.

೩೩-೩೪. ಬಳಿಕ ಮಹಾದೇವನು ತನ್ನನ್ನು ಕಪಾಲಿಯೆಂದರಿತು ದಕ್ಷನು ಯಜ್ಞಕ್ಕೆ ಕರೆಯದೆ ಅವಮಾನ ಮಾಡಿದ್ದರಿಂದ ಕುಪಿತಳಾದ ಸತಿಯು ಪ್ರಾಣವನ್ನು ತ್ಯಜಿಸಿರುವಳೆಂದು ತಿಳಿದು ಯಜ್ಞನಾಶಕ್ಕಾಗಿ ಗಣಗಳನ್ನು ಕಳುಹಿಸಿದನು. ಸಾವಿರಾರು ಭಯಂಕರಗಳಾದ ಆ ಗಣಗಳು ಅಲ್ಲಿಗೆ ಹೋದುವು.

ವಿಕೃತಾ ವಿಕೃತಾಕಾರಾ ಅಸಂಖ್ಯಾಕ ಮಹಾಬಲಾಃ ।
ರುದ್ರೇಣ ಪ್ರೇರಿತಾನ್ದೃಷ್ಟ್ವಾ ವೀರಭದ್ರಪುರೋಗಮಾನ್ ॥ ೩೫ ॥
ತತೋ ದೇವಗಣಾಃ ಸರ್ವೇ ವಸವಃ ಸಹ ಭಾಸ್ಕರೈಃ ।
ವಿಶ್ವೇದೇವಾಶ್ಚ ಸಾಧ್ಯಾಶ್ಚ ಧನುರ್ಹಸ್ತಾ ಮಹಾಬಲಾಃ ॥ ೩೬ ॥
ಯುದ್ಧಾಯ ಚ ವಿನಿಷ್ಕ್ರಾಂತಾಃ ಮುಂಚಂತಃ ಸಾಯಕಾಞ್ಛಿತಾನ್ ।
ತೇ ಸಮೇತ್ಯ ತತೋಽನ್ಯೋನ್ಯಂ ಪ್ರಮಥಾ ವಿಬುಧೈಃ ಸಹ ॥ ೩೭ ॥
ಮುಮುಚುಃ ಶರವರ್ಷಾಣಿ ವಾರಿಧಾರಾಂ ಯಥಾ ಘನಾಃ ।
ತೇಷಾಂ ಹಸ್ತೀ ಗಣೇನಾಥ ಶೂಲೇನ ಹೃದಿ ಭೇದಿತಃ ॥ ೩೮ ॥
ಸ ತು ತೇನ ಪ್ರಹಾರೇಣ ವಿಸಂಜ್ಞೋ ನಿಷಸಾದ ಹ ।
ಅಥ ಮುಷ್ಟ್ಯಾ ಹತಃ ಕುಂಭೇ ನಾಗ ಐರಾವಣಸ್ತದಾ ॥ ೩೯ ॥
ಸಹಸಾ ಸ ಹತಸ್ತೇನ ವಾರಣೋ ಭೈರವಾನ್ರವಾನ್ ।
ವಿನದಞ್ಜನಮಾಸ್ಥಾಯ ಯಜ್ಞವಾಟಮುಪಾದ್ರವತ್ ॥ ೪೦ ॥
ವಿಶ್ವೇದೇವಾ ನಿರುಚ್ಛ್ವಾಸಾಃ ಕೃತಾ ರೌದ್ರೈರ್ಮಹಾಶರೈಃ ।
ಚಕರ್ಷ ಸ ಧನುಷ್ಯೇಣ ವಸುಮಾನ್ಬಲವತ್ತರಃ ॥ ೪೧ ॥

೩೫–೪೦. ಬಳಿಕ ದೇವತೆಗಳೂ, ವಸುಗಳೂ, ಆದಿತ್ಯರೂ, ವಿಶ್ವೇದೇವರೂ ಸಾಧ್ಯರೂ ವಿಕಾರವಾದ ಆಕಾರವುಳ್ಳ ರುದ್ರನು ಕಳುಹಿಸಿದ ವೀರಭದ್ರನೇ ಮೊದಲಾದ ಗಣಗಳನ್ನು ಕಂಡು ಧನುರ್ಧಾರಿಗಳಾಗಿ ಯುದ್ಧಕ್ಕಾಗಿ ಹೊರಟು ಆ ಗಣಗಳ ಮೇಲೆ ತೀಕ್ಷ್ಣವಾದ ಬಾಣಗಳನ್ನೂ ಬಿಡರಲಾಂಭಿಸಿದರು. ಗಣಗಳೂ ಆ ದೇವತೆಗಳ ಮೇಲೆ ಮೋಡಗಳು ನೀರಿನ ಧಾರೆಯನ್ನು ಸುರಿಸುವಂತೆ ಬಾಣಗಳನ್ನು ಪ್ರಯೋಗಿಸಿದರು. ಆ ಗಣಗಳ ಶೂಲದಿಂದ ಸೀಳಲ್ಪಟ್ಟ ಎದೆಯುಳ್ಳ ಅವರ ಆನೆಯು ಮೂರ್ಛೆಗೊಂಡು, ಕೆಳಗೆ ಬಿದ್ದಿತು. ಬಳಿಕ ಆ ಗಣಗಳು ಐರಾವತದ ಗಂಡಸ್ಥಳಕ್ಕೆ ಹೊಡೆಯಲು ಅದು ಕೂಡಲೆ ಭಯಂಕರವಾಗಿ ಕೂಗುತ್ತ ವೇಗವಾಗಿ ಯಜ್ಞಶಾಲೆಗೆ ಓಡಿತು.

೪೧. ಆ ಗಣಗಳು ಬಿಲ್ಲನ್ನು ಎಳೆದು ಬಿಟ್ಟ ಬಾಣಗಳಿಂದ ವಿಶ್ವೇ ದೇವತೆಗಳು ನಿರುಚ್ಛ್ವಾಸರಾದರು.

೪೨ ಹೀಗೆ ಆ ಗಣಗಳಿಂದ ಯುದ್ಧಾಂಗಣದಲ್ಲಿ ತೇಜೋಹೀನರಾದ ಆದಿತ್ಯರು (ದೇವತೆಗಳು) ಹಿಂದಿರುಗಿದರು.

೪೩–೪೭. ತರುವಾಯ ಅವರು ಅಲ್ಲಿರುವ ವಿಷ್ಣುವನ್ನು ಮರೆಹೋಗಲು ಅವನು ಗಣಗಳಿಂದ ಓಡಿಸಲ್ಪಟ್ಟ ಆ ಇಂದ್ರಾದಿ ದೇವತೆಗಳನ್ನು ಕಂಡು ಕುಪಿತನಾಗಿ ಕೂಡಲೆ ಚಕ್ರವನ್ನು ಪ್ರಯೋಗಿಸಿದನು. ಆಗ ವೀರಭದ್ರನು ವೇಗದಿಂದ ಬರುತ್ತಿರುವ

ನಿಸ್ತೇಜಸಸ್ತದಾದಿತ್ಯಾಃ ಕೃತಾಸ್ತೇನ ರಣಾಜಿರೇ ।
ಏತಸ್ಮಿನಂತರೇ ದೇವಾಃ ಕೃತಾಸ್ತೇನ ಪರಾಙ್ಮುಖಾಃ ॥ ೪೨ ॥
ತತಸ್ತೇ ಶರಣಂ ಜಗ್ಮುರ್ವಿಷ್ಣುಂ ತತ್ರ ಚ ಸಂಸ್ಥಿತಂ ।
ತತಃ ಕೋಪಸಮಾವಿಷ್ಟೋ ವಿಷ್ಣುರ್ದೇವಾನ್ಸವಾಸವಾನ್ ॥ ೪೩ ॥
ದೃಷ್ಟ್ವಾ ವಿದ್ರಾವಿತಾನ್ಸರ್ವಾನ್ಮುಮೋಚಾಶು ಸುದರ್ಶನಂ ।
ತಮಾಪತಂತಂ ವೇಗೇನ ವಿಷ್ಣೋಶ್ಚಕ್ರಂ ಸುದರ್ಶನಂ ॥ ೪೪ ॥
ಪ್ರಸಾರ್ಯ ವಕ್ತ್ರಂ ಸಹಸಾ ಉದರಸ್ಥಂ ಚಕಾರ ಹ ।
ತಸ್ಮಿಂಶ್ಚಕ್ರೇ ತದಾಗ್ರಸ್ತೇ ಅಮೋಘೇ ಪರ್ವತಾತ್ಮಜೇ ॥ ೪೫ ॥
ಚುಕೋಪ ಭಗವಾನ್ವಿಷ್ಣುಃ ಶಾರ್ಙ್ಗಹಸ್ತೋಽಭ್ಯಧಾವತ ।
ಸ ಹತ್ವಾ ದಶಭಿಸ್ತೀಕ್ಷ್ಣೈರ್ನಂದಿಂ ಭೃಂಗಿಂ ಶತೇನ ಚ ॥ ೪೬ ॥
ಮಹಾಕಾಲಂ ಸಹಸ್ರೇಣ ಹ್ಯಯುತೇನ ಗಣಾಧಿಪಂ ।
ಬಾಣಾನಾಮಯುತೈರ್ಭಿತ್ವಾ ವೀರಭದ್ರಮುಪಾದ್ರವತ್ ॥ ೪೭ ॥
ತಂ ಹತ್ವಾ ಗದಯಾ ವಿಷ್ಣುರ್ವಿಹ್ವಲಂ ರುಧಿರೋಕ್ಷಿತಂ ।
ಗೃಹೀತ್ವಾ ಪಾದಯೋರ್ಭೂಮೌ ನಿಜಘಾನಾತಿರೋಷಿತಃ ॥ ೪೮ ॥
ಹನ್ಯಮಾನಸ್ಯ ತಸ್ಯಾಥ ಭೂಮೌ ಚಕ್ರಂ ಸುದರ್ಶನಂ ।
ರುಧಿರೋದ್ಗಾರಸಂಯುಕ್ತಂ ಪ್ರಹಾರಮಕರೋನ್ನ ತು ॥ ೪೯ ॥

ವಿಷ್ಣುವಿನ ಚಕ್ರಕ್ಕೆ ಬಾಯಿಯನ್ನು ಚಾಚಿ ಅದನ್ನು ನುಂಗಿದನು. ಪಾರ್ವತಿ ! ಚಕ್ರವು ನುಂಗಲ್ಪಟ್ಟದನ್ನು ವಿಷ್ಣುವು ನೋಡಿ ಸಿಟ್ಟುಗೊಂಡು ಶಾರ್ಙವನ್ನು ಹಿಡಿದುಕೊಂಡು ಓಡಿಬಂದನು. ಅವನು ಹರಿತವಾದ ಹತ್ತು ಬಾಣಗಳಿಂದ ನಂದಿಯನ್ನೂ, ನೂರು ಬಾಣಗಳಿಂದ ಭೃಂಗಿಯನ್ನು ಸಾವಿರ ಬಾಣಗಳಿಂದ ಮಹಾಕಾಲನನ್ನೂ, ಹತ್ತು ಸಾವಿರ ಬಾಣಗಳಿಂದ ಗಣಾಧಿಪನನ್ನೂ, ವೀರಭದ್ರನನ್ನೂ ಭೇದಿಸಿ ಅಟ್ಟಿಸಿಕೊಂಡು ಬಂದನು.

೪೮. ಆ ವಿಷ್ಣುವು ಆ ವೀರಭದ್ರನನ್ನು ಗದೆಯಿಂದ ಹೊಡೆದು ರಕ್ತದಿಂದ ಒದ್ದೆಯಾಗಿ ವ್ಯಥೆಗೊಂಡಿರುವ ಅವನನ್ನು ಅತಿಕುಪಿತನಾಗಿ ಕಾಲಿನಿಂದ ಭೂಮಿಯಲ್ಲಿ ಉಜ್ಜಿದನು.

೪೯. ಹೀಗೆ ಹೊಡೆಯಲ್ಪಟ್ಟರೂ ಆ ವೀರಭದ್ರನು ಅವನ ರಕ್ತದ ವಮನದಿಂದ ಸಹಿತವಾದ ಆ ಚಕ್ರವು ಅವನಿಗೆ ತೊಂದರೆಯನ್ನುಂಟುಮಾಡಲಿಲ್ಲ.

ರುದ್ರಲಬ್ಧವರೋ ದೇವಿ ವೀರಭದ್ರೋ ಗಣೇಶ್ವರಃ ।
ಯನ್ನ ಪಂಚತ್ವಮಾಪನ್ನೋ ಗದಯಾ ಪೀಡಿತೋಽಪಿ ಸಃ ॥ ೫೦ ॥
ಪತಿತಂ ಚೈವ ತಂ ಸರ್ವೇ ವಿಷ್ಣುತೇಜೋಬಲಾರ್ದಿತಾಃ ।
ವಿದ್ರುತಾಃ ಸರ್ವತೋ ಯಾತಾ ಯತ್ರ ದೇವೋ ಮಹೇಶ್ವರಃ ॥ ೫೧ ॥
ತಸ್ಮೈ ಸರ್ವಂ ತಥಾ ವೃತ್ತಂ ಸಮಾಚಖ್ಯುಃ ಪರಾಭವಂ ।
ವಿಕ್ರಮಂ ವೀರಭದ್ರಸ್ಯ ತತಃ ಕ್ರುದ್ಧೋ ಮಹೇಶ್ವರಃ ॥ ೫೨ ॥
ಪ್ರಗೃಹ್ಯ ಸಹಸಾ ಶೂಲಂ ಪ್ರಗೃಹ್ಯ ಸ್ವಗಣೈಃ ಸಹ ।
ಯಜ್ಞವಾಟಂ ತು ದಕ್ಷಸ್ಯ ಪರಾಭವಭವಂ ತತಃ ।
ವಿಕ್ರಮನ್ವೀರಭದ್ರೇಣ ಯತ್ರ ವಿಷ್ಣುಃ ಸ್ವಯಂ ಸ್ಥಿತಃ ॥ ೫೩ ॥
ಸಮಾಯಾತಂ ಸಮಾಲೋಕ್ಯ ಕೋಪಯುಕ್ತಂ ಮಹೇಶ್ವರಂ ।
ಸಂಗ್ರಾಮೇ ಸೋಽಜಯಂ ಮತ್ವಾ ತತ್ರೈವಾಂತರಧೀಯತ ॥ ೫೪ ॥
ಮರುದ್ಭಿಃ ಸಾರ್ಧಮಿಂದ್ರೋಽಪಿ ವಸುಭಿಃ ಸಹ ಕಿನ್ನರೈಃ ।
ಶಿವಃ ಕ್ರೋಧಪರೀತಾತ್ಮಾ ತತಶ್ಚಾದರ್ಶನಂ ಗತಃ ॥ ೫೫ ॥
ಕೇವಲಂ ಬ್ರಾಹ್ಮಣಾಸ್ತತ್ರ ಸ್ಥಿತಾಃ ಸದಸಿ ಭಾಮಿನಿ ।
ತೇ ದೃಷ್ಟ್ವಾ ಶಂಕರಂ ಪ್ರಾಪ್ತಂ ಕೋಪಸಂರಕ್ತಲೋಚನಂ ॥ ೫೬ ॥

---

೫೦. ಅವನು ರುದ್ರನಿಂದ ವರವನ್ನು ಪಡೆದವನಾದುದರಿಂದ ಗದಾಘಾತದಿಂದ ಮಡಿಯಲಿಲ್ಲ.

೫೧. ವೀರಭದ್ರನು ಬಿದ್ದಿರುವುದನ್ನು ಕಂಡು ವಿಷ್ಣುವಿನ ತೇಜಸ್ಸಿನಿಂದಲೂ, ಬಲದಿಂದಲೂ ಪೀಡಿತರಾದ ಆ ಗಣಗಳೆಲ್ಲ ಮಹೇಶ್ವರನೆಡೆಗೆ ಓಡಿಹೋದವು.

೫೨–೫೩. ಆ ಗಣಗಳು ಅಲ್ಲಿ ನಡೆದ ವೃತ್ತಾಂತವೆಲ್ಲವನ್ನೂ, ವೀರಭದ್ರನ ಸೋಲನ್ನೂ ಶಂಕರನಿಗೆ ತಿಳಿಸಲು ಅವನು ಕ್ರುದ್ಧನಾಗಿ ಕೂಡಲೇ ತ್ರಿಶೂಲವನ್ನು ಹಿಡಿದು ಗಣಗಳೊಡನೆ ವಿಷ್ಣುವು ವೀರಭದ್ರನೊಡನೆ ಸೆಣಸುತ್ತಿರುವ ಗಣಗಳ ಪರಾಜಯಸ್ಥಾನವಾದ ದಕ್ಷನ ಯಜ್ಞಶಾಲೆಗೆ ತೆರಳಿದನು.

೫೪. ಆಗ ವಿಷ್ಣುವು ಕೋಪದಿಂದ ಬರುತ್ತಿರುವ ಮಹೇಶ್ವರನನ್ನು ಕಂಡು ಆ ಶಂಕರನು ಸಮರದಲ್ಲಿ ಅಜೇಯನೆಂದರಿತು ಅಲ್ಲಿಯೇ ಮಾಯವಾದನು.

೫೫. ಇಂದ್ರನು ಸಹ ಮರುತ್ತುಗಳಿಂದಲೂ, ವಸುಗಳಿಂದಲೂ, ಕಿನ್ನರರಿಂದಲೂ ಸಹಿತನಾಗಿ ಕುಪಿತನಾದ ಶಿವನನ್ನೀಕ್ಷಿಸಿ ಅದೃಶ್ಯನಾದನು.

೫೬–೫೭. ಪ್ರಿಯಳೆ! ಆ ಸದಸ್ಸಿನಲ್ಲಿ ಬ್ರಾಹ್ಮಣರು ಮಾತ್ರ ಇದ್ದರು. ಅವರು ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ಬಂದಿರುವ ಶಂಕರನನ್ನು ಕಂಡು

ಹೋಮಂ ಚಕ್ರುಸ್ತತೋ ಭೀತಾ ರುದ್ರಮಂತ್ರೈಃ ಸಮಂತತಃ ।
ಅನ್ಯೇ ತ್ರಾಸಸಮಾಯುಕ್ತಾ ಪಲಾಯಂತೇ ದಿಶೋ ದಶ ॥ ೫೭ ॥
ಅಥಾಗತ್ಯ ಮಹಾದೇವೋ ದೃಷ್ಟ್ವಾ ತಾನ್ಬ್ರಾಹ್ಮಣೋತ್ತಮಾನ್ ।
ಅಪಶ್ಯಮಾನೋ ವಿಬುಧಾಸ್ತತ್ರ ಯಜ್ಞಂ ಜಘಾನ ಸಃ ॥ ೫೮ ॥
ಸ ಚ ಮೃಗವಪುರ್ಭೂತ್ವಾ ಪ್ರಣಷ್ಟಃ ಶಿವಭೀತಿತಃ ।
ಪೃಷ್ಠತಸ್ತು ಧನುಷ್ಪಾಣಿರ್ಜಗಾಮ ಭಗವಾಞ್ಛಿವಃ ।
ಅದ್ಯಾಪಿ ದೃಶ್ಯತೇ ವ್ಯೋಮ್ನಿ ತಾರಾರೂಪೋ ಮಹೇಶ್ವರಿ ॥ ೫೯ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಕ್ಷಯಜ್ಞವಿಧ್ವಂಸನಂ ನಾಮ
ಸಪ್ತನವತ್ಯುತ್ತರಶತತಮೋಽಧ್ಯಾಯಃ

ಭಯದಿಂದ ರುದ್ರಮಂತ್ರದಿಂದ ಹೋಮಿಸಿದರು. ಇತರರು ಭಯದಿಂದ ದಿಕ್ಕು ದಿಕ್ಕಿಗೆ ಓಡಿಹೋದರು.

೫೮. ಬಳಿಕ ಮಹಾದೇವನು ಅಲ್ಲಿ ಆ ಬ್ರಾಹ್ಮಣವರ್ಯರನ್ನು ಕಂಡು ದೇವತೆಗಳನ್ನು ಕಾಣದೆ ಯಜ್ಞವನ್ನು ಹಾಳುಮಾಡಿದನು.

೫೯. ಆ ಯಜ್ಞವು ಶಿವನಭಯದಿಂದ ಮೃಗರೂಪವನ್ನು ಧರಿಸಿ ಅದೃಶ್ಯವಾಗಲು ಮಹೇಶ್ವರನು ಧನುರ್ಧಾರಿಯಾಗಿ ಅದನ್ನು ಹಿಂಬಾಲಿಸಿದನು. ಮಹೇಶ್ವರಿ ! ಮೃಗರೂಪವಾದ ಆ ಯಜ್ಞವು ಈಗಲೂ ನಕ್ಷತ್ರರೂಪದಿಂದ ಆಕಾಶದಲ್ಲಿ ಕಾಣುತ್ತಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದಕ್ಷಯಜ್ಞವಿಧ್ವಂಸನವೆಂಬ
ನೂರತೊಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಶತತಮೋಽಧ್ಯಾಯಃ

ಕಾಮುಕುಂಡಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಏವಂ ವಿಧ್ವಂಸಿತೇ ಯಜ್ಞೇ ಗತಾಸ್ತೇ ಬ್ರಾಹ್ಮಣಾ ಗೃಹಂ ।
ಅಪ್ರಾಪ್ತಕಾಮನಾ ದೇವಿ ಯೇ ಚಾನ್ಯೇ ತತ್ರ ವೈ ಗತಾಃ ॥ ೧ ॥
ಹರೋಽಪಿ ವಿಗತಾಮರ್ಷಃ ಕೈಲಾಸಂ ಪರ್ವತಂ ಗತಃ ॥ ೨ ॥
ಏತಸ್ಮಿನ್ನೇವ ಕಾಲೇ ತು ತಾರಕೋ ನಾಮ ದಾನವಃ ।
ಉತ್ಪನ್ನಂ ಸ ಮಹಾಬಾಹುರ್ದೇವಾನಾಂ ಬಲದರ್ಪಹಾ ॥ ೩ ॥
ತೇನ ಇಂದ್ರಾದಿಕಾನ್ಸರ್ವಾನ್ಸುರಾಞ್ಜಿತ್ವಾ ಮಹಾಹವೇ ।
ಸ್ವರ್ಗಃ ಸ್ವೈರ್ವ್ಯಾಪಿತೋ ದೇವಿ ಬ್ರಹ್ಮಲೋಕಂ ತತೋ ಗತಾಃ ।
ಊಚುಃ ಸುರಾ ದುಃಖಯುಕ್ತಾ ಬ್ರಹ್ಮಾಣಂ ಪರ್ವತಾತ್ಮಜೇ ॥ ೪ ॥

ಕನ್ನಡದ ಅನುವಾದ

ಕಾಮುಕುಂಡಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ! ಹೀಗೆ ಯಜ್ಞವು ಹಾಳಾಗಲು ಅಲ್ಲಿಗೆ ಹೋದ ಇತರ ಬ್ರಾಹ್ಮಣರು ಇಷ್ಟಾರ್ಥವನ್ನು ಪಡೆಯದೆ ತಮ್ಮ ಮನೆಗೆ ತೆರಳಿದರು.

೨. ಶಿವನೂ ಕೋಪರಹಿತನಾಗಿ ಕೈಲಾಸಪರ್ವತಕ್ಕೆ ಹೋದನು.

೩. ಈ ಸಮಯದಲ್ಲಿ ದೇವತೆಗಳ ಬಲವನ್ನೂ, ಅಹಂಕಾರವನ್ನೂ ಮುರಿಯುವ ತಾರಕನೆಂಬ ಬಲಶಾಲಿಯಾದ ದಾನವನು ಜನಿಸಿದನು.

೪. ಅವನು ಯುದ್ಧದಲ್ಲಿ ಇಂದ್ರಾದಿ ಸಮಸ್ತ ಸುರರನ್ನೂ ಜಯಿಸಿ ದೇವಲೋಕವನ್ನು ತನ್ನವರೊಡನೆ ಆಕ್ರಮಿಸಿದನು. ಆಗ ದೇವತೆಗಳು ದುಃಖಗೊಂಡು ಬ್ರಹ್ಮಲೋಕಕ್ಕೆ ಹೋಗಿ ಪಿತಾಮಹನನ್ನು ಕುರಿತು ಇಂತೆಂದರು.

ತಾರಕೇಣ ಸುರಶ್ರೇಷ್ಠಂ ಸ್ವರ್ಗಾನ್ನಿರ್ವಾಸಿತಾ ವಯಮ್ ।
ಸ್ವಯಮಿಂದ್ರಃ ಸಮಭವದ್ವಸವೋಽನ್ಯತ್ ತಥಾ ಕೃತಾಃ ॥ ೫ ॥
ರುದ್ರಾಃ ಸಾಧ್ಯಾಸ್ತಥಾ ವಿಶ್ವೇ ಅಶ್ವಿನೌ ಮರುತಸ್ತಥಾ ।
ಆದಿತ್ಯಾಶ್ಚ ವಧೋಪಾಯಂ ತಸ್ಮಾದ್ವದ ಪಿತಾಮಹ ॥ ೬ ॥

ಬ್ರಹ್ಮೋವಾಚ :—

ಅವಧ್ಯಃ ಸ ತು ಸರ್ವೇಷಾಂ ದೇವಾನಾಮಿತಿ ಮೇ ಮತಿಃ ।
ಋತೇ ತು ಶಾಂಕರಂ ತೇಜೋ ನಾನ್ಯೇನ ವಿನಿಪಾತ್ಯತೇ ।
ತಸ್ಮಾದ್ಗಚ್ಛತ ಭದ್ರಂ ವೋ ದೇವದೇವಂ ಮಹೇಶ್ವರಮ್ ॥ ೭ ॥
ತಸ್ಯ ಭಾರ್ಯಾ ಮೃತಾ ಪೂರ್ವಂ ಜಾತಾ ಹಿಮವತೋ ಗೃಹೇ ।
ತಸ್ಯಾಂ ಚ ಜಾಯತೇ ಪುತ್ರಃ ಸ ಹನಿಷ್ಯತಿ ತಾರಕಮ್ ।
ತಸ್ಮಾತ್ಪ್ರಸಾದಯಧ್ವಂ ವೈ ತದರ್ಥಂ ಶೂಲಪಾಣಿನಮ್ ॥ ೮ ॥
ತತೋ ದೇವೈಃ ಸಮಾದಿಷ್ಟಃ ಕಾಮದೇವೋ ವರಾನನೇ ।
ಮೃತಭಾರ್ಯಂ ಹರಂ ಗತ್ವಾ ತತಃ ಪೀಡಯ ಸಾಯಕೈಃ ॥ ೯ ॥

೫–೬. ಪಿತಾಮಹ! ತಾರಕಾಸುರನು ನಮ್ಮನ್ನು ಸ್ವರ್ಗದಿಂದ ಹೊರಡಿಸಿ ತಾನೇ ಇಂದ್ರನಾಗಿ ಬೇರೆ ವಸುಗಳು, ರುದ್ರರು, ಸಾಧ್ಯರು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, ಮರುತ್ತುಗಳು, ಆದಿತ್ಯರು ಇವರನ್ನು ನಿರ್ಮಿಸಿರುವನು. ಆದುದರಿಂದ ಅವನನ್ನು ಕೊಲ್ಲುವುದಕ್ಕೆ ಉಪಾಯವನ್ನು ಹೇಳು.

೭. ಬ್ರಹ್ಮನು ಹೇಳುತ್ತಾನೆ:— ಸುರರೆ! ಆ ತಾರಕಾಸುರನನ್ನು ಶಂಕರನ ತೇಜಸ್ಸನ್ನು ಬಿಟ್ಟು ಇತರ ದೇವತೆಗಳಿಗೆ ವಧಿಸಲು ಸಾಧ್ಯವಿಲ್ಲವೆಂದು ನಾನು ತಿಳಿಯುತ್ತೇನೆ. ಆದುದರಿಂದ ಆ ಮಹೇಶ್ವರನೆಡೆಗೆ ಹೋಗಿರಿ. ನಿಮಗೆ ಮಂಗಳವಾಗಲಿ.

೮. ಶಂಕರನ ಪತ್ನಿಯಾದ ಸತಿಯು ಹಿಂದೆ ಮೃತಳಾಗಿ ಹಿಮವಂತನ ಮನೆಯಲ್ಲಿ ಜನಿಸಿದ್ದಾಳೆ. ಅವಳಲ್ಲಿ ಹುಟ್ಟಿದ ಮಗನು ತಾರಕಾಸುರನನ್ನು ಕೊಲ್ಲುವನು; ಆದ್ದರಿಂದ ನೀವು ಅವನ ವಧೆಗಾಗಿ ಶೂಲಪಾಣಿಯನ್ನು ಮೆಚ್ಚಿಸಿರಿ ಎಂದನು.

೯–೧೦. ಬಳಿಕ ದೇವತೆಗಳು ಮನ್ಮಥನನ್ನು ಕುರಿತು "ನೀನು ಮೃತ ಭಾರ್ಯನಾದ ಶಿವನೆಡೆಗೆ ಹೋಗಿ ಅವನನ್ನು ಬಾಣಗಳಿಂದ ಪೀಡಿಸು. ಆದರಿಂದ ಹರನು

ಯದಾಸೌ ಕಾಮಸಂತಪ್ತೋ ಭಾರ್ಯಾರ್ಥಂ ಯತ್ನವಾನ್ಭವೇತ್ ।
ಅಯಂ ಗಚ್ಛತು ತೇ ಭ್ರಾತಾ ವಸಂತಶ್ಚ ಮನೋಹರಃ ॥ ೧೦ ॥
ಸ ತಥೇತಿ ಪ್ರತಿಜ್ಞಾಯ ಕೈಲಾಸಂ ಪರ್ವತಂ ಗತಃ ।
ತತೋ ದೃಷ್ಟ್ವಾ ಮಹಾದೇವಃ ಕಾಮದೇವಂ ಧೃತಾಯುಧಮ್ ॥ ೧೧ ॥
ವಸಂತಸಹಿತಂ ದೇವಿ ರುದ್ರೋಽನ್ಧಕನಿಷೂದನಃ ।
ಗಂಗಾದ್ವಾರಮನುಪ್ರಾಪ್ಯ ಅಪಶ್ಯದ್ಯಾವದಗ್ರತಃ ॥ ೧೨ ॥
ದತ್ತಾಯುಧಂ ಕಾಮದೇವಂ ದುದ್ರುವೇ ಸಭಯಾತ್ಮನಃ ।
ತತೋ ವಾರಾಣಸೀಂ ಗತ್ವಾ ನೈಮಿಷಂ ಪುಷ್ಕರಂ ತಥಾ ॥ ೧೩ ॥
ಶ್ರೀಕಂಠಂ ರುದ್ರಕೋಟಿಂ ಚ ಕುರುಕ್ಷೇತ್ರಂ ಗಯಾಂ ತಥಾ ।
ಜ್ವಾಲಾಮಾರ್ಗಂ ಪ್ರಯಾಗಂ ಚ ವಿಶಾಲಾಮರ್ಬುದಂ ಶುಭಂ ॥ ೧೪ ॥
ಬಹೂನ್ಸ್ವರ್ಗಗಣಾನೇವಂ ಭ್ರಮನ್ಸ ಧರಣೀತಲೇ ।
ಕಾಮದೇವಭಯಾದ್ದೇವಿ ದೇವದೇವೋ ಮಹೇಶ್ವರಃ ॥ ೧೫ ॥
ಅನ್ವೈಕ್ಷತ ತದಾ ಕಾಮಂ ವಿಸ್ಫಾರ್ಯ ನಯನಂ ತದಾ ।
ತೃತೀಯಂ ದೇವದೇವೇಶಿ ದೇವದೇವಸ್ತ್ರಿಲೋಚನಃ ॥ ೧೬ ॥
ತಸ್ಯ ತಂ ವೀಕ್ಷಮಾಣಸ್ಯ ಸಂಜಾತಾಃ ಪಾವಕಾರ್ಚಿಷಃ ।
ತಾಭಿಃ ಸ ಧನುಷಾ ಯುಕ್ತೋ ಭಸ್ಮಸಾತ್ಸಮಪದ್ಯತ ॥ ೧೭ ॥

ಕಾಮ ಪೀಡಿತನಾಗಿ ಪತ್ನಿಯನ್ನು ಪಡೆಯಲು ಪ್ರಯತ್ನಿಸಿಯಾನು. ನಿನ್ನ ಸಹೋದರ ನಾದ ವಸಂತನೂ ನಿನ್ನೊಡನೆ ಹೋಗಲಿ. ಎಂದು ಆಜ್ಞೆ ಮಾಡಿದನು.

೧೧. ಕಾಮನು ಅವನ್ನು ಒಪ್ಪಿ ಕೈಲಾಸ ಪರ್ವತಕ್ಕೆ ಹೋದನು. ಐಳಿಕ ಮಹಾದೇವನು ಆಯುಧವನ್ನು ಧರಿಸಿದವನೂ, ವಸಂತ ಸಹಿತನೂ ಆದ ಮನ್ಮಥ ನನ್ನು ಕಂಡು ಗಂಗಾ ದ್ವಾರಕ್ಕೆ ತೆರಳಿ ನೋಡಿದನು.

೧೨–೧೭. ಅಲ್ಲಿಯೂ ಆಯುಧ ಧಾರಿಯಾದ ಕಾಮನನ್ನು ನೋಡಿ ಮರಳಿ ಭಯದಿಂದ ಓಡಿದನು. ತರುವಾಯ ಆ ಶಿವನು ಮನ್ಮಥನ ಭಯದಿಂದ ನೈಮಿ ಷಾರಣ್ಯ, ಪುಷ್ಕರ, ಶ್ರೀಕಂಠ, ರುದ್ರಕೋಟಿ, ಕುರುಕ್ಷೇತ್ರ, ಗಯೆ, ಜ್ವಾಲಾಮಾರ್ಗ, ಪ್ರಯಾಗ, ವಿಶಾಲಾ, ಅರ್ಬುದ ಮೊದಲಾದ ಸ್ಥಳಗಳಲ್ಲಿ ಸಂಚರಿಸಿ ತನ್ನ ಮೂರನೆಯ ಕಣ್ಣನ್ನು ತೆರೆದು ಮನ್ಮಥನನ್ನು ಕಂಡನು.

೧೭. ಶಿವನು ಹೀಗೆ ನೋಡುತ್ತಿರಲು ಅವನ ಕಣ್ಣಿನಿಂದ ಅಗ್ನಿಜ್ವಾಲೆಗಳು ಉಂಟಾದುವು. ಅವುಗಳಿಂದ ಬಿಲ್ಲನ್ನು ಹಿಡಿದ ಮನ್ಮಥನು ಬೂದಿಯಾದನು.

ತಂ ದಗ್ಧ್ವಾ ಭಗವಾಞ್ಛಂಭುರ್ಗತ್ವಾ ರೋಷಸ್ಯ ನಿರ್ಣಯಂ ।
ನಿವಾಸಮಕರೋತ್ತತ್ರ ಕ್ಷೇತ್ರೇ ಪ್ರಾಭಾಸಿಕೇ ಶುಭೇ ॥ ೧೮ ॥
ತಸ್ಮಿನ್ದಗ್ಧೇ ತದಾ ಕಾಮೇ ರತಿಃ ಶೋಕಪರಾಯಣಾ ।
ವಿಲಲಾಪ ಸುದುಃಖಾರ್ತಾ ಪತಿಭಕ್ತಿಪರಾಯಣಾ ॥ ೧೯ ॥
ಹಾ ನಾಥನಾಥ ಭೋಃ ಸ್ವಾಮಿನ್ಕಿಂ ಜಹಾಸಿ ಪ್ರತಿವ್ರತಾಂ ।
ಪತಿವ್ರತಾಂ ಪತಿಪ್ರಾಣಾಂ ಕಸ್ಮಾನ್ಮಾಂ ತ್ಯಜಸಿ ಪ್ರಭೋ ॥ ೨೦ ॥
ಏವಂ ವಿಲಪತೀಂ ತಾಂ ತು ವಾಗುವಾಚಾಶರೀರಿಣೀ ।
ಮಾ ತ್ವಂ ರುದ ವಿಶಾಲಾಕ್ಷಿ ಪುನರೇವ ಪತಿಸ್ತವ ॥ ೨೧ ॥
ಪ್ರಸಾದಾದ್ದೇವದೇವಸ್ಯ ಉಚ್ಛ್ವಸ್ಯತಿ ಶಿವಸ್ಯ ತು ।
ಏತಾಂ ವಾಚಂ ರತಿಃ ಶ್ರುತ್ವಾ ತತಃ ಸ್ವಸ್ಥಾ ಬಭೂವಹ ॥ ೨೨ ॥
ತತೋ ದೇವಾಃ ಶಿವಂ ನತ್ವಾ ಪ್ರಾರ್ಥಯಾಮಾಸುರೀಶ್ವರಂ ।
ಕಲತ್ರಸಂಗ್ರಹಂ ದೇವ ಕುರು ಕಾರ್ಯಾರ್ಥಸಂಗ್ರಹೇ ॥ ೨೩ ॥
ಏಷ ಕಾಮಸ್ತ್ವಯಾ ದಗ್ಧಃ ಕ್ರೋಧೇನ ಮಹತಾ ಸ್ವಯಂ ।
ವಿನಾ ತೇನ ವಿಭೋ ನಷ್ಟಾ ಸೃಷ್ಟಿರ್ನೈ ಧರಣೀತಲೇ ॥ ೨೪ ॥

---

೧೮. ಪೂಜ್ಯನಾದ ಶಂಕರನು ಮನ್ಮಥನನ್ನು ಸುಟ್ಟು ಕೋಪವಿಲ್ಲದವನಾಗಿ ಪ್ರಾಭಾಸಿಕಕ್ಷೇತ್ರದಲ್ಲಿ ವಾಸಮಾಡಿದನು.

೧೯. ಮನ್ಮಥನು ಹೀಗೆ ದಗ್ಧನಾಗಲು ಅವನ ಸತಿಯಾದ ರತಿಯು ಅತಿಶಯ ದುಃಖದಿಂದ ಗೋಳಾಡಿದಳು.

೨೦. ಅಯ್ಯೋ ! ನಾಥ ! ನಿನ್ನಲ್ಲಿಯೇ ಮನಸ್ಸುಳ್ಳ ಪತಿವ್ರತೆಯಾದ ನನ್ನನ್ನು ಏತಕ್ಕೆ ಬಿಡುವೆ ?.

೨೧-೨೨. ಹೀಗೆ ಗೋಳಾಡುತ್ತಿರುವ ರತಿಯನ್ನು ಕುರಿತು ಅಶರೀರವಾಣಿಯು " ವಿಶಾಲಾಕ್ಷಿ ! ಅಳಬೇಡ. ಶಿವನ ಅನುಗ್ರಹದಿಂದ ನಿನ್ನ ಪತಿಯು ಮರಳಿ ಬದುಕುವನು " ಎಂದಿತು. ಅನಂತರ ರತಿಯು ಇದನ್ನು ಕೇಳಿ ಸ್ವಸ್ಥಳಾದಳು.

೨೩. ದೇವಿ ! ತರುವಾಯ ದೇವತೆಗಳು ಶಿವನನ್ನು ವಂದಿಸಿ ಹೀಗೆ ಪ್ರಾರ್ಥಿಸಿದರು. "ಸ್ವಾಮಿ ! ಕಾರ್ಯನಿರ್ವಾಹಕ್ಕಾಗಿ ಪತ್ನಿಯನ್ನು ಸ್ವೀಕರಿಸು.

೨೪. ನೀನು ಅತಿಕೋಪದಿಂದ ಈ ಮನ್ಮಥನನ್ನು ಬೂದಿಮಾಡಿದೆ. ಸ್ವಾಮಿ ! ಅವನಿಲ್ಲದೆ ಭೂಮಿಯಲ್ಲಿ ಸೃಷ್ಟಿಯು ಹಾಳಾಯಿತು".

೨೫. ಶಂಕರನು ಹೇಳುತ್ತಾನೆ :—ಸುರವರ್ಯರೆ ! ನಾನು ಕೋಪದಿಂದ ಈ ಮದನನನ್ನು ಸುಟ್ಟಿರುವೆನು. ಆದುದರಿಂದ ಇವನು ಅನಂಗನಾಗಿಯೇ ಜನರಲ್ಲಿ

ಭಗವಾನುವಾಚ :—

ಏಷ ಕಾಮೋ ಮಯಾ ದಗ್ಧಃ ಕ್ರೋಧೇನ ಸುರಸತ್ತಮಾಃ ।
ತಸ್ಮಾದನಂಗ ಏವೈಷ ಪ್ರಜಾಸು ಪ್ರಚರಿಷ್ಯತಿ ।
ತದ್ವೀರ್ಯಸ್ತತ್ಪ್ರಭಾವಶ್ಚ ವಿನಾ ದೇಹಂ ಭವಿಷ್ಯತಿ ॥ ೨೫ ॥

ದೇವಾ ಊಚುಃ :—

ಭಗವನ್ಕುರು ಪೂರ್ವಂ ತ್ವಂ ಸಂಸ್ಮರಸ್ವ ರತೀಶ್ವರಂ ।
ಹಿತಾಯ ಸರ್ವಲೋಕಾನಾಂ ಯಥಾ ನಃ ಪ್ರತ್ಯಯೋ ಭವೇತ್ ॥ ೨೬ ॥
ತತಃ ಸ ಸ್ಮೃತವಾನ್ಕಾಮಂ ಸ್ವಯಂ ದೇವೋ ಮಹೇಶ್ವರಃ ।
ತತಸ್ತಚ್ಛಾಶ್ವತಂ ಲಿಂಗಂ ಸಮುತ್ತಸ್ಥೌ ಮಹೀತಲೇ ॥ ೨೭ ॥
ಕೃತಸ್ಮರಃ ಪುನಸ್ತತ್ರ ಅನಂಗೋ ಬಲವಾಂಸ್ತಥಾ ।
ತೇನೋಢಾ ಶೈಲಜಾ ತೇನ ಶಂಕರೇಣ ಮಹಾತ್ಮನಾ ॥ ೨೮ ॥
ಜಾತಃ ಸ್ಕಂದಃ ಸುರಶ್ರೇಷ್ಠಃ ತಾರಕೋ ಯೇನ ಸೂದಿತಃ ।
ಪತಿತೇನೈವ ಲಿಂಗೇನ ಯಸ್ಮಾಚ್ಚೈವ ಕೃತಸ್ಮರಃ ॥ ೨೯ ॥
ತಸ್ಮಾತ್ಕೃತಸ್ಮರೋ ಲೋಕೇ ಕೀರ್ತ್ಯತೇ ಸ ಮಹೀತಲೇ ।
ತಂ ದೃಷ್ಟ್ವಾ ನ ಜಡೋ ನಾಂಧೋ ನಾಽಸುಖೀ ನ ಚ ದುರ್ಭಗಃ ।
ಜಾಯತೇ ತು ಕದಾ ಮರ್ತ್ಯೋ ನ ದರಿದ್ರೋ ನ ರೋಗವಾನ್ ॥ ೩೦ ॥

ಸಂಚರಿಸುವನು. ದೇಹವಿಲ್ಲದಿದ್ದರೂ ಇವನ ಶಕ್ತಿಯೂ, ಮಾಹಾತ್ಮ್ಯವೂ ಮೊದಲಿನಂತೆಯೇ ಇರುವುದು.

೨೬. ದೇವತೆಗಳು ಹೇಳುತ್ತಾರೆ :—ಪೂಜ್ಯನೆ ! ನಮ್ಮ ನಂಬಿಕೆಗಾಗಿಯೂ, ಸಕಲ ಲೋಕಗಳ ಹಿತಕ್ಕಾಗಿಯೂ ಮೊದಲು ನೀನು ಮನ್ಮಥನನ್ನು ವರಿಸು.

೨೭. ಅನಂತರ ಆ ಮಹೇಶ್ವರನು ತಾನೇ ಕಾಮನನ್ನು ಸ್ಮರಿಸಿದನು. ಅದರಿಂದ ಭೂಮಿಯಲ್ಲಿ ಆ ಮನ್ಮಥನ ಶಾಶ್ವತಲಿಂಗವು ಮೇಲಕ್ಕೆದ್ದಿತು.

೨೮. ಮರಳಿ ಶಿವನಿಂದ ಸ್ಮರಿಸಲ್ಪಟ್ಟ ಮನ್ಮಥನು ಬಲಿಷ್ಠನಾಗಲು ಅವನಿಂದ ಪೀಡಿತನಾದ ಶಂಕರನು ಪಾರ್ವತಿಯನ್ನು ವರಿಸಿದನು.

೨೯–೩೦. ತರುವಾಯ ಆ ಶಿವನಿಂದ ಜನಿಸಿದ ಸ್ಕಂದನು ತಾರಕಾಸುರನನ್ನು ಕೊಂದನು. ಆ ಶಿವನಿಂದ ಬಿದ್ದಲಿಂಗವೇ ಪ್ರಪಂಚದಲ್ಲಿ ಕೃತಸ್ಮರವೆಂದು ಪ್ರಸಿದ್ಧವಾಯಿತು. ಇದನ್ನು ನೋಡಿದವನು ಮೂಢನೂ, ಕುರುಡನೂ, ಸುಖವಿಲ್ಲದವನೂ, ದೌರ್ಭಾಗ್ಯವುಳ್ಳವನೂ, ಬಡವನೂ, ರೋಗಿಷ್ಠನೂ ಆಗುವುದಿಲ್ಲ.

ಏವಂ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ದಗ್ಧೋ ಯಥಾ ಸ್ಮರಃ ಪೂರ್ವಂ ಪುನರ್ವೀರ್ಯಾನ್ವಿತಃ ಸ್ಥಿತಃ ॥ ೩೧ ॥

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಕುಂಡಂ ದಕ್ಷಿಣೇನ ಕೃತಸ್ಮರಾತ್ ।
ಕಾಮಕುಂಡೇತಿ ವೈ ನಾಮ ಯತ್ರೋದ್ಭೂತಃ ಪುನಃ ಸ್ಮರಃ ॥ ೩೨ ॥
ಅನಂಗರೂಪೀ ದೇವೋತ್ರ ಸ್ನಾನಾದ್ವೈ ರೂಪವಾನ್ಭವೇತ್ ।
ಇಕ್ಷವಸ್ತತ್ರ ವೈ ದೇಯಾಃ ಸುವರ್ಣಂ ಗಾಸ್ತಥೈವ ಚ ।
ವಸ್ತ್ರಾಣಿ ಚೈವ ವಿಧಿವದ್ಬ್ರಾಹ್ಮಣೇ ವೇದಪಾರಗೇ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಾಮಕುಂಡಮಾಹಾತ್ಮ್ಯ ವರ್ಣನಂ ನಾಮ
ದ್ವಿಶತತಮೋಽಧ್ಯಾಯಃ

---

೩೧. ನೀನು ಕೇಳಿದಂತೆ ಮನ್ಮಥನು ಭಸ್ಮವಾಗಿ ಮರಳಿ ಶಕ್ತಿಯನ್ನು ಪಡೆದ ಕ್ರಮವನ್ನು ನಿನಗೆ ಹೇಳಿರುವೆನು.

೩೨. ಈಶ್ವರನು ಹೇಳುತ್ತಾನೆ:—ಆ ಕೃತಸ್ಮರದ ದಕ್ಷಿಣದಲ್ಲಿ ಮನ್ಮಥನು ಮರಳಿ ಹುಟ್ಟಿದ ಕಾಮಕುಂಡವಿರುವುದು.

೩೩. ಇಲ್ಲಿ ಸ್ನಾನಮಾಡುವುದರಿಂದ ಅಂಗವಿಕಲನು ಸಹ ಸೌಂದರ್ಯವುಳ್ಳವನಾಗುವನು. ಇಲ್ಲಿ ವೇದ ಪಾರಂಗತನಾದ ಬ್ರಾಹ್ಮಣನಿಗೆ ಕಬ್ಬು, ಚಿನ್ನ, ಗೋವು, ಬಟ್ಟೆಗಳನ್ನು ವಿಧಿಯಂತೆ ದಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಾಮಕುಂಡಮಾಹಾತ್ಮ್ಯವರ್ಣನವೆಂಬ
ಇನ್ನೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಏಕೋತ್ತರದ್ವಿಶತತಮೋಽಧ್ಯಾಯಃ

ಕಾಲಭೈರವಸ್ಮಶಾನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಿನ್ಸ್ಥಾನೇ ಮಹಾದೇವಿ ಸ್ಮಶಾನಂ ಕಾಲಭೈರವಂ ।
ಬ್ರಹ್ಮಕುಂಡಂ ವರಾರೋಹೇ ಯಾವದ್ದೇವಃ ಕೃತಸ್ಮರಃ ॥ ೧ ॥
ತತ್ರ ಯೇ ಪ್ರಾಣಿನೋ ದಗ್ಧಾಃ ಮೃತಾಃ ಕಾಲವಿಪರ್ಯಯಾತ್ ।
ತೇ ಸರ್ವೇ ಮುಕ್ತಿಮಾಯಾಂತಿ ಮಹಾಪಾತಕಿನೋಽಪಿ ವಾ ॥ ೨ ॥
ಕೃತಸ್ಮರಾನ್ಮಹಾದೇವಿ ಯಾವನ್ಮಂಕೀಶ್ವರಃ ಸ್ಥಿತಃ ।
ಮಹಾಸ್ಮಶಾನಂ ತದ್ದೇವಿ ಅಪುನರ್ಭವದಾಯಕಂ ॥ ೩ ॥
ತಸ್ಮಿನ್ಸ್ಥಾನೇ ವಹೇದ್ಯತ್ರ ವಿಷುವಂ ಪ್ರಾಣಿನಾಂ ಪ್ರಿಯೇ ।
ತತ್ರೋಷರಂ ಸ್ಮೃತಂ ಕ್ಷೇತ್ರಂ ತನ್ಮೇ ಪ್ರಿಯತರಂ ಸದಾ ॥ ೪ ॥

ಕನ್ನಡದ ಅನುವಾದ

ಕಾಲಭೈರವಸ್ಮಶಾನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ ! ಅಲ್ಲಿ ಬ್ರಹ್ಮಕುಂಡವೆಂದ ಕೃತಸ್ಮರದ ವರೆಗೆ ಕಾಲಭೈರವ ಸ್ಮಶಾನವಿರುವುದು.

೨. ಅಲ್ಲಿ ಕಾಲ ವ್ಯತ್ಯಾಸದಿಂದ ಮೃತರಾಗಿ ಸುಡಲ್ಪಟ್ಟ ಪ್ರಾಣಿಗಳು ಮಹಾ ಪಾತಕಿಗಳಾಗಿದ್ದರೂ ಮೋಕ್ಷವನ್ನು ಹೊಂದುವರು.

೩–೪. ಮಹಾದೇವಿ ! ಕೃತಸ್ಮರದಿಂದ ಮಂಕೀಶ್ವರನೆಡೆಗೆ ಎಲ್ಲಿ ಪ್ರಾಣಿಗಳ ಮೂಗಿನ ವಿವರದಿಂದ ಶ್ವಾಸೋಚ್ಛ್ವಾಸಗಳು ಸರಿಯಾಗಿ ನಡೆಯುವವೊ ಅದು ಮೋಕ್ಷವನ್ನೀಯುವ ಸ್ಮಶಾನವು. ಅಲ್ಲಿ ನನಗೆ ಪ್ರಿಯವಾದ ಊಷರಕ್ಷೇತ್ರವಿರುವುದು.

ಕಲ್ಪಾಂತೇಽಪಿ ನ ಮುಂಚಾಮಿ ಅವಿಮುಕ್ತಾತ್ಪ್ರಿಯಂ ಮಮ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಾಲಭೈರವಸ್ಮಶಾನಮಾಹಾತ್ಮ್ಯವರ್ಣನಂ ನಾಮ
॥ ಏಕೋತ್ತರದ್ವಿಶತತಮೋಽಧ್ಯಾಯಃ ॥

---

೫. ನಾನು ಅವಿಮುಕ್ತಕ್ಕಿಂತ ಪ್ರಿಯವಾದ ಆ ಕ್ಷೇತ್ರವನ್ನು ಪ್ರಳಯಕಾಲದಲ್ಲಿಯೂ ತ್ಯಜಿಸುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಾಲಭೈರವಸ್ಮಶಾನಮಾಹಾತ್ಮ್ಯವರ್ಣನವೆಂಬ
ಇನ್ನೂರೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವ್ಯುತ್ತರದ್ವಿಶತತಮೋಽಧ್ಯಾಯಃ

ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ರಾಮೇಶ್ವರಮನುತ್ತಮಂ ।
ಮಂಕೀಶಾದ್ದಕ್ಷಿಣೇ ಭಾಗೇ ಆಗ್ನೇಯೇ ತು ಕೃತಸ್ಮರಾತ್ ।
ಪೂರ್ವತಸ್ತು ಸರಸ್ವತ್ಯಾ ಬಲಭದ್ರಪ್ರತಿಷ್ಠಿತಂ ॥ ೧ ॥
ಯತ್ರ ಮುಕ್ತೋಽಭವದ್ದೇವಿ ರಾಮೋ ಬ್ರಹ್ಮವಧಾತ್ಕಿಲ ।
ಪಾತಕಾತ್ಪ್ರತಿಲೋಮಾಂ ತಾಮುಗಾಹತ ಸರಸ್ವತೀಂ ॥ ೨ ॥

ದೇವ್ಯುವಾಚ :—

ಕಥಂ ಸ ಪಾತಕಾನ್ಮುಕ್ತಂ ಕಥಂ ಪಾಪಮಭೂತ್ಪುರಾ ।
ಕಥಂ ತತ್ಸ್ಥಾಪಿತಂ ಲಿಂಗಂ ಕಿಂ ಪ್ರಭಾವಂ ವದಸ್ವ ಮೇ ॥ ೩ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಯಾಂ ಶ್ರುತ್ವಾ ಮಾನವೋ ದೇವಿ ಮುಕ್ತಃ ಸಂಸಾರಸಾಗರಾತ್ ।
ಸರ್ವಾನ್ಕಾಮಾನ್ಸ ಲಭತೇ ಸಂತತಂ ಮನಸಿ ಪ್ರಿಯಾನ್ ॥ ೪ ॥

ಕನ್ನಡದ ಅನುವಾದ

ರಾಮೇಶ್ವರಕ್ಷೇತ್ರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಮಂಕೀಶನಿಂದ ದಕ್ಷಿಣದಲ್ಲಿ, ಕೃತಸ್ಮರನಿಂದ ಆಗ್ನೇಯದಲ್ಲಿ, ಸರಸ್ವತೀ ನದಿಯ ಪೂರ್ವದಲ್ಲಿ ಬಲರಾಮನು ಪ್ರತಿಷ್ಠೆಮಾಡಿರುವ ರಾಮೇಶ್ವರನೆಡೆಗೆ ಹೋಗಬೇಕು.

೨. ಇಲ್ಲಿ ಬಲರಾಮನು ಪ್ರತಿಕೂಲವಾಗಿ ಹರಿಯುತ್ತಿರುವ ಸರಸ್ವತೀ ನದಿಯಲ್ಲಿ ಮಿಂದು ಸೂತನ ವಧೆಯಿಂದುಂಟಾದ ಪಾಪದಿಂದ ಮುಕ್ತನಾದನು.

೩. ದೇವಿಯು ಹೇಳುತ್ತಾಳೆ:—ಆ ಬಲರಾಮನು ಹೇಗೆ ಪಾಪಮುಕ್ತನಾದನು ? ಅವನಿಗೆ ಪಾಪವು ಹೇಗೆ ಉಂಟಾಯಿತು ? ಅವನು ಹೇಗೆ ಲಿಂಗವನ್ನು ಸ್ಥಾಪಿಸಿದನು ? ಅದರ ಮಾಹಾತ್ಮ್ಯವೇನು ? ನನಗೆ ಹೇಳು.

೪. ಈಶ್ವರನು ಹೇಳುತ್ತಾನೆ:—ದೇವಿ! ಪಾಪವನ್ನು ನೀಗಿಸುವ ಈ ಕಥೆಯನ್ನು ಕೇಳು. ಇದನ್ನು ಕೇಳಿದ ಮನುಷ್ಯನು ಸಂಸಾರಸಾಗರದಿಂದ ಮುಕ್ತನಾಗಿ ತನ್ನ ಸಕಲ ಮನೋಭೀಷ್ಟಗಳನ್ನೂ ಪಡೆಯುವನು.

ರಾಮಃ ಪೂರ್ವಂ ಪರಾಂ ಪ್ರೀತಿಂ ಕೃತ್ವಾ ಕೃಷ್ಣಸ್ಯ ಲಾಂಗಲೀ ।
ಚಿಂತಯಾಮಾಸ ಬಹುಧಾ ಕಿಂ ಕೃತಂ ಸುಕೃತಂ ಭವೇತ್ ॥ ೫ ॥
ಕೃಷ್ಣೇನ ಹಿ ವಿನಾ ನಾಹಂ ಯಾಸ್ಯೇ ದುರ್ಯೋಧನಾಂತಿಕಂ ।
ಪಾಂಡವಾನ್ವಾ ಸಮಾಶ್ರಿತ್ಯ ಕಥಂ ದುರ್ಯೋಧನಂ ನೃಪಂ ॥ ೬ ॥
ಜಾಮಾತರಂ ತಥಾ ಶಿಷ್ಯಂ ಘಾತಯಿಷ್ಯೇ ನರೇಶ್ವರಂ ।
ತಸ್ಮಾನ್ನ ಪಾರ್ಥಂ ಯಾಸ್ಯಾಮಿ ನಾಪಿ ದುರ್ಯೋಧನಂ ನೃಪಂ ॥ ೭ ॥
ತೀರ್ಥೇಷ್ವಾಪ್ಲಾವಯಿಷ್ಯಾಮಿ ತಾವದಾತ್ಮಾನಮಾತ್ಮನಾ ।
ಕುರೂಣಾಂ ಪಾಂಡವಾನಾಂ ಚ ಯಾವದಂತಾಯ ಕಲ್ಪತೇ ॥ ೮ ॥
ಇತ್ಯಾದಿಶ್ಯ ಹೃಷೀಕೇಶಂ ಪಾರ್ಥದುರ್ಯೋಧನಾವಪಿ ।
ಜಗಾಮ ದ್ವಾರಕಾಂ ಶೌರಿಃ ಸ್ವಸೈನ್ಯೈಶ್ಚ ಪರೀವೃತಃ ॥ ೯ ॥
ಗತ್ವಾ ದ್ವಾರವತೀಂ ರಾಮೋ ಹೃಷ್ಟತುಷ್ಟ ಜನಾಕುಲಾಂ ।
ಸ್ವೈರಂತಃಪುರಗೈಃ ಸಾರ್ಧಂ ಪಪೌ ಪಾನಂ ಹಲಾಯುಧಃ ॥ ೧೦ ॥
ಪೀತಪಾನೋ ಜಗಾಮಾಥ ರೈವತೋದ್ಯಾನಮೃದ್ಧಿವತ್ ।
ಹಸ್ತೇ ಗೃಹೀತ್ವಾ ಸ ಗದಾಂ ರೇವತ್ಯಾದಿಭಿರನ್ವಿತಃ ॥ ೧೧ ॥

---

೫ ಹಿಂದೆ ಹಲವನ್ನು ಧರಿಸಿದ ಬಲರಾಮನು ಕೃಷ್ಣನಿಗೆ ಅತಿಶಯ ಸಂತೋಷವನ್ನುಂಟುಮಾಡಿ ತಾನು ಯಾವ ಕೆಲಸವನ್ನು ಮಾಡಿದರೆ ಸತ್ಕರ್ಮವನ್ನಾಚರಿಸಿದವನಂತಾಗುವುದೆಂದು ಆಲೋಚಿಸಿದನು.

೬-೭. "ನಾನು ಕೃಷ್ಣನನ್ನು ಬಿಟ್ಟು ದುರ್ಯೋಧನನ ಹತ್ತಿರಕ್ಕೆ ಹೇಗೆ ಹೋಗುವೆನು? ಅಥವಾ ಪಾಂಡವರನ್ನಾಶ್ರಯಿಸಿ ಅಳಿಯನೂ, ಶಿಷ್ಯನೂ, ದೊರೆಯೂ, ಆದ ದುರ್ಯೋಧನನನ್ನು ಹೇಗೆ ಕೊಲ್ಲಿಸಲಿ. ಆದ್ದರಿಂದ ಪಾಂಡವರನ್ನೂ ಆಶ್ರಯಿಸುವುದಿಲ್ಲ ; ದುರ್ಯೋಧನನನ್ನೂ ಆಶ್ರಯಿಸುವುದಿಲ್ಲ.

೮. ಕುರು ಪಾಂಡವರ ನಾಶಕ್ಕೆ ಕಾರಣವಾದ ಸಂಗ್ರಾಮವು ಒದಗುವವರೆಗೆ ನಾನು ತೀರ್ಥಯಾತ್ರೆಗೈಯುವೆನು".

೯. ಬಲರಾಮನು ಹೀಗೆ ಕೃಷ್ಣ, ಪಾಂಡವರು, ದುರ್ಯೋಧನ ಇವರಿಗೆ ಹೇಳಿ ತನ್ನ ಸೈನ್ಯದೊಡನೆ ದ್ವಾರಕೆಗೆ ತೆರಳಿದನು.

೧೦. ಅವನು ಸಂತುಷ್ಟರಾದ ಜನರಿಂದ ತುಂಬಿರುವ ದ್ವಾರಕೆಗೆ ಹೋಗಿ ತನ್ನ ಅಂತಃಪುರದ ರಮಣಿಯರೊಡನೆ ಮದ್ಯಪಾನ ಮಾಡಿದನು.

೧೧-೧೨. ಅನಂತರ ಆ ಬಲರಾಮನು ಗದೆಯನ್ನು ಹಿಡಿದುಕೊಂಡು ರೇವತ್ಯಾದಿ ಸ್ತ್ರೀಯರೊಡನೆ ಹೊರಟು ಮತ್ತನಂತೆ ಅಲೆಯುತ್ತ ಎಲೆಯಲ್ಲಿಯೂ ಮರ ಹೂವು

ಸ್ತ್ರೀಕದಂಬಕಮಧ್ಯಸ್ಥೋ ಯಯೌ ಮತ್ತವದಾಸ್ಖಲನ್ ।
ದದರ್ಶ ಚ ವನಂ ವೀರೋ ರಮಣೀಯಮನುತ್ತಮಂ ॥ ೧೨ ॥
ಸರ್ವತ್ರ ತರುಪುಷ್ಪಾಢ್ಯಂ ಶಾಖಾಮೃಗಗಣಾಕುಲಂ ।
ಪದ್ಮಪುಷ್ಪವನೋಪೇತಂ ಸಪಲ್ವಲಮಹಾವನಂ ॥ ೧೩ ॥
ಸ ಶೃಣ್ವನ್ಪ್ರೀತಿಜನಕಾನ್ವನ್ಯಾನ್ಮದಕಲಾನ್ ಶುಭಾನ್ ।
ಶ್ರೋತ್ರರಮ್ಯಾನ್ ಸುಮಧುರಾನ್ ಶಬ್ದಾನ್ಖಗಮುಖೇರಿತಾನ್ ॥ ೧೪ ॥
ಸರ್ವತಃ ಫಲರತ್ನಾಢ್ಯಾನ್ಸರ್ವತಃ ಕುಸುಮೋಜ್ಜ್ವಲಾನ್ ।
ಅಪಶ್ಯತ್ಪಾದಪಾಂಶ್ಚೈವ ವಿಹಂಗೈರನುಮೋದಿತಾನ್ ॥ ೧೫ ॥
ಆಮ್ರಾನಾಮ್ರಾತಕಾನ್ಭವ್ಯಾನ್ನಾಲಿಕೇರಾನ್ಸತಿಂದುಕಾನ್ ।
ಆಬಲ್ವಲಾಂಸ್ತಥಾ ಪೀತಾನ್ದಾಡಿಮಾನ್ಬೀಜಪೂರಕಾನ್ ॥ ೧೬ ॥
ಪನಸಾನ್ ಲಿಕುಚಾನ್ಮೋಚಾತಸ್ತಾಪಾಶ್ಚಾಪಿ ಮನೋಹರಾನ್ ।
ಪಾಲೇವತಾನ್ಕಸಂಕುಲ್ಲಾನ್ನಲಿನಾನಥ ವೇತಸಾನ್ ॥ ೧೭ ॥
ಭಲ್ಲಾತಕಾನಾಮಲಕೀಂಸ್ತಿಂದುಕಾಂಶ್ಚ ಮಹೀಫಲಾನ್ ।
ಇಂಗುದಾನ್ಕರಮರ್ದಾಂಶ್ಚ ಹಾರೀತಕಬಿಭೀತಕಾನ್ ॥ ೧೮ ॥
ಏತಾನನ್ಯಾಂಶ್ಚ ಸ ತರೂನ್ದದರ್ಶ ಯದುನಂದನಃ ।
ತದ್ವೈವಾಶೋಕಪುನ್ನಾಗಕೇತಕೀಬಕುಲಾಂಸ್ತಥಾ ॥ ೧೯ ॥
ಚಂಪಕಾನ್ಸಪ್ತಪರ್ಣಾಂಶ್ಚ ಕರ್ಣಿಕಾರಾನ್ಸಮಾಲತೀಃ ।
ಪಾರಿಜಾತಾನ್ಕೋವಿದಾರಾನ್ಮಂದಾರೇಂದೀವರಾಂಸ್ತಥಾ ॥ ೨೦ ।
ಪಾಟಲಾನ್ಪುಷ್ಪಿತಾನ್ರಂಭಾನ್ದೇವದಾರುದ್ರುಮಾಂಸ್ತಥಾ ।
ಶಾಲಾಂಸ್ತಾಲಾಂಸ್ತಮಾಲಾನ್ನಿಚುಲಾನ್ವಞ್ಜುಲಾಂಸ್ತಥಾ ॥ ೨೧ ॥

ಗಳಿಂದ ಕಂಗೊಳಿಸುವುದೂ, ಕಪಿಗಳಿಂದ ಕೂಡಿರುವುದೂ, ಪದ್ಮವನದಿಂದ ವಿರಾಜಿಸುವುದೂ, ಪಲ್ವಲಗಳುಳ್ಳುದೂ ಆದ ರೈವತೋದ್ಯಾನವನ್ನು ಕಂಡನು.

೧೪–೨೧. ಅವನು ಅಲ್ಲಿ ಕಾಡಿನ ಪಕ್ಷಿಗಳ ಆನಂದಕರವೂ, ಮದದಿಂದ ಇಂಪಾದುದೂ, ಮಂಗಳಕರವಾದುದೂ, ಕಿವಿಗೆ ರಮ್ಯವಾದುದೂ ಆದ ಧ್ವನಿಗಳನ್ನು ಕೇಳುತ್ತ ಎಲ್ಲೆಡೆಯಲ್ಲಿಯೂ ಉತ್ತಮ ಫಲಗಳಿಂದ ಕೂಡಿರುವವೂ, ಹೂವುಗಳಿಂದ ಪ್ರಕಾಶಮಾನವಾದುವೂ, ಪಕ್ಷಿಗಳಿಂದ ಮನೋಹರವೂ ಆದ ಮಾವು, ಅಮಟೆ, ತೆಂಗು, ತುಂಬರ, ಆಬಲ್ವಲ, ದೇವದಾರು, ದಾಳಿಂಬ, ಪೇರಳೆ, ಹಲಸು, ನಿಂಬೆ, ಬಾಳೆ, ತಾಪ, ಕಿತ್ತಳೆ, ಕಮಲ, ಜೊಂಡು, ಗೇರು, ನೆಲ್ಲಿ, ಬಿಲ್ವ, ಗಾರೆ, ಕಮರಿಕೆ, ಆಳಲೆ, ತಾರೆ, ಅಶೋಕ, ಸುರಹೊನ್ನೆ, ಕೇತಕೀ, ಬಕುಲ, ಸಂಪಿಗೆ, ಸಪ್ತಪರ್ಣ, ಬೆಟ್ಟತಾವರೆ, ಜಾಜಿ, ಪಾರಿಜಾತ, ಕೋವಿದಾರ, ಮಂದಾರ, ಕನ್ನೈದಿಲೆ, ಪಾಟಲ, ಶಾಲ, ತಾಲ, ಹೊಂಗೆ, ಬೇವು ಹಬ್ಬಿಗಿಡಗಳನ್ನು ಕಂಡನು.

ಚಕೋರೈಃ ಶತಪತ್ರೈಶ್ಚ ಭೃಂಗರಾಜೈಃ ಸಮಾವೃತಾನ್ ।
ಕೋಕಿಲೈಃ ಕಲವಿಂಕೈಶ್ಚ ಹಾರೀತೈರ್ಜೀವಜೀವಕೈಃ ॥ ೨೨ ॥
ಪ್ರಿಯಪುತ್ರೈಶ್ಚಾತಕೈಶ್ಚ ಶುಕೈರನ್ಯೈರ್ವಿಹಂಗಮೈಃ ।
ಶ್ರೋತ್ರರಮ್ಯಂ ಸುಮಧುರಂ ಕೂಜದ್ಭಿಶ್ಚಾಪ್ಯಧಿಷ್ಠಿತೈಃ ॥ ೨೩ ।
ಸರಾಂಸಿ ಚ ಸಪದ್ಮಾನಿ ಮನೋಜ್ಞಸಲಿಲಾನಿ ಚ ।
ಕುಮುದೈಃ ಪುಂಡರೀಕೈಶ್ಚ ತಥಾ ರೋಚನಕೋತ್ಪಲೈಃ ॥ ೨೪ ॥
ಕಲ್ಹಾರೈಃ ಕಮಲೈಶ್ಚಾಪಿ ಚಾರ್ಚಿತಾನಿ ಸಮಂತತಃ ।
ಕದಂಬೈಶ್ಚಕ್ರವಾಕೈಶ್ಚ ತಥೈವ ಜಲಕುಕ್ಕುಟೈಃ ॥ ೨೫ ॥
ಕಾರಂಡವೈಃ ಪ್ಲವೈರ್ಹಂಸೈಃ ಕೂರ್ಮೈರ್ಮಂಡುಭಿರೇವ ಚ ।
ಏತೈರನ್ಯೈಶ್ಚ ಕೀರ್ಣಾನಿ ತಥಾನ್ಯೈರ್ಜಲವಾಸಿಭಿಃ ॥ ೨೬ ॥
ಕ್ರಮೇಣ ಸಂಚರನ್ರಾಮಃ ಪ್ರೇಕ್ಷಮಾಣೋ ಮನೋರಮಂ ।
ಜಗಾಮಾನುಗತಃ ಸ್ತ್ರೀಭಿರ್ಲತಾಗೃಹಮನುತ್ತಮಂ ॥ ೨೭ ॥
ಸ ದದರ್ಶ ದ್ವಿಜಾಸ್ತತ್ರ ವೇದವೇದಾಂಗಪಾರಗಾನ್ ।
ಕೌಶಿಕಾನ್ಭಾರ್ಗವಾಂಶ್ಚೈವ ಭಾರದ್ವಾಜಾಂಶ್ಚ ಗೌತಮಾನ್ ॥ ೨೮ ॥
ವಿವಿಧೇಷು ಚ ಸಂಭೂತಾನ್ವಂಶೇಷು ದ್ವಿಜಸತ್ತಮಾನ್ ।
ಕಥಾಶ್ರವಣಸೋತ್ಕಂಠಾನುಪಾವಿಷ್ಟಾನ್ಮಹಾತ್ಮನಃ ॥ ೨೯ ॥

೨೨–೨೩. ಅವುಗಳು ಚಕೋರ, ಕೋಗಿಲೆ, ಗುಬ್ಬಚ್ಚಿ, ಹಾರೀತ, ಪ್ರಿಯಪುತ್ರ, ಚಾತಕ, ಗಿಣಿಮುಂತಾದ ಇಂಪಾಗಿ ಕೂಗುವ ಪಕ್ಷಿಗಳಿಂದಲೂ, ಮನೋಹರವಾಗಿದ್ದುವು.

೨೪–೨೬. ಹಾಗೆಯೇ ಆ ಬಲರಾಮನು ನೈದಿಲೆ, ಬೆಳ್ದಾವರೆ, ನೀಲೋತ್ಪಲ, ಕಲ್ಹಾರ ಮೊದಲಾದ ಪುಷ್ಪಗಳಿಂದ ವಿರಾಜಿಸುವುವೂ, ಹಂಸ ಚಕ್ರವಾಕ, ನೀರು ಕೋಳಿ, ಕಾರಂಡವ, ನೀರು ಕಾಗೆ, ಬಕ ಮೊದಲಾದ ಜಲಚರ ಪ್ರಾಣಿಗಳಿಂದ ಕೂಡಿರುವುವೂ, ಮನೋಹರವಾದ ನೀರುಳ್ಳವೂ ಆದ ಸರೋವರಗಳನ್ನೂ ಕಂಡನು.

೨೭. ಅವನು ಸ್ತ್ರೀಯರೊಡನೆ ಸಂಚರಿಸುತ್ತ ಮನೋಹರವಾದ ಲತಾಗೃಹಕ್ಕೆ ಹೋದನು.

೨೮–೩೦. ಅವನು ಅಲ್ಲಿ ವೇದವೇದಾಂಗ ಪಾರಂಗತರೂ, ಕುಶಿಕ, ಭೃಗು ಭಾರದ್ವಾಜ, ಗೌತಮ ಮೊದಲಾದ ನಾನಾ ವಂಶಗಳಲ್ಲಿ ಜನಿಸಿದವರೂ, ಕಥಾ ಶ್ರವಣದಲ್ಲಿ ಕುತೂಹಲವುಳ್ಳವರಾಗಿ ಕೃಷ್ಣಾಜಿನ, ವಸ್ತ್ರ, ಕೂರ್ಚ ಮೊದಲಾದ

ಕೃಷ್ಣಾಜಿನೋತ್ತರೀಯೇಷು ಕೂರ್ಚೇಷು ಚ ಬೃಸೀಷು ಚ ।
ಸೂತಂ ಚ ತೇಷಾಂ ಮಧ್ಯಸ್ಥಂ ಕಥಯಾನಂ ಕಥಾಃ ಶುಭಾಃ ॥ ೩೦ ॥
ಪೌರಾಣಿಕಾಃ ಸುರರ್ಷೀಣಾಮಾದ್ಯಾಯಾಂ ಚರಿತಕ್ರಿಯಾಃ ।
ದೃಷ್ಟ್ವಾ ರಾಮಂ ದ್ವಿಜಾಃ ಸರ್ವೇ ಮಧುಪಾನಾರುಣೇಕ್ಷಣಂ ॥ ೩೧ ॥
ಮತ್ತೋಽಯಮಿತಿ ಮನ್ವಾನಾಃ ಸಮುತ್ತಸ್ಥುಸ್ತ್ವರಾನ್ವಿತಾಃ ।
ಪೂಜಯಂತೋ ಹಲಧರಂ ತಮೃತೇ ಸೂತವಂಶಜಂ ॥ ೩೨ ॥
ತತಃ ಕ್ರೋಧಸಮಾವಿಷ್ಟೋ ಹಲೀ ಸೂತಂ ಮಹಾಬಲಃ ।
ನಿಜಘಾನ ವಿವೃತ್ತಾಕ್ಷಃ ಕ್ಷೋಭಿತಾಶೇಷದಾನವಃ ॥ ೩೩ ॥
ಅನ್ವಾಸಿತೇ ಪದಂ ಬ್ರಾಹ್ಮಂ ತಸ್ಮಿನ್ಸೂತೇ ನಿಪಾತಿತೇ ।
ನಿಷ್ಕ್ರಾಂತಾಸ್ತೇ ದ್ವಿಜಾಃ ಸರ್ವೇ ವನಾತ್ಕೃಷ್ಣಾಜಿನಾಂಬರಾಃ ॥ ೩೪ ॥
ಅವಧೂತಂ ತಥಾತ್ಮಾನಂ ಮನ್ಯಮಾನೋ ಹಲಾಯುಧಃ ।
ಚಿಂತಯಾಮಾಸ ಸುಮಹನ್ಮಯಾ ಪಾಪಮಿದಂ ಕೃತಂ ॥ ೩೫ ॥
ಬ್ರಹ್ಮಾಸನಗತೋ ಹ್ಯೇಷಃ ಯಃ ಸೂತೋ ವಿನಿಪಾತಿತಃ ।
ತಥಾ ಹ್ಯೇತೇ ದ್ವಿಜಾಃ ಸರ್ವೇ ಮಾಮವೇಕ್ಷ್ಯ ವಿನಿರ್ಗತಾಃ ॥ ೩೬ ॥
ಶರೀರಸ್ಯ ಚ ಮೇ ಗಂಧೋ ಲೋಹಸ್ಯೇವಾಸುಖಾವಹಃ ॥

ಆಸನಗಳಲ್ಲಿ ಕುಳಿತವರೂ ಆದ ದ್ವಿಜೋತ್ತಮರನ್ನೂ, ಅವರ ಮಧ್ಯದಲ್ಲಿ ಕುಳಿತು ಶುಭ ಕಥೆಗಳನ್ನು ಹೇಳುತ್ತಿರುವ ಸೂತನನ್ನೂ ನೋಡಿದನು.

೩೧–೩೨. ಆಗ ಸೂತನನ್ನು ಬಿಟ್ಟು ಉಳಿದ ಸುರರ್ಷಿಗು ಪೌರಾಣಿಕರಾದ ದ್ವಿಜವರ್ಯರು ಎಲ್ಲರೂ ಮದ್ಯಪಾನದಿಂದ ಕೆಂಪಾದ ಕಣ್ಣುಗಳುಳ್ಳ ಬಲರಾಮನನ್ನು ಕಂಡು ಅವನು ಮತ್ತನಾಗಿದ್ದನೆಂದರಿತು ಬೇಗನೆ ಮೇಲಕ್ಕೆದ್ದು ಆ ಬಲರಾಮನನ್ನು ಪೂಜಿಸಿದರು.

೩೩. ತರುವಾಯ ಕೋಪಗೊಂಡವನೂ, ಅತಿಬಲಿಷ್ಠನೂ, ಸಕಲದಾನವರನ್ನು ಮರ್ದಿಸಿದವನೂ ಆದ ಬಲರಾಮನು ಕಣ್ಣನ್ನು ತಿರುಗಿಸುತ್ತ ಆ ಸೂತನನ್ನು ಕೊಂದನು.

೩೪. ಪೌರಾಣಿಕ ಸ್ಥಾನದಲ್ಲಿ ಕುಳಿತಿರುವ ಆ ಸೂತನು ಹೀಗೆ ಬೀಳಿಸಲ್ಪಡಲು ಅಲ್ಲಿರುವ ಬ್ರಾಹ್ಮಣರೆಲ್ಲ ಆ ಕಾಡಿನಿಂದ ಕೃಷ್ಣಾಜಿನಾದಿಗಳನ್ನು ತೆಗೆದುಕೊಂಡು ಹೊರಟು ಹೋದರು.

೩೫–೩೬. ಆಗ ಬಲರಾಮನು ತನ್ನನ್ನು ತಿರಸ್ಕರಿಸಲ್ಪಟ್ಟವನನ್ನಾಗಿ ತಿಳಿದು ಹೀಗೆ ಚಿಂತಿಸಿದನು. "ನಾನು ಮಹಾಪಾತಕಗಳನ್ನಾಚರಿಸಿದೆನು. ಬ್ರಹ್ಮಾಸದ

ಆತ್ಮಾನಂ ಚಾವಗಚ್ಛಾಮಿ ಬ್ರಹ್ಮಘ್ನಮಿತಿ ಕುತ್ಸಿತಂ ॥ ೩೭ ॥
ಧಿಙ್ಮಾಮಾರ್ಥಂ ತಥಾ ಮದ್ಯಂ ಮಹಿಮಾನಮಕೀರ್ತಿದಂ ।
ಯೇನಾವಿಷ್ಟೇನ ಸುಮಹನ್ಮಯಾ ಪಾಪಮಿದಂ ಕೃತಂ ॥ ೩೮ ॥
ಸ್ಮೃತ್ಯುಕ್ತಂ ತು ಕರಿಷ್ಯಾಮಿ ಪ್ರಾಯಶ್ಚಿತ್ತಂ ಯಥಾವಿಧಿ ॥
ಉಕ್ತಮಸ್ತ್ಯೇವ ಮನುನಾ ಪ್ರಾಯಶ್ಚಿತ್ತಾದಿಕಂ ಕ್ರಮಾತ್ ॥ ೩೯ ॥
ಜಪಃ ಪ್ರಚ್ಛನ್ನಪಾಪಾನಾಂ ಮನಸ್ಸಂತಾಪ ಏವ ಚ ।
ಭೂತಾತ್ಮನಸ್ತಪೋವಿದ್ಯೇ ಬುದ್ಧೇರ್ಜ್ಞಾನಂ ವಿಶೋಧನಂ ॥ ೪೦ ॥
ಕ್ಷೇತ್ರೇಶ್ವರಸ್ಯ ವಿಜ್ಞಾನಾದ್ವಿಶುದ್ಧಿಃ ಪರಮಾ ಮತಾ ।
ಶರೀರಸ್ಯ ವಿಶುದ್ಧಿಸ್ತು ಪ್ರಾಯಶ್ಚಿತ್ತೈಃ ಪೃಥಗ್ವಿಧೈಃ ॥ ೪೧ ॥
ತತೋಽದ್ಯತಃ ಕರಿಷ್ಯಾಮಿ ವ್ರತಂ ದ್ವಾದಶವಾರ್ಷಿಕಂ ।
ಸ್ವಕರ್ಮಖ್ಯಾಪನಂ ಕುರ್ವನ್ಪ್ರಾಯಶ್ಚಿತ್ತಮನುತ್ತಮಂ ॥ ೪೨ ॥
ಇಯಂ ವಿಶುದ್ಧಿರಜ್ಞಾನಾತ್ ಹತ್ವಾ ಚಾಕಾಮತೋ ದ್ವಿಜಮ್ ।
ಕಾಮತೋ ಬ್ರಾಹ್ಮಣವಧೇ ನಿಷ್ಕೃತಿರ್ನವಿಧೀಯತೇ ॥ ೪೩ ॥
ಯಃ ಕಾಮತೋ ಮಹಾಪಾಪಂ ನರಃ ಕುರ್ಯಾತ್ಕಥಂಚನ ॥ ೪೪ ॥
ನ ತಸ್ಯ ನಿಷ್ಕೃತಿರ್ದೃಷ್ಟಾ ಭೃಗ್ವಗ್ನಿಪತನಾದೃತೇ ।

ದಲ್ಲಿರುವ ಈ ಸೂತನನ್ನು ಕೆಡವಿದೆನು. ಈ ಬ್ರಾಹ್ಮಣರೆಲ್ಲ ನನ್ನನ್ನು ಕಂಡು ಹೊರಟು ಹೋದರು. ನನ್ನ ದೇಹದ ವಾಸನೆಯು ಲೋಹದ ವಾಸನೆಯಂತೆ ಸಹಿಸಲಶಕ್ಯ ವಾಗಿರುವುದು. ನಾನೀಗ ನಿಂದ್ಯವಾದ ಬ್ರಹ್ಮಘ್ನನಾಗಿರುವೆನೆಂದರಿತೆನು.

೩೮. ನಾನು ಸೇವಿಸುತ್ತಿರುವ ಮದ್ಯವು ಅಪಕೀರ್ತಿಯನ್ನೆಸಗುವುದು. ಇದರಿಂದ ಮತ್ತನಾದ ನಾನು ಮಹಾಪಾಪವನ್ನಾಚರಿಸುವೆನು.

೩೯. ಸ್ಮೃತಿಯಲ್ಲಿ ಹೇಳಿರುವ ಪ್ರಾಯಶ್ಚಿತ್ತವನ್ನು ವಿಧಿಯಂತಾಚರಿಸುವೆನು. ಮನುವು ಪ್ರಾಯಶ್ಚಿತ್ತ ಮೊದಲಾದುವುಗಳನ್ನು ಕ್ರಮವಾಗಿ ಹೇಳಿರುವನು.

೪೦-೪೧. ಶರೀರ ಸಂಬಂಧವಾದ ಗುಪ್ತ ಪಾಪಗಳಿಗೆ ಜಪವೂ, ಮನಸ್ಸಿನ ಸಂತಾಪವೂ, ಬುದ್ಧಿಕೃತವಾದ ಪಾಪಗಳಿಗೆ ಪರಮಾತ್ಮಜ್ಞಾನವೂ, ಶರೀರ ಕೃತ ವಾದ ಪಾಪಗಳಿಗೆ ನಾನಾ ವಿಧವಾದ ಪ್ರಾಯಶ್ಚಿತ್ತವೂ ಪರಿಹಾರಕವಾಗಿರುವುದು.

೪೨. ಆದುದರಿಂದ ಈಗ ನಾನು ಮಾಡಿದ ಪಾಪವನ್ನು ಪ್ರಕಟಗೊಳಿಸಿ ಅದರ ಪರಿಹಾರಕ್ಕಾಗಿ ಹನ್ನೆರಡು ವರ್ಷದ ವ್ರತವನ್ನಾಚರಿಸುವೆನು.

೪೩. ಇದು ಅರಿಯದೆ ಬ್ರಾಹ್ಮಣನನ್ನು ಕೊಂದುದಕ್ಕೆ ಪ್ರಾಯಶ್ಚಿತ್ತವಾಗಿರು ವುದು. ತನ್ನಿಚ್ಛೆಯಿಂದ ಬ್ರಾಹ್ಮಣನನ್ನು ಕೊಂದುದಕ್ಕೆ ಪ್ರಾಯಶ್ಚಿತ್ತವಿಲ್ಲ.

೪೪. ತಿಳಿದು ಮಾಡಿದ ಮಹಾಪಾತಕಕ್ಕೆ ಭೃಗುಪಾತವನ್ನೂ ಅಗ್ನಿಯನ್ನು ಪ್ರವೇಶಿಸುವುದನ್ನೂ ಬಿಟ್ಟರೆ ಬೇರೆ ಪ್ರಾಯಶ್ಚಿತ್ತವಿಲ್ಲ.

ಕಾಮಕಾರಕೃತೇಽಪ್ಯಾಹುರೇಕೇ ಶ್ರುತಿನಿದರ್ಶನಾತ್ ॥ ೪೫ ॥
ವಿಧಿಃ ಪ್ರಾಥಮಿಕಸ್ತಸ್ಮಾದ್ದ್ವಿತೀಯೇ ದ್ವಿಗುಣಂ ಚರೇತ್ ।
ತೃತೀಯೇ ತ್ರಿಗುಣಂ ಪ್ರೋಕ್ತಂ ಚತುರ್ಥೇ ನಾಸ್ತಿ ನಿಷ್ಕೃತಿಃ ॥ ೪೬ ॥
ಔಷಧಂ ಸ್ನೇಹಮಾಹಾರಂ ದದದ್ಗೋಬ್ರಾಹ್ಮಣಾದಿಷು ।
ದೀಯಮಾನೇ ವಿಪತ್ತಿಃ ಸ್ಯಾನ್ನ ಸ ಪಾಪೇನ ಲಿಪ್ಯತೇ ॥ ೪೭ ॥
ಅಕಾರಣಂ ತು ಯಃ ಕಶ್ಚಿದ್ದ್ವಿಜಃ ಪ್ರಾಣಾನ್ಪರಿತ್ಯಜೇತ್ ।
ತಸ್ಯೈವ ತತ್ರ ದೋಷಃ ಸ್ಯಾನ್ನ ತು ಯೋಽಸ್ಮೈ ದದಾತಿ ತತ್ ॥ ೪೮ ॥
ಪರಿಷ್ಕೃತೋ ಯದಾ ವಿಪ್ರೋ ಹತ್ವಾಽಽತ್ಮಾನಂ ಮೃತೋ ಯದಿ ।
ನಿರ್ಗುಣಃ ಸಹಸಾ ಕ್ರೋಧಾದ್ಗೃಹಕ್ಷೇತ್ರಾದಿಕಾರಣಾತ್ ॥ ೪೯ ॥
ತ್ರಿವಾರ್ಷಿಕಂ ವ್ರತಂ ಕುರ್ಯಾತ್ಪ್ರತಿಲೋಮಾಂ ಸರಸ್ವತೀಂ ।
ಗಚ್ಛೇದ್ವಾಪಿ ವಿಶುದ್ಧ್ಯರ್ಥಂ ತತ್ಪಾಪಸ್ಯೇತಿ ನಿಶ್ಚಿತಂ ॥ ೫೦ ॥

---

೪೫. ತಿಳಿಯದೆ ಮಾಡಿದ ಪಾಪಕ್ಕೆ, ವಿದ್ವಾಂಸರು ಪ್ರಾಯಶ್ಚಿತ್ತವಿದೆಯೆಂದು ಹೇಳುವರು. ತಿಳಿದು ಮಾಡಿದ ಪಾಪಕ್ಕೂ ವೇದದಲ್ಲಿ ಪ್ರಾಯಶ್ಚಿತ್ತವು ವಿಹಿತವಾಗಿರುವುದೆಂದು ಇನ್ನು ಕೆಲವು ವಿದ್ವಾಂಸರು ಹೇಳುವರು

೪೬. ಎರಡನೆಯ ಸಾರಿ ಮಾಡಿದ ಪಾಪಕ್ಕೆ, ಮೊದಲನೆಯಸಾರಿ ಮಾಡಿದ ಪಾಪಕ್ಕೆ ವಿಹಿತವಾಗಿರುವ ಪ್ರಾಯಶ್ಚಿತ್ತಕ್ಕಿಂತ ಇಮ್ಮಡಿಯಾಗಿಯೂ, ಮೂರನೆಯ ಪಾಪಕ್ಕೆ ಮೂರರಷ್ಟು ಪ್ರಾಯಶ್ಚಿತ್ತವನ್ನಾಚರಿಸಬೇಕು. ನಾಲ್ಕನೆಯ ಸಾರಿ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಿಲ್ಲ.

೪೭. ಗೋಬ್ರಾಹ್ಮಣಾದಿಗಳಿಗೆ ಔಷಧ, ಆಹಾರಗಳನ್ನು ಕೊಡುವಾಗಲೂ, ಅಭ್ಯಂಜನಮಾಡುವಾಗಲೂ ಅವರು ಮಡಿದರೆ ಅದರಿಂದ ಆಹಾರಾದಿಗಳನ್ನು ಕೊಟ್ಟವರಿಗೆ ಪಾಪವು ಸಂಬಂಧಿಸುವುದಿಲ್ಲ.

೪೮. ಕಾರಣವಿಲ್ಲದೆ ಬ್ರಾಹ್ಮಣನು ಪ್ರಾಣವನ್ನು ತ್ಯಜಿಸಿದರೆ ಆ ದೋಷವು ಆ ಬ್ರಾಹ್ಮಣನಿಗೆ ಸಂಬಂಧಿಸುವುದು. ಔಷಧಾದಿಗಳನ್ನಿತ್ತವನಿಗೆ ಸಂಭವಿಸುವುದಿಲ್ಲ.

೪೯—೫೦. ನಿರ್ಗುಣನಾದ ಬ್ರಾಹ್ಮಣನು ಅಲಂಕಾರ ಮಾಡಿಕೊಂಡು ಮನೆ, ಹೊಲ ಮೊದಲಾದುವುಗಳಿಗಾಗಿ ಸಿಟ್ಟಾಗಿ ಆತ್ಮಹತ್ಯೆಯಿಂದ ಮಡಿದರೆ ಆ ಪಾಪದ ಪರಿಹಾರಕ್ಕಾಗಿ ಮೂರು ವರ್ಷ ವ್ರತವನ್ನು ಮಾಡಬೇಕು. ಅಥವಾ ಪ್ರತಿಯಾಗಿ ಕೋಪಕೊಂಡು ಮನಃಪೂರ್ವಕವಾಗಿ ಹೊಡೆಯಲ್ಪಟ್ಟವನನ್ನು ತಿರುಗಿ ಸಂತೋಷ

ಉದ್ದಿಶ್ಯ ಕುಪಿತೋ ಹತ್ವಾ ತೋಷಿತೋ ನಾಶಯೇತ್ಪುನಃ ।
ತಸ್ಮಿನ್ಮೃತೇ ನ ದೋಷೋಽಸ್ತಿ ದ್ವಯೋರುಚ್ಛ್ರಾವಣೇ ಕೃತೇ ॥ ೫೧ ॥
ಷಂಡಂ ತು ಬ್ರಾಹ್ಮಣಂ ಹತ್ವಾ ಶೂದ್ರಹತ್ಯಾವ್ರತಂ ಚರೇತ್ ।
ಬಹೂನಾಮೇಕಕಾರ್ಯಾಣಾಂ ಸರ್ವೇಷಾಂ ಶಸ್ತ್ರಧಾರಿಣಾಂ ॥ ೫೨ ॥
ಯದ್ಯೇಕೋ ಘಾತಯೇತ್ತತ್ರ ಸರ್ವೇ ತೇ ಘಾತಕಾಃ ಸ್ಮೃತಾಃ ।
ಪ್ರಾಯಶ್ಚಿತ್ತೇ ವ್ಯವಸಿತೇ ಯದಿ ಕರ್ತಾ ವಿಪದ್ಯತೇ ॥ ೫೩ ॥
ಏನಸ್ತತ್ಪ್ರಾಪ್ನುಯಾದೇನಂ ಇಹ ಲೋಕೇ ಪರತ್ರ ಚ ।
ತದಹಂ ಕಿಂ ಕರೋಮ್ಯೇಷ ಕ್ವ ಗಚ್ಛಾಮಿ ದುರಾತ್ಮವಾನ್ ॥ ೫೪ ॥
ಧಿಙ್ಮಾಂ ಚ ಪಾಪಚರಿತಂ ಮಹಾದುಷ್ಕೃತಕರ್ಮಿಣಂ ॥ ೫೫ ॥

ಈಶ್ವರ ಉವಾಚ ;—

ಇತ್ಯೇವಂ ವಿಲಪನ್ಯಾವಚ್ಛೋಕಾಕುಲಿತಮಾನಸಃ ।
ತಾವದಾಕಾಶಸಂಭೂತಾ ವಾಗುವಾಚಾಶರೀರಿಣೀ ॥ ೫೬ ॥
ಭೋ ಭೋ ರಾಮ ನ ಸಂತಾಪಸ್ತ್ವಯಾ ಕಾರ್ಯಃ ಕಥಂಚನ ।
ಗಚ್ಛ ಪ್ರಾಭಾಸಿಕಂ ಕ್ಷೇತ್ರಂ ತತ್ರ ದೇವೀ ಸರಸ್ವತೀ ॥ ೫೭ ॥

ಗೊಳಿಸಬೇಕು. ಈ ವಿಷಯವನ್ನು ಇಬ್ಬರಿಗೆ ತಿಳಿಸಿದರೆ ಅವನು ಮಡಿದರೂ ದೋಷ ವುಂಟಾಗುವುದಿಲ್ಲ.

೫೨–೫೫. ನಪುಂಸಕ ಬ್ರಾಹ್ಮಣನನ್ನು ಕೊಂದರೆ ಶೂದ್ರನನ್ನು ಕೊಂದವನು ಮಾಡಬೇಕಾದ ವ್ರತವನ್ನಾಚರಿಸಬೇಕು. ಒಂದೇ ಕೆಸಲವನ್ನು ನೆರವೇರಿಸಲೋಸುಗ ಶಸ್ತ್ರಧಾರಿಗಳಾದವರಲ್ಲಿ ಒಬ್ಬನು ಮಾರಕನಾದರೆ ಗುಂಪಿನವರೆಲ್ಲರೂ ಮಾರಕರೆನಿಸಿ ಕೊಳ್ಳುವರು. ಪ್ರಾಯಶ್ಚಿತ್ತವನ್ನು ಮಾಡಲಾರಂಭಿಸಿ ಕರ್ತನು ಮೃತನಾದರೆ ಆ ಪಾಪವು ಇವನನ್ನು ಇಹಪರಲೋಕಗಳಲ್ಲಿ ಸಂಬಂಧಿಸುವುದು. ಆದುದರಿಂದ ದುರಾತ್ಮನಾದ ನಾನು ಏನನ್ನು ಮಾಡಲಿ? ಎಲ್ಲಿಗೆ ಹೋಗಲಿ? ಮಹಾಪಾತಕವನ್ನು ಮಾಡಿದ ನನಗೆ ಧಿಕ್ಕಾರವಿರಲಿ.

೫೬. ಈಶ್ವರನು ಹೇಳುತ್ತಾನೆ:—ಹೀಗೆ ಬಲರಾಮನು ದುಃಖದಿಂದ ಗೋಳಾಡುತ್ತಿರಲು ಆಕಾಶದಲ್ಲಿ ಅಶರೀರವಾಣಿಯಾಯಿತು.

೫೭. "ಎಲೈ ಬಲರಾಮನೆ! ನೀನು ಸಂತಾಪಗೊಳ್ಳಬೇಡ. ಸರಸ್ವತಿಯಿರುವ ಪ್ರಾಭಾಸಿಕಕ್ಷೇತ್ರಕ್ಕೆ ಹೋಗು.

ಪಂಚಸ್ರೋತಾಃ ಸ್ಥಿತಾ ತತ್ರ ಪಂಚಪಾತಕನಾಶಿನೀ ।
ನದೀನಾಂ ಪ್ರವರಾ ಸಾ ತು ಬ್ರಹ್ಮಭೂತಾ ಸರಸ್ವತೀ ॥ ೫೮ ॥
ಏಕತಃ ಸರ್ವತೀರ್ಥಾನಿ ಬ್ರಹ್ಮಾಂಡೇ ಸರಾಚರೇ ।
ಗಂಗಾದೀನಿ ನರಶ್ರೇಷ್ಠ ತೇಷಾಂ ಪುಣ್ಯಾ ಸರಸ್ವತೀ ॥ ೫೯ ॥
ತಾವದ್ಗರ್ಜಂತಿ ಪಾಪಾನಿ ಬ್ರಹ್ಮಹತ್ಯಾದಿಕಾನಿ ಚ ।
ಯಾವನ್ನ ದೃಶ್ಯತೇ ದೇವೀ ಪ್ರಭಾಸಸ್ಥಾ ಸರಸ್ವತೀ ॥ ೬೦ ॥
ತಸ್ಮಾತ್ತತ್ರೈವ ಗಚ್ಛತ್ವಂ ಯತ್ರ ದೇವೀ ಸರಸ್ವತೀ ।
ನಾನ್ಯೈಸ್ತೀರ್ಥೈಃ ಸಹಸ್ರೈಸ್ತು ಕರ್ತುಂ ಶಕ್ಯೋ ವಿಕಲ್ಮಷಃ ॥ ೬೧ ॥
ತನ್ಮಾತ್ಕಾರ್ಷೀರ್ವಿಲಂಬಂ ತ್ವಂ ಗಚ್ಛ ತೀರಂ ಮಹೋದಧೇಃ ।
ಪ್ರಾಭಾಸಿಕೇ ಮಹಾದೇವೀಂ ಪ್ರತಿಲೋಮಾಂ ವಿಗಾಹಯ ॥ ೬೨ ॥
ತತ್ರೈವಾರಾಧಯ ವಿಭುಂ ಲಿಂಗರೂಪಿಣಮೀಶ್ವರಂ ।
ಪ್ರತಿಷ್ಠಾಪ್ಯ ಮಹಾಪಾಪಾಚ್ಛರೀರಾತ್ತ್ವಂ ವಿಮೋಕ್ಷ್ಯಸಿ ॥ ೬೩ ॥
ಇತಿ ಶ್ರುತ್ವಾ ವಚೋ ರಾಮಃ ಪರಮಾನಂದಪೂರಿತಃ ।
ಪ್ರಭಾಸಕ್ಷೇತ್ರಗಮನೇ ಮತಿಂ ಚಕ್ರೇ ಮಹಾಮನಾಃ ॥ ೬೪ ॥

---

೫೮. ಅಲ್ಲಿ ಪಂಚಮಹಾಪಾತಕಗಳನ್ನು ನಾಶಗೊಳಿಸುವ ಐದು ನದಿಗಳಿರುವುವು. ಬ್ರಹ್ಮನಿಂದ ಸಂಭೂತವಾದ ಅಲ್ಲಿರುವ ಸರಸ್ವತೀನದಿಯು ನದಿಗಳಲ್ಲಿ ಉತ್ತಮವಾದುದು.

೫೯. ಪವಿತ್ರವಾದ ಆ ಸರಸ್ವತೀನದಿಯು ಚರಾಚರಾತ್ಮಕವಾದ ಬ್ರಹ್ಮಾಂಡದಲ್ಲಿರುವ ಗಂಗಾದಿ ಸಕಲ ತೀರ್ಥಗಳಲ್ಲಿ ಶ್ರೇಷ್ಠವಾದುದು.

೬೦. ಮನುಷ್ಯನು ಪ್ರಭಾಸಕ್ಷೇತ್ರದಲ್ಲಿರುವ ಸರಸ್ವತೀನದಿಯನ್ನು ನೋಡುವವರೆಗೆ ಅವನಲ್ಲಿರುವ ಬ್ರಹ್ಮಹತ್ಯೆ ಮೊದಲಾದ ಪಾಪಗಳು ಗರ್ಜಿಸುವುವು.

೬೧. ಆದ್ದರಿಂದ ನೀನು ಸರಸ್ವತೀನದಿಯೆಡೆಗೆ ಹೋಗು. ಇತರ ಸಾವಿರ ತೀರ್ಥಗಳಿಂದಲೂ ನೀನು ಪಾಪರಹಿತನಾಗಲು ಸಮರ್ಥನಲ್ಲ.

೬೨–೬೩. ಆದ್ದರಿಂದ ನೀನು ವಿಳಂಬಮಾಡದೆ ಮಹೋದಧಿಯತೀರವನ್ನು ಹೊಂದಿ ಪ್ರಾಭಾಸಿಕಕ್ಷೇತ್ರದಲ್ಲಿರುವ ಪ್ರತಿಲೋಮವಾಗಿ ಹರಿಯುವ ಸರಸ್ವತೀನದಿಯಲ್ಲಿ ಮಿಂದು ಲಿಂಗರೂಪಿಯಾದ ಮಹೇಶ್ವರನನ್ನು ಪ್ರತಿಷ್ಠೆ ಮಾಡಿ ಪೂಜಿಸು. ಇದರಿಂದ ನೀನು ಈ ಶರೀರದಿಂದೆಸಗಿದ ಮಹಾಪಾಪದಿಂದ ಮುಕ್ತನಾಗುವೆ. ”

೬೪. ಬಲರಾಮನು ಈ ಅಶರೀರವಾಣಿಯ ಮಾತನ್ನು ಕೇಳಿ ಪರಮಾನಂದಗೊಂಡು ಪ್ರಭಾಸಕ್ಷೇತ್ರಕ್ಕೆ ಹೋಗಲು ನಿಶ್ಚಯಿಸಿದನು.

ತತಃ ಸ್ವಸೈನ್ಯಸಂಯುಕ್ತೋ ದ್ರವ್ಯೋಪಸ್ಕರಸಂಯುತಃ ।
ಆಜಗಾಮ ಮಹಾಕ್ಷೇತ್ರಂ ಪ್ರಭಾಸಮಿತಿ ವಿಶ್ರುತಂ ॥ ೬೫ ॥
ದೃಷ್ಟ್ವಾ ಮನೋರಮಂ ತೀರ್ಥಂ ಸರಸ್ವತ್ಯಬ್ಧಿಸಂಗಮೇ ।
ಚಕಾರ ಹೃದಿ ಸಂಕಲ್ಪಂ ಪ್ರತಿಲೋಮಾವಗಾಹನೇ ॥ ೬೬ ॥
ಆಹೂಯ ಬ್ರಾಹ್ಮಣಾಂಸ್ತತ್ರ ಪ್ರಭಾಸಕ್ಷೇತ್ರವಾಸಿನಃ ।
ಸಮ್ಯಗ್ಯಾತ್ರಾವಿಧಾನೇನ ಯಾತ್ರಾಂ ತತ್ರಾಕರೋದ್ವಿಭುಃ ॥ ೬೭ ॥
ಯಾನಿ ಪ್ರಾಭಾಸಿಕೇ ಕ್ಷೇತ್ರೇ ತೀರ್ಥಾನಿ ವಿವಿಧಾನಿ ತು ।
ರವಿಯೋಜನಸಂಸ್ಥಾನಿ ತೇಷು ಯಾತ್ರಾಂ ಚಕಾರ ಸಃ ॥ ೬೮ ॥
ಪ್ರತ್ಯೇಕಂ ಚ ದದೌ ತೇಷು ದಾನಾನಿ ವಿವಿಧಾನಿ ತು ।
ತಥಾಽಧಃ ಸ್ಥಾಪಯಾಮಾಸ ಸರಸ್ವತ್ಯಬ್ಧಿಸಂಗಮೇ ॥ ೬೯ ॥
ಪೂರ್ವಭಾಗೇ ಮಹಾಲಿಂಗಂ ಕೃತ್ವಾ ಯಜ್ಞವಿಧಿಕ್ರಿಯಾಂ ।
ಏವಂ ಕೃತೇ ಮಹಾದೇವಿ ವಿಮುಕ್ತಃ ಪಾತಕೈರಭೂತ್ ॥ ೭೦ ॥
ನಿರ್ಮಲಾಂಗಸ್ತತೋ ದೇವೀ ದಿಗಾದಿ ದಶ ಸಂಸ್ಥಿತಃ ।
ತತಸ್ತಾಂ ಚೈವ ಸ ಸ್ನಾತ್ವಾ ಪ್ರತಿಲೋಮಾಂ ಕ್ರಮಾದ್ಯಯೌ ।
ಪ್ಲಕ್ಷಾವಹರಣಂ ಯಾವತ್ಸಮುದ್ರಾಚ್ಚ ಹಿಮಾಹ್ವಯಂ ॥ ೭೧ ॥

---

೬೫. ತರುವಾಯ ಅವರಂತೆ ಅವನು ತನ್ನ ಸೈನ್ಯದಿಂದಲೂ, ದ್ರವ್ಯೋಪಕರಣಗಳಿಂದಲೂ ಸಹಿತನಾಗಿ ಪ್ರಭಾಸಕ್ಷೇತ್ರಕ್ಕೆ ಬಂದನು.

೬೬. ಅವನು ಸರಸ್ವತೀ ಸಾಗರ ಸಂಗಮದಲ್ಲಿರುವ ಆ ಮನೋಹರವಾದ ತೀರ್ಥವನ್ನು ಕಂಡು ಪ್ರತಿಲೋಮಸರಸ್ವತಿಯಲ್ಲಿ ಸ್ನಾನಮಾಡಲು ಸಂಕಲ್ಪಿಸಿದನು.

೬೭. ಅವನು ಅಲ್ಲಿ ವಾಸವಾಗಿರುವ ಬ್ರಾಹ್ಮಣರನ್ನು ಕರೆದು ವಿಧಿಯಂತೆ ಯಾತ್ರೆಗೈದನು.

೬೮. ಹನ್ನೆರಡು ಯೋಜನ ವಿಸ್ತೀರ್ಣವಾದ ಆ ಕ್ಷೇತ್ರದಲ್ಲಿರುವ ವಿವಿಧ ತೀರ್ಥಗಳಲ್ಲಿಯೂ ಯಾತ್ರೆಮಾಡಿದನು.

೬೯–೭೦. ಅವನು ಆ ತೀರ್ಥಗಳಲ್ಲಿ ಬೇರೆ ಬೇರೆಯಾಗಿ ನಾನಾ ದಾನಗಳನ್ನಿತ್ತು ಸರಸ್ವತೀಸಮುದ್ರ ಸಂಗಮದ ಪೂರ್ವಭಾಗದಲ್ಲಿ ಕೆಳಗೆ ಯಜ್ಞವಿಧಿಪುರಸ್ಸರವಾಗಿ ಮಹಾಲಿಂಗವನ್ನು ಸ್ಥಾಪಿಸಿ ಪಾತಕಗಳಿಂದ ಮುಕ್ತನಾದನು.

೭೧. ಬಳಿಕ ಶುದ್ಧದೇಹನಾಗಿ ಹತ್ತು ದಿನಗಳು ಅಲ್ಲಿ ವಾಸಿಸಿ ಪ್ರತಿಲೋಮ ಸರಸ್ವತೀ ನದಿಯಲ್ಲಿ ಮಿಂದು ಸಮುದ್ರದಿಂದ ಹಿಮಾಚಲದ ಪ್ಲಕ್ಷಾವಹರಣದವರೆಗೆ ಕ್ರಮವಾಗಿ ಯಾತ್ರೆಮಾಡಿದನು.

ಏವಮುಕ್ತಃ ಸ ಪಾಪೌಘೈಃ ರಾಮೋಽಭೂತ್ಪ್ರಥಿತಂ ಪ್ರಿಯೇ ।
ತಸ್ಯ ಲಿಂಗಸ್ಯ ಮಾಹಾತ್ಮ್ಯಾತ್ಸರಸ್ವತ್ಯಾಃ ಪ್ರಸಾದತಃ ॥ ೭೨ ॥
ಯಸ್ತತ್ಪೂಜಯತೇ ದೇವಿ ಲಿಂಗಂ ಪಾಪಭಯಾಪಹಂ ।
ರಾಮೇಶ್ವರೇತಿ ಕಥಿತಂ ಸೋಽಪಿ ಮುಚ್ಯೇತ ಪಾತಕಾತ್ ॥ ೭೩ ॥
ಅಷ್ಟಮ್ಯಾಂ ಚ ವಿಶೇಷೇಣ ಬ್ರಹ್ಮಕೂರ್ಚವಿಧಾನತಃ ।
ಯಸ್ತತ್ರ ಕುರುತೇ ದೇವಿ ಸೋಽಶ್ವಮೇಧಫಲಂ ಲಭೇತ್ ॥ ೭೪ ॥
ಸ್ನಾತ್ವಾ ತತ್ರ ವರಾರೋಹೇ ಸರಸ್ವತ್ಯಬ್ಧಿಸಂಗಮೇ ।
ರಾಮೇಶ್ವರೇತಿ ನಾಮಾನಂ ತತಃ ಸಂಪೂಜ್ಯ ಶಂಕರಂ ।
ಗೋದಾನಂ ತತ್ರ ದೇಯಂ ತು ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೭೫ ॥
ಇತ್ಯೇವಂ ಕಥಿತಂ ದೇವಿ ರಾಮೇಶ್ವರಮಹೋದಯಂ ।
ಯಚ್ಛ್ರುತ್ವಾ ಮಾನವಃ ಸಮ್ಯಕ್ಛ್ರದ್ಧಾವಾನ್ಪ್ರಾಪ್ನುಯಾದ್ದಿವಂ ॥ ೭೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರಾಮೇಶ್ವರಮಾಹಾತ್ಮ್ಯವರ್ಣನಂ ನಾಮ
ದ್ವ್ಯುತ್ತರದ್ವಿಶತತಮೋಽಧ್ಯಾಯಃ

---

೭೨. ಪ್ರಿಯಳೆ! ಹೀಗೆ ಬಲರಾಮನು ಆ ಲಿಂಗದ ಮಾಹಾತ್ಮ್ಯದಿಂದಲೂ ಸರಸ್ವತಿಯ ಅನುಗ್ರಹದಿಂದಲೂ ಪಾಪರಹಿತನಾಗಿ ಲೋಕವಿಖ್ಯಾತನಾದನು.

೭೩. ದೇವಿ! ಪಾಪ ಭಯವನ್ನು ನಿವಾರಿಸುವ ಆ ರಾಮೇಶ್ವರಲಿಂಗವನ್ನು ಪೂಜಿಸುವ ಮಾನವನು ಪಾಪಮುಕ್ತನಾಗುವನು.

೭೪. ದೇವಿ! ಅಷ್ಟಮೀ ದಿನ ಬ್ರಹ್ಮಕೂರ್ಚವಿಧಿಯಿಂದ ಆ ಲಿಂಗವನ್ನು ಪೂಜಿಸಿದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

೭೫. ಯಾತ್ರಾಫಲವನ್ನಪೇಕ್ಷಿಸುವವರು ಸರಸ್ವತೀಸಾಗರಸಂಗಮದಲ್ಲಿ ಮಿಂದು ರಾಮೇಶ್ವರನನ್ನು ಪೂಜಿಸಿ ಗೋವುಗಳನ್ನು ದಾನ ಮಾಡಬೇಕು.

೭೬. ದೇವಿ! ಹೀಗೆ ನಿನಗೆ ರಾಮೇಶ್ವರನ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಶ್ರದ್ಧೆಯಿಂದ ಕೇಳಿದ ಮನುಷ್ಯನು ಸ್ವರ್ಗಲೋಕವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರಾಮೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರ್ಯಶೀತ್ಯುತ್ತರಶತತಮೋಽಧ್ಯಾಯಃ

ಮಂಕೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಂಕೀಶ್ವರಮಹಾಲಯಂ ।
ರಾಮೇಶಾದುತ್ತರೇ ಭಾಗೇ ದೇವಮಾತುಃ ಸಮೀಪಗಂ ॥ ೧ ॥
ಅರ್ಕಸ್ಥಲಾತ್ತತೋ ಯಾಮ್ಯೇ ಪೂರ್ವತಶ್ಚ ಕೃತಸ್ಮರಾತ್ ।
ಲಿಂಗಂ ಮಹಾಪ್ರಭಾವಂ ತು ಮಂಕಿನಾ ಸ್ಥಾಪಿತಂ ಪುರಾ ॥ ೨ ॥
ತಂ ದೃಷ್ಟ್ವಾ ಮಾನವಃ ಸಮ್ಯಗಶ್ವಮೇಧಫಲಂ ಲಭೇತ್ ॥ ೩ ॥

ದೇವ್ಯುವಾಚ :—

ಕೋಽಸೌ ಮಂಕಿರ್ಮಹಾದೇವ ಕಥಂ ಲಿಂಗಂ ಪ್ರತಿಷ್ಠಿತಂ ।
ಕಿಂ ಪ್ರಭಾವಂ ಚ ತಲ್ಲಿಂಗಮೇತನ್ಮೇ ವದ ವಿಸ್ತರಾತ್ ॥ ೪ ॥

ಕನ್ನಡದ ಅನುವಾದ

ಮಂಕೀಶ್ವರಮಾಹಾತ್ಮ್ಯವರ್ಣನ

೧–೨. ಮಹಾದೇವಿ! ಅನಂತರ ರಾಮೇಶ್ವರನ ಉತ್ತರದಲ್ಲಿಯೂ, ದೇವಮಾತೆಯ ಸಮೀಪದಲ್ಲಿಯೂ, ಅರ್ಕಸ್ಥಳದ ದಕ್ಷಿಣದಲ್ಲಿಯೂ, ಕೃತಸ್ಮರನ ಪೂರ್ವದಲ್ಲಿಯೂ ಮಂಕಿಯೆಂಬ ದ್ವಿಜವರ್ಯನು ಸ್ಥಾಪಿಸಿರುವ ಅತಿಶಯ ಮಾಹಾತ್ಮ್ಯವುಳ್ಳ ಮಂಕೀಶ್ವರ ಲಿಂಗದೆಡೆಗೆ ಹೋಗಬೇಕು.

೩. ಅವನನ್ನು ನೋಡಿದ ಮನುಷ್ಯನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

೪. ದೇವಿಯು ಹೇಳುತ್ತಾಳೆ:—ಮಹಾದೇವ! ಈ ಮಂಕಿಯೆಂಬುವನಾರು? ಅವನು ಲಿಂಗವನ್ನು ಹೇಗೆ ಪ್ರತಿಷ್ಠೆಮಾಡಿದನು? ಅದರ ಮಾಹಾತ್ಮ್ಯವೇನು? ಇದನ್ನು ನನಗೆ ವಿಸ್ತಾರವಾಗಿ ಹೇಳು.

ಈಶ್ವರ ಉವಾಚ :—
ಮಂಕಿರ್ನಾಮಾಭವತ್ಪೂರ್ವಂ ಕುಬ್ಜಕಾಯೋ ದ್ವಿಜೋತ್ತಮಃ
ಪ್ರಭಾಸಂ ಕ್ಷೇತ್ರಮಾಸಾದ್ಯ ತಪಸ್ತೇಪೇ ಮಹತ್ತಮಂ ॥ ೫ ॥
ಪ್ರತಿಷ್ಠಾಪ್ಯ ಮಹಾದೇವಂ ಶಿವಭಕ್ತಿಪರಾಯಣಃ ।
ನ ತುತೋಷ ಹರಸ್ತಸ್ಯ ಬಹುವರ್ಷಗಣಾರ್ಚಿತಃ ॥ ೬ ॥
ತಸ್ಯೈವಂ ತಪ್ಯಮಾನಸ್ಯ ಸಿದ್ಧಿಂ ಪ್ರಾಪ್ತಾ ಹ್ಯನೇಕಶಃ ।
ತತ್ರಾರಾಧ್ಯ ಮಹಾದೇವಂ ಸ್ವರ್ಗಲೋಕಮಿತೋ ಗತಾಃ ॥ ೭ ॥
ತತೋ ದುಃಖಂ ಸಮುಭವನ್ಮಂಕೇಸ್ತತ್ರ ವರಾನನೇ ।
ತಸ್ಮಾನ್ಮೇ ಭಗವಾಂಸ್ತುಷ್ಟಿಂ ನ ಗಚ್ಛತಿ ಮಹೇಶ್ವರಃ ॥ ೮ ॥
ತತಸ್ತ್ರೀವ್ರತರಂ ಚಕ್ರೇ ಕೃತ್ವಾ ತೀವ್ರನಿವರ್ತನಂ ।
ಏವಂ ವೃದ್ಧತ್ವಮಾಪನ್ನೋ ಜಪಧ್ಯಾನಪರಾಯಣಃ ॥ ೯ ॥
ತಸ್ಯ ತುಷ್ಟೋ ಮಹಾದೇವೋ ವಯಸೋಽಂತೇ ವರಂ ದದೌ ।
ಪರಿತುಷ್ಟೋಽಸ್ಮಿ ತೇ ಮಂಕೇ ಬ್ರೂಹಿ ಕಿಂ ಕರವಾಣಿ ತೇ ॥ ೧೦ ॥

---

೫. ಈಶ್ವರನು ಹೇಳುತ್ತಾನೆ :—ಹಿಂದೆ ಮಂಕಿಯೆಂಬ ಗೂನು ಬೆನ್ನಿನ ದ್ವಿಜವರ್ಯನಿದ್ದನು. ಅವನು ಪ್ರಭಾಸಕ್ಷೇತ್ರವನ್ನು ಹೊಂದಿ ಅತಿಶಯವಾದ ತಪಸ್ಸನ್ನಾಚರಿಸಿದನು.

೬. ಹಾಗೆಯೇ ಶಿವಭಕ್ತಿನಿರತನಾಗಿ ಮಹಾದೇವನನ್ನು ಪ್ರತಿಷ್ಠೆಮಾಡಿದನು. ಅವನು ಶಿವನನ್ನು ಅನೇಕ ವರ್ಷಕಾಲ ಪೂಜಿಸಿದರೂ ಅವನು ಆ ಬ್ರಾಹ್ಮಣನಲ್ಲಿ ಸಂತುಷ್ಟನಾಗಲಿಲ್ಲ.

೭. ಅವನು ಹೀಗೆ ತಪಸ್ಸನ್ನು ಮಾಡುತ್ತಿರುವಾಗಲೆ ಅನೇಕ ಮಂದಿ ತಪಸ್ವಿಗಳು ಮಹಾದೇವನನ್ನಾರಾಧಿಸಿ ಸ್ವರ್ಗಕ್ಕೆ ತೆರಳಿದರು.

೮. ತರುವಾಯ ಮಂಕಿಯು "ಶಂಕರನು ನನ್ನ ವಿಷಯದಲ್ಲಿ ಏಕೆ ಸಂತುಷ್ಟನಾಗಲಿಲ್ಲ." ಎಂದು ಅತ್ಯಂತ ದುಃಖಗೊಂಡನು.

೯. ಅನಂತರ ಮಹಾದೇವನು ಒಲಿದ ಹೊರತು ತಪಸ್ಸಿನಿಂದ ಹಿಂದಿರುಗುವುದಿಲ್ಲವೆಂದು ಅವನು ಕಠಿನ ತಪಸ್ಸನ್ನಾಚರಿಸಿದನು, ಹೀಗೆ ಜಪಾಧ್ಯಾನ ನಿರತನಾದ ಅವನು ವೃದ್ಧನಾದನು.

೧೦. ಅವನು ಮುದುಕನಾದ ಮೇಲೆ ಮಹಾದೇವನು ಅವನಲ್ಲಿ ಸಂತುಷ್ಟನಾಗಿ "ಮಂಕಿಯೆ! ನಿನ್ನ ವಿಷಯದಲ್ಲಿ ಮೆಚ್ಚಿರುವೆನು. ವರವನ್ನು ವರಿಸು. ನಿನಗೆ ಏನನ್ನು ಕೊಡಲಿ" ಎಂದನು.

ಮಂಕಿರುವಾಚ :—

ಕಿಂ ವರೇಣ ಸುರಶ್ರೇಷ್ಠ ಮಮ ವೃದ್ಧಸ್ಯ ಸಾಂಪ್ರತಂ ।
ಕಿಂಚಿನ್ಮೇ ಪರಮಂ ದುಃಖಂ ಸ್ಥಿತಸ್ತಾತ್ರ ಪರಂ ಪ್ರಭೋ ॥ ೧೧ ॥

ಶಿವ ಉವಾಚ :—

ಶೃಣು ಯತ್ಕಾರಣಂ ತತ್ರ ತೇಷಾಂ ತವ ತಪಸ್ವಿನಾಂ ।
ವ್ರತಚರ್ಯಾಪ್ತಯೇ ವಿಪ್ರಾಃ ಪೂಜಯಂತ್ಯಧಿಕಂ ಹಿ ತೇ ॥ ೧೨ ॥
ತೇ ಪುಷ್ಪಾಣಿ ಸಮಾನೀಯ ನಾನಾವರ್ಣಾನಿ ಸರ್ವಶಃ ।
ವೃಕ್ಷಾಣಾಮತಿಗಂಧಾನಿ ನ ತೇಷಾಂ ಹರ್ಷಕಾರಣಂ ॥ ೧೩ ॥
ತ್ವಂ ಪುನಃ ಕುಬ್ಜರೂಪಶ್ಚ ಯಜ್ಞಪೂಜಾಪರಾಯಣಃ ।
ನ ಚ ಪ್ರಾಪ್ನೋಷಿ ವೃಕ್ಷಾಣಾಂ ಶಾಖಾಗ್ರಾಣ್ಯತಿಯತ್ನವಾನ್ ॥ ೧೪ ॥
ಏಕೇನಾಪಿ ಪ್ರದತ್ತೇನ ಪುಷ್ಪೇಣ ದ್ವಿಜಸತ್ತಮ ।
ಭಕ್ತ್ಯಾ ಶಿರಸಿ ಲಿಂಗಸ್ಯ ಲಭ್ಯತೇ ಯಾಜ್ಞಿಕಂ ಫಲಂ । ॥ ೧೫ ॥
ಲಿಂಗಸ್ಯ ದಕ್ಷಿಣೇ ಬ್ರಹ್ಮಾ ಸ್ವಯಮೇವ ವ್ಯವಸ್ಥಿತಃ ।
ವಾಮೇ ಚ ಭಗವಾನ್ವಿಷ್ಣುರ್ಮಧ್ಯೇಹಂ ವೈ ಪ್ರತಿಷ್ಠಿತಃ ॥ ೧೬ ॥

---

೧೧. "ಸ್ವಾಮಿ! ಈಗ ವೃದ್ಧನಾಗಿ ಅತ್ಯಂತ ದುಃಖಗೊಂಡ ನನಗೆ ವರದಿಂದೇನು ಪ್ರಯೋಜನ ?"

೧೨–೧೩. ಶಿವನು ಹೇಳುತ್ತಾನೆ :—ಮಂಕಿಯೆ ! ನಾನು ಆ ಮುನಿಗಳಿಗೆಲ್ಲ ಒಲಿದು ನಾನು ನಿನಗೆ ಇಷ್ಟುದಿನ ಒಲಿಯದಿರಲು ಕಾರಣವೇನೆಂಬುದನ್ನು ಕೇಳು. ಆ ಬ್ರಾಹ್ಮಣರು ನನ್ನನ್ನು ವ್ರತನಿರ್ವಾಹಕ್ಕೋಸ್ಕರ ಅನೇಕ ವೃಕ್ಷಗಳ ಬಗೆಬಗೆಯ ಬಣ್ಣ ಸುವಾಸನೆಗಳುಳ್ಳ ಹೂವುಗಳನ್ನು ತಂದು ಪೂಜಿಸುತ್ತಾರೆ. ಇದು ಅವರ ಸಂತೋಷಕ್ಕೆ ಕಾರಣವಲ್ಲವೊ ?

೧೪. ಗೂನುಬೆನ್ನಿನವನಾದ ನೀನು ಯಜ್ಞಪೂಜೆಗಳಲ್ಲಿ ನಿರತನಾಗಿ ಅತ್ಯಂತವಾಗಿ ಪ್ರಯತ್ನಿಸಿದರೂ ಮರಗಳ ಕೊಂಬೆಗಳ ತುದಿಗಳನ್ನು ಹೊಂದುವುದಿಲ್ಲ.

೧೫. ಅಯ್ಯಾ, ಬ್ರಾಹ್ಮಣೋತ್ತಮನೆ! ಲಿಂಗದ ತಲೆಯಲ್ಲಿ ಭಕ್ತಿಯಿಂದ ಒಂದು ಹೂವನ್ನಿಟ್ಟರೂ ಯಜ್ಞಮಾಡಿದ ಫಲವು ಲಭಿಸುವುದು.

೧೬. ಲಿಂಗದ ದಕ್ಷಿಣಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ಪೂಜ್ಯನಾದ ವಿಷ್ಣುವೂ, ನಡುವೆ ನಾನೂ ನೆಲೆಸಿರುವೆವು.

ತ್ರಯೋಽಪಿ ಪೂಜಿತಾಸ್ತೇನ ಯೇನ ಲಿಂಗಂ ಪ್ರಪೂಜಿತಂ ॥ ೧೭ ॥
ಬಿಲ್ವಪತ್ರಂ ಶಮೀಪತ್ರಂ ಕರವೀರಂ ಚ ಮಾಲತೀಂ ।
ಉನ್ಮತ್ತಕಂ ಚಂಪಕಂ ಚ ಸದ್ಯಃ ಪ್ರೀತಿಕರಂ ಭವೇತ್ ॥ ೧೮ ॥
ಚಂಪಕಾಶೋಕಕಲ್ಹಾರೈಃ ಕರವೀರೈಸ್ತಥಾ ಮಮ ।
ಪೂಜೇಷ್ಟಾ ದ್ವಿಜಶಾರ್ದೂಲ ಯೇ ಚಾನ್ಯೇ ಬಹುಗಂಧಿನಃ ।
ಏತೈರ್ಹಿ ಪೂಜಿತೋ ನಿತ್ಯಂ ಶೀಘ್ರಂ ತುಷ್ಟಿಂ ಪ್ರಯಾಮ್ಯಹಂ ॥ ೧೯ ॥

ಬ್ರಾಹ್ಮಣ ಉವಾಚ :—

ಯದಿ ತುಷ್ಟೋಽಸಿ ಮೇ ದೇವ ಯದಿ ದೇಯೋ ವರೋ ಮಮ ।
ಇಹಾಗತ್ಯ ನರಃ ಸ್ನಾತ್ವಾ ಯೋ ಜಲೇನಾಪಿ ಸಿಂಚತಿ ॥ ೨೦ ॥
ಅದ್ಯಪ್ರಭೃತಿ ಯೇ ವೃಕ್ಷಾಃ ದೈವಿಕಾಃ ಪಾರ್ಥಿವಾಶ್ಚ ಯೇ ।
ತೇಷಾಂ ಸಾನ್ನಿಧ್ಯಮತ್ರಾಸ್ತು ಪ್ರಸಾದಾತ್ತವ ಶಂಕರ ॥ ೨೧ ॥

ಭಗವಾನುವಾಚ :—

ಸಲಿಲೇನಾಪಿ ಯಃ ಪೂಜಾಮಸ್ಮಿಲ್ಲಿಂಗೇ ವಿಧಾಸ್ಯತಿ ।
ತಸ್ಯ ಪೂಜಾಫಲಂ ಸರ್ವಂ ಭವಿಷ್ಯತಿ ದ್ವಿಜೋತ್ತಮ ॥ ೨೨ ॥

---

೧೭. ಲಿಂಗವನ್ನು ಪೂಜಿಸಿದವನು ಈ ಮೂವರನ್ನೂ ಪೂಜಿಸಿದವನಂತಾಗುವನು.

೧೮. ಬಿಲ್ವಪತ್ರ, ಶಮೀಪತ್ರಗಳೂ, ಕಣಿಗಲೆ, ಜಾಜಿ, ಉನ್ಮತ್ತಿ, ಸಂಪಿಗೆ ಹೂವುಗಳೂ ಕೂಡಲೆ ಪ್ರೀತಿಯನ್ನುಂಟುಮಾಡುವುವು.

೧೯. ಬ್ರಾಹ್ಮಣೋತ್ತಮನೆ ! ಸಂಪಗೆ, ಅಶೋಕ, ಕಲ್ಹಾರ, ಕಣಿಗಲೆಹೂವುಗಳಿಂದ ಪೂಜೆಮಾಡಿದರೆ ನನಗೆ ಅತ್ಯಂತಸಂತೋಷವಾಗುವುದು. ಇವುಗಳಿಂದಲೂ ಇನ್ನೂ ಇತರ ಅತಿಶಯಗಂಧವುಳ್ಳ ಪುಷ್ಪಗಳಿಂದಲೂ ಪೂಜಿಸಿದರೆ ನಾನು ಶೀಘ್ರವಾಗಿ ಸಂತುಷ್ಟನಾಗುವೆನು.

೨೦—೨೧. ಬ್ರಾಹ್ಮಣನು ಹೇಳುತ್ತಾನೆ :—ಸ್ವಾಮಿ ! ನೀನು ಸಂತುಷ್ಟನಾಗಿದ್ದರೆ ನನಗೆ ವರವನ್ನೀಯುವುದಾದರೆ ಮನುಷ್ಯನು ಇಲ್ಲಿಗೆ ಬಂದು ಮಿಂದು ಈ ಲಿಂಗವನ್ನು ನೀರಿನಿಂದ ಅಭಿಷೇಕಮಾಡಿದರೂ ಸಮಸ್ತ ಪುಷ್ಪಪೂಜೆಗಳ ಫಲವನ್ನು ಹೊಂದಲಿ. ನಿನ್ನ ಅನುಗ್ರಹದಿಂದ ಇದು ಮೊದಲ್ಗೊಂಡು ಇಲ್ಲಿ ದೇವಲೋಕದ ಮತ್ತು ಭೂಲೋಕದ ವೃಕ್ಷಗಳು ಸನ್ನಿಹಿತವಾಗಿರಲಿ.

೨೨. ಶಂಕರನು ಹೇಳುತ್ತಾನೆ :—ಬ್ರಾಹ್ಮಣವರ್ಯನೆ ! ಈ ಲಿಂಗಕ್ಕೆ ನೀರಿನಿಂದಪೂಜೆಮಾಡಿದವನಿಗೂ ಪೂಜೆಯ ಫಲವು ಲಭಿಸುವುದು.

ವೃಕ್ಷಾಣಾಮತ್ರ ಸಾನ್ನಿಧ್ಯಂ ಸರ್ವೇಷಾಂ ಚ ಭವಿಷ್ಯತಿ ।
ಲಿಂಗಮೇತದ್ಧಿ ಸರ್ವಾಸಾಂ ಪೂಜಾನಾಂ ಫಲಮ್ನಾಯಾತ್ ।
ಅದ್ಯಪ್ರಭೃತಿ ನಾಮ್ನೈತನ್ನಾಗಸ್ಥಾನಂ ಭವಿಷ್ಯತಿ ॥ ೨೩ ॥
ಯತಸ್ತು ಸರ್ವನಾಗಾನಾಂ ಸಾಂನಿಧ್ಯಮತ್ರ ಸಂಸ್ಥಿತಂ ।
ತ್ವಮಪಿ ದ್ವಿಜಶಾರ್ದೂಲಃ ಪಯಾಸ್ಯತಿ ಮಮಾಂತಿಕಂ ॥ ೨೪ ॥
ಏವಮುಕ್ತ್ವಾ ತು ಭಗವಾಂಸ್ತತ್ರೈವಾಂತರಧೀಯತ ।
ಮಂಕಿಸ್ತು ದೇಹಮುತ್ಸೃಜ್ಯ ಶಿವಲೋಕಂ ತತೋ ಗತಃ ॥ ೨೫ ॥
ಇತ್ಯೇವಂ ಕಥಿತಂ ದೇವಿ ಮಂಕೀಶೋದ್ಭವಮುತ್ತಮಂ ।
ಶ್ರುತಂ ಹರತಿ ಪಾಪಾನಿ ಸಮ್ಯಕ್ಛ್ರದ್ಧಾಸಮನ್ವಿತೈಃ ॥ ೨೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಂಕೀಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರ್ಯುತ್ತರಶತತಮೋಽಧ್ಯಾಯಃ ॥

೨೩-೨೪. ಇಲ್ಲಿ ಸಮಸ್ತ ವೃಕ್ಷಗಳೂ ಸನ್ನಿಹಿತವಾಗಿರುವುವು. ಇದು ಮೊದಲ್ಗೊಂಡು ಇಲ್ಲಿ ಸಕಲ ನಾಗಗಳು ಇರುವುದರಿಂದ ಇದು ನಾಗಸ್ಥಾನವೆಂದು ಪ್ರಸಿದ್ಧವಾಗುವುದು. ದ್ವಿಜವರ್ಯನೆ! ನೀನೂ ನನ್ನೆಡೆಗೆ ಬರುವೆ.

೨೫. ಶಂಕರನು ಹೀಗೆಂದು ನುಡಿದು ಅಲ್ಲಿಯೇ ಅದೃಶ್ಯನಾದನು. ಬಳಿಕ ಮಂಕಿಯೂ ದೇಹವನ್ನು ತ್ಯಜಿಸಿ ಶಿವಲೋಕಕ್ಕೆ ತೆರಳಿದನು.

೨೬. ದೇವಿ! ಹೀಗೆ ಮಂಕೀಶನ ಉತ್ಪತ್ತಿಯಕ್ರಮವನ್ನು ಹೇಳಿರುವೆನು. ಇದು ಶ್ರದ್ಧೆಯಿಂದ ಕೇಳಿದವರ ಪಾಪಗಳನ್ನು ಪರಿಹರಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಂಕೀಶ್ವರಮಾಹಾತ್ಮ್ಯವರ್ಣನವೆಂಬ
ನೂರಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರುತ್ತರದ್ವಿಶತತಮೋಽಧ್ಯಾಯಃ

ಸರಸ್ವತೀಸಂಗಮಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಭಗವನ್ ದೇವ ದೇವೇಶ ಸಂಸಾರಾರ್ಣವತಾರಕ ।
ಸರಸ್ವತ್ಯಾಶ್ಚ ಮಾಹಾತ್ಮ್ಯಂ ವಿಸ್ತರಾತ್ಕಥಯಸ್ವ ಮೇ ॥ ೧ ॥
ಯಾತ್ರಾಗತಾನಾಂ ದೇವೇಶ ಪುರುಷಾಣಾಂ ಜಿತಾತ್ಮನಾಂ ।
ಮುಖದ್ವಾರೇ ತು ಕಿಂ ಪುಣ್ಯಂ ಸ್ನಾನದಾನೇ ಚ ಶಂಕರ ॥ ೨ ॥
ಅವಗಾಹನೇನ ಚಾನ್ಯತ್ರ ಫಲಂ ಕಿಂಸ್ವಿತ್ಪ್ರಜಾಯತೇ ।
ಶ್ರಾದ್ಧಸ್ಯ ಕಿಂ ವಿಧಾನಂ ತು ಮಂತ್ರಾಸ್ತತ್ರ ತೇ ದ್ವಿಜಾಃ ॥ ೩ ॥
ಕಿಂ ಗ್ರಾಹ್ಯಂ ಕಿಂ ಚ ಭೋಕ್ತವ್ಯಂ ಬ್ರಾಹ್ಮಣೈಃ ಶ್ರಾದ್ಧಕರ್ಮಣಿ ।
ಕಾನಿ ದಾನಾನಿ ದೇಯಾನಿ ನೃಭಿರ್ಯಾತ್ರಾಫಲೇಪ್ಸುಭಿಃ ॥ ೪ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ದಾನಶ್ರಾದ್ಧವಿಧಿಕ್ರಮಂ ।
ಸರಸ್ವತ್ಯಾಶ್ಚ ಮಾಹಾತ್ಮ್ಯಂ ಕೀರ್ತ್ಯಮಾನಂ ನಿಬೋಧ ಮೇ ॥ ೫ ॥

ಕನ್ನಡದ ಅನುವಾದ

ಸರಸ್ವತೀಸಂಗಮಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :—ಸಂಸಾರ ಸಾಗರವನ್ನು ದಾಟಿಸುವ ಪೂಜ್ಯನಾದ ಶಂಕರನೇ! ನನಗೆ ಸರಸ್ವತಿಯ ಮಾಹಾತ್ಮ್ಯವನ್ನು ವಿಸ್ತಾರವಾಗಿ ಹೇಳು.

೨. ಶಂಕರ! ಯಾತ್ರೆಗಾಗಿ ಬಂದ ಜಿತೇಂದ್ರಿಯರಾದ ಮನುಷ್ಯರಿಗೆ ಮುಖ ದ್ವಾರದಲ್ಲಿ ಸ್ನಾನ ದಾನಗಳನ್ನು ಮಾಡುವುದರಿಂದಾಗುವ ಪುಣ್ಯವಾವುದು?

೩. ಇತರ ಕಡೆಯಲ್ಲಿ ಸ್ನಾನ ಮಾಡುವುದರಿಂದುಂಟಾಗುವ ಫಲವಾವುದು? ಶ್ರಾದ್ಧದ ವಿಧಿಯಾವುದು? ಮಂತ್ರಗಳು ಯಾವುವು? ಬ್ರಾಹ್ಮಣರಾರು?

೪. ಬ್ರಾಹ್ಮಣರು ಶ್ರಾದ್ಧದಲ್ಲಿ ಸ್ವೀಕರಿಸಲು ಮತ್ತು ಭುಜಿಸಲುಅರ್ಹವಾದ ಪದಾರ್ಥವಾವುದು? ಯಾತ್ರಾಫಲವನ್ನು ಹೊಂದಲಪೇಕ್ಷಿಸುವ ಮಾನವರು ಕೊಡತಕ್ಕ ದಾನಗಳಾವುವು?

೫. ಈಶ್ವರನು ಹೇಳುತ್ತಾನೆ :—ದೇವಿ! ನಾನು ಹೇಳುವ ದಾನ ಮತ್ತು ಶ್ರಾದ್ಧಗಳ ವಿಧಾನವನ್ನೂ, ಸರಸ್ವತಿಯ ಮಾಹಾತ್ಮ್ಯವನ್ನೂ ಕೇಳು.

ಪುಣ್ಯಂ ಸಾರಸ್ವತಂ ತೋಯಂ ಯತ್ರ ತತ್ರಾವಗಾಹತೇ ।
ಸಾಗರೇಣ ತು ಸಂಮಿಶ್ರಂ ದೇವಾನಾಮಪಿ ದುರ್ಲಭಂ ॥ ೬ ॥
ಸರಸ್ವತೀ ಸರ್ವನದೀಷು ಪುಣ್ಯಾ
ಸರಸ್ವತೀ ಲೋಕಮುಖಾವಗಾಹಾ ।
ಸರಸ್ವತೀಂ ಪ್ರಾಪ್ಯ ನ ದುಃಖಿತಾ ನರಾಃ ॥
ಸದಾ ನ ಶೋಚಂತಿ ಪರತ್ರ ಚೇಹ ಚ ॥ ೭ ॥
ಪುಣ್ಯಂ ಸಾರಸ್ವತಂ ತೋಯಂ ಪುಣ್ಯಕೃಲ್ಲಭತೇ ನರಃ
ದುರ್ಲಭಂ ತ್ರಿಷು ಲೋಕೇಷು ವೈಶಾಖ್ಯಾ ಸೋಮಪರ್ವಣಿ ॥ ೮ ॥
ಅಮಾ ಸೋಮೇನ ಸಂಯುಕ್ತಾ ಯದಿ ತತ್ರೈವ ಲಭ್ಯತೇ ।
ತತ್ರ ಕಿಂ ಕ್ರಿಯತೇ ದೇವ ಪರ್ವಕೋಟಿಶತೈರಪಿ ॥ ೯ ॥
ಚಾಂದ್ರಾಯಣಾನಿ ಕೃಚ್ಛ್ರಾಣಿ ಮಹಾಸಾಂತಪನಾನಿ ಚ ।
ಪ್ರಾಯಶ್ಚಿತ್ತಾನಿ ದೀಯಂತೇ ಯತ್ರ ನಾಸ್ತಿ ಸರಸ್ವತೀ ॥ ೧೦ ॥
ಯಾವದಸ್ಥಿ ಶರೀರಸ್ಯ ತಿಷ್ಠೇತ್ಸಾರಸ್ವತೇ ಜಲೇ ।
ತಾವದ್ವರ್ಷಸಹಸ್ರಾಣಿ ವಿಷ್ಣುಲೋಕೇ ವಸೇನ್ನರಃ ।
ಜಾತ್ಯಂಧೈಸ್ತೈಸ್ಸಮಾ ಜ್ಞೇಯಂ ಮೃತೈಃ ಪಂಗುಭಿರೇವ ಚ ॥ ೧೧ ॥

---

೬. ಪುಣ್ಯಕರವಾದ ಸರಸ್ವತೀನದಿಯ ನೀರಿನಲ್ಲಿ ಎಲ್ಲಿಯಾದರೂ ಸ್ನಾನ ಮಾಡಬಹುದು. ಸಮುದ್ರದಿಂದ ಮಿಶ್ರವಾದ ಆ ನದಿಯ ನೀರು ದೇವತೆಗಳಿಗೂ ದುರ್ಲಭವಾದುದು.

೭. ಸರಸ್ವತೀ ನದಿಯು ಸಕಲ ನದಿಗಳಲ್ಲಿ ಪುಣ್ಯಕರವೂ ಜನರಿಗೆ ಸುಖ ವನ್ನುಂಟುಮಾಡುವುದೂ ಆಗಿರುವುದು. ಜನರು ಸರಸ್ವತೀ ನದಿಯನ್ನು ಹೊಂದಿ ಇಹಪರಗಳಲ್ಲಿ ದುಃಖಗೊಳ್ಳುವುದಿಲ್ಲ.

೮. ಮೂರು ಲೋಕಗಳಲ್ಲಿ ದುರ್ಲಭವೂ, ಪವಿತ್ರವೂ ಆದ ಸರಸ್ವತೀ ನದಿಯ ನೀರನ್ನು ವೈಶಾಖ ಶುದ್ಧ ಪೂರ್ಣಿಮಾ ಗ್ರಹಣದ ದಿನ ಪುಣ್ಯವಂತನಾದ ಮನುಷ್ಯನು ಹೊಂದುವನು.

೯. ಆ ಸರಸ್ವತೀ ನದಿಯ ದಡದಲ್ಲಿ ಸೋಮವಾರದ ದಿನ ಅಮಾವಾಸ್ಯೆಯು ಒದಗಿದರೆ ಇತರ ಅನೇಕ ಕೋಟಿ ಪರ್ವಗಳಲ್ಲಿಯೂ ಸಹ ಏನೂ ಪುಣ್ಯಕಾರ್ಯವನ್ನು ಮಾಡಬೇಕಾಗಿರುವುದಿಲ್ಲ.

೧೦. ಸರಸ್ವತೀನದಿಯಿಲ್ಲದ ಬೇರೆಕ್ಷೇತ್ರಗಳಲ್ಲಿ ಚಾಂದ್ರಾಯಣ, ಮಹಾ ಸಾಂತಪನ ಮೊದಲಾದ ಪ್ರಾಯಶ್ಚಿತ್ತಗಳನ್ನು ಮಾಡಬೇಕಾಗುವುದು.

೧೧–೧೩. ಸರಸ್ವತೀ ನದಿಯ ಜಲದಲ್ಲಿ ಅಸ್ಥಿಗಳಿರುವವರೆಗೂ ಮನುಷ್ಯನು ವಿಷ್ಣುಲೋಕದಲ್ಲಿ ವಾಸಿಸುವನು. ಪ್ರಭಾಸದಲ್ಲಿರುವ ಸರಸ್ವತೀ ನದಿಯನ್ನು ದರ್ಶನ

ಸಮರ್ಥಾ ಯೇ ನ ಪಶ್ಯಂತಿ ಪ್ರಭಾಸಸ್ಥಾಂ ಸರಸ್ವತೀಂ ।
ತೇ ದೇಶಾಸ್ತಾನಿ ತೀರ್ಥಾನಿ ಆಶ್ರಮಾಸ್ತೇ ಚ ಪರ್ವತಾಃ ॥ ೧೨ ॥
ಯೇಷಾಂ ಸರಸ್ವತೀ ದೇವೀ ಮಧ್ಯೇ ಯಾತಿ ಸರಿದ್ವರಾ ।
ತ್ರೈಲೋಕ್ಯಪಾವನೀಂ ಪುಣ್ಯಾಂ ಸಂಸ್ಥಿತಾ ಯೇ ಸರಸ್ವತೀಂ ।
ಸಂಸಾರಕರ್ದಮಾಮೋದಮಾಜಿಘ್ರಂತಿ ನ ತೇ ಪುನಃ ॥ ೧೩ ॥
ಶಬ್ದವಿದ್ಯೇವ ವಿಸ್ತೀರ್ಣಾ ಮಾತೈವ ಜಗತಃ ಪ್ರಿಯಾ ।
ಸತಾಂ ಮತಿರಿವ ಸ್ವಚ್ಛಾ ರಮಣೀಯಾ ಸರಸ್ವತೀ ॥ ೧೪ ॥
ತ್ರೈಲೋಕ್ಯಶೋಭಿತಾಂ ದೇವೀಂ ದಿವ್ಯತೋಯಾಂ ಸುನಿರ್ಮಲಾಂ ।
ಸ ನೀಚೋ ಯಃ ಪುಮಾನೇತಾಂ ನ ವಂದೇತ ಸರಸ್ವತೀಂ ॥ ೧೫ ॥
ಸ್ವರ್ಗನಿಶ್ರೇಣಿಸಂಭೂತಾ ಪ್ರಭಾಸೇ ತು ಸರಸ್ವತೀ ।
ನಾಪುಣ್ಯವದ್ಭಿಃ ಸಂಪ್ರಾಪ್ತುಂ ಪುಂಭಿಃ ಶಕ್ಯಾ ಮಹಾನದೀ ॥ ೧೬ ॥
ಚಂದ್ರಭಾಗಾ ಚ ಗಂಗಾ ಚ ತಥಾ ಯತ್ರ ಸರಸ್ವತೀ ।
ದೇವಾಸ್ತೇ ನ ಮನುಷ್ಯಾಸ್ತೇ ತ್ರಿಸ್ರೋ ಯತ್ರ ಪಿಬಂತಿ ತೇ ॥ ೧೭ ॥

ಮಾಡದ ಶಕ್ತಿಯುಳ್ಳ ಜನರು ಹುಟ್ಟು ಕುರುಡರಿಗೂ, ಮೃತರಾದವರಿಗೂ, ಕುಂಟರಿಗೂ ಸಮಾನರು. ಯಾವ ದೇಶಗಳ ನಡುವೆ ಸರಸ್ವತಿಯೆಂಬ ಉತ್ತಮನದಿಯು ಹರಿಯುವುದೊ ಅವುಗಳೇ ದೇಶಗಳೂ, ತೀರ್ಥಗಳೂ, ಆಶ್ರಮಗಳೂ ಎನ್ನಿಸಿಕೊಳ್ಳುವುವು. ಮೂರು ಲೋಕಗಳಲ್ಲಿ ಪವಿತ್ರವೂ, ಪುಣ್ಯಕರವೂ ಆದ ಸರಸ್ವತೀ ನದಿಯನ್ನು ಆಶ್ರಯಿಸಿದವರು ಸಂಸಾರವೆಂಬ ಕೆಸರಿನ ವಾಸನೆಯನ್ನು ನೋಡುವುದಿಲ್ಲ.

೧೪. ಮನೋಹರವಾದ ಆ ಸರಸ್ವತೀ ನದಿಯು ವ್ಯಾಕರಣ ಶಾಸ್ತ್ರದಂತೆ ವಿಸ್ತೀರ್ಣವೂ, ಜಗತ್ಪ್ರಿಯವೂ, ಸಜ್ಜನರ ಬುದ್ಧಿಯಂತೆ ನಿರ್ಮಲವೂ ಇಗಿರುವುದು.

೧೫. ಮೂರು ಲೋಕಗಳಲ್ಲಿ ವಿರಾಜಿಸುವುದೂ, ಮನೋಹರವಾದ ನೀರುಳ್ಳದೂ, ನಿರ್ಮಲವೂ ಆದ ಸರಸ್ವತೀನದಿಯನ್ನು ವಂದಿಸದ ಮಾನವನು ನೀಚನು.

೧೬. ಪ್ರಭಾಸದಲ್ಲಿ ಸ್ವರ್ಗಕ್ಕೆ ಏಣಿಯಂತಿರುವ ಸರಸ್ವತೀಮಹಾನದಿಯನ್ನು ಪಾಪಿಗಳು ಹೊಂದಲಾರರು.

೧೭. ಚಂದ್ರಭಾಗಾ, ಗಂಗಾ, ಸರಸ್ವತೀನದಿಗಳ ನೀರನ್ನು ಕುಡಿಯುವವರು ದೇವತೆಗಳೇ ಸರಿ; ಮನುಷ್ಯರಲ್ಲ.

ಸತ್ಯಮೇವ ಮಯಾ ದೇವಿ ಜಾಹ್ನವೀ ಶಿರಸಾ ಧೃತಾ ।
ಯಾಃ ಕಾಶ್ಚಿತ್ಸರಿತೋ ಲೋಕೇ ತಾಸಾಂ ಪುಣ್ಯಾ ಸರಸ್ವತೀ ॥ ೧೮ ॥
ದರ್ಶನೇನ ಸರಸ್ವತ್ಯಾ ರಾಜಸೂಯೋ ನ ರಾಜತೇ ।
ಗಂಡೂಷಶ್ಚಾಶ್ವಮೇಧಾದ್ಯೈ ಸರ್ವಕ್ರತುವರಂ ಪಯಃ ॥ ೧೯ ॥
ಭಸ್ಮಾಸ್ಥಿಚರ್ಮತೋಯಾನಿ ನಖಕೇಶಾದಿಕಾನಿ ಚ ।
ವಾಕ್ಯೈರಪಿ ಧುತಾನ್ಯೇವ ತಥಾ ಸಾರಸ್ವತೇ ಜಲೇ ॥ ೨೦ ॥
ವಹಂತಿ ಯೇಷಾಂ ಕಾಲೇನ ತೇನ ಕಾಲವಶಾ ನರಾಃ ।
ದೇವಿ ಕಿಂ ಬಹುನೋಕ್ತೇನ ವರ್ಣಿತೇನ ಪುನಃ ಪುನಃ ॥
ಸರಸ್ವತ್ಯಾಃ ಪರಂ ತೀರ್ಥಂ ನ ಭೂತಂ ನ ಭವಿಷ್ಯತಿ ॥ ೨೧ ॥
ತತ್ರೈವ ದುರ್ಲಭಂ ಸ್ನಾನಂ ಯತ್ರ ಸಾಗರಸಂಗಮಃ ।
ತತ್ರ ಸ್ನಾನೇನ ದಾನೇನ ಕೋಟಿಯಜ್ಞಫಲಂ ಲಭೇತ್ ॥ ೨೨ ॥
ಯತ್ರ ಸಾರಸ್ವತಂ ತೋಯಂ ಸಾಗರೋರ್ಮಿಸಮಾಕುಲಂ ।
ತತ್ರ ಸ್ನಾಸ್ಯಂತಿ ಯೇ ಮರ್ತ್ಯಾ ಭಾಗ್ಯವಂತೋ ಯುಗೇ ಯುಗೇ ॥ ೨೩ ॥

---

೧೮. ದೇವಿ! ನಾನು ಗಂಗೆಯನ್ನು ಶಿರಸ್ಸಿನಿಂದ ಧರಿಸಿರುವುದು ನಿಜ. ಆದರೆ ಸರಸ್ವತೀನದಿಯು ಲೋಕದಲ್ಲಿರುವ ನದಿಗಳಲ್ಲಿ ಪುಣ್ಯಕರವಾದುದು.

೧೯. ಸರಸ್ವತೀನದಿಯ ದರ್ಶನ ಮಾಡಿದವರ ಮುಂದೆ ರಾಜಸೂಯಯಾಗವು ವಿಜೃಂಭಿಸುವುದಿಲ್ಲ. ಆ ನದಿಯಲ್ಲಿ ಗಂಡೂಷ ಮಾಡುವುದರಿಂದ ಅಶ್ವಮೇಧಯಾಗಕ್ಕಿಂತ ಹೆಚ್ಚು ಫಲವು ಲಭಿಸುವುದು. ನೀರು ಸಕಲ ಯಜ್ಞಗಳಿಗಿಂತ ಉತ್ತಮವಾದುದು.

೨೦–೨೧. ಯಾರ ಶವದಬೂದಿ, ಮೂಳೆ, ಚರ್ಮ, ನೀರು, ಉಗುರು, ಕೂದಲು ಮೊದಲಾದುವುಗಳಮೇಲೆ ಸರಸ್ವತೀನದಿಯ ನೀರಿನ ಗಾಳಿಯು ಬೀಸುವುದೊ ಅವರು ಯಮನಿಗೆ ವಶರಾಗುವುದಿಲ್ಲ. ದೇವಿ! ಹೆಚ್ಚು ವರ್ಣಿಸಿದ್ದರಿಂದೇನು ಪ್ರಯೋಜನ? ಸರಸ್ವತೀನದಿಯ ನೀರಿಗಿಂತ ಉತ್ತಮತೀರ್ಥವು ಹಿಂದೆ ಇರಲಿಲ್ಲ. ಮುಂದೆ ಉಂಟಾಗುವುದಿಲ್ಲ.

೨೨. ಸರಸ್ವತೀಸಾಗರಸಂಗಮದಲ್ಲಿ ಸ್ನಾನವು ದುರ್ಲಭವಾದುದು. ಅಲ್ಲಿ ಸ್ನಾನದಾನಮಾಡುವುದರಿಂದ ಕೋಟಿಯಜ್ಞದಫಲವು ಲಭಿಸುವುದು.

೨೩. ಸಮುದ್ರದ ಅಲೆಯಿಂದ ಸೇರಿದ ಸರಸ್ವತೀನದಿಯ ನೀರಿನಲ್ಲಿ ಮಿಂದವರು ಪ್ರತಿಯುಗದಲ್ಲಿಯೂ ಪುಣ್ಯಶಾಲಿಗಳಾಗುವರು.

ತೇ ಧನ್ಯಾಸ್ತೇ ನಮಸ್ಕಾರ್ಯಾಸ್ತೇಷಾಂ ಸ್ಫೀತತರಂ ಯಶಃ ।
ಯೇಷಾಂ ಕಲೇವರಂ ನ್ನಾಣಾಂ ಸಿಕ್ತಂ ಸಾರಸ್ವತೈರ್ಜಲೈಃ ॥ ೨೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸರಸ್ವತೀಸಂಗಮಮಾಹಾತ್ಮ್ಯವರ್ಣನಂ ನಾಮ
॥ ಚತುರುತ್ತರದ್ವಿಶತತಮೋಽಧ್ಯಾಯಃ ॥

---

೨೪. ಸರಸ್ವತೀ ನದಿಯ ನೀರಿನಿಂದ ಒದ್ದೆಯಾದ ಶರೀರವುಳ್ಳ ಮಾನವರು ಧನ್ಯರೂ, ನಮಸ್ಕರಿಸಲು ಯೋಗ್ಯರೂ, ಅತಿಶಯ ಕೀರ್ತಿಯುಳ್ಳವರೂ ಆಗುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸರಸ್ವತೀ ಸಂಗಮಮಾಹಾತ್ಮ್ಯವರ್ಣನವೆಂಬ
ಇನ್ನೂರನಾಲ್ಕನೆಯನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚೋತ್ತರದ್ವಿಶತತಮೋऽಧ್ಯಾಯಃ

ಶ್ರಾದ್ಧಾನರ್ಹಬ್ರಾಹ್ಮಣಪರೀಕ್ಷಣಕಥನ

ದೇವ್ಯುವಾಚ :—

ಭಗವನ್ದೇವದೇವೇಶ ಸಂಸಾರಾರ್ಣವತಾರಕ ।
ಬ್ರೂಹಿ ಶ್ರಾದ್ಧವಿಧಿಂ ಪುಣ್ಯಂ ವಿಸ್ತರಾಜ್ಜಗತಾಂಪತೇ ॥ ೧ ॥
ಕಸ್ಮಿನ್ವಾಸರಭಾಗೇ ತು ಶ್ರಾದ್ಧಕೃಚ್ಛ್ರಾದ್ಧಮಾಚರೇತ್ ।
ಕಸ್ಮಿನ್ಸರಸ್ವತೀತೀರ್ಥೇ ಪ್ರಭಾಸಕ್ಷೇತ್ರ ಉತ್ತಮೇ ॥ ೨ ॥
ಕಸ್ಮಿಂಸ್ತೀರ್ಥೇ ಕೃತಂ ಶ್ರಾದ್ಧಂ ಬಹುಪುಣ್ಯಫಲಂ ಭವೇತ್ ।
ಏತತ್ಸರ್ವಂ ಮಹಾದೇವ ಯಥಾವದ್ವಕ್ತುಮರ್ಹಸಿ ॥ ೩ ॥

ಈಶ್ವರ ಉವಾಚ :—

ಪ್ರಾತಃ ಕಾಲೇ ಮುಹೂರ್ತಾಂಸ್ತ್ರೀನ್ಸಂಗವಸ್ತಾವದೇವ ತು ।
ಮಧ್ಯಾಹ್ನಸ್ತ್ರಿಮುಹೂರ್ತಃ ಸ್ಯಾದಪರಾಹ್ಣಸ್ತತಃ ಪರಂ ॥ ೪ ॥
ಸಾಯಾಹ್ನಸ್ತ್ರಿಮುಹೂರ್ತಃ ಸ್ಯಾಚ್ಛ್ರಾದ್ಧಂ ತತ್ರ ನ ಕಾರಯೇತ್ ।
ರಾಕ್ಷಸೀ ನಾಮ ಸಾ ವೇಲಾ ಗರ್ಹಿತಾ ಸರ್ವಕರ್ಮಸು ॥ ೫ ॥

ಕನ್ನಡದ ಅನುವಾದ

ಶ್ರಾದ್ಧಾನರ್ಹಬ್ರಾಹ್ಮಣಪರೀಕ್ಷಣಕಥನಂ

೧. ದೇವಿಯು ಹೇಳುತ್ತಾಳೆ :—ಸಂಸಾರ ಸಾಗರವನ್ನು ದಾಟಿಸುವನೂ, ಜಗದೊಡೆಯನೂ ಆದ ಓ ಸ್ವಾಮಿಯೆ! ಪುಣ್ಯಕರವಾದ ಶ್ರಾದ್ಧವಿಧಿಯನ್ನು ವಿಸ್ತಾರವಾಗಿ ಹೇಳು.

೨. ಈ ಪ್ರಭಾಸಕ್ಷೇತ್ರದಲ್ಲಿರುವ ಸರಸ್ವತೀತೀರ್ಥದಲ್ಲಿ ಶ್ರಾದ್ಧಕರ್ತನು ಯಾವ ದಿನದ ಭಾಗದಲ್ಲಿ ಶ್ರಾದ್ಧವನ್ನು ಮಾಡಬೇಕು.

೩. ಮಹಾದೇವ! ಯಾವ ತೀರ್ಥದಲ್ಲಿ ಮಾಡಿದ ಶ್ರಾದ್ಧವು ಅತಿಶಯಪುಣ್ಯವನ್ನೀಯುವುದು. ಇದನ್ನೆಲ್ಲ ನನಗೆ ಹೇಳು.

೪–೫. ಈಶ್ವರನು ಹೇಳುತ್ತಾನೆ:—ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ಣ ಸಾಯಾಹ್ನಗಳು ಕ್ರಮವಾಗಿ ಮೂರು ಮೂರುಮುಹೂರ್ತಗಳುಳ್ಳವು. ಈ ಸಾಯಾಹ್ನದಲ್ಲಿ ಶ್ರಾದ್ಧವನ್ನು ಮಾಡಕೂಡದು. ರಾಕ್ಷಸಿಯೆಂಬ ಈ ವೇಳೆಯು ಸಕಲ ಕರ್ಮಗಳನ್ನು ಮಾಡಲೂ ಅನರ್ಹವಾದುದು.

ಅಹ್ನೋ ಮುಹೂರ್ತಾ ವಿಖ್ಯಾತಾ ದಶ ಪಂಚ ಚ ಸರ್ವದಾ ।
ತತ್ರಾಷ್ಟಮೋ ಮುಹೂರ್ತೋ ಯಃ ಸ ಕಾಲಃ ಕುತಪಃ ಸ್ಮೃತಃ ॥ ೬ ॥
ಮಧ್ಯಾಹ್ನೇ ಸರ್ವದಾ ಯಸ್ಮಾನ್ಮಂದೀಭವತಿ ಭಾಸ್ಕರಃ ।
ತಸ್ಮಾದನಂತಫಲದಸ್ತದಾರಂಭೋ ಭವಿಷ್ಯತಿ ॥ ೭ ॥
ಮಧ್ಯಾಹ್ನಃ ಖಡ್ಗಪಾತ್ರಂ ತು ತಥಾನ್ಯೇ ಕಾಲಕಂಬಲಾಃ ।
ರೂಪ್ಯಂ ದರ್ಭಾಸ್ತಿಲಾ ಗಾವೋ ದೌಹಿತ್ರಶ್ಚಾಷ್ಟಮಃ ಸ್ಮೃತಾಃ ॥ ೮ ॥
ಪಾಪಂ ಕುತ್ಸಿತಮಿತ್ಯಾಹುಸ್ತಸ್ಯ ಸಂತಾಪಕಾರಿಣಃ ।
ಅಷ್ಟ ಚೈವಂ ಮತಾಸ್ತಸ್ಮಾತ್ಕುತಪಾ ಇತಿ ವಿಶ್ರುತಾಃ ॥ ೯ ॥
ಊರ್ಧ್ವಂ ಮುಹೂರ್ತಾತ್ಕುತುಪಾದ್ಯನ್ಮುಹೂರ್ತಚತುಷ್ಟಯಂ ।
ಮುಹೂರ್ತಪಂಚಕಂ ಚೈವ ಸ್ವಧಾಭವನಮಿಷ್ಯತೇ ॥ ೧೦ ॥
ವಿಷ್ಣೋರ್ದೇಹಸಮುದ್ಭೂತಾಃ ಕುಶಾಃ ಕೃಷ್ಣಾಸ್ತಿಲಾಸ್ತಥಾ ।
ಶ್ರಾದ್ಧಸ್ಯ ರಕ್ಷಣಾರ್ಥಾಯ ಏತತ್ಪ್ರಾಹುರ್ದಿವೌಕಸಃ ॥ ೧೧ ॥
ತಿಲೋದಕಾಂಜಲಿರ್ದೇಯೋ ಜಲಸ್ಥೈಸ್ತೀರ್ಥವಾಸಿಭಿಃ ।
ಸದರ್ಭಹಸ್ತೇನೈಕೇನ ಶ್ರಾದ್ಧಸೇವನಮಿಷ್ಯತಿ ॥ ೧೨ ॥

---

೬. ಹೀಗೆ ಹಗಲು ಹದಿನೈದು ಮುಹೂರ್ತಗಳುಳ್ಳದು. ಅವುಗಳಲ್ಲಿ ಎಂಟನೆಯ ಮುಹೂರ್ತವು ಕುತಪಕಾಲವೆನ್ನಿಸಿಕೊಳ್ಳುವುದು.

೭. ಮಧ್ಯಾಹ್ನದಲ್ಲಿ ಭಾಸ್ಕರನು ಮಂದತಾಪವುಳ್ಳವನಾಗುವುದರಿಂದ ಆಗ ಅನಂತಫಲಗಳನ್ನೀಯುವ ಕುತಪಕಾಲವು ಆರಂಭವಾಗುವುದು.

೮-೯. ಮಧ್ಯಾಹ್ನ, ಖಡ್ಗಪಾತ್ರೆ, ಕರಿಕಂಬಳಿ, ಬೆಳ್ಳಿ, ದರ್ಭೆ, ಎಳ್ಳು, ಗೋವು, ದೌಹಿತ್ರ, ಈ ಎಂಟು ಕುತ್ಸಿತವಾದ ಪಾಪವನ್ನು ಸಂತಾಪಗೊಳಿಸುವುದರಿಂದ ಕುತಪಗಳೆಂದು ಪ್ರಸಿದ್ಧವಾದುವು.

೧೦. ಕುತಪಮುಹೂರ್ತದಿಂದ ಆರಂಭಿಸಿ ಮುಂದಿನ ನಾಲ್ಕು ಮುಹೂರ್ತಗಳು ಸೇರಿ ಐದು ಮುಹೂರ್ತಗಳು ಸ್ವಧಾಭವನವೆನ್ನಿಸಿಕೊಳ್ಳುವುವು.

೧೧. ಶ್ರಾದ್ಧದ ರಕ್ಷಣೆಗಾಗಿ ವಿಷ್ಣುವಿನ ದೇಹದಿಂದ ದರ್ಭೆ, ಕರಿಯೆಳ್ಳುಗಳು ಹುಟ್ಟಿದುವೆಂದು ದೇವತೆಗಳು ಹೇಳುತ್ತಾರೆ.

೧೨. ತೀರ್ಥನಿವಾಸಿಗಳು ನೀರಿನಲ್ಲಿ ನಿಂತು ದರ್ಭೆಯಿಂದ ಸಹಿತವಾದ ಒಂದು ಕೈಯಿಂದ ತಿಲತರ್ಪಣವನ್ನು ಕೊಟ್ಟು ಶ್ರಾದ್ಧವನ್ನು ಮಾಡಬೇಕು.

ತ್ರೀಣಿ ಶ್ರಾದ್ಧೇ ಪವಿತ್ರಾಣಿ ದೌಹಿತ್ರಃ ಕುತಪಸ್ತಿಲಾಃ ।
ತ್ರೀಣಿ ಚಾತ್ರ ಪ್ರಶಂಸಂತಿ ಶುದ್ಧಿಮಕ್ರೋಧಮತ್ವರಾಮ್ ॥ ೧೩ ॥
ದೌಹಿತ್ರಂ ಖಡ್ಗಮಿತ್ಯುಕ್ತಂ ಲಲಾಟೇ ಶೃಂಗಮಸ್ತಿ ಯತ್ ।
ತಸ್ಯ ಶೃಂಗಸ್ಯ ಯತ್ಪಾತ್ರಂ ತದ್ದೌಹಿತ್ರಮಿತಿ ಸ್ಮೃತಂ ॥ ೧೪ ॥
ಕ್ಷೀರಿಣೀ ವಾಪಿ ಚಿತ್ರಾ ಗೌಸ್ತತ್ಕ್ಷೀರಾದ್ಯದ್ಧೃತಂ ಭವೇತ್ ।
ತದ್ದೌಹಿತ್ರಮಿತಿ ಪ್ರೋಕ್ತಂ ದೈವೇ ಪಿತ್ರ್ಯೇ ಚ ಕರ್ಮಣಿ ॥ ೧೫ ॥
ದರ್ಭಾಗ್ರಂ ದೈವಮಿತ್ಯುಕ್ತಂ ಸಮೂಲಾಗ್ರಂ ತು ಪೈತೃಕಂ ।
ತತ್ರಾವಲಂಬಿನೋ ಯೇ ತು ಕುಶಾಸ್ತೇ ಕುತಪಾಃ ಸ್ಮೃತಾಃ ॥ ೧೬ ॥
ಶರೀರದ್ರವ್ಯದಾರಾ ಭೂ ಮನೋ ಮಂತ್ರದ್ವಿಜನ್ಮನಾಂ ।
ಶುದ್ಧಿಃ ಸಪ್ತಸು ವಿಜ್ಞೇಯಾ ಶ್ರಾದ್ಧಕಾಲೇ ವಿಶೇಷತಃ ॥ ೧೭ ॥
ಸಪ್ತಧಾ ದ್ರವ್ಯಶುದ್ಧಿಸ್ತು ಸೋಽತ್ತಮಾ ಮಧ್ಯಮಾಽಧಮಾಃ ॥ ೧೮ ॥
ಶ್ರುತಂ ಶೌರ್ಯಂ ತಪಃ ಕನ್ಯಾ ಶಿಷ್ಯಾದ್ಯಂ ಚಾನ್ವಯಾಗತಂ ।
ಧನಂ ಸಪ್ತವಿಧಂ ಶುಕ್ಲಮುಪಾಯೋಽಪ್ಯಸ್ಯ ತಾದೃಶಃ ॥ ೧೯ ॥
ಕುತ್ಸಿತಂ ಕೃಷಿವಾಣಿಜ್ಯಂ ಶ್ಲುಕಂ ಶಿಲ್ಪಾನುವೃತ್ತಿಭಿಃ ।
ಕೃತೋಪಕಾರಾದಾಪ್ತಂ ಚ ಶಂಬಲಂ ಸಮುದಾಹೃತಂ ॥ ೨೦ ॥

---

೧೩. ಶ್ರಾದ್ಧದಲ್ಲಿ ದೌಹಿತ್ರ, ಕುತಪ, ಎಳ್ಳುಗಳು ಪವಿತ್ರವಾದುವು. ಇಲ್ಲಿ ಶುದ್ಧಿ, ಶಾಂತಿ, ತ್ವರೆಯಿಲ್ಲದಿರುವುದನ್ನು ಹೊಗಳುತ್ತಾರೆ.

೧೪. ಹಣೆಯಲ್ಲಿ ಶೃಂಗವಿರುವ ಖಡ್ಗಪಾತ್ರೆಯು ದೌಹಿತ್ರವೆನ್ನಿಸಿಕೊಳ್ಳುವುದು.

೧೫. ದೇವಪಿತೃಕರ್ಮಗಳಿಗೆ ಆವಶ್ಯಕವಾದ ಚಿತ್ರಗೋವಿನ ತುಪ್ಪವು ದೌಹಿತ್ರವೆಂದು ಹೆಸರುಳ್ಳುದು.

೧೬. ದರ್ಭೆಯಕೊನೆಯು ದೈವವೂ, ಬುಡದಕೊನೆಯಿಂದ ಸಹಿತವಾದ ದರ್ಭೆಯು ಪೈತೃಕವೂ ಆಗಿರುವುದು. ಇವುಗಳಿರುವ ದರ್ಭೆಗಳು ಕುತಪಗಳು.

೧೭. ಶ್ರಾದ್ಧದಲ್ಲಿ ಶರೀರ, ದ್ರವ್ಯ, ಹೆಂಡತಿ, ಭೂಮಿ, ಮನಸ್ಸು, ಮಂತ್ರ, ಬ್ರಾಹ್ಮಣ ಈ ಏಳು ಶುದ್ಧವಾಗಿರುವುದೇ ಶುದ್ಧಿಯೆನ್ನಿಸಿಕೊಳ್ಳುವುದು.

೧೮. ಉತ್ತಮ, ಮಧ್ಯಮ, ಅಧಮಗಳೆಂಬ ದ್ರವ್ಯಶುದ್ಧಿಯೂ ಶ್ರುತ, ಶೌರ್ಯ, ಧನ, ತಪಸ್ಸು, ಕನ್ಯಾ, ಕುಲಕ್ರಮದಿಂದಬಂದ ಶಿಷ್ಯಾದಿಗಳು, ಶುಕ್ಲಧನ ಎಂದು ಏಳು ವಿಧವಾಗಿರುವುದು. ಇದನ್ನು ಸಂಪಾದಿಸುವ ಕ್ರಮವೂ ಹಾಗೆಯೇ ಆಗಿರುವುದು.

೧೯–೨೦. ಕೃಷಿವ್ಯಾಪಾರಗಳಿಂದುಟಾದುದು ಕುತ್ಸಿತವೂ, ಶಿಲ್ಪವೃತ್ತಿಯಿಂದುಂಟಾದುದು ಶುಕ್ಲವೂ, ಮಾಡಿದ ಉಪಕಾರದಿಂದ ಲಭಿಸಿದುದು ಶಂಬಲವೂ, ಎನ್ನಿಸಿಕೊಳ್ಳುವುದು.

ಉತ್ಕೋಚತಶ್ಚ ಯತ್ಪ್ರಾಪ್ತಂ ಯತ್ಪ್ರಾಪ್ತಂ ಚೈವ ಸಾಹಸಾತ್ ।
ವ್ಯಾಜೇನೋಪಾರ್ಜಿತಂ ಯಚ್ಚ ತತ್ಕೃಷ್ಣಂ ಸಮುದಾಹೃತಂ ॥ ೨೧ ॥
ಅನ್ಯಾಯೇನಾರ್ಜಿತೈರ್ವಿತ್ತೈರ್ಯಚ್ಛ್ರಾದ್ಧಂ ಕ್ರಿಯತೇ ನರೈಃ ।
ತೃಪ್ಯಂತಿ ತೇನ ಚಾಂಡಾಲಾಃ ಪುಷ್ಕಸಾದ್ಯಾಸು ಯೋನಿಷು ॥ ೨೨ ॥
ಅನ್ನಪ್ರಕಿರಣಂ ಯತ್ತು ಮನುಷ್ಯೈಃ ಕ್ರಿಯತೇ ಭುವಿ ।
ತೇನ ತೃಪ್ತಿಮುಪಾಯಾಂತಿ ಯೇ ಪಿಶಾಚತ್ವಮಾಗತಾಃ ॥ ೨೩ ॥
ಯತ್ಪಯಃ ಸ್ನಾನವಸ್ತ್ರೋತ್ಥಂ ಭೂಮೌ ಪತತಿ ಪುತ್ರಕ ।
ತೇನ ಯೇ ತರುತಾಂ ಪ್ರಾಪ್ತಾಸ್ತೇಷಾಂ ತೃಪ್ತಿಃ ಪ್ರಜಾಯತೇ ॥ ೨೪ ॥
ಯಾಸ್ತು ಗಂಧಾಂಬುಕಣಿಕಾಃ ಪತಂತಿ ಧರಣೀತಲೇ ।
ತಾಭಿರಾಪ್ಯಾಯನಂ ತೇಷಾಂ ಯೇ ದೇವತ್ವಮುಪಾಗತಾಃ ॥ ೨೫ ॥
ಉದ್ಧೃತೇಷ್ವಪಿ ಪಿಂಡೇಷು ಯಶ್ಚಾನ್ನಕಣಿಕಾ ಭುವಿ ।
ತಾಭಿರಾಪ್ಯಾಯನಂ ತೇಷಾಂ ತಿರ್ಯಕ್ತ್ವಂ ಚ ಕುಲೇ ಗತಾಃ । ॥ ೨೬ ॥
ಯೇ ಚಾದಗ್ಧಾಃ ಕುಲೇ ಬಾಲಾಃ ಸ್ತ್ರಿಯೋ ಯಶ್ಚಾಪ್ಯಸಂಸ್ಕೃತಾಃ ।
ವಿಪನ್ನಾಸ್ತೇ ತು ವಿಕಿರ ಸಂಮಾರ್ಜನಸುಲಾಲಸಾಃ ॥ ೨೭ ॥
ಭುಕ್ತ್ವಾ ವಾ ಭ್ರಮತೇ ಯಚ್ಚ ಜಲಂ ಯಚ್ಚಾಙ್ಘ್ರಿ ಸೇವತೇ ।
ಬ್ರಾಹ್ಮಣಾನಾಂ ತಥಾನ್ನೇನ ತೇನ ತೃಪ್ತಿಂ ಪ್ರಯಾಂತಿ ತೇ ॥ ೨೮ ॥

---

೨೧. ಲಂಚ, ಸಾಹಸ, ಕಪಟದಿಂದ ಸಂಪಾದಿಸಿದ ಧನವು ಕೃಷ್ಣವೆನ್ನಿಸಿಕೊಳ್ಳುವುದು.

೨೨. ಅನ್ಯಾಯದಿಂದ ಸಂಪಾದಿಸಿದ ದ್ರವ್ಯಗಳಿಂದ ಮನುಷ್ಯರು ಮಾಡಿದ ಶ್ರಾದ್ಧದಿಂದ ಚಾಂಡಾಲರೂ, ಹೊಲೆಯರೂ ತೃಪ್ತಿಗೊಳ್ಳುವರು.

೨೩. ನೆಲದಲ್ಲಿ ಮಾಡಿದ ಅನ್ನಪ್ರಕ್ಷೇಪದಿಂದ ಪಿಶಾಚಿಗಳು ಸಂತುಷ್ಟವಾಗುವುವು.

೨೪. ಭೂಮಿಯಲ್ಲಿ ಬಿದ್ದ ಸ್ನಾನವಸ್ತ್ರದ ನೀರಿನಿಂದ ಮರವಾಗಿ ಹುಟ್ಟಿದವರು ತೃಪರಾಗುವರು.

೨೫. ನೆಲದಲ್ಲಿ ಬಿದ್ದ ಗಂಧದ ನೀರಿನ ಹನಿಗಳಿಂದ ದೇವತ್ವವನ್ನು ಹೊಂದಿದವರು ಸಂತುಷ್ಟರಾಗುವರು.

೨೬. ಪಿಂಡಗಳನ್ನು ಎತ್ತಿದಮೇಲೆ ನೆಲದಲ್ಲಿ ಉಳಿದ ಅನ್ನದ ಅಗುಳುಗಳಿಂದ ಪಶುಪಕ್ಷಿಗಳಾದ ವಂಶದ ಜನರು ತೃಪ್ತರಾಗುವರು.

೨೭—೨೮. ಶ್ರಾದ್ಧ ಮಾಡುವವನ ಕುಲದಲ್ಲಿ ಮಡಿದು ದಹನ ಸಂಸ್ಕಾರಗಳನ್ನು ಹೊಂದದೆ ಪಿಶಾಚತ್ವವನ್ನೂ, ಕ್ರಿಮಿಕೀಟತ್ವವನ್ನೂ ಹೊಂದಿದ ಬಾಲಕರೂ,

ಪಿತಾ ಚ ತ್ವಮನುಪ್ರಾಪ್ತಾಃ ಕ್ರಿಮಿಕೀಟತ್ವಮೇವ ಯೇ ।
ಅಥ ಕಾಲಾನ್ಪ್ರವಕ್ಷ್ಯಾಮಿ ಕಥ್ಯಮಾನಾನ್ನಿಬೋಧ ಮೇ ॥ ೨೯ ॥
ಶ್ರಾದ್ಧಂ ಕಾರ್ಯಮಮಾವಾಸ್ಯಾಂ ಮಾಸಿಮಾಸೀಂದುಸಂಕ್ಷಯೇ ।
ತಥಾಷ್ಟಕಾಸು ವಿಪ್ರಾಪ್ತೌ ಸೂರ್ಯೇಂದುಗ್ರಹಣೇ ತಥಾ ॥ ೩೦ ॥
ಅಯನೇ ವಿಷುವೇ ಯುಗ್ಮೇ ಸಾಮಾನ್ಯೇ ಚಾರ್ಕಸಂಕ್ರಮೇ ।
ಅಮಾವಾಸ್ಯಾಷ್ಟಕಾಯಾಂ ಚ ಕೃಷ್ಣಪಕ್ಷೇ ವಿಶೇಷತಃ ॥ ೩೧ ॥
ಆದ್ರಾರ್ಮಘಾರೋಹಿಣೀಷು ದ್ರವ್ಯಬ್ರಾಹ್ಮಣ ಸಂಗಮೇ ।
ಗಜಚ್ಛಾಯಾವ್ಯತೀಪಾತೇ ವಿಷ್ಟಿವೈಧೃತಿವಾಸರೇ ॥ ೩೨ ॥
ವೈಶಾಖಸ್ಯ ತೃತೀಯಾಯಾಂ ನವಮ್ಯಾಂ ಕಾರ್ತಿಕಸ್ಯ ತು ।
ಪಂಚದಶ್ಯಾಂ ತು ಮಾಘಸ್ಯ ನಭಸ್ಯೇ ಚ ತ್ರಯೋದಶೀ ॥ ೩೩ ॥
ಯುಗಾದಯಃ ಸ್ಮೃತಾ ಏತಾ ದತ್ತಸ್ಯಾಕ್ಷಯಕಾರಿಕಾಃ ॥ ೩೪ ॥
ಯಸ್ಯ ಮನ್ವಂತರಸ್ಯಾದೌ ರಥಾರೂಢೋ ದಿವಾಕರಃ ।
ಮಾಘಮಾಸಸ್ಯ ಸಪ್ತಮ್ಯಾಂ ಸಾ ತು ಸ್ಯಾದ್ರಥಸಪ್ತಮೀ ॥ ೩೫ ॥
ವೈಶಾಖಸ್ಯ ತೃತೀಯಾಯಾಂ ಕೃಷ್ಣಾಯಾಂ ಫಾಲ್ಗುನಸ್ಯ ಚ ।
ಪಂಚಮೀ ಚೈತ್ರಮಾಸಸ್ಯ ತಸ್ಯೈವಾಂತ್ಯಾ ತಥಾ ಪರಾ ॥ ೩೬ ॥

ಹೆಂಗಸರೂ ವಿಕಿರಾನ್ನದಲ್ಲಿ ಆಸಕ್ತರಾಗಿ ಬ್ರಾಹ್ಮಣರ ಅನ್ನಜಲದಿಂದ ತೃಪ್ತಿಗೊಳ್ಳುವರು. ಬಳಿಕ ಶ್ರಾದ್ಧಕಾಲವನ್ನು ಹೇಳುವೆನು. ಅದನ್ನು ತಿಳಿದುಕೊ.

೩೦–೩೨. ಪ್ರತಿತಿಂಗಳ ಅಮಾವಾಸ್ಯೆ, ಅಷ್ಟಕಗಳು, ಸೂರ್ಯಚಂದ್ರಗ್ರಹಣಗಳು, ದಕ್ಷಿಣಾಯನ ಉತ್ತರಾಯಣ ಪುಣ್ಯಕಾಲಗಳು, ಸಾಮಾನ್ಯ ಸೂರ್ಯ ಸಂಕ್ರಾಂತಿಗಳು, ಆದ್ರಾ, ಮಘಾ, ರೋಹಿಣೀ ನಕ್ಷತ್ರಗಳು, ಗಜಚ್ಛಾಯಾ, ವ್ಯತೀಪಾತಗಳು, ವಿಷ್ಟಿ, ವೈಧೃತಿಗಳು ಇವುಗಳಲ್ಲಿ ಉತ್ತಮ ಬ್ರಾಹ್ಮಣರು ದೊರಕಿದರೆ ಶ್ರಾದ್ಧವನ್ನು ಮಾಡಬೇಕು

೩೩–೩೪. ವೈಶಾಖಮಾಸದ ತದಿಗೆ, ಕಾರ್ತಿಕಮಾಸದ ನವಮೀ, ಮಾಘಮಾಸದ ಹುಣ್ಣಿಮೆ, ಶ್ರಾವಣದ ತ್ರಯೋದಶಿಗಳು, ಯುಗಾದಿಗಳು, ಇವುಗಳಲ್ಲಿ ದಾನಮಾಡಿದುದು ಅಕ್ಷಯವಾಗುವುದು.

೩೫. ಯಾವ ಮನ್ವಂತರದ ಆದಿಯಲ್ಲಿ ಸೂರ್ಯನು ರಥವನ್ನೇರುವನೊ ಆ ಮಾಘಮಾಸದ ಸಪ್ತಮಿಯು ರಥಸಪ್ತಮಿಯೆನ್ನಿಸಿಕೊಳ್ಳುವುದು.

೩೬–೩೭. ವೈಶಾಖ ತೃತೀಯಾ, ಫಾಲ್ಗುನ ಕೃಷ್ಣತೃತೀಯಾ, ಚೈತ್ರ ಪಂಚಮೀ, ಅಮಾವಾಸ್ಯೆ. ಮಾಘಶುಕ್ಲತ್ರಯೋದಶೀ, ಕಾರ್ತಿಕ ಸಪ್ತಮೀ,

ಶುಕ್ಲತ್ರಯೋದಶೀ ಮಾಘೇ ಕಾರ್ತಿಕಸ್ಯ ಚ ಸಪ್ತಮೀ ।
ಕಾರ್ತಿಕೀ ಫಾಲ್ಗುನೀ ಚೈತ್ರೀ ಜ್ಯೈಷ್ಠೀ ಪಂಚದಶೀತಿ ಚ ।
ಮನ್ವಂತರಾಃ ಸ್ಮೃತಾ ಹ್ಯೇತಾ ದತ್ತಸ್ಯಾಕ್ಷಯಕಾರಿಕಾಃ ॥ ೩೭ ॥
ಶ್ರಾವಣಸ್ಯಾಷ್ಟಮೀ ಕೃಷ್ಣಾ ತಥಾಷಾಢೀ ಚ ಪೂರ್ಣಿಮಾ ।
ಕಾರ್ತಿಕೀ ಫಾಲ್ಗುನೀ ಚೈತ್ರೀ ಜ್ಯೈಷ್ಠೀ ಪಂಚದಶೀ ತಿಥಿಃ ॥ ೩೮ ॥
ಮನ್ವಾದಯಃ ಸ್ಮೃತಾಶ್ಚೈತಾ ದತ್ತಸ್ಯಾಕ್ಷಯಕಾರಿಕಾಃ ।
ನವಮೀ ಮಾರ್ಗಶೀರ್ಷಸ್ಯ ಸಪ್ತೈತಾಃ ಸಂಸ್ಮರಾಮ್ಯಹಂ ॥ ೩೯ ॥
ಕಲ್ಪನಾಮಾದಯೋ ದೇವಿ ದತ್ತಸ್ಯಾಕ್ಷಯಕಾರಿಕಾಃ ।
ತಥಾ ಮನ್ವಂತರಸ್ಯಾದೌ ದ್ವಾದಶ್ಯೈವ ವರಾನನೇ ॥ ೪೦ ॥
ನಿತ್ಯಂ ನೈಮಿತ್ತಿಕಂ ಕಾಮ್ಯಂ ವೃದ್ಧಿಶ್ರಾದ್ಧಂ ಸಪಿಂಡಕಂ ।
ಪಾರ್ವಣಂ ಚಾತಿವಿಜ್ಞಾನಂ ಗೋತ್ರಂ ಶುದ್ಧ್ಯರ್ಥಮುತ್ತಮಂ ॥ ೪೧ ॥
ಕರ್ಮಾಂಗಂ ನವಮಂ ಪ್ರೋಕ್ತಂ ದೈವಕಂ ದಶಮಂ ಸ್ಮೃತಂ ।
ಏಕಾದಶಂ ಕ್ಷಯಾಹಂ ತು ಪುಷ್ಟ್ಯರ್ಥೇ ದ್ವಾದಶಂ ಸ್ಮೃತಂ ॥ ೪೨ ॥
ಸರ್ವೇಷಾಮೇವ ಶ್ರಾದ್ಧಾನಾಂ ಶ್ರೇಷ್ಠಂ ಸಾಂವತ್ಸರಂ ಸ್ಮೃತಂ ।
ಅಹನ್ಯಹನಿ ಯಚ್ಛ್ರಾದ್ಧಂ ನಿತ್ಯಂ ತತ್ಪರಿಕೀರ್ತಿತಂ ॥ ೪೩ ॥
ವೈಶ್ವದೇವವಿಹೀನಂ ತ್ವಶಕ್ತಾವುದಕೇನ ತು ।
ಏಕೋದ್ದಿಷ್ಟಂ ತು ಯಚ್ಛ್ರಾದ್ಧಂ ತನ್ನೈಮಿತ್ತಿಕಮುಚ್ಯತೇ ॥ ೪೪ ॥

ಕಾರ್ತಿಕ, ಫಾಲ್ಗುನ, ಚೈತ್ರ, ಜ್ಯೇಷ್ಠ ಮಾಸಗಳ ಹುಣ್ಣಿಮೆಗಳು ಇವು ಮನ್ವಂತರಗಳು ಇವುಗಳಲ್ಲಿ ದಾನಮಾಡಿದುದು ಅಕ್ಷಯವಾಗುವುದು.

೩೮–೪೪. ಅಲ್ಲದೆ ಶ್ರಾವಣ ಬಹುಳ ಅಷ್ಟಮಿ, ಆಷಾಢ, ಕಾರ್ತಿಕ, ಫಾಲ್ಗುನ, ಚೈತ್ರ, ಜ್ಯೇಷ್ಠ ಈ ಮಾಸಗಳ ಹುಣ್ಣಿಮೆಗಳು ಮನ್ವಾದಿಗಳು. ಇವುಗಳಲ್ಲಿ ದಾನ ಮಾಡಿದುದು ಅಕ್ಷಯವಾಗುವುದು. ಮಾರ್ಗಶೀರ್ಷ ನವಮಿಯೂ ಸೇರಿ ಈ ಏಳು ದಿನಗಳು ಕಲ್ಪಾದಿಗಳು. ಇವುಗಳಲ್ಲಿ ದಾನಮಾಡಿದುದು ಅಕ್ಷಯವಾಗುವುದು. ಹಾಗೆಯೇ ಮನ್ವಂತರಾದಿಯಲ್ಲಿ ನಿತ್ಯ, ನೈಮಿತ್ತಿಕ, ಕಾಮ್ಯ, ವೃದ್ಧಿಶ್ರಾದ್ಧ. ಸಪಿಂಡಕ, ಪಾರ್ವಣ, ಗೋಷ್ಠ, ಶುದ್ಧಿ, ಕರ್ಮಾಂಗ, ದೈವಕ, ಪುಷ್ಟ್ಯರ್ಥ, ಕ್ಷಯಾಹ. ಎಂದು ಈ ಹನ್ನೆರಡು ಶ್ರಾದ್ಧಗಳು ಮಾಡತಕ್ಕವು ಈ ಎಲ್ಲ ಶ್ರಾದ್ಧಗಳಲ್ಲಿ ಸಂವತ್ಸರ ಶ್ರಾದ್ಧವು ಉತ್ತಮವಾದುದು. ಪ್ರತಿದಿನ ಮಾಡತಕ್ಕ ಶ್ರಾದ್ಧವು ನಿತ್ಯವು. ಶಕ್ತಿಯಿಲ್ಲದಿರುವು ದರಿಂದ ವೈಶ್ವದೇವವಿಲ್ಲದೆ ನೀರಿನಿಂದ ಏಕೋದ್ದಿಷ್ಟ ಪೂರ್ವಕವಾಗಿಮಾಡಿದ ಶ್ರಾದ್ಧವು ನೈಮಿತ್ತವು. ಇಷ್ಟಾರ್ಥಸಿದ್ಧಿಗಾಗಿ ಇಚ್ಛೆಯಿಂದ ಮಾಡಿದ ಶ್ರಾದ್ಧವು ಕಾಮ್ಯವು. ಪುತ್ರೋತ್ಸವ ಮೊದಲಾದುವುಗಳಲ್ಲಿ ಮಾಡುವ ಶ್ರಾದ್ಧವು ವೃದ್ಧಿಶ್ರಾದ್ಧವೆನ್ನಿಸುವುದು.

ಕಾಮೇನ ವಿಹಿತಂ ಕಾಮ್ಯಮಭಿಪ್ರೇತಾರ್ಥಸಿದ್ಧಯೇ ।
ವೃದ್ಧೌ ಯತ್ಕ್ರಿಯತೇ ಶ್ರಾದ್ಧಂ ವೃದ್ಧಿಶ್ರಾದ್ಧಂ ತದುಚ್ಯತೇ ॥ ೪೫ ॥
ಯೇ ಸಮಾನಾ ಇತಿ ದ್ವಾಭ್ಯಾಮೇತಚ್ಛ್ರಾದ್ಧಂ ಸಪಿಂಡನಂ ।
ಅಮಾವಾಸ್ಯಾಂ ತು ಯಚ್ಛ್ರಾದ್ಧಂ ತತ್ಪಾರ್ವಣಮುದಾಹೃತಂ ॥ ೪೬ ॥
ಗೋಷ್ಠ್ಯಾಂ ಯತ್ಕ್ರಿಯತೇ ಶ್ರಾದ್ಧಂ ತದ್ಗೋಷ್ಠೀಶ್ರಾದ್ಧಮುಚ್ಯತೇ ।
ಕ್ರಿಯತೇ ಪಾಪಶುದ್ಧ್ಯರ್ಥಂ ಶುದ್ಧಿಶ್ರಾದ್ಧಂ ತದುಚ್ಯತೇ ॥ ೪೭ ॥
ನಿಷೇಕಕಾಲೇ ಸೋಮೇ ಚ ಸೀಮಂತೋನ್ನಯನೇ ತಥಾ ।
ತಥಾ ಪುಂಸವನೇ ಚೈವ ಶ್ರಾದ್ಧಂ ಕರ್ಮಾಂಗಮೇವ ಚ ॥ ೪೮ ॥
ದೇವಮುದ್ದಿಶ್ಯ ಕ್ರಿಯತೇ ಯತ್ತದ್ದೈವಕಮುಚ್ಯತೇ ।
ಗಚ್ಛೇದ್ದೇಶಾಂತರಂ ಯಸ್ತು ಶ್ರಾದ್ಧಂ ಕಾರ್ಯಂ ತು ಸರ್ಪಿಷಾ ॥ ೪೯ ॥
ಪುಷ್ಟ್ಯರ್ಥಮೇತದ್ವಿಜ್ಞೇಯಂ ಕ್ಷಯಾಹಂ ದ್ವಾದಶಂ ಸ್ಮೃತಂ ।
ಮೃತೇಽಹನಿ ಪಿತುರ್ಯಸ್ತು ನ ಕುರ್ಯಾಚ್ಛ್ರಾದ್ಧಮಾದರಾತ್ ॥ ೫೦ ॥
ಮಾತುಶ್ಚೈವ ವರಾರೋಹೇ ವತ್ಸರಾಂತೇ ಮೃತೇಽಹನಿ ।
ನಾಹಂ ತಸ್ಯ ಮಹಾದೇವಿ ಪೂಜಾಂ ಗೃಹ್ಣಾಮಿ ನೋ ಹರಿಃ । ॥ ೫೧ ॥
ಮೃತಾಹರ್ಯೋ ನ ಜಾನಾತಿ ಮಾನವೋ ಯದಿ ವಾ ಕ್ವಚಿತ್ ।
ತೇನ ಕಾರ್ಯಮಮಾವಾಸ್ಯಾಂ ಶ್ರಾದ್ಧಂ ಮಾಘೇಽಥ ಮಾರ್ಗಕೇ ॥ ೫೨ ॥
ಅಥ ವಿಪ್ರಾನ್ಪ್ರವಕ್ಷ್ಯಾಮಿ ಶ್ರಾದ್ಧೇ ಯೇ ಕೇಚನ ಕ್ಷಮಾಃ ।
ವಿಶಿಷ್ಟಃ ಶ್ರೋತ್ರಿಯೋ ಯೋಗೀ ವೇದವಿದ್ಯಾಸಮನ್ವಿತಃ ॥ ೫೩ ॥

ಸಮಾನೋದಕರಿಗೆ ಮಾಡುವ ಶ್ರಾದ್ಧವು ಸಪಿಂಡನವು. ಅಮಾವಾಸ್ಯೆಯಲ್ಲಿ ಮಾಡುವ ಶ್ರಾದ್ಧವು ಪಾರ್ವಣವು.

೪೭–೫೧. ಹಸುವಿನ ಕೊಟ್ಟಿಗೆಯಲ್ಲಿ ಮಾಡುವ ಶ್ರಾದ್ಧವು ಗೋಷ್ಠೀಶ್ರಾದ್ಧವು; ಪಾಪಶುದ್ಧಿಗಾಗಿ ಮಾಡುವ ಶ್ರಾದ್ಧವು ಶುದ್ಧಿಶ್ರಾದ್ಧವು; ನಿಷೇಕ, ಸೀಮಂತೋನ್ನಯನ, ಸೋಮಯಾಗ, ಪುಂಸವನಗಳಲ್ಲಿ ಮಾಡುವ ಶ್ರಾದ್ಧವು ಕರ್ಮಾಂಗಶ್ರಾದ್ಧವು; ದೇವತೆಯನ್ನುದ್ದೇಶಿಸಿ ಮಾಡುವಶ್ರಾದ್ಧವು ದೈವಕಶ್ರಾದ್ಧವು; ದೇಶಾಂತರಕ್ಕೆಹೋದವನಿಗೆ ತುಪ್ಪದಿಂದ ಪುಷ್ಟಿಗಾಗಿ ಮಾಡುವ ಶ್ರಾದ್ಧವು; ಮೃತದಿನದಲ್ಲಿ ಪ್ರತಿವರ್ಷವೂ ಮಾಡುವ ಶ್ರಾದ್ಧವು ಹನ್ನೆರಡನೆ ಕ್ಷಯಾಹಶ್ರಾದ್ಧವು; ಮೃತದಿನದಲ್ಲಿ ಪ್ರತಿವರ್ಷವೂ ಮಾಡುವಶ್ರಾದ್ಧವೂ ಆಗಿರುವುದು. ತಂದೆ ತಾಯಿಗಳಿಗೆ ಸಾಂವತ್ಸರಿಕ ಶ್ರಾದ್ಧವನ್ನು ಮಾಡದವನ ಪೂಜೆಯನ್ನು ನಾನಾಗಲಿ, ವಿಷ್ಣುವಾಗಲಿ ಪರಿಗ್ರಹಿಸುವುದಿಲ್ಲ.

೫೨. ತಂದೆ ತಾಯಿಗಳ ಮೃತದಿನವನ್ನರಿಯದ ಮನುಷ್ಯನು ಮಾಘ ಅಥವಾ, ಮಾರ್ಗಶೀರ್ಷ ಮಾಸದ ಅಮಾವಾಸ್ಯೆಯದಿನ ಶ್ರಾದ್ಧವನ್ನು ಮಾಡಬೇಕು.

೫೩–೫೬. ಬಳಿಕ ಶ್ರಾದ್ಧಯೋಗ್ಯ ಬ್ರಾಹ್ಮಣರನ್ನು ಹೇಳುವೆನು. ಸದಾಚಾರ ಸಂಪನ್ನನೂ, ಶ್ರೋತ್ರಿಯನೂ, ಯೋಗಿಯೂ, ವೇದವಿದ್ಯೆಯಿಂದ ಕೂಡಿದವನೂ,

ತ್ರಿಣಾಚಿಕೇತಸ್ತ್ರಿಮಧುಸ್ತ್ರಿಸುಪರ್ಣಃ ಷಡಂಗವಿತ್ ।
ದೌಹಿತ್ರಕಸ್ತು ಜಾಮಾತಾ ಸ್ವಸ್ರೀಯಃ ಶ್ವಶುರಸ್ತಥಾ ॥ ೫೪ ॥
ಪಂಚಾಗ್ನಿಕರ್ಮನಿಷ್ಠಶ್ಚ ತಪೋನಿಷ್ಠಶ್ಚ ಮಾತುಲಃ ।
ಪಿತೃಮಾತೃಪರಶ್ಚೈವ ಶಿಷ್ಯಸಂಬಂಧಿಬಾಂಧವಃ ॥ ೫೫ ॥
ವೇದಾರ್ಥವಿತ್ಪ್ರವಕ್ತಾ ಚ ಬ್ರಹ್ಮಚಾರೀ ಸಹಸ್ರದಃ ।
ಸಂಬಂಧಿನಂ ತಥಾ ಸಂತಂ ದೌಹಿತ್ರಂ ದುಹಿತುಃ ಪತಿಂ ॥ ೫೬ ॥
ಭಾಗಿನೇಯಂ ವಿಶೇಷೇಣ ತಥಾ ಬಂಧುಗಣಾನಪಿ ।
ನಾತಿಕ್ರಮೇನ್ನರಸ್ತ್ವೇತಾನ್ಮೂರ್ಖಾನಪಿ ವರಾನನೇ ॥ ೫೭ ॥
ನ ಬ್ರಾಹ್ಮಣಾನ್ಪರೀಕ್ಷೇತ ದೇವಕರ್ಮಣ್ಯುಪಸ್ಥಿತೇ ।
ಪೈತೃಕರ್ಮಣಿ ಸಂಪ್ರಾಪ್ತೇ ಪರೀಕ್ಷೇತ ಪ್ರಯತ್ನತಃ ॥ ೫೮ ॥
ಯೇ ಸ್ತೇನಾಃ ಪತಿತಾಃ ಕ್ಲೀಬಾಃ ಯೇ ಚ ನಾಸ್ತಿಕವೃತ್ತಯಃ ।
ತಾನ್ಹವ್ಯಕವ್ಯಯೋರ್ವಿಪ್ರಾನನರ್ಹಾನ್ಮನುರಬ್ರವೀತ್ ॥ ೫೯ ॥
ಜಟಿಲಂ ಚಾನಧೀಯಾನಂ ದುರ್ಬಲಂ ಕಿತವಂ ತಥಾ ।
ಯಾಜಯತಿ ಚ ಯೇ ಶೂದ್ರಾಂಸ್ತಾಂಶ್ಚ ಶ್ರಾದ್ಧೇ ನ ಪೂಜಯೇತ್ ।

ತ್ರಿಣಾಚಿಕೇತನೂ, ಕಾಯಿಕ, ವಾಚಿಕ, ಮಾನಸಿಕಗಳಲ್ಲಿ ಋಜುವೂ, ತ್ರಿಸುಪರ್ಣನೂ, ವೇದಾಂಗಗಳನ್ನರಿತವನೂ, ಮಗಳ ಮಗನೂ, ಅಳಿಯನೂ, ಸಹೋದರಿಯ ಮಗನೂ, ಮಾವನೂ (ಹೆಂಡತಿಯತಂದೆಯೂ) ಪಂಚ ಮಹಾಯಜ್ಞಗಳನ್ನು ಮಾಡುವವನೂ ತಪಸ್ವಿಯೂ, ಸೋದರ ಮಾವನೂ, ತಂದೆ ತಾಯಿಗಳ ಕಡೆಯವರೂ. ಶಿಷ್ಯನೂ, ಸಂಬಂಧಿಕನೂ, ಬಾಂಧವನೂ, ವೇದಾರ್ಥವನ್ನರಿತವನೂ, ವಾಗ್ಮಿಯೂ, ಬ್ರಹ್ಮಚಾರಿಯೂ, ಬಹುವಾಗಿ ದಾನ ಮಾಡುವವನೂ, ಯೋಗ್ಯಪಾತ್ರರು. ಸಂಬಂಧಿಕ ಸಜ್ಜನ, ದೌಹಿತ್ರ, ಅಳಿಯ, ಸಹೋದರಿಯ ಮಗ, ಬಂಧು ಇವರು ಮೂರ್ಖರಾದರೂ ತ್ಯಜಿಸಬಾರದು.

೫೮. ದೇವ ಕರ್ಮದಲ್ಲಿ ಬ್ರಾಹ್ಮಣರನ್ನು ಪರೀಕ್ಷಿಸಬಾರದು. ಪಿತೃ ಕರ್ಮದಲ್ಲಿ ಪ್ರಯತ್ನದಿಂದ ಪರೀಕ್ಷಿಸಬೇಕು.

೫೯. ಕಳ್ಳರೂ, ಪಾತಕಿಗಳೂ, ನಪುಂಸಕರೂ ಹವ್ಯಕವ್ಯಗಳಿಗೆ ಅನರ್ಹರೆಂದು ಮನುವು ಹೇಳಿರುವನು.

೬೦. ಜಟಾಧಾರಿ, ವೇದಾಧ್ಯಯನ ಮಾಡದವನು. ಶಕ್ತಿಯಿಲ್ಲದವನು. ವಂಚಕ ಶೂದ್ರನಿಂದ ಯಾಗ ಮಾಡಿಸುವವನು ಇವರನ್ನು ಶ್ರಾದ್ಧದಲ್ಲಿ ಪೂಜಿಸಬಾರದು.

ಚಿಕಿತ್ಸಕಾನ್ ದೇವಲಕಾನ್ಮಾಂಸವಿಕ್ರಯಿಣಸ್ತಥಾ ।
ವಿಪಣ್ಯೈಃ ಪರಿಜೀವಂತೋ ವರ್ಜ್ಯಾಃ ಸ್ಯುರ್ಹವ್ಯಕವ್ಯಯೋಃ ॥ ೬೧ ॥
ಪ್ರೇಷ್ಯೋ ಗ್ರಾಮ್ಯಾಶ್ಚ ರಾಜ್ಞಶ್ಚ ಕುನಖೀ ಶ್ಯಾವದಂತಕಃ ।
ಪ್ರತಿರೋದ್ಧಾ ಗುರೋಶ್ಚೈವ ತ್ಯಕ್ತಾಗ್ನಿರ್ವಾರ್ಧುಷಿಸ್ತಥಾ ॥ ೬೨ ॥
ಯಕ್ಷ್ಮೀ ಚ ಪಶುಪಾಲಶ್ಚ ಪರಿವೇತ್ತಾ ದುರಾಕೃತಿಃ ।
ಬ್ರಹ್ಮಧುಕ್ಪರಿವಿತ್ತಿಶ್ಚ ಗಣಾಭ್ಯಂತರ ಏವ ಚ ॥ ೬೩ ॥
ಕುಶೀಲಶ್ಚೈವ ಕಾಣಶ್ಚ ವೃಷಲೀಪತಿರೇವ ಚ ।
ಪೌನರ್ಭವಶ್ಚ ಕಾನೀನಃ ಕಿತವೋ ಮದ್ಯಪಸ್ತಥಾ ॥ ೬೪ ॥
ಪಾಪರೋಗ್ಯಭಿಶಸ್ತಶ್ಚ ದಾಂಭಿಕೋ ರಸವಿಕ್ರಯೀ ।
ಧನುಃಶರಾಣಾಂ ಕರ್ತಾ ಚ ಯಶ್ಚ ಸ್ಯಾದ್ದಿಧಿಷೂಪತಿಃ ॥ ೬೫ ॥
ಮಿತ್ರಧ್ರುದ್ದ್ಯೂತವೃತ್ತಿಶ್ಚ ಪುತ್ರಾಚಾರ್ಯಸ್ತಥೈವ ಚ ।
ಭ್ರಾಮರೀ ಮಂಡಪಾಲೀ ಚ ಚಿತ್ರಾಂಗಃ ಪಿಶುನಸ್ತಥಾ ॥ ೬೬ ॥
ಉನ್ಮತ್ತೋಽಂಧಶ್ಚ ಬಧಿರೋ ವೇದನಿಂದಿತ ಏವ ಚ ।
ಹಯಗೋಽಶ್ವೋಷ್ಟ್ರದಮಕೋ ನಕ್ಷತ್ರೈರ್ಯಶ್ಚ ಜೀವತಿ ॥ ೬೭ ॥

---

೬೧. ವೈದ್ಯರು, ಕೂಲಿಗಾಗಿ ದೇವ ಪೂಜೆ ಮಾಡುವವರು, ಮಾಂಸವನ್ನು ಮಾರುವವರು, ಕ್ರಯ ವಿಕ್ರಯದಿಂದ ಜೀವಿಸುವವರು ಇವರನ್ನು ಹವ್ಯಕವ್ಯಗಳಲ್ಲಿ ತ್ಯಜಿಸಬೇಕು.

೬೨-೬೭. ರಾಜಸೇವಕ, ಪಾಮರ, ಕೆಟ್ಟ ಹೋದ ಉಗುರುಗಳುಳ್ಳವನು, ಧೂಮ್ರ ವರ್ಣದ ಹಲ್ಲುಗಳುಳ್ಳವನು, ಗುರುದ್ರವ್ಯವನ್ನು ಕದ್ದವನು, ಅಗ್ನಿಯನ್ನು ತ್ಯಜಿಸಿದವನು, ಬುದ್ಧಿಯಿಂದ ಜೀವಿಸುವವನು, ಕ್ಷಯರೋಗಿ, ಪಶುವನ್ನು ಕಾಪಾಡುವವನು, ಅಣ್ಣನಿಗಿಂತ ಮೊದಲು ಮದುವೆ ಮಾಡಿಕೊಂಡ ತಮ್ಮನು, ಬಹಿಷ್ಕೃತನು, ಬ್ರಹ್ಮದ್ರೋಹಿ, ಪರಿವೇತ್ತನ ಅಣ್ಣನು, ಸೇನೆಯಲ್ಲಿರುವವನು, ಕೆಟ್ಟ ಸ್ವಭಾವದವನು, ಕುರುಡನು, ಶೂದ್ರಸ್ತ್ರೀಯ ಪತಿಯು, ಎರಡು ಸಾರಿ ಮದುವೆಯಾದವಳ ಮಗ, ಕನ್ಯೆಯ ಮಗ, ಜೂಜುಗಾರ, ಹೆಂಡಕುಡುಕ, ಕೆಟ್ಟರೋಗವುಳ್ಳವ, ಪರಸ್ತ್ರೀಗಮನ ಮಾಡಿದವ, ಅಹಂಕಾರಿ, ರಸ ಪದಾರ್ಥವನ್ನು ಮಾರುವವ, ಬಿಲ್ಲು ಬಾಣಗಳನ್ನು ಮಾಡುವವ, ಎರಡು ಸಾರಿ ಮದುವೆ ಮಾಡಿಕೊಂಡವಳ ಪತಿ, ಮಿತ್ರ ದ್ರೋಹಿ, ದ್ಯೂತ, ಮಗನನ್ನು ಆಚಾರ್ಯನನ್ನಾಗಿ ಮಾಡಿಕೊಂಡವ, ಕಾಮುಕ, ಮೊಸರಿನ ಮೇಲಿನ ಕೆನೆಯನ್ನು ಕಾಪಾಡುವವ, ನಾನಾ ಬಣ್ಣದ ಶರೀರವುಳ್ಳವ,

ಪಕ್ಷಿಣಾಂ ಪೋಷಕೋ ಯಶ್ಚ ಯುದ್ಧಾಚಾರ್ಯಸ್ತಥೈವ ಚ ।
ಸ್ರೋತಃ ಸಂಭೇದಕೋ ಯಶ್ಚ ವೇಶ್ಯಾನಾಂ ಪೋಷಣೇ ರತಃ ॥ ೬೮ ॥
ಗೃಹಸಂವೇಶಕೋ ದೂತಃ ವೃಕ್ಷಾರೋಪಕಏವ ಚ ।
ಆಹೇಟೀ ಶ್ಯೇನಜೀವೀ ಚ ಕನ್ಯಾದೂಷಕ ಏವ ಚ ॥ ೬೯ ॥
ಹಿಂಸ್ರೋ ವೃಷಲಪುತ್ರಶ್ಚ ಗಣಾನಾಂ ಚೈವ ಯಾಜಕಃ ।
ಆಚಾರಹೀನಃ ಕ್ಲೀಬಶ್ಚ ನಿತ್ಯಯಾಜನಕಸ್ತಥಾ ॥ ೭೦ ॥
ಕೃಷಿಜೀವೀ ಶ್ಲೀಪದೀ ಚ ಸದ್ಭಿರ್ನಿಂದಿತ ಏವ ಚ ।
ಔರಭ್ರಿಕೋ ಮಾಹಿಷಿಕಃ ಪರಪೂರ್ವಾ ಪತಿಸ್ತಥಾ ।
ಪ್ರೇತನಿರ್ಯಾತಕಾಶ್ಚೈವ ವರ್ಜನೀಯಾಃ ಪ್ರಯತ್ನತಃ ॥ ೭೧ ॥
ಏತಾನ್ವೈ ಗರ್ಹಿತಾಚಾರಾನಪಾಂಕ್ತೇಯಾನ್ದ್ವಿಜಾಧಮಾನ್ ।
ದ್ವಿಜಾನಾಂ ಸತಿ ಲೋಭೇತೂಭಯತ್ರೈವ ವಿವರ್ಜಯೇತ್ ॥ ೭೨ ॥
ವೀಕ್ಷಾಂಧೋ ವೈಕೃತಃ ಕಾಣಃ ಕುಷ್ಠೀ ಚ ವೃಷಲೀಪತಿಃ ।
ಪಾಪರೋಗಿ ಸಹಸ್ರಸ್ಯ ದಾತುರ್ನಾಶಯತೇ ಫಲಂ ॥ ೭೩ ॥

ಚಾಡಿ ಹೇಳುವವ, ಹುಚ್ಚ, ಕಿವುಡ, ವೇದವನ್ನು ನಿಂದಿಸುವವ, ಕುದುರೆ ಸವಾರ, ಒಂಟೆಗಳನ್ನು ಪಳಗಿಸುವವ, ಜ್ಯೋತಿಶಾಸ್ತ್ರದಿಂದ ಜೀವಿಸುವ ಜೋಯಿಸ, ಪಕ್ಷಿಗಳನ್ನು ರಕ್ಷಿಸುವವ, ಯುದ್ಧಾಚಾರ್ಯ, ಪ್ರವಾಹವನ್ನು ಒಡೆಯುವವ, ವೇಶ್ಯಾಪೋಷಕ, ಮನೆಯನ್ನು ಕಟ್ಟಿಸುವವ, ದೂತ, ವ್ಯವಸಾಯಗಾರ, ಬೇಟೆಯಾಡುವವ ಹದ್ದುಗಳಿಂದ ಜೀವಿಸುವವ, ಕನ್ಯೆಯನ್ನು ಕೆಡಿಸುವವ, ಘಾತುಕ, ಶೂದ್ರನ ಮಗ, ಸಮೂಹದವರಿಂದಯಾಗಮಾಡಿಸುವವ, ಆಚಾರವಿಲ್ಲದವ, ನಪುಂಸಕ, ಯಾವಾಗಲೂ ಹಣಕ್ಕಾಗಿ ಯಾಗ ಮಾಡಿಸುವವ, ಕೃಷಿಯಿಂದ ಜೀವಿಸುವವ, ಗಂಡಿಕಾವಲಿನವ, ಸಜ್ಜನರಿಂದ ನಿಂದಿಸಲ್ಪಟ್ಟವ, ಕುರಿ ಎಮ್ಮೆಗಳನ್ನು ಸಾಕುವವ, ಮೊದಲಿನ ಗಂಡ ಇದ್ದವಳನ್ನು ಮದುವೆ ಮಾಡಿಕೊಂಡವ, ಶವವಾಹಕ ಇವರೇ ಮೊದಲಾದ ನಿಂದ್ಯವಾದ ಆಚಾರವುಳ್ಳ ಪಂಕ್ತಿಬಾಹ್ಯ ನೀಚ ಬ್ರಾಹ್ಮಣರನ್ನು ಇತರ ಒಳ್ಳೆ ಬ್ರಾಹ್ಮಣರು ದೊರಕಿರುವಾಗ ಹವ್ಯಕವ್ಯಗಳಲ್ಲಿ ತ್ಯಜಿಸಬೇಕು.

೭೩. ದೃಷ್ಟಿಯಿಲ್ಲದವ, ವಿಕಾರರೂಪವುಳ್ಳವ, ಕಣ್ಣಿಲ್ಲದವ, ಕುಷ್ಠರೋಗವುಳ್ಳವ, ಶೂದ್ರಳಗಂಡ, ಪಾಪರೋಗವುಳ್ಳವ, ಇವರು ಬಹು ದಾನ ಮಾಡಿದವನ ಪುಣ್ಯ ಫಲವನ್ನು ಹಾಳು ಮಾಡುವರು.

ಯಾವದ್ಭಿಃ ಸಂಸ್ಪೃಶತ್ಯಂಗೈರ್ಬ್ರಾಹ್ಮಣಾನ್ ಶೂದ್ರಜಾಯಕಃ ।
ತಾವತಾಂ ನ ಭವೇತ್ಪ್ರೇತ್ಯ ದಾತುರ್ವಾ ತಸ್ಯ ಪೈತೃಕಂ ॥ ೭೪ ॥

ಆದೌ ಮಹಿಷಿಕಂ ದೃಷ್ಟ್ವಾ ಮಧ್ಯೇ ಚ ವೃಷಲೀಪತಿಂ ।
ಅಂತೇ ವಾರ್ಧುಷಿಕಂ ದೃಷ್ಟ್ವಾ ನಿರಾಶಾಃ ಪಿತರೋ ಗತಾಃ ॥ ೭೫ ॥

ಮಹಿಷೀ ಪ್ರೋಚ್ಯತೇ ಭಾರ್ಯಾ ಸಾ ವೈಧವ್ಯೇಽಭಿಚಾರಿಣೀ ।
ತಸ್ಯಾಂ ಯಃ ಕ್ಷಪತೇ ದೋಷಾಂ ಸ ವೈ ಮಾಹಿಷಿಕಃ ಸ್ಮೃತಃ ॥ ೭೬ ॥

ವೃಷಲೀತ್ಯುಚ್ಯತೇ ಶೂದ್ರೀ ತಸ್ಯಾ ಯಶ್ಚ ಪತಿರ್ಭವೇತ್ ।
ತದೋಷ್ಠಲಾಲಾಸಂಸರ್ಗಾತ್ಪತಿತೋ ವೃಷಲೀಪತಿಃ ॥ ೭೭ ॥

ಸ್ವಂ ವೃಷಂ ತು ಪರಿತ್ಯಜ್ಯ ಪರೇಣ ತು ವೃಷಾಯತೇ ।
ವೃಷಲೀ ಸಾತು ವಿಜ್ಞೇಯಾ ನ ಶೂದ್ರೀ ವೃಷಲೀ ಭವೇತ್ ॥ ೭೮ ॥

ಚಾಂಡಾಲೀ ಬಂಧಕೀ ವೇಶ್ಯಾ ರಜಃಸ್ಥಾ ಯಾ ಚ ಕನ್ಯಕಾ ।
ಕುಟಿಲಾ ಚ ಸ್ವಗೋತ್ರಾ ಚ ವೃಷಲ್ಯಃ ಸಪ್ತ ಕೀರ್ತಿತಾಃ ॥ ೭೯ ॥

---

೭೪. ಶೂದ್ರರಿಂದ ಯಾಗ ಮಾಡಿಸುವವನು ಎಷ್ಟು ಅಂಗಗಳಿಂದ ಎಷ್ಟು ಮಂದಿ ಬ್ರಾಹ್ಮಣರನ್ನು ಮುಟ್ಟುವನೋ; ಅಷ್ಟು ಜನ ಬ್ರಾಹ್ಮಣರಿಗಾಗಲಿ, ಅವರಿಗೆ ದಾನ ಮಾಡಿದವನಿಗಾಗಲಿ ಶ್ರಾದ್ಧಫಲವು ಲಭಿಸುವುದಿಲ್ಲ.

೭೫. ಪಿತೃಗಳು ಮೊದಲು ಮಾಹಿಷಕ ಬ್ರಾಹ್ಮಣನನ್ನೂ, ಮಧ್ಯದಲ್ಲಿ ಶೂದ್ರಳ ಗಂಡನನ್ನೂ, ಕೊನೆಯಲ್ಲಿ ಬಡ್ಡಿಯಿಂದ ಜೀವಿಸುವವನನ್ನೂ ನೋಡಿ ಹತಾಶರಾಗಿ ಹೊರಟು ಹೋಗುವರು.

೭೬. ವೈಧವ್ಯದಲ್ಲಿ ವ್ಯಭಿಚಾರಿಣಿಯಾದ ಹೆಂಡತಿಯು ವೃಷಲಿಯೆನ್ನಿಸಿಕೊಳ್ಳುವಳು. ಅವಳ ಸಂಗದಿಂದ ರಾತ್ರಿಯನ್ನು ಕಳೆಯುವವನು ಮಾಹಿಷಕನು.

೭೭. ಶೂದ್ರಸ್ತ್ರೀಯು ವೃಷಲಿಯು. ಅವಳ ತುಟಿಯ ಜೊಲ್ಲಿನ ಸಂಬಂಧದಿಂದ ಪತಿಯು ವೃಷಲೀಪತಿಯೆನ್ನಿಸಿಕೊಳ್ಳುವನು.

೭೮. ತನ್ನ ಧರ್ಮವನ್ನು ತ್ಯಜಿಸಿ ಪರರ ಧರ್ಮವನ್ನು ಆಚರಿಸುವವಳು ಪರರಪತಿಯನ್ನು ಆಶ್ರಯಿಸುವವಳು ವೃಷಲಿಯೆನ್ನಿಸಿಕೊಳ್ಳುವಳು. ಶೂದ್ರ ಸ್ತ್ರೀ ಮಾತ್ರವೇ ವೃಷಲಿಯಲ್ಲ.

೭೯. ಚಂಡಾಲಸ್ತ್ರೀ, ವ್ಯಭಿಚಾರಿಣೀ, ಸೂಳೆ, ರಜಸ್ವಲೆ, ಕನ್ಯೆ, ವಕ್ರಬುದ್ಧಿಯುಳ್ಳವಳು, ತನ್ನ ಗೋತ್ರದ ಸ್ತ್ರೀ ಇವರು ಏಳು ಮಂದಿಯೂ ವೃಷಲಿಯರು.

ಪಿತುರ್ಗೇಹೇ ತು ಯಾ ಕನ್ಯಾ ರಜಃಪಶ್ಯತ್ಯಸಂಸ್ಕೃತಾ ।
ಪತಿತಾಃ ಪಿತರಸ್ತಸ್ಯಾ ಕನ್ಯಾ ಸಾ ವೃಷಲೀ ಭವೇತ್ ॥ ೮೦ ॥
ಯಸ್ತು ತಾಂ ವರಯೇತ್ಕನ್ಯಾಂ ಬ್ರಾಹ್ಮಣೋ ಜ್ಞಾನಪೂರ್ವತಃ ।
ಅಶ್ರಾದ್ಧೇಯಮಪಾಂಕ್ತೇಯಂ ತಂ ವಿದ್ಯಾದ್ವೃಷಲೀಪತಿಂ ॥ ೮೧ ॥
ಗೌರೀ ಕನ್ಯಾ ಪ್ರಧಾನಾ ವೈ ಮಧ್ಯಮಾ ಕನ್ಯಕಾ ಮತಾ ।
ರೋಹಿಣೀ ತತ್ಸಮಾ ಜ್ಞೇಯಾ ಅಧಮಾ ಚ ರಜಸ್ವಲಾ ॥ ೮೨ ॥
ಅಪ್ರಾಪ್ತೇ ರಜಸಿ ಗೌರೀ ಪ್ರಾಪ್ತೇ ರಜಸಿ ರೋಹಿಣೀ ।
ಅಂಜನಕೃತಾ ಕನ್ಯಾ ಚ ಕುಚಹೀನಾ ತು ನಗ್ನಿಕಾ ॥ ೮೩ ॥
ಸಪ್ತವರ್ಷಾ ಭವೇದ್ಗೌರೀ ನವವರ್ಷಾ ತು ನಗ್ನಿಕಾ ।
ದಶವರ್ಷಾ ಭವೇತ್ಕನ್ಯಾ ತತ ಊರ್ಧ್ವಂ ರಜಸ್ವಲಾ ॥ ೮೪ ॥
ವ್ಯಂಜನೈರ್ಹಂತಿ ವೈ ಪುತ್ರಾನ್ಕುಲಂ ಹನ್ಯಾತ್ಪಯೋಧರಾ ।
ಗತಿಮಿಷ್ಟಾಂ ತಥಾ ಲೋಕಾನ್ಹಂತಿ ಸಾ ರಜಸಾ ಪಿತುಃ ॥ ೮೫ ॥
ಯ ಉದ್ವಹೇದ್ರಜೋಯುಕ್ತಾಂ ಸ ಜ್ಞೇಯೋ ವೃಷಲೀಪತಿಃ ॥ ೮೬ ॥

---

೮೦. ತಂದೆಯ ಮನೆಯಲ್ಲಿ ಕನ್ಯೆಯು ವಿವಾಹವಾಗದೆ ರಸಜ್ವಲೆಯಾದರೆ ಅವಳ ಪಿತೃಗಳು ಪತಿತರಾಗುವರು. ಆ ಕನ್ಯೆಯು ವೃಷಲಿಯಾಗುವಳು.

೮೧. ಬ್ರಾಹ್ಮಣನು ಜ್ಞಾನ ಪೂರ್ವಕವಾಗಿ ಆ ಕನ್ಯೆಯನ್ನು ವರಿಸಿದರೆ ಅವನನ್ನು ಶ್ರಾದ್ಧಕ್ಕೆ ಅಯೋಗ್ಯನನ್ನಾಗಿಯೂ, ಪಂಕ್ತಿ ಬಾಹ್ಯನನ್ನಾಗಿಯೂ, ವೃಷಲೀ ಪತಿಯನ್ನಾಗಿಯೂ ತಿಳಿಯಬೇಕು.

೮೨. ಗೌರೀ ಕನ್ಯೆಯು ಮುಖ್ಯಳೂ, ಕನ್ಯೆಕೆಯು ಮಧ್ಯಮಳೂ, ರೋಹಿಣಿಯು ಕನ್ಯೆಗೆ ಸಮಾನಳೂ. ರಸಜ್ವಲೆಯು ಅಧಮಳೂ ಆಗಿರುವಳು.

೮೩. ರಸಜ್ವಲೆಯಾದವಳು ಗೌರಿಯೂ, ರಸಜ್ವಲೆಯಾಗದವಳು ರೋಹಿಣಿಯೂ, ಕುಚಾದಿ ವ್ಯಂಜನಗಳಿಲ್ಲದವಳು ಕನ್ಯೆಯೂ, ಕುಚಮಾತ್ರ ಮೂಡದವಳು ನಗ್ನಿಕೆಯೂ ಆಗಿರುವಳು.

೮೪. ಏಳು ವರ್ಷದವಳು ಗೌರಿಯೂ, ಒಂಬತ್ತು ವರ್ಷದವಳು ನಗ್ನಿಕೆಯೂ, ಹತ್ತು ವರ್ಷದವಳು ಕನ್ಯೆಯೂ, ಅದರಿಂದ ಮುಂದಿನ ವಯಸ್ಸಿನವಳು ರಸಜ್ವಲೆಯೂ ಆಗಿರುವಳು.

೮೫. ಸ್ಪಷ್ಟವಾದ ಯುವತಿಚಿಹ್ನೆಯುಳ್ಳವಳು ಪುತ್ರರನ್ನೂ, ಕುಚಮಾತ್ರ ಉಳ್ಳವಳೂ ಕುಲವನ್ನೂ ದುಷ್ಟ ರಜಸ್ಸುಳ್ಳವಳು ತಂದೆಯ ಉತ್ತಮ ಗತಿಯನ್ನೂ, ಲೋಕಗಳನ್ನೂ ಕೆಡಿಸುವಳು.

೮೬–೮೭. ರಸಜ್ವಲೆಯನ್ನು ಮದುವೆ ಮಾಡಿಕೊಂಡವನು ವೃಷಲೀಪತಿಯಾಗುವನು. ಬ್ರಾಹ್ಮಣನು ಒಂದು ರಾತ್ರಿ ವೃಷಲಿಯ ಸೇವನೆಯಿಂದ ಮಾಡಿದ

ಯತ್ಕರೋತ್ಯೇಕರಾತ್ರೇಣ ವೃಷಲೀಸೇವನಾದ್ದ್ವಿಜಃ ।
ತದ್ಭೈಕ್ಷ್ಯಭುಗ್ಜಪನ್ನಿತ್ಯಂ ತ್ರಿಭಿರ್ವರ್ಷೈರ್ವ್ಯಪೋಹತಿ ॥ ೮೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರಾದ್ಧಕಲ್ಪೇ ಶ್ರಾದ್ಧಾನರ್ಹಬ್ರಾಹ್ಮಣ ಪರೀಕ್ಷಣ ಕಥನಂನಾಮ
॥ ಪಂಚೋತ್ತರದ್ವಿಶತತಮೋಽಧ್ಯಾಯಃ ॥

ಪಾಪವು ಮೂರುವರ್ಷಕಾಲ ಭಿಕ್ಷಾನ್ನವನ್ನು ತಿನ್ನುತ್ತ ಜಪಿಸುವುದರಿಂದ ಪರಿಹಾರವಾಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಶ್ರಾದ್ಧಾನರ್ಹಬ್ರಾಹ್ಮಣ ಪರೀಕ್ಷಣ ಕಥನವೆಂಬ
ಇನ್ನೂರೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡುತ್ತರದ್ವಿಶತತಮೋಽಧ್ಯಾಯಃ

ಶ್ರಾದ್ಧವಿಧಿವರ್ಣನಂ

ಈಶ್ವರ ಉವಾಚ :—

ಅಥ ಶ್ರಾದ್ಧವಿಧಿಂ ವಕ್ಷ್ಯೇ ಪಾರ್ವಣಸ್ಯ ವಿಧಾನತಃ ।
ಯಥಾಕ್ರಮಂ ಮಹಾದೇವಿ ಶೃಣುಷ್ವೈಕಮನಾಃ ಪ್ರಿಯೇ ॥ ೧ ॥
ಕೃತ್ವಾಪಸವ್ಯಂ ಪೂರ್ವೇದ್ಯುಃ ಪಿತೃಪೂರ್ವಂ ನಿಮಂತ್ರಯೇತ್ ।
ಭವದ್ಭಿಃ ಪಿತೃಕಾರ್ಯಂ ನಃ ಸಂಪಾದ್ಯಂ ಚ ಪ್ರಸೀದಥ ॥ ೨ ॥
ಸವರ್ಣಾನ್ಪ್ರೇಷಯೇದಾಪ್ತಾನ್ದ್ವಿಜಾನಾಮುಪಮಂತ್ರಣೇ ॥ ೩ ॥
ಅಭೋಜ್ಯಂ ಬ್ರಾಹ್ಮಣಸ್ಯಾನ್ನಂ ಕ್ಷತ್ರಿಯಾದ್ಯೈರ್ನಿಮಂತ್ರಿತೈಃ ।
ತಥೈವ ಬ್ರಾಹ್ಮಣಸ್ಯಾನ್ನಂ ಬ್ರಾಹ್ಮಣೇನ ನಿಮಂತ್ರಿತೈಃ ॥ ೪ ॥
ಬ್ರಾಹ್ಮಣಾನ್ನಂ ದದೇಚ್ಛೂದ್ರಂ ಶೂದ್ರಾನ್ನಂ ಬ್ರಾಹ್ಮಣೋ ದದೇತ್ ।
ಉಭಾವೇತಾವಭೋಜ್ಯಾನ್ನೌ ಭುಕ್ತ್ವಾ ಚಾಂದ್ರಾಯಣಂ ಚರೇತ್ ॥ ೫ ॥

ಕನ್ನಡದ ಅನುವಾದ

ಶ್ರಾದ್ಧವಿಧಿವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಪಾರ್ವಣ ಶ್ರಾದ್ಧದ ವಿಧಿಯನ್ನು ಕ್ರಮವಾಗಿ ಹೇಳುವೆನು. ಚಿತ್ತೈಕಾಗ್ರ್ಯದಿಂದ ಕೇಳು.

೨. ಶ್ರಾದ್ಧದ ಹಿಂದಿನ ದಿನ ಅಪಸವ್ಯದಿಂದ ಪಿತೃಪೂರ್ವಕವಾಗಿ ಬ್ರಾಹ್ಮಣರನ್ನು ನಿಮಂತ್ರಿಸಿ "ತಾವು ಪ್ರಸನ್ನರಾಗಿ ನನ್ನ ಪಿತೃಕಾರ್ಯವನ್ನು ನೆರವೇರಿಸಿ ಅನುಗ್ರಹ ಮಾಡಿರಿ" ಎಂದು ಬೇಡಿಕೊಳ್ಳಬೇಕು.

೩. ಬ್ರಾಹ್ಮಣರನ್ನು ನಿಮಂತ್ರಿಸುವುದಕ್ಕೆ ಸಮಾನ ಜಾತೀಯರಾದ ಆಪ್ತರನ್ನು ಕಳುಹಿಸಬೇಕು.

೪. ಹೀಗೆ ಕ್ಷತ್ರಿಯರಿಂದಲೂ, ಬ್ರಾಹ್ಮಣರಿಂದಲೂ, ನಿಮಂತ್ರಿತರಾದ ಬ್ರಾಹ್ಮಣರು ಇತರ ಬ್ರಾಹ್ಮಣರ ಅನ್ನವನ್ನು ಭುಂಜಿಸಬಾರದು.

೫. ಬ್ರಾಹ್ಮಣಾನ್ನವನ್ನು ಭುಂಜಿಸುವ ಶೂದ್ರನು, ಶೂದ್ರಾನ್ನವನ್ನು ಭುಂಜಿಸುವ ಬ್ರಾಹ್ಮಣನು ಇವರಿಬ್ಬರ ಅನ್ನವನ್ನೂ ಭೋಜನ ಮಾಡಬಾರದು. ಹಾಗೆ ಭುಂಜಿಸಿದರೆ ಚಾಂದ್ರಾಯಣ ವ್ರತವನ್ನಾಚರಿಸಬೇಕು.

ಉಪನಿಕ್ಷೇಪಧರ್ಮೇಣ ಶೂದ್ರಾನ್ನಂ ಯಃ ಪಚೇದ್ದ್ವಿಜಃ ।
ಅಭೋಜ್ಯಂ ತದ್ಭವೇದನ್ನಂ ಸ ಚ ವಿಪ್ರಃ ಪತೇದಧಃ ॥ ೬ ॥
ಶೂದ್ರಾನ್ನಂ ಶೂದ್ರಸಂಪರ್ಕಃ ಶೂದ್ರೇಣ ಚ ಸಹಾಸನಂ ।
ಶೂದ್ರಾಜ್ಞಾನಾಗಮಶ್ಚೈವ ಜ್ವಲಂತಮಪಿ ಪಾತಯೇತ್ ॥ ೭ ॥
ಶೂದ್ರಾನ್ನೋಪಹತಾ ವಿಪ್ರಾ ವಿಹ್ವಲಾ ರತಿಲಾಲಸಾಃ ।
ಕುಪಿತಾಃ ಕಿಂ ಕರಿಷ್ಯಂತಿ ನಿರ್ವಿಷಾ ಇವ ಪನ್ನಗಾಃ ॥ ೮ ॥
ನಗ್ನಃ ಸ್ಯಾನ್ಮಲವದ್ವಾಸಾ ನಗ್ನಃ ಕೌಪೀನವಸ್ತ್ರಧೃಕ್ ।
ದ್ವಿಕಚ್ಛೋಽನುತ್ತರೀಯಶ್ಚ ವಿಕಚ್ಛೋಽವಸ್ತ್ರ ಏವ ಚ ॥ ೯ ॥
ನಗ್ನಃ ಕಾಷಾಯವಸ್ತ್ರಃ ಸ್ಯಾನ್ನಗ್ನಶ್ಚಾರ್ಧಪಟಃ ಸ್ಮೃತಃ ।
ಅಚ್ಛಿನ್ನಾಗ್ರಂ ತು ಯದ್ವಸ್ತ್ರಂ ಮೃದಾ ಪ್ರಕ್ಷಾಲಿತಂ ತು ಯತ್ ॥ ೧೦ ॥
ಅಹತಂ ಧಾತುರಕ್ತಂ ವಾ ತತ್ಪವಿತ್ರಮಿತಿ ಸ್ಥಿತಂ ।
ಅಗ್ರತೋ ವಸತೇ ಮೂರ್ಖೋ ದೂರೇ ಚಾಸ್ಯ ಗುಣಾನ್ವಿತಃ ॥ ೧೧ ॥

---

೬. ಶೂದ್ರನ ಮನೆಯಲ್ಲಿರುವ ಶುದ್ಧ ಬ್ರಾಹ್ಮಣನ ಪಾಕಶಾಲೆಯಲ್ಲಿ ಶೂದ್ರನು ಬಂದು ಕೊಟ್ಟ ಅನ್ನ ಸಾಮಗ್ರಿಯಿಂದಾದ ಪಾಕವು ಅಭೋಜ್ಯವು. ಅದನ್ನು ಭುಂಜಿಸಿದ ಬ್ರಾಹ್ಮಣನು ಪತಿತನಾಗುವನು.

೭. ಶೂದ್ರಾನ್ನ, ಶೂದ್ರ ಸಂಬಂಧ, ಶೂದ್ರನೊಡನೆ ಕುಳಿತು ಕೊಳ್ಳುವುದು, ಶೂದ್ರನಿಂದ ಜ್ಞಾನವನ್ನು ಪಡೆಯುವುದು ಇವುಗಳು ಜ್ವಲಿಸುವ ಬ್ರಾಹ್ಮಣನನ್ನೂ ಪತಿತನನ್ನಾಗಿಸುವುದು.

೮. ಶೂದ್ರಾನ್ನ ಭೋಜನದಿಂದ ಪತಿತರೂ, ವ್ಯಸನಗೊಂಡವರೂ, ರತಿ ನಿರತರೂ, ಆದ ಬ್ರಾಹ್ಮಣರು ಕೋಪಗೊಂಡರೂ ವಿಷವಿಲ್ಲದ ನಾಗರ ಹಾವುಗಳಂತೆ ಏನನ್ನು ಮಾಡಲು ಶಕ್ತರು?

೯–೧೨. ಕೊಳೆ ಬಟ್ಟೆಯುಳ್ಳವನೂ, ಕೌಪೀನಧಾರಿಯೂ, ಎರಡು ಕಚ್ಚೆಯುಳ್ಳವನೂ, ಉತ್ತರೀಯವಿಲ್ಲದವನೂ, ಬಟ್ಟೆಯಿಲ್ಲದವನೂ, ಕಾವಿಬಟ್ಟೆಯನ್ನುಟ್ಟವನೂ. ಅರ್ಧವಸ್ತ್ರವನ್ನು ಧರಿಸಿದವನೂ ನಗ್ನನೂ. ಕತ್ತರಿಸಿದ ಸೆರಗುಳ್ಳುದೂ, ಮಣ್ಣಿನಿಂದ ತೊಳೆದುದೂ, ಹರಿಯದಿರುವುದೂ, ಗೈರಿಕ ಧಾತು ರಕ್ತವೂ ಆದ ವಸ್ತ್ರವು ಶುದ್ಧವಾದುದು. ಮುಂದೆ ಮೂರ್ಖನೂ, ದೂರದಲ್ಲಿ ಗುಣವಂತನೂ ಇರಲು ಗುಣಶಾಲಿಗೆ ದಾನ ಮಾಡಬೇಕು. ಮೂರ್ಖನನ್ನು ಮೀರಿ ದಾನ ಮಾಡಿದ ದೋಷವು ಸಂಭವಿಸುವುದಿಲ್ಲ. ಪತಿತನಲ್ಲದ ಬ್ರಾಹ್ಮಣನು ಹತ್ತಿರದಲ್ಲಿರಲು

ಗುಣಾನ್ವಿತೇ ಚ ದಾತವ್ಯಂ ನಾಸ್ತಿ ಮೂರ್ಖೇ ವ್ಯತಿಕ್ರಮಃ ।
ಯಸ್ತ್ವಾಸನ್ನಮತಿಕ್ರಮ್ಯ ಬ್ರಾಹ್ಮಣಂ ಪತಿತಾದೃತೇ ॥
ದೂರಸ್ಥಂ ಪೂಜಯೇನ್ಮೂಢೋ ಗುಣಾಢ್ಯಂ ನರಕಂ ವ್ರಜೇತ್ ॥ ೧೨ ॥
ವೇದವಿದ್ಯಾವ್ರತಸ್ನಾತೇ ಶ್ರೋತ್ರಿಯೇ ಗೃಹಮಾಗತೇ ।
ಕ್ರೀಡಂತ್ಯೋಷಧಯಃ ಸರ್ವಾ ಯಾಸ್ಯಾಮಃ ಪರಮಾಂ ಗತಿಂ ॥ ೧೩ ॥
ಸಂಧ್ಯಯೋರುಭಯೋರ್ಜಾಪ್ಯೇ ಭೋಜನೇ ದಂತಧಾವನೇ ।
ಪಿತೃಕಾರ್ಯೇ ಚ ದೈವೇ ಚ ತಥಾ ಮೂತ್ರಪುರೀಷಯೋಃ ॥ ೧೪ ॥
ಗುರೂಣಾಂ ಸಂನಿಧೌ ದಾನೇ ಯೋಗೇ ಚೈವ ವಿಶೇಷತಃ ।
ಏತೇಷು ಮೌನಮಾತಿಷ್ಠನ್ಸ್ವರ್ಗಂ ಪ್ರಾಪ್ನೋತಿ ಮಾನವಃ ॥ ೧೫ ॥
ಯದಿ ವಾಗ್ಯಮಲೋಪಃ ಸ್ಯಾಜ್ಜಪಾದಿಷು ಕಥಂಚನ ।
ವ್ಯಾಹರೇದ್ವೈಷ್ಣವಂ ಮಂತ್ರಂ ಸ್ಮರೇದ್ವಾ ವಿಷ್ಣುಮವ್ಯಯಂ ॥ ೧೬ ॥
ದಾನೇ ಸ್ನಾನೇ ಜಪೇ ಹೋಮೇ ಭೋಜನೇ ದೈವತಾರ್ಚನೇ ।
ದೇವಾನಾಮೃಜವೋ ದರ್ಭಾಃ ಪಿತೄಣಾಂ ದ್ವಿಗುಣಾಸ್ತಥಾ ॥ ೧೭ ॥

ದೂರದಲ್ಲಿರುವ ಗುಣಶಾಲಿ ಬ್ರಾಹ್ಮಣನನ್ನು ಪೂಜಿಸಿದ ಮೂಢನು ನರಕವನ್ನೈದುವನು.

೧೩. ವೇದಾಧ್ಯಯನ ಮಾಡಿದವನೂ, ವ್ರತಸ್ನಾನಗೈದವನೂ, ಶ್ರೋತ್ರಿಯನೂ ಆದ ಬ್ರಾಹ್ಮಣನು ಮನೆಗೆ ಬರಲು ಸಕಲೌಷಧಿಗಳು ತಾವು ಉತ್ತಮ ಗತಿಯನ್ನು ಹೊಂದುವೆವು ಎಂದು ವಿನೋದಪಡುವುವು.

೧೪–೧೫. ಎರಡು ಸಂಧ್ಯಾವಂದನೆ, ಜಪ, ಭೋಜನ, ದಂತ ಧಾವನ, ದೇವ ಪಿತೃಕಾರ್ಯಗಳು, ಮೂತ್ರ ಪುರೀಷೋತ್ಸರ್ಜನ, ಗುರುಸನ್ನಿಧಿ, ದಾನ, ಯೋಗ ಇವುಗಳಲ್ಲಿ ಅತಿಶಯವಾಗಿ ಮೌನವುಳ್ಳವನು ಸ್ವರ್ಗವನ್ನು ಹೊಂದುವನು.

೧೬–೧೮. ದಾನ, ಸ್ನಾನ, ಜಪ, ಹೋಮ, ಭೋಜನ, ದೇವಪೂಜೆಗಳಲ್ಲಿ ಹೇಗಾದರೂ ಮೌನವು ಲುಪ್ತವಾದರೆ ವಿಷ್ಣುಮಂತ್ರವನ್ನುಚ್ಚರಿಸಬೇಕು. ಅಥವಾ ವಿಷ್ಣುವನ್ನು ಸ್ಮರಿಸಬೇಕು. ದೇವಪೂಜೆಯಲ್ಲಿ ನೆಟ್ಟಗಿರುವ ದರ್ಭೆಗಳನ್ನೂ, ಪಿತೃಕಾರ್ಯದಲ್ಲಿ ಅದರ ಇಮ್ಮಡಿ ದರ್ಭೆಗಳನ್ನೂ ಉಪಯೋಗಿಸಬೇಕು. ದೇವಪೂಜೆಯಲ್ಲಿ ಉತ್ತರಾಭಿಮುಖನೂ, ಪಿತೃಕಾರ್ಯದಲ್ಲಿ ದಕ್ಷಿಣಾಭಿಮುಖನೂ, ಆಗಿರಬೇಕು.

ಉದಙ್ಮುಖಸ್ತು ದೇವಾನಾಂ ಪಿತೄಣಾಂ ದಕ್ಷಿಣಾಮುಖಃ ।
ಅಗ್ನಿನಾ ಭಸ್ಮನಾ ವಾಪಿ ಯವೇನಾಪ್ಯುದಕೇನ ವಾ ॥
ದ್ವಾರಸಂಕ್ರಮಣೇನಾಪಿ ಪಂಕ್ತಿದೋಷೋ ನ ವಿದ್ಯತೇ ॥ ೧೮ ॥
ಇಷ್ಟಶ್ರಾದ್ಧೇ ಕ್ರತುರ್ದಕ್ಷೋ ವೃದ್ಧೌ ಸತ್ಯವಸೂ ಸ್ಮೃತೌ ।
ನೈಮಿತ್ತಿಕೇ ಕಾಲಕಾಮೌ ಕಾಮ್ಯೇ ಚಾಧ್ವವಿರೋಚನೌ ॥ ೧೯ ॥
ಪುರೂರವಾ ಆರ್ದ್ರವಶ್ಚ ಪಾರ್ವಣೇ ಸಮುದಾಹೃತೌ ।
ಪುಷ್ಟಿಂ ಪ್ರಜಾಂ ಚ ನ್ಯಗ್ರೋಧೇ ವೃದ್ಧಿಂ ಪ್ರಜ್ಞಾಂ ಧೃತಿಂ ಸ್ಮೃತಿಂ ॥ ೨೦ ॥
ರಕ್ಷೋಘ್ನಂ ಚ ಯಶಸ್ಯಂಚ ಕಾಶ್ಮೀರ್ಯಂ ಪಾತ್ರಮುಚ್ಯತೇ ।
ಸೌಭಾಗ್ಯಮುತ್ತಮಂ ಲೋಕೇ ಮಧೂಕೇ ಸಮುದಾಹೃತಂ ॥ ೨೧ ॥
ಫಾಲ್ಗುನಪಾತ್ರೇ ತು ಕುರ್ವಾಣಃ ಸರ್ವಕಾಮಾನವಾಪ್ನುಯಾತ್ ।
ಪರಾಂ ದ್ಯುತಿಮಥಾರ್ಕಂ ತು ಪ್ರಾಕಾಶ್ಯಂ ಚ ವಿಶೇಷತಃ ॥ ೨೨ ॥
ಬಿಲ್ವೇ ಲಕ್ಷ್ಮೀಂ ತತೋ ಮೇಧಾಂ ನಿತ್ಯಮಾಯುಷ್ಯಮೇವಚ ।
ಕ್ಷೇತ್ರಾರಾಮತಥಾಂಗೇಷು ಸರ್ವಪಾತ್ರೇಷು ಚೈವ ಹಿ ॥ ೨೩ ॥
ವರ್ಷತ್ಯಜಸ್ರಂ ಪರ್ಜನ್ಯೋ ವೇಣುಪಾತ್ರೇಷು ಕುರ್ವತಃ ।
ಏತೇಷಾಂ ಲಭ್ಯತೇ ಪುಣ್ಯಂ ಸುವರ್ಣೈ ರಜತೈಸ್ತಥಾ ॥ ೨೪ ॥

ಅಗ್ನಿ, ಬೂದಿ, ಯವ, ಜಲ, ಬಾಗಿಲು ಇವುಗಳಿಂದ ಅಡ್ಡವಾಗಿದ್ದರೆ ಪತಿತನೊಡನೆ ಭೋಜನ ಮಾಡಿದರೂ ಪಂಕ್ತಿದೋಷವಿಲ್ಲ.

೧೯—೨೪. ಇಷ್ಟ ಶ್ರಾದ್ಧದಲ್ಲಿ ಕ್ರತುದಕ್ಷರೂ, ವೃದ್ಧಿ ಶ್ರಾದ್ಧದಲ್ಲಿ ಸತ್ಯವಸುಗಳೂ, ನೈಮಿತ್ತಿಕದಲ್ಲಿ ಕಾಲಕಾಮರೂ, ಕಾಮ್ಯ ಶ್ರಾದ್ಧದಲ್ಲಿ ಅಧ್ವವಿರೋಚನರೂ, ಪಾರ್ವಣಶ್ರಾದ್ಧದಲ್ಲಿ ಪುರೂರವಾ, ಆರ್ದ್ರವರೂ ದೇವತೆಗಳಾಗಿರುವರು. ಆಲದೆಲೆಯಲ್ಲಿ ಮಾಡಿದ ಶ್ರಾದ್ಧವು ಪುಷ್ಟಿ, ಪ್ರಜೆಗಳನ್ನೂ, ತಾವರೆ ಎಲೆಯಲ್ಲಿ ಬುದ್ಧಿ, ಪ್ರಜ್ಞಾ ಧೈರ್ಯ (ಸಂತೋಷ) ಸ್ಮರಣೆ, ರಾಕ್ಷಸನಾಶ, ಕೀರ್ತಿ ಇವುಗಳನ್ನೂ, ಅತಿ ಮಧುರದೆಲೆಯಲ್ಲಿ ಉತ್ತಮ ಸೌಭಾಗ್ಯವನ್ನೂ, ಅರ್ಜುನದೆಲೆಯಲ್ಲಿ ಸಮಸ್ತೇಷ್ಟಾರ್ಥಗಳನ್ನೂ, ಎಕ್ಕದೆಲೆಯಲ್ಲಿ ಅತಿಶಯ ಕಾಂತಿಯನ್ನೂ, ಬಿಲ್ವದೆಲೆಯಲ್ಲಿ ಸಂಪತ್ತು, ತಪಸ್ಸು, ಜ್ಞಾನ, ಆಯುಷ್ಯಗಳನ್ನೂ, ಕ್ಷೇತ್ರತೋಟ, ಕೆರೆ, ಇವುಗಳಲ್ಲಿ ಬಿದಿರಿನ ಪಾತ್ರೆ ಮೊದಲಾದ ಸಮಸ್ತ ಪಾತ್ರೆಗಳಲ್ಲಿ ಅತಿಶಯ ಮಳೆಯನ್ನೂ ಉಂಟು ಮಾಡುವುದು. ಚಿನ್ನ ಬೆಳ್ಳಿ ಪಾತ್ರೆಗಳಲ್ಲಿ ಇವುಗಳಲ್ಲುಂಟಾಗುವ ಪುಣ್ಯವೆಲ್ಲ ಸಿಗುವುದು.

ಪಲಾಶಫಲನ್ಯಗ್ರೋಧಪ್ಲಕ್ಷಾಶ್ವತ್ಥವಿಕಂಕತಾಃ ।
ಔದುಂಬರಸ್ತಥಾ ಬಿಲ್ವಂ ಚಂದನಂ ಯಜ್ಞಿಯಾಶ್ಚ ಯೇ ॥ ೨೫ ॥
ಸರಲೋ ದೇವದಾರುಶ್ಚ ಶಾಲಾಶ್ಚ ಖದಿರಾಸ್ತಥಾ ।
ಸಮಿದರ್ಥಂ ಪ್ರಶಸ್ತಾಃ ಸ್ಯುರೇತೇ ವೃಕ್ಷಾ ವಿಶೇಷತಃ ॥ ೨೬ ॥
ಶ್ಲೇಷ್ಮಾತಕೋ ನಕ್ತಮಾಲಃ ಕಪಿತ್ಥಂ ಶಾಲ್ಮಲೀ ತಥಾ ।
ನಿಂಬೋ ಬಿಭೀತಕಶ್ಚೈವ ಶ್ರಾದ್ಧಕರ್ಮಣಿ ಗರ್ಹಿತಾಃ ॥ ೨೭ ॥
ಅನಿಷ್ಟಶಬ್ದಾಂ ಸಂಕೀರ್ಣಾಂ ರೂಕ್ಷಾಂ ಜಂತುಮತೀಮಪಿ ।
ಪ್ರತಿಗಂಧಾಂ ತು ತಾಂ ಭೂಮಿಂ ಶ್ರಾದ್ಧಕರ್ಮಣಿ ಗರ್ಹಯೇತ್ ॥ ೨೮ ॥
ತ್ರೈಶಂಕವಂ ತ್ಯಜೇದ್ದೇಶಂ ಸರ್ವಂ ದ್ವಾದಶಯೋಜನಂ ।
ಉತ್ತರೇಣ ಮಹಾನದ್ಯಾ ದಕ್ಷಿಣೇನ ಚ ಕೇವಲಂ ॥ ೨೯ ॥
ದೇಶಸ್ತ್ರೈಶಂಕವೋ ನಾಮ ವರ್ಜಿತಃ ಶ್ರಾದ್ಧಕರ್ಮಣಿ ।
ಕಾರಸ್ಕಾರಾಃ ಕಲಿಂಗಾಶ್ಚ ಸಿಂಧೋರುತ್ತರಮೇವ ಚ ।
ಪ್ರಣಷ್ಟಾಶ್ರಮಧರ್ಮಾಶ್ಚ ವರ್ಜ್ಯಾ ದೇಶಾ ಪ್ರಯತ್ನತಃ ॥ ೩೦ ॥
ಬ್ರಾಹ್ಮಣಂ ತು ಕೃತಂ ಪ್ರೋಕ್ತಂ ತ್ರೇತಾ ತು ಕ್ಷತ್ರಿಯಇತಿ ಸ್ಮೃತಂ ।
ವೈಶ್ಯಂ ದ್ವಾಪರಮಿತ್ಯಾಹುಃ ಶೂದ್ರಂ ಕಲಿಯುಗಂ ಸ್ಮೃತಂ ॥ ೩೧ ॥

೨೫–೨೬. ಮುತ್ತುಗ, ಆಲ, ಬಸರೀ, ಅಶ್ವತ್ಥ, ವಿಕಂಕತ, ಅತ್ತಿ, ಬಿಲ್ವ, ಗಂಧ, ದೇವದಾರು, ಸರಲ, ಶಾಲ, ಖದಿರ ಇವುಗಳು ಸಮಿತ್ತಿಗೆ ಉತ್ತಮವಾದ ಮರಗಳು.

೨೭. ಶ್ಲೇಷ್ಮಾತಕ ನಕ್ತಮಾಲ, ಬೇಲ, ಬೂರುಗ, ಬೇವು, ಬಿಭೀತಕ ಇವುಗಳು ಶ್ರಾದ್ಧಕ್ಕೆ ನಿಂದ್ಯವಾದುವು.

೨೮. ಕೆಟ್ಟಧ್ವನಿಯನ್ನು ಕೊಡುವುದೂ, ಮಿಶ್ರವೂ, ಕಠಿನವೂ, ಕ್ರಿಮಿಗಳುಳ್ಳುದೂ ಕೆಟ್ಟವಾಸನೆಯುಳ್ಳುದೂ ಆದ ಸ್ಥಳದಲ್ಲಿ ಶ್ರಾದ್ಧಮಾಡಬಾರದು.

೨೯–೩೦. ಮಹಾನದಿಯ ಉತ್ತರ ದಕ್ಷಿಣದಲ್ಲಿ ದ್ವಾದಶಯೋಜನ ವಿಸ್ತೀರ್ಣವಾದ ತ್ರೈಶಂಕವದೇಶದಲ್ಲಿ ಶ್ರಾದ್ಧಮಾಡಕೂಡದು. ಕಾರಸ್ಕಾರ, ಕಳಿಂಗ, ಸಿಂಧುನದಿಯ ಉತ್ತರಭಾಗ ಇವು ಆಶ್ರಮಧರ್ಮಗಳಿಲ್ಲದ ದೇಶಗಳು. ಇವುಗಳನ್ನು ತ್ಯಜಿಸಬೇಕು.

೩೧. ಕೃತಯುಗವನ್ನು ಬ್ರಾಹ್ಮಣನೆಂದೂ, ತ್ರೇತಾಯುಗವನ್ನು ಕ್ಷತ್ರಿಯನೆಂದೂ, ದ್ವಾಪರವನ್ನು ವೈಶ್ಯನೆಂದೂ, ಕಲಿಯುಗವನ್ನು ಶೂದ್ರನೆಂದೂ ಹೇಳುವರು.

ಕೃತೇ ಚ ಪಿತರಃ ಪೂಜ್ಯಾಸ್ತ್ರೇತಾಯಾಂ ಚ ಸುರಾಸ್ತಥಾ ।
ಮುನಯೋ ದ್ವಾಪರೇ ನಿತ್ಯಂ ಪಾಖಂಡಾಶ್ಚ ಕಲೌ ಯುಗೇ ॥ ೩೨ ॥
ಶುಕ್ಲಪಕ್ಷಸ್ಯ ಪೂರ್ವಾಹ್ಣೇ ಶ್ರಾದ್ಧಂ ಕುರ್ಯಾದ್ವಿಚಕ್ಷಣಃ ।
ಕೃಷ್ಣಪಕ್ಷೇಽಪರಾಹ್ಣೇ ತು ರೌಹಿಣಂ ನ ವಿಲಂಘಯೇತ್ ॥ ೩೩ ॥
ರತ್ನಿಮಾತ್ರಪ್ರಮಾಣಂ ಚ ಪಿತೃತೀರ್ಥಂ ತು ಸಂಸ್ಕೃತಂ ।
ಉಪಮೂಲೇ ತಥಾ ಲೂನಾಃ ಪ್ರಸ್ತರಾರ್ಥೇ ಕುಶೋತ್ತಮಾಃ ॥ ೩೪ ॥
ತತೋ ಶ್ಯಾಮಾಕನೀವಾರಾಃ ದೂರ್ವಾಶ್ಚ ಸಮುದಾಹೃತಾಃ ।
ಪೂರ್ವಂ ಕೀರ್ತಿಮತಾಂ ಶ್ರೇಷ್ಠೋ ಬಹುಕೇಶಃ ಪ್ರಜಾಪತಿಃ ॥ ೩೫ ॥
ತಸ್ಯ ಕೇಶಾ ನಿಪತಿತಾ ಭೂಮೌ ಕೇಶತ್ವಮಾಗತಾಃ ।
ತಸ್ಮಾನ್ಮೇಧ್ಯಾ ಸದಾ ಕಾಶಾಃ ಶ್ರಾದ್ಧಕರ್ಮಣಿ ಪೂಜಿತಾಃ ॥ ೩೬ ॥
ಪಿಂಡನಿರ್ವಪಣಂ ತೇಷು ಕರ್ತವ್ಯಂ ಭೂತಿಮಿಚ್ಛತಾ ।
ಉಷ್ಣಮನ್ನಂ ದ್ವಿಜಾತಿಭ್ಯಃ ಶ್ರದ್ಧಯಾ ವಿನಿವೇಶಯೇತ್ ॥ ೩೭ ॥
ಅನ್ಯತ್ರ ಫಲಪುಷ್ಪೇಭ್ಯಃ ಪಾನಕೇಭ್ಯಶ್ಚ ಪಂಡಿತಃ ।
ಹಸ್ತೇ ದತ್ವಾ ತು ಸ್ನೇಹಾಲ್ಲವಣಂ ವ್ಯಂಜನಾನಿ ಚ ॥ ೩೮ ॥

---

೩೨ ಕೃತಯುಗದಲ್ಲಿ ಪಿತೃಗಳೂ. ತ್ರೇತಾಯುಗದಲ್ಲಿ ದೇವತೆಗಳೂ, ದ್ವಾಪರ ಯುಗದಲ್ಲಿ ಮುನಿಗಳೂ. ಕಲಿಯುಗದಲ್ಲಿ ಪಾಷಂಡಿಗಳೂ ಪೂಜ್ಯರು.

೩೩. ಶುಕ್ಲಪಕ್ಷದಲ್ಲಿ ಪೂರ್ವಾಹ್ಣದಲ್ಲಿಯೂ, ಕೃಷ್ಣಪಕ್ಷದಲ್ಲಿ ಅಪರಾಹ್ಣದಲ್ಲಿ ರೌಹಿಣವನ್ನು ಮೀರದೆ ಶ್ರಾದ್ಧಮಾಡಬೇಕು.

೩೪–೩೬. ರತ್ನಿ ಪ್ರಮಾಣವುಳ್ಳದು ಪಿತೃತೀರ್ಥವು. ಬುಡದ ಹತ್ತಿರ ಕತ್ತರಿಸಿದ ದರ್ಭೆಗಳು ಹಾಸುವುದಕ್ಕೆ ಉತ್ತಮವಾದುವು. ಹಾಗೆಯೇ ನವಣೆ, ಶಾಮೆ, ಗರಿಕೆ ಇವು ಶ್ರಾದ್ಧಕ್ಕೆ ಯೋಗ್ಯವಾದುವು. ಹಿಂದೆ ಕೀರ್ತಿಮಂತನಾದ ಬಹುಕೇಶ ಪ್ರಜಾಪತಿಯು ಭೂಮಿಯಲ್ಲಿ ಬಿದ್ದ ಕೇಶಗಳು ಕಾಶಗಳಾದುವು. ಆದ್ದರಿಂದ ಕಾಶಗಳು ಯಾವಾಗಲೂ ಪವಿತ್ರವಾದುವು. ಮತ್ತು ಶ್ರಾದ್ಧಕ್ಕೆ ಅರ್ಹವಾದುವು.

೩೭. ಐಶ್ವರ್ಯವನ್ನು ಬಯಸುವವನು ಆಕಾಶಗಳಲ್ಲಿ ಪಿಂಡಪ್ರದಾನಮಾಡಬೇಕು. ಬ್ರಾಹ್ಮಣರಿಗೆ ಶ್ರದ್ಧೆಯಿಂದ ಬಿಸಿಯನ್ನವನ್ನು ಬಡಿಸಬೇಕು.

೩೮. ಜ್ಞಾನಿಯು ಪ್ರೀತಿಯಿಂದ ಹಣ್ಣು, ಹೂವು, ಪಾನಕಗಳನ್ನುಳಿದು ಉಪ್ಪು, ವ್ಯಂಜನಗಳನ್ನು ಬ್ರಾಹ್ಮಣರ ಹಸ್ತದಲ್ಲಿ ಕೊಡಕೂಡದು.

ಆಯಸೇನ ಚ ಪಾತ್ರೇಣ ತದ್ವೈ ರಕ್ಷಾಂಸಿ ಭುಂಜತೇ ।
ದ್ವಿಜಪಾತ್ರೇಷು ದತ್ವಾನ್ನಂ ತೂಷ್ಣೀಂ ಸಂಕಲ್ಪಮಾಚರೇತ್ ॥ ೩೯ ॥
ದರ್ವ್ಯಾದಿಸ್ಥೇನ ನೋ ತೇಷಾಂ ಸಂಬಂಧೋ ದೃಶ್ಯತೇ ಪುನಃ ।
ಯಶ್ಚ ಸೂಕರವದ್ಭುಂಕ್ತೇ ಯಶ್ಚ ಪಾಣಿತಲೇ ದ್ವಿಜಃ ।
ನ ತದಶ್ನಂತಿ ಪಿತರೋ ಯಃ ಸವಾಚಂ ಸಮಶ್ನುತೇ ॥ ೪೦ ॥
ದ್ವಿಹಾಯನಸ್ಯ ವತ್ಸಸ್ಯ ವಿಂಶತ್ಯಾಸ್ಯಂ ಯಥಾ ಸುಖಂ ।
ತಥಾ ಕುರ್ಯಾತ್ಪ್ರಮಾಣೇನ ಪಿಂಡಾನ್ವ್ಯಾಸೇನ ಭಾಷಿತಂ ॥ ೪೧ ॥
ನ ಸ್ತ್ರೀ ಪ್ರಚಾಲಯೇತ್ತಾನಿ ಜ್ಞಾನಹೀನೋ ನ ಚಾವ್ರತಃ ।
ಸ್ವಯಂ ಪುತ್ರೋಽಥವಾ ಯಸ್ಯ ವಾಂಛೇದಭ್ಯುದಯಂ ಪರಂ ॥ ೪೨ ॥
ಭಾಜನೇಷು ಚ ತಿಷ್ಠತ್ಸು ಸ್ವಸ್ತಿಂ ಕುರ್ವಂತಿ ಯೇ ದ್ವಿಜಾಃ
ತದನ್ನಮಸುರೈರ್ಗ್ರಸ್ತಂ ನಿರಾಶಾಃ ಪಿತರೋ ಗತಾಃ ॥ ೪೩ ॥
ಅಪ್ಸ್ವೇಕಂ ಪ್ಲಾವಯೇತ್ಪಿಂಡಮೇಕಂ ಪತ್ನ್ಯೈ ನ್ಯವೇದಯೇತ್ ।
ಏಕಂ ವೈ ಜುಹುಯಾದಗ್ನಾವೇಷಾ ತು ತ್ರಿವಿಧಾ ಗತಿಃ ॥ ೪೪ ॥

೩೯–೪೦. ಅವನ್ನು ಕಬ್ಬಿಣದ ಪಾತ್ರೆಯಲ್ಲಿತ್ತರೆ ರಾಕ್ಷಸರು ಭುಂಜಿಸುವರು. ಬ್ರಾಹ್ಮಣರಿಗೆ ಸೌಟು ಮೊದಲಾದುವುಗಳಲ್ಲಿರುವ ಅನ್ನದ ಸಂಬಂಧವಿಲ್ಲದಿರುವುದರಿಂದ ಅವರಿಗೆ ಪಾತ್ರೆಯಲ್ಲಿಯೇ ಅನ್ನವನ್ನು ಬಡಿಸಿ ಸಂಕಲ್ಪಮಾಡಬೇಕು. ಬ್ರಾಹ್ಮಣನು ಹಂದಿಯಂತೆ ಭುಂಜಿಸಿದರೂ, ಅಂಗೈಯಲ್ಲಿ ಬಡಿಸಿಕೊಂಡು ತಿಂದರೂ, ಇತರ ಮಾತುಗಳನ್ನಾಡುತ್ತ ಭೋಜನಮಾಡಿದರೂ ಪಿತೃಗಳು ಅದನ್ನು ತಿನ್ನುವುದಿಲ್ಲ.

೪೧. ಎರಡು ವರ್ಷದ ಕರುವಿನ ಬಾಯಿಯೊಳಗೆ ಸುಖವಾಗಿ ಪ್ರವೇಶಿಸುವಷ್ಟು ಗಾತ್ರದ ಪಿಂಡವನ್ನು ಮಾಡಬೇಕೆಂದು ವ್ಯಾಸಮುನಿಯು ಹೇಳಿರುವನು.

೪೨. ಅತಿಶಯಾಭ್ಯುದವನ್ನು ಬಯಸುವವನು ಪ್ರದಾನಮಾಡಿದ ಪಿಂಡವನ್ನು ಅವನಾಗಲಿ, ಅವನ ಮಗನಾಗಲಿ ಅಲ್ಲಾಡಿಸಬೇಕು. ಹೆಂಗಸಾಗಲಿ, ಮೂಢನಾಗಲಿ, ವ್ರತಬಾಹ್ಯನಾಗಲಿ ಅಲ್ಲಾಡಿಸಬಾರದು.

೪೩. ಬ್ರಾಹ್ಮಣರು ತಾವು ಊಟಮಾಡುತ್ತಿರುವಾಗ ಆಶೀರ್ವಾದವನ್ನು ಮಾಡಿದರೆ ಆ ಅನ್ನವನ್ನು ಅಸುರರು ಭುಂಜಿಸುವರು. ಪಿತೃಗಳು ಹತಾಶರಾಗಿ ಹಿಂದಿರುಗುವರು.

೪೪. ಒಂದು ಪಿಂಡವನ್ನು ನೀರಿನಲ್ಲಿ ತೇಲಿಸಬೇಕು. ಒಂದು ಪಿಂಡವನ್ನು ಪತ್ನಿಗೆ ಕೊಡಬೇಕು. ಮತ್ತೊಂದನ್ನು ಅಗ್ನಿಯಲ್ಲಿ ಹೋಮಿಸಬೇಕು. ಇದು ಪಿಂಡವನ್ನು ವಿನಿಯೋಗಿಸಲರ್ಹವಾದ ಮೂರು ಕ್ರಮವು.

ಛಂದೋಗಂ ಭೋಜಯೇಚ್ಛ್ರಾದ್ಧೇ ವೈಶ್ವದೇವೇ ಚ ಬಹ್ವೃಚಂ ।
ಪುಷ್ಟಿಕರ್ಮಣ್ಯಥಾಧ್ವರ್ಯುಂ ಶಾಂತಿಕರ್ಮಣ್ಯಥರ್ವಣಂ ॥ ೪೫ ॥
ದ್ವೌ ದೇವೇಽಥರ್ವಣೌ ವಿಪ್ರೌ ಪ್ರಾಙ್ಮುಖೌ ಚ ನಿವೇಶಯೇತ್ ।
ಪಿತ್ರ್ಯೇ ಹ್ಯುದಙ್ಮುಖಾನ್ಕುರ್ಯಾದ್ಬಹ್ವೃಚಾಧ್ವರ್ಯುಸಾಮಗಾನ್ ॥ ೪೬ ॥
ಜಾತಶ್ಚ ಸರ್ವಾ ದಾತವ್ಯಾ ಮಲ್ಲಿಕಾ ಶ್ವೇತಯೂಥಿಕಾ ।
ಜಲೋದ್ಭವಾನಿ ಸರ್ವಾಣಿ ಕುಸುಮಾನಿ ಚ ಚಂಪಕಂ ॥ ೪೭ ॥
ಮಧೂಕಂ ರಾಮಠಂ ಚೈವ ಕರ್ಪೂರಂ ಮರಿಚಂ ಗುಡಂ ।
ಶ್ರಾದ್ಧಕರ್ಮಣಿ ಶಸ್ತಾನಿ ಸೈಂಧವಂ ತ್ರಪುಸಂ ತಥಾ ॥ ೪೮ ॥
ಬ್ರಾಹ್ಮಣಃ ಕಂಬಲೋ ಗಾವಃ ಸೂರ್ಯೋಽಗ್ನಿರತಿಥಿಶ್ಚ ವೈ ।
ತಿಲಾ ದರ್ಭಾಶ್ಚ ಕಾಲಶ್ಚ ನವೈತೇ ಕುತಪಾಃ ಸ್ಮೃತಾಃ ॥ ೪೯ ॥
ಆಪದ್ಯನಗ್ನೌ ತೀರ್ಥೇ ಚ ಚಂದ್ರಸೂರ್ಯಗ್ರಹೇ ತಥಾ ।
ನಾಚರೇತ್ಸಂಗ್ರಹೇ ಚೈವ ತಥೈವಾಸ್ತಮುಪಾಗತೇ ॥ ೫೦ ॥

---

೪೫. ಶ್ರಾದ್ಧದಲ್ಲಿ ಸಾಮವೇದಿಯನ್ನೂ, ವೈಶ್ವದೇವದಲ್ಲಿ ಋಗ್ವೇದಿಯನ್ನೂ, ಪುಷ್ಟಿಕರ್ಮದಲ್ಲಿ ಯಜುರ್ವೇದಿಯನ್ನೂ, ಶಾಂತಿ ಕರ್ಮದಲ್ಲಿ ಅಥರ್ವವೇದಿಯನ್ನೂ ಭೋಜನ ಮಾಡಿಸಬೇಕು.

೪೬. ದೇವಕರ್ಮದಲ್ಲಿ ಇಬ್ಬರು ಅಥರ್ವವೇದಿಗಳನ್ನು ಪೂರ್ವಾಭಿಮುಖವಾಗಿಯೂ, ಪಿತೃಕರ್ಮದಲ್ಲಿ ಋಗ್ಯಜುಸ್ಸಾಮ ವೇದಿಗಳನ್ನು ಉತ್ತರ ಮುಖವಾಗಿಯೂ ಕುಳ್ಳಿರಿಸಬೇಕು.

೪೭. ಸಮಸ್ತ ಜಾತಿಯ ಜಾಜಿ ಹೂವುಗಳೂ, ಮಲ್ಲಿಗೆ, ಶ್ವೇತಯೂಥಿಕಾ, ನೀರಿನಲ್ಲಿ ಹುಟ್ಟಿದ ಎಲ್ಲ ಬಗೆಯ ಹೂವುಗಳೂ, ಸಂಪಿಗೆಹೂವೂ ಶ್ರಾದ್ಧದಲ್ಲಿ ಕೊಡಲರ್ಹವಾದುವು

೪೮. ಅತಿಮಧುರ, ಹಿಂಗು, ಕರ್ಪೂರ, ಮೆಣಸು, ಬೆಲ್ಲ, ಉಪ್ಪು, ಸೌತೆಕಾಯಿ ಇವು ಶ್ರಾದ್ಧದಲ್ಲಿ ಪ್ರಶಸ್ತವಾದುವು

೪೯. ಬ್ರಾಹ್ಮಣ, ಕಂಬಲಿ, ಗೋವು, ಸೂರ್ಯ, ಅಗ್ನಿ, ಅತಿಥಿ, ಎಳ್ಳು, ದರ್ಭೆ, ಕಾಲ ಇವು ಒಂಬತ್ತು ಕುತಪಗಳು.

೫೦. ಆಪತ್ಕಾಲ, ಅಗ್ನಿಯಿಲ್ಲದ ತೀರ್ಥ, ಚಂದ್ರಸೂರ್ಯರ ಗ್ರಹಣ, ಉನ್ನತ ಸ್ಥಳ, ಸೂರ್ಯನು ಮುಳುಗಿದ ಅನಂತರ ಕಾಲ ಇವುಗಳಲ್ಲಿ ಶ್ರಾದ್ಧ ಮಾಡಬಾರದು.

ಸಂಶುದ್ಧಾ ಸ್ಯಾಚ್ಚತುರ್ಥೇಽಹ್ನಿ ಸ್ನಾತಾ ನಾರೀ ರಜಸ್ವಲಾ ।
ದೈವಕರ್ಮಣಿ ಪಿತ್ರ್ಯೇ ಚ ಪಂಚಮೇಽಹನಿ ಶುದ್ಧ್ಯತಿ ॥ ೫೧ ॥
ದ್ರವ್ಯಾಭಾವೇ ದ್ವಿಜಾಭಾವೇ ಪ್ರವಾಸೇ ಪುತ್ರಜನ್ಮನಿ ।
ಆಮಶ್ರಾದ್ಧಂ ಪ್ರಕುರ್ವೀತ ಯಜಸ್ಯ ಭಾರ್ಯಾ ರಜಸ್ವಲಾ ॥ ೫೨ ॥
ಸರ್ಪವಿಪ್ರಹತಾನಾಂ ಚ ದಂಷ್ಟ್ರಿಶೃಂಗಿಸರೀಸೃಪೈಃ ।
ಆತ್ಮನಸ್ತ್ಯಾಗಿನಾಂ ಚೈವ ಶ್ರಾದ್ಧಮೇಷಾಂ ನ ಕಾರಯೇತ್ ॥ ೫೩ ॥
ಚಂಡಾಲಾದುದಕಾತ್ಸರ್ಪಾದ್ಬ್ರಾಹ್ಮಣಾದ್ವೈದ್ಯುತಾದಪಿ ।
ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಮರಣಂ ಪಾಪಕರ್ಮಣಾಂ ॥ ೫೪ ॥
ಸರ್ವೈರನುಮತಂ ಕೃತ್ವಾ ಜ್ಯೇಷ್ಠೇನೈವ ಚ ಯತ್ಕೃತಂ ।
ದ್ರವ್ಯೇಣ ಚ ವಿಭಕ್ತೇನ ಸರ್ವೈರೇತತ್ಕೃತಂ ಭವೇತ್ ॥ ೫೫ ॥
ಅಮಾವಾಸ್ಯಾಂ ಪಿತೃಶಾದ್ಧೇ ಮಂಥನಂ ಯಸ್ತು ಕಾರಯೇತ್ ।
ತತ್ತಕ್ರಂ ಮದಿರಾತ್ತುಲ್ಯಂ ಘೃತಂ ಗೋಮಾಂಸವತ್ಸ್ಮೃತಂ ॥ ೫೬ ॥
ಭುಂಜಂತಿ ಕ್ರಮಶಃ ಪೂರ್ವೇ ಯಥಾ ಪಿಂಡಾಶಿಷೋಽಪಿ ಚ ।
ನಿಮಂತ್ರಿತೋ ದ್ವಿಜಃ ಶ್ರಾದ್ಧೇನ ಶಯೀತ ಸ್ತ್ರಿಯಾ ಸಹ ॥ ೫೭ ॥

---

೫೧. ರಜಸ್ವಲೆಯಾದ ಹೆಂಗಸು ನಾಲ್ಕನೆಯ ದಿನ ಶುದ್ಧಳಾಗುವಳು. ಆದರೆ ದೇವ, ಪಿತೃಕರ್ಮಗಳಿಗೆ ಐದನೆಯ ದಿನ ಶುದ್ಧಳಾಗುವಳು.

೫೨. ದ್ರವ್ಯ, ದ್ವಿಜರಿಲ್ಲದಿರುವಾಗಲೂ, ದೇಶಾಂತರಕ್ಕೆ ಹೋದಾಗಲೂ, ಮಗನು ಜನಿಸಿದಾಗಲೂ, ಪತ್ನಿಯು ರಸಜ್ವಲೆಯಾದಾಗಲೂ ಆಮಶ್ರಾದ್ಧವನ್ನು ಮಾಡಬೇಕು.

೫೩. ಸರ್ಪ, ಬ್ರಾಹ್ಮಣ, ಹಂದಿ, ಕೋಣ, ಹಾವು ಮೊದಲಾದುವುಗಳಿಂದ ಮೃತರಾದವರಿಗೆ ಶ್ರಾದ್ಧ ಮಾಡಬಾರದು.

೫೪. ಪಾಪಕರ್ಮಿಗಳು ಚಂಡಾಲ, ನೀರು ಸರ್ಪ, ಬ್ರಾಹ್ಮಣ, ಸಿಡಿಲು ಹಂದಿ ಮೊದಲಾದ ಘಾತುಕ ಪ್ರಾಣಿಗಳು, ಪಶುಗಳು ಇವುಗಳಿಂದ ಸಾಯುವರು.

೫೫. ಜ್ಯೇಷ್ಠನು ತಮ್ಮಂದಿರಿಂದ ಬೇರೆ ಬೇರೆಯಾಗಿ ದ್ರವ್ಯಗಳನ್ನು ಪಡೆದು ಅವರ ಒಪ್ಪಿಗೆಯಿಂದ ಶ್ರಾದ್ಧವನ್ನು ಮಾಡಿದರೆ ಎಲ್ಲರೂ ಶ್ರಾದ್ಧ ಮಾಡಿದಂತಾಗುವುದು.

೫೬. ಅಮಾವಾಸ್ಯೆ ದಿನ ಮಾಡುವ ಪಿತೃಶ್ರಾದ್ಧದಲ್ಲಿ ಮೊಸರನ್ನು ಕಡೆದರೆ ಆ ಮಜ್ಜಿಗೆಯು ಹೆಂಡಕ್ಕೂ, ತುಪ್ಪವು ಗೋಮಾಂಸಕ್ಕೂ, ಸಮಾನವಾಗುವುದು.

೫೭. ಮೊದಲು ನಿಮಂತ್ರಿತ ಬ್ರಾಹ್ಮಣರೂ, ಅನಂತರ ಪಿಂಡಕ್ಕೆ ಆಶೀರ್ವದಿಸುವ ಬ್ರಾಹ್ಮಣರೂ ಭೋಜನಮಾಡಬೇಕು. ನಿಮಂತ್ರಿತ ಬ್ರಾಹ್ಮಣನು ಆ ದಿನ ಸ್ತ್ರೀ ಸಂಗವನ್ನು ಮಾಡಕೂಡದು.

ಶ್ರಾದ್ಧಭುಕ್ಪ್ರಾತರುತ್ಥಾಯ ಪ್ರಕುರ್ಯಾದ್ದಂತಧಾವನಂ ।
ಶ್ರಾದ್ಧಕರ್ತಾ ನ ಕುರ್ವೀತ ದಂತಾನಾಂ ಧಾವನಂ ಬುಧಃ ॥ ೫೮ ॥
ವರ್ಷೇ ವರ್ಷೇ ತು ಯಚ್ಛ್ರಾದ್ಧಂ ಮಾತಾಪಿತ್ರೋರ್ಮೃತೇಽಹನಿ ।
ಮಲಮಾಸೇ ನ ಕರ್ತವ್ಯಂ ವ್ಯಾಸಸ್ಯ ವಚನಂ ತಥಾ ॥ ೫೯ ॥
ಗರ್ಭೇ ವಾರ್ಧುಷಿಕೇ ಪ್ರೇತೇ ಭೃತ್ಯೇ ಮಾಸಾನುಮಾಸಿಕೇ ।
ಆಬ್ದಿಕೇ ಚ ತಥಾ ಶ್ರಾದ್ಧೇ ನಾಧಿಮಾಸೋ ವಿಧೀಯತೇ ॥ ೬೦ ॥
ವಿವಾಹಾದೌ ಸ್ಮೃತಃ ಸೌರೋ ಯಜ್ಞಾದೌ ಸಾವನಃ ಸ್ಮೃತಃ ।
ಆಬ್ದಿಕೇ ಪಿತೃಕಾರ್ಯೇ ತು ಚಾಂದ್ರೋ ಮಾಸಃ ಪ್ರಶಸ್ಯತೇ ॥ ೬೧ ॥
ಯಸ್ಮಿನ್ರಾಶೌ ಗತೇ ಸೂರ್ಯೇ ವಿಪತ್ತಿಃ ಸ್ಯಾದ್ದ್ವಿಜನ್ಮನಃ ।
ತದ್ರಾಶಾವೇವ ಕರ್ತವ್ಯಂ ಪಿತೃಕಾರ್ಯಂ ಮೃತೇಽಹನಿ ॥ ೬೨ ॥
ವಷಟ್ಕಾರಶ್ಚ ಹೋಮಶ್ಚ ಪರ್ವ ಚಾಗ್ರಾಯಣಂ ತಥಾ ।
ಮಲಮಾಸೇಽಪಿ ಕರ್ತವ್ಯಂ ಕಾಮ್ಯಾ ಇಷ್ಟೀರ್ವಿವರ್ಜಯೇತ್ ॥ ೬೩ ॥
ಅಗ್ನ್ಯಾಧೇಯಂ ಪ್ರತಿಷ್ಠಾಂ ಚ ಯಜ್ಞದಾನವ್ರತಾನಿ ಚ ।
ವೇದವ್ರತವೃಷೋತ್ಸರ್ಗ ಚೂಡಾಕರಣಮೇಖಲಾಃ ॥ ೬೪ ॥

---

೫೮. ಶ್ರಾದ್ಧಭೋಕ್ತನು ಬೆಳಗ್ಗೆ ಎದ್ದು ದಂತಧಾವನ ಮಾಡಿಕೊಳ್ಳಬೇಕು. ಶ್ರಾದ್ಧವನ್ನು ಮಾಡುವ ಯಜಮಾನನು ಆ ದಿನ ದಂತ ಧಾವನ ಮಾಡಕೂಡದು.

೫೯. ಪ್ರತಿವರ್ಷವೂ ಮೃತದಿನದಲ್ಲಿ ತಂದೆ ತಾಯಿಗಳಿಗೆ ಶ್ರಾದ್ಧ ಮಾಡಬೇಕು. ವ್ಯಾಸರ ವಚನದಂತೆ ಮಲಮಾಸದಲ್ಲಿ ಶ್ರಾದ್ಧ ಮಾಡಬಾರದು.

೬೦. ಗರ್ಭಿಣಿ, ಸಾಲವನ್ನು ಕೊಟ್ಟು ತೆಗೆದುಕೊಳ್ಳುವವ, ಸೇವಕ ಇವರು ಮೃತರಾದರೆ ಅಧಿಕ ಮಾಸದಲ್ಲಿ ಮಾಸಿಕ ಮತ್ತು ಆಬ್ದಿಕ ಶ್ರಾದ್ಧಗಳನ್ನು ಮಾಡ ಕೂಡದು.

೬೧. ವಿವಾಹಾದಿಗಳಿಗೆ ಸೌರ ಮಾಸವೂ, ಯಜ್ಞಾದಿಗಳಿಗೆ ಸಾವನ ಮಾಸವೂ, ಆಬ್ದಿಕ ಶ್ರಾದ್ಧಕ್ಕೆ ಚಾಂದ್ರಮಾಸವೂ ಉತ್ತಮವಾದುದು.

೬೨. ಬ್ರಾಹ್ಮಣನು ಸೂರ್ಯನು ಯಾವರಾಶಿಯಲ್ಲಿರುವಾಗ ಮೃತನಾಗಿರುವನೊ, ಅವನ ಶ್ರಾದ್ಧವನ್ನು ಆ ರಾಶಿಯಲ್ಲಿ ಸೂರ್ಯನಿರುವಾಗಲೇ ಮಾಡಬೇಕು.

೬೩. ವಷಟ್ಕಾರ, ಹೋಮ, ಆಗ್ರಯಣಗಳನ್ನು ಮಲಮಾಸದಲ್ಲಿಯೂ ಮಾಡಬೇಕು. ಕಾಮ್ಯೇಷ್ಟಿಗಳನ್ನು ಮಾಡಬಾರದು.

೬೪–೬೬. ಅಗ್ನ್ಯಾಧಾನ, ದೇವತಾಪ್ರತಿಷ್ಠೆ, ಯಜ್ಞ, ದಾನ, ವ್ರತ, ವೇದವ್ರತ, ವೃಷೋತ್ಸರ್ಗ, ಚೂಡಾಕರ್ಮ, ಉಪನಯನ, ಪಟ್ಟಾಭಿಷೇಕ ಇವು

ಮಾಂಗಲ್ಯಮಭಿಷೇಕಂ ಚ ಮಲಮಾಸೇ ವಿವರ್ಜಯೇತ್ ।
ನಿತ್ಯನೈಮಿತ್ತಿಕೇ ಕುರ್ಯಾತ್ಪ್ರಯತಃ ಸನ್ಮಲಿಮ್ಲುಚೇ ।
ತೀರ್ಥೇ ಸ್ನಾನಂ ಗಜಚ್ಛಾಯಾಂ ಪ್ರೇತಶ್ರಾದ್ಧಂ ತಥೈವ ಚ ॥ ೬೫ ॥
ರಸಾ ಯತ್ರ ಪ್ರಶಸ್ಯಂತೇ ಭೋಕ್ತಾರೋ ಬಂಧುಗೋತ್ರಿಣಃ ।
ರಾಜವಾರ್ತಾದಿಸಂತ್ರಂದೋ ರಕ್ಷಃ ಶ್ರಾದ್ಧಸ್ಯ ಲಕ್ಷಣಂ ॥ ೬೬ ॥
ಶ್ರಾದ್ಧಂ ಕೃತ್ವಾ ಪರಶ್ರಾದ್ಧೇ ಯಸ್ತು ಭುಂಕ್ತೇ ಚ ವಿಹ್ವಲಃ ।
ಪತಂತಿ ಪಿತರಸ್ತಸ್ಯ ಲುಪ್ತಪಿಂಡೋದಕಕ್ರಿಯಾಃ ॥ ೬೭ ॥
ತೈಲಮುದ್ವರ್ತನಂ ಸ್ನಾನಂ ದಂತಧಾವನಮೇವ ಚ ।
ಕ್ಲೃಪ್ತರೋಮನಖೇಭ್ಯಶ್ಚ ದದ್ಯಾದ್ಗತ್ವಾ ಪರೇಽಹನಿ ॥ ೬೮ ॥
ನಿಮಂತ್ರಿತಾ ಯಥಾನ್ಯಾಯಂ ಹವ್ಯೇ ಕವ್ಯೇ ದ್ವಿಜೋತ್ತಮಾಃ ।
ಕಥಂಚಿದಪ್ಯತಿಕ್ರಾಮೇತ್ಪಾಪಃ ಶೂಕರತಾಂ ವ್ರಜೇತ್ ॥ ೬೯ ॥
ದೈವೇ ಚ ಪಿತೃಶ್ರಾದ್ಧೇ ಚಾಪ್ಯಾಶೌಚಂ ಜಾಯತೇ ಯದಾ ।
ಆಶೌಚಾಂತೇಽಥವಾ ತತ್ರ ತೇಭ್ಯಃ ಶ್ರಾದ್ಧಂ ಪ್ರದೀಯತೇ ॥ ೭೦ ॥
ಅಥ ಶ್ರಾದ್ಧಾವಸಾನೇ ತು ಆಶಿಷಸ್ತತ್ರ ದಾಪಯೇತ್ ।
ದೀರ್ಘಾ ನಾಗಾಸ್ತಥಾ ನದ್ಯೋ ವಿಷ್ಣೋಸ್ತ್ರೀಣಿ ಪದಾನಿ ಚ ॥
ಏವಮೇಷಾಂ ಪ್ರಮಾಣೇನ ದೀರ್ಘಮಾಯುರವಾಪ್ನುಯಾತ್ ॥ ೭೧ ॥

ಗಳನ್ನು ಮಲಮಾಸದಲ್ಲಿ ನಿತ್ಯನೈಮಿತ್ತಿಕಶ್ರಾದ್ಧಗಳನ್ನು ಅಗ್ನಿಯಲ್ಲಿ ಮಾಡಬೇಕು. ತೀರ್ಥಸ್ನಾನ, ಗಜಚ್ಛಾಯಾ, ಪ್ರೇತಶ್ರಾದ್ಧ ಇವುಗಳನ್ನು ಪ್ರಶಸ್ತಭೂಮಿಯಲ್ಲಿ ಚರಿಸಬೇಕು. ಇದರಲ್ಲಿ ಬಂಧುಗಳೂ, ಸಗೋತ್ರರೂ ಭುಂಜಿಸುವರು, ರಾಜನ ಸಮಾಚಾರಾದಿಗಳನ್ನು ಕೂಗಿಕೊಳ್ಳುವುದು ರಾಕ್ಷಸ ಶ್ರಾದ್ಧದ ಲಕ್ಷಣವು.

೬೭. ತಾನು ಶ್ರಾದ್ಧವನ್ನು ಮಾಡಿ ಮತ್ತೊಬ್ಬನ ಶ್ರಾದ್ಧದಲ್ಲಿ ಭುಂಜಿಸುವವನ ಪಿತೃಗಳು ಪಿಂಡೋದಕಕ್ರಿಯೆಗಳಿಲ್ಲದವರಾಗಿ ಪತಿತರಾಗುವರು.

೬೮. ತೈಲಾಭ್ಯಂಜನ, ಸ್ನಾನ, ದಂತಧಾವನ, ಕ್ಷೌರಗಳನ್ನು ಮಾಡಿಸಿಕೊಂಡವರಿಗೆ ಮಾರನೇದಿನ ದಾನಮಾಡಬೇಕು.

೬೯. ಹವ್ಯ ಕವ್ಯಗಳಲ್ಲಿ ವಿಧಿಯಂತೆ ನಿಮಂತ್ರಿತ ಬ್ರಾಹ್ಮಣರು ಯಾವುದಾದರೊಂದು ಕ್ರಮದಿಂದ ತಪ್ಪಿಸಿಕೊಂಡರೆ ಹಂದಿಯಾಗಿ ಹುಟ್ಟುವರು.

೭೦. ದೇವಪಿತೃಕಾರ್ಯಗಳಲ್ಲಿ ಆಶೌಚವು ಒದಗಿದರೆ ಆ ಆಶೌಚದ ಕೊನೆಯಲ್ಲಿ ಶ್ರಾದ್ಧ ಮಾಡಬೇಕು.

೭೧. ಶ್ರಾದ್ಧಾವಸಾನದಲ್ಲಿ ಬ್ರಾಹ್ಮಣರು ನಾಗ, ನದಿ, ವಿಷ್ಣುಪದಗಳ ಪ್ರಮಾಣದಿಂದ ಕರ್ತನು ದೀರ್ಘಾಯುಷ್ಮಂತನಾಗಲೆಂದು ಆಶೀರ್ವದಿಸಬೇಕು.

ಅಪಾಂ ಮಧ್ಯೇ ಸ್ಥಿತಾ ದೇವಾಃ ಸರ್ವಮಪ್ಸು ಪ್ರತಿಷ್ಠಿತಂ ।
ಬ್ರಾಹ್ಮಣಸ್ಯ ಕರೇ ನ್ಯಸ್ತಾಃ ಶಿವಾ ಆಪೋ ಭವಂತು ನಃ ॥ ೭೨ ॥
ಲಕ್ಷ್ಮೀರ್ವಸತಿ ಪುಷ್ಪೇಷು ಲಕ್ಷ್ಮೀರ್ವಸತಿ ಪುಷ್ಕರೇ ।
ಲಕ್ಷ್ಮೀರ್ವಸತು ವಾಸೇ ಮೇ ಸೌಮನಸ್ಯಂ ದದಾತು ಮೇ ॥ ೭೩ ॥
ಅಕ್ಷತಂ ಚಾಸ್ತು ಮೇ ಪುಣ್ಯಂ ಶಾಂತಿಃ ಪುಷ್ಟಿರ್ಧೃತಿಶ್ಚ ಮೇ ।
ಯದ್ಯಚ್ಛ್ರೇಯಸ್ಕರಂ ಲೋಕೇ ತತ್ತದಸ್ತು ಸದಾ ಮಮ ॥ ೭೪ ॥
ದಕ್ಷಿಣಾಯಾಂ ತು ಸರ್ವತ್ರ ಬಹುದೇಯಂ ತಥಾಸ್ತು ನಃ ।
ಏವಮಸ್ತ್ವಿತಿ ತೈರ್ವಾಚ್ಯಂ ಮೂರ್ಧ್ನಾ ಗ್ರಾಹ್ಯಂ ಚ ತೇನ ತತ್ ॥ ೭೫ ॥
ಪಿಂಡಮಗ್ನೌ ಸದಾ ದೇಯಾದ್ಭೋಗಾರ್ಥೀ ಸತತಂ ನರಃ ।
ಪ್ರಜಾರ್ಥೀ ಪತ್ನ್ಯೈ ದದ್ಯಾನ್ಮಧ್ಯಮಂ ಮಂತ್ರಪೂರ್ವಕಂ । ॥ ೭೬ ॥
ಉತ್ತಮಾಂ ದ್ಯುತಿಮನ್ವಿಚ್ಛನ್ಗೋಷು ನಿತ್ಯಂ ಪ್ರದಾಪಯೇತ್ ।
ಆಜ್ಞಾಮಿಚ್ಛೇದ್ಯಶಃ ಕೀರ್ತಿಮಪ್ಸು ನಿತ್ಯಂ ಪ್ರವೇಶಯೇತ್ ॥ ೭೭ ॥

---

೭೨. ದೇವತೆಗಳು ನೀರಿನಮಧ್ಯದಲ್ಲಿ ನೆಲೆಸಿರುವರು. ಎಲ್ಲವೂ ನೀರಿನಲ್ಲಿಯೇ ಇರುವುವು. ಬ್ರಾಹ್ಮಣನ ಕೈಯಲ್ಲಿಟ್ಟ ಜಲವು ನಮಗೆ ಮಂಗಳವನ್ನುಂಟುಮಾಡಲಿ.

೭೩. ಲಕ್ಷ್ಮಿಯು ಹೂವುಗಳಲ್ಲಿಯೂ, ಪುಷ್ಕರದಲ್ಲಿಯೂ ವಾಸಿಸುವಳು. ಲಕ್ಷ್ಮಿಯು ನನ್ನ ಮನೆಯಲ್ಲಿ ವಾಸಿಸಲಿ ಅವಳು ನನಗೆ ಸೌಮನಸ್ಯವನ್ನೀಯಲಿ

೭೪. ನನ್ನ ಪುಣ್ಯವು ಅಕ್ಷತವಾಗಲಿ, ನನಗೆ ಶಾಂತಿ, ಪುಷ್ಟಿ, ಸಂತೋಷಗಳುಂಟಾಗಲಿ, ಲೋಕದಲ್ಲಿ ಯಾವುದು ಶ್ರೇಯಸ್ಸುಂಟುಮಾಡುವುದೊ, ಅದು ಯಾವಾಗಲೂ ನನಗುಂಟಾಗಲಿ.

೭೫. ದಕ್ಷಿಣೆಯನ್ನು ಅತಿಶಯವಾಗಿ ಕೊಡಲು ನನಗೆ ಶಕ್ತಿಯುಂಟಾಗಲಿ ಎಂದು ಕರ್ತನು ಪ್ರಾರ್ಥಿಸಲು ಬ್ರಾಹ್ಮಣರು ಹಾಗೆಯೇ ಆಗಲೆನ್ನಬೇಕು. ಅವರ ಆಶೀರ್ವಾದವನ್ನು ಕರ್ತನು ತಲೆಯಿಂದ ಸ್ವೀಕರಿಸಬೇಕು.

೭೬. ಸುಖಭೋಗವನ್ನು ಬಯಸುವ ಮನುಷ್ಯನು ಪಿಂಡವನ್ನು ಅಗ್ನಿಗರ್ಪಿಸಬೇಕು. ಪ್ರಜಾರ್ಥಿಯು ಪಿಂಡವನ್ನು ಪತ್ನಿಗೆ ಕೊಡಬೇಕು. ಇದು ಮಧ್ಯಮ ಪಕ್ಷವು.

೭೭. ಉತ್ತಮದ್ಯುತಿಯನ್ನು ಅಪೇಕ್ಷಿಸುವವನು ಗೋವಿಗೆ ಕೊಡಬೇಕು. ಕೀರ್ತಿಯನ್ನು ಬಯಸುವವನು ಜಲದಲ್ಲಿ ಹಾಕಬೇಕು.

ಪ್ರಾರ್ಥಯನ್ದೀರ್ಘಮಾಯುಶ್ಚ ವಾಯಸೇಭ್ಯಃ ಪ್ರದಾಪಯೇತ್ ।
ಕುಮಾರಲೋಕಮನ್ವಿಚ್ಛನ್ಕುಕ್ಕುಟೇಭ್ಯಃ ಪ್ರದಾಪಯೇತ್ ॥ ೭೮ ॥
ಆಕಾಶೇ ಪ್ರಕ್ಷಿಪೇದ್ವಾಪಿ ಸ್ಥಿತೋ ವಾ ದಕ್ಷಿಣಾಮುಖಃ ।
ಪಿತೃಣಾಂ ಸ್ಥಾನಮಾಕಾಶಂ ದಕ್ಷಿಣಾ ಚೈವ ದಿಕ್ತಥಾ ॥ ೭೯ ॥
ನಕ್ತಂ ತು ವರ್ಜಯೇಚ್ಛ್ರಾದ್ಧಂ ರಾಹೋರನ್ಯತ್ರ ದರ್ಶನಾತ್ ।
ಸರ್ವಸ್ವೇನಾಪಿ ಕರ್ತವ್ಯಂ ಕ್ಷಿಪ್ರಂ ವೈ ರಾಹುದರ್ಶನಾತ್ ॥ ೮೦ ॥
ಉಪರಾಗೇ ನ ಕುರ್ಯಾದ್ಯಃ ಪಂಕೇ ನೌರಿವ ಸೀದತಿ ।
ಕುರ್ವಾಣಸ್ತು ತರೇತ್ಪಾಪಂ ಸಾ ಚ ನೌರಿವ ಸಾಗರೇ ॥ ೮೧ ॥
ಕೃಷ್ಣಮಾಷಾಸ್ತಿಲಾಶ್ಚೈವ ಶ್ರೇಷ್ಠಾಃ ಸ್ಯುರ್ಯವಶಾಲಯಃ ।
ಮಹಾಯವಾ ವ್ರೀಹಿಯವಾಸ್ತಥೈವ ಚ ಮಸೂರಿಕಾಃ ॥ ೮೨ ॥
ಕೃಷ್ಣಾಃ ಶ್ವೇತಾಶ್ಚ ವಾ ಗ್ರಾಹ್ಯಾಃ ಶ್ರಾದ್ಧಕರ್ಮಣಿ ಸರ್ವದಾ ।
ಬಿಲ್ವಾಮಲಕಮೃದ್ವೀಕಂ ಪನಸಾಮ್ರಾತದಾಡಿಮಂ ॥ ೮೩ ॥
ಧವ್ಯಂ ಪಾರಾಪತಂ ಚೈವ ಖರ್ಜೂರಂ ಕರಮರ್ದಕಂ ।
ಸಕೋರಕಾ ಬದರ್ಯಶ್ಚ ತಾಲಕಂದಂ ತಥಾ ಬಿಸಂ ॥ ೮೪ ॥
ತಮಾಲಾಸನಕಂದಂ ಚ ಮಾವೇಲ್ಲಂ ಶತಕಂದಲೀ ।
ಕಾಲೇಯಂ ಕಾಲಶಾಕಂ ಚ ಮುದ್ಗಾನ್ನಂ ಚ ಸುವರ್ಚಲಂ ॥ ೮೫ ॥

---

೭೮. ದೀರ್ಘಾಯುಷ್ಯವನ್ನಪೇಕ್ಷಿಸುವವನು ಕಾಗೆಗಳಿಗೂ, ಕುಮಾರ ಲೋಕವನ್ನು ಬಯಸುವವನು ಕೋಳಿಗಳಿಗೂ ಕೊಡಬೇಕು.

೭೯. ಅಥವಾ ದಕ್ಷಿಣಾಭಿಮುಖವಾಗಿ ನಿಂತು ಪಿಂಡವನ್ನು ಆಕಾಶದಲ್ಲಿ ಎಸೆಯಬೇಕು. ಪಿತೃಗಳ ಸ್ಥಾನವು ಆಕಾಶವೂ, ದಿಕ್ಕು ದಕ್ಷಿಣವೂ ಆಗಿರುವುದು.

೮೦. ರಾಹುಗ್ರಹಣ ಕಾಲವನ್ನುಳಿದು ಇತರ ರಾತ್ರಿ ಕಾಲದಲ್ಲಿ ಶ್ರಾದ್ಧಮಾಡಬಾರದು. ಗ್ರಹಣ ಕಾಲದಲ್ಲಿ ಸಕಲ ವಸ್ತುಗಳಿಂದ ಶೀಘ್ರವಾಗಿ ಶ್ರಾದ್ಧವನ್ನು ನೆರವೇರಿಸಬೇಕು.

೮೧. ಗ್ರಹಣ ಕಾಲದಲ್ಲಿ ಶ್ರಾದ್ಧಮಾಡದವನು ಕೆಸರಿನಲ್ಲಿ ಎತ್ತು ಮುಳುಗಿ ವ್ಯಥೆಪಡುವಂತೆ ಕಷ್ಟಕ್ಕೀಡಾಗುವನು. ಮಾಡುವವನು ನಾವೆಯು ಸಮುದ್ರವನ್ನು ದಾಟುವಂತೆ ಪಾಪವನ್ನು ನೀಗಿಸಿಕೊಳ್ಳುವನು.

೮೨–೮೮. ಕರಿಉದ್ದು, ಕರಿ ಎಳ್ಳು, ಯವ, ಬತ್ತ, ಮಹಾಯವ, ಕೆಂಪು ಬತ್ತ, ಬಿಳಿ ಮತ್ತು ಕರಿ ಕಾಡು ಕಡಲೆ, ಬಿಲ್ವ, ನೆಲ್ಲಿ, ದ್ರಾಕ್ಷಿ, ಹಲಸು, ಆಮಟೆ, ದಾಳಿಂಬ, ಪಾರಾಪತ, ಖರ್ಜೂರ, ಕಮರಿಕೆ, ಮೊಗ್ಗಿನಿಂದ ಸಹಿತವಾದ ಎಲಚಿ, ತಾಳಕಂದ, ತಾವರೆ ದಂಟು, ತಮಾಲ, ಮಾವೇಲ್ಲ, ಶತಕಂದಲೀ, ಮರದರಿಶನ, ಕರೇಬೇವು,

ಮಾಂಸಂ ಕ್ಷೀರಂ ದಧಿ ಶಾಕಂ ವ್ಯೋಷಂ ವೇತ್ರಾಂಕುರಸ್ತಥಾ ।
ಕಟ್ಫಲಂ ವಜ್ರಕಂ ದ್ರಾಕ್ಷಾ ಲಕುಚಂ ಮೋಚಮೇವ ಚ ॥ ೮೬ ॥
ಪ್ರಿಯಾಮಲಕದುಗ್ರೀವಂ ತಿಂದುಕಂ ಮಧುಸಾಹ್ವಯಂ ।
ವೈಕಂಕತಂ ನಾಲಿಕೇರಂ ಶೃಂಗಾಟಕಪರೂಷಕಂ ॥ ೮೭ ॥
ಪಿಪ್ಪಲೀ ಮರಿಚಂ ಚೈವ ಪಟೋಲೀ ಬೃಹತೀಫಲಂ ।
ಆರಾಮಸ್ಯ ತು ಸೀಮಾಂತಃ ಸಂಭವಂ ಸರ್ವಮೇವ ತು ॥ ೮೮ ॥
ಏವಮಾದೀನಿ ಚಾನ್ಯಾನಿ ಪುಷ್ಪಾಣಿ ಶ್ರಾದ್ಧಕರ್ಮಣಿ ।
ಮಸೂರಾಃ ಶತಪುಷ್ಪಾಶ್ಚ ಕುಸುಮಂ ಶ್ರೀನಿಕೇತನಂ ॥ ೮೯ ॥
ವರ್ಯಾ ಸ್ವಾತಿಯವಾ ನಿತ್ಯಂ ತಥಾ ವೃಷಯವಾಸಕಾ ।
ವಂಶಾ ಕರೀರಾ ಸುರಸಾ ಮಾರ್ಜಿತಾ ಭೂತೃಣಾನಿ ಚ ॥ ೯೦ ॥
ವರ್ಜನೀಯಾನಿ ವಕ್ಷ್ಯಾಮಿ ಶ್ರಾದ್ಧಕರ್ಮಣಿ ನಿತ್ಯಶಃ ।
ಲಶುನಂ ಗೃಂಜನಂ ಚೈವ ಪಲಾಂಡುಂ ಪಿಂಡಮೂಲಕಂ ।
ಮೋಗರಂ ಚಾತ್ರ ವೈದೇಹಂ ದೀರ್ಘಮೂಲಕಮೇವ ಚ ॥ ೯೧ ॥
ದಿವಸಸ್ಯಾಷ್ಟಮೇ ಭಾಗೇ ಮಂದೀಭೂತೇ ದಿವಾಕರೇ ।
ಆಸುರಂ ತದ್ಭವೇಚ್ಛ್ರಾದ್ಧಂ ಪಿತೄಣಾಂ ನೋಪತಿಷ್ಠತೇ ॥ ೯೨ ॥

ಹುಗ್ಗಿ, ಹೊತ್ತು ತಿರುಗನ ಕಾಯಿ (ಸುವರ್ಚಲ) ಮಾಂಸ, ಹಾಲು, ಮೊಸರು, ತರಕಾರಿ, ಶುಂಠಿ, ಹಿಪ್ಪಲಿ, ಮೆಣಸು, (ವ್ಯೋಷ) ಬೆತ್ತದ ಮೊಳಿಕೆ, ಕುಂಬಳ, ವಜ್ರಕ (ಅಲ್ಲಿ)ಲಿಂಬೆ, ಪ್ರಿಯಾ ಮಾಲಕ, ದುಗ್ರೀವ, ತುಂಬರ, ಜೇನು, ವೈಕಂಕತ, ತೆಂಗು, ದುಂಪೆಗಡ್ಡೆ, ಸರೂಷಕ, ಪಡವಲ, ರಾಮುಗುಳ್ಳ ಇವೇ ಮೊದಲಾದ ತೋಟದ ಎಲ್ಲೆಯವರೆಗೆ ಬೆಳೆದ ಪದಾರ್ಥಗಳು ಶ್ರಾದ್ಧಕ್ಕೆ ಯೋಗ್ಯವಾದುವು.

೮೯–೯೦. ಮಸೂರ, ನೈದಿಲೆ, ತಾವರೆ, ಸ್ವಾತಿಯವಾ, ವೃಷಯವಾಸಕ, ಬಿದಿರು, ಕೃಷ್ಣ ತುಳಸಿ, ಮಾರ್ಜಿತಾ, ಭೂತೃಣ ಇವು ಶ್ರಾದ್ಧಕ್ಕೆ ಯೋಗ್ಯವಾದುವು.

೯೧. ಶ್ರಾದ್ಧಕರ್ಮದಲ್ಲಿ ತ್ಯಜಿಸುವ ವಸ್ತುಗಳನ್ನು ಹೇಳುವೆನು. ಬೆಳ್ಳುಳ್ಳಿ, ನೀರುಳ್ಳಿ, ಪಿಂಡಮೂಲಕ, ಮುಲ್ಲಂಗಿ, ವೈದೇಹ, ದೀರ್ಘಮೂಲಕ ಇವು ತ್ಯಜಿಸ ತಕ್ಕವು.

೯೨. ಹಗಲಿನ ಎಂಟನೆಯ ಭಾಗದಲ್ಲಿ ಸೂರ್ಯನು ಮಂದತಾಪನಾಗಲು ಮಾಡಿದ ಶ್ರಾದ್ಧವು ಪಿತೃಗಳಿಗೆ ಸೇರುವುದಿಲ್ಲ.

ಚತುರ್ಥೇ ಪ್ರಹರೇ ಪ್ರಾಪ್ತೇ ಯಃ ಶ್ರಾದ್ಧಂ ಕುರುತೇ ನರಃ ।
ವೃಥಾ ಶ್ರಾದ್ಧಮವಾಪ್ನೋತಿ ದಾತಾ ಚ ನರಕಂ ವ್ರಜೇತ್ ॥ ೯೩ ॥
ಲೇಖಾಪ್ರಭೃತ್ಯಥಾದಿತ್ಯೇ ಮುಹೂರ್ತಾಸ್ತ್ರಯ ಏವ ಚ ।
ಪ್ರಾತಸ್ತಸ್ಮಾತ್ಪರಂ ಕಾಲಂ ಭಗಮಾಹುರ್ವಿಪಶ್ಚಿತಃ ॥ ೯೪ ॥
ಸಂಗವಸ್ತ್ರಿಮುಹೂರ್ತೋಽಯಂ ಮಧ್ಯಾಹ್ನಸ್ತು ಸಮಂತತಃ ।
ತತಶ್ಚ ತ್ರಿಮುಹೂರ್ತಾಶ್ಚ ಅಪರಾಹ್ಣೋ ವಿಧೀಯತೇ ॥ ೯೫ ॥
ಪಂಚಮೋಽಥ ದಿನಾಂಶೋ ಯಃ ಸ ಸಾಯಾಹ್ನ ಇತಿ ಸ್ಮೃತಃ ॥ ೯೬ ॥

ತಥಾ ಚ ಶ್ರುತಿಃ :—

ಯದ್ವೈವಾದಿತ್ಯೋಽಥ ವಸಂತೋ ಯದಾ ಸಂಗವಿಕೋಽಥ ಗ್ರೀಷ್ಮೋ
ಯದಾ ವಾ ಮಾಧ್ಯಂದಿನೋಽಥ ವರ್ಷಾ ಯದಪರಾಹ್ಣೋಽಥ ಶರತ್ ॥
ಯದೇವಾಸ್ತಮೇತ್ಯಥ ಹೇಮಂತ ಇತಿ ॥ ೯೭ ॥
ಪ್ರಾರಭ್ಯ ಕುತಪೇ ಶ್ರಾದ್ಧೇ ಕುರ್ಯಾದಾರೋಹಣಂ ಬುಧಃ ।
ವಿಧಿಜ್ಞೋ ವಿಧಿಮಾಸ್ಥಾಯ ರೌಹಿಣಂ ನ ತು ಲಂಘಯೇತ್ ॥ ೯೮ ॥
ಅಷ್ಟಮೋ ಯೋ ಮುಹೂರ್ತಶ್ಚ ಕುತಪಃ ಸ ನಿಗದ್ಯತೇ ।
ನವಮೋ ರೌಹಿಣಃ ಪ್ರೋಕ್ತ ಇತಿ ಶ್ರಾದ್ಧವಿದೋ ವಿದುಃ ॥ ೯೯ ॥

---

೯೩. ನಾಲ್ಕನೆಯ ಜಾಮದಲ್ಲಿ ಮಾಡಿದ ಶ್ರಾದ್ಧವು ನಿಷ್ಫಲವಾಗುವುದು. ಶ್ರಾದ್ಧಮಾಡಿದವನು ನರಕವನ್ನು ಸೇರುವನು.

೯೪—೯೭. ಸೂರ್ಯೋದಯವನ್ನಾರಂಭಿಸಿ ಮೂರು ಮುಹೂರ್ತಗಳು ಪ್ರಾತಃ ಕಾಲವು. ಅದರ ಉತ್ತರ ಕಾಲವನ್ನು ಭಗವೆನ್ನುವರು. ಅನಂತರ ಕ್ರಮವಾಗಿ ಸಂಗವ, ಮಧ್ಯಾಹ್ನ, ಅಪರಾಹ್ಣಗಳು ಮೂರು ಮೂರು ಮುಹೂರ್ತಗಳುಳ್ಳವು. ಆ ದಿನದ ಐದನೆಯ ಅಂಶವು ಸಾಯಾಹ್ನವು. ಹಾಗೆಯೇ ಶ್ರುತಿಯೂ ಹೇಳುವುದು. ಸೂರ್ಯನು ಉದಯಿಸುವ ಕಾಲವು ವಸಂತವು. ಸಂಗವವು ಗ್ರೀಷ್ಮಕಾಲವು. ಮಧ್ಯಾಹ್ನವು ಮಳೆಗಾಲವು, ಅಪರಾಹ್ಣವು ಶರತ್ಕಾಲವು. ಸೂರ್ಯಾಸ್ತಮಯ ಕಾಲವು ಹೇಮಂತವು.

೯೮. ಪ್ರಾಜ್ಞನು ಕುತುಪ ಕಾಲದಲ್ಲಿ ಶ್ರಾದ್ಧವನ್ನಾರಂಭಿಸಿ ರೌಹಿಣದವರೆಗೆ ವಿಧಿಯಂತೆ ಮಾಡಬೇಕು. ರೌಹಿಣವನ್ನು ಮೀರಬಾರದು.

೯೯. ಎಂಟನೆಯ ಮುಹೂರ್ತವು ಕುತಪವೆಂದೂ, ಒಂಬತ್ತನೆಯ ಮುಹೂರ್ತವು ರೌಹಿಣವೆಂದೂ ಶ್ರಾದ್ಧಕಲ್ಪವನ್ನರಿತವರು ಹೇಳುವರು.

ಏಕೋದ್ದಿಷ್ಟಂ ತು ಮಧ್ಯಾಹ್ನಂ ಪ್ರಾತರ್ವೃ ಜಾತಕರ್ಮಣಿ ।
ಪಿತ್ರ್ಯರ್ಥಂ ನಿರ್ವಪೇತ್ಪಾಕಂ ವೈಶ್ವದೇವಾರ್ಥಮೇವ ಚ ॥ ೧೦೦ ॥
ವೈಶ್ವದೇವೇ ನ ಪಿತ್ರ್ಯರ್ಥಂ ನ ಪಿತ್ರ್ಯಂ ವೈಶ್ವದೇವಿಕೇ ।
ಕೃತ್ವಾ ಶ್ರಾದ್ಧಂ ಮಹಾದೇವಿ ಬ್ರಾಹ್ಮಣಾಂಶ್ಚ ವಿಸರ್ಜ್ಯ ಚ ॥ ೧೦೧ ॥
ವೈಶ್ವದೇವಾದಿಕಂ ಕರ್ಮ ತತಃ ಕುರ್ಯಾದ್ವರಾನನೇ ।
ಬಹುಹವ್ಯೇಂಧನೇ ಚಾಗ್ನೌ ಸುಸಮಿದ್ಧೇ ವಿಶೇಷತಃ ॥ ೧೦೨ ॥
ವಿಧೂಮೇ ಲೇಲಿಹಾನೇ ಚ ಕುರ್ಯಾತ್ಕರ್ಮ ಪ್ರಸಿದ್ಧಯೇ
ಅಪ್ರಬುದ್ಧೇ ಸಧೂಮೇ ಚ ಜುಹುಯಾದ್ಯೋ ಹುತಾಶನೇ ॥ ೧೦೩ ॥
ಯಜಮಾನೋ ಭವೇದಂಧಃ ಕುಪುತ್ರ ಇತಿ ನಿಶ್ಚಿತಂ ।
ದುರ್ಗಂಧಶ್ಚೈವ ಕೃಷ್ಣಶ್ಚ ನೀಲಶ್ಚೈವ ವಿಶೇಷತಃ ॥ ೧೦೪ ॥
ಭೂಮಿಂ ವಿಗಾಹತೇ ಯತ್ರ ತತ್ರ ವಿದ್ಯಾತ್ಪರಾಭವಂ ।
ಅರ್ಚಿಷ್ಮಾನ್ಪಿಂಗಳಶಿಖಃ ಸರ್ಪಿಃ ಕಾಂಚನಸಪ್ರಭಃ ॥ ೧೦೫ ॥
ಸ್ನಿಗ್ಧಃ ಪ್ರದಕ್ಷಿಣಶ್ಚೈವ ವಹ್ನಿಃ ಸ್ಯಾತ್ಕಾರ್ಯಸಿದ್ಧಯೇ ।
ಅಂಜನಾಭ್ಯಂಜನಂ ಗಂಧಾನ್ಮಂತ್ರ ಪ್ರಣಯನಂ ತಥಾ ॥ ೧೦೬ ॥
ಕಾಶೈಃ ಪುನರ್ಭವೇತ್ಕಾರ್ಯಂ ಹಯಮೇಧಫಲಂ ಲಭೇತ್ ।
ಅಷ್ಟಜಾತಿಕಪುಷ್ಪಂ ಚ ಅಂಜನಂ ನಿತ್ಯಮೇವ ಹಿ ॥ ೧೦೭ ॥

೧೦೦–೧೧೩. ಏಕೋದ್ದಿಷ್ಟದಲ್ಲಿ ಮಧ್ಯಾಹ್ನದಲ್ಲಿಯೂ, ಜಾತಕರ್ಮದಲ್ಲಿ ಬೆಳಗ್ಗೂ, ಶ್ರಾದ್ಧವನ್ನಾಚರಿಸಬೇಕು. ಪಿತೃಕಾರ್ಯಕ್ಕೆ ಮಾಡಿದ ಪಾಕವನ್ನು ವೈಶ್ವದೇವಕ್ಕೂ, ವೈಶ್ವದೇವಕ್ಕೆ ಮಾಡಿದ ಪಾಕವನ್ನು ಪಿತೃಕಾರ್ಯಕ್ಕೂ ಉಪಯೋಗಿಸಬಾರದು. ಮಹಾದೇವಿ! ಶ್ರಾದ್ಧವನ್ನು ಮಾಡಿ ಬ್ರಾಹ್ಮಣರನ್ನು ಕಳುಹಿಸಿದ ತರುವಾಯ ವೈಶ್ವದೇವಾದಿಗಳನ್ನು ಮಾಡಬೇಕು. ಈ ವೈಶ್ವದೇವವನ್ನು ಅತಿಶಯ ಕಟ್ಟಿಗೆಯಿಂದ ಜ್ವಲಿಸುವ ಹೊಗೆಯಿಲ್ಲದ ಅಗ್ನಿಯಲ್ಲಿ ಇಷ್ಟಸಿದ್ಧಿಗಾಗಿ ಮಾಡಬೇಕು. ಉರಿಯದೆ ಹೊಗೆಯುಳ್ಳ ಅಗ್ನಿಯಲ್ಲಿ ಹೋಮಿಸುವ ಯಜಮಾನನು ಕುರುಡನೂ, ಕುಪುತ್ರನೂ ಆಗುವನು. ಅಗ್ನಿಯ ದುರ್ಗಂಧವೂ, ಕೃಷ್ಣವರ್ಣವೂ ಆದ ಜ್ವಾಲೆಯು ಭೂಮಿಯನ್ನು ಹೊಕ್ಕರೆ ಕಾರ್ಯದಲ್ಲಿ ಸೋಲಾಗುವುದೆಂದರಿಯಬೇಕು. ಹಳದಿಬಣ್ಣದ ಜ್ವಾಲೆಯುಳ್ಳುದೂ, ಆಜ್ಯದಂತೆಯೂ ಸುವರ್ಣದಂತೆಯೂ ಪ್ರಭೆಯುಳ್ಳುದೂ, ಮನೋಹರವೂ, ಪ್ರದಕ್ಷಿಣಾಕಾರಶಿಖೆಯುಳ್ಳದೂ ಆದ ಅಗ್ನಿಯು ಇಷ್ಟಾರ್ಥ ಸಿದ್ಧಿಯನ್ನೀಯುವುದು. ಅಗ್ನಿಗೆ ಅಂಜನ, ಅಭ್ಯಂಜನ, ಗಂಧಲೇಪನ, ಮಂತ್ರಪ್ರಣಯನ, ಕಾಶಸಮರ್ಪಣಗಳನ್ನು ಮಾಡಿದರೆ ಅಶ್ವಮೇಧಯಾಗದ ಫಲವು ಲಭಿಸುವುದು. ಎಂಟು ಜಾಜಿಹೂವಿನ ಅಂಜನವೂ, ಕೃಷ್ಣತಿಲದ ಎಣ್ಣೆಯ ಅಭ್ಯಂಜನವೂ,

ಕೃಷ್ಣೇಭ್ಯಶ್ಚ ತಿಲೇಭ್ಯಶ್ಚ ತೈಲಂ ಯತ್ನಾತ್ಸುರಕ್ಷಿತಂ ।
ಚಂದನಾಗರುಣೀ ಚೋಭೇ ತಮಾಲೋಶೀರಪದ್ಮಕಂ ॥ ೧೦೮ ॥

ಧೂಪಶ್ಚ ಗೌಗ್ಗುಲಃ ಶ್ರೇಷ್ಠಸ್ತ್ತುರುಷ್ಕೋ ಧೂಪ ಏವ ಚ ।
ಶುಕ್ಲಾಃ ಸುಮನಸಃ ಶ್ರೇಷ್ಠಾಸ್ತಥಾ ಪದ್ಮೋತ್ಪಲಾನಿ ಚ ॥ ೧೦೯ ॥

ಗಂಧವಂತ್ಯುಪನ್ನಾನಿ ಯಾನಿ ಚಾನ್ಯಾನಿ ಕೃತ್ಸ್ನಶಃ ।
ನಿಶಿಗಂಧಾ ಜಪಾ ಭಿಂಡಿರೂಪಕಃ ಸಕುರಂಟಕಃ ॥ ೧೧೦ ॥

ಪುಷ್ಪಾಣಿ ವರ್ಜನೀಯಾನಿ ಶ್ರಾದ್ಧಕರ್ಮಣಿ ನಿತ್ಯಶಃ ।
ಸೌವರ್ಣಂ ರಾಜತಂ ತಾಮ್ರಂ ಪಿತೃಣಾಂ ಪಾತ್ರಮುಚ್ಯತೇ ॥ ೧೧೧ ॥

ರಜತಸ್ಯ ತಥಾ ಕಿಂಚಿದ್ದರ್ಶನಂ ಪುಣ್ಯದಾಯಕಂ ।
ಕೃಷ್ಣಾಜಿನಸ್ಯ ಸಾನ್ನಿಧ್ಯಂ ದರ್ಶನಂ ದಾನಮೇವ ಚ ॥ ೧೧೨ ॥

ರಕ್ಷೋಘ್ನಂ ಚೈವ ವರ್ಚಸ್ಯಂ ಪಶೂನ್ಪುತ್ರಾಂಶ್ಚ ತಾರಯೇತ್ ।
ಅಥ ಮಂತ್ರಂ ಪ್ರವಕ್ಷ್ಯಾಮಿ ಅಮೃತಂ ಬ್ರಹ್ಮನಿರ್ಮಿತಂ ॥ ೧೧೩ ॥

ದೇವತಾಭ್ಯಃ ಪಿತೃಭ್ಯಶ್ಚ ಮಹಾಯೋಗಿಭ್ಯ ಏವ ಚ ।
ನಮಃ ಸ್ವಾಹಾಯೈ ಸ್ವಧಾಯೈ ನಿತ್ಯಮೇವ ನಮೋನಮಃ ॥ ೧೧೪ ॥

ಚಂದನಾಗುರುಗಂಧಗಳೂ, ತಮಾಲ, ಲಾವಂಚ, ತಾವರೆಹೂವುಗಳ ಗುಗ್ಗುಲು ತುರುಷ್ಕಧೂಪಗಳೂ ಶ್ರೇಷ್ಠವಾದುವು. ಸುವಾಸನೆಯುಳ್ಳ ಬಿಳಿಹೂವುಗಳೂ, ಕನ್ನೈದಿಲೆಗಳೂ ಶ್ರಾದ್ಧಕ್ಕೆ ಉತ್ತಮವಾದುವು. ರಾತ್ರಿಯಲ್ಲಿ ಸುವಾಸನೆಯುಳ್ಳ ದಾಸವಾಳದಹೂವು, ಭಿಂಡಿರೂಪಕ, ಹಸುರುಗೋರಂಟೆ, ಇವು ಶ್ರಾದ್ಧಕ್ಕೆ ನಿಷಿದ ವಾದುವು. ಚಿನ್ನ, ಬೆಳ್ಳಿಯನ್ನು ಕಾಣುವುದರಿಂದ ಪುಣ್ಯವುಂಟಾಗುವುದು. ಕೃಷ್ಣಾಜಿನದ ಸಾನ್ನಿಧ್ಯ, ದರ್ಶನ, ದಾನ ಇವುಗಳಿಂದ ರಾಕ್ಷಸರು ನಾಶವಾಗುವರು. ತೇಜಸ್ಸೂ, ಪಶುಗಳೂ ಅಭಿವೃದ್ಧಿಯಾಗುವುವು. ಪುತ್ರರು ಉದ್ಧಾರವಾಗುವರು. ಬಳಿಕ ಮೋಕ್ಷವನ್ನೀಯುವ ಬ್ರಹ್ಮನಿರ್ಮಿತವಾದ ಮಂತ್ರವನ್ನು ಹೇಳುವೆನು.

೧೧೪. ದೇವತೆಗಳಿಗೂ, ಪಿತೃಗಳಿಗೂ, ಮಹಾಯೋಗಿಗಳಿಗೂ, ಸ್ವಾಹಾಕ್ಕೂ ಸ್ವಧೆಗೂ ನಿತ್ಯವೂ ನಮಸ್ಕಾರವಾಗಲಿ.

ಆದ್ಯಾವಸಾನೇ ಶ್ರಾದ್ಧಸ್ಯ ತ್ರಿರಾವರ್ತಮಿಮಂ ಜಪನ್ ।
ಅಶ್ವಮೇಧಫಲಂ ಹ್ಯೇತದ್ವಿಪ್ರೈಃ ಸಂಜ್ಞಾಯ ಪೂಜಿತಂ ॥ ೧೧೫ ॥
ಪಿಂಡನಿರ್ವಪಣೇ ವಾಪಿ ಜಪೇದೇನಂ ಸಮಾಹಿತಃ ।
ಪಿತರಃ ಕ್ಷಿಪ್ರಮಾಯಾಂತಿ ರಾಕ್ಷಸಾಃ ಪ್ರದ್ರವಂತಿ ಚ ॥ ೧೧೬ ॥
ಸಪ್ತಾರ್ಚಿಷಂ ಪ್ರವಕ್ಷ್ಯಾಮಿ ಸರ್ವಕಾಮಶುಭಪ್ರದಂ ॥ ೧೧೭ ॥
ಅಮೂರ್ತಾನಾಂ ಚ ಮೂರ್ತಾನಾಂ ಪಿತೄಣಾಂ ದೀಪ್ತತೇಜಸಾಂ ।
ನಮಸ್ಯಾಮಿ ಸದಾ ತೇಷಾಂ ಧ್ಯಾಯಿನಾಂ ದಿವ್ಯಚಕ್ಷುಷಾಂ ॥ ೧೧೮ ॥
ಇಂದ್ರಾದೀನಾಂ ಚ ನೇತಾರೋ ದಕ್ಷಮಾರೀಚಯಸ್ತಥಾ ।
ತಾನ್ನಮಸ್ಯಾಮಿ ಸರ್ವಾನ್ವೈ ಪಿತೄಂಶ್ಚೈವೌಷಧೀಸ್ತಥಾ ॥ ೧೧೯ ॥
ನಕ್ಷತ್ರಾಣಾಂ ಗ್ರಹಾಣಾಂ ಚ ವಾಯ್ವಗ್ನ್ಯೋಃ ಶ್ಚ ಪಿತೄನಪಿ ।
ದ್ಯಾವಾಪೃಥಿವ್ಯೋಶ್ಚ ಸದಾ ನಮಸ್ಯಾಮಿ ಕೃತಾಂಜಲಿಃ ॥ ೧೨೦ ॥

---

೧೧೫. ಶ್ರಾದ್ಧದ ಮೊದಲೂ, ಅವಸಾನದಲ್ಲಿಯೂ ಈ ಮಂತ್ರವನ್ನು ಮೂರು ಸಾರಿ ಜಪಿಸುವವನು ಅಶ್ವಮೇಧಯಾಗದ ಫಲವನ್ನು ಪಡೆಯುವನು. ದ್ವಿಜರು ಚೆನ್ನಾಗಿ ಇದನ್ನರಿತು ಪೂಜಿಸಿರುವರು.

೧೧೬. ಪಿಂಡಪ್ರದಾನಕಾಲದಲ್ಲಿಯೂ ಈ ಮಂತ್ರವನ್ನು ಸಾವಧಾನಮನಸ್ಸಿನಿಂದ ಜಪಿಸಬೇಕು. ಇದರಿಂದ ಪಿತೃಗಳು ಶೀಘ್ರವಾಗಿ ಬರುವರು. ರಾಕ್ಷಸರು ಓಡುವರು.

೧೧೭. ಈಗ ಸಕಲೇಷ್ಟಾರ್ಥಗಳನ್ನೂ, ಮಂಗಳವನ್ನೂ ಕೊಡುವ ಸಪ್ತಾರ್ಚಿಷ ಮಂತ್ರವನ್ನು ಹೇಳುವೆನು.

೧೧೮. ದೇಹವನ್ನು ಹೊಂದಿರುವವರೂ, ಹೊಂದದವರೂ, ದೀಪ್ತತೇಜಸ್ಕರೂ, ಯಾವಾಗಲೂ ಧ್ಯಾನಾಸಕ್ತರೂ, ದಿವ್ಯಜ್ಞಾನಿಗಳೂ ಆದ ಪಿತೃಗಳನ್ನು ನಮಸ್ಕರಿಸುವೆನು.

೧೧೯. ಇಂದ್ರಾದಿದೇವತೆಗಳಿಗೆ ನಾಯಕರಾದ ದಕ್ಷಮರೀಚಿಗಳನ್ನೂ, ಸಕಲ ಪಿತೃಗಳನ್ನೂ, ಓಷಧಿಗಳನ್ನೂ ವಂದಿಸುವೆನು.

೧೨೦. ನಕ್ಷತ್ರ, ಗ್ರಹ, ವಾಯು, ಅಗ್ನಿ, ದ್ಯಾವಾಪೃಥಿವೀ ಇವರ ಪಿತೃಗಳನ್ನೂ ಕೈಮುಗಿದು ಯಾವಾಗಲೂ ವಂದಿಸುವೆನು.

ನಮಃ ಪಿತೃಭ್ಯಃ ಸಪ್ತಭ್ಯೋ ನಮೋ ಲೋಕೇಷು ಸಪ್ತಸು ।
ಸ್ವಯಂಭುವೇ ನಮಸ್ಯಾಮೋ ಬ್ರಹ್ಮಣೇ ಯೋಗಚಕ್ಷುಷೇ ॥ ೧೨೧ ॥

ಏತತ್ತ್ವದುಕ್ತಂ ಸಪ್ತರ್ಷಿಬ್ರಹ್ಮರ್ಷಿಗಣಸೇವಿತಂ ।
ಪವಿತ್ರಂ ಪರಮಂ ಹ್ಯೇತಚ್ಛ್ರೀಮದ್ರಕ್ಷೋವಿನಾಶನಂ ॥ ೧೨೨ ॥

ಅನೇನ ವಿಧಿನಾ ಯುಕ್ತಸ್ತ್ರೀನ್ವಾರಾಂಸ್ತು ಜಪೇನ್ನರಃ ।
ಭಕ್ತ್ಯಾ ಪರಮಯಾ ಯುಕ್ತಃ ಶ್ರದ್ದಧಾನೋ ಜಿತೇಂದ್ರಿಯಃ ॥ ೧೨೩ ॥

ಸಪ್ತಾರ್ಚಿಷಂ ಜಪೇದ್ಯಸ್ತು ನಿತ್ಯಮೇವ ಸಮಾಹಿತಃ ।
ಸ ತು ಸಪ್ತಸಮುದ್ರಾಯಾಃ ಪೃಥಿವ್ಯಾ ಏಕರಾಡ್ಭವೇತ್ ॥ ೧೨೪ ॥

ಶ್ರಾದ್ಧಕಲ್ಪಂ ಪಠೇದ್ಯೋ ವೈ ಸ ಭವೇತ್ಪಂಕ್ತಿಪಾವನಃ ।
ಅಷ್ಟಾದಶಾನಾಂ ವಿದ್ಯಾನಾಂ ಸ ಚ ವೈ ಪಾರಗಃ ಸ್ಮೃತಃ ॥ ೧೨೫ ॥

ಪೂಜಾಂ ಪುಷ್ಟಿಂ ಸ್ಮೃತಿಂ ಮೇಧಾಂ ರಾಜ್ಯಮಾರೋಗ್ಯಮೇವ ಚ ।
ಪ್ರೀತಾ ನಿತ್ಯಂ ಪ್ರಯಚ್ಛಂತಿ ಮಾನುಷಾಣಾಂ ಪಿತಾಮಹಾಃ ॥ ೧೨೬ ॥

---

೧೨೧. ಸಪ್ತಲೋಕಗಳ ಸಪ್ತಪಿತೃಗಳಿಗೂ, ಯೋಗದೃಷ್ಟಿಯುಳ್ಳ ಚತುರ್ಮುಖ ನಿಗೂ ನಮಸ್ಕಾರವಾಗಲಿ.

೧೨೨. ಹೀಗೆ ನಿನಗೆ ಸಪ್ತರ್ಷಿ ಬ್ರಹ್ಮರ್ಷಿಗಳ ಸಮೂಹದಿಂದ ಸೇವಿತವೂ, ಪರಿಶುದ್ಧವೂ, ಉತ್ತಮವೂ, ರಾಕ್ಷಸರನ್ನು ನಾಶಗೊಳಿಸುವುದೂ ಆದ ಮಂತ್ರ ವನ್ನು ಹೇಳಿರುವೆನು.

೧೨೩–೧೨೪. ಈ ವಿಧಿಯಿಂದ ಈ ಸಪ್ತಾರ್ಚಿಷಮಂತ್ರವನ್ನು ಮೂರು ಸಾರಿ ಜಿತೇಂದ್ರಿಯನಾಗಿ ಅತಿಶಯಭಕ್ತಿಯಿಂದಲೂ ಶ್ರದ್ಧೆಯಿಂದಲೂ ನಿತ್ಯವೂ ಜಪಿಸುವವನು ಸಪ್ತಸಮುದ್ರಗಳುಳ್ಳ ಭೂಮಿಗೆ ಚಕ್ರವರ್ತಿಯಾಗುವನು.

೧೨೫. ಈ ಶ್ರಾದ್ಧಕಲ್ಪವನ್ನು ಪಠಿಸುವ ಮನುಜನು ಪಂಕ್ತಿಪಾವನನೂ, ಹದಿನೆಂಟು ವಿದ್ಯೆಗಳಲ್ಲಿ ನಿಪುಣನೂ ಆಗುವನು.

೧೨೬. ಪಿತಾಮಹರು ಸಂತುಷ್ಟರಾಗಿ ಸನ್ಮಾನ, ಪುಷ್ಟಿ, ಸ್ಮರಣೆ, ಮೇಧಾ, ರಾಜ್ಯ, ಆರೋಗ್ಯಗಳನ್ನೀಯುವರು.

ಏವಂ ಪ್ರಭಾಸಕ್ಷೇತ್ರೇ ಸ ಸರಸ್ವತ್ಯಬ್ಧಿಸಂಗಮೇ ।
ಕುರ್ಯಾಚ್ಛ್ರಾದ್ಧಂ ವಿಧಾನೇನ ಪ್ರಭಾಸೇ ಚೈವ ಭಾಮಿನಿ ॥ ೧೨೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶ್ರಾದ್ಧವಿಧಿವರ್ಣನಂ ನಾಮ
॥ ಷಡುತ್ತರದ್ವಿಶತತಮೋಽಧ್ಯಾಯಃ ॥

---

೧೨೭. ಪ್ರಿಯಳೆ! ಹೀಗೆ ಪ್ರಭಾಸದಲ್ಲಿರುವ ಸರಸ್ವತೀಸಾಗರ ಸಂಗಮದಲ್ಲಿ ವಿಧಿಯಿಂದ ಶ್ರಾದ್ಧವನ್ನು ಮಾಡಬೇಕು,

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶ್ರಾದ್ಧವಿಧಿವರ್ಣನವೆಂಬ
ಇನ್ನೂರಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತೋತ್ತರದ್ವಿಶತತಮೋಽಧ್ಯಾಯಃ

ಪಾತ್ರಾಪಾತ್ರವಿಚಾರವರ್ಣನಂ

ಅತಃಪರಂ ಪ್ರವಕ್ಷ್ಯಾಮಿ ಶ್ರಾದ್ಧದಾನಾನ್ಯನುಕ್ರಮಾತ್ ।
ತಾರಣಾಯ ಚ ಭೂತಾನಾಂ ಸರಸ್ವತ್ಯಬ್ಧಿಸಂಗಮೇ ॥ ೧ ॥
ಲೋಕೇ ಶ್ರೇಷ್ಠತಮಂ ಸರ್ವಂ ಹ್ಯಾತ್ಮನಶ್ಚಾಪಿ ಯತ್ಪ್ರಿಯಂ ।
ಸರ್ವಂ ಪಿತೃಣಾಂ ದಾತವ್ಯಂ ತದೇವಾಕ್ಷಯ್ಯಮಿಚ್ಛತಾ ॥ ೨ ॥
ಜಾಂಬೂನದಮಯಂ ದಿವ್ಯಂ ವಿಮಾನಂ ಸೂರ್ಯಸನ್ನಿಭಂ ।
ದಿವ್ಯಾಪ್ಸರೋಭಿಃ ಸಂಕೀರ್ಣಮನ್ನದೋ ಲಭತೇಽಕ್ಷಯಂ ॥ ೩ ॥
ಆಚ್ಛಾದನಂ ತು ಯೋ ದದ್ಯಾದಹತಂ ಶ್ರಾದ್ಧಕರ್ಮಣಿ ।
ಆಯುಃ ಪ್ರಕಾಶಮೈಶ್ವರ್ಯಂ ರೂಪಂ ತು ಲಭತೇ ಚ ಸಃ ॥ ೪ ॥
ಕಮಂಡಲುಂ ಚ ಯೋ ದದ್ಯಾದ್ಬ್ರಾಹ್ಮಣೇ ವೇದಪಾರಗೇ ।
ಮಧುಕ್ಷೀರಸ್ರವಾ ಧೇನುರ್ದಾತಾರಮನುಗಚ್ಛತಿ ॥ ೫ ॥

ಕನ್ನಡದ ಅನುವಾದ

ಪಾತ್ರಾಪಾತ್ರವಿಚಾರವರ್ಣನ

೧. ಈಶ್ವರನು ಹೇಳುತ್ತಾನೆ :—ಬಳಿಕ ಪ್ರಾಣಿಗಳ ಶ್ರೇಯಸ್ಸಿಗಾಗಿ ಸರಸ್ವತೀ ಸಾಗರ ಸಂಗಮದಲ್ಲಿ ಮಾಡಲರ್ಹವಾದ ಶ್ರಾದ್ಧದಾನಗಳನ್ನು ಕ್ರಮವಾಗಿ ಹೇಳುವೆನು.

೨. ಲೋಕದಲ್ಲಿ ಶ್ರೇಷ್ಠವೂ, ತನಗೆ ಪ್ರಿಯವೂ ಆದ ವಸ್ತುವನ್ನು ಪಿತೃಗಳಿಗಿತ್ತರೆ ಅದು ಅಕ್ಷಯವಾಗುವುದು.

೩. ಅನ್ನದಾನಮಾಡಿದವನು ಸುವರ್ಣಮಯವೂ, ಸೂರ್ಯನಂತಿರುವುದೂ, ದಿವ್ಯಾಪ್ಸರೆಯರಿಂದ ತುಂಬಿರುವುದೂ ಆದ ದಿವ್ಯ ವಿಮಾನವನ್ನು ಪಡೆಯುವನು.

೪. ಶ್ರಾದ್ಧದಲ್ಲಿ ಹರಿಯದಿರುವ ಒಳ್ಳೆಯ ಹೊದ್ದಿಕೆಯನ್ನಿತ್ತವನು ಆಯುಸ್ಸು, ಪ್ರಕಾಶ, ಐಶ್ವರ್ಯ, ರೂಪಗಳನ್ನು ಹೊಂದುವನು.

೫. ವೇದಪಾರಂಗತನಾದ ಬ್ರಾಹ್ಮಣನಿಗೆ ಕಮಂಡಲುವನ್ನು ದಾನ ಮಾಡಿದವನಿಗೆ ಸವಿಯಾದ ಹಾಲನ್ನು ಕರೆಯುವ ಗೋವು ಲಭಿಸುವುದು.

ಯಃ ಶ್ರಾದ್ಧೇ ಅಭಯಂ ದದ್ಯಾತ್ಪ್ರಾಣಿನಾಂ ಜೀವಿತೈಷಿಣಾಂ ।
ಅಶ್ವದಾನಸಹಸ್ರೇಣ ರಥದಾನಶತೇನ ಚ ।
ದಂತಿನಾಂ ಚ ಸಹಸ್ರೇಣ ಅಭಯಂ ಚ ವಿಶಿಷ್ಯತೇ ॥ ೬ ॥
ಯಾನಿ ರತ್ನಾನಿ ಮೇದಿನ್ಯಾಂ ವಾಹನಾನಿ ಸ್ತ್ರಿಯಸ್ತಥಾ ।
ಕ್ಷಿಪ್ರಂ ಪ್ರಾಪ್ನೋತಿ ತತ್ಸರ್ವಂ ಪಿತೃಭಕ್ತಸ್ತು ಮಾನವಃ ॥ ೭ ॥
ಪಿತರಃ ಸರ್ವಲೋಕೇಷು ತಿಥಿಕಾಲೇಷು ದೇವತಾಃ ।
ಸರ್ವೇ ಪುರುಷಮಾಯಾಂತಿ ನಿಪಾನಮಿವ ಧೇನವಃ ॥ ೮ ॥
ಮಾಸ್ಮ ತೇ ಪ್ರತಿಗಚ್ಛೇಯುಃ ಪರ್ವಕಾಲೇ ಹ್ಯಪೂಜಿತಾಃ ।
ಮೋಘಾಸ್ತೇಷಾಂ ಭವನ್ತ್ಯಾಶಾಃ ಪರತ್ರೇಹ ಚ ಮಾ ಕ್ವಚಿತ್ ॥ ೯ ॥
ಸರಸ್ವತ್ಯಾಸ್ತು ಸಾನ್ನಿಧ್ಯೇ ಯಸ್ತ್ವೇಕಂ ಭೋಜಯೇದ್ದ್ವಿಜಂ ।
ಕೋಟಿಭೋಜ್ಯಫಲಂ ತಸ್ಯ ಜಾಯತೇ ನಾತ್ರ ಸಂಶಯಃ ॥ ೧೦ ॥
ಅಮಾವಾಸ್ಯಾಂ ನರೋ ಯಸ್ತು ಪರಾನ್ನಮುಪಭುಂಜತೇ ।
ತಸ್ಯ ಮಾಸಕೃತಂ ಪುಣ್ಯಮನ್ನದಾತುಃ ಪ್ರಜಾಯತೇ ॥ ೧೧ ॥

---

೬. ಶ್ರಾದ್ಧದಲ್ಲಿ ಜೀವವನ್ನು ಬಯಸುವ ಪ್ರಾಣಿಗಳಿಗೆ ಅಭಯವನ್ನಿತ್ತರೆ ಆ ಅಭಯದಾನವು ಸಾವಿರ ಅಶ್ವಗಳನ್ನೂ, ನೂರು ರಥಗಳನ್ನೂ, ಸಾವಿರ ಆನೆಗಳನ್ನೂ ದಾನಮಾಡುವುದಕ್ಕಿಂತ ಮಿಗಿಲಾಗುವುದು.

೭. ಪಿತೃಗಳಲ್ಲಿ ಭಕ್ತಿಯುಳ್ಳ ಮನುಷ್ಯನು ಭೂಮಿಯಲ್ಲಿರುವ ರತ್ನಗಳನ್ನೂ, ವಾಹನಗಳನ್ನೂ, ಸ್ತ್ರೀಯರನ್ನೂ ಶೀಘ್ರವಾಗಿ ಹೊಂದುವನು.

೮. ಸಕಲ ಲೋಕಗಳಲ್ಲಿರುವ ಪಿತೃಗಳೂ, ದೇವತೆಗಳೂ ತಿಥಿಕಾಲಗಳಲ್ಲಿ ನೀರಿನ ತೊಟ್ಟಿಗೆ ಗೋವುಗಳು ಬರುವಂತೆ ಶ್ರಾದ್ಧಕರ್ತನನ್ನು ಹೊಂದುವರು.

೯. ಆ ಪಿತೃದೇವತೆಗಳು ಪರ್ವಕಾಲದಲ್ಲಿ ಪೂಜಿಸಲ್ಪಡದೆ ಹಿಂದಿರುಗದಿರಲಿ. ಅವರ ಆಸೆಗಳು ಇಹಪರಗಳಲ್ಲಿ ಸಫಲವಾಗಲಿ.

೧೦. ಸರಸ್ವತೀ ನದಿಯ ಹತ್ತಿರ ಒಬ್ಬ ಬ್ರಾಹ್ಮಣನನ್ನು ಭೋಜನ ಮಾಡಿಸಿದವನಿಗೆ ಕೋಟಿ ಬ್ರಾಹ್ಮಣರನ್ನು ಭೋಜನ ಮಾಡಿಸಿದ ಫಲವು ಲಭಿಸುವುದು.

೧೧. ಅಮಾವಾಸ್ಯೆಯದಿನ ಪರಾನ್ನವನ್ನು ಭುಂಜಿಸಿದವನ ಒಂದು ತಿಂಗಳ ಪುಣ್ಯವು ಅನ್ನನೀಡಿದವನಿಗೆ ಹೋಗುವುದು.

ಷಣ್ಮಾಸಮಯನೇ ಭುಂಕ್ತೇ ತ್ರೀನ್ಮಾಸಾನ್ವಿಷುವೇ ಸ್ಮೃತಂ ।
ವರ್ಷೈರ್ದ್ವಾದಶಭಿಶ್ಚೈವ ಯತ್ಪುಣ್ಯಂ ಸಮುಪಾರ್ಜಿತಂ ।
ತತ್ಸರ್ವಂ ವಿಲಯಂ ಯಾತಿ ಭುಕ್ತ್ವಾ ಸೂರ್ಯೇಂದುಸಂಪ್ಲವೇ ॥ ೧೨ ॥
ಸಾಗ್ರಂ ಮಾಸಂ ರವೇಃ ಕ್ರಾಂತಾವಾದ್ಯಶ್ರಾದ್ಧೇ ತ್ರಿವತ್ಸರಂ ।
ಮಾಸಿಕೇಽಪ್ಯಥ ವರ್ಷಸ್ಯ ಷಣ್ಮಾಸೇ ತ್ವರ್ಧವತ್ಸರಂ ॥ ೧೩ ॥
ತಥಾ ಸಂಚಯನಶ್ರಾದ್ಧೇ ಜಾತಿಜನ್ಮಕೃತಂ ನೃಣಾಂ ।
ಮೃತಶಯ್ಯಾಪ್ರತಿಗ್ರಾಹೀ ವೇದಸ್ಯೈವ ಚ ವಿಕ್ರಯೀ ॥
ಬ್ರಹ್ಮಸ್ವಹಾರೀ ಚ ನರಸ್ತಸ್ಯ ಶುದ್ಧಿರ್ನ ವಿದ್ಯತೇ ॥ ೧೪ ॥
ತಡಾಗಾನಾಂ ಸಹಸ್ರೇಣ ಹ್ಯಶ್ವಮೇಧಶತೇನ ಚ ।
ಗವಾಂ ಕೋಟಿಪ್ರದಾನೇನ ಭೂಮಿಹರ್ತಾ ನ ಶುದ್ಧ್ಯತಿ ॥ ೧೫ ॥
ಸುವರ್ಣಮಾಷಂ ಗಾಮೇಕಾಂ ಭೂಮೇರಪ್ಯರ್ಧಮಂಗುಲಂ ।
ಹರನ್ನರಕಮಾಪ್ನೋತಿ ಯಾವದಾಭೂತಸಂಪ್ಲವಂ ॥ ೧೬ ॥

---

೧೨. ಅಯನಸಂಕ್ರಾಂತಿಯದಿನ ಪರಾನ್ನವನ್ನು ಭುಂಜಿಸಿದವನ ಆರುತಿಂಗಳ ಪುಣ್ಯವೂ, ವತ್ಸರಾದಿಯಲ್ಲಿ ಭೋಜನಮಾಡಿದವನ ಮೂರು ತಿಂಗಳ ಪುಣ್ಯವೂ, ಸೂರ್ಯಚಂದ್ರಗ್ರಹಣಕಾಲದಲ್ಲಿ ಭೋಜನಮಾಡಿದವನ ಹನ್ನೆರಡು ವರ್ಷದ ಪುಣ್ಯವೂ ಹಾಳಾಗುವುದು.

೧೩–೧೪. ಸಂಕ್ರಾಂತಿಯದಿನ ಪರಾನ್ನಭೋಜನಮಾಡಿದವನ ಒಂದು ತಿಂಗಳ ಪುಣ್ಯವೂ, ಮೊದಲನೆ ಶ್ರಾದ್ಧದಲ್ಲಿ ಭೋಜನಮಾಡಿದವನ ಮೂರು ವರ್ಷದ ಪುಣ್ಯವೂ, ಮಾಸಿಕ, ವಾರ್ಷಿಕ, ಆರುತಿಂಗಳ ಶ್ರಾದ್ಧದಲ್ಲಿ ಭೋಜನ ಮಾಡಿದವನ ಆರುತಿಂಗಳ ಪುಣ್ಯವೂ, ಸಂಚಯನ ಶ್ರಾದ್ಧದಲ್ಲಿ ಭೋಜನ ಮಾಡಿದವನ ಆ ಜನ್ಮದ ಪುಣ್ಯವೂ ಹಾಳಾಗುವುದು. ಮೃತನ ಹಾಸಿಗೆಯನ್ನು ದಾನತೆಗೆದುಕೊಂಡವನು, ವೇದವನ್ನು ವಿಕ್ರಯಿಸಿದವನು, ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದವನು ಇವರಿಗೆ ಪ್ರಾಯಶ್ಚಿತ್ತವಿಲ್ಲ.

೧೫. ಭೂಮಿಯನ್ನು ಅಪಹರಿಸಿದವನ ಪಾಪವು ಸಾವಿರ ಕೆರೆಗಳನ್ನು ಕಟ್ಟುವುದರಿಂದಲೂ, ನೂರು ಅಶ್ವಮೇಧಯಾಗಗಳಿಂದಲೂ, ಕೋಟಿಗೋವುಗಳನ್ನು ದಾನಮಾಡುವುದರಿಂದಲೂ ಪರಿಹಾರವಾಗುವುದಿಲ್ಲ.

೧೬. ಸುವರ್ಣಮಾಷ, ಒಂದು ಗೋವು, ಅರ್ಧ ಅಂಗುಲ ಭೂಮಿ ಇವುಗಳನ್ನು ಅಪಹರಿಸಿದರೂ ಪ್ರಳಯಕಾಲದವರೆಗೆ ನರಕವನ್ನು ಹೊಂದುವನು.

ಬ್ರಹ್ಮಹತ್ಯಾ ಸುರಾಪಾನಂ ದರಿದ್ರಸ್ಯ ತು ಯದ್ಧನಂ ।
ಗುರೋಃ ಪತ್ನೀ ಹಿರಣ್ಯಂ ಚ ಸ್ವರ್ಗಸ್ಥಮಪಿ ಪಾತಯೇತ್ ॥ ೧೭ ॥
ಸಹಸ್ರಸಂಮಿತಾ ಧೇನುರನಡ್ವಾನ್ದಶ ಧೇನವಃ ।
ದಶಾನಡುತ್ಸಮಂ ಯಾನಂ ದಶಯಾನಸಮೋ ಹಯಃ ॥ ೧೮ ॥
ದಶಹಯಸಮಾ ಕನ್ಯಾ ಭೂಮಿದಾನಂ ತತೋಽಧಿಕಂ ।
ತಸ್ಮಾತ್ಸರ್ವಪ್ರಯತ್ನೇನ ವಿಕ್ರಯಂ ನೈವ ಕಾರಯೇತ್ ॥ ೧೯ ॥
ವಿಶೇಷತೋ ಮಹಾಕ್ಷೇತ್ರೇ ಸರ್ವಪಾತಕನಾಶನೇ ।
ಚಿತಿಕಾಷ್ಠಂ ಚ ವೈ ಸ್ಪೃಷ್ಟ್ವಾ ಯಜ್ಞಯೂಪಾಂಸ್ತಥೈವ ಚ ।
ವೇದವಿಕ್ರಯಕರ್ತಾರಂ ಸ್ಪೃಷ್ಟ್ವಾ ಸ್ನಾನಂ ವಿಧೀಯತೇ ॥ ೨೦ ॥
ಆದೇಶಂ ಪಠತೇ ಯಸ್ತು ಆದೇಶಂ ಚ ದದಾತಿ ಯಃ ।
ದ್ವಾವೇತೌ ಪಾಪಕರ್ಮಾಣೌ ಪಾತಾಲತಲವಾಸಿನೌ ॥ ೨೧ ॥
ಆದೇಶಂ ಪಠತೇ ಯಸ್ತು ರಾಜದ್ವಾರೇ ತು ಮಾನವಃ ।
ಸೋಽಪಿ ದೇವಿ ಭವೇದ್ವೃಕ್ಷ ಊಷರೇ ಕಂಟಕಾವೃತಃ ।
ಸ್ಥಿತೋ ವೈ ನೃಪತಿದ್ವಾರಿ ಯಃ ಕುರ್ಯಾದ್ವೇದವಿಕ್ರಯಂ ॥ ೨೨ ॥

---

೧೭. ಬ್ರಹ್ಮಹತ್ಯೆ, ಮದ್ಯಪಾನ, ದರಿದ್ರನಹಣ, ಗುರುಪತ್ನೀ, ಚಿನ್ನ ಇವುಗಳು ಸ್ವರ್ಗವಾಸಿಯನ್ನೂ ಪತಿತನನ್ನಾಗಿ ಮಾಡುವುವು.

೧೮–೧೯. ಗೋದಾನವು ಸಾವಿರಯಾಗಗಳಿಗೆ ಸಮಾನವೂ, ಎತ್ತಿನ ದಾನವು ಹತ್ತು ಗೋವುಗಳ ದಾನಕ್ಕೆ ಸಮಾನವೂ, ವಾಹನ ದಾನವು ಹತ್ತು ಎತ್ತುಗಳ ದಾನಕ್ಕೆ ಸಮಾನವೂ, ಕುದುರೆಯದಾನವು ಹತ್ತು ವಾಹನಗಳದಾನಕ್ಕೆ ಸಮಾನವೂ, ಕನ್ಯಾದಾನವು ಹತ್ತು ಕುದುರೆಗಳ ದಾನಕ್ಕೆ ಸಮಾನವೂ, ಭೂಮಿದಾನವು ಅದಕ್ಕಿಂತ ಅಧಿಕವೂ ಆಗಿರುವುದರಿಂದ ಭೂಮಿವಿಕ್ರಯವನ್ನು ಮಾಡಬಾರದು.

೨೦. ವಿಶೇಷವಾಗಿ ಸಕಲ ಪಾಪಗಳನ್ನು ನೀಗಿಸುವ ಮಹಾ ಕ್ಷೇತ್ರವನು ವಿಕ್ರಯಿಸಬಾರದು. ಚಿತಿಕಾಷ್ಠ, ಯಜ್ಞಸ್ತಂಭ, ವೇದವನ್ನು ವಿಕ್ರಯಿಸುವವ ಇವರನ್ನು ಮುಟ್ಟಿದರೆ ಸ್ನಾನಮಾಡಬೇಕು.

೨೧. ದುಷ್ಕಾರ್ಯದ ಅಪ್ಪಣೆಯನ್ನು ಓದುವವನೂ, ಅಪ್ಪಣೆಮಾಡುವವನೂ ಇವರಿಬ್ಬರೂ ಪಾಪಿಗಳಾಗಿ ಪಾತಾಳವಾಸಿಗಳಾಗುವರು.

೨೨–೨೩. ದೇವಿ! ರಾಜದ್ವಾರದಲ್ಲಿ ಆದೇಶವನ್ನು ಪಠಿಸುವವನು ಊಷರ ಕ್ಷೇತ್ರದಲ್ಲಿ ಮುಳ್ಳಿನಮರವಾಗಿ ಹುಟ್ಟುವನು. ರಾಜದ್ವಾರದಲ್ಲಿ ವೇದವನ್ನು ವಿಕ್ರಯಿಸು

ಬ್ರಹ್ಮಹತ್ಯಾಸಮಂ ಪಾಪಂ ನ ಭೂತಂ ನ ಭವಿಷ್ಯತಿ ।
ವರಂ ಕುರ್ವನ್ತ್ಯ್ಯವಂ ದೇವಿ ನ ಕುರ್ಯಾದ್ವೇದವಿಕ್ರಯಂ ॥ ೨೩ ॥
ಹತ್ವಾ ಗಾಶ್ಚ ವರಂ ಮಾಂಸಂ ಭಕ್ಷಯೀತ ದ್ವಿಜಾಧಮಃ ।
ವರಂ ಜೀವೇತ್ಸಮಂ ಮ್ಲೇಚ್ಛೈರ್ನ ಕುರ್ಯಾದ್ವೇದವಿಕ್ರಯಂ ॥ ೨೪ ॥
ಪ್ರತ್ಯಕ್ಷೋಕ್ತಿಃ ಪ್ರತ್ಯಯಶ್ಚ ಪ್ರಶ್ನಪೂರ್ವಃ ಪ್ರತಿಗ್ರಹಃ ।
ಯಜನಾಽಧ್ಯಾಪನೇ ವಾದಃ ಷಡ್ವಿಧೋ ವೇದವಿಕ್ರಯಃ ॥ ೨೫ ॥
ವೇದಾಕ್ಷರಾಣಿ ಯಾವಂತಿ ನಿಯುಂಕ್ತೇ ಸ್ವಾರ್ಥಕಾರಣಾತ್ ।
ತಾವತೀರ್ಭ್ರೂಣಹತ್ಯಾ ವೈ ಪ್ರಾಪ್ನುಯಾದ್ವೇದವಿಕ್ರಯೀ ॥ ೨೬ ॥
ವೇದಾನುಯೋಗಾದ್ಯೋ ದದ್ಯಾದ್ಬ್ರಾಹ್ಮಣಾಯ ಪ್ರತಿಗ್ರಹಂ ।
ಸ ಪೂರ್ವಂ ನರಕಂ ಯಾತಿ ಬ್ರಾಹ್ಮಣಸ್ತದನಂತರಂ ॥ ೨೭ ॥
ವೈಶ್ವದೇವೇನ ಹೀನಾ ಯೇ ಹೀನಾಶ್ಚಾತಿಥ್ಯತೋಽಪಿ ಯೇ ।
ಕರ್ಮಣಾ ಸರ್ವವೃಷಲಾ ವೇದಯುಕ್ತಾ ಹ್ಯಪಿ ದ್ವಿಜಾಃ ॥ ೨೮ ॥
ಯೇಷಾಮಧ್ಯಯನಂ ನಾಸ್ತಿ ಯೇ ಕೇಚಿದನಗ್ನಯಃ ।
ಕುಲಂ ವಾಽಶ್ರೋತ್ರಿಯಂ ಯೇಷಾಂ ತೇ ಸರ್ವೇ ಶೂದ್ರಜಾತಯಃ ।

ವುದಕ್ಕಿಂತ ಕ್ರೂರವಾದ ಬ್ರಹ್ಮಹತ್ಯಾಪಾಪವೇ ಮೇಲಾದದು. ಆದ್ದರಿಂದ ವೇದವನ್ನು ವಿಕ್ರಯಿಸಬಾರದು.

೨೪. ಗೋವನ್ನು ವಧಿಸಿ ಮಾಂಸವನ್ನಾದರೂ ತಿನ್ನಬಹುದು. ಮ್ಲೇಚ್ಛರೊಡನೆ ವಾಸಿಸಲೂ ಬಹುದು. ವೇದವನ್ನು ವಿಕ್ರಯಿಸಬಾರದು.

೨೫. ಪ್ರತ್ಯಕ್ಷವಾಗಿ ದ್ರವ್ಯಾಕಾಂಕ್ಷೆಯಿಂದ ವೇದವನ್ನು ಹೇಳುವುದು, ಜ್ಞಾನೋಪದೇಶ, ದಾನವನ್ನು ಕೇಳಿ ತೆಗೆದುಕೊಳ್ಳುವುದು, ಯಾಗವನ್ನು ಮಾಡಿಸುವುದು, ವೇದವನ್ನು ಓದಿಸುವುದು, ವಾದಮಾಡುವುದು ಇವು ಆರು ವೇದವಿಕ್ರಯವಾಗಿರುವವು.

೨೬. ವೇದವನ್ನು ವಿಕ್ರಯಿಸುವವನು ಸ್ವಾರ್ಥಕ್ಕಾಗಿ ಎಷ್ಟು ವೇದಾಕ್ಷರಗಳನ್ನು ವಿನಿಯೋಗಿಸುವನೊ, ಅಷ್ಟು ಭ್ರೂಣಹತ್ಯಾದೋಷವನ್ನು ಹೊಂದುವನು.

೨೭. ವೇದವಿಕ್ರಯಮಾಡುವವನು ಬ್ರಾಹ್ಮಣನಿಗೆ ದಾನವನ್ನಿತ್ತರೆ ಅವನು ಮೊದಲು ನರಕವನ್ನು ಸೇರುವನು. ದಾನವನ್ನು ತೆಗೆದುಕೊಂಡ ಬ್ರಾಹ್ಮಣನು ಅನಂತರ ನರಕಭಾಗಿಯಾಗುವನು.

೨೮–೨೯. ವೈಶ್ವದೇವ, ಅತಿಥಿಪೂಜೆಗಳಿಲ್ಲದವನೂ, ಕರ್ಮವಿಲ್ಲದೆ ಶೂದ್ರನಂತಿರುವವನೂ, ವೇದವಿಕ್ರಯ-ನಿರತನೂ, ವೇದಾಧ್ಯಯನ, ಅಗ್ನಿಹೋತ್ರಗಳನ್ನು ಮಾಡದವನೂ, ಅಶ್ರೋತ್ರಿಯವಂಶದವನೂ ಇವರೆಲ್ಲರೂ ಶೂದ್ರರು.

ಮೃತೇಽಹನಿ ಪಿತುರ್ಯಸ್ತು ನ ಕುರ್ಯಾಚ್ಛ್ರಾದ್ಧಮಾದರಾತ್ ।
ಮಾತುಶ್ಚೈವ ವರಾರೋಹೇ ಸ ದ್ವಿಜಃ ಶೂದ್ರಸಂನಿಭಃ ॥ ೩೦ ॥
ಮೃತಕೇ ಯಸ್ತು ಭುಂಜೀತ ಗೃಹೀತಶಶಿಭಾಸ್ಕರೇ ।
ಗಜಚ್ಛಾಯಾಸು ಯಃ ಕಶ್ಚಿತ್ತಂ ಚ ಶೂದ್ರವದಾಚರೇತ್ ॥ ೩೧ ॥
ಬ್ರಹ್ಮಚಾರಿಣಿ ಯಜ್ಞೇ ಚ ಯತೌ ಶಿಲ್ಪಿನಿ ದೀಕ್ಷಿತೇ ।
ಯಜ್ಞೇ ವಿವಾಹೇ ಸತ್ರೇ ಚ ಸೂತಕಂ ನ ಕದಾಚನ ॥ ೩೨ ॥
ಗೋರಕ್ಷಕಾನ್ವಣಿಜಕಾಂಸ್ತಥಾ ಕಾರುಕುಶೀಲವಾನ್ ।
ಪ್ರೈಷ್ಯಾನ್ವಾರ್ಧುಷಿಕಾಂಶ್ಚೈವ ವಿಪ್ರಾಞ್ಛೂದ್ರವದಾಚರೇತ್ ॥ ೩೩ ॥
ಬ್ರಾಹ್ಮಣಃ ಪತನೀಯೇಷು ವರ್ತಮಾನೋ ವಿಕರ್ಮಸು ।
ದಾಂಭಿಕೋ ದುಷ್ಕೃತಪ್ರಾಯಃ ಸ ಚ ಶೂದ್ರಸಮಃ ಸ್ಮೃತಃ ॥ ೩೪ ॥
ಅಸ್ನಾತಾಶೀ ಮಲಂ ಭುಂಕ್ತೇ ಅಜಾಪೀ ಪೂಯಶೋಣಿತಂ ।
ಅಹುತ್ವಾ ತು ಕೃಮೀನ್ಭುಂಕ್ತೇ ಅದತ್ವಾ ವಿಷಭೋಜನಂ ॥ ೩೫ ॥
ಪರಾನ್ನೇನ ತು ಭುಕ್ತೇನ ಮಿಥುನಂ ಯೋಽಧಿಗಚ್ಛತಿ ।
ಯಸ್ಯಾನ್ನಂ ತಸ್ಯ ತೇ ಪುತ್ರಾ ಅನ್ನಾಚ್ಛುಕ್ರಂ ಪ್ರವರ್ತತೇ ॥ ೩೬ ॥

---

೩೦. ತಂದೆ ತಾಯಿಗಳಿಗೆ ಮೃತದಿನದಲ್ಲಿ ಆದರದಿಂದ ಶ್ರಾದ್ಧಮಾಡದವನು ಶೂದ್ರನಿಗೆ ಸಮಾನನು.

೩೧. ಮೃತಾಶೌಚದವನ ಮನೆಯಲ್ಲಿಯೂ, ಗ್ರಹಣಕಾಲದಲ್ಲಿಯೂ, ಗಜಚ್ಛಾಯೆಗಳಲ್ಲಿಯೂ ಭುಂಜಿಸಿದವನು ಶೂದ್ರನಂತಾಗುವನು.

೩೨. ಬ್ರಹ್ಮಚಾರಿ, ಯತಿ, ಬಡಗಿ, ದೀಕ್ಷಿತರಿಗೂ, ಯಜ್ಞ, ಮದುವೆ, ಯಾಗಗಳಿಗೂ ಸೂತಕ ಸಂಬಂಧವಿಲ್ಲ.

೩೩. ಗೋಪಾಲಕ, ವರ್ತಕ, ಬಡಗಿ, ಗಾಯಕ, ಬಡ್ಡಿಯಿಂದ ಜೀವಿಸುವ ಬ್ರಾಹ್ಮಣ ಇವರನ್ನು ಶೂದ್ರರಂತೆ ಭಾವಿಸಬೇಕು.

೩೪. ಪಾತಕ ಕರ್ಮನಿರತನೂ, ದಾಂಭಿಕನೂ, ಹೆಚ್ಚುಪಾಪವುಳ್ಳವನೂ, ಆದ ಬ್ರಾಹ್ಮಣನು ಶೂದ್ರನಿಗೆ ಸಮಾನನು.

೩೫. ಸ್ನಾನಮಾಡದೆ ಊಟಮಾಡುವವನು ಮಲವನ್ನೂ, ಜಪಮಾಡದೆ ಭುಂಜಿಸುವವನು ಪೂಯರಕ್ತಗಳನ್ನೂ, ಹೋಮಿಸದೆ ಊಟಮಾಡುವವನು ಕ್ರಿಮಿಗಳನ್ನೂ, ದಾನವನ್ನೀಯದೆ ಭುಂಜಿಸುವವನು ವಿಷವನ್ನೂ ಭುಂಜಿಸುವನು.

೩೬. ಪರಾನ್ನವನ್ನು ತಿನ್ನುತ್ತ ಮೈಥುನಾಸಕ್ತನಾದವನಿಗೆ ಜನಿಸಿದ ಪುತ್ರರು ಅನ್ನದಿಂದ ಶುಕ್ರವುಂಟಾಗುವುದರಿಂದ ಅನ್ನವಿತ್ತವನ ಪುತ್ರನೇ ಆಗುವನು.

ರಾಜಾನ್ನಂ ತೇಜ ಆದತ್ತೇ ಶೂದ್ರಾನ್ನಂ ಬ್ರಹ್ಮವರ್ಚಸಂ ।
ಆಯುಃ ಸುವರ್ಣಕಾರಾನ್ನಂ ಯಶಶ್ಚರ್ಮಾವಕರ್ತಿನಃ ॥ ೩೭ ॥
ಕಾರುಕಾನ್ನಂ ಪ್ರಜಾ ಹಂತಿ ಬಲಂ ನಿರ್ಣೇಜಕಸ್ಯ ಚ ।
ಗಣಾನ್ನಂ ಗಣಿಕಾನ್ನಂ ಚ ಲೋಕೇಭ್ಯಃ ಪರಿಕೃಂತತಿ ॥ ೩೮ ॥
ಪೂಯಂ ಚಿಕಿತ್ಸಕಸ್ಯಾನ್ನಂ ಪುಂಶ್ಚಲ್ಯಾಸ್ತ್ವನ್ನಮಿಂದ್ರಿಯಂ ।
ವಿಷ್ಠಾ ವಾರ್ಧುಷಿಕಸ್ಯಾನ್ನಂ ಶಸ್ತ್ರವಿಕ್ರಯಿಣೋ ಮಲಂ ॥ ೩೯ ॥
ಗಾಯತ್ರೀ ಸಾರಮಾತ್ರೋಽಪಿ ವರಂ ವಿಪ್ರಃ ಸುಯಂತ್ರಿತಃ ।
ನಾಯಂತ್ರಿತಶ್ಚತುರ್ವೇದೀ ಸರ್ವಾಶೀ ಸರ್ವವಿಕ್ರಯೀ ॥ ೪೦ ॥
ಸದ್ಯಃ ಪತತಿ ಮಾಂಸೇನ ಲಾಕ್ಷಯಾ ಲವಣೇನ ಚ ।
ತ್ರ್ಯಹೇಣ ಶೂದ್ರೋ ಭವತಿ ಬ್ರಾಹ್ಮಣಃ ಕ್ಷೀರವಿಕ್ರಯಾತ್ ॥ ೪೧ ॥
ರಸಾ ರಸೈರ್ನಿರ್ಯಂತವ್ಯಾ ನ ತ್ವೇವ ಲವಣಂ ರಸೈಃ ।
ಕೃತಾನ್ನಂ ಚ ಕೃತಾನ್ನೇನ ತಿಲಾ ಧಾನ್ಯೇನ ತತ್ಸಮಾಃ ॥ ೪೨ ॥

೩೭–೩೮. ರಾಜನ ಅನ್ನವು ತೇಜಸ್ಸನ್ನೂ, ಶೂದ್ರನ ಅನ್ನವು ಬ್ರಹ್ಮವರ್ಚಸ್ಸನ್ನೂ, ಸ್ವರ್ಣಕಾರನ ಅನ್ನವು ಆಯುಸ್ಸನ್ನೂ, ಚರ್ಮಕಾರನ ಅನ್ನವು ಕೀರ್ತಿಯನ್ನೂ, ಬಡಗಿಯ ಅನ್ನವು ಸಂತತಿಯನ್ನೂ, ಅಗಸನ ಅನ್ನವು ಬಲವನ್ನೂ, ಸಮೂಹದ ಅನ್ನವೂ, ಸೂಳೆಯ ಅನ್ನವೂ ಸ್ವರ್ಗಾದಿಲೋಕಗಳನ್ನೂ ಹಾಳು ಮಾಡುವುವು.

೩೯. ವೈದ್ಯನ ಅನ್ನವು ಪೂಯವ, ವ್ಯಭಿಚಾರಿಯ ಅನ್ನವು ರೇತಸ್ಸೂ, ಬಡ್ಡಿಯಿಂದ ಜೀವಿಸುವವನ ಮತ್ತು ಆಯುಧಗಳನ್ನು ಮಾಡುವವನ ಅನ್ನವು ಮಲವೂ ಆಗಿರುವುದು.

೪೦. ಗಾಯತ್ರಿಯನ್ನು ಮಾತ್ರ ಜಪಿಸುವವನಾದರೂ ಜಿತೇಂದ್ರಿಯನಾದ ಬ್ರಾಹ್ಮಣನು ಶ್ರೇಷ್ಠನು. ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ್ದರೂ ಸಕಲವನ್ನು ಭಕ್ಷಿಸುವವನೂ, ಮಾರುವವನೂ, ಜಿತೇಂದ್ರಿಯನಲ್ಲದವನೂ ಆದ ಬ್ರಾಹ್ಮಣನು ಉತ್ತಮನಲ್ಲ.

೪೧. ಬ್ರಾಹ್ಮಣನು ಮಾಂಸ, ಅರಗು, ಉಪ್ಪುಗಳನ್ನು ಮಾರುವುದರಿಂದ ಕೂಡಲೆ ಪತಿತನಾಗುವನು. ಕ್ಷೀರವಿಕ್ರಯದಿಂದ ಮೂರು ದಿನಗಳಲ್ಲಿ ಶೂದ್ರನಾಗುವನು.

೪೨. ರಸವಸ್ತುಗಳನ್ನು ರಸವಸ್ತುಗಳಿಂದ ವಿನಿಮಯ ಮಾಡಿಕೊಳ್ಳಬೇಕು. ರಸವಸ್ತುಗಳಿಂದ ಉಪ್ಪನ್ನು ಬದಲಾಯಿಸಿಕೊಳ್ಳಬಾರದು. ಅನ್ನವನ್ನು ಅನ್ನದಿಂದಲೂ, ಎಳ್ಳನ್ನು ಅದಕ್ಕೆ ಸರಿಯಾದ ಧಾನ್ಯಗಳಿಂದಲೂ, ವಿನಿಮಯ ಮಾಡಿಕೊಳ್ಳಬೇಕು.

ಭೋಜನಾಭ್ಯಂಜನಾದ್ದಾನಾದ್ಯದನ್ಯತ್ಕುರುತೇ ತಿಲೈಃ ।
ಕೃಮಿಭೂತಃ ಸ ವಿಷ್ಠಾಯಾಂ ಪಿತೃಭಿಃ ಸಹ ಮಜ್ಜತಿ ॥ ೪೩ ॥
ಅಪೂಪಂ ಚ ಹಿರಣ್ಯಂ ಚ ಗಾಮಶ್ವಂ ಪೃಥಿವೀಂ ತಿಲಾನ್ ।
ಅವಿದ್ವಾನ್ಪ್ರತಿಗೃಹ್ಣಾತಿ ಭಸ್ಮೀಭವತಿ ಕಾಷ್ಠವತ್ ॥ ೪೪ ॥
ಹಿರಣ್ಯಮಾಯುಃ ರತ್ನಂ ಚ ಭೂರ್ಗೌಶ್ಚಾಕರ್ಷತಸ್ತನುಂ ।
ಅಶ್ವಶ್ಚಕ್ಷುಸ್ತ್ವಚಂ ವಾಸೋ ಘೃತಂ ತೇಜಸ್ತಿಲಾಃ ಪ್ರಜಾಃ ॥ ೪೫ ॥
ಅಗ್ನಿಹೋತ್ರೀ ತಪಸ್ವೀ ಚ ಕ್ಷಣವಾನ್ಕ್ರಿಯತೇ ಯದಿ ।
ಅಗ್ನಿಹೋತ್ರಂ ತಪಶ್ಚೈವ ಸರ್ವಂ ತದ್ಧನಿನೋ ಧನಂ ॥ ೪೬ ॥
ಸೋಮವಿಕ್ರಯಿಣೇ ವಿಷ್ಠಾ ಭೇಷಜೇ ಪೂಯಶೋಣಿತಂ ।
ನಷ್ಟಂ ದೇವಲಕೇ ದಾನಂ ಹ್ಯಪ್ರತಿಷ್ಠಂ ಚ ವಾರ್ಧುಷೇ ॥ ೪೭ ॥
ದೇವಾರ್ಚನಪರೋ ವಿಪ್ರೋ ವಿತ್ತಾರ್ಥೀ ಭುವನತ್ರಯೇ ।
ಅಸೌ ದೇವಲಕೋನಾಮ ಹವ್ಯಕವ್ಯೇಷು ಗರ್ಹಿತಃ ॥ ೪೮ ॥

---

೪೩. ಎಳ್ಳನ್ನು ಭೋಜನ, ಅಭ್ಯಂಜನ, ದಾನಗಳಿಗಿಂತ ಇತರ ಕಾರ್ಯಗಳಿಗೆ ಉಪಯೋಗಿಸುವವನು ಕ್ರಿಮಿಯಾಗಿ ಮಲದಲ್ಲಿ ಪಿತೃಗಳೊಡನೆ ಮುಳುಗುವನು.

೪೪. ಅಪೂಪ, ಚಿನ್ನ, ಗೋವು, ಕುದುರೆ, ಭೂಮಿ, ಎಳ್ಳು ಇವುಗಳನ್ನು ಮೂಢನು ದಾನ ತೆಗೆದುಕೊಂಡರೆ ಕಟ್ಟಿಗೆಯಂತೆ ಬೂದಿಯಾಗುವನು.

೪೫. ಚಿನ್ನ ರತ್ನಗಳ ದಾನವು ಆಯುಸ್ಸನ್ನೂ, ಭೂಮಿ ಗೋವುಗಳು ಶರೀರವನ್ನೂ, ಕುದುರೆಯು ಕಣ್ಣನ್ನೂ, ವಸ್ತ್ರವು ತೊಗಲನ್ನೂ, ತುಪ್ಪವು ತೇಜಸ್ಸನ್ನೂ, ಎಳ್ಳು ಪ್ರಜೆಗಳನ್ನೂ ಹಾಳುಮಾಡುವುದು.

೪೬. ಹಣಗಾರನು ಹಣವನ್ನಿತ್ತು ಬ್ರಾಹ್ಮಣನನ್ನು ಅಗ್ನಿಹೋತ್ರ, ತಪಸ್ಸುಗಳಲ್ಲಿ ತೊಡಗುವಂತೆ ಮಾಡಿದರೆ ಆ ಅಗ್ನಿಹೋತ್ರ, ತಪಸ್ಸು ಧನಿಕನ ಹಣವಾಗುವುದು.

೪೭. ಸೋಮವನ್ನು ಮಾರುವವನಿಗೆ ಮಾಡಿದ ದಾನವು ಮಲವೂ, ಔಷಧವನ್ನು ವಿಕ್ರಯಿಸುವವನಿಗೆ ಮಾಡಿದ ದಾನವು ಪೂಯ, ಶೋಣಿತಗಳೂ ಆಗುವುವು. ದೇವಲಕನಿಗೆ ಕೊಟ್ಟ ದಾನವು ನಷ್ಟವಾಗುವುದು. ಬಡ್ಡಿಯಿಂದ ಜೀವಿಸುವವನಿಗೆ ಕೊಟ್ಟ ದಾನವು ಅಸ್ಥಿರವಾಗುವುದು.

೪೮. ಹಣಕ್ಕಾಗಿ ದೇವಪೂಜೆಯಲ್ಲಿ ಆಸಕ್ತನಾದ ಬ್ರಾಹ್ಮಣನು ಮೂರು ಲೋಕಗಳಲ್ಲಿಯೂ ದೇವಲಕನೆಂದು ಪ್ರಸಿದ್ಧನಾಗಿ ಹವ್ಯಕವ್ಯಗಳಲ್ಲಿ ನಿಂದ್ಯನಾಗುವನು.

ಭ್ರಾತುರ್ಮೃತಸ್ಯ ಭಾರ್ಯಾಯಾಂ ಯೋ ಗಚ್ಛೇತ್ಕಾಮಪೂರ್ವಕಂ ।
ಧರ್ಮೇಣಾಪಿ ನಿಯುಕ್ತಾಯಾಂ ಸ ಜ್ಞೇಯೋ ದಿಧಿಷೂಪತಿಃ ॥ ೪೯ ॥
ದಾರಾಗ್ನಿಹೋತ್ರಸಂಯೋಗಂ ಕುರುತೇ ಯೋಽಗ್ರಜೇ ಸ್ಥಿತೇ ।
ಪರಿವೇತ್ತಾ ಸ ವಿಜ್ಞೇಯಃ ಪರಿವಿತ್ತಿಸ್ತು ಪೂರ್ವಜಃ ॥ ೫೦ ॥
ಯೋ ನರೋಽನ್ಯಸ್ಯ ವಾಸಾಂಸಿ ಕೂಪೋದ್ಯಾನಗೃಹಾಣಿ ಚ ।
ಅದತ್ತಾನ್ಯುಪಯುಂಜಾನಃ ಸ ತತ್ಪಾಪತುರೀಯಭಾಕ್ ॥ ೫೧ ॥
ಆಮಂತ್ರಿತಸ್ತು ಯಃ ಶ್ರಾದ್ಧೇ ವೃಷಲ್ಯಾ ಸಹ ಮೋದತೇ ।
ದಾತುರ್ಯದ್ದುಷ್ಕೃತಂ ಕಿಂಚಿತ್ತತ್ಸರ್ವಂ ಪ್ರತಿಪದ್ಯತೇ ॥ ೫೨ ॥
ಋತಾಮೃತಾಭ್ಯಾಂ ಜೀವೇತ ಮೃತೇನ ಪ್ರಮೃತೇನ ವಾ ।
ಸತ್ಯಾನೃತಾಭ್ಯಾಂ ಜೀವೇತ ನ ಶ್ವವೃತ್ತ್ಯಾ ಕಥಂಚನ ॥ ೫೩ ॥
ಭಕ್ಷ್ಯಂ ನಿತ್ಯಮೃತಂ ಜ್ಞೇಯಮಮೃತಂ ಸ್ಯಾದಯಾಚಿತಂ ।
ಮೃತಂ ತು ವೃದ್ಧ್ಯಾಜೀವಿತ್ವಂ ಪ್ರಮೃತಂ ಕರ್ಷಣಂ ಸ್ಮೃತಂ ॥ ೫೪ ॥
ಸತ್ಯಾನೃತಂ ಚ ವಾಣಿಜ್ಯಂ ತೇನ ಚೈವೋಪಜೀವ್ಯತೇ ।
ಸೇವಾ ಶ್ವವೃತ್ತಿರಾಖ್ಯಾತಾ ತಸ್ಮಾತ್ತಾಂ ಪರಿವರ್ಜಯೇತ್ ॥ ೫೫ ॥

---

೪೯. ಸಹೋದರನು ಮೃತನಾಗಲು ಧರ್ಮದಿಂದ ನಿಯುಕ್ತಳಾದ ಅವನ ಪತ್ನಿಯಲ್ಲಿ ಕಾಮವಶದಿಂದ ಸಂಗಮಾಡುವವನು ದಿಧಿಷೂಪತಿಯೆನ್ನಿಸಿಕೊಳ್ಳುವನು.

೫೦. ಅಣ್ಣನಿಗಿಂತ ಮೊದಲು ವಿವಾಹಮಾಡಿಕೊಂಡು ಅಗ್ನಿಹೋತ್ರವನ್ನಾಚರಿಸುವ ತಮ್ಮನು ಪರಿವೇತ್ತನು. ಅಣ್ಣನು ಪರಿವಿತ್ತಿಯು.

೫೧. ಕೊಡದಿರುವ ಮತ್ತೊಬ್ಬರ ಬಟ್ಟೆ, ಬಾವಿ, ಉದ್ಯಾನ, ಮನೆಗಳನ್ನು ಉಪಯೋಗಿಸುವವನು ಆ ವಸ್ತುಗಳ ಯಜಮಾನನ ನಾಲ್ಕನೆ ಒಂದಂಶ ಪಾಪವನ್ನು ಹೊಂದುವನು.

೫೨. ಶ್ರಾದ್ಧದಲ್ಲಿ ನಿಮಂತ್ರಿತನಾಗಿ ವೃಷಲಿಯೊಡನೆ ವಿನೋದಪಡುವವನು ಶ್ರಾದ್ಧಕರ್ತನ ಸಕಲ ಪಾಪಗಳನ್ನೂ ಹೊಂದುವನು.

೫೩. ಋತ, ಅಮೃತ, ಮೃತ, ಪ್ರಮೃತ, ಸತ್ಯಾನೃತ ಇವುಗಳಿಂದ ಜೀವಿಸಬೇಕು. ನಾಯಿಯ ವೃತ್ತಿಯೆಂಬ ಸೇವಾವೃತ್ತಿಯಿಂದ ಜೀವಿಸಬಾರದು.

೫೪–೫೫. ಭಕ್ಷವು ಋತವೂ, ಯಾಚನೆಮಾಡದಿರುವುದು ಅಮೃತವೂ, ಬಡ್ಡಿಯಿಂದ ಜೀವಿಸುವುದು ಮೃತವೂ, ವ್ಯವಸಾಯವು ಪ್ರಮೃತವೂ, ವ್ಯಾಪಾರವು ಸತ್ಯಾನೃತವೂ ಆಗಿರುವುದು. ಇವುಗಳಿಂದ ಜೀವಿಸತಕ್ಕದ್ದು. ಸೇವೆಯು ಶ್ವವೃತ್ತಿಯೆನ್ನಿಸಿಕೊಳ್ಳುವುದು. ಆದ್ದರಿಂದ ಅದನ್ನು ಬಿಡಬೇಕು.

ವಿಪ್ರಯೋನಿಂ ಸಮಾಸಾದ್ಯ ಸಂಕರಂ ಪರಿವರ್ಜಯೇತ್ ।
ಮಾನುಷ್ಯಂ ದುರ್ಲಭಂ ಲೋಕೇ ಬ್ರಾಹ್ಮಣ್ಯಮಧಿಕಂ ತತಃ ॥ ೫೬ ॥
ಏಕಶಯ್ಯಾಸನಂ ಪಂಕ್ತಿರ್ಭಾಂಡಪಕ್ವಾನ್ನಮಿಶ್ರಣಂ ।
ಯಾಜನಾಧ್ಯಾಪನಂ ಯೋನಿಸ್ತಥಾ ಚ ಸಹ ಭೋಜನಂ ।
ನವಧಾಸಂಕರಃ ಪ್ರೋಕ್ತೋ ನ ಕರ್ತವ್ಯೋಽಧಮೈಃ ಸಹ ॥ ೫೭ ॥
ಅಜೀವನ್ಸ್ವಕರ್ಮಣಾ ಸ್ವೇನ ವಿಪ್ರಃ ಕ್ಷಾತ್ರಂ ಸಮಾಶ್ರಯೇತ್ ।
ವೈಶ್ಯಕರ್ಮಾಽಥವಾ ಕುರ್ಯಾದ್ವೃಷಲಂ ಪರಿವರ್ಜಯೇತ್ ॥ ೫೮ ॥
ಕುಸೀದಂ ಕೃಷಿವಾಣಿಜ್ಯಂ ಪ್ರಕುರ್ವೀತ ಸ್ವಯಂ ಕೃತಂ ।
ಆಪತ್ಕಾಲೇ ಸ್ವಯಂ ಕುರ್ವನ್ ಸ್ನಾನೇನ ಸ್ಪೃಶ್ಯತೇ ದ್ವಿಜಃ ॥ ೫೯ ॥
ಲಬ್ಧಲಾಭಃ ಪಿತೄನ್ದೇವಾನ್ಬ್ರಾಹ್ಮಣಾಂಶ್ಚೈವ ತರ್ಪಯೇತ್ ।
ತೇ ತೃಪ್ತಾಸ್ತಸ್ಯ ತತ್ಪಾಪಂ ಶಮಯಂತಿ ನ ಸಂಶಯಃ ॥ ೬೦ ॥
ಜಲಗೋಶಕಟಾರಾಮಯಾಂಚಾವೃದ್ಧಿವಣಿಕ್ಕ್ರಿಯಾಃ ।
ಅನೂಪಂ ಪರ್ವತೋ ರಾಜಾ ದುರ್ಭಿಕ್ಷೇ ಜೀವಿಕಾಃ ಸ್ಮೃತಾಃ ॥ ೬೧ ॥

---

೫೬. ಬ್ರಾಹ್ಮಣಜಾತಿಯಲ್ಲಿ ಜನಿಸಿ ಸಂಕರವನ್ನು ಆಶ್ರಯಿಸಬಾರದು. ಪ್ರಪಂಚದಲ್ಲಿ ಮನುಷ್ಯಜನ್ಮವು ದುರ್ಲಭವಾದುದು. ಅದಕ್ಕಿಂತ ಬ್ರಾಹ್ಮಣ್ಯವು ಹೆಚ್ಚಿನದು.

೫೭. ಒಂದೇ ಹಾಸಿಗೆಯಲ್ಲಿ ಮಲಗುವುದು, ಕುಳಿತುಕೊಳ್ಳುವುದು, ಸಮಾನವಾದ ಪಾಕ, ಪಾತ್ರೆ, ಅನ್ನಮಿಶ್ರಣ, ಯಾಜನ, ಅಧ್ಯಾಪನ, ಯೋನಿ, ಒಟ್ಟಿಗೆ ಭೋಜನ ಈ ಒಂಬತ್ತು ಸಂಕರವೆನ್ನಿಸಿಕೊಳ್ಳುವುವು. ಇದನ್ನು ನೀಚರೊಡನೆ ಮಾಡಕೂಡದು.

೫೮. ಬ್ರಾಹ್ಮಣನು ತನ್ನ ವೃತ್ತಿಯಿಂದ ಜೀವಿಸಲಶಕ್ತನಾದರೆ ಕ್ಷತ್ರಿಯ ಧರ್ಮವನ್ನಾಗಲಿ, ವೈಶ್ಯಧರ್ಮವನ್ನಾಗಲಿ ಆಶ್ರಯಿಸಬಹುದು. ಶೂದ್ರನ ಧರ್ಮವಾದ ಸೇವೆಯನ್ನು ತ್ಯಜಿಸಬೇಕು.

೫೯. ಬ್ರಾಹ್ಮಣನು ಆಪತ್ಕಾಲದಲ್ಲಿ ತಾನೇ ಕುಸಿದ (ಬಡ್ಡಿಯಿಂದ ಜೀವಿಕೆ) ಕೃಷಿ, ವ್ಯಾಪಾರ ಇವುಗಳನ್ನು ಮಾಡಿದರೂ ಸ್ನಾನ ಮಾತ್ರದಿಂದ ಸ್ಪೃಶ್ಯನಾಗುವನು.

೬೦. ಈ ವೃತ್ತಿಗಳಿಂದ ಲಾಭವನ್ನು ಪಡೆದು ಪಿತೃಗಳನ್ನೂ, ದೇವತೆಗಳನ್ನೂ ಬ್ರಾಹ್ಮಣರನ್ನೂ ತೃಪ್ತಿಗೊಳಿಸಿದರೆ ತೃಪ್ತರಾದ ಅವರು ಇವನ ಪಾಪವನ್ನು ಪರಿಹರಿಸುವರು.

೬೧. ದುರ್ಭಿಕ್ಷದಲ್ಲಿ ನೀರು, ಗೋವು, ಬಂಡಿ, ತೋಟ, ಯಾಚನೆ, ಬಡ್ಡಿ, ವಾಣಿಜ್ಯ, ಚಿಲಿಮೆ, ಪರ್ವತ, ಅರಸ ಇವು ಜೀವನೋಪಾಯಗಳು.

ಅಸತೋಽಪಿ ಸಮಾದಾಯ ಸಾಧುಭ್ಯೋ ಯಃ ಪ್ರಯಚ್ಛತಿ ।
ಧನಂ ಸ್ವಾಮಿನಮಾತ್ಮಾನಂ ಸಂತಾರಯತಿ ದುಸ್ತರಾತ್ ॥ ೬೨ ॥
ಶೂದ್ರೇ ಸಮಗುಣಂ ದಾನಂ ವೈಶ್ಯೇ ತದ್ದ್ವಿಗುಣಂ ಸ್ಮೃತಂ ।
ಶ್ರೋತ್ರಿಯೇ ತಚ್ಚ ಸಾಹಸ್ರಮನಂತಂ ಚಾಗ್ನಿಹೋತ್ರಿಕೇ ॥ ೬೩ ॥
ಬ್ರಾಹ್ಮಣಾತಿಕ್ರಮೋ ನಾಸ್ತಿ ನಾಚರೇದ್ಯೋ ವ್ಯವಸ್ಥಿತಿಂ ।
ಜ್ವಲಂತಮಗ್ನಿಮುತ್ಸೃಜ್ಯ ನ ಹಿ ಭಸ್ಮನಿ ಹೂಯತೇ ॥ ೬೪ ॥
ವಿದ್ಯಾತಪೋಭ್ಯಾಂ ಹೀನೇನ ನೈವ ಗ್ರಾಹ್ಯಃ ಪ್ರತಿಗ್ರಹಃ ।
ಗೃಹ್ಣನ್ಪ್ರದಾತಾರಮಧೋ ನಯತ್ಯಾತ್ಮಾನಮೇವ ಚ ॥ ೬೫ ॥
ತಸ್ಮಾಚ್ಛ್ರೋತ್ರಿಯ ಏವಾರ್ಹೋ ಗುಣವಾಞ್ಛೀಲವಾಞ್ಛುಚಿಃ ।
ಅವ್ಯಂಗಸ್ತತ್ರ ನಿರ್ದೋಷಃ ಪಾತ್ರಾಣಾಂ ಪರಮಂ ಸ್ಮೃತಂ ॥ ೬೬ ॥
ಕಪಾಲಸ್ಥಂ ಯಥಾ ತೋಯಂ ಶ್ವದೃತೌ ಚ ಯಥಾ ಪಯಃ ।
ದೂಷಿತಂ ಸ್ಥಾನದೋಷೇಣ ವೃತ್ತಹೀನೇ ತಥಾ ಶ್ರುತಂ ॥ ೬೭ ॥
ದತ್ತಂ ಪಾತ್ರಮತಿಕ್ರಮ್ಯ ಯದಪಾತ್ರೇ ಪ್ರತಿಗ್ರಹಃ ।
ತದ್ದತ್ತಂ ಗಾಮತಿಕ್ರಮ್ಯ ಗರ್ದಭಸ್ಯ ಗವಾಹ್ನಿಕಂ ॥ ೬೮ ॥

---

೬೨. ದುಷ್ಟನಿಂದ ಧನವನ್ನು ಪಡೆದು ಸಜ್ಜನರಿಗೆ ದಾನಮಾಡುವವನು ಆ ಹಣದ ಸ್ವಾಮಿಯನ್ನೂ, ತನ್ನನ್ನೂ ದುರಿತಗಳಿಂದ ಉದ್ಧರಿಸುವನು.

೬೩. ದಾನವು ಶೂದ್ರನಲ್ಲಿ ಸಮವೂ, ವೈಶ್ಯನಲ್ಲಿ ಅದರ ಇಮ್ಮಡಿಯೂ, ಶ್ರೋತ್ರಿಯನಲ್ಲಿ ಸಾವಿರದಷ್ಟೂ, ಅಗ್ನಿಹೋತ್ರಿಯಲ್ಲಿ ಅನಂತವೂ ಆಗುವುದು.

೬೪. ಸನ್ನಿಹಿತನಾದ ಬ್ರಾಹ್ಮಣನನ್ನು ತ್ಯಜಿಸಿ ಇತರನಿಗೆ ದಾನವನ್ನೀಯಬಾರದು. ಉರಿಯುವ ಬೆಂಕಿಯನ್ನು ಬಿಟ್ಟು ಬೂದಿಯಲ್ಲಿ ಹೋಮಿಸಕೂಡದು.

೬೫. ವಿದ್ಯೆತಪಸ್ಸುಗಳಿಲ್ಲದವನು ದಾನವನ್ನು ಸ್ವೀಕರಿಸಬಾರದು. ಹಾಗೆ ತೆಗೆದುಕೊಂಡರೆ ಕೊಟ್ಟವನನ್ನೂ, ತನ್ನನ್ನೂ ನೀಚನನ್ನಾಗಿ ಮಾಡುವನು.

೬೬. ಆದ್ದರಿಂದ ಗುಣವಂತನೂ, ಒಳ್ಳೆಯ ನಡತೆಯುಳ್ಳವನೂ, ಶುದ್ಧನೂ, ಆದ ಶ್ರೋತ್ರಿಯನೇ ದಾನಕ್ಕೆ ಅರ್ಹನು. ಅಲ್ಲಿಯೂ ಅಂಗವೈಕಲ್ಯವಿಲ್ಲದವನೂ, ದೋಷವಿಲ್ಲದವನೂ ಉತ್ತಮ ಪಾತ್ರನು.

೬೭. ಕಪಾಲದಲ್ಲಿರುವ ನೀರೂ, ನಾಯಿಯಿಂದ ಬಂದ ಹಾಲೂ ಹೇಗೆ ಸ್ಥಾನ ದೋಷದಿಂದ ದುಷ್ಟವಾದುದೋ; ಹಾಗೆಯೇ ನಡತೆಯಿಲ್ಲದವನ ಶಾಸ್ತ್ರಶ್ರವಣವೂ ದುಷ್ಟವಾದುದು.

೬೮. ಸತ್ಪಾತ್ರನನ್ನು ಉಲ್ಲಂಘಿಸಿ ಅಪಾತ್ರನಲ್ಲಿ ದಾನಮಾಡುವುದು ಗೋವನ್ನು ತ್ಯಜಿಸಿ ಗೋಗ್ರಾಸನವನ್ನು ಕತ್ತೆಗಿತ್ತಂತಾಗುವುದು.

ವೃತ್ತಂ ತಸ್ಮಾತ್ತು ಸರಂಕ್ಷೇದ್ವಿತ್ತಮೇತಿ ಗತಂ ಪುನಃ ।
ಅಕ್ಷೀಣೋ ವಿತ್ತತಃ ಕ್ಷೀಣೋ ವೃತ್ತತಸ್ತು ಹತೋ ಹತಃ ॥ ೬೯ ॥
ಪ್ರಥಮಂ ತು ಗುರೌ ದಾನಂ ದತ್ವಾ ಶ್ರೇಷ್ಠಮನುಕ್ರಮಾತ್ ।
ತತೋನ್ಯೇಷಾಂ ತು ವಿಪ್ರಾಣಾಂ ದದ್ಯಾತ್ಪಾತ್ರಾನುರೂಪತಃ ॥ ೭೦ ॥
ಗುರೌ ಚ ದತ್ತಂ ಯದ್ದಾನಂ ದತ್ತಂ ಪಾತ್ರೇಷು ಮಾನವೈಃ ।
ನಿಷ್ಫಲಂ ತದ್ಭವೇತ್ಪ್ರೇತ್ಯ ಯಾತ್ಯಥಾಧೋಗತಿಂ ಪ್ರತಿ ॥ ೭೧ ॥
ಅವಮಾನಂ ಗುರೋಃ ಕೃತ್ವಾ ಕೋಪಯಿತ್ವಾ ತು ದುರ್ಮತಿಃ ।
ಗುರ್ವಮಾನಹತೋ ಮೂಢೋ ನ ಶಾಂತಿಮಧಿಗಚ್ಛತಿ ॥ ೭೨ ॥
ಗುರೋರಭಾವೇ ತತ್ಪುತ್ರಂ ತದ್ಭಾರ್ಯಾಂ ತತ್ಸುತಂ ವಿನಾ ।
ಪುತ್ರಂ ಪ್ರಪೌತ್ರಂ ದೌಹಿತ್ರಂ ಹ್ಯನ್ಯಂ ವಾ ತತ್ಕುಲೋದ್ಭವಂ ॥ ೭೩ ॥
ಪಂಚಯೋಜನಮಧ್ಯೇ ತು ಶ್ರೂಯತೇ ಸ್ವಗುರುರ್ಯದಾ ।
ತದಾ ನಾತಿಕ್ರಮೇದ್ದಾನಂ ದದ್ಯಾತ್ಪಾತ್ರೇಷು ಮಾನವಃ ॥ ೭೪ ॥
ಯತಿಶ್ಚೇತ್ಪ್ರಾರ್ಥಯೇಲ್ಲೋಭಾದ್ದೇಯಮಾನಂ ಪ್ರತಿಗ್ರಹಂ ।
ನ ತಸ್ಯ ದೇಯಂ ವಿದ್ವದ್ಭಿರ್ನ ಲೋಭಃ ಶಸ್ಯತೇ ಯತೇಃ ॥ ೭೫ ॥

---

೬೯. ಆದುದರಿಂದ ನಡತೆಯನ್ನು ಕಾಪಾಡಿಕೊಳ್ಳಬೇಕು. ಹಣವು ನಷ್ಟವಾದರೂ ಮರಳಿ ಬರುವುದು. ಧನವಿಲ್ಲದವನೂ ಪೂರ್ಣನೆ. ನಡತೆಯಿಲ್ಲದೆ ಹಾಳಾದವನು ಹಾಳೇ ಆಗುವನು.

೭೦. ಮೊದಲು ಉತ್ತಮದಾನವನ್ನು ಗುರುವಿಗಿತ್ತು ಬಳಿಕ ಕ್ರಮವಾಗಿ ಇತರ ಬ್ರಾಹ್ಮಣರಿಗೆ ಪಾತ್ರಾನುರೂಪ್ಯವನ್ನನುಸರಿಸಿ ದಾನಮಾಡಬೇಕು.

೭೧. ಗುರುವಿಗೆ ಕೊಡಲರ್ಹವಾದ ದಾನವನ್ನು ಇತರರಿಗೆ ಕೊಟ್ಟರೆ ಅದು ವ್ಯರ್ಥವಾಗುವುದು. ಹಾಗೆ ಕೊಟ್ಟವನು ಮೃತನಾದ ಮೇಲೆ ಅಧೋಗತಿಯನ್ನೈದುವನು.

೭೨. ಗುರುವಿಗೆ ಅವಮಾನ ಮಾಡಿ ಕೋಪವನ್ನುಂಟುಮಾಡಿದ ದುರಳನು ಶಾಂತಿಯನ್ನು ಹೊಂದುವುದಿಲ್ಲ.

೭೩. ಗುರುವಿಲ್ಲದಿದ್ದರೆ ಅವನ ಮಗನಿಗೆ, ಅವನಿಲ್ಲದಿದ್ದರೆ ಅವನ ಹೆಂಡತಿಗೆ ಅವಳೂ ಇಲ್ಲದಿದ್ದರೆ ಪೌತ್ರ, ಪ್ರಪೌತ್ರ, ದೌಹಿತ್ರ, ಅಥವಾ, ಅವನ ವಂಶದವನಿಗೆ ದಾನಮಾಡಬೇಕು.

೭೪. ಗುರುವು ಐದು ಗಾವುದಗಳ ದೂರದಲ್ಲಿರುವನೆಂದು ಕೇಳಿದರೂ ಅವನನ್ನು ಮೀರದೆ ದಾನಕೊಡಬೇಕು.

೭೫. ಯತಿಯು ಲೋಭದಿಂದ ದಾನವನ್ನು ಬೇಡಿದರೆ ಪ್ರಾಜ್ಞನು ಅವನಿಗೆ ದಾನವನ್ನೀಯಬಾರದು. ಯತಿಗೆ ಅತ್ಯಾಶೆಯು ಉಚಿತವಲ್ಲ.

ಧನಂ ಪ್ರಾಪ್ಯ ಯತಿರ್ಲೋಕೇ ಮೌನಂ ಜ್ಞಾನಂ ಚ ನಾಭ್ಯಸೇತ್ ।
ಉಪಭೋಗಂ ತು ದಾನೇನ ಜೀವಿತಂ ಬ್ರಹ್ಮಚರ್ಯಯಾ ॥ ೭೬ ॥
ಕುಲೇ ಜನ್ಮ ಚ ದೀಕ್ಷಾಭಿರ್ಯೇ ಗತಾಸ್ತೇ ನರೋತ್ತಮಾಃ ।
ಸೌಭಾಗ್ಯಮಾಪ್ನುಯಾಲ್ಲೋಕೇ ನೂನಂ ರಸವಿವರ್ಜನಾತ್ ॥ ೭೭ ॥
ಆಯುಷ್ಮತ್ಯಃ ಪ್ರಜಾಃ ಸರ್ವಾ ಭವಂತ್ಯಾಮಿಷವರ್ಜನಾತ್ ॥ ೭೮ ॥
ಚೀರವಲ್ಕಲಧೃಕ್ತ್ಯಕ್ತ್ವಾ ವಸ್ತ್ರಾಣ್ಯಾಭರಣಾನಿ ಚ ।
ನಾಗಾಧಿಪತ್ಯಂ ಪ್ರಾಪ್ನೋತಿ ಉಪವಾಸೇನ ಮಾನವಃ ॥ ೭೯ ॥
ಕ್ರೀಡತೇ ಸತ್ಯವಾಕ್ಯೇನ ಸ್ವರ್ಗೇ ವೈ ದೈವತೈಃ ಸಹ ।
ಅಹಿಂಸಯಾ ತಥಾಽಽರೋಗ್ಯಂ ದಾನಾತ್ಕೀರ್ತಿಮನುಕ್ರಮಾತ್ ॥ ೮೦ ॥
ದ್ವಿಜಶುಶ್ರೂಷಯಾ ರಾಜ್ಯಂ ದ್ವಿಜತ್ವಂ ಚಾತಿಪುಷ್ಕಲಂ ।
ದಿವ್ಯರೂಪಮವಾಪ್ನೋತಿ ದೇವಶುಶ್ರೂಷಯಾ ನರಃ ॥ ೮೧ ॥
ಅನ್ನದಾನಾದ್ಭವೇತ್ತೃಪ್ತಿಃ ಸರ್ವಕಾಮೈರನುತ್ತಮೈಃ ।
ದೀಪಸ್ಯ ತು ಪ್ರದಾನೇನ ಚಕ್ಷುಷ್ಮಾಞ್ಜಾಯತೇ ನರಃ ॥ ೮೨ ॥

೭೬–೭೮. ಯತಿಯು ಧನವನ್ನು ಹೊಂದಿದರೆ ಮೌನ, ಜ್ಞಾನವನ್ನು ಅಭ್ಯಾಸ ಮಾಡುವುದಿಲ್ಲ. ದಾನದಿಂದ ಸುಖಾನುಭವವನ್ನೂ, ಬ್ರಹ್ಮಚರ್ಯೆಯಿಂದ ಜೀವನವನ್ನೂ, ದೀಕ್ಷೆಯಿಂದ ಸತ್ಕುಲದಲ್ಲಿ ಜನ್ಮವನ್ನೂ ಹೊಂದಿದ ಮನುಷ್ಯರು ಉತ್ತಮರು. ಪ್ರಪಂಚದಲ್ಲಿ ರಸವನ್ನು ತ್ಯಜಿಸಿದ ಮಾನವರು ಸೌಭಾಗ್ಯವನ್ನು ಪಡೆಯುವರು. ಮಾಂಸವನ್ನು ಬಿಡುವುದರಿಂದ ಎಲ್ಲ ಮಕ್ಕಳೂ ದೀರ್ಘಾಯುಷ್ಮಂತರಾಗುವರು.

೭೯. ವಸ್ತ್ರ ಒಡವೆಗಳನ್ನು ತ್ಯಜಸಿ ನಾರುಬಟ್ಟೆಗಳನ್ನು ತ್ಯಜಿಸಿ ನಾರು ಬಟ್ಟೆಗಳನ್ನುಟ್ಟು ಉಪವಾಸ ಮಾಡುವುದರಿಂದ ನಾಗಗಳಿಗೆ ಒಡೆಯನಾಗುವನು.

೮೦. ಸತ್ಯವಾಕ್ಯದಿಂದ ದೇವತೆಗಳೊಡನೆ ಸ್ವರ್ಗಲೋಕದಲ್ಲಿ ವಿನೋದಪಡುವನು. ಅಹಿಂಸೆಯಿಂದ ಆರೋಗ್ಯವನ್ನೂ, ದಾನದಿಂದ ಕೀರ್ತಿಯನ್ನೂ ಪಡೆಯುವನು.

೮೧. ಮಾನವನು ಬ್ರಾಹ್ಮಣನ ಸೇವೆಯಿಂದ ರಾಜ್ಯ, ಉತ್ತಮವಾದ ದ್ವಿಜತ್ವಗಳನ್ನೂ, ದೇವರ ಸೇವೆಯಿಂದ ದಿವ್ಯ ರೂಪವನ್ನೂ ಹೊಂದುವನು.

೮೨. ಅನ್ನದಾನದಿಂದ ಸಕಲೇಷ್ಟಾರ್ಥಗಳ ಲಾಭದಿಂದ ತೃಪ್ತಿಯೂ, ದೀಪದಾನದಿಂದ ಒಳ್ಳೆಯ ಕಣ್ಣುಗಳೂ ಉಂಟಾಗುವುವು.

ತುಷ್ಟಿರ್ಭವೇತ್ಸರ್ವಕಾಲಂ ಪ್ರದಾನಾದ್ಗಂಧಮಾಲ್ಯಯೋಃ ।
ಲವಣಸ್ಯ ತು ದಾತಾರಸ್ತಿಲಾನಾಂ ಸರ್ಪಿಷಸ್ತಥಾ ।
ತೇಜಸ್ವಿನೋಽಪಿ ಜಾಯಂತೇ ಭೋಗಿನಶ್ಚಿರಜೀವಿನಃ ॥ ೮೩ ॥
ಸುಚಿತ್ರವಸ್ತ್ರಾಭರಣೋಪಧಾನಂ ।
ದದ್ಯಾನ್ನರೋ ಯಃ ಶಯನಂ ದ್ವಿಜಾಯ ।
ರೂಪಾನ್ವಿತಾಂ ಪಕ್ಷ್ಮವತೀಂ ಮನೋಜ್ಞಾಂ
ಭಾರ್ಯಾಮರಾಲೋಪಚಿತಾಂ ಲಭೇತ್ಸಃ ॥ ೮೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾತ್ರಾಪಾತ್ರವಿಚಾರವರ್ಣನಂ ನಾಮ
ಸಪ್ತೋತ್ತರದ್ವಿಶತತಮೋಽಧ್ಯಾಯಃ

---

೮೩. ಗಂಧ ಮಾಲ್ಯಗಳ ದಾನದಿಂದ ಯಾವಾಗಲೂ, ಸಂತೋಷವುಳ್ಳವರೂ, ಉಪ್ಪು, ಎಳ್ಳು, ತುಪ್ಪ ಇವುಗಳ ದಾನದಿಂದ ತೇಜಸ್ವಿಗಳೂ, ಸುಖಭೋಗವುಳ್ಳವರೂ, ಚಿರಂಜೀವಿಗಳೂ ಆಗುವರು.

೮೮. ನಾನಾಬಣ್ಣದ ವಸ್ತ್ರ, ಆಭರಣ, ತಲೆದಿಂಬು ಇವುಗಳುಳ್ಳ ಹಾಸಿಗೆಯನ್ನು ಬ್ರಾಹ್ಮಣನಿಗೆ ದಾನಮಾಡಿದವನು ಸೌಂದರ್ಯವುಳ್ಳವಳೂ, ಮನೋಹರಳೂ, ಸುಂದರವಾದ ರೆಪ್ಪೆಯುಳ್ಳವಳೂ ಆದ ಪತ್ನಿಯನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಾತ್ರಾಪಾತ್ರವಿಚಾರವರ್ಣನವೆಂಬ
ಇನ್ನೂರೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟೋತ್ತರದ್ವಿಶತತಮೋಽಧ್ಯಾಯಃ

ದಾನಪಾತ್ರಬ್ರಾಹ್ಮಣಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಇದಂ ದೇಯಮಿದಂ ದೇಯಮಿತಿ ಪ್ರೋಕ್ತಂ ತು ಯಚ್ಛ್ರುತೌ ।
ದಾನಾದಾನವಿಶೇಷಾಂಸ್ತು ಶ್ರೋತುಮಿಚ್ಛಾಮಿ ತತ್ತ್ವತಃ ॥ ೧ ॥
ಕಾನಿ ದಾನಾನಿ ಶಸ್ತಾನಿ ಕಸ್ಮೈ ದೇಯಾನಿ ಕಾನ್ಯಪಿ ।
ಕಾಲಂ ದೇಶಂ ಚ ಪಾತ್ರಂ ಚ ಸರ್ವಮಾಚಕ್ಷ್ವ ಮೇ ವಿಭೋ ॥ ೨ ॥

ಈಶ್ವರ ಉವಾಚ :—

ವೃಥಾ ಜನ್ಮಾನಿ ಚತ್ವಾರಿ ವೃಥಾ ದಾನಾನಿ ಷೋಡಶ ।
ಸುಜನ್ಮಾನಿ ಚ ಚತ್ವಾರಿ ಮಹಾದಾನಾನಿ ಷೋಡಶ ॥ ೩ ॥

ದೇವ್ಯುವಾಚ :—

ಏತದ್ವಿಸ್ತರತೋ ಬ್ರೂಹಿ ದೇವ ದೇವ ಜಗತ್ಪತೇ ॥ ೪ ॥

ಕನ್ನಡದ ಅನುವಾದ

ದಾನಪಾತ್ರಬ್ರಾಹ್ಮಣಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :—ಶ್ರುತಿಯು ಇದು ಕೊಡತಕ್ಕದು. ಎಂದು ಹೇಳಿರುವುದು. ನಾನು ದಾನಾದಾನ ವಿಶೇಷಗಳನ್ನು ಯಥಾರ್ಥವಾಗಿ ಕೇಳಲು ಬಯಸುವೆನು.

೨. ಯಾವಯಾವ ದಾನಗಳು ಉತ್ತಮವಾದುವು ? ಯಾರಿಗೆ ಅವು ಕೊಡ ತಕ್ಕವು ? ಕಾಲ, ದೇಶ, ಪಾತ್ರಗಳನ್ನೆಲ್ಲ ನನಗೆ ಹೇಳು.

೩. ಈಶ್ವರನು ಹೇಳುತ್ತಾನೆ :—ನಾಲ್ಕು ಜನ್ಮಗಳು ವ್ಯರ್ಥವಾದುವು. ಹದಿನಾರು ದಾನಗಳು ನಿಷ್ಫಲವಾದುವು. ನಾಲ್ಕು ಜನ್ಮಗಳು ಸಫಲವಾದುವು. ಹದಿನಾರು ಮಹಾದಾನಗಳು.

೪. ದೇವಿಯು ಹೇಳುತ್ತಾಳೆ :—ಜಗತ್ಪತಿಯೆ ! ಇದನ್ನು ನನಗೆ ವಿಸ್ತಾರವಾಗಿ ಹೇಳು.

ಈಶ್ವರ ಉವಾಚ :—
ವೃಥಾ ಜನ್ಮಾನಿ ಚತ್ವಾರಿ ಯಾನಿ ತಾನಿ ನಿಬೋಧ ಮೇ ।
ಕುಪುತ್ರಾಣಾಂ ವೃಥಾ ಜನ್ಮ ಯೇ ಚ ಧರ್ಮಬಹಿಷ್ಕೃತಾಃ ।
ಪ್ರವಾಸಂ ಯೇ ಚ ಗಚ್ಛಂತಿ ಪರದಾರರತಾಃ ಸದಾ ॥ ೫ ॥
ಪರಪಾಕಂ ಚ ಯೇಽಶ್ನಂತಿ ಪರದಾರರತಾಶ್ಚ ಯೇ ।
ಅಪ್ರತ್ಯಾಖ್ಯಂ ವೃಥಾ ದಾನಂ ಸದೋಷಂ ಚ ತಥಾ ಪ್ರಿಯೇ ॥ ೬ ॥
ಆರೂಢಪತಿತೇ ಚೈವ ಅನ್ಯಾಯೋಪಾರ್ಜಿತಂ ಧನಂ ।
ವೃಥಾ ಬ್ರಹ್ಮಹನೇ ದಾನಂ ಪತಿತೇ ತಸ್ಕರೇ ತಥಾ ॥ ೭ ॥
ಗುರೋಶ್ಚಾಪ್ರೀತಿಜನನೇ ಕೃತಘ್ನೇ ಗ್ರಾಮಯಾಜಕೇ ।
ಬ್ರಹ್ಮಬಂಧೌ ಚ ಯದ್ದತ್ತಂ ಯದ್ದತ್ತಂ ವೃಷಲೀಪತೌ ॥ ೮ ॥
ವೇದವಿಕ್ರಯಿಣೇ ಚೈವ ಯಸ್ಯ ಚೋಪಪತಿರ್ಗೃಹೇ ।
ಸ್ತ್ರೀನಿರ್ಜಿತೇ ಚ ಯದ್ದತ್ತಂ ವೃಥಾ ದಾನಾನಿ ಷೋಡಶ ॥ ೯ ॥
ಸುಜನ್ಮ ಚ ಸುಪುತ್ರಾಣಾಂ ಯೇ ಚ ಧರ್ಮೇ ರತಾ ನರಾಃ ।
ಪ್ರವಾಸಂ ನ ಚ ಗಚ್ಛಂತಿ ಪರದಾರಪರಾಂಙ್ಮುಖಾಃ ॥ ೧೦ ॥
ಗಾವಃ ಸುವರ್ಣಂ ರಜತಂ ರತ್ನಾನಿ ಚ ಸರಸ್ವತೀ ।
ತಿಲಾಃ ಕನ್ಯಾ ಗಜೋಽಶ್ವಶ್ಚ ಶಯ್ಯಾ ವಸ್ತ್ರಂ ತಥಾ ಮಹೀ ॥ ೧೧ ॥

೫–೬. ಈಶ್ವರನು ಹೇಳುತ್ತಾನೆ :—ನಿಷ್ಫಲವಾದ ನಾಲ್ಕು ಜನ್ಮಗಳನ್ನು ಕೇಳು. ಧರ್ಮಬಾಹ್ಯರಾದ ಕುಪುತ್ರರ ಜನ್ಮವೂ, ಪರರ ಪತ್ನಿಯರಲ್ಲಿ ಆಸಕ್ತರಾಗಿ ದೇಶಾಂತರಕ್ಕೆ ಹೋಗುವವರ ಜನ್ಮವೂ, ಪರಪಾಕವನ್ನು ತಿನ್ನುವವರ ಜನ್ಮವೂ, ಪರರ ಪತ್ನಿಯರಲ್ಲಿ ಅನುರಾಗವುಳ್ಳವರ ಜನ್ಮವೂ ನಿಷ್ಫಲವಾದವು. ನಿಷ್ಫಲವೂ, ದೋಷಸಹಿತವೂ ಆದ ದಾನವು ಹೇಳಲನರ್ಹವಾದುದು.

೭–೯. ಶ್ರೀಯಸ್ಸನ್ನುಹೊಂದಿ ಪತಿತನಾದವನಲ್ಲಿ ಅನ್ಯಾಯದಿಂದ ಸಂಪಾದಿಸಿದ ಹಣದ ದಾನ, ಬ್ರಹ್ಮಘ್ನನಾಗಿ ಪತಿತನಾದವನಲ್ಲಿ ಮಾಡಿದ ದಾನ, ಕಳ್ಳ, ಗುರುದ್ವೇಷಿ, ಕೃತಘ್ನ, ಗ್ರಾಮಯಾಜಕ, ಬ್ರಹ್ಮಬಂಧು, ವೃಷಲೀಪತಿ, ವೇದವಿಕ್ರಯಿ, ಉಪಪತಿ ಯುಳ್ಳ ಮನೆಯ ಯಜಮಾನ, ಸ್ತ್ರೀವಶನಾದವನು ಇವರಲ್ಲಿ ಮಾಡಿದ ದಾನಗಳು ನಿಷ್ಫಲವಾದ ಹದಿನಾರು ದಾನಗಳು.

೧೦. ಸುಪುತ್ರರು, ಧರ್ಮಾಸಕ್ತರೂ, ಪ್ರವಾಸಮಾಡದವರು, ಪರಪತ್ನೀ ಸಂಗವನ್ನು ತ್ಯಜಿಸಿದವರು ಇವರ ಜನ್ಮಗಳು ಸುಜನ್ಮಗಳು.

೧೧–೧೨. ಗೋವು, ಸುವರ್ಣ, ಬೆಳ್ಳಿ, ರತ್ನ, ಸರಸ್ವತೀ (ಪುಸ್ತಕ) ಎಳ್ಳು, ಕನ್ಯೆ, ಆನೆ, ಕುದುರೆ, ಹಾಸಿಗೆ, ವಸ್ತ್ರ, ಭೂಮಿ, ಧಾನ್ಯ, ಹಾಲು, ಕೊಡೆ,

ಧಾನ್ಯಂ ಪಯಶ್ಚ ಛತ್ರಂ ಚ ಗೃಹಂ ಚೋಪಸ್ಕರಾನ್ವಿತಂ ।
ಏತಾನ್ಯೇವ ಮಹಾದೇವಿ ಮಹಾದಾನಾನಿ ಷೋಡಶ ॥ ೧೨ ॥
ಗರ್ವಾನ್ವಿತಸ್ತು ಯೋ ದದ್ಯಾದ್ಭಯಾತ್ಕ್ರೋಧಾತ್ತಥೈವ ಚ ।
ಭುಂಕ್ತೇ ದಾನಫಲಂ ತದ್ಧಿ ಗರ್ಭಸ್ಥೋ ನಾತ್ರ ಸಂಶಯಃ ॥ ೧೩ ॥
ಬಾಲತ್ವೇಽಪಿ ಸೋಽಶ್ನಾತಿ ಯದ್ದತ್ತಂ ದಂಭಕಾರಣಾತ್ ।
ಮನ್ಯುನಾ ಮಂತುನಾ ಚೈವ ತಥೈವಾರ್ಥಸ್ಯ ಕಾರಣಾತ್ ॥ ೧೪ ॥
ದೇಶೇ ಕಾಲೇ ಚ ಪಾತ್ರೇ ಚ ಶುದ್ಧೇನ ಮನಸಾ ತಥಾ ।
ನ್ಯಾಯಾರ್ಜಿತಂ ಚ ಯೋ ದದ್ಯಾದ್ಯೌವನೇ ಸ ತದಶ್ನುತೇ ॥ ೧೫ ॥
ಅನ್ಯಾಯೇನಾರ್ಜಿತಂ ದ್ರವ್ಯಮಪಾತ್ರೇ ಪ್ರತಿಪಾದಿತಂ ।
ಕ್ಲಿಷ್ಟಂ ಚ ವಿಧಿಹೀನಂ ಚ ವೃದ್ಧಭಾವೇ ತದಶ್ನುತೇ ॥ ೧೬ ॥
ತಸ್ಮಾದ್ದೇಶೇ ಚ ಕಾಲೇ ಚ ಸುಪಾತ್ರೇ ವಿಧಿನಾ ನರಃ ।
ಶುಭಾರ್ಜಿತಂ ಪ್ರಯುಂಜೀತ ಶ್ರದ್ಧಯಾ ಶಾಠ್ಯವರ್ಜಿತಃ ॥ ೧೭ ॥

ಸಾಮಗ್ರಿಸಹಿತವಾದ ಮನೆ ಇವುಗಳ ದಾನಗಳು ಹದಿನಾರು ಮಹಾದಾನಗಳಾಗಿರುವುವು.

೧೩. ಮಾನವನು ಅಹಂಕಾರ, ಭಯ, ಕೋಪಗಳಿಂದ ಕೊಟ್ಟ ದಾನದ ಫಲವನ್ನು ಗರ್ಭದಲ್ಲಿರುವಾಗಲೆ ನಿಶ್ಚಯವಾಗಿಯೂ ಅನುಭವಿಸುವನು.

೧೪. ದಂಭ, ಕೋಪ, ಅಪರಾಧಗಳಿಂದಲೂ, ದ್ರವ್ಯವನ್ನು ಪಡೆಯಲಿಚ್ಛೆಯಿಂದಲೂ ಕೊಟ್ಟದಾನದ ಫಲವನ್ನು ಬಾಲ್ಯದಲ್ಲಿಯೇ ಅನುಭವಿಸುವನು.

೧೫. ಶುದ್ಧಮನಸ್ಸಿನಿಂದ ನ್ಯಾಯದಿಂದ ಗಳಿಸಿದ ದ್ರವ್ಯವನ್ನು ದೇಶ, ಕಾಲ, ಪಾತ್ರವನ್ನರಿತು ದಾನಮಾಡಿದರೆ ಅದರ ಫಲವನ್ನು ಯೌವನದಲ್ಲಿ ಅನುಭವಿಸುವನು.

೧೬. ಅನ್ಯಾಯದಿಂದ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಶಾಸ್ತ್ರವಿಧಿಯನ್ನು ಮೀರಿ ಅಪಾತ್ರನಲ್ಲಿ ದಾನಮಾಡಿದರೆ ಅದರ ಫಲವನ್ನು ಮುಪ್ಪಿನಲ್ಲಿ ಅನುಭವಿಸುವನು.

೧೭. ಆದುದರಿಂದ ಮನುಷ್ಯನು ಒಳ್ಳೆಯ ಮಾರ್ಗದಿಂದ ಸಂಪಾದಿಸಿದ ಹಣವನ್ನು ಶ್ರದ್ಧೆಯಿಂದಲೂ, ವಿಧಿಯಿಂದಲೂ ಶಾಠ್ಯವಿಲ್ಲದೆ ದೇಶ, ಕಾಲ, ಪಾತ್ರಗಳನ್ನರಿತು ದಾನಮಾಡಬೇಕು.

ಸ್ವಾಧ್ಯಾಯಾಢ್ಯಂ ಯೋಗವಂತಂ ಪ್ರಶಾಂತಂ
ಪುರಾಣಜ್ಞಂ ಪಾಪಭೀರುಂ ವದಾನ್ಯಂ ।
ಸ್ತ್ರೀಷು ಕ್ಷಾಂತಂ ಧಾರ್ಮಿಕಂ ಗೋಶರಣ್ಯಂ
ವ್ರತೈಃ ಕ್ಲಾಂತಂ ತಾದೃಶಂ ಪಾತ್ರಮಾಹುಃ ॥ ೧೮ ॥
ಸತ್ಯಂ ದಮಸ್ತಪಃ ಶೌಚಂ ಸಂತೋಷೋಽನೈಷ್ಯರ್ಮಾರ್ಜವಂ ।
ಜ್ಞಾನಂ ಶಮೋ ದಯಾ ದಾನಮೇತತ್ಪಾತ್ರಸ್ಯ ಲಕ್ಷಣಂ ॥ ೧೯ ॥
ಏವಂ ವಿಧೇ ತು ಯತ್ಪಾತ್ರೇ ಗಾಮೇಕಾಂ ತು ಪ್ರಯಚ್ಛತಿ ।
ಸಮಾನವತ್ಸಾಂ ಕಪಿಲಾಂ ಧೇನುಂ ಸರ್ವಗುಣಾನ್ವಿತಾಂ ॥ ೨೦ ॥
ರೌಪ್ಯಪಾದಾಂ ಸ್ವರ್ಣಶೃಂಗೀಂ ರುದ್ರಲೋಕೇ ಮಹೀಯತೇ ।
ಏಕಾಂ ಗಾಂ ದಶಗುರ್ದದ್ಯಾದ್ದೋಶತೀ ಚ ತಥಾ ದಶ ॥ ೨೧ ॥
ಶತಂ ಸಹಸ್ರಗುರ್ದದ್ಯಾತ್ಸರ್ವೇ ಸಮಫಲಾಃ ಸ್ಮೃತಾಃ ।
ಸುಶೀಲಾ ಸೋಮಸಂಪನ್ನಾ ತರುಣೀ ಚ ಪಯಸ್ವಿನೀ ॥
ಸವತ್ಸಾ ನ್ಯಾಯಲಬ್ಧಾ ಚ ಪ್ರದೇಯಾ ಬ್ರಾಹ್ಮಣಾಯ ಗೌಃ ॥ ೨೨ ॥

---

೧೮. ವೇದಾಧ್ಯಯನ ಸಂಪನ್ನನೂ, ಯೋಗಿಯೂ, ಶಾಂತನೂ, ಪುರಾಣಗಳನ್ನರಿತವನೂ, ಪಾಪದಿಂದ ಭಯಗೊಳ್ಳುವವನೂ, ದಾನಮಾಡುವವನೂ, ಸ್ತ್ರೀಯರಲ್ಲಿ ಕ್ಷಮೆಯುಳ್ಳವನೂ, ಧರ್ಮಿಷ್ಠನೂ, ಗೋರಕ್ಷಕನೂ, ವ್ರತಾನುಷ್ಠಾನ ಮಾಡುವವನೂ ಸತ್ಪಾತ್ರನೆನ್ನಿಸಿಕೊಳ್ಳುವನು.

೧೯. ಸತ್ಯ, ಇಂದ್ರಿಯನಿಗ್ರಹ, ತಪಸ್ಸು, ಶೌಚ, ಸಂತೋಷ, ಅಸೂಯೆಯಿಲ್ಲದಿರುವುದು, ಋಜುತ್ವ, ಪರಮಾತ್ಮಜ್ಞಾನ, ಶಾಂತಿ, ದಯೆ, ದಾನ ಇವುಗಳು ಸತ್ಪಾತ್ರನ ಲಕ್ಷಣಗಳು.

೨೦–೨೨. ಇಂತಹ ಪಾತ್ರನಲ್ಲಿ ಸರಿಯಾದ ಕರುವುಳ್ಳದ್ದೂ, ಕಪಿಲವರ್ಣವೂ, ಸಕಲ ಗುಣಗಳುಳ್ಳದ್ದೂ, ಬೆಳ್ಳಿಯಪಾದವುಳ್ಳದ್ದೂ, ಚಿನ್ನದಕೊಂಬುಳ್ಳದ್ದೂ ಆದ ಗೋವನ್ನು ದಾನಮಾಡುವವನು ರುದ್ರಲೋಕದಲ್ಲಿ ಪೂಜ್ಯನಾಗುವನು. ಹತ್ತು ಗೋವುಗಳಿರುವವನು ಒಂದು ಗೋವನ್ನೂ, ನೂರು ಗೋವುಗಳುಳ್ಳವನು ಹತ್ತು ಗೋವುಗಳನ್ನೂ, ಸಾವಿರ ಗೋವುಳ್ಳವನು ನೂರು ಹಸುಗಳನ್ನೂ ದಾನ ಮಾಡಬೇಕು. ಇವರೆಲ್ಲ ಸಮಾನ ಫಲವುಳ್ಳವರಾಗುವರು. ಒಳ್ಳೆಯ ಸ್ವಭಾವವುಳ್ಳದ್ದೂ ಬಾಯಿರುಚಿಯುಳ್ಳದ್ದೂ, ಯೌವನವುಳ್ಳದ್ದೂ, ಹಾಲನ್ನು ಕರೆಯುವುದೂ, ಕರುವುಳ್ಳದ್ದೂ, ನ್ಯಾಯದಿಂದ ಸಂಪಾದಿಸಿರುವುದೂ ಆದ ಗೋವನ್ನು ಬ್ರಾಹ್ಮಣನಿಗೆ ದಾನಮಾಡಬೇಕು.

ವಂಧ್ಯಾ ಸರೋಗಾ ಹೀನಾಂಗೀ ದುಷ್ಟಾ ವೃದ್ಧಾ ಮೃತಪ್ರಜಾ ।
ಅನ್ಯಾಯಲಬ್ಧಾ ದೂರಸ್ಥಾ ನೇದೃಶೀಂ ಗಾಂ ಪ್ರದಾಪಯೇತ್ ॥ ೨೩ ॥
ಯೋ ಹೀದೃಶೀಂ ಗಾಂ ದದಾತಿ ದೇವೋದ್ದೇಶೇನ ಮಾನವಃ ।
ಪ್ರತ್ಯುತಾಧೋಗತಿಂ ಯಾತಿ ಕ್ಲಿಶ್ಯತೇ ಚ ಮಹೇಶ್ವರಿ ॥ ೨೪ ॥
ರುಷ್ಟಾ ಕ್ಲಿಷ್ಟಾ ದುರ್ಬಲಾ ವ್ಯಾಧಿತಾ ಚ
ನ ದಾತವ್ಯಾ ಯಾ ಚ ಮೂಲ್ಯೈರದತ್ತೈಃ ।
ಕ್ಲೇಶೋ ವಿಪ್ರೇಭ್ಯೋ ಯಯಾ ಜಾಯತೇ ವೈ
ತಸ್ಯಾ ದಾತುಶ್ಚಾಫಲಾಃ ಸರ್ವಲೋಕಾಃ ॥ ೨೫ ॥
ಅತಿಥಯೇ ಪ್ರಶಾಂತಾಯ ಸೀದತೇ ಚಾಹಿತಾಗ್ನಯೇ ।
ಶ್ರೋತ್ರಿಯಾಯ ತಥೈಕಾಪಿ ದತ್ತಾ ಬಹುಗುಣಾ ಭವೇತ್ ॥ ೨೬ ॥
ಗಾಂ ವಿಕ್ರೀಣಾತಿ ಚೇದ್ದೇವಿ ಬ್ರಾಹ್ಮಣೋ ಜ್ಞಾನದುರ್ಬಲಃ ।
ನಾಸೌ ಪ್ರಶಸ್ಯತೇ ಪಾತ್ರಂ ಬ್ರಾಹ್ಮಣೋ ನೈವ ಸ ಸ್ಮೃತಃ ॥ ೨೭ ॥
ಬಹುಭ್ಯೋ ನ ಪ್ರದೇಯಾನಿ ಗೌರ್ಗೃಹಂ ಶಯನಂ ಸ್ತ್ರಿಯಃ ।
ವಿಭಕ್ತಾ ದಕ್ಷಿಣಾ ಹ್ಯೇಷಾ ದಾತಾರಂ ನೋಪತಿಷ್ಠತಿ ॥ ೨೮ ॥

---

೨೩. ಬಂಜೆಯೂ, ರೋಗವುಳ್ಳದ್ದೂ, ಅಂಗವಿಕಲವೂ, ಕೆಟ್ಟದ್ದೂ, ಮುದಿಯೂ, ಸಾಯುವ ಕರುವುಳ್ಳದ್ದೂ, ಅನ್ಯಾಯದಿಂದ ಪಡೆದುದೂ, ದೂರದಲ್ಲಿರುವುದೂ ಆದ ಗೋವನ್ನು ಕೊಡಬಾರದು.

೨೪. ಮಹೇಶ್ವರಿ! ದೇವೋದ್ದೇಶದಿಂದ ಇಂತಹ ಗೋವನ್ನು ದಾನಮಾಡುವವನು ಅಧೋಗತಿಯನ್ನು ಹೊಂದಿ ಕಷ್ಟಪಡುವನು.

೨೫. ಕೋಪಗೊಂಡಿರುವುದೂ, ಕಷ್ಟಪಡುತ್ತಿರುವುದೂ. ರೋಗದಿಂದ ಕೂಡಿರುವುದೂ, ಬೆಲೆಗೆ ತೆಗೆದುಕೊಳ್ಳದ ಹಸುವನ್ನು ಸಹ ದಾನಕೊಡಬಾರದು. ಇದರಿಂದ ದಾನ ತೆಗೆದುಕೊಂಡ ಬ್ರಾಹ್ಮಣರಿಗೆ ದುಃಖ ವುಂಟಾಗುವುದು. ದಾನ ಕೊಟ್ಟವನಿಗೂ ಸಹ ಫಲವು ತೊರಕುವುದಿಲ್ಲ.

೨೬. ಶಾಂತನೂ, ಕಷ್ಟಪಡುತ್ತಿರುವವನೂ, ಆಹಿತಾಗ್ನಿಯೂ, ಶ್ರೋತ್ರಿಯನೂ ಆದ ಅತಿಥಿಗೆ ಒಂದು ಹಸುವನ್ನು ದಾನಮಾಡಿದರೂ ಅದು ಬಹುವಾಗುವುದು.

೨೭. ಮೂಢಬ್ರಾಹ್ಮಣನು ತಾನು ದಾನತೆಗೆದುಕೊಂಡ ಗೋವನ್ನು ಮಾರಿದರೆ ಅವನು ಉತ್ತಮಪಾತ್ರನೂ, ಬ್ರಾಹ್ಮಣನೂ ಆಗುವುದಿಲ್ಲ.

೨೮. ಗೋವು, ಮನೆ. ಶಯನ, ಹೆಂಗಸು ಇವರನ್ನು ಅನೇಕರಿಗೆ ದಾನಮಾಡಕೂಡದು. ಆಗ ದಕ್ಷಿಣೆಯು ವಿಭಾಗಿಸಲ್ಪಟ್ಟು ಅದರ ಫಲವು ದಾನಮಾಡುವವನನ್ನು ಸೇರುವುದಿಲ್ಲ.

ಪ್ರಾಸಾದಾ ಯತ್ರ ಸೌವರ್ಣಾಃ ಶಯ್ಯಾ ರತ್ನೋಜ್ಜ್ವಲಾಸ್ತಥಾ ।
ವರಾಶ್ಚಾಪ್ಸರಸೋ ಯತ್ರ ತತ್ರ ಗಚ್ಛಂತಿ ಗೋಪ್ರದಾಃ ॥ ೨೯ ॥
ನಾಸ್ತಿ ಭೂಮಿಸಮಂ ದಾನಂ ನಾಸ್ತಿ ಗಂಗಾಸಮಾ ಸರಿತ್ ।
ನಾಸ್ತಿ ಸತ್ಯಾತ್ಪರೋ ಧರ್ಮೋ ನಾನ್ಯೋ ದೇವೋ ಮಹೇಶ್ವರಾತ್ ॥ ೩೦ ॥
ಉಚ್ಚೈಃ ಪಾಷಾಣಯುಕ್ತಾ ಚ ನ ಸಮಾ ನೈವ ಚೋಷರಾ ।
ನ ನದೀಕೂಲವಿಕಟಾ ಭೂಮಿರ್ದೇಯಾ ಕದಾಚನ ॥ ೩೧ ॥
ಷಷ್ಟಿವರ್ಷಸಹಸ್ರಾಣಿ ಸ್ವರ್ಗೇ ವಸತಿ ಭೂಮಿದಃ ।
ಆಚ್ಛೇತ್ತಾ ಚಾನುಮಂತಾ ಚ ತಾನ್ಯೇವ ನರಕಂ ವ್ರಜೇತ್ ॥ ೩೨ ॥
ಕುರುತೇ ಪುರುಷಃ ಪಾಪಂ ಯತ್ಕಿಂಚಿದ್ವೃತ್ತಿಕರ್ಶಿತಃ ।
ಅಪಿ ಗೋಚರ್ಮಮಾತ್ರೇಣ ಭೂಮಿದಾನೇನ ಶುದ್ಧ್ಯತಿ ॥ ೩೩ ॥
ಛತ್ರಂ ಶಯ್ಯಾಸನಂ ಶಂಖೋ ಗಜಾಶ್ವಾಶ್ಚಾಮರಾಃ ಸ್ತ್ರಿಯಃ ।
ಭೂಮಿಶ್ಚೈಷಾಂ ಪ್ರದಾನಸ್ಯ ಶಿವಲೋಕಃ ಫಲಂ ಸ್ಮೃತಂ ॥ ೩೪ ॥
ಆದಿತ್ಯೇಽಹನಿ ಸಂಕ್ರಾಂತೌ ಗ್ರಹಣೇ ಚಂದ್ರಸೂರ್ಯಯೋಃ ।
ಪಾರಣೈಶ್ಚೈವ ಗೋದಾನೇ ನೋಪೋಷ್ಯಃ ಪೌತ್ರವಾನ್ಗೃಹೀ ॥ ೩೫ ॥

---

೨೯. ಗೋದಾನಮಾಡಿದವರು ರತ್ನದಿಂದ ಮನೋಹರವಾದ ಹಾಸಿಗೆ, ಉತ್ತಮ ಅಪ್ಸರಸ್ತ್ರೀಯರು, ಸುವರ್ಣದ ಮಹಡಿಮನೆಗಳೂ ಉಳ್ಳ ದೇವಲೋಕವನ್ನು ಹೊಂದುವರು.

೩೦. ಭೂಮಿಗೆ ಸರಿಯಾದ ದಾನವೂ, ಗಂಗೆಗೆ ಸಮಾನವಾದ ನದಿಯೂ, ಸತ್ಯಕ್ಕಿಂತ ಹೆಚ್ಚಾದ ಧರ್ಮವೂ, ಮಹೇಶ್ವರನಿಗಿಂತ ಉತ್ತಮ ದೇವತೆಯೂ ಇಲ್ಲ.

೩೧. ಎತ್ತರವೂ, ಕಲ್ಲುಳ್ಳದೂ, ಸಮವೂ, ಊಷರವೂ, ನದೀದಡದಿಂದ ತೊಂದರೆಯುಳ್ಳದೂ ಆದ ಭೂಮಿಯನ್ನು ದಾನಮಾಡಬಾರದು.

೩೨. ಭೂಮಿಯನ್ನು ದಾನಮಾಡಿದವನು ಅರುವತ್ತು ಸಾವಿರ ವರ್ಷಕಾಲ ಸ್ವರ್ಗದಲ್ಲಿ ವಾಸಿಸುವನು. ಕೊಟ್ಟ ಭೂಮಿಯನ್ನು ಕಿತ್ತುಕೊಳ್ಳುವವನೂ, ಅದನ್ನು ಅನುಮೋದಿಸುವವನೂ ಅಷ್ಟೇ ವರ್ಷಕಾಲ ನರಕದಲ್ಲಿ ವಾಸಿಸುವನು.

೩೩. ಮನುಷ್ಯನು ಜೀವನದ ತೊಂದರೆಯಿಂದ ಮಾಡಿದ ಪಾಪವು ಗೋಚರ್ಮ ಪ್ರಮಾಣದ ಭೂಮಿಯನ್ನು ದಾನಮಾಡುವುದರಿಂದ ಪರಿಹಾರವಾಗುವುದು.

೩೪. ಕೊಡೆ, ಹಾಸಿಗೆ, ಆಸನ, ಶಂಖ, ಆನೆ, ಕುದುರೆ, ಚಾಮರ, ಹೆಂಗಸರು ಭೂಮಿ ಇವುಗಳನ್ನು ದಾನ ಮಾಡುವುದರಿಂದ ಶಿವಲೋಕವು ಲಭಿಸುವುದು.

೩೫. ಮೊಮ್ಮಗನಿರುವ ಗೃಹಸ್ಥನು ಭಾನುವಾರ, ಸಂಕ್ರಾಂತಿ, ಚಂದ್ರಸೂರ್ಯ ಗ್ರಹಣ ಇವುಗಳಲ್ಲಿ ಗೋದಾನ ಮಾಡಿ ಉಪವಾಸ ಮಾಡಬಾರದು. ಭೋಜನ ಮಾಡಬೇಕು.

ಇಂದುಕ್ಷಯೇ ತು ಸಂಕ್ರಾಂತ್ಯಾಮೇಕಾದಶ್ಯಾಂ ಶತೇ ಕೃತೇ ।
ಉಪವಾಸಂ ನ ಕುರ್ವೀತ ಯದೀಚ್ಛೇತ್ಸಂತತಿಂ ಧ್ರುವಮ್ ॥ ೩೬ ॥
ಯಥಾ ಶುಕ್ಲಾ ತಥಾ ಕೃಷ್ಣಾ ನ ವಿಶೇಷೋಽಸ್ತಿ ಕಶ್ಚನ ।
ತಥಾಪಿ ವರ್ಧತೇ ಧರ್ಮಃ ಶುಕ್ಲಾಯಾಮೇವ ಸರ್ವದಾ ॥ ೩೭ ॥
ದಶಮ್ಯೇಕಾದಶೀವಿದ್ಧಾ ದ್ವಾದಶೀ ಚ ಕ್ಷಯಂ ಗತಾ ।
ನಕ್ತಂ ತತ್ರ ಪ್ರಕುರ್ವೀತ ನೋಪವಾಸೋ ವಿಧೀಯತೇ ॥ ೩೮ ॥
ಉಪೋಷ್ಯೈಕಾದಶೀಂ ಯಸ್ತು ತ್ರಯೋದಶ್ಯಾಂ ತು ಪಾರಣಂ ।
ಕರೋತಿ ತಸ್ಯ ನಶ್ಯೇತ್ತು ದ್ವಾದಶ ದ್ವಾದಶೀಫಲಂ ॥ ೩೯ ॥
ಉಪವಾಸೇ ತಥಾ ಶ್ರಾದ್ಧೇ ನ ಖಾದೇದ್ದಂತಧಾವನಂ ।
ದಂತಾನಾಂ ಕಾಷ್ಠಸಂಗಾಚ್ಚ ಹಂತಿ ಸಪ್ತಕುಲಾನಿ ವೈ ॥ ೪೦ ॥
ದರ್ಶಂ ಚ ಪೌರ್ಣಮಾಸಂ ಚ ಪಿತುಃ ಸಾಂವತ್ಸರಂ ದಿನಂ ।
ಪೂರ್ವವಿದ್ಧಮಕುರ್ವಾಣೋ ನರಕಂ ಪ್ರತಿಪದ್ಯತೇ ॥ ೪೧ ॥
ಹಾನಿಶ್ಚ ಸಂತತೇಃ ಪ್ರೋಕ್ತಾ ದೌರ್ಭಾಗ್ಯಂ ಸಮವಾಪ್ನುಯಾತ್ ।
ದ್ರವ್ಯಾಭಾವೇಽಥ ಶ್ರಾದ್ಧಸ್ಯ ವಿಧಿಂ ವಕ್ಷ್ಯಾಮಿ ತತ್ತ್ವತಃ ॥ ೪೨ ॥

---

೩೬. ನೂರು ಅಮಾವಾಸ್ಯೆ, ಸಂಕ್ರಾಂತಿ, ಏಕಾದಶೀ ಈ ದಿನಗಳಲ್ಲಿ ಉಪವಾಸ ಬಳಿಕ ಮಾಡಿದ ಸ್ಥಿರಸಂತತಿಯನ್ನು ಬಯಸುವ ಮೊಮ್ಮಗನಿರುವ ಗೃಹಸ್ಥನು ಉಪವಾಸಮಾಡಕೂಡದು.

೩೭. ಶುಕ್ಲಕೃಷ್ಣಪಕ್ಷಗಳಿಗೆ ಭೇದವಿಲ್ಲ, ಆದರೂ ಯಾವಾಗಲೂ ಶುಕ್ಲ ಪಕ್ಷದಲ್ಲಿಯೇ ಧರ್ಮವು ವೃದ್ಧಿಯಾಗುವುದು.

೩೮. ಏಕಾದಶಿಯು ದಶಮಿಯಿಂದ ವಿದ್ಧವಾಗಿ ದ್ವಾದಶಿಯು ಕ್ಷಯತಿಥಿಯಾಗಿದ್ದರೆ ಆ ದಿನ ನಕ್ತವನ್ನು ಮಾಡಬೇಕು. ಉಪವಾಸಮಾಡಬಾರದು.

೩೯. ಏಕಾದಶಿಯದಿನ ಉಪವಾಸಗೈದು ತ್ರಯೋದಶೀದಿನ ಪಾರಣೆ ಮಾಡಿದರೆ ಹನ್ನೆರಡು ದ್ವಾದಶಿಗಳ ಫಲವು ಹಾಳಾಗುವುದು.

೪೦. ಉಪವಾಸ ಮತ್ತು ಶ್ರಾದ್ಧದಿನಗಳಲ್ಲಿ ದಂತಧಾವನಮಾಡಬಾರದು. ಆ ದಿನಗಳಲ್ಲಿ ದಂತಗಳಿಗೆ ಕಾಷ್ಠಸಂಬಂಧವಾದರೆ ಏಳು ಕುಲಗಳು ನಾಶವಾಗುವುವು.

೪೧. ಹಿಂದಿನ ತಿಥಿಯಿಂದ ವಿದ್ಧವಾದ ಅಮಾವಾಸ್ಯೆ, ಪೂರ್ಣಿಮಾ, ತಂದೆಯ ಸಾಂವತ್ಸರಿಕಶ್ರಾದ್ಧ ಇವುಗಳನ್ನಾಚರಿಸದವನು ನರಕವನ್ನು ಸೇರುವನು.

೪೨. ಅವನ ಸಂತತಿಯು ಹಾಳಾಗುವುದು. ದೌರ್ಭಾಗ್ಯವನ್ನು ಹೊಂದುವನು. ಬಳಿಕ ದ್ರವ್ಯವಿಲ್ಲದಿದ್ದಲ್ಲಿ ಶ್ರಾದ್ಧಮಾಡುವ ಕ್ರಮವನ್ನು ಹೇಳುವೆನು.

ಏಕೇನಾಪಿ ಹಿ ವಿಪ್ರೇಣ ಷಟ್ಪಿಂಡಂ ಶ್ರಾದ್ಧಮಾಚರೇತ್ ।
ಷಡರ್ಘ್ಯಾನ್ಪ್ರದಾಪಯೇತ್ತತ್ರ ತೇಭ್ಯೋ ದದ್ಯಾದ್ಯಥಾವಿಧಿ ॥ ೪೩ ॥
ಪಿತಾ ಭುಂಕ್ತೇ ದ್ವಿಜಕರೇ ಮುಖೇ ಭುಂಕ್ತೇ ಪಿತಾಮಹಃ ।
ಪ್ರಪಿತಾಮಹಸ್ತಾಲುಸ್ಥಃ ಕಂಠೇ ಮಾತಾಮಹಃ ಸ್ಮೃತಃ ॥ ೪೪ ॥
ಪ್ರಮಾತಾಮಹಸ್ತು ಹೃದಯೇ ವೃದ್ಧೋ ನಾಭೌ ತು ಸಂಸ್ಥಿತಃ ।
ಅಲಾಭೇ ಬ್ರಾಹ್ಮಣಸ್ಯೈವ ಕುಶಃ ಕಾರ್ಯೋ ದ್ವಿಜಃ ಪ್ರಿಯೇ ॥
ಇದಂ ಸರ್ವಪುರಾಣೇಭ್ಯಃ ಸಾರಮುದ್ಧೃತ್ಯ ಚೋಚ್ಯತೇ ॥ ೪೫ ॥
ನ ಚೈತನ್ನಾಸ್ತಿಕೇ ದೇಯಂ ಪಿಶುನೇ ವೇದನಿಂದಕೇ ।
ಪ್ರಾತಃಪ್ರಾತರಿದಂ ಶ್ರಾವ್ಯಂ ಪೂಜಯಿತ್ವಾ ಮಹೇಶ್ವರಂ ॥ ೪೬ ॥
ಕುಲೀನಂ ಸರ್ವಶಾಸ್ತ್ರಜ್ಞಂ ಯಥಾ ದೇವಂ ಮಹೇಶ್ವರಂ ।
ಅಸ್ಯ ಧರ್ಮಸ್ಯ ವಕ್ತಾರಂ ಛತ್ರಂ ದದ್ಯಾತ್ಪ್ರಪೂಜಯೇತ್ ॥ ೪೭ ॥
ಅಪೂಜ್ಯಾದ್ವಾಚಕಾದ್ಯಸ್ತು ಶ್ಲೋಕಮೇಕಂ ಶೃಣೋತಿ ಚ ।
ನಾಸೌ ಪುಣ್ಯಮವಾಪ್ನೋತಿ ಶಾಸ್ತ್ರಚೌರಃ ಸ್ಮೃತೋ ಹಿ ಸಃ ॥ ೪೮ ॥

---

೪೩. ಒಬ್ಬ ಬ್ರಾಹ್ಮಣನಿಂದಲೆ ಷಟ್ಪಿಂಡಶ್ರಾದ್ಧವನ್ನು ಮಾಡಿ ಪಿತೃಗಳಿಗೆ ವಿಧಿಯಂತೆ ಆರು ಅರ್ಘ್ಯಗಳನ್ನೀಯಬೇಕು.

೪೪–೪೫. ಬ್ರಾಹ್ಮಣನ ಕೈಯಲ್ಲಿ ತಂದೆಯೂ, ಮುಖದಲ್ಲಿ ಪಿತಾಮಹನೂ, ದವಡೆಯಲ್ಲಿ ಪ್ರಪಿತಾಮಹನೂ, ಕುತ್ತಿಗೆಯಲ್ಲಿ ಮಾತಾಮಹನೂ, ಎದೆಯಲ್ಲಿ ಪ್ರಮಾತಾಮಹನೂ, ನಾಭಿಯಲ್ಲಿ ವೃದ್ಧಪ್ರಮಾತಾಮಹನೂ ನೆಲೆಸಿ ಭೋಜನ ಮಾಡುತ್ತಾರೆ. ಬ್ರಾಹ್ಮಣನು ದೊರೆಯದಿದ್ದಲ್ಲಿ ದರ್ಭೆಯಿಂದ ಬ್ರಾಹ್ಮಣನನ್ನು ಮಾಡಬೇಕು. ನಾನು ಸಕಲ ಪುರಾಣಗಳ ಸಾರವನ್ನು ಉದ್ಧರಿಸಿ ಹೇಳಿರುತ್ತೇನೆ.

೪೬. ಇದನ್ನು ನಾಸ್ತಿಕನಿಗೂ, ಚಾಡಿಹೇಳುವವನಿಗೂ, ವೇದವನ್ನು ನಿಂದಿಸುವವನಿಗೂ ಹೇಳಕೂಡದು.

೪೭. ಸತ್ಕುಲಪ್ರಸೂತನೂ, ಮಹೇಶ್ವರನಂತೆ ಸಮಸ್ತ ಶಾಸ್ತ್ರಗಳನ್ನರಿವನೂ, ಆಗಿ ಈ ಧರ್ಮವನ್ನು ಹೇಳುವವನನ್ನು ಪೂಜಿಸಿ ಕೊಡೆಯನ್ನು ದಾನಮಾಡಬೇಕು.

೪೮. ಈ ಧರ್ಮವನ್ನು ಹೇಳುವವನನ್ನು ಪೂಜಿಸದೆ ಅವನಿಂದ ಒಂದು ಶ್ಲೋಕವನ್ನು ಶ್ರವಣಮಾಡುವವನೂ ಆ ಶ್ರವಣದಿಂದ ಪುಣ್ಯವನ್ನು ಹೊಂದದೆ ಶಾಸ್ತ್ರಚೋರನೆಂದು ಹೇಳಿಸಿಕೊಳ್ಳುವನು.

ತಸ್ಮಾತ್ಸರ್ವಪ್ರಯತ್ನೇನ ಪೂಜಯೇದ್ವಾಚಕಂ ಬುಧಃ ।
ಅನ್ಯಥಾ ನಿಷ್ಫಲಂ ತಸ್ಯ ಪುಸ್ತಕಶ್ರವಣಂ ಭವೇತ್ ॥ ೪೯ ॥
ಯಸ್ಯೈವ ತಿಷ್ಠತೇ ಗೇಹೇ ಶಾಸ್ತ್ರಮೇತತ್ಸುದುರ್ಲಭಂ ।
ತಸ್ಯ ದೇವಿ ಗೃಹೇ ತೀರ್ಥೈಃ ಸಹ ತಿಷ್ಠೇಚ್ಛಿವಃ ಸ್ವಯಂ ॥ ೫೦ ॥
ಬಹುನಾತ್ರ ಕಿಮುಕ್ತೇನ ಭವೇನ್ಮೋಕ್ಷಸ್ಯ ಭಾಜನಂ ।
ನ ಚೈತಚ್ಛಿಶುನೇ ದೇಯಂ ನಾಸ್ತಿಕೇ ದಂಭಸಂಯುತೇ ॥ ೫೧ ॥
ಇದಂ ಶಾಂತಾಯ ದಾಂತಾಯ ದೇಯಂ ಶೈವದ್ವಿಜನ್ಮನೇ ॥ ೫೨ ॥

ಇತಿ ಶ್ರೀ ಸ್ಕಾಂದೇಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಾನಪಾತ್ರಬ್ರಾಹ್ಮಣಮಾಹಾತ್ಮ್ಯವರ್ಣನಂ ನಾಮ
ಅಷ್ಟೋತ್ತರದ್ವಿಶತತಮೋಽಧ್ಯಾಯಃ

---

೪೯. ಆದುದರಿಂದ ಪಂಡಿತನು ಧರ್ಮವನ್ನು ಹೇಳುವವನನ್ನು ಪೂಜಿಸಬೇಕು. ಹಾಗೆ ಪೂಜಿಸದಿದ್ದರೆ ಅವನು ಧರ್ಮಶ್ರವಣಮಾಡಿದುದು ನಿಷ್ಫಲವಾಗುವುದು.

೫೦. ದೇವಿ! ದುರ್ಲಭವಾದ ಈ ಶಾಸ್ತ್ರ ಪುಸ್ತಕವು ಯಾವನ ಮನೆಯಲ್ಲಿರುವುದೊ; ಅವನ ಮನೆಯಲ್ಲಿ ಶಿವನು ತಾನೇ ತೀರ್ಥಗಳೊಡನೆ ನೆಲಸಿರುವನು.

೫೧. ಹೆಚ್ಚಿಂದೇನು. ಈ ಧರ್ಮವನ್ನು ಶ್ರವಣಮಾಡಿದವನು ಮೋಕ್ಷಕ್ಕೆ ಯೋಗ್ಯನಾಗುವನು. ಇದನ್ನು ಚಾಡಿ ಹೇಳುವವನಿಗೂ, ನಾಸ್ತಿಕನಿಗೂ, ದಾಂಭಿಕಗೂ, ಹೇಳಕೂಡದು.

೫೨. ಇದನ್ನು ಶಾಂತನೂ, ಇಂದ್ರಿಯನಿಗ್ರಹವುಳ್ಳವನೂ ಶಿವಭಕ್ತನೂವ ಆದ ಬ್ರಾಹ್ಮಣನಿಗೆ ಹೇಳಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದಾನಪಾತ್ರಬ್ರಾಹ್ಮಣಮಾಹಾತ್ಮ್ಯವರ್ಣನವೆಂಬ
ಇನ್ನೂರೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವೋತ್ತರದ್ವಿಶತತಮೋಽಧ್ಯಾಯಃ

ಮಾರ್ಕಂಡೇಯೇಶ ರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಾರ್ಕಂಡೇಯೇಶಮುತ್ತಮಂ ।
ತಸ್ಮಾದುತ್ತರದಿಗ್ಭಾಗೇ ಮಾರ್ಕಂಡೇನ ಪ್ರತಿಷ್ಠಿತಂ ॥ ೧ ॥
ಸಾವಿತ್ರ್ಯಾಃ ಪೂರ್ವಭಾಗೇ ತು ನಾತಿದೂರೇ ವ್ಯವಸ್ಥಿತಂ ।
ಮಹರ್ಷಿರಭವತ್ಪೂರ್ವಂ ಮಾರ್ಕಂಡೇಯ ಇತಿ ಶ್ರುತಃ ॥ ೨ ॥
ಅಜರಶ್ಚಾಮರಶ್ಚೈವ ಪ್ರಸಾದಾತ್ಪದ್ಮಯೋನಿನಃ ।
ಸ ಗತ್ವಾ ತತ್ರ ವಿಪ್ರೇಂದ್ರೋ ದೇವದೇವಸ್ಯ ಶೂಲಿನಃ ।
ಲಿಂಗಂ ತು ಸ್ಥಾಪಯಾಮಾಸ ಜ್ಞಾತ್ವಾ ತತ್ಕ್ಷೇತ್ರಮುತ್ತಮಂ ॥ ೩ ॥
ಸ ತಂ ಪೂಜ್ಯ ವಿಧಾನೇನ ಸ್ಥಿತ್ವಾ ದಕ್ಷಿಣತೋ ಮುನಿಃ ।
ಪದ್ಮಾಸನಧರೋ ಭೂತ್ವಾ ಧ್ಯಾನಾವಸ್ಥಸ್ತದಾಽಭವತ್ ॥ ೪ ॥
ತಸ್ಯ ಧ್ಯಾನರತಸ್ಯೈವ ಪ್ರಯುತಾನ್ಯರ್ಬುದಾನಿ ಚ ।
ಯುಗಾನಾಂ ಸಮತೀತಾನಿ ನ ಜಾನಾತಿ ಮುನೀಶ್ವರಃ ॥ ೫ ॥

ಕನ್ನಡದ ಅನುವಾದ

ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನ

೧-೩. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಸರಸ್ವತೀ ಸಂಗಮದ ಉತ್ತರದಿಕ್ಕಿನಲ್ಲಿ ಸಾವಿತ್ರಿಯ ಪೂರ್ವಭಾಗದಲ್ಲಿ ಸಮೀಪದಲ್ಲಿಯೇ ಮಾರ್ಕಂಡೇಯನು ಪ್ರತಿಷ್ಠೆ ಮಾಡಿರುವ ಮಾರ್ಕಂಡೇಶನನ್ನು ಹೊಂದಬೇಕು. ಹಿಂದೆ ಬ್ರಹ್ಮನ ಅನುಗ್ರಹದಿಂದ ಜರಾಮರಣಗಳಿಲ್ಲದ ಮಾರ್ಕಂಡೇಯನೆಂಬ ಮುನಿಯಿದ್ದನು. ಅವನು ಅದು ಉತ್ತಮಕ್ಷೇತ್ರವೆಂದರಿತು ಅಲ್ಲಿ ಮಹೇಶ್ವರನ ಲಿಂಗವನ್ನು ಪ್ರತಿಷ್ಠೆ ಮಾಡಿದನು.

೪. ಆ ಮುನಿಯು ಆ ಮಹೇಶ್ವರನನ್ನು ವಿಧಿಯಿಂದ ಪೂಜಿಸಿ ಅವನ ದಕ್ಷಿಣ ಭಾಗದಲ್ಲಿ ಪದ್ಮಾಸನನಾಗಿ ಧ್ಯಾನನಿರತನಾದನು.

೫. ಅವನು ಹಾಗೆ ಧ್ಯಾನಾಸಕ್ತನಾಗಿರಲು ಪ್ರಯುತಾರ್ಬುದಯುಗಗಳು ಕಳೆದು ಹೋದವು. ಆದರೆ ಆ ಮುನಿಯು ಅದನ್ನರಿಯಲಿಲ್ಲ.

ಅಥ ಲೋಪಂ ಸಮಾಪನ್ನಃ ಪ್ರಾಸಾದಃ ಶಾಂಕರಃ ಸ್ಥಿತಃ ।
ಕಾಲೇನ ಮಹತಾ ದೇವಿ ಪಾಂಸುಭಿರ್ಮಾರುತೋದ್ಭವೈಃ ॥ ೬ ॥
ಕಸ್ಯಚಿತ್ತ್ವಥ ಕಾಲಸ್ಯ ಪ್ರಬುದ್ಧೋ ಮುನಿಸತ್ತಮಃ ।
ಅಪಶ್ಯತ್ಪಾಂಸುಭಿರ್ವ್ಯಾಪ್ತಂ ತತ್ಸರ್ವಂ ಶಿವಮಂದಿರಂ ॥ ೭ ॥
ತತಃ ಕೃಚ್ಛ್ರಾತ್ಸ ನಿಷ್ಕ್ರಾಂತಃ ಖನಿತ್ವಾ ಮುನಿಪುಂಗವಃ ।
ಅಕರೋತ್ಸುಮಹಾದ್ವಾರಂ ಪೂಜಾರ್ಥಂ ತಸ್ಯ ಭಾಮಿನಿ ॥ ೮ ॥
ಪ್ರವಿಶ್ಯ ತತ್ರ ಯೋ ಭಕ್ತ್ಯಾ ಪೂಜಯೇದ್ವೃಷಭಧ್ವಜಂ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೯ ॥

ದೇವ್ಯುವಾಚ :—

ಅಮರತ್ವಂ ಕಥಂ ಪ್ರಾಪ್ತೋ ಮಾರ್ಕಂಡೋ ಮುನಿಸತ್ತಮಃ ।
ಅಭವತ್ಕೌತುಕಂ ಹ್ಯೇತತ್ತಸ್ಮಾತ್ತ್ವಂ ವಕ್ತುಮರ್ಹಸಿ ॥ ೧೦ ॥
ಅಮರತ್ವಂ ಯತೋ ನಾಸ್ತಿ ಪ್ರಾಣಿನಾಂ ಭುವಿ ಶಂಕರ ।

ಈಶ್ವರ ಉವಾಚ :—

ಅಥಾತಸ್ತ್ವಾಂ ಪ್ರವಕ್ಷ್ಯಾಮಿ ಯಥಾಸಾವಮರೋಽಭವತ್ ।
ಆಸೀನ್ಮುನಿಃ ಪುರಾ ಕಲ್ಪೇ ಮೃಕಂಡ ಇತಿ ವಿಶ್ರುತಃ ॥ ೧೨ ॥

---

೬. ಹೀಗೆ ಅನೇಕ ವರ್ಷಗಳು ಕಳೆಯಲು ಆ ಮಹೇಶ್ವರನ ದೇವಾಲಯವು ಗಾಳಿಯಿಂದುಂಟಾದ ಧೂಳಿನಿಂದ ಮುಚ್ಚಿಹೋಯಿತು.

೭. ಕೆಲವು ಕಾಲದ ಮೇಲೆ ಎಚ್ಚರಗೊಂಡ ಆ ಮುನಿವರ್ಯನು ಆ ಶಿವ ದೇವಾಲಯವು ಧೂಳಿನಿಂದ ಮುಚ್ಚಿರುವುದನ್ನು ಕಂಡನು.

೮. ಬಳಿಕ ಅತಿಕಷ್ಟದಿಂದ ಆ ಮುನಿವರ್ಯನು ಹೊರಗೆ ಬಂದು ಅಗೆದು ಆ ಶಿವನ ಪೂಜೆಗಾಗಿ ಮಹಾದ್ವಾರವನ್ನು ರಚಿಸಿದನು.

೯. ಆ ದ್ವಾರದಿಂದ ಒಳಹೊಕ್ಕು ಶಿವನನ್ನು ಭಕ್ತಿಯಿಂದ ಪೂಜಿಸಿದವನು ಮಹೇಶ್ವರನ ಸ್ಥಾನವನ್ನು ಪಡೆಯುವನು.

೧೦. ದೇವಿಯು ಹೇಳುತ್ತಾಳೆ :—ಆ ಮಾರ್ಕಂಡಮುನಿವರ್ಯನು ಹೇಗೆ ಅಮರನಾದನು ? ಈ ವಿಷಯದಲ್ಲಿ ನನಗೆ ಬಹಳ ಕುತೂಹಲವುಂಟಾಗಿದೆ. ಅದನ್ನು ನೀನು ನನಗೆ ಹೇಳಬೇಕು.

೧೧. ಭೂಮಿಯಲ್ಲಿ ಪ್ರಾಣಿಗಳು ಮಡಿಯದಿರುವುದಿಲ್ಲ. ಕಲ್ಪಾಂತ್ಯದಲ್ಲಿ ದೇವತೆಗಳಿಗೂ ಅಳಿವುಂಟು. ಆ ಮುನಿಯು ಹೇಗೆ ಮೃತನಾಗಲಿಲ್ಲ ?

೧೨–೧೩. ಈಶ್ವರನು ಹೇಳುತ್ತಾನೆ :—ಈಗ ನಿನಗೆ ಆ ಮುನಿಯು ಮರಣ ವಿಲ್ಲದವನಾಗಲು ಕಾರಣವನ್ನು ಹೇಳುವೆನು. ಹಿಂದಿನ ಕಲ್ಪದಲ್ಲಿ ಭೃಗುವಿನ ಮಗ

ಭೃಗೋಃ ಪುತ್ರೋ ಮಹಾಭಾಗಃ ಸಭಾರ್ಯಸ್ತಪಸಿ ಸ್ಥಿತಃ ।
ತಸ್ಯ ಪುತ್ರಸ್ತದಾ ಜಾತೋ ವಸತಸ್ತು ವನಾಂತರೇ || ೧೩ ||
ಸ ಪಂಚವಾರ್ಷಿಕೋ ಭೂತ್ವಾ ಬಾಲ ಏವ ಗುಣಾನ್ವಿತಃ ।
ಕಸ್ಯಚಿತ್ತ್ವಥಕಾಲಸ್ಯ ಜ್ಞಾನೀ ತತ್ರ ಸಮಾಗತಃ || ೧೪ ||
ತೇನ ದೃಷ್ಟಸ್ತದಾ ಬಾಲಃ ಪ್ರಾಂಗಣೇ ವಿಚರನ್ಪ್ರಿಯೇ ।
ಸ್ಮೃತ್ವಾಽಹಸಚ್ಚಿರಂ ಕಾಲಂ ಭಾವ್ಯರ್ಥಂ ಪ್ರತಿ ನೋದಿತಃ || ೧೫ ||
ತಸ್ಯ ಪಿತ್ರಾ ಸ ದೃಷ್ಟಸ್ತು ಸಾಮುದ್ರಜ್ಞೋ ವಿದುತ್ತಮಃ ।
ಹಾಸ್ಯಸ್ಯ ಕಾರಣಂ ಪೃಷ್ಟೋ ವಿಸ್ಮಯಾನ್ವಿತಚೇತಸಾ । || ೧೬ ||
ಕಸ್ಮಾನ್ಮೇ ಸುತಮಾಲೋಕ್ಯ ಸ್ಮಿತಂ ವಿಪ್ರ ಕೃತಂ ತ್ವಯಾ ।
ತತ್ರ ಮೇ ಕಾರಣಂ ಬ್ರಹ್ಮನ್ಯಥಾವದ್ವಕ್ತುಮರ್ಹಸಿ || ೧೭ ||
ಇತಿ ತಸ್ಯ ವಚಃ ಶ್ರುತ್ವಾ ಜ್ಞಾನೀ ವಿಪ್ರೋ ವಚೋಽಬ್ರವೀತ್ || ೧೮ ||
ಅಯಂ ಪುತ್ರಸ್ತವ ಮುನೇ ಸರ್ವಲಕ್ಷಣಸಂಯುತಃ ।
ಅದ್ಯಪ್ರಭೃತಿ ಷಣ್ಮಾಸಮಧ್ಯೇ ಮೃತ್ಯುಮವಾಪ್ಸ್ಯತಿ || ೧೯ ||

ನಾದ ಮೃಕಂಡನೆಂಬ ಮುನಿಯಿದ್ದನು. ಅತಿಶಯಭಾಗ್ಯವುಳ್ಳ ಅವನು ಪತ್ನಿಯೊಡನೆ ಕಾಡಿನಲ್ಲಿ ತಪಸ್ಸನ್ನಾಚರಿಸುತ್ತಿರಲು ಅವನಿಗೆ ಪುತ್ರನೊಬ್ಬನು ಜನಿಸಿದನು.

೧೪. ಐದು ವರ್ಷವಯಸ್ಸಿನ ಬಾಲಕನಾದ ಅವನು ಗುಣಶಾಲಿಯಾಗಿದ್ದನು. ಕೆಲವು ಕಾಲದ ಮೇಲೆ ಅಲ್ಲಿಗೊಬ್ಬ ಜ್ಞಾನಿಯು ಬಂದನು.

೧೫. ಅವನು ಅಂಗಣದಲ್ಲಿ ಸಂಚರಿಸುತ್ತಿರುವ ಆ ಬಾಲಕನನ್ನು ಕಂಡು ಅವನ ಭವಿಷ್ಯವನ್ನು ಸ್ಮರಿಸಿ ಬಹಳ ಹೊತ್ತು ನಕ್ಕನು.

೧೬. ಆಗ ಅವನ ತಂದೆಯಾದ ಮೃಕಂಡನು ಸಾಮುದ್ರಿಕಶಾಸ್ತ್ರವನ್ನರಿತ ಆ ಜ್ಞಾನಿಯನ್ನು ಕಂಡು, "ಆಶ್ಚರ್ಯದಿಂದ ಹೀಗೆ ನಗಲು ಕಾರಣವೇನು?" ಎಂದು ಕೇಳಿದನು.

೧೭. "ಬ್ರಾಹ್ಮಣ! ನೀನು ನನ್ನ ಸುತನನ್ನೀಕ್ಷಿಸಿ ಏತಕ್ಕೆ ನಕ್ಕಿರುವೆ? ಅದಕ್ಕೆ ನಿಜವಾದ ಕಾರಣವೇನೆಂಬುದನ್ನು ನನಗೆ ಹೇಳು".

೧೮. ಜ್ಞಾನಿಯಾದ ಆ ಬ್ರಾಹ್ಮಣನು ಅವನ ಮಾತನ್ನು ಕೇಳಿ ಇಂತೆಂದನು.

೧೯. "ಮುನಿಯೆ! ಸಮಸ್ತಲಕ್ಷಣಗಳುಳ್ಳ ನಿನ್ನ ಈ ಮಗನು ಇಂದಿನಿಂದ ಆರುತಿಂಗಳೊಳಗೆ ಮಡಿಯುವನು".

ಯದಿ ಜೀವೇತ್ಪುನರಯಂ ಚಿರಾಯುರ್ವೈ ಭವಿಷ್ಯತಿ ।
ಅತೋ ಮಯಾ ಕೃತಂ ಹಾಸ್ಯಂ ವಿಚಿತ್ರಾ ಕರ್ಮಣೋ ಗತಿಃ ॥ ೨೦ ॥
ಏತಚ್ಛ್ರುತ್ವಾ ವಚೋ ರೌದ್ರಂ ಜ್ಞಾನಿನಾ ಸಮುದಾಹೃತಂ ।
ವ್ರತೋಪನಯನಂ ಚಕ್ರೇ ಬಾಲಕಸ್ಯ ಪಿತಾ ತದಾ ॥ ೨೧ ॥
ಆಹ ಚೈನಮ್ಮೃಷಿಃ ಪುತ್ರಂ ದೃಷ್ಟ್ವಾ ಬ್ರಾಹ್ಮಣಮಾಗತಂ ।
ಅಭಿವಾದ್ಯಾಸ್ತ್ರಯೋ ವರ್ಣಾಸ್ತತಃ ಶ್ರೇಯೋ ಹ್ಯವಾಪ್ಸ್ಯಸಿ ॥ ೨೨ ॥
ಏವಮುಕ್ತಃ ಸ ವೈ ವಿಪ್ರಃ ಕರೋತ್ಯೇವಾಭಿವಾದನಂ ।
ನ ವರ್ಣಾವರಜಂ ವೇತ್ತಿ ಬಾಲಭಾವಾದ್ವರಾನನೇ ॥ ೨೩ ॥
ಪಂಚಮಾಸಾ ಹ್ಯತಿಕ್ರಾಂತಾ ದಿವಸಾಃ ಪಂಚವಿಂಶತಿಃ ।
ಏತಸ್ಮಿನ್ನೇವ ಕಾಲೇ ತು ಪ್ರಾಪ್ತಾಃ ಸಪ್ತರ್ಷಯೋಽಮಲಾಃ ॥ ೨೪ ॥
ತೀರ್ಥಯಾತ್ರಾಪ್ರಸಂಗೇನ ತೇನ ಮಾರ್ಗೇಣ ಭಾಮಿನಿ ।
ಕಾಲೇನ ತೇನ ಸರ್ವೇಽಥ ಯಥಾವದಭಿವಾದನೈಃ ॥
ಆಯುಷ್ಮಾನ್ಭವ ತೈರುಕ್ತಃ ಸ ಬಾಲೋ ದಂಡವಲ್ಕಲೀ ॥ ೨೫ ॥

---

೨೦. ಇವನು ಮರಳಿ ಬದುಕಿದರೆ ದೀರ್ಘಾಯುಷ್ಮಂತನಾಗುವನು. ಆದ್ದರಿಂದ ನಾನು ನಕ್ಕೆನು. ಪೂರ್ವಾರ್ಜಿತ ಕರ್ಮದ ಕಾರ್ಯವು ಆಶ್ಚರ್ಯಕರವಾದುದು".

೨೧. ಮೃಕಂಡನು ಜ್ಞಾನಿಯು ಹೇಳಿದ ಭಯಂಕರ ಈ ನುಡಿಯನ್ನು ಕೇಳಿ ಬಾಲಕನಿಗೆ ಕೂಡಲೆ ಉಪನಯನಮಾಡಿದನು.

೨೨. ಮೃಕಂಡಮುನಿಯು ಬ್ರಾಹ್ಮಣನಾದ ಪುತ್ರನನ್ನು ಕಂಡು " ನೀನು ಮೂರುವರ್ಣದವರನ್ನೂ ವಂದಿಸಬೇಕು. ಆದರಿಂದ ಶ್ರೇಯಸ್ಸನ್ನು ಹೊಂದುವೆ " ಎಂದನು.

೨೩. ತಂದೆಯು ಬ್ರಾಹ್ಮಣನಾದ ಆ ಕುಮಾರನಿಗೆ ಹೀಗೆನ್ನಲು ಅವನು ಬಾಲ್ಯದಿಂದ ಯಾವಜಾತಿಯವನನ್ನೂ ಬಿಡುತ್ತಿರಲಿಲ್ಲ. ತಂದೆಯ ಮಾತಿನಿಂದ ಎಲ್ಲರಿಗೂ ನಮಸ್ಕಾರಮಾಡುತ್ತಿದ್ದನು.

೨೪. ಇದರಂತೆಯೇ ಐದುತಿಂಗಳು ಇಪ್ಪತ್ತೈದು ದಿವಸಗಳು ಕಳೆಯಲು ಪರಿಶುದ್ಧರಾದ ಸಪ್ತರ್ಷಿಗಳು ಅಲ್ಲಿಗೆ ಬಂದರು.

೨೫. ಆಗ ಆ ಬಾಲಕನು ತೀರ್ಥಯಾತ್ರೆಯ ಕ್ರಮದಿಂದ ಆ ಮಾರ್ಗದಿಂದ ಬಂದ ಅವರಿಗೆಲ್ಲ ವಿಧಿಯಂತೆ ನಮಸ್ಕಾರಮಾಡಲು ಅವರು ದಂಡವನ್ನು ಧರಿಸಿ ನಾರುಬಟ್ಟೆಯನ್ನುಟ್ಟ ಆ ಬಾಲಕನಿಗೆ ಆಯುಷ್ಮಂತನಾಗೆಂದು ಆಶೀರ್ವದಿಸಿದರು.

ಉಕ್ತ್ವಾ ತೇ ತು ಪುನರ್ಬಾಲಂ ವೀಕ್ಷ್ಯ ವೈ ಕ್ಷೀಣಜೀವಿತಂ ।
ದಿನಾನಿ ಪಂಚ ತೇ ಹ್ಯಾಯುರ್ಜ್ಞಾತ್ವಾ ಭೀತಾಸ್ತತೋಽನೃತಾತ್ ॥ ೨೬ ॥
ಬ್ರಹ್ಮಚಾರಿಣಮಾದಾಯ ಗತಾಸ್ತೇ ಬ್ರಹ್ಮಣೋಽಂತಿಕೇ ।
ಪ್ರತಿಮುಚ್ಯಾಗ್ರತೋ ಬಾಲಂ ಪ್ರಣೇಮುಸ್ತೇ ಪಿತಾಮಹಂ ॥ ೨೭ ॥
ತತಸ್ತೇನಾಪಿ ಬಾಲೇನ ಬ್ರಹ್ಮಾ ಚೈವಾಭಿವಾದಿತಃ ।
ಚಿರಾಯುರ್ಬ್ರಹ್ಮಣಾ ಬಾಲಃ ಪ್ರೋಕ್ತೋಽಸಾವೃಷಿಸನ್ನಿಧೌ ॥ ೨೮ ॥
ತತಸ್ತೇ ಮುನಯಃ ಪ್ರೀತಾಃ ಶ್ರುತ್ವಾ ವಾಕ್ಯಂ ಪಿತಾಮಹಾತ್ ।
ಪಿತಾಮಹಸ್ತು ತಾನ್ದೃಷ್ಟ್ವಾ ಋಷೀನ್ಪ್ರೋವಾಚ ವಿಸ್ಮಿತಾನ್ ॥
ಕೇನ ಕಾರ್ಯೇಣ ವಾಽಽಯಾತಾಃ ಕೇನ ಬಾಲೋ ನಿವೇದಿತಃ ॥ ೨೯ ॥

ಋಷಯಃ ಊಚುಃ—

ಭೃಗೋಃ ಪುತ್ರೋ ಮೃಕಂಡಸ್ತು ಕ್ಷೀಣಾಯುಸ್ತಸ್ಯ ಬಾಲಕಃ ।
ಅಕಾಲೇನ ಪಿತಾ ಜ್ಞಾತ್ವಾ ಬಬಂಧಾಸ್ಯ ಚ ಮೇಖಲಾಂ ॥ ೩೦ ॥
ಯಜ್ಞೋಪವೀತಂ ಚ ತತಸ್ತೇನ ವಿಪ್ರೇಣ ಚೋದಿತಃ ।
ಯಂ ಕಂಚಿದ್ದ್ರಕ್ಷ್ಯಸೇ ಲೋಕೇ ಭ್ರಮಂತಂ ಭೂತಲೇ ದ್ವಿಜಂ ॥ ೩೧ ॥

---

೨೬. ಆ ಸಪ್ತರ್ಷಿಗಳು ಹೀಗೆ ಆಶೀರ್ವದಿಸಿದ ಬಳಿಕ ಆ ಬಾಲಕನು ಅಲ್ಪಾಯುವೆಂದೂ, ಇನ್ನು ಐದುದಿನಗಳು ಮಾತ್ರ ಅವನಿಗೆ ಆಯುಸ್ಸಿದೆಯೆಂದೂ ತಿಳಿದು ತಮ್ಮ ಮಾತು ಸುಳ್ಳಾಗುವುದೆಂದು ಹೆದರಿದರು.

೨೭. ಅವರು ಆ ಬ್ರಹ್ಮಚಾರಿಯನ್ನು ಕರೆದುಕೊಂಡು ಬ್ರಹ್ಮನೆಡೆಗೆ ಹೋಗಿ ಅವನನ್ನು ಬ್ರಹ್ಮನ ಮುಂದೆ ಕೆಡವಿ ತಾವು ವಂದಿಸಿದರು.

೨೮. ಆ ಬಾಲಕನೂ ಬ್ರಹ್ಮನಿಗೆ ನಮಸ್ಕಾರಮಾಡಿದನು. ಬ್ರಹ್ಮನು ಋಷಿಗಳ ಸನ್ನಿಧಿಯಲ್ಲಿ ಆ ಬಾಲಕನಿಗೆ ಚಿರಂಜೀವಿಯಾಗೆಂದು ಆಶೀರ್ವಾದಮಾಡಿದನು.

೨೯. ತರುವಾಯ ಆ ಮುನಿಗಳು ಪಿತಾಮಹನಮಾತನ್ನು ಕೇಳಿ ಸಂತೋಷಗೊಂಡರು. ಬ್ರಹ್ಮನು ಆಶ್ಚರ್ಯಗೊಂಡ ಋಷಿಗಳನ್ನು ಕುರಿತು ನೀವು ಏತಕ್ಕೆ ಇಲ್ಲಿಗೆ ಬಂದಿರುವಿರಿ ? ಏತಕ್ಕೆ ಈ ಬಾಲಕನನ್ನು ನನಗೆ ಒಪ್ಪಿಸಿದ್ದೀರಿ ಎಂದು ಪ್ರಶ್ನಿಸಿದನು.

೩೦–೩೧. ಋಷಿಗಳು ಹೇಳುತ್ತಾರೆ :—ಇವನು ಭೃಗುತನಯನಾದ ಮೃಕಂಡನ ಅಲ್ಪಾಯುವಾದ ತನಯನು. ತಂದೆಯು ಇವನು ಅಲ್ಪಾಯುವೆಂದರಿತು ಇವನಿಗೆ ಉಪನಯನಮಾಡಿ ಮೇಖಲಾ, ಯಜ್ಞೋಪವೀತಗಳನ್ನಾಧಾರಣೆ ಮಾಡಿಸಿದನು. ಬಳಿಕ ಅವನು ಮಗನನ್ನು ಕುರಿತು "ಮಗು ! ನೀನು ಭೂಮಿಯಲ್ಲಿ ಸಂಚರಿಸುತ್ತಿರುವ

ತಸ್ಯಾಭಿವಾದನಂ ಕಾರ್ಯಂ ನಿತ್ಯಮೇವ ಚ ಪುತ್ರಕ ।
ತತೋ ವಯಮನೇನೈವ ದೃಷ್ಟ್ವಾ ಬಾಲೇನ ಸತ್ತಮ ॥ ೩೨ ॥
ತೀರ್ಥಯಾತ್ರಾಪ್ರಸಂಗೇನ ದೈವಯೋಗಾತ್ಪಿತಾಮಹ ।
ಚಿರಾಯುರೇಷ ವೈ ಪ್ರೋಕ್ತೋ ಹ್ಯಸ್ಮಾಭಿಶ್ಚಾಭಿವಾದಿತೈಃ ॥ ೩೩ ॥
ತ್ವತ್ಸಕಾಶಂ ಸಮಾನೀತಸ್ತ್ವಯಾ ಚೈವಮುದಾಹೃತಃ
ಕಥಂ ವಾಗನೃತಾ ದೇವ ಹ್ಯಸ್ಮಾಕಂ ಭವತಾ ಸಹ ॥ ೩೪ ॥
ಉವಾಚ ಬಾಲಮುದ್ದಿಶ್ಯ ಪ್ರಹಸನ್ಪದ್ಮಸಂಭವಃ ।
ಮತ್ಸಮಾನಾಯುಷೋ ಬಾಲೋ ಮಾರ್ಕಂಡೇಯೋ ಭವಿಷ್ಯತಿ ॥ ೩೫ ॥
ಕಲ್ಪಸ್ಯಾದೌ ತಥಾ ಚಾಂತೇ ಸಹಾಯೋ ಮೇ ಭವಿಷ್ಯತಿ ।
ತತಸ್ತು ಮುನಯಃ ಪ್ರೀತಾ ಗೃಹೀತ್ವಾ ಮುನಿದಾರಕಂ ।
ತಸ್ಮಿನ್ನೇವ ಪ್ರದೇಶೇ ತು ಮುಮುಚುಶ್ಚೇಷ್ಟಿತಂ ಯತಃ ॥ ೩೬ ॥
ತೀರ್ಥಯಾತ್ರಾಂ ಗತಾ ವಿಪ್ರಾ ಮಾರ್ಕಂಡೇಯೋ ಗೃಹಂ ಯಯೌ ।
ಗತ್ವಾ ಗೃಹಮಥೋವಾಚ ಮೃಕಂಡಂ ಮುನಿಸತ್ತಮಂ ॥ ೩೭ ॥

ನೋಡಿದ ಬ್ರಾಹ್ಮಣರನ್ನೆಲ್ಲ ನಮಸ್ಕರಿಸು" ಎಂದನು. ಅನಂತರ ತೀರ್ಥಯಾತ್ರೆಗಾಗಿ ಬಂದ ನಮ್ಮನ್ನು ನೋಡಿ ಈ ಬಾಲಕನು ನಮಸ್ಕರಿಸಲು ನಾವು ಚಿರಂಜೀವಿಯಾಗೆಂದು ಆಶೀರ್ವಾದ ಮಾಡಿದೆವು.

೩೪. ಹಾಗೆಯೇ ನಾವು ಇವನನ್ನು ನಿನ್ನೆಡೆಗೆ ಕರೆತರಲು ನೀನೂ ಹಾಗೆಯೇ ಆಶೀರ್ವಾದ ಮಾಡಿದೆ. ಸ್ವಾಮಿ ! ನಿನ್ನ ಮತ್ತು ನಮ್ಮ ಮಾತುಗಳು ಹೇಗೆ ಸುಳ್ಳಾಗುವುವು ?" ಎಂದು ಕೇಳಿದರು.

೩೫–೩೬. ಆಗ ಬ್ರಹ್ಮನು ಆ ಬಾಲಕನನ್ನು ಕುರಿತು, "ಇವನು ನನ್ನಂತೆಯೇ ಚಿರಂಜೀವಿಯಾಗುವನು. ಹಾಗೆಯೇ ಕಲ್ಪದ ಆದ್ಯಂತಗಳಲ್ಲಿ ನನಗೆ ಸಹಾಯಕನಾಗುವನು" ಎಂದನು. ತರುವಾಯ ಮುನಿಗಳು ಸಂತುಷ್ಟರಾಗಿ ಆ ಬಾಲಕನನ್ನು ತಾವು ಮೊದಲು ಅವನಿಗೆ ಆಶೀರ್ವಾದ ಮಾಡಿದ ಸ್ಥಳದಲ್ಲಿ ಕರೆತಂದು ಬಿಟ್ಟರು.

೩೭. ಆ ಸಪ್ತರ್ಷಿಗಳು ತೀರ್ಥ ಯಾತ್ರೆಗೆ ಹೊರಟು ಹೋಗಲು ಮಾರ್ಕಂಡೇಯನು ತನ್ನ ಮನೆಯನ್ನು ಸೇರಿ ತಂದೆಯಾದ ಮೃಕಂಡನನ್ನು ಕುರಿತು ಇಂತೆಂದನು.

ಬ್ರಹ್ಮಲೋಕಮಹಂ ನೀತೋ ಮುನಿಭಿಸ್ತಾತ ಸಪ್ತಭಿಃ ।
ಉಕ್ತೋಽಯಂ ಬ್ರಹ್ಮಣಾ ಕಲ್ಪಸ್ಯಾದೌ ಚಾಂತೇ ಚ ಮೇ ಸಖಾ ॥ ೩೮ ॥
ಭವಿಷ್ಯತಿ ನ ಸಂದೇಹೋ ಮತ್ಸಮಾಯುಶ್ಚ ಬಾಲಕಃ ।
ತತಸ್ತೈಃ ಪುನರಾನೀತೋ ಮುಕ್ತಶ್ಚೈವಾಶ್ರಮಂ ಪ್ರತಿ ॥ ೩೯ ॥
ಮತ್ಕೃತೇ ಹೇ ದ್ವಿಜಶ್ರೇಷ್ಠ ಯಾತು ತೇ ಮನಸೋ ಜ್ವರಃ ।
ಮಾರ್ಕಂಡೇಯವಚಃ ಶ್ರುತ್ವಾ ಮೃಕಂಡೋ ಮುನಿಸತ್ತಮಃ ।
ಜಗಾಮ ಪರಮಂ ಹರ್ಷಂ ಕ್ಷಣಮೇಕಂ ಸದುಃಸಹಂ ॥ ೪೦ ॥
ತತೋ ಧೈರ್ಯಂ ಸಮಾಸ್ಥಾಯ ವಾಕ್ಯಮೇತದುವಾಚ ಹ ॥ ೪೧ ॥
ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ ।
ಯತ್ತ್ವಯಾ ಮೇ ಸುಪುತ್ರೇಣ ದೃಷ್ಟೋ ಲೋಕಪಿತಾಮಹಃ ॥ ೪೨ ॥
ವಾಜಪೇಯಸಹಸ್ರೇಣ ರಾಜಸೂಯಶತೇನ ಚ ।
ಯಂ ನ ಪಶ್ಯಂತಿ ವಿದ್ವಾಂಸಃ ಸ ತ್ವಯಾ ಲೀಲಯಾ ಸುತ ॥ ೪೩ ॥

೩೮–೩೯. ಅಪ್ಪ! ಸಪ್ತರ್ಷಿಗಳು ನನ್ನನ್ನು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋದರು. ಆಗ ಬ್ರಹ್ಮನು, "ಈ ಬಾಲಕನು ನನ್ನಂತೆಯೇ ಚಿರಂಜೀವಿಯಾಗಿ ಕಲ್ಪದ ಆದ್ಯಂತಗಳಲ್ಲಿ ನನಗೆ ಸಹಾಯಕನಾಗುವನು ಎಂದನು. ಅನಂತರ ಮುನಿಗಳು ನನ್ನನ್ನು ಇಲ್ಲಿಗೆ ಕರೆದುತಂದುಬಿಟ್ಟರು.

೪೦. ಅಪ್ಪ! ನೀನು ನನಗಾಗಿ ವ್ಯಥೆಗೊಳ್ಳಬೇಡ" ಎಂದನು. ಮೃಕಂಡ ಮುನಿಯು ಮಾರ್ಕಂಡೇಯನ ಆ ಮಾತನ್ನು ಕೇಳಿ ಸ್ವಲ್ಪ ಹೊತ್ತು ಅಪಾರವಾದ ಸಂತೋಷವನ್ನು ಹೊಂದಿದನು.

೪೧. ತರುವಾಯ ಅವನು ಧೈರ್ಯವನ್ನು ತಾಳಿ ಇಂತೆಂದನು.

೪೨–೪೩. "ಮಗು ! ಸಾವಿರ ವಾಜಪೇಯ ಯಾಗಗಳನ್ನೂ, ನೂರು ರಾಜಸೂಯ ಯಾಗಗಳನ್ನೂ, ಮಾಡಿದ ವಿದ್ವಾಂಸರೂ ನೋಡಲಾಗದ ಪಿತಾಮಹನನ್ನು ಅನಾಯಾಸದಿಂದ ನೀನು ನೋಡಿರುವುದರಿಂದಲೂ, ಚಿರಂಜೀವಿಯಾಗಿರುವುದರಿಂದಲೂ ಈ ದಿನ ನನ್ನ ಜನ್ಮವೂ, ಜೀವನವೂ ಸಫಲವಾಯಿತು. ನಾನು ಹಗಲು ರಾತ್ರಿ ನಿನ್ನ

ದೃಷ್ಟಶ್ಚಿರಾಯುರಸ್ಯೇವಂ ಕೃತಸ್ತೇನಾಬ್ಜಯೋನಿನಾ ।
ದಿವಾರಾತ್ರಮಹಂ ತಾತ ತವ ದುಃಖೇನ ದುಃಖಿತಃ ।
ನ ನಿದ್ರಾಮಧಿಗಚ್ಛಾಮಿ ತನ್ಮೇ ದುಃಖಂ ಗತಂ ಮಹತ್ ॥ ೪೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ನವೋತ್ತರದ್ವಿಶತತಮೋಽಧ್ಯಾಯಃ ॥

ದುಃಖದಿಂದ ದುಃಖಿತನಾಗಿದ್ದೆನು. ರಾತ್ರಿಯೆಲ್ಲ ನಿದ್ರೆಮಾಡುತ್ತಿರಲಿಲ್ಲ. ಆ ನನ್ನ ಮಹಾದುಃಖವು ಈಗ ತೊಲಗಿಹೋಯಿತು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದಶೋತ್ತರದ್ವಿಶತತಮೋಽಧ್ಯಾಯಃ

ಪುಲಸ್ತ್ಯೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುಲಸ್ತ್ಯೇಶ್ವರಮುತ್ತಮಂ ।
ಮಾರ್ಕಂಡೇಯೋತ್ತರೇ ಭಾಗೇ ಧನುಷಾಂ ಪಂಚಕೇ ಸ್ಥಿತಂ ॥ ೧ ॥
ತಂ ದೃಷ್ಟ್ವಾ ಮಾನವೋ ದೇವಿ ಪೂಜಯಿತ್ವಾ ವಿಧಾನತಃ ।
ಸಪ್ತಜನ್ಮಾರ್ಜಿತಾತ್ಪಾಪಾನ್ಮುಚ್ಯತೇ ನಾತ್ರ ಸಂಶಯಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಲಸ್ತ್ಯೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದಶೋತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಪುಲಸ್ತ್ಯೇಶ್ವರಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಮಾರ್ಕಂಡೇಶ್ವರನ ಉತ್ತರ ಭಾಗದಲ್ಲಿ ಐದು ಬಿಲ್ಲುಗಳ ದೂರದಲ್ಲಿರುವ ಪುಲಸ್ತ್ಯೇಶ್ವರನೆಡೆಗೆ ಹೋಗಬೇಕು.

೨. ಮನುಷ್ಯನು ಅವನ ದರ್ಶನ ಮಾಡಿ ವಿಧಿಯಿಂದ ಪೂಜಿಸಿದರೆ ನಿಜವಾಗಿಯೂ ಏಳು ಜನ್ಮಗಳ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಪುಲಸ್ತ್ಯೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಾದಶೋತ್ತರದ್ವಿಶತತಮೋऽಧ್ಯಾಯಃ

ಪುಲಹೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಪುಲಸ್ತ್ಯೇಶ್ವರಾತ್ತತೋ ದೇವಿ ನೈರ್ಋತೇ ಧನುಷಾಷ್ಟಕೇ ।
ಪುಲಹೇಶ್ವರನಾಮಾನಂ ತಂ ಚ ಭಕ್ತ್ಯಾ ಪ್ರಪೂಜಯೇತ್ ॥ ೧ ॥

ಹಿರಣ್ಯದಾನಂ ದತ್ವಾ ವೈ ಸಮ್ಯಗ್ಯಾತ್ರಾಫಲಂ ಲಭೇತ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಲಹೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕಾದಶೋತ್ತರದ್ವಿಶತತಮೋऽಧ್ಯಾಯಃ ॥

ಕನ್ನಡದ ಅನುವಾದ

ಪುಲಹೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ! ಪುಲಸ್ತ್ಯೇಶ್ವರನ ದಿಕ್ಕಿನಲ್ಲಿ ಎಂಟು ಬಿಲ್ಲುಗಳ ದೂರದಲ್ಲಿರುವ ಪುಲಸ್ತ್ಯೇಶ್ವರನನ್ನು ಭಕ್ತಿಯಿಂದ ಪೂಜಿಸಬೇಕು.

೨. ಅಲ್ಲಿ ಸುವರ್ಣದಾನವನ್ನು ಮಾಡಿದರೆ ಸಂಪೂರ್ಣಯಾತ್ರೆಯ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದಏಳನೆಯ
ಪ್ರಭಾಸಖಂಡದ ಮೊದಲನೆಯ ಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪುಲಹೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾದಶೋತ್ತರದ್ವಿಶತತಮೋಽಧ್ಯಾಯಃ

ಕೃತ್ತಿವಾಸೇಶ್ವರಮಾಹಾತ್ಮ್ಯವರ್ಣನಮ್

ಈಶ್ವರ ಉವಾಚ :—

ಪುಲಹೇಶ್ವರಾತ್ತತೋ ದೇವಿ ನೈರ್ಋತೇ ಧನುಷಾಷ್ಟಕೇ ।
ಕೃತ್ತೀಶ್ವರನಾಮಾನಂ ಮಹಾಕ್ರತುಫಲಪ್ರದಮ್ ॥ ೧ ॥
ತಂ ದೃಷ್ಟ್ವಾ ಮಾನವೋ ದೇವಿ ಪೌಂಡರೀಕಫಲಂ ಲಭೇತ್ ।
ಸಪ್ತಜನ್ಮನಿ ದಾರಿದ್ರ್ಯಂ ನ ದುಃಖಂ ತತ್ರ ಜಾಯತೇ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕೃತ್ತೀಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವಾದಶೋತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕೃತ್ತೀಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ದೇವಿ ! ಅನಂತರ ಪುಲಸ್ತ್ಯೇಶ್ವರನ ನೈರ್ಋತ್ಯದಿಕ್ಕಿನಲ್ಲಿ ಎಂಟುಬಿಲ್ಲುಗಳ ದೂರದಲ್ಲಿರುವ ಮಹಾಯಜ್ಞದ ಫಲವನ್ನೀಯುವ ಕೃತ್ತೀಶ್ವರನನ್ನು ನೋಡಿದ ಮಾನವನು ಪೌಂಡರೀಕ ಯಜ್ಞದ ಫಲವನ್ನು ಪಡೆಯುವನು. ಮತ್ತು ಏಳು ಜನ್ಮಗಳಲ್ಲಿ ಬಡತನವನ್ನೂ, ದುಃಖವನ್ನೂ ಹೊಂದುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೃತ್ತೀಶರಮಾಹಾತ್ಮ್ಯವರ್ಣನವೆಂಬ
ಇನ್ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯೋದಶೋತ್ತರದ್ವಿಶತತಮೋಽಧ್ಯಾಯಃ

ಕಶ್ಯಪೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಕೃತ್ತಿವಾಸೇಶಾತ್ಪೂರ್ವದಿಗ್ಭಾಗೇ ಧನುಃಷೋಡಶಕಾಂತರೇ ।
ಕಶ್ಯಪೇಶ್ವರನಾಮಾನಂ ಮಹಾಪಾತಕನಾಶನಂ ॥ ೧ ॥
ತಂ ದೃಷ್ಟ್ವಾ ಮಾನವೋ ದೇವಿ ಧನವಾನ್ಪುತ್ರವಾನ್ಭವೇತ್ ।
ಸರ್ವಪಾತಕಯುಕ್ತೋಽಪಿ ಮುಚ್ಯತೇ ನಾತ್ರ ಸಂಶಯಃ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಶ್ಯಪೇಶ್ವರಮಾಹಾತ್ಮ್ಯವರ್ಣನಂ ನಾಮ
ತ್ರಯೋದಶೋತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕಶ್ಯಪೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಕೃತ್ತಿವಾಸೇಶ್ವರನ ಪೂರ್ವ ದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿರುವ ಮಹಾಪಾತಕಗಳನ್ನು ನಾಶಗೊಳಿಸುವ ಕಶ್ಯಪೇಶ್ವರನನ್ನು ನೋಡಿದ ಮಾನವನು ಹಣಗಾರನೂ, ಪುತ್ರರುಳ್ಳವನೂ, ಸಕಲ ಪಾಪಮುಕ್ತನೂ ಆಗುವನು. ಸಂದೇಹವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಶ್ಯಪೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ದಶೋತ್ತರದ್ವಿಶತತಮೋಽಧ್ಯಾಯಃ

ಕೌಶಿಕೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಧನುಷಾಮಷ್ಟಭಿಸ್ತಸ್ಮಾದೀಶಾನೇ ಕಶ್ಯಪೇಶ್ವರಾತ್ ।
ಕೌಶಿಕೇಶ್ವರನಾಮಾನಂ ಮಹಾಪಾತಕನಾಶನಂ ॥ ೧ ॥
ವಸಿಷ್ಠತನಯಾನ್ಹತ್ವಾ ತತ್ರ ಕೌಶಿಕಸತ್ತಮಃ ।
ಸ್ಥಾಪಯಾಮಾಸ ತಲ್ಲಿಂಗಂ ಮುಕ್ತಪಾಪಸ್ತತೋಽಭವತ್ ॥ ೨ ॥
ತಂ ದೃಷ್ಟ್ವಾ ಪೂಜಯಿತ್ವಾ ತು ಲಭತೇ ವಾಂಛಿತಂ ಫಲಂ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕೌಶಿಕೇಶ್ವರಮಾಹಾತ್ಮ್ಯವರ್ಣನಂನಾಮ
॥ ಚತುರ್ದಶೋತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕೌಶಿಕೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಕಶ್ಯಪೇಶ್ವರನ ಈಶಾನ್ಯ ದಿಕ್ಕಿನಲ್ಲಿ ಎಂಟು ಬಿಲ್ಲುಗಳ ದೂರದಲ್ಲಿ ಮಹಾಪಾತಕಗಳನ್ನು ನಾಶಗೊಳಿಸುವ ಕೌಶಿಕೇಶ್ವರನಿರುವನು.

೨. ಅಲ್ಲಿ ಕೌಶಿಕ ಮುನಿಯು ವಸಿಷ್ಠ ಮುನಿಯ ಮಕ್ಕಳನ್ನು ಕೊಂದು ಆ ಲಿಂಗವನ್ನು ಪ್ರತಿಷ್ಠೆಮಾಡಿ ಪಾಪ ರಹಿತನಾದನು.

೩. ಅವನನ್ನು ನೋಡಿ ಪೂಜಿಸಿದ ಮನುಷ್ಯನು ಇಷ್ಟಾರ್ಥಗಳನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೌಶಿಕೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚದಶೋತ್ತರದ್ವಿಶತತಮೋಽಧ್ಯಾಯಃ

ಕುಮಾರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕುಮಾರೇಶ್ವರಮುತ್ತಮಂ ।
ಮಾರ್ಕಂಡೇಶ್ವರತೋ ದೇವಿ ದಕ್ಷಿಣೇ ನಾತಿದೂರತಃ ।
ಧನುರ್ವಿಂಶತಿಭಿಸ್ತತ್ರ ಸ್ಥಿತಃ ಸ್ವಾಮಿಪ್ರತಿಷ್ಠಿತಂ ॥ ೧ ॥
ತತಃ ಕೃತ್ವಾ ತಪೋ ಘೋರಂ ಕಾರ್ತಿಕೇಯೇನ ಭಾಮಿನಿ ।
ಪರದಾರಾಪಹಾರೋತ್ಥಪಾಪಾನಾಂ ನಾಶಹೇತವೇ ॥ ೨ ॥
ಲಿಂಗಂ ಸ್ಥಾಪಿತವಾಂಸ್ತತ್ರ ಸ ಮುಕ್ತಃ ಕಿಲ್ಬಿಷಾತ್ತತಃ ।
ವೈರಾಗ್ಯಾದ್ಯೌವನಂ ತ್ಯಕ್ತ್ವಾ ಕೌಮಾರಂ ಪುನರಾದದೇ ॥ ೩ ॥
ಪಿತೄನ್ಹತ್ವಾ ಸುಮಾಲೀ ಚ ತಮಾರಾಧಿತವಾನ್ಪುರಾ ।
ಸೋಽಪಿ ಮುಕ್ತೋಽಭವದ್ದೇವಿ ಪಾಪಾತ್ಪಿತೃವಧೋದ್ಭವಾತ್ ॥ ೪ ॥

ಕನ್ನಡದ ಅನುವಾದ

ಕುಮಾರೇಶ್ವರಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಮಾರ್ಕಂಡೇಶ್ವರನ ಹತ್ತಿರದಲ್ಲಿ ಇಪ್ಪತ್ತು ಬಿಲ್ಲುಗಳ ದೂರದಲ್ಲಿಯೇ ಕುಮಾರ ಸ್ವಾಮಿಯು ಪ್ರತಿಷ್ಠೆ ಮಾಡಿರುವ ಕುಮಾರೇಶ್ವರನೆಡೆಗೆ ಹೋಗಬೇಕು.

೨–೩. ಪ್ರಿಯಳೆ ! ಕುಮಾರಸ್ವಾಮಿಯು ಅಲ್ಲಿ ಘೋರ ತಪವಂಗೈದು ಪರ ಪತ್ನಿಯರ ಅಪಹಾರದಿಂದುಂಟಾದ ಪಾಪದ ಪರಿಹಾರಕ್ಕಾಗಿ ಲಿಂಗವನ್ನು ಪ್ರತಿಷ್ಠೆ ಮಾಡಿ ಪಾಪ ಮುಕ್ತನಾಗಿ ವೈರಾಗ್ಯಗೊಂಡು ಯೌವನವನ್ನು ತ್ಯಜಿಸಿ ಮರಳಿ ಕೌಮಾರವನ್ನು ಸ್ವೀಕರಿಸಿದನು.

೪. ದೇವಿ ಹಿಂದೆ ಸುಮಾಲಿಯು ಪಿತೃಗಳನ್ನು ಕೊಂದು ಆ ಕುಮಾರೇಶ್ವರನನ್ನಾರಾಧಿಸಿ ಆ ಪಿತೃವಧೆಯಿಂದುಂಟಾದ ಪಾಪದಿಂದ ಮುಕ್ತನಾದನು.

ಕುಮಾರೇಶ್ವರನಾಮ್ನೈತತ್ಪೂಜಿತಂ ವೈ ಸುರಾಸುರೈಃ ।
ತಸ್ಯಾಗ್ರತಃ ಕುಮಾರಸ್ಯ ಕೂಪಸ್ತಿಷ್ಠತಿ ಭಾಮಿನಿ ॥ ೫ ॥
ತತ್ರ ಸ್ನಾತ್ವಾ ಪೂಜಯೇದ್ಯಃ ಶೂಲಿನಂ ಸ್ವಾಮಿಪೂಜಿತಂ ।
ಸ ಮುಕ್ತಃ ಪಾತಕೈಃ ಸರ್ವೈರ್ಗಚ್ಛೇತ್ಸ್ವಾಮಿಜಿತಂ ಮಹತ್ ॥ ೬ ॥
ಶಾತಕೌಂಭಮಯಂ ಯಸ್ತು ತಾಮ್ರಚೂಡಂ ದ್ವಿಜಾತಯೇ ।
ದದ್ಯಾತ್ಸ್ವಾಮಿನಮುದ್ದಿಶ್ಯ ಸ ತು ಯಾತ್ರಾಫಲಂ ಲಭೇತ್ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಮಾರೇಶ್ವರಮಾಹಾತ್ಮ್ಯವರ್ಣನಂನಾಮ
॥ ಪಂಚದಶೋತ್ತರದ್ವಿಶತತಮೋಽಧ್ಯಾಯಃ ॥

---

೫. ಈ ಕುಮಾರೇಶ್ವರನನ್ನು ದೇವ ದಾನವರು ಪೂಜಿಸಿರುವರು. ಈ ಕುಮಾರೇಶ್ವರನ ಮುಂದೆ ಒಂದು ಕೂಪವಿರುವುದು.

೬. ಅಲ್ಲಿ ಮಿಂದು ಕುಮಾರ ಸ್ವಾಮಿಯು ಪೂಜಿಸಿದ ಮಹೇಶ್ವರನನ್ನಾರಾಧಿಸಿದವನು ಸಕಲ ಪಾಪ ಮುಕ್ತನಾಗಿ ಕುಮಾರಸ್ವಾಮಿಯ ಪುರಿಯನ್ನು ಸೇರುವನು.

೭. ಅಲ್ಲಿ ಬ್ರಾಹ್ಮಣನಿಗೆ ಸುವರ್ಣದ ಕೋಳಿಯನ್ನು ಕುಮಾರಸ್ವಾಮಿಯನ್ನುದ್ದೇಶಿಸಿ ದಾನ ಮಾಡಿದವನು ಯಾತ್ರೆಯ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಮಾರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರ ಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷೋಡಶೋತ್ತರದ್ವಿಶತತಮೋಽಧ್ಯಾಯಃ

ಗೌತಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಮಾರ್ಕಂಡೇಶ್ವರತೋ ದೇವಿ ಉತ್ತರೇ ಲಿಂಗಮುತ್ತಮಂ ।
ಧನುಷಾಂ ಪಂಚದಶಭಗೌತಮೇಶ್ವರನಾಮಕಂ ॥ ೧ ॥
ಗುರಂ ಹತ್ವಾ ಪುರಾ ದೇವಿ ಗೌತಮಃ ಪಾಪದುಃಖಿತಃ ।
ತತ್ರ ಲಿಂಗಂ ಪ್ರತಿಷ್ಠಾಪ್ಯ ತಸ್ಮಾತ್ಪಾಪಾದ್ವ್ಯಮುಚ್ಯತ । ॥ ೨ ॥
ಯಸ್ತತ್ರ ಕಪಿಲಾಂ ದದ್ಯಾತ್ಸ್ನಾತ್ವಾ ನದ್ಯಾಂ ವಿಧಾನತಃ ।
ಸಂಪೂಜ್ಯ ವಿಧಿವಲ್ಲಿಂಗಂ ಮುಚ್ಯತೇ ಪಂಚಪಾತಕೈಃ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೌತಮೇಶ್ವರಮಾಹಾತ್ಮ್ಯವರ್ಣನಂ ನಾಮ
ಷೋಡಶೋತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಗೌತಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಮಾರ್ಕಂಡೇಶ್ವರನ ಉತ್ತರದಲ್ಲಿ ಹದಿನೈದು ಬಿಲ್ಲುಗಳ ದೂರದಲ್ಲಿ ಗೌತಮೇಶ್ವರನೆಂಬ ಲಿಂಗವಿರುವುದು.

೨. ದೇವಿ ! ಹಿಂದೆ ಗೌತಮನು ಗುರುವನ್ನು ವಧಿಸಿ ಪಾಪದ ಭಯದಿಂದ ದುಃಖಗೊಂಡು ಅಲ್ಲಿ ಲಿಂಗವನ್ನು ಪ್ರತಿಷ್ಠೆಮಾಡಿ ಆ ಪಾಪದಿಂದ ಮುಕ್ತನಾದನು.

೩. ಅಲ್ಲಿರುವ ನದಿಯಲ್ಲಿ ಮಿಂದು ವಿಧಿಯಂತೆ ಲಿಂಗವನ್ನು ಪೂಜಿಸಿ ಕಪಿಲ ಧೇನುವನ್ನು ದಾನ ಮಾಡಿದವನು ಪಂಚ ಮಹಾ ಪಾತಕಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೌತಮೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹದಿನೈದನೆಯ ಅಧ್ಯಾಯವು ಮುಗಿದುದು.

ಶ್ರೀಃ

ಸಪ್ತದಶೋತ್ತರದ್ವಿಶತತಮೋಽಧ್ಯಾಯಃ

ದೇವರಾಜೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಗೌತಮೇಶ್ವರತೋ ದೇವಿ ಪಶ್ಚಿಮೇ ನಾತಿದೂರತಃ ।
ಧನುಃ ಷೋಡಶಭಿರ್ದೇವಿ ದೇವರಾಜೇಶ್ವರಃ ಸ್ಥಿತಃ ॥ ೧ ॥
ಲಿಂಗಂ ಸ ಸ್ಥಾಪಯಾಮಾಸ ತತಃ ಪಾಪೈರ್ವ್ಯಮುಚ್ಯತ ।
ಯಸ್ತಂ ಸಮಾಹಿತಮನಾಃ ಪೂಜಯಿಷ್ಯತಿ ಮಾನವಃ ।
ಸ ಚ ಮಾನವಸಂಭೂತಾತ್ಪಾತಕಾತ್ಸಂಪ್ರಮೋಕ್ಷ್ಯತಿ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದೇವರಾಜೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತದಶೋತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ದೇವರಾಜೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ದೇವಿ! ಗೌತಮೇಶ್ವರನ ಪಶ್ಚಿಮದಲ್ಲಿ ಹತ್ತಿರದಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿ ದೇವರಾಜೇಶ್ವರನಿರುವನು.

೨. ದೇವೇಂದ್ರನು ಅಲ್ಲಿ ಲಿಂಗವನ್ನು ಸ್ಥಾಪಿಸಿ ಪಾಪ ಮುಕ್ತನಾದನು. ಸಾವಧಾನ ಮನಸ್ಸಿನಿಂದ ದೇವನನ್ನು ಪೂಜಿಸಿದ ಮಾನವನು ಮನುಷ್ಯ ಜನ್ಮದಲ್ಲುಂಟಾದ ಪಾಪದಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದೇವರಾಜೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರ ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾದಶೋತ್ತರದ್ವಿಶತತಮೋಽಧ್ಯಾಯಃ

ಮಾನವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಮಾನವಂ ಲಿಂಗಂ ಮನುನಾ ಸಂಪ್ರತಿಷ್ಠಿತಂ ।
ಪೂರ್ವಂ ಹತ್ವಾ ಸುತಂ ದೇವಿ ಮನುಃ ಪಾಪಸಮನ್ವಿತಃ ॥ ೧ ॥
ಕ್ಷೇತ್ರಂ ಪಾಪಹರಂ ಜ್ಞಾತ್ವಾ ತತ್ರಸ್ಥಾಪಿತಿಷ್ಠದೀಶ್ವರಂ ।
ಮುಕ್ತಶ್ಚೈವಾಭವತ್ಪಾಪಾತ್ತಸ್ಮಾತ್ಪುತ್ರವಧೋದ್ಭವಾತ್ ॥ ೨ ॥
ಪೂಜಯೇನ್ಮಾನವೋ ಯಸ್ತು ಸ ಮುಕ್ತಃ ಪಾತಕೈರ್ಭವೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾನವೇಶ್ವರಮಾಹಾತ್ಮ್ಯ ವರ್ಣನಂ ನಾಮ
ಅಷ್ಟಾದಶೋತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಮಾನವೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ಮನುವು ಮಾನವನ ಲಿಂಗವನ್ನು ಪ್ರತಿಷ್ಠೆಮಾಡಿರುವನು. ಹಿಂದೆ ಮನುವು ತನ್ನ ಮಗನನ್ನು ಕೊಂದು ಪಾಪಮುಕ್ತನಾಗಿ ಇದು ಪಾಪಹರ ಕ್ಷೇತ್ರವೆಂದರಿತು ಮಹೇಶ್ವರನನ್ನು ಪ್ರತಿಷ್ಠೆಮಾಡಿ ಆ ಮಗನನ್ನು ಕೊಂದುದರಿಂದುಂಟಾದ ಪಾಪದಿಂದ ಮುಕ್ತನಾದನು.

೩. ಈ ಮಾನವೇಶ್ವರನನ್ನು ಪೂಜೆಮಾಡಿದವನು ಪಾತಕಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾನವೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಮಾನವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದಾಗ್ನೇಯಕೋಣೇ ತು ಮಾರ್ಕಂಡೇಯಸಮೀಪಗಂ ।
ಗುಹಾಲಿಂಗಂ ಮಹಾದೇವಿ ನೀಲಕಂಠೇತಿ ವಿಶ್ರುತಂ ॥ ೧ ॥

ವಿಷ್ಣುನಾ ಪೂಜಿತಂ ಪೂರ್ವಂ ಸರ್ವಪಾತಕನಾಶನಂ ॥ ೨ ॥
ತತ್ರ ಯಃ ಪೂಜಯೇದ್ಭಕ್ತ್ಯಾ ತಲ್ಲಿಂಗಂ ಪಾಪಮೋಚನಂ ।
ಸ ಪುತ್ರಪಶುಮಾನ್ಧೀಮಾನ್ಮೋದತೇ ಪೃಥಿವೀತಲೇ ॥ ೩ ॥

ಏವಂ ತತ್ರ ಮಹಾದೇವಿ ಮಾರ್ಕಂಡೇಯೇಶಸನ್ನಿಧೌ ।
ಋಷೀಣಾಮಾಶ್ರಮಾ ಯೇಽತ್ರ ದೃಶ್ಯಂತೇಽದ್ಯಾಪಿ ಭಾಮಿನಿ ॥ ೪ ॥

ಅಷ್ಟಾಶೀತಿಸಹಸ್ರಾಣಿ ಋಷೀಣಾಮೂರ್ಧ್ವರೇತಸಾಂ ।
ತತ್ರ ಸ್ಥಿತಾನಿ ದೇವೇಶಿ ಮಾರ್ಕಂಡೇಯಾಶ್ರಮಾಂತಿಕೇ ॥ ೫ ॥

ಕನ್ನಡದ ಅನುವಾದ

ಮಾನವೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ಆ ಮಾನವೇಶ್ವರನ ಆಗ್ನೇಯ ಮೂಲೆಯಲ್ಲಿ ಮಾರ್ಕಂಡೇಯನ ಸಮೀಪದಲ್ಲಿ ವಿಷ್ಣುವು ಹಿಂದೆ ಪೂಜಿಸಿರುವ ಸಕಲ ಪಾಪಗಳನ್ನು ಪರಿಹರಿಸುವ ನೀಲಕಂಠನೆಂಬ ಗುಹಾಲಿಂಗವಿರುವುದು.

೩. ಅಲ್ಲಿ ಪಾಪವನ್ನು ನಿವಾರಿಸುವ ಆ ಲಿಂಗವನ್ನು ಭಕ್ತಿಯಿಂದ ಪೂಜಿಸುವವನು ಬುದ್ಧಿವಂತನೂ, ಪುತ್ರ ಪಶುಗಳುಳ್ಳವನೂ ಆಗಿ ಭೂಮಿಯಲ್ಲಿ ಆನಂದಿಸುವನು.

೪. ಮಹಾದೇವಿ! ಆ ಮಾರ್ಕಂಡೆಯೇಶನ ಹತ್ತಿರ ಈಗಲೂ ಋಷಿಗಳ ಆಶ್ರಮಗಳು ಕಾಣಿಸುವುವು.

೫. ಅಲ್ಲಿ ಬ್ರಹ್ಮಚಾರಿಗಳಾದ ಎಂಬತ್ತೆಂಟು ಸಾವಿರ ಋಷಿಗಳು ನೆಲೆಸಿರುವರು.

ಋಷೀಣಾಂ ಚ ಗುಹಾಸ್ತತ್ರ ಸರ್ವಾ ಲಿಂಗಸಮನ್ವಿತಾಃ ।
ದೃಶ್ಯಂತೇ ಪುಣ್ಯತಪಸಾಂ ತದಾಶ್ರಮನಿವಾಸಿನಾಂ ॥ ೬ ॥
ತತ್ರ ಯಃ ಸ್ಥಾಪಯೇಲ್ಲಿಂಗಂ ಮಾರ್ಕಂಡೇಶಸಮೀಪಗಂ ।
ಕುಲಾನಾಂ ಶತಮುದ್ಧೃತ್ಯ ಮೋದತೇ ದಿವಿ ದೇವವತ್ ॥ ೭ ॥
ಸರ್ವೇ ಶಿವಮಯಾಃ ಲೋಕಾಃ ಶಿವೇ ಸರ್ವಂ ಪ್ರತಿಷ್ಠಿತಂ ।
ತಸ್ಮಾಚ್ಛಿವಂ ಯಜೇದ್ವಿದ್ವಾನ್ಯ ಇಚ್ಛೇಚ್ಛ್ರಿಯಮಾತ್ಮನಃ ॥ ೮ ॥
ಶಿವಭಕ್ತೋ ನ ಯೋ ರಾಜಾ ಭಕ್ತೋಽನ್ಯೇಷು ಸುರೇಷು ಚ ।
ಸ್ವಪತಿಂ ಯುವತೀ ತ್ಯಕ್ತ್ವಾ ರಮತೇಽನ್ಯೇಷು ವೈ ಯಥಾ ॥ ೯ ॥
ಬ್ರಹ್ಮಾದಯಃ ಸುರಾಃ ಸರ್ವೇ ರಾಜಾನಶ್ಚ ಮಹರ್ದ್ಧಿಕಾಃ ।
ಮಾನವಾ ಮುನಯಶ್ಚೈವ ಸರ್ವೇ ಲಿಂಗಂ ಯಜಂತಿ ಚ ॥ ೧೦ ॥
ಸ್ವನಾಮಕೃತಚಿಹ್ನಾನಿ ಲಿಂಗಾನೀಂದ್ರಾದಿಭಿಃ ಕ್ರಮಾತ್ ।
ಸ್ಥಾಪಿತಾನಿ ಯಥಾಸ್ಥಾನೇ ಮಾನವೈರಪಿ ಭೂರಿಶಃ ॥ ೧೧ ॥
ಸ್ಥಾಪನಾದ್ಬ್ರಹ್ಮಹತ್ಯಾಂ ಚ ಭ್ರೂಣಹತ್ಯಾಂ ತಥೈವ ಚ ।
ಮಹಾಪಾಪಾನಿ ಚಾನ್ಯಾನಿ ನಿಸ್ತೀರ್ಣಾಃ ಶಿವತೇಜಸಾ ॥ ೧೨ ॥

---

೬. ಆ ಲಿಂಗದ ಹತ್ತಿರ ಆಶ್ರಮವಾಸಿಗಳಾದ ತಪಸ್ವಿಗಳ ಗುಹೆಗಳಿರುವುವು.

೭. ಆ ಆ ಮಾರ್ಕಂಡೇಶನ ಹತ್ತಿರ ಲಿಂಗವನ್ನು ಸ್ಥಾಪಿಸಿದವನು ನೂರು ಕುಲಗಳನ್ನು ಉದ್ಧರಿಸಿ ಸ್ವರ್ಗಲೋಕದಲ್ಲಿ ದೇವತೆಗಳಂತೆ ಆನಂದಪಡುವನು.

೮. ಸಕಲ ಲೋಕಗಳೂ ಶಿವನ ರೂಪವಾದುವು. ಎಲ್ಲವೂ ಶಿವನಲ್ಲಿ ನೆಲಸಿರುವುವು. ಆದುದರಿಂದ ಸಂಪತ್ತನ್ನು ಬಯಸುವ ಪ್ರಾಜ್ಞನು ಶಿವನನ್ನು ಪೂಜಿಸಬೇಕು.

೯. ರಾಜನು ಶಿವನಲ್ಲಿ ಭಕ್ತಿಯನ್ನಿಡದೆ ಇತರ ದೇವತೆಗಳ ಭಕ್ತನಾದರೆ ತನ್ನ ಪತಿಯನ್ನು ತ್ಯಜಿಸಿ ಪರಪುರುಷನಲ್ಲಿ ಆಸಕ್ತಳಾದ ಯುವತಿಯಂತಾಗುವನು.

೧೦. ಬ್ರಹ್ಮಾದಿ ಸಕಲ ದಿವಿಜರೂ, ಅತ್ಯಂತ ಐಶ್ವರ್ಯವುಳ್ಳ ಅರಸರೂ, ಮಾನವರೂ, ಮುನಿಗಳೂ ಎಲ್ಲರೂ ಲಿಂಗವನ್ನಾರಾಧಿಸುವರು.

೧೧. ಇಲ್ಲಿ ಇಂದ್ರಾದಿದೇವತೆಗಳೂ ಬಹುಮಂದಿ ಮಾನವರೂ ತಮ್ಮ ಹೆಸರಿನಿಂದ ಲಿಂಗಗಳನ್ನು ಪ್ರತಿಷ್ಠೆಮಾಡಿರುವರು.

೧೨. ಅದರಿಂದವರು ಶಿವನ ತೇಜಸ್ಸಿನಿಂದ ಬ್ರಹ್ಮಹತ್ಯೆ, ಶಿಶುಹತ್ಯೆ ಮೊದಲಾದ ಮಹಾಪಾಪಗಳಿಂದ ಮುಕ್ತರಾದರು.

ವೃತ್ರಂ ಹತ್ವಾ ಪುರಾ ಶಕ್ರೋ ಮಾಹೇಂದ್ರಂ ಸ್ಥಾಪ್ಯ ಶಂಕರಂ ।
ಲಿಂಗಂ ಚ ಮುಕ್ತಪಾಪೌಘಸ್ತತೋಽಸೌ ತ್ರಿದಿವಂ ಗತಃ ॥ ೧೩ ॥
ಸ್ಥಾಪಯಿತ್ವಾ ಶಿವಂ ಸೂರ್ಯೋ ಗಂಗಾಸಾಗರಸಂಗಮೇ ।
ನಿರಾಮಯೋಽಭೂತ್ಸೋಮಶ್ಚ ಪ್ರಭಾಸೇ ಪಶ್ಚಿಮೋದಧೇಃ ॥ ೧೪ ॥
ಕಾಶ್ಯಾಂ ಚೈವ ತಥಾದಿತ್ಯಃ ಸಹ್ಯೇ ಗರುಡಕಾಶ್ಯಪೌ ।
ಪ್ರತಿಷ್ಠಾಂ ಪರಮಾಂ ಪ್ರಾಪ್ತಾ ಪ್ರತಿಷ್ಠಾಪ್ಯ ಜಗತ್ಪತಿಂ ॥ ೧೫ ॥
ಖ್ಯಾತದೋಷಾ ಹ್ಯಹಲ್ಯಾಽಪಿ ಭರ್ತೃಶಪ್ತಾಽಭವತ್ತದಾ ।
ಸ್ಥಾಪ್ಯೇಶಾನಂ ಪುನಃ ಸ್ತ್ರೀತ್ವಂ ಲೇಭೇ ಪುತ್ರಾಂಸ್ತಥೋತ್ತಮಾನ್ ॥ ೧೬ ॥
ಪಶ್ಯಂತ್ಯದ್ಯಾಪಿ ಯಾಃ ಸ್ನಾತ್ವಾ ತತ್ರಾಹಲ್ಯೇಶ್ವರಂ ಸ್ತ್ರಿಯಃ ।
ಪುರುಷಶ್ಚಾಪಿ ತದ್ದೋಷೈರ್ಮುಚ್ಯಂತೇ ನಾತ್ರ ಸಂಶಯಃ ॥ ೧೭ ॥
ಸ್ಥಾಪಯಿತ್ವೇಶ್ವರಂ ಶ್ವೇತಶೈಲೇ ಬಲಿವಿರೋಚನೌ ।
ಉಭಾವಪಿ ಹಿ ಸಂಜಾತಾವಮರೌ ಬಲಿನಾಂ ವರೌ ॥ ೧೮ ॥
ರಾಮೇಣ ರಾವಣಂ ಹತ್ವಾ ಸಸೈನ್ಯಂ ತ್ರಿದಶೇಶ್ವರಂ ।
ಸ್ಥಾಪಿತೋ ವಿಧಿವದ್ಭಕ್ತ್ಯಾ ತೀರೇ ನದನದೀಪತೇಃ ॥ ೧೯ ॥

---

೧೩. ಹಿಂದೆ ದೇವರಾಜನು ವೃತ್ರಾಸುರನನ್ನು ಕೊಂದು ಮಾಹೇಂದ್ರ ಲಿಂಗವನ್ನು ಪ್ರತಿಷ್ಠೆಮಾಡಿ ಪಾಪಮುಕ್ತನಾಗಿ ದೇವಲೋಕಕ್ಕೆ ತೆರಳಿದನು.

೧೪. ಸೂರ್ಯನು ಗಂಗಾಸಾಗರ ಮೇಳನದಲ್ಲಿಯೂ, ಚಂದ್ರನು ಪಶ್ಚಿಮ ಸಮುದ್ರದ ಹತ್ತಿರವಿರುವ ಪ್ರಭಾಸಕ್ಷೇತ್ರದಲ್ಲಿಯೂ ಶಿವಲಿಂಗವನ್ನು ಪ್ರತಿಷ್ಠೆಮಾಡಿ ರೋಗರಹಿತರಾದರು.

೧೫. ಆದಿತ್ಯನು ಕಾಶಿಯಲ್ಲಿಯೂ, ಗರುಡಕಾಶ್ಯಪರು ಸಹ್ಯಾದ್ರಿಯಲ್ಲಿಯೂ ಮಹೇಶ್ವರನನ್ನು ಪ್ರತಿಷ್ಠೆಮಾಡಿ ಅತ್ಯಂತ ವಿಖ್ಯಾತರಾದರು.

೧೬. ಪ್ರಖ್ಯಾತ ದೋಷವುಳ್ಳ ಅಹಲ್ಯೆಯು ಪತಿಯಿಂದ ಶಾಪಗೊಂಡು ಈಶ್ವರನನ್ನು ಪ್ರತಿಷ್ಠೆಮಾಡಿ ಮರಳಿ ಸ್ತ್ರೀತ್ವವನ್ನು ಹೊಂದಿ ಉತ್ತಮರಾದ ಪುತ್ರರನ್ನು ಪಡೆದಳು.

೧೭. ಈಗಲೂ ಸ್ತ್ರೀಯರೂ, ಪುರುಷರೂ ಅಲ್ಲಿ ಮಿಂದು ಅಹಲ್ಯೇಶ್ವರನನ್ನು ದರ್ಶನಮಾಡಿ ದೋಷಮುಕ್ತರಾಗುವರು.

೧೮. ಬಲಿವಿರೋಚನರು ಶ್ವೇತಶೈಲದಲ್ಲಿ ಈಶ್ವರನನ್ನು ಪ್ರತಿಷ್ಠೆಮಾಡಿ ನಾಶವಿಲ್ಲದವರೂ ಬಲವಂತರಲ್ಲಿ ಶ್ರೇಷ್ಠರೂ ಆದರು.

೧೯. ರಾಮನು ರಾವಣನನ್ನು ಸೈನ್ಯಸಮೇತ ಕೊಂದು ದಕ್ಷಿಣಸಮುದ್ರದ ದಡದಲ್ಲಿ ಮಹೇಶ್ವರನನ್ನು ಭಕ್ತಿಯಿಂದ ಪ್ರತಿಷ್ಠೆಮಾಡಿದನು.

ಸ್ವಾಯಂಭುವರ್ಷಿದೇವಾದಿಲಿಂಗಹೀನಾ ನ ಭೂಃ ಕ್ವಚಿತ್ ।
ವ್ಯಾಪಾರಾನ್ಸಕಲಾಂಸ್ತ್ಯಕ್ತ್ವಾ ಪೂಜಯಧ್ವಂ ಶಿವಂ ಸದಾ ।
ನಿಕಟಾ ಇವ ದೃಶ್ಯಂತೇ ಕೃತಾಂತನಗರೋಪಗಾಃ ॥ ೨೦ ॥
ದೇವಿ ಕಿಂ ಬಹುನೋಕ್ತೇನ ವರ್ಣಿತೇನ ಪುನಃ ಪುನಃ ।
ಪ್ರಭಾಸಕ್ಷೇತ್ರಸಾರಂ ತು ಮಾರ್ಕಂಡೇಯಾಶ್ರಮಂ ಪ್ರತಿ ॥ ೨೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಮಾರ್ಕಂಡೇಯೇಶ್ವರಮಾಹಾತ್ಮ್ಯವರ್ಣನಂನಾಮ ಏಕೋನವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

---

೨೦. ಬ್ರಹ್ಮ, ಋಷಿ, ದೇವತೆಗಳಿಂದ ಪ್ರತಿಷ್ಠೆಮಾಡಲ್ಪಟ್ಟ ಲಿಂಗಗಳಿಲ್ಲದ ಭೂಮಿಯೇ ಇಲ್ಲ. ಸಕಲ ಕಾರ್ಯಗಳನ್ನು ತ್ಯಜಿಸಿ ಶಿವನನ್ನು ಯಾವಾಗಲೂ ಪೂಜಿಸಿರಿ. ಆದರಿಂದ ಪರಲೋಕದ ದಾರಿಗಳು ಹತ್ತಿರವಾದಂತಾಗುವುವು.

೨೧. ದೇವಿ ! ಪ್ರಭಾಸಕ್ಷೇತ್ರದಲ್ಲಿ ಮುಖ್ಯವಾದ ಮಾರ್ಕಂಡೇಯಾಶ್ರಮವನ್ನು ಬಹುವಾಗಿ ವರ್ಣಿಸಿ ಪ್ರಯೋಜನವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಮಾರ್ಕಂಡೇಯೇಶ್ವರಮಾಹಾತ್ಮ್ಯ ವರ್ಣನವೆಂಬ ಇನ್ನೂರಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ವೃಷಭಧ್ವಜೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ತ್ರೈಲೋಕ್ಯಪೂಜಿತಂ ।
ವೃಷಭಧ್ವಜೇಶ್ವರಂ ನಾಮ ಸ್ಥಿತಂ ದಕ್ಷಿಣತಸ್ತಥಾ ॥ ೧ ॥

ಯತ್ತದಕ್ಷರಮವ್ಯಕ್ತಂ ಪರಂ ಯಸ್ಮಾನ್ನ ವಿದ್ಯತೇ ।
ಯೋಗಗಮ್ಯಮನಾದ್ಯಂತಂ ವೃಷಭಧ್ವಜಸಂಮಿತಂ ॥ ೨ ॥

ಸರ್ವಾಶ್ಚರ್ಯಮಯಂ ದೇವಿ ಬುದ್ಧಿಗ್ರಾಹ್ಯಂ ನಿರಾಮಯಂ ।
ವಿಶ್ವತಃಪಾಣಿಪಾದಂ ಚ ವಿಶ್ವತೋಽಕ್ಷಿಶಿರೋಮುಖಂ ॥ ೩ ॥

ತಂ ಚ ದೇವಂ ಚಿರಂ ಸ್ಥಾಣು ವೃಷಭಧ್ವಜಸಂಜ್ಞಿತಂ ।
ಪೃಥುರ್ಮರುಚ್ಚ ಭರತಃ ಶಶಬಿಂದುರ್ಗಯಃ ಶಿಬಿಃ ॥ ೪ ॥

ಕನ್ನಡದ ಅನುವಾದ

ವೃಷಭಧ್ವಜೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಅಲ್ಲಿಯೇ ದಕ್ಷಿಣದಲ್ಲಿರುವ ಮೂರುಲೋಕಗಳಲ್ಲಿ ಪೂಜಿತನಾದ ವೃಷಭಧ್ವಜೇಶ್ವರನೆಡೆಗೆ ಹೋಗಬೇಕು.

೨. ನಾಶರಹಿತನೂ, ಅವ್ಯಕ್ತನೂ, ಯೋಗಶಕ್ತಿಯಿಂದ ತಿಳಿಯಲು ಶಕ್ಯನೂ ಆದ್ಯಂತರಹಿತನೂ ಆದ ವೃಷಭಧ್ವಜನಿಗೆ ಸಮಾನವಾದ ಉತ್ತಮ ದೇವತೆಯಿಲ್ಲ.

೩-೬. ದೇವಿ! ಸಕಲಾಶ್ಚರ್ಯರೂಪನೂ, ಜ್ಞಾನಗಮ್ಯನೂ, ನಿರ್ದುಷ್ಟನೂ, ಸರ್ವತ್ರ ಕೈಕಾಲು ಕಣ್ಣು, ತಲೆಗಳುಳ್ಳವನೂ, ಸ್ಥಿರನೂ ಆದ ಆ ವೃಷಭಧ್ವಜನನ್ನು

ರಾಮೋಽಂಬರೀಷೋ ಮಾಂಧಾತಾ ದಿಲೀಪೋಽಥ ಭಗೀರಥಃ ।
ಸುಹೋತ್ರೋ ರಂತಿದೇವಶ್ಚ ಯಯಾತಿಃ ಸಗರಸ್ತಥಾ ॥ ೫ ॥
ಷೋಡಶೈತೇ ನೃಪಾ ಧನ್ಯಾಃ ಪ್ರಭಾಸಂ ಕ್ಷೇತ್ರಮಾಶ್ರಿತಾಃ ।
ವೃಷಧ್ವಜೇಶಮಾರಾಧ್ಯ ಯಜ್ಞೈರಿಷ್ಟ್ವಾ ದಿವಂ ಗತಾಃ ॥ ೬ ॥
ಸತ್ಯಂ ವಚ್ಮಿ ಹಿತಂವಚ್ಮಿ ಸಾರಂ ವಚ್ಮಿ ಪುನಃಪುನಃ ।
ಅಸಾರೇ ದಗ್ಧಸಂಸಾರೇ ಸಾರಂ ತತ್ರ ಶಿವಾರ್ಚನಂ ॥ ೭ ॥
ಪುನರ್ಜನ್ಮ ಪುನರ್ಮೃತ್ಯುಃ ಪುನಃ ಕ್ಲೇಶಃ ಪುನರ್ಜರಾ ।
ಅಹರಹರ್ಘಟೀನ್ಯಾಯೋ ನ ಕದಾಚಿದಪೀದೃಶಃ ॥ ೮ ॥
ತದಾ ಶ್ಚೇತಸ್ಯ ಸಂಸಾರಗ್ರಂಥೇರತ್ಯಂತದುರ್ಭಿದಃ ।
ಪರಂ ನಿರ್ಮೂಲವಿಚ್ಛೇದಿ ಕ್ರಿಯತಾಂ ತದ್ಭವಾರ್ಚನಂ ॥ ೯ ॥
ತಸ್ಯ ಚಿಂತಾಮಣಿರ್ಗೇಹೇ ತಸ್ಯ ಕಲ್ಪದ್ರುಮಃ ಕುಲೇ ।
ಕುಬೇರಃ ಕಿಂಕರಸ್ತಸ್ಯ ಭಕ್ತಿರ್ಯಸ್ಯ ಶಿವೇ ಸ್ಥಿತಾ ॥ ೧೦ ॥
ಸೇಯಂ ಲಕ್ಷ್ಮೀಃ ಪುರಾ ಪುಂಸಾಂ ಸೇಯಂ ಭಕ್ತಿಃ ಸಮಾಹಿತಾ ।
ಸೇಯಂ ಶ್ರೇಯಸ್ಕರೀ ಮೂರ್ತಿರ್ಭಕ್ತಿರ್ಯಾ ವೃಷಭಧ್ವಜೇ ॥ ೧೧ ॥

ಪೃಥು, ಮರುತ್, ಭರತ ಶಶಬಿಂದು, ಗಯ, ಶಿಬಿ, ರಾಮ, ಅಂಬರೀಷ, ಮಾಂಧಾತಾ, ದಿಲೀಪ, ಭಗೀರಥ, ಸುಹೋತ್ರ, ರಂತಿದೇವ, ಯಯಾತಿ, ಸಗರ ಮೊದಲಾದ ಹದಿನಾರು ಮಂದಿ ಅರಸರು ಪ್ರಭಾಸಕ್ಷೇತ್ರಕ್ಕೆ ಬಂದು ವೃಷಭಧ್ವಜೇಶ್ವರನನ್ನು ಪೂಜಿಸಿ, ಯಾಗಗೈದು ಸ್ವರ್ಗವನ್ನೈದಿದರು.

೭. ಸತ್ಯವಾಗಿಯೂ, ಹಿತವಾಗಿಯೂ, ಸಾರವಾಗಿಯೂ ಹೇಳುವೆನು. ನಿಸ್ಸಾರವಾದ ಈ ದಗ್ಧಸಂಸಾರದಲ್ಲಿ ಶಿವಾರ್ಚನೆಯೇ ಉತ್ತಮವಾದುದು.

೮. ಮರಳಿ ಮರಳಿ ಜನ್ಮ, ಮೃತ್ಯು, ದುಃಖ, ಮುಪ್ಪುಗಳು ಘಟೀಯಂತ್ರ ನ್ಯಾಯದಿಂದ ಸಂಭವಿಸುವುವು. ಇವು ಈ ಶಿವಾರ್ಚನೆಯಿಂದುಂಟಾಗುವುದಿಲ್ಲ.

೯. ಅತ್ಯಂತ ದುರ್ಭೇದ್ಯವಾದ ಈ ಸಂಸಾರಗ್ರಂಥಿಯನ್ನು ನಿರ್ಮೂಲವಾಗಿ ನಾಶಗೊಳಿಸುವ ಶಿವಾರ್ಚನೆಯನ್ನು ಮಾಡಬೇಕು.

೧೦. ಶಿವಭಕ್ತನ ಮನೆಯಲ್ಲಿ ಚಿನ್ತಾಮಣಿಯೂ, ಕಲ್ಪವೃಕ್ಷವೂ ನೆಲೆಸಿರುವುವು. ಅವನಿಗೆ ಕುಬೇರನೂ ಸೇವಕನಾಗುವನು.

೧೧. ಶಿವನಲ್ಲಿರುವ ಭಕ್ತಿಯೇ ಲಕ್ಷ್ಮಿ, ಇಷ್ಟವಾದ ಭಕ್ತಿಯೂ, ಶ್ರೇಯಸ್ಸನ್ನುಂಟುಮಾಡುವ ಮೂರ್ತಿಯೂ ಆಗಿರುವುದು.

ಪುಷ್ಪೈಃ ಪಂಚಭಿರಪ್ಯತ್ರ ಪೂಜಯಿತ್ವಾ ಮಹೇಶ್ವರಂ ।
ದಶಾನಾಮಶ್ವಮೇಧಾನಾಂ ಫಲಂ ಪ್ರಾಪ್ನೋತಿ ಮಾನವಃ ॥ ೧೨ ॥
ವೃಷಭಸ್ತತ್ರ ದಾತವ್ಯೋ ವೃಷಭಧ್ವಜಸಂನಿಧೌ ।
ಸರ್ವಪಾತಕನಾಶಾರ್ಥಂ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೧೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೆ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಷೃಭಧ್ವಜೇಶ್ವರಮಾಹಾತ್ಮ್ಯವರ್ಣನಂನಾಮ
ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

---

೧೨. ಮನುಷ್ಯನು ಐದು ಹೂವುಗಳಿಂದ ಶಿವನನ್ನಾರಾಧಿಸಿದರೆ ಹತ್ತು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

೧೩. ಸಂಪೂರ್ಣಯಾತ್ರಾಫಲವನ್ನಿಚ್ಛಿಸುವವರು ಸಕಲ ಪಾಪಗಳ ಪರಿಹಾರಕ್ಕಾಗಿ ಶಿವನ ಸನ್ನಿಧಿಯಲ್ಲಿ ವೃಷಭವನ್ನು ದಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವೃಷಭಧ್ವಜೇಶ್ವರಮಾಹಾತ್ಮ್ಯ ವರ್ಣನವೆಂಬ
ಇನ್ನೂರಇಪ್ಪತ್ತನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಋಣಮೋಚನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಚ ಋಣಮೋಚನಂ ।
ತಸ್ಮಿನ್ದೃಷ್ಟೇ ಋಣಂ ನ ಸ್ಯಾನ್ಮಾತಾಪಿತೃಸಮುದ್ಭವಂ ॥ ೧ ॥
ಪಿತರಸ್ತು ಪುರಾ ಸರ್ವೇ ದಿವ್ಯಕ್ಷೇತ್ರಂ ಸಮಾಗತಾಃ ।
ಪ್ರಭಾಸೇ ತಪಸಾ ಯುಕ್ತಾಃ ಸ್ಥಿತಾ ವರ್ಷಗಣಾನ್ಬಹೂನ್ ॥ ೨ ॥
ಅಗ್ನಿಷ್ವಾತ್ತಾ ಬರ್ಹಿಷದಃ ಸೋಮಪಾ ಆಜ್ಯಪಾಸ್ತಥಾ ।
ಲಿಂಗಂ ಸಂಸ್ಥಾಪಯಾಮಾಸುಃ ಸರ್ವೇ ಭಕ್ತಿಪರಾಯಣಾಃ ॥ ೩ ॥
ತತಃ ಕಾಲೇನ ಮಹತಾ ತುಷ್ಟಸ್ತೇಷಾಂ ಮಹೇಶ್ವರಃ ।
ತತಃ ಪ್ರತ್ಯಕ್ಷತಾಂ ಗತ್ವಾ ವಾಕ್ಯಮೇತದುವಾಚ ಹ ॥ ೪ ॥
ಪರಿತುಷ್ಟೋಽಸ್ಮಿ ಭದ್ರಂ ವೋ ಬ್ರೂತ ಯನ್ಮನಸೇಪ್ಸಿತಂ ॥ ೫ ॥

ಕನ್ನಡದ ಅನುವಾದ

ಋಣಮೋಚನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಋಣಮೋಚನನೆಡೆಗೆ ಹೋಗಬೇಕು. ಆ ಮಹಾದೇವನನ್ನು ಸಂದರ್ಶನಮಾಡಿದ ಕೂಡಲೆ ಮಾತಾಪಿತೃಸಂಬಂಧವಾದ ಋಣವಿರುವುದಿಲ್ಲ.

೨. ಹಿಂದೆ ಸಕಲ ಪಿತೃಗಳೂ ಪ್ರಭಾಸವೆಂಬ ಈ ದಿವ್ಯ ಕ್ಷೇತ್ರಕ್ಕೆ ಬಂದು ಬಹು ವರ್ಷಗಳಕಾಲ ತಪಸ್ಸನ್ನು ಮಾಡುತ್ತಿದ್ದರು.

೩. ಅಗ್ನಿಷ್ವಾತ್ತ, ಬರ್ಹಿಷದ, ಸೋಮಪ, ಆಜ್ಯಪ, ಎಂಬ ಪಿತೃಗಳು ಭಕ್ತಿಯಿಂದಿಲ್ಲಿ ಲಿಂಗವನ್ನು ಸ್ಥಾಪಿಸಿದರು.

೪. ಬಹುಕಾಲದಮೇಲೆ ಮಹೇಶ್ವರನು ಪ್ರತ್ಯಕ್ಷನಾಗಿ ಅವರನ್ನು ಕುರಿತು ಇಂತೆಂದನು.

೫. ನಾನು ನಿಮ್ಮ ಭಕ್ತಿಗೆ ಮೆಚ್ಚಿರುವೆನು. ನಿಮ್ಮ ಅಭೀಷ್ಟವನ್ನು ಹೇಳಿರಿ.

ಪಿತರ ಊಚು :—

ಅಸ್ಮಾಕಂ ದೀಯತಾಂ ವೃತ್ತಿರ್ಜಗತ್ಯಸ್ಮಿನ್ಸ್ವಯಂ ಕೃತೇ ।
ದೇವಾನಾಂ ಚ ಋಷೀಣಾಂ ಚ ಮಾನುಷಾಣಾಂ ಮಹೀತಲೇ ॥ ೬ ॥
ಭವಾನೇವ ಪರೋ ಲೋಕೇ ಸರ್ವೇಷಾಂ ಪದ್ಮಸಂಭವ ।
ಆಗತ್ಯ ವರ್ಣಾಶ್ಚತ್ವಾರ ಇಹ ಯೇ ಶ್ರದ್ಧಯಾನ್ವಿತಾಃ ॥ ೭ ॥
ಪೈತ್ರಕಾತ್ತು ಋಣಾನ್ಮುಕ್ತಾ ಭವಂತು ಗತಕಲ್ಮಷಾಃ ।
ವ್ಯಸ್ತರತ್ವಂ ಸುರಶ್ರೇಷ್ಠ ಯೇಷಾಂ ವೈ ಪಿತರೋ ಗತಾಃ ॥ ೮ ॥
ಸರ್ಪೈರ್ವಹ್ನಿವಿಷೈರ್ವಾ ಯೇ ನಾಶಂ ನೀತಾಃ ಪಿತಾಮಹಾಃ ।
ಅಪುತ್ರಾ ವಾ ಸಪುತ್ರಾ ವಾ ಸಪಿಂಡೀಕರಣಂ ವಿನಾ ॥ ೯ ॥
ನ ಕೃತಾನಿ ಪುರಾ ಯೇಷಾಮೇಕೋದ್ದಿಷ್ಟಾನಿ ಷೋಡಶ ।
ತಥಾ ನೈವ ವೃಷೋತ್ಸರ್ಗೋ ಗೋಹತಾಶ್ಚಾಥ ಚಾನ್ತ್ಯಜೈಃ ॥ ೧೦ ॥
ಅಥಾಪರೇ ಯೇ ಚ ಮೃತಾಃ ಶೌಚೇನ ತು ವಿನಾಕೃತಾಃ ।
ತೇ ಚಾತ್ರ ತರ್ಪಿತಾಃ ಸರ್ವೇ ಪ್ರಯಾನ್ತು ಪರಮಾಂ ಗತಿಂ ॥ ೧೧ ॥

ಶ್ರೀ ಭಗವಾನುವಾಚ :—

ಸ್ನಾತ್ವಾ ತು ಸಲಿಲೇ ಪುಣ್ಯೇ ಪಿತೄಣಾಂ ಚೈವ ತರ್ಪಣಂ ।
ಯೇ ಕರಿಷ್ಯಂತಿ ಮನುಜಾಃ ಪಿತೃಭಕ್ತಿಪರಾಯಣಾಃ ॥ ೧೨ ॥
ಅಹಂ ವರಪ್ರದಸ್ತೇಷಾಂ ತಾರಯಿಷ್ಯಾಮಿ ತತ್ಕ್ಷಣಾತ್ ।
ಪಿತೄನ್ಸರ್ವಾನ್ನ ಸಂದೇಹೋ ಯದಿ ಪಾಪಶತೈರ್ವೃತಾಃ ॥ ೧೩ ॥

೯–೧೧. ಪಿತೃಗಳು ಹೇಳುತ್ತಾರೆ :—ಓ ದೇವ ! ಈ ಪ್ರಪಂಚದಲ್ಲಿ ನೀನು ನಮಗೊಂದು ಜೀವನೋಪಾಯವನ್ನು ಕಲ್ಪಿಸಿಕೊಡು. ನೀನು ಲೋಕದಲ್ಲಿ ದೇವತೆಗಳು, ಋಷಿಗಳು ಮನುಷ್ಯರು ಇವರಿಗೆ ಉತ್ತಮ ದೇವತೆಯಾಗಿರುವೆ, ನಾಲ್ಕು ವರ್ಣದವರೂ ಇಲ್ಲಿಗೆ ಶ್ರದ್ಧೆಯಿಂದ ಬಂದರೆ ಪಿತೃಋಣದಿಂದ ಮುಕ್ತರಾಗಿ ಪಾಪ ರಹಿತರಾಗಲಿ. ಯಾರಪಿತೃಗಳು ಬ್ರಹ್ಮರಾಕ್ಷಸರಾಗಿರುವರೊ; ಯಾರ ಪಿತಾಮಹರು ಸರ್ಪ, ಅಗ್ನಿ, ವಿಷಗಳಿಂದ ಮೃತರಾಗಿರುವರೊ, ಯಾರಿಗೆ ಪುತ್ರರು ಸಪಿಂಡೀಕರಣ, ಏಕೋದ್ದಿಷ್ಟ, ವೃಷೋತ್ಸರ್ಗಗಳನ್ನು ಮಾಡಿರುವುದಿಲ್ಲವೊ; ಯಾರು ಅಂತ್ಯಜರಿಂದ ಗೋವಧೆಯನ್ನು ಮಾಡಿಸಿರುವರೊ, ಯಾರು ಶೌಚವಿಲ್ಲದೆ ಮೃತರಾದರೊ, ಅವರೆಲ್ಲ ಮಕ್ಕಳುಳ್ಳವರಾಗಲಿ, ಇಲ್ಲದವರಾಗಲಿ ಇಲ್ಲಿ ತರ್ಪಣಮಾಡುವುದರಿಂದ ಉತ್ತಮಗತಿ ಯನ್ನು ಹೊಂದಲಿ.

೧೨–೧೩. ಶ್ರೀ ಭಗವಂತನು ಹೇಳುತ್ತಾನೆ :—ಈ ಪುಣ್ಯಜಲದಲ್ಲಿ ಮಿಂದು ಭಕ್ತಿಯಿಂದ ತರ್ಪಣವನ್ನು ಮಾಡಿದ ಮಾನವರ ಪಿತೃಗಳು ಪಾಪಿಷ್ಠರಾಗಿದ್ದರೂ, ಅವರನ್ನು ಉದ್ಧಾರಮಾಡಿ ವರವನ್ನೀಯುವೆನು.

ಅಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಯೋ ಲಿಂಗಂ ಪೂಜಯಿಷ್ಯತಿ ।
ಯುಷ್ಮಾಭಿಃ ಸ್ಥಾಪಿತಂ ಲಿಂಗಂ ಸ ಮುಕ್ತಃ ಪೈತೃಕಾದೃಣಾತ್ ॥ ೧೪ ॥
ಯಸ್ಮಾದೃಣಾತ್ಪ್ರಮುಚ್ಯೇತ ಅಸ್ಯ ಲಿಂಗಸ್ಯ ದರ್ಶನಾತ್ ।
ತಸ್ಮಾನ್ಮಯಾ ಕೃತಂ ನಾಮ ಹ್ಯೇತಸ್ಯ ಋಣಮೋಚನಂ ॥ ೧೫ ॥

ಈಶ್ವರ ಉವಾಚ :—

ಹಿರಣ್ಯಂ ಮಸ್ತಕೇ ದತ್ವಾ ಯಃ ಸ್ನಾತಿ ಋಣಮೋಚನೇ ।
ಆತ್ಮಾ ವೈ ತಾರಿತಸ್ತೇನ ದತ್ತಂ ಭವತಿ ಗೋಶತಂ ॥ ೧೬ ॥
ಏವಮುಕ್ತ್ವಾ ಸ ಭಗವಾಂಸ್ತತ್ರೈವಾನ್ತರಧೀಯತ ।
ತಸ್ಮಾತ್ಸರ್ವಪ್ರಯತ್ನೇನ ತತ್ರ ಶ್ರಾದ್ಧಂ ಸಮಾಚರೇತ್ ।
ಪೂಜಯೇತ್ತನ್ಮಹಾದೇವಿ ಪಿತೃಲಿಂಗಂ ಸುರಪ್ರಿಯಂ ॥ ೧೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಋಣಮೋಚನಮಾಹಾತ್ಮ್ಯವರ್ಣನಂ ನಾಮ
॥ ಏಕವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧೪. ನೀನು ಪ್ರತಿಷ್ಠೆಮಾಡಿರುವ ಲಿಂಗವನ್ನು ಈ ತೀರ್ಥದಲ್ಲಿ ಮಿಂದು ತರ್ಪಣ ಮಾಡಿದ ಮನುಷ್ಯನು ಪಿತೃಋಣದಿಂದ ಮುಕ್ತನಾಗುವನು.

೧೫. ಈ ಪಿತೃಲಿಂಗದ ದರ್ಶನದಿಂದ ಜನರು ಋಣಮುಕ್ತರಾಗುವುದರಿಂದ ಇದಕ್ಕೆ ಋಣಮೋಚನವೆಂದು ಹೆಸರನ್ನಿಟ್ಟಿರುವೆನು.

೧೬. ಈ ಋಣಮೋಚನದಲ್ಲಿ ಸುವರ್ಣವನ್ನು ತಲೆಯಲ್ಲಿಟ್ಟುಕೊಂಡು ಸ್ನಾನ ಮಾಡಿದರೆ ಆತ್ಮೋದ್ಧಾರವಾಗುವುದು. ಮತ್ತು ಶತಗೋವುಗಳನ್ನು ದಾನಮಾಡಿದ ಪುಣ್ಯವುಂಟಾಗುವುದು.

೧೭. ಭಗವಂತನು ಹೀಗೆಂದು ನುಡಿದು ಅಲ್ಲಿಯೇ ಅಡಗಿಹೋದನು. ಆದ್ದರಿಂದ ಅತಿ ಪ್ರಯತ್ನದಿಂದ ಅಲ್ಲಿ ಶ್ರಾದ್ಧವನ್ನಾಚರಿಸಬೇಕು. ಮತ್ತು ದೇವಪ್ರಿಯವಾದ ಆ ಪಿತೃ ಲಿಂಗವನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಋಣಮೋಚನಮಾಹಾತ್ಮ್ಯವರ್ಣನವೆಂಬ
ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾವಿಂಶತ್ಯುತ್ತರಶತತಮೋಽಧ್ಯಾಯಃ

ರುಕ್ಮವತೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಲಿಂಗಂ ರುಕ್ಮವತ್ಯಾ ಪ್ರತಿಷ್ಠಿತಂ ।
ಸರ್ವಪಾಪೋಪಶಮನಂ ಸರ್ವಕಾಮಫಲಪ್ರದಂ ॥ ೧ ॥
ತತ್ರ ಸ್ನಾತ್ವಾ ಮಹಾತೀರ್ಥೇ ಲಿಂಗಂ ಸಂಪ್ಲಾವ್ಯ ಯತ್ನತಃ ।
ವಿಪ್ರೇಭ್ಯೋ ದಾಪಯೇದ್ವಿತ್ತಂ ಮುಚ್ಯತೇ ಸರ್ವಪಾತಕೈಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರುಕ್ಮವತೀಶ್ವರಮಾಹಾತ್ಮ್ಯವರ್ಣನಂನಾಮ
ದ್ವಾವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ರುಕ್ಮವತೀಶ್ವರಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ರುಕ್ಮವತಿಯು ಪ್ರತಿಷ್ಠೆಮಾಡಿರುರುವುದೂ, ಸಕಲ ಪಾಪಗಳನ್ನು ಪರಿಹರಿಸುವುದೂ, ಸಮಸ್ತೇಷ್ಟಾರ್ಥಗಳನ್ನೀಯುವುದೂ ಆದ ಒಂದು ಪಾರಮೇಶ್ವರ ಲಿಂಗವಿರುವುದು.

೨. ಅಲ್ಲಿರುವ ಮಹಾತೀರ್ಥದಲ್ಲಿ ಮಿಂದು ಲಿಂಗಕ್ಕೆ ಅಭಿಷೇಕಮಾಡಿ ಬ್ರಾಹ್ಮಣರಿಗೆ ದ್ರವ್ಯವನ್ನು ದಾನಮಾಡಿದವನು ಸಕಲ ಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರುಕ್ಮವತೀಶ್ವರಮಾಹಾತ್ಮ್ಯವರ್ಣನವೆಂಬ
ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯೋವಿಂಶತ್ಯುತ್ತರಶತತಮೋಽಧ್ಯಾಯಃ

ಪ್ರೇತತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ ಃ—

ತತೋ ಗಚ್ಛೇನ್ಮಹಾದೇವಿ ಲಿಂಗಂ ತ್ರೈಲೋಕ್ಯಪೂಜಿತಂ ।
ಗಾತ್ರೋತ್ಸರ್ಗಮಿತಿ ಖ್ಯಾತಂ ತಸ್ಯ ದಕ್ಷಿಣತಃ ಸ್ಥಿತಃ ॥ ೧ ॥

ಯತ್ರ ಗಾತ್ರಂ ಪರಿತ್ಯಕ್ತಂ ಬಲಭದ್ರೇಣ ಧೀಮತಾ ।
ಅನ್ಯೈಶ್ಚೈವ ಮಹಾಭಾಗ್ಯೈರ್ಯಾದವೈಸ್ತತ್ರ ಸಂಯುಗೇ ॥ ೨ ॥

ಯತ್ರ ತೇ ಯಾದವಾಃ ಕ್ಷೀಣಾಃ ಬ್ರಹ್ಮಶಾಪಬಲಾಹಿನಾ ।
ಏತತ್ಪುರುಷೋತ್ತಮಂ ಕ್ಷೇತ್ರಂ ಸಮನ್ತಾದ್ಧನುಷಾಂ ಶತಂ ॥ ೩ ॥

ಯತ್ರ ಸಾಕ್ಷಾತ್ಸ್ವಯಂ ದೇವಿ ತಿಷ್ಠತೇ ಪುರುಷೋತ್ತಮಃ ।
ತದೇವ ವೈಷ್ಣವಂ ಕ್ಷೇತ್ರಂ ಕಲೌ ಪಾತಕನಾಶನಂ ॥ ೪ ॥

ಕನ್ನಡದ ಅನುವಾದ

ಪ್ರೇತತೀರ್ಥಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಆ ರುಕ್ಮವತೀಶ್ವರನ ದಕ್ಷಿಣದಲ್ಲಿರುವ ತ್ರೈಲೋಕ್ಯ ಪೂಜ್ಯವಾದ ಗಾತ್ರೋತ್ಸರ್ಗವೆಂಬ ಶಿವಲಿಂಗದೆಡೆಗೆ ಹೋಗಬೇಕು.

೨. ಇಲ್ಲಿ ಬಲರಾಮನೂ, ಇತರ ಯಾದವರೂ ಯುದ್ಧದಲ್ಲಿ ಶರೀರವನ್ನು ತ್ಯಜಿಸುವರು.

೩. ಯಾದವರು ಇಲ್ಲಿ ಬ್ರಹ್ಮಶಾಪವೆಂಬ ಬಲಿಷ್ಠವಾದ **ಸರ್ಪದಿಂದ ನಷ್ಟ**ರಾದರು. ಈ ಪುರುಷೋತ್ತಮಕ್ಷೇತ್ರವು ಸುತ್ತಲೂ ನೂರು ಬಿಲ್ಲುಗಳ ವಿಸ್ತೀರ್ಣವಾದುದು.

೪. ಇಲ್ಲಿ ಮಹಾವಿಷ್ಣುವು ತಾನೇ ನೆಲೆಸಿರುವನು. ಈ ವೈಷ್ಣವ ಕ್ಷೇತ್ರವು ಕಲಿಯುಗದಲ್ಲಿ ಪಾಪಗಳನ್ನು ನಿವಾರಿಸುವುದು.

ರಹಸ್ಯಂ ಪರಮಂ ದೇವಿ ತೀರ್ಥಾನಾಂ ಪ್ರವರಂ ಹಿ ತತ್ ।
ಪೂರ್ವಂ ಕೃತಯುಗೇ ದೇವಿ ಪ್ರೇತತೀರ್ಥಂ ಚ ಸಂಸ್ಮೃತಂ ।
ಕಲೌ ಯುಗೇ ತು ಸಂಪ್ರಾಪ್ತೇ ಗಾತ್ರೋತ್ಸರ್ಗಮಿತಿ ತ್ವಭೂತ್ ॥ ೫ ॥
ಋಣಮೋಚನಪಾರ್ಶ್ವೇ ತು ಮಧ್ಯೇ ತು ಪಾಪಮೋಚನಾತ್ ।
ಏತನ್ಮಧ್ಯಂ ಸಮಾಶ್ರಿತ್ಯ ಮೃತಃ ಪಾಪೈರ್ವಿಮುಚ್ಯತೇ ॥ ೬ ॥
ತಸ್ಯ ಕಿಂ ವರ್ಣ್ಯತೇ ದೇವಿ ಯತ್ರಾನಂತಫಲಂ ಮಹತ್ ।
ಅಶ್ವಮೇಧಸಹಸ್ರಸ್ಯ ಫಲಂ ಸ್ನಾತ್ವಾ ಹ್ಯವಾಪ್ಯತೇ ॥ ೭ ॥
ಯತ್ರಾಶ್ವತ್ಥಂ ಸಮಾಸಾದ್ಯ ಸಮಾಧಿನ್ಯಸ್ತಮಾನಸಃ ।
ಮುಮೋಚ ದುಸ್ತ್ಯಜಾನ್ಪ್ರಾಣಾನ್ಬ್ರಹ್ಮದ್ವಾರೇಣ ಕೇಶವಃ ॥ ೮ ॥
ತತ್ರ ನಾರಾಯಣಂ ಸಾಕ್ಷಾದ್ಬಲಭದ್ರಂ ಚ ರುಕ್ಮಿಣೀಂ ।
ಪೂಜಯಿತ್ವಾ ವಿಧಾನೇನ ಮುಚ್ಯತೇ ಪಾತಕತ್ರಯಾತ್ ॥ ೯ ॥
ತತ್ರ ಸ್ನಾತ್ವಾ ನರೋ ಭಕ್ತ್ಯಾಯಃ ಸಂತರ್ಪಯತೇ ಪಿತೄನ್ ।
ಪ್ರೇತತ್ವಾತ್ಪಿತರೋ ಮುಕ್ತ್ವಾ ಭವಂತಿ ಶ್ರಾದ್ಧದಾಯಿನಃ ॥ ೧೦ ॥
ಗೋಘ್ನಃ ಸುರಾಪೋ ದುರ್ಮೇಧಾ ಬ್ರಹ್ಮಹಾ ಗುರುತಲ್ಪಗಃ ।
ತತ್ರ ಸ್ನಾತ್ವಾ ನರಃ ಸದ್ಯೋ ವಿಪಾಪಃ ಸಂಪ್ರಪದ್ಯತೇ ॥ ೧೧ ॥

---

೫. ಇದು ಉತ್ತಮ ರಹಸ್ಯವಾದುದೂ, ತೀರ್ಥಗಳಲ್ಲಿ ಶ್ರೇಷ್ಠವಾದುದೂ ಆಗಿರುವುದು. ದೇವಿ! ಹಿಂದೆ ಕೃತಯುಗದಲ್ಲಿ ಇದು ಪ್ರೇತತೀರ್ಥವೆಂದೂ, ಕಲಿಯುಗದಲ್ಲಿ ಗಾತ್ರೋತ್ಸರ್ಗವೆಂದೂ ಪ್ರಸಿದ್ಧವಾಯಿತು.

೬. ಋಣಮೋಚನತೀರ್ಥದ ಪಾರ್ಶ್ವದಲ್ಲಿರುವ ಈ ತೀರ್ಥವು ಪಾಪವನ್ನು ನಾಶಗೊಳಿಸುವುದರಿಂದ ಇದರ ನಡುವೆ ಮೃತನಾದವನು ಪಾಪಮುಕ್ತನಾಗುವನು.

೭, ಇದರ ಯಾತ್ರೆಯನ್ನು ಮಾಡಿದವನು ಅತಿಶಯ ಫಲವನ್ನು ಪಡೆಯುವನು. ಇಲ್ಲಿ ಮಿಂದವನು ಸಾವಿರ ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

೮. ಶ್ರೀಕೃಷ್ಣನು ಇಲ್ಲಿ ಅಶ್ವತ್ಥವೃಕ್ಷವನ್ನಾಶ್ರಯಿಸಿ ಸಮಾಧಿನಿರತನಾಗಿ ತ್ಯಜಿಸಲಾರದ ಪ್ರಾಣವನ್ನು ಬ್ರಹ್ಮದ್ವಾರದಿಂದ ತ್ಯಜಿಸಿದನು.

೯. ಇಲ್ಲಿ ಮಾನವನು ಶ್ರೀಮನ್ನಾರಾಯಣನನ್ನೂ, ಬಲರಾಮನನ್ನೂ, ರುಕ್ಮಿಣಿಯನ್ನೂ ಪೂಜಿಸಿ ಪಾತಕತ್ರಯಗಳಿಂದ ಮುಕ್ತನಾಗುವನು.

೧೦. ಮನುಷ್ಯನು ಈ ಪ್ರದೇಶದಲ್ಲಿ ಮಿಂದು ಭಕ್ತಿಯಿಂದ ಪಿತೃತರ್ಪಣಗೈದು ಶ್ರಾದ್ಧಮಾಡಿದರೆ ಅವನ ಪಿತೃಗಳು ಪ್ರೇತತ್ವದಿಂದ ಮುಕ್ತರಾಗುವರು.

೧೧. ಗೋಹತ್ಯೆ ಬ್ರಹ್ಮಹತ್ಯೆಗಳನ್ನೆಸಗಿದವರೂ, ಸುರಾಪಾನ ಮಾಡಿದವರೂ, ಗುರುಭಾರ್ಯಾಗಮನಮಾಡಿದವರೂ ಅಲ್ಲಿ ಮಿಂದು ಪಾಪರಹಿತರಾಗುವರು.

ಬಾಲ್ಯೇ ವಯಸಿ ಯತ್ಪಾಪಂ ವಾರ್ಧಕೇ ಯೌವನೇಽಪಿ ವಾ ।
ಅಜ್ಞಾನಾತ್ಜ್ಞಾನತೋ ವಾಪಿ ಯಃ ಕರೋತಿ ನರಃ ಪ್ರಿಯೇ ।
ತತ್ರ ಸ್ನಾತ್ವಾ ಪ್ರಮುಚ್ಯೇತ ತೀರ್ಥೇ ಗಾತ್ರಪ್ರಮೋಚನೇ ॥ ೧೨ ॥
ತತ್ರ ಪಿಂಡಪ್ರದಾನೇನ ಪಿತೄಣಾಂ ಜಾಯತೇ ಪರಾ ।
ತೃಪ್ತಿರ್ವರ್ಷಶತಂ ಯಾವದೇತದಾಹ ಪುರಾ ಹರಿಃ ॥ ೧೩ ॥
ಯಃ ಪುನಶ್ಚಾನ್ನದಾನಂ ತು ತತ್ರ ಕುರ್ಯಾತ್ಸಮಾಹಿತಃ ।
ತಸ್ಯಾನ್ವಯೇಽಪಿ ದೇವೇಶಿ ನ ಪ್ರೇತೋ ಜಾಯತೇ ನರಃ ॥ ೧೪ ॥

ಶ್ರೀ ದೇವ್ಯುವಾಚ :—

ಪ್ರೇತತೀರ್ಥಮಿತಿ ಪ್ರೋಕ್ತಂ ಪಶ್ಚಾದ್ಗಾತ್ರವಿಮೋಚನಂ ।
ವದ ಮೇ ದೇವದೇವೇಶ ಪ್ರೇತತೀರ್ಥಸ್ಯ ಕಾರಣಂ ॥ ೧೫ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಪ್ರೇತತೀರ್ಥಸ್ಯ ಕಾರಣಂ ।
ಯಚ್ಛ್ರುತ್ವಾ ಮಾನವೋ ಭಕ್ತ್ಯಾ ಮುಕ್ತಃ ಸ್ಯಾತ್ಸರ್ವಕಿಲ್ಬಿಷೈಃ ॥ ೧೬ ॥
ಪುರಾಸೀದ್ಗೌತಮೋ ನಾಮ ಮಹರ್ಷಿಃ ಶಂಸಿತವ್ರತಃ ।
ಭೃಗುಕುಲಾತ್ಸಮಾಯಾತಃ ಕ್ಷೇತ್ರೇ ಪ್ರಾಭಾಸಿಕೇ ಶುಭೇ ॥ ೧೭ ॥

---

೧೨. ಮನುಷ್ಯನು ಬಾಲ್ಯ, ಯೌವನ, ವಾರ್ಧಿಕ್ಯಗಳಲ್ಲಿ ಜ್ಞಾನಾಜ್ಞಾನಗಳಿಂದ ಮಾಡಿದ ಪಾಪಗಳು ಆ ಗಾತ್ರಮೋಚನತೀರ್ಥದಲ್ಲಿ ಸ್ನಾನಮಾಡುವುದರಿಂದ ಪರಿಹಾರವಾಗುವುವು.

೧೩. ಅಲ್ಲಿ ಪಿಂಡಪ್ರದಾನಮಾಡುವುದರಿಂದ ಪಿತೃಗಳಿಗೆ ನೂರುವರ್ಷಗಳವರೆಗೆ ತೃಪ್ತಿಯಾಗುವುದೆಂದು ಹಿಂದೆ ವಿಷ್ಣುವು ಹೇಳಿರುವನು.

೧೪. ದೇವೇಶಿ! ಅಲ್ಲಿ ಸಾವಧಾನಮನಸ್ಸಿನಿಂದ ಅನ್ನದಾನಮಾಡಿದವನ ವಂಶದಲ್ಲಿ ಹುಡಿದವನು ಪ್ರೇತವಾಗುವುದಿಲ್ಲ.

೧೫. ಶ್ರೀದೇವಿಯು ಹೇಳುತ್ತಾಳೆ:—ನಾಥ! ಇದಕ್ಕೆ ಮೊದಲು ಪ್ರೇತತೀರ್ಥವೆಂದೂ, ಅನಂತರ ಗಾತ್ರವಿಮೋಚನತೀರ್ಥವೆಂದೂ ಹೆಸರಾಗಿದೆಯೆಂದು ಹೇಳಿರುವೆ. ಇದಕ್ಕೆ ಕಾರಣವೇನು ? ಹೇಳು.

೧೬. ಈಶ್ವರನು ಹೇಳುತ್ತಾನೆ :—ದೇವಿ ! ಪ್ರೇತತೀರ್ಥವೆಂದು ಹೆಸರಾಗಲು ಕಾರಣವನ್ನು ಹೇಳುವೆನು, ಕೇಳು. ಮಾನವನು ಇದನ್ನು ಭಕ್ತಿಯಿಂದ ಕೇಳಿದರೆ ಸಮಸ್ತ ಪಾಪಗಳಿಂದಲೂ ಮುಕ್ತನಾಗುವನು.

೧೭—೧೯. ಹಿಂದೆ ಮಹಾ ತೀಕ್ಷ್ಣವಾದ ನಿಯಮವುಳ್ಳ ಗೌತಮನೆಂಬ ಮಹರ್ಷಿಯಿದ್ದನು. ಅವನು ಉತ್ತರಾಯಣದಲ್ಲಿ ಸೋಮೇಶನನ್ನು ನೋಡಲಿಚ್ಛೆಯಿಂದ

ಅಯನೇ ಚೋತ್ತರೇ ಪುಣ್ಯೇ ಶ್ರೀಸೋಮೇಶದಿದೃಕ್ಷಯಾ ।
ದೃಷ್ಟ್ವಾ ಸೋಮೇಶ್ವರಂ ದೇವಂ ಸ್ನಾತ್ವಾ ತೀರ್ಥೇಷು ಕೃತ್ಸ್ನಶಃ ॥ ೧೮ ॥
ಸ ಗಚ್ಛಂಸ್ತೀರ್ಥಯಾತ್ರಾಯಾಂ ಗಾತ್ರೋತ್ಸರ್ಗಂ ತತೋ ಗತಃ ॥ ೧೯ ॥
ಅಥಾಽಸೌ ಬ್ರಾಹ್ಮಣೋ ದೇವಿ ಯಾವತ್ತೀರ್ಥಮುಪಾಗತಃ ।
ತಾವದ್ವಿಷ್ಣುಪ್ರಿಯಂ ತತ್ರ ದದೃಶೇ ವೈಷ್ಣವಂ ವನಂ ॥ ೨೦ ॥
ಪುರುಷೋತ್ತಮನಾಮಾಢ್ಯಂ ಕ್ಷೇತ್ರಂ ಚ ಧನುಷಾಂ ಶತಂ ।
ತಸ್ಮಿನ್ಕ್ಷೇತ್ರೇ ಸ ಚಾಪಶ್ಯತ್ಪಂಚ ಪ್ರೇತಾನ್ಸುದಾರುಣಾನ್ ॥ ೨೧ ॥
ಮಹಾವೃಕ್ಷಸಮಾರೂಢಾನ್ಮಹಾಕಾಯಾನ್ಮಹೋತ್ಕಟಾನ್ ।
ಊರ್ಧ್ವಕೇಶಾಞ್ಛಂಕುಕರ್ಣಾನ್ಸ್ನಾಯುನದ್ಧಕಲೇವರಾನ್ ॥ ೨೨ ॥
ವಿಮಾಂಸರುಧಿರಾನ್ನಗ್ನಾನಥ ಕೃಷ್ಣಕಲೇವರಾನ್ ।
ದೃಷ್ಟ್ವಾಸೌ ಭಯಸಂತ್ರಸ್ತೋ ವಿನಷ್ಟೋಽಸ್ಮೀತ್ಯಚಿಂತಯತ್ ॥ ೨೩ ॥
ಧ್ಯಾತ್ವಾಽಹ ಸುಚಿರಂ ಕಾಲಂ ಧೈರ್ಯಮಾಸ್ಥಾಯ ಯತ್ನತಃ ।
ಕೇ ಯೂಯಂ ವಿಕೃತಾಕಾರಾ ದೃಷ್ಟಾಃ ಪೂರ್ವಂ ಮಯಾ ಪುರಾ ॥೨೪॥

ಭೃಗುಕಲ್ಪದಿಂದ ಪ್ರಾಭಾಸಿಕಕ್ಷೇತ್ರಕ್ಕೆ ಬಂದನು. ಅವನು ಅಲ್ಲಿ ಸೋಮೇಶ್ವರನನ್ನು ಕಂಡು, ತೀರ್ಥಗಳಲ್ಲಿ ಮಿಂದು ತೀರ್ಥಯಾತ್ರೆಗೆ ಹೋಗುತ್ತ ಗಾತ್ರೋತ್ಸರ್ಗ ತೀರ್ಥಕ್ಕೆ ಬಂದನು.

೨೦. ಬಳಿಕ ಈ ಗೌತಮನು ಗಾತ್ರೋತ್ಸರ್ಗತೀರ್ಥದ ಎಲ್ಲೆಗೆ ಬರುತ್ತ ವಿಷ್ಣುಪ್ರಿಯವಾದ ವೈಷ್ಣವಕ್ಷೇತ್ರವನವನ್ನು ಕಂಡನು.

೨೧. ಇವನು ನೂರು ಬಿಲ್ಲುಗಳ ಪ್ರಮಾಣದ ಆ ಪುರುಷೋತ್ತಮ ಕ್ಷೇತ್ರದಲ್ಲಿ ಭಯಂಕರವಾದ ಐದು ಪ್ರೇತಗಳನ್ನು ಕಂಡನು.

೨೨–೨೩. ಅಲ್ಲಿ ದೊಡ್ಡಮರವನ್ನೇರಿಕುಳಿತಿರುವುವೂ, ದೊಡ್ಡಶರೀರವುಳ್ಳುವೂ. ಅತಿಭಯಂಕರಗಳೂ, ಮೇಲ್ಮುಖವಾದ ಕೂದಲುಳ್ಳುವೂ, ಶಂಕುವಿನಂತೆ ಕಿವಿಯುಳ್ಳುವೂ, ನರಗಳ ಗೂಡಿನ ದೇಹವುಳ್ಳುವೂ, ರಕ್ತಮಾಂಸಗಳಿಲ್ಲದುವೂ, ಕರಿಯದೇಹವುಳ್ಳುವೂ, ಆದ ಆ ಪ್ರೇತಗಳನ್ನು ಕಂಡು ಅವನುಭಯದಿಂದ ಇನ್ನುನಾನುಸತ್ತೆನೆಂದು ಚಿಂತಾಕ್ರಾಂತನಾದನು.

೨೪–೨೫. ಬಹಳ ಹೊತ್ತು ಆಲೋಚಿಸಿ ಪ್ರಯತ್ನದಿಂದ ಧೈರ್ಯಶಾಲಿ “ಭಯಂಕರಾಕಾರವುಳ್ಳ ನೀವಾರು ? ನಾನು ಯಾವಾಗಲೂ ನಿಮ್ಮನ್ನು

ನ ಕದಾಚಿದ್ವ್ಯಥಾ ಯೂಯಂ ಕಿಮರ್ಥಂ ಕ್ಷೇತ್ರಮಧ್ಯತಃ ।
ಧಾವಮಾನಾಃ ಸುದುಃಖಾರ್ತಾ ಏತನ್ಮೇ ಕೌತುಕಂ ಮಹತ್ ॥ ೨೫ ॥

ಪ್ರೇತಾ ಊಚುಃ :—

ವಯಂ ಪ್ರೇತಾ ಮಹಾಭಾಗ ದೂರಾದಿಹ ಸಮಾಗತಾಃ ।
ಶ್ರುತ್ವಾ ತೀರ್ಥವರಂ ಪುಣ್ಯಂ ಪ್ರವೇಶಂ ನ ಲಭಾಮಹೇ ॥ ೨೬ ॥
ಗಣೈರಂತರ್ಧಾನಗತೈಃ ಪ್ರಹಾರೈರ್ಜರ್ಜರೀಕೃತಾಃ ।
ಲೇಖಕೋ ರೋಹಕಶ್ಚೈವ ಸೂಚಕಃ ಶೀಘ್ರಗಸ್ತಥಾ ॥ ೨೭ ॥
ಅಹಂ ಪರ್ಯುಷಿತೋ ನಾಮ ಪಞ್ಚಮಃ ಪಾಪಕೃತ್ತಮಃ ॥ ೨೮ ॥

ಗೌತಮ ಉವಾಚ :—

ಪ್ರೇತಯೋನೌ ಪ್ರವೃತ್ತಾನಾಂ ಕೇನ ನಾಮಾನಿ ಕೃತ್ಸ್ನಶಃ ।
ಯುಷ್ಮಾಕಂ ನಿರ್ಮಿತಾನ್ಯೇವಮೇತನ್ಮೇ ಕೌತುಕಂ ಮಹತ್ ॥ ೨೯ ॥

ಪ್ರೇತಾ ಊಚುಃ :—

ಯಾಚಮಾನಸ್ಯ ವಿಪ್ರಸ್ಯ ಲಿಖತ್ಯೇಷ ಧರಾತಲೇ ।
ನೋತ್ತರಂ ಪಠತೇ ಕಿಂಚಿತ್ತೇನಾಸೌ ಲೇಖಕಃ ಸ್ಮೃತಃ ॥ ೩೦ ॥

ಕಾಣಲಿಲ್ಲ. ನೀವು ಏತಕ್ಕೆ ಈ ಕ್ಷೇತ್ರದ ಮಧ್ಯದಲ್ಲಿ ದುಃಖದಿಂದ ಓಡುತ್ತಿರುವಿರಿ. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವುಂಟಾಗಿದೆ". ಎಂದು ಪ್ರಶ್ನಿಸಿದನು.

೨೬. ಪ್ರೇತಗಳು ಹೇಳುತ್ತವೆ :—ಎಲೈ ಭಾಗ್ಯಶಾಲಿಯೆ ! ಇದು ಉತ್ತಮತೀರ್ಥವೆಂದು ಕೇಳಿ ನಾವು ದೂರದೇಶದಿಂದಿಲ್ಲಿಗೆ ಬಂದ ಪ್ರೇತಗಳು. ಆದರೆ ನಮಗಿಲ್ಲಿ ಪ್ರವೇಶವು ದೊರೆಯಲಿಲ್ಲ.

೨೭—೨೮. ಇಲ್ಲಿ ಅಡಗಿಕೊಂಡಿರುವ ಪ್ರಮಥಗಣಗಳು ನಮ್ಮನ್ನು ಹೊಡೆದು ಪುಡಿಮಾಡಿರುವುವು. ಲೇಖಕ, ರೋಹಕ, ಸೂಚಕ, ಶೀಘ್ರಗ, ಪರ್ಯುಷಿತ ಎಂಬ ಐದುಮಂದಿ ಪ್ರೇತಗಳಲ್ಲಿ ನಾನು ಐದನೆಯ ಪಾಪಿಷ್ಠನಾದ ಪರ್ಯುಷಿತನಾಗಿರುವೆನು.

೨೯. ಗೌತಮನು ಹೇಳುತಾನೆ :—ಪ್ರೇತರಾಗಿ ಹುಟ್ಟಿದ ನಿಮಗೆ ಇಂತಹ ಹೆಸರನ್ನು ಯಾರಿಟ್ಟರು ? ಈ ವಿಷಯದಲ್ಲಿ ನನಗೆ ಬಹಳ ಕುತೂಹಲವುಂಟಾಗಿದೆ.

೩೦. ಪ್ರೇತಗಳು ಹೇಳುತ್ತವೆ :—ಇವನು, ಬ್ರಾಹ್ಮಣನು ತನ್ನ ಹತ್ತಿರ ಬಂದು ಬೇಡುತ್ತಿರಲು ಭೂಮಿಯನ್ನು ಕೆರೆಯುತ್ತ ಉತ್ತರ ಹೇಳುತ್ತಿರಲಿಲ್ಲ. ಆದ್ದರಿಂದ ಇವನು ಲೇಖಕನಾದನು.

ದ್ವಿತೀಯೋ ಬ್ರಾಹ್ಮಣಭಯಾತ್ಪ್ರಾಸಾದಮಧಿರೋಹತಿ ।
ತತೋಽಸೌ ರೋಹಕಾಖ್ಯೋಽಭೂಚ್ಛೃಣು ವಿಪ್ರ ತೃತೀಯಕಂ ॥ ೩೧ ॥
ಸೂಚಿತಾ ಬಹವೋಽನೇನ ಬ್ರಾಹ್ಮಣಾ ವಿತ್ತಸಂಯುತಾಃ ।
ರಾಜ್ಞೇ ಪಾಪೇನ ತೇನಾಸೌ ಸೂಚಕೋ ಭುವಿ ವಿಶ್ರುತಃ ॥ ೩೨ ॥
ಬ್ರಾಹ್ಮಣೈಃ ಪ್ರಾರ್ಥ್ಯಮಾನಸ್ತು ಶೀಘ್ರಂ ಧಾವತಿ ನಿತ್ಯಶಃ ।
ನ ಕದಾಚಿದ್ದದಾತಿ ಸ್ಮ ತೇನಾಸೌ ಶೀಘ್ರಗಃ ಸ್ಮೃತಃ ॥ ೩೩ ॥
ಮಯಾ ಕದನ್ನಂ ದತ್ತಂ ಚ ಪರ್ಯುಷಿತಂ ಬ್ರಾಹ್ಮಣೋತ್ತಮೇ ।
ಬ್ರಾಹ್ಮಣೇಭ್ಯಃ ಸದಾ ದಾನಂ ಮಿಷ್ಟಾನ್ನೇನ ತು ಪೋಷಣಂ ।
ತಸ್ಮಾತ್ಪರ್ಯುಷಿತೋನಾಮ ಸಂಜಾತೋಽಹಂ ಧರಾತಲೇ ॥ ೩೪ ॥

ಗೌತಮ ಉವಾಚ :—

ನ ವಿನಾ ಭೋಜನೇನೈವ ವರ್ತಂತೇ ಪ್ರಾಣಿನೋ ಭುವಿ ।
ಕಿಮಾಹಾರಾ ಭವಂತೋ ವೈ ವದಧ್ವಂ ಮಮ ಕೌತುಕಾತ್ ॥ ೩೫ ॥

ಪ್ರೇತಾ ಊಚು :—

ಪ್ರಾಪ್ತೇ ಭೋಜನಕಾಲೇ ತು ಯತ್ರ ಯುದ್ಧಂ ಪ್ರವರ್ತತೇ ।
ತಸ್ಯಾನ್ನಸ್ಯ ರಸಂ ಸರ್ವಂ ಭುಂಜಾಮೋ ದ್ವಿಜಸತ್ತಮ ॥ ೩೬ ॥

---

೩೧. ಈ ಎರಡನೆಯವನು ಬ್ರಾಹ್ಮಣನ ಭಯದಿಂದ ಮನೆಯ ಮಹಡಿಯನ್ನು ಹತ್ತಿಹೋಗುತ್ತಿದ್ದನು. ಆದ್ದರಿಂದ ರೋಹಕನಾದನು.

೩೨. ಈ ಮೂರನೆಯವನು ದ್ರವ್ಯವುಳ್ಳ ಬ್ರಾಹ್ಮಣರನ್ನು ದೊರೆಗೆ ತಿಳಿಸುತ್ತಿದ್ದನು. ಆ ಪಾಪದಿಂದ ಸೂಚಕನೆಂದ ಪ್ರಸಿದ್ಧನಾದನು.

೩೩. ಇವನು ಬ್ರಾಹ್ಮಣರು ಬೇಡಲು ಬಂದ ಕೂಡಲೆ ಶೀಘ್ರವಾಗಿ ಓಡುತ್ತಿದ್ದನು. ಒಂದು ಸಾರಿಯೂ ದಾನಮಾಡುತ್ತಿರಲಿಲ್ಲ. ಅದರಿಂದ ಶೀಘ್ರಗನೆಂದು ಪ್ರಸಿದ್ಧನಾದನು.

೩೪. ನಾನು ಉತ್ತಮ ಬ್ರಾಹ್ಮಣನಿಗೆ ಮಿಷ್ಟಾನ್ನವನ್ನಿತ್ತು ಪೋಷಿಸುವುದಕ್ಕೆ ಬದಲಾಗಿ ತಂಗಳನ್ನವನ್ನು ದಾನಮಾಡಿದೆನು. ಅದರಿಂದ ಭೂಮಿಯಲ್ಲಿ ಪರ್ಯುಷಿತನೆಂದು ಪ್ರಸಿದ್ಧನಾದೆನು.

೩೫. ಗೌತಮನು ಹೇಳುತ್ತಾನೆ .—ಭೂಮಿಯಲ್ಲಿ ಪ್ರಾಣಿಗಳು ಭೋಜನವಿಲ್ಲದೆ ಜೀವಿಸುವುದಿಲ್ಲ. ನೀವು ಏನನ್ನು ತಿಂದು ಜೀವಿಸುತ್ತೀರಿ ? ಹೇಳಿರಿ. ನನಗೆ ಅದನ್ನು ತಿಳಿಯಬೇಕೆಂದು ಕುತೂಹಲವುಂಟಾಗಿದೆ.

೩೬. ಪ್ರೇತಗಳು ಹೇಳುತ್ತವೆ :—ಊಟದ ಸಮಯದಲ್ಲಿ ಯಾವನ ಮನೆಯಲ್ಲಿ ಜಗಳವು ನಡೆಯುವುದೊ ; ನಾವು ಆ ಮನೆಯ ಯಜಮಾನನ ಅನ್ನದ ರಸವನ್ನೆಲ್ಲ ಹೀರುವೆವು.

ನಾನುಲಿಪ್ತೇ ಧರಾಪೃಷ್ಠೇ ಯತ್ರ ಭುಂಜಂತಿ ಮಾನವಾಃ ।
ಭ್ರಷ್ಟಶೌಚಾ ದ್ವಿಜಶ್ರೇಷ್ಠ ತದಸ್ಮಾಕಂ ತು ಭೋಜನಂ ॥ ೩೭ ॥
ಅಪ್ರಕ್ಷಾಲಿತಪಾದಸ್ತು ಯೋ ಭುಂಕ್ತೇ ದಕ್ಷಿಣಾಮುಖಃ ।
ಯೋ ವೇಷ್ಟಿತಶಿರಾ ಭುಂಕ್ತೇ ಪ್ರೇತಾ ಭುಂಜಂತಿ ನಿತ್ಯಶಃ ॥ ೩೮ ॥
ಶ್ರಾದ್ಧಂ ಸಂಪಶ್ಯತೇ ಶ್ವಾ ಚೇನ್ನಾರೀ ಚೈವ ರಜಸ್ವಲಾ ।
ಅನ್ತ್ಯಜಃ ಶೂಕರಶ್ಚಾನ್ನಂ ತದಸ್ಮಾಕಂ ತು ಭೋಜನಂ ॥ ೩೯ ॥
ತ್ಯಕ್ತ್ವಾ ಕ್ರಮಾಗತಂ ವಿಪ್ರಂ ಪೂಜಿತಂ ಪ್ರಪಿತಾಮಹೈಃ ।
ಯೋ ದಾನಂ ದದತೇಽನ್ಯಸ್ಮೈ ತಸ್ಮೈ ಚಾತುಷ್ಟಚೇತಸಾ ॥ ೪೦ ॥
ತಸ್ಯ ದಾನಸ್ಯ ಯತ್ಪುಣ್ಯಂ ತದಸ್ಮಾಕಂ ಪ್ರಜಾಯತೇ ।
ಯಸ್ಮಿನ್ಗೃಹೇ ಸದೋಚ್ಛಿಷ್ಟಂ ಸದಾ ಚ ಕಲಹೋ ಭವೇತ್ ।
ವೈಶ್ವದೇವವಿಹೀನೇ ತು ತತ್ರ ಭುಂಜಾಮಹೇ ವಯಂ ॥ ೪೧ ॥

ಗೌತಮ ಉವಾಚ :—

ಯುಷ್ಮಾಕಂ ಕೀದೃಶೇ ಗೇಹೇ ಪ್ರವೇಶೋ ನ ಚ ವಿದ್ಯತೇ ।
ಸತ್ಯಂ ವದತ ಮಾಽಸತ್ಯಂ ಸತ್ಯಂ ಸಾಧುಷು ಸಂಗತಂ ॥ ೪೨ ॥

---

೩೭. ಶೌಚವಿಲ್ಲದ ಮನುಷ್ಯರು ಸಾರಿಸದನೆಲದಲ್ಲಿ ಊಟಮಾಡಿದರೆ ಆ ಊಟವು ನಮಗಾಗುವುದು.

೩೮. ಕಾಲನ್ನು ತೊಳೆಯದೆ ದಕ್ಷಿಣಾಭಿಮುಖನಾಗಿ ಭುಂಜಿಸುವವನ ಭೋಜನವೂ, ತಲೆಗೆ ಬಟ್ಟೆಯನ್ನು ಸುತ್ತಿಕೊಂಡು ಊಟಮಾಡುವವನ ಭೋಜನವೂ ನಮಗಾಗುವುದು.

೩೯. ಶ್ರಾದ್ಧದ ಅನ್ನವನ್ನು ನಾಯಿ, ರಜಸ್ವಲೆಯಾದ ಹೆಂಗಸು, ಚಂಡಾಲ, ಹಂದಿಗಳು ನೋಡಿದರೆ ಅದು ನಮಗೆ ಭೋಜನದ ಅನ್ನವಾಗುವುದು.

೪೦—೪೧. ಪ್ರಪಿತಾಮಹಾದಿಗಳಿಂದ ಪೂಜಿಸಲ್ಪಟ್ಟ ಕುಲಕ್ರಮದಿಂದ ಬಂದ ಬ್ರಾಹ್ಮಣನನ್ನು ತ್ಯಜಿಸಿ ಅಸಂತುಷ್ಟವಾದ ಮನಸ್ಸಿನಿಂದ ಇತರನಿಗೆ ದಾನಮಾಡುವವನ ದಾನದ ಪುಣ್ಯವು ನಮಗೆ ಲಭಿಸುವುದು. ವೈಶ್ವದೇವವಿಲ್ಲದೆ ಎಂಜಲು ಜಗಳಗಳಿಂದ ತುಂಬಿರುವ ಮನೆಯಲ್ಲಿ ನಾವು ಭುಜಿಸುವೆವು.

೪೨. ಗೌತಮನು ಹೇಳುತ್ತಾನೆ :—ನಿಮಗೆ ಎಂತಹ ಮನೆಯಲ್ಲಿ ಪ್ರವೇಶವು ದೊರೆಯುವುದಿಲ್ಲ ? ಸತ್ಯವಾಗಿ ಹೇಳಿರಿ. ಸಾಧುಗಳಲ್ಲಿ ಸತ್ಯವನ್ನು ನುಡಿಯಬೇಕು.

ಪ್ರೇತಾ ಊಚುಃ :—

ವೈಶ್ವದೇವೋದ್ಭವಾ ಯತ್ರ ಧೂಮವರ್ತಿಃ ಪ್ರದೃಶ್ಯತೇ ।
ತಸ್ಮಿನ್ಗೇಹೇ ನ ಚಾಸ್ಮಾಕಂ ಪ್ರವೇಶೋ ವಿದ್ಯತೇ ದ್ವಿಜ ॥ ೪೩ ॥
ಯಸ್ಮಿನ್ಗೃಹೇ ಪ್ರಭಾತೇ ತು ಕ್ರಿಯತೇ ಚೋಪಲೇಪನಂ ।
ವಿದ್ಯತೇ ವೇದನಿರ್ಘೋಷಸ್ತತ್ರಾಸ್ಮಾಕಂ ನ ಕಿಂಚನ ॥ ೪೪ ॥

ಗೌತಮ ಉವಾಚ :—

ಕೇನ ಕರ್ಮವಿಪಾಕೇನ ಪ್ರೇತತ್ವಂ ವ್ರಜತೇ ನರಃ ।
ಏತನ್ಮೇ ವಿಸ್ತರೇಣೈವ ಯಥಾವದ್ವಕ್ತುಮರ್ಹಥ ॥ ೪೫ ॥

ಪ್ರೇತಾಊಚುಃ :—

ನ್ಯಾಸಾಪಹಾರಿಣೋ ಯೇ ಚ ಯೇ ಚೋಚ್ಛಿಷ್ಟಾ ವ್ರಜಂತಿ ಚ ।
ಗೋಬ್ರಾಹ್ಮಣಹತಾಶ್ಚೈವ ಪ್ರೇತತ್ವಂ ತೇ ವ್ರಜಂತಿ ಹಿ ॥ ೪೬ ॥
ಪೈಶುನ್ಯನಿರತಾ ಯೇ ಚ ಕೂಟಸಾಕ್ಷ್ಯರತಾ ನರಾಃ ।
ನ್ಯಾಯಪಕ್ಷೇ ನ ವರ್ತಂತೇ ಮೃತಾಃ ಪ್ರೇತಾ ಭವಂತಿ ತೇ ।
ಶ್ಲೇಷ್ಮಮೂತ್ರಪುರೀಷಾಣಿ ಯೇ ಕ್ಷಿಪಂತಿ ಸರೋವರೇ ।
ಪ್ರೇತತ್ವಂ ತೇ ಸಮಾಸಾದ್ಯ ವಿಚರಂತಿ ಚ ಮಾನವಾಃ ॥ ೪೮ ॥

---

೪೩. ಬ್ರಾಹ್ಮಣ ! ವೈಶ್ವದೇವದಿಂದುಂಟಾದ ಹೊಗೆಯು ಕಾಣುವ ಮನೆಯಲ್ಲಿ ನಮಗೆ ಪ್ರವೇಶವು ದೊರೆಯುವುದಿಲ್ಲ.

೪೪. ಬೆಳಗ್ಗೆ ವೇದಘೋಷವೂ, ಗೋಮಯಲೇಪನವೂ ಮಾಡುವ ಮನೆಯಲ್ಲಿ ನಮಗೆ ಪ್ರವೇಶವು ಲಭಿಸುವುದಿಲ್ಲ.

೪೫. ಗೌತಮನು ಹೇಳುತ್ತಾನೆ :—ಮನುಷ್ಯನು ಯಾವಕರ್ಮದ ಪರಿಣಾಮದಿಂದ ಪ್ರೇತನಾಗುವನು ? ಇದನ್ನು ವಿಸ್ತಾರವಾಗಿ ನನಗೆ ಹೇಳಲರ್ಹನಾಗಿರುವೆ.

೪೬. ಪ್ರೇತಗಳು ಹೇಳುತ್ತವೆ :—ಸುಳ್ಳನ್ನು ಹೇಳಿ ಪದಾರ್ಥಗಳನ್ನು ಅಪಹರಿಸುವವರೂ, ಉಚ್ಛಿಷ್ಟವನ್ನು ಭುಂಜಿಸುವವರೂ, ಗೋಬ್ರಾಹ್ಮಣರನ್ನು ಕೊಲ್ಲುವವರೂ ಪ್ರೇತರಾಗುವರು.

೪೭. ಚಾಡಿಹೇಳುವವರೂ, ಸುಳ್ಳುಸಾಕ್ಷಿ ನುಡಿಯುವವರೂ, ಅನ್ಯಾಯನಿರತರೂ, ಮೃತರಾಗಿ ಪ್ರೇತರಾಗುವರು.

೪೮. ಸರೋವರದಲ್ಲಿ ಕಫ, ಮೂತ್ರ, ಅಮೇಧ್ಯಗಳನ್ನು ಎಸೆಯುವವರು ಪ್ರೇತತ್ವವನ್ನು ಹೊಂದಿ ಸಂಚರಿಸುವರು.

ದೀಯಮಾನಂ ತು ವಿಪ್ರಾಣಾಂ ಗೋಷು ವಿಪ್ರಾತುರೇಷು ಚ ।
ಮಾ ದೇಹೀತಿ ಪ್ರಜಲ್ಪಂತಸ್ತೇ ಚ ಪ್ರೇತಾ ಭವಂತಿ ಚ ॥ ೪೯ ॥
ಶೂದ್ರಾನ್ನೇನೋದರಸ್ಥೇನ ಯದಿ ವಿಪ್ರೋ ಮ್ರಿಯೇತ ವೈ ।
ಪ್ರೇತತ್ವಂ ಯಾತ್ಯಸೌ ನೂನಂ ಯದ್ಯಪಿ ಸ್ಯಾತ್ಷಡಂಗವಿತ್ ॥ ೫೦ ॥
ಯಸ್ತ್ರೀಹಂಲೀ ಬಲೀವರ್ದಾನ್ವಾಹಯೇನ್ಮದಸಂಯುತಃ ।
ಅಮಾವಾಸ್ಯಾಂ ವಿಶೇಷೇಣ ಸ ಪ್ರೇತೋ ಜಾಯತೇ ನರಃ ॥ ೫೧ ॥
ನಾಸ್ತಿಕೋ ನಿಂದಕಃ ಕ್ಷುದ್ರೋ ನಿತ್ಯನೈಮಿತ್ಯವರ್ಜಿತಃ ।
ಬ್ರಾಹ್ಮಣಾನ್ದ್ವೇಷ್ಟಿ ಯೋ ನೂನಂ ಸ ಪ್ರೇತೋ ಜಾಯತೇ ನರಃ ॥ ೫೨ ॥
ವಿಶ್ವಾಸಘಾತಕೋ ಯಸ್ತು ಬ್ರಹ್ಮಹಾ ಸ್ತ್ರೀವಧೇ ರತಃ ।
ಗೋಘ್ನೋ ಗುರುಘ್ನಃ ಪಿತೃಹಾ ಸ ಪ್ರೇತೋ ಜಾಯತೇ ನರಃ ॥ ೫೩ ॥
ಯಸ್ಯ ನೈವ ಪ್ರದತ್ತಾನಿ ಏಕೋದ್ದಿಷ್ಟಾನಿ ಷೋಡಶ ।
ಮೃತಸ್ಯ ನ ವೃಷೋತ್ಸರ್ಗಃ ಸ ಪ್ರೇತೋ ಜಾಯತೇ ನರಃ ॥ ೫೪ ॥
ಏತದ್ಧಿ ಸರ್ವಮಾಖ್ಯಾತಂ ಯತ್ಪೃಷ್ಟಃ ಸ್ಮ ದ್ವಿಜೋತ್ತಮ ।
ಭೂಯೋ ಬ್ರೂಹಿ ದ್ವಿಜಶ್ರೇಷ್ಠ ಯಶ್ಚಾಸ್ತಿ ತವ ಸಂಶಯಃ ॥ ೫೫ ॥

---

೪೯. ಬ್ರಾಹ್ಮಣ, ಗೋವು, ರೋಗಿಗಳಿಗೆ ಕೊಡುತ್ತಿರುವುದನ್ನು ಕೊಡಬೇಡವೆಂದು ಅಡ್ಡಿಮಾಡುವವರು ಪ್ರೇತರಾಗುವರು.

೫೦. ಬ್ರಾಹ್ಮಣನು ಷಡಂಗಸಹಿತವಾಗಿ ವೇದಾಧ್ಯಯನವನ್ನು ಮಾಡಿದವನಾದರೂ ಶೂದ್ರಾನ್ನವನ್ನು ತಿಂದು ಮೃತನಾದರೆ ಪ್ರೇತನಾಗುವನು.

೫೧. ಅಮಾವಾಸ್ಯೆಯದಿನ ಮತ್ತನಾಗಿ ನೇಗಿಲಿಗೆ ಎತ್ತು, ಹೆಂಗಸು ಇವರನ್ನು ಕಟ್ಟಿ ಎಳೆಸುವವನು ಪ್ರೇತನಾಗುವನು.

೫೨. ನಾಸ್ತಿಕ, ವೇದನಿಂದಕ, ಅಲ್ಪ, ನಿತ್ಯನೈಮಿತ್ತಿಕ ಕರ್ಮಬಾಹ್ಯ, ಬ್ರಾಹ್ಮಣದ್ವೇಷಿ ಇವರು ಪ್ರೇತರಾಗುವರು.

೫೩. ವಿಶ್ವಾಸಘಾತಕ, ಬ್ರಾಹ್ಮಣ, ಸ್ತ್ರೀ, ಗೋವು, ಗುರು, ಪಿತೃ ಇವರನ್ನು ವಧಿಸುವವನು ಪ್ರೇತನಾಗುವನು.

೫೪. ಮೃತನಾದ ಯಾವ ಮನುಷ್ಯನಿಗೆ ಏಕೋದ್ದಿಷ್ಟ, ಷೋಡಶ, ವೃಷೋತ್ಸರ್ಗಗಳನ್ನು ಮಾಡುವುದಿಲ್ಲವೊ, ಅವನು ಪ್ರೇತನಾಗುವನು.

೫೫. ಬ್ರಾಹ್ಮಣವರ್ಯ! ನೀನು ಕೇಳಿದುದನ್ನೆಲ್ಲ ಹೇಳಿರುವೆನು. ಇನ್ನೇನಾದರೂ ಸಂಶಯವಿದ್ದರೆ ಕೇಳು.

ಗೌತಮ ಉವಾಚ :—
ಯೇನ ಕರ್ಮವಿಪಾಕೇನ ನ ಪ್ರೇತೋ ಜಾಯತೇ ನರಃ ।
ತನ್ಮೇ ವದತ ನಿಶ್ಶೇಷಂ ಕೌತುಕಂ ಮೇಽತ್ರ ವಿದ್ಯತೇ ॥ ೫೬ ॥
ಪ್ರೇತಾ ಊಚುಃ :—
ತೀರ್ಥಯಾತ್ರಾರತೋ ಯಸ್ತು ದೇವಾರ್ಚನಪರಾಯಣಃ ।
ಬ್ರಾಹ್ಮಣೇಷು ಸದಾ ಭಕ್ತೋ ನ ಪ್ರೇತೋ ಜಾಯತೇ ನರಃ ॥ ೫೭ ॥
ನಿತ್ಯಂ ಶೃಣೋತಿ ಶಾಸ್ತ್ರಾಣಿ ನಿತ್ಯಂ ಸೇವತಿ ಪಂಡಿತಾನ್ ।
ವೃದ್ಧಾಂಸ್ತು ಪೃಚ್ಛತೇ ನಿತ್ಯಂ ನ ಸ ಪ್ರೇತೋ ವಿಜಾಯತೇ ॥ ೫೮ ॥
ಏತಸ್ಮಾತ್ಕಾರಣಾತ್ಪ್ರಾಪ್ತಾ ವಯಂ ಸರ್ವೇ ಸುದೂರತಃ ।
ನ ಶಕ್ನುಮೋ ಪ್ರವೇಷ್ಟುಂ ಚ ಪುಣ್ಯೇಽಸ್ಮಿನ್ಕ್ಷೇತ್ರ ಉತ್ತಮೇ ॥ ೫೯ ॥
ನಿರ್ವಿಣ್ಣಾಃ ಪ್ರೇತರೂಪೇಣ ತಸ್ಮಾತ್ತ್ವಂ ದ್ವಿಜಸತ್ತಮ ।
ಗತಿರ್ಭವ ಮಹಾಭಾಗ ಸರ್ವೇಷಾಂ ನಃ ಪ್ರಯತ್ನತಃ ॥ ೬೦ ॥
ಗೌತಮ ಉವಾಚ :—
ಕಥಂ ವೋ ಜಾಯತೇ ಮೋಕ್ಷೋ ವದಧ್ವಂ ಕೃತ್ಸ್ನಶೋ ಮಮ ।
ಕೃಪಯಾವಿಷ್ಟಚಿತ್ತೋಽಹಂ ಯತಿಷ್ಯೇ ನಾತ್ರ ಸಂಶಯಃ ॥ ೬೧ ॥

---

೫೬. ಗೌತಮನು ಹೇಳುತ್ತಾನೆ :—ಮನುಷ್ಯನು ಯಾವಕರ್ಮಗಳ ಪರಿಣಾಮ ದಿಂದ ಪ್ರೇತನಾಗುವುದಿಲ್ಲ. ಅದನ್ನು ಸಂಪೂರ್ಣವಾಗಿ ನನಗೆ ಹೇಳಿರಿ. ಈ ವಿಷಯದಲ್ಲಿ ನನಗೆ ಕುತೂಹಲವುಂಟಾಗಿದೆ.

೫೭. ಪ್ರೇತಗಳು ಹೇಳುತ್ತವೆ :—ತೀರ್ಥಯಾತ್ರೆಯಲ್ಲಿ ಆಸಕ್ತನೂ, ದೇವ ಪೂಜೆಯಲ್ಲಿ ನಿರತನೂ, ಬ್ರಾಹ್ಮಣರಲ್ಲಿ ಯಾವಾಗಲೂ ಭಕ್ತಿಯುಳ್ಳವನೂ ಪ್ರೇತನಾಗು ವುದಿಲ್ಲ.

೫೮. ಯಾವಾಗಲೂ ಶಾಸ್ತ್ರಶ್ರವಣಮಾಡುವವನೂ, ಜ್ಞಾನಿಗಳನ್ನು ಸೇವಿಸು ವವನೂ, ವೃದ್ಧರ ನುಡಿಯನ್ನು ನಡೆಯಿಸುವವನೂ ಪ್ರೇತರಾಗುವುದಿಲ್ಲ.

೫೯. ಇದಕ್ಕಾಗಿ ನಾವೆಲ್ಲ ಬಹಳ ದೂರದಿಂದ ಬಂದಿರುವೆವು. ಆದರೆ ಪವಿತ್ರವಾದ ಈ ಕ್ಷೇತ್ರವನ್ನು ಪ್ರವೇಶಿಸಲು ಶಕ್ತರಾಗಿಲ್ಲ.

೬೦. ಬ್ರಾಹ್ಮಣೋತ್ತಮ ! ನಾವು ಈ ಪ್ರೇತರೂಪದಿಂದ ಖಿನ್ನರಾಗಿದ್ದೇವೆ ಭಾಗ್ಯಶಾಲಿಯೆ ! ನೀನು ನಮಗೆಲ್ಲ ಉತ್ತಮಗತಿಯನ್ನು ತೋರು.

೬೧. ಗೌತಮನು ಹೇಳುತ್ತಾನೆ :—ನಿಮಗೆ ಯಾವರೀತಿಯಿಂದ ಈ ಪ್ರೇತ ಜನ್ಮವು ತೊಲಗುವುದು ? ಅದನ್ನು ಸಂಪೂರ್ಣವಾಗಿ ನನಗೆ ಹೇಳಿರಿ. ನಾನು ದಯೆಗೊಂಡಿದ್ದೇನೆ. ಈ ವಿಷಯದಲ್ಲಿ ಪ್ರಯತ್ನಿಸುವೆನು.

ಪ್ರೇತಾ ಊಚುಃ :—

ಪ್ರಭೂತಕಾಲಮಸ್ಮಾಕಂ ಪ್ರೇತತ್ವೇ ತಿಷ್ಠತಾಂ ವಿಭೋ ।
ನ ತ್ವಭ್ಯೇತಿ ಪುಮಾನ್ಕಶ್ಚಿದಸ್ಮಾಕಂ ಯೋ ಗತಿರ್ಭವೇತ್ ॥ ೬೨ ॥
ತಸ್ಮಾತ್ತ್ವಂ ದೇಹಿ ನಃ ಶ್ರಾದ್ಧಂ ಗತ್ವಾ ಕ್ಷೇತ್ರಂ ತು ವೈಷ್ಣವಂ ।
ನಾಮಗೋತ್ರಾಣಿ ಚಾದಾಯ ಮೋಕ್ಷಂ ಯಾಸ್ಯಾಮಹೇ ತತಃ ॥ ೬೩ ॥

ಈಶ್ವರ ಉವಾಚ :—

ತತೋಽಸೌ ಬ್ರಾಹ್ಮಣೋ ಗತ್ವಾ ದಯಾವಿಷ್ಟೋ ಹರೇರ್ಗೃಹಂ ।
ಶ್ರಾದ್ಧಂ ಚ ಪ್ರದದೌ ತೇಷಾಮೇಕೈಕಸ್ಯ ಪೃಥಕ್ಪೃಥಕ್ ॥ ೬೪ ॥
ಯಸ್ಯ ಯಸ್ಯ ಯದಾ ಶ್ರಾದ್ಧಂ ಕರೋತಿ ದ್ವಿಜಸತ್ತಮಃ ।
ಸ ರಾತ್ರೌ ಸ್ವಪ್ನ ಏತ್ಯೇನಂ ದರ್ಶನೇ ವಾಕ್ಯಮಬ್ರವೀತ್ ॥ ೬೫ ॥
ಪ್ರಸಾದಾತ್ತವ ವಿಪ್ರೇಂದ್ರ ಮುಕ್ತೋಽಹಂ ಪ್ರೇತಯೋನಿತಃ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ವಿಮಾನಂ ಮೇ ಹ್ಯುಪಸ್ಥಿತಂ ॥ ೬೬ ॥
ಏವಂ ಸಂತಾರಿತಾಸ್ತೇನ ಚತ್ವಾರಸ್ತೇ ದ್ವಿಜೋತ್ತಮಾಃ ॥ ೬೭ ॥

---

೬೨. ಪ್ರೇತಗಳು ಹೇಳುತ್ತವೆ:—ಸ್ವಾಮಿ ನಾವು ಪ್ರೇತಗಳಾಗಿ ಅನೇಕ ವರ್ಷಗಳಾದುವು. ನಮ್ಮನ್ನು ಉದ್ಧರಿಸುವವನೊಬ್ಬನೂ ನಮ್ಮೆಡೆಗೆ ಬರಲಿಲ್ಲ.

೬೩. ಆದ್ದರಿಂದ ನೀನು ನಮ್ಮ ಹೆಸರು, ಗೋತ್ರಗಳನ್ನು ತೆಗೆದುಕೊಂಡು ವೈಷ್ಣವಕ್ಷೇತ್ರಕ್ಕೆ ಹೋಗಿ ನಮಗೆ ಶ್ರಾದ್ಧವನ್ನಾಚರಿಸು. ಅದರಿಂದ ನಾವು ಮೋಕ್ಷವನ್ನು ಹೊಂದುವೆವು.

೬೪. ಈಶ್ವರನು ಹೇಳುತ್ತಾನೆ:—ಬಳಿಕ ಈ ಬ್ರಾಹ್ಮಣನು ದಯೆಗೊಂಡು ವಿಷ್ಣುದೇವಾಲಯವನ್ನು ಸೇರಿ ಆಪ್ರೇತಗಳಲ್ಲೊಬ್ಬೊಬ್ಬರಿಗೂ ಪ್ರತ್ಯೇಕವಾಗಿ ಶ್ರಾದ್ಧ ಮಾಡಿದನು.

೬೫. ಈ ಬ್ರಾಹ್ಮಣೋತ್ತಮನು ಯಾರು ಯಾರಿಗೆ ಯಾವಾಗ ಶ್ರಾದ್ಧವನ್ನು ಮಾಡುವನೊ; ಅವನು ರಾತ್ರಿಯಲ್ಲಿ ಸ್ವಪ್ನದಲ್ಲಿ ಬಂದು ಹೀಗೆನ್ನುವನು,

೬೬. "ವಿಪ್ರವರ್ಯ ! ನಾನು ನಿನ್ನ ಅನುಗ್ರಹದಿಂದ ಪ್ರೇತಜನ್ಮದಿಂದ ಮುಕ್ತನಾದೆನು. ನಿನಗೆ ಮಂಗಳವಾಗಲಿ, ನನಗಾಗಿ ವಿಮಾನವು ಬಂದಿರುವುದು.

೬೭. ಹೀಗೆ ಅವನು ನಾಲ್ಕು ಮಂದಿ ಪ್ರೇತರನ್ನು ಉದ್ಧರಿಸಿದನು.

ಅಥಾಸೌ ಬ್ರಾಹ್ಮಣಶ್ರೇಷ್ಠಃ ಸಂಪ್ರಾಪ್ತೇ ಪಞ್ಚಮೇ ದಿನೇ ।
ಪ್ರದದೌ ವಿಧಿಪೂರ್ವಂ ತು ಶ್ರಾದ್ಧಂ ಪರ್ಯುಷಿತಸ್ಯ ಚ ॥ ೬೮ ॥
ಅಥಾಪಶ್ಯತ ಸ್ವಪ್ನಾಂತೇ ಪ್ರಾಪ್ತಂ ಪರ್ಯುಷಿತಂ ನರಂ ।
ದೀನವಾಕ್ಯಂ ಪರಿಕ್ಲಿಷ್ಟಂ ನಿಃಶ್ವಸನ್ತಂ ಮುಹುರ್ಮುಹುಃ ॥ ೬೯ ॥

ಪರ್ಯುಷಿತ ಉವಾಚ :—

ನ ಮೇ ಜಾತಾ ಗತಿರ್ವಿಪ್ರ ಮಂದಭಾಗ್ಯಸ್ಯ ಪಾಪಿನಃ ।
ಮಯಾ ಹೃತಂ ತಡಾಗಾರ್ಥಂ ಯದ್ವಿತ್ತಂ ಪ್ರಗುಣೀಕೃತಂ ॥ ೭೦ ॥

ಗೌತಮ ಉವಾಚ :—

ಕಥಂ ತೇ ಜಾಯತೇ ಮೋಕ್ಷೋ ವದ ಶೀಘ್ರಮಶೇಷತಃ ।
ಕರಿಷ್ಯೇ ನಾತ್ರ ಸಂದೇಹೋ ಯದ್ಯಪಿ ಸ್ಯಾತ್ಸುದುರ್ಲಭಂ ॥ ೭೧ ॥

ಪರ್ಯುಷಿತ ಉವಾಚ :—

ಅಯನೇ ಚೋತ್ತರೇ ಪ್ರಾಪ್ತೇ ಗತ್ವಾ ತೀರ್ಥಂ ಹರಿಪ್ರಿಯಂ ।
ಶ್ರಾದ್ಧಂ ತ್ವಂ ದೇಹಿ ಮೇ ನೂನಂ ತತೋ ಗತಿರ್ಭವಿಷ್ಯತಿ ॥ ೭೨ ॥

---

೬೮. ಬಳಿಕ ಗೌತಮನು ಐದನೆಯ ದಿನವು ಬರಲು ಪರ್ಯುಷಿತನಿಗೆ ವಿಧಿಪೂರ್ವಕವಾಗಿ ಶ್ರಾದ್ಧವನ್ನಾಚರಿಸಿದನು.

೬೯. ತರುವಾಯ ಆ ಗೌತಮನು ಸ್ವಪ್ನದ ಕೊನೆಯಲ್ಲಿ ದೀನವಾಕ್ಯವುಳ್ಳವನೂ, ವ್ಯಥೆಗೊಂಡವನೂ, ಬಾರಿಬಾರಿಗೆ ನಿಟ್ಟುಸಿರನ್ನು ಬಿಡುತ್ತಿರುವವನೂ ಆದ ಪರ್ಯುಷಿತನೆಂಬ ಪ್ರೇತನನ್ನು ಕಂಡನು

೭೦. ಪರ್ಯುಷಿತನು ಹೇಳುತ್ತಾನೆ :—ಬ್ರಾಹ್ಮಣ ! ಅಲ್ಪಭಾಗ್ಯವುಳ್ಳವನೂ ಪಾಪಿಯೂ ಆದ ನನಗೆ ಉತ್ತಮಗತಿಯುಂಟಾಗಲಿಲ್ಲ. ನಾನು ಕೆರೆಯನ್ನು ಕಟ್ಟಿಸುವುದಕ್ಕಾಗಿ ಸಂಗ್ರಹಿಸಿದ ಹಣವನ್ನು ಅಪಹರಿಸಿರುವೆನು.

೭೧. ಗೌತಮನು ಹೇಳುತ್ತಾನೆ :—ನಿನಗೆ ಯಾವರೀತಿಯಿಂದ ಮೋಕ್ಷವಾಗುವುದು ? ಶೀಘ್ರವಾಗಿ ಸಮಸ್ತ ವಿಷಯಗಳನ್ನೂ ತಿಳಿಸು. ಅದು ಅಸಾಧ್ಯವಾಗಿದ್ದರೂ ಮಾಡುವೆನು. ಸಂಶಯಪಡಬೇಡ.

೭೨. ಪರ್ಯುಷಿತನು ಹೇಳುತ್ತಾನೆ :—ಬ್ರಾಹ್ಮಣ ! ಉತ್ತರಾಯಣವು ಬರಲು ನೀನು ಹರಿಕ್ಷೇತ್ರಕ್ಕೆ ಹೋಗಿ ನನಗೆ ಶ್ರಾದ್ಧವನ್ನು ಮಾಡು. ಅದರಿಂದ ನನಗೆ ಉತ್ತಮ ಗತಿಯಾಗುವುದು.

ಈಶ್ವರ ಉವಾಚ :—

ಏವಮುಕ್ತಃ ಸ ವಿಪ್ರೇನ್ದ್ರಸ್ತೇನ ಪ್ರೇತೇನ ವೈ ಮುನಿಃ ।
ಅಯನೇ ಚೋತ್ತರೇ ಪ್ರಾಪ್ತೇ ಗತ್ವಾ ತೀರ್ಥಂ ಹರಿಪ್ರಿಯಂ ।
ಪ್ರದದೌ ವಿಧಿವಚ್ಛ್ರಾದ್ಧಂ ತತಃ ಪರ್ಯುಷಿತಾಯ ಚ ॥ ೭೩ ॥
ತತಃ ಪರ್ಯುಷಿತೋ ರಾತ್ರೌ ಸ್ವಪ್ನಾಂತೇ ವಾಕ್ಯಮಬ್ರವೀತ್ ।
ಪ್ರಸನ್ನವದನೋ ಭೂತ್ವಾ ದಿವ್ಯಮಾಲ್ಯವಪುರ್ಧರಃ ॥ ೭೪ ॥

ಪರ್ಯುಷಿತ ಉವಾಚ :—

ಮುಕ್ತೋಽಹಂ ತ್ವತ್ಪ್ರಸಾದೇನ ಪ್ರೇತಭಾವಾದ್ದ್ವಿಜೋತ್ತಮ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ವಿಮಾನಂ ಮೇ ಹ್ಯುಪಸ್ಥಿತಂ ॥ ೭೫ ॥
ದೇವತ್ವಂ ಚ ಮಯಾ ಪ್ರಾಪ್ತಂ ಸಮರ್ಥೋಽಹಂ ದ್ವಿಜೋತ್ತಮ ।
ವರಂ ದದಾಮಿ ತೇ ವಿಪ್ರ ಗೃಹಾಣ ತ್ವಂ ವರಂ ಶುಭಂ ॥ ೭೬ ॥
ಬ್ರಹ್ಮಘ್ನೇ ಚ ಸುರಾಪೇ ಚ ಚೌರೇ ಭಗ್ನವ್ರತೇ ತಥಾ ।
ನಿಷ್ಕೃತಿರ್ವಿಹಿತಾ ಸದ್ಭಿಃ ಕೃತಘ್ನೇ ನಾಸ್ತಿ ನಿಷ್ಕೃತಿಃ ॥ ೭೭ ॥

---

೭೩. ಈಶ್ವರನು ಹೇಳುತ್ತಾನೆ :—ಆ ಪ್ರೇತನು ಹೀಗೆನ್ನಲು ಗೌತಮನು ಉತ್ತರಾಯಣದಲ್ಲಿ ಹರಿಪ್ರಿಯತೀರ್ಥಕ್ಕೆ ಹೋಗಿ ಪರ್ಯುಷಿತನಿಗೆ ವಿಧಿಯಂತೆ ಶ್ರಾದ್ಧವನ್ನಾಚರಿಸಿದನು.

೭೪. ಅನಂತರ ಪರ್ಯುಷಿತನು ಪ್ರಸನ್ನಮುಖನೂ, ದಿವ್ಯಮಾಲ್ಯ, ದೇಹಗಳನ್ನು ಧರಿಸಿ ರಾತ್ರಿಯಲ್ಲಿ ಸ್ವಪ್ನದಲ್ಲಿ ಬಂದು ಇಂತೆಂದನು.

೭೫. ಪರ್ಯುಷಿತನು ಹೇಳುತ್ತಾನೆ :—ದ್ವಿಜೋತ್ತಮ! ನಾನು ನಿನ್ನ ಅನುಗ್ರಹದಿಂದ ಪ್ರೇತತ್ವದಿಂದ ಮುಕ್ತನಾದೆನು. ನಿನಗೆ ಮಂಗಳವಾಗಲಿ. ನನಗೆ ವಿಮಾನವು ಬಂದಿರುವುದು, ತೆರಳುವೆನು.

೭೬. ವಿಪ್ರವರ್ಯ ! ನಾನು ದೇವತ್ವವನ್ನು ಹೊಂದಿ ಶಕ್ತನಾಗಿರುವೆನು. ನಿನಗೆ ವರವನ್ನು ಕೊಡುವೆನು. ಒಳ್ಳೆಯವರವನ್ನು ಕೇಳಿಕೋ.

೭೭. ಬ್ರಹ್ಮಹತ್ಯೆಮಾಡಿದವನಿಗೂ, ಮದ್ಯಪಾನಮಾಡಿದವನಿಗೂ, ಕಳ್ಳನಿಗೂ, ವ್ರತಕೆಟ್ಟವನಿಗೂ ಸಾಧುಜನರು ಪ್ರಾಯಶ್ಚಿತ್ತವನ್ನು ಹೇಳಿರುವರು. ಕೃತಘ್ನನಿಗೆ ಪ್ರಾಯಶ್ಚಿತ್ತವಿಲ್ಲ.

ಗೌತಮ ಉವಾಚ :—

ಯದಿ ದೇಯೋ ವರೋಽಸ್ಮಾಕಂ ಸಮರ್ಥೋಽಸಿ ವರಪ್ರದ ।
ಯತ್ರ ಸ್ಥಾನೇ ಮಯಾ ದೃಷ್ಟಾಃ ಪ್ರೇತಾ ಯೂಯಂ ಸುದುಃಖಿತಾಃ ।
ತತ್ರಾಹಂ ಚಾಶ್ರಮಂ ಕೃತ್ವಾ ಕರಿಷ್ಯೇ ಚೋತ್ತಮಂ ತಪಃ ॥ ೭೮ ॥
ನಿರ್ಗನ್ತಾಸ್ಮಿ ಗೃಹಂ ಭೂಯೋ ಸ್ನಾತ್ವಾ ತೀರ್ಥಮಿದಂ ಮಹತ್ ।
ತತ್ರ ಯೋ ಮಾನವೋ ಭಕ್ತ್ಯಾ ಪಿತ್ರ್ಯಾನುದ್ದಿಶ್ಯ ಭಕ್ತಿತಃ ॥ ೭೯ ॥
ವಿಧಿವದ್ದಾಸ್ಯತಿ ಶ್ರಾದ್ಧಂ ಸ್ನಾತ್ವಾ ಸಂತರ್ಪ್ಯ ದೇವತಾಃ ।
ಯುಷ್ಮತ್ಪ್ರಸಾದತಸ್ತಸ್ಯ ಹ್ಯನ್ವಯೇಽಪಿ ಕದಾಚನ ।
ಮಾ ಭೂಯಾತ್ಪ್ರೇತಸ್ಯಭಾವೋ ಹಿ ಅಪಿ ಪಾಪಾನ್ವಿತಸ್ಯ ಭೋಃ ॥ ೮೦ ॥

ಪರ್ಯುಷಿತ ಉವಾಚ :—

ಗಚ್ಛ ತ್ವಂ ಚಾಶ್ರಮಂ ತತ್ರ ಕುರು ಬ್ರಾಹ್ಮಣಸತ್ತಮ ।
ಗಮಿಷ್ಯಸಿ ಪರಾಂ ಸಿದ್ಧಿಂ ಲೋಕೇ ಖ್ಯಾತಿಂ ಗಮಿಷ್ಯಸಿ ॥ ೮೧ ॥
ತತ್ರ ಯೇ ಮಾನವಾ ಭಕ್ತ್ಯಾ ಶ್ರಾದ್ಧಂ ದಾಸ್ಯಂತಿ ಸತ್ತಮಾಃ ।
ಪಿತ್ರ್ಯಾಣಾಂ ತೇ ವಿಮಾನಸ್ಥಾ ಯಾಸ್ಯಂತಿ ತ್ರಿದಿವಾಲಯಂ ॥ ೮೨ ॥

೭೮-೮೦. ಗೌತಮನು ಹೇಳುತ್ತಾನೆ :—ಎಲೈ ವರವನ್ನೀಯುವ ಪರ್ಯುಷಿತನೆ! ನೀನು ಸಮರ್ಥನಾಗಿದ್ದರೆ ನನಗೆ ವರವನ್ನೀಯುವನಾದರೆ, ನಾನು ದುಃಖಗೊಂಡ ಪ್ರೇತಗಳಾದ ನಿಮ್ಮನ್ನು ನೋಡಿದ ಈ ಸ್ಥಳದಲ್ಲಿಯೇ ಆಶ್ರಮವನ್ನು ವಿರಚಿಸಿ ಉತ್ತಮ ತಪಸ್ಸನ್ನು ಮಾಡುವೆನು. ಈ ಮಹಾತೀರ್ಥದಲ್ಲಿ ಮಿಂದು ಮರಳಿ ಮನೆಗೆ ಹೊರಟಿರುವೆನು. ಅಲ್ಲಿ ಮಿಂದು ದೇವತೆಗಳನ್ನು ತೃಪ್ತಿಗೊಳಿಸಿ ಭಕ್ತಿಯಿಂದ ಪಿತೃಗಳನ್ನುದ್ದೇಶಿಸಿ ವಿಧಿಯಂತೆ ಶ್ರಾದ್ಧವನ್ನು ಮಾಡಿದವನ ವಂಶದಲ್ಲಿ ಪಾಪಿಷ್ಠನಿಗೂ ಪ್ರೇತತ್ವವು ಬಾರದಿರಲಿ.

೮೧. ಪರ್ಯುಷಿತನು ಹೇಳುತ್ತಾನೆ :—ಬ್ರಾಹ್ಮಣೋತ್ತಮ! ನೀನು ಇಲ್ಲಿಂದ ಹೊರಡು. ಅಲ್ಲಿ ಆಶ್ರಮವನ್ನು ರಚಿಸು. ನೀನು ಉತ್ತಮ ಸಿದ್ಧಿಯನ್ನು ಹೊಂದಿ ಪ್ರಪಂಚದಲ್ಲಿ ಪ್ರಸಿದ್ಧನಾಗುವೆ.

೮೨. ಅಲ್ಲಿ ಭಕ್ತಿಯಿಂದ ಶ್ರಾದ್ಧಮಾಡುವ ಮಾನವರು ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ತೆರಳುವರು.

ನ ತೇಷಾಂ ವಂಶಜಃ ಕಶ್ಚಿತ್ಪ್ರೇತತ್ವಂ ಚ ಗಮಿಷ್ಯತಿ ।
ಪ್ರಾಹುಃ ಸಪ್ತಪದೀಂ ಮೈತ್ರೀಂ ಪಂಡಿತಾಃ ಸ್ಥಿರಬುದ್ಧಯಃ ॥ ೮೩ ॥

ಮಿತ್ರತಾಂ ತು ಪುರಸ್ಕೃತ್ಯ ಕಿಂ ತದ್ವಕ್ಷ್ಯಾಮಿ ತಚ್ಛೃಣು ।
ತವಾಶ್ರಮಪದಂ ಪುಣ್ಯಂ ಭವಿಷ್ಯತಿ ಮಹೀತಲೇ ॥ ೮೪ ॥

ಸರ್ವಪಾಪಪ್ರಶಮನಂ ಸರ್ವದುಃಖವಿನಾಶನಂ ।
ಮನ್ನಾಮ್ನಾ ಖ್ಯಾತಿಮಾಯಾತು ಪ್ರೇತತೀರ್ಥಮಿತಿ ಪ್ರಭೋ ॥ ೮೫ ॥

ಈಶ್ವರ ಉವಾಚ :—

ತಂ ತಥೇತಿ ಪ್ರತಿಜ್ಞಾಯ ಗತಸ್ತತ್ರ ದ್ವಿಜೋತ್ತಮಃ ।
ಯಥಾ ವೇದೋಕ್ತಮಾರ್ಗೇಣ ಸರ್ವಂ ಕೃತ್ಯಂ ಚಕಾರ ಸಃ ॥ ೮೬ ॥

ಸೋಽಪಿ ಸ್ವರ್ಗಮನುಪ್ರಾಪ್ತೋ ಹೃಷ್ಟಃ ಪರ್ಯುಷಿತಃ ಪ್ರಿಯೇ ।
ಏತತ್ಸರ್ವಂ ಪುರಾವೃತ್ತಂ ಸ್ಥಾನೇಽಸ್ಮಿನ್ಗಾತ್ರಮೋಚನೇ ॥ ೮೭ ॥

---

೮೩. ಅವನ ವಂಶದವರಾರೂ ಪ್ರೇತರಾಗುವುದಿಲ್ಲ, ಸ್ಥಿರ ಚಿತ್ತರಾದ ಪಂಡಿತರು ಏಳು ಶಬ್ದಗಳಿಂದ ಮಾತಾಡುವುದರಿಂದಲೇ ಸ್ನೇಹವುಂಟಾಗುವುದೆನ್ನುವರು.

೮೪. ಅದರಂತೆ ನಿನ್ನ ಮೈತ್ರಿಯನ್ನು ಹೊಂದಿದ ನಾನು ಹೇಳುವೆನು ಕೇಳು. ನಿನ್ನ ಆಶ್ರಮವು ಭೂಮಿಯಲ್ಲಿಯೇ ಪುಣ್ಯಕರವಾಗುವುದು.

೮೫. ಸಕಲ ಪಾಪಗಳನ್ನು ಪರಿಹರಿಸುವುದೂ, ಸಮಸ್ತದುಃಖಗಳನ್ನು ನಿವಾರಿಸುವುದೂ ಆದ ಈ ಆಶ್ರಮವು ಪ್ರೇತತೀರ್ಥವೆಂದು ನನ್ನ ಹೆಸರಿನಿಂದ ಪ್ರಖ್ಯಾತವಾಗುವುದು.

೮೬. ಈಶ್ವರನು ಹೇಳುತ್ತಾನೆ :—ಆ ಗೌತಮನು ಹಾಗೆಯೇ ಆಗಲೆಂದು ಒಪ್ಪಿ ಅಲ್ಲಿಂದಹೊರಟು ವೇದೋಕ್ತ ರೀತಿಯಿಂದ ಸಕಲಕಾರ್ಯಗಳನ್ನು ನೆರವೇರಿಸಿದನು.

೮೭. ಪ್ರಿಯಳೆ! ಪರ್ಯುಷಿತನು ಸಂತೋಷಗೊಂಡು ಸ್ವರ್ಗಕ್ಕೆ ತೆರಳಿದನು. ಈ ಗಾತ್ರಮೋಚನ ತೀರ್ಥದಲ್ಲಿ ಹಿಂದೆ ಈ ವೃತ್ತಾಂತವು ನಡೆದಿರುವುದು.

ಯಃ ಶೃಣೋತಿ ನರಃ ಸಮ್ಯಕ್ಸರ್ವಪಾಪೈಃ ಸ ಮುಚ್ಯತೇ ।
ಶಯನೋತ್ಥಾಪನೇ ಯೋಗೇ ಯಃ ಪಶ್ಯೇತ್ಪುರುಷೋತ್ತಮಂ ।
ಗಾತ್ರೋತ್ಸರ್ಗೇ ತು ಗತ್ವಾಸೌ ಯಜ್ಞಾಯುತಫಲಂ ಲಭೇತ್ ॥ ೮೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರೇತತೀರ್ಥಮಾಹಾತ್ಮ್ಯವರ್ಣನಂ ನಾಮ
॥ ತ್ರಯೋವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

---

೮೮. ಇದನ್ನು ಕೇಳಿದ ಮಾನವನು ಸಕಲಪಾಪಮುಕ್ತನಾಗುವನು. ಗಾತ್ರೋತ್ಸರ್ಗಕ್ಕೆ ಹೋಗಿ ಶಯನೋತ್ಥಾನ ಕಾಲಗಳಲ್ಲಿ ಪುರುಷೋತ್ತಮನನ್ನು ದರ್ಶನ ಮಾಡಿದವನು ಹತ್ತು ಸಾವಿರ ಯಜ್ಞಗಳನ್ನು ಮಾಡಿದ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಪ್ರೇತತೀರ್ಥಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಇಂದ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಮಿಂದ್ರಪ್ರತಿಷ್ಠಿತಂ ।
ಪಾಪಮೋಚನನಾಮಾಖ್ಯಂ ದಕ್ಷಿಣೇ ಪುರುಷೋತ್ತಮಾತ್ ॥ ೧ ॥

ವೃತ್ರಂ ಹತ್ವಾ ಪುರಾ ಶಕ್ರೋ ಬ್ರಹ್ಮಹತ್ಯಾಸಮನ್ವಿತಃ ।
ಅಬ್ರವೀತ್ಸ ಋಷೀನ್ದಿವ್ಯಾನ್ಕಥಮೇಷಾ ಗಮಿಷ್ಯತಿ ॥ ೨ ॥

ಬ್ರಹ್ಮಹತ್ಯಾ ಹಿ ದುಷ್ಪ್ರೇಕ್ಷ್ಯಾ ವಿವರ್ಣಜನನೀ ಮಮ ।
ದುರ್ಗಂಧಚಾರಿಣೀ ಚೈವ ಸರ್ವತೇಜೋವಿನಾಶಿನೀ ॥ ೩ ॥

ಕನ್ನಡದ ಅನುವಾದ

ಇಂದ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಪುರುಷೋತ್ತಮ ತೀರ್ಥದ ದಕ್ಷಿಣದಲ್ಲಿ ಇಂದ್ರನು ಪ್ರತಿಷ್ಠೆಮಾಡಿರುವ ಪಾಪಮೋಚನವೆಂಬ ತೀರ್ಥದೆಡೆಗೆ ಹೋಗಬೇಕು.

೨. ಹಿಂದೆ ಇಂದ್ರನು ವೃತ್ರಾಸುರನನ್ನು ಕೊಂದು ಬ್ರಹ್ಮಹತ್ಯೆಯಿಂದ ಕೂಡಿದವನಾಗಿ ದಿವ್ಯರ್ಷಿಗಳನ್ನು ಕುರಿತು ಇದು ಹೇಗೆ ಪರಿಹಾರವಾಗುವುದೆಂದು ಕೇಳಿದನು.

೩. ನನಗೆ ವೈವರ್ಣ್ಯವನ್ನೂ ದುರ್ಗಂಧವನ್ನೂ, ಉಂಟುಮಾಡುವುದೂ, ಸಮಸ್ತ ತೇಜಸ್ಸನ್ನೂ ನಾಶಗೊಳಿಸುವುದೂ ಆದ ಈ ಬ್ರಹ್ಮಹತ್ಯೆಯು ನೋಡಲಶಕ್ಯವಾದುದು.

ಅಥೋಚುಸ್ತಂ ಸುರಗಣಾ ನಾರದಾದ್ಯಾ ಮಹರ್ಷಯಃ ।
ಪ್ರಭಾಸಂ ಗಚ್ಛ ದೇವೇಶ ಕ್ಷೇತ್ರಂ ಪಾಪಹರಂ ಹಿ ತತ್ ॥ ೪ ॥

ತತ್ರಾರಾಧ್ಯ ಮಹಾದೇವಂ ಮೋಕ್ಷ್ಯಸೇ ಬ್ರಹ್ಮಹತ್ಯಯಾ ।
ಸ ತಥೇತಿ ಪ್ರತಿಜ್ಞಾಯ ಗತಸ್ತತ್ರ ವರಾನನೇ ॥ ೫ ॥

ಲಿಂಗಂ ಸಂಸ್ಥಾಪಯಾಮಾಸ ದೇವದೇವಸ್ಯ ಶೂಲಿನಃ ।
ತಸ್ಯ ಪೂಜಾರತೋ ನಿತ್ಯಂ ಧೂಪಗಂಧಾನುಲೇಪನೈಃ ॥ ೬ ॥

ತತೋಽಸ್ಯ ಗಾತ್ರದೌರ್ಗನ್ಧ್ಯಂ ನಾಶಮಾಶ್ವಭ್ಯಗಚ್ಛತ ।
ವಿವರ್ಣತ್ವಂ ಗತಂ ಸರ್ವಂ ವಪುಶ್ಚಾಭೂತ್ತಥೋತ್ತಮಂ ॥ ೭ ॥

ಅಥ ಹೃಷ್ಟಮನಾ ಭೂತ್ವಾ ವಾಕ್ಯಮೇತದುವಾಚ ಹ ।
ತತ್ರಾಗತ್ಯ ನರೋ ಭಕ್ತ್ಯಾ ಯಶ್ಚೈನಂ ಪೂಜಯಿಷ್ಯತಿ ॥ ೮ ॥

ಬ್ರಹ್ಮಹತ್ಯಾದಿಕಂ ಪಾಪಂ ನಾಶಂ ತಸ್ಯ ಪ್ರಯಾಸ್ಯತಿ ।
ಏವಮುಕ್ತ್ವಾ ಸಹಸ್ರಾಕ್ಷಃ ಪ್ರಹೃಷ್ಟಸ್ತ್ರಿದಿವಂ ಯಯೌ ॥ ೯ ॥

---

೪. ಬಳಿಕ ಆ ಇಂದ್ರನನ್ನು ಕುರಿತು ದೇವತೆಗಳೂ, ನಾರದನೇ ಮೊದಲಾದ ಮಹರ್ಷಿಗಳೂ ಇಂತೆಂದರು. "ದೇವೇಂದ್ರ ! ಪಾಪವನ್ನು ನಿವಾರಿಸುವ ಪ್ರಭಾಸ ಕ್ಷೇತ್ರಕ್ಕೆ ಹೋಗು.

೫. ಅಲ್ಲಿ ಮಹಾದೇವನನ್ನು ಆರಾಧಿಸಿದರೆ ಬ್ರಹ್ಮಹತ್ಯೆಯಿಂದ ಮುಕ್ತನಾಗುವೆ". ಪ್ರಿಯಳೆ ! ಅವನು ಹಾಗೆಯೇ ಆಗಲೆಂದು ಒಪ್ಪಿ ಅಲ್ಲಿಗೆ ಹೋದನು.

೬. ಅವನು ಆ ಪ್ರಭಾಸಕ್ಷೇತ್ರದಲ್ಲಿ ಮಹೇಶ್ವರಲಿಂಗವನ್ನು ಪ್ರತಿಷ್ಠೆಮಾಡಿ ಧೂಪಗಂಧಾದಿಗಳಿಂದ ಅವನ ಪೂಜೆಯಲ್ಲಿ ಆಸಕ್ತನಾದನು.

೭. ಬಳಿಕ ಅವನ ದೇಹದ ದುರ್ವಾಸನೆಯು ಕೂಡಲೆ ಅಡಗಿತು. ವೈವರ್ಣ್ಯ ವನ್ನು ಹೊಂದಿದ ಅವನ ಶರೀರವೆಲ್ಲ ಉತ್ತಮವಾಯಿತು.

೮–೧೦. ತರುವಾಯ ಇಂದ್ರನು ಸಂತೋಷಗೊಂಡು ಇಂತೆಂದನು. "ಇಲ್ಲಿಗೆ ಬಂದು ಭಕ್ತಿಯಿಂದ ಪೂಜಿಸಿದ ಮನುಷ್ಯನ ಬ್ರಹ್ಮಹತ್ಯಾದಿಪಾಪಗಳು ನಾಶವಾಗು ವುವು. ದೇವೇಂದ್ರನು ಹೀಗೆಂದು ನುಡಿದು ಬ್ರಹ್ಮಹತ್ಯೆಯಿಂದ ಮುಕ್ತನಾಗಿ ಸಂತೋಷ ದಿಂದ ದೇವಲೋಕಕ್ಕೆ ತೆರಳಲು ದೇವತೆಗಳು ಅವನನ್ನು ಪೂಜಿಸಿದರು. ಅಲ್ಲಿ

ಬ್ರಹ್ಮಹತ್ಯಾವಿನಿರ್ಮುಕ್ತಃ ಪೂಜ್ಯಮಾನೋ ದಿವೌಕಸೈಃ ।
ಗೋದಾನಂ ತತ್ರ ದಾತವ್ಯಂ ಬ್ರಾಹ್ಮಣೇ ವೇದಪಾರಗೇ ।
ಬ್ರಹ್ಮಹತ್ಯಾಪನೋದಾರ್ಥಂ ತತ್ರ ಶ್ರಾದ್ಧಂ ಸಮಾಚರೇತ್ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಇಂದ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರ್ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

ವೇದಪಾರಂಗತನಾದ ಬ್ರಾಹ್ಮಣನಿಗೆ ಗೋವನ್ನು ದಾನಮಾಡಬೇಕು. ಬ್ರಹ್ಮಹತ್ಯೆಯ ನಿವಾರಣೆಗಾಗಿ ಅಲ್ಲಿ ಶ್ರಾದ್ಧವನ್ನೂ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಇಂದ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಅನರಕೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಚಾನರಕೇಶ್ವರಂ ।
ತಸ್ಮಾದುತ್ತರದಿಗ್ಭಾಗೇ ಸರ್ವಪಾತಕನಾಶನಂ ।
ತನ್ಮಾಹಾತ್ಮ್ಯಂ ಪ್ರವಕ್ಷ್ಯಾಮಿ ಶೃಣು ಹ್ಯೇಕಮನಾಃ ಪ್ರಿಯೇ ॥ ೧ ॥
ಮಥುರಾ ನಾಮ ವಿಖ್ಯಾತಾ ನಗರೀ ಧರಣೀತಲೇ ।
ತತ್ರ ವಿಪ್ರೋಽಭವತ್ಪೂರ್ವಂ ದೇವಶರ್ಮೇತಿ ವಿಶ್ರುತಃ ।
ಅಗಸ್ತ್ಯಗೋತ್ರೋ ವಿದ್ವಾನ್ಸ್ಯ ಸ ತು ದಾರಿದ್ರ್ಯಪೀಡಿತಃ ॥ ೨ ॥
ಅಥಾಪರೋಽಭವತ್ತತ್ರ ತಾದೃಗ್ರೂಪವಯೋಽನ್ವಿತಃ ।
ತನ್ನಾಮಗೋತ್ರೋ ದೇವೇಶಿ ಬ್ರಾಹ್ಮಣೋ ವೇದಪಾರಗಃ ॥ ೩ ॥
ಅಥ ಪ್ರಾಹ ಯಮೋ ದೂತಂ ರೌದ್ರಮೂರ್ಧಶಿರೋರುಹಂ ।
ಗಚ್ಛ ಭೋ ಮಥುರಾಂ ಶೀಘ್ರಂ ದೇವಶರ್ಮಾಣಮಾನಯ ॥ ೪ ॥

ಕನ್ನಡದ ಅನುವಾದ

ಅನರಕೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಇಂದ್ರೇಶ್ವರನ ಉತ್ತರ ದಿಕ್ಕಿನಲ್ಲಿರುವುದೂ ಸಮಸ್ತಪಾಪಗಳನ್ನು ಪರಿಹರಿಸುವುದೂ ಆದ ಅನರಕೇಶ್ವರನೆಡೆಗೆ ಹೋಗಬೇಕು. ಪ್ರಿಯಳೆ! ಅವನ ಮಾಹಾತ್ಮ್ಯವನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳು.

೨. ಭೂಮಿಯಲ್ಲಿ ಮಥುರೆಯೆಂಬ ಪಟ್ಟಣವಿದೆ. ಅಲ್ಲಿ ದೇವಶರ್ಮನೆಂಬ ಪ್ರಸಿದ್ಧ ಬ್ರಾಹ್ಮಣನೊಬ್ಬನಿದ್ದನು. ಅಗಸ್ತ್ಯಗೋತ್ರದಲ್ಲಿ ಜನಿಸಿದ ವಿದ್ವಾಂಸನಾದ ಅವನು ಬಡತನದಿಂದ ವ್ಯಥೆಪಡುತ್ತಿದ್ದನು.

೩. ಅಲ್ಲಿಯೇ ಅಷ್ಟೇ ವಯಸ್ಸು ರೂಪಗಳುಳ್ಳವನೂ ಅವನ ಗೋತ್ರನಾಮವುಳ್ಳವನೂ, ವೇದಪಾರಂಗತನೂ ಆದ ಮತ್ತೊಬ್ಬ ಬ್ರಾಹ್ಮಣನಿದ್ದನು.

೪. ತರುವಾಯ ಯಮನು ಭಯಂಕರವಾದ ತಲೆಗೂದಲುಗಳುಳ್ಳ ದೂತನನ್ನು ಕುರಿತು ಮಥುರೆಗೆ ಹೋಗಿ ಶೀಘ್ರವಾಗಿ ದೇವಶರ್ಮನನ್ನು ಕರೆದುಕೊಂಡುಬಾ, ಎಂದನು.

ಅಥಾಗತ್ಯ ತತೋ ದೂತೋ ಗೃಹೀತ್ವಾ ತತ್ರ ವೈ ಗತಃ ।
ತಂ ದೃಷ್ಟ್ವಾಽಥ ಯಮೋ ನತ್ವಾ ಪ್ರಾಹ ದೂತಂ ಕ್ರುಧಾನ್ವಿತಃ ॥ ೫ ॥
ನಾಯಮಾನೇತುಮಾದಿಷ್ಟೋ ದೇವಶರ್ಮಾ ಮಯಾ ತವ ।
ಅನ್ಯೋಽಸ್ತಿ ದೇವಶರ್ಮಾ ಯಸ್ತಮಾನಯ ಗತಾಯುಷಂ ।
ಏನಂ ವಿಪ್ರಂ ಚ ದೀರ್ಘಾಯುಂ ನಯ ತತ್ರಾವಿಲಂಬಿತಂ ॥ ೬ ॥

ಈಶ್ವರ ಉವಾಚ :—

ಅಥಾಬ್ರವೀದ್ಬ್ರಾಹ್ಮಣೋ ವೈ ನಾಹಂ ಯಾಸ್ಯೇ ಗೃಹಂ ವಿಭೋ ।
ದಾರಿದ್ರ್ಯೇಣಾತಿನಿರ್ವಿಣ್ಣೋ ಯಾವಜ್ಜೀವಂ ಸುರೇಶ್ವರ ।
ಇಹೈವ ಕ್ಷಪಯಿಷ್ಯಾಮಿ ಶೇಷಮಾಯುಸ್ತವಾಂತಿಕೇ ॥ ೭ ॥

ಯಮ ಉವಾಚ :—

ಅಕಾಲೇ ನಾತ್ರ ಚಾಯಾತಿ ಕಶ್ಚಿದ್ಬ್ರಾಹ್ಮಣಸತ್ತಮ ।
ಮುಹೂರ್ತಮಪಿ ನೋ ಜೀವೇತ್ಪೂರ್ಣಕಾಲೇನ ವೈ ಭುವಿ ॥ ೮ ॥
ಅತ ಏವ ಹಿ ಮೇ ನಾಮ ಧರ್ಮರಾಜೇತಿ ವಿಶ್ರುತಂ ॥ ೯ ॥

---

೫. ಅನಂತರ ದೂತನು ಅಲ್ಲಿಗೆ ಹೋಗಿ ಆ ದೇವಶರ್ಮನನ್ನು ಕರೆದುಕೊಂಡು ಬಂದನು. ಯಮನು ಆ ಬ್ರಾಹ್ಮಣನನ್ನು ಕಂಡು ನಮಸ್ಕರಿಸಿ ದೂತನನ್ನು ಕುರಿತು ಕೋಪದಿಂದ ಇಂತೆಂದನು.

೬. "ನಾನು ಈ ದೇವಶರ್ಮನನ್ನು ಕರೆದುಕೊಂಡುಬರಲು ಅಪ್ಪಣೆ ಮಾಡಲಿಲ್ಲ. ಇನ್ನೊಬ್ಬ ದೇವಶರ್ಮನಿರುವನು. ಗತಾಯುವಾದ ಅವನನ್ನು ಕರೆದುಕೊಂಡುಬಾ. ದೀರ್ಘಾಯುಷ್ಮಂತನಾದ ಈ ಬ್ರಾಹ್ಮಣನನ್ನು ಜಾಗ್ರತೆಯಾಗಿ ಅಲ್ಲಿಗೆ ಕರೆದುಕೊಂಡು ಹೋಗು".

೭. ಈಶ್ವರನು ಹೇಳುತ್ತಾನೆ :—ಅನಂತರ ಆ ಬ್ರಾಹ್ಮಣನು, "ದಾರಿದ್ರ್ಯ ಪೀಡಿತನಾದ ನಾನು ಮನೆಗೆ ಹೋಗಲಾರೆನು. ಇಲ್ಲಿಯೇ ಬದುಕಿರುವರೆಗೆ ಉಳಿದು ಆಯಸ್ಸನ್ನು ಕಳೆಯುವೆನು" ಎಂದನು.

೮. ಯಮನು ಹೇಳುತಾನೆ :—ಬ್ರಾಹ್ಮಣೋತ್ತಮ ! ಆಯುಸ್ಸು ಮುಗಿಯದೆ ಅಕಾಲದಲ್ಲಿ ಯಾವನೊಬ್ಬನೂ ಇಲ್ಲಿಗೆ ಬರುವುದಿಲ್ಲ. ಆಯುಸ್ಸುಮುಗಿದ ತರುವಾಯ ಒಂದು ಮುಹೂರ್ತಕಾಲವೂ ಸಹ ಭೂಲೋಕದಲ್ಲಿ ಯಾವನೂ ಬದುಕಲಾರನು.

೯. ಅದ್ದರಿಂದಲೆ ನನಗೆ ಧರ್ಮರಾಜನೆಂದು ಹೆಸರಾಗಿದೆ.

ನ ಮೇ ಸುಹೃನ್ನಮೇ ದ್ವೇಷ್ಯಃ ಕಶ್ಚಿದಸ್ತಿ ಧರಾತಲೇ ।
ವಿದ್ಧಃ ಶರಶತೇನಾಪಿ ನಾಕಾಲೇ ಮ್ರಿಯತೇ ಯತಃ ॥ ೧೦ ॥
ಕುಶಾಗ್ರೇಣಾಪಿ ವಿದ್ಧಃ ಸನ್ಕಾಲೇ ಪೂರ್ಣೇ ನ ಜೀವತಿ ।
ತಸ್ಮಾದ್ಗಚ್ಛ ದ್ವಿಜಶ್ರೇಷ್ಠ ಯಾವದ್ಗಾತ್ರಂ ನ ದಹ್ಯತೇ ॥ ೧೧ ॥
ಅಥಾಬ್ರವೀದ್ಬ್ರಾಹ್ಮಣೋಽಸೌ ಯದಿ ಪ್ರೇಷಯಸೇ ಪ್ರಭೋ ।
ಪ್ರಶ್ನಮೇಕಂ ಮಯಾ ಪೃಷ್ಟೋ ಯಥಾವದ್ವಕ್ತುಮರ್ಹಸಿ ॥ ೧೨ ॥
ನ ವೃಥಾ ಜಾಯತೇ ದೇವ ಸಾಧೂನಾಂ ದರ್ಶನಂ ಕ್ವಚಿತ್ ।
ಯುಷ್ಮಾಕಂ ಚ ವಿಶೇಷೇಣ ತಸ್ಮಾದೇತದ್ಬ್ರವೀಮ್ಯಹಂ ॥ ೧೩ ॥
ಏತೇ ಯೇ ನರಕಾ ರೌದ್ರಾ ದೃಶ್ಯಂತೇ ಚ ಸುದಾರುಣಾಃ ।
ಕರ್ಮಣಾ ಕೇನ ಕಂ ಗಚ್ಛೇನ್ಮಾನವೋ ನರಕಂ ಯಮ ॥ ೧೪ ॥
ಕತಿ ಸಂಖ್ಯಾಃ ಸ್ಮೃರೇತೇ ಚ ನರಕಾಃ ಕಿಂ ಪ್ರಮಾಣತಃ ।
ಏತತ್ಸರ್ವಂ ಸುರಶ್ರೇಷ್ಠ ಯಥಾವದ್ವಕ್ತುಮರ್ಹಸಿ ॥ ೧೫ ॥

---

೧೦. ನನಗೆ ಭೂಮಿಯಲ್ಲಿ ಮಿತ್ರನೂ, ಶತ್ರುವೂ ಯಾರೂ ಇಲ್ಲ, ನೂರು ಬಾಣಗಳಿಂದ ಹೊಡೆಯಲ್ಪಟ್ಟರೂ ಅಕಾಲದಲ್ಲಿ ಪ್ರಾಣಿಯು ಸಾಯುವುದಿಲ್ಲ.

೧೧. ಕಾಲವು ಮುಗಿದ ಕೂಡಲೆ ದರ್ಭೆಯ ಕೊನೆಯಿಂದ ಚುಚ್ಚಲ್ಪಟ್ಟರೂ ಸಾಯುವುದು. ಆದ್ದರಿಂದ ಬ್ರಾಹ್ಮಣೋತ್ತಮ! ನಿನ್ನ ಶರೀರವು ದಗ್ಧವಾಗುವುದ ರೊಳಗಾಗಿ ನಿನ್ನೂರಿಗೆ ಹೋಗು.

೧೨. ಅನಂತರ ಆ ವಿಪ್ರನು ಯಮನನ್ನು ಕುರಿತು, "ಸ್ವಾಮಿ! ನೀನು ನನ್ನನ್ನು ಕಳುಹಿಸುವುದಾದರೆ ಒಂದು ಪ್ರಶ್ನೆಯನ್ನು ಕೇಳುವೆನು. ಅದಕ್ಕೆ ಉತ್ತರವನ್ನು ಕೊಡಲರ್ಹನಾಗಿರುವೆ.

೧೩. ಎಲ್ಲಿಯೂ ಸಜ್ಜನರ ದರ್ಶನವು ವ್ಯರ್ಥವಾಗುವುದಿಲ್ಲ. ಅದರಲ್ಲಿಯೂ ನಿನ್ನ ದರ್ಶನವು ನಿಷ್ಫಲವಾಗುವುದೇ ಇಲ್ಲ. ಆದ್ದರಿಂದ ನಾನು ಇದನ್ನು ಹೇಳುವೆನು.

೧೪. ಈ ದಾರುಣ ನರಕಗಳು ಕಾಣುತ್ತಿರುವುವಷ್ಟೆ. ಮಾನವನು ಯಾವ ಕರ್ಮದಿಂದ ಯಾವ ನರಕವನ್ನು ಹೊಂದುವನು ?

೧೫. ಸುರಶ್ರೇಷ್ಠ ! ಈ ನರಕಗಳು ಎಷ್ಟಿವೆ? ಇವುಗಳ ವಿಸ್ತೀರ್ಣವೆಷ್ಟು ? ಇದನ್ನೆಲ್ಲ ನನಗೆ ಹೇಳು.

ಯಮ ಉವಾಚ :—

ಶೃಣು ದೇವ ಪ್ರವಕ್ಷ್ಯಾಮಿ ಯಾವಂತೋ ನರಕಾಃ ಸ್ಥಿತಾಃ ।
ಕರ್ಮಣಾ ಯೇನ ಗಚ್ಛೇತ ಮಾನವೋ ದ್ವಿಜಸತ್ತಮ ।
ಏಕವಿಂಶತ್ಸಮಾಖ್ಯಾತಾ ನರಕಾ ಮಮ ಮಂದಿರೇ ॥ ೧೬ ॥

ಯಾನೇತಾನ್ಪ್ರೇಕ್ಷಸೇ ವಿಪ್ರ ಯಂತ್ರಮಧ್ಯೇ ವ್ಯವಸ್ಥಿತಾನ್ ।
ಪೀಡ್ಯಮಾನಾನ್ಕಿಂಕರೈರ್ಮೇ ಕೃತಘ್ನಾನ್ಪಾಪಸಂಯುತಾನ್ ॥ ೧೭ ॥

ಲೋಹಾಸ್ಯವಾಯಸಾ ಯೇಷಾಂ ನೇತ್ರೋದ್ಧಾರಂ ಪ್ರಕುರ್ವತೇ ।
ಏತೈರ್ನಿರೀಕ್ಷಿತಾನ್ಯೇವ ಕಲತ್ರಾಣಿ ದುರಾತ್ಮಭಿಃ ॥ ೧೮ ॥

ಪರೇಷಾಂ ದ್ವಿಜಶಾರ್ದೂಲ ಸರಾಗೈಃ ಪಾಪಭಿಃ ಸದಾ ।
ಕುಂಭೀಪಾಕಗತಾನೇತಾನಥ ಪಶ್ಯಸಿ ಪಾಪಿನಃ ॥ ೧೯ ॥

ಕೂಟಸಾಕ್ಷ್ಯರತಾ ಹ್ಯೇತೇ ಕಟುವಾಙ್ನಿರತಾಸ್ತಥಾ ।
ಏತೇ ಲೋಹಮಯಾನ್ಸ್ತಂಭಾನ್ಸಂತಪ್ತಾನ್ಪಾವಕಪ್ರಭಾನ್ ॥ ೨೦ ॥

ಆಲಿಂಗಂತಿ ದುರಾತ್ಮಾನಃ ಪರದಾರರತಾಸ್ತು ಯೇ ।
ಏತೇ ವೈತರಣೀಮಧ್ಯೇ ಪೂಯಶೋಣಿತಸಂಕುಲೇ ॥ ೨೧ ॥

---

೧೬. ಯಮನು ಹೇಳುತ್ತಾನೆ :—ಎಷ್ಟು ನರಕಗಳಿವೆ? ಮನುಷ್ಯನು ಯಾವ ಕರ್ಮದಿಂದ ಅವುಗಳನ್ನು ಸೇರುವನು ? ಎಂಬುದನ್ನು ಹೇಳುವೆನು. ಕೇಳು. ನನ್ನ ಪಟ್ಟಣದಲ್ಲಿ ಇಪ್ಪತ್ತೊಂದು ನರಕಗಳಿವೆ.

೧೭–೨೨. ಯಂತ್ರಮಧ್ಯದಲ್ಲಿರುವವರೂ, ನನ್ನ ಸೇವಕರಿಂದ ಪೀಡಿಸಲ್ಪಡುವವರೂ, ಕೃತಘ್ನರೂ, ಪಾಪಿಗಳೂ, ಕಬ್ಬಿಣದ ಕೊಕ್ಕಿನ ಕಾಗೆಗಳಿಂದ ಕೀಳಲ್ಪಡುತ್ತಿರುವ ಕಣ್ಣುಳ್ಳವರೂ ಆದ ಇವರು ಕಾಣುವರಷ್ಟೆ. ದುರಾತ್ಮರಾದ ಇವರು ಪಾಪಪೀಡಿತರಾಗಿ ಕಾಮುವಶದಿಂದ ಪರರ ಪತ್ನಿಯರನ್ನು ನೋಡಿದರು. ಸುಳ್ಳುಸಾಕ್ಷಿಯನ್ನು ಹೇಳುವುದರಲ್ಲಿ ಆಸಕ್ತರೂ, ಕ್ರೂರವಾಗಿ ಮಾತನಾಡುವವರೂ ಆದ ಇವರು ಕುಂಭೀಪಾಕವೆಂಬ ನರಕವನ್ನು ಹೊಂದಿರುವರು. ಪರಪತ್ನಿಯರ ಸಂಗವನ್ನು ಮಾಡಿದ ಇವರು ಕಾದು ಬೆಂಕಿಯಂತಿರುವ ಕಬ್ಬಿಣದ ಕಂಬಗಳನ್ನು ಆಲಿಂಗಿಸುತ್ತಿರುವರು. ಕೀವು ರಕ್ತಗಳಿಂದ ತುಂಬಿದ ವೈತರಣೀ ನದಿಯ ಮಧ್ಯದಲ್ಲಿರುವ ಇವರು ವಿಶ್ವಾಸ ಘಾತಕರು. ಭಯಂಕರವಾದ ಅಸಿಪತ್ರವನದಲ್ಲಿ ತುಂಡು ತುಂಡಾಗಿ

ಯೇ ತಿಷ್ಠಂತಿ ದ್ವಿಜಶ್ರೇಷ್ಠ ಸರ್ವೇ ವಿಶ್ವಾಸಘಾತಕಾಃ ।
ಅಸಿಪತ್ರವನೇ ಘೋರೇ ಭಿದ್ಯಂತೇ ಯೇ ತು ಖಂಡಶಃ ।
ತೇ ನಷ್ಟಾಃ ಸ್ವಾಮಿನಂ ತ್ಯಕ್ತ್ವಾ ಸಂಗ್ರಾಮೇ ಸಮುಪಸ್ಥಿತೇ ॥ ೨೨ ॥
ಅಂಗಾರರಾಶೀನ್ವೈ ದೀಪ್ತಾನ್ಯೇ ತಥಾ ಹ್ಯೇತೇ ನರಾಧಮಾಃ ।
ಸ್ವಾಮಿದ್ರೋಹರತಾ ಹ್ಯೇತೇ ತಥಾ ಹೇತುಪ್ರವಾದಕಾಃ ॥ ೨೩ ॥
ಲೋಹಶಂಕುಭಿರಾಕೀರ್ಣಮಾಕ್ರಮಂತಿ ನರಾಧಮಾಃ ।
ಕ್ರಂದಮಾನಾ ದ್ವಿಜಶ್ರೇಷ್ಠ ಉಪಾನದ್ದಾನವರ್ಜಿತಾಃ ॥ ೨೪ ॥
ಅಧೋಮುಖಾ ನಿಬದ್ಧಾಯೇ ವೃಕ್ಷಾಗ್ರೇ ಪಾವಕೋಪರಿ ।
ಬ್ರಹ್ಮಹತ್ಯಾನ್ವಿತಾಃ ಸರ್ವ ಏತೇ ಚೈವ ನರಾಧಮಾಃ ॥ ೨೫ ॥
ಮಶಕೈರ್ಮತ್ಕುಣೈಃ ಕಾಕೈರ್ಯೇ ಭಕ್ಷ್ಯಂತೇ ವಿಹಂಗಮೈಃ ।
ವ್ರತಭಂಗರತಾ ಹ್ಯೇತೇ ವ್ರತಿನಾಂ ಚೈವ ಹಿಂಸಕಾಃ ॥ ೨೬ ॥
ಕುಠಾರಕಂಠಿಕಾ ಹ್ಯೇತೇ ಭೂಯಃ ಸಂತಿ ತಥಾವಿಧಾಃ ।
ಗೋಹಂತಾರೋ ದುರಾತ್ಮನೋ ದೇವಬ್ರಾಹ್ಮಣನಿಂದಕಾಃ ॥ ೨೭ ॥

ಕತ್ತರಿಸಲ್ಪಡುತ್ತಿರುವ ಇವರು ಯುದ್ಧದಲ್ಲಿ ಸ್ವಾಮಿಯನ್ನು ತ್ಯಜಿಸಿ ಅಡಗಿಕೊಂಡವರು.

೨೩. ಉರಿಯುತ್ತಿರುವ ಕೆಂಡಗಳ ಸಮೂಹಗಳನ್ನು ಪ್ರವೇಶಿಸುತ್ತಿರುವ ಈ ನರಾಧಮರು ಸ್ವಾಮಿದ್ರೋಹದಲ್ಲಿ ಆಸಕ್ತರೂ, ಹೇತುವಾದಿಗಳೂ ಆಗಿರುವರು.

೨೪. ಪಾದರಕ್ಷೆಯನ್ನು ದಾನಮಾಡದ ನೀಚರು ಕಬ್ಬಿಣದ ಗೂಟಗಳಿಂದ ವ್ಯಾಪ್ತವಾದ ಪ್ರದೇಶವನ್ನು ಪರಚಿಕೊಳ್ಳುತ್ತ ತುಳಿಯುತ್ತಿರುವರು.

೨೫. ಮರದ ಕೊನೆಯಲ್ಲಿ ಬೆಂಕಿಯಮೇಲೆ ಕಟ್ಟಲ್ಪಟ್ಟ ಇವರು ಬ್ರಹ್ಮಹತ್ಯೆ ಮಾಡಿದವರು.

೨೬. ಇಲ್ಲಿ ವ್ರತವನ್ನು ಹಾಳುಮಾಡುವುದರಲ್ಲಿ ಆಸಕ್ತರೂ, ವ್ರತಾನುಷ್ಠಾನ ಮಾಡುವವರನ್ನು ಹಿಂಸಿಸುವವರೂ ಆದವರನ್ನು ಸೊಳ್ಳೆ, ತಗಣೆ, ಕಾಗೆ, ಮತ್ತು ಇತರ ಪಕ್ಷಿಗಳು ಕಡಿಯುತ್ತಿವೆ, ಕುಕ್ಕುತ್ತಿವೆ.

೨೭. ಇಲ್ಲಿ ಗೋವಧೆಮಾಡಿದವರೂ, ದೇವಬ್ರಾಹ್ಮಣರನ್ನು ನಿಂದಿಸುವವರೂ ಆದ ದುರಾತ್ಮರನ್ನು ಕೊಡಲಿಯಿಂದ ಕಡಿಯುತ್ತಿದ್ದಾರೆ.

ಯೇ ಭಕ್ಷ್ಯಂತೇ ಶೃಗಾಲೈಶ್ಚ ವೃಕೈರ್ಲೋಹಮುಖೈರ್ಮುಖೈಃ ।
ಪರಸ್ವಾನಾಂ ಚ ಹರ್ತಾರಃ ಪರಸ್ತ್ರೀಣಾಂ ಚ ಹರ್ತೃಕಾಃ ।
ಆತ್ಮಮಾಂಸಾನಿ ಯೇ ಪಾಪಾ ಭಕ್ಷಯಂತಿ ಬುಭುಕ್ಷಿತಾಃ ॥ ೨೮ ॥
ನ ದತ್ತಮನ್ನಮೇತೈಸ್ತು ಕದಾಚಿದ್ವೈ ದ್ವಿಜೋತ್ತಮ ।
ರುಧಿರಂ ಯೇ ಪಿಬಂತ್ಯೇತೇ ವಸಾಪೂಯಪರಿಪ್ಲುತಂ ।
ಬ್ರಾಹ್ಮಣಾನಾಂ ವಿನಾಶಾಯ ಗವಾಮೇತೇ ಸದಾ ಸ್ಥಿತಾಃ ॥ ೨೯ ॥
ಕೂಟಶಾಲ್ಮಲಿಬದ್ಧಾಶ್ಚ ತೀಕ್ಷ್ಣಕಂಟಕಪೀಡಿತಾಃ ।
ಛಿದ್ರಾನ್ವೇಷಣಸಂಯುಕ್ತಾಃ ಪರೇಷಾಂ ನಿತ್ಯಸಂಸ್ಥಿತಾಃ ॥ ೩೦ ॥
ಕ್ರಕಚೇನ ತು ಛಿದ್ಯಂತೇ ಯ ಇಮೇ ದ್ವಿಜಸತ್ತಮ ।
ಅಭಕ್ಷ್ಯನಿರತಾ ಹ್ಯೇತೇ ಸ್ವಧರ್ಮಸ್ಯ ವಿದೂಷಕಾಃ ॥ ೩೧ ॥
ಕನ್ಯಾವಿಕ್ರಯಕರ್ತಾರಃ ಕನ್ಯಾನಾಂ ಜೀವಭಂಜಕಾಃ ।
ಪುರೀಷಮಧ್ಯಗಾ ಹ್ಯೇತೇ ಪಚ್ಯಂತೇ ಮಮ ಕಿಂಕರೈಃ ॥ ೩೨ ॥
ಸಂದೇಶೈರ್ದಾರುಣೈರ್ಜಿಹ್ವಾ ಯೇಷಾಮುತ್ಪಾಟ್ಯತೇ ಮುಹುಃ ।
ವಾಗ್ಲೋಪನಿರತಾ ಹ್ಯೇತೇ ವೃಷಾವಾದಪರಾಯಣಾಃ ॥ ೩೩ ॥

೨೮–೨೯. ಇಲ್ಲಿ ಪರರ ಸ್ವತ್ತನ್ನೂ, ಸ್ತ್ರೀಯರನ್ನೂ ಅಪಹರಿಸಿದವರನ್ನು ನರಿಗಳೂ ಕಬ್ಬಿಣದ ಬಾಯಿಯುಳ್ಳ ತೋಳಗಳೂ ತಿನ್ನುತ್ತಿವೆ. ದ್ವಿಜೋತ್ತಮ! ಒಂದು ದಿನವೂ ಅನ್ನದಾನಮಾಡದ ಪಾಪಿಗಳು ಹಸಿವುಗೊಂಡು ತಮ್ಮ ಮಾಂಸವನ್ನೇ ತಿನ್ನುತ್ತಿರುವರು. ಯಾವಾಗಲೂ ಬ್ರಾಹ್ಮಣರನ್ನೂ, ಗೋವುಗಳನ್ನೂ ನಾಶಮಾಡುವುದರಲ್ಲಿ ಆಸಕ್ತರಾದವರು ಮೇದಸ್ಸು, ಕೀವುಗಳಿಂದ ಸೇರಿದ ರಕ್ತವನ್ನು ಕುಡಿಯುತ್ತಿರುವರು.

೩೦. ಇಲ್ಲಿ ಯಾವಾಗಲೂ ಪರರ ದೋಷಗಳನ್ನು ಹುಡುಕುವುದರಲ್ಲಿ ಆಸಕ್ತರಾದವರನ್ನು ಕೆಂಪುಬೂರಗದ ಮರಕ್ಕೆ ಕಟ್ಟಿ ಮೊನೆಯಾದ ಮುಳ್ಳುಗಳಿಂದ ಚುಚ್ಚುತ್ತಿರುವರು.

೩೧. ಇಲ್ಲಿ ಅಭಕ್ಷ್ಯಭಕ್ಷಣದಲ್ಲಿ ಆಸಕ್ತರಾದವರನ್ನೂ, ತಮ್ಮ ಧರ್ಮವನ್ನು ದೂಷಿಸುವವರನ್ನೂ ಗರಗಸದಿಂದ ಕುಯ್ಯುತ್ತಾರೆ.

೩೨. ಕನ್ಯೆಯರನ್ನು ಮಾರುವವರನ್ನೂ, ಕೊಲ್ಲುವವರನ್ನೂ ಇಲ್ಲಿ ನನ್ನ ಸೇವಕರು ಅಮೇಧ್ಯದ ನಡುವೆಯಿಟ್ಟು ಬೇಯಿಸುವರು.

೩೩. ಪರರ ವಾಗ್ಬಂಧನದಲ್ಲಿ ಆಸಕ್ತರಾದವರ ಮತ್ತು ಸುಳ್ಳಾಡುವವರ ನಾಲಿಗೆಯನ್ನು ಇಲ್ಲಿ ಭಯಂಕರವಾದ ಇಕ್ಕಳದಿಂದ ಕೀಳುವರು.

ಯೇ ಶೀತೇನ ಪ್ರಬಾಧ್ಯಂತೇ ವೇಪಮಾನಾ ಮುಹುರ್ಮುಹುಃ ।
ದೇವಸ್ವಾನಾಂ ಚ ಹರ್ತಾರೋ ಬ್ರಾಹ್ಮಣಾನಾಂ ವಿಶೇಷತಃ ॥ ೩೪ ॥
ತೇಷಾಂ ಶಿರಸಿ ನಿಕ್ಷಿಪ್ತೋ ಭೂರಿಭಾರೋ ದ್ವಿಜೋತ್ತಮ ।
ಅತೋಽತ್ರ ಬ್ರಾಹ್ಮಣಶ್ರೇಷ್ಠ ಪೂತ್ಕಾರಯಂತಿ ಭೈರವಂ ॥ ೩೫ ॥

ಯಮ ಉವಾಚ :—

ಏವಮೇತತ್ಸಮಾಖ್ಯಾತಂ ತವ ಸರ್ವಂ ದ್ವಿಜೋತ್ತಮ ।
ನರಕಾಣಾಂ ಸ್ವರೂಪಂ ತು ಕರ್ಮಣಾಂ ವೈ ಯಥಾಕ್ರಮಂ ॥ ೩೬ ॥
ಗಚ್ಛ ಶೀಘ್ರಂ ಮಹಾಭಾಗ ಯಾವತ್ಕಾಯೋ ನ ದಹ್ಯತೇ ॥ ೩೭ ॥

ಬ್ರಾಹ್ಮಣ ಉವಾಚ :—

ಕಥಯ ತ್ವಂ ಸುರಶ್ರೇಷ್ಠ ಮಮ ಸರ್ವಂ ಸಮಾಹಿತಃ ।
ನ ಗಚ್ಛೇತ್ಕರ್ಮಣಾ ಯೇನ ನರಕಂ ಮಾನವಃ ಕ್ವಚಿತ್ ॥ ೩೮ ॥
ಸತಾಂ ಸಪ್ತಪದಂ ಮೈತ್ರಮಿತ್ಯಾಹುರ್ಬುಧಿಕೋವಿದಾಃ ।
ಮಿತ್ರತಾಂ ಚ ಪುರಸ್ಕೃತ್ಯ ಸಮಾಸಾದ್ವಕ್ತುಮರ್ಹಸಿ ॥ ೩೯ ॥

---

೩೪. ಇಲ್ಲಿ ದೇವಬ್ರಾಹ್ಮಣರ ಸ್ವತ್ತನ್ನು ಅಪಹರಿಸುವವರನ್ನು ಚಳಿಯಿಂದ ನಡುಗಿಸಿ ಪೀಡಿಸುವರು.

೩೫. ಬ್ರಾಹ್ಮಣೋತ್ತಮ ! ಭೈರವನಮೇಲೆ ಉಗುಳುವವರ ತಲೆಯಮೇಲೆ ಇಲ್ಲಿ ದೊಡ್ಡ ಹೊರೆಗಳನ್ನು ಇಟ್ಟಿರುವರು.

೩೬. ಯಮನು ಹೇಳುತ್ತಾನೆ :—ದ್ವಿಜೋತ್ತಮ ! ಹೀಗೆ ನಿನಗೆ ನರಕಗಳ ಸ್ವರೂಪವನ್ನೂ, ಕರ್ಮಗಳ ರೀತಿಯನ್ನೂ ಸಂಪೂರ್ಣವಾಗಿ ಹೇಳಿರುವೆನು.

೩೭. ಭಾಗ್ಯಶಾಲಿಯೆ ! ಇವು ನಿನ್ನ ದೇಹವನ್ನು ಸುಡುವುದರೊಳಗೆ ಶೀಘ್ರವಾಗಿ ಹೋಗು.

೩೮. ಬ್ರಾಹ್ಮಣನು ಹೇಳುತ್ತಾನೆ :—ಸುರೋತ್ತಮ ! ಮನುಷ್ಯನು ಯಾವ ಕರ್ಮವನ್ನು ಮಾಡಿದರೆ ನರಕಕ್ಕೆ ಹೋಗಲಾರನೆಂಬುದನ್ನು ಸಾವಧಾನ ಮನಸ್ಸಿನಿಂದ ನನಗೆ ಹೇಳು.

೩೯. ವಿದ್ವಾಂಸರು ಏಳುಪದಗಳಿಂದ ಮಾತಾಡುವುದರಿಂದಲೆ ಸ್ನೇಹವುಂಟಾಗುವುದೆಂದು ಹೇಳುತ್ತಾರೆ, ಆದ್ದರಿಂದ ನೀನು ಮೈತ್ರಿಯನ್ನು ಹೊಂದಿ ಸಂಕ್ಷೇಪವಾಗಿ ನನಗೆ ಹೇಳು.

ಯಮ ಉವಾಚ :—

ಪ್ರಭಾಸಂ ಕ್ಷೇತ್ರಮಾಸಾದ್ಯಾನರಕೇಶ್ವರಮುತ್ತಮಂ ।
ಯಃ ಪಶ್ಯತಿ ನರೋ ಭಕ್ತ್ಯಾ ನರಕಂ ಸ ನ ಪಶ್ಯತಿ ॥ ೪೦ ॥
ಸ್ಥಾಪಿತಂ ಯನ್ಮಯಾ ಲಿಂಗಂ ಶಿವಭಕ್ತ್ಯಾ ಯುತೇನ ಚ ।
ಏತದ್ಗುಹ್ಯಂ ಮಯಾ ಪ್ರೋಕ್ತಂ ತವ ಪ್ರೀತ್ಯೈ ದ್ವಿಜೋತ್ತಮ ॥ ೪೧ ॥
ಗೋಪನೀಯಂ ಪ್ರಯತ್ನೇನ ಮಮ ವಾಕ್ಯಾದಸಂಶಯಂ ।
ಏವಮುಕ್ತಸ್ತದಾ ವಿಪ್ರಃ ಸ್ವಯಮೇವಾವನಿಂ ಯಯೌ ॥ ೪೨ ॥
ಲಬ್ಧ್ವಾ ಕಲೇವರಂ ಸೋಽಥ ವಿಸ್ಮಯಂ ಪರಮಂ ಗತಃ ।
ತತ್ಸ್ಮೃತ್ವಾ ವಚನಂ ಸರ್ವಂ ಧರ್ಮರಾಜಸ್ಯ ಧೀಮತಃ ॥ ೪೩ ॥
ಗತ್ವಾ ತತ್ರ ಸ ನಿತ್ಯಂ ವೈ ಪೂಜಯಾಮಾಸ ತಂ ಪ್ರಭುಂ ।
ಯಾವಜ್ಜೀವಂ ವರಾರೋಹೇ ತತಃ ಸಿದ್ಧಿಂ ಪರಾಂ ಗತಃ ॥ ೪೪ ॥
ತಸ್ಮಾತ್ಸರ್ವಪ್ರಯತ್ನೇನ ಭಕ್ತ್ಯಾ ತಮವಲೋಕಯನ್ ।
ಅಪಿ ಪಾತಕಯುಕ್ತೋಽಪಿ ನ ಯಾತಿ ನರಕೇ ನರಃ ॥ ೪೫ ॥
ಆಶ್ವಯುಕ್ಕೃಷ್ಣಪಕ್ಷೇ ತು ಚತುರ್ದಶ್ಯಾಂ ವಿಧಾನತಃ ।
ಯಸ್ತತ್ರ ಕುರುತೇ ಶ್ರಾದ್ಧಂ ಸೋಽಶ್ವಮೇಧಫಲಂ ಲಭೇತ್ ॥ ೪೬ ॥

೪೦–೪೨. ಯಮನು ಹೇಳುತ್ತಾನೆ :—ಪ್ರಭಾಸಕ್ಷೇತ್ರವನ್ನು ಹೊಂದಿ ನಾನು ಪ್ರತಿಷ್ಠೆಮಾಡಿರುವ ಅನರಕೇಶ್ವರನನ್ನು ಭಕ್ತಿಯಿಂದ ದರ್ಶನಮಾಡುವವನು ನರಕವನ್ನುನೋಡುವುದಿಲ್ಲ. ಗುಟ್ಟಾದ ಈ ವಿಷಯುವನ್ನುನಾನು ನಿನಗೆ ಸಂತೋಷವನ್ನುಂಟುಮಾಡಲು ಹೇಳಿರುವೆನು. ಇದನ್ನು ನೀನು ನನ್ನ ಮಾತಿನಂತೆ ನಿಶ್ಚಯವಾಗಿಯೂ ಗುಟ್ಟಾಗಿಡಬೇಕು. ಯಮನು ಹೀಗೆನ್ನಲು ಬ್ರಾಹ್ಮಣನು ತಾನೇ ಭೂಮಿಗೆ ತೆರಳಿದನು.

೪೩–೪೪. ಆವನು ತನ್ನ ದೇಹವನ್ನು ಮರಳಿ ಪಡೆದು ಅತ್ಯಾಶ್ಚರ್ಯಗೊಂಡನು. ಯಮನ ಮಾತನ್ನೆಲ್ಲ ಸ್ಮರಿಸಿಕೊಂಡು ಪ್ರಭಾಸಕ್ಷೇತ್ರಕ್ಕೆ ಹೋಗಿ ಮರಣಕಾಲದವರೆಗೆ ನರಕೇಶ್ವರನನ್ನು ಪೂಜಿಸಿ ಉತ್ತಮಸಿದ್ಧಿಯನ್ನು ಹೊಂದಿದನು.

೪೫. ಆದುದರಿಂದ ಅನರಕೇಶ್ವರನನ್ನು ಭಕ್ತಿಯಿಂದ ದರ್ಶನಮಾಡುವವನು ಪಾಪಿಷ್ಠನಾದರೂ ನರಕವನ್ನು ಹೊಂದುವುದಿಲ್ಲ.

೪೬. ಆಶ್ವಿನ ಕೃಷ್ಣಪಕ್ಷಚತುರ್ದಶೀದಿನ ಅಲ್ಲಿ ವಿಧಿಯಿಂದ ಶ್ರಾದ್ಧಮಾಡುವವನ ಅಶ್ವಮೇಧಯಾಗದ ಫಲವನ್ನು ಪಡೆಯುವನು.

ಕೃಷ್ಣಾಜಿನಂ ತತ್ರ ದೇಯಂ ಬ್ರಾಹ್ಮಣೇ ವೇದಪಾರಗೇ ।
ಯಾವತ್ತಿಲಾನಾಂ ಸಂಖ್ಯಾನಂ ತಾವತ್ಸ್ವರ್ಗೇ ಮಹೀಯತೇ ॥ ೪೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನರಕೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚವಿಂಶೋತ್ತರದ್ವಿಶತತಮೋಽಧ್ಯಾಯಃ ॥

---

೪೭. ಅಲ್ಲಿ ಮಾನವನು ವೇದಪಾರಂಗತನಾದ ಬ್ರಾಹ್ಮಣನಿಗೆ ಕೃಷ್ಣಾಜಿನವನ್ನು ದಾನಮಾಡಿದರೆ ತಿಲಸಂಖ್ಯೆಯೆಷ್ಟು ಕಾಲ ಸ್ವರ್ಗದಲ್ಲಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅನರಕೇಶ್ವರಮಾಹಾತ್ಮ್ಯವರ್ಣನನೆಂಬ
ಇನ್ನೂರಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡ್ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಮೇಘೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಪೂರ್ವಭಾಗೇ ತು ನೈಋತೇ ಪಾಪಮೋಚನಾತ್ ।
ಮೇಘೇಶ್ವರೇತಿ ವಿಖ್ಯಾತಂ ಸರ್ವಪಾತಕನಾಶನಂ ॥ ೧ ॥
ಅನಾವೃಷ್ಟಿಭಯೇ ಜಾತೇ ಶಾಂತಿಂ ತತ್ರೈವ ಕಾರಯೇತ್ ।
ವಾರುಣೀಂ ವಿಪ್ರಮುಖ್ಯೈಸ್ತು ಭಾವಯೇದುದಕೈರ್ಮಹೀಂ ॥ ೨ ॥
ಮೇಘೈಃ ಪ್ರತಿಷ್ಠಿತಂ ಲಿಂಗಂ ಯತ್ರ ನಿತ್ಯಂ ಪ್ರಪೂಜ್ಯತೇ ।
ಅನಾವೃಷ್ಟಿಭಯಂ ಕಿಂಚಿನ್ನ ಚ ತತ್ರ ಪ್ರಜಾಯತೇ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮೇಘೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಷಡ್ವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮೇಘೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಅನರಕೇಶ್ವರನ ಪೂರ್ವಭಾಗದಲ್ಲಿಯೂ, ಪಾಪಮೋಚನನ ನೈಋತ್ಯದಲ್ಲಿಯೂ ಸಕಲಪಾಪಗಳನ್ನೂ ನಾಶಗೊಳಿಸುವ ಮೇಘೇಶ್ವರಲಿಂಗವಿರುವುದು.

೨. ಪ್ರಪಂಚದಲ್ಲಿ ಅನಾವೃಷ್ಟಿಯಿಂದ ಭಯವುಂಟಾದರೆ ಬ್ರಾಹ್ಮಣರಿಂದ ವಾರುಣೀ ಶಾಂತಿಯನ್ನು ಮಾಡಿಸಿ ಭೂಮಿಯಲ್ಲಿ ಜಲವುಂಟಾಗುವಂತೆ ಮಾಡಬೇಕು.

೩. ಮೇಘಗಳು ಪ್ರತಿಷ್ಠೆಮಾಡಿರುವ ಈ ಲಿಂಗವನ್ನು ಯಾವಾಗಲೂ ಪೂಜಿಸುವವನಿಗೆ ಅನಾವೃಷ್ಟಿಯಿಂದ ಭಯವುಂಟಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮೇಘೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಬಲಭದ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಬಲಭದ್ರಪ್ರತಿಷ್ಠಿತಂ
ಲಿಂಗಂ ಮಹಾಪಾಪಹರಂ ಗಾತ್ರೋತ್ಸರ್ಗಾತ್ತದುತ್ತರೇ ॥ ೧ ॥
ಮಹಾಲಿಂಗಂ ಮಹಾದೇವಿ ಮಹಾಸಿದ್ಧಿಫಲಪ್ರದಂ ।
ಬಲಭದ್ರೇಣ ವಿಧಿನಾ ಸ್ಥಾಪಿತಂ ಪಾಪಶುದ್ಧಯೇ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪಾದಿಭಿಃ ಕ್ರಮಾತ್ ।
ತೃತೀಯಾ ರೇವತೀಯೋಗೇ ಸ ಯೋಗೇಶಪದಂ ಲಭೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬಲಭದ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಬಲಭದ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಗಾತ್ರೋತ್ಸರ್ಗದ ಉತ್ತರದಿಕ್ಕಿನಲ್ಲಿ ಬಲರಾಮನು ಪ್ರತಿಷ್ಠೆಮಾಡಿರುವ ಮಹಾಪಾಪವನ್ನು ಪರಿಹರಿಸುವ ಬಲ ಭದ್ರೇಶ್ವರನೆಡೆಗೆ ಹೋಗಬೇಕು

೨. ಮಹಾದೇವಿ ಇಲ್ಲಿ ಬಲರಾಮನು ಪಾಪಶುದ್ಧಿಗಾಗಿ ಮಹಾಸಿದ್ಧಿಯನ್ನೀಯುವ ಮಹೇಶ್ವರ ಲಿಂಗವನ್ನು ವಿಧಿಯಂತೆ ಪ್ರತಿಷ್ಠೆಮಾಡಿರುವನು.

೩. ಆ ಬಲಭದ್ರೇಶ್ವರನನ್ನು ತೃತೀಯಾರೇವತೀನಕ್ಷತ್ರಗಳ ಯೋಗವಿರುವ ದಿನ ಗಂಧಪುಷ್ಪಾದಿಗಳಿಂದ ಭಕ್ತಿಯಿಂದ ಪೂಜಿಸುವವನು ಯೋಗೇಶ್ವರನ ಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬಲಭದ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾವಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಭೈರವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಾತೃಸ್ಥಾನಮನುತ್ತಮಂ ।
ಭೈರವೇಶ್ವರೇತಿ ವಿಖ್ಯಾತಂ ಶಿವಂಭಯವಿನಾಶನಂ ॥ ೧ ॥
ಚತುರ್ದಶ್ಯಾಂ ವಿಧಾನೇನ ಕೃಷ್ಣಪಕ್ಷೇ ಯತಾತ್ಮವಾನ್ ।
ಪೂಜಯೇದ್ಗಂಧಪುಷ್ಪೈಶ್ಚ ಬಲಿದಾನೈಸ್ತಥೋತ್ತಮೈಃ ॥ ೨ ॥
ತಂ ಪುತ್ರಮಿವ ಯೋಗಿನ್ಯೋ ರಕ್ಷಂತಿ ಭುವಿ ಮಾತರಃ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೈರವೇಶ್ವರಮಾಹಾತ್ಮ್ಯವರ್ಣನಂನಾಮ
॥ ಅಷ್ಟಾವಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಭೈರವೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಸಕಲಭಯವನ್ನು ನಿವಾರಿಸುವ ಭೈರವೇಶ್ವರವೆಂಬ ಮಾತೃಸ್ಥಾನಕ್ಕೆ ಹೋಗಬೇಕು.

೨. ಕೃಷ್ಣಪಕ್ಷದ ಚತುರ್ದಶೀದಿನ ಜಿತೇಂದ್ರಿಯನಾಗಿ ವಿಧಿಯಿಂದ ಗಂಧಪುಷ್ಪಗಳಿಂದಲೂ, ಉತ್ತಮ ಬಲಿದಾನಗಳಿಂದಲೂ ಆ ಮಾತೃಸ್ಥಾನವನ್ನು ಪೂಜಿಸುವವನನ್ನು ಯೋಗಿನೀ ಮಾತೃಗಳು ಮಗನಂತೆ ಕಾಪಾಡುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭೈರವೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಗಂಗಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗಂಗಾಂ ತ್ರಿಪಥಗಾಮಿನೀಂ ।
ಅನರಕೇಶತೋ ದೇವಿ ಐಶಾನ್ಯಾಂ ದಿಶಿ ಸಂಸ್ಥಿತಾಂ ॥ ೧ ॥
ಸ್ವಯಂಭೂತಾಂ ಧರಾಮಧ್ಯಾದಾನೀತಾಂ ವಿಷ್ಣುನಾ ಪುರಾ ।
ಯಾದವಾನಾಂ ತು ಮುಕ್ತ್ಯರ್ಥಂ ಸರ್ವಪಾಪೋಪಶಾಂತಯೇ ॥ ೨ ॥
ಯಸ್ತತ್ರ ಕುರುತೇ ಸ್ನಾನಂ ಕಥಂಚಿತ್ಪುಣ್ಯಸಂಚಯಾತ್ ।
ಶ್ರಾದ್ಧಂ ಚೈವ ವಿಧಾನೇನ ನ ಸ ಶೋಚೇತ್ಕೃತಾಕೃತೇ ॥ ೩ ॥
ಬ್ರಹ್ಮಾಂಡಂ ಸಕಲಂ ದತ್ವಾ ಯತ್ಪುಣ್ಯಫಲಮಾಪ್ನುಯಾತ್ ।
ತತ್ಪುಣ್ಯಂ ಪ್ರಾಪ್ನುಯಾದ್ದೇವಿ ಕಾರ್ತಿಕ್ಯಾಂ ಜಾಹ್ನವೀತಲೇ ॥ ೪ ॥

ಕನ್ನಡದ ಅನುವಾದ

ಗಂಗಾಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಅನರಕೇಶ್ವರನ ಈಶಾನ್ಯ ದಿಕ್ಕಿನಲ್ಲಿರುವುದೂ ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ದಾರಿಗಳಿಂದ ಹರಿಯುತ್ತಿರುವುದೂ ಆದ ಗಂಗೆಯೆಡೆಗೆ ಹೋಗಬೇಕು.

೨. ಹಿಂದೆ ವಿಷ್ಣುವು ಯಾದವರ ಮುಕ್ತಿಗಾಗಿ ಸ್ವಯಂವ್ಯಕ್ತವಾದ ಗಂಗೆಯನ್ನು ಭೂಮಿಯ ಮಧ್ಯದಿಂದ ತಂದಿರುವನು.

೩. ಅಲ್ಲಿ ಮಿಂದು ಶ್ರಾದ್ಧವನ್ನು ವಿಧಿಯಿಂದ ಮಾಡಿದವನು ತನಗೆ ಲಭಿಸಿದ ಪುಣ್ಯಪ್ರಭಾವದಿಂದ ಎಂದಿಗೂ ದುಃಖಿಸುವುದಿಲ್ಲ.

೪. ದೇವಿ! ಕಾರ್ತಿಕಮಾಸದ ಹುಣ್ಣಿಮೆದಿನ ಗಂಗಾಜಲದಲ್ಲಿ ಮಿಂದವನು ಸಕಲ ಬ್ರಹ್ಮಾಂಡವನ್ನೂ ದಾನಮಾಡಿದ ಪುಣ್ಯವನ್ನು ಹೊಂದುವನು.

ಕಲೌ ಯುಗೇ ತು ಸಂಪ್ರಾಪ್ತೇ ದುರ್ಲಭಂ ತತ್ರ ದರ್ಶನಂ ।
ಕಿಂ ಪುನಃ ಸ್ನಾನದಾನಂ ತು ಪ್ರಭಾಸೇ ಜಾಹ್ನವೀಜಲೇ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಂಗಾಮಾಹಾತ್ಮ್ಯವರ್ಣನಂನಾಮ
ಏಕೋನತ್ರಿಂಶದುತ್ತರದ್ವಿಶತತಮೋಽಧ್ಯಾಯಃ

---

೫. ಕಲಿಯುಗದಲ್ಲಿ ಪ್ರಭಾಸದಲ್ಲಿರುವ ಆ ಗಂಗೆಯ ದರ್ಶನವು ದುರ್ಲಭವಾದುದು. ಸ್ನಾನದಾನಗಳಿಂದುಂಟಾದ ಪುಣ್ಯದ ವಿಷಯದಲ್ಲಿ ಏನು ಹೇಳತಕ್ಕದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಂಗಾಮಾಹಾತ್ಮ್ಯವರ್ಣನವೆಂಬ
ಇನ್ನೂರಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಗಣಪತಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಗಣಪತಿಂಪ್ರಿಯಂ ।
ತತ್ರೈವ ಸಂಸ್ಥಿತಂ ಸಮ್ಯಗ್ಮಯಾ ತತ್ರ ನಿಯೋಜಿತಃ ॥ ೧ ॥
ಗಂಗಾಯಾ ದಕ್ಷಿಣೇ ದೇವಿ ಕ್ಷೇತ್ರರಕ್ಷಣತತ್ಪರಃ ।
ಮಾಘೇ ಕೃಷ್ಣಚತುರ್ದಶ್ಯಾಂ ಯಸ್ತಂ ಪೂಜಯತೇ ನರಃ ॥ ೨ ॥
ದಿವ್ಯಮೋದಕನೈವೇದ್ಯೈಃ ಪುಷ್ಪಧೂಪಾದಿಭಿಃ ಕ್ರಮಾತ್ ।
ನ ತಸ್ಯ ಜಾಯತೇ ವಿಘ್ನಂ ಯಾವತ್ಕ್ಷೇತ್ರೇ ವಸತ್ಯಸೌ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಣಪತಿಮಾಹಾತ್ಮ್ಯವರ್ಣನಂ ನಾಮ
॥ ತ್ರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಗಣಪತಿಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಗಂಗೆಯ ದಕ್ಷಿಣದಲ್ಲಿ ಕ್ಷೇತ್ರವನ್ನು ಕಾಪಾಡುವುದಕ್ಕಾಗಿ ನಾನು ನೇಮಿಸಿರುವ ಆಸಕ್ತನಾದ ಗಣಪತಿಯೆಡೆಗೆ ಹೋಗಬೇಕು. ಮಾಘಕೃಷ್ಣಚತುರ್ದಶೀದಿನ ದಿವ್ಯ ಮೋದಕನೈವೇದ್ಯಗಳಿಂದಲೂ, ಪುಷ್ಪಧೂಪಾದಿಗಳಿಂದಲೂ ಕ್ರಮವಾಗಿ ಅವನನ್ನು ಪೂಜಿಸುವವನಿಗೆ ಆ ಕ್ಷೇತ್ರದಲ್ಲಿ ವಾಸಿಸುವವರೆಗೆ ವಿಘ್ನವುಂಟಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಣಪತಿಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಜಾಂಬವತೀನದೀಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯತ್ರ ಜಾಂಬವತೀ ನದೀ ।
ಪುರಾ ಜಾಂಬವತೀನಾಮ ವಿಷ್ಣೋರ್ಯಾ ಮಹಿಷೀ ಪ್ರಿಯಾ ।
ಅಪೃಚ್ಛದರ್ಜುನಂ ಸಾಧ್ವೀ ವದ ವಾರ್ತಾಂ ಕುರೂದ್ವಹ ॥ ೧ ॥
ತಸ್ಯಾಸ್ತದ್ವಚನಂ ಶ್ರುತ್ವಾ ಅರ್ಜುನೋ ನಿಃಶ್ವಸನ್ಮುಹುಃ ।
ಬಾಷ್ಪಗದ್ಗದಯಾ ವಾಚಾ ಇದಂ ವಚನಮಬ್ರವೀತ್ ॥ ೨ ॥
ಪರಿತ್ಯಕ್ತಾ ವಯಂ ಭದ್ರೇ ಯಾದವೈಃ ಸುಮಹಾತ್ಮಭಿಃ ।
ಬಲದೇವಸ್ಯ ವೀರಸ್ಯ ಸಾತ್ಯಕೇಶ್ಚ ಮಹಾತ್ಮನಃ ॥ ೩ ॥
ಅನ್ಯೇಷಾಂ ಯದುವೀರಾಣಾಂ ಪಾಪಕರ್ಮಾತಿನಿರ್ಘೃಣಃ ।
ಜಿಜೀವಿಷುರಿಹ ಪ್ರಾಪ್ತೋ ವಾಸುದೇವನಿರಾಕೃತಃ ॥ ೪ ॥

ಕನ್ನಡದ ಅನುವಾದ

ಜಾಂಬವತೀನದೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಜಾಂಬವತೀನದಿ ಯೆಡೆಗೆ ಹೋಗಬೇಕು. ಹಿಂದೆ ಕೃಷ್ಣನ ಅರಸಿಯಾದ ಜಾಂಬವತಿಯು ಅರ್ಜುನನನ್ನು ಕುರಿತು ಕುರುವಂಶದಲ್ಲಿ ಶ್ರೇಷ್ಠನಾದ ಅರ್ಜುನ! ಸಮಾಚಾರವನ್ನು ಹೇಳು ಎಂದು ಕೇಳಿದಳು.

೨. ಅರ್ಜುನನು ಅವಳ ನುಡಿಯನ್ನು ಕೇಳಿ ಬಹಳವಾಗಿ ನಿಟ್ಟುಸಿರುಬಿಡುತ್ತ ಬಾಷ್ಪದಿಂದ ಗದ್ಗದವಾದ ಮಾತಿನಿಂದ ಇಂತೆಂದನು.

೩–೪. ಮಂಗಳಕರಳೆ! ಮಹಾತ್ಮರಾದ ಬಲರಾಮ, ಸಾತ್ಯಕಿ ಮೊದಲಾದ ಯಾದವರು ಪಾಪಿಯೂ, ನಿರ್ದಯನೂ ಆದ ನನ್ನನ್ನು ಬಿಟ್ಟಿರುವರು. ಕೃಷ್ಣನಿಂದ ತ್ಯಜಿಸಲ್ಪಟ್ಟ ನಾನು ಬದುಕಲಿಚ್ಛೆಯಿಂದ ಇಲ್ಲಿಗೆ ಬಂದನು.

ಸಾ ಶ್ರುತ್ವಾ ಭರ್ತೃನಿಧನಮರ್ಜುನಾಚ್ಚ ಮಹಾಸತೀ ।
ಗಂಗಾತೀರೇ ಸಮುತ್ಪಾದ್ಯ ಪಾವಕಂ ಪಾವಕಪ್ರಭಾ ।
ಸಮುತ್ಸೃಜ್ಯ ಮಹಾಕಾಯಂ ನದೀಭೂತ್ವಾ ವಿನಿರ್ಯಯೌ ॥ ೫ ॥
ಸಾ ಗೃಹೀತ್ವಾ ಸತೀ ಭರ್ತುರ್ಭಸ್ಮ ಸರ್ವಂ ಚಿತೇಸ್ತಥಾ ।
ಪ್ರವಿಷ್ಟಾ ಸಾಗರಂ ದೇವಿ ತದಾ ಜಾಂಬವತೀ ಶುಭಾ ॥ ೬ ॥
ಯಾ ನಾರೀ ತತ್ರ ದೇವೇಶಿ ಭಕ್ತ್ಯಾ ಸ್ನಾನಂ ಸಮಾಚರೇತ್ ।
ತದನ್ವಯೇಽಪಿ ಕಾಚಿತ್ಸ್ತ್ರೀ ನ ವೈಧವ್ಯಮವಾಪ್ನುಯಾತ್ ॥ ೭ ॥
ತಸ್ಮಾತ್ಸರ್ವಪ್ರಯತ್ನೇನ ತತ್ರ ಸ್ನಾನಂ ಸಮಾಚರೇತ್ ।
ನರೋ ವಾ ಯದಿ ವಾ ನಾರೀ ಪ್ರಾಪ್ನೋತಿ ಪರಮಾಂ ಗತಿಂ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಾಂಬವತೀನದೀಮಾಹಾತ್ಮ್ಯವರ್ಣನಂ ನಾಮ
॥ ಏಕತ್ರಿಂಶದುತ್ತರದ್ವಿಶತತಮೋಽಧ್ಯಾಯಃ ॥

---

೫. ಆ ಜಾಂಬವತಿಯು ಅರ್ಜುನನಿಂದ ಪತಿಮರಣವನ್ನು ಕೇಳಿ ಗಂಗೆಯ ದಡದಲ್ಲಿ ಅಗ್ನಿಯನ್ನು ಉರಿಸಿ ಅದರಲ್ಲಿ ತನ್ನ ಶರೀರವನ್ನು ತ್ಯಜಿಸಿ ನದಿಯಾಗಿ ಹೊರಟಳು.

೬. ಪತಿವ್ರತೆಯಾದ ಅವಳು ಗಂಡನ ಚಿತೆಯ ಸಕಲ ಬೂದಿಯನ್ನು ತೆಗೆದುಕೊಂಡು ಸಮುದ್ರವನ್ನು ಸೇರಿದಳು.

೭. ದೇವೇಶಿ! ಅಲ್ಲಿ ಭಕ್ತಿಯಿಂದ ಮಿಂದ ನಾರಿಯೂ, ಅವಳ ವಂಶದವರಾರೂ ವೈಧವ್ಯವನ್ನು ಹೊಂದುವುದಿಲ್ಲ.

೮. ಆದುದರಿಂದ ಅಲ್ಲಿ ಮಿಂದ ಗಂಡಸಾಗಲಿ, ಹೆಂಗಸಾಗಲಿ ಉತ್ತಮ ಗತಿಯನ್ನು ಹೊಂದುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಾಂಬವತೀನದೀಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾತ್ರಿಂಶದುತ್ತರದ್ವಿಶತತಮೋऽಧ್ಯಾಯಃ

ಪಾಂಡವಕೂಪಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೂಪಂ ತ್ರೈಲೋಕ್ಯಪೂಜಿತಂ ।
ಪಶ್ಚಿಮೇ ತಸ್ಯ ತೀರ್ಥಸ್ಯ ಪಾಂಡವಾನಾಂ ಮಹಾತ್ಮನಾಂ ॥ ೧ ॥
ಯದಾರಣ್ಯಮನುಪ್ರಾಪ್ತಾಃ ಪಾಂಡವಾಃ ಪೃಥಿವೀತಲೇ ।
ಭ್ರಮಮಾಣಾ ಮಹಾದೇವಿ ಪ್ರಭಾಸಂ ಕ್ಷೇತ್ರಮಾಗತಾಃ ॥ ೨ ॥
ತತಸ್ತೇ ನ್ಯವಸಂಸ್ತತ್ರ ಕಿಂಚಿತ್ಕಾಲಂ ಸಮಾಹಿತಾಃ ।
ಗತ್ವಾ ಕ್ಷೇತ್ರಂ ಮಹಾಪುಣ್ಯಂ ತತಃ ಕೃಷ್ಣಾಬ್ರವೀದಿದಂ ॥ ೩ ॥
ಬ್ರಾಹ್ಮಣಾನಾಂ ಸಹಸ್ರಾಣಿ ಭುಂಜತೇ ಭವತಾಂ ಗೃಹೇ ।
ದೂರೇ ಜಲಾಶ್ರಯಶ್ಚೈವ ನ ತಾವಂತಶ್ಚ ಕಿಂಕರಾಃ ॥ ೪ ॥
ತಸ್ಮಾಜ್ಜಲಾಶ್ರಯಃ ಕಾರ್ಯ ಆಶ್ರಮಸ್ಯ ಸಮೀಪತಃ ।
ಯತ್ರ ಸ್ನಾನಂ ಕರಿಷ್ಯಾಮಿ ಯುಷ್ಮಾಕಂ ಸಂಪ್ರಸಾದತಃ ॥ ೫ ॥

ಕನ್ನಡದ ಅನುವಾದ

ಪಾಂಡವಕೂಪಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಜಾಂಬವತೀ ನದಿಯ ಪಶ್ಚಿಮದಲ್ಲಿರುವ ಪಾಂಡವರ ತ್ರಿಭುವನ ಪೂಜ್ಯವಾದ ಕೂಪವೆಡೆಗೆ ಹೋಗಬೇಕು.

೨–೩. ದೇವಿ! ಪಾಂಡವರು ಅರಣ್ಯದಲ್ಲಿ ಸಂಚರಿಸುತ್ತ ಪ್ರಭಾಸಕ್ಕೆ ಬಂದು ಸ್ವಲ್ಪಕಾಲ ಸಾವಧಾನ ಮನಸ್ಸಿನಿಂದ ವಾಸಿಸುತ್ತಿರಲು ದ್ರೌಪದಿಯು ಇಂತೆಂದಳು.

೪–೫. "ನಿಮ್ಮ ಮನೆಯಲ್ಲಿ ಸಾವಿರಾರು ಮಂದಿ ಬ್ರಾಹ್ಮಣರು ಭೋಜನ ಮಾಡುತ್ತಾರೆ. ಕೆರೆಯಾದರೊ ದೂರದಲ್ಲಿದೆ. ನಮಗೆ ಹೆಚ್ಚು ಮಂದಿ ಸೇವಕರಿಲ್ಲ, ಆದ್ದರಿಂದ ಆಶ್ರಮದ ಹತ್ತಿರದಲ್ಲೊಂದು ಕೆರೆಯನ್ನು ಕಟ್ಟಿಸಬೇಕು. ಅಲ್ಲಿ ನಿಮ್ಮ ಅನುಗ್ರಹದಿಂದ ನಾನು ಸ್ನಾನಮಾಡುವೆನು".

ತತಸ್ತು ಪಾಂಡವಾಃ ಸರ್ವೇ ಸಹಿತಾಸ್ತೇ ವರಾನನೇ ।
ಅಖನಂಸ್ತತ್ರ ತೇ ಕೂಪಂ ದ್ರೌಪದೀವಾಕ್ಯಪ್ರೇರಿತಾಃ ॥ ೭ ॥
ಅಥಾಜಗಾಮ ತತ್ರೈವ ಭಗವಾನ್ದೇವಕೀಸುತಃ ।
ಶ್ರುತ್ವಾ ಸಮಾಗತಾನ್ಪಾರ್ಥಾನ್ದ್ವಾರಾವತ್ಯಾಃ ಸಬಾಂಧವಃ ॥ ೮ ॥
ಪ್ರದ್ಯುಮ್ನೇನ ಚ ಸಾಂಬೇನ ಗದೇನ ನಿಷಧೇನ ಚ ।
ಯುಯುಧಾನೇನ ರಾಮೇಣ ಚಾರುದೇಷ್ಣೇನ ಧೀಮತಾ ॥ ೯ ॥
ಅನ್ಯೈಃ ಪರಿವೃತಃ ಶೂರೈರ್ಯಾದವೈರ್ಯುದ್ಧದುರ್ಮದೈಃ ।
ತೇ ಸಮೇತ್ಯ ಯಥಾನ್ಯಾಯಂ ಸಮಸ್ತಾ ಯದುಪುಂಗವಾಃ ॥ ೯ ॥
ತತಃ ಕಥಾವಸಾನೇ ಚ ಕಸ್ಮಿಂಶ್ಚಿತ್ಕಾರಣಾಂತರೇ ।
ವಾಸುದೇವಃ ಪಾಂಡುಸುತಮಿದಂ ವಚನಮಬ್ರವೀತ್ ॥ ೧೦ ॥
ಯುಧಿಷ್ಠಿರ ಮಹಾಬಾಹೋ ಕಿಂ ತೇ ಕಾಮಂ ಕರೋಮ್ಯಹಂ ।
ರಾಜ್ಯಂ ಧಾನ್ಯಂ ಧನಂ ಚಾಪಿ ಅಥವಾ ರಿಪುನಾಶನಂ ॥ ೧೧ ॥

ಯುಧಿಷ್ಠಿರ ಉವಾಚ :—

ಶಕ್ತಸ್ತ್ವಂ ಯಾದವಶ್ರೇಷ್ಠ ಸರ್ವಕರ್ಮಸ್ವಸಂಶಯಃ ।
ಪ್ರತಿಜ್ಞಾತಂ ತ್ವಯಾ ಪೂರ್ವಂ ವರ್ಷೈರ್ದ್ವಾದಶಭಿಃ ಪ್ರಿಯಂ ॥ ೧೨ ॥

---

೭. ಬಳಿಕ ಪಾಂಡವರೆಲ್ಲ ದ್ರೌಪದಿಯ ಮಾತಿನಂತೆ ಒಟ್ಟಿಗೆ ಸೇರಿ ಅಲ್ಲಿ ಒಂದು ಕೂಪವನ್ನು ತೋಡಿದರು.

೮–೧೦. ಬಳಿಕ ಅಲ್ಲಿಗೆ ಪಾಂಡವರು ಬಂದಿರುವುದನ್ನು ಕೇಳಿ ಶ್ರೀ ಕೃಷ್ಣನು ದ್ವಾರಕಿಯಿಂದ ಪ್ರದ್ಯುಮ್ನ, ಸಾಂಬ, ಗದ, ನಿಷಧ, ಯುಯುಧಾನ, ರಾಮ, ಚಾರುದೇಷ್ಣ ಮೊದಲಾದ ವೀರ ಬಂಧು ಬಳಗದವರೊಡನೆ ಬಂದು ಆ ಪಾಂಡವರೊಡನೆ ಮಾತಾಡುತ್ತ ಕೊನೆಯಲ್ಲಿ ಯುಧಿಷ್ಠಿರನನ್ನು ಕುರಿತು ಇಂತೆಂದನು.

೧೧. "ದೀರ್ಘಬಾಹುವಾದ ಯುಧಿಷ್ಠಿರ! ನಾನು ರಾಜ್ಯ, ಧಾನ್ಯ, ಧನ, ಶತ್ರುನಾಶ ಇವುಗಳಲ್ಲಿ ನಿನಗೆ ಅಭೀಷ್ಟವಾದ ಯಾವುದನ್ನು ನೆರವೇರಿಸಲಿ".

೧೨. ಯುಧಿಷ್ಠಿರನು ಹೇಳುತ್ತಾನೆ :—ಯಾದವೋತ್ತಮ! ನೀನು ಎಲ್ಲ ಕಾರ್ಯಗಳಲ್ಲಿಯೂ ಸಮರ್ಥನಾಗಿರುವೆ. ನೀನು ಹನ್ನೆರಡು ವರ್ಷಗಳ ಹಿಂದೆ ನನಗೆ ಪ್ರಿಯವಾದುದನ್ನು ಪ್ರತಿಜ್ಞೆ ಮಾಡಿರುವೆ.

೧೩. ಜಗದೊಡೆಯ! ಸಕಲ ದೇವವರಾಧ್ಯನಾದ ನೀನು ಸತುಷ್ಟನಾಗಿರಲು ಕೈಗೂಡದ ಕಾರ್ಯವಿಲ್ಲ.

ತಸ್ಮಾನ್ನಾಸ್ತಿ ತ್ರಿಷು ಲೋಕೇಷು ಯನ್ನ ಸಿದ್ಧ್ಯತಿ ಭೂತಲೇ ।
ತ್ವಯಿ ತುಷ್ಟೇ ಜಗನ್ನಾಥ ಸರ್ವದೇವನಮಸ್ಕೃತೇ ॥ ೧೩ ॥
ಅವಶ್ಯಂ ಯದಿ ತುಷ್ಟೋಽಸಿ ಮಮ ಸರ್ವಜಗತ್ಪತೇ ।
ಅತ್ರ ಸಾನ್ನಿಧ್ಯಮಾಗಚ್ಛ ಕೂಪೇ ನಿತ್ಯಂ ಜನಾರ್ದನ ॥ ೧೪ ॥
ಅತ್ರಾಗತ್ಯ ನರೋ ಯಸ್ತು ಭಕ್ತ್ಯಾ ಸ್ನಾನಂ ಸಮಾಚರೇತ್ ।
ಸ ಯಾತು ವೈಷ್ಣವಂ ಸ್ಥಾನಂ ಪ್ರಸಾದಾತ್ತವ ಕೇಶವ ॥ ೧೫ ॥

ಈಶ್ವರ ಉವಾಚ :—

ಏವಂ ಭವಿಷ್ಯತೀತ್ಯುಕ್ತ್ವಾ ತದಾಮಂತ್ರ್ಯ ಯುಧಿಷ್ಠಿರಂ ।
ಪ್ರಯಯೌ ದ್ವಾರಕಾಂ ಕೃಷ್ಣಃ ಸರ್ವಲೋಕನಮಸ್ಕೃತಃ ॥ ೧೬ ॥
ತಸ್ಮಿಞ್ಶ್ರಾದ್ಧಂ ನರಃ ಕೃತ್ವಾ ವಾಜಿಮೇಧಫಲಂ ಲಭೇತ್ ।
ಪ್ರಸಾದಾದ್ದೇವದೇವಸ್ಯ ವಿಷ್ಣೋರಮಿತತೇಜಸಃ ॥ ೧೭ ॥
ತದರ್ಧಂ ತರ್ಪಣೇನೈವ ಸ್ನಾನಾತ್ಪಾದಮವಾಪ್ನುಯಾತ್ ।
ತಸ್ಮಾತ್ಸರ್ವಪ್ರಯತ್ನೇನ ತತ್ರ ಶ್ರಾದ್ಧಂ ಸಮಾಚರೇತ್ ॥ ೧೮ ॥
ಜ್ಯೇಷ್ಠಸ್ಯ ಪೌರ್ಣಮಾಸ್ಯಾಂ ಯಃ ಸ್ನಾನಂ ಶ್ರಾದ್ಧಂ ಕರಿಷ್ಯತಿ ।
ಸಾವಿತ್ರೀಂ ಚೈವ ಸಂಪೂಜ್ಯ ಸ ಯಾಸ್ಯತಿ ಪರಮಂ ಪದಂ ॥ ೧೯ ॥

---

೧೪. ಜನಾರ್ದನ! ನೀನು ನನ್ನಲ್ಲಿ ಸಂತುಷ್ಟನಾಗಿದ್ದರೆ ಈ ಕೂಪದಲ್ಲಿ ನಿತ್ಯವೂ ಸನ್ನಿಹಿತನಾಗಿರು.

೧೫. ಕೇಶವ! ಇಲ್ಲಿ ಭಕ್ತಿಯಿಂದ ಮಿಂದವನು ನಿನ್ನ ಅನುಗ್ರಹದಿಂದ ವೈಷ್ಣವ ಸ್ಥಾನವನ್ನು ಪಡೆಯಲಿ.

೧೬. ಈಶ್ವರನು ಹೇಳುತ್ತಾನೆ:—ಆಗ ಸಮಸ್ತ ಜನರಿಂದವಂದಿತನಾದ ಶ್ರೀಕೃಷ್ಣನು ಹಾಗೆಯೇ ಆಗುವುದೆಂದು ಹೇಳಿ ದ್ವಾರಕೆಗೆ ತೆರಳಿದನು.

೧೭. ಅಲ್ಲಿ ಶ್ರಾದ್ಧಗೈದವನು ವಿಷ್ಣುವಿನ ಅನುಗ್ರಹದಿಂದ ಅಶ್ವಮೇಧಯಾಗದ ಫಲವನ್ನು ಪಡೆಯುವನು.

೧೮. ತರ್ಪಣಮಾಡುವುದರಿಂದ ಅದರ ಅರ್ಧಫಲವನ್ನೂ, ಸ್ನಾನಮಾಡುವುದರಿಂದ ನಾಲ್ಕನೆ ಒಂದಂಶ ಫಲವನ್ನೂ ಹೊಂದುವನು. ಆದ್ದರಿಂದ ಶ್ರಾದ್ಧವನ್ನು ಮಾಡಬೇಕು.

೧೯. ಜ್ಯೇಷ್ಠಶುದ್ಧ ಪೂರ್ಣಿಮಾದಿನ ಸ್ನಾನ, ಶ್ರಾದ್ಧಗಳನ್ನು ಮಾಡಿ ಸಾವಿತ್ರಿಯನ್ನು ಪೂಜಿಸಿದವನು ಉತ್ತಮ ಪದವಿಯನ್ನು ಹೊಂದುವನು.

ಗೋದಾನಂ ತತ್ರ ದೇಯಂ ತು ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೨೦ ॥

ಇತಿ ಶ್ರೀ ಸ್ಕಾಂದೇಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾಂಡವಕೂಪಮಾಹಾತ್ಮ್ಯವರ್ಣನಂ ನಾಮ
ದ್ವಾತ್ರಿಂಶದುತ್ತರದ್ವಿಶತತಮೋಽಧ್ಯಾಯಃ

---

೨೦. ಯಾತ್ರೆಯ ಫಲವನ್ನು ಬಯಸುವವನು ಅಲ್ಲಿ ಗೋದಾನವನ್ನು ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಾಂಡವಕೂಪಮಾಹಾತ್ಮ್ಯವರ್ಣನವೆಂಬ
ಇನ್ನೂರಮುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯಸ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಪಾಂಡವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಪೂಜಯೇದ್ದೇವಿ ಪಂಚ ಲಿಂಗಾನಿ ಭಾವಿತಃ ।
ಪ್ರತಿಷ್ಠಿತಾನಿ ದೇವೇಶಿ ಪಾಂಡವೈಶ್ಚ ಮಹಾತ್ಮಭಿಃ ॥ ೧ ॥
ಯಸ್ತಾನ್ಪೂಜಯತೇ ಭಕ್ತ್ಯಾ ಸ ಮುಕ್ತಃ ಪಾತಕೈರ್ಭವೇತ್ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಾಂಡವೇಶ್ವರಮಾಹಾತ್ಮ್ಯವರ್ಣನಂ ನಾಮ
ತ್ರಯಸ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಪಾಂಡವೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ದೇವಿ! ಅಲ್ಲಿಯೇ ಮಹಾತ್ಮರಾದ ಪಾಂಡವರು ಪ್ರತಿಷ್ಠೆಮಾಡಿರುವ ಪಂಚಲಿಂಗಗಳನ್ನು ಪೂಜಿಸಿದವನು ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಾಂಡವೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಮುವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಸ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ದಶಾಶ್ವಮೇಧಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತೀರ್ಥಂ ತ್ರೈಲೋಕ್ಯವಿಶ್ರುತಂ ।
ದಶಾಶ್ವಮೇಧಿಕಂ ನಾಮ ಮಹಾಪಾತಕನಾಶನಂ ॥ ೧ ॥
ವಾಜಿಮೇಧೈಃ ಪುರಾ ಚೇಷ್ಟಂ ದಶಭಿಸ್ತತ್ರ ಭಾಮಿನಿ ।
ಭರತೇನ ಸಮಾಗತ್ಯ ಮತ್ವಾ ಕ್ಷೇತ್ರಮನುತ್ತಮಂ ॥ ೨ ॥
ತತ್ರ ತೃಪ್ತಃ ಸಹಸ್ರಾಕ್ಷಃ ಸೋಮನಾಥೇನ ಭಾಮಿನಿ ।
ಕೃಪಣಾ ಖಾದ್ಯಪಾನೈಶ್ಚ ದಕ್ಷಿಣಾಭಿರ್ದ್ವಿಜಾತಯಃ ॥ ೩ ॥
ಅಥೋಚುಸ್ತ್ರಿದಶಾಃ ಸರ್ವೇ ಸುಪ್ರೀತಾ ಭರತಂ ನೃಪಂ ।
ತುಷ್ಟಾಸ್ತವ ಮಹಾಬಾಹೋ ಯಜ್ಞೈಃ ಸಂತರ್ಪಿತಾ ವಯಂ ।
ವರಂ ವೃಣೀಷ್ವ ರಾಜೇಂದ್ರ ಯತ್ತೇ ಮನಸಿ ವರ್ತತೇ ॥ ೪ ॥

ರಾಜೋವಾಚ :—

ಅತ್ರಾಗತ್ಯ ನರೋ ಭಕ್ತ್ಯಾ ಯಃ ಸ್ನಾನಂ ಕುರುತೇ ನರಃ ।
ದಶಾನಾಮಶ್ವಮೇಧಾನಾಂ ಸ ಪ್ರಾಪ್ನೋತು ಫಲಂ ಶುಭಂ ॥ ೫ ॥

ಕನ್ನಡದ ಅನುವಾದ

ದಶಾಶ್ವಮೇಧಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ತ್ರಿಭುವನಪ್ರಸಿದ್ಧವಾದ ಮಹಾಪಾತಕಗಳನ್ನು ನಾಶಗೊಳಿಸುವ ದಶಾಶ್ವಮೇಧಿಕಕ್ಷೇತ್ರಕ್ಕೆ ಹೋಗಬೇಕು.

೨. ಪ್ರಿಯಳೆ! ಹಿಂದೆ ಭರತನೆಂಬ ರಾಜನು ಪ್ರಭಾಸಕ್ಷೇತ್ರವು ಉತ್ತಮವಾದುದೆಂದರಿತು ಅಲ್ಲಿಗೆ ಬಂದು ಹತ್ತು ಅಶ್ವಮೇಧಯಾಗಗಳನ್ನು ಮಾಡಿದನು.

೩. ಅದರಿಂದ ಇಂದ್ರನು ಸೋಮನಾಥನೊಡನೆ ತೃಪ್ತಿಗೊಂಡನು, ದೀನರಾದ ಬ್ರಾಹ್ಮಣರೂ ತಿಂಡಿತೀರ್ಥಗಳಿಂದಲೂ, ದಕ್ಷಿಣೆಗಳಿಂದಲೂ ತೃಪ್ತರಾದರು.

೪. ತರುವಾಯ ಸಂತುಷ್ಟರಾದ ದಿವಿಜರು ಭರತನೃಪನನ್ನು ಕುರಿತು "ದೊರೆಯೆ! ನಾವು ನಿನ್ನ ಯಜ್ಞಗಳಿಂದ ಸಂತೋಷಗೊಂಡಿದ್ದೇವೆ. ನಿನಗಭೀಷ್ಟವಾದ ವರವನ್ನು ಕೇಳಿಕೊ" ಎಂದರು.

೫. ರಾಜನು ಹೇಳುತ್ತಾನೆ :—ಇಲ್ಲಿಗೆ ಬಂದು ಭಕ್ತಿಯಿಂದ ಮಿಂದ ಮಾನವನು ಹತ್ತು ಅಶ್ವಮೇಧಯಾಗಗಳ ಫಲವನ್ನು ಪಡೆಯಲಿ.

ದೇವಾ ಊಚುಃ :—
ದಶಾನಾಮಶ್ವಮೇಧಾನಾಂ ಶ್ರದ್ಧಯಾ ಫಲಮಾಪ್ಸ್ಯತಿ ।
ದಶಾಶ್ವಮೇಧಿಕಂ ನಾಮ ತೀರ್ಥಮೇತನ್ಮಹೀತಲೇ ।
ಖ್ಯಾತಿಂ ಯಾಸ್ಯತಿ ರಾಜೇಂದ್ರ ನಾತ್ರ ಕಾರ್ಯಾ ವಿಚಾರಣಾ ॥ ೬ ॥
ಈಶ್ವರ ಉವಾಚ :—
ತತಃ ಪ್ರಭೃತಿ ತತ್ತೀರ್ಥಂ ಪ್ರಖ್ಯಾತಂ ಧರಣೀತಲೇ ।
ದಶಾಶ್ವಮೇಧಿಕಮಿತಿ ಸರ್ವಪಾಪಪ್ರಣಾಶನಂ ॥ ೭ ॥
ಐಂದ್ರವಾರುಣಮಾಶ್ರಿತ್ಯ ಗೋಮುಖಾದಾಶ್ವಮೇಧಿಕಂ ।
ಅತ್ರಾಂತರೇ ಮಹಾದೇವಿ ಶಿವಕ್ಷೇತ್ರಂ ವಿದುರ್ಬುಧಾಃ ॥ ೮ ॥
ಸರ್ವಪಾಪಹರಂ ದಿವ್ಯಂ ಸ್ವರ್ಗಸೋಪಾನಸಂನಿಭಂ ।
ಸಪಾದಕೋಟಿತೀರ್ಥಾನಾಂ ಸ್ಥಾನಂ ತತ್ಪರಿಕೀರ್ತಿತಂ ॥ ೯ ॥
ಪ್ರಾಣತ್ಯಾಗೇ ಕೃತೇ ತತ್ರ ಶಿವಲೋಕೇ ಚ ಮೋದತೇ ।
ತಿರ್ಯಗ್ಯೋನಿಗತಾಃ ಪಾಪಾಃ ಕೀಟಪಕ್ಷಿಮೃಗಾದಯಃ ॥ ೧೦ ॥
ತೇಽಪಿ ಯಾಂತಿ ಪರಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ।
ತಿಲೋದಕಪ್ರದಾನೇನ ಮಾತೃಕಾಃ ಪೈತೃಕಾಸ್ತಥಾ ॥ ೧೧ ॥

---

೬. ದೇವತೆಗಳು ಹೇಳುತ್ತಾರೆ :—ದೊರೆಯೆ ! ಇಲ್ಲಿ ಶ್ರದ್ಧೆಯಿಂದ ಮಿಂದವನು ಹತ್ತು ಅಶ್ವಮೇಧಯಾಗಗಳ ಫಲವನ್ನು ಹೊಂದುವನು. ಈ ತೀರ್ಥವು ಪ್ರಪಂಚದಲ್ಲಿ ದಶಾಶ್ವಮೇಧಿಕವೆಂದು ಪ್ರಸಿದ್ಧವಾಗುವುದು, ಈ ವಿಷಯದಲ್ಲಿ ವಿಚಾರವಿಲ್ಲ.

೭. ಈಶ್ವರನು ಹೇಳುತ್ತಾನೆ :—ಅದು ಮೊದಲ್ಗೊಂಡು ಆ ತೀರ್ಥವು ಧರೆಯಲ್ಲಿ ಸಕಲ ದುರಿತಗಳನ್ನು ನಿವಾರಿಸುವ ದಶಾಶ್ವಮೇಧಿಕವೆಂದು ವಿಖ್ಯಾತ ವಾಯಿತು.

೮. ಗೋಮುಖಕ್ಷೇತ್ರದಿಂದ ಅಶ್ವಮೇಧಿಕಕ್ಷೇತ್ರದವರೆಗೆ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿರುವುವು ಶಿವಕ್ಷೇತ್ರಗಳಾಗಿರುವುವು.

೯. ಸಕಲ ಪಾಪಗಳನ್ನು ನಿವಾರಿಸುವುದೂ, ಸ್ವರ್ಗಕ್ಕೆ ಮೆಟ್ಟಲಿನಂತಿರುವುದೂ ಆದ ಈ ಶಿವಕ್ಷೇತ್ರದಲ್ಲಿ ನೂರಇಪ್ಪತ್ತೈದುಲಕ್ಷ ತೀರ್ಥಗಳು ನೆಲೆಸಿರುವುವು.

೧೦–೧೩. ಅಲ್ಲಿ ಮೃತನಾದವನು ಶಿವಲೋಕದಲ್ಲಿ ಆನಂದಪಡುವನು. ಪಶು ಪಕ್ಷಿಗಳೂ ಅಲ್ಲಿ ಮೃತವಾದರೆ ಶಿವಸ್ಥಾನವನ್ನು ಸೇರುವುವು. ತಿಲತರ್ಪಣ ಕೊಡು ವುದರಿಂದ ತಾಯಿತಂದೆಸಂಬಂಧಿಕರಾದ ಪಿತೃಗಳು ಪ್ರಳಯಕಾಲದವರೆಗೆ ತೃಪ್ತಿ ಕೊಳ್ಳು ವರು. ಅಲ್ಲಿ ಹಿಂದೆ ಬ್ರಹ್ಮನು ಅನೇಕ ಯಜ್ಞಗಳನ್ನು ಮಾಡಿರುವನು. ದೇವೇಂದ್ರನೂ

ಪಿತರಸ್ತಸ್ಯ ತೃಪ್ಯಂತಿ ಯಾವದಾಭೂತಸಂಪ್ಲವಂ ।
ತತ್ರೇಷ್ಟ್ವಾ ಬ್ರಹ್ಮಣಾ ಪೂರ್ವಮಸಂಖ್ಯಾತಾ ಮಖೋತ್ತಮಾಃ ॥ ೧೨ ॥
ಶಕ್ರಶ್ಚ ದೇವರಾಜತ್ವಂ ತತ್ರೇಷ್ಟ್ವಾ ಸಮವಾಪ್ತವಾನ್ ।
ಕಾರ್ತವೀರ್ಯೇಣ ತತ್ರೈವ ಕೃತಂ ಯಜ್ಞಶತಂ ಪುರಾ ॥ ೧೩ ॥
ಏವಂ ತತ್ಪ್ರವರಂ ಸ್ಥಾನಂ ಕ್ಷೇತ್ರಗರ್ಭಾಂತಿಕಂ ಪ್ರಿಯೇ ।
ಮೃತಾನಾಂ ತತ್ರ ಜಂತೂನಾಮಪುನರ್ಭವದಾಯಕಂ ॥ ೧೪ ॥
ವೃಷೋತ್ಸರ್ಗಂ ತು ಯಸ್ತತ್ರ ಕುರ್ಯಾದ್ಭಕ್ತ್ಯಾ ಭಾವಿತಾತ್ಮವಾನ್ ।
ಯಾವಂತಿ ವೃಷರೋಮಾಣಿ ತಾವತ್ಸ್ವರ್ಗೇ ಮಹೀಯತೇ ॥ ೧೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದಶಾಶ್ವಮೇಧಮಾಹಾತ್ಮ್ಯವರ್ಣನಂನಾಮ
॥ ಚತುಸ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಅಲ್ಲಿ ಯಾಗಮಾಡಿ ದೇವರಾಜನಾದನು. ಹಿಂದೆ ಕಾರ್ತವೀರ್ಯನೂ ಅಲ್ಲಿ ಅನೇಕ ಯಜ್ಞಗಳನ್ನು ಮಾಡಿರುವನು.

೧೪. ಪ್ರಿಯಳೆ! ಹೀಗೆ ಆ ಕ್ಷೇತ್ರದೊಳಗಿರುವ ಆ ಸ್ಥಳವು ಅತ್ಯುತ್ತಮವಾದುದು. ಅಲ್ಲಿ ಮೃತವಾದ ಜಂತುಗಳು ಮೋಕ್ಷವನ್ನು ಹೊಂದುವುವು.

೧೫. ಅಲ್ಲಿ ಭಕ್ತಿಯಿಂದ ವೃಷೋತ್ಸರ್ಗಮಾಡಿದವನು ಆ ವೃಷಭದ ರೋಮಗಳ ಸಂಖ್ಯೆಯಷ್ಟುಕಾಲ ಸ್ವರ್ಗಲೋಕದಲ್ಲಿ ಪೂಜ್ಯನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದಶಾಶ್ವಮೇಧಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚತ್ರಿಂಶದುತ್ತರಶತತಮೋಽಧ್ಯಾಯಃ

ಶತಮೇಧಾದಿಲಿಂಗತ್ರಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇಲ್ಲಿಂಗತ್ರಯಮನುತ್ತಮಂ ।
ಶತಮೇಧಂ ಸಹಸ್ರಮೇಧಂ ಕೋಟಿಮೇಧಮಿತಿ ಕ್ರಮಾತ್ ॥ ೧ ॥
ದಕ್ಷಿಣೇ ಶತಮೇಧಂ ತು ಶತಯಜ್ಞಫಲಪ್ರದಂ ।
ಕಾರ್ತವೀರ್ಯೇಣ ತತ್ರೈವ ಕೃತಂ ಯಜ್ಞಶತಂ ಪುರಾ ॥ ೨ ॥
ಪ್ರತಿಷ್ಠಾಪ್ಯ ಮಹಾಲಿಂಗಂ ಸರ್ವಪಾತಕನಾಶನಂ ।
ಮಧ್ಯಭಾಗೇಽತ್ರ ಯಲ್ಲಿಂಗಂ ಕೋಟಿಮೇಧೇತಿ ವಿಶ್ರುತಂ ॥ ೩ ॥
ತತ್ರೇಷ್ಟ್ವಾ ಬ್ರಾಹ್ಮಣಾ ಪೂರ್ವಂ ಕೋಟಿಸಂಖ್ಯಾ ಮಖೋತ್ತಮಾಃ ।
ಸಂಸ್ಥಾಪ್ಯ ತು ಮಹಾದೇವಂ ಶಂಕರಂ ಲೋಕಶಂಕರಂ ॥ ೪ ॥
ತಸ್ಯ ಉತ್ತರಭಾಗಸ್ಥಂ ಸಹಸ್ರಕ್ರತುಸಂಜ್ಞಕಂ ।
ಶಕ್ರಶ್ಚ ದೇವರಾಜೋಽಪಿ ಸಹಸ್ರಂ ಯಷ್ಟವಾನ್ಕ್ರತೂನ್ ॥ ೫ ॥

ಕನ್ನಡದ ಅನುವಾದ

ಶತಮೇಧಾದಿಲಿಂಗತ್ರಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಅನಂತರ ಅಲ್ಲಿಯೇ ಇರುವ ಶತಮೇಧ, ಸಹಸ್ರಮೇಧ, ಕೋಟಿ ಮೇಧ ಎಂಬ ಮೂರು ಲಿಂಗಗಳನ್ನು ನೋಡಬೇಕು.

೨–೩. ದಕ್ಷಿಣದಲ್ಲಿ ನೂರು ಯಜ್ಞಗಳ ಫಲವನ್ನೀಯುವ ಶತಮೇಧ ಎಂಬ ಲಿಂಗವಿರುವುದು. ಹಿಂದೆ ಕಾರ್ತವೀರ್ಯನು ಅಲ್ಲಿಯೇ ಮಹಾಲಿಂಗವನ್ನು ಪ್ರತಿಷ್ಠೆ ಮಾಡಿ ನೂರು ಯಜ್ಞಗಳನ್ನು ಮಾಡಿರುವನು. ಇಲ್ಲಿ ಮಧ್ಯಭಾಗದಲ್ಲಿ ಕೋಟಿಮೇಧ ವೆಂಬ ಲಿಂಗವಿರುವುದು.

೪. ಇಲ್ಲಿ ಹಿಂದೆ ಚತುರ್ಮುಖನು ಜಗತ್ತಿಗೆ ಕಲ್ಯಾಣವನ್ನುಂಟುಮಾಡುವ ಮಹಾದೇವಲಿಂಗವನ್ನು ಪ್ರತಿಷ್ಠಿಸಿ ಕೋಟಿಯಜ್ಞಗಳನ್ನು ಮಾಡಿದನು.

೫–೭. ಆದರ ಉತ್ತರಭಾಗದಲ್ಲಿ ಸಹಸ್ರಕ್ರತುವೆಂಬ ಲಿಂಗವಿರುವುದು. ಇಲ್ಲಿ ದೇವೇಂದ್ರನು ದೇವತೆಗಳಿಗೆ ಆದಿ ದೇವತೆಯಾದ ಮಹಾಲಿಂಗವನ್ನು ಪ್ರತಿಷ್ಠೆಮಾಡಿ

ಪ್ರತಿಷ್ಠಾಪ್ಯ ಮಹಾಲಿಂಗಂ ದೇವಾನಾಮಾದಿದೈವತಂ ।
ಗಂಧಪುಷ್ಪಾದಿವಿಧಿನಾ ಪಂಚಾಮೃತರಸೋದಕೈಃ ॥ ೬ ॥
ಸ ಪ್ರಾಪ್ನುಯಾತ್ಫಲಂ ದೇವಿ ಲಿಂಗನಾಮೋದ್ಭವಂ ಕ್ರಮಾತ್ ।
ಗೋದಾನಂ ತ್ರ ದೇಯಂ ತತು ಸಮಗ್ರಾಂ ಯಾತ್ರಾಫಲೇಪ್ಸುಭಿಃ ॥ ೭ ॥
ದಶಲಕ್ಷಾಣಿ ತೀರ್ಥಾನಾಂ ತತ್ರ ತಿಷ್ಠಂತಿ ಭಾಮಿನಿ ।
ಲಿಂಗತ್ರಯಂ ತಥಾ ಮಧ್ಯೇ ಸರ್ವಪಾತಕನಾಶನಂ ॥ ೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿತಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶತಮೇಧಾದಿಲಿಂಗತ್ರಯಮಾಹಾತ್ಮ್ಯವರ್ಣನಂ ನಾಮ
ಪಂಚತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಸಾವಿರ ಯಾಗಗಳನ್ನು ಮಾಡಿದನು. ಈ ಲಿಂಗಗಳನ್ನು ಪಂಚಾಮೃತಾಭಿಷೇಕಮಾಡಿ ಗಂಧ ಪುಷ್ಪಾದಿಗಳಿಂದ ಪೂಜಿಸಿದವನು ಲಿಂಗನಾಮದ ಸಂಖ್ಯೆಯಷ್ಟು ಫಲವನ್ನು ಹೊಂದುವನು. ಯಾತ್ರಾಫಲವನ್ನು ಬಯಸುವವನು ಅಲ್ಲಿ ಗೋವುಗಳನ್ನು ದಾನ ಮಾಡಬೇಕು.

೮. ಅಲ್ಲಿ ಹತ್ತು ಲಕ್ಷ ತೀರ್ಥಗಳಿರುವುವು. ಮಧ್ಯದಲ್ಲಿ ಸಕಲ ಪಾತಕಗಳನ್ನೂ ನಾಶಗೊಳಿಸುವ ಮೂರುಲಿಂಗಗಳಿರುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶತಮೇಧಾದಿಲಿಂಗತ್ರಯಮಾಹಾತ್ಮ್ಯವರ್ಣನವೆಂಬ
ಇನ್ನೂರ ಮುವ್ವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ದುರ್ವಾಸಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದುರ್ವಾಸಾದಿತ್ಯಮುತ್ತಮಂ ।
ಯತ್ರ ದುರ್ವಾಸಸಾ ತಪ್ತಂ ತಪೋ ವರ್ಷಸಹಸ್ರಕಂ ।
ನಿರಾಹಾರೋ ಜಿತಾಹಾರಃ ಸೂರ್ಯಾರಾಧನತತ್ಪರಃ ॥ ೧ ॥

ಏವಂ ಕಾಲೇನ ಮಹತಾ ದಿವ್ಯತೇಜಾ ಜನಾಧಿಪಃ ।
ಪ್ರತ್ಯಕ್ಷಂ ದರ್ಶನಂ ಗತ್ವಾ ಪ್ರಾಹ ಸೂರ್ಯೋ ಮಹಾಮುನಿಂ ॥ ೨ ॥

ಸೂರ್ಯ ಉವಾಚ :—

ಮಾ ಬ್ರಹ್ಮನ್ಸಾಹಸಂ ಕಾರ್ಷೀರ್ವರಂ ವರಯ ಸುವ್ರತ ।
ಅಪ್ರಾಪ್ಯಮಪಿ ದಾಸ್ಯಾಮಿ ಯತ್ತೇ ಮನಸಿ ವರ್ತತೇ ॥ ೩ ॥

ಕನ್ನಡದ ಅನುವಾದ

ದುರ್ವಾಸಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ದುರ್ವಾಸಾದಿತ್ಯನೆಡೆಗೆ ಹೋಗಬೇಕು. ಇಲ್ಲಿ ದುರ್ವಾಸನು ನೂರುವರ್ಷಕಾಲ ಆಹಾರವಿಲ್ಲದವನೂ, ಸೂರ್ಯನ ಪೂಜೆಯಲ್ಲಿ ನಿರತನೂ ಆಗಿ ಒಂದು ಸಾವಿರ ವರ್ಷಗಳಕಾಲ ತಪಸ್ಸನ್ನು ಮಾಡಿರುವನು.

೨. ಹೀಗೆ ಆವನು ತಪಸ್ಸನ್ನು ಮಾಡುತ್ತಿರಲು ಬಹಳಕಾಲದಮೇಲೆ ದಿವ್ಯತೇಜಸ್ಸುಳ್ಳವನೂ, ಜನಲೋಕವನ್ನು ಕಾಪಾಡುವವನೂ ಆದ ಸೂರ್ಯನು ಪ್ರತ್ಯಕ್ಷನಾಗಿ ಮುನಿಯನ್ನು ಕುರಿತು ಇಂತೆಂದನು.

೩. ಸೂರ್ಯನು ಹೇಳುತ್ತಾನೆ :—ಬ್ರಾಹ್ಮಣನೆ ! ಸಾಹಸಮಾಡಬೇಡ. ವರವನ್ನು ಕೇಳಿಕೊ. ನಿನ್ನ ಮನೋರಥವು ಹೊಂದಲಸಾಧ್ಯವಾದುದಾದರೂ ಅದನ್ನೀಯುವೆನು.

ದುರ್ವಾಸಾ ಉವಾಚ :—

ಪ್ರಸನ್ನೋ ಯದಿ ಮೇ ದೇವ ವರಾರ್ಹೋ ಯದಿ ಚಾಪ್ಯಹಂ ।
ಅತ್ರ ಸ್ಥಾನೇ ತ್ವಯಾ ಸ್ಥೇಯಂ ಯಾವತ್ತಿಷ್ಠತಿ ಮೇದಿನೀ ॥ ೪ ॥
ದುರ್ವಾಸಾದಿತ್ಯನಾಮಾತ್ರ ಲೋಕೇ ಖ್ಯಾತಿಂ ಚ ಗಚ್ಛತು ।
ಮಯಾ ಪ್ರತಿಷ್ಠಿತಾ ಯಾ ತು ಪ್ರತಿಮಾ ತವ ಸುಂದರೀ ॥ ೫ ॥
ತಸ್ಯಾಂ ಸಾನ್ನಿಧ್ಯಮೇವಾಸ್ತು ತವ ದೇವ ಜಗತ್ಪತೇ ।
ಸಾನ್ನಿಧ್ಯಂ ಕುರುತಾಂ ಚಾತ್ರ ಯಮುನಾ ದುಹಿತಾ ತವ ।
ತ್ವತ್ಸುತಸ್ತು ಮಹಾತೇಜಾ ಧರ್ಮರಾಜೋ ಮಹಾಬಲಃ ॥ ೬ ॥

ಸೂರ್ಯ ಉವಾಚ :—

ಏತತ್ಸರ್ವಂ ಮುನಿಶ್ರೇಷ್ಠ ತ್ವಯೋಕ್ತಂ ಸಂಭವಿಷ್ಯತಿ ।
ತೀರ್ಥಾನಾಂ ಕೋಟಿರನ್ಯಾ ಚ ಗಂಗಾದೀನಾಂ ಮಹಾಮುದೇ ॥ ೭ ॥
ಆಗಮಿಷ್ಯತಿ ತೇ ಸ್ಥಾನಂ ನಿಶ್ಚಿತಂ ವಚನಾನ್ಮಮ ।
ಅತ್ರ ಸ್ಥಾನೇ ಮಯಾ ಬ್ರಹ್ಮನ್ಸ್ಥಾತವ್ಯಂ ಸಹ ದೈವತೈಃ ॥ ೮ ॥
ಆದಿತ್ಯಾನಾಂ ಪ್ರಭಾವೈಸ್ತು ಬ್ರಹ್ಮಾಂಡೋದರವಾಸಿನಾಂ ।
ತೇಷಾಂ ಮಾಹಾತ್ಮ್ಯಸಂಯುಕ್ತಃ ಸ್ಥಾಸ್ಯೇ ಚಾಽತ್ರ ಮಹಾಮುನೇ ॥ ೯ ॥

---

೪. ದುರ್ವಾಸನು ಹೇಳುತ್ತಾನೆ :—ಸ್ವಾಮಿ ! ನೀನು ಪ್ರಸನ್ನನಾಗಿದ್ದರೆ ನನಗೆ ವರವನ್ನೀಯುವುದಾದರೆ ಈ ಭೂಮಿಯಿರುವವರೆಗೆ ಇಲ್ಲಿ ನೆಲೆಸಿರು.

೫–೬. ಇದು ದುರ್ವಾಸಾದಿತ್ಯವೆಂದು ಲೋಕದಲ್ಲಿ ಪ್ರಸಿದ್ಧವಾಗಲಿ. ನಾನು ಪ್ರತಿಷ್ಠೆಮಾಡಿರುವ ನಿನ್ನೀ ಪ್ರತಿಮೆಯಲ್ಲಿ ನೀನು ಸನ್ನಿಹಿತನಾಗಿರು. ಇಲ್ಲಿ ನಿನ್ನ ಮಗಳಾದ ಯಮುನೆಯೂ, ಮಗನಾದ ಧರ್ಮರಾಜನೂ ಸನ್ನಿಹಿತರಾಗಿರಲಿ.

೭–೮. ಶ್ರೇಷ್ಠನಾದ ಮುನಿಯೆ ! ನೀನು ಹೇಳಿರುವುದೆಲ್ಲ ಆಗುವುದು. ಗಂಗಾದಿ ಕೋಟಿತೀರ್ಥಗಳೂ ನಿಶ್ಚಯವಾಗಿಯೂ ನಿನ್ನ ಸ್ಥಳಕ್ಕೆ ಬರುವುವು. ಇಲ್ಲಿ ನಾನು ದೇವತೆಗಳೊಡನೆ ಇರುವೆನು.

೯. ಮಹಾಮುನಿಯೆ ! ಬ್ರಹ್ಮಾಂಡದೊಳಗಿರುವ ಆದಿತ್ಯರ ಮಾಹಾತ್ಮ್ಯೆಯಿಂದ ಕೂಡಿ ಇಲ್ಲಿ ನೆಲೆಸಿರುವೆನು.

ಸವಿತ್ರೀಣಾಂ ಸಹಸ್ರೇಣ ದೃಷ್ಟೇನೈವ ತು ಯತ್ಫಲಂ ।
ತತ್ಫಲಂ ಕೋಟಿಗುಣಿತಂ ದುರ್ವಾಸಾದಿತ್ಯದರ್ಶನಾತ್ ॥ ೧೦ ॥
ಲಪ್ಸ್ಯಂತೇ ಪ್ರಾಣಿನಃ ಸರ್ವೇ ಯಜ್ಞಕೋಟಿಫಲಂ ತಥಾ ।
ಏವಮುಕ್ತ್ವಾ ತದಾ ಸೂರ್ಯಃ ಸಸ್ಮಾರ ತನಯಾಂ ನಿಜಾಂ ।
ತಥಾ ಚ ಧರ್ಮರಾಜಾನಂ ಸರ್ವಪ್ರಾಣಿನಿಯಾಮಕಂ ॥ ೧೧ ॥
ಸ್ಮೃತಮಾತ್ರಾ ತತ್ರ ಭಿತ್ವಾ ಪಾತಾಲತಲಮುದ್ಯ ಯೇ ।
ಸಾ ನದೀರೂಪಿಣೀ ದೇವೀ ತೀರ್ಥಕೋಟಿಸಮನ್ವಿತಾ ॥ ೧೨ ॥
ಯಮಶ್ಚ ತತ್ರ ಭಗವಾನ್ಕಾಲದಂಡಧರಸ್ತಥಾ ।
ಊಚತುಃ ಪ್ರಣಯೋಪೇತೌ ಸೂರ್ಯಂ ಭುವನಸಾಕ್ಷಿಣಂ ॥ ೧೩ ॥

ಯಮ ಉವಾಚ :—

ಆಜ್ಞಾಪಯತು ಮಾಂ ದೇವೋ ಯಮುನಾಂ ಚ ಜಗತ್ಪ್ರಭುಃ ।
ಕಾರ್ಯಂ ಯದ್ಭಾವಿನೋಽರ್ಥಸ್ಯ ತತ್ಕರಿಷ್ಯೇ ನ ಸಂಶಯಃ ॥ ೧೪ ॥

ಸೂತ ಉವಾಚ ;—

ಅತ್ರ ಕ್ಷೇತ್ರೇ ಸ್ವರೂಪೇಣ ಸ್ಥಾತವ್ಯಂ ವಚನಾನ್ಮಮ ।
ಪಾಪಿನಾಂ ಪ್ರಾಣಿನಾಂ ಚಾತ್ರ ರಕ್ಷಾ ಕಾರ್ಯಾ ಪ್ರಯತ್ನತಃ ॥ ೧೫ ॥

---

೧೦. ದುರ್ವಾಸಾದಿತ್ಯನ ದರ್ಶನದಿಂದ ಸಾವಿರ ಸೂರ್ಯರ ದರ್ಶನಕ್ಕಿಂತ ಕೋಟಿಯಷ್ಟು ಹೆಚ್ಚು ಫಲವು ಲಭಿಸುವುದು.

೧೧. ಹಾಗೆಯೇ ಸಕಲ ಪ್ರಾಣಿಗಳು ಕೋಟಿ ಯಜ್ಞಗಳ ಫಲವನ್ನು ಪಡೆಯುವುವು. ಸೂರ್ಯನು ಹೀಗೆಂದು ತನ್ನ ಮಗಳನ್ನೂ, ಸಕಲ ಪ್ರಾಣಿಗಳನ್ನು ಶಿಕ್ಷಿಸುವ ಯಮನನ್ನೂ ಸ್ಮರಿಸಿದನು.

೧೨. ಹೀಗೆ ಅವನು ಸ್ಮರಿಸಿದ ಕೂಡಲೆ ಆ ಯಮುನೆಯು ಪಾತಾಳವನ್ನು ಭೇದಿಸಿ ಕೋಟಿತೀರ್ಥಗಳೊಡನೆ ನದೀರೂಪದಿಂದ ಮೇಲಕ್ಕೆ ಬಂದಳು.

೧೩. ಯಮನೂ ಕಾಲದಂಡವನ್ನು ಹಿಡಿದುಕೊಂಡು ಸನ್ನಿಹಿತನಾದನು. ಅವರಿಬ್ಬರೂ ಲೋಕಸಾಕ್ಷಿಯಾದ ಸೂರ್ಯನನ್ನು ಕುರಿತು ಪ್ರೀತಿಯಿಂದ ಇಂತೆಂದರು.

೧೪. ಯಮನು ಹೇಳುತ್ತಾನೆ :—ಸ್ವಾಮಿ ! ನನ್ನನ್ನೂ, ಯಮುನೆಯನ್ನೂ ಆಜ್ಞಾಪಿಸು. ಮುಂದೆ ಆಗಬೇಕಾದ ಕಾರ್ಯವನ್ನು ಮಾಡುವೆನು.

೧೫–೧೬. ಸೂರ್ಯನು ಹೇಳುತ್ತಾನೆ :—ಯಮ! ಈ ಕ್ಷೇತ್ರದಲ್ಲಿ ನೀನು ನನ್ನ ಮಾತಿನಂತೆ ನೆಲಸಿದ್ದು ಪಾಪಿಗಳಾದ ಪ್ರಾಣಿಗಳನ್ನು ರಕ್ಷಿಸಬೇಕು. ಸೂರ್ಯಭಕ್ತರಾದ

ಸೂರ್ಯಭಕ್ತಾಃ ಸದಾ ರಕ್ಷ್ಯಾ ಬ್ರಾಹ್ಮಣಾ ಗೃಹಮೇಧಿನಃ ।
ತ್ವಂ ಚಾಪಿ ಯಮುನೇ ಚಾತ್ರ ಕೋಟಿತೀರ್ಥೇನ ಸಂಯುತಾ ॥ ೧೬ ॥
ವಸ ತ್ವಂ ಭವ ಸುಪ್ರೀತಾ ಸ್ಥಾನೇ ದುರ್ವಾಸಸೋದ್ಭವೇ ।
ಇತ್ಯೇವಮುಕ್ತ್ವಾ ದೇವೇಶಸ್ತತ್ರ ದುರ್ವಾಸಸೋಽನ್ತಿಕೇ ॥ ೧೭ ॥
ಪಶ್ಯತಾಂ ಸರ್ವದೇವಾನಾಮಂತರ್ಧಾನಮಗಾತ್ಪ್ರಭುಃ ।
ದುರ್ವಾಸಾಸ್ತು ತದಾ ಹೃಷ್ಟೋ ಯಾವತ್ಪಶ್ಯತಿ ಸ್ವಾಶ್ರಮಂ ॥ ೧೮ ॥
ತಾವತ್ಪಾತಾಲಮಾರ್ಗೇಣ ಯಮುನಾ ಪ್ರಾದುರಾಭವತ್ ।
ಯಮಶ್ಚ ಭಗವಾಂಸ್ತತ್ರ ದೃಷ್ಟಃ ಕ್ಷೇತ್ರಪರೂಪಧೃಕ್ ॥ ೧೯ ॥

ಈಶ್ವರ ಉವಾಚ :—

ಇತ್ಥಂ ಸಮಭವತ್ತತ್ರ ಯಮುನೋದ್ಭೇದಮುತ್ತಮಂ ।
ಕುಂಡಮಾದಿತ್ಯತೋ ಯಾಮ್ಯೇ ದುಂದುಭಿಸ್ತತ್ರ ಪೂರ್ವತಃ ॥ ೨೦ ॥
ಕ್ಷೇತ್ರಪಾಲೋ ಮಹಾದೇವಿ ಯತೋ ದುಂದುಭಿನಿಃಸ್ವನಃ ।
ತತ್ರ ಸ್ನಾತ್ವಾ ಮಹಾಕುಂಡೇ ಯಃ ಸಂತರ್ಪಯತೇ ಪಿತೄನ್ ॥ ೨೧ ॥
ದಶವರ್ಷಾಣಿ ಪಂಚೈವ ತೃಪ್ತಿಂ ಯಾಂತಿ ಪಿತಾಮಹಃ ।
ಪಿಂಡದಾನೇನ ದತ್ತೇನ ಪಿತೄಣಾಂ ತುಷ್ಟಿಮಾವಹೇತ್ ॥
ನರಕೇ ತು ಸ್ಥಿತಾನಾಂ ಚ ಮುಕ್ತಿರ್ಭೂಯಾನ್ನ ಸಂಶಯಃ ॥ ೨೨ ॥

ಗೃಹಸ್ಥ ಬ್ರಾಹ್ಮಣರನ್ನು ಯಾವಾಗಲೂ ಕಾಪಾಡಬೇಕು. ಯಮುನೆ! ನೀನೂ ಕೋಟಿತೀರ್ಥಗಳೊಡನೆ ದುರ್ವಾಸ ತೀರ್ಥದಲ್ಲಿ ಸಂತುಷ್ಟಳಾಗಿ ನೆಲಸು". ಸೂರ್ಯನು ಹೀಗೆ ದುರ್ವಾಸನ ಸಮೀಪದಲ್ಲಿ ಹೇಳಿ ಸಕಲ ದೇವತೆಗಳು ನೋಡುತ್ತಿರುವಾಗಲೆ ಅಂತರ್ಧಾನವಾದನು. ಬಳಿಕ ದುರ್ವಾಸನು ತನ್ನ ಆಶ್ರಮವನ್ನು ನೋಡಲು ಯಮುನೆಯು ಪಾತಾಳಮಾರ್ಗದಿಂದ ಉದ್ಭವಿಸಿದಳು. ಪೂಜ್ಯನಾದ ಯಮನೂ ಅಲ್ಲಿ ಕ್ಷೇತ್ರಪಾಲನರೂಪವನ್ನು ಧರಿಸಿ ಕಾಣಿಸಿಕೊಂಡನು.

೨೦—೨೨. ಈಶ್ವರನು ಹೇಳುತ್ತಾನೆ :—ಹೀಗೆ ಅಲ್ಲಿ ಆದಿತ್ಯನ ದಕ್ಷಿಣ ದಿಕ್ಕಿನಲ್ಲಿ ಯಮುನೋದ್ಭೇದ ಕುಂಡವುಂಟಾಯಿತು. ಅದರ ಪೂರ್ವದಲ್ಲಿ ದುಂದುಭಿಯಂತೆ ಧ್ವನಿಯುಳ್ಳ ದುಂದುಭಿಯೆಂಬ ಕ್ಷೇತ್ರಪಾಲನಿರುವನು. ಆ ಮಹಾಕುಂಡದಲ್ಲಿ ಮಿಂದು ಪಿತೃಗಳಿಗೆ ತರ್ಪಣ ಮಾಡಿದರೆ ಪಿತಾಮಹನು ಹದಿನೈದು ವರ್ಷಗಳಕಾಲ ತೃಪ್ತಿಯನ್ನು ಹೊಂದುವನು. ಪಿಂಡಪ್ರದಾನದಿಂದ ಪಿತೃಗಳು ಸಂತುಷ್ಟರಾಗುವರು, ನರಕದಲ್ಲಿರುವ ಪಿತೃಗಳು ಮುಕ್ತರಾಗುವರು.

ಮಾಘೇ ಮಾಸಿ ಸಿತೇ ಪಕ್ಷೇ ಸಪ್ತಮ್ಯಾಂ ಸಂಯತಾತ್ಮವಾನ್ ।
ದುರ್ವಾಸಾರ್ಕಂ ಚ ಸಂಪೂಜ್ಯ ಮುಚ್ಯತೇ ಬ್ರಹ್ಮಹತ್ಯಯಾ ॥ ೨೩ ॥
ಸ್ನಾತ್ವಾ ತು ಯಮುನಾಕುಂಡೇ ಮಾಧವೇ ಮಾಸಿ ಮಾನವಃ ।
ಪೂಜಯೇದ್ಭಕ್ತಿಭಾವೇನ ರವಿಂ ಗಗನಭೂಷಣಂ ॥ ೨೪ ॥
ಪಠೇತ್ಸಹಸ್ರಂ ನಾಮ್ನಾಂ ತು ದುರ್ವಾಸಾದಿತ್ಯಸಂನಿಧೌ ।
ಷಣ್ಮಾಸಾನ್ಮುಚ್ಯತೇ ಜಂತುರ್ಯದ್ಯಪಿ ಬ್ರಹ್ಮಹಾ ನರಃ ॥ ೨೫ ॥
ಸರ್ವಮಂಗಲಮಾಂಗಲ್ಯಂ ಸರ್ವಪಾಪಪ್ರಣಾಶನಂ ।
ದುರ್ವಾಸಾದಿತ್ಯನಾಮಾನಂ ಸರ್ವಪಾಪಪ್ರಣಾಶನಂ ।
ದುರ್ವಾಸಾದಿತ್ಯನಾಮಾನಂ ಸೂರ್ಯಂ ಕೋನು ನ ಪೂಜಯೇತ್ ।
ನ ತದಸ್ತಿ ಭಯಂ ಕಿಂಚಿದ್ಯದನೇನ ನ ಶಾಮ್ಯತಿ ।
ದರ್ಶನೇನಾಪಿ ಸೂರ್ಯಸ್ಯ ತತ್ರ ದುರ್ವಾಸಸಃ ಪ್ರಿಯೇ ॥ ೨೭ ॥
ಸಂಪದ್ಯಂತೇ ತಥಾ ಕಾಮಾಃ ಸರ್ವ ಏವ ಯಥೇಪ್ಸಿತಾಃ ।
ವಂಧ್ಯಾನಾಂ ಪುತ್ರಫಲದಂ ಭೀತಾನಾಂ ಭಯನಾಶನಂ ॥ ೨೮ ॥
ಭೂತಿಪ್ರದಂ ದರಿದ್ರಾಣಾಂ ಕುಷ್ಠಿನಾಂ ಪರಮೌಷಧಂ ।
ಬಾಲಾನಾಂ ಚೈವ ಸರ್ವೇಷಾಂ ಗ್ರಹರಕ್ಷೋನಿವಾರಣಂ ॥
ಮಹಾಪಾಪೋಪಶಮನಂ ದುರ್ವಾಸಾದಿತ್ಯದರ್ಶನಂ ॥ ೨೯ ॥

---

೨೩. ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯ ದಿನ ಜಿತೇಂದ್ರಿಯನಾಗಿ ದುರ್ವಾಸಾರ್ಕನನ್ನು ಪೂಜಿಸಿದವನು ಬ್ರಹ್ಮಹತ್ಯೆಯಿಂದ ಮುಕ್ತನಾಗುವನು.

೨೪. ವೈಶಾಖಮಾಸದಲ್ಲಿ ಮಾನವನು ಯಮುನಾಕುಂಡದಲ್ಲಿ ಮಿಂದು ಗಗನ ಭೂಷಣನಾದ ಸೂರ್ಯನನ್ನು ಭಕ್ತಿಯಿಂದ ಪೂಜಿಸಬೇಕು.

೨೫. ದುರ್ವಾಸಾದಿತ್ಯನ ಹತ್ತಿರ ಸಹಸ್ರನಾಮಗಳನ್ನು ಜಪಿಸಿದ ಮಾನವನು ಬ್ರಹ್ಮಘ್ನನಾಗಿದ್ದರೂ ಆರು ತಿಂಗಳಲ್ಲಿ ಪಾಪಮುಕ್ತನಾಗುವನು.

೨೬. ಸಮಸ್ತ ಮಂಗಳಕ್ಕೂ ಮಂಗಳವನ್ನುಂಟುಮಾಡುವವನೂ, ಸಕಲ ದುರಿತಗಳನ್ನೂ ನಿವಾರಿಸುವವನೂ ಆದ ದುರ್ವಾಸಾದಿತ್ಯನೆಂಬ ಸೂರ್ಯನನ್ನು ಯಾವನು ತಾನೆ ಪೂಜಿಸಲಾರನು !

೨೭—೨೯. ಪ್ರಿಯಳೆ ! ಅಲ್ಲಿರುವ ದುರ್ವಾಸಾದಿತ್ಯನ ಶಾಂತವಾದ ದರ್ಶನದಿಂದ ಭಯವೇ ಇಲ್ಲ. ಮತ್ತು ಸಕಲಾಭೀಷ್ಟಗಳೂ ಕೈಗೂಡುವುವು. ದುರ್ವಾಸಾದಿತ್ಯನ ದರ್ಶನವು ಬಂಜೆಗೆ ಪುತ್ರರನ್ನು ಕೊಡುವುದು; ಭಯಗೊಂಡವರಿಗೆ ಭಯವನ್ನು ನಿವಾರಿಸುವುದು; ಬಡವರಿಗೆ ಸಂಪತ್ತನೀಯುವುದು; ಕುಷ್ಠರೋಗಿಗಳಿಗೆ ಉತ್ತಮೌಷಧವು; ಬಾಲಕರಿಗೇ ಅಲ್ಲದೆ ಸರ್ವರಿಗೂ ದುಷ್ಟಗ್ರಹ ಮತ್ತು ರಾಕ್ಷಸ ಭಯ ನಿವಾರಕವಾದುದು; ಮಹಾ ಪಾತಕಗಳನ್ನು ಪರಿಹರಿಸುವುದು.

ಹೇಮಾಶ್ವಸ್ತತ್ರ ದಾತವ್ಯಃ ಸೂರ್ಯಮುದ್ದಿಶ್ಯ ಭಾಮಿನಿ ।
ಬ್ರಾಹ್ಮಣೇ ವೇದಸಂಯುಕ್ತೇ ತೇನ ದತ್ತಾ ಮಹೀ ಭವೇತ್ ॥ ೩೦ ॥
ಯಸ್ತತ್ರ ಪೂಜಯೇದ್ದೇವಂ ಕ್ಷೇತ್ರಪಾಲಂ ಚ ದುಂದುಭಿಂ ।
ಸ ಪುತ್ರಪಶುಮಾನ್ಧೀಮಾಞ್ಛ್ರೀಮಾನ್ಭವತಿ ಮಾನವಃ ॥ ೩೧ ॥
ನ ಭಯಂ ಜಾಯತೇ ತಸ್ಯ ತ್ರಿವಿಧಂ ವರವರ್ಣಿನಿ ।
ಅರ್ಧಗವ್ಯೂತಿಮಾತ್ರಂ ತು ತತ್ರ ಕ್ಷೇತ್ರಂ ರವೇಃ ಸ್ಮೃತಂ ॥ ೩೨ ॥
ನ ತತ್ರ ಪ್ರವಿಶೇಜ್ಜಂತುಃ ಸೂರ್ಯಭಕ್ತಿವಿವರ್ಜಿತಃ ।
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಸೂರ್ಯದೈವತಂ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದುರ್ವಾಸಾದಿತ್ಯಮಾಹಾತ್ಮ್ಯವರ್ಣನಂ ನಾಮ
ಷಟ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

---

೩೦. ಪ್ರಿಯಳೆ ! ಅಲ್ಲಿ ಸೂರ್ಯನನ್ನುದ್ದೇಶಿ ವೇದಪಾರಂಗತನಾದ ಬ್ರಾಹ್ಮಣನಿಗೆ ಸುವರ್ಣಾಶ್ವವನ್ನಿತ್ತರೆ ಸಕಲ ಭೂಮಿಯನ್ನೂ ದಾನಮಾಡಿದಂತಾಗುವುದು.

೩೧. ಅಲ್ಲಿ ದುರ್ವಾಸಾದಿತ್ಯನನ್ನೂ, ದುಂದುಭಿಕ್ಷೇತ್ರಪಾಲನನ್ನೂ ಪೂಜಿಸಿದವನು ಪುತ್ರ, ಪಶು, ಬುದ್ಧಿ, ಸಂಪತ್ತುಗಳನ್ನು ಪಡೆಯುವನು.

೩೨. ಪ್ರಿಯಳೆ ! ಅಲ್ಲಿ ಆಧ್ಯಾತ್ಮಿಕಾದಿ ಮೂರು ವಿಧವಾದ ಭಯಗಳುಂಟಾಗುವುದಿಲ್ಲ. ಆ ಸೂರ್ಯಕ್ಷೇತ್ರವು ಎರಡು ಮೈಲಿ ವಿಸ್ತೀರ್ಣವಾಗಿರುವುದು.

೩೩. ಸೂರ್ಯಭಕ್ತಿಯಿಲ್ಲದ ಜಂತುವು ಆ ಕ್ಷೇತ್ರವನ್ನು ಪ್ರವೇಶಿಸಲಾರದು. ದೇವಿ ! ಹೀಗೆ ನಿನಗೆ ಸೂರ್ಯನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ದುರ್ವಾಸಾದಿತ್ಯಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ವಜ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯಾದವಸ್ಥಲಮುತ್ತಮಂ ।
ಯಾದವಾ ತತ್ರ ನಷ್ಟಾ ವೈ ಷಟ್ಪಂಚಾಶಚ್ಚ ಕೋಟಯಃ ॥ ೧ ॥

ಯತ್ರ ವಜ್ರೇಶ್ವರೋ ದೇವೋ ವಜ್ರೇಣಾರಾಧಿತಃ ಸದಾ ।
ಯತ್ರಾಭ್ವದ್ದಿವ್ಯದೃಷ್ಟೀನಾಮೃಷೀಣಾಮಾಶ್ರಂ ಕುಲಂ ॥ ೨ ॥

ದೇವ್ಯುವಾಚ :—

ಕಥಂ ವಿನಿಷ್ಟಾ ಭಗವನ್ನಂಧಕಾ ವೃಷ್ಣಿಭಿಃ ಸಹ ।
ಪಶ್ಯತೋ ವಾಸುದೇವಸ್ಯ ಭೋಜಾಶ್ಚೈವ ಮಹಾರಥಾಃ ॥ ೩ ॥

ಕೇನ ಶಪ್ತಾಸ್ತು ತೇ ವೀರಾ ನಷ್ಟಾ ವೃಷ್ಣ್ಯಂಧಕಾದಯಃ ।
ಭೋಜಾಶ್ಚೈವ ಮಹಾದೇವ ವಿಸ್ತರೇಣ ವದಸ್ವ ಮೇ ॥ ೪ ॥

ಕನ್ನಡದ ಅನುವಾದ

ವಜ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಐವತ್ತಾರು ಕೋಟಿ ಯಾದವರು ನಾಶಹೊಂದಿದ ಯಾದವಸ್ಥಳಕ್ಕೆ ಹೋಗಬೇಕು.

೨. ಅಲ್ಲಿ ಯಾವಾಗಲೂ ವಜ್ರನು ಪೂಜಿಸಿದ ವಜ್ರೇಶ್ವರನೂ, ದಿವ್ಯ ಜ್ಞಾನಿಗಳಾದ ಋಷಿಗಳ ಆಶ್ರಮಗಳೂ ಇರುವುವು.

೩. ದೇವಿಯು ಹೇಳುತ್ತಾಳೆ :—ಪೂಜ್ಯನೆ ! ಶ್ರೀಕೃಷ್ಣನು ನೋಡುತ್ತಿರುವಾಗಲೆ ಮಹಾ ರಥರಾದ ಅಂಧಕ, ವೃಷ್ಣಿ, ಭೋಜ ಮುಂತಾದವರು ಹೇಗೆ ನಾಶವಾದರು ?

೪. ಈ ವೃಷ್ಣ್ಯಂಧಕಾದಿಗಳು ನಾಶವಾಗುವಂತೆ ಯಾರು ಶಪಿಸಿದರು ಇವನ್ನು ವಿಸ್ತಾರವಾಗಿ ನನಗೆ ಹೇಳು.

ಈಶ್ವರ ಉವಾಚ :—

ಷಟ್ತ್ರಿಂಶೇ ಚ ಕಲೌ ವರ್ಷೇ ಸಂಪ್ರಾಪ್ತೇಽನ್ಧಕವೃಷ್ಣಯಃ ।
ಅನ್ಯೋನ್ಯಂ ಮುಶಲೈಸ್ತೇ ಹಿ ನಿಜಘ್ನುಃ ಕಾಲನೋದಿತಾಃ ॥ ೫ ॥
ವಿಶ್ವಾಮಿತ್ರಂ ಚ ಕಣ್ವಂ ಚ ನಾರದಂ ಚ ಯಶಸ್ವಿನಂ ।
ಸಾರಣಪ್ರಮುಖಾನ್ಭೋಜಾನ್ದದೃಶಾದ್ವಾರಕಾಂ ಗತಾನ್ ॥ ೬ ॥
ತೇ ವೈ ಸಾಂಬಂ ಸಮಾನಿನ್ಯುರ್ಭೂಷಯಿತ್ವಾ ಸ್ತ್ರಿಯಂ ಯಥಾ ।
ಅಬ್ರುವನ್ನುಪಸಂಗಮ್ಯ ದೇವದಂಡನಿಪೀಡಿತಾಃ ॥ ೭ ॥
ಇಯಂ ಸ್ತ್ರೀ ಪುತ್ರಕಾಮಸ್ಯ ಬಭ್ರೋರಮಿತತೇಜಸಃ ।
ಋಷಯಃ ಸಾಧು ಜಾನೀತ ಕಿಮಿಯಂ ಜನಯಿಷ್ಯತಿ ॥ ೮ ॥
ಇತ್ಯುಕ್ತಾಸ್ತೇ ತದಾ ದೇವಿ ವಿಪ್ರಲಂಭಪ್ರಧರ್ಷಿತಾಃ ।
ಪ್ರತ್ಯಬ್ರುವಂಸ್ತಾನ್ಮುನಯಸ್ತಚ್ಛೃಣುಷ್ವ ಯಥಾತಥಂ ॥ ೯ ॥

ಋಷಯ ಊಚುಃ :—

ವೃಷ್ಣ್ಯಂಧಕವಿನಾಶಾಯ ಮುಶಲಂ ಘೋರಮಾಯಸಂ ।
ವಾಸುದೇವಸ್ಯ ದಾಯಾದಃ ಸಾಂಬೋಽಯಂ ಜನಯಿಷ್ಯತಿ ॥ ೧೦ ॥

---

೫. ಈಶ್ವರನು ಹೇಳುತ್ತಾನೆ :—ಮೂವತ್ತಾರನೆಯ ಕಲಿ ವರ್ಷವು ಒದಗಲು ಅಂಧಕವೃಷ್ಣಿಗಳು ಕಾಲಪ್ರೇರಣೆಯಿಂದ ಪರಸ್ಪರವಾಗಿ ಒನಕೆಯಿಂದ ಹೊಡೆದು ಕೊಂಡು ಮೃತರಾದರು.

೬. ಆವರು ದ್ವಾರಕೆಗೆ ಬಂದ ವಿಶ್ವಾಮಿತ್ರ, ಕಣ್ವ, ನಾರದ, ಸಾರಣ ಮೊದಲಾದ ಭೋಜರು ಇವರನ್ನು ಕಂಡರು.

೭. ಅವರು ದೈವಪೀಡಿತರಾಗಿ ಸಾಂಬನೆಂಬ ಯಾದವನನ್ನು ಹೆಂಗಸಿನಂತೆ ಅಲಂಕರಿಸಿ ಆ ಋಷಿಗಳೆಡೆಗೆ ಬಂದು ಇಂತೆಂದರು.

೮. "ಮುನಿಗಳೆ! ಇವಳು ಅತ್ಯಂತ ತೇಜಸ್ಸುಳ್ಳ ಪುತ್ರನನ್ನು ಬಯಸುವ ಬಭ್ರುಪತ್ನಿಯೆಂಬುದನ್ನು ಅರಿತಿರುವಿರಿ.

೯. ಅವರು ಹೀಗೆನ್ನಲು ಮುನಿಗಳು ಅವರ ವಂಚನೆಯಿಂದ ಕುಪಿತರಾಗಿ ಹೀಗೆಂದರು.

೧೦. ಋಷಿಗಳು ಹೇಳುತ್ತಾರೆ:—ಶ್ರೀಕೃಷ್ಣನ ದಾಯಾದಿಯಾದ ಈ ಸಾಂಬನು ವೃಷ್ಣ್ಯಂಧಕರ ನಾಶಕ್ಕೋಸ್ಕರ ಭಯಂಕರವಾದ ಒನಕೆಯನ್ನು ಪ್ರಸವಿಸುವನು.

ಯೇನ ಯೂಯಂ ಸುದುರ್ವೃತ್ತಾ ನೃಶಂಸಾ ಜಾತಮನ್ಯವಃ ।
ಉಚ್ಛೇತ್ತಾರಃ ಕುಲಂ ಸರ್ವಮೃತೇ ರಾಮಜನಾರ್ದನಾತ್ ॥ ೧೧ ॥
ತ್ಯಕ್ತ್ವಾ ಯಾಸ್ಯತಿ ವಃ ಶ್ರೀಮಾನ್ಸ್ತ್ಯಕ್ತ್ವಾ ಭೂಮಿಂ ಹಲಾಯುಧಃ ।
ಜರಾ ಕೃಷ್ಣಂ ಮಹಾಭಾಗಂ ಶಯಾನಂ ತು ನಿವೇತ್ಸ್ಯತಿ ॥ ೧೨ ॥
ಇತ್ಯಬ್ರುವಂಸ್ತತೋ ದೇವಿ ಪ್ರಲಬ್ಧಾಸ್ತೇ ದುರಾತ್ಮಭಿಃ ।
ಮುನಯಃ ಕ್ರೋಧರಕ್ತಾಕ್ಷಾಃ ಸಮೀಕ್ಷ್ಯಾಥ ಪರಸ್ಪರಂ ॥ ೧೩ ॥
ತಥೋಕ್ತ್ವಾ ಮುನಯಸ್ತೇ ತು ತತಃ ಕೇಶವಮಭ್ಯಯುಃ ।
ಅಥಾವದತ್ತದಾ ವೃಷ್ಣೀಞ್ಛ್ರುತ್ವೈವಂ ಮಧುಸೂದನಃ ॥ ೧೪ ॥
ಅಭಿಜ್ಞೋ ಮತಿಮಾಂಸ್ತಸ್ಯ ಭವಿತವ್ಯಂ ತಥೇತಿ ತತ್ ।
ಏವಮುಕ್ತ್ವಾ ಹೃಷೀಕೇಶಃ ಪ್ರವಿವೇಶ ಪುನರ್ಗೃಹಾನ್ ॥ ೧೫ ॥
ಕೃತಾಂತಮನ್ಯಥಾಕರ್ತುಂ ನೈಚ್ಛತ್ಸ ಜಗತಃ ಪ್ರಭುಃ ।
ಶ್ವೋಭೂತೇ ಸ ತತಃ ಸಾಂಬೋ ಮುಸಲಂ ತದಸೂತ ವೈ ॥ ೧೬ ॥
ಯೇನ ವೃಷ್ಣ್ಯಂಧಕಕುಲೇ ಪುರುಷಾ ಭಸ್ಮಸಾತ್ಕೃತಾಃ ।
ವೃಷ್ಣ್ಯಂಧಕವಿನಾಶಾಯ ಕಿಂಕರಪ್ರತಿಮಂ ಮಹತ್ ॥ ೧೭ ॥

---

೧೧. ಅದರಿಂದ ದುರ್ನಡತೆಯ ಘಾತುಕರಾದ ನೀವು ಕೋಪಗೊಂಡು ರಾಮಕೃಷ್ಣರನ್ನು ಬಿಟ್ಟು ಸಂಪೂರ್ಣ ವಂಶವನ್ನು ನಾಶಗೊಳಿಸುವಿರಿ.

೧೨. ಬಲರಾಮನು ಭೂಮಿಯನ್ನು ತ್ಯಜಿಸಿ ಹೊರಟು ಹೋಗುವನು. ಜರಾ ಎಂಬ ಬೇಡನು ಮಲಗಿರುವ ಶ್ರೀ ಕೃಷ್ಣನನ್ನು ಹೊಡೆಯುವನು.

೧೩. ದೇವಿ! ದುರಾತ್ಮರಾದ ಯಾದವರಿಂದ ವಂಚಿತರಾದ ಆ ಮುನಿಗಳು ಪರಸ್ಪರ ನೋಡಿ ಹೀಗೆಂದರು.

೧೪–೧೫. ಬಳಿಕ ಅವರು ಶ್ರೀ ಕೃಷ್ಣನೆಡೆಗೆ ಹೋದರು. ಯದು ವಂಶ ಸಂಭೂತನಾದ ಶ್ರೀ ಕೃಷ್ಣನು ಇದನ್ನು ಕೇಳಿ ಅಭಿಜ್ಞನಾದ್ದರಿಂದ ಆ ಯಾದವರ ಭವಿಷ್ಯವು ಹಾಗೆಯೇ ಆಗುವುದೆಂದು ಹೇಳಿ ಮನೆಗೆ ಹೋದನು.

೧೬. ಜಗದೊಡೆಯನಾದ ಆ ಕೃಷ್ಣನು ಮೃತ್ಯುವನ್ನು ವ್ಯತ್ಯಾಸಗೊಳಿಸಲಿಚ್ಛಿಸಲಿಲ್ಲ. ಮಾರನೆಯ ದಿನ ಸಾಂಬನು ಋಷಿಗಳ ಮಾತಿನಂತೆ ಒನಕೆಯನ್ನು ಹಡೆದನು.

೧೭–೧೮. ಅದರಿಂದಲೆ ಮುಂದೆ ವೃಷ್ಣಿ ಅಂಧಕರ ವಂಶದಲ್ಲಿ ಜನರೆಲ್ಲ ನಾಶವಾದರು. ಆ ಯಾದವರು ವೃಷ್ಣ್ಯಂಧಕರ ನಾಶಕ್ಕೋಸ್ಕರ ಶಾಪದಿಂದ ಜನಿಸಿದ

ಅಸೂತ ಶಾಪಜಂ ಘೋರಂ ತಚ್ಚ ರಾಜ್ಞೇ ನ್ಯವೇದಯತ್ ।
ವಿಷಣ್ಣೋಽಥ ತತೋ ರಾಜಾ ಸೂಕ್ಷ್ಮಂ ಚೂರ್ಣಮಕಾರಯತ್ ॥ ೧೮ ॥
ಪ್ರಾಕ್ಷಿಪತ್ಸಾಗರೇ ತತ್ರ ಪುರುಷೋ ರಾಜಶಾಸಿತಃ ।
ಅಥೋವಾಚ ಸ್ವನಗರೇ ವಚನಾದಾಹುಕಸ್ಯ ಹಿ ॥ ೧೯ ॥
ಜನಾರ್ದನಸ್ಯ ರಾಮಸ್ಯ ಬಭ್ರೋಶ್ಚೈವ ಮಹಾತ್ಮನಃ ।
ಅದ್ಯಪ್ರಭೃತಿ ಸರ್ವೇಷಾಂ ವೃಷ್ಣ್ಯಂಧಕಗೃಹೇಷ್ವಿಹ ।
ಸುರಾಸವೋ ನ ಕರ್ತವ್ಯಃ ಸರ್ವೈರ್ವಿಷಯವಾಸಿಭಿಃ ॥ ೨೦ ॥
ಯಶ್ಚ ನೋ ವಿದಿತಂ ಕುರ್ಯಾದೇವಂ ಕಶ್ಚಿತ್ಕ್ವಚಿನ್ನರಃ ।
ಸ ಜೀವಞ್ಛೂಲಮಾರೋಹೇತ್ಸ್ವಯಂ ಕೃತ್ವಾ ಸಬಾಂಧವಃ ॥ ೨೧ ॥
ತತೋ ರಾಜಭಯಾತ್ಸರ್ವೇ ನಿಯಮಂ ತತ್ರ ಚಕ್ರಿರೇ ।
ನರಾಃ ಶಾಸನಮಾಜ್ಞಾಯ ರಾಮಸ್ಯಾಕ್ಲಿಷ್ಟಕರ್ಮಣಃ ॥ ೨೨ ॥
ಏವಂ ಪ್ರಯತಮಾನಾನಾಂ ವೃಷ್ಣೀನಾಮಂಧಕೈಃ ಸಹ ।
ಕಾಲೋ ಗೃಹಾಣಿ ಸರ್ವಾಣಿ ಪರಿಚಕ್ರಾಮ ನಿತ್ಯಶಃ ॥ ೨೩ ॥
ಕರಾಲೋ ವಿಕಟೋ ಮುಂಡಃ ಪುರುಷಃ ಕೃಷ್ಣಪಿಂಗಲಃ ।
ಸಂಮಾರ್ಜನೀ ಮಹಾಕೇತುರ್ಜಪಾಪುಷ್ಪಾವತಂಸಕಃ ॥ ೨೪ ॥

ಯಮಭಟನಂತಿರುವ ಆ ಮುಸಲವನ್ನು ರಾಜನಿಗೆ ತಿಳಿಸಿದರು. ಅದರಿಂದ ವ್ಯಥೆಗೊಂಡ ದೊರೆಯು ಅದನ್ನು ಸೂಕ್ಷ್ಮವಾಗಿ ಪುಡಿಮಾಡಿಸಿದನು.

೧೯. ರಾಜಭಟನು ದೊರೆಯ ಅಪ್ಪಣೆಯಂತೆ ಅದನ್ನು ಸಮುದ್ರದಲ್ಲಿ ಎಸೆದು ಪಟ್ಟಣದಲ್ಲಿ ಹೀಗೆ ಡಂಗುರ ಹಾಕಿಸಿದನು.

೨೦. "ಇಂದಿನಿಂದ ಈ ದೇಶದಲ್ಲಿ ವಾಸಿಸುವ ಕೃಷ್ಣ, ಬಲರಾಮ, ಬಭ್ರು ಮೊದಲಾದ ವಷ್ಣ್ಯಂಧಕರ ಮನೆಗಳಲ್ಲಿ ಮಧು ಮತ್ತು ಆಸವಗಳನ್ನು ಕುಡಿಯ ಬಾರದು.

೨೧. ಇದನ್ನರಿತ ಯಾವ ಮನುಷ್ಯನಾದರೂ ಒಂದೆಡೆಯಲ್ಲಿ ಮಧುವನ್ನು ಕುಡಿದರೆ ಅವನನ್ನು ಬಂಧುಗಳೊಡನೆ ಶೂಲಕ್ಕೇರಿಸಲಾಗುವುದು.

೨೨. ಬಳಿಕ ಪ್ರಜೆಗಳೆಲ್ಲರೂ ರಾಮನ ಆಜ್ಞೆಯನ್ನರಿತು ಭಯದಿಂದ ನಿಯಮ ವನ್ನು ಪಾಲಿಸಿದರು.

೨೩. ಹೀಗೆ ವೃಷ್ಣಿಗಳು ಅಂಧಕರೊಡನೆ ರಾಜಾಜ್ಞೆಯನ್ನು ನೆರವೇರಿಸಲು ಪ್ರಯತ್ನಿಸುತ್ತಿರಲು ಮೃತ್ಯುವು ಸಮಸ್ತರ ಮನೆಯಲ್ಲಿ ನಿತ್ಯವೂ ಸಂಚರಿಸುತ್ತಿದ್ದಿತು.

೨೪–೨೫. ಕಠಿಣನೂ,ವಿಕಾರನೂ, ಮುಂಡಿತನೂ, ಧೂಮ್ರವರ್ಣನೂ ಪರಕೆಯ ಧ್ವಜವುಳ್ಳವನೂ, ದಾಸವಾಳದ ಹೂವನ್ನು ಮುಡಿದವನೂ, ಓರೆಯಮೇಲೆ ಕುಳ

ಕೃಕಲಾಸವಾಂಹನಶ್ಚರತ್ತಿಕಾಕರ್ಣಭೂಷಣಃ ।
ಗೃಹಾಣ್ಯವೇಕ್ಷ್ಯ ವೃಷ್ಣೀನಾಂ ನಾದೃಶ್ಯತ ಪುನಃ ಕ್ವಚಿತ್ ॥ ೨೫ ॥
ತಸ್ಯ ಚಾಸನ್ಮಹೇಷ್ವಾಸಾಃ ಶರೈಃ ಶತಸಹಸ್ರಶಃ ।
ನ ಚಾಶಕ್ಯತ ವೇದ್ಧುಂ ಸ ಸರ್ವಭೂತಾಪ್ಯಯಂ ಸದಾ ॥ ೨೬ ॥
ಉತ್ಪೇದಿರೇ ಮಹಾವಾತಾ ದಾರುಣಾ ಹಿ ದಿನೇ ದಿನೇ ।
ವೃಷ್ಣ್ಯಂಧಕವಿನಾಶಾಯ ಬಹವೋ ಲೋಮಹರ್ಷಣಾಃ ॥ ೨೭ ॥
ವಿವೃದ್ಧ್ಯ ಮೂಷಿಕಾ ರಥ್ಯಾ ವಿತುನ್ನಮಣಿಕಾಸ್ತಥಾ ।
ಕೇಶಾನ್ದದಂಶುಃ ಸುಪ್ತಾನಾಂ ನೃಣಾಂ ಸ್ತ್ರೀಣಾಂಚವೈ ನಿಶಿ ॥ ೨೮ ॥
ಚೀಚೀಕೂಚೀತ್ಯವಾಶಂತಃ ಸಾರಿಕಾ ವೃಷ್ಣಿವೇಶ್ಮಸು ।
ನೋಪಶಾಮ್ಯತಿ ಶಬ್ದಶ್ಚ ಸ ದಿವಾರಾತ್ರಮೇವ ವಾ ॥ ೨೯ ॥
ಅನ್ವಕುರ್ವನ್ನುಲೂಕಾಶ್ಚ ವಾಯಸಾನ್ವೃಷ್ಣಿವೇಶ್ಮಸು ।
ಅಜಾಃ ಶಿವಾನಾಂ ಚ ರುತಮನ್ವಕುರ್ವತ ಭಾಮಿನಿ ॥ ೩೦ ॥
ಪಾಂಡುರಾ ರಕ್ತಪಾದಾಶ್ಚ ವಿಹಗಾಃ ಕಾಲಪ್ರೇರಿತಾಃ ।
ವೃಷ್ಣ್ಯಂಧಕಗೃಹೇಷ್ವೇವಂ ಕಪೋತಾ ವ್ಯಚರಂಸ್ತದಾ ॥ ೩೧ ॥

ತವನೂ, ಗುಲುಗಂಜಿಯ ಒಡವೆಯುಳ್ಳವನೂ ಆದ ಮನುಷ್ಯಾಕೃತಿಯ ಕಾಲನು ವೃಷ್ಣಿಗಳ ಮನೆಗಳನ್ನು ನೋಡಿ ಮರಳಿ ಕಾಣಿಸಿಕೊಳ್ಳಲಿಲ್ಲ.

೨೬. ಆ ಕಾಲಪುರುಷನಲ್ಲಿ ಸಾವಿರಾರು ಬಾಣಗಳಿರುವ ಬಿಲ್ಲುಗಳಿದ್ದರೂ ಅವನು ಶ್ರೀ ಕೃಷ್ಣನನ್ನು ಹೊಡೆಯಲು ಶಕ್ತನಾಗಲಿಲ್ಲ.

೨೭. ಪ್ರತಿದಿನವೂ ವೃಷ್ಣ್ಯಂಧಕರ ನಾಶಕ್ಕಾಗಿ ರೋಮಾಂಚವನ್ನುಂಟು ಮಾಡುವ ಭಯಂಕರ ಬಿರುಗಾಳಿಗಳು ಉಂಟಾದುವು.

೨೮. ಹಾಗೆಯೇ ಇಲಿಗಳು ಹೆಚ್ಚಿ ಬೀದಿಯನ್ನೂ, ಗುಡಾಣಗಳನ್ನೂ ಕೊರೆಯುತ್ತ ಮಲಗಿರುವ ಸ್ತ್ರೀ ಪುರುಷರ ತಲೆಗೂದಲುಗಳನ್ನು ಕತ್ತರಿಸಿದುವು.

೨೯. ವೃಷ್ಣಿಗಳ ಮನೆಗಳಲ್ಲಿ ಸಾರಿಕೆಗಳು ಕುಚುಕುಚುಗುಟ್ಟಿದುವು. ಆ ಶಬ್ದಗಳು ಹಗಲು ರಾತ್ರಿ ಶಾಂತವಾಗಲಿಲ್ಲ.

೩೦, ಅವರ ಮನೆಗಳಲ್ಲಿ ಗೂಬೆಗಳು ಕಾಗೆಗಳ ಧ್ವನಿಗಳನ್ನೂ, ಮೇಕೆಗಳು ನರಿಗಳ ಕೂಗನ್ನು ಅಣಕಿಸಿದುವು.

೩೧. ಕಾಲಪುರುಷನ ಪ್ರೇರಣೆಯಿಂದ ಬೆಳ್ಳಗೂ, ಕೆಂಪುಕಾಲುಳ್ಳವೂ, ಆದ ಪಾರಿವಾಳಗಳು ಸಂಚರಿಸಿದುವು.

ವ್ಯಜಾಯಂತ ಖರಾ ಗೋಷು ಕರಭಾಶ್ಚಾಶ್ವತರೀಷು ಚ ।
ಶುನೀಷ್ವಪಿ ಬಿಡಾಲಾಶ್ಚ ಮೂಷಕಾ ನಕುಲೀಷು ಚ ॥ ೩೨ ॥
ತಾಪತ್ರಯಾಂತಪಾಪಾನಿ ಕುರ್ವತೋ ವೃಷ್ಣಯಸ್ತಥಾ ।
ಅದ್ವಿಷನ್ಬ್ರಾಹ್ಮಣಾಂಶ್ಚಾಪಿ ಪಿತೄನ್ದೇವಾಂಸ್ತಥೈವ ಚ ॥ ೩೩ ॥
ಗುರೂಂಶ್ಚಾಪ್ಯವಮನ್ಯಂತೇ ನ ತು ರಾಮಜನಾರ್ದನೌ ।
ಭಾರ್ಯಾಃ ಪತೀನ್ವ್ಯುಚ್ಚರಂತಿ ಪತ್ನೀಶ್ಚ ಪುರುಷಾಸ್ತಥಾ ॥ ೩೪ ॥
ವಿಭಾವಸುಃ ಪ್ರಜ್ವಲಿತೋ ವಾಮಂ ವಿಪರಿವರ್ತತೇ ।
ನೀಲಲೋಹಿತಮಾಂಜಿಷ್ಠಾ ವಿಸಜಂಶ್ಚಾರ್ಚಿಷಃ ಪೃಥಕ್ ॥ ೩೫ ॥
ಉದಯಾಸ್ತಮನೇ ನಿತ್ಯಂ ಪರ್ಯಸ್ತಃ ಸ್ಯಾದ್ದಿವಾಕರಃ ।
ವ್ಯದೃಶ್ಯತ ಸಕೃತ್ಪುಂಭಿಃ ಕಬಂಧೈಃ ಪರಿವಾರಿತಃ ॥ ೩೬ ॥
ಮಹಾನಸೇಷು ಸಿದ್ಧಾಂತೇ ಸಂಸ್ಕೃತೇಽನ್ನೇ ತು ಭಾಮಿನಿ ।
ಉತ್ತಾರ್ಯಮಾಣೇ ಕೃಮಯೋ ದೃಶ್ಯಂತೇ ಚ ವರಾನನೇ ॥ ೩೭ ॥
ಪುಣ್ಯಾಹೇ ವಾಚ್ಯಮಾನೇ ಚ ಪಠತ್ಸು ಚ।ಮಹಾತ್ಮಸು ।
ಅಭಿಧಾವಂತಿ ಶ್ರೂಯಂತೇ ನ ಚಾದೃಶ್ಯತ ಕಶ್ಚನ ॥ ೩೮ ॥

---

೩೨. ಗೋವುಗಳಲ್ಲಿ ಕತ್ತೆಗಳೂ, ಹೇಸರಕತ್ತೆಗಳಲ್ಲಿ ಒಂಟೆಗಳೂ, ನಾಯಿಗಳಲ್ಲಿ ಬೆಕ್ಕುಗಳೂ, ಮುಂಗಸಿಗಳಲ್ಲಿ ಇಲಿಗಳೂ ಹುಟ್ಟಿದುವು.

೩೩. ವೃಷ್ಣಿಗಳು ಪಾಪಕರ್ಮಗಳನ್ನಾಚರಿಸುತ್ತ ಬ್ರಾಹ್ಮಣ, ಪಿತೃ ದೇವತೆಗಳನ್ನು ದ್ವೇಷಿಸಿದರು.

೩೪. ರಾಮಕೃಷ್ಣರನ್ನುಳಿದು ಗುರುಗಳನ್ನು ಅಪಮಾನಗೊಳಿಸಿದರು. ಹೆಂಡತಿಯರು ಗಂಡಂದಿರನ್ನೂ, ಗಂಡಂದಿರು ಹೆಂಡತಿಯರನ್ನೂ ತ್ಯಜಿಸಿ ಇತರರಲ್ಲಿ ಆಸಕ್ತರಾದರು.

೩೫. ಅಗ್ನಿ ಹೋತ್ರದ ಬೆಂಕಿಯು ಅಪ್ರದಕ್ಷಿಣೆಯಾಗಿ ಉರಿಯುತ್ತ ಕಪ್ಪು, ಕೆಂಪು ಮಾಂಜಿಷ್ಠ ಬಣ್ಣದ ಜ್ವಾಲೆಗಳನ್ನುಂಟುಮಾಡಿತು

೩೬. ಸೂರ್ಯನು ಉದಯಾಸ್ತಮಯಗಳಲ್ಲಿ ವ್ಯತ್ಯಾಸಗೊಂಡು ಮುಂಡಗಳಿಂದ ಸುತ್ತಲ್ಪಟ್ಟವನಂತೆ ಕಾಣಿಸಿಕೊಂಡನು.

೩೭. ಅಡುಗೆ ಮನೆಗಳಲ್ಲಿ ಸಿದ್ಧಮಾಡಿದ ಅನ್ನದಲ್ಲಿಯೂ, ಚಿತ್ರಾನ್ನ ಮೊದಲಾದುವುಗಳಲ್ಲಿಯೂ ಮೇಲಕ್ಕೆತ್ತುವಾಗ ಕೃಮಿಗಳು ಕಾಣಿಸಿದುವು.

೩೮. ಮಹಾತ್ಮರಾದ ದ್ವಿಜರು ಸ್ವಸ್ತಿವಾಚನದಲ್ಲಿ ವೇದಮಂತ್ರಗಳನ್ನುಚ್ಚರಿಸುತ್ತಿರಲು ಯಾರೋ ಓಡಿಹೋಗುತ್ತಿದ್ದಂತೆ,ತೋರುತ್ತಿದ್ದಿತು. ಯಾರೂ ಕೇಳುತ್ತಲೂ, ಕಾಣಿಸಿಕೊಳ್ಳುತ್ತಲೂ ಇರಲಿಲ್ಲ.

ಪರಸ್ಪರಸ್ಯ ನಕ್ಷತ್ರಂ ಹನ್ಯಮಾನಂ ಪುನಃಪುನಃ ।
ಗ್ರಹೈರಪಶ್ಯನ್ಸರ್ವೈಸ್ತೇ ನಾತ್ಮನಸ್ತು ಕಥಂಚನ ॥ ೩೯ ॥
ನ ಹುತಂ ಪಾಚಯತ್ಯಗ್ನಿರ್ವೃಷ್ಣ್ಯಂಧಕಪುರಸ್ಕೃತಂ ।
ಸಮಂತಾತ್ಪ್ರತ್ಯನಾಶಂತ ರಾಸಭಾ ದಾರುಣಸ್ವನಾಃ ॥ ೪೦ ॥
ಏವಂ ಪಶ್ಯನ್ಹೃಷೀಕೇಶಃ ಸಂಪ್ರಾಪ್ತಾನ್ಕಾಲಪರ್ಯಯಾನ್ ।
ತ್ರಯೋದಶೀಂ ಹ್ಯಮಾವಾಸ್ಯಾಂ ತಾಂ ದೃಷ್ಟ್ವಾ ಪ್ರಾಬ್ರವೀದಿದಂ ॥ ೪೧ ॥
ತ್ರಯೋದಶೀ ಪಂಚದಶೀ ಕೃತೇಯಂ ರಾಹುಣಾ ಪುನಃ ।
ತದಾ ಚ ಭಾರತೇ ಯುದ್ಧೇ ಪ್ರಾಪ್ತಾ ಚಾದ್ಯಕ್ಷಯಾಯ ನಃ ॥ ೪೨ ॥
ಧಿಗ್ಧಿಗಿತ್ಯೇವಕಾಲಂ ತಂ ಪರಿಚಿಂತ್ಯ ಜನಾರ್ದನಃ ।
ಮೇನೇ ಪ್ರಾಪ್ತಂ ಸ ಷಟ್ತ್ರಿಂಶಂ ವರ್ಷಂ ಕೇಶಿನಿಷೂದನಃ ।
ಪುತ್ರಶೋಕಾಭಿಸಂತಪ್ತಾ ಗಾಂಧಾರೀ ಯದುವಾಚ ಹ ॥ ೪೩ ॥
ಏವಂ ಪಶ್ಯನ್ಹೃಷೀಕೇಶಸ್ತದಿದಂ ಸಮುಪಸ್ಥಿತಂ ।
ಇದಂ ಚ ಸಮನುಪ್ರಾಪ್ತಮಬ್ರವೀದ್ಯದ್ಯುಧಿಷ್ಠಿರಃ ॥ ೪೪ ॥
ಪುರಾ ವ್ಯೂಢೇಷ್ವನೀಕೇಷು ದೃಷ್ಟ್ವೋತ್ಪಾತಾನ್ಸುದಾರುಣಾನ್ ।
ಪುಣ್ಯಗ್ರಂಥಸ್ಯ ಶ್ರವಣಾಚ್ಛಾಂತಿಹೋಮಾದ್ವಿಶೋಧನಾತ್ ॥ ೪೫ ॥

---

೩೯. ಇತರರ ಜಾತಕದಲ್ಲಿ ಗ್ರಹಳಿಂದ ಪರಸ್ಪರ ನಕ್ಷತ್ರಗಳಿಗೆ ವೇಧ ಯುಂಟಾಗಿರುವುದನ್ನು ನೋಡುತ್ತಿದ್ದರು. ತಮ್ಮ ಜಾತಕದಲ್ಲಿ ನೋಡುತ್ತಿರಲಿಲ್ಲ.

೪೦. ವೃಷ್ಣ್ಯಂಧಕರ ಮನೆಗಳಲ್ಲಿ ಅಗ್ನಿಯು ಹೋಮಿಸಿದ್ದನ್ನು ದಹಿಸುತ್ತಿರಲಿಲ್ಲ. ಸುತ್ತಲೂ ಕತ್ತೆಗಳು ಭಯಂಕರ ಧ್ವನಿಯಿಂದ ಕಿರಿಚಿಕೊಳ್ಳುತ್ತಿದ್ದುವು.

೪೧. ಶ್ರೀಕೃಷ್ಣನು ಹೀಗೆ ಕಾಲವು ವ್ಯತ್ಯಾಸವಾದುದನ್ನೂ, ತ್ರಯೋದಶಿಯು ಅಮಾವಾಸ್ಯೆಯಾದುದನ್ನೂ ಕಂಡು ಇಂತೆಂದನು.

೪೨. "ಹಿಂದೆ ಭಾರತಯುದ್ಧ ಸಮಯದಲ್ಲಿ ರಾಹುವು ತ್ರಯೋದಶಿಯನ್ನು ಅಮಾವಾಸ್ಯೆಮಾಡಿರುವನು. ಈಗಲೂ ನಮ್ಮ ನಾಶಕ್ಕಾಗಿ ಹಾಗೆಯೇ ಆಗಿರುವುದು".

೪೩. ಅವನು ಹಿಂದೆ ಪುತ್ರಶೋಕದಿಂದ ಸಂತಾಪಗೊಂಡ ಗಾಂಧಾರಿಯು ಹೇಳಿರುವ ಮೂವತ್ತಾರನೆ ವರ್ಷವು ಒದಗಿದೆಯೆಂದು ಆಲೋಚಿಸಿ ಆ ಕಾಲವನ್ನು ನಿಂದಿಸಿದನು.

೪೪–೪೫. ಮತ್ತು ಆ ಕಾಲವನ್ನು ನೋಡುತ್ತ ಹಿಂದೆ ಭಾರತ ಯುದ್ಧಕ್ಕೆ ಸೈನ್ಯಗಳು ಸಿದ್ಧವಾಗಲು ಸಂಭವಿಸಿದ ಭಯಂಕರವಾದ ಉತ್ಪಾತವನ್ನು ನೋಡಿ ಯುಧಿಷ್ಠಿರನು ಹೇಳಿದ ಕಾಲವೇ ಈಗ ಒದಗಿತೆಂದಾಲೋಚಿಸಿದನು. ಪುಣ್ಯಗ್ರಂಥ ಶ್ರವಣ, ಶಾಂತಿ, ಹೋಮ, ಪವಿತ್ರತೀರ್ಥಸ್ನಾನ ಇವುಗಳನ್ನು ಬಿಟ್ಟರೆ ಬೇರೆ

ಪೂತತೀರ್ಥಾಭಿಷೇಕಾಚ್ಚ ನಾನ್ಯಚ್ಛ್ರೇಯೋ ಭವೇದಿತಿ |
ಇತ್ಯುಕ್ತ್ವಾ ವಾಸುದೇವಸ್ತುಚ್ಚಿಕೀರ್ಷನ್ನಿತ್ಯಮೇವ ಚ |
ಆಜ್ಞಾಪಯಾಮಾಸ ತದಾ ತೀರ್ಥಯಾತ್ರಾಮರಿಂದಮಃ || ೪೬ ||
ಅಘೋಷಯಂತ ಪುರುಷಾಸ್ತತ್ರ ಕೇಶವಶಾಸನಾನ್ |
ತೀರ್ಥಯಾತ್ರಾ ಪ್ರಭಾಸೇ ವೈ ಕಾರ್ಯೇತಿ ವರವರ್ಣಿನಿ || ೪೭ ||
ಅಥಾರಿಷ್ಟಾನಿ ವಕ್ಷ್ಯಾಮಿ ಪುರೀಂ ದ್ವಾರವತೀಂ ಪ್ರತಿ |
ಕಾಲೀ ಸ್ತ್ರೀ ಪಾಂಡುರೈರ್ದಂತೈಃ ಪ್ರವಿಶ್ಯ ನಗರೀಂ ನಿಶಿ || ೪೮ ||
ಸ್ತ್ರಿಯಃ ಸ್ವಪ್ನೇಷು ಮುಷ್ಣಂತೀ ದ್ವಾರಕಾಂ ಪ್ರತಿ ಧಾವತಿ |
ಅಗ್ನಿಹೋತ್ರನಿಕೇತಂ ಚ ಸುಮೇಧ್ಯೇಷು ಚ ವೇಶ್ಮಸು || ೪೯ ||
ವೃಷ್ಣ್ಯಂಧಕಾಂಶ್ಚ ಖಾದಂತೀ ಸ್ವಪ್ನೇ ದೃಷ್ಟ್ವಾ ಭಯಾನಕಾ |
ಕುರ್ವಂತೀ ಭೀಷಣಂ ನಾದಂ ಕುರ್ಕುಟಶ್ವಾನಸಂಯುತಾ || ೫೦ ||
ತಥಾ ಸಹಸ್ರಶೋ ರೌದ್ರಾಶ್ಚತುರ್ಬಾಹವ ಏವ ಚ |
ಸ್ತ್ರೀಣಾಂ ಗರ್ಭೇಷ್ವಜಾಯಂತ ರಾಕ್ಷಸ್ಯಾ ಗುಹ್ಯಕಾಸ್ತಥಾ || ೫೧ ||
ಅಲಂಕಾರಾಶ್ಚ ಛತ್ರಾಣಿ ಧ್ವಜಾಶ್ಚ ಕವಚಾನಿ ಚ |
ಹ್ರಿಯಮಾಣಾನಿ ದೃಶ್ಯಂತೇ ರಕ್ಷೋಭಿಸ್ತು ಭಯಾನಕೈಃ || ೫೨ ||

ನಿವಾರಣೋಪಾಯವಿಲ್ಲವೆಂದು ಹೇಳಿ ನಿಜವಾಗಿಯೂ ಅದನ್ನು ಮಾಡುವುದಕ್ಕಾಗಿ ಸೇವಕರಿಗೆ ಆಜ್ಞೆ ಮಾಡಿದನು.

೪೭. ಪ್ರಿಯಳೆ! ಭೃತ್ಯರು ಕೃಷ್ಣನ ಅಪ್ಪಣೆಯಿಂದ ಪ್ರಭಾಸಕ್ಕೆ ತೀರ್ಥಯಾತ್ರೆಗಾಗಿ ಕೃಷ್ಣನು ಹೊರಡುವನೆಂದು ಡಂಗುರ ಸಾರಿದರು.

೪೮–೫೦. ಬಳಿಕ ದ್ವಾರವತಿಯಲ್ಲುಂಟಾದ ಅರಿಷ್ಟಗಳನ್ನು ಹೇಳುವೆನು. ಬಿಳಿಹಲ್ಲುಗಳುಳ್ಳ ಕರಿಬಣ್ಣದ ಹೆಂಗಸು ರಾತ್ರಿ ಪಟ್ಟಣವನ್ನು ಪ್ರವೇಶಿಸಿ ಮಲಗಿರುವ ಹೆಂಗಸರನ್ನು ಅಪಹರಿಸಿಕೊಂಡು ಓಡತೊಡಗಿದಳು. ಸ್ವಪ್ನದಲ್ಲಿ ಪರಿಶುದ್ಧವಾದ ಅಗ್ನಿಶಾಲೆಯನ್ನು ಹೊಕ್ಕು ವೃಷ್ಣ್ಯಂಧಕರನ್ನು ತಿನ್ನುತ್ತ ಕೋಳಿನಾಯಿಗಳೊಡನೆ ಭಯಂಕರವಾಗಿ ಕೂಗುವವಳಾಗಿ ನೋಡಲ್ಪಟ್ಟಳು.

೫೧. ಹಾಗೆಯೇ ಭಯಂಕರರೂ, ನಾಲ್ಕು ತೋಳುಗಳುಳ್ಳವರೂ ಆದ ಸಾವಿರಾರು ಮಂದಿ ರಾಕ್ಷಸರೂ, ಗುಹ್ಯಕರೂ ಸ್ತ್ರೀಯರ ಗರ್ಭಗಳಲ್ಲಿ ಜನಿಸಿದರು.

೫೨. ಒಡವೆ, ಕೊಡೆ, ಧ್ವಜ, ಅಂಗಿ ಇವುಗಳನ್ನು ಅಪಹರಿಸುತ್ತಿರುವ ಭಯಂಕರ ರಾಕ್ಷಸರು ಕಾಣಲ್ಪಟ್ಟರು.

ಯಚ್ಚಾಗ್ನಿದತ್ತಂ ಕೃಷ್ಣಸ್ಯ ವಜ್ರನಾಭಮಯಸ್ಮಯಂ ।
ದಿವಮಾಚಕ್ರಮೇ ಚಕ್ರಂ ವೃಷ್ಣೀನಾಂ ಪಶ್ಯತಾಂ ತದಾ ॥ ೫೩ ॥
ಯುಕ್ತಂ ರಥಂ ದಿವ್ಯಮಾದಿತ್ಯವರ್ಣಂ
ಭಯಾವಹಂ ಪಶ್ಯಂತೋ ದಾರುಕಸ್ಯ ।
ತೇ ಸಾಗರಸ್ಯೋಪರಿಷ್ಟಾದ್ವರ್ತಮಾನಾ
ನ್ಮನೋಜವಾಂಶ್ಚತುರೋ ವಾಜಿಮುಖ್ಯಾನ್ ॥ ೫೪ ॥
ತಾಲಃ ಸುಪರ್ಣಶ್ಚ ಮಹಾಧ್ವಜೌ ತೌ
ಸುಪೂಜಿತೌ ರಾಮಜನಾರ್ದನಾಭ್ಯಾಂ ।
ಉಚ್ಚೈರ್ಜಗುಃ ಸ್ವಪ್ಸರಸೋ ದಿವಾನಿಶಂ
ವಾಚಂ ಚೋಚುರ್ಗಮ್ಯತಾಂ ತೀರ್ಥಯಾತ್ರಾಂ ॥ ೫೫ ॥
ತತೋ ಜಿಗಮಿಷಂತಸ್ತೇ ವೃಷ್ಣ್ಯಂಧಕಮಹಾರಥಾಃ ।
ಸಾಂತಃಪುರಾಸ್ತೀರ್ಥಯಾತ್ರಾಮೀಹಂತೇ ಸ್ಮ ನರರ್ಷಭಾಃ ॥ ೫೬ ॥
ತತೋ ಮಾಂಸಪರಾ ಹೃಷ್ಟಾಃ ಪೇಯಂ ವೇಶ್ಮಸು ವೃಷ್ಣಯಃ ।
ಬಹು ನಾನಾವಿಧಂ ಚಕ್ರುರ್ಮಾಂಸಾನಿ ವಿವಿಧಾನಿ ಚ ॥ ೫೭ ॥
ತಥಾ ಸೀಧುಷು ಬದ್ಧೇಷು ನಿರ್ಯಯೌ ನಗರಾದ್ಬಹಿಃ ।
ಯಾನೈರಶ್ವೈರ್ಗಜೈಶ್ಚೈವ ಶ್ರೀಮಂತಸ್ತಿಗ್ಮತೇಜಸಃ ॥ ೫೮ ॥

---

೫೩. ಶ್ರೀಕೃಷ್ಣನಿಗೆ ಅಗ್ನಿಯಿತ್ತಿರುವ ವಜ್ರನಾಭಿಯಾದ ಕಬ್ಬಿಣದ ಚಕ್ರವು ಯಾದವರು ನೋಡುತ್ತಿರುವಾಗಲೆ ಆಕಾಶಕ್ಕೆ (ದೇವಲೋಕಕ್ಕೆ) ಹೊರಟು ಹೋಯಿತು.

೫೪. ದಾರುಕನು ನೋಡುತ್ತಿರವಾಗಲೆ ಶೀಘ್ರಗಾಮಿಗಳಾದ ನಾಲ್ಕು ಅಶ್ವಗಳನ್ನು ಕಟ್ಟಿರುವ ಆದಿತ್ಯನಂತೆ ಪ್ರಕಾಶಿಸುವ ಭಯಂಕರವಾದ ಆ ರಥವು ಆಕಾಶವನ್ನೇರಿತು.

೫೫. ರಾಮಕೃಷ್ಣರು ತಾಲ, ಸುಪರ್ಣಗಳೆಂಬ ಮಹಾಧ್ವಜಗಳನ್ನು ಪೂಜಿಸಿದರು. ಅಪ್ಸರ ಸ್ತ್ರೀಯರು ತೀರ್ಥಯಾತ್ರೆಗೆ ತೆರಳಿ ಎಂದು ಹಗಲು ರಾತ್ರಿ ಗಟ್ಟಿಯಾಗಿ ಕೂಗಿಕೊಂಡರು.

೫೬. ಬಳಿಕ ಮಹಾರಥರಾದ ವೃಷ್ಣ್ಯಂಧಕರು ಅಂತಃ ಪುರಸ್ತ್ರೀಯರೊಡನೆ ತೀರ್ಥಯಾತ್ರೆಗೆಹೊರಡಲುದ್ಯುಕ್ತರಾದರು.

೫೭. ಅನಂತರ ಮಾಂಸಾಭಿರುಚಿಯುಳ್ಳವರೂ ಸಂತೋಷಗೊಂಡವರೂ ಆದ ವೃಷ್ಣಿಗಳು ಮನೆಗಳಲ್ಲಿ ನಾನಾ ವಿಧವಾದ ಪೇಯಗಳನ್ನೂ, ಮಾಂಸಗಳನ್ನೂ ಸಿದ್ಧಪಡಿಸಿದರು.

೫೮. ಹಾಗೆಯೇ ಮದ್ಯವನ್ನೂ ಸಜ್ಜುಗೊಳಿಸಿಕೊಂಡು ಅಶ್ವ, ಗಜಮೊದಲಾದ ವಾಹನಗಳಿಂದ ಪಟ್ಟಣದಿಂದ ಹೊರಗೆ ಹೊರಟರು.

ತತಃ ಪ್ರಭಾಸೇ ನ್ಯವಸನ್ಯಥೋದ್ದೇಶಂ ಯಥಾಗೃಹಂ ।
ಪ್ರಭೂತಭಕ್ಷ್ಯಪೇಯಾಸ್ತೇ ಸದಾರಾ ಯಾದವಾಸ್ತದಾ ॥ ೫೯ ॥
ನಿರ್ದಿಷ್ಟಾಂಸ್ತಾನ್ನಿಶಮ್ಯಾಥ ಸಮುದ್ರಾಂತೇ ಸ ಯೋಗವಿತ್ ।
ಜಗಾಮಾಮಂತ್ರ್ಯ ತಾನ್ವೀರಾನುದ್ಧವೋಽರ್ಥವಿಶಾರದಃ ॥ ೬೦ ॥
ಪ್ರಸ್ಥಿತಂ ತಂ ಮಹಾತ್ಮಾನಮಭಿವಾದ್ಯ ಕೃತಾಂಜಲಿಂ ।
ಜಾನನ್ವಿನಾಶಂ ಭೋಜಾನಾಂ ನೈಚ್ಛದ್ವಾರಯಿತುಂ ಹರಿಃ ॥ ೬೧ ॥
ತತಃ ಕಾಲಪರೀತಾಸ್ತೇ ವೃಷ್ಣ್ಯಂಧಕಮಹಾರಥಾಃ ।
ಅಪಶ್ಯನ್ನುದ್ಧವಂ ಯಾಂತಂ ತೇಜಸಾ ದೀಪ್ಯ ರೋದಸೀ ॥ ೬೨ ॥
ಬ್ರಾಹ್ಮಣಾರ್ಥೇಷು ಯತ್ಕ್ಲಪ್ತಮನ್ನಂ ತೇಷಾಂ ವರಾನನೇ ।
ತದ್ವಾಹನೇಭ್ಯಃ ಪ್ರದದುಃ ಸುರಾಗಂಧರಸಾನ್ವಿತಂ ॥ ೬೩ ॥
ತತಸ್ತೂರ್ಯಶತಾಕೀರ್ಣಂ ನಟನರ್ತಕಸಂಕುಲಂ ।
ಪ್ರಾವರ್ತತ ಮಹಾಪಾನಂ ಪ್ರಭಾಸೇ ತಿಗ್ಮತೇಜಸಾಂ ॥ ೬೪ ॥

---

೫೯. ಅನಂತರ ಬಹಳವಾದ ಭಕ್ಷ್ಯ ಪೇಯಗಳುಳ್ಳ ಆ ಯಾದವರು ಪತ್ನಿಯರೊಡನೆ ಪ್ರಭಾಸಕ್ಷೇತ್ರದಲ್ಲಿ ತಮಗೆ ನಿರ್ದಿಷ್ಟವಾದ ಮನೆಗಳಲ್ಲಿ ವಾಸಮಾಡಿದರು.

೬೦. ತರುವಾಯ ಯೋಗಜ್ಞನಾದ ಉದ್ಧವನು ಸಮುದ್ರದ ಮಧ್ಯದಲ್ಲಿ ಸುಖದಿಂದ ನೆಲೆಸಿರುವ ಆ ಯಾದವರನ್ನು ಕಂಡು ವೀರರಾದ ಅವರನ್ನು ಬನ್ನಿರಿ ಎಂದು ಕರೆದು ತಾನು ಹೊರಟನು.

೬೧. ಯಾದವರನಾಶವನ್ನರಿತ ಶ್ರೀಕೃಷ್ಣನು ತನ್ನನ್ನು ವಂದಿಸಿ ಕೈಮುಗಿದುಕೊಂಡು ಹೊರಟ ಉದ್ಧವನನ್ನು ತಡೆಯಲು ಬಯಸಲಿಲ್ಲ.

೬೨. ಬಳಿಕ ಮೃತ್ಯುಗ್ರಸ್ತರಾದ ಆ ವೃಷ್ಣ್ಯಂಧಕರು (ಯಾದವರು) ತೇಜಸ್ಸಿನಿಂದ ಭೂಮ್ಯಾಕಾಶಗಳನ್ನು ಪ್ರಕಾಶಗೊಳಿಸುತ್ತ ಹೋಗುತ್ತಿರುವ ಉದ್ಧವನನ್ನು ಕಂಡರು.

೬೩. ಅವರು ಬ್ರಾಹ್ಮಣರಿಗಾಗಿ ಸಿದ್ಧಮಾಡಿರುವ ಮದ್ಯದವಾಸನೆಯುಳ್ಳ ಅನ್ನವನ್ನು ಆ ಉದ್ಧವನ ವಾಹನಗಳಿಗಿತ್ತರು.

೬೪. ಬಳಿಕ ಪ್ರಭಾಸದಲ್ಲಿ ಪರಾಕ್ರಮಶಾಲಿಗಳಾದ ಯಾದವರ ಅನೇಕ ವಾದ್ಯಗಳಿಂದ ವ್ಯಾಪ್ತವಾದುದೂ, ನಟ, ನರ್ತಕರಿಂದ ತುಂಬಿರುವುದೂ ಆದ ಮಹಾಪಾನೋತ್ಸವವು ಆರಂಭವಾಯಿತು.

ಕೃಷ್ಣಸ್ಯ ಸಂನಿಧೌ ರಾಮಃ ಸಹಿತಃ ಕೃತವರ್ಮಣಾ ।
ಅಪಿಬದ್ಯುಯುಧಾನಶ್ಚ ಗದೋ ಬಭ್ರುಸ್ತಥೈವ ಚ ॥ ೬೫ ॥
ತತಃ ಪರಿಷದೋ ಮಧ್ಯೇ ಯುಯುಧಾನೋ ಮದೋತ್ಕಟಃ ।
ಅಬ್ರವೀತ್ಕೃತವರ್ಮಾಣಮವಹಸ್ಯಾವಮನ್ಯ ಚ ॥ ೬೬ ॥
ಕಃ ಕ್ಷತ್ರಿಯೋ ಮನ್ಯಮಾನಃ ಸುಪ್ತಾನ್ಹನ್ಯಾನ್ಮೃತಾನಿವ ।
ನ ತನ್ಮೃಷ್ಯತ ಹಾರ್ದಿಕ್ಯಸ್ತ್ವಯಾ ತತ್ಸಾಧು ಯತ್ಕೃತಂ ॥ ೬೭ ॥
ಇತ್ಯುಕ್ತೇ ಯುಯುಧಾನೇನ ಪೂಜಯಾಮಾಸ ತದ್ವಚಃ ।
ಪ್ರದ್ಯುಮ್ನೋ ರಥಿನಾಂ ಶ್ರೇಷ್ಠೋ ಹಾರ್ದಿಕ್ಯಮಥ ಭರ್ತ್ಸಯನ್ ॥ ೬೮ ॥
ತತಃ ಪುನರಪಿ ಕ್ರುದ್ಧಃ ಕೃತವರ್ಮಾ ತಮಬ್ರವೀತ್ ।
ನಿರ್ದಿಶನ್ನಿವ ಸಾವಜ್ಞಂ ತದಾ ಸವ್ಯೇನ ಪಾಣಿನಾ ॥ ೬೯ ॥
ಭೂರಿಶ್ರವಾಶ್ಛಿನ್ನಬಾಹುರ್ಯುದ್ಧೇ ಪ್ರಾಯೋ ಗತಸ್ತ್ವಯಾ ।
ವ್ಯಾಧೇನೇವ ನೃಶಂಸೇನ ಕಥಂ ವೈರೇಣ ಘಾತಿತಃ ॥ ೭೦ ॥
ಇತಿ ತಸ್ಯ ವಚಃ ಶ್ರುತ್ವಾ ಕೇಶವಃ ಪರವೀರಹಾ ।
ತಿರ್ಯಕ್ಸರೋಷಯಾ ದೃಷ್ಟ್ಯಾ ವೀಕ್ಷಾಂಚಕ್ರೇ ಸಮಃ ಪುಮಾನ್ ॥೭೧॥

---

೬೫. ಅಲ್ಲಿ ಕೃಷ್ಣನ ಸನ್ನಿಧಿಯಲ್ಲಿ ಬಲರಾಮನು ಕೃತವರ್ಮ, ಯುಯುಧಾನ, ಗದ, ಬಭ್ರು ಇವರೊಡನೆ ಮದ್ಯಪಾನಮಾಡಿದನು.

೬೬. ತರುವಾಯ ಮದೋನ್ಮತ್ತನಾದ ಯುಯುಧಾನನು ಸಭೆಯ ಮಧ್ಯದಲ್ಲಿ ಕೃತವರ್ಮನನ್ನು ಹಾಸ್ಯಮಾಡಿ ಅವಮಾನಗೊಳಿಸಿ ಇಂತೆಂದನು.

೬೭. "ಕ್ಷತ್ರಿಯನಾದ ಯಾವನು ಮೃತರಂತೆ ಮಲಗಿದವರನ್ನು ಕೊಂದಾನು ನೀವು ಮಾಡಿರುವುದು ಸರಿಯೆ ?" ಎನ್ನಲು ಹಾರ್ದಿಕ್ಯನು ಅದನ್ನು ಸಹಿಸಲಿಲ್ಲ.

೬೮. ಯುಯುಧಾನನು ಆ ಮಾತನ್ನು ಹೊಗಳಿದನು. ರಥಿಕರಲ್ಲಿ ಶ್ರೇಷ್ಠನಾದ ಪ್ರದ್ಯುಮ್ನನು ಹಾರ್ದಿಕ್ಯನನ್ನು ಧಿಕ್ಕರಿಸಿದನು.

೬೯. ಅನಂತರ ಕ್ರುದ್ಧನಾದ ಕೃತವರ್ಮನು ಎಡಗೈಯಿಂದ ಅವಮಾನಗೊಳಿಸುತ್ತ ಇಂತೆಂದನು.

೭೦. ನೀನು ಘಾತುಕನಾದ ಬೇಡನಂತೆ ಕತ್ತರಿಸಿದ ತೋಳುಳ್ಳ ಭೂರಿಶ್ರವಸ್ಸನ್ನು ಹೇಗೆ ದ್ವೇಷದಿಂದ ಕೊಂದೆ ?

೭೧. ಅವನ ಈ ಮಾತನ್ನು ಕೇಳಿ ಶತ್ರುನಾಶಕನಾದ ಕೃಷ್ಣನು ರೋಷದೃಷ್ಟಿಯಿಂದ ನೋಡಿದನು.

ಮಣಿಂ ಸ್ಯಮಂತಕಂ ಚೈವ ಯಃ ಸ ಸತ್ರಾಜಿತೋಽಭವತ್ ।
ಸ ಕಥಂ ಸ್ಮಾರಯಾಮಾಸ ಸಾತ್ಯಕಿರ್ಮಧುಸೂದನಂ ॥ ೭೨ ॥
ತಚ್ಛ್ರುತ್ವಾ ಕೇಶವಸ್ಯಾಂಕಮಗಮದ್ರುದತೀ ಸತೀ ।
ಸತ್ಯಭಾಮಾ ಪ್ರಕ್ಷುಭಿತಾ ಕೋಪಯಂತೀ ಜನಾರ್ದನಂ ॥ ೭೩ ॥
ತತ ಉತ್ಥಾಯ ಸಕ್ರೋಧಾತ್ಸಾತ್ಯಕಿರ್ವಾಕ್ಯಮಬ್ರವೀತ್ ।
ಪಂಚಾನಾಂ ದ್ರೌಪದೇಯಾನಾಂ ಧೃಷ್ಟದ್ಯುಮ್ನಶಿಖಂಡಿನಃ ॥ ೭೪ ॥
ಏಷ ಗಚ್ಛಾಮಿ ಪದವೀಂ ಸತ್ಯೇ ತವ ಪಥೇ ಸದಾ ।
ಸೌಪ್ತಿಕೇ ನಿಹತಾ ಯೇ ಚ ಸುಪ್ತಾಸ್ತೇನ ದುರಾತ್ಮನಾ ॥ ೭೫ ॥
ದ್ರೋಣಪುತ್ರಸಹಾಯೇನ ಪಾಪೇನ ಕೃತವರ್ಮಣಾ ।
ಸಮಾಪ್ತಂ ಚಾಯುರಸ್ಯಾದ್ಯ ಯಶಶ್ಚಾಪಿ ಸುಮಧ್ಯಮೇ ॥ ೭೬ ॥
ಇತೀದಮುಕ್ತ್ವಾ ಖಡ್ಗೇನ ಕೇಶವಸ್ಯ ಸಮೀಪತಃ ।
ಅಭಿಹತ್ಯ ಶಿರಃ ಕ್ರುದ್ಧಶ್ಚಿಚ್ಛೇದ ಕೃತವರ್ಮಣಃ ॥ ೭೭ ॥
ತಥಾನ್ಯಾನಪಿ ನಿಘ್ನಂತಂ ಯುಯುಧಾನಂ ಸಮಂತತಃ ।
ಅನ್ವಧಾವದ್ಧೃಷೀಕೇಶೋ ವಿನಿವಾರಯಿಷುಸ್ತಥಾ ॥ ೭೮ ॥

---

೭೨. ಸಾತ್ಯಕಿಯು ಸತ್ರಾಜಿತನಲ್ಲಿದ್ದ ಸ್ಯಮಂತಕಮಣಿಯನ್ನು ಕೃಷ್ಣನು ಸ್ಮರಿಸುವಂತೆ ಹೇಗೆ ಮಾಡಿದನು ?

೭೩. ಅದನ್ನು ಕೇಳಿ ಕುಪಿತಳಾದ ಸತ್ಯಭಾಮೆಯು ಅಳುತ್ತ ಕೃಷ್ಣನನ್ನು ಕೋಪಗೊಳಿಸುತ್ತ ಅವನ ತೊಡೆಯನ್ನು ಏರಿದಳು.

೭೪–೭೬. ಬಳಿಕ ಸಾತ್ಯಕಿಯು ಕೋಪದಿಂದ ಇಂತೆಂದನು. ಈ ಪಾಪಿಯಾದ ಕೃತವರ್ಮನು ದುಷ್ಟನಾದ ಅಶ್ವತ್ಥಾಮನ ಸಾಹಾಯ್ಯದಿಂದ ಮಲಗಿರುವ ದ್ರೌಪದಿಯ ಮಕ್ಕಳಾದ ಉಪಪಾಂಡವರನ್ನೂ, ಧೃಷ್ಟದ್ಯುಮ್ನ, ಶಿಖಂಡಿಗಳನ್ನೂ ಕೊಂದಿರುವನು. ನಾನು ಸತ್ಯಮಾರ್ಗದಲ್ಲಿ ನಡೆಯುತ್ತ ಅವನ ದಾರಿಯನ್ನೇ ಅನುಸರಿಸುವೆನು ಸತ್ಯಭಾಮೆ ! ಇಗೊ ಈ ಕೃತವರ್ಮನ ಆಯುಸ್ಸೂ ಕೀರ್ತಿಯೂ ಅವಸಾನಗೊಂಡಿತು.

೭೭. ಸಾತ್ಯಕಿಯು ಹೀಗೆಂದು ಕುಪಿತನಾಗಿ ಕೃಷ್ಣನ ಹತ್ತಿರದಲ್ಲಿಯೇ ಕೃತವರ್ಮನ ತಲೆಯಮೇಲೆ ಹೊಡೆದು ಅದನ್ನು ಕತ್ತರಿಸಿದನು.

೭೮. ಹಾಗೆಯೇ ಇತರರನ್ನೂ ಕೊಲ್ಲುತ್ತಿರುವ ಸಾತ್ಯಕಿಯನ್ನು ಕಂಡು ಶ್ರೀ ಕೃಷ್ಣನು ಅವನನ್ನು ತಡೆಯಲು ಓಡಿದನು.

ಏಕೀಭೂತಾಸ್ತತಸ್ತಸ್ಯ ಕಾಲಪರ್ಯಾಯಪ್ರೇರಿತಾಃ ।
ಭೋಜಾಂಧಕಾ ಮಹಾರಾಜಂ ಶೈನೇಯಂ ಪರ್ಯವಾರಯನ್ ॥ ೭೯ ॥
ತಾನ್ದೃಷ್ಟ್ವಾಽಽಪತತಸ್ತೂರ್ಣಮಭಿಕ್ರುದ್ಧಾಞ್ಜನಾರ್ದನಃ ।
ನ ಚುಕ್ರೋಧ ಮಹಾತೇಜಾ ಜಾನನ್ಕಾಲಸ್ಯ ಪರ್ಯಯಂ ॥ ೮೦ ॥
ತೇ ಚ ಪಾನಮದಾವಿಷ್ಟಾಶ್ಚೋದಿತಾಶ್ಚೈವ ಮನ್ಯುನಾ ।
ಯುಯುಧಾನಮಥಾಜಘ್ನುರುಚ್ಛಿಷ್ಟೈರ್ಭಾಜನೈಸ್ತಥಾ ॥ ೮೧ ॥
ಹನ್ಯಮಾನೇ ನು ಶೈನೇಯೇ ಕ್ರುದ್ಧೋ ರುಕ್ಮಿಣಿನಂದನಃ ।
ತದಂತರಮಥಾಧಾವನ್ಮೋಕ್ಷಯಿಷ್ಯಞ್ಶಿನೇಃ ಸುತಂ ॥ ೮೨ ॥
ಸ ಭೋಜೈಃ ಸಹ ಸಂಯುಕ್ತಃ ಸಾತ್ಯಕಿಶ್ಚಾಂಧಕೈಃ ಸಹ ।
ಬಹುತ್ವಾತ್ತು ಹತೌ ವೀರಾವುಭೌ ಕೃಷ್ಣಸ್ಯ ಪಶ್ಯತಃ ॥ ೮೩ ॥
ಹತಂ ದೃಷ್ಟ್ವಾ ತು ಶೈನೇಯಂ ಪುತ್ರಂ ಚ ಯದುನಂದನಃ ।
ಏರಕಾಣಾಂ ತದಾ ಮುಷ್ಟಿಂ ಕೋಪಾಜ್ಜಗ್ರಾಹ ಕೇಶವಃ ॥ ೮೪ ॥
ತದಭೂನ್ಮುಶಲಂ ಘೋರಂ ವಜ್ರಕಲ್ಪಮಯಸ್ಮಯಂ ।
ಜಘಾನ ತೇನ ಕೃಷ್ಣೋಽಪಿ ಯೇ ತಸ್ಯ ಪ್ರಮುಖೇ ಸ್ಥಿತಾಃ ॥ ೮೫ ॥

---

೭೯. ಅನಂತರ ಕಾಲಪ್ರೇರಿತರಾದ ಭೋಜಾಂಧಕರು ಒಟ್ಟುಗೂಡಿ ಸಾತ್ಯಕಿಯನ್ನು ಸುತ್ತಿಕೊಂಡರು.

೮೦. ಶೀಘ್ರವಾಗಿ ಕೋಪದಿಂದ ಮೇಲೆ ಬೀಳುತ್ತಿರುವ ಅವರನ್ನು ನೋಡಿ ಕಾಲವ್ಯತ್ಯಾಸವನ್ನರಿತ ಕೃಷ್ಣನು ಕುಪಿತನಾಗಲಿಲ್ಲ.

೮೧. ಮದ್ಯಪಾನದಿಂದ ಮತ್ತರೂ, ಕುಪಿತರೂ ಆದ ಆ ಭೋಜಾಂಧಕರು ಉಚ್ಛಿಷ್ಟಗಳಿಂದ ಸಾತ್ಯಕಿಯನ್ನು ಹೊಡೆದರು.

೮೨. ಹೀಗೆ ಅವರು ಹೊಡೆಯುತ್ತಿರುವುದನ್ನು ಕಂಡು ರುಕ್ಮಿಣೀ ಸುತನು (ಪ್ರದ್ಯುಮ್ನನು) ಸಾತ್ಯಕಿಯನ್ನು ಬಿಡಿಸಲೋಸುಗ ಮಧ್ಯದಲ್ಲಿ ಬಂದನು.

೮೩. ಕೃಷ್ಣನು ನೋಡುತ್ತಿರುವಾಗಲೆ ಭೋಜಾಂಧಕರು ಒಟ್ಟಿಗೆ ಸೇರಿ ಬಹಳ ಮಂದಿಯಿರುವುದರಿಂದ ವೀರರಾದ ಸಾತ್ಯಕಿಪ್ರದ್ಯುಮ್ನರನ್ನು ಕೊಂದರು.

೮೪. ಕೃಷ್ಣನು ಭೋಜಾಂಧಕರು ಸಾತಕಿಪ್ರದ್ಯುಮ್ನರನ್ನು ಕೊಂದುದನ್ನು ನೋಡಿ ಕೋಪದಿಂದ ಏರಕವೆಂಬ ಹುಲ್ಲಿನ ಹಿಡಿಯನ್ನು ತೆಗೆದುಕೊಂಡನು.

೮೫. ಅದು ಕೂಡಲೆ ಕಬ್ಬಿಣದ ಭಯಂಕರವಾದ ವಜ್ರಾಯುಧದಂತಿರುವ ಒನಕೆಯಾಯಿತು. ಕೃಷ್ಣನು ಅದರಿಂದ ತನ್ನ ಮುಂದಿರುವವರನ್ನೆಲ್ಲ ಕೊಂದನು.

ತತೋಽನ್ಧಕಾಶ್ಚ ಭೋಜಾಶ್ಚ ಶಿನಯೋ ವೃಷ್ಣಯಸ್ತದಾ ।
ನ್ಯಘ್ನನ್ನನ್ಯೋನ್ಯಮಾಕ್ರಂದ್ಯೈರ್ಮುಸಲೈಃ ಕಾಲಪ್ರೇರಿತಾಃ ॥ ೮೬ ॥
ಯಸ್ತ್ವೇಕಾಮೇರಕಾಂ ಕಶ್ಚಿಜ್ಜಗ್ರಾಹ ರುಷಿತೋ ನರಃ ।
ವಜ್ರಭೂತಾ ಚ ಸಾ ದೇವಿ ಹ್ಯದೃಶ್ಯತ ತದಾ ಪ್ರಿಯೇ ॥ ೮೭ ॥
ತೃಣಂ ಚ ಮುಶಲೀಭೂತಮಣ್ವಪಿ ತತ್ರ ದೃಶ್ಯತೇ ।
ಬ್ರಹ್ಮದಂಡಕೃತಂ ಸರ್ವಮಿತಿ ತದ್ವಿದ್ಧಿ ಭಾಮಿನಿ ॥ ೮೮ ॥
ಆವಿಧ್ಯಾವಿಧ್ಯ ದೇವೇಶಿ ಪ್ರಹರಂತಿ ಸ್ಮ ಸಾಯಕಾನ್ ।
ತದ್ವಜ್ರಭೂತಂ ಮುಶಲಮಪಶ್ಯಂತ ಕದಾ ವೃಥಂ ॥ ೮೯ ॥
ಅವಧೀತ್ಪಿತರಂ ಪುತ್ರಃ ಪಿತಾ ಪುತ್ರಂ ಚ ಭಾಮಿನಿ ।
ಮತ್ತಾಸ್ತೇ ಪರ್ಯಟಂತಿ ಸ್ಮ ಯೋಧಮಾನಾಃ ಪರಸ್ಪರಂ ॥ ೯೦ ॥
ಪತಂಗಾ ಇವ ಚಾಗ್ನೌ ತು ನ್ಯಪತನ್ಯದುಪುಂಗವಾಃ ।
ನಾಸೀತ್ಪಲಾಯನೇ ಬುದ್ಧಿರ್ವಧ್ಯಮಾನಸ್ಯ ಕಸ್ಯಚಿತ್ ॥ ೯೧ ॥
ತಂ ತು ಪಶ್ಯನ್ಮಹಾಬಾಹುರ್ಜಾನನ್ಕಾಲಸ್ಯ ಪರ್ಯಯಂ ।
ಮುಶಲಂ ಸಮವಷ್ಟಭ್ಯ ತಸ್ಥೌ ಸ ಮಧುಸೂದನಃ ॥ ೯೨ ॥

---

೮೬. ಬಳಿಕ ಮೃತ್ಯುವಿನಿಂದ ಪ್ರೇರಿತರಾದ ಅಂಧಕ, ಭೋಜ, ಶಿನಿ, ವೃಷ್ಣಿ ಈ ವಂಶದವರು ಒನಕೆಗಳಿಂದ ಪರಸ್ಪರ ಹೊಡೆದುಕೊಂಡರು.

೮೭. ದೇವಿ ! ಆಗ ಯಾವನಾದರೂ ಒಬ್ಬನು ಏರಕವನ್ನು ತಗೆದುಕೊಂಡರೆ ಅದು ಕೂಡಲೆ ವಜ್ರಾಯುಧದಂತೆ ಕಾಣಿಸುತ್ತಿದ್ದಿತು.

೮೮. ಪ್ರಿಯಳೆ ! ಅಲ್ಲಿ ಸಣ್ಣಹುಲ್ಲೂ ಒನಕೆಯಾಗಿ ಕಂಡಿತು. ಅದೆಲ್ಲ ಬ್ರಾಹ್ಮಣನ ಶಾಪದಿಂದಾದುದೆಂದರಿ.

೮೯. ದೇವೇಶಿ ! ಅವರು ಎಷ್ಟು ಬಾಣಗಳಿಂದ ಅದನ್ನು ಹೊಡೆದರೂ ಆ ಒನಕೆಯು ವಜ್ರದಂತೆ ಗಟ್ಟಿಯಾಗಿಯೇ ಕಾಣಿಸಿತು.

೯೦. ಅಲ್ಲಿ ಮಗನು ತಂದೆಯನ್ನೂ, ತಂದೆಯು ಮಗನನ್ನೂ ಕೊಂದರು. ಮದೋನ್ಮತ್ತರಾದ ಅವರು ಪರಸ್ಪರ ಯುದ್ಧಮಾಡುತ್ತ ಸುತ್ತುತ್ತಿದ್ದರು.

೯೧. ಹೀಗೆ ಯಾದವರು ಬೆಂಕಿಯಲ್ಲಿ ಪತಂಗದಹುಳುಗಳಂತೆ ಮೃತರಾಗಿ ಬಿದ್ದರು. ಕೊಲ್ಲಲ್ಪಡುತ್ತಿದ್ದರೂ ಒಬ್ಬನಿಗೂ ಓಡಿಹೋಗುವುದರಲ್ಲಿ ಬುದ್ಧಿಯುಂಟಾಗಲಿಲ್ಲ.

೯೨. ಕಾಲದ ವ್ಯತ್ಯಾಸವನ್ನರಿತ ಶ್ರೀಕೃಷ್ಣನು ಅದನ್ನು ನೋಡುತ್ತ ಒನಕೆಯನ್ನು ಹಿಡಿದುಕೊಂಡು ನಿಂತನು.

ಸಾಂಬಂ ಚ ನಿಹತಂ ದೃಷ್ಟ್ವಾ ಚಾರುದೇಷ್ಣಂ ಚ ಮಾಧವಃ ।
ಪ್ರದ್ಯುಮ್ನಮನಿರುದ್ಧಂ ಚ ತತಶ್ಚುಕ್ರೋಧ ಭಾಮಿನಿ ॥ ೯೩ ॥
ಯಾದವಾನ್ಶಯಾನಾಂಶ್ಚ ಭೃಶಂ ಕೋಪಸಮನ್ವಿತಃ ।
ಸ ನಿಃಶೇಷಂ ತಥಾ ಚಕ್ರೇ ಶಾರ್ಙ್ಗಚಕ್ರಗದಾಧರಃ ॥ ೯೪ ॥
ಏವಂ ತತ್ರ ಮಹಾದೇವಿ ಅಭವದ್ಯಾದವಸ್ಥಲಂ ।
ಗವ್ಯೂತಿಮಾತ್ರಂ ತದ್ದೇವಿ ಯಾದವಾನಾಚಿತಾಃ ಸ್ಮೃತಾಃ ॥ ೯೫ ॥
ತೇಷಾಂ ಕಿಲಾಸ್ಥಿನಿಚಯೈಃ ಸ್ಥಲರೂಪಂ ಬಭೂವ ತತ್ ।
ಭಸ್ಮಪುಂಜನಿಭಾಕಾರಂ ತೇನಾಭೂದ್ಯಾದವಸ್ಥಲಂ ॥ ೯೬ ॥
ದಿವ್ಯರತ್ನಸಮಾಯುಕ್ತಂ ಮಣಿಮಾಣಿಕ್ಯಪೂರಿತಂ ।
ಯಾದವಾನಾಂ ಕಿರೀಟೈಶ್ಚ ದಿವ್ಯಗಂಧೈಃ ಸುಪೂರಿತಂ ॥ ೯೭ ॥
ತೇಷಾಂ ರಕ್ಷಾನಿಮಿತ್ತಂ ಹಿ ಗಂಗಾ ಗಣಪತಿಸ್ತಥಾ ।
ಯಾದವಾನಾಂ ತು ಸರ್ವೇಷಾಂ ಜೀವಿತೋ ವಜ್ರ ಏವ ಹಿ ॥ ೯೮ ॥
ವಯಸೋಽನ್ತೇ ತತಃ ಸೋಽಪಿ ಪ್ರಭಾಸಂ ಕ್ಷೇತ್ರಮಾಗತಃ ।
ನಿಷಿಚ್ಯ ಸ್ವಸುತಂ ರಾಜ್ಯೇ ನಾಮ್ನಾ ಖ್ಯಾತಂ ಮಹದ್ಬಲಂ ॥ ೯೯ ॥

---

೯೩. ಪ್ರಿಯಳೆ! ಆ ಕೃಷ್ಣನು ಸಾಂಬ, ಚಾರುದೇಷ್ಣ, ಪ್ರದ್ಯುಮ್ನ, ಅನಿರುದ್ಧ ಇವರು ಮಡಿದಿರುವುದನ್ನು ಕಂಡು ಕುಪಿತನಾದನು.

೯೪. ಅವನು ಭೂಮಿಯಲ್ಲಿ ಮಲಗಿರುವ ಯಾದವರನ್ನು ಕಂಡು ಅತ್ಯಂತ ಕೋಪಗೊಂಡವನಾಗಿ ಶಾರ್ಙ್ಗ, ಚಕ್ರ, ಗದೆಗಳನ್ನು ಧರಿಸಿ ಸಂಪೂರ್ಣವಾಗಿ ಎಲ್ಲರನ್ನೂ ನಾಶಗೊಳಿಸಿದನು.

೯೫. ಮಹಾದೇವಿ! ನಾಲ್ಕು ಮೈಲಿ ವಿಸ್ತೀರ್ಣವಾದ ಆ ಯಾದವ ಸ್ಥಳವು ಯಾದವರ ಚಿತೆಗಳಿಂದ ತುಂಬಿತು.

೯೬. ಆ ಸ್ಥಳವು ಅವರ ಮೂಳೆಗಳ ಸಮೂಹದಿಂದ ಬೂದಿಯರಾಶಿಯಂತೆ ಕಾಣಿಸಿತು.

೯೭. ಅಲ್ಲದೆ ಆ ಯಾದವಸ್ಥಳವು ದಿವ್ಯರತ್ನಗಳಿಂದ ಕೂಡಿರುವುದೂ, ಮಣಿಗಳಿಂದಲೂ ಯಾದವರ ಕಿರೀಟಗಳಿಂದಲೂ ದಿವ್ಯ ಗಂಧಗಳಿಂದಲೂ ತುಂಬಿರುವುದೂ ಆಯಿತು.

೯೮–೧೦೦ ಆ ಸಮಸ್ತ ಯಾದವರ ರಕ್ಷಣೆಗಾಗಿ ಗಂಗಾ, ಗಣಪತಿಗಳು ಅಲ್ಲಿಗೆ ಬಂದರು. ಅವರಲ್ಲಿ ಬದುಕಿರುವ ವಜ್ರನೆಂಬ ಯಾದವನು ತನ್ನ ಅವಸಾನ ಕಾಲದಲ್ಲಿ ಸುತನಾದ ಮಹದ್ಬಲನನ್ನು ರಾಜ್ಯದಲ್ಲಿ ಸ್ಥಾಪಿಸಿ ತಾನು ಪ್ರಭಾಸಕ್ಷೇತ್ರಕ್ಕೆ

ತೇನಾಪಿ ಸ್ಥಾಪಿತಂ ಲಿಂಗಂ ಯಾದವೇಂದ್ರೇಣ ಧೀಮತಾ ।
ವಜ್ರೇಶ್ವರಮಿತಿ ಖ್ಯಾತಂ ತತ್ಸ್ಥಿತಂ ಯಾದವಸ್ಥಲೇ ॥ ೧೦೦ ॥
ತತ್ರೈವ ಸುಚಿರಂ ಕಾಲಂ ತಪಸ್ತಪ್ತ್ವಾ ಸುಪುಷ್ಕಲಂ ।
ನಾರದಸ್ಯೋಪದೇಶೇನ ಪ್ರಭಾಸೇ ಪಾಪನಾಶನೇ ॥ ೧೦೧ ॥
ಪ್ರಾಪ್ತವಾನ್ಪರಮಾಂ ಸಿದ್ಧಿಂ ಸ ರಾಜಾ ಯಾದವೋತ್ತಮಃ ।
ತತ್ರೈವ ಯೋ ನರಃ ಸ್ನಾತ್ವಾ ಸವ್ಯ ಗ್ಜಾಂಬವತೀಜಲೇ ॥ ೧೦೨ ॥
ವಜ್ರೇಶ್ವರಂ ತು ಸಂಪೂಜ್ಯ ಬ್ರಾಹ್ಮಣಾಂಸ್ತತ್ರ ಭೋಜಯೇತ್ ।
ಯಾದವಸ್ಥಲಸಾಮೀಪ್ಯೇ ಗೋಸಹಸ್ರಫಲಂ ಲಭೇತ್ ॥ ೧೦೩ ॥
ಷಟ್ಕೋಣಂ ತತ್ರ ದಾತವ್ಯಮಂಗುಲ್ಯಾ ಯಾದವಸ್ಥಲೇ ।
ಯಾತ್ರಾಫಲಮವಾಪ್ನೋತಿ ಸಮ್ಯಕ್ ಶ್ರದ್ಧಾಸಮನ್ವಿತಃ ॥ ೧೦೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಯಾದವಸ್ಥಲೋತ್ಪತ್ತೌ ವಜ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತತ್ರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಒಂದು ಲಿಂಗವನ್ನು ಪ್ರತಿಷ್ಠೆ ಮಾಡಿದನು. ಯಾದವ ಸ್ಥಳದಲ್ಲಿರುವ ಆ ಲಿಂಗವು ವಜ್ರೇಶ್ವರನೆಂದು ಪ್ರಸಿದ್ಧವಾಯಿತು.

೧೦೧–೧೦೩. ಆ ವಜ್ರನು ಅಲ್ಲಿಯೇ ಬಹಳಕಾಲ ನಾರದನ ಉಪದೇಶದಿಂದ ತಪಸ್ಸನ್ನು ಮಾಡಿ ಉತ್ತಮ ಸಿದ್ಧಿಯನ್ನು ಪಡೆದನು. ಅಲ್ಲಿರುವ ಜಾಂಬವತೀ ನೀರಿನಲ್ಲಿ ಮಿಂದು ಯಾದವಸ್ಥಳದ ಹತ್ತಿರದಲ್ಲಿರುವ ವಜ್ರೇಶ್ವರನನ್ನು ಪೂಜಿಸಿ ಬ್ರಾಹ್ಮಣರಿಗೆ ಭೋಜನಮಾಡಿಸಿದವನು ಸಾವಿರ ಗೋವನ್ನು ದಾನಮಾಡಿದ ಫಲವನ್ನು ಪಡೆಯುವನು.

೧೦೪. ಆ ಯಾದವ ಸ್ಥಳದಲ್ಲಿ ಶ್ರದ್ಧೆಯಿಂದ ಷಟ್ಕೋಣಸ್ಥಳವನ್ನು ದಾನ ಮಾಡಿದವನು ಯಾತ್ರೆಯ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ವಜ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ಇಂದ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯಾಂ ಪಾಪನಾಶಿನೀಂ ।
ಸರ್ವಕಾಮಪ್ರದಾಂ ಪುಣ್ಯಾಂ ದಾರಿದ್ರ್ಯಸ್ಯಾಂತಕಾರಿಣೀಂ ॥ ೧ ॥
ತತ್ರ ಸ್ನಾತ್ವಾ ವಿಧಾನೇನ ಕೃತ್ವಾ ಪಿಂಡೋದಕಕ್ರಿಯಾಂ ।
ಪ್ರಾಪ್ನುಯಾದಕ್ಷಯಾಂಲ್ಲೋಕಾನ್ಪಿತೄನುದ್ಧೃತ್ಯ ಪಾಪತಃ ॥ ೨ ॥
ಏಕಂ ಯೋ ಭೋಜಯೇತ್ತತ್ರ ಬ್ರಾಹ್ಮಣಂ ಶಂಸಿತವ್ರತಂ ।
ತೇನಾಯುತಸಹಸ್ರಂ ಹಿ ಭೋಜಿತಂ ಸ್ಯಾದ್ದ್ವಿಜನ್ಮನಾಂ ॥ ೩ ॥

ಕನ್ನಡದ ಅನುವಾದ

ಇಂದ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :— ಎಲೈ ದೇವಿ ! ಸರ್ವಪಾಪಗಳನ್ನು ನಿವಾರಿಸುವ, ಇಷ್ಟಾರ್ಥಗಳನ್ನು ಕೊಡತಕ್ಕ, ಬಡತನವನ್ನು ಹೋಗಲಾಡಿಸುವ, ಪುಣ್ಯಕರವಾದ ಹಿರಣ್ಯಾನದೀ ಸಮೀಪಕ್ಕೆ ಹೋಗಬೇಕು.

೨. ಅಲ್ಲಿ ವಿಧಿಯಂತೆ ಸ್ನಾನಮಾಡಿ, ಪಿತೃಗಳಿಗೆ ಪಿಂಡಾದಿಗಳನ್ನು ಕೊಡುವುದರಿಂದ ಪಿತೃಗಳೆಲ್ಲರೂ ಉತ್ತಮ ಗತಿಯನ್ನು ಹೊಂದುವರು.

೩. ಹಿರಣ್ಯಾನದೀ ತೀರದಲ್ಲಿ ಯಾರು ನಿಯಮದಿಂದ ಕೂಡಿದ ಒಬ್ಬ ಬ್ರಾಹ್ಮಣನಿಗೆ ಭೋಜನ ಮಾಡಿಸುವರೋ. ಅದರಿಂದ ಅನೇಕ ಸಹಸ್ರ ಬ್ರಾಹ್ಮಣರಿಗೆ ಭೋಜನ ಮಾಡಿಸಿದ ಫಲವನ್ನು ಹೊಂದುವರು.

ತತ್ರ ಹೇಮರಥಾ ದೇಯೋ ಬ್ರಾಹ್ಮಣೇ ವೇದಪಾರಗೇ ।
ವಿಧಿನಾ ಶಿವಮುದ್ದಿಶ್ಯ ಯಾತ್ರಾಯುತಫಲಂ ಲಭೇತ್ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಇಂದ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟತ್ರಿಂಶದುತ್ತರದ್ವಿಶತತಮೋಽಧ್ಯಾಯಃ ॥

---

೪. ಅಲ್ಲಿ ಶಿವನನ್ನು ಉದ್ದೇಶಿಸಿ ವೇದಪಾರಂಗನಾದ ಬ್ರಾಹ್ಮಣನಿಗೆ ಚಿನ್ನದ ರಥವನ್ನು ದಾನಮಾಡಿದಲ್ಲಿ ಅನೇಕ ಯಾತ್ರೆಗಳ ಫಲವು ದಾನಮಾಡಿದವನಿಗೆ ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಇಂದ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ನಾಗರಾರ್ಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯಾಪಾರ್ಶ್ವತಃ ಸ್ಥಿತಂ ।
ಪ್ರತ್ಯುಕ್ತಂ ನಾಗರಾದಿತ್ಯಂ ಸರ್ವವ್ಯಾಧಿವಿನಾಶನಂ ॥ ೧ ॥
ಪುರಾ ಸತ್ರಾಜಿತಾ ರಾಜ್ಞಾ ದ್ವಾರವತ್ಯಾಂ ಗತೇನ ತು ।
ಆರಾಧಿತೋ ಭಾಸ್ಕರೋಽಭೂದ್ಯಾದವೇನ ಮಹಾತ್ಮನಾ ॥ ೨ ॥
ಮಹಾವ್ರತಮುಪಾಸ್ಥಾಯ ನಿಷ್ಟಪುತ್ರೇಣ ಧೀಮತಾ ।
ತಸ್ಯ ತುಷ್ಟಸ್ತದಾ ಭಾನುಃ ಸ್ಯಮಂತಕಮಣಿಂ ದದೌ ॥ ೩ ॥
ಸ ಮಣಿಃ ಸುವತೇ ನಿತ್ಯಂ ಭಾರಾನಷ್ಟೌ ದಿನೇದಿನೇ ।
ಸುವರ್ಣಸ್ಯ ಸುಶುದ್ಧಸ್ಯ ಭಕ್ತ್ಯಾ ವ್ರತತಪೋಯುತಃ ॥ ೪ ॥
ಭೂಯೋಽಪಿ ಭಾನುನಾ ಪ್ರೋಕ್ತೋ ವರಂ ಬ್ರೂಹಿ ವರಾನನೇ ।
ಸ ಚಾಹ ದೇವದೇವೇಶಂ ಭಾಸ್ಕರಂ ವಾರಿತಸ್ಕರಂ ॥ ೫ ॥

ಕನ್ನಡದ ಅನುವಾದ

ನಾಗರಾರ್ಕಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಹಿರಣ್ಯಾನದಿಯ ಪಾರ್ಶ್ವದಲ್ಲಿರುವ ಸಕಲ ವ್ಯಾಧಿಗಳನ್ನು ನೀಗಿಸುವ ನಾಗರಾದಿತ್ಯನೆಡೆಗೆ ಹೋಗಬೇಕು.

೨–೩. ಹಿಂದೆ ನಷ್ಟಪುತ್ರನಾದ ಸತ್ರಾಜಿತನೆಂಬ ಯಾದವರಾಜನು ದ್ವಾರವತಿಗೆ ಹೋಗಿ ಮಹಾವ್ರತವನ್ನು ಕೈಗೊಂಡು ಸೂರ್ಯನನ್ನು ಪೂಜಿಸಲು ಅದರಿಂದ ಸಂತುಷ್ಟನಾದ ಭಾಸ್ಕರನು ಅವನಿಗೆ ಸ್ಯಮಂತಕಮಣಿಯನ್ನಿತ್ತನು.

೪–೫. ಆ ಸ್ಯಮಂತಕಮಣಿಯು ಪ್ರತಿದಿನವೂ ಶುದ್ಧವಾದ ಸುವರ್ಣದ ಎಂಟು ಭಾರಗಳನ್ನುಂಟುಮಾಡುತ್ತಿದ್ದಿತು. ಸೂರ್ಯನು ತಿರುಗಿಯೂ ವ್ರತತಪಸ್ಸುಗಳಿಂದ ಕೂಡಿರುವ ಆ ಸತ್ರಾಜಿತನನ್ನು ಕುರಿತು ವರವನ್ನು ಕೇಳಿಕೊ ಎನ್ನಲು ಅವನು ಸೂರ್ಯನನ್ನು ಕುರಿತು ಇಂತೆಂದನು.

ಯದಿ ತುಷ್ಟೋಽಸಿ ಮೇ ದೇವ ವರದಾನಂ ಕರೋಷಿ ಚ ।
ಅತ್ರೈವ ಚಾಶ್ರಮೇ ಪುಣ್ಯೇ ನಿತ್ಯಂ ಸಂನಿಹಿತೋ ಭವ ॥ ೬ ॥
ಏವಂ ಭವಿಷ್ಯತೀತ್ಯುಕ್ತ್ವಾ ಸೂರ್ಯಃ ಸತ್ರಾಜಿತಂ ನೃಪಂ ।
ಅಭಿನಂದ್ಯ ವರಂ ತಸ್ಯ ತತ್ರೈವಾದರ್ಶನಂ ಗತಃ ॥ ೭ ॥
ತೇನಾಪಿ ನಿಷ್ನುಪುತ್ರೇಣ ದೇವದೇವಸ್ಯ ಭಾಸ್ವತಃ ।
ಸ್ಥಾಪಿತಾ ಪ್ರತಿಮಾ ಶುಭ್ರಾ ತತ್ರೈವ ವರವರ್ಣಿನಿ ॥ ೮ ॥
ಶಂಖದುಂದುಭಿನಿರ್ಘೋಷೈರ್ಬ್ರಹ್ಮಘೋಷೈಶ್ಚ ಪುಷ್ಕಲೈಃ ।
ತತಸ್ತು ನಾಗರಾನ್ಸರ್ವಾನ್ಸಮಾಹೂಯ ದ್ವಿಜೋತ್ತಮಾನ್ ॥
ಅಬ್ರವೀತ್ಪ್ರಣತೋ ಭೂತ್ವಾ ದತ್ವಾ ವೃತ್ತಿಮನುತ್ತಮಾಂ ॥ ೯ ॥
ಯುಷ್ಮತ್ಪಾದಪ್ರಸಾದೇನ ಸೂರ್ಯಸ್ಯಾನುಗ್ರಹೇಣ ವೈ ।
ಸಾಧಯಿತ್ವಾ ತಪಶ್ಚೋಗ್ರಂ ಸ್ಥಾಪಿತಾ ಪ್ರತಿಮಾ ಮಯಾ ॥ ೧೦ ॥
ಇಂದ್ರಲೋಕಾದಿಹಾನೀತಾ ಜಿತ್ವಾ ಶಕ್ರಂ ಸುರಾರಿಣಾ ।
ದಶಾನನಸ್ಯ ಪುತ್ರೇಣ ಲಂಕಾಯಾಂ ಸ್ಥಾಪಿತಾ ಪುರಾ । ॥ ೧೧ ॥
ತಂ ನಿಹತ್ಯ ತು ರಾಮೇಣ ಲಕ್ಷ್ಮಣಾನುಗತೇನ ವೈ ।
ಅಯೋಧ್ಯಾಯಾಂ ಸಮಾನೀತಾ ಸೌಮಿತ್ರಿಜಯಲಕ್ಷ್ಮಿಕಾ ॥ ೧೨ ॥

---

೬. ಸ್ವಾಮಿ! ನೀನು ನನ್ನಲ್ಲಿ ಸಂತುಷ್ಟನಾಗಿ ವರವನ್ನೀಯುವುದಾದರೆ ಈ ಪವಿತ್ರವಾದ ಆಶ್ರಮದಲ್ಲಿ ಯಾವಾಗಲೂ ಸನ್ನಿಹಿತನಾಗಿರು.

೭. ಸೂರ್ಯನು ಸತ್ರಾಜಿತನನ್ನು ಕುರಿತು ಹೀಗೆಯೇ ಆಗುವುದೆಂದು ಹೇಳಿ ವರವನ್ನಿತ್ತು ಅಲ್ಲಿಯೇ ಅಂತರ್ಧಾನವಾದನು.

೮. ಪ್ರಿಯಳೆ! ಬಳಿಕ ಆ ಸತ್ರಾಜಿತನು ಅತಿಶಯವಾದ ಶಂಖ, ನಗಾರಿ, ಮುಂತಾದ ವಾದ್ಯ ಘೋಷಗಳಿಂದಲೂ ವೇದಘೋಷಗಳಿಂದಲೂ ಸೂರ್ಯನ ಶುಭ್ರವಾದ ಪ್ರತಿಮೆಯನ್ನು ಅಲ್ಲಿ ಸ್ಥಾಪಿಸಿದನು.

೯. ಬಳಿಕ ಅವನು ಪಟ್ಟಣದ ಸಮಸ್ತ ಬ್ರಾಹ್ಮಣರನ್ನು ಕರೆಯಿಸಿ ನಮಸ್ಕರಿಸಿ ಅವರಿಗೆ ಉತ್ತಮವಾದ ವೃತ್ತಿಯನ್ನಿತ್ತು ಹೀಗೆಂದನು.

೧೦. ನಾನು ನಿಮ್ಮ ಮತ್ತು ಸೂರ್ಯನ ಅನುಗ್ರಹದಿಂದ ಉಗ್ರತಪಸ್ಸನ್ನಾಚರಿಸಿ ಈ ಪ್ರತಿಮೆಯನ್ನು ಸ್ಥಾಪಿಸಿರುವೆನು.

೧೧. ಹಿಂದೆ ಸುರದ್ವೇಷಿಯಾದ ರಾವಣನ ಮಗನಾದ ಇಂದ್ರಜಿತುವು ದೇವೇಂದ್ರನನ್ನು ಜಯಿಸಿ ಈ ಪ್ರತಿಮೆಯನ್ನು ದೇವಲೋಕದಿಂದ ತಂದು ಲಂಕೆಯಲ್ಲಿ ಸ್ಥಾಪಿಸಿದನು.

೧೨-೧೩. ರಾಮನು ಲಕ್ಷ್ಮಣನೊಡನೆ ಆ ಇಂದ್ರಜಿತುವನ್ನುಕೊಂದು ಲಕ್ಷ್ಮಣನ ಗೆಲುವನ್ನು ಸೂಚಿಸುವ ಈ ಪ್ರತಿಮೆಯನ್ನು ಅಯೋಧ್ಯೆಗೆ ತಂದು, ಮಿತ್ರಾವರುಣರ

ಮಿತ್ರಾವರುಣಪುತ್ರಾಯ ವಸಿಷ್ಠಾಯ ಸಮರ್ಪಿತಾ ।
ತೇನಾಪಿ ಮಮ ತುಷ್ಟೇನ ದ್ವಾರಕಾಯಾಂ ನಿವೇದಿತಾ ॥ ೧೩ ॥
ಮಯಾಪಿ ಸ್ಥಾಪಿತಾ ಚಾತ್ರ ಜ್ಞಾತ್ವಾ ಕ್ಷೇತ್ರಮನುತ್ತಮಂ ।
ಕಿಮತ್ರ ಬಹುನೋಕ್ತೇನ ಭವದ್ಭಿಃ ಸರ್ವಥೈವ ಹಿ ॥ ೧೪ ॥
ಪರಿಪಾಲ್ಯಾ ಪ್ರಯತ್ನೇನ ಯಾವಚ್ಚಂದ್ರಾರ್ಕತಾರಕಂ ।
ತಸ್ಮಾದ್ಯುಷ್ಮಾಕಮಾದಿಷ್ಟಾ ಪ್ರತಿಮೇಯಂ ಮಯಾ ಶುಭಾ ॥ ೧೫ ॥
ನಾಗರಾಣಾಂ ತು ವಿಪ್ರಾಣಾಂ ಸೋಮೇಶಪುರವಾಸಿನಾಂ ।
ತಸ್ಮಾನ್ನಾಮ ಮಯಾ ದತ್ತಂ ನಾಗರಾದಿತ್ಯಮೇವ ಹಿ ॥ ೧೬ ॥

ಬ್ರಾಹ್ಮಣಾ ಊಚುಃ :—

ಸರ್ವಮೇವ ಕರಿಷ್ಯಾಮೋ ದೇವಸ್ಯ ಪರಿಪಾಲನಂ ।
ಯಾವನ್ಮಹೀ ಚ ಚಂದ್ರಾರ್ಕೌ ಯಾವತ್ತಿಷ್ಠತಿ ಸಾಗರಃ ॥
ತಾವತ್ತೇ ಹ್ಯಕ್ಷಯಾ ಕೀರ್ತಿಃ ಸ್ಥಾನೇ ಚಾಸ್ಮಿನ್ಭವಿಷ್ಯತಿ ॥ ೧೭ ॥
ಏವಮುಕ್ತ್ವಾ ತು ತೇ ಸರ್ವೇ ನಾಗರಾ ದ್ವಿಜಪುಂಗವಾಃ ।
ರಾಜಾಪಿ ತುಷ್ಟಃ ಪ್ರಯಯೌ ತದಾ ದ್ವಾರವತೀಂ ಪುರೀಂ ॥ ೧೮ ॥

ತನಯನಾದ ವಸಿಷ್ಠನಿಗೆ ಸಮರ್ಪಿಸಿದನು. ಅವನು ಸಂತೋಷಗೊಂಡು ಅದನ್ನು ದ್ವಾರಕೆಯಲ್ಲಿಟ್ಟನು.

೧೪–೧೫. ನಾನು ಇದು ಉತ್ತಮಕ್ಷೇತ್ರವೆಂದರಿತು ಇಲ್ಲಿ ಈ ಪ್ರತಿಮೆಯನ್ನು ಸ್ಥಾಪಿಸಿದೆನು. ಹೆಚ್ಚು ಹೇಳಿ ಪ್ರಯೋಜನವೇನು? ನೀವು ಚಂದ್ರಸೂರ್ಯರಿರುವವರೆಗೆ ಈ ಪ್ರತಿಮೆಯನ್ನು ಕಾಪಾಡಿರಿ. ಆದ್ದರಿಂದಲೆ ಇದನ್ನು ನಿಮಗೆ ಕೊಟ್ಟಿರುವೆನು.

೧೬. ಇದಕ್ಕೆ ಸೋಮೇಶಪುರವಾಸಿಗಳಾದ ಬ್ರಾಹ್ಮಣರ ಹೆಸರನ್ನನುಸರಿಸಿ ನಾಗರಾದಿತ್ಯವೆಂಬ ನಾಮಧೇಯವನ್ನಿಟ್ಟಿರುವೆನು.

೧೭. ಬ್ರಾಹ್ಮಣರು ಹೇಳುತ್ತಾರೆ :—ನೀನು ಹೇಳಿದಂತೆ ಈ ನಾಗರಾದಿತ್ಯನನ್ನು ಕಾಪಾಡುವೆವು. ಈ ಭೂಮಿ, ಈ ಚಂದ್ರಸೂರ್ಯರು, ಸಮುದ್ರಗಳಿರುವವರೆಗೆ ಈ ಸ್ಥಳದಲ್ಲಿ ನಿನ್ನ ಕೀರ್ತಿಯು ಸ್ಥಿರವಾಗಿ ನೆಲೆಸುವುದು.

೧೮. ಆ ಬ್ರಾಹ್ಮಣರು ಹೀಗೆನ್ನಲು ರಾಜನು ಸಂತೋಷಗೊಂಡು ದ್ವಾರವತಿಗೆ ತೆರಳಿದನು.

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ತಸ್ಮಿನ್ದೃಷ್ಟೇ ತು ಯತ್ಫಲಂ ।
ಗೋಶತಸ್ಯ ಪ್ರಯಾಗೇತು ಸಮ್ಯಗ್ದತ್ತಸ್ಯ ಯತ್ಫಲಂ ॥
ತತ್ಫಲಂ ಸಮವಾಪ್ನೋತಿ ನಾಗರಾರ್ಕಸ್ಯ ದರ್ಶನಾತ್ ॥ ೧೯ ॥
ದಾರಿದ್ರ್ಯದುಃಖಶೋಕಾರ್ತೇಃ ಕೋಽನ್ಯೋಽಸ್ತಿ ಹರಕ್ಷಮಃ ।
ಪ್ರಭಾಸೇ ಪಾವನೇ ಕ್ಷೇತ್ರೇ ಮುಕ್ತ್ವಾ ನಾಗರಭಾಸ್ಕರಂ ॥ ೨೦ ॥
ಬಂಧಕುಷ್ಠಾದಿಕಂ ದುಃಖಂ ಯೇ ಭಜಂತ್ಯಲ್ಪಬುದ್ಧಯಃ ।
ತತ್ರ ತೇ ನೈವ ಜಾನಂತಿ ವೈದ್ಯಂ ನಾಗರಭಾಸ್ಕರಂ ॥ ೨೧ ॥
ಸ್ನಾತ್ವಾ ಹಿರಣ್ಯಾತೋಯೇನ ಯಸ್ತಂ ಪೂಜಯತೇ ನರಃ ।
ಕಲ್ಪಕೋಟಿಸಹಸ್ರಾಣಿ ಸೂರ್ಯಲೋಕೇ ಮಹೀಯತೇ ॥ ೨೨ ॥
ಶುಕ್ಲಪಕ್ಷೇ ತು ಸಪ್ತಮ್ಯಾಂ ಯದಾ ಸಂಕ್ರಮತೇ ರವಿಃ ।
ಮಹಾಜಯಾ ತದಾ ಖ್ಯಾತಾ ಸಪ್ತಮೀ ಭಾಸ್ಕರಪ್ರಿಯಾ ॥ ೨೩ ॥
ಸ್ನಾನಂ ದಾನಂ ಜಪೋ ಹೋಮಃ ಪಿತೃದೇವಾಭಿಪೂಜನಂ ।
ಸರ್ವಂ ಕೋಟಿಗುಣಂ ಪ್ರೋಕ್ತಂ ಭಾಸ್ಕರಸ್ಯ ವಚೋ ಯಥಾ ॥ ೨೪ ॥

---

೧೯. ಈಶ್ವರನು ಹೇಳುತ್ತಾನೆ :—ದೇವಿ! ಕೇಳು ಆ ನಾಗರಾದಿತ್ಯನ ದರ್ಶನದಿಂದಾಗುವ ಫಲವನ್ನು ಹೇಳುವೆನು. ನಾಗರಾರ್ಕನ ದರ್ಶನದಿಂದ ಪ್ರಯಾಗದಲ್ಲಿ ನೂರು ಗೋವುಗಳನ್ನು ದಾನಮಾಡಿದ ಫಲವು ಲಭಿಸುವುದು.

೨೦. ಪ್ರಭಾಸದಲ್ಲಿರುವ ನಾಗರ ಭಾಸ್ಕರನ ಹೊರತು ದಾರಿದ್ರ್ಯ ದುಃಖವನ್ನು ನಿವಾರಿಸಲು ಸಮರ್ಥನಾದವನಾವನು ?

೨೧. ಬಂಧನ, ಕುಷ್ಠಾದಿಗಳಿಂದುಂಟಾದ ದುಃಖವನ್ನನುಭವಿಸುವ ಮೂಢರು ವೈದ್ಯನಾದ ನಾಗರಭಾಸ್ಕರನನ್ನು ತಿಳಿಯುವುದಿಲ್ಲ.

೨೨. ಹಿರಣ್ಯಾನದಿಯ ನೀರಿನಲ್ಲಿ ಮಿಂದು ಆ ನಾಗರಭಾಸ್ಕರನನ್ನು ಪೂಜಿಸಿದ ಮಾನವನು ಕೋಟಿಸಾವಿರ ಕಲ್ಪಗಳಕಾಲ ಸೂರ್ಯಲೋಕದಲ್ಲಿ ಪೂಜ್ಯನಾಗುವನು.

೨೩. ಶುಕ್ರಪಕ್ಷದ ಸಪ್ತಮೀದಿನ ಸಂಕ್ರಮಣವಾದರೆ ಅದು ಸೂರ್ಯನಿಗೆ ಪ್ರಿಯವಾದ ಮಹಾಜಯಾ ಸಪ್ತಮಿಯೆನ್ನಿಸಿಕೊಳ್ಳುವುದು.

೨೪. ಸೂರ್ಯನ ಮಾತಿನಂತೆ ಅಲ್ಲಿ ಮಾಡಿದ ಸ್ನಾನ, ದಾನ, ಜಪ, ಹೋಮ ಪಿತೃದೇವತೆಗಳ ಪೂಜೆ ಇವುಗಳೆಲ್ಲ ಕೋಟಿಯಷ್ಟು ಹೆಚ್ಚಾಗುವುವು.

ಏಕಂ ಯೋ ಭೋಜಯೇತ್ತತ್ರ ಬ್ರಾಹ್ಮಣಂ ಸೂರ್ಯಸಂನಿಧೌ ।
ಕೋಟಿಭೋಜ್ಯಂ ಕೃತಂ ತೇನ ಇತ್ಯಾಹ ಭಗವಾನ್ ಹರಿಃ ॥ ೨೫ ॥
ಏತನ್ಮಯಾ ತೇ ಕಥಿತಂ ಪುರಾ ನೋಕ್ತಂ ವರಾನನೇ ।
ಯಃ ಶೃಣೋತಿ ನರೋ ಭಕ್ತ್ಯಾ ಸ ಗಚ್ಛೇದ್ಭಾಸ್ಕರಂ ಪದಂ ॥ ೨೬ ॥
ಸೂರ್ಯಸ್ಯ ದೇವಿ ನಾಮಾನಿ ರಹಸ್ಯಾನಿ ಶೃಣುಷ್ವ ಮೇ ।
ಅಲಂ ನಾಮಸಹಸ್ರೇಣ ಪಠಸ್ವೈನಂ ಶುಭಂ ಸ್ತವಂ ॥ ೨೭ ॥
ವಿಕರ್ತನೋ ವಿವಸ್ವಾಂಶ್ಚ ಮಾರ್ತಂಡೋ ಭಾಸ್ಕರೋ ರವಿಃ ।
ಲೋಕಪ್ರಕಾಶಕಃ ಶ್ರೀಮಾಂಲ್ಲೋಕಚಕ್ಷುರ್ಗ್ರಹೇಶ್ವರಃ ॥ ೨೮ ॥
ಲೋಕಸಾಕ್ಷೀ ತ್ರಿಲೋಕೇಶಃ ಕರ್ತಾ ಹರ್ತಾ ತಮಿಸ್ರಹಾ ।
ತಪನಸ್ತಾಪನಶ್ಚೈವ ಶುಚಿಃ ಸಪ್ತಾಶ್ವವಾಹನಃ ॥ ೨೯ ॥
ಗಭಸ್ತಿಹಸ್ತೋ ಬ್ರಹ್ಮಾ ಚ ಸರ್ವದೇವನಮಸ್ಕೃತಃ ।
ಏಕವಿಂಶ ಇತ್ಯೇಷತಿ ನಾಗರಾರ್ಕಸ್ತವಃ ಸ್ಮೃತಃ ॥ ೩೦ ॥
ಸ್ತವರಾಜ ಇತಿ ಖ್ಯಾತಃ ಶರೀರಾರೋಗ್ಯವೃದ್ಧಿದಃ ॥ ೩೧ ॥

---

೨೫. ಅಲ್ಲಿ ನಾಗರಾದಿತ್ಯನ ಹತ್ತಿರ ಒಬ್ಬ ಬ್ರಾಹ್ಮಣನನ್ನು ಭೋಜನ ಮಾಡಿಸಿದವನು ಕೋಟಿಬ್ರಾಹ್ಮಣರಿಗೆ ಭೋಜನಮಾಡಿಸಿದವನಂತಾಗುವನೆಂದು ಪೂಜ್ಯನಾದ ಹರಿಯು ಹೇಳಿರುತ್ತಾನೆ.

೨೬. ಪ್ರಿಯಳೆ ! ನಾನು ಹಿಂದೆ ಹೇಳಿದ ವಿಷಯವನ್ನು ಈಗ ಹೇಳಿರುತ್ತೇನೆ. ಇದನ್ನು ಭಕ್ತಿಯಿಂದ ಕೇಳಿದ ಮಾನವನು ಸೂರ್ಯನ ಸ್ಥಾನವನ್ನು ಹೊಂದುವನು.

೨೭. ದೇವಿ ! ನನ್ನಿಂದ ಸೂರ್ಯನ ರಹಸ್ಯವಾದ ನಾಮಗಳನ್ನು ಕೇಳು. ಸಹಸ್ರನಾಮಗಳು ಸಾಕು. ಮಂಗಳಕರವಾದ ಈ ಸ್ತೋತ್ರವನ್ನು ಪಠಿಸು.

೨೮–೩೦. ವಿಕರ್ತನ, ವಿವಸ್ವಾನ್, ಮಾರ್ತಂಡ, ಭಾಸ್ಕರ, ರವಿ, ಲೋಕಪ್ರಕಾಶಕ, ಶ್ರೀಮಾನ್, ಲೋಕಚಕ್ಷು, ಗ್ರಹೇಶ್ವರ, ಲೋಕಸಾಕ್ಷಿ, ತ್ರಿಲೋಕೇಶ, ಕರ್ತಾ, ಹರ್ತಾ, ತಮಿಸ್ರಹಾ, ತಪನ, ತಾಪನ, ಶುಚಿ, ಸಪ್ತಾಶ್ವವಾಹನ, ಗಭಸ್ತಿಹಸ್ತ, ಬ್ರಹ್ಮ. ಸರ್ವದೇವನಮಸ್ಕೃತ ಎಂದು ಇಪ್ಪತ್ತೊಂದು ನಾಮವುಳ್ಳ ಇದು ನಾಗರಾರ್ಕನ ಸ್ತೋತ್ರವಾಗಿರುವುದು.

೩೧. ಶರೀರದ ಆರೋಗ್ಯವನ್ನು ಹೆಚ್ಚಿಸುವ ಇದು ಸ್ತವರಾಜವೆನ್ನಿಸಿಕೊಳ್ಳುವುದು.

ಯ ಏತೇನ ಮಹಾದೇವಿ ದ್ವೇ ಸಂಧ್ಯೇಽಸ್ತಮನೋದಯೇ |
ನಾಗರಾರ್ಕಂ ತು ಸಂಸ್ತೌತಿ ಸ ಲಭೇದ್ವಾಂಛಿತಂ ಫಲಂ || ೩೨ ||

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾಗರಾರ್ಕಮಾಹಾತ್ಮ್ಯವರ್ಣನಂ ನಾಮ
॥ ಏಕೋನಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

---

೩೨. ಮಹಾದೇವಿ ! ಸೂರ್ಯನು ಅಸ್ತಂಗತನೂ, ಉದಯಿಸುವವನೂ ಆಗುವ ಎರಡು ಸಂಧ್ಯಾಕಾಲಗಳಲ್ಲಿ ನಾಗರಾರ್ಕನನ್ನು ಸ್ತುತಿಸುವವನು ಇಷ್ಟಾರ್ಥಗಳನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾಗರಾರ್ಕಮಾಹಾತ್ಮ್ಯವರ್ಣನವೆಂಬ
ಇನ್ನೂರಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ದಶಾಶ್ವಮೇಧಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಬಲಭದ್ರಂ ಸುರೇಶ್ವರಂ ।
ಸುಭದ್ರಾಂ ಚ ತಥಾ ಕೃಷ್ಣಂ ಸರ್ವಪಾತಕನಾಶನಂ ॥ ೧ ॥
ಪೂರ್ವಕಲ್ಪೇ ಮಹಾದೇವಿ ದೇಹಮುತ್ಸಾತ್ಯಜದ್ಧರಿಃ ।
ಅಸ್ಮಿನ್ಕಲ್ಪೇಽಪಿ ಚ ಪುನರ್ಗಾತ್ರೋತ್ಸರ್ಗಮಿತಿ ಸ್ಮೃತಂ ॥ ೨ ॥
ತತ್ರ ಯೇ ಪೂಜಯಿಷ್ಯಂತಿ ನಾಗರಾದಿತ್ಯಸಂನಿಧೌ ।
ಬಲಭದ್ರಂ ಸುಭದ್ರಾಂ ಚ ಕೃಷ್ಣಂ ತೇ ಸ್ವರ್ಗಗಾಮಿನಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ದಶಾಶ್ವಮೇಧಮಾಹಾತ್ಮ್ಯ ವರ್ಣನಂ ನಾಮ ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ದಶಾಶ್ವಮೇಧಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಬಲರಾಮ, ಸುಭದ್ರಾ, ಕೃಷ್ಣರ ಸನ್ನಿಧಿಗೆ ಹೋಗಬೇಕು.

೨. ಶ್ರೀಕೃಷ್ಣನು ಹಿಂದಿನಕಲ್ಪದಲ್ಲಿಯೂ, ಈ ಕಲ್ಪದಲ್ಲಿಯೂ ಇಲ್ಲಿ ದೇಹವನ್ನು ತ್ಯಜಿಸಿದ್ದರಿಂದ ಇದು ಗಾತ್ರೋತ್ಸರ್ಗವೆಂದು ಪ್ರಸಿದ್ಧವಾಯಿತು.

೩. ಇಲ್ಲಿ ನಾಗರಾದಿತ್ಯನ ಹತ್ತಿರದಲ್ಲಿಯೇ ಬಲರಾಮ, ಸುಭದ್ರಾ, ಕೃಷ್ಣರನ್ನು ಪೂಜಿಸಿದವರು ಸ್ವರ್ಗವನ್ನು ಸೇರುವರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ದಶಾಶ್ವಮೇಧಮಾಹಾತ್ಮ್ಯವರ್ಣನವೆಂಬ ಇನ್ನೂರನಲವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಶ್ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಜಂಬವತೀನದೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿಚಿತ್ರೇಶ್ವರಮುತ್ತಮಂ ।
ಹಿರಣ್ಯಾತೀರನಿಲಯಂ ಮಹಾಪಾತಕನಾಶನಂ ॥ ೧ ॥
ವಿಚಿತ್ರೇಣ ಮಹಾದೇವಿ ಲೇಖಕೇನ ಯಮಸ್ಯ ಚ ।
ತಪಃ ಕೃತ್ವಾ ಮಹಾರೌದ್ರಂ ಲಿಂಗಂ ತತ್ರ ಪ್ರತಿಷ್ಠಿತಂ ॥ ೨ ॥
ತಂ ದೃಷ್ಟ್ವಾ ಮಾನವೋ ದೇವಿ ಯಮಲೋಕಂ ನ ಪಶ್ಯತಿ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಜಾಂಬವತೀನದೀಮಾಹಾತ್ಮ್ಯವರ್ಣನಂ ನಾಮ ಚತುಶ್ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಜಂಬವತೀನದೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಹಿರಣ್ಯಾತೀರದಲ್ಲಿರುವ ಮಹಾಪಾತಕಗಳನ್ನು ನಾಶಗೊಳಿಸುವ ವಿಚಿತ್ರೇಶ್ವರನೆಡೆಗೆ ಹೋಗಬೇಕು.

೨. ದೇವಿ ! ಯಮನ ಲೇಖಕನಾದ ವಿಚಿತ್ರನು ತಪಸ್ಸನ್ನು ಮಾಡಿ ಭಯಂಕರವಾದ ಲಿಂಗವನ್ನು ಅಲ್ಲಿ ಪ್ರತಿಷ್ಠೆ ಮಾಡಿರುವನು.

೩. ಲೋಕದಲ್ಲಿ ಅವನನ್ನು ನೋಡಿದ ಮಾನವನು ಯಮಲೋಕವನ್ನು ಕಾಣುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಜಾಂಬವತೀನದೀಮಾಹಾತ್ಮ್ಯ ವರ್ಣನವೆಂಬ ಇನ್ನೂರನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು

ಮಸೂರಿಕಾದಿರೋಗೇಭ್ಯಃ ಶಿಶೂನಾಂ ನ ಭಯಂ ಭವೇತ್ ।
ವಿಸ್ಫೋಟಕಾದಿರೋಗೇಭ್ಯೋ ನ ಭಯಂ ಜಾಯತೇ ಕ್ವಚಿತ್ ॥ ೬ ॥
ಅಸ್ಮಿನ್ಕ್ಷೇತ್ರೇ ಮಹಾಸಿದ್ಧೇ ಸಿದ್ಧಯಜ್ಞಸ್ತು ಯಃ ಸ್ಮೃತಃ ।
ವರ್ಣಾನಾಂ ಸಾಂತರಾಲಾನಾಂ ಸರ್ವೇಷಾಂ ಜಾತಿವಲ್ಲಭಃ ॥ ೭ ॥
ಪಶುಪುಷ್ಪೋಪಹಾರೈಶ್ಚ ಬಲಿದಾನೈಃ ಪೃಥಗ್ವಿಧೈಃ ।
ಸಂತುಷ್ಟಿಂ ಶೀಘ್ರಮಾಯಾತಿ ಶೇಷೋಽಶೇಷಾಘನಾಶನಃ ॥ ೮ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶೇಷಮಾಹಾತ್ಮ್ಯವರ್ಣನಂ ನಾಮ
ಏಕಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

---

೬. ಶಿಶುಗಳಿಗೆ ಮಸೂರಿಕಾ, ವಿಸ್ಫೋಟಾದಿರೋಗಗಳಿಂದ ಭಯವುಂಟಾಗುವುದಿಲ್ಲ.

೭. ಈ ಸಿದ್ಧಿಕ್ಷೇತ್ರದಲ್ಲಿ ಸಕಲ ಜಾತಿಯವರಿಗೂ ಪ್ರಿಯನಾದ ಸಿದ್ಧಯಜ್ಞನೆಂದು ಪ್ರಸಿದ್ಧನೂ ಸಕಲಪಾಪಗಳನ್ನು ನಾಶಗೊಳಿಸುವವನೂ ಆದ ಶೇಷನು ಬಗೆ ಬಗೆಯ ಪಶುಪುಷ್ಪ ಬಲಿಗಳಿಂದ ಶೀಘ್ರವಾಗಿ ಸಂತುಷ್ಟನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶೇಷಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಕುಮಾರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯತ್ರ ದೇವೀ ಕುಮಾರಿಕಾ ।
ತಸ್ಯೈವ ಪೂರ್ವದಿಗ್ಭಾಗೇ ಸ್ಥಿತಾ ರಕ್ಷಾರ್ಥಮೇವ ಹಿ ॥ ೧ ॥
ಪುರಾ ರಥಂತರೇ ಕಲ್ಪೇ ರುರುರ್ನಾಮ ಮಹಾಸುರಃ ।
ಉತ್ಪನ್ನಃ ಸ ಮಹಾಕಾಯಃ ಸರ್ವಲೋಕಭಯಾವಹಃ ॥ ೨ ॥
ತೇನ ದೇವಾಃ ಸಗಂಧರ್ವಾಸ್ತ್ರಾಸಿತಾಸ್ತ್ರಿದಶಾಲಯಾತ್ ।
ತಸ್ಯ ಭೀತ್ಯಾ ತತಃ ಸರ್ವೇ ಬ್ರಹ್ಮಲೋಕಮಧಿಷ್ಠಿತಾಃ ॥ ೩ ॥
ತಥಾ ಭೂಮಿತಲೇ ವಿಪ್ರಾನ್ಯಜ್ವನೋಽಥ ತಪಸ್ವಿನಃ ।
ನಿಜಘಾನ ಸ ದುಷ್ಟಾತ್ಮಾ ಯೇ ಚಾನ್ಯೇ ಧರ್ಮಚಾರಿಣಃ ॥ ೪ ॥
ನಿಃಸ್ವಾಧ್ಯಾಯವಷಟ್ಕಾರಂ ತದಾಸೀದ್ಧರಣೀತಲಂ ।
ನಷ್ಟಯಜ್ಞೋತ್ಸವಂ ಸರ್ವಂ ರುರೋರ್ಭಯನಿಪೀಡಿತಂ ॥ ೫ ॥

ಕನ್ನಡದ ಅನುವಾದ

ಕುಮಾರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಕ್ಷೇತ್ರದ ಪೂರ್ವ ದಿಕ್ಕಿನಲ್ಲಿ ರಕ್ಷಣೆಗೋಸ್ಕರ ನೆಲೆಸಿರುವ ಕುಮಾರಿಕಾದೇವಿಯೆಡೆಗೆ ಹೋಗಬೇಕು.

೨. ಹಿಂದೆ ರಥಂತರ ಕಲ್ಪದಲ್ಲಿ ಸಕಲಲೋಕಗಳಿಗೆ ಭಯವನ್ನುಂಟುಮಾಡುವವನೂ, ದೊಡ್ಡ ಶರೀರವುಳ್ಳವನೂ ಆದ ರುರುವೆಂಬ ಮಹಾದೈತ್ಯನು ಹುಟ್ಟಿದನು.

೩. ಅವನು ದೇವಲೋಕದಿಂದ ದೇವಗಂಧರ್ವರನ್ನು ಭಯಗೊಳಿಸಿ ಓಡಿಸಲು ಅವರೆಲ್ಲ ಭಯದಿಂದ ಬ್ರಹ್ಮಲೋಕವನ್ನು ಸೇರಿದರು.

೪. ಆ ದುಷ್ಟನು ಹಾಗೆಯೇ ಭೂಮಿಯಲ್ಲಿ ಯಾಗಮಾಡುವ ಬ್ರಾಹ್ಮಣರನ್ನೂ, ಮುನಿಗಳನ್ನೂ, ಧರ್ಮಿಷ್ಠರನ್ನೂ ಕೊಂದನು.

೫. ಆಗ ಭೂತಲವು ರುರುದೈತ್ಯನ ಭಯದಿಂದ ವೇದಾಧ್ಯಯನ, ವಷಟ್ಕಾರ, ಯಜ್ಞಗಳಿಲ್ಲದ್ದಾಯಿತು.

ತತಃ ಪ್ರವ್ಯಥಿತಾ ದೇವಾಸ್ತಥಾ ಸರ್ವೇ ಮಹರ್ಷಯಃ ।
ಸಮೇತ್ಯಾಮಂತ್ರಯನ್ಮಂತ್ರಂ ವಧಾರ್ಥಂ ತಸ್ಯ ದುರ್ಮತೇಃ ॥ ೬ ॥
ತತಃ ಕಾಯೋದ್ಭವಃ ಸ್ವೇದಃ ಸರ್ವೇಷಾಂ ಸಮಜಾಯತ ।
ತೇಷಾಂ ಚಿಂತಾಯುತಾಂ ದೇವಿ ನಿರೋಧಾಜ್ಜಗೃಹುಶ್ಚ ತಂ ॥ ೭ ॥
ತತ್ರ ಕನ್ಯಾ ಸಮುತ್ಪನ್ನಾ ದಿವ್ಯಾ ಕಮಲಲೋಚನಾ ।
ವ್ಯಾಪಯಂತೀ ದಿಶಃ ಸರ್ವಾಃ ಸರ್ವೇಷಾಂ ಪುರತಃ ಸ್ಥಿತಾ ॥ ೮ ॥
ಸರ್ವಾನ್ದೇವಾಂಸ್ತತಃ ಪ್ರಾಹ ಕಿಮರ್ಥಂ ನಿರ್ಮಿತಾಸ್ಮ್ಯಹಂ ।
ತದ್ವಃ ಕಾರ್ಯಂ ಕರಿಷ್ಯಾಮಿ ಶ್ರುತ್ವಾ ತಸ್ಯಾಸ್ತದಾ ಗಿರಂ ॥ ೯ ॥
ಆಚಖ್ಯುಃ ಸಂಕಟಂ ತಸ್ಯಾಸ್ತೇ ದೇವಾ ರುರುಚೇಷ್ಟಿತಂ ।
ಶ್ರುತ್ವಾ ಜಹಾಸ ಸಾ ದೇವೀ ದೇವಾನಾಂ ಕಾರ್ಯಸಿದ್ಧಯೇ ॥ ೧೦ ॥
ತಸ್ಯಾ ಹಸಂತ್ಯಾ ನಿಶ್ಚೇರುರ್ವರಾಂಗಾಃ ಕನ್ಯಕಾಃ ಪುನಃ ।
ಪಾಶಾಂಕುಶಧರಾಃ ಸರ್ವಾಃ ಪೀನಶ್ರೋಣಿಪಯೋಧರಾಃ ॥ ೧೧ ॥
ಫೇತ್ಕಾರರಾವಮಾತ್ರೇಣ ತ್ರಾಸಯಂತ್ಯಶ್ಚರಾಚರಂ ।
ಅನ್ವಗಾತ್ಸಾ ರುರುರ್ಯತ್ರ ತಾಭಿಃ ಸಾರ್ಧಂ ಯಶಸ್ವಿನೀ ॥ ೧೨ ॥

---

೬. ಬಳಿಕ ವ್ಯಥೆಗೊಂಡ ದೇವತೆಗಳೂ, ಮಹರ್ಷಿಗಳೂ ಒಟ್ಟಿಗೆ ಸೇರಿ ಆ ದೈತ್ಯನ ವಧೆಗಾಗಿ ಮಂತ್ರವನ್ನು ಜಪಿಸಿದರು.

೭. ದೇವಿ! ಅನಂತರ ಹೀಗೆ ಆಲೋಚಿಸುತ್ತಿರುವ ಅವರ ದೇಹದಿಂದ ಬೆವರುಂಟಾಗಲು ಅವರು ಅದನ್ನು ಒರಿಸಿಕೊಂಡರು.

೮. ಅಲ್ಲಿ ಓರ್ವ ದಿವ್ಯಕನ್ಯೆಯು ಜನಿಸಿ ತನ್ನ ತನುಕಾಂತಿಯಿಂದ ದಿಕ್ಕುಗಳನ್ನು ವ್ಯಾಪಿಸುತ್ತ ಎಲ್ಲರ ಮುಂದೆ ನಿಂತಳು.

೯–೧೦. ಅವಳು ಎಲ್ಲ ದೇವತೆಗಳನ್ನು ಕುರಿತು ನೀವು ನನ್ನನ್ನೇಕೆ ನಿರ್ಮಿಸಿದಿರಿ? ನಿಮ್ಮ ಕಾರ್ಯವನ್ನು ನೆರವೇರಿಸುವೆನು ಎನ್ನಲು ದೇವತೆಗಳು ಅವಳ ಮಾತನ್ನು ಕೇಳಿ ತಮಗೆ ರುರುದೈತ್ಯನಿಂದುಂಟಾದ ಕಷ್ಟವನ್ನು ಹೇಳಿದರು. ಆ ದೇವಿಯು ಅದನ್ನು ಕೇಳಿ ದೇವತೆಗಳ ಕಾರ್ಯಸಿದ್ಧಿಯನ್ನು ಕುರಿತು ನಕ್ಕಳು.

೧೧. ಅವಳು ನಗುತ್ತಿರಲು ಸುಂದರಾಂಗಿಯರೂ, ಪಾಶಾಂಕುಶಧಾರಿಣಿಯರೂ, ಪುಷ್ಟವಾದ ನಿತಂಬಪಯೋಧರಗಳುಳ್ಳವರೂ ಆದ ಕನ್ಯೆಯರು ಹೊರಟರು.

೧೨. ಆ ಕನ್ಯೆಯು ತನ್ನಲ್ಲಿ ಹುಟ್ಟಿದ ಕನ್ಯೆಯರೊಡನೆ ಫೇತ್ಕಾರಧ್ವನಿಗಳಿಂದ ಚರಾಚರ ಜಗತ್ತುಗಳನ್ನು ಹೆದರಿಸುತ್ತ ರುರುವನ್ನು ಹಿಂಬಾಲಿಸಿದಳು.

ಅಥಾಭೂತ್ತುಮುಲಂ ತಾಸಾಂ ಯುದ್ಧಂ ಘೋರಂ ತು ತೈಃ ಸಹ ।
ಶಸ್ತ್ರಾಸ್ತ್ರೈರ್ವಿವಿಧೈರ್ಘೋರೈಃ ಶತ್ರುಪಕ್ಷಕ್ಷಯಂಕರೈಃ ॥ ೧೩ ॥
ತಾಭಿಸ್ತ್ರವಸುಗಾಃ ಸರ್ವೇ ಪ್ರಹಾರೈರ್ಜರ್ಜರೀಕೃತಾಃ ।
ಪರಾಙ್ಮುಖಾಃ ಕ್ಷಣೇನೈವ ಜಾತಾಃ ಕೇಚಿನ್ನಿಪಾತಿತಾಃ ॥ ೧೪ ॥
ತತೋ ಹತಂ ಬಲಂ ದೃಷ್ಟ್ವಾ ರುರುರ್ಮಾಯಾಮಥಾಸೃಜತ್ ।
ತಾಮಸೀಂ ನಾಮ ದೇವೇಶಿ ತಯಾಮುಹ್ಯತ ನೈವ ಸಾ ॥ ೧೫ ॥
ತಮೋಭೂತೇ ತತಸ್ತತ್ರ ದೇವೀ ದೈತ್ಯಂ ತದಾ ರುರುಂ ।
ಶಕ್ತ್ಯಾ ಬಿಭೇದ ಹೃದಯೇ ತತೋ ಮೂರ್ಛಾಂ ಜಗಾಮ ಹ ॥ ೧೬ ॥
ಮುಹೂರ್ತಾಲ್ಲಬ್ಧಸಂಜ್ಞೋಽಥ ಜ್ಞಾತ್ವಾ ತಸ್ಯಾಃ ಪರಾಕ್ರಮಂ ।
ಪಲಾಯನಕೃತೋತ್ಸಾಹಃ ಸಮುದ್ರಾಭಿಮುಖೋ ಯಯೌ ॥ ೧೭ ॥
ಸಾಪಿ ದೇವೀ ಜಗಾಮಾಥ ಪೃಷ್ಠತೋಽಸ್ಯ ದುರಾತ್ಮನಃ ।
ಸ್ತೂಯಮಾನಾ ಸುರಗಣೈಃ ಕಿಂನರೈಃ ಸಮಹೋರಗೈಃ ॥ ೧೮ ॥
ತತಃ ಪ್ರವಿಶ್ಯ ಜಲಧಿಂ ತಂ ದೃಷ್ಟ್ವಾ ದಾನವಂ ರುಷಾ ।
ಖಡ್ಗಾಗ್ರೇಣ ಶಿರಶ್ಛಿತ್ವಾ ಚರ್ಮಮುಂಡಧರಾ ತತಃ ॥ ೧೯ ॥

---

೧೩. ಬಳಿಕ ಶತ್ರುಗಳನ್ನು ನಾಶಗೊಳಿಸುವ ನಾನಾ ಬಗೆಯ ಭಯಂಕರ ಶಸ್ತ್ರಾಸ್ತ್ರಗಳಿಂದ ಆ ಕನ್ಯೆಯರಿಗೂ ರುರುಮೊದಲಾದವರಿಗೂ ಘೋರಯುದ್ಧವು ನಡೆಯಿತು.

೧೪. ಆ ಕನ್ಯೆಯ ಪ್ರಹಾರಗಳಿಂದ ಶಿಥಿಲರಾದ ರುರುಮೊದಲಾದ ದಾನವರಲ್ಲಿ ಕೆಲವರು ಹಿಂದಿರುಗಿದರು. ಕೆಲವರು ಕೆಳಕ್ಕೆಬಿದ್ದರು.

೧೫. ರುರುವು ಅವಳಿಂದ ಹತವಾದ ತನ್ನ ಸೈನ್ಯವನ್ನು ಕಂಡು ತಾಮಸಿಯೆಂಬ ಮಾಯೆಯನ್ನು ಸೃಷ್ಟಿಸಿದನು. ಆದರಿಂದವಳು ಮೋಹಗೊಳ್ಳಲಿಲ್ಲ.

೧೬. ಅಲ್ಲೆಲ್ಲ ಕತ್ತಲೆಯು ಮುಸುಕಲು ದೇವಿಯು ಶಕ್ತ್ಯಾಯುಧದಿಂದ ರುರುವಿನ ಎದೆಯನ್ನು ಸೀಳಿದಳು. ಅದರಿಂದವನು ಮೂರ್ಛೆಗೊಂಡನು.

೧೭. ತರುವಾಯ ಆ ರುರುವು ಒಂದು ಮೂಹೂರ್ತದಲ್ಲಿ ಎಚ್ಚತ್ತು ಅವಳ ಪರಾಕ್ರಮವನ್ನರಿತು ಸಮುದ್ರಾಭಿಮುಖನಾಗಿ ಓಡಿಹೋದನು.

೧೮. ಆ ದೇವಿಯು ಸುರರು, ಕಿನ್ನರರು, ಉರಗರಿಂದ ಸ್ತುತಿಸಲ್ಪಡುತ್ತ ಆ ದುಷ್ಟಾದಾನವನನ್ನು ಹಿಂದಟ್ಟಿ ಹೋದಳು.

೧೯—೨೦. ಅನಂತರ ಕೋಪದಿಂದ ಸಮುದ್ರವನ್ನು ಹೊಕ್ಕು ಆ ರಾಕ್ಷಸನನ್ನು ಹಿಡಿದು ಕತ್ತಿಯ ಕೊನೆಯಿಂದ ಅವನ ತಲೆಯನ್ನು ಕತ್ತರಿಸಿ ಚರ್ಮಮುಂಡಗಳನ್ನು

ನಿಶ್ಚಕ್ರಾಮ ಪುನಸ್ತಸ್ಮಾತ್ಪ್ರಭಾಸಂ ಕ್ಷೇತ್ರಮಾಗತಾ ।
ಕನ್ಯಾ ಸೈನ್ಯೇನ ಸಂಯುಕ್ತಾ ಬಹುರೂಪೇಣ ಭಾಸ್ವತಾ ॥ ೨೦ ॥
ದೇವೈಃ ಸುವಿಸ್ಮಿತೈರ್ದೃಷ್ಟಾ ಚರ್ಮಮುಂಡಧರಾ ವರಾ ।
ತತೋ ದೇವಾಃ ಸ್ತುತಿಂ ಚಕ್ರುಃ ಕೃತಾಂಜಲಿಪುಟಾಃ ಸ್ಥಿತಾಃ ॥ ೨೧ ॥
ದೇವಾ ಊಚುಃ :—
ಜಯ ತ್ವಂ ದೇವಿ ಚಾಮುಂಡೇ ಜಯ ಭೂತಾಪಹಾರಿಣಿ ।
ಜಯ ಸರ್ವಗತೇ ದೇವಿ ಕಾಲರಾತ್ರಿ ನಮೋಽಸ್ತು ತೇ ॥ ೨೨ ॥
ಭೀಮರೂಪೇ ಶಿವೇ ವಿದ್ಯೇ ಮಹಾಮಾಯೇ ಮಹೋದಯೇ ।
ಮಹಾಭಾಗೇ ಜಯೇ ಜೃಂಭೇ ಭೀಮಾಕ್ಷಿ ಭೀಮದರ್ಶನೇ ॥ ೨೩ ॥
ಮಹಾಮಾಯೇ ವಿಚಿತ್ರಾಂಗಿ ಗೇಯನೃತ್ಯಪ್ರಿಯೇ ಶುಭೇ ।
ವಿಕರಾಲೇ ಮಹಾಕಾಲಿ ಕಾಲಿಕೇ ಕಾಲರೂಪಿಣಿ ॥ ೨೪ ॥
ಪ್ರಾಸಹಸ್ತೇ ದಂಡಹಸ್ತೇ ಭೀಮಹಸ್ತೇ ಭಯಾನನೇ ।
ಚಾಮುಂಡೇ ಜ್ವಲಮಾನಾಸ್ಯೇ ತೀಕ್ಷ್ಣದಂಷ್ಟ್ರೇ ಮಹಾಬಲೇ ॥
ಶವಯಾನಸ್ಥಿತೇ ದೇವಿ ಪ್ರೇತಸಂಘನಿಷೇವಿತೇ ॥ ೨೫ ॥

ಧರಿಸಿ ಅಲ್ಲಿಂದ ಹೊರಟು ನಾನಾ ರೂಪವಾದ ಸೈನ್ಯಗಳೊಡನೆ ಪ್ರಭಾಸಕ್ಷೇತ್ರಕ್ಕೆ ಬಂದಳು.

೨೧. ಆಶ್ಚರ್ಯಗೊಂಡ ದೇವತೆಗಳು ಚರ್ಮಮುಂಡವನ್ನು ಧರಿಸಿದ ಅವಳನು ಕಂಡು ಕೈಮುಗಿದುಕೊಂಡು ಸ್ತುತಿಸಿದರು.

೨೨. ದೇವತೆಗಳು ಹೇಳುತ್ತಾರೆ :—ಓ ಚಾಮುಂಡಿ! ದೇವಿ! ಜಯಿಸು. ಪ್ರಾಣಿಸಂಹಾರಕಳೆ! ಜಯಿಸು. ಸರ್ವತ್ರ ನೆಲೆಸಿರುವ ಓ ದೇವಿಯೆ! ಜಯಿಸು. ಕಾಲರಾತ್ರಿ ಸ್ವರೂಪಳೆ! ನಿನಗೆ ನಮಸ್ಕಾರವು.

೨೩–೨೫. ಭಯಂಕರರೂಪಳೂ, ಮಂಗಳಕರಳೂ, ವಿದ್ಯಾಸ್ವರೂಪಳೂ, ಮಹಾಮಾಯೆಯೂ, ಮಹೋದಯಳೂ, ಮಹಾಭಾಗ್ಯಶಾಲಿನಿಯೂ, ಜಯಳೂ, ಜೃಂಭಳೂ, ಭಯಂಕರವಾದ ಕಣ್ಣುಗಳುಳ್ಳವಳೂ, ಭಯಂಕರವಾದ ನೋಟವುಳ್ಳವಳೂ, ಆಶ್ಚರ್ಯಕರವಾದ ಅವಯವಗಳುಳ್ಳವಳೂ, ಗಾನನೃತ್ಯಪ್ರಿಯಳೂ, ವಿಕಾರಳೂ, ಕಾಲರೂಪಿಣಿಯೂ, ಪ್ರಾಸದಂಡಗಳನ್ನು ಹಿಡಿದ ಭಯಂಕರ ಕೈಯುಳ್ಳವಳೂ, ಭಯಂಕರ ಮುಖವುಳ್ಳವಳೂ, ಉರಿಯುತ್ತಿರುವ ಮುಖವುಳ್ಳವಳೂ, ತೀಕ್ಷ್ಣವಾದ ಹಲ್ಲುಗಳುಳ್ಳವಳೂ, ಅತಿಶಯಬಲವುಳ್ಳವಳೂ, ಶವಯಾನದಲ್ಲಿರುವವಳೂ, ಪ್ರೇತಗಳ ಸಮೂಹಗಳಿಂದ ಸೇವಿಸಲ್ಪಟ್ಟವಳೂ ಆದ ದೇವಿಯೆ! ನೀನು ಜಯಿಸು.

ಏವಂ ಸ್ತುತಾ ತದಾ ದೇವೀ ಸರ್ವೈಃ ಶುಕ್ರಪುರೋಗಮೈಃ ।
ಪ್ರಹೃಷ್ಟವದನಾ ಭೂತ್ವಾ ವಾಕ್ಯಮೇತದುವಾಚ ಹ ॥ ೨೬ ॥

ವರಂ ವೃಣುಧ್ವಂ ಭದ್ರಂ ವೋ ನಿತ್ಯಂ ಯನ್ಮನಸಿ ಸ್ಥಿತಂ ।
ಅಹಂ ದಾಸ್ಯಾಮಿ ತತ್ಸರ್ವಂ ಯದ್ಯಪಿ ಸ್ಯಾತ್ಸುದುರ್ಲಭಂ ॥ ೨೭ ॥

ದೇವಾ ಊಚುಃ :—

ಕೃತಕೃತ್ಯಾಸ್ತ್ವಯಾ ಭದ್ರೇ ದಾನವಸ್ಯ ನಿಷೂದನಾತ್ ॥ ೨೮ ॥

ಸ್ತೋತ್ರೇಣಾನೇನ ಯೋ ದೇವೀ ತ್ವಾಂ ವೈ ಸ್ತೌತಿ ವರಾನನೇ ।
ತಸ್ಯ ತ್ವಂ ವರದಾ ದೇವಿ ಭವ ಸರ್ವಗತಾ ಸತೀ ॥ ೨೯ ॥

ಯಶ್ಚೇದಂ ಶೃಣುಯಾದ್ಭಕ್ತ್ಯಾ ತವ ದೇವಿ ಸಮುದ್ಭವಂ ।
ಸರ್ವಪಾಪವಿನಿರ್ಮುಕ್ತಃ ಸ ಪ್ರಾಪ್ನೋತು ಪರಾಂ ಗತಿಂ ॥ ೩೦ ॥

ಅಸ್ಮಿನ್ಕ್ಷೇತ್ರೇ ತ್ವಯಾ ದೇವಿ ಸ್ಥಿತಿಃ ಕಾರ್ಯಾ ಸದಾ ಶುಭೇ ॥ ೩೧ ॥

ಅತ್ರ ತ್ವಾಂ ಪೂಜಯೇದ್ಯಸ್ತು ಶುಕ್ಲಪಕ್ಷೇ ಸಮಾಹಿತಃ ।
ನವಮ್ಯಾಮಾಶ್ವಿನೇ ಮಾಸಿ ತಸ್ಯ ಕಾರ್ಯಂ ಸದಾ ಶುಭಂ ॥ ೩೨ ॥

---

೨೬. ಇಂದ್ರ ಮೊದಲಾದ ದೇವತೆಗಳು ಹೀಗೆ ಸ್ತುತಿಸಲು ದೇವಿಯು ಸಂತುಷ್ಟ ವಾದ ಮುಖವುಳ್ಳವಳಾಗಿ ಇಂತೆಂದಳು.

೨೭. " ಎಲೈ ದೇವತೆಗಳಿರಾ ! ನಿಮಗಿಷ್ಟವಾದ ವರವನ್ನು ಕೇಳಿಕೊಳ್ಳಿರಿ. ಅದು ದುರ್ಲಭವಾಗಿದ್ದರೂ ನಿಮಗೆ ಕೊಡುವೆನು".

೨೮. ದೇವತೆಗಳು ಹೇಳುತ್ತಾರೆ:—ಮಂಗಳಕರಳೆ! ನೀನು ದಾನವನನ್ನು ಕೊಂದುದರಿಂದ ಧನ್ಯರಾಗಿದ್ದೇವೆ.

೨೯. ಸುಂದರಿ ! ನಿನ್ನನ್ನು ಈ ಸ್ತೋತ್ರದಿಂದ ಸ್ತುತಿಸಿದವನಿಗೆ ಸರ್ವವ್ಯಾಪಿನಿ ಯಾದ ನೀನು ವರವನ್ನು ಕೊಡು.

೩೦. ದೇವಿ ! ನಿನ್ನ ಸ್ತೋತ್ರವನ್ನು ಭಕ್ತಿಯಿಂದ ಕೇಳಿದವನು ಸಕಲಪಾಪ ಮುಕ್ತನಾಗಿ ಉತ್ತಮಗತಿಯನ್ನು ಹೊಂದಲಿ.

೩೧. ಮಂಗಳಕರಳೆ ! ನೀನು ಈ ಕ್ಷೇತ್ರದಲ್ಲಿ ಯಾವಾಗಲೂ ವಾಸಿಸು.

೩೨. ಇಲ್ಲಿ ನಿನ್ನನ್ನು ಆಶ್ವಿನ ಶುಕ್ಲಪಕ್ಷದ ನವಮಿಾದಿನ ಸಾವಧಾನಮನಸ್ಸಿನಿಂದ ಪೂಜಿಸಿದವನಿಗೆ ಯಾವಾಗಲೂ ಮಂಗಳವನ್ನುಂಟುಮಾಡು.

ಈಶ್ವರ ಉವಾಚ :—
ಏವಮುಕ್ತ್ವಾ ಮಹಾದೇವಿ ತತ್ರೈವ ನಿರತಾಭವತ್ ।
ದೇವಸ್ತ್ರಿವಿಷ್ಟಪಂ ಜಗ್ಮುಃ ಪ್ರಹೃಷ್ಟಾ ಹತಶತ್ರವಃ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಮಾರೀಮಾಹಾತ್ಮ್ಯವರ್ಣನಂನಾಮ
॥ ದ್ವಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

---

೩೩. ಈಶ್ವರನು ಹೇಳುತ್ತಾನೆ :—ಹೀಗೆನ್ನಲು ದೇವಿಯು ಆ ಕ್ಷೇತ್ರದಲ್ಲಿಯೇ ಆಸಕ್ತಳಾದಳು, ಹತಶತ್ರುಗಳಾದ ದೇವತೆಗಳು ದೇವಲೋಕಕ್ಕೆ ತೆರಳಿದರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಮಾರೀಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಮಂತ್ರಾವಲಿಕ್ಷೇತ್ರಪಾಲಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕ್ಷೇತ್ರಪಾಲಂ ಮಹಾಪ್ರಭಂ ।
ಈಶಾನ್ಯೇ ಸಂಸ್ಥಿತಂ ದೇವಂ ಮಂತ್ರಮಾಲಾವಿಭೂಷಿತಂ ॥ ೧ ॥
ಹಿರಣ್ಯಾತಟಮಾಶ್ರಿತ್ಯ ರಕ್ಷಾರ್ಥಂ ಸಮುಪಸ್ಥಿತಂ ।
ತತ್ರೈವ ಹೀರಕಂ ಕ್ಷೇತ್ರಂ ತಸ್ಮಿನ್ರಕ್ಷಾಂ ಕರೋತಿ ಸಃ ॥ ೨ ॥
ಕೃಷ್ಣಪಕ್ಷೇ ತ್ರಯೋದಶ್ಯಾಂ ತತ್ರ ತಂ ಪೂಜಯೇನ್ನರಃ ।
ಗಂಧಪುಷ್ಪೋಪಹಾರೈಶ್ಚ ತಥಾ ಬಲಿನಿವೇದನೈಃ ॥ ೩ ॥
ಏವಂ ಸಂಪೂಜಿತೋ ದೇವಃ ಸರ್ವಕಾಮಪ್ರದೋ ಭವೇತ್ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಂತ್ರಾವಲೀಕ್ಷೇತ್ರಪಾಲಮಾಹಾತ್ಮ್ಯವರ್ಣನಂನಾಮ
॥ ತ್ರಿಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮಂತ್ರಾವಲಿಕ್ಷೇತ್ರಪಾಲಮಾಹಾತ್ಮ್ಯವರ್ಣನ

೧–೨. ಮಹಾದೇವಿ ! ಅನಂತರ ಆ ಕುಮಾರಿಯ ಈಶಾನ್ಯದಿಕ್ಕಿನಲ್ಲಿರುವವನೂ, ಮಂತ್ರಮಾಲೆಯಿಂದ ಅಲಂಕಾರಗೊಂಡವನೂ, ಜಗದ್ರಕ್ಷಣೆಗಾಗಿ ಹಿರಣ್ಯಾನದಿಯ ದಡದಲ್ಲಿರುವವನೂ ಆದ ಅತ್ಯಂತ ಕಾಂತಿಯುಳ್ಳ ಕ್ಷೇತ್ರಪಾಲನೆಡೆಗೆ ಹೋಗಬೇಕು. ಅವನು ಅಲ್ಲಿಯೇ ನೆಲೆಸಿ ಹೀರಕಕ್ಷೇತ್ರವನ್ನು ಕಾಪಾಡುತ್ತಿರುವನು.

೩–೪. ಅಲ್ಲಿ ಕೃಷ್ಣಪಕ್ಷದ ತ್ರಯೋದಶೀದಿನ ಅವನನ್ನು ಗಂಧಪುಷ್ಪಾದಿಗಳಿಂದಲೂ, ಬಲಿಯಿಂದಲೂ ಪೂಜಿಸಿದ ಮನುಷ್ಯನಿಗೆ ಅವನು ಸಕಲೇಷ್ಟಾರ್ಥಗಳನ್ನೀಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಂತ್ರಾವಲೀಕ್ಷೇತ್ರಪಾಲಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಚತ್ವಾರಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಶೇಷಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇದ್ಬಲಭದ್ರಕಲೇವರಂ ।
ಶೇಷರೂಪೇಣ ಯತ್ರಾಸೌ ಪ್ರಾತ್ಯಜತ್ಸ್ವಂ ಕಲೇವರಂ ॥ ೧ ॥
ಗತಸ್ತ್ರೈಸಂಗಮೇ ತೀರ್ಥೇ ತತ್ರ ಪಾತಾಲವರ್ತ್ಮನಾ ।
ಅಸ್ಮಿನ್ಮಿತ್ರವನೇ ದೇವಿ ಗವ್ಯೂತಿದ್ವಯವಿಸ್ತೃತೇ ॥ ೨ ॥
ಕಲೇವರಂ ಸ್ಥಿತಂ ದೇವಿ ಲಿಂಗಾಕಾರಂ ಮಹಾಪ್ರಭಂ ।
ರೇವತ್ಯಾ ಸಹಿತಂ ತತ್ರ ಶೇಷನಾಮೇತಿ ವಿಶ್ರುತಂ ॥ ೩ ॥
ಯತ್ರ ಸಿದ್ಧಃ ಪುರಾ ದೇವಿ ಜರಾನಾಮಾತು ಕೌಲಿಕಃ ।
ವಿಷ್ಣುಹಂತಾ ಭಲ್ಲತಿರ್ಥೇ ಸೋಽಸ್ಮಿನ್ಸ್ಥಾನೇ ಲಯಂ ಗತಃ ॥ ೪ ॥
ತತ್ಪ್ರಭೃತ್ಯೇವ ಸಕಲೇ ಶೇಷ ಇತ್ಯಭಿವಿಶ್ರುತಃ ।
ಚೈತ್ರೇ ಶುಕ್ಲತ್ರಯೋದಶ್ಯಾಂ ಯಸ್ತಂ ಪೂಜಯತೇ ನರಃ ।
ಸ ಪುತ್ರಪೌತ್ರಪಶುಮಾನ್ವರ್ಷಂ ಕ್ಷೇಮೇಣ ಗಚ್ಛತಿ ॥ ೫ ॥

ಕನ್ನಡದ ಅನುವಾದ

ಶೇಷಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ಇರುವ ಬಲರಾಮನ ಶರೀರವನ್ನು ನೋಡಬೇಕು. ಬಲರಾಮನು ಪಾತಾಳಮಾರ್ಗದಿಂದ ತ್ರಿಸಂಗಮ ತೀರ್ಥದಲ್ಲಿರುವ ಎಂಟು ಮೈಲಿ ವಿಸ್ತೀರ್ಣವಾದ ಮಿತ್ರವನವನ್ನು ಸೇರಿ ಅಲ್ಲಿ ಶೇಷರೂಪದಿಂದ ತನ್ನ ಶರೀರವನ್ನು ತ್ಯಜಿಸಿರುವನು.

೩. ಅಲ್ಲಿ ರೇವತಿಯೊಡನೆ ಶೇಷನೆಂದು ಹೆಸರುಳ್ಳ ಅತ್ಯಂತಕಾಂತಿಯುಳ್ಳ ಆ ಬಲರಾಮನ ಲಿಂಗಾಕಾರವಾದ ಶರೀರವಿರುವುದು.

೪. ದೇವಿ! ಹಿಂದೆ ಜರಾ ಎಂಬ ಹೆಸರುಳ್ಳ ನಾಸ್ತಿಕನು ಅಥವಾ ನೇಯ್ಗೆಯವನು ವಿಷ್ಣುವನ್ನು ಹೊಡೆದು ಈ ಭಲ್ಲತೀರ್ಥದಲ್ಲಿ ಮಡಿದನು.

೫. ಅದು ಮೊದಲ್ಗೊಂಡು ಇದು ಶೇಷ ಎಂದು ಪ್ರಸಿದ್ಧವಾಯಿತು. ಚೈತ್ರ ಶುಕ್ಲತ್ರಯೋದಶೀದಿನ ಈ ಶೇಷನನ್ನು ಪೂಜಿಸಿದವನು ಒಂದು ವರ್ಷಕಾಲ ಪುತ್ರ, ಪೌತ್ರ, ಪಶುಗಳೊಡನೆ ಸೌಖ್ಯವಾಗಿರುವನು.

॥ ಶ್ರೀಃ ॥

ಪಂಚಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಮೋಘೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರೈವೋಪರಿಸಂಸ್ಥಿತಂ ।
ಸರಸ್ವತ್ಯಾಸ್ತಟೇ ದೇವಿ ಪರ್ಣಾದಿತ್ಯಸ್ಯ ಪಶ್ಚಿಮೇ ॥ ೧ ॥
ತತ್ರಾಸ್ತೇ ಸುಮಹಲ್ಲಿಂಗಂ ಸ್ಥಾಪಿತಂ ಬ್ರಹ್ಮಣಾ ಪುರಾ ।
ಬ್ರಹ್ಮೇಶ್ವರೇತಿ ವಿಖ್ಯಾತಂ ಸರ್ವಪಾತಕನಾಶನಂ ॥ ೨ ॥
ತತ್ರ ಸ್ನಾತ್ವಾ ದ್ವಿತೀಯಾಯಾಂ ಸೋಪವಾಸೋ ಜಿತೇಂದ್ರಿಯಃ ।
ಅರ್ಚಯೇದ್ದೇವದೇವೇಶಂ ನಾಮ್ನಾಂ ಬ್ರಹ್ಮೇಶ್ವರಂ ಶುಭಂ ।
ತರ್ಪಯೇಚ್ಚ ಪಿತೄನ್ ಶ್ರಾದ್ಧೇ ಯದೀಚ್ಛೇಚ್ಛಾಶ್ವತಂ ಪದಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮೋಘೇಶ್ವರಮಾಹಾತ್ಮ್ಯವರ್ಣನಂನಾಮ
। ಪಂಚಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮೋಘೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಅಲ್ಲಿಯೇ ಸರಸ್ವತಿಯ ದಡದಲ್ಲಿ ಪರ್ಣಾದಿತ್ಯನ ಪಶ್ಚಿಮದಲ್ಲಿ ಮೇಲ್ಗಡೆ ಇರುವುದೂ, ಹಿಂದೆ ಬ್ರಹ್ಮನು ಪ್ರತಿಷ್ಠೆಮಾಡಿರುವುದೂ, ಸಕಲ ಪಾಪಗಳನ್ನು ಪರಿಹರಿಸುವುದೂ ಆದ ಬ್ರಹ್ಮೇಶ್ವರಲಿಂಗದೆಡೆಗೆ ಹೋಗಬೇಕು.

೩. ಮನುಷ್ಯನು ಅಲ್ಲಿ ಬಿದಿಗೆದಿನ ಉಪವಾಸವಿದ್ದು ಬ್ರಹ್ಮೇಶ್ವರನನ್ನು ಪೂಜಿಸಿ ಶ್ರಾದ್ಧದಲ್ಲಿ ಪಿತೃಗಳಿಗೆ ತರ್ಪಣಮಾಡಿದರೆ ಶಾಶ್ವತವಾದ ಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮೋಘೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಪಿಂಗಾನದೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪಿಂಗಲೀಂ ಪಾಪನಾಶಿನೀಂ ।
ಋಷಿತೀರ್ಥಾತ್ಪಶ್ಚಿಮತೋ ನದೀಂ ಸಾಗರಗಾಮಿನೀಂ ॥ ೧ ॥
ತಸ್ಯಾಃ ಸಂದರ್ಶನಾದ್ದೇವಿ ರೂಪವಾಞ್ಜಾಯತೇ ನರಃ ।
ಪುರಾ ಮಹರ್ಷಯಃ ಪ್ರಾಪ್ತಾಃ ಸೋಮೇಶ್ವರದಿದೃಕ್ಷಯಾ ॥ ೨ ॥
ಪ್ರಭಾಸಂ ಕ್ಷೇತ್ರಮಾಸಾದ್ಯ ನದೀತೀರೇ ವ್ಯವಸ್ಥಿತಾಃ ।
ದಾಕ್ಷಿಣಾತ್ಯಾ ಮಹಾದೇವಿ ಕೃಷ್ಣವರ್ಣಾ ವಿರೂಪಕಾಃ ॥ ೩ ॥
ತತ್ರಾಶ್ರಮವರೇ ಸ್ನಾತ್ವಾ ಪಶ್ಯಂತೋ ರೂಪಮಾತ್ಮನಃ ।
ಕಾಮೇನ ಸದೃಶಂ ಸರ್ವೇ ವಿಸ್ಮಯಂ ಪರಮಂ ಗತಾಃ ॥ ೪ ॥
ತತಸ್ತೇ ಸಹಿತಾಃ ಸರ್ವೇ ವಿಸ್ಮಯೋತ್ಫುಲ್ಲಲೋಚನಾಃ ।
ಅತ್ರ ಸ್ನಾತಾ ವಯಂ ಸರ್ವೇ ಯತಃ ಪಿಂಗತ್ವಮಾಗತಾಃ ।
ಅತಃ ಪ್ರಭೃತಿ ನಾಮಾಸ್ಯಾಸ್ತತಃ ಪಿಂಗಾ ಭವಿಷ್ಯತಿ ॥ ೫ ॥

ಕನ್ನಡದ ಅನುವಾದ

ಪಿಂಗಾನದೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಪಾಪವನ್ನು ನಿವಾರಿಸುವ ಋಷಿತೀರ್ಥದ ಪಶ್ಚಿಮದಲ್ಲಿರುವ ಸಮುದ್ರವನ್ನು ಸೇರುವ ಪಿಂಗಲಾನದಿಯೆಡೆಗೆ ಹೋಗಬೇಕು.

೨–೩. ದೇವಿ! ಆ ನದಿಯ ದರ್ಶನದಿಂದ ಮನುಷ್ಯನು ಸುಂದರನಾಗುವನು. ಹಿಂದೆ ದಕ್ಷಿಣ ದೇಶದ ಕರಿಬಣ್ಣದ ಕುರೂಪಿಗಳಾದ ಮಹರ್ಷಿಗಳು ಸೋಮೇಶ್ವರನನ್ನು ನೋಡಲು ಪ್ರಭಾಸಕ್ಷೇತ್ರವನ್ನು ಹೊಂದಿ ನದೀದಡದಲ್ಲಿ ನೆಲೆಸಿದರು.

೪. ಅವರು ಅಲ್ಲಿರುವ ಉತ್ತಮಾಶ್ರಮದಲ್ಲಿ ಮಿಂದು ಮನ್ಮಥನಂತಾದ ತಮ್ಮ ರೂಪವನ್ನು ಕಂಡು ಅತ್ಯಾಶ್ಚರ್ಯಗೊಂಡರು.

೫. ಇಲ್ಲಿ ಮಿಂದ ನಾವು ಪಿಂಗಳ ಬಣ್ಣವುಳ್ಳವರಾದ್ದರಿಂದ ಇದು ಮೊದಲ್ಗೊಂಡು ಈ ನದಿಗೆ ಪಿಂಗಾ ಎಂದು ಹೆಸರಾಗಲಿ.

ಯೇಽತ್ರ ಸ್ನಾನಂ ಕರಿಷ್ಯಂತಿ ಭಕ್ತ್ಯಾ ಪರಮಯಾ ಯುತಾಃ ।
ನ ತೇಷಾಮನ್ವಯೇ ಕಶ್ಚಿದ್ಭವಿಷ್ಯತಿ ಕುರೂಪವಾನ್ ॥ ೬ ॥
ದರ್ಶನಾತ್ಪಿತೃಮೇಧಸ್ಯ ಲಪ್ಸ್ಯತೇ ಮಾನವಃ ಫಲಂ ।
ಸ್ನಾನೇನ ದ್ವಿಗುಣಂ ಪುಣ್ಯಂ ತರ್ಪಣೇನ ಚತುರ್ಗುಣಂ ॥ ೭ ॥
ಅಸಂಖ್ಯಾತಂ ಫಲಂ ತಸ್ಯ ಯೋಽತ್ರ ಶ್ರಾದ್ಧಂ ಕರಿಷ್ಯತಿ ।
ಏವಮುಕ್ತ್ವಾ ತತಃ ಸರ್ವ ಋಷಯೋ ವರವರ್ಣಿನಿ ॥ ೮ ॥
ವ್ಯಭಜಂಸ್ತನ್ನದೀತೀರಂ ಸರ್ವೇ ತೇ ಮುನಿಸತ್ತಮಾಃ ।
ಯಜ್ಞೋಪವೀತಮಾತ್ರಾಣಿ ಚಕ್ರುಸ್ತೀರ್ಥಾನಿ ಸರ್ವತಃ ॥ ೯ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಿಂಗಾನದೀಮಾಹಾತ್ಮ್ಯವರ್ಣನಂನಾಮ
॥ ಷಟ್ಚತ್ವಾರಿಂಶತ್ಯುತ್ತರದ್ವಿಶತತಮೋಽಧ್ಯಾಯಃ ॥

---

೬. ಅತಿಶಯ ಭಕ್ತಿಯಿಂದಿಲ್ಲಿ ಮಿಂದವನ ವಂಶದಲ್ಲಿಒಬ್ಬ ಕುರೂಪಿಯೂ ಜನಿಸುವುದಿಲ್ಲ.

೭–೯. ಮನುಷ್ಯನು ಇದರ ದರ್ಶನದಿಂದ ಪಿತೃಮೇಧದ ಫಲವನ್ನೂ, ಸ್ನಾನದಿಂದ ಅದರ ಇಮ್ಮಡಿ ಫಲವನ್ನೂ, ತರ್ಪಣದಿಂದ ನಾಲ್ಕರಷ್ಟು ಪುಣ್ಯವನ್ನೂ ಶ್ರಾದ್ಧಗೈಯುವುದರಿಂದ ಅಸಂಖ್ಯಾಕ ಫಲವನ್ನೂ ಪಡೆಯುವನು. ಆ ಸಕಲ ಮುನಿಗಳು ಹೀಗೆಂದು ಆ ನದೀತೀರವನ್ನು ವಿಭಾಗಿಸಿ ಯಜ್ಞೋಪವೀತದಷ್ಟು ತೀರ್ಥಗಳನ್ನು ನಿರ್ಮಿಸಿದರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಿಂಗಾನದೀಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ

ಪಿಂಗಲಾದಿತ್ಯಪಿಂಗಾದೇವೀಶುಕ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇತ್ಸೂರ್ಯಂ ಪಾಪಪ್ರಣಾಶನಂ ।
ತಥಾ ಚ ಪಿಂಗಲಾಂ ದೇವೀಂ ಪಾರ್ವತೀರೂಪಧಾರಿಣೀಂ ॥ ೧ ॥
ತೃತೀಯಾಯಾಂ ವಿಶೇಷೇಣ ಹ್ಯುಪವಾಸಂ ಕರೋತಿ ಯಃ ।
ಸರ್ವಾನ್ಕಾಮಾನವಾಪ್ನೋತಿ ಧನವಾನ್ಪುತ್ರವಾನ್ಭವೇತ್ ॥ ೨ ॥
ತತ್ರೈವ ಸಂಸ್ಥಿತಂ ಪಶ್ಯೇಚ್ಛುಕ್ರೇಶ್ವರಮಿತಿ ಶ್ರುತಂ ।
ತಂ ದೃಷ್ಟ್ವಾ ಮಾನವೋ ದೇವಿ ಮುಕ್ತಃ ಸ್ಯಾತ್ಸರ್ವಪಾತಕೈಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪಿಂಗಲಾದಿತ್ಯಪಿಂಗಾದೇವೀಶುಕ್ರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಸಪ್ತಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಪಿಂಗಲಾದಿತ್ಯಪಿಂಗಾದೇವೀಶುಕ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ಇರುವ ಪಾಪಗಳನ್ನು ನಿವಾರಿಸುವ. ಸೂರ್ಯನನ್ನೂ, ಪಾರ್ವತೀರೂಪವನ್ನು ತಾಳಿದ ಪಿಂಗಲಾದೇವಿಯನ್ನು ದರ್ಶನಮಾಡಬೇಕು

೨. ಅಲ್ಲಿ ತದಿಗೆದಿನ ಉಪವಾಸಮಾಡಿದ ಮಾನವನು ಸಕಲೇಷ್ಟಾರ್ಥಗಳನ್ನೂ ಧನ, ಪುತ್ರರನ್ನೂ ಪಡೆಯುವನು.

೩. ದೇವಿ ! ಮಾನವನು ಅಲ್ಲಿಯೇ ಇರುವ ಶುಕ್ರೇಶ್ವರನನ್ನು ನೋಡಬೇಕು. ಅವನನ್ನು ನೋಡಿದ ಮನುಷ್ಯನು ಸಕಲಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪಿಂಗಲಾದಿತ್ಯಪಿಂಗಾದೇವೀಶುಕ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಚತ್ವಾರಿಂಶತ್ಯುತ್ತರದ್ವಿಶತತಮೋಽಧ್ಯಾಯಃ

ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪೂರ್ವೋಕ್ತಂ ಬ್ರಹ್ಮಪೂಜಿತಂ ।
ಸರಸ್ವತ್ಯಾಸ್ತಟೇ ಸಂಸ್ಥಂ ಪರ್ಣಾದಿತ್ಯಸ್ಯ ಪಶ್ಚಿಮೇ ॥ ೧ ॥
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಶೃಣುಷ್ವೈಕಮನಾಃ ಪ್ರಿಯೇ ।
ಸೃಜತೋ ಬ್ರಹ್ಮಣಃ ಪೂರ್ವಂ ಭೂತಗ್ರಾಮಂ ಚತರ್ವಿಧಂ ॥ ೨ ॥
ಉತ್ಪನ್ನಾದ್ಭುತರೂಪಾಢ್ಯಾ ನಾರೀ ಕಮಲಲೋಚನಾ ।
ಕಂಬುಗ್ರೀವಾ ಸುಕೇಶಾಂತಾ ಬಿಂಬೋಷ್ಠೀ ತನುಮಧ್ಯಮಾ ॥ ೩ ॥
ಗಂಭೀರನಾಭಿಃ ಸುಶ್ರೋಣೀ ಪೀನಶ್ರೋಣಿಪಯೋಧರಾ ।
ಪೂರ್ಣಚಂದ್ರಮುಖೀ ಸಾ ತು ಗೂಢಗುಲ್ಫಾ ಸಿತಾನನಾ ॥ ೪ ॥

ಕನ್ನಡದ ಅನುವಾದ

ಬ್ರಹ್ಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ಬಳಿಕ ಸರಸ್ವತಿಯ ದಡದಲ್ಲಿ ಪರ್ಣಾದಿತ್ಯನ ಪಶ್ಚಿಮದಲ್ಲಿರುವ ಬ್ರಹ್ಮನು ಪೂಜಿಸಿದ ಹಿಂದೆ ಹೇಳಿದ ಬ್ರಹ್ಮೇಶ್ವರನೆಡೆಗೆ ಹೋಗಬೇಕು.

೨-೪. ಪ್ರಿಯಳೆ! ಆ ಬ್ರಹ್ಮೇಶ್ವರನ ಉತ್ಪತ್ತಿಕ್ರಮವನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳು. ಹಿಂದೆ ಬ್ರಹ್ಮನು ನಾಲ್ಕು ವಿಧವಾದ ಪ್ರಾಣಿಗಳನ್ನು ಸೃಷ್ಟಿಸುವಾಗ ಅದ್ಭುತರೂಪಳೂ, ತಾವರೆಯಂತೆ ಕಣ್ಣುಳ್ಳವಳೂ, ಶಂಖದಂತೆ ಕಂಠವುಳ್ಳವಳೂ, ಮನೋಹರವಾದ ಕೂದಲುಗಳ ಕೊನೆಯುಳ್ಳವಳೂ, ತೊಂಡೆ ಹಣ್ಣಿನಂತೆ ತುಟಿಯುಳ್ಳವಳೂ, ಕೃಶವಾದ ನಡುವುಳ್ಳವಳೂ, ಆಳವಾದ ಹೊಕ್ಕಳುಳ್ಳವಳೂ, ಸುಂದರವಾದ ನಿತಂಬವುಳ್ಳವಳೂ, ಪುಷ್ಟವಾದ ಕುಚಗಳುಳ್ಳವಳೂ, ಪೂರ್ಣಚಂದ್ರನಂತೆ ವದನವುಳ್ಳವಳೂ, ಗೂಢವಾದ ಕಾಲುಗಳ ಗೆಣ್ಣುಗಳುಳ್ಳವಳೂ, ಶುಭ್ರಮುಖವುಳ್ಳವಳೂ ಆದ ಓರ್ವಸ್ತ್ರೀಯು ಜನಿಸಿದಳು.

ನ ದೇವೀ ನ ಚ ಗಂಧರ್ವೀ ನಾಸುರೀ ನ ಚ ಪನ್ನಗೀ ।
ಯಾದೃಗ್ರೂಪಾ ವರಾರೋಹಾ ತಾದೃಶೀ ಸಾ ವ್ಯಜಾಯತ ॥ ೫ ॥
ತಾಂ ದೃಷ್ಟ್ವಾ ರೂಪಸಂಪನ್ನಾಂ ಬ್ರಹ್ಮಾ ಕಾಮವಶೋಽಭವತ್ ।
ಅಥ ತಾಂ ಪ್ರಾರ್ಥಯಾಮಾಸ ರತ್ಯರ್ಥಂ ವರವರ್ಣಿನಿ ॥ ೬ ॥
ಅಥ ಪ್ರಾರ್ಥಯತಸ್ತಸ್ಯ ನ್ಯಪತತ್ಪಂಚಮಂ ಶಿರಃ ।
ಖರರೂಪಂ ಮಹಾದೇವಿ ತೇನ ಪಾಪೇನ ತತ್ಕ್ಷಣಾತ್ ॥ ೭ ॥
ತತೋ ಜ್ಞಾತ್ವಾ ಮಹತ್ಪಾಪಂ ದುಹಿತುಃ ಕಾಮಸಂಭವಂ ।
ಘೃಣಯಾ ಪರಯಾ ಯುಕ್ತಃ ಪ್ರಭಾಸಂ ಕ್ಷೇತ್ರಮಾಗತಃ ॥
ನ ಕಾಯಸ್ಯ ಯತಃ ಶುದ್ಧಿರ್ವಿನಾ ತೀರ್ಥಾವಗಾಹನಂ ।
ಸ ಸ್ನಾತಃ ಸಲಿಲೇ ಪುಣ್ಯೇ ಸರಸ್ವತ್ಯಾ ವರಾನನೇ ॥ ೯ ॥
ಲಿಂಗಂ ಸಂಸ್ಥಾಪಯಾಮಾಸ ದೇವದೇವಸ್ಯ ಶೂಲಿನಃ ।
ತತೋ ವಿಕಲ್ಮಷೋ ಭೂತ್ವಾ ಜಗಾಮ ಸ್ವಗೃಹಂ ಪುನಃ ॥ ೧೦ ॥
ಸ್ನಾತ್ವಾ ಸಾರಸ್ವತೇ ತೋಯೇ ಯಸ್ತಲ್ಲಿಂಗಂ ಪ್ರಪಶ್ಯತಿ ।
ಸರ್ವಪಾಪವಿನಿರ್ಮುಕ್ತೋ ಬ್ರಹ್ಮಲೋಕೇ ಮಹೀಯತೇ ॥ ೧೧ ॥

---

೫. ಅವಳಂತಹ ರೂಪವುಳ್ಳ ಸುಂದರಿಯು ದೇವ, ಗಂಧರ್ವ, ಅಸುರ, ನಾಗಸ್ತ್ರೀಯರಲ್ಲಿ ಯಾರೂ ಇರಲಿಲ್ಲ.

೬. ಬ್ರಹ್ಮನು ಸುಂದರಿಯಾದ ಅವಳನ್ನು ಕಂಡು ಕಾಮಪರವಶನಾಗಿ ರತಿಕ್ರೀಡೆಗಾಗಿ ಅವಳನ್ನು ಪ್ರಾರ್ಥಿಸಿದನು.

೭. ಮಹಾದೇವಿ ! ಹೀಗೆ ಪ್ರಾರ್ಥಿಸುತ್ತಿರುವ ಆ ಬ್ರಹ್ಮನ ಐದನೆ ತಲೆಯು ಆ ಪಾಪವಶದಿಂದ ಕೂಡಲೆ ಕತ್ತೆಯ ರೂಪವನ್ನು ಹೊಂದಿ ಕೆಳಗೆ ಬಿದ್ದಿತು.

೮. ಬಳಿಕ ಅವನು ಮಗಳನ್ನು ಕಾಮಿಸಿದ್ದರಿಂದುಂಟಾದ ಪಾಪವನ್ನರಿತು ಅತ್ಯಂತ ಪಶ್ಚಾತ್ತಾಪಗೊಂಡು ಪ್ರಭಾಸಕ್ಷೇತ್ರಕ್ಕೆ ಬಂದನು.

೯. ತೀರ್ಥದಲ್ಲಿ ಸ್ನಾನಮಾಡುವುದರ ಹೊರತು ದೇಹವು ಶುದ್ಧವಾಗದಿರುವುದರಿಂದವನು ಸರಸ್ವತೀನದಿಯ ಪುಣ್ಯಜಲದಲ್ಲಿ ಮಿಂದನು.

೧೦. ಅನಂತರ ಮಹೇಶ್ವರನ ಲಿಂಗವನ್ನಲ್ಲಿ ಪ್ರತಿಷ್ಠೆಮಾಡಿ ಪಾಪರಹಿತನಾಗಿ ತನ್ನ ಮನೆಗೆ ತೆರಳಿದನು.

೧೧. ಸರಸ್ವತೀನದಿಯ ನೀರಿನಲ್ಲಿ ಮಿಂದು ಆ ಲಿಂಗವನ್ನು ದರ್ಶನಮಾಡುವವನು ಸಕಲ ಪಾಪಮುಕ್ತನಾಗಿ ಬ್ರಹ್ಮಲೋಕದಲ್ಲಿ ಪೂಜ್ಯನಾಗುವನು.

ಚೈತ್ರೇ ಶುಕ್ಲಚತುರ್ದಶ್ಯಾಂ ಯಸ್ತಂ ಪಶ್ಯತಿ ಮಾನವಃ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಚತ್ವಾರಿಂಶದುತ್ತರದ್ವಿಶತತಮೋಽಧ್ಯಾಯಃ ॥

---

೧೨. ಚೈತ್ರಶುಕ್ಲಚತುರ್ದಶೀ ದಿನ ಆ ಲಿಂಗವನ್ನು ದರ್ಶನಮಾಡಿದವನು ಮಹೇಶ್ವರನ ಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಬ್ರಹ್ಮೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಸಂಗಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೈವಂ ವೈ ಸಂಗಮೇಶ್ವರಂ ।
ಗೋಲಕ್ಷಮಿತಿ ವಿಖ್ಯಾತಂ ಸರ್ವಪಾತಕನಾಶನಂ ॥ ೧ ॥
ತಸ್ಯೈವ ಪಶ್ಚಿಮೇ ಭಾಗೇ ಸರ್ವಕಾಮಫಲಪ್ರದಂ ।
ಋಷಿರುದ್ದಾಲಕೋನಾಮ ಪುರಾ ಹ್ಯಾಸೀನ್ಮಹಾತಪಾಃ ॥ ೨ ॥
ಸ ಪುರಾ ಸಂಗಮಂ ಪ್ರಾಪ್ಯ ಸರ್ವಪಾಪಪ್ರಣಾಶನಂ ।
ಸರಸ್ವತ್ಯಾಶ್ಚ ಪಿಂಗಾಯಾಸ್ತಪಸ್ತೇಪೇ ಸುರೇಶ್ವರಿ ॥ ೩ ॥
ತತಸ್ತಪಸ್ಯತಸ್ತಸ್ಯ ತಪೋ ರೌದ್ರಂ ಮಹಾತ್ಮನಃ ।
ಪುರತೋ ಹ್ಯುತ್ಥಿತಂ ಲಿಂಗಂ ಭಕ್ತ್ಯಾ ಯುಕ್ತಸ್ಯ ಸುಂದರಿ ॥ ೪ ॥
ಏತಸ್ಮಿನ್ನೇವ ಕಾಲೇ ತು ವಾಗುವಾಚಾಶರೀರಿಣೀ ।
ಉದ್ದಾಲಕ ಮಹಾಬಾಹೋ ಶೃಣುಷ್ವೈತದಚೋ ಮಮ ॥ ೫ ॥

ಕನ್ನಡದ ಅನುವಾದ

ಸಂಗಮೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಬ್ರಹ್ಮೇಶ್ವರನ ಪಶ್ಚಿಮದಲ್ಲಿರುವ ಸಕಲೇಷ್ಟಾರ್ಥಗಳನ್ನೀಯುವ ಗೋಲಕ್ಷನೆಂದು ಪ್ರಸಿದ್ಧನಾದ ಸಂಗಮೇಶ್ವರನೆಡೆಗೆ ಹೋಗಬೇಕು. ಹಿಂದೆ ಉದ್ದಾಲಕನೆಂಬ ಮಹರ್ಷಿಯಿದ್ದನು. ಅವನು ಸರಸ್ವತಿ ಮತ್ತು ಪಿಂಗಾದೇವಿಯ ಸಂಗಮಸ್ಥಳವನ್ನು ಹೊಂದಿ ತಪಸ್ಸನ್ನು ಮಾಡಿದನು.

೪. ಸುಂದರಿ! ಅವನು ಹೀಗೆ ಭಕ್ತಿಯಿಂದ ಭಯಂಕರ ತಪಸ್ಸನ್ನಾಚರಿಸುತ್ತಿರಲು ಅವನ ಮುಂದೊಂದು ಲಿಂಗವು ಉದ್ಭವಿಸಿತು.

೫. ಈ ಸಮಯದಲ್ಲಿ ಹೀಗೆ ಅಶರೀರವಾಣಿಯುಂಟಾಯಿತು, “ ಉದ್ದಾಲಕ ! ನನ್ನೀಮಾತನ್ನು ಕೇಳು.

ಅದ್ಯಪ್ರಭೃತಿ ವಾಸೋಽತ್ರ ಮಮ ನಿತ್ಯಂ ಭವಿಷ್ಯತಿ ।
ಯಸ್ಮಾದತ್ರ ಸಮುತ್ಪನ್ನಂ ಸಂಗಮೇ ಲಿಂಗಮುತ್ತಮಂ ।
ಸಂಗಮೇಶ್ವರಮಿತ್ಯೇವ ನಾಮ ಚಾಸ್ಯ ಭವಿಷ್ಯತಿ ॥ ೧ ॥
ಯೇಽತ್ರ ಸ್ನಾನಂ ನರಾಃ ಕೃತ್ವಾ ಸಂಗಮೇ ಲೋಕವಿಶ್ರುತೇ ।
ಸಂಗಮೇಶ್ವರಮೀಕ್ಷಂತೇ ತೇ ಯಾಂತಿ ಪರಮಾಂ ಗತಿಂ ॥ ೨ ॥

ಈಶ್ವರ ಉವಾಚ :—

ತತಸ್ತಂ ಪೂಜಯಾಮಾಸ ದಿವಾರಾತ್ರಮತಂದ್ರಿತಃ ।
ತತೋ ದೇಹಾವಸಾನೇಽಸೌ ಗತೋ ಯತ್ರ ಮಹೇಶ್ವರಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಂಗಮೇಶ್ವರಮಾಹಾತ್ಮ್ಯವರ್ಣನಂ ನಾಮ
ಷಟ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ

---

೧. ಇದು ಮೊದಲ್ಗೊಂಡು ನಾನಿಲ್ಲಿ ವಾಸಿಸುವೆನು, ಈ ಸಂಗಮದಲ್ಲಿ ಲಿಂಗವುಂಟಾದ್ದರಿಂದ ಇದಕ್ಕೆ ಸಂಗಮೇಶ್ವರನೆಂದು ಹೆಸರಾಗುವುದು.

೨. ಪ್ರಪಂಚದಲ್ಲಿ ಪ್ರಸಿದ್ಧವಾದ ಈ ಸಂಗಮಸ್ಥಳದಲ್ಲಿ ಮಿಂದು ಸಂಗಮೇಶ್ವರನನ್ನು ದರ್ಶನಮಾಡಿದ ಮಾನವರು ಉತ್ತಮಗತಿಯನ್ನು ಪಡೆಯುವರು.

೩. ಈಶ್ವರನು ಹೇಳುತ್ತಾನೆ :—ಬಳಿಕ ಉದ್ದಾಲಕ ಮಹಾಮುನಿಯು ಅಹೋರಾತ್ರಿ ಆಲಸ್ಯವಿಲ್ಲದೆ ಆ ಲಿಂಗವನ್ನು ಪೂಜಿಸಿ ಮರಣಾನಂತರದಲ್ಲಿ ಮಹೇಶ್ವರನ ಸ್ಥಾನವನ್ನು ಸೇರಿದನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಸಂಗಮೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಗಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ತ್ರೈಲೋಕ್ಯವಿಶ್ರುತಂ ।
ಗಂಗೇಶ್ವರೇತಿ ವಿಖ್ಯಾತಂ ಸಂಗಮೇಶ್ವರಪಶ್ಚಿಮೇ ॥ ೧ ॥

ಯದಾ ಗಂಗಾ ಸಮಾಹೂತಾ ವಿಷ್ಣುನಾ ಪ್ರಭವಿಷ್ಣುನಾ ।
ಅಂತಕಾಲೇಽಭಿಷೇಕಾರ್ಥಂ ಸ್ವಕಾಯಸ್ಯ ವರಾನನೇ ॥ ೨ ॥

ತತೋ ದೃಷ್ಟ್ವಾ ತು ತತ್ಕ್ಷೇತ್ರಂ ಪುಣ್ಯಂ ಹ್ಯೃಷಿನಿಷೇವಿತಂ ।
ಸರ್ವತ್ರ ವ್ಯಾಪಿತಂ ಲಿಂಗೈರಾಶ್ರಮೈಶ್ಚ ತಪಸ್ವಿನಾಂ ॥ ೩ ॥

ತತೋ ಗಂಗಾ ಸರಿಚ್ಛ್ರೇಷ್ಠಾ ಪೂರ್ವಸಾಗರಗಾಮಿನೀ ।
ಸ್ಥಾಪಯಾಮಾಸ ತಲ್ಲಿಂಗಂ ಶಿವಭಕ್ತಿಪರಾಯಣಾ ॥ ೪ ॥

ಕನ್ನಡದ ಅನುವಾದ

ಗಂಗೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಸಂಗಮೇಶ್ವರನ ಪಶ್ಚಿಮದಲ್ಲಿ ತ್ರೈಲೋಕ್ಯ ಪ್ರಸಿದ್ಧವಾದ ಗಂಗೇಶ್ವರಲಿಂಗದೆಡೆಗೆ ಹೋಗಬೇಕು.

೨–೪. ಸಮರ್ಥನಾದ ಶ್ರೀ ವಿಷ್ಣುವು ತನ್ನ ಅವಸಾನಕಾಲದಲ್ಲಿ ಸ್ನಾನಕ್ಕಾಗಿ ಗಂಗೆಯನ್ನು ಕರೆಯಲು ನದಿಗಳಲ್ಲಿ ಶ್ರೇಷ್ಠಳೂ, ಪೂರ್ವಸಮುದ್ರಕ್ಕೆ ಹೋಗುವವಳೂ ಆದ ಆ ಗಂಗಾದೇವಿಯು ಮುನಿಗಳ ಆಶ್ರಮಗಳಿಂದಲೂ, ಋಷಿಗಳಿಂದಲೂ, ಶಿವಲಿಂಗಗಳಿಂದಲೂ ಎಲ್ಲೆಡೆಯಲ್ಲಿಯೂ ವ್ಯಾಪ್ತವಾದ ಆ ಪವಿತ್ರ ಕ್ಷೇತ್ರವನ್ನು ಕಂಡು ಶಿವಭಕ್ತಿಯಿಂದ ಅಲ್ಲಿ ಲಿಂಗವನ್ನು ಪ್ರತಿಷ್ಠೆ ಮಾಡಿದಳು.

ತಂ ದೃಷ್ಟ್ವಾ ತು ವರಾರೋಹೇ ಗಂಗಾಸ್ನಾನಫಲಂ ಲಭೇತ್ ।
ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೫ ।

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಂಗೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

---

೫. ಆ ಗಂಗೇಶ್ವರ ಲಿಂಗವನ್ನು ಕಂಡ ಮಾನವನು ಗಂಗಾಸ್ನಾನದ ಫಲವನ್ನೂ, ಸಾವಿರ ಅಶ್ವಮೇಧ ಯಾಗದ ಫಲವನ್ನೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಂಗೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರೈವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಪಂಚಾಶದುತ್ತರಶತತಮೋಽಧ್ಯಾಯಃ

ಶಂಕರಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶಂಕರಾದಿತ್ಯಮುತ್ತಮಂ ।
ಗಂಗೇಶ್ವರಸ್ಯ ಪೂರ್ವೇಣ ಶಂಕರೇಣ ಪ್ರತಿಷ್ಠಿತಂ ॥ ೧ ॥

ಷಷ್ಠ್ಯಾಂ ಚೈವ ತು ಶುಕ್ಲಾಯಾಮೇನಂ ಯಃ ಪೂಜಯಿಷ್ಯತಿ ।
ಗಮಿಷ್ಯತಿ ಪರಂ ಸ್ಥಾನಂ ಯತ್ರ ದೇವೋ ದಿವಾಕರಃ ॥ ೨ ॥

ರಕ್ತಚಂದನಮಿಶ್ರೈಶ್ಚ ರಕ್ತಪುಷ್ಪೈಃ ಸಮಾಹಿತಃ ।
ತಾಮ್ರಪಾತ್ರೇ ಸಮಾಧಾಯ ಯೋಽರ್ಘ್ಯಂ ದಾಸ್ಯತಿ ಮಾನವಃ ।
ಸ ಯಾಸ್ಯತಿ ಪರಾಂ ಸಿದ್ಧಿಂ ನ ಚ ಯಾತಿ ದರಿದ್ರತಾಂ ॥ ೩ ॥

ಕನ್ನಡದ ಅನುವಾದ

ಶಂಕರಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಗಂಗೇಶ್ವರನ ಪೂರ್ವದಲ್ಲಿ ಶಂಕರನು ಸ್ಥಾಪಿಸಿರುವ ಶಂಕರಾದಿತ್ಯನೆಡೆಗೆ ಹೋಗಬೇಕು.

೨. ಶುಕ್ಲಪಕ್ಷದ ಷಷ್ಠೀದಿನ ಇವನನ್ನು ಪೂಜಿಸಿದವನು ಸೂರ್ಯನ ಉತ್ತಮ ಸ್ಥಾನವನ್ನು ಪಡೆಯುವನು.

೩. ಈ ಶಂಕರಾದಿತ್ಯನನ್ನು ರಕ್ತಚಂದನ, ರಕ್ತಪುಷ್ಪಗಳಿಂದ ಅರ್ಚಿಸಿ ತಾಮ್ರಪಾತ್ರೆಯಲ್ಲಿ ಅರ್ಘ್ಯವನ್ನು ಕೊಡುವ ಮನುಷ್ಯನು ಉತ್ತಮಸಿದ್ಧಿಯನ್ನು ಪಡೆದು ಬಡತನವನ್ನು ಹೊಂದುವುದಿಲ್ಲ.

ತಸ್ಮಾತ್ಸರ್ವಪ್ರಯತ್ನೇನ ತಸ್ಮಿನ್ಕ್ಷೇತ್ರೇ ವರಾನನೇ ।
ಪೂಜಯೇಚ್ಛಂಕರಾದಿತ್ಯಂ ಸರ್ವಕಾಮಫಲಪ್ರದಂ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಂಕರಾದಿತ್ಯಮಾಹಾತ್ಮ್ಯವರ್ಣನಂನಾಮ
ಏಕಪಂಚಾಶದುತ್ತರದ್ವಿಶತತಮೋಽಧ್ಯಾಯಃ

---

೪. ಆದ್ದರಿಂದ ಪ್ರಿಯಳೆ! ಆ ಕ್ಷೇತ್ರದಲ್ಲಿ ಸಕಲೇಷ್ಟಾರ್ಥಗಳನ್ನೀಯುವ ಶಂಕರಾದಿತ್ಯನನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಂಕರಾದಿತ್ಯಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಶಂಕರನಾಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ತ್ರೈಲೋಕ್ಯವಿಶ್ರುತಂ ।
ತತ್ರ ಶಂಕರನಾಥೇತಿ ಪ್ರಸಿದ್ಧಂ ಪಾಪನಾಶನಂ ॥ ೧ ॥
ಸ್ಥಾಪಿತಂ ಭಾನುನಾ ದೇವಿ ಕೃತ್ವಾ ತತ್ರ ಮಹತ್ತಪಃ ।
ತಮರ್ಚಯಿತ್ವಾ ದೇವೇಶಂ ಸೋಪವಾಸೋ ಮಹೇಶ್ವರಂ ॥ ೨ ॥
ಬ್ರಾಹ್ಮಣಾನ್ಭೋಜಯೇತ್ತತ್ರ ಶ್ರಾದ್ಧಂ ಕುರ್ಯಾಜ್ಜಿತೇಂದ್ರಿಯಃ ।
ಶಕ್ತ್ಯಾ ಹಿರಣ್ಯಂ ವಾಸಾಂಸಿ ವಿಪ್ರೇ ದದ್ಯಾತ್ಸಮಾಹಿತಃ ।
ಸ ಯಾತಿ ಪರಮಂ ಸ್ಥಾನಂ ನಾತ್ರ ಕಾರ್ಯಾ ವಿಚಾರಣಾ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಂಕರನಾಥಮಾಹಾತ್ಮ್ಯವರ್ಣನಂ ನಾಮ
॥ ದ್ವಿಪಂಚಾಶದುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಶಂಕರನಾಥಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಭಾಸ್ಕರನು ಮಹಾ ತಪಸ್ಸನ್ನಾಚರಿಸಿ ಪ್ರತಿಷ್ಠೆಮಾಡಿರುವ ಶಂಕರನಾಥನೆಂದು ಮೂರು ಲೋಕದಲ್ಲಿ ಪ್ರಸಿದ್ಧವಾದ ಲಿಂಗದೆಡೆಗೆ ಹೋಗಬೇಕು. ಮಾನವನು ಜಿತೇಂದ್ರಿಯನಾಗಿ ಉಪವಾಸಮಾಡಿ ಆ ಲಿಂಗವನ್ನರ್ಚಿಸಿ ಶ್ರಾದ್ಧಗೈದು ಬ್ರಾಹ್ಮಣರಿಗೆ ಭೋಜನ ಮಾಡಿಸಿ ಶಕ್ತ್ಯನುಸಾರಸುವರ್ಣ, ವಸ್ತ್ರಗಳನ್ನು ದಾನಮಾಡಬೇಕು. ಹೀಗೆ ಮಾಡಿದ ನರನು ಉತ್ತಮಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಂಕರನಾಥಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಗುಫೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗುಫೇಶ್ವರಮನುತ್ತಮಂ ।
ಹಿರಣ್ಯಾ ಉತ್ತರೇ ಭಾಗೇ ಸರ್ವಪಾತಕನಾಶನಂ ।
ತಂ ದೃಷ್ಟ್ವಾ ಮಾನವೋ ದೇವಿ ಕೋಟಿಹತ್ಯಾಂ ವ್ಯಪೋಹತಿ ॥ ೧ ॥

ಇತಿ ಶ್ರೀ ಸ್ಕಾಂದೇಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗುಫೇಶ್ವರಮಾಹಾತ್ಮ್ಯವರ್ಣನಂ ನಾಮ
ತ್ರಿಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಗುಫೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಅನಂತರ ಹಿರಣ್ಯಾನದಿಯ ಉತ್ತರಭಾಗದಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಗುಫೇಶ್ವರನೆಡೆಗೆ ಹೋಗಬೇಕು. ಅವನನ್ನು ದರ್ಶನಮಾಡಿದ ಮಾನವನು ಕೋಟಿ ಹತ್ಯೆಗಳು ಪರಿಹಾರವಾಗುತ್ತವೆ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗುಫೇಶ್ವರೇಶ್ವರಮಾಹಾತ್ಮ್ಯ ವರ್ಣನವೆಂಬ
ಇನ್ನೂರೈವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಷ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಘಂಟೇಶ್ವರಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇತ್ಸರ್ವಪಾತಕನಾಶನಂ ।
ಘಂಟೇಶ್ವರಮಿತಿ ಖ್ಯಾತಂ ದೇವದಾನವವಂದಿತಂ ।
ಪೂಜಿತಂ ಹ್ಯೃಷಿಭಿಃ ಸಿದ್ಧೈರ್ವಾಂಛಿತಾರ್ಥಫಲಪ್ರದಂ ॥ ೧ ॥
ವಾರೇ ಸೋಮಸ್ಯ ಚಾಷ್ಟಮ್ಯಾಂ ಯಸ್ತಂ ಪೂಜಯತೇ ನರಃ ।
ಸ ಲಭೇದ್ವಾಂಛಿತಾನ್ಕಾಮಾನ್ಮುಕ್ತಃ ಸ್ಯಾತ್ಪಾತಕೇನ ಹಿ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಘಂಟೇಶ್ವರಮಾಹಾತ್ಮ್ಯವರ್ಣನಂನಾಮ
॥ ಚತುಷ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಘಂಟೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಬಳಿಕ ಅಲ್ಲಿಯೇ ಇರುವವನೂ, ಸಕಲಪಾಪಗಳನ್ನು ಪರಿಹರಿಸುವವನೂ, ದೇವದಾನವವಂದಿತನೂ, ಮಹರ್ಷಿಗಳಿಂದ ಪೂಜಿತನೂ, ಇಷ್ಟಾರ್ಥಗಳನ್ನೀಯುವವನೂ ಆದ ಘಂಟೇಶ್ವರನೆಡೆಗೆ ಹೋಗಬೇಕು.

೨. ಅಷ್ಟಮಿ ಸೋಮವಾರದಿನ ಅವನನ್ನು ಪೂಜಿಸಿದ ಮಾನವನು ಸಕಲೇಷ್ಟಾರ್ಥಗಳನ್ನು ಪಡೆದು ಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಘಂಟೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಋಷಿತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತಸ್ಯೈವ ಪಶ್ಚಿಮೇ ಭಾಗ ಋಷೀಣಾಂ ಪುಣ್ಯಕರ್ಮಣಾಂ ॥ ೧ ॥
ತಸ್ಮಿಂಸ್ತ್ರಿನೇತ್ರಾ ಮತ್ಸ್ಯಾಶ್ಚ ದೃಶ್ಯಂತೇಽದ್ಯಾಪಿ ಭಾಮಿನಿ ।
ಅಂಗಿರಾ ಗೌತಮೋಽಗಸ್ತ್ಯಃ ಸುಮತಿಃ ಸುಸಖಿಸ್ತಥಾ ॥ ೨ ॥
ವಿಶ್ವಾಮಿತ್ರಃ ಸ್ಥೂಲಶಿರಾಃ ಸಂವರ್ತಃ ಪ್ರತಿಮರ್ದನಃ ।
ರೈಭ್ಯೋ ಬೃಹಸ್ಪತಿಶ್ಚೈವ ಚ್ಯವನಃ ಕಶ್ಯಪೋ ಭೃಗುಃ ॥ ೩ ॥
ದುರ್ವಾಸಾ ಜಾಮದಗ್ನ್ಯಶ್ಚ ಮಾರ್ಕಂಡೇಯೋಽಥ ಗಾಲವಃ ।
ಉಶನಾಥ ಭರದ್ವಾಜೋ ಯವಕ್ರೀತಸ್ತ್ರಿತಸ್ತಥಾ ॥ ೪ ॥
ಸ್ಥೂಲಾಕ್ಷಃ ಸಕಲಾಕ್ಷಶ್ಚ ಕಣ್ವೋ ಮೇಧಾತಿಥಿಃ ಕುಶಃ ।
ನಾರದಃ ಪರ್ವತಶ್ಚೈವ ವಸಿಷ್ಠೋಽರುಂಧತೀ ತಥಾ ॥ ೫ ॥
ಕಾಣ್ವೋಽಥ ಗೌತಮೋ ಧೌಮ್ಯಃ ಶತಾನಂದೋಽಕೃತವ್ರಣಃ ।
ಜಮದಗ್ನಿಸ್ತಥಾ ರಾಮೋ ಬಕಶ್ಚೇತ್ಯೇವಮಾದಯಃ ।
ಕೃಷ್ಣದ್ವೈಪಾಯನಶ್ಚೈವ ಪುತ್ರಶಿಷ್ಯೈಃ ಸಮನ್ವಿತಃ ॥ ೬ ॥

ಕನ್ನಡದ ಅನುವಾದ

ಋಷಿತೀರ್ಥಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಆ ಘಂಟೇಶ್ವರನ ಪಶ್ಚಿಮ ಭಾಗದಲ್ಲಿ ತ್ರೈಲೋಕ್ಯ ಪ್ರಸಿದ್ಧವಾದ ಋಷಿತೀರ್ಥವಿರುವುದು.

೨-೭. ಪ್ರಿಯಳೆ! ಅಲ್ಲಿ ಈಗಲೂ ಮೂರು ಕಣ್ಣುಗಳುಳ್ಳ ಮೀನುಗಳು ಕಾಣಿಸುತ್ತಿವೆ. ಅಂಗಿರಾ, ಗೌತಮ, ಅಗಸ್ತ್ಯ, ಸುಮತಿ, ಸುಸಖಿ, ವಿಶ್ವಾಮಿತ್ರ, ಸ್ಥೂಲಶಿರಾ, ಸಂವರ್ತ, ಪ್ರತಿಮರ್ದನ, ರೈಭ್ಯ, ಬೃಹಸ್ಪತಿ, ಚ್ಯವನ, ಕಶ್ಯಪ, ಭೃಗು, ದುರ್ವಾಸ, ಜಾಮದಗ್ನ್ಯ, ಮಾರ್ಕಂಡೇಯ, ಗಾಲವ, ಉಶನಾ, ಭರದ್ವಾಜ, ಯವಕ್ರೀತ, ತ್ರಿತ, ಸ್ಥೂಲಾಕ್ಷ, ಸಕಲಾಕ್ಷ, ಕಣ್ವ, ಮೇಧಾತಿಥಿ, ಕುಶ, ನಾರದ, ಪರ್ವತ, ವಸಿಷ್ಠ, ಅರುಂಧತಿ, ಕಾಣ್ವ, ಗೌತಮ, ಧೌಮ್ಯ, ಶತಾನಂದ, ಅಕೃತವ್ರಣ,

ಏತತ್ಕ್ಷೇತ್ರಂ ಸಮಾಸಾದ್ಯ ಪ್ರಭಾಸಂ ಮುನಿಸತ್ತಮಾಃ ।
ತಪಸ್ತೇಪುರ್ಮಹಾತ್ಮಾನೋ ವಿವಿಧಂ ಪರಮಾದ್ಭುತಂ ॥ ೭ ॥
ಏವಂ ತೇ ನಿಯತಾತ್ಮಾನೋ ದಮಯುಕ್ತಾಸ್ತಪಸ್ವಿನಃ ।
ಸಮಾಧಿನಾ ಜಿಗೀಷಂತೇ ಬ್ರಹ್ಮಲೋಕಂ ಸನಾತನಂ ॥ ೮ ॥
ಅಥಾಭವದನಾವೃಷ್ಟಿಃ ಕದಾಚಿನ್ಮಹತೀ ಪ್ರಿಯೇ ।
ಕೃಚ್ಛ್ರಂ ಪ್ರಾಪ್ತೋ ಹ್ಯಭೂತ್ತತ್ರ ಸರ್ವಲೋಕಃ ಕ್ಷುಧಾರ್ದಿತಃ ॥ ೯ ॥
ತತೋ ನಿರನ್ನೇ ಲೋಕೇಽಸ್ಮಿನ್ನಾತ್ಮಾನಂ ತೇ ಪರೀಪ್ಸವಃ ।
ಮೃತಂ ಕುಮಾರಮಾದಾಯ ಕೃಚ್ಛ್ರಂ ಪ್ರಾಪ್ತಾಸ್ತದಾಪಚನ್ ॥ ೧೦ ॥
ಅಥೋಪರಿಚರಸ್ತತ್ರ ಕ್ಲಿಶ್ಯಮಾನಾನ್ಹಿ ತಾನೃಷೀನ್ ।
ದೃಷ್ಟ್ವಾ ರಾಜಾ ವೃಷಾದರ್ಭಿಃ ಪ್ರೋವಾಚೇದಂ ವಚಸ್ತದಾ ॥ ೧೧ ॥

ರಾಜೋವಾಚ :—

ಪ್ರತಿಗ್ರಹೋ ಬ್ರಾಹ್ಮಣಾನಾಂ ದೃಷ್ಟಾ ವೃತ್ತಿರನಿಂದಿತಾ ।
ತಸ್ಮಾತ್ಪ್ರತಿಗ್ರಹಂ ಮತ್ತೋ ಗೃಹ್ಣೀಧ್ವಂ ಮುನಿಪುಂಗವಾಃ ॥ ೧೨ ॥

ಜಮದಗ್ನಿ ರಾಮ, ಬಕ, ವ್ಯಾಸ ಇವರೇ ಮೊದಲಾದ ಮುನಿವರರು ಪುತ್ರಶಿಷ್ಯರೊಡನೆ ಈ ಕ್ಷೇತ್ರಕ್ಕೆ ಬಂದು ನಾನಾ ವಿಧವಾದ ಅದ್ಭುತ ತಪಸ್ಸನ್ನು ಮಾಡಿದರು.

೮. ಹೀಗೆ ಜಿತೇಂದ್ರಿಯರಾದ ಆ ಮುನಿಗಳು ಧ್ಯಾನದಿಂದ ಬ್ರಹ್ಮಲೋಕವನ್ನು ಸೇರಲು ಬಯಸುವರು.

೯. ಒಂದಾನೊಂದು ಸಮಯದಲ್ಲಿ ದೊಡ್ಡ ಅನಾವೃಷ್ಟಿಯುಂಟಾಗಲು ಸಕಲ ಜನರೂ ಹಸಿವಿನಿಂದ ಕಷ್ಟವನ್ನು ಹೊಂದಿದರು.

೧೦. ಬಳಿಕ ಲೋಕದಲ್ಲಿ ಅನ್ನವಿಲ್ಲದಿರಲು ಆ ಮುನಿಗಳು ಅತ್ಯಂತ ಕಷ್ಟವನ್ನು ಹೊಂದಿ ದೇಹವನ್ನು ರಕ್ಷಿಸಬೋಸುಗ ಮೃತಕುಮಾರನನ್ನು ತಂದು ಅಡಿಗೆ ಮಾಡಿದರು.

೧೧. ಅನಂತರ ಉಪರಿಚರನೆಂಬ ದೊರೆಯು ಹೀಗೆ ಕಷ್ಟಪಡುತ್ತಿರುವ ಆ ಋಷಿಗಳನ್ನು ಕಂಡು ಇಂತೆಂದನು.

೧೨. ರಾಜನು ಹೇಳುತ್ತಾನೆ :—ಮುನಿವರ್ಯರೆ! ಬ್ರಾಹ್ಮಣರು ಪ್ರತಿಗ್ರಹದಿಂದ ಜೀವಿಸುವುದು ಶ್ಲಾಘ್ಯವಾದುದು. ಆದುದರಿಂದ ನೀವು ನನ್ನಿಂದ ದಾನವನ್ನು ಸ್ವೀಕರಿಸಿರಿ.

ಮುದ್ಗಾನ್ಮಾಷಾಂಶ್ಚ ವ್ರೀಹೀಂಶ್ಚ ತಥಾ ರತ್ನಾನಿ ಕಾಂಚನಂ ।
ಯುಷ್ಮಾಕಂ ಸಂಪ್ರದಾಸ್ಯಾಮಿ ಯಚ್ಚಾನ್ಯದಪಿ ದುರ್ಲಭಂ ।
ನಿವರ್ತಧ್ವಮತಃ ಸರ್ವೇ ಹ್ಯೇತಸ್ಮಾತ್ಪಾತಕಾತ್ಪರಂ ॥ ೧೩ ॥
ಋಷಯ ಊಚುಃ :—
ತಜ್ಜಾನಂತಃ ಕಥಂ ರಾಜನ್ಗೃಹ್ಣೀಮಸ್ತೇ ಪ್ರತಿಗ್ರಹಂ ।
ದಶಸೂನಾಸಮಶ್ಚಕ್ರೀ ದಶಚಕ್ರಿಸಮೋ ಧ್ವಜೀ ।
ದಶಧ್ವಜಿಸಮಾ ವೇಶ್ಯಾ ದಶವೇಶ್ಯಾಸಮೋ ನೃಪಃ ॥ ೧೫ ॥
ಯೋ ರಾಜ್ಞಾಂ ಪ್ರತಿಗೃಹ್ಣಾತಿ ಬ್ರಾಹ್ಮಣೋ ಲೋಭಮೋಹಿತಃ ।
ತಾಮಿಸ್ರಾದಿಷು ಘೋರೇಷು ನರಕೇಷು ಸ ಪಚ್ಯತೇ ॥ ೧೬ ॥
ತದ್ಗಚ್ಛ ಕುಶಲಂ ತೇಽಸ್ತು ಸಹ ದಾನೇನ ಪಾರ್ಥಿವ ।
ಅನ್ಯೇಷಾಂ ದೀಯತಾಮೇತದಿತ್ಯುಕ್ತ್ವಾ ತೇ ವನಂ ಯಯುಃ ॥ ೧೭ ॥
ಅಥ ರಾಜ್ಞಃ ಸಮಾದೇಶಾತ್ತತ್ರ ಗತ್ವಾ ಚ ಮಂತ್ರಿಣಃ ।
ಉದುಂಬರಾಣಿ ವ್ಯಕಿರನ್ಹೇಮಗರ್ಭಾಣಿ ಭೂತಲೇ ॥ ೧೮ ॥
ಅಥ ತಾನಿ ವ್ಯಚಿನ್ವಂಶ್ಚ ಋಷಯೋ ವರವರ್ಣಿನಿ ।
ಗುರೂಣೀತಿ ವಿದಿತ್ವಾ ತು ನ ಗ್ರಾಹ್ಯಾಣ್ಯಂಗಿರಾಬ್ರವೀತ್ ॥ ೧೯ ॥

---

೧೩. ಮುನಿಗಳಿರಾ! ಹೆಸರು, ಉದ್ದು, ಬತ್ತ, ರತ್ನ, ಚಿನ್ನ ಇವುಗಳನ್ನೂ ಇತರ ದುರ್ಲಭವಸ್ತುಗಳನ್ನೂ ನಿಮಗೆ ಕೊಡುವೆನು. ನೀವು ಈ ಮಹಾಪಾತಕಕಾರ್ಯವನ್ನು ತ್ಯಜಿಸಿರಿ.

೧೪. ಋಷಿಗಳು ಹೇಳುತ್ತಾರೆ :—ಅರಸ! ಅಭಿಜ್ಞರಾದ ನಾವು ನಿನ್ನಿಂದ ಹೇಗೆ ದಾನವನ್ನು ತೆಗೆದುಕೊಳ್ಳುವುದು.

೧೫. ಕುಂಬಾರನು ಹತ್ತು ವಧ್ಯಸ್ಥಳಕ್ಕೂ, ನೀಚಬ್ರಾಹ್ಮಣನು ಹತ್ತುಮಂದಿ ಕುಂಬಾರರಿಗೂ, ಸೂಳೆಯು ಹತ್ತುಮಂದಿ ನೀಚಬ್ರಾಹ್ಮಣರಿಗೂ, ರಾಜನು ಹತ್ತು ಮಂದಿ ಸೂಳೆಯರಿಗೂ ಸಮಾನನು.

೧೬. ಬ್ರಾಹ್ಮಣನು ಅತ್ಯಾಶೆಯಿಂದ ರಾಜನ ದಾನವನ್ನು ಸ್ವೀಕರಿಸಿದರೆ ಅವನು ತಾಮಿಸ್ರ ಮೊದಲಾದ ಘೋರನರಕಗಳಲ್ಲಿ ದುಃಖಗೊಳ್ಳುವನು.

೧೭. ಅರಸ! ಆದ್ದರಿಂದ ನೀನು ದಾನದೊಡನೆ ತೆರಳು. ನಿನಗೆ ಕ್ಷೇಮವಾಗಲಿ. ಇದನ್ನು ಇತರರಿಗೆ ಕೊಡು. ಎಂದು ಆ ಮುನಿಗಳು ಕಾಡಿಗೆ ಹೋದರು.

೧೮. ಅನಂತರ ಮಂತ್ರಿಗಳು ದೊರೆಯ ಅಪ್ಪಣೆಯಂತೆ ಚಿನ್ನವು ತುಂಬಿರುವ ಅತ್ತಿಹಣ್ಣುಗಳನ್ನು ಭೂಮಿಯಲ್ಲಿ ಚಲ್ಲಿದರು.

೧೯. ಪ್ರಿಯಳೆ! ಆ ಋಷಿಗಳು ಆ ಹಣ್ಣುಗಳನ್ನು ಆರಿಸುತ್ತಿರಲು ಅಂಗಿರನು ಇವು ಭಾರವಾಗಿರುವುದರಿಂದ ತೆಗೆದುಕೊಳ್ಳಕೂಡದೆಂದನು.

ಅತ್ರಿರುವಾಚ :—

ನಾಸ್ಮಹೇನಾಸ್ಮಹೇ ಮೂಢ ವಯಮಜ್ಞಾನಬುದ್ಧಯಃ ।
ಹೈಮಾನೀಮಾನಿ ಜಾನೀಮಃ ಪ್ರತಿಬುದ್ಧಾಃ ಸ್ಮ ಜಾಡ್ಯತಃ ॥ ೨೦ ॥

ವಸಿಷ್ಠ ಉವಾಚ :—

ಧರ್ಮಾರ್ಥಂ ಸಂಚಯೋ ಯಸ್ಯ ದ್ರವ್ಯಾಣಾಂ ಸ ನ ಶಸ್ಯತೇ ।
ತಪಃಸಂಚಯನಂ ಮನ್ಯೇ ವಸಿಷ್ಠೋ ಧನಸಂಚಯಂ ॥ ೨೧ ॥
ತ್ಯಜಧ್ವಂ ಸಂಚಯಾನ್ಸರ್ವಾನ್ಜ್ಞಾತೀನಾಂ ಸಮುಪದ್ರವಾನ್ ।
ನ ಹಿ ಸಂಚಯವಾನ್ಕಶ್ಚಿದ್ದೃಶ್ಯತೇ ನಿರುಪದ್ರವಃ ॥ ೨೨ ॥
ಯಥಾಯಥಾ ನ ಗೃಹ್ಣಾತಿ ಬ್ರಾಹ್ಮಣೋಽಸತ್ಪ್ರತಿಗ್ರಹಂ ।
ತಥಾತಥಾನಿಶಂ ಚಾಸ್ಯ ಬ್ರಹ್ಮತೇಜಸ್ತು ವರ್ಧತೇ ॥ ೨೩ ॥
ಅಕಿಂಚನತ್ವಂ ರಾಜ್ಯಂ ಚ ತುಲಯಾ ಸಮತೋಲಯಂ ।
ಅಕಿಂಚನತ್ವಮಧಿಕಂ ರಾಜ್ಯಾದಪಿ ನ ಸಂಶಯಃ ॥ ೨೪ ॥

---

೨೦. ಅತ್ರಿಯು ಹೇಳುತ್ತಾನೆ :—ಮೂಢ ! ನಾವು ತಿಳಿಗೇಡಿಗಳಲ್ಲ, ಜಾಗರೂಕರಾದ ನಾವು ಇವುಗಳಲ್ಲಿ ಚಿನ್ನವಿರುವುದೆಂದರಿತಿರುವೆವು.

೨೧. ವಸಿಷ್ಠನು ಹೇಳುತ್ತಾನೆ :—ಧರ್ಮಕ್ಕಾಗಿಯೂ ಧನಸಂಗ್ರಹವು ಉತ್ತಮವಲ್ಲವೆಂದರಿತ ವಸಿಷ್ಠನಾದ ನಾನು ತಪಸ್ಸಂಗ್ರಹವನ್ನು ಧನಸಂಗ್ರಹವೆಂದರಿತಿರುವೆನು.

೨೨. ಉಪದ್ರವವನ್ನುಂಟುಮಾಡುವ ಸಕಲ ಜಾತಿಯವರ ದಾನವನ್ನು ಸ್ವೀಕರಿಸಬೇಡಿರಿ. ಧನಸಂಗ್ರಹವನ್ನು ಮಾಡುವವನು ಎಲ್ಲಿಯೂ ತೊಂದರೆಯಿಲ್ಲದವನಾಗಿ ಕಾಣಿಸಲಿಲ್ಲ.

೨೩. ಬ್ರಾಹ್ಮಣನು ದುರ್ಜನರಿಂದ ದಾನವನ್ನು ಸ್ವೀಕರಿಸದಿದ್ದರೆ ಅವನ ಬ್ರಹ್ಮತೇಜಸ್ಸು ಯಾವಾಗಲೂ ವೃದ್ಧಿಗೊಳ್ಳುವುದು.

೨೪. ನಾನು ಬಡತನವನ್ನೂ ರಾಜ್ಯವನ್ನೂ ತೂಗಿನೋಡಿರುವೆನು. ರಾಜ್ಯಕ್ಕಿಂತ ಬಡತನವು ಉತ್ಕೃಷ್ಟವಾದುದು.

೨೫. ಕಶ್ಯಪನು ಹೇಳುತ್ತಾನೆ :—ಬ್ರಾಹ್ಮಣನಿಗೆ ಅಧಿಕದ್ರವ್ಯವು ಮಹಾಹಾನಿಯನ್ನುಂಟುಮಾಡುವುದು. ಐಶ್ವರ್ಯಮತ್ತನಾದ ಬ್ರಾಹ್ಮಣನಿಗೆ ಶ್ರೇಯಸ್ಸಾಗುವುದಿಲ್ಲ.

ಕಶ್ಯಪ ಉವಾಚ :—
ಅನರ್ಥೋ ಬ್ರಾಹ್ಮಣಸ್ಯೈವ ಯದರ್ಥನಿಚಯೋ ಮಹಾನ್ ।
ಅರ್ಥೈರೈಶ್ವರ್ಯವಿಮೂಢೋಽಪಿ ಶ್ರೇಯಸೋ ದ್ವಿಜಃ ॥ ೨೫ ॥
ಅರ್ಥಸಂಪದ್ವಿಮೋಹಾಯ ಬಹುಶೋಕಾಯ ಚೈವ ಹಿ ।
ತಸ್ಮಾದರ್ಥಮನರ್ಥಾಖ್ಯಂ ಶ್ರೇಯೋಽರ್ಥೀ ದೂರತಸ್ತ್ಯಜೇತ್ ॥ ೨೬ ॥
ಯಸ್ಯ ಧರ್ಮಾರ್ಥಮಸ್ಯಾರ್ಥಾಸ್ತಸ್ಯಾಪಿ ನ ಹಿ ದೃಶ್ಯತೇ ।
ಪ್ರಕ್ಷಾಲನಾದ್ಧಿ ಪಂಕಸ್ಯ ದೂರಾಸ್ಪರ್ಶನಂ ವರಂ ॥ ೨೭ ॥
ಭರದ್ವಾಜ ಉವಾಚ :—
ಜೀರ್ಯಂತಿ ಜೀರ್ಯತಃ ಕೇಶಾ ದಂತಾ ಜೀರ್ಯಂತಿ ಜೀರ್ಯತಃ ।
ಚಕ್ಷುಃಶ್ರೋತ್ರೇ ಚ ಜೀರ್ಯೇತೇ ತೃಷ್ಣೈಕಾ ನ ತು ಜೀರ್ಯತೇ ॥ ೨೮ ॥
ಸೂಚೀ ಸೂತ್ರ ತಥಾ ವಸ್ತ್ರೇ ಸಮಾನಯತಿ ಸೂಚಿಕಾ ।
ತದ್ವತ್ಸಂಸಾರಸೂತ್ರಸ್ಯ ತೃಷ್ಣಾ ಸೂಚೀ ವಿಧೀಯತೇ ॥ ೨೯ ॥
ಯಥಾ ಶೃಂಗಂ ರುರೋಃ ಕಾಯೇ ವರ್ಧಮಾನೇ ಹಿ ವರ್ಧತೇ ।
ಅನಂತಪಾರಾ ದುರ್ವಾರಾ ತೃಷ್ಣಾ ದುಃಖಪ್ರದಾ ಸದಾ ।
ಅಧರ್ಮಬಹುಲಾ ಚೈವ ತಸ್ಮಾತ್ತಾಂ ಪರಿವರ್ಜಯೇತ್ ॥ ೩೦ ॥

---

೨೬. ದ್ರವ್ಯಸಂಗ್ರಹದಿಂದ ಚಿತ್ತಭ್ರಾಂತಿಯೂ, ದುಃಖವೂ ಉಂಟಾಗುವುದು. ಆದುದರಿಂದ ಶ್ರೇಯಸ್ಸನ್ನು ಬಯಸುವ ಬ್ರಾಹ್ಮಣನು ಅನರ್ಥವೆಂಬ ದ್ರವ್ಯವನ್ನು ದೂರದಿಂದಲೇ ತ್ಯಜಿಸಬೇಕು.

೨೭. ಧರ್ಮಾರ್ಥವಾದ ಅರ್ಥಸಂಗ್ರಹವೂ ಉಚಿತವಾಗಿ ತೋರುವುದಿಲ್ಲ. ಕೆಸರನ್ನು ಮುಟ್ಟಿ ತೊಳೆದುಕೊಳುವುದಕ್ಕಿಂತ ದೂರವಿದ್ದು ಆ ಕೆಸರನ್ನು ಮುಟ್ಟದಿರುವುದೇ ಉತ್ತಮವಲ್ಲವೆ.

೨೮. ಭಾರದ್ವಾಜನು ಹೇಳುತ್ತಾನೆ:—ಮಾನವನು ಮುದುಕನಾಗುತ್ತಿರಲು ಅವನ ಕೂದಲುಗಳೂ, ಹಲ್ಲುಗಳೂ, ಕಣ್ಣುಕಿವಿಗಳೂ ಜೀರ್ಣವಾಗುವುವು. (ಮುದಿಯಾಗುವುವು) ಆಶೆಯೊಂದು ಮಾತ್ರ ಜೀರ್ಣವಾಗುವುದಿಲ್ಲ.

೨೯. ಸೂಜಿಯು ನೂಲಿನಿಂದ (ದಾರದಿಂದ) ಎರಡು ವಸ್ತ್ರಗಳನ್ನು ಸೇರಿಸುವಂತೆ ಆಶೆಯು ಮಾನವನನ್ನು ಸಂಸಾರದೊಡನೆ ಸೇರಿಸುವುದು.

೩೦. ಜಿಂಕೆಯು ಬೆಳೆಯುತ್ತಿರಲು ಅದರ ಕೊಂಬು ಬೆಳೆಯುತ್ತಿರುವಂತೆ ಅವಧಿಯಿಲ್ಲದಿರುವುದೂ, ತಡೆಯಲಾಗದಿರುವುದೂ, ದುಃಖವನ್ನೀಯುವುದೂ, ಅಧರ್ಮಭೂಯಿಷ್ಠವಾದುದೂ ಆದ ಆಶೆಯು ಪ್ರತಿದಿನವೂ ವೃದ್ಧಿಗೊಳ್ಳುತ್ತಿರುವುದು. ಆದ್ದರಿಂದ ಆ ಆಶೆಯನ್ನು ಬಿಡಬೇಕು.

ಗೌತಮ ಉವಾಚ :—

ಸಂತುಷ್ಟಃ ಕೋ ನ ಶಕ್ನೋತಿ ಫಲೈಶ್ಚಾಪಿ ಹಿ ವರ್ತಿತುಂ ।
ಸರ್ವೋಽಪೀಂದ್ರಿಯಲೋಭೇನ ಸಂಕಟಾನ್ಯಭಿಗಾಹತೇ ॥ ೩೧ ॥
ಸರ್ವತ್ರ ಸಂಪದಸ್ತಸ್ಯ ಸಂತುಷ್ಟಂ ಯಸ್ಯ ಮಾನಸಂ ।
ಉಪಾನದ್ಗೂಢಪಾದಸ್ಯ ನನು ಚರ್ಮಾವೃತೇವ ಭೂಃ ॥ ೩೨ ॥
ಸಂತೋಷಾಮೃತತೃಪ್ತಾನಾಂ ಯತ್ಸುಖಂ ಶಾಂತಚೇತಸಾಂ ।
ಕುತಸ್ತದ್ಧನಲುಬ್ಧಾನಾಂ ಸುಖಂ ಚಾಽಶಾಂತಚೇತಸಾಂ ॥ ೩೩ ॥

ವಿಶ್ವಾಮಿತ್ರ ಉವಾಚ :—

ಕಾಮಂ ಕಾಮಯಮಾನಸ್ಯ ಯದಿ ಕಾಮಃ ಸ ಸಿದ್ಧ್ಯತಿ ।
ತಥೈನಮಪರಃ ಕಾಮೋ ಭೂಯೋ ವಿಧ್ಯತಿ ಬಾಣವತ್ ॥ ೩೪ ॥
ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥ ೩೫ ॥
ಕಾಮಾನಭಿಲಷನ್ಲೋಭಾನ್ನ ನರಃ ಸುಖಮೇಧತೇ ।
ಸಮಾಲಭ್ಯ ತರುಚ್ಛಾಯಾಂ ಭವನಂ ವಾಂಛತೇ ನರಃ ॥ ೩೬ ॥

---

೩೧. ಗೌತಮನು ಹೇಳುತ್ತಾನೆ :—ತೃಪ್ತಿಗೊಂಡ ಮಾನವನು ಹಣ್ಣುಗಳಿಂದಲೂ ಜೀವಿಸಲು ಶಕ್ತನು. ಎಲ್ಲರೂ ಇಂದ್ರಿಯಚಾಪಲ್ಯದಿಂದ ದುಃಖಕ್ಕೀಡಾಗುವರು.

೩೨. ಸಂತುಷ್ಟಮಾನಸನಿಗೆ ಎಲ್ಲೆಲ್ಲಿಯೂ ಸಂಪತ್ತುಗಳು ಕಾಣಿಸುವುವು. ಪಾದರಕ್ಷೆಯುಳ್ಳವನು ಭೂಮಿಯು ಚರ್ಮದಿಂದ ಮುಚ್ಚಿರುವುದೆಂದೇ ಭಾವಿಸುವನು.

೩೩. ಸಂತೋಷವೆಂಬ ಅಮೃತದಿಂದ ತೃಪ್ತಿಗೊಂಡ ಶಾಂತಚಿತ್ತರಿಗೆ ಉಂಟಾಗುವ ಸುಖವು ದ್ರವ್ಯಾಶೆಯುಳ್ಳ ಅಶಾಂತಚಿತ್ತರಿಗೆ ಹೇಗುಂಟಾಗುವುದು ?

೩೪. ವಿಶ್ವಾಮಿತ್ರನು ಹೇಳುತ್ತಾನೆ :—ನರನಿಗೆ ಒಂದು ಇಚ್ಛೆಯು ಫಲಿಸಲು ಮತ್ತೊಂದು ಬಯಕೆಯು ಮರಳಿ ಅವನನ್ನು ಬಾಣದಂತೆ ಪೀಡಿಸುವುದು.

೩೫. ಕಾಮವು ವಿಷಯೋಪಭೋಗದಿಂದ ಒಂದು ಸಲವೂ ಶಾಂತವಾಗುವುದಿಲ್ಲ. ಅದು ಹವಿಸ್ಸಿನಿಂದ ಬೆಂಕಿಯು ಜ್ವಲಿಸುವಂತೆ ತಿರುಗಿ ಹೆಚ್ಚುವುದು.

೩೬. ಅತ್ಯಾಶೆಯಿಂದ ವಿಷಯ ಸುಖವನ್ನನುಭವಿಸುವ ಮನುಷ್ಯನು ಸುಖವನ್ನು ಹೊಂದುವುದಿಲ್ಲ. ಮರದ ನೆರಳನ್ನು ಆಶ್ರಯಿಸಿದ ಮನುಷ್ಯನು ಮನೆಯನ್ನಿಚ್ಛಿಸುವನು.

ಚತುಃಸಾಗರಸಂಯುಕ್ತಾಂ ಯೋ ಭುಂಙ್ತೇ ಪೃಥಿವೀಮಿಮಾಂ ।
ಏಕಸ್ತು ವನವಾಸೀ ಚ ಸ ಕೃತಾರ್ಥೋ ನ ಪಾರ್ಥಿವಃ ॥ ೩೭ ॥

ಜಮದಗ್ನಿರುವಾಚ :—

ಪ್ರತಿಗ್ರಹಸಮರ್ಥೋ ಯಸ್ತಪೋ ವರ್ಧಯತೇ ಮಹಾನ್ ।
ನ ಕರೋತಿ ತಪಸ್ತಸ್ಯ ಜಾಯತೇ ಚ ಸಹಸ್ರಧಾ ॥ ೩೮ ॥
ಪ್ರತಿಗ್ರಹಸಮರ್ಥಾನಾಂ ನಿವೃತ್ತಾನಾಂ ಪ್ರತಿಗ್ರಹಾತ್ ।
ಯ ಏವ ದದತಾಂ ಲೋಕಾಸ್ತ ಏವಾಽಪ್ರತಿಗೃಹ್ಣತಾಂ ॥ ೩೯ ॥

ಅರುಂಧತ್ಯುವಾಚ :—

ಬಿಸತಂತುರ್ಯಥಾ ನಿತ್ಯಂ ಸಮಂತಾನ್ನಾಲಸಂಸ್ಥಿತಃ ।
ತೃಷ್ಣಾ ಚೈವಮನಾದ್ಯಂತಾ ತಥಾ ದೇಹಾಶ್ರಿತಾ ಸದಾ ॥ ೪೦ ॥
ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಂ ॥

ಚಂಡೋವಾಚ :—

ಉಗ್ರಾತ್ಪ್ರತಿಗ್ರಹಾದ್ಯಸ್ಮಾದ್ಬಿಭ್ಯತ್ಯೇತೇ ಮಹೇಶ್ವರಾಃ ।
ಬಲೀಯಾಂಸೋ ದುರ್ಬಲವತ್ತಥಾ ಚೈವ ಬಿಭೇಮ್ಯಹಂ ॥ ೪೨ ॥

---

೩೭. ವನವಾಸಿಯಾದ ಮುನಿಯನ್ನುಳಿದು ನಾಲ್ಕು ಸಮುದ್ರಗಳೊಳಗಿನ ಈ ಭೂಮಿಯನ್ನನುಭವಿಸುವ ರಾಜನೂ ಕೃತಾರ್ಥನಲ್ಲ.

೩೮. ಜಮದಗ್ನಿಯು ಹೇಳುತ್ತಾನೆ:—ಪ್ರತಿಗ್ರಹಮಾಡಲು ಸಮರ್ಥನಾದ ಬ್ರಾಹ್ಮಣನು ಹಾಗೆ ಪ್ರತಿಗ್ರಹಮಾಡದೆ ತಪಸ್ಸನ್ನು ಹೆಚ್ಚಿಸಿಕೊಂಡರೆ ಅವನ ತಪಸ್ಸು ಸಾವಿರ ವಿಧವಾಗಿ ಅಭಿವೃದ್ಧಿಗೊಳ್ಳುವುದು.

೩೯. ಪ್ರತಿಗ್ರಹಮಾಡಲು ಸಮರ್ಥರಾದರೂ ಅದನ್ನು ತ್ಯಜಿಸಿದವರಿಗೆ ದಾನ ಮಾಡುವ ಮಾನವನಿಗೆ ಲಭಿಸುವ ಉತ್ತಮ ಲೋಕಗಳು ಲಭಿಸುವುವು.

೪೦. ಅರುಂಧತಿಯು ಹೇಳುತ್ತಾಳೆ:—ತಾವರೆ ದಂಟಿನಲ್ಲಿರುವ ನೂಲು ಸುತ್ತಲೂ ನಾಳವನ್ನಾಶ್ರಯಿಸಿರುವಂತೆ ಆದ್ಯಂತಗಳಿಲ್ಲದ ಆಶೆಯು ದೇಹವನ್ನಾಶ್ರಯಿಸಿರುವುದು.

೪೧. ದುರ್ಬುದ್ಧಿಯುಳ್ಳವರಿಂದ ತ್ಯಜಿಸಲಶಕ್ಯವಾದುದೂ, ದೇಹವು ಜೀರ್ಣವಾದರೂ ಜೀರ್ಣವಾಗದಿರುವುದೂ, ಪ್ರಾಣವನ್ನು ನಾಶಗೊಳಿಸುವ ರೋಗದಂತಿರುವುದೂ ಆದ ತೃಷ್ಣೆಯನ್ನು ತ್ಯಜಿಸುವವನಿಗೆ ಸುಖವುಂಟಾಗುವುದು.

೪೨. ಚಂಡನು ಹೇಳುತ್ತಾಳೆ :—ಬಲಿಷ್ಠರಾದ ಈ ಮಹರ್ಷಿಗಳು ದುರ್ಬಲರಂತೆ ಕಠಿನವಾದ ಪ್ರತಿಗ್ರಹದಿಂದ ಹೆದರುತ್ತಾರೆ. ಹಾಗೆಯೇ ನಾನೂ ಆ ಪ್ರತಿಗ್ರಹದಿಂದ ಹೆದರುವೆನು.

ಪಶುಮುಖ ಉವಾಚ :—
ಯದಾಚರಂತಿ ವಿದ್ವಾಂಸಃ ಸದಾ ಧರ್ಮಪರಾಯಣಾಃ ।
ತದೇವ ವಿದುಷಾ ಕಾರ್ಯಮಾತ್ಮನೋ ಹಿತಮಿಚ್ಛಯಾ ॥ ೪೩ ॥
ಈಶ್ವರ ಉವಾಚ :—
ಇತ್ಯುಕ್ತ್ವಾ ಹೇಮಗರ್ಭಾಣಿ ತ್ಯಕ್ತ್ವಾ ತಾನಿ ಫಲಾನಿ ಚ ।
ಋಷಯೋ ಜಗ್ಮುರನ್ಯತ್ರ ಸರ್ವ ಏವ ದೃಢವ್ರತಾಃ ॥ ೪೪ ॥
ತತಸ್ತೇ ವಿಚರಂತೋ ವೈ ದದೃಶುಃ ಸುಮಹತ್ಸರಃ ।
ಪದ್ಮಿನೀಭಿಃ ಸಮಾಕೀರ್ಣಂ ಸರ್ವತೋ ವರವರ್ಣಿನಿ ॥ ೪೫ ॥
ತಸ್ಮಿನ್ದೇಶೇ ತದಾ ಪ್ರಾಪ್ತಃ ಪರಿವ್ರಾಜಃ ಶುನೋಮುಖಃ ।
ತೇನೈವ ಸಹಿತಾಸ್ತತ್ರ ಸ್ನಾತಾಃ ಸರ್ವೇ ಮಹರ್ಷಯಃ ॥ ೪೬ ॥
ತತ್ರಾವತಾರಂ ಕೃತ್ವಾ ತೈರ್ಗೃಹೀತಾನಿ ಬಿಸಾನಿ ತು ।
ನಿಕ್ಷಿಪ್ಯ ಸರಸಸ್ತೀರೇ ಚಕ್ರುಃ ಪುಣ್ಯಾಂ ಜಲಕ್ರಿಯಾಂ ॥ ೪೭ ॥
ಅಥೋತ್ತೀರ್ಯ ಜಲಾತ್ತಸ್ಮಾತ್ತೇ ಸಮೇತ್ಯ ಪರಸ್ಪರಂ ।
ಬಿಸಾನಿ ತಾನ್ಯಪಶ್ಯಂತ ಇದಂ ವಚನಮಬ್ರುವನ್ ॥ ೪೮ ॥

---

೪೩. ಪಶುಮುಖನು ಹೇಳುತ್ತಾನೆ:—ಧರ್ಮನಿರತರಾದ ವಿದ್ವಾಂಸರು ಆಚರಿಸುವುದನ್ನು ತನಗೆ ಹಿತವನ್ನು ಬಯಸುವ ಅಭಿಜ್ಞನು ಅನುಸರಿಸಬೇಕು.

೪೪. ಈಶ್ವರನು ಹೇಳುತ್ತಾನೆ:—ದೃಢನಿಯಮವುಳ್ಳ ಆಮುನಿಗಳು ಹೀಗೆ ಹೇಳಿ ಚಿನ್ನವಿರುವ ಅತ್ತಿ ಹಣ್ಣುಗಳನ್ನು ತ್ಯಜಿಸಿ ಬೇರೆ ಕಡೆಗೆ ಹೋದರು.

೪೫. ಪ್ರಿಯಳೆ! ಅವರು ಹಾಗೆಯೇ ಸಂಚರಿಸುತ್ತ ತಾವರೆಗಳಿಂದ ವ್ಯಾಪ್ತವಾದ ಮಹಾಸರೋವರವನ್ನು ನೋಡಿದರು.

೪೬. ಆಗ ಅಲ್ಲಿಗೆ ಶುನೋಮುಖನೆಂಬ ಸನ್ಯಾಸಿಯು ಬರಲು ಆ ಮುನಿಗಳೆಲ್ಲ ಅವನೊಡನೆ ಆ ಸರೋವರದಲ್ಲಿ ಮಿಂದರು.

೪೭. ಅವರು ಆ ಸರೋವರದಲ್ಲಿರುವ ತಾವರೆ ದಂಟುಗಳನ್ನು ಸಂಗ್ರಹಿಸಿ ಅವುಗಳನ್ನು ದಡದಲ್ಲಿಟ್ಟು ನೀರಿನಲ್ಲಿ ಸ್ನಾನ ಮೊದಲಾದುವುಗಳನ್ನು ಮಾಡಿದರು.

೪೮. ಬಳಿಕ ಅವರು ನೀರಿನಿಂದ ಮೇಲಕ್ಕೆದ್ದು ಒಟ್ಟಿಗೆ ಸೇರಿ ಆ ತಾವರೆದಂಟುಗಳನ್ನು ನೋಡದೆ ಇಂತೆಂದರು.

ಋಷಯ ಊಚುಃ :—

ಕೇನ ಕ್ಷುಧಾಭಿತಪ್ತಾನಾಮಸ್ಮಾಕಂ ಪಾಪಕರ್ಮಣಾ ।
ಬಿಸಾನಿ ತಾನಿ ಸರ್ವಾಣಿ ಹೃತಾನಿ ಚ ಮುನೀಶ್ವರಾಃ ॥ ೪೯ ॥
ತೇ ಶಂಕಮಾನಾಸ್ತ್ವನ್ಯೋನ್ಯಂ ಪರ್ಯಪೃಚ್ಛನ್ದ್ವಿಜೋತ್ತಮಾಃ ।
ಚಕ್ರುಸ್ತೇ ಶಪಥಾನ್ಸರ್ವೇ ಯಥಾನ್ಯಾಯಂ ಚ ಭಾಮಿನಿ ॥ ೫೦ ॥

ಕಶ್ಯಪ ಉವಾಚ :—

ಸರ್ವಭಕ್ಷಃ ಸ ಭವತು ನ್ಯಾಸಲೋಪಂ ಕರೋತು ಸಃ ।
ಕೂಟಸಾಕ್ಷಿತ್ವಮಭ್ಯೇತು ಬಿಸಸ್ತೈನ್ಯಂ ಕರೋತಿ ಯಃ ॥ ೫೧ ॥

ವಸಿಷ್ಠ ಉವಾಚ :—

ಅನೃತೌ ಮೈಥುನಂ ಯಾತು ಪರನಾರೀಂ ವಿಶೇಷತಃ ।
ಅತಿಥಿಃ ಸ್ಯಾತ್ತಥಾನ್ಯೋನ್ಯಂ ಬಿಸಸ್ತೈನ್ಯಂ ಕರೋತಿ ಯಃ ॥ ೫೨ ॥

ಭರದ್ವಾಜ ಉವಾಚ :—

ನೃಶಂಸೋ ವೈ ಸ ಭವತು ಸಮೃದ್ಧ್ಯಾ ಚಾಪ್ಯಹಂಕೃತಃ ।
ಮತ್ಸರೀ ಪಿಶುನಶ್ಚೈವ ಬಿಸಸ್ತೈನ್ಯಂ ಕರೋತಿ ಯಃ ॥ ೫೩ ॥

---

೪೯. ಋಷಿಗಳು ಹೇಳುತ್ತಾರೆ:—ಮುನಿವರ್ಯರೆ ! ಹಸಿವುಗೊಂಡಿರುವ ನಮ್ಮ ಈ ಬಿಸಗುಳು ಯಾವ ಪಾಪಿಯಿಂದ ಅಪಹರಿಸಲ್ಪಟ್ಟವು ?

೫೦. ಅವರು ಕಳವಳಗೊಂಡು ಪರಸ್ಪರವಾಗಿ ಪ್ರಶ್ನಿಸುತ್ತ ಕ್ರಮದಂತೆ ಶಪಥ ಮಾಡಿದರು.

೫೧. ಕಶ್ಯಪನು ಹೇಳುತ್ತಾನೆ:—ತಾವರೆದಂಟುಗಳನ್ನು ಅಪಹರಿಸಿದವನು ಸರ್ವಭಕ್ಷಕನೂ, ನ್ಯಾಸಾಪಹಾರಕನೂ, ಸುಳ್ಳುಸಾಕ್ಷಿಯನ್ನು ಹೇಳುವವನೂ ಆಗಲಿ.

೫೨. ವಸಿಷ್ಠನು ಹೇಳುತ್ತಾನೆ:—ತಾವರೆದಂಟುಗಳನ್ನು ಕದ್ದವನು ಋತುಭಿನ್ನ ಕಾಲದಲ್ಲಿ ಪರಸ್ತ್ರೀಮೈಥುನಮಾಡಿದವನೂ, ಪರಸ್ಪರಾತಿಥ್ಯವನ್ನು ಸ್ವೀಕರಿಸಿದವನೂ ಆಗಲಿ.

೫೩. ಭರದ್ವಾಜನು ಹೇಳುತ್ತಾನೆ:—ತಾವರೆದಂಟುಗಳನ್ನು ಕದ್ದವನು ಘಾತುಕನೂ, ಸಂಪತ್ತಿನಿಂದ ಅಹಂಕಾರಗೊಂಡವನೂ, ಅಸೂಯೆಯುಳ್ಳವನೂ, ಚಾಡಿಹೇಳುವವನೂ ಆಗಲಿ.

ವಿಶ್ವಾಮಿತ್ರ ಉವಾಚ :—
ನಿತ್ಯಂ ಕಾಮರತಃ ಸೋಽಸ್ತು ದಿವಾ ಸೇವತು ಮೈಥುನಂ ।
ನೀಚಕರ್ಮರತಶ್ಚೈವ ಬಿಸಸ್ತೈನ್ಯಂ ಕರೋತಿ ಯಃ ॥ ೫೪ ॥
ಜಮದಗ್ನಿರುವಾಚ :—
ಕನ್ಯಾಂ ಯಚ್ಛತು ವೃದ್ಧಾಯ ಸ ಭೂಯಾದ್ವೃಷಲೀಪತಿಃ ।
ಅಸ್ತು ವಾರ್ಧುಷಿಕೋ ನಿತ್ಯಂ ಬಿಸಸ್ತೈನ್ಯಂ ಕರೋತಿ ಯಃ ॥ ೫೫ ॥
ಗೌತಮ ಉವಾಚ :—
ಸ ಗೃಹ್ಣಾತ್ವವಿಕಾದಾನಂ ಕರೋತು ಹಯವಿಕ್ರಯಂ ।
ಪ್ರಕರೋತು ಗುರೋರ್ನಿಂದಾಂ ಬಿಸಸ್ತೈನ್ಯಂ ಕರೋತಿ ಯಃ ॥ ೫೬ ॥
ಅತ್ರಿರುವಾಚ :—
ಮಾತರಂ ಪಿತರಂ ನಿತ್ಯಂ ದುರ್ಮತಿಃ ಸೋಽವಮನ್ಯತಾಂ ।
ಶೂದ್ರಂ ಪೃಚ್ಛತು ಧರ್ಮಾರ್ಥಂ ಬಿಸಸ್ತೈನ್ಯಂ ಕರೋತಿ ಯಃ ॥ ೫೭ ॥
ಅರುಂಧತ್ಯುವಾಚ :—
ಕರೋತು ಪತ್ಯುಃ ಪೂರ್ವಂ ಸಾ ಭೋಜನಂ ಶಯನಂ ತಥಾ ।
ನಾರೀ ದುಷ್ಟಸಮಾಚಾರಾ ಬಿಸಸ್ತೈನ್ಯಂ ಕರೋತಿ ಯಾ ॥ ೫೮ ॥

---

೫೪. ವಿಶ್ವಾಮಿತ್ರನು ಹೇಳುತ್ತಾನೆ:—ತಾವರೆ ದಂಟುಗಳನ್ನು ಕದ್ದವನು ಯಾವಾಗಲೂ ಕಾಮಾಸಕ್ತನೂ, ಹಗಲು ಮೈಥುನದಲ್ಲಿ ನಿರತನೂ, ನೀಚಕರ್ಮಾಸಕ್ತನೂ ಆಗಲಿ.

೫೫. ಜಮದಗ್ನಿಯು ಹೇಳುತ್ತಾನೆ :—ತಾವರೆ ದಂಟುಗಳನ್ನು ಕದ್ದವನು ವೃದ್ಧನಿಗೆ ಕನ್ಯಾದಾನಮಾಡುವವನೂ, ಶೂದ್ರಸ್ತ್ರೀಯ ಪತಿಯೂ, ಬಡ್ಡಿಯಿಂದ ಜೀವಿಸುವವನೂ ಆಗಲಿ.

೫೬. ಗೌತಮನು ಹೇಳುತ್ತಾನೆ :—ತಾವರೆ ದಂಟುಗಳನ್ನು ಕದ್ದವನು ಕುರಿಯದಾನವನ್ನು ಪ್ರತಿಗ್ರಹಿಸಿದವನೂ, ಕುದುರೆಯನ್ನು ಮಾರಿದವನೂ, ಗುರುವನ್ನು ನಿಂದಿಸಿದವನೂ ಆಗಲಿ.

೫೭. ಅತ್ರಿಯು ಹೇಳುತ್ತಾನೆ :—ತಾವರೆ ದಂಟುಗಳನ್ನು ಕದ್ದ ದುರ್ಮತಿಯು ತಾಯಿತಂದೆಗಳನ್ನು ಅವಮಾನ ಮಾಡುವವನೂ, ಶೂದ್ರನನ್ನು ಧರ್ಮಪ್ರಶ್ನೆ ಮಾಡುವವನೂ ಆಗಲಿ.

೫೮. ಅರುಂಧತಿಯು ಹೇಳುತ್ತಾಳೆ :—ತಾವರೆ ದಂಟನ್ನು ಕದ್ದ ಹೆಂಗಸು ಪತಿಗಿಂತ ಮೊದಲು ಭೋಜನ ಶಯನ ಮಾಡುವವಳೂ ದುರ್ನಡತೆಯುಳ್ಳವಳೂ ಆಗಲಿ.

ಚಂಡೋವಾಚ :—

ಸ್ವಾಮಿನಃ ಪ್ರತಿಕೂಲಾಽಸ್ತು ಧರ್ಮದ್ವೇಷಂ ಕರೋತು ಚ ।
ಸಾಧುದ್ವೇಷಪರಾ ಚೈವ ಬಿಸಸ್ತೈನ್ಯಂ ಕರೋತಿ ಯಾ ॥ ೫೯ ॥

ಪಶುಮುಖ ಉವಾಚ :—

ಪರಸ್ಯ ಪ್ರೇಷ್ಯತಾಂ ಯಾತು ಸದಾ ಜನ್ಮನಿ ಜನ್ಮನಿ ।
ಸರ್ವಧರ್ಮಕ್ರಿಯಾಹೀನೋ ಬಿಸಸ್ತೈನ್ಯಂ ಕರೋತಿ ಯಃ ॥ ೬೦ ॥

ಶುನೋಮುಖ ಉವಾಚ :—

ವೇದಾನ್ಸ ಪಠತು ನ್ಯಾಯಾದ್ಗೃಹಸ್ಥಃ ಸ್ಯಾತ್ಪ್ರಿಯಾತಿಥಿಃ ।
ಸತ್ಯಂ ವದತು ಚಾಜಸ್ರಂ ಬಿಸಸ್ತೈನ್ಯಂ ಕರೋತಿ ಯಃ ॥ ೬೧ ॥

ಋಷಯ ಊಚುಃ :—

ಇಷ್ಟಮೇತದ್ದ್ವಿಜಾತೀನಾಂ ಯಸ್ತ್ವಯಾ ಶಪಥಃ ಕೃತಃ ।
ತ್ವಯಾ ಕೃತಂ ಬಿಸಸ್ತೈನ್ಯಂ ಸರ್ವೇಷಾಂ ನಃ ಶುನೋಮುಖ ॥ ೬೨ ॥

ಶುನೋಮುಖ ಉವಾಚ :—

ಮಯಾ ಹೃತಾನಿ ಸರ್ವೇಷಾಂ ಬಿಸಾನೀಮಾನಿ ವೈ ದ್ವಿಜಾಃ ।
ಧರ್ಮಂ ವೈ ಶ್ರೋತುಕಾಮೇನ ಜಾನೀಧ್ವಂ ಮಾಂ ಪುರಂದರಂ ॥ ೬೩ ॥

---

೫೯. ಚಂಡನು ಹೇಳುತ್ತಾನೆ :—ತಾವರೆದಂಟನ್ನು ಕದ್ದ ನಾರಿಯು ಸ್ವಾಮಿಗೆ ವಿರುದ್ಧಳೂ, ಧರ್ಮವನ್ನು ದ್ವೇಷಿಸುವವಳೂ, ಸಜ್ಜನರಲ್ಲಿ ದ್ವೇಷವುಳ್ಳವಳೂ ಆಗಲಿ.

೬೦. ಪಶುಮುಖನು ಹೇಳುತ್ತಾನೆ :—ತಾವರೆ ದಂಟನ್ನು ಕದ್ದವನು ಪ್ರತಿ ಜನ್ಮದಲ್ಲಿಯೂ ಪರನಿಗೆ ದಾಸನೂ, ಸಮಸ್ತಧರ್ಮ ಕ್ರಿಯಾಹೀನನೂ ಆಗಲಿ.

೬೧. ಶುನೋಮುಖನು ಹೇಳುತ್ತಾನೆ :—ತಾವರೆ ದಂಟನ್ನು ಕದ್ದವನು ವಿಧಿಯಿಂದ ವೇದಾಧ್ಯಯನ ಮಾಡಿದವನೂ, ಪ್ರಿಯಾತಿಥಿಗಳುಳ್ಳ ಗ್ರಹಸ್ಥನೂ, ಯಾವಾಗಲೂ ಸತ್ಯವಾದಿಯೂ ಆಗಲಿ.

೬೨. ಋಷಿಗಳು ಹೇಳುತ್ತಾರೆ :—ಶುನೋಮುಖ! ನೀನು ತಾವರೆ ದಂಟುಗಳನ್ನು ಅಪಹರಿಸಿರುವೆ. ಬ್ರಾಹ್ಮಣರಿಗೆ ಪ್ರಿಯವಾದ ಶಪಥವನ್ನು ಮಾಡಿರುವೆ.

೬೩. ಶುನೋಮುಖನು ಹೇಳುತ್ತಾನೆ :—ಬ್ರಾಹ್ಮಣರೆ! ಧರ್ಮವನ್ನು ಕೇಳಲಿಚ್ಛೆಯಿಂದ ನಾನು ತಾವರೇ ದಂಟುಗಳನ್ನು ಕದ್ದಿರುವೆನು. ನನ್ನನ್ನು ದೇವೇಂದ್ರನನ್ನಾಗಿ ತಿಳಿಯಿರಿ.

ಅಲೋಭಾದಕ್ಷಯಾ ಲೋಕಾ ಜಿತಾ ವೈ ಮುನಿಸತ್ತಮಾಃ ।
ಪ್ರಾರ್ಥಯಧ್ವಂ ವರಂ ಶುಭ್ರಂ ಸರ್ವಮೇವ ಹ್ಯಸಂಶಯಂ ॥ ೬೪ ॥
ಋಷಯ ಊಚುಃ :—
ಇಹಾಗತ್ಯ ನರೋ ಯಸ್ತು ತ್ರಿರಾತ್ರೋಪೋಷಿತಃ ಶುಚಿಃ ।
ಕೃತ್ವಾ ಸ್ನಾನಂ ಪಿತೄಂಸ್ತರ್ಪ್ಯ ಶ್ರಾದ್ಧಂ ಕುರ್ಯಾತ್ಸಮಾಹಿತಃ ॥ ೬೫ ॥
ಸರ್ವತೀರ್ಥೋದ್ಭವಂ ತಸ್ಯ ಪುಣ್ಯಂ ಭೂಯಾತ್ಪುರಂದರ ।
ನಾಧೋಗತಿಮವಾಪ್ನೋತಿ ವಿಬುಧೈಸ್ಸಹ ಮೋದತಾಂ ।
ತಥೇತ್ಯುಕ್ತ್ವಾ ತತಃ ಶಕ್ರಸ್ತತ್ರೈವಾಂತರ್ಹಿತೋಽಭವತ್ ॥ ೬೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಋಷಿತೀರ್ಥಮಾಹಾತ್ಮ್ಯವರ್ಣನಂನಾಮ
ಪಂಚಪಂಚಾಶದುತ್ತರದ್ವಿಶತತಮೋಽಧ್ಯಾಯಃ

---

೬೪. ದ್ವಿಜೋತ್ತಮರೆ! ನೀವು ಲೋಭಮಾಡದಿರುವುದರಿಂದ ಶಾಶ್ವತ ಲೋಕಗಳನ್ನು ಪಡೆಯುವಿರಿ. ನೀವೆಲ್ಲ ಉತ್ತಮವಾದ ವರವನ್ನು ಕೇಳಿಕೊಳ್ಳಿರಿ.

೬೫-೬೬. ಋಷಿಗಳು ಹೇಳುತ್ತಾರೆ :—ಇಲ್ಲಿಗೆ ಬಂದು ಮೂರು ರಾತ್ರಿ ಉಪವಾಸಮಾಡಿ ಮಿಂದು ಶ್ರಾದ್ಧಗೈದು ಪಿತೃಗಳಿಗೆ ತರ್ಪಣಮಾಡಿದ ಮಾನವನು ಸಕಲತೀರ್ಥಗಳಿಂದಾಗುವ ಪುಣ್ಯವನ್ನು ಪಡೆಯಲಿ. ಅಧೋಗತಿಯನ್ನು ಹೊಂದದೆ ದೇವತೆಗಳೊಡನೆ ಆನಂದಿಸಲಿ. ದೇವೇಂದ್ರನು ಹಾಗೆಯೇ ಆಗಲೆಂದು ಅಲ್ಲಿಯೇ ಅದೃಶ್ಯನಾದನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಋಷಿತೀರ್ಥಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ತ್ರಿಂಶದುತ್ತರದ್ವಿಶತತಮೋಽಧ್ಯಾಯಃ

ನಂದಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ನಂದಾದಿತ್ಯಂ ಸಮಾಹಿತಃ ।
ನಂದೇನ ಸ್ಥಾಪಿತಂ ಪೂರ್ವಂ ತತ್ರೈವಾಮಿತಬುದ್ಧಿನಾ ॥ ೧ ॥
ನಂದೋ ರಾಜಾ ಪುರಾ ಹ್ಯಾಸೀತ್ಸರ್ವಲೋಕಸುಖಪ್ರದಃ ।
ನ ದುರ್ಭಿಕ್ಷಂ ನ ಚ ವ್ಯಾಧಿರ್ನಾಕಾಲೇ ಮರಣಂ ನೃಣಾಂ ॥ ೨ ॥
ತಸ್ಮಿನ್ಶಾಸತಿ ಧರ್ಮಜ್ಞೇ ನ ಚಾನಾವೃಷ್ಟಿಕೃತಂ ಭಯಂ ।
ಕಸ್ಯಚಿತ್ತ್ವಥ ಕಾಲಸ್ಯ ಪೂರ್ವಕರ್ಮಾನುಸಾರತಃ ॥ ೩ ॥
ಕುಷ್ಠೇನ ಮಹತಾ ವ್ಯಾಪ್ತೋ ವೈರಾಗ್ಯಂ ಪರಮಂ ಗತಃ ।
ತೇನ ರೋಗಾಭಿಭೂತೇನ ದೇವದೇವೋ ದಿವಾಕರಃ ।
ಪ್ರತಿಷ್ಠಿತೋ ನದೀತೀರೇ ಸ ಚ ರೋಗಾದ್ವಿಮೋಚಿತಃ ॥ ೪ ॥

ದೇವ್ಯುವಾಚ :—

ಕಿಮಸೌ ರೋಗವಾನ್ರಾಜಾ ಸಾರ್ವಭೌಮೋ ಮಹೀಪತಿಃ ।
ತಸ್ಯ ಧರ್ಮರತಸ್ಯಾಪಿ ಕಸ್ಮಾದ್ರೋಗಸಮುದ್ಭವಃ ॥ ೫ ॥

ಕನ್ನಡದ ಅನುವಾದ

ನಂದಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಅತ್ಯಂತ ಬುದ್ಧಿಯುಳ್ಳ ನಂದನು ಪ್ರತಿಷ್ಠೆಮಾಡಿರುವ ನಂದಾದಿತ್ಯನೆಡೆಗೆ ಹೋಗಬೇಕು.

೨–೪. ಹಿಂದೆ ಸಕಲ ಲೋಕಗಳಿಗೆ ಸುಖವನ್ನುಂಟುಮಾಡುವ ನಂದನೆಂಬ ದೊರೆಯಿದ್ದನು. ಧರ್ಮಜ್ಞನಾದ ಅವನು ರಾಜ್ಯವನ್ನಾಳುತ್ತಿರಲು ಜನರಿಗೆ ದುರ್ಭಿಕ್ಷೆ, ಅಕಾಲದಲ್ಲಿ ರೋಗದಿಂದ ಮರಣ, ಅನಾವೃಷ್ಟಿ ಇವುಗಳಿಂದ ಭಯವಿರಲಿಲ್ಲ. ಆ ದೊರೆಯು ಒಂದಾನೊಂದು ಕಾಲದಲ್ಲಿ ಪೂರ್ವಜನ್ಮದ ಕರ್ಮವಶದಿಂದ ಕುಷ್ಠರೋಗ ಪೀಡಿತನಾಗಿ ಅತ್ಯಂತ ವೈರಾಗ್ಯವನ್ನು ಹೊಂದಿದನು. ರೋಗಪೀಡಿತನಾದ ಅವನು ನದೀದಡದಲ್ಲಿ ಸೂರ್ಯನನ್ನು ಪ್ರತಿಷ್ಠೆಮಾಡಿ ರೋಗಮುಕ್ತನಾದನು.

೫. ದೇವಿಯು ಹೇಳುತ್ತಾಳೆ :—ಸಾರ್ವಭೌಮನಾದ ಆ ನಂದರಾಜನು ಧರ್ಮನಿಷ್ಠನಾಗಿದ್ದರೂ ಹೇಗೆ ರೋಗಪೀಡಿತನಾದನು. ?

ಈಶ್ವರ ಉವಾಚ :—
ಏಷ ಧರ್ಮಸದಾಚಾರೋ ನಂದೋ ರಾಜಾ ಪ್ರತಾಪವಾನ್ ।
ವ್ಯಚರತ್ಸರ್ವಲೋಕಾನ್ಸ ವಿಮಾನವರಮಾಸ್ಥಿತಃ ॥ ೬ ॥
ವಿಮಾನಂ ತಸ್ಯ ತುಷ್ಟೇನ ದತ್ತಂ ವೈ ವಿಷ್ಣುನಾ ಸ್ವಯಂ ।
ಕಾಮಗಂ ವರವರ್ಣೇನ ಬರ್ಹಿಣೇನ ವಿನಾದಿತಂ ॥ ೭ ॥
ಸ ಕದಾಚಿನ್ನೃಪಶ್ರೇಷ್ಠೋ ವಿಚರಂಸ್ತತ್ರ ಸಂಸ್ಥಿತಃ ।
ಗತವಾನ್ಮಾನಸಂ ದಿವ್ಯಂ ಸರೋ ದೇವಗಣಾನ್ವಿತಂ ॥ ೮ ॥
ತತ್ರಾಪಶ್ಯದ್ಬೃಹತ್ಪದ್ಮಂ ಸರೋಮಧ್ಯಗತಂ ಸಿತಂ ।
ತತ್ರ ಚಾಂಗುಷ್ಠಮಾತ್ರಂ ತು ಸ್ಥಿತಂ ಪುರುಷತ್ತಮಂ ॥ ೯ ॥
ರಕ್ತವಾಸೋಭಿರಾಚ್ಛನ್ನಂ ದ್ವಿಭುಜಂ ತಿಗ್ಮತೇಜಸಂ ।
ತಂ ದೃಷ್ಟ್ವಾ ಸಾರಥಿಂ ಪ್ರಾಹ ಪದ್ಮಮೇತತ್ಸಮಾಹರ ॥ ೧೦ ॥
ಇದಂ ತು ಶಿರಸಾ ಬಿಭ್ರತ್ಸರ್ವಲೋಕಸ್ಯ ಸನ್ನಿಧೌ ।
ಶ್ಲಾಘನೀಯೋ ಭವಿಷ್ಯಾಮಿ ತಸ್ಮಾದಾಹರ ಮಾ ಚಿರಂ ॥ ೧೧ ॥

---

೬. ಧರ್ಮಜ್ಞನೂ, ಸದಾಚಾರನಿರತನೂ ಆದ ಆ ನಂದರಾಜನು ಉತ್ತಮವಾದ ವಿಮಾನದಲ್ಲಿ ಕುಳಿತು ಸಕಲಲೋಕಗಳಲ್ಲಿ ಸಂಚರಿಸಿದನು.

೭. ವಿಷ್ಣುವು ಅವನಿಗೆ ಸಂತುಷ್ಟನಾಗಿ ಮನೋಹರವಾದ ಬಣ್ಣದ ನವಿಲಿನಿಂದ ಶಬ್ದಮಾಡಲ್ಪಟ್ಟ ಸ್ವೇಚ್ಛಾಚಾರಿಯಾದ ಉತ್ತಮವಿಮಾನವನ್ನು ಕೊಟ್ಟಿದ್ದನು.

೮. ಆ ನಂದಭೂಪತಿಯು ಆ ವಿಮಾನದಲ್ಲಿ ಕುಳಿತು ಸಂಚರಿಸುತ್ತ ದೇವತೆಗಳಿಂದ ಸಹಿತವಾದ ಮಾನಸವೆಂಬ ದಿವ್ಯಸರೋವರಕ್ಕೆ ಹೋದನು.

೯. ಅವನು ಆ ಸರೋವರದ ನಡುವೆ ವಿಶಾಲವಾದ ಕಮಲದ ಮಧ್ಯದಲ್ಲಿ ನೆಲೆಸಿರುವ ಅಂಗುಷ್ಠ ಪರಿಮಾಣವುಳ್ಳ ಪುರುಷೋತ್ತಮನನ್ನು ಕಂಡನು.

೧೦. ಅವನು ಕೆಂಪುಬಟ್ಟೆಯನ್ನು ಹೊಂದಿರುವವನೂ, ಎರಡು ತೋಳುಗಳುಳ್ಳವನೂ, ಕಠಿನವಾದ ತೇಜಸ್ಸುಳ್ಳವನೂ ಆದ ಆ ಪುರುಷನನ್ನು ಕಂಡು ಸಾರಥಿಯನ್ನು ಕುರಿತು ಈ ಪದ್ಮವನ್ನು ತೆಗೆದುಕೊಂಡು ಬಾ ಎಂದನು.

೧೧. ನಾನು ಈ ಪದ್ಮವನ್ನು ಮುಡಿದುಕೊಂಡು ಸಕಲಜನರಿಂದ ಹೊಗಳಿಸಿಕೊಳ್ಳುವೆನು. ಆದ್ದರಿಂದ ಶೀಘ್ರವಾಗಿ ತೆಗೆದುಕೊಂಡು ಬಾ.

ಏವಮುಕ್ತಸ್ತತಸ್ತೇನ ಸಾರಥಿಃ ಪ್ರವಿವೇಶ ಹ ।
ಗೃಹೀತುಮುಪಚಕ್ರಾಮ ತತ್ಪದ್ಮಂ ವರವರ್ಣಿನಿ ।
ಸ್ಪೃಷ್ಟಮಾತ್ರೇ ತದಾ ಪದ್ಮೇ ಹುಂಕಾರಃ ಸಮುಪದ್ಯತ ॥ ೧೨ ॥
ರಾಜಾ ಚ ತತ್ಕ್ಷಣಾತ್ತೇನ ಶಬ್ದೇನ ಸಮಜಾಯತ ।
ಕುಷ್ಠೀ ವಿಗತವರ್ಣಶ್ಚ ಬಲವೀರ್ಯವಿವರ್ಜಿತಃ ॥ ೧೩ ॥
ತಥಾಗತಮಥಾತ್ಮಾನಂ ದೃಷ್ಟ್ವಾ ಸ ಪುರುಷರ್ಷಭಃ ।
ತಸ್ಥೌ ತತ್ರೈವ ಶೋಕಾರ್ತಃ ಕಿಮೇತದಿತಿ ಚಿಂತಯನ್ ॥ ೧೪ ॥
ತಸ್ಯ ಚಿಂತಯತೋ ಧೀಮಾನಾಜಗಾಮ ಮಹಾತಪಾಃ ।
ವಸಿಷ್ಠೋ ಬ್ರಹ್ಮಪುತ್ರಸ್ತು ಸ ತಂ ಪಪ್ರಚ್ಛ ಪಾರ್ಥಿವಃ ॥ ೧೫ ॥
ಏಷ ಮೇ ಭಗವಞ್ಜಾತೋ ದೇಹಸ್ಯಾಸ್ಯ ವಿಪರ್ಯಯಃ ।
ಕುಷ್ಠರೋಗಾಭಿಭೂತಾತ್ಮಾ ನಾಹಂ ಜೀವಿತುಮುತ್ಸಹೇ ॥ ೧೬ ॥
ಉಪಾಯಂ ಬ್ರೂಹಿ ಮೇ ಬ್ರಹ್ಮನ್ವ್ಯಾಧಿತಸ್ಯ ಚಿಕಿತ್ಸಿತಂ ।
ಉತಾಹೋ ವ್ರತಮನ್ಯದ್ವಾ ದಾನಂ ಯಜ್ಞಮಥಾಪಿ ವಾ ॥ ೧೭ ॥

ವಸಿಷ್ಠ ಉವಾಚ :—

ಏತದ್ಬ್ರಹ್ಮೋದ್ಭವಂ ನಾಮ ಪದ್ಮಂ ತ್ರೈಲೋಕ್ಯವಿಶ್ರುತಂ ।
ದೃಷ್ಟಮಾತ್ರೇಣ ಚಾನೇನ ದೃಷ್ಟಾಃ ಸ್ಯುಃ ಸರ್ವದೇವತಾಃ ॥ ೧೮ ॥

---

೧೨. ರಾಜನು ಹೀಗೆನ್ನಲು ಸಾರಥಿಯು ಆ ಪದ್ಮವನ್ನು ತೆಗೆದುಕೊಳ್ಳಲು ಸರೋವರವನ್ನು ಪ್ರವೇಶಿಸಿದನು. ಅವನು ಪದ್ಮವನ್ನು ಮುಟ್ಟಿದೊಡನೆಯೆ ಹುಂಕಾರ ವುಂಟಾಯಿತು.

೧೩. ದೊರೆಯು ಆ ಶಬ್ದದಿಂದ ಕೂಡಲೆ ಕುಷ್ಠರೋಗಿಯಾಗಿ ಕಳೆಗುಂದಿದ ವನೂ, ಬಲವಿಲ್ಲದವನೂ ಆದನು.

೧೪. ಆ ನರೇಂದ್ರನು ಹಾಗೆ ರೋಗಪೀಡಿತನಾದ ತನ್ನನ್ನು ಕಂಡು ಇದೇನೆಂದು ಚಿಂತಿಸುತ್ತ ಅಲ್ಲಿಯೇ ನಿಂತುಕೊಂಡನು.

೧೫. ಅವನು ಹೀಗೆ ಚಿಂತಿಸುತ್ತಿರಲು ಬ್ರಹ್ಮಪುತ್ರರಾದ ವಸಿಷ್ಠಮಹರ್ಷಿಗಳು ಅಲ್ಲಿಗೆ ಬರಲು ಆ ರಾಜನು ಅವರನ್ನು ಪ್ರಶ್ನಿಸಿದನು.

೧೬. ಪೂಜ್ಯರೆ! ನನ್ನ ದೇಹವು ಕುಷ್ಠರೋಗದಿಂದ ವ್ಯತ್ಯಾಸಗೊಂಡಿದೆ. ಹೀಗೆ ರೋಗಪೀಡಿತನಾದ ನಾನು ಬದುಕಲು ಬಯಸೆನು.

೧೭. ಮುನಿವರ್ಯರೆ! ಈ ವ್ಯಾಧಿಯ ಚಿಕಿತ್ಸೋಪಾಯವನ್ನು ಹೇಳಿರಿ. ನಾನು ವ್ರತ, ದಾನ, ಯಜ್ಞ ಇವುಗಳಲ್ಲಿ ಯಾವುದನ್ನು ಆಚರಿಸಲಿ?

೧೮. ವಸಿಷ್ಠನು ಹೇಳುತ್ತಾನೆ :—ಇದು ಬ್ರಹ್ಮನು ಹುಟ್ಟಿದ (ಬ್ರಹ್ಮೋದ್ಭವ ವೆಂಬ) ಮೂರು ಲೋಕಗಳಲ್ಲಿ ಪ್ರಸಿದ್ಧವಾದ ಕಮಲವು. ಇದನ್ನು ನೋಡಿದ ಮಾತ್ರದಿಂದ ಸಕಲ ದೇವತೆಗಳನ್ನೂ ನೋಡಿದಂತಾಗುವುದು.

ಏತದ್ಧಿ ದೃಶ್ಯತೇ ಧನ್ಯೈಃ ಪದ್ಮಂ ಕೈಃ ಕ್ವಾಪಿ ಪಾರ್ಥಿವ ।
ಏತಸ್ಮಿನ್ದೃಷ್ಟಮಾತ್ರೇ ತು ಯೋ ಜಲಂ ವಿಶತೇ ನರಃ ॥ ೧೯ ॥
ಸರ್ವಪಾಪವಿನಿರ್ಮುಕ್ತಃ ಪದಂ ನಿರ್ವಾಣಮಾಪ್ನುಯಾತ್ ।
ಏಷ ದೃಷ್ಟ್ವಾ ತು ತೇ ಸೂತೋ ಹರ್ತುಂ ತೋಯೇ ಪ್ರವಿಷ್ಟವಾನ್ ॥
ತವ ವಾಕ್ಯೇನ ರಾಜೇಂದ್ರ ಮೃತೋಽಸೌ ರೋಗವಾನ್ಭವೇತ್ ।
ಬ್ರಹ್ಮಪುತ್ರೋಽಸ್ಮ್ಯಹಂ ತೇನ ಪಶ್ಯಾಮಿ ಪರಮೇಶ್ವರಂ ॥ ೨೦ ॥
ಅಹನ್ಯಹನಿ ಚಾಗಚ್ಛಂಸ್ತ್ವಂ ಪುನರ್ದೃಷ್ಟವಾನಸಿ ।
ವಾಂಛಂತಿ ದೇವತಾ ನಿತ್ಯಮಮುಂ ಹೃದಿ ಮನೋರಥಂ ॥ ೨೧ ॥
ಮಾನಸೇ ಬ್ರಹ್ಮಪದ್ಮಂ ತು ದೃಷ್ಟ್ವಾ ಸ್ನಾತ್ವಾ ಕದಾ ವಯಂ ।
ಪ್ರಾಪ್ಸ್ಯಾಮಃ ಪರಮಂ ಬ್ರಹ್ಮ ಯದ್ಗತ್ವಾ ನ ಪುನರ್ಭವೇತ್ ॥ ೨೨ ॥
ಇದಂ ಚ ಕಾರಣಂ ಭೂಯೋ ದ್ವಿತೀಯಂ ಶೃಣು ಪಾರ್ಥಿವ ।
ಕುಷ್ಠಸ್ಯ ಯತ್ತ್ವಯಾ ಪ್ರಾಪ್ತಂ ಹರ್ತುಕಾಮೇನ ಪಂಕಜಂ ॥ ೨೪ ॥
ಪ್ರದ್ಯೋತನಸ್ತು ಗರ್ಭೇಽಸ್ಮಿನ್ಸ್ವಯಮೇವ ವ್ಯವಸ್ಥಿತಃ ।
ತನ್ಮೈಷಾ ಬುದ್ಧಿರಭವದ್ದೃಷ್ಟ್ವೇದಂ ವರಪಂಕಜಂ ॥ ೨೫ ॥

೧೯—೨೨. ಈ ಪದ್ಮವನ್ನು ಧನ್ಯರಾದ ಎಲ್ಲಿಯೋ ಕೆಲವರು ಮಾತ್ರ ಕಾಣುವರು. ಇದನ್ನು ನೋಡಿದ ಕೂಡಲೆ ಜಲವನ್ನು ಪ್ರವೇಶಮಾಡಿದ ಮಾನವನು ಸಕಲ ಪಾಪಮುಕ್ತನಾಗಿ ಮೋಕ್ಷವನ್ನೈದುವನು. ಈ ನಿನ್ನ ಸಾರಥಿಯು ನಿನ್ನ ಆಜ್ಞೆಯಂತೆ ಇದನ್ನು ನೋಡಿ ಅಪಹರಿಸುವುದಕ್ಕೆ ಜಲವಲ್ಲಿ ಪ್ರವೇಶಿಸಿದನು. ಆದರಿಂದವನು ಮೃತನಾಗಿ ರೋಗವುಳ್ಳವನಾಗುವನು. ಬ್ರಹ್ಮತನಯನಾದ ನಾನು ಪ್ರತಿದಿನವೂ ಇಲ್ಲಿಗೆ ಬಂದು ಪರಮೇಶ್ವರನನ್ನು ಕಾಣುವೆನು. ಇಂದು ನಿನ್ನನ್ನೂ ನೋಡಿದೆನು. ದೇವತೆಗಳು ಸಹ ನಾವು ಯಾವಾಗ ಮಾನಸ ಸರೋವರದಲ್ಲಿರುವ ಬ್ರಹ್ಮ ಪದ್ಮವನ್ನು ಕಂಡು ಅಲ್ಲಿ ಮಿಂದು ಮೋಕ್ಷವನ್ನೀಯುವ ಪರಬ್ರಹ್ಮನನ್ನು ಹೊಂದುವೆವೋ ಎಂದು ಅಪೇಕ್ಷಿಸುತ್ತಾರೆ.

೨೪. ಈ ಕಮಲವನ್ನು ಅಪಹರಿಸಲು ಬಯಸುವ ನಿನಗೆ ಕುಷ್ಠರೋಗವುಂಟಾಗಲು ಕಾರಣವನ್ನು ಹೇಳುವೆನು. ಕೇಳು.

೨೫—೨೬. ಈ ಕಮಲದ ನಡುವೆ ಸೂರ್ಯನು ನೆಲೆಸಿರುವನು. ನೀನು ಇದನ್ನು ನೋಡಿ ಒಡವೆಯಂತಿರುವ ಇದನ್ನು ಜನಗಳ ಮಧ್ಯದಲ್ಲಿ ತಲೆಯಲ್ಲಿ ಧರಿಸುವೆನೆಂದು

ಧಾರಯಾಮಿ ಶಿರಸ್ಯೇನಂ ಲೋಕಮಧ್ಯೇ ವಿಭೂಷಣಂ ।
ಇದಂ ಚಿಂತಯತಃ ಪಾಪಮೇವಂ ದೇವೇನ ದರ್ಶಿತಂ ॥ ೨೬ ॥
ತತಃ ಸರ್ವಪ್ರಯತ್ನೇನ ತಮಾರಾಧಯ ಭಾಸ್ಕರಂ ।
ಪ್ರಸಾದಾದ್ದೇವದೇವಸ್ಯ ಮೋಕ್ಷ್ಯಸೇ ನಾತ್ರ ಸಂಶಯಃ ॥ ೨೭ ॥
ಪ್ರಭಾಸಂ ಗಚ್ಛ ರಾಜೇಂದ್ರ ತೀರ್ಥಂ ತ್ರೈಲೋಕ್ಯವಿಶ್ರುತಂ ।
ತತ್ರ ಸಿದ್ಧಿರ್ಭವೇಚ್ಛೀಘ್ರಮಾರ್ತಾನಾಂ ಪ್ರಾಣಿನಾಂ ಭುವಿ ॥ ೨೮ ॥

ಈಶ್ವರ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ವಸಿಷ್ಠಸ್ಯ ಮಹಾತ್ಮನಃ ।
ಪ್ರಭಾಸಂ ಕ್ಷೇತ್ರಮಾಸಾದ್ಯ ಮಾಹೇಶ್ವರ್ಯಾಸ್ತಟೇ ಶುಭೇ ॥ ೨೯ ॥
ನಂದಾದಿತ್ಯಂ ಪ್ರತಿಷ್ಠಾಪ್ಯ ಗಂಧಧೂಪಾನುಲೇಪನೈಃ ।
ಪೂಜಯಾಮಾಸ ತಂ ದೇವಿ ಪುಷ್ಪೈರುಚ್ಚಾವಚೈಸ್ತಥಾ ॥ ೩೦ ॥
ತಸ್ಯ ತುಷ್ಟೋ ದಿವಾನಾಥೋ ವರದೋಽಹಮಥಾಬ್ರವೀತ್ ॥ ೩೧ ॥

ನಂದ ಉವಾಚ :—

ಕುಷ್ಠೇನ ಮಹತಾ ವ್ಯಾಪ್ತಂ ಪಶ್ಯ ಮಾಂ ಸುರಸತ್ತಮ ।
ಯಥಾಯಂ ನಾಶಮಾಯಾತಿ ತಥಾ ಕುರು ದಿವಾಕರ ॥ ೩೨ ॥

ಆಲೋಚಿಸಿದೆ. ಹೀಗೆ ಪಾಪಕಾರ್ಯವನ್ನು ಆಲೋಚಿಸುತ್ತಿರುವ ನಿನಗೆ ಭಾಸ್ಕರನು ಈ ರೋಗವನ್ನುಂಟುಮಾಡಿದನು.

೨೭. ಆದುದರಿಂದ ನೀನು ಅತಿಪ್ರಯತ್ನದಿಂದ ಸೂರ್ಯನನ್ನಾರಾಧಿಸು. ದೇವದೇವನಾದ ಆ ಸೂರ್ಯನ ಅನುಗ್ರಹದಿಂದ ಪಾಪಮುಕ್ತನಾಗುವೆ.

೨೮. ರಾಜೇಂದ್ರ! ನೀನು ಮೂರುಲೋಕಗಳಲ್ಲಿ ಪ್ರಸಿದ್ಧವಾದ ಪ್ರಭಾಸ ಕ್ಷೇತ್ರಕ್ಕೆ ತೆರಳು. ಅಲ್ಲಿ ದುಃಖಗೊಂಡ ಪ್ರಾಣಿಗಳಿಗೆ ಶೀಘ್ರವಾಗಿ ಸಿದ್ಧಿಯಾಗುವುದು.

೨೯–೩೦. ಈಶ್ವರನು ಹೇಳುತ್ತಾನೆ:—ಆ ದೊರೆಯು ಆ ವಸಿಷ್ಠಮುನಿಯ ಮಾತನ್ನು ಕೇಳಿ ಪ್ರಭಾಸಕ್ಷೇತ್ರವನ್ನು ಸೇರಿ ಮಾಹೇಶ್ವರಿಯ ದಡದಲ್ಲಿ ನಂದಾದಿತ್ಯನನ್ನು ಪ್ರತಿಷ್ಠೆಗೈದು ಅವನನ್ನು ಗಂಧ, ಧೂಪ, ನಾನಾ ವಿಧವಾದ ಪುಷ್ಪಗಳು ಇವುಗಳಿಂದ ಪೂಜಿಸಿದನು.

೩೧. ಸೂರ್ಯನು ಅದರಿಂದ ಸಂತುಷ್ಟನಾಗಿ ನಂದನನ್ನು ಕುರಿತು ವರವನ್ನೀಯುವೆನೆಂದನು.

೩೨. ನಂದನು ಹೇಳುತ್ತಾನೆ:—ಸುರೋತ್ತಮ! ನಾನು ಕುಷ್ಠ ವ್ಯಾಧಿಯಿಂದ ನರಳುತ್ತಿರುವುದನ್ನು ನೋಡು. ಇದು ಪರಿಹಾರವಾಗುವಂತೆ ಮಾಡು.

ಸಾನ್ನಿಧ್ಯಂ ಕುರು ದೇವೇಶ ಸ್ಥಾನೇಽಸ್ಮಿನ್ನಿತ್ಯದಾ ವಿಭೋ ॥ ೩೩ ॥

ಸೂರ್ಯ ಉವಾಚ :—

ನೀರೋಗಸ್ತ್ವಂ ಮಹಾರಾಜ ಸದ್ಯ ಏವ ಭವಿಷ್ಯಸಿ ।
ಅತ್ರ ಯೇ ಮಾಂ ಸಮಾಗತ್ಯ ದ್ರಕ್ಷ್ಯಂತಿ ಚ ನರಾ ಭುವಿ ॥ ೩೪ ॥
ಸಪ್ತಮ್ಯಾಂ ಸೂರ್ಯವಾರೇಣ ಯಾಸ್ಯಂತಿ ಪರಮಾಂ ಗತಿಂ ।
ಅತ್ರ ಮೇ ಸೂರ್ಯವಾರೇಣ ಸಾನ್ನಿಧ್ಯಂ ಸಪ್ತಮೀದಿನೇ ।
ಭವಿಷ್ಯತಿ ನ ಸಂದೇಹೋ ಗಮಿಷ್ಯೇ ತ್ವಂ ಸುಖೀ ಭವ ॥ ೩೫ ॥
ಏವಮುಕ್ತ್ವಾ ಸಹಸ್ರಾಂಶುಸ್ತತ್ರೈವಾಂತರಧೀಯತ ॥ ೩೬ ॥
ನಿರೋಗತ್ವಮವಾಪ್ಯಾಸೌ ಕೃತ್ವಾ ರಾಜ್ಯಮನುತ್ತಮಂ
ಜಗಾಮ ಪರಮಂ ಸ್ಥಾನಂ ಯತ್ರ ದೇವೋ ದಿವಾಕರಃ ।
ತಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಕೃತ್ವಾ ಶ್ರಾದ್ಧಂ ಪ್ರಯತ್ನತಃ ॥ ೩೭ ॥
ನಂದಾದಿತ್ಯಂ ಪುನರ್ದೃಷ್ಟ್ವಾ ನ ಪುನರ್ಮರ್ತ್ಯತಾಂ ವ್ರಜೇತ್ ।
ಪ್ರದದ್ಯಾತ್ಕಪಿಲಾಂ ತತ್ರ ಬ್ರಾಹ್ಮಣೇ ವೇದಪಾರಗೇ ॥ ೩೮ ॥
ಅಹೋರಾತ್ರೋಷಿತೋ ಭೂತ್ವಾ ಘೃತಧೇನುಮಥಾಪಿ ವಾ ।
ನ ತಸ್ಯ ಗುಣಿತುಂ ಶಕ್ಯಾ ಸಂಖ್ಯಾ ಪುಣ್ಯಸ್ಯ ಕೇನಚಿತ್ ॥ ೩೯ ॥

---

೩೩. ಸ್ವಾಮಿ! ನೀನು ಯಾವಾಗಲೂ ಇಲ್ಲಿ ಸನ್ನಿಹಿತನಾಗಿರು.

೩೪–೩೫. ಸೂರ್ಯನು ಹೇಳುತ್ತಾನೆ :—ಮಹಾರಾಜ! ಈಗಲೇ ನಿನ್ನ ರೋಗವು ಪರಿಹಾರವಾಗುವುದು. ಸಪ್ತಮೀ ಭಾನುವಾರ ದಿನ ಇಲ್ಲಿಗೆ ಬಂದು ನನ್ನನ್ನು ನೋಡುವ ಮಾನವರು ಉತ್ತಮಗತಿಯನ್ನು ಪಡೆಯುವರು. ನಾನಿಲ್ಲಿ ಸಪ್ತಮೀ ಭಾನುವಾರ ದಿನ ನಿಶ್ಚಯವಾಗಿಯೂ ಸನ್ನಿಹಿತನಾಗಿರುವೆನು. ಈಗ ಹೋಗುವೆನು. ನೀನು ಸುಖವಾಗಿರು.

೩೬. ಸೂರ್ಯನು ಹೀಗೆಂದು ಅಲ್ಲಿಯೇ ಅದೃಶ್ಯನಾದನು.

೩೭–೩೯. ಈ ನಂದರಾಜನು ನೀರೋಗನಾಗಿ ರಾಜ್ಯವನ್ನು ಉತ್ತಮಗೊಳಿಸಿ ಸೂರ್ಯನ ಉತ್ತಮಸ್ಥಾನಕ್ಕೆ ತೆರಳಿದನು. ಮನುಷ್ಯನು ಆ ತೀರ್ಥದಲ್ಲಿ ಮಿಂದು ಶ್ರಾದ್ಧಮಾಡಿ ನಂದಾದಿತ್ಯನನ್ನು ದರ್ಶನಮಾಡಿದರೆ ಮರಳಿ ಮನುಷ್ಯನಾಗಿ ಜನಿಸುವುದಿಲ್ಲ. ಅಲ್ಲಿ ವೇದಪಾರಂಗತನಾದ ಬ್ರಾಹ್ಮಣನಿಗೆ ಕಪಿಲಗೋವನ್ನು ದಾನಮಾಡಬೇಕು. ಅಥವಾ ಅಹೋರಾತ್ರಿ ಉಪವಾಸಮಾಡಿ ಘೃತಧೇನುವನ್ನು ದಾನಮಾಡಿದರೆ ಅವನ ಪುಣ್ಯವನ್ನು ಎಣಿಸಲು ಸಾಧ್ಯವಿಲ್ಲ.

ಇತ್ಯೇವಂ ದೇವದೇವಸ್ಯ ಮಾಹಾತ್ಮ್ಯಂ ದೀಪ್ತದೀಧಿತೇಃ ।
ಕಥಿತಂ ತವ ಸುಶ್ರೋಣಿ ಸರ್ವಪಾಪಪ್ರಣಾಶನಂ ॥ ೪೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಂದಾದಿತ್ಯಮಾಹಾತ್ಮ್ಯವರ್ಣನಂ ನಾಮ
॥ ಷಟ್ಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

---

೪೦. ಸುಂದರಿ ! ಹೀಗೆ ಸಕಲ ಪಾಪಗಳನ್ನು ನೀಗಿಸುವ ದೇವತೆಗಳಿಗೆ ಒಡೆಯನಾದ ಸೂರ್ಯನ ಮಾಹಾತ್ಮ್ಯವನ್ನು ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಂದಾದಿತ್ಯಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಪಂಚಾಶದುತ್ತರದ್ವಿಶತತಮೋಽಧ್ಯಾಯಃ

ತ್ರಿತಕೂಪಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತ್ರಿತಕೂಪಮಿತಿ ಸ್ಮೃತಂ ।
ನಂದಾದಿತ್ಯಸ್ಯ ಪೂರ್ವೇಣ ಯೋಜನತ್ರಿತಯೇನ ತು ॥ ೧ ॥
ಪುರಾ ಬಭೂವ ರಾಜೇಂದ್ರಃ ಸೌರಾಷ್ಟ್ರವಿಷಯೇ ಸುಧೀಃ ।
ಆತ್ರೇಯ ಇತಿ ವಿಖ್ಯಾತೋ ವೇದವೇದಾಂಗಪಾರಗಃ ॥ ೨ ॥
ತಸ್ಯ ಪುತ್ರತ್ರಯಂ ಜಜ್ಞೇ ಋತುಕಾಲಾಭಿಗಾಮಿನಃ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವೇತಿ ಭಾಮಿನಿ ॥ ೩ ॥
ತ್ರಿತಸ್ತೇಷಾಂ ಕನಿಷ್ಠೋಽಭೂದ್ವೇದವೇದಾಂಗಪಾರಗಃ ।
ಸರ್ವೈರೇವ ಗುಣೈರ್ಯುಕ್ತೋ ಮೂರ್ಖೌ ಜ್ಯೇಷ್ಠೌ ಬಭೂವತುಃ ॥ ೪ ॥
ಕಸ್ಯಚಿತ್ತ್ವಥ ಕಾಲಸ್ಯ ಆತ್ರೇಯೋ ದ್ವಿಜಸತ್ತಮಃ ।
ತಪಃ ಕೃತ್ವಾ ತು ವಿಪುಲಂ ಕಾಲಧರ್ಮಮುಪೇಯಿವಾನ್ ॥ ೫ ॥

ಕನ್ನಡದ ಅನುವಾದ

ತ್ರಿತಕೂಪಮಾಹಾತ್ಮ್ಯವರ್ಣನ

೧ ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ನಂದಾದಿತ್ಯನ ಪೂರ್ವದಲ್ಲಿ ಮೂರು ಯೋಜನ ದೂರದಲ್ಲಿರುವ ತ್ರಿತಕೂಪದೆಡೆಗೆ ಹೋಗಬೇಕು.

೨. ಹಿಂದೆ ಸೌರಾಷ್ಟ್ರದೇಶದಲ್ಲಿ ವೇದವೇದಾಂಗ ಪಾರಂಗತನಾದ ಆತ್ರೇಯ ನೆಂಬ ದೊರೆಯಿದ್ದನು.

೩. ಋತು ಕಾಲದಲ್ಲಿ ಪತ್ನಿಯನ್ನು ಸೇರುವ ಅವನಿಗೆ ಏಕತ, ದ್ವಿತ, ತ್ರಿತ ಎಂಬ ಮೂರು ಮಂದಿ ಮಕ್ಕಳು ಜನಿಸಿದರು.

೪. ಅವರಲ್ಲಿ ಕನಿಷ್ಠನಾದ ತ್ರಿತನು ವೇದವೇದಾಂಗ ಪಾರಂಗತನೂ, ಸಕಲ ಗುಣಸಹಿತನೂ ಆದನು. ಜ್ಯೇಷ್ಠರಾದ ಏಕತ, ದ್ವಿತರು ಮೂರ್ಖರಾದರು.

೫. ಕೆಲವು ಕಾಲದ ಮೇಲೆ ಆತ್ರೇಯನೆಂಬ ದ್ವಿಜವರ್ಯನು ಅತಿಶಯ ತಪಸ್ಸನ್ನು ಮಾಡಿ ಮೃತನಾದನು.

ತತಸ್ತೇಷಾಂ ತ್ರಿತೋ ರಾಜಾ ಬಭೂವ ಗುಣವತ್ತರಃ ।
ಧುರಮಾಕರ್ಷಯಾಮಾಸ ಪುತ್ರೋಽಯಂ ತಸ್ಯ ಯಃ ಪುರಾ ॥ ೬ ॥
ತಸ್ಯ ಬುದ್ಧಿಃ ಸಮುತ್ಪನ್ನಾ ಕಥಂ ಯಜ್ಞಂ ಕರೋಮ್ಯಹಂ ।
ಸನ್ನಿಮಂತ್ರ್ಯ ದ್ವಿಜಶ್ರೇಷ್ಠಾನ್ಯಜ್ಞಕರ್ಮಸ್ವಧಿಷ್ಠಿತಾನ್ ॥ ೭ ॥
ಇಂದ್ರಾದೀಂಶ್ಚ ಸುರಾನ್ಸರ್ವಾನಾವಾಹ್ಯ ವಿಧಿಪೂರ್ವಕಂ ।
ದಕ್ಷಿಣಾರ್ಥಂ ದ್ವಿಜೇಂದ್ರಾಣಾಂ ಪ್ರಭಾಸಂ ಸ ಜಗಾಮ ಹ ।
ಗೃಹೀತ್ವಾ ಭ್ರಾತರೌ ಜ್ಯೇಷ್ಠೌ ಗವಾರ್ಥಂ ಪ್ರಸ್ಥಿತೋ ದ್ವಿಜಃ ॥ ೮ ॥
ಯಸ್ಯ ಯಸ್ಯ ಗೃಹೇ ಯಾತಿ ಸ ತ್ರಿತೋ ವೇದಪಾರಗಃ ।
ತತ್ರ ತತ್ರ ವರಾಂ ಪೂಜಾಂ ಲೇಭೇ ಗಾಶ್ಚೈವ ಪುಷ್ಕಲಾಃ ॥ ೯ ॥
ಏವಂ ಸ ಗೋಧನಂ ಪ್ರಾಪ್ಯ ಭ್ರಾತೃಭ್ಯಾಂ ಸಹಿತಸ್ತದಾ ।
ಗೃಹಾಯ ಪ್ರಸ್ಥಿತೋ ದೇವಿ ನಿರ್ವೃತಿಂ ಪರಮಾಂ ಗತಃ ॥ ೧೦ ॥
ತ್ರಿತಸ್ತಾಭ್ಯಾಂ ಪುರೋ ಯಾತಿ ಪೃಷ್ಠತೋ ಭ್ರಾತರೌ ಚ ತೌ ।
ಗೋಧನಂ ಚಾಲಯಂತಸ್ತೇ ಪ್ರಭಾಸಂ ಕ್ಷೇತ್ರಮಾಗತಾಃ ॥ ೧೧ ॥
ಅಥ ತದ್ಗೋಧನಂ ದೃಷ್ಟ್ವಾ ಭೂರಿ ದಾನಾರ್ಥಮಾಹೃತಂ ।
ಭ್ರಾತೃಭ್ಯಾಂ ತ್ರಿತಯೋ ಚೇತಿ ಪಾಪಾ ಮತಿರಜಾಯತ ॥ ೧೨ ॥

---

೬. ಹಿಂದೆ ತಂದೆಯ ರಾಜ್ಯಭಾರವನ್ನು ತಳೆದ ಅವನ ಕನಿಷ್ಠ ಪುತ್ರನಾದ ತ್ರಿತನು ರಾಜನಾದನು.

೭-೮. ಅವನು ನಾನು ಯಜ್ಞವನ್ನು ಹೇಗೆ ಮಾಡಲೆಂದು ಆಲೋಚಿಸಿ ಯಜ್ಞ ಕರ್ಮದಲ್ಲಿ ನಿಪುಣರಾದ ದ್ವಿಜವರ್ಯರನ್ನು ನಿಮಂತ್ರಣಮಾಡಿ ಇಂದ್ರಾದಿ ಸಕಲದೇವತೆಗಳನ್ನೂ ವಿಧಿಯಂತೆ ಆವಾಹನಮಾಡಿ ಬ್ರಾಹ್ಮಣರ ದಕ್ಷಿಣೆಗಾಗಿ ತನ್ನ ಅಣ್ಣಂದಿರೊಡನೆ ಪ್ರಭಾಸಕ್ಷೇತ್ರಕ್ಕೆ ಹೊರಟನು.

೯. ವೇದಪಾರಂಗತನಾದ ಆ ತ್ರಿತನು ಯಾವ ಯಾವ ಮನೆಗೆ ಹೋಗುವನೋ, ಅಲ್ಲಿ ಉತ್ತಮ ಪೂಜೆಯನ್ನೂ, ಅಧಿಕ ಗೋವುಗಳನ್ನೂ ಹೊಂದಿದನು.

೧೦. ಹೀಗೆ ಅವನು ಗೋವುಗಳನ್ನು ಪಡೆದು ಸಹೋದರರೊಡನೆ ಮನೆಯನ್ನು ಸೇರಿ ಅತಿಶಯ ಸುಖವನ್ನು ಹೊಂದಿದನು.

೧೧. ತ್ರಿತನು ಮುಂದೆಯೂ, ಅಣ್ಣಂದಿರು ಹಿಂದೆಯೂ ಗೋವುಗಳನ್ನು ಹೊಡೆದುಕೊಂಡು ಪ್ರಭಾಸಕ್ಷೇತ್ರಕ್ಕೆ ಬಂದರು.

೧೨. ಬಳಿಕ ದಾನಕ್ಕಾಗಿ ತಂದ ಆ ಗೋವುಗಳ ಸಮೂಹವನ್ನು ಕಂಡು ಅಣ್ಣಂದಿರಿಗೆ ತ್ರಿತನಲ್ಲಿ ಪಾಪಬುದ್ಧಿಯುಂಟಾಯಿತು.

ಪರಸ್ಪರಮೂಚತುಸ್ತೌ ಭ್ರಾತರೌ ದುಷ್ಟಚೇತಸೌ ।
ತ್ರಿತೋ ಯಜ್ಞೇಷು ಕುಶಲೋ ವೇದೇಷು ಕುಶಲಸ್ತಥಾ ॥ ೧೩ ॥
ಮಾನ್ಯಃ ಪೂಜ್ಯಶ್ಚ ಸರ್ವತ್ರ ಆವಾಂ ಮೂರ್ಖೌ ನಿರರ್ಥಕೌ ।
ಏತದ್ಧಿ ಗೋಧನಂ ಸರ್ವಂ ತ್ರಿತೋ ದಾಸ್ಯತಿ ತಸನ್ಮಖೇ ॥ ೧೪ ॥
ಅಸ್ಮಾಕಂ ಪಿತೃಪರ್ಯಾಗತೋ ಯದಾಪ್ತಂ ತತ್ಸಮಂ ಭವೇತ್ ।
ತಸ್ಮಾದತ್ರೈವ ಯುಕ್ತೋಽಸ್ಯ ವಧೋ ನೈ ತ್ರಿತಯಜ್ವಿನಃ ॥ ೧೫ ॥
ಏವಂ ತೌ ನಿಶ್ಚಯಂ ಕೃತ್ವಾ ಪ್ರಸ್ಥಿತೌ ಭ್ರಾತರಾವುಭೌ ।
ತ್ರಿತಸ್ತು ಪುರತೋ ಯಾತಿ ನಿರ್ವಿಕಲ್ಪ ಋಜುಃ ಸುಧೀಃ ॥ ೧೬ ॥
ಅನು ತತ್ರ ಸಮುತ್ತಸ್ಥೌ ವ್ಯಾಘ್ರೋ ರೌದ್ರತರಾಕೃತಿಃ ।
ವ್ಯಾದಿತಾಸ್ಯೋ ರವಂ ದೇವಿ ವ್ಯನದದ್ಭೈರವಂ ತತಃ ॥ ೧೭ ॥
ತಸ್ಯ ಶಬ್ದೇನ ತಾ ಗಾವೋ ನಷ್ಟಾ ಜಗ್ಮುರ್ದಿಶೋ ದಶ ।
ಅಂಧಕೂಪೋ ಮಹಾಂಸ್ತತ್ರ ಪ್ರದೇಶೇ ದಾರುಣೋಽಭವತ್ ॥ ೧೮ ॥
ಏಕತೋ ದಾರುಣೋ ವ್ಯಾಘ್ರಃ ಕೂಪೋನ್ಯತ್ರ ಸುದಾರುಣಃ ।
ದೃಷ್ಟ್ವಾ ತೇ ಭ್ರಾತರಃ ಸರ್ವೇ ಭಯೋದ್ವಿಗ್ನಾಃ ಪ್ರದುದ್ರುವುಃ ॥ ೧೯ ॥

---

೧೩. ದುಷ್ಟಬುದ್ಧಿಯುಳ್ಳ ಆ ಏಕತ, ದ್ವಿತರು ಪರಸ್ಪರ ಹೀಗೆ ಮಾತಾಡಿಕೊಂಡರು. "ತ್ರಿತನು ಯಜ್ಞಗಳಲ್ಲಿಯೂ, ವೇದಗಳಲ್ಲಿಯೂ ನಿಪುಣನು.

೧೪. ಎಲ್ಲೆಡೆಯಲ್ಲಿಯೂ ಪೂಜ್ಯನಾಗಿರುವನು. ಮೂರ್ಖರಾದ ನಾವು ನಿಷ್ಪ್ರಯೋಜಕರು. ತ್ರಿತನು ಈ ಗೋವುಗಳನ್ನು ಆ ಯಜ್ಞದಲ್ಲಿ ದಾನಮಾಡುವನು.

೧೫. ಪಿತೃಪಾರಂಪರ್ಯದಿಂದ ಬಂದ ಸ್ವತ್ತು ಮಾತ್ರ ನಮಗೆ ಸಮವಾಗಿ ಲಭಿಸುವುದು. ಆದುದರಿಂದ ಯಜ್ಞಮಾಡುವ ಈ ತ್ರಿತನನ್ನು ಕೊಲ್ಲುವುದು ಉಚಿತವು".

೧೬. ಹೀಗೆ ಆ ಇಬ್ಬರು ಸಹೋದರರು ನಿಶ್ಚಯಿಸಿ ಹೊರಟರು. ಋಜುಬುದ್ಧಿಯುಳ್ಳವನೂ, ಜ್ಞಾನಿಯೂ ಆದ ತ್ರಿತನು ಮುಂದೆ ನಡೆದನು.

೧೭. ಅವರನ್ನು ಭಯಂಕರವಾದ ಆಕಾರವುಳ್ಳ ಹುಲಿಯು ಹಿಂಬಾಲಿಸುತ್ತ ಬಾಯ್ದೆರೆದು ಭಯಂಕರವಾಗಿ ಗರ್ಜಿಸಿತು.

೧೮. ಆ ಶಬ್ದದಿಂದ ಆ ಗೋವುಗಳು ಹತ್ತು ದಿಕ್ಕುಳಿಗೆ ಚದರಿಹೋದುವು. ಆ ಪ್ರದೇಶದಲ್ಲಿ ಮಹಾ ಭಯಂಕರವಾದ ಕಗ್ಗತ್ತಲೆಯ ಬಾವಿಯಿದ್ದಿತು.

೧೯. ಒಂದೆಡೆಯಲ್ಲಿ ದಾರುಣವಾದ ಹುಲಿಯೂ ಮತ್ತೊಂದೆಡೆಯಲ್ಲಿ ಭಯಂಕರ ಬಾವಿಯೂ ಇದ್ದುವು. ಅದನ್ನು ನೋಡಿ ಆ ಸಹೋದರೆಲ್ಲ ಭಯಗೊಂಡು ಓಡಿದರು.

ಅಥ ತೇ ವಿಷಮಂ ಪ್ರಾಪ್ಯ ತಟಂ ಕೂಪಸ್ಯ ಭಾಮಿನಿ ।
ಸ್ಥಿತಾ ಯಾವದ್ಗತೋ ವ್ಯಾಘ್ರಸ್ತತೋ ಗಂತುಂ ಮನೋ ದಧುಃ ॥ ೨೦ ॥
ಅಥ ತಾಭ್ಯಾಂ ತ್ರಿತೋ ದೇವಿ ಭ್ರಾತೃಭ್ಯಾಂ ನೃಪಸತ್ತಮಃ ।
ಪ್ರಕ್ಷಿಪ್ತೋ ದಾರುಣೇ ಕೂಪೇ ಜೀರ್ಣೇ ತೋಯವಿವರ್ಜಿತೇ ॥ ೨೧ ॥
ತತಸ್ತದ್ಗೋಧನಂ ಗೃಹ್ಯ ಪ್ರಸ್ಥಿತೌ ಹೃಷ್ಟಮಾನಸೌ ।
ತ್ರಿತಸ್ತು ಪತಿತಸ್ತತ್ರ ಕೂಪೇ ಜಲವಿವರ್ಜಿತೇ ॥ ೨೨ ॥
ಚಿಂತಯಾಮಾಸ ಮೇಧಾವೀ ನಾಹಂ ಶೋಚಾಮಿ ಜೀವಿತುಂ ।
ಮಯಾಹೂತಾ ದ್ವಿಜಶ್ರೇಷ್ಠಾ ಯಜ್ಞಾರ್ಥಂ ವೇದಪಾರಗಾಃ ।
ಇಂದ್ರಾದ್ಯಾಶ್ಚ ಸುರಾಃ ಸರ್ವೇ ಸ ಕ್ರತುಃ ಸ್ಯಾನ್ನ ಮೇ ತ್ವತಃ ॥ ೨೩ ॥
ಸ ಏವಂ ಚಿಂತಯಾಮಾಸ ವೇದವೇದಾಂಗಪಾರಗಃ ।
ಮಾನಸಂ ಯಜ್ಞಮಾರಭ್ಯ ತತ್ರೈವ ವರವರ್ಣಿನಿ ॥ ೨೪ ॥
ಸ್ವಯಮೇವ ತು ಸೂಕ್ತಾನಿ ಪ್ರೋಕ್ತ್ವಾ ಪ್ರೋಕ್ತ್ವಾ ದ್ವಿಜೋತ್ತಮಃ ।
ಕೃತವಾನ್ವಾಲುಕಾ ಹೋಮಂ ತೇನ ತುಷ್ಟಾಶ್ಚ ದೇವತಾಃ ॥ ೨೫ ॥
ಶ್ರದ್ಧಾಂ ತಸ್ಯ ವಿದಿತ್ವಾ ತಾಂ ಭೂಯಸ್ತೃಪ್ತಾಸ್ತು ದೇವತಾಃ ।
ಆಗತ್ಯ ಬ್ರಾಹ್ಮಣಂ ಪ್ರೋಚುಃ ಕೂಪಮಧ್ಯೇ ವ್ಯವಸ್ಥಿತಂ ॥ ೨೬ ॥

---

೨೦. ಪ್ರಿಯಳೆ! ಬಳಿಕ ಅವರು ಬಾವಿಯ ಇಕ್ಕಟಾದ ದಡವನ್ನು ಹೊಂದಿ ಹುಲಿಯು ಮುಂದಕ್ಕೆ ಹೊರಟುಹೋದ ತರುವಾಯ ತಾವು ಹೊರಟುಹೋಗ ಬೇಕೆಂದು ಆಲೋಚಿಸಿದರು.

೨೧. ಅನಂತರ ಆ ಅಣ್ಣಂದಿರು ತ್ರಿತನನ್ನು ನೀರಿಲ್ಲದ ಹಳೆಬಾವಿಯಲ್ಲಿ ಎಸೆದರು.

೨೨. ಬಳಿಕ ಅವರು ಗೋವುಗಳನ್ನು ಹೊಡೆದುಕೊಂಡು ಸಂತೋಷ ದಿಂದ ಹೊರಟುಹೋದರು. ತ್ರಿತನು ನೀರಿಲ್ಲದ ಆ ಬಾವಿಯಲ್ಲಿ ಬಿದ್ದನು.

೨೩. ಬುದ್ಧಿಶಾಲಿಯಾದ ತ್ರಿತನು ಹೀಗೆ ಆಲೋಚಿಸಿದನು, "ನಾನು ಬದುಕು ವುದಕ್ಕಾಗಿ ದುಃಖಿಸುವುದಿಲ್ಲ. ನಾನು ಯಜ್ಞಕ್ಕಾಗಿ ವೇದಪಾರಂಗತರಾದ ಬ್ರಾಹ್ಮಣೋತ್ತಮರನ್ನೂ, ಇಂದ್ರಾದಿದೇವತೆಗಳನ್ನೂ ಕರೆದಿರುವೆನು. ಆ ಯಜ್ಞವು ನಡೆಯಲಾರದಲ್ಲ!"

೨೪–೨೫. ಪ್ರಿಯಳೆ! ಅವನು ಹೀಗೆ ಚಿಂತಿಸಿ ಅಲ್ಲಿಯೇ ಮಾನಸಯಜ್ಞ ವನ್ನು ಆರಂಭಿಸಿ ತಾನೆ ಸೂಕ್ತಗಳನ್ನು ಹೇಳಿ ಮರಳಿನಿಂದ ಹೋಮವನ್ನಾಚರಿಸಲು ಅದರಿಂದ ದೇವತೆಗಳು ಸಂತುಷ್ಟರಾದರು.

೨೬. ದೇವತೆಗಳು ಆ ಬ್ರಾಹ್ಮಣನ ಶ್ರದ್ಧೆಯನ್ನರಿತು ಅತ್ಯಂತ ತೃಪ್ತರಾಗಿ ಬಂದು ಬಾವಿಯ ನಡುವೆಯಿರುವ ಅವನನ್ನು ಕುರಿತು ಇಂತೆಂದರು.

ದೇವಾ ಊಚುಃ :—

ಭೋ ಭೋ ವಿಪ್ರ ತ್ವಯಾ ನೂನಂ ಸರ್ವೇ ಸಂತರ್ಪಿತಾ ವಯಂ ।
ಮಾನಸೇನ ತು ಯಜ್ಞೇನ ತಸ್ಮಾದ್ಬ್ರೂಹಿ ಮನೋಗತಂ ॥ ೨೭ ॥

ಬ್ರಾಹ್ಮಣ ಉವಾಚ :—

ಯದಿ ದೇವಾಃ ಪ್ರಸನ್ನಾ ಮೇ ಕೂಪಾನ್ನಿಷ್ಕ್ರಮಣೇ ತ್ವಹಂ ।
ಯುಷ್ಮಾತ್ಸ್ವಸ್ವಂ ಮಂದಿರಂ ಗತ್ವಾ ದೇವಯಜ್ಞಂ ಕರೋಮ್ಯಹಂ ॥ ೨೮ ॥

ಈಶ್ವರ ಉವಾಚ :—

ಅಥ ದೇವೈಃ ಸಮಾದಿಷ್ಟಾ ತಸ್ಮಿನ್ಕೂಪೇ ಸರಸ್ವತೀ ।
ನಿರ್ಗತ್ಯ ವಸುಧಾಂ ಭಿತ್ವಾ ಪೂರಯಾಮಾಸ ವಾರಿಣಾ ॥ ೨೯ ॥
ಅಥ ನಿಷ್ಕ್ರಮ್ಯ ವಿಪ್ರೋಽಸೌ ಯಾತಃ ಸ್ವಭವನಂ ಪ್ರತಿ ।
ತತಃ ಪ್ರಭೃತಿ ದೇವೇಶಿ ತ್ರಿತಕೂಪಃ ಸ ಉಚ್ಯತೇ ॥ ೩೦ ॥
ಸ್ನಾತ್ವಾ ತತ್ರ ಶುಚಿರ್ಭೂತ್ವಾ ತ್ವಥ ಸಂತರ್ಪಯೇತ್ಪಿತೄನ್ ।
ಅಶ್ವಮೇಧಮವಾಪ್ನೋತಿ ಸರ್ವಪಾಪವಿವರ್ಜಿತಃ ॥ ೩೧ ॥
ತಿಲದಾನಂ ತು ದೇವೇಶಿ ತತ್ರ ಶಸ್ತಂ ಸಕಾಂಚನಂ ।
ಪಿತೄಣಾಂ ವಲ್ಲಭಂ ತೀರ್ಥಂ ನಿತ್ಯಂ ಚೈವ ತು ಭಾಮಿನಿ ॥ ೩೨ ॥

---

೨೭. ದೇವತೆಗಳು ಹೇಳುತ್ತಾರೆ :— ಎಲೈ ಬ್ರಾಹ್ಮಣನೆ ! ನಿನ್ನ ಮಾನಸ ಯಜ್ಞದಿಂದ ನಾವು ಸಂತುಷ್ಟರಾದೆವು. ಆದ್ದರಿಂದ ನಿನ್ನ ಮನೋರಥವನ್ನು ತಿಳಿಸು.

೨೮. ಬ್ರಾಹ್ಮಣನು ಹೇಳುತ್ತಾನೆ :— ದೇವತೆಗಳೆ ! ನಾನು ಬಾವಿಯಿಂದ ಮೇಲಕ್ಕೆ ಬರಲು ನೀವು ಅನುಗ್ರಹಿಸುವುದಾದರೆ ಮನೆಯನ್ನು ಸೇರಿದೇವಯಜ್ಞವನ್ನು ಮಾಡುವೆನು.

೨೯. ಈಶ್ವರನು ಹೇಳುತ್ತಾನೆ :— ಬಳಿಕ ದೇವತೆಗಳ ಅಪ್ಪಣೆಯಂತೆ ಸರಸ್ವತೀ ನದಿಯು ಭೂಮಿಯನ್ನು ಭೇದಿಸಿ ಹೊರಹೊರಟು ಆ ಬಾವಿಯನ್ನು ನೀರಿನಿಂದ ತುಂಬಿತು.

೩೦. ದೇವೇಶಿ ! ಆ ತ್ರಿತ ಬ್ರಾಹ್ಮಣನು ಅಲ್ಲಿಂದ ಹೊರಟು ತನ್ನ ಮನೆಗೆ ಬಂದನು. ಅದು ಮೊದಲ್ಗೊಂಡು ಅದು ತ್ರಿತಕೂಪವೆನ್ನಿಸಿಕೊಂಡಿತು.

೩೧. ಅಲ್ಲಿ ಮಿಂದು ಶುದ್ಧನಾಗಿ ಪಿತೃತರ್ಪಣಗೈದವನು ಅಶ್ವಮೇಧಯಾಗ ಮಾಡಿದವನಂತಾಗಿ ಸಕಲ ಪಾಪಮುಕ್ತನಾಗುವನು.

೩೨. ಪ್ರಿಯಳೆ ! ಅಲ್ಲಿ ಸುವರ್ಣಸತಹಿವಾದ ತಿಲದಾನವು ಪ್ರಶಸ್ತವಾದುದು. ಅದು ಪಿತೃಗಳಿಗೆ ಪ್ರಿಯವಾದ ತೀರ್ಥವು.

ಅಗ್ನಿಷ್ವಾತ್ತಾ ಬರ್ಹಿಷದ ಆಯಂತುನ ಇತಿ ಸ್ಮೃತಾಃ ।
ಯೇ ದಿವ್ಯಾಃ ಪಿತರೋ ದೇವಿ ತೇಷಾಂ ಸಾನ್ನಿಧ್ಯಮತ್ರ ಹಿ ॥ ೩೩ ॥
ದರ್ಶನಾದಪಿ ತೀರ್ಥಸ್ಯ ತಸ್ಯ ವೈ ಸುರಸತ್ತಮೇ ।
ಮುಚ್ಯಂತೇ ಪ್ರಾಣಿನಃ ಪಾಪಾದಾಜನ್ಮಮರಣಾಂತಿಕಾತ್ ॥ ೩೪ ॥
ತಸ್ಮಾತ್ಸರ್ವಪ್ರಯತ್ನೇನ ತತ್ರ ಸ್ನಾನಂ ಸಮಾಚರೇತ್ ।
ಪ್ರಭಾಸಂ ಕ್ಷೇತ್ರಮಾಸಾದ್ಯ ಯದೀಚ್ಛೇಚ್ಛ್ರೇಯ ಆತ್ಮನಃ ॥ ೩೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತ್ರಿತಕೂಪಮಾಹಾತ್ಮ್ಯವರ್ಣನಂ ನಾಮ
ಸಪ್ತಪಂಚಾಶದುತ್ತರದ್ವಿಶತತಮೋಽಧ್ಯಾಯಃ

---

೩೩. ಅಗ್ನಿಷ್ವಾತ್ತ, ಬರ್ಹಿಷದ, ಆಯಂತುನ ಎಂಬ ದಿವ್ಯಪಿತೃಗಳು ಅಲ್ಲಿ ಸನ್ನಿಹಿತರಾಗಿರುವರು.

೩೪. ಸುರೋತ್ತಮಳೆ! ಆ ತೀರ್ಥದ ದರ್ಶನದಿಂದಲೆ ಪ್ರಾಣಿಗಳು ಹುಟ್ಟಿದ ಮೊದಲ್ಗೊಂಡು ಮರಣದವರೆಗೆ ಮಾಡಿದ ಪಾಪದಿಂದ ಮುಕ್ತರಾಗುವರು.

೩೫. ಆದುದರಿಂದ ತನಗೆ ಶ್ರೇಯಸ್ಸನ್ನು ಬಯಸುವವನು ಪ್ರಭಾಸಕ್ಷೇತ್ರಕ್ಕೆ ಬಂದು ಸ್ನಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತ್ರಿತಕೂಪಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಪಂಚಾಶದುತ್ತರದ್ವಿಶತತಮೋಽಧ್ಯಾಯಃ

ಶಶಾಪಾನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶಶಾಪಾನಮಿತಿ ಸ್ಮೃತಂ ।
ತಸ್ಯೈವ ದಕ್ಷಿಣೇ ತೀರ್ಥಂ ಸರ್ವಪಾಪಪ್ರಣಾಶನಂ ॥ ೧ ॥

ಯಸ್ಮಿನ್ಸ್ನಾತ್ವಾ ನರಃ ಸಮ್ಯಗ್ನಾಪಮೃತ್ಯುಭಯಂ ಲಭೇತ್ ।
ಶೃಣು ಯಸ್ಮಾತ್ತದುತ್ಪತ್ತಿಂ ವದತೋ ಮಮ ವಲ್ಲಭೇ ॥ ೨ ॥

ಮಥಿತ್ವಾ ಸಾಗರಂ ದೇವಾ ಗೃಹೀತ್ವಾಮೃತಮುತ್ತಮಂ ।
ಸತ್ವರಾಸ್ತತ್ರ ತೇ ಗತ್ವಾ ಪಪುಶ್ಚೈವ ಯಥೇಪ್ಸಯಾ ॥ ೩ ॥

ಪಿಬತಾಂ ಯತ್ರ ಪೀಯೂಷಂ ದೇವಾನಾಂ ವರವರ್ಣಿನಿ ।
ಬಿಂದವಃ ಪತಿತಾ ಭೂಮೌ ಶತಶೋಽಥ ಸಹಸ್ರಶಃ ॥ ೪ ॥

ಕನ್ನಡದ ಅನುವಾದ

ಶಶಾಪಾನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ತ್ರಿತಕೂಪದ ದಕ್ಷಿಣ ಪಾರ್ಶ್ವದಲ್ಲಿರುವ ಸಕಲಪಾಪಗಳನ್ನು ನಿವಾರಿಸುವ ಶಶಾಪಾನ ತೀರ್ಥವೆಡೆಗೆ ಹೋಗಬೇಕು.

೨. ಪ್ರಿಯಳೆ! ಮನುಷ್ಯನು ಇಲ್ಲಿ ಸ್ನಾನಮಾಡುವುದರಿಂದ ಅಪಮೃತ್ಯುವಿಗೆ ಹೆದರುವುದಿಲ್ಲ. ಅದು ಹೇಗೆ ಹುಟ್ಟಿತೆಂಬುದನ್ನು ಕೇಳು.

೩. ದೇವತೆಗಳು ಸಮುದ್ರವನ್ನು ಮಥಿಸಿ ಅಮೃತವನ್ನು ಪಡೆದು ವೇಗವಾಗಿ ಹೊರಟು ಬಂದು ಅಲ್ಲಿ ಸ್ವೇಚ್ಛೆಯಾಗಿ ಅದನ್ನು ಕುಡಿದರು.

೪. ಪ್ರಿಯಳೆ! ಅಲ್ಲಿ ಅಮೃತವನ್ನು ದೇವತೆಗಳು ಕುಡಿಯುತ್ತಿರಲು ಅದರ ಸಹಸ್ರಾರು ಹನಿಗಳು ಭೂಮಿಯಲ್ಲಿ ಬಿದ್ದವು.

ಏತಸ್ಮಿನ್ನೇವ ಕಾಲೇ ತು ಶಶಕಸ್ತತ್ರ ಚಾಗತಃ ।
ಪ್ರವಿಷ್ಟಃ ಸಲಿಲೇ ತತ್ರ ತೃಷಾರ್ತೋ ವರವರ್ಣಿನಿ ॥ ೫ ॥

ಅಮರತ್ವಮನುಪ್ರಾಪ್ತೋ ವರ್ತತೇ ಸಲಿಲಾಶಯೇ ।
ತಂ ದೃಷ್ಟ್ವಾ ತ್ರಿದಶಾಃ ಸರ್ವೇ ಸ್ಪರ್ಧಮಾನಾ ಮುಹುರ್ಮುಹುಃ ।
ಜ್ಞಾತ್ವಾಮೃತಾನ್ವಿತಂ ತೋಯಂ ಮಂತ್ರಂ ಚಕ್ರುರ್ಭಯಾನ್ವಿತಾಃ ॥ ೬ ॥

ಅಮೃತಂ ಪತಿತಂ ಭೂಮೌ ಭಕ್ಷಯಿಷ್ಯಂತಿ ಮಾನವಾಃ ।
ತತೋಽಮರ್ತ್ಯಾ ಭವಿಷ್ಯಂತಿ ನಾತ್ರ ಕಾರ್ಯಾ ವಿಚಾರಣಾ ॥ ೭ ॥

ತಿರ್ಯಗ್ಯೋನ್ಯಾಂ ಸಮುತ್ಪನ್ನಃ ಕೃಪಣಃ ಶಶಕೋ ಹ್ಯಯಂ ।
ಅಸ್ಮಾಭಿಃ ಸ್ಪರ್ಧತೇ ತಸ್ಮಾತ್ತತೋ ಭಯಮುಪಸ್ಥಿತಂ ॥ ೮ ॥

ಅಥ ಪ್ರಾಪ್ತೋ ನಿಶಾನಥೋ ವ್ಯಾಧಿನಾ ಸ ಪರಿಪ್ಲುತಃ ।
ಅಬ್ರವೀತ್ತ್ರಿದಶಾನ್ಸರ್ವಾನಮೃತಂ ಮೇ ಪ್ರಯಚ್ಛತ ॥ ೯ ॥

ಕೃಚ್ಛ್ರೇಣ ಮಹತಾ ಪ್ರಾಪ್ತೋ ನಾಹಂ ಶಕ್ತೋ ವಿಸರ್ಪಿತುಂ ।
ಅಥೋಚುಸ್ತ್ರಿದಶಾಃ ಸರ್ವೇ ಸರ್ವಮಸ್ಮಾಭಿರ್ಭಕ್ಷಿತಂ ॥ ೧೦ ॥

೫–೬. ಈ ಸಮಯದಲ್ಲಿ ಬಾಯಾರಿಕೆಗೊಂಡ ಮೊಲವೊಂದು ಅಲ್ಲಿಗೆ ಬಂದು ಆ ಸರೋವರದ ನೀರಿನಲ್ಲಿ ಪ್ರವೇಶಿಸಿ ಅಮರವಾಗಿ ಅಲ್ಲಿ ಬೆಳೆಯುತ್ತಿದ್ದಿತು. ಅದನ್ನು ನೋಡಿ ದೇವತೆಗಳೆಲ್ಲ ಪರಸ್ಪರ ಸ್ಪರ್ಧಿಸಿ ಆ ನೀರು ಅಮೃತದಿಂದ ಕೂಡಿರುವುದೆಂದರಿತು ಭಯದಿಂದ ಹೀಗೆ ಆಲೋಚಿಸಿದರು.

೭. ಅಮೃತವು ಭೂಮಿಯಲ್ಲಿ ಬಿದ್ದಿತು. ಮಾನವರು ಅದನ್ನು ಭಕ್ಷಿಸಿ ಅಮರ್ತ್ಯರಾಗುವರು. ಸಂದೇಹವಿಲ್ಲ.

೮. ಪಶುಜಾತಿಯಲ್ಲಿ ಜನಿಸಿದ ದೀನವಾದ ಈ ಮೊಲವು ನಮ್ಮೊಡನೆ ಸ್ಪರ್ಧಿಸುತ್ತಿದೆ. ಆದ್ದರಿಂದ ಅತ್ಯಂತ ಭಯವುಂಟಾಗಿದೆ.

೯–೧೧. ಬಳಿಕ ರೋಗಪೀಡಿತನಾದ ಚಂದ್ರನು ದೇವತೆಗಳನ್ನು ಕುರಿತು "ನನಗೆ ಅಮೃತವನ್ನು ಕೊಡಿರಿ. ಅತಿಕಷ್ಟವನ್ನು ಹೊಂದಿದ ನಾನು ಸರಿಯಲು ಶಕ್ತನಲ್ಲ ಎಂದನು. ಆದಕ್ಕೆ ದೇವತೆಗಳು ನಾವು ಎಲ್ಲವನ್ನೂ ಕುಡಿದೆವು. ನೀನು ವಿಳಂಬವಾಗಿ ಬಂದದ್ದರಿಂದ ನಿನ್ನನ್ನು ಮರೆತೆವು. ಆದರೆ ನೀನು ನಮ್ಮ ಮಾತಿನಂತೆ ಮಾಡು.

ವಿಸ್ಮೃತಸ್ತ್ವಂ ನಿಶಾನಾಥ ಚಿರಾತ್ಕಸ್ಮಾದಿಹಾಗತಃ ।
ಕುರುಷ್ವ ವಚನಂ ಚಂದ್ರ ಅಸ್ಮಾಕಂ ತಿಮಿರಾಪಹ ॥ ೧೧ ॥
ಅಸ್ಮಿಜ್ಜಲೇಽಮೃತಂ ಭೂರಿ ಪತಿತಂ ಪಿಬತಾಂ ಹಿನಃ ।
ತತ್ಪಿಬಸ್ವ ನಿಶಾನಾಥ ಸರ್ವಮೇತಜ್ಜಲಾಶಯಂ ॥ ೧೨ ॥
ಅರ್ಧಂ ನಿಪತಿತಂ ಚಾತ್ರ ಸತ್ಯಮೇತನ್ನಿಶಾಮಯ ।
ತೇಷಾಂ ತದ್ವಚನಂ ಶ್ರುತ್ವಾ ಶೀತರಶ್ಮಿಸ್ತ್ವರಾನ್ವಿತಃ ॥ ೧೩ ॥
ತೃಷಾರ್ತೋ ವಾಪಿಬತ್ತೋಯಂ ಶಶಕೇನ ಸಮನ್ವಿತಂ ।
ಅಸ್ಥಿಶೇಷಂ ತು ತತ್ತಸ್ಯ ಕಾಯಂ ಪೀಯೂಷಭಕ್ಷಣಾತ್ ॥ ೧೪ ॥
ತತ್ಕ್ಷಣಾತ್ಪುಷ್ಟಿಮಗಮತ್ಕಾಂತ್ಯಾ ಪರಮಯಾ ಯುತಃ ।
ಧಾತುಷು ಕ್ಷೀಯಮಾಣೇಷು ಪುಷ್ಟೋ ಹಿ ಸುಧಯಾ ಹಿ ಸಃ ॥ ೧೫ ॥
ಸ ಚಾಪಿ ಶಶಕಸ್ತಸ್ಯ ನ ಮೃತೋ ಜಠರಂ ಗತಃ ।
ಅದ್ಯಾಪಿ ದೃಶ್ಯತೇ ತತ್ರ ದೇಹೇ ಪೀಯೂಷಭಕ್ಷಣಾತ್ ॥ ೧೬ ॥
ತತ್ಕ್ಷಣಾತ್ತುಷ್ಟಿಮಗಮತ್ಕಾಂತ್ಯಾ ಪರಮಯಾ ಯುತಃ ।
ಅಬ್ರುವನ್ನನತಾಮೇತದ್ಯಥಾ ಭೂಯೋ ಜಲಂ ಭವೇತ್ ॥ ೧೭ ॥
ಅಸ್ಮಾಕಂ ಸಂಗಮಾದೇತಚ್ಛುಷ್ಕಂ ಶ್ವಭ್ರಂ ಜಲಾಶಯಂ ।
ತದ್ಯುಕ್ತಂ ಚ ಕೃತಂ ಕರ್ಮ ನೈತತ್ಸಾಧುವಿಚೇಷ್ಟಿತಂ ॥ ೧೮ ॥

೧೨–೧೫. ನಾವು ಅಮೃತವನ್ನು ಕುಡಿಯುತ್ತಿರುವಾಗ ಇಲ್ಲಿ ನೀರಿನಲ್ಲಿ ಬಹಳ ಅಮೃತವು ಬಿದ್ದಿತು. ಆದ್ದರಿಂದ ನೀನು ಈ ಬಾವಿಯ ನೀರನ್ನೆಲ್ಲ ಕುಡಿ. ಅರ್ಧಭಾಗವು ಇಲ್ಲಿ ನಿಶ್ಚಯವಾಗಿಯೂ ಬಿದ್ದಿರುವುದು". ಎಂದರು. ಚಂದ್ರನು ಅವರ ಆ ಮಾತನ್ನು ಕೇಳಿ ಬಾಯಾರಿಕೆಯಿಂದ ಪೀಡಿತನಾಗಿ ತ್ವರೆಯಿಂದ ಮೊಲನೊಡನೆ ಆ ನೀರನ್ನೆಲ್ಲ ಕುಡಿದನು. ಧಾತುಕ್ಷಯದಿಂದ ಕ್ಷೀಣನಾಗಿ ಅಸ್ಥಿಮಾತ್ರ ಉಳಿದಿರುವ ಆ ಚಂದ್ರನು. ಅಮೃತಪಾನದಿಂದ ಕೂಡಲೆ ಪುಷ್ಟಿಗೊಂಡು ಅತಿಶಯ ಕಾಂತಿಯುಕ್ತನಾದನು.

೧೬. ಅವನ ಹೊಟ್ಟೆಯನ್ನು ಸೇರಿದ ಮೊಲವು ಅಮೃತಪಾನ ಮಾಡಿದ್ದರಿಂದ ಸಾಯದೆ ಈಗಲೂ ಅವನ ಹೊಟ್ಟೆಯಲ್ಲಿ ಕಾಣಿಸುತ್ತಿದೆ.

೧೭–೧೮. ಚಂದ್ರನು ಹೀಗೆ ಸಂತೋಷಗೊಂಡು ಕಾಂತಿಯುಕ್ತನಾದನು. ದೇವತೆಗಳು ಇಂತೆಂದರು. ನಮ್ಮ ಸಂಬಂಧದಿಂದ ಈ ಕೆರೆಯು ಒಣಗಿಹೋಯಿತು. ನಾವು ಮಾಡಿದ ಕೆಲಸವು ಸಾಧುಗಳಿಗೆನರ್ಹವಾದುದು. ಆದುದರಿಂದ ಇದು ನೀರು ತುಂಬುವಂತೆ ಆಗಬೇಕು.

ತತೋ೭ಖನಂಶ್ಚ ತೇ ಸರ್ವೇ ಯಾವತ್ತೋಯವಿನಿರ್ಗಮಃ ।
ಅಥಾಬ್ರುವಂಸ್ತತಃ ಸರ್ವೇ ಹರ್ಷೇಣ ಮಹತಾನ್ವಿತಾಃ ॥ ೧೯ ॥

ಯಸ್ಮಾಚ್ಛಶೇನ ಸಂಯುಕ್ತಂ ಪ್ರೀತಮೇತಜ್ಜಲಾಶಯಂ ।
ಚಂದ್ರೇಣ ಹಿ ಶಶಪಾನಂ ತಸ್ಮಾದೇತದ್ಭವಿಷ್ಯತಿ ॥ ೨೦ ॥

ಅತ್ರಾಗತ್ಯ ನರಃ ಸ್ನಾನಂ ಯಃ ಕರಿಷ್ಯತಿ ಭಕ್ತಿತಃ ।
ಸ ಯಾಸ್ಯತಿ ಪರಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೨೧ ॥

ಅತ್ರಾನ್ನಂ ಸಂಪ್ರದಾಸ್ಯಂತಿ ಬ್ರಾಹ್ಮಣೇಭ್ಯಃ ಸಮಾಹಿತಾಃ ।
ಸರ್ವಯಜ್ಞಫಲಂ ತೇಷಾಂ ಭವಿಷ್ಯತಿ ನ ಸಂಶಯಃ ॥ ೨೨ ॥

ಅಸ್ಮಿನ್ದೃಷ್ಟೇ ಸುರಾಃ ಸರ್ವೇ ದೃಷ್ಟಾಃ ಸ್ಯುಃ ಸರ್ವದೇವತಾಃ ।
ಏವಮುಕ್ತ್ವಾ ಸುರಾಃ ಸರ್ವೇ ಜಗ್ಮುಶ್ಚೈವ ಸುರಾಲಯಂ ॥ ೨೩ ॥

ಅಥ ಕಾಲೇನ ಮಹತಾ ಪ್ರಾಪ್ತಾ ತತ್ರ ಸರಸ್ವತೀ ।
ವಡವಾಗ್ನಿಂ ಸಮಾದಾಯ ತಯಾನುಪಾತಿತಂ ಪುನಃ ॥ ೨೪ ॥

---

೧೯. ಬಳಿಕ ಅವರು ನೀರು ಬರುವವರೆಗೆ ಅಗೆದು ಅತಿ ಸಂತೋಷದಿಂದ ಹೀಗೆಂದರು.

೨೦. "ಚಂದ್ರನು ಮೊಲದೊಡನೆ ಈ ಕೆರೆಯ ನೀರನ್ನು ಕುಡಿದುದರಿಂದ ಇದಕ್ಕೆ ಶಶಪಾನವೆಂದು ಹೆಸರಾಗುವುದು.

೨೧. ಇಲ್ಲಿಗೆ ಬಂದು ಭಕ್ತಿಯಿಂದ ಸ್ನಾನಮಾಡುವ ಮಾನವನು ಮಹೇಶ್ವರನ ಉತ್ತಮ ಸ್ಥಾನವನ್ನು ಹೊಂದುವನು.

೨೨. ಇಲ್ಲಿ ಸಾವಧಾನಮನಸ್ಸಿನಿಂದ ಬ್ರಾಹ್ಮಣರಿಗೆ ಅನ್ನದಾನಮಾಡುವವರು ಸಕಲ ಯಜ್ಞಫಲವನ್ನು ಹೊಂದುವರು.

೨೩. ಇದನ್ನು ನೋಡಿದರೆ ಸಕಲದೇವತೆಗಳನ್ನು ದರ್ಶನಮಾಡಿದಂತಾಗುವುದು. ಹೀಗೆಂದು ಹೇಳಿ ದೇವತೆಗಳೆಲ್ಲ ದೇವಲೋಕಕ್ಕೆ ತೆರಳಿದರು.

೨೪. ಅನಂತರ ಬಹುಕಾಲದ ತರುವಾಯ ಸರಸ್ವತಿಯು ವಡವಾಗ್ನಿಯನ್ನು ತೆಗೆದುಕೊಂಡು ಬರುತ್ತ ಆ ಸರೋವರವನ್ನು ತುಂಬಿಸಿದಳು.

ತತೋ ಮೇಧ್ಯತರಂ ಜಾತಂ ತೀರ್ಥಂ ಚ ವರವರ್ಣಿನಿ ।
ತಸ್ಮಾತ್ಸರ್ವಪ್ರಯತ್ನೇನ ತತ್ರ ಸ್ನಾನಂ ಸಮಾಚರೇತ್ ॥ ೨೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಶಪಾನಮಾಹಾತ್ಮ್ಯವರ್ಣನಂನಾಮ
। ಅಷ್ಟಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

---

೨೫. ಆದ್ದರಿಂದ ಆ ತೀರ್ಥವು ಅತ್ಯಂತ ಪವಿತ್ರವಾಯಿತು. ಆದುದರಿಂದಲೇ ಅಲ್ಲಿ ಸ್ನಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಶಪಾನಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಪರ್ಣಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪರ್ಣಾದಿತ್ಯಂ ಸುರೇಶ್ವರಂ ।
ಪ್ರಾಚೀಸರಸ್ವತೀಕೂಲೇ ತಟೇ ಚೋತ್ತರತಃ ಸ್ಥಿತಂ ॥ ೧ ॥
ಪುರಾ ತ್ರೇತಾಯುಗೇ ದೇವಿ ಪರ್ಣಾದೋನಾಮ ವೈದ್ವಿಜಃ ।
ಪ್ರಭಾಸಂ ಕ್ಷೇತ್ರಮಾಸಾದ್ಯ ತಪಸ್ತೇಪೇ ಸುದಾರುಣಂ ।
ಆರಾಧಯಾಮಾಸ ರವಿಂ ಭಕ್ತ್ಯಾ ಪರಮಯಾ ಯುತಃ ॥ ೨ ॥
ತರ್ಪಯಿತ್ವಾ ತತಃ ಸೂರ್ಯಂ ಧೂಪಮಾಲ್ಯವಿಲೇಪನೈಃ ।
ವೇದೋಕ್ತೈಃ ಸ್ತವನೈಃ ಸೂಕ್ತೈರ್ದಿವಾರಾತ್ರಂ ಸಮಾಹಿತಃ ॥ ೩ ॥
ಏವಂ ಚ ಧ್ಯಾಯತಸ್ತಸ್ಯ ಕಾಲೇನ ಮಹತಾ ತತಃ ।
ತುತೋಷ ಭಗವಾನ್ಸೂರ್ಯೋ ವಾಕ್ಯಮೇತದುವಾಚ ಹ ॥ ೪ ॥

ಕನ್ನಡದ ಅನುವಾದ

ಪರ್ಣಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಪ್ರಾಚೀಸರಸ್ವತಿಯ ದಡದಲ್ಲಿ ಉತ್ತರಭಾಗದಲ್ಲಿರುವ ಪರ್ಣಾದಿತ್ಯನೆಡೆಗೆ ಹೋಗಬೇಕು.

೨-೩. ಹಿಂದೆ ತ್ರೇತಾಯುಗದಲ್ಲಿ ಪರ್ಣಾದನೆಂಬ ದ್ವಿಜನು ಪ್ರಭಾಸಕ್ಷೇತ್ರಕ್ಕೆ ಬಂದು ಘೋರತಪಸ್ಸನ್ನುಮಾಡಿ ಸೂರ್ಯನನ್ನು ಅತಿಭಕ್ತಿಯಿಂದ ಪೂಜಿಸಿ ಧೂಪ, ಮಾಲ್ಯ, ಅನುಲೇಪನದ್ರವ್ಯ–ಇವುಗಳಿಂದ ತೃಪ್ತಿಗೊಳಿಸಿ ವೇದಸೂಕ್ತಗಳಿಂದ ಹಗಲು ರಾತ್ರಿ ಸ್ತುತಿಸಿದನು.

೪. ಅವನು ಹೀಗೆ ಸ್ತುತಿಸುತ್ತಿರಲು ಬಹುಕಾಲದ ಮೇಲೆ ಪೂಜ್ಯನಾದ ಸೂರ್ಯನು ಸಂತುಷ್ಟನಾಗಿ ಇಂತೆಂದನು.

ಪರಿತುಷ್ಟೋಽಸ್ಮಿ ವಿಪ್ರೇಂದ್ರ ತಪಸಾನೇನ ಸುವ್ರತ ।
ವರಂ ವರಯ ಭದ್ರಂ ತೇ ನಿತ್ಯಂ ಯನ್ಮನಸೇಪ್ಸಿತಂ ॥ ೫ ॥

ಬ್ರಾಹ್ಮಣ ಉವಾಚ :—

ಏಷ ಏವ ವರಃ ಕಾಮೋ ಯತ್ತುಷ್ಟೋ ಭಗವಾನ್ಸ್ವಯಂ ।
ದರ್ಶನಂ ತವ ದೇವೇಶ ಸ್ವಪ್ನೇಷ್ವಪಿ ಚ ದುರ್ಲಭಂ ॥ ೬ ॥
ಅವಶ್ಯಂ ಯದಿ ದಾತವ್ಯೋ ವರೋ ಮಮ ದಿವಾಕರ ।
ಅತ್ರ ಸಂನಿಹಿತೋ ದೇವ ಸದಾ ತ್ವಂ ಭವ ಭಾಸ್ಕರ ॥ ೭ ॥
ತವ ಪ್ರಸಾದಾತ್ತೇ ಯಾಂತು ತವ ಲೋಕಂ ದಿವಾಕರ ।
ಏವಂ ಭವಿಷ್ಯತೀತ್ಯುಕ್ತ್ವಾ ಹ್ಯಂತರ್ಧಾನಂ ಗತೋ ರವಿಃ ॥ ೮ ॥
ಪರ್ಣಾದೋಽಪಿ ಸ್ಥಿತಸ್ತತ್ರ ತಸ್ಯಾರಾಧನತತ್ಪರಃ ।
ತತ್ರ ಭಾದ್ರಪದೇ ಮಾಸೇ ಷಷ್ಠ್ಯಾಂ ಸ್ನಾನಂ ಸಮಾಚರೇತ್ ।
ಪರ್ಣಾದಿತ್ಯಂ ತತಃ ಪಶ್ಯೇನ್ನ ಸ ದುಃಖಮವಾಪ್ನುಯಾತ್ ॥ ೯ ॥
ಗೋಶತಸ್ಯ ಪ್ರಯಾಗೇ ತು ಸಮ್ಯಗ್ದತ್ತಸ್ಯ ಯತ್ಫಲಂ ।
ತತ್ಫಲಂ ಲಭತೇ ಮರ್ತ್ಯಃ ಪರ್ಣಾದಿತ್ಯಸ್ಯ ದರ್ಶನಾತ್ ॥ ೧೦ ॥

---

೫. "ಬ್ರಾಹ್ಮಣೋತ್ತಮ! ನಿನ್ನೀ ತಪಸ್ಸಿನಿಂದ ಸಂತುಷ್ಟನಾಗಿದ್ದೇನೆ. ನಿನಗೆ ಇಷ್ಟವಾದ ವರವನ್ನು ಕೇಳಿಕೊ. ನಿನಗೆಮಂಗಳವಾಗಲಿ".

೬. ಬ್ರಾಹ್ಮಣನು ಹೇಳುತ್ತಾನೆ :—"ಪೂಜ್ಯನಾದ ನೀನು ಸಂತುಷ್ಟನಾಗಿರುವುದೇ ಪರಮಾನುಗ್ರಹವು ನಿನ್ನ ದರ್ಶನವು ಸ್ವಪ್ನದಲ್ಲಿಯೂ ದುರ್ಲಭವಾದುದು.

೭. ದಿವಾಕರ! ನೀನು ಅವಶ್ಯವಾಗಿ ವರವನ್ನೀಯುವುದಾದರೆ ಇಲ್ಲಿ ಯಾವಾಗಲೂ ಸನ್ನಿಹಿತನಾಗಿರು.

೮. ನಿನ್ನ ಅನುಗ್ರಹಕ್ಕೆಪಾತ್ರರಾದವರು ನಿನ್ನಲೋಕಕ್ಕೆ ತೆರಳಲಿ". ಸೂರ್ಯನು ಹಾಗೆಯೇ ಆಗುವುದೆಂದು ನುಡಿದು ಅಂತರ್ಧಾನವಾಗಿಹೋದನು.

೯. ಪರ್ಣಾದನೂ ಆ ಸೂರ್ಯನು ಪೂಜೆಯಲ್ಲಿ ನಿರತನಾಗಿ ಅಲ್ಲಿಯೇ ನೆಲಸಿದನು. ಅಲ್ಲಿ ಭಾದ್ರಪದಮಾಸದ ಷಷ್ಠೀದಿನ ಸ್ನಾನಮಾಡಿ ಪರ್ಣಾದಿತ್ಯನನ್ನು ಕಂಡವನು ದುಃಖಗೊಳ್ಳುವುದಿಲ್ಲ.

೧೦. ಮಾನವನು ಪರ್ಣಾದಿತ್ಯನ ದರ್ಶನದಿಂದ ಪ್ರಯಾಗದಲ್ಲಿ ನೂರು ಗೋವುಗಳನ್ನು ದಾನಮಾಡಿದ ಫಲವನ್ನು ಪಡೆಯುವನು.

ಯೇ ಸೇವಂತೇ ಮಹಾಕುಷ್ಠಂ ಪಾಂಗುಲ್ಯಂ ಚ ವಿಚರ್ಚಿಕಾಃ ।
ಪರ್ಣಾದಿತ್ಯಂ ನ ಜಾನಂತಿ ನೂನಂ ತೇ ಮಂದಬುದ್ಧಯಃ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪರ್ಣಾದಿತ್ಯಮಾಹಾತ್ಮ್ಯವರ್ಣನಂನಾಮ
ಏಕೋನಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

---

೧೧. ಮಹಾಕುಷ್ಠ, ಪಾಂಗುಲ್ಯ, ವಿಚರ್ಚಿಕರೋಗಗಳಿಂದ ಪೀಡಿತರಾದ ಮೂಢರು ನಿಶ್ಚಯವಾಗಯೂ ಪರ್ಣಾದಿತ್ಯನನ್ನರಿಯುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪರ್ಣಾದಿತ್ಯಮಾಹಾತ್ಮ್ಯವರ್ಣನವೆಂಬ
ಇನ್ನೂರೈವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಸಿದ್ಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಸಿದ್ಧೇಶ್ವರಂ ಪರಂ ।
ತಸ್ಯೈವ ಪಶ್ಚಿಮೇ ಭಾಗೇ ಸಿದ್ಧೈಃ ಸಂಸ್ಥಾಪಿತಂ ಪುರಾ ॥ ೧ ॥
ಸಿದ್ಧಾನಾಮ ಸುರಾಃ ಪೂರ್ವಂ ತತ್ರಾಗತ್ಯ ವರಾನನೇ ।
ಲಿಂಗಂ ಸಂಸ್ಥಾಪಯಾಮಾಸುಃ ಸಿದ್ಧ್ಯರ್ಥಂ ಸರ್ವವಸ್ತುಷು ॥ ೨ ॥
ತತಸ್ತುಷ್ಟೋ ಮಹಾದೇವಿ ತೇಷಾಂ ದೃಷ್ಟ್ವಾ ತಪೋ ಮಹತ್ ।
ಅಣಿಮಾದಿಕಮೈಶ್ವರ್ಯಂ ತೇಷಾಂ ಸರ್ವಂ ದದೌ ಶಿವಃ ॥ ೩ ॥
ಅಬ್ರವೀದತ್ರ ಮೇ ನಿತ್ಯಂ ಸಾಂನಿಧ್ಯಂ ಚ ಭವಿಷ್ಯತಿ ॥ ೪ ॥
ಚೈತ್ರೇ ಶುಕ್ಲಚತುರ್ದಶ್ಯಾಂ ಯೋಽತ್ರ ಮಾಂ ಪೂಜಯಿಷ್ಯತಿ ।
ಸ ಯಾಸ್ಯತಿ ಪರಂ ಸ್ಥಾನಂ ಪ್ರಸಾದಾನ್ಮಮ ಪುಣ್ಯಕೃತ್ ॥ ೫ ॥
ಏವಮುಕ್ತ್ವಾಥ ಭಗವಾಜ್ಜಗಾಮಾದರ್ಶನಂ ತತಃ ।
ಸಿದ್ಧಾಶ್ಚೈವ ತದಾಗತ್ಯ ಪೂಜಯಂತಿ ಮಹೇಶ್ವರಂ ॥ ೬ ॥

ಕನ್ನಡದ ಅನುವಾದ

ಸಿದ್ಧೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ಪರ್ಣಾದಿತ್ಯನ ಪಶ್ಚಿಮದಲ್ಲಿ ಸಿದ್ಧರು ಪ್ರತಿಷ್ಠೆಮಾಡಿರುವ ಸಿದ್ಧೇಶ್ವರನೆಡೆಗೆ ಹೋಗಬೇಕು.

೨. ಸುಂದರಿ ! ಹಿಂದೆ ಸಿದ್ಧರೆಂಬ ಸುರರು ಸಕಲ ವಸ್ತುಗಳ ಸಿದ್ಧಿಗಾಗಿ ಅಲ್ಲಿಗೆ ಬಂದು ಲಿಂಗವನ್ನು ಪ್ರತಿಷ್ಠೆಮಾಡಿದರು.

೩. ಮಹಾದೇವಿ ! ಶಿವನು ಅವರ ಮಹಾ ತಪಸ್ಸನ್ನು ನೋಡಿ ಸಂತುಷ್ಟನಾಗಿ ಅವರಿಗೆ ಅಣಿಮಾದ್ಯೈಶ್ವರ್ಯವನ್ನಿತ್ತನು.

೪. ಮತ್ತು ಹೀಗೆಂದನು, "ನಾನಿಲ್ಲಿ ಯಾವಾಗಲೂ ಸನ್ನಿಹಿತನಾಗಿರುವೆನು.

೫. ಇಲ್ಲಿ ಚೈತ್ರಶುಕ್ಲ ತ್ರಯೋದಶೀದಿನ ನನ್ನನ್ನು ಪೂಜಿಸಿ ಪುಣ್ಯವಂತನಾದವನು ನನ್ನ ಅನುಗ್ರಹದಿಂದ ಉತ್ತಮಸ್ಥಾನವನ್ನು ಪಡೆಯುವನು".

೬. ಶಿವನು ಹೀಗೆಂದು ಹೇಳಿ ಅದೃಶ್ಯನಾದನು. ಆದುದರಿಂದ ಅದು ಮೊದಲ್ಗೊಂಡು ಸಿದ್ಧರು ಅಲ್ಲಿಗೆ ಬಂದು ಮಹೇಶ್ವರನನ್ನು ಪೂಜಿಸುತ್ತಾರೆ.

ಯಸ್ತಮಾರಾಧಯೇದ್ಭಕ್ತ್ಯಾ ಸಂಸಿದ್ಧಿಂ ಲಭತೇಽದ್ಭುತಾಂ ।
ಈಪ್ಸಿತಾಂ ಚ ಸುರಶ್ರೇಷ್ಠೇ ತಸ್ಮಾತ್ತಂ ಪೂಜಯೇತ್ಸದಾ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧೇಶ್ವರಮಾಹಾತ್ಮ್ಯ ವರ್ಣನಂ ನಾಮ
ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

---

೭. ಭಕ್ತಿಯಿಂದ ಆ ಶಿವನನ್ನು ಪೂಜಿಸಿದವನು ಇಷ್ಟಸಿದ್ಧಿಯನ್ನು ಪಡೆಯುವನು. ಆದುದರಿಂದ ಯಾವಾಗಲೂ ಅವನನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಿದ್ಧೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ನ್ಯಂಕುಮತೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯತ್ರ ನ್ಯಂಕುಮತೀ ನದೀ ।
ಮರ್ಯಾದಾರ್ಥಂ ಸಮಾನೀತಾ ಕ್ಷೇತ್ರಶಾಂತ್ಯೈ ಚ ಶಂಭುನಾ ॥ ೧ ॥
ತಸ್ಯೈವ ದಕ್ಷಿಣೇ ಭಾಗೇ ಸರ್ವಪಾಪಪ್ರಣಾಶಿನೀ ।
ತಸ್ಯಾಂ ಸ್ನಾತ್ವಾ ಚ ವೈ ಸಮ್ಯಗ್ಯಃ ಶ್ರಾದ್ಧಂ ಕುರುತೇ ನರಃ ।
ಸ ಪಿತ್ರ್ಂಸ್ತಾರಯೇತ್ಸರ್ವಾನ್ನರಕಾನ್ನಾತ್ರ ಸಂಶಯಃ ॥ ೨ ॥
ವೈಶಾಖೇ ಶುಕ್ಲಪಕ್ಷೇ ತು ತೃತೀಯಾಯಾಂ ಚ ಭಾಮಿನಿ ।
ಸ್ನಾತ್ವಾ ತು ತರ್ಪಯೇದ್ಭಕ್ತ್ಯಾ ತಿಲದರ್ಭಜಲೈಃ ಪ್ರಿಯೇ
ಶ್ರಾದ್ಧಂ ಕೃತಂ ಭವೇತ್ತೇನ ಗಂಗಾಯಾಂ ನಾತ್ರ ಸಂಶಯಃ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ನ್ಯಂಕುಮತೀಮಾಹಾತ್ಮ್ಯವರ್ಣನಂ ನಾಮ ಏಕಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ನ್ಯಂಕುಮತೀಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಆ ಸಿದ್ಧೇಶ್ವರನ ದಕ್ಷಿಣದಲ್ಲಿ ಮರ್ಯಾದೆಗಾಗಿಯೂ, ಕ್ಷೇತ್ರಶಾಂತಿಗಾಗಿಯೂ ಶಿವನುತಂದನ್ಯಂಕುಮತೀ ಎಂಬ ನದಿಯಿರುವುದು. ಅಲ್ಲಿ ಮಿಂದು ಶ್ರದ್ಧೆಯಿಂದ ಶ್ರಾದ್ಧಗೈದ ಮಾನವನು ಪಿತೃಗಳನ್ನು ಸಕಲ ನರಕಗಳಿಂದಲೂ ಉದ್ಧಾರಮಾಡುವನು.

೩. ಪ್ರಿಯಳೆ! ವೈಶಾಖ ಶುಕ್ಲಪಕ್ಷದ ತೃತೀಯಾದಿನ ಆ ನದಿಯಲ್ಲಿ ಮಿಂದು ಭಕ್ತಿಯಿಂದ ತಿಲ, ದರ್ಭಜಲಗಳಿಂದ ತರ್ಪಣಮಾಡಿದರೆ ಗಂಗೆಯಲ್ಲಿ ಶ್ರಾದ್ಧಮಾಡಿದಂತಾಗುವುದು. ಸಂದೇಹವಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ನ್ಯಂಕುಮತೀಮಾಹಾತ್ಮ್ಯ ವರ್ಣನವೆಂಬ ಇನ್ನೂಅರವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ವರಾಹಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ: —

ತತೋ ಗಚ್ಛೇನ್ಮಹಾದೇವಿ ವರಾಹಂ ತತ್ರ ಸಂಸ್ಥಿತಂ ।
ಗೋಷ್ಪದಾದ್ದಕ್ಷಿಣೇ ಭಾಗೇ ಸ್ಥಿತಂ ಪಾಪಪ್ರಣಾಶನಂ ॥ ೧ ॥
ಏಕಾದಶ್ಯಾಂ ಸಿತೇ ಪಕ್ಷೇ ಯಸ್ತಂ ಪೂಜಯತೇ ನರಃ ।
ಸ ಮುಕ್ತಃ ಪಾತಕೈಃ ಸರ್ವೈರ್ಗಚ್ಛೇದ್ವಿಷ್ಣುಪದಂ ಮಹತ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವರಾಹಾಸ್ವಾಮಿಮಾಹಾತ್ಮ್ಯವರ್ಣನಂ ನಾಮ
॥ ದ್ವಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ವರಾಹಸ್ವಾಮಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಗೋಷ್ಪದದಿಂದ ದಕ್ಷಿಣಭಾಗದಲ್ಲಿರುವ ಪಾಪವನ್ನು ನೀಗಿಸುವ ವರಾಹಸ್ವಾಮಿಯೆಡೆಗೆ ಹೋಗಬೇಕು.

೨. ಶುಕ್ಲಪಕ್ಷದ ಏಕಾದಶೀದಿನ ಅವನನ್ನು ಪೂಜಿಸಿದ ಮಾನವನು ಸಕಲ ಪಾಪಮುಕ್ತನಾಗಿ ವೈಕುಂಠವನ್ನು ಸೇರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವರಾಹಾಸ್ವಾಮಿಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಛಾಯಾಲಿಂಗಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಛಾಯಾಲಿಂಗಮಿತಿ ಸ್ಮೃತಂ ।
ಉತ್ತರೇ ನ್ಯಂಕುಮತ್ಯಾಶ್ಚ ಬಹ್ವಾಶ್ಚರ್ಯಂ ಮಹತ್ಫಲಂ ॥ ೧ ॥
ತಂ ದೃಷ್ಟ್ವಾ ಮಾನವೋ ದೇವಿ ಮುಚ್ಯತೇ ಪಂಚಪಾತಕೈಃ ।
ಸಾರ್ಧದ್ವಾದಶಹಸ್ತಂ ತು ಯೋಜನತ್ರಿತಯೇನ ತು ।
ನ ಪಶ್ಯಂತಿ ಮಹಾದೇವಿ ಪಾಪಿಷ್ಠಾ ಯೇ ತು ಮಾನವಾಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಛಾಯಾಲಿಂಗಮಾಹಾತ್ಮ್ಯವರ್ಣನಂ ನಾಮ
ತ್ರಿಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಛಾಯಾಲಿಂಗಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ನ್ಯಂಕುಮತಿಯ ಉತ್ತರದಲ್ಲಿರುವುದೂ, ಅತ್ಯಾಶ್ಚರ್ಯಕರವಾದುದೂ, ಅತಿಶಯಫಲವನ್ನೀಯುವುದೂ ಆದ ಛಾಯಾಲಿಂಗದೆಡೆಗೆ ಹೋಗಬೇಕು.

೨. ಮೂರುಯೋಜನದ ಹನ್ನೆರಡುವರೆ ಹಸ್ತಪ್ರಮಾಣದ ಆ ಲಿಂಗವನ್ನು ನೋಡಿದ ಮಾನವನು ಪಂಚಪಾತಕಗಳಿಂದ ಮುಕ್ತನಾಗುವನು. ಆ ಲಿಂಗವನ್ನು ದರ್ಶನಮಾಡದ ಮಾನವರು ಪಾಪಿಷ್ಠರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಛಾಯಾಲಿಂಗಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ನಂದಿನೀಗುಫಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಾ ದೇವಿ ಗುಫಾ ಪಾತಕನಾಶಿನೀ ।
ಋಷೀಣಾಂ ಸಂಸ್ಥಿತಿರ್ಯತ್ರ ಸಿದ್ಧಾನಾಂ ಪುಣ್ಯಚೇತಸಾಂ ॥ ೧ ॥
ತತ್ರ ಗತ್ವಾ ಮಹಾದೇವಿ ಗುಫಾಂ ಯಃ ಪಶ್ಯತೇ ನರಃ ।
ಸ ಮುಕ್ತಃ ಸರ್ವಪಾಪೇಭ್ಯಶ್ಚಾಂದ್ರಾಯಣಫಲಂ ಲಭೇತ್ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಂದಿನೀಗುಫಾಮಾಹಾತ್ಮ್ಯವರ್ಣನಂ ನಾಮ
॥ ಚತುಃಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ನಂದಿನೀಗುಫಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಋಷಿಗಳೂ, ಪುಣ್ಯವಂತರಾದ ಸಿದ್ಧರೂ ನೆಲೆಸಿರುವ ಅಲ್ಲಿ ಪಾಪವನ್ನು ಪರಿಹರಿಸುವ ನಂದಿನೀಗುಫೆಯು ಇರುವಳು.

೨. ಮಹಾದೇವಿ ! ಆ ಗುಫೆಯನ್ನು ನೋಡಿದ ಮಾನವನು ಸಕಲ ಪಾಪಗಳಿಂದ ಮುಕ್ತನಾಗಿ ಚಾಂದ್ರಾಯಣ ಫಲವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಂದಿನೀಗುಫಾಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕನಕನಂದಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಐಶಾನ್ಯಾಂ ದಿಶಿ ಸಂಸ್ಥಿತಾಂ ।
ದೇವೀಂ ಕನಕನಂದಾಖ್ಯಾಂ ಸರ್ವಕಾಮಫಲಪ್ರದಾಂ ॥ ೧ ॥
ತತ್ರ ಶುಕ್ಲತೃತೀಯಾಯಾಂ ಚೈತ್ರೇ ಮಾಸಿ ವಿಧಾನತಃ ।
ಯಾತ್ರಾಂ ಕುರ್ಯಾಚ್ಚ ಮತಿಮಾನ್ಸರ್ವಕಾಮಮವಾಪ್ನುಯಾತ್ ॥ ೨ ॥

ಇತಿ ಶ್ರೀ ಸ್ಕಾಂದೇಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕನಕನಂದಾಮಾಹಾತ್ಮ್ಯವರ್ಣನಂ ನಾಮ
ಪಂಚಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕನಕನಂದಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಅನಂತರ ಈಶಾನ್ಯದಿಕ್ಕಿನಲ್ಲಿರುವ ಸಕಲೇಷ್ಟಾರ್ಥಗಳನ್ನೀಯುವ ಕನಕನಂದಾದೇವಿಯೆಡೆಗೆ ಹೋಗಬೇಕು.

೨. ಅಲ್ಲಿ ಚೈತ್ರಶುಕ್ಲ ತದಿಗೆ ದಿನ ವಿಧಿಯಿಂದ ಯಾತ್ರೆಮಾಡಿದವನು ಸಕಲೇಷ್ಟಾರ್ಥಗಳನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕನಕನಂದಾಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತೈದನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಷಟ್ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕುಂಭೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ:—

ತತೋ ಗಚ್ಛೇನ್ಮಹಾದೇವಿ ಕುಂಭೀಶ್ವರಮನುತ್ತಮಂ ।
ಶರಭಸ್ಥಾನತಃ ಪೂರ್ವೇ ನಾತಿದೂರೇ ವ್ಯವಸ್ಥಿತಂ
ತಂ ದೃಷ್ಟ್ವಾ ಮಾನವೋ ದೇವಿ ಮುಚ್ಯತೇ ಸರ್ವಪಾತಕೈಃ ॥ ೧ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಂಭೀಶ್ವರಮಾಹಾತ್ಮ್ಯವರ್ಣನಂ ನಾಮ
ನವಚತುಷ್ಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕುಂಭೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :— ಮಹಾದೇವಿ ! ಬಳಿಕ ಶಬರಸ್ಥಾನದ ಸಮೀಪದಲ್ಲಿರುವ ಕುಂಭೀಶ್ವರನೆಡೆಗೆ ಹೋಗಬೇಕು. ಅವನನ್ನು ನೋಡಿದ ಮಾನವನು ಸಕಲ ಪಾಪಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಂಭೀಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಗಂಗಾಪಥಗಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸ್ಥಾನಂ ಗಂಗಾಪಥೇತಿ ಚ ।
ಯತ್ರ ಗಂಗಾ ಮಹಾಸ್ರೋತಾ ಗಂಗೇಶ್ವರಃ ಶಿವಸ್ತಥಾ ॥ ೧ ॥
ಸಮುದ್ರಗಾಮಿನೀ ದೇವಿ ಸಾ ಗಂಗಾ ಪಾಪನಾಶಿನೀ ।
ಉತ್ತಾನೇತಿ ಭುವಿ ಖ್ಯಾತಾ ನದೀ ತ್ರೈಲೋಕ್ಯಭೂಷಣಾ ॥ ೨ ॥
ತತ್ರ ಸ್ನಾತ್ವಾ ಮಹಾದೇವಿ ಗಂಗೇಶಂ ಯಸ್ತು ಪೂಜಯೇತ್ ।
ಮುಕ್ತಃ ಸ್ಯಾತ್ಪಾತಕೈರ್ಘೋರೈರಶ್ವಮೇಧಾಯುತಂ ಲಭೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಗಂಗಾಪಥಗಂಗೇಶ್ವರಮಾಹಾತ್ಮ್ಯವರ್ಣನಂನಾಮ ॥ ಸಪ್ತಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಗಂಗಾಪಥಗಂಗೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:—ಮಹಾದೇವಿ! ಅನಂತರ ಸಮುದ್ರವನ್ನು ಸೇರುವ ಉತ್ತಾನವೆಂದು ಭೂಮಿಯಲ್ಲಿ ಪ್ರಸಿದ್ಧವಾದ ಗಂಗೆಯೂ, ಗಂಗೇಶನಾದ ಶಿವನೂ ನೆಲೆಸಿರುವ ಕ್ಷೇತ್ರದೆಡೆಗೆ ಹೋಗಬೇಕು.

೩. ಮಹಾದೇವಿ! ಅಲ್ಲಿ ಮಿಂದು ಗಂಗೇಶನನ್ನು ಪೂಜಿಸಿದ ಮಾನವನು ಘೋರಪಾತಕಗಳಿಂದ ಮುಕ್ತನಾಗಿ ಹತ್ತು ಸಾವಿರ ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಗಂಗಾಪಥಗಂಗೇಶ್ವರಮಾಹಾತ್ಮ್ಯವರ್ಣನವೆಂಬ ಇನ್ನೂರಅರುವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಷಷ್ಟ್ಯುತ್ತರದ್ವಿಶತತಮೋಽಧ್ಯಾಯಃ

ಚಮಸೋದ್ಭೇದಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚಮಸೋದ್ಭೇದಮುತ್ತಮಂ ।
ಯತ್ರ ಬ್ರಹ್ಮಾಕರೋತ್ಸತ್ರಂ ವರ್ಷಾಣಾಮಯುತಂ ಪ್ರಿಯೇ ॥ ೧ ॥
ಚಮಸೈಃ ಪೀತವಂತಸ್ತೇ ಸೋಮಂ ದೇವಾ ಮಹರ್ಷಯಃ ।
ಚಮಸೋದ್ಭೇದನಾಮೇತಿ ತೇನ ಖ್ಯಾತಂ ಧರಾತಲೇ ॥ ೨ ॥
ತತ್ರ ಸ್ನಾತ್ವಾ ಸರಸ್ವತ್ಯಾಂ ಪಿಂಡದಾನಂ ದದಾತಿ ಯಃ ।
ಗಯಾಕೋಟಿಗುಣಂ ಪುಣ್ಯಂ ವೈಶಾಖ್ಯಾಂ ಪ್ರಾಪ್ನುಯಾನ್ನರಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಮಸೋದ್ಭೇದಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಷಷ್ಟ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಚಮಸೋದ್ಭೇದಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಉತ್ತಮವಾದ ಚಮಸೋದ್ಭೇದ ತೀರ್ಥಕ್ಕೆ ಹೋಗಬೇಕು. ಪ್ರಿಯಳೆ! ಇಲ್ಲಿ ಬ್ರಹ್ಮನು ಹತ್ತು ಸಾವಿರ ವರ್ಷಕಾಲ ಸತ್ರವನ್ನು ಮಾಡಿರುವನು.

೨. ದೇವತೆಗಳು ಇಲ್ಲಿ ಚಮಸಗಳಿಂದ ಸೋಮಗಳನ್ನು ಪಾನಮಾಡಿರುವುದರಿಂದ ಇದಕ್ಕೆ ಚಮಸೋದ್ಭೇದ ಎಂದು ಹೆಸರು ಪ್ರಖ್ಯಾತವಾಯಿತು.

೩. ವೈಶಾಖಮಾಸದ ಪೂರ್ಣಿಮಾದಿನ ಅಲ್ಲಿ ಮಿಂದು ಪಿಂಡಪ್ರದಾನಮಾಡಿದವನು ಗಯೆಯಲ್ಲಿ ಪಿಂಡಪ್ರದಾನಮಾಡಿದ್ದಕ್ಕಿಂತ ಕೋಟಿಯಷ್ಟು ಪುಣ್ಯವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಮಸೋದ್ಭೇದಮಾಹಾತ್ಮ್ಯ ವರ್ಣನೆಂಬ
ಇನ್ನೂರಅರುವತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ ।

ಏಕೋನಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ವಿದುರಾಶ್ರಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿದುರಸ್ಯಾಶ್ರಮಂ ಮಹತ್ ।
ಯತ್ರಾಕರೋತ್ತಪೋ ರೌದ್ರಂ ವಿದುರೋ ಧರ್ಮಮೂರ್ತಿಮಾನ್ ॥ ೧ ॥
ಪ್ರತಿಷ್ಠಾಪ್ಯ ಮಹಾದೇವಂ ಲಿಂಗಂ ತ್ರಿಭುವನೇಶ್ವರಂ ।
ತಂ ದೃಷ್ಟ್ವಾ ಮಾನವೋ ದೇವಿ ಸರ್ವಾನ್ಕಾಮಾನವಾಪ್ನುಯಾತ್ ॥ ೨ ॥
ವಿದುರಾಟ್ಟಾಲಕಂ ನಾಮ ಗಣಗಂಧರ್ವಸೇವಿತಂ ।
ದ್ವಾದಶಸ್ಥಾನಕಂ ಸ್ಥಾನಂ ನಾಲ್ಪಪುಣ್ಯೇನ ಲಭ್ಯತೇ ॥ ೩ ॥
ನಾವರ್ಷಣಂ ಭವೇತ್ತತ್ರ ಕದಾಚಿದಪಿ ಪಾರ್ವತಿ ।
ಲಿಂಗಾನಿ ತತ್ರ ದಿವ್ಯಾನಿ ಪಶ್ಯೇತ್ಪಾಪೋಪಶಾಂತಯೇ ॥ ೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ವಿದುರಾಶ್ರಮಮಾಹಾತ್ಮ್ಯವರ್ಣನಂನಾಮ
॥ ಏಕೋನಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ವಿದುರಾಶ್ರಮಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ವಿದುರಾಶ್ರಮಕ್ಕೆ ಹೋಗಬೇಕು. ಅಲ್ಲಿ ಧರ್ಮಮೂರ್ತಿಯಾದ ವಿದುರನು ಮಹೇಶ್ವರಲಿಂಗವನ್ನು ಪ್ರತಿಷ್ಠೆಮಾಡಿ ಘೋರತಪಸ್ಸನ್ನು ಮಾಡಿರುವನು. ಆ ಲಿಂಗವನ್ನು ದರ್ಶನಮಾಡಿದ ಮಾನವನು ಸಕಲೇಷ್ಟಾರ್ಥಗಳನ್ನು ಪಡೆಯುವನು.

೩. ಹನ್ನೆರಡು ಪ್ರದೇಶಗಳುಳ್ಳ ಗಣಗಂಧರ್ವರಿಂದ ಸೇವಿತವಾದ ವಿದುರಾಟ್ಟಾಲಕವೆಂಬ ಪ್ರದೇಶವು ಅಲ್ಪ ಪುಣ್ಯಮಾಡಿದ ಮಾನವರಿಂದ ಹೊಂದಲಶಕ್ಯವಾದುದು.

೪. ಪಾರ್ವತಿ ! ಅಲ್ಲಿ ಒಂದುಸಲವೂ ಅನಾವೃಷ್ಟಿಯುಂಟಾಗುವುದಿಲ್ಲ. ಅಲ್ಲಿರುವ ದಿವ್ಯ ಲಿಂಗಗಳನ್ನು ಪಾಪಪರಿಹಾರಕ್ಕಾಗಿ ದರ್ಶನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ವಿದುರಾಶ್ರಮಮಾಹಾತ್ಮ್ಯವರ್ಣನವೆಂಬ
ಇನ್ನೂರಅರುವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಪ್ರಾಚೀಸರಸ್ವತೀ ಮಂಕೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಯತ್ರ ಪ್ರಾಚೀ ಸರಸ್ವತೀ ।
ತತ್ರ ಸ್ಥಾನೇ ಸ್ಥಿತಂ ಲಿಂಗಂ ಮಂಕೀಶ್ವರಮಿತಿ ಶ್ರುತಂ ॥ ೧ ॥

ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಸರ್ವಪಾತಕನಾಶಿನೀಂ ।
ಶೃಣು ದೇವಿ ಮಹಾಭಾಗೇ ಹ್ಯಾಶ್ಚರ್ಯಂ ಯದಭೂತ್ಪುರಾ ॥ ೨ ॥

ಋಷಿರ್ಮಂಕಣಕೋನಾಮ ಸ ತೇಪೇ ಪರಮಂ ತಪಃ ।
ಪ್ರಾಚೀಮೇತ್ಯ ಯತಾಹಾರೋ ನಿತ್ಯಂ ಸ್ವಾಧ್ಯಾಯತತ್ಪರಃ ॥ ೩ ॥

ಬಹುವರ್ಷಸಹಸ್ರಾಣಿ ತಸ್ಯಾತೀತಾನಿ ಭಾಮಿನಿ ।
ಕಸ್ಯ ಚಿತ್ತ್ವಥ ಕಾಲಸ್ಯ ವಿದ್ಧಾದಸ್ಯ ವರಾನನೇ ॥ ೪ ॥

ಕನ್ನಡದ ಅನುವಾದ

ಪ್ರಾಚೀಸರಸ್ವತೀ ಮಂಕೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ;—ಮಹಾದೇವಿ ! ಬಳಿಕ ಪ್ರಾಚೀಸರಸ್ವತಿಯ ಸಮೀಪದಲ್ಲಿರುವ ಮಂಕೀಶ್ವರನೆಡೆಗೆ ಹೋಗಬೇಕು.

೨. ಸಕಲ ಪಾಪಗಳನ್ನು ನೀಗಿಸುವ ಆ ಮಂಕೀಶ್ವರನ ಆಶ್ಚರ್ಯಕರವಾದ ಉತ್ಪತ್ತಿಯನ್ನು ಹೇಳುವೆನು, ಕೇಳು.

೩. ಮಂಕಣಕನೆಂಬ ಋಷಿಯು ಪ್ರಾಚೀನ ಸರಸ್ವತಿಯನ್ನು ಹೊಂದಿ ಯಾವಾಗಲೂ ವೇದಾಧ್ಯಯನನಿರತನಾಗಿ ಉಪವಾಸದಿಂದ ಉತ್ತಮ ತಪಸ್ಸನ್ನು ಮಾಡಿದನು.

೪–೫. ಪ್ರಿಯಳೆ ! ಹೀಗೆ ಅವನು ತಪಸ್ಸನ್ನು ಮಾಡುತ್ತಿರಲು ಅನೇಕ ವರ್ಷಗಳು ಕಳೆದುವು. ಒಂದಾನೊಂದುದಿನ ದರ್ಭೆಯ ಕೊನೆಯಿಂದ ಚುಚ್ಚಲ್ಪಟ್ಟ

ಕರಾಚ್ಛಾಕರಸೋ ಜಾತಃ ಕುಶಾಗ್ರೇಣೇತಿ ನಃ ಶ್ರುತಂ ।
ಸ ತಂ ದೃಷ್ಟ್ವಾ ಮಹಾಶ್ಚರ್ಯಂ ವಿಸ್ಮಯಂ ಪರಮಂ ಗತಃ ॥ ೫ ॥
ಮೇನೇ ಸಿದ್ಧಿಂ ಪರಾಂ ಪ್ರಾಪ್ತೋ ಹರ್ಷಾನ್ನೃತ್ಯಮಥಾಕರೋತ್ ।
ತಸ್ಮಿನ್ಸಂನೃತ್ಯಮಾನೇ ಚ ಜಗತ್ಸ್ಥಾವರಜಂಗಮಂ ॥ ೬ ॥
ಅನರ್ತತ ವರಾರೋಹೇ ಪ್ರಭಾವಾತ್ತಸ್ಯ ವೈ ಮುನೇಃ ।
ತತೋ ದೇವಾ ಮಹೇಂದ್ರಾದ್ಯಾ ಬ್ರಹ್ಮವಿಷ್ಣುಪುರಸ್ಸರಾಃ ।
ಊಚುಸ್ತ್ರಿಪುರಹಂತಾರಂ ನಾಯಂ ನೃತ್ಯೇತ್ತಥಾ ಕುರು ॥ ೭ ॥
ಚಲಿತಾಃ ಪರ್ವತಾಃ ಸ್ಥಾನಾತ್ಕ್ಷುಭಿತೋ ಮಕರಾಲಯಃ ।
ಧರಣೀ ಖಂಡಶೋ ದೇವ ವೃಕ್ಷಾಶ್ಚ ನಿಧನಂ ಗತಾಃ ॥ ೮ ॥
ಉತ್ಪಥಾಶ್ಚ ಮಹಾನದ್ಯೋ ಗ್ರಹಾ ಉನ್ಮಾರ್ಗಸಂಸ್ಥಿತಾಃ ।
ತ್ರೈಲೋಕ್ಯಂ ವ್ಯಾಕುಲೀಭೂತಂ ಯಾವತ್ಪ್ರಾಪ್ನೋತಿ ಸಂಕ್ಷಯಂ ॥ ೯ ॥
ತಾವನ್ನಿವಾರಯಸ್ವೈನಂ ನಾನ್ಯಃ ಶಕ್ತೋ ನಿವಾರಣೇ ॥ ೧೦ ॥
ಸ ತಥೇತಿ ಪ್ರತಿಜ್ಞಾಯ ಗತ್ವಾ ತಸ್ಯ ಸಮೀಪತಃ ।
ದ್ವಿಜರೂಪಂ ಸಮಾಸ್ಥಾಯ ತಮೃಷಿಂ ವಾಕ್ಯಮಬ್ರವೀತ್ ॥ ೧೧ ॥

ಅವನ ಕೈಯಿಂದ ಶಾಕರಸವುಂಟಾಯಿತೆಂದು ನಾವು ಕೇಳಿದೆವು ಅವನು ಅದನ್ನು ಕಂಡು ಅತ್ಯಾಶ್ಚರ್ಯಗೊಂಡನು.

೬–೭. ಆದರಿಂದ ಆ ಮಂಕಣ ಮುನಿಯು ತಾನು ಉತ್ತಮ ಸಿದ್ಧಿಯನ್ನು ಪಡೆದೆನೆಂದರಿತು ಕುಣಿದನು. ಅವನು ಹೀಗೆ ಕುಣಿಯುತ್ತಿರಲು ಪ್ರಿಯಳೆ! ಸ್ಥಾವರ ಜಂಗಮಾತ್ಮಕ ಪ್ರಪಂಚವೂ ಅವನ ಪ್ರಭಾವದಿಂದ ಕುಣಿಯಿತು. ಬಳಿಕ ಮಹೇಂದ್ರಾದಿ ದಿವಿಜರು ಬ್ರಹ್ಮವಿಷ್ಣುಗಳೊಡನೆ ಮಹೇಶ್ವರನನ್ನು ಕುರಿತು ಈ ಮುನಿಯು ಕುಣಿಯದಂತೆ ಮಾಡೆಂದರು.

೮. ಆ ಮಂಕಣನ ನೃತ್ಯದಿಂದ ಪರ್ವತಗಳು ತಮ್ಮ ಸ್ಥಾನವನ್ನು ಬಿಟ್ಟವು. ಸಮುದ್ರವು ಅಲ್ಲೋಲಕಲ್ಲೋಲವಾಯಿತು. ಭೂಮಿಯು ಸೀಳಿತು. ದೇವತೆಗಳ ಕಲ್ಪವೃಕ್ಷಾದಿಗಳು ಸೊರಗಿ ಹೋದುವು.

೯–೧೦. ಮಹಾನದಿಗಳು ದಾರಿ ತಪ್ಪಿದುವು. ಗ್ರಹಗಳು ಬೇರೆ ಮಾರ್ಗಗಳಲ್ಲಿ ನೆಲೆಸಿದುವು. ಮೂರುಲೋಕಗಳು ವ್ಯಾಕುಲಗೊಂಡುವು. ಅವು ನಾಶವಾಗುವುದರೊಳಗೆ ನೀನು ತಡೆ. ಇದನ್ನು ಬೇರೆ ಯಾರೂ ತಡೆಯಲು ಶಕ್ತರಲ್ಲ.

೧೧. ಮಹೇಶ್ವರನು ದೇವತೆಗಳ ಮಾತನ್ನು ಒಪ್ಪಿ ಬ್ರಾಹ್ಮಣರೂಪದಿಂದ ಆ ಮುನಿಯ ಹತ್ತಿರ ಹೋಗಿ ಅವನನ್ನು ಕುರಿತು ಇಂತೆಂದನು.

ಕೋ ಹರ್ಷವಿಷಯಃ ಕಸ್ಮಾತ್ತ್ವಯೈತನ್ನೃತ್ಯತೇ ದ್ವಿಜ ।
ತಸ್ಮಾತ್ಕಾರ್ಯಂ ವದಾಶು ತ್ವಂ ಪರಂ ಕೌತೂಹಲಂ ಹಿನಃ ॥ ೧೨ ॥

ಋಷಿರುವಾಚ :—

ಕಿಂ ನ ಪಶ್ಯಸಿ ಮೇ ಬ್ರಹ್ಮನ್ಕರಾಚ್ಛಾಕರಸಂ ಚ್ಯುತಂ ।
ಅತ ಏವ ಹಿ ಮೇ ನೃತ್ಯಂ ಸಿದ್ಧೋಽಹಂ ನಾತ್ರ ಸಂಶಯಃ ॥ ೧೩ ॥

ಈಶ್ವರ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ಭಗವಾಂಸ್ತ್ರಿಪುರಾಂತಕಃ ।
ಅಂಗುಷ್ಠಂ ತಾಡಯಾಮಾಸ ಅಂಗುಲ್ಯಗ್ರೇಣ ಭಾಮಿನಿ ॥ ೧೪ ॥
ತತೋ ವಿನಿರ್ಗತಂ ಭಸ್ಮ ತತ್ಕ್ಷಣಾದ್ಧಿಮಪಾಂಡುರಂ ।
ಅಥಾಬ್ರವೀತ್ಪ್ರಹಸ್ಯೈನಂ ಭಗವಾನ್ಭೂತಭಾವನಃ ॥ ೧೫ ॥
ಪಶ್ಯ ಮೇಽಙ್ಗುಷ್ಠತೋ ಬ್ರಹ್ಮನ್ಭೂರಿ ಭಸ್ಮ ವಿನಿರ್ಗತಂ ।
ನ ನೃತ್ಯೇಽಹಂ ನ ಮೇ ಹರ್ಷಸ್ತಥಾಪಿ ಮುನಿಸತ್ತಮ ॥ ೧೬ ॥
ತದ್ದೃಷ್ಟ್ವಾ ಸುಮಹಾಶ್ಚರ್ಯಂ ವಿಸ್ಮಯಂ ಪರಮಂ ಗತಃ ।
ಅಬ್ರವೀತ್ಪ್ರಾಂಜಲಿರ್ಭೂತ್ವಾ ಹರ್ಷಗದ್ಗದಯಾ ಗಿರಾ ॥ ೧೭ ॥

---

೧೨. "ಬ್ರಾಹ್ಮಣ ನೀನು ಕುಣಿಯುತ್ತಿರುವೆಯಲ್ಲ. ಇದಕ್ಕೆ ಕಾರಣವೇನು? ಅದರಿಂದಾಗುವ ಪ್ರಯೋಜನವನ್ನು ಶೀಘ್ರವಾಗಿ ಹೇಳು. ನನಗೆ ಬಹಳ ಕುತೂಹಲ ವುಂಟಾಗಿದೆ."

೧೩. ಋಷಿಯು ಹೇಳುತ್ತಾನೆ:—ದ್ವಿಜ! ನನ್ನ ಕೈಯಿಂದ ಶಾಕರಸವು ಸುರಿದಿರುವುದನ್ನು ನೀನು ನೋಡಲಿಲ್ಲವೊ? ನಾನು ಸಿದ್ಧನಾದೆನೆಂದು ಕುಣಿಯುತ್ತಿದ್ದೇನೆ.

೧೪. ಈಶ್ವರನು ಹೇಳುತ್ತಾನೆ:—ಪೂಜ್ಯನಾದ ಶಿವನು ಅವನ ಆ ಮಾತನ್ನು ಕೇಳಿ ಬೆರಳಿನ ಕೊನೆಯಿಂದ ಅಂಗುಷ್ಠವನ್ನು ಹೊಡೆದನು.

೧೫. ತರುವಾಯ ಕೂಡಲೆ ಆ ಅಂಗುಷ್ಠದಿಂದ ಹಿಮದಂತೆ ಬೆಳ್ಳಗಿರುವ ಭಸ್ಮವು ಹೊರಟಿತು. ಶಂಕರನು ನಕ್ಕು ಆ ಮುನಿಯನ್ನು ಕುರಿತು ಹೀಗೆಂದನು.

೧೬. ಬ್ರಾಹ್ಮಣ! ನನ್ನ ಅಂಗುಷ್ಠದಿಂದ ಬಹಳ ಭಸ್ಮವು ಹೊರಟಿದೆ. ಹಾಗಾದರೂ ನಾನು ಕುಣಿಯುವುದಿಲ್ಲ. ನನಗೆ ಸಂತೋಷವೂ ಇಲ್ಲ.

೧೭. ಆ ಮಂಕಣನು ಆ ಆಶ್ಚರ್ಯವನ್ನು ನೋಡಿ ವಿಸ್ಮಯಗೊಂಡು ಕೈಮುಗಿದು ಸಂತೋಷದಿಂದ ಗದ್ಗದವಾದ ಮಾತಿನಿಂದ ಹೀಗೆಂದನು.

ನಾನ್ಯಂ ದೇವಮಹಂ ಮನ್ಯೇ ತ್ವಾಂ ಮುಕ್ತ್ವಾ ವೃಷಭಧ್ವಜಂ ।
ನಾನ್ಯಸ್ಯ ವಿದ್ಯತೇ ಶಕ್ತಿರೀದೃಶೀ ಧರಣೀತಲೇ ॥ ೧೮ ॥

ಭಗವಾನುವಾಚ :—

ಜ್ಞಾತೋಽಸ್ಮಿ ಮುನಿಶಾರ್ದೂಲ ತ್ವಯಾ ವೇದವಿದಾಂ ವರ ।
ವರಂ ವರಯ ಭದ್ರಂ ತೇ ನಿತ್ಯಂ ಯನ್ಮನಸೇಪ್ಸಿತಂ ॥ ೧೯ ॥

ಋಷಿರುವಾಚ :—

ಪ್ರಸಾದಾದ್ದೇವದೇವಸ್ಯ ನೃತ್ಯೇನ ಮಹತಾ ವಿಭೋ ।
ಯಥಾ ನ ಸ್ಯಾತ್ತಪೋಹಾನಿಸ್ತಥಾ ನೀತಿರ್ವಿಧೀಯತಾಂ ॥ ೨೦ ॥

ಶಂಭುರುವಾಚ :—

ತಪಸ್ತೇ ವರ್ಧತಾಂ ವಿಪ್ರ ಮತ್ಪ್ರಸಾದಾತ್ಸಹಸ್ರಧಾ ।
ಪ್ರಾಚೀಮನ್ವಿಹ ವತ್ಸ್ಯಾಮಿ ತ್ವಯಾ ಸಾರ್ಧಮಹಂ ಸದಾ ॥ ೨೧ ॥
ಸರಸ್ವತೀ ಮಹಾಪುಣ್ಯಾ ಕ್ಷೇತ್ರೇ ಚಾಸ್ಮಿನ್ವಿಶೇಷತಃ ।
ಸರಸ್ವತ್ಯುತ್ತರೇ ತೀರೇ ಯಸ್ತ್ಯಜೇದಾತ್ಮನಸ್ತನುಂ ॥ ೨೨ ॥
ಪ್ರಾಚೀನೇ ಹ್ಯೃಷಿಶಾರ್ದೂಲ ನ ಚೇಹಾಗಚ್ಛತೇ ಪುನಃ ।
ಆಪ್ಲುತೋ ವಾಜಿಮೇಧಸ್ಯ ಫಲಂ ಪ್ರಾಪ್ನೋತಿ ಪುಷ್ಕಲಂ ॥ ೨೩ ॥

---

೧೮. "ನೀನು ಮಹೇಶ್ವರನಲ್ಲದೆ ಇತರ ದೇವತೆಯಲ್ಲ. ಭೂಮಿಯಲ್ಲಿ ಇತರರಿಗೆ ಇಂತಹ ಶಕ್ತಿಯಿಲ್ಲ."

೧೯. ಭಗವಂತನು ಹೇಳುತ್ತಾನೆ :—ವೇದಜ್ಞರಲ್ಲಿ ಶ್ರೇಷ್ಠನಾದ ಮುನಿವರ್ಯನೆ! ನಿನ್ನನ್ನರಿತಿರುವನು. ನಿನಗಿಷ್ಟವಾದ ವರವನ್ನು ಕೇಳಿಕೊ.

೨೦. ಋಷಿಯು ಹೇಳುತ್ತಾನೆ :—ನನ್ನೀ ಕುಣಿತದಿಂದ ನನ್ನ ತಪಸ್ಸು ಕೆಡದಂತೆ ನೀನು ಅನುಗ್ರಹಿಸು.

೨೧. ಶಿವನು ಹೇಳುತ್ತಾನೆ:—ಬ್ರಾಹ್ಮಣ! ನನ್ನ ಅನುಗ್ರಹದಿಂದ ನಿನ್ನ ತಪಸ್ಸು ಸಾವಿರ ಪ್ರಕಾರವಾಗಿ ಹೆಚ್ಚಲಿ. ನಾನು ನಿನ್ನೊಡನೆ ಈ ಪ್ರಾಚೀಸರಸ್ವತಿಯ ಹತ್ತಿರದಲ್ಲಿಯೇ ನೆಲೆಸುವೆನು.

೨೨–೨೩. ಈ ಕ್ಷೇತ್ರದಲ್ಲಿರುವ ಸರಸ್ವತೀನದಿಯು ಅತ್ಯಂತ ಪವಿತ್ರವಾದುದು. ಈ ನದಿಯ ಉತ್ತರ ದಡದಲ್ಲಿ ದೇಹವನ್ನು ತ್ಯಜಿಸಿದವನು ಮರಳಿ ಜನಿಸುವುದಿಲ್ಲ. ಇಲ್ಲಿ ಮಿಂದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

ನಿಯಮೈಶ್ಚೋಪವಾಸೈಶ್ಚ ಶೋಷಯನ್ತೇಹಮಾತ್ಮನಃ ।
ಜಲಾಹಾರಾ ವಾಯುಭಕ್ಷಾಃ ಪರ್ಣಾಹಾರಾಶ್ಚ ತಾಪಸಾಃ ।
ತಥಾ ಚ ಸ್ಥಂಡಿಲಶಯಾ ಯೇ ಚಾನ್ಯೇ ನಿಯತಾಃ ಪೃಥಕ್ ॥ ೨೪ ॥
ಯೇ ಸ್ನಾನಮಾಚರಿಷ್ಯಂತಿ ತೀರ್ಥೇಽಸ್ಮಿನ್ನಿಯಮಾನ್ವಿತಾಃ ।
ತೇ ಯಾಂತಿ ಪರಮಾಂ ಸಿದ್ಧಿಂ ಬ್ರಹ್ಮಣಃ ಪರಮಂ ಪದಂ ॥ ೨೫ ॥
ಅಸ್ಮಿಂಸ್ತೀರ್ಥೇ ತು ಯೋ ದಾನಂ ತ್ರುಟಿಮಾತ್ರಂ ಚ ಕಾಂಚನಂ ।
ದದಾತಿ ದ್ವಿಜಮುಖ್ಯಾಯ ಮೇರುತುಲ್ಯಂ ಭವೇತ್ಫಲಂ ॥ ೨೬ ॥
ಅಸ್ಮಿಂಸ್ತೀರ್ಥೇ ತು ಯೇ ಶ್ರಾದ್ಧಂ ಕರಿಷ್ಯಂತೀಹ ಮಾನವಾಃ ।
ಏಕವಿಂಶತ್ಕುಲೋಪೇತಾಃ ಸ್ವರ್ಗಂಯಾಸ್ಯಂತಿ ತೇ ಧ್ರುವಂ ॥ ೨೭ ॥
ಪಿತೄಣಾಂ ವಲ್ಲಭಂ ತೀರ್ಥಂ ಪಿಂಡೇನೈಕೇನ ತರ್ಪಿತಾಃ ।
ಬ್ರಹ್ಮಲೋಕಂ ಗಮಿಷ್ಯಂತಿ ಸುಪುತ್ರೇಣೇಹ ತಾರಿತಾಃ ॥ ೨೮ ॥
ಭೂಯಶ್ಚಾನ್ನಂ ಪ್ರಯಚ್ಛಂತಿ ಮೋಕ್ಷಮಾರ್ಗಂ ವ್ರಜಂತಿ ತೇ ॥ ೨೯ ॥

---

೨೪. ಇಲ್ಲಿ ಜಲಾಹಾರಿಗಳೂ, ವಾಯುಭಕ್ಷರೂ, ಪರ್ಣಾಹಾರಿಗಳೂ, ಭೂಶಾಯಿಗಳೂ ಆದ ತಾಪಸರು ನಿಯಮೋಪವಾಸಗಳಿಂದ ತಮ್ಮ ದೇಹವನ್ನು ಒಣಗಿಸುತ್ತ ನೆಲೆಸಿರುವರು.

೨೫. ಈ ತೀರ್ಥದಲ್ಲಿ ನಿಯಮದಿಂದ ಮಿಂದವರು ಉತ್ತಮಸಿದ್ಧಿಯನ್ನು ಪಡೆದು ಉತ್ತಮವಾದ ಬ್ರಹ್ಮನಸ್ಥಾನವನ್ನು ಸೇರುವರು.

೨೬. ಈ ತೀರ್ಥದಲ್ಲಿ ತ್ರ್ಯಣುಕದಷ್ಟು ಸುವರ್ಣವನ್ನು ಬ್ರಾಹ್ಮಣಶ್ರೇಷ್ಠನಿಗೆ ದಾನಮಾಡಿದವನು ಮೇರುವಿನಷ್ಟು ಫಲವನ್ನು ಪಡೆಯುವನು.

೨೭. ಈ ತೀರ್ಥದಲ್ಲಿ ಶ್ರಾದ್ಧಗೈದವರು ಇಪ್ಪತ್ತೊಂದು ಕುಲದವರೊಡನೆ ಸ್ವರ್ಗಕ್ಕೆ ತೆರಳುವರು.

೨೮. ಪಿತೃಗಳಿಗೆ ಪ್ರಿಯವಾದ ಈ ತೀರ್ಥದಲ್ಲಿ ಸುಪುತ್ರನು ಒಂದು ಪಿಂಡದಿಂದ ತೃಪ್ತಿಗೊಳಿಸಿದರೂ ಆ ಪಿತೃಗಳು ಉದ್ಧೃತರಾಗಿ ಬ್ರಹ್ಮಲೋಕಕ್ಕೆ ತೆರಳುವರು.

೨೯. ಅಲ್ಲದೆ ಅವರು ಅತಿಶಯ ಅನ್ನವನ್ನಿತ್ತು ಮೋಕ್ಷಮಾರ್ಗಕ್ಕೆ ಹೋಗುವರು.

೩೦. ಈ ಪ್ರಭಾಸದಲ್ಲಿರುವ ಸರಸ್ವತಿಯನ್ನು ದರ್ಶನಮಾಡಿದ ಪುಣ್ಯವಂತರಾದ ಬ್ರಾಹ್ಮಣರು ಸ್ವರ್ಗಲೋಕಕ್ಕೆ ತೆರಳುವರು.

ಅತ್ರ ಯೇ ಶುಭಕರ್ಮಾಣಃ ಪ್ರಭಾಸಸ್ಥಾಂ ಸರಸ್ವತೀಂ |
ಪಶ್ಯಂತಿ ತೇಽಪಿ ಯಾಸ್ಯಂತಿ ಸ್ವರ್ಗಲೋಕಂ ದ್ವಿಜೋತ್ತಮಾಃ || ೩೦ ||

ಯೇ ಪುನಸ್ತತ್ರ ಭಾವೇನ ನರಾಃ ಸ್ನಾನಪರಾಯಣಾಃ |
ಬ್ರಹ್ಮಲೋಕಂ ಸಮಾಸಾದ್ಯ ತೇ ರಮಿಸ್ಯಂತಿ ಸರ್ವದಾ || ೩೧ ||

ದಧಿ ಪ್ರದದ್ಯಾದ್ಯೋಽಪೀಹ ಬ್ರಾಹ್ಮಣಾಯ ಮನೋರಮಂ |
ಸೋಽಪ್ಯಗ್ನಿಲೋಕಮಾಸಾದ್ಯ ಭುಂಕ್ತೆ ಭೋಗಾನ್ಸುಶೋಭನಾನ್ ||೩೨||

ಊರ್ಣಾಪ್ರಾವರಣಂ ಯೋಽಪಿ ಭಕ್ತ್ಯಾ ದದ್ಯಾದ್ದ್ವಿಜೋತ್ತಮೇ |
ಸೋಽಪಿ ಯಾತಿ ಪರಾಂ ಸಿದ್ಧಿಂ ಮರ್ತ್ಯೈರನ್ಯೈಃ ಸುದುರ್ಲಭಂ || ೩೩ ||

ಯೇ ಚಾತ್ರ ಮಲನಾಶಾಯ ವಿಶೇಯುರ್ಮಾನವಾ ಜಲಂ |
ಗೋಪ್ರದಾನಫಲಂ ತೇಷಾಂ ಸುಖೇನ ಫಲಮಾದಿಶೇತ್ || ೩೪ ||

ಭಾವೇನ ಹಿ ನರಃ ಕಶ್ಚಿತ್ತತ್ರ ಸ್ನಾನಂ ಸಮಾಚರೇತ್ |
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕೇ ಮಹೀಯತೇ || ೩೫ ||

ತರ್ಪಣಾತ್ಪಿಂಡದಾನಾಚ್ಚ ನರಕೇಷ್ವಪಿ ಸಂಸ್ಥಿತಾಃ |
ಸ್ವರ್ಗಂ ಪ್ರಯಾಂತಿ ಪಿತರಃ ಸುಪುತ್ರೇಣೇಹ ತಾರಿತಾಃ || ೩೬ ||

---

೩೧. ಇಲ್ಲಿ ಭಕ್ತಿಯಿಂದ ಸ್ನಾನಗೈದ ಮಾನವರು ಬ್ರಹ್ಮಲೋಕವನ್ನು ಹೊಂದಿ ಯಾವಾಗಲೂ ವಿನೋದಪಡುವರು.

೩೨. ಇಲ್ಲಿ ಬ್ರಾಹ್ಮಣನಿಗೆ ಒಳ್ಳೆ ಮೊಸರನ್ನಿತ್ತವನು ಅಗ್ನಿಲೋಕವನ್ನು ಸೇರಿ ಒಳ್ಳೆ ಸುಖವನ್ನನುಭವಿಸುವನು.

೩೩. ಭಕ್ತಿಯಿಂದ ಬ್ರಾಹ್ಮಣರಿಗೆ ಇಲ್ಲಿ ಒಂದು ಕಂಬಳಿಯನ್ನು ದಾನಮಾಡಿದವನು ಇತರ ಮಾನವರಿಗೆ ಹೊಂದಲಾಗದ ಉತ್ತಮಸಿದ್ಧಿಯನ್ನು ಪಡೆಯುವನು.

೩೪. ಕೊಳೆಯನ್ನು ತೊಳೊದುಕೊಳ್ಳುವುದಕ್ಕಾಗಿ ಇಲ್ಲಿ ಜಲವನ್ನು ಪ್ರವೇಶ ಮಾಡಿದ ಮಾನವರಿಗೆ ಗೋವನ್ನು ದಾನಮಾಡಿದ ಫಲವು ಲಭಿಸುವುದು.

೩೫. ಭಕ್ತಿಯಿಂದ ಇಲ್ಲಿ ಮಿಂದ ಮಾನವನು ಸಕಲ ಪಾಪಮುಕ್ತನಾಗಿ ವಿಷ್ಣುಲೋಕದಲ್ಲಿ ಪೂಜ್ಯನಾಗುವನು.

೩೬. ಸುಪುತ್ರನು ತರ್ಪಣ, ಪಿಂಡಪ್ರದಾನಗಳನ್ನು ಮಾಡುವುದರಿಂದ ನರಕವಾಸಿಗಳಾದ ಪಿತೃಗಳು ಸಹ ಸದ್ಗತಿಯನ್ನು ಪಡೆಯುವರು.

ತೇ ಲಭಂತೇಽಕ್ಷಯಾಂಲ್ಲೋಕಾನ್ಬ್ರಹ್ಮವಿಷ್ಣ್ವೀಶಶಬ್ದಿತಾನ್ ।
ಭೂಯಸ್ತ್ವನ್ನಂ ಪ್ರಯಚ್ಛಂತಿ ಮೋಕ್ಷಮಾರ್ಗಂ ಲಭಂತಿ ತೇ ॥ ೩೭ ॥
ಸ್ವರ್ಗನಿಶ್ರೇಣಿಸಂಭೂತಾ ಪ್ರಭಾಸೇ ತು ಸರಸ್ವತೀ ।
ನಾಪುಣ್ಯವದ್ಭಿಃ ಸಂಪ್ರಾಪ್ತುಂ ಪುಂಭಿಃ ಶಕ್ಯಾ ಮಹಾನದೀ ॥ ೩೮ ॥
ಪ್ರಾಚೀ ಸರಸ್ವತೀ ಚೈವ ಅನ್ಯತ್ರೈವ ತು ದುರ್ಲಭಾ ।
ವಿಶೇಷೇಣ ಕುರುಕ್ಷೇತ್ರೇ ಪ್ರಭಾಸೇ ಪುಷ್ಕರೇ ತಥಾ ॥ ೩೯ ॥
ಪ್ರಾಚೀಂ ಸರಸ್ವತೀಂ ಪ್ರಾಪ್ಯ ಯೋಽನ್ಯತ್ತೀರ್ಥಂ ಹಿ ಮಾರ್ಗತೇ ।
ಸ ಕರಸ್ಥಂ ಸಮುತ್ಸೃಜ್ಯ ಕೂರ್ಪರೇಣ ಸಮಾಚರೇತ್ ॥ ೪೦ ॥
ಕೃಷ್ಣಪಕ್ಷೇ ಚತುರ್ದಶ್ಯಾಂ ಸ್ನಾನಂ ಚ ವಿಹಿತಂ ಸದಾ ।
ಪಿಣ್ಯಾಕೇಂಗುದಕೇನಾಪಿ ಪಿಂಡಂ ತತ್ರ ದದಾತಿ ಯಃ ।
ಪಿತೄಣಾಮಕ್ಷಯಂ ಭೂಯಾತ್ಪಿತೃಲೋಕಂ ಸ ಗಚ್ಛತಿ ॥ ೪೧ ॥
ಸರಸ್ವತೀವಾಸಸಮಾ ಕುತೋ ರತಿಃ
ಸರಸ್ವತೀವಾಸಸಮಾಃ ಕುತೋ ಗುಣಾಃ ।
ಸರಸ್ವತೀಂ ಪ್ರಾಪ್ಯ ಗತಾ ದಿವಂ ನರಾಃ
ಪುನಃ ಸ್ಮರಿಷ್ಯಂತಿ ನದೀಂ ಸರಸ್ವತೀಂ ॥ ೪೨ ॥

---

೩೭. ಅತಿಶಯವಾಗಿ ಅನ್ನದಾನಮಾಡುವವರು ಬ್ರಹ್ಮ, ವಿಷ್ಣು, ಶಿವರ ಲೋಕಗಳನ್ನು ಸೇರಿ ಮೋಕ್ಷವನ್ನು ಹೊಂದುವರು.

೩೮. ಸ್ವರ್ಗಲೋಕಕ್ಕೆ ಏಣಿಯಂತಿರುವ ಸರಸ್ವತೀ ಮಹಾ ನದಿಯನ್ನು ಪಾಪಿಗಳು ಹೊಂದಲು ಶಕ್ತರಲ್ಲ.

೩೯. ಕುರುಕ್ಷೇತ್ರ, ಪ್ರಭಾಸ, ಪುಷ್ಕರಕ್ಷೇತ್ರಗಳಲ್ಲಿರುವ ಪ್ರಾಚೀಸರಸ್ವತೀ ನದಿಯು ದುರ್ಲಭವಾದುದು.

೪೦. ಪ್ರಾಚೀಸರಸ್ವತೀನದಿಯನ್ನು ಹೊಂದಿ ಬೇರೆ ತೀರ್ಥವನ್ನು ಹುಡುಕುವ ಮನುಷ್ಯನು ಕೈಯಲ್ಲಿದ್ದದ್ದನ್ನು ಬಿಟ್ಟು ಮೊಳಕೈಯಿಂದ ಅದನ್ನು ಹೊಂದಲು ಪ್ರಯತ್ನಿಸುವವನಂತಾಗುವನು.

೪೧. ಕೃಷ್ಣಪಕ್ಷದ ಚತುರ್ದಶೀದಿನ ಅಲ್ಲಿ ಸ್ನಾನವು ವಿಹಿತವಾಗಿರುವುದು. ಅಲ್ಲಿ ಹಿಂಡಿ, ಇಂಗಳದಹಣ್ಣು ಇವುಗಳಿಂದ ಪಿಂಡಪ್ರದಾನಮಾಡುವವನು ಪಿತೃಗಳಿಗೆ ಅಕ್ಷಯತೃಪ್ತಿಯನ್ನುಂಟುಮಾಡಿ ತಾನು ಪಿತೃಲೋಕವನ್ನು ಸೇರುವನು.

೪೨. ಸರಸ್ವತೀನದಿಯ ಹತ್ತಿರ ವಾಸಿಸುವುದಕ್ಕೆ ಸರಿಯಾದುದೂ, ಸರಸ್ವತೀ ವಾಸಕ್ಕೆ ಸಮಾನವಾದುದೂ ಆದ ಗುಣವು ಬೇರೆಯಾವುದಿದೆ? ಸರಸ್ವತಿಯನ್ನು ಹೊಂದಿ ಸ್ವರ್ಗವನ್ನು ಸೇರಿದವರು ಮರಳಿ ಆ ನದಿಯನ್ನೇ ಸ್ಮರಿಸುವರು.

ಈಶ್ವರ ಉವಾಚ :—

ಉಕ್ತ್ವೈವಂ ಭಗವಾನ್ದೇವಸ್ತತ್ರೈವಾಂತರಧೀಯತ ।
ಸಾಂನಿಧ್ಯಮಕರೋತ್ತತ್ರ ತತಃ ಪ್ರಭೃತಿ ಶಂಕರಃ ॥ ೪೩ ॥
ಅತ್ರ ಗಾಥಾ ಪುರಾ ಗೀತಾ ವಿಷ್ಣುನಾ ಪ್ರಭವಿಷ್ಣುನಾ ।
ಸ್ನೇಹಾರ್ದ್ರೇಣ ಚ ಚಿತ್ತೇನ ಧರ್ಮಪುತ್ರಂ ಪ್ರತಿ ಪ್ರಿಯೇ ॥ ೪೪ ॥
ಮಾ ಗಂಗಾಂ ವ್ರಜ ಕೌಂತೇಯ ಮಾ ಪ್ರಯಾಗಂ ಚ ಪುಷ್ಕರಂ ।
ತತ್ರ ಗಚ್ಛ ಕುರುಶ್ರೇಷ್ಠ ಯತ್ರ ಪ್ರಾಚೀ ಸರಸ್ವತೀ ॥ ೪೫ ॥
ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಮಾಹಾತ್ಮ್ಯಂ ಚ ಸರಸ್ವತ್ಯಾ ಭೂಯಃ ಕಿಂ ಶ್ರೋತುಮಿಚ್ಛಸಿ ॥ ೪೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಾಚೀನಮಂಕೀಶ್ವರಮಾಹಾತ್ಮ್ಯವರ್ಣನಂ ನಾಮ
ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

---

೪೩. ಈಶ್ವರನು ಹೇಳುತ್ತಾನೆ :—ಪೂಜ್ಯನಾದ ಶಂಕರನು ಹೀಗೆಂದು ನುಡಿದು ಅಲ್ಲಿಯೇ ಅಂತರ್ಧಾನವಾಗಿಹೋದನು. ಅದು ಮೊದಲ್ಗೊಂಡು ಶಂಕರನು ಅಲ್ಲಿ ಸನ್ನಿಹಿತನಾಗಿರುವನು.

೪೪. ಸಮರ್ಥನಾದ ವಿಷ್ಣುವು ಹಿಂದೆ ಪ್ರೀತಿಯಿಂದ ಧರ್ಮರಾಜನನ್ನು ಕುರಿತು ಹೀಗೆಂದಿರುವನು.

೪೫. "ಯುಧಿಷ್ಠಿರ! ನೀನು ಗಂಗಾ, ಪ್ರಯಾಗ, ಪುಷ್ಕರ ಕ್ಷೇತ್ರಗಳಿಗೆ ಹೋಗಬೇಡ. ಪ್ರಾಚೀ ಸರಸ್ವತೀ ನದಿಗೆಹೋಗು".

೪೬. ಎಲೌ ಪ್ರಿಯಳೇ! ಹೀಗೆ ನೀನು ಕೇಳಿದ ಸರಸ್ವತೀ ನದಿಯ ಮಾಹಾತ್ಮ್ಯವನ್ನೆಲ್ಲ ನನಗೆ ಹೇಳಿರುವೆನು. ಮರಳಿ ಏನನ್ನು ಕೇಳಬಯಸುವೆ?

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರಾಚೀನಮಂಕೀಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಸಪ್ತತ್ಯುತ್ತರಶತತಮೋಽಧ್ಯಾಯಃ

ಜ್ವಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ಸಂನಿಕೃಷ್ಟೇ ತು ಲಿಂಗಂ ಜ್ವಾಲೇಶ್ವರಂ ಸ್ಮೃತಂ ।
ಶರಃ ಪಾಶುಪತೋ ಯತ್ರ ಜ್ವಲನ್ವೈ ತ್ರಿಪುರಾರಿಣಾ ॥ ೧ ॥
ಪಾತಿತೋ ಯತ್ರದೇಶೇ ತು ತೇನ ಜ್ವಾಲೇಶ್ವರಃ ಸ್ಮೃತಃ ।
ತಂ ದೃಷ್ಟ್ವಾ ಮಾನವೋ ದೇವಿ ಮುಚ್ಯತೇ ಸರ್ವಪಾತಕೈಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜ್ವಾಲೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಜ್ವಾಲೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಆ ಮಂಕೀಶ್ವರ ಕ್ಷೇತ್ರದ ಹತ್ತಿರದಲ್ಲಿಯೇ ಜ್ವಾಲೇಶ್ವರವೆಂಬ ಲಿಂಗವಿರುವುದು. ಶಿವನು ಜ್ವಲಿಸುತ್ತಿರುವ ಪಾಶುಪತಾಸ್ತ್ರವನ್ನು ಯಾವ ಪ್ರದೇಶದಲ್ಲಿ ಬೀಳಿಸಿದನೊ, ಅದೇ ಜ್ವಾಲೇಶ್ವರವು. ಅಲ್ಲಿ ಜ್ವಾಲೇಶ್ವಲಿಂಗವಿರುವುದು ಅದನ್ನು ನೋಡಿದ ಮಾನವನು ಸಮಸ್ತ ಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜ್ವಾಲೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ತ್ರಿಪುರಲಿಂಗತ್ರಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತ್ರೈವ ಸಂಸ್ಥಿತಂ ಪಶ್ಯೇತ್ಪ್ರಾಚೀದೇವ್ಯಾಸ್ತು ಸನ್ನಿಧೌ ।
ಲಿಂಗತ್ರಯಂ ಸಮಾಖ್ಯಾತಂ ತ್ರಿಪುರಾಣಾಂ ಮಹಾತ್ಮನಾಂ ॥ ೧ ॥
ವಿದ್ಯುನ್ಮಾಲೀ ತಾರಕಾಖ್ಯಃ ಕಪೋಲಾಖ್ಯಸ್ತಥೈವ ಚ ।
ತೈಶ್ಚ ಪ್ರತಿಷ್ಠಿತಂ ಲಿಂಗಂ ದೃಷ್ಟ್ವಾ ಪಾಪೈಃ ಪ್ರಮುಚ್ಯತೇ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತ್ರಿಪುರಲಿಂಗತ್ರಯಮಾಹಾತ್ಮ್ಯವರ್ಣನಂನಾಮ
॥ ದ್ವಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ತ್ರಿಪುರಲಿಂಗತ್ರಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಅಲ್ಲಿಯೇ ಪ್ರಾಚೀಸರಸ್ವತಿಯ ಹತ್ತಿರದಲ್ಲಿರುವ ತ್ರಿಪುರಲಿಂಗತ್ರಯವನ್ನು ನೋಡಬೇಕು.

೨. ವಿದ್ಯುನ್ಮಾಲೀ, ತಾರಕ, ಕಪೋಲ ಇವರು ಪ್ರತಿಷ್ಠೆಮಾಡಿರುವ ಲಿಂಗವನ್ನು ನೋಡಿದ ಮಾನವನು ಸಕಲಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತ್ರಿಪುರಲಿಂಗತ್ರಯಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಶಂಡತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತತೋ ಗಚ್ಛೇನ್ಮಹಾದೇವಿ ಶಂಡತೀರ್ಥಮನುತ್ತಮಂ ।
ಸರ್ವಪಾಪೋಪಶಮನಂ ಸರ್ವಕಾಮಫಲಪ್ರದಂ ॥ ೧ ॥
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಶೃಣುಷ್ವೈಕಮನಾಃ ಪ್ರಿಯೇ ।
ಪುರಾ ಪಂಚಶಿರಾ ಆಸೀದ್ಬ್ರಹ್ಮಾ ಲೋಕಪಿತಾಮಹಃ ॥ ೨ ॥
ಶಿರಸ್ತಸ್ಯ ಮಯಾ ಛಿನ್ನಂ ಕಸ್ಮಿಂಶ್ಚಿತ್ಕಾರಣಾಂತರೇ ।
ತತ್ರ ಗಂಧವತೀ ಜಾತಾ ಬ್ರಹ್ಮಣಃ ಸಾ ಚ ಶೋಣಿತೈಃ ॥ ೩ ॥
ತತ್ರೋದ್ಗತಾ ಮಹಾತಾಲಾಸ್ತೇನ ತಾಲವನಂ ಸ್ಮೃತಂ ।
ಅಥ ಕರತಲೇ ಲಗ್ನಂ ಕಪಾಲಂ ಬ್ರಹ್ಮಣೋ ಮಮ ॥ ೪ ॥
ಶರೀರಂ ಕೃಷ್ಣತಾಂ ಯಾತಂ ಮಮ ಚೈವ ವೃಷಸ್ಯ ಚ ।
ಅಥ ತೀರ್ಥಾನ್ಯನೇಕಾನಿ ಗತೋಽಹಂ ಪಾಪಶಂಕಯಾ ॥ ೫ ॥

ಕನ್ನಡದ ಅನುವಾದ

ಶಂಡತೀರ್ಥಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಸಕಲ ಪಾಪವನ್ನು ನಿವಾರಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ, ಆದ ಶಂಡತೀರ್ಥದೆಡೆಗೆ ಹೋಗಬೇಕು.

೨. ಪ್ರಿಯಳೆ! ಅದರ ಉತ್ಪತ್ತಿಯನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳು. ಹಿಂದೆ ಬ್ರಹ್ಮನು ಐದು ತಲೆಗಳುಳ್ಳವನಾಗಿದ್ದನು.

೩-೫. ನಾನು ಯಾವುದೋ ಒಂದು ಕಾರಣದಿಂದ ಅವನ ತಲೆಯನ್ನು ಕತ್ತರಿಸಿದೆನು. ಆಗ ಬ್ರಹ್ಮನ ತಲೆಯ ರಕ್ತದಿಂದ ಗಂಧವತೀ ನದಿಯುಂಟಾಯಿತು. ಅದರಲ್ಲಿ ದೊಡ್ಡ ದೊಡ್ಡ ತಾಳೆ ಮರಗಳು ಹುಟ್ಟಿದುವು. ಅದರಿಂದ ಅದು ತಾಲವನ ವೆಸ್ನಿಸಿಕೊಂಡಿತು. ತರುವಾಯ ಬ್ರಹ್ಮನ ಆ ಕಪಾಲವು ನನ್ನ ಕೈಯಲ್ಲಿ ಅಂಟಿಕೊಳ್ಳಲು ನನ್ನ ದೇಹವೂ, ಬಸವನ ಶರೀರವೂ ಕಪ್ಪಾದುವು. ಬಳಿಕ ನಾನು ಪಾಪಶಂಕೆಯಿಂದ ಅನೇಕ ತೀರ್ಥಗಳಿಗೆ ಯಾತ್ರೆಹೋದೆನು.

ನ ಕ್ವಚಿದ್ವ್ರಜತೇ ಪಾಪಂ ತತಃ ಪ್ರಭಾಸಮಾಗತಃ ।
ಕ್ಷೇತ್ರೇ ತತ್ರ ಮಯಾ ದೃಷ್ಟಾ ಪ್ರಾಚೀ ದೇವೀ ಸರಸ್ವತೀ ॥ ೬ ॥
ತತ್ರ ಮೇ ವೃಷಭಃ ಸ್ನಾತುಂ ಪ್ರವಿಷ್ಟೋ ಜಲಮಧ್ಯತಃ ।
ತತ್ಕ್ಷಣಾಚ್ಛ್ವೇತತಾಂ ಪ್ರಾಪ್ತೋ ಮುಕ್ತೋಽಹಮಪಿ ಹತ್ಯಯಾ ॥ ೭ ॥
ಕರಮಧ್ಯೇ ಚ ಮೇ ಲಗ್ನಂ ಕಪಾಲಂ ಪತಿತಂ ತದಾ ।
ಕಪಾಲಮೋಚನಶ್ಚಾಸೌ ಲಿಂಗರೂಪೀ ಸ್ಥಿತೋಽಭವತ್ ॥ ೮ ॥
ತತ್ರಾಪಿ ಯೋ ದದೇಚ್ಛ್ರಾದ್ಧಂ ಪ್ರಾಚೀದೇವ್ಯಾಸ್ತು ಸನ್ನಿಧೌ ।
ಮಾತೃಕಂ ಪೈತೃಕಂ ಚೈವ ತೃಪ್ತಂ ಕುಲಶತಂ ತಥಾ ॥ ೯ ॥
ಭವೇಚ್ಚ ತಸ್ಯ ತೃಪ್ತಿಸ್ತು ಯಾವತ್ಕಲ್ಪಾಸ್ತು ಸಪ್ತತಿಃ ।
ಮಾಸ ಆಶ್ವಯುಜೇ ದೇವಿ ಕೃಷ್ಣಪಕ್ಷೇ ಚತುರ್ದಶೀ ।
ತತ್ರ ದದ್ಯಾತ್ತು ಯಃ ಶ್ರಾದ್ಧಂ ದಕ್ಷಿಣಾಮೂರ್ತಿಮಾಶ್ರಿತಃ ॥ ೧೦ ॥
ಯಥಾವಿತ್ತೋಪಚಾರೇಣ ಸುಪಾತ್ರೇ ಚ ಯಥಾವಿಧಿ ।
ಯಾವದ್ಯುಗಸಹಸ್ರಂ ತು ತೃಪ್ತಾಃ ಸ್ಯುಸ್ತೇ ಪಿತಾಮಹಾಃ ॥ ೧೧ ॥
ಅನ್ನಸುವರ್ಣದಾನಂ ಚ ದಧಿಕಂಬಲಮೇವ ಚ ।
ತತ್ರ ದೇಯಂ ವಿಧಾನೇನ ಸರ್ವಪಾಪೋಪಶುದ್ಧಯೇ ॥ ೧೨ ॥

---

೬. ಎಲ್ಲಿಯೂ ಪಾಪವು ಪರಿಹಾರವಾಗದಿರಲು ಪ್ರಭಾಸಕ್ಕೆ ಬಂದು ಪ್ರಾಚೀ ಸರಸ್ವತಿಯನ್ನು ಕಂಡೆನು.

೭. ಅಲ್ಲಿ ನನ್ನ ವೃಷಭವು ಸ್ನಾನಮಾಡಲು ಜಲಮಧ್ಯವನ್ನು ಪ್ರವೇಶಿಸಿತು. ಅದು ಕೂಡಲೆ ಬೆಳ್ಳಗಾಯಿತು. ನಾನೂ ಬ್ರಹ್ಮಹತ್ಯೆಯಿಂದ ಮುಕ್ತನಾದೆನು.

೮. ನನ್ನ ಕೈಯಲ್ಲಿ ಅಂಟಿಕೊಂಡಿದ್ದ ಕಪಾಲವು ಕೆಳಗೆ ಬಿದ್ದು ಲಿಂಗರೂಪವಾಗಿ ನಿಂತಿತು.

೯–೧೧. ಆ ಪ್ರಾಚೀದೇವಿಯ ಸನ್ನಿಧಿಯಲ್ಲಿ ಶ್ರಾದ್ಧವನ್ನು ಮಾಡಿದರೆ ಮಾತಾಪಿತೃಗಳ ನೂರು ಕುಲದ ಜನರು ಎಪ್ಪತ್ತು ಕಲ್ಪಗಳಕಾಲ ತೃಪ್ತಿಗೊಳ್ಳುವರು. ಆಶ್ವಯುಜಮಾಸದ ಕೃಷ್ಣಪಕ್ಷದ ಚತುರ್ದಶೀದಿನ ದಕ್ಷಿಣಾಮೂರ್ತಿಯ ಸನ್ನಿಧಿಯಲ್ಲಿ ತನ್ನಲ್ಲಿ ದ್ರವ್ಯವಿದ್ದಷ್ಟು ಮಟ್ಟಿಗೆ ಶ್ರದ್ಧೆಯಿಂದ ಉದಾರವಾಗಿ ಸತ್ಪಾತ್ರದಲ್ಲಿ ಶ್ರಾದ್ಧಗೈದರೆ ಸಾವಿರ ಯುಗಗಳವರೆಗೆ ಪಿತಾಮಹರು ತೃಪ್ತರಾಗುವರು.

೧೨. ಅಲ್ಲಿ ಸಕಲ ಪಾಪಶಾಂತಿಗಾಗಿ ಅನ್ನ, ಚಿನ್ನ, ದಧಿಕಂಬಲಗಳನ್ನು ವಿಧಿಯಿಂದ ದಾನಮಾಡಬೇಕು.

ಕೃಷ್ಣರೂಪೀ ವೃಷೋ ದೇವಿ ಯದಾ ಶ್ವೇತತ್ವಮಾಗತಃ ।
ಶಂಡತೀರ್ಥಮಿತಿ ಖ್ಯಾತಂ ತೇನ ತ್ರೈಲೋಕ್ಯಪೂಜಿತಂ ॥ ೧೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಂಡತೀರ್ಥಮಾಹಾತ್ಮ್ಯವರ್ಣನಂ ನಾಮ
॥ ತ್ರಿಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧೩. ದೇವಿ ! ಕೃಷ್ಣರೂಪಿಯಾದ ವೃಷಭವು ಬೆಳ್ಳಗಾದುದರಿಂದ ಈ ತೀರ್ಥವು ಶಂಡತೀರ್ಥವೆಂದು ಪ್ರಸಿದ್ಧಿಗೊಂಡು ಮೂರು ಲೋಕಗಳಲ್ಲಿ ಪೂಜ್ಯವಾಯಿತು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಂಡತೀರ್ಥಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಸೂರ್ಯಪ್ರಾಚೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸೂರ್ಯಪ್ರಾಚೀಂ ಮಹಾಪ್ರಭಾಂ ।
ಸರ್ವಪಾಪೋಪಶಮನೀಂ ಸರ್ವಕಾಮಫಲಪ್ರದಾಂ ॥ ೧ ॥
ತತ್ರ ಸ್ನಾತ್ವಾ ಮಹಾದೇವಿ ಮುಚ್ಯತೇ ಪಂಚಪಾತಕೈಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸೂರ್ಯಪ್ರಾಚೀಮಾಹಾತ್ಮ್ಯವರ್ಣನಂನಾಮ
ಚತುಃಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಸೂರ್ಯಪ್ರಾಚೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಅತಿಶಯಕಾಂತಿಯುಳ್ಳುದೂ, ಸಕಲ ಪಾಪಗಳನ್ನು ನಾಶಗೊಳಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ ಆದ ಸೂರ್ಯಪ್ರಾಚಿಯೆಡೆಗೆ ಹೋಗಬೇಕು.

೨. ಅಲ್ಲಿ ಮಿಂದವನು ಪಂಚಮಹಾಪಾತಕಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸೂರ್ಯಪ್ರಾಚೀಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ತ್ರಿಣೇತ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಚೈವ ತ್ರಿಲೋಚನಂ ।
ಋಷಿತೀರ್ಥಸಮೀಪೇ ತು ಸರ್ವಪಾತಕನಾಶನಂ ।
ನ್ಯಂಕುಮತ್ಯುತ್ತರೇ ಕೂಲ ಋಷಿಭಿಃ ಪೂಜಿತಂ ಪುರಾ ॥ ೧ ॥

ತ್ರಿಣೇತ್ರಾ ಮತ್ಸ್ಯಕಾ ಯತ್ರ ಜಲಂ ಸ್ಫಟಿಕಸನ್ನಿಭಂ ।
ತತ್ರ ಸ್ನಾತ್ವಾ ನರೋ ದೇವಿ ಮುಚ್ಯತೇ ಬ್ರಹ್ಮಹತ್ಯಯಾ ॥ ೨ ॥

ಕೃಷ್ಣಪಕ್ಷೇ ಚತುರ್ದಶ್ಯಾಂ ಮಾಸೇ ಭಾದ್ರಪದೇ ತಥಾ ।
ಉಪವಾಸಂ ತು ಕುರ್ವೀತ ರಾತ್ರೌ ಜಾಗರಣಂ ತಥಾ ॥ ೩ ॥

ಕನ್ನಡದ ಅನುವಾದ

ತ್ರಿಣೇತ್ರೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಋಷಿತೀರ್ಥದ ಸಮೀಪದಲ್ಲಿರುವುದೂ ಸಕಲ ಪಾಪಗಳನ್ನು ನಾಶಗೊಳಿಸುವುದೂ, ನ್ಯಂಕುಮತಿಯ ಉತ್ತರದಲ್ಲಿ ಋಷಿಗಳು ಪೂಜಿಸಿರುವುದೂ ಆದ ಮಹೇಶ್ವರಲಿಂಗದೆಡೆಗೆ ಹೋಗಬೇಕು.

೨. ಅಲ್ಲಿ ಸ್ಫಟಿಕದಂತಿರುವ ನೀರಿನಲ್ಲಿ ಮೂರು ಕಣ್ಣುಗಳುಳ್ಳ ಮೀನುಗಳಿರುವುವು. ಅಲ್ಲಿ ಮಿಂದ ಮಾನವನು ಬ್ರಹ್ಮಹತ್ಯೆಯಿಂದ ಮುಕ್ತನಾಗುವನು.

೩–೪. ಭಾದ್ರಪದಮಾಸದ ಕೃಷ್ಣಪಕ್ಷದ ಚತುರ್ದಶೀದಿನ ಉಪವಾಸಗೈದು ರಾತ್ರಿ ಜಾಗರಣೆಯನ್ನೂ, ಬೆಳಗ್ಗೆ ಶ್ರಾದ್ಧವನ್ನು ಮಾಡಿ ವಿಧಿಯಂತೆ ಶಿವನನು

ಪಶ್ರಿತಃ ಶ್ರಾದ್ಧಂ ಪ್ರಕುರ್ವೀತ ವಿಧಿವತ್ಪೂಜಯೇಚ್ಛಿವಂ ।
ರುದ್ರಲೋಕೇ ವಸೇದ್ದೇವಿ ವರ್ಷಾಣಾಮಯುತತ್ರಯಂ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತ್ರಿನೇತ್ರೇಶ್ವರಮಾಹಾತ್ಮ್ಯವರ್ಣನಂನಾಮ
। ಅಷ್ಟಪಂಚಾಶದುತ್ತರದ್ವಿಶತತಮೋಽಧ್ಯಾಯಃ ॥

ಪೂಜಿಸಬೇಕು. ಅಂಥವನು ಮೂವತ್ತು ಸಾವಿರ ವರ್ಷಕಾಲ ರುದ್ರಲೋಕದಲ್ಲಿ ವಾಸಿಸುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತ್ರಿನೇತ್ರೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಐವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್‌ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಉಮಾಪಾತಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಋಷಿತೀರ್ಥಸ್ಯ ಸನ್ನಿಧೌ ।
ಕಾಮಿಕಂ ಹಿ ಪರಂ ಕ್ಷೇತ್ರಂ ದೇವಿಕಾನಾಮ ನಾಮತಃ ॥ ೧ ॥
ಮಹಾಸಿದ್ಧಿವನಂ ತತ್ರ ಋಷಿಸಿದ್ಧಸಮಾವೃತಂ ।
ನಾನಾದ್ರುಮಲತಾಕೀರ್ಣಂ ಪರ್ವತೈರುಪಶೋಭಿತಂ ॥ ೨ ॥
ಚಂಪಕೈರ್ಬಕುಲೈರ್ದಿವ್ಯೈರಶೋಕೈಃ ಸ್ತಬಕೈಃ ಪರೈಃ ।
ಪುನ್ನಾಗೈಃ ಕಿಂಕಿರಾತೈಶ್ಚ ಸುಗಂಧೈರ್ನಾಗಕೇಸರೈಃ ॥ ೩ ॥
ಮಲ್ಲಿಕೋತ್ಪಲಪುಷ್ಪೈಶ್ಚ ಪಾಟಲಾಪಾರಿಜಾತಕೈಃ ।
ಚೂತಚಂಪ ಕಪಿತ್ಥೈಶ್ಚ ಶ್ರೀಫಲೈಃ ಪನಸೈಸ್ತಥಾ ॥ ೪ ॥
ಖರ್ಜೂರೈರ್ಬದರೈಶಾನ್ಯೈರ್ಮಾತುಲಿಂಗೈಃ ಸದಾಡಿಮೈಃ ।
ಜಂಬೀರೈಶ್ಚೈವ ದಿವ್ಯೈಶ್ಚ ನಾರಂಗೈರುಪಶೋಭಿತಂ ॥ ೫ ॥

ಕನ್ನಡದ ಅನುವಾದ

ಉಮಾಪಾತಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಋಷಿತೀರ್ಥದ ಹತ್ತಿರ ದೇವಿಕಾ ಎಂಬ ಕಾಮಿಕಕ್ಷೇತ್ರವಿರುವುದು.

೨-೮. ಅಲ್ಲಿ ಮುನಿಗಳು, ಸಿದ್ಧರು ಇವರಿಂದ ಸಹಿತವಾದುದೂ, ಅನೇಕ ವಿಧವಾದ ಮರಗಳಿಂದಲೂ, ಬಳ್ಳಿಗಳಿಂದಲೂ ವ್ಯಾಪ್ತವಾದುದೂ, ಪರ್ವತಗಳಿಂದ ಅಲಂಕಾರಗೊಂಡುದೂ, ಚಂಪಕ, ಬಕುಲ, ಅಶೋಕ, ಪುನ್ನಾಗ, ತಿಂಕಿರಾತ, ಸುವಾಸನೆಗೊಂಡ ನಾಗಕೇಸರ, ಮಲ್ಲಿಗೆ, ನೀಲೋತ್ಪಲ, ಪಾಟಲ, ಪಾರಿಜಾತ ಚೂತ, ಸಂಪಿಗೆ, ಬೇಲ, ಬಿಲ್ವ, ಹಲಸು, ಖರ್ಜೂರ, ಎಲಚಿ, ಮಾದಳ, ದಾಳಿಂಬ, ನಿಂಬೆ, ಕಿತ್ತಳೆ ಇವುಗಳಿಂದ ವಿರಾಜಿಸುವುದೂ, ನವಿಲು, ಕೋಗಿಲೆ, ದುಂಬಿ, ಜಿಂಕೆ, ಕರಡಿ,

ಶಿಖಿಭಿಃ ಕೋಕಿಲಾಭಿಶ್ಚ ಗೀಯಮಾನಂ ತು ಷಟ್ಪದೈಃ ।
ಮೃಗೈರ್ಋಕ್ಷೈರ್ವರಾಹೈಶ್ಚ ಸಿಂಹೈರ್ವ್ಯಾಘ್ರೈಸ್ತಥಾ ಪರೈಃ ॥ ೬ ॥
ಶ್ವಾಪದೈರ್ವಿವಿಧಾಕಾರೈಃ ಕಂದರೈರ್ಗಹ್ವರೈಸ್ತಥಾ ।
ಸುರಾಸುರಗಣೈಃ ಸಿದ್ಧೈರ್ಯಕ್ಷಗಂಧರ್ವಪನ್ನಗೈಃ ॥ ೭ ॥
ಅಪ್ಸರೋರಗನಾಗೈಶ್ಚ ಬಹುಭಿಸ್ತು ಸಮಾಕುಲಂ ।
ಕೇಚಿತ್ಸ್ತುವಂತಿ ಈಶಂ ತು ಕೇಚಿನ್ನೃತ್ಯಂತಿ ಚಾಗ್ರತಃ ॥ ೮ ॥
ಪುಷ್ಪೈರ್ವೃಷ್ಟಿಂ ತು ಮುಂಚಂತಿ ಮುಖವಾದ್ಯಾನಿ ಚಾಪರೇ ।
ಹಸಂತಿ ಚಾಪರೇ ಹೃಷ್ಟಾ ಗರ್ಜಂತಿ ಚ ತಥಾ ಪರೇ ॥ ೯ ॥
ಊರ್ಧ್ವಬಾಹವಸ್ತಥಾ ಚಾನ್ಯೇ ಅನ್ಯೇ ಧ್ಯಾಯಂತಿ ತದ್ಗತಾಃ ।
ತಸ್ಮಿನ್ಸ್ಥಾನೇ ಮಹಾದೇವಿ ದೇವಿಕಾಯಾಸ್ತಟೇ ಶುಭೇ ॥ ೧೦ ॥
ಉಮಾಪತೀಶ್ವರೋ ನಾಮ ತತ್ರಾಹಂ ಸಂಸ್ಥಿತಃ ಸದಾ ।
ಯುಗೇಯುಗೇ ಸದಾ ಪೂರ್ಣೇ ಕಲ್ಪೇ ಮನ್ವಂತರೇ ತಥಾ ॥ ೧೧ ॥
ನ ತ್ಯಜಾಮಿ ಸದಾ ದೇವಿ ದೇವಿಕಾಯಾಸ್ತಟಂ ಶುಭಂ ।
ದುರ್ಲಭಂ ಸರ್ವಲೋಕೇಽಸ್ಮಿನ್ಪವಿತ್ರಂ ಸುಪ್ರಿಯಂ ಹಿ ಮೇ ॥ ೧೨ ॥
ತ್ವಯಾ ಸಹ ಸ್ಥಿತಶ್ಚಾಹಂ ತಸ್ಮಿನ್ಸ್ಥಾನೇ ವರಾನನೇ ।
ಉಮಯಾ ಯುಕ್ತದೇಹತ್ವಾತ್ತೇನ ಖ್ಯಾತ ಉಮಾಪತಿಃ ॥ ೧೩ ॥

ಹಂದಿ, ಸಿಂಹ, ಹುಲಿ, ನಾಯಿಕಾಲಿನಂತೆ ಕಾಲುಳ್ಳ ಹಿಂಸ್ರಜಂತುಗಳು, ಗುಹೆ, ಪೊಟರೆ, ಸುರರು, ಅಸುರರು, ಸಿದ್ಧರು, ಯಕ್ಷರು, ಗಂಧರ್ವರು ಉರಗರು, ಅಪ್ಸರರು, ನಾಗಗಳು ಇವರಿಂದ ವ್ಯಾಪ್ತವಾದುದೂ ಆದ ಮಹಾಸಿದ್ಧವನವಿರುವುದು. ಅಲ್ಲಿ ಕೆಲವರು ಈಶ್ವರನನ್ನು ಸ್ತುತಿಸುವರು. ಕೆಲವರು ಅವನ ಮುಂದೆ ಕುಣಿಯುತ್ತಾರೆ.

೯. ಕೆಲವರು ಹೂವಿನಮಳೆಗರೆಯುವರು. ಇನ್ನು ಕೆಲವರು ಮುಖದಿಂದ ಕೊಳಲು ಮುಂತಾದ ವಾದ್ಯಗಳನ್ನು ಊದುವರು. ಕೆಲವರು ಸಂತೋಷದಿಂದ ನಗುತ್ತಾರೆ. ಕೆಲವರು ಗರ್ಜಿಸುತ್ತಾರೆ.

೧೦. ಆ ದೇವಿಕಾತಟದಲ್ಲಿ ಇತರರು ಮೇಲಕ್ಕೆತ್ತಿದ ತೋಳುಗಳುಳ್ಳವರೂ, ಬೇರೆಯವರು ಧ್ಯಾನಿಸುವವರೂ ಆಗಿರುವರು.

೧೧-೧೨. ಉಮಾಪತೀಶ್ವರನೆಂಬ ನಾನಲ್ಲಿ ನೆಲಸಿರುವೆನು. ನಾನು ಪ್ರತಿ ಯುಗಗಳಲ್ಲಿಯೂ, ಕಲ್ಪಾಂತ್ಯದಲ್ಲಿಯೂ, ಮನ್ವಂತರದಲ್ಲಿಯೂ ಆ ದೇವಿಕಾತಟವನ್ನು ತ್ಯಜಿಸುವುದಿಲ್ಲ. ಸಮಸ್ತ ಲೋಕಗಳಲ್ಲಿ ದುರ್ಲಭವೂ, ಪವಿತ್ರವೂ ಆದ ಆ ಸ್ಥಾನವು ನನಗೆ ಅತಿಪ್ರಿಯವಾದುದು.

೧೩. ಪ್ರಿಯಳೆ ! ನಾನು ನಿನ್ನೊಡನೆ ಅಲ್ಲಿ ನೆಲೆಸಿರುವುದರಿಂದ ಉಮಾಪತಿಯೆಂದು ವಿಖ್ಯಾತನಾದೆನು.

ಪುಷ್ಯಮಾಸೇ ತ್ವಮಾವಾಸ್ಯಾಂ ದದ್ಯಾಚ್ಛ್ರಾದ್ಧಂ ಸಮಾಹಿತಃ ।
ನ ಪಶ್ಯಾಮಿ ಕ್ಷಯಂ ತಸ್ಯ ತಸ್ಮಿನ್ದತ್ತಸ್ಯ ಪಾರ್ವತಿ ॥ ೧೪ ॥
ಬ್ರಹ್ಮಹತ್ಯಾಸಹಸ್ರಂ ತು ತಸ್ಯ ದರ್ಶನತೋ ವ್ರಜೇತ್ ।
ಗೋಭೂಹಿರಣ್ಯವಾಸಾಂಸಿ ತತ್ರ ದದ್ಯಾದ್ವಿಚಕ್ಷಣಃ ॥ ೧೫ ॥
ಸ ಏಕಃ ಪರಮಃ ಪುತ್ರೋ ಯೋ ಗತ್ವಾ ತತ್ರ ಸುಂದರಿ ।
ದದೇಚ್ಛ್ರಾದ್ಧಂ ಪಿತೃಣಾಂ ಚ ತಸ್ಯಾಂತೋ ನೈವ ವಿದ್ಯತೇ ॥ ೧೬ ॥
ದೇವೈಃ ಸರ್ವೈಃ ಸಮಾಹೂತಾ ಸ್ನಾನಾರ್ಥಂ ಸಾ ಸರಿದ್ವರಾ ।
ದೇವಿಕೇತಿ ಸಮಾಖ್ಯಾತಾ ತೇನ ಸಾ ಪಾಪನಾಶಿನೀ ॥ ೧೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉಮಾಪತಿಮಾಹಾತ್ಮ್ಯವರ್ಣನಂ ನಾಮ
॥ ಷಟ್ಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧೪. ಪುಷ್ಯಮಾಸದ ಅಮಾವಾಸ್ಯೆಯದಿನ ಅಲ್ಲಿ ಸಾವಧಾನ ಮನಸ್ಸಿನಿಂದ ಶ್ರಾದ್ಧಮಾಡಬೇಕು. ಅಲ್ಲಿ ದಾನಮಾಡಿರುವುದು ಕ್ಷಯಿಸುವುದನ್ನು ಕಾಣುವುದಿಲ್ಲ.

೧೫. ಆ ಉಮಾಪತಿಯ ದರ್ಶನದಿಂದ ಸಾವಿರ ಬ್ರಹ್ಮಹತ್ಯೆಗಳು ಪರಿಹಾರವಾಗುವುವು. ಅಲ್ಲಿ ಗೋವು, ಭೂಮಿ, ಹಿರಣ್ಯ, ವಸ್ತ್ರ ಇವುಗಳನ್ನ ದಾನಮಾಡಬೇಕು.

೧೬. ಸುಂದರಿ ! ಅಲ್ಲಿಗೆ ಹೋಗಿ ಶ್ರಾದ್ಧಮಾಡಿದ ಪುತ್ರನು ಉತ್ತಮ ಪುತ್ರನು. ಅದರಿಂದ ಪಿತೃಗಳಿಗೆ ಶಾಶ್ವತವಾದ ತೃಪ್ತಿಯುಂಟಾಗುವುದು.

೧೭. ದೇವತೆಗಳೆಲ್ಲ ಸ್ನಾನಕ್ಕಾಗಿ ಆ ನದಿಯನ್ನು ಕರೆದುದರಿಂದ ಅದು ದೇವಿಕೆಯೆಂದು ಪ್ರಸಿದ್ಧವಾಯಿತು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉಮಾಪತಿಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಭೂಧರಯಜ್ಞವರಾಹಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತತ್ರೈವ ಸಂಸ್ಥಿತಂ ಪಶ್ಯೇದ್ಭೂಧರಂ ನಾಮ ನಾಮತಃ ।
ಉದ್ಧೃತ್ಯ ಪೃಥಿವೀಂ ಯಸ್ಮಾದ್ದಂಷ್ಟ್ರಾಗ್ರೇಣ ದಧಾರ ಸಃ ॥ ೧ ॥
ಭೂಧರಸ್ತೇನ ಚಾಖ್ಯಾತೋ ದೇವಿಕಾಟತಂಸ್ಥಿತಃ ।
ವೇದಪಾದೋ ಯೂಪದಂಷ್ಟ್ರಃ ಖತುದಂತಃ ಸ್ರುಚೀಮುಖಃ ॥ ೨ ॥
ಅಗ್ನಿಜಿಹ್ವೋ ದರ್ಭರೋಮಾ ಬ್ರಹ್ಮಶೀರ್ಷೋ ಮಹಾತಪಾಃ ।
ಅಹೋರಾತ್ರೇಕ್ಷಣಪರೋ ವೇದಾಂಗಶ್ರುತಿಭೂಷಣಃ ॥ ೩ ॥
ಆಜ್ಯನಾಸಃ ಸ್ರುವತುಂಡಃ ಸಾಮಘೋಷಸ್ವನೋ ಮಹಾನ್ ।
ಪ್ರಾಗ್ವಂಶಕಾಯೋ ದ್ಯುತಿಮಾನ್ನಾನಾದೀಕ್ಷಾವಿರಾಜಿತಃ ॥ ೪ ॥

ಕನ್ನಡದ ಅನುವಾದ

ಭೂಧರಯಜ್ಞವರಾಹಮಾಹಾತ್ಮ್ಯವರ್ಣನಂ

೧–೬ ಈಶ್ವರನು ಹೇಳುತ್ತಾನೆ:—ತರುವಾಯ ಅಲ್ಲಿಯೇ ಇರುವ ಭೂಧರ ವರಾಹನನ್ನು ನೋಡಬೇಕು. ದೇವಿಕಾತಟದಲ್ಲಿರುವ ಅವನು ತನ್ನ ಹಲ್ಲಿನ ಕೊನೆಯಿಂದ ಭೂಮಿಯನ್ನು ಎತ್ತಿದ್ದರಿಂದ ಭೂಧರವರಾಹನೆಂದು ವಿಖ್ಯಾತನಾದನು. ಇವನು ವೇದಗಳೇ ಪಾದಗಳಾಗುಳ್ಳವನೂ, ಯೂಪಸ್ತಂಭವೆ ದಾಡೆಗಳಾಗುಳ್ಳವನೂ, ಯಜ್ಞವೆಂಬ ಹಲ್ಲುಗಳುಳ್ಳವನೂ, ಸುಜಿಯೇ ಬಾಯಾಗುಳ್ಳವನೂ, ಅಗ್ನಿಯೇ ನಾಲಿಗೆಯಾಗುಳ್ಳವನೂ, ದರ್ಭೆಗಳೇ ಕೂದಲಾಗುಳ್ಳವನೂ, ಬ್ರಹ್ಮನೇ ತಲೆಯಾಗುಳ್ಳವನೂ, ಅತ್ಯಂತ ತಪಸ್ಸುಳ್ಳವನೂ, ಅಹೋರಾತ್ರಗಳೇ ಕಣ್ಣಾಗುಳ್ಳವನೂ, ವೇದಾಂಗಗಳೆ ಕಿವಿ ಯೊಡವೆಯಾಗುಳ್ಳವನೂ, ಆಜ್ಯವೇ ಮೂಗಾಗುಳ್ಳವನೂ, ಸ್ರುವವೇ ಮುಖವಾಗುಳ್ಳವನೂ, ಸಾಮವೇದಧ್ವನಿಯೇ ಸ್ವರವಾಗುಳ್ಳವನೂ, ಹವಿಸ್ಸಿನ ಮನೆಯೇ ಶರೀರವಾಗುಳ್ಳವನೂ, ಕಾಂತಿಯುಳ್ಳವನೂ, ಅನೇಕ ದೀಕ್ಷೆಗಳಿಂದ ವಿರಾಜಿಸುವವನೂ, ದಕ್ಷಿಣೆಯೇ ಹೃದಯವಾಗುಳ್ಳವನೂ, ಯೋಗಿಯೂ, ಮಹಾ

ದಕ್ಷಿಣಾಹೃದಯೋ ಯೋಗೀ ಮಹಾಸತ್ರಾಶಯೋ ಮಹಾನ್ ।
ಉಪಾಕರ್ಮೋಷ್ಠರುಚಕಃ ಪ್ರವರ್ಗ್ಯಾವರ್ತಭೂಷಣಃ ॥ ೫ ॥

ನಾನಾಛಂದೋಗತಿಪಥೋ ಬ್ರಹ್ಮೋಕ್ತಕ್ರಮವಿಕ್ರಮಃ ।
ಭೂತ್ವಾ ಯಜ್ಞವರಾಹೋಽಸೌ ತತ್ರ ಸ್ಥಾನೇ ಸ್ಥಿತೋಽಭವತ್ ॥ ೬ ॥

ಪುಷ್ಯಮಾಸೇ ಹ್ಯಮಾವಾಸ್ಯಾಮೇಕಾದಶ್ಯಾಮಥಾಪಿ ವಾ ।
ಪ್ರಾಪ್ತೇ ಪ್ರಾವೃಷಿ ಕಾಲೇ ಚ ಜ್ಞಾತ್ವಾ ಕನ್ಯಾಗತಂ ರವಿಂ ॥ ೭ ॥

ಪಾಯಸಂ ಗುಡಸಂಯುಕ್ತಂ ಹವಿಷ್ಯಂ ಚ ಗುಡಪ್ಲುತಂ ।
ನಮೋ ವಃ ಪಿತರೋ ರಸಾಯ ಅನ್ನಾದ್ಯಮಭಿಮಂತ್ರಯೇತ್ ॥ ೮ ॥

ತೇಜೋಽಸಿ ಶುಕ್ರಮಿತ್ಯಾಜಂ ದಧಿಕ್ರಾವ್ಣೇನ ವೈ ದಧಿ ।
ಕ್ಷೀರಮಾಜ್ಯಾಯ ಮಂತ್ರೇಣ ವ್ಯಂಜನಾನಿ ಚ ಯಾನಿ ತು ॥ ೯ ॥

ಭಕ್ಷ್ಯಭೋಜ್ಯಾನಿ ಸರ್ವಾಣಿ ಮಹಾನಿಂದ್ರೇಣ ದಾಪಯೇತ್ ।
ಸಂವತ್ಸರೋಽಸಿಯೋ ಮಂತ್ರಂ ಜಪ್ತ್ವಾ ತೇನೋದಕಂ ದ್ವಿಜಃ ॥ ೧೦ ॥

ಏವಂ ಸಂಭೋಜ್ಯ ವೈ ವಿಪ್ರಾನ್ಪಿಂಡದಾನಂ ತು ದಾಪಯೇತ್ ।
ಇತ್ಯನೇನ ವಿಧಾನೇನ ಯಸ್ತತ್ರ ಶ್ರಾದ್ಧಕೃದ್ಭವೇತ್ ॥ ೧೧ ॥

ಸತ್ರವೇ ಕೈಯಾಗುಳ್ಳವನೂ, ಉಪಾಕರ್ಮವೇ ತುಟಿಯಕಾಂತಿಯಾಗುಳ್ಳವನೂ, ಪ್ರವರ್ಗ್ಯವೇ ಒಡವೆಯಾಗುಳ್ಳವನೂ, ನಾನಾವಿಧ ಛಂದಸ್ಸಿನ ರೀತಿಯೇ ದಾರಿಯಾಗುಳ್ಳವನೂ, ವೇದೋಕ್ತರೀತಿಯೇ ಹೆಜ್ಜೆಯಾಗುಳ್ಳವನೂ ಆಗಿ ಆ ಸ್ಥಳದಲ್ಲಿ ನೆಲೆಸಿದನು.

೭–೧೧. ಪುಷ್ಯ ಬಹುಳ ಅಮಾವಾಸ್ಯೆಯದಿನವಾಗಲಿ, ಏಕಾದಶೀದಿನವಾಗಲಿ, ಮಳೆಗಾಲದಲ್ಲಾಗಲಿ ಸೂರ್ಯನು ಕನ್ಯಾರಾಶಿಗತನಾದುದನ್ನು ತಿಳಿದು ಬೆಲ್ಲದಪಾಯಸವನ್ನೂ, ಹವಿಸ್ಸನ್ನೂ "ನಮೋವಃ ಪಿತರೋ ರಸಾಯ" ಇತ್ಯಾದಿ ಮಂತ್ರದಿಂದಲೂ, ತುಪ್ಪವನ್ನು "ತೇಜೋಽಸಿ ಶುಕ್ರೇತ್ಯಾದಿ" ಮಂತ್ರದಿಂದಲೂ, ಕ್ಷೀರವನ್ನು ಆಜ್ಯಾಯೇತ್ಯಾದಿ ಮಂತ್ರದಿಂದಲೂ, ವ್ಯಂಜನ, ಭಕ್ಷ್ಯ, ಭೋಜ್ಯಗಳನ್ನೆಲ್ಲ "ಮಹಾನಿಂದ್ರೇಣೇತ್ಯಾದಿ" ಮಂತ್ರದಿಂದಲೂ, ನೀರನ್ನು "ಸಂವತ್ಸರೋಽಸಿಯೊ" ಎಂಬ ಮಂತ್ರದಿಂದಲೂ ಅಭಿಮಂತ್ರಿಸಿ ಅದರಿಂದ ಬ್ರಾಹ್ಮಣರನ್ನು ಭೋಜನಮಾಡಿಸಿ ಪಿಂಡಪ್ರದಾನಮಾಡಬೇಕು. ಈ ವಿಧಿಯಿಂದ ಶ್ರಾದ್ಧಮಾಡಿದವನ ಪಿತೃಗಳು ಹದಿನಾಲ್ಕು ಮಂದಿ ಇಂದ್ರರಿರುವ

ತಸ್ಯ ತೃಪ್ತಾಸ್ತು ಪಿತರೋ ಯಾವದಿಂದ್ರಾಶ್ಚತುರ್ದಶ ।
ಗಯಾಶ್ರಾದ್ಧಂ ವಿನಾಪೀಹ ಗಯಾಶ್ರಾದ್ಧಫಲಂ ಲಭೇತ್ ॥ ೧೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭೂಧರಯಜ್ಞವರಾಹಮಾಹಾತ್ಮ್ಯವರ್ಣನಂ ನಾಮ
॥ ಸಪ್ತಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ ॥

ವರೆಗೆ ತೃಪ್ತಿಗೊಳ್ಳುವರು. ಅವನು ಗಯಾಶ್ರಾದ್ಧವನ್ನು ಮಾಡದಿದ್ದರೂ ಗಯಾ ಶ್ರಾದ್ಧದ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಭೂಧರಯಜ್ಞವರಾಹಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

ಶೂಲಸ್ಥಾನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶೂಲಸ್ಥಾನಮಿತಿ ಶ್ರುತಂ ।
ದೇವಿಕಾಯಾಸ್ತಟೇ ರಮ್ಯೇ ಭಾಸ್ಕರಂ ವಾರಿತಸ್ಕರಂ ॥ ೧ ॥
ಯತ್ರಾತಪತ್ತಪೋ ಘೋರಂ ವಾಲ್ಮೀಕಿರ್ಮುನಿಪುಂಗವಃ ।
ವಾಲ್ಮೀಕಿನಾಮಾ ವಿಪ್ರರ್ಷಿರ್ಯತ್ರ ಸಿದ್ಧೋ ಮಹಾಮುನಿಃ ॥ ೨ ॥
ಯತ್ರ ಸಪ್ತರ್ಷಯೋ ಮುಷ್ಟಾಸ್ತೇನೈವ ಮುನಿನಾ ಪ್ರಿಯೇ ।
ತಸ್ಯೈವ ಪಶ್ಚಿಮೇ ಭಾಗೇ ಮರೀಚಿಪ್ರಮುಖಾ ದ್ವಿಜಾಃ ॥ ೩ ॥

ದೇವ್ಯುವಾಚ :—

ಕಥಂ ತು ಸಿದ್ಧೋ ವಾಲ್ಮೀಕಿಃ ಕಥಂ ಚೌರ್ಯೇಽಕರೋನ್ಮನಃ ।
ಕಥಂ ಸಪ್ತರ್ಷಯೋ ಮುಷ್ಟಾ ಏತನ್ಮೇ ವದ ಶಂಕರ ॥ ೪ ॥

ಕನ್ನಡದ ಅನುವಾದ

ಶೂಲಸ್ಥಾನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ದೇವಿಕಾತಟದಲ್ಲಿರುವ ಶೂಲಸ್ಥಾನದಲ್ಲಿ ನೆಲೆಸಿರುವ ಸೂರ್ಯನೆಡೆಗೆ ಹೋಗಬೇಕು.

೨. ಇಲ್ಲಿ ವಾಲ್ಮೀಕಿಯೆಂಬ ಬ್ರಹ್ಮರ್ಷಿಯು ಘೋರತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದಿರುವನು.

೩. ಆ ಸ್ಥಳದ ಪಶ್ಚಿಮಭಾಗದಲ್ಲಿ ಮರೀಚಿ ಮೊದಲಾದ ಸಪ್ತರ್ಷಿಗಳ ವಸ್ತುಗಳನ್ನು ವಾಲ್ಮೀಕಿಯು ಲೂಟಿಮಾಡಿರುವನು.

೪. ದೇವಿಯು ಹೇಳುತ್ತಾಳೆ:—ಶಂಕರ ! ವಾಲ್ಮೀಕಿಯು ಹೇಗೆ ಸಿದ್ಧನಾದನು? ಕಳ್ಳತನಮಾಡುವುದರಲ್ಲಿ ಹೇಗೆ ಮನಸ್ಸನ್ನು ಮಾಡಿದನು ? ಸಪ್ತರ್ಷಿಗಳನ್ನು ಹೇಗೆ ಲೂಟಿಮಾಡಿದನು ? ಇದನ್ನು ನನಗೆ ಹೇಳು.

ಈಶ್ವರ ಉವಾಚ :—

ಆಸೀತ್ಪೂರ್ವಂ ದ್ವಿಜೋ ದೇವಿ ನಾಮ್ನಾ ಖ್ಯಾತಃ ಶಮೀಮುಖಃ ।
ಗಾರ್ಹಸ್ಥ್ಯೇ ವರ್ತಮಾನಸ್ಯ ತಸ್ಯ ಪುತ್ರೋ ವ್ಯಜಾಯತ ।
ವೈಶಾಖ ಇತಿ ನಾಮ್ನಾಸೌ ರೌದ್ರಕರ್ಮಾ ವ್ಯಜಾಯತ ॥ ೫ ॥
ಮುಕ್ತ್ವೈಕಾಂ ಗುರುಶುಶ್ರೂಷಾಂ ನಾನ್ಯತ್ಕಿಂಚಿದಸೌ ದ್ವಿಜಃ ।
ಅಕರೋಚ್ಛೋಭನಂ ಕರ್ಮ ದಿವಾಪ್ರಭೃತಿ ನಿತ್ಯಶಃ ॥ ೬ ॥
ಅಥ ಕಾಲೇನ ಮಹತಾ ಪಿತರೌ ತಸ್ಯ ತೌ ಪ್ರಿಯೇ ।
ವಾರ್ಧಕ್ಯಭಾವಮಾಪನ್ನೌ ಭರ್ತವ್ಯೌ ತಸ್ಯ ವಿಹ್ವಲೌ ॥ ೭ ॥
ಸ ನಿತ್ಯಂ ಪದವೀಂ ಗತ್ವಾ ಮುಷಿತ್ವಾ ಲೋಕಾನ್ಸ್ವಶಕ್ತಿತಃ ।
ದ್ರವ್ಯಮಾದಾಯ ಪಿತರೌ ಭಾರ್ಯಾಂ ಚಾಪಿ ಪುಪೋಷ ಚ ॥ ೮ ॥
ಕಸ್ಯಚಿತ್ತ್ವಥ ಕಾಲಸ್ಯ ತೇನ ಮಾರ್ಗೇಣ ಗಚ್ಛತಃ ।
ಸಪ್ತರ್ಷೀಂಶ್ಚ ತದಾಪಶ್ಯತ್ತೀರ್ಥಯಾತ್ರಾಪರಾಯಣಾನ್ ॥ ೯ ॥
ತಾನ್ದೃಷ್ಟ್ವಾ ಯಷ್ಟಿಮುದ್ಯಮ್ಯ ಭರ್ತ್ಸಯನ್ಪರುಷಾಕ್ಷರೈಃ ।
ವಾಕ್ಯೈರುವಾಚ ತಾನ್ಸರ್ವಾಂಸ್ತಿಷ್ಠಧ್ವಮಿತಿ ಭೂರಿಶಃ ॥ ೧೦ ॥
ಅಥ ತೇ ಮುನಯಃ ಶಾಂತಾಃ ಸಮಲೋಷ್ಟಾಶ್ಮಕಾಂಚನಾಃ ।
ಸಮಾಃ ಶತ್ರೌ ಚ ಮಿತ್ರೇ ಚ ರೋಷರಾಗವಿವರ್ಜಿತಾಃ ॥ ೧೧ ॥

---

೫. ಈಶ್ವರನು ಹೇಳುತ್ತಾನೆ:—ದೇವಿ! ಹಿಂದೆ ಶಮೀಮುಖನೆಂಬ ದ್ವಿಜನಿದ್ದನು. ಅವನು ಗೃಹಸ್ಥನಾಗಲು ಅವನಿಗೆ ಭಯಂಕರವಾದ ಕಾರ್ಯವುಳ್ಳ ವೈಶಾಖನೆಂಬ ಮಗನು ಹುಟ್ಟಿದನು.

೬. ಈ ಶಮೀಮುಖನೆಂಬ ಬ್ರಾಹ್ಮಣನು ಹಗಲು ರಾತ್ರಿ ಗುರುಸೇವೆಯನ್ನು ಬಿಟ್ಟು ಬೇರೆಯಾವುದನ್ನೂ ಒಳ್ಳೆಯ ಕೆಲಸವೆಂದರಿಯಲಿಲ್ಲ.

೭. ಪ್ರಿಯಳೆ! ಬಹುಕಾಲದ ಮೇಲೆ ಅವನ ತಂದೆ ತಾಯಿಗಳು ಮುದುಕರಾಗಿ ಪರರ ಪೋಷಣೆಯನ್ನು ಎದುರು ನೋಡುತ್ತಿದ್ದರು.

೮. ಆ ವೈಶಾಖನು ನಿತ್ಯದಲ್ಲಿಯೂ ಮಾರ್ಗದಲ್ಲಿ ನಿಂತು ತನ್ನ ಶಕ್ತ್ಯನುಸಾರ ಮಾರ್ಗಸ್ಥರನ್ನು ಲೂಟಿಮಾಡಿ ದ್ರವ್ಯವನ್ನು ತಂದು ತಂದೆ ತಾಯಿಗಳನ್ನೂ, ಹೆಂಡತಿಯನ್ನೂ ಪೋಷಿಸಿದನು.

೯–೧೦. ಅವನು ಕೆಲವು ಕಾಲದ ಮೇಲೆ ಆ ದಾರಿಯಲ್ಲಿ ಹೋಗುತ್ತಿರುವ ತೀರ್ಥಯಾತ್ರೆಯಲ್ಲಿ ಆಸಕ್ತರಾದ ಸಪ್ತರ್ಷಿಗಳನ್ನು ಕಂಡು ದೊಣ್ಣೆಯನ್ನು ಎತ್ತಿಕೊಂಡು ಕಠಿನವಾದ ಮಾತುಗಳಿಂದ ಹೆದರಿಸುತ್ತ ನಿಲ್ಲಿರಿ ಎಂದನು.

೧೧–೧೨. ಬಳಿಕ ಶಾಂತರೂ, ಮಣ್ಣಿನ ಹೆಂಟೆ, ಕಲ್ಲು, ಚಿನ್ನ ಇವುಗಳನ್ನು ಸಮವಾಗಿ ಕಾಣುವವರೂ, ಶತ್ರುಮಿತ್ರರಲ್ಲಿ ಸಮರೂ, ಕೋಪ, ಅನುರಾಗ ಇವುಗಳಿಲ್ಲ

ಅಸ್ಮಾಕಂ ದರ್ಶನಂ ಚಾಸ್ಯ ಸಂಭಾಷ್ಯಮೃಷಿಭಿಃ ಸಹ ।
ಸಂಜಾತಂ ನಿಷ್ಫಲಂ ಮಾ ಸ್ಯಾದಿತ್ಯುವಾಚಾಂಗಿರಾ ವಚಃ ॥ ೧೨ ॥

ಅಂಗಿರಾ ಉವಾಚ :—

ಭೋ ಭೋಸ್ತಸ್ಕರ ಮೇ ವಾಕ್ಯಂ ಶೃಣುಷ್ವಾವಹಿತಃ ಕ್ಷಣಾತ್ ।
ಆತ್ಮನಸ್ತು ಹಿತಾರ್ಥಾಯ ಸತ್ಯಂ ಚೈವ ವದಾಮ್ಯಹಂ ।
ತವ ಕಃ ಪೋಷ್ಯವರ್ಗೋಽಸ್ತಿ ತಚ್ಚ ಸರ್ವಂ ವದಸ್ವ ಮೇ ॥ ೧೩ ॥

ತಸ್ಕರ ಉವಾಚ :—

ಸ್ಯಾತಾಂ ಮೇ ಪಿತರೌ ವೃದ್ಧೌ ಭಾರ್ಯೈಕಾಪತ್ಯವರ್ಜಿತಾ ।
ಏಕಾ ದಾಸೀ ಹ್ಯಹಂ ಷಷ್ಠೋ ನಾನ್ಯದಸ್ತ್ಯಧಿಕಂ ಮುನೇ ॥ ೧೪ ॥

ಅಂಗಿರಾ ಉವಾಚ :—

ಗತ್ವಾ ಪೃಚ್ಛಸ್ವ ತಾನ್ಸರ್ವಾನ್ಪೋಷ್ಯಾನ್ಸ್ವಾರ್ಜಿತೈರ್ಧನೈಃ ।
ಅಹಂ ಕರೋಮಿ ಪಾಪಾನಿ ಸರ್ವೇ ಯೂಯಂ ತು ಭಕ್ಷಕಾಃ ॥ ೧೫ ॥
ತತ್ಪಾಪಂ ಭವಿತಾ ಕಸ್ಯ ಕಥಯಂತ್ವಿತಿ ಮೇ ಖಲು ।
ತಥೈವ ಗತ್ವಾ ಪಪ್ರಚ್ಛ ಪಿತರೌ ತಾವಥೋಚತುಃ ॥ ೧೬ ॥

ದವರೂ ಆದ ಆ ಮುನಿಗಳಲ್ಲಿ ಅಂಗಿರನೆಂಬ ಮುನಿಯು ನಮ್ಮ ದರ್ಶನ ಮತ್ತು ಸಂಭಾಷಣೆಯು ಇವನಿಗೆ ನಿರರ್ಥಕವಾಗದಿರಲೆಂದು ಇಂತೆಂದನು.

೧೩. ಅಂಗಿರನು ಹೇಳುತ್ತಾನೆ:—ಎಲೆ ಚೋರ! ನೀನು ನಮ್ಮ ಮಾತನ್ನು ಸಾವಧಾನ ಮನಸ್ಸಿನಿಂದ ಕೇಳು, ನಿನ್ನ ಹಿತಕ್ಕಾಗಿ ನಾನು ದಿಟ ನುಡಿಯನ್ನು ನುಡಿಯುವೆನು. ನೀನು ಯಾರನ್ನು ಪೋಷಣೆಮಾಡಬೇಕು? ಅದನ್ನೆಲ್ಲ ನನಗೆ ಹೇಳು.

೧೪. ಕಳ್ಳನು ಹೇಳುತ್ತಾನೆ:—ಮುದುಕರಾದ ನನ್ನ ತಂದೆ ತಾಯಿಗಳು, ಒಬ್ಬಳು ಮಕ್ಕಳಿಲ್ಲದ ಪತ್ನಿ, ಒಬ್ಬಳು ಸೇವಕಳು. ನಾವು ಹೀಗೆ ಐದು ಮಂದಿಗಳಿರುವೆವು. ಆರನೆಯವನಾರೂ ಇರುವುದಿಲ್ಲ.

೧೫–೧೬. ನೀನು ಪಾಪದಿಂದ ಸಂಪಾದಿಸಿದ ಹಣಗಳಿಂದ ಪೋಷಣೆಮಾಡಿದ ಆ ನಿನ್ನ ಪೋಷ್ಯವರ್ಗದವರನ್ನು ಕೇಳು. "ನಾನು ಪಾಪವನ್ನು ಮಾಡಿ ಸಂಪಾದಿಸುತ್ತೇನೆ. ನೀವೆಲ್ಲ ತಿನ್ನ ತಕ್ಕವರು. ಆ ಪಾಪವು ಯಾರಿಗೆ ಸಂಬಂಧಿಸುವುದೆಂದು ನನಗೆ ಶೀಘ್ರವಾಗಿ ಹೇಳಿರಿ". ಎಂದು. ಅವನು ಹೋಗಿ ಹಾಗೆಯೇ ತಂದೆತಾಯಿಗಳನ್ನು ಕೇಳಿದನು.

ಮಾತಾಪಿತರಾವೂಚತುಃ :—
ಏಕಃ ಪಾಪಾನಿ ಕುರುತೇ ಫಲಂ ಭುಂಕ್ತೇ ಮಹಾಜನಃ ।
ಭೋಕ್ತಾರೋ ವಿಪ್ರಮುಚ್ಯಂತೇ ಕರ್ತಾ ದೋಷೇಣ ಲಿಪ್ಯತೇ ॥ ೧೭ ॥
ಯಃ ಕರೋತ್ಯಶುಭಂ ಕರ್ಮ ಕುಟುಂಬಾರ್ಥಂ ತು ಮಂದಧೀಃ ।
ಆತ್ಮಾ ನ ವಲ್ಲಭಸ್ತಸ್ಯ ನೂನಂ ಪುಂಸಃ ಸುಪಾಪಿನಃ ॥ ೧೮ ॥
ಈಶ್ವರ ಉವಾಚ :—
ತಯೋಃ ಸ ವಚನಂ ಶ್ರುತ್ವಾ ಪುನರ್ಭೀತಮನಾಸ್ತದಾ ।
ತಯೋಸ್ತು ಸಂನತಿಂ ಕೃತ್ವಾ ಪಿತರೌ ಪುನರಬ್ರವೀತ್ ॥ ೧೯ ॥
ಯುವಾಭ್ಯಾಂ ಹಿತಮೇವಾಹಂ ಯತ್ಕರೋಮ್ಯಶುಭಂ ಕ್ವಚಿತ್ ।
ತಸ್ಯಾಂಶಂ ಭುಜ್ಯತೇ ಕಿಂಚಿದ್ಯುವಾಭ್ಯಾಂ ವಾ ನ ವೋಚ್ಯತಾಂ ॥ ೨೦ ॥
ಪಿತರಾವೂಚತುಃ :—
ಪೂರ್ವೇ ವಯಸಿ ಪುತ್ರ ತ್ವಮಾವಾಭ್ಯಾಂ ಪಾಲ್ಯ ಏವ ಹಿ ।
ಉತ್ತರೇ ತು ವಯಂ ಪಾಲ್ಯಾಃ ಸಮ್ಯಕ್ಪುತ್ರ ತ್ವಯಾ ಪುನಃ ॥ ೨೧ ॥
ಇತರೇತರಧರ್ಮೋऽಯಂ ನಿರ್ದಿಷ್ಟಃ ಪದ್ಮಯೋನಿನಾ ।
ಆವಾಭ್ಯಾಂ ಯತ್ಕೃತಂ ಕರ್ಮ ಯುಷ್ಮದರ್ಥಂ ಶುಭಾಶುಭಂ ।
ಭೋಕ್ತವ್ಯಮೋ ವಯಮೇವೇಹ ತತ್ಸರ್ವಂ ನಾತ್ರ ಸಂಶಯಃ ॥ ೨೨ ॥

---

೧೭. ತಂದೆ ತಾಯಿಗಳು ಹೇಳುತ್ತಾರೆ:—ಒಬ್ಬನು ಪಾಪಗಳನ್ನು ಮಾಡುತ್ತಾನೆ. ಅದರ ಫಲವನ್ನು ಅನೇಕ ಜನರು ಅನುಭವಿಸುತ್ತಾರೆ. ಅನುಭವಿಸುವವರಿಗೆ ಪಾಪವು ಸಂಬಂಧಿಸುವುದಿಲ್ಲ. ಕರ್ತನಿಗೆ ಪಾಪವು ಸಂಬಂಧಿಸುವುದು.

೧೮. ಮೂಢನಾದ ಯಾವನು ಕುಟುಂಬಕ್ಕಾಗಿ ದುಷ್ಕರ್ಮವನ್ನಾಚರಿಸುವನೊ; ಪಾಪಿಯಾದ ಅವನಿಗೆ ಅವನ ಆತ್ಮವೂ ಪ್ರಿಯವಲ್ಲ.

೧೯. ಈಶ್ವರನು ಹೇಳುತ್ತಾನೆ:—ಆಗ ಆ ವೈಶಾಖನು ಅವರ ಮಾತನ್ನು ಕೇಳಿ ಭಯಗೊಂಡು ಅವರಿಗೆ ವಂದಿಸಿ ಮರಳಿ ಇಂತೆಂದನು.

೨೦. ನಿಮ್ಮ ಹಿತಕ್ಕಾಗಿ ನಾನು ಮಾಡಿದ ಪಾಪದ ಭಾಗವು ನಿಮಗೆ ಸಂಬಂಧಿಸುವುದಿಲ್ಲವೊ? ಹೇಳಿರಿ.

೨೧. ತಂದೆ ತಾಯಿಗಳು ಹೇಳುತ್ತಾರೆ:—ಮಗು! ನಾವು ಬಾಲ್ಯದಲ್ಲಿ ನಿನ್ನನ್ನು ಕಾಪಾಡಬೇಕು. ನೀನು ಮುಪ್ಪಿನಲ್ಲಿ ನಮ್ಮನ್ನು ಪೋಷಿಸಬೇಕು.

೨೨. ಈ ಪರಸ್ಪರ ಧರ್ಮವನ್ನು ಬ್ರಹ್ಮನು ನಿರ್ಧರಿಸಿರುವನು. ನಿನಗಾಗಿ ನಾವು ಮಾಡಿದ ಶುಭಾಶುಭ ಕರ್ಮಗಳ ಫಲಗಳನ್ನೆಲ್ಲ ನಾವೇ ಅನುಭವಿಸುವೆವು.

ಅಥ ತ್ವಮಪಿ ಯದ್ವತ್ಸ ಪ್ರಕರೋಷಿ ಶುಭಾಶುಭಂ ।
ಭೋಕ್ಷ್ಯಸೇ ಸಕಲಂ ತದ್ವತ್ಸ್ವಯಂ ನಾನ್ಯಃ ಪರತ್ರ ಚ ॥ ೨೩ ॥
ಅವಶ್ಯಂ ಸ್ವಯಮಶ್ನಾತಿ ಕೃತಂ ಕರ್ಮ ಶುಭಾಶುಭಂ ।
ತಸ್ಮಾನ್ನರೇಣ ಕರ್ತವ್ಯಂ ಶುಭಂ ಕರ್ಮ ವಿಪಶ್ಚಿತಾ ॥ ೨೪ ॥
ಚೌರ್ಯಂ ವಾಥ ಕೃಷಿಂ ವಾಥ ಕುಸೀದಂ ವಾಥ ಪುತ್ರಕ ।
ವಾಣಿಜ್ಯಮಥವಾ ಪ್ರೇಷ್ಯಂ ಕೃತ್ವಾಸ್ಮಾಕಂ ಚ ಭೋಜನಂ ।
ಅಹರ್ನಿಶಂ ತ್ವಯಾ ದೇಯಂ ನ ದೋಷೋಽಸ್ಮಾಸು ಪುತ್ರಕ ॥ ೨೫ ॥
ತಾಭ್ಯಾಂ ತದ್ವಚನಂ ಶ್ರುತ್ವಾ ತತೋ ಭಾರ್ಯಾಮಭಾಷತ ।
ತದೇವ ವಾಕ್ಯಂ ಸಾಽವೋಚದ್ಯತ್ಪ್ರೋಕ್ತಂ ಗುರುಭಿಃ ಪುರಾ ।
ತತೋ ವೈರಾಗ್ಯಮಾಪನ್ನೋ ವೈಶಾಖೋ ಮುನಿಸತ್ತಮಃ ॥ ೨೬ ॥
ಗರ್ಹಯನ್ನೇವಮಾತ್ಮಾನಂ ಭೂಯೋ ಭೂಯಃ ಸುದುಃಖಿತಃ ।
ಧಿಙ್ಮಾಂ ದುಷ್ಕೃತಕರ್ಮಾಣಂ ಪಾಪಕರ್ಮರತಂ ಸದಾ ॥ ೨೭ ॥
ವಿವೇಕೇನ ಪರಿತ್ಯಕ್ತಂ ಸತ್ಸಂಗೇನ ವಿವರ್ಜಿತಂ ।
ಯಃ ಕರೋತಿ ನರಃ ಪಾಪಂ ನ ಸೇವಯತಿ ಪಂಡಿತಾನ್ ।
ನ ಚಾತ್ಮಾ ವಲ್ಲಭಸ್ತಸ್ಯ ಏತನ್ಮೇ ವರ್ತತೇ ಹೃದಿ ॥ ೨೮ ॥

---

೨೩. ಹಾಗೆಯೇ ನೀನು ಮಾಡಿದ ಶುಭಾಶುಭ ಕರ್ಮಗಳ ಫಲಗಳನ್ನು ನೀನೇ ಅನುಭವಿಸುವೆ.

೨೪. ತಾನು ಮಾಡಿದ ಶುಭಾಶುಭಕರ್ಮಗಳ ಫಲಗಳನ್ನು ತಾನೇ ಅನುಭವಿಸಬೇಕಾಗಿರುವುದರಿಂದ ಪ್ರಾಜ್ಞನಾದ ಮನುಷ್ಯನು ಶುಭಕರ್ಮವನ್ನೇ ಮಾಡಬೇಕು.

೨೫. ಮಗು! ಕಳ್ಳತನವಾಗಲಿ, ಕೃಷಿಯಾಗಲಿ, ಕುಸೀದ (ಬಡ್ಡಿಯಿಂದ ಜೀವಿಸುವುದು) ವಾಗಲಿ. ವ್ಯಾಪಾರವಾಗಲಿ, ಸೇವೆಯಾಗಲಿ ಇವುಗಳನ್ನು ಮಾಡಿ ನೀನು ಹಗಲು ರಾತ್ರಿ ನಮಗೆ ಭೋಜನವನ್ನೀಯಬೇಕು. ನಮಗೆ ದೋಷವಿಲ್ಲ.

೨೬–೨೮. ಆ ವೈಶಾಖನು ತಂದೆತಾಯಿಗಳ ಆ ಮಾತನ್ನು ಕೇಳಿ ಪತ್ನಿಯನ್ನೂ ಹಾಗೆಯೇ ಪ್ರಶ್ನೆಮಾಡಿದನು. ಅವಳೂ ತಂದೆತಾಯಿಗಳು ಹೇಳಿದ ಮಾತನ್ನೇ ಹೇಳಲು ವೈರಾಗ್ಯಗೊಂಡವನಾಗಿ ಹೀಗೆ ತನ್ನನ್ನು ನಿಂದಿಸಿಕೊಂಡನು. ದುಷ್ಕೃತವನ್ನಾಚರಿಸಿದವನೂ, ಪಾಪಾಸಕ್ತನೂ, ವಿವೇಕವಿಲ್ಲದವನೂ, ಸಜ್ಜನರ ಸಹವಾಸವನ್ನು ಮಾಡದವನೂ ಆದ ನನಗೆ ನಿಂದೆಯಾಗಲಿ. ಪಾಪವನ್ನು ಆಚರಿಸಿದವನೂ, ಪಂಡಿತರನ್ನು ಸೇವಿಸದವನೂ ಆದವನಿಗೆ ತನ್ನ ಆತ್ಮವೇ ಪ್ರಿಯವಲ್ಲ. ಇದನ್ನು ನಾನರಿತೆನು.

ಏವಂ ವಿಕಲ್ಪಹೃದಯೋ ಗತ್ವಾ ಸ ಋಷಿಸನ್ನಿಧೌ ।
ಉವಾಚ ಶ್ಲಕ್ಷ್ಣಯಾ ವಾಚಾ ಗಮ್ಯತಾಮಿತಿ ಸಾದರಂ ॥ ೨೯ ॥
ಬೃಸೀ ಪ್ರಗೃಹ್ಯತಾಮೇಷಾ ತಥೈವ ಚ ಕಮಂಡಲುಃ ।
ವಲ್ಕಲಾನಿ ಚ ಚೀರಾಣಿ ಮೃಗಚರ್ಮಾಣ್ಯಶೇಷತಃ ॥ ೩೦ ॥
ಕ್ಷಮ್ಯತಾಮಪರಾಧೋ ಮೇ ದೀನಸ್ಯ ಕೃಪಣಸ್ಯ ಚ ।
ಸತ್ಸಂಗೇನ ವಿಯುಕ್ತಸ್ಯ ಮೂರ್ಖಸ್ಯ ಮುನಿಸತ್ತಮಾಃ ॥ ೩೧ ॥
ಅದ್ಯಪ್ರಭೃತಿ ನಿವೃತ್ತಃ ಕರ್ಮಣೋಽಸ್ಮಾಹಮೇವ ಚ ।
ರೌದ್ರಸ್ಯ ಸುನೃಶಂಸಸ್ಯ ಸಾಧುಭಿರ್ಗರ್ಹಿತಸ್ಯ ಚ ।
ತಸ್ಮಾತ್ಕಥಯತಾಸ್ಮಾಕಂ ನಿವೃತ್ತಿಂ ಚಾಸ್ಯ ಕರ್ಮಣಃ ॥ ೩೨ ॥
ಯೇನ ಯುಷ್ಮತ್ಪ್ರಸಾದೇನ ಪಾಪಾನ್ಮೋಕ್ಷಮಹಂ ವ್ರಜೇ ।
ಉಪವಾಸೋಽಥ ಮಂತ್ರೋ ವಾ ನಿಯಮೋ ವಾಥ ಸಂಯಮಃ ॥ ೩೩ ॥

ಋಷಯ ಊಚುಃ :—

ಸಾಧು ಪೃಷ್ಟಂ ತ್ವಯಾ ವತ್ಸ ತತ್ತ್ವಮೇಕಮನಾಃ ಶೃಣು ।
ಸಂಗೃಹ್ಯ ಕೀರ್ತಯಿಷ್ಯಾಮಸ್ತ್ವಯಾಽಽಖ್ಯೇಯಂ ನ ಕಸ್ಯಚಿತ್ ॥ ೩೪ ॥

೨೯–೩೦. ಹೀಗೆ ವಿಕಲ್ಪಗೊಂಡ ಮನಸ್ಸುಳ್ಳ ಅವನು ಋಷಿಗಳ ಹತ್ತಿರಕ್ಕೆ ಹೋಗಿ ಮೃದುನುಡಿಯಿಂದ ವಿಶ್ವಾಸಪೂರ್ವಕವಾಗಿ ಹೀಗೆಂದನು. "ನೀವು ಮುಂದಕ್ಕೆ ಹೋಗಿರಿ. ನಿಮ್ಮ ಆಸನ, ಕಮಂಡಲು, ನಾರುಬಟ್ಟೆ, ಚೀರ, ಕೃಷ್ಣಾಜಿನ ಇವುಗಳನ್ನು ತೆಗೆದುಕೊಳ್ಳಿರಿ.

೩೧. ಮುನಿವರ್ಯರೆ! ಕೃಪಣನೂ, ಸಜ್ಜನಸಹವಾಸವಿಲ್ಲದವನೂ, ಮೂರ್ಖನೂ ಆದ ನನ್ನ ತಪ್ಪನ್ನು ಕ್ಷಮಿಸಿರಿ.

೩೨. ನಾನು ಇದು ಮೊದಲ್ಗೊಂಡು ಈ ಭಯಂಕರವೂ, ಕ್ರೂರವೂ, ಸಾಧುನಿಂದಿತವೂ ಆದ ಕರ್ಮವನ್ನಾಚರಿಸುವುದಿಲ್ಲ. ಆದ್ದರಿಂದ ಇದಕ್ಕೆ ಪ್ರಾಯಶ್ಚಿತ್ತವನ್ನು ಹೇಳಿರಿ.

೩೩. ನಿಮ್ಮ ಅನುಗ್ರಹದಿಂದ ಯಾವುದನ್ನು ಮಾಡಿ ನಾನು ಈ ಪಾಪದಿಂದ ಮುಕ್ತನಾಗುವೆನು. ಉಪವಾಸವೇ? ಮಂತ್ರವೇ ? ವ್ರತವೇ !ತಪಸ್ಸೆ ?

೩೪. ಋಷಿಗಳು ಹೇಳುತ್ತಾರೆ :—ಮಗು ! ನೀನು ತತ್ವವಿಷಯವನ್ನು ಚೆನ್ನಾಗಿ ಪ್ರಶ್ನೆಮಾಡಿದೆ. ಇದನ್ನು ಒಮ್ಮನಸ್ಸಿನಿಂದ ಕೇಳು. ಸಂಗ್ರಹಿಸಿ ಹೇಳುವೆವು. ನೀನು ಇದನ್ನು ಯಾರಿಗೂ ಹೇಳಬಾರದು.

ತೇನ ಜಪ್ತೇನ ಪಾಪಾತ್ಮನ್ಮೋಕ್ಷಂ ಪ್ರಾಪ್ಸ್ಯಸಿ ನಿಶ್ಚಿತಂ ।
ಝೂಟಘೋಟಸ್ತ್ವಯಾ ಕೀರ್ತ್ಯೋ ಮಂತ್ರೋಽಯಂ ಚತುರಕ್ಷರಃ ॥೩೫॥
ಸರ್ವಪಾಪಹರೋ ನೃಣಾಂ ಸ್ವರ್ಗಮೋಕ್ಷಫಲಪ್ರದಃ ।
ಸ ತದೈವಂ ಹಿ ತೈಃ ಪ್ರೋಕ್ತೋ ವೈಶಾಖೋ ಮುನಿಪುಂಗವೈಃ ।
ತಸ್ಥೌ ಜಾಪ್ಯಪರೋ ನಿತ್ಯಂ ಗತಾಸ್ತೇ ಮುನಿಪುಂಗವಾಃ ॥ ೩೬ ॥
ತಸ್ಯೈವಂ ಜಪತೋ ದೇವಿ ದೇವಿಕಾಯಾಸ್ತಟೇ ಶುಭೇ ।
ಅನಿಶಂ ಗುರುಭಕ್ತಸ್ಯ ಸಮಾಧಿಃ ಸಮುಪದ್ಯತ ॥ ೩೭ ॥
ಕ್ಷುತ್ಪಿಪಾಸಾ ತದಾ ನಷ್ಟಾ ಶುದ್ಧಿಮಾಯಾತ್ಕಲೇವರಂ ॥ ೩೮ ॥
ಮಂತ್ರೇ ತೀರ್ಥೇ ದ್ವಿಜೇ ದೈವೇ ದೈವಜ್ಞೇ ಭೇಷಜೇ ಗುರೌ ।
ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ ॥ ೩೯ ॥
ನಿರ್ಮಲೋಽಯಂ ಸ್ವಭಾವೇನ ಪರಮಾತ್ಮಾ ಯಥಾ ಹಿತಃ ।
ಉಪಾಧಿಸಂಗಮಾಸಾದ್ಯ ವಿಕಾರಂ ಸ್ಫಟಿಕೋ ಯಥಾ ॥ ೪೦ ॥
ಯಥಾ ಚ ಭ್ರಮರೀ ವಂಧ್ಯಾ ಲಬ್ಧ್ವಾ ಜೀವಮಣುಂ ಕ್ವಚಿತ್ ।
ಸ್ವಸ್ಥಾನೇ ಸ್ಥಾಪ್ಯ ತಂ ಧ್ಯಾಯೇದ್ಭ್ರಮರೀ ಧ್ಯಾನಸಂಯುತಾ ॥ ೪೧ ॥

೩೫–೩೬. ಅದನ್ನು ಜಪಿಸಿದರೆ ನೀನು ನಿಶ್ಚಯವಾಗಿಯೂ ಪಾಪಮುಕ್ತನಾಗುವೆ. ನಾಲ್ಕು ಅಕ್ಷರಗಳುಳ್ಳುದೂ, ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವುದೂ, ಸ್ವರ್ಗಮೋಕ್ಷಗಳನ್ನೀಯುವುದೂ ಆದ ಈ ಝೂಟಘೋಟವೆಂಬ ಮಂತ್ರವನ್ನು ನೀನು ಜಪಿಸಬೇಕು" ಮುನಿವರ್ಯರು ಹೀಗೆಂದು ಹೇಳಿ ಹೊರಟು ಹೋಗಲು ವೈಶಾಖನು ನಿತ್ಯವೂ ಅದನ್ನು ಜಪಿಸುತ್ತಿದ್ದನು

೩೭. ದೇವಿ ! ಗುರುಭಕ್ತನಾದ ಅವನು ದೇವಿಕಾದಡದಲ್ಲಿ ಹೀಗೆ ಯಾವಾಗಲೂ ಜಪಿಸುತ್ತಿರಲು ಸಮಾಧಿಯುಂಟಾಯಿತು.

೩೮. ಆಗ ಅವನಿಗೆ ಹಸಿವು ಬಾಯಾರಿಕೆಗಳಿರಲಿಲ್ಲ. ದೇಹವು ಶುದ್ಧವಾಯಿತು.

೩೯. ಮಂತ್ರ, ತೀರ್ಥ, ಬ್ರಾಹ್ಮಣ, ದೇವತೆ, ಜೋಯಿಸ, ಔಷಧ, ಗುರು ಇವರಲ್ಲಿ ಯಾರಿಗೆ ಯಾವರೀತಿ ಭಾವನೆಯಿರುವುದೋ, ಅವರಿಗೆ ಸಿದ್ಧಿಯೂ ಅಂತಹದೇ ಆಗುವುದು.

೪೦. ಈ ಪರಮಾತ್ಮನು ಸ್ವಭಾವದಿಂದ ನಿರ್ಮಲನಾದರೂ ಉಪಾಧಿಯ ಸಂಬಂಧದಿಂದ ಸ್ಫಟಿಕಮಣಿಯು ವಿಕಾರಗೊಳ್ಳುವಂತೆ ವಿಕೃತನಾಗುವನು.

೪೧–೪೨. ಹೇಗೆ ಬಂಜೆಯಾದ ಹೆಣ್ಣುದುಂಬಿಯು ಸಣ್ಣ ಪ್ರಾಣಿಯೊಂದನ್ನು ಹೊಂದಿ ಅದನ್ನು ತನ್ನ ಗೂಡಿನಲ್ಲಿರಿಸಿ ಧ್ಯಾನಿಸುತ್ತಿರಲು ಆ ಪ್ರಾಣಿಯು ಬೇರೆ

ಸ ತು ತದ್ಧ್ಯಾನಸಂವೃದ್ಧೋ ಜೀವೋ ಭವತಿ ತಾದೃಶಃ ।
ಅನ್ಯಯೋನ್ಯುದ್ಭವೋ ವಾಪಿ ತಥಾ ನಿದರ್ಶನಂ ಸತಾಂ ॥ ೪೨ ॥
ಆದಿಷ್ಟೋ ಗುರುಣಾ ಯಶ್ಚ ವಿಕಲ್ಪಂ ಯದಿ ಗಚ್ಛತಿ ।
ನಾಸೌ ಸಿದ್ಧಿಮವಾಪ್ನೋತಿ ಮಂದಭಾಗ್ಯೋ ಯಥಾ ನಿಧಿಂ ॥ ೪೩ ॥
ಏವಂ ವರ್ಷಸಹಸ್ರಾಣಿ ಸಮತೀತಾನಿ ಭೂರಿಶಃ ।
ತಸ್ಯ ಜಾಪ್ಯಪರಸ್ಯೈವ ಅಮೃತತ್ವಂ ಗತಸ್ಯ ಚ ॥ ೪೪ ॥
ತತಃ ಕಾಲಕ್ರಮೇಣೈವ ವಲ್ಮೀಕೇನ ಸ ವೇಷ್ಟಿತಃ ।
ಯೇನಾಸೌ ಸರ್ವತೋ ವ್ಯಾಪ್ತೋ ನ ಚ ತಂ ಸ ಬುಬೋಧ ವೈ ॥ ೪೫ ॥
ಕಸ್ಯಚಿತ್ತ್ವಥ ಕಾಲಸ್ಯ ಮುನಯಸ್ತೇ ಸಮಾಗತಾಃ ।
ತಂ ಪ್ರದೇಶಂ ತು ಸಂಪ್ರೇಕ್ಷ್ಯ ಸಹಾಯ್ಯಮಿತರೇತರಂ ।
ಊಚುಃ ಪರಸ್ಪರಂ ಸರ್ವೇ ದತ್ವಾ ಚೈವ ಕರೈಃ ಕರಂ ॥ ೪೬ ॥

ಋಷಯ ಊಚುಃ :—

ಅತ್ರಾಸೌ ತಸ್ಕರಃ ಪ್ರಾಪ್ತೋ ವೈಶಾಖೋ ದಾರುಣಾಕೃತಿಃ ।
ಯೇನ ಸರ್ವೇ ವಯಂ ಮುಷ್ಟಾ ಅಸ್ಮಿನ್ಸ್ಥಾನೇ ಸಮಾಗತಾಃ ॥ ೪೭ ॥

ಜಾತಿಯವನಾದರೂ ಭ್ರಮರಿಯ ಧ್ಯಾನದಿಂದ ವೃದ್ಧಿಗೊಂಡು ಆ ದುಂಬಿಯಂತೆಯೇ ಆಗುವುದೊ, ಹಾಗೆಯೇ ಸಜ್ಜನರೂ ಆಗುವರು.

೪೩. ಮನುಷ್ಯನು ಗುರುವಿನಿಂದ ಉಪದೇಶವನ್ನು ಪಡೆದು ಅದನ್ನು ವ್ಯತ್ಯಾಸಗೊಳಿಸಿದರೆ ಬಡವನು ನಿಧಿಯನ್ನು ಪಡೆಯದಿರುವಂತೆ ಸಿದ್ಧಿಯನ್ನು ಹೊಂದುವುದಿಲ್ಲ.

೪೪. ಆ ವೈಶಾಖನು ಹೀಗೆ ಜಪನಿರತನಾಗಿ ಸಮಾಧಿಯನ್ನು ಹೊಂದಿರಲು ಸಾವಿರ ವರ್ಷಗಳು ಕಳೆದುವು.

೪೫. ಬಳಿಕ ಅವನನ್ನು ಸುತ್ತಲೂ ಹುತ್ತವು ಆವರಿಸಲು ಅವನು ಅದನ್ನರಿಯಲಿಲ್ಲ.

೪೬. ಒಂದಾನೊಂದು ಕಾಲದಲ್ಲಿ ತಿರುಗಿ ಆ ಸಪ್ತರ್ಷಿಗಳು ಆ ಸ್ಥಳಕ್ಕೆ ಬಂದು ಸಹಾಯಕ್ಕಾಗಿ ಪರಸ್ಪರ ಕೈಯನ್ನು ಹಿಡಿದುಕೊಂಡು ಇಂತೆಂದರು.

೪೭. ಋಷಿಗಳು ಹೇಳುತ್ತಾರೆ :—ಭಯಂಕರಾಕೃತಿಯುಳ್ಳ ವೈಶಾಖನೆಂಬ ಕಳ್ಳನು ಇಲ್ಲಿಗೆ ಬಂದು ನಮ್ಮನ್ನು ಲೂಟಿಮಾಡಿರುವನು.

ಏವಂ ಸಂಜಲ್ಪಮಾನಾಸ್ತೇ ಶುಶ್ರುವುಃ ಶಬ್ದಮುತ್ತಮಂ ।
ವಲ್ಮೀಕಮಧ್ಯತೋ ವ್ಯಕ್ತಂ ತತಸ್ತೇ ಕೌತುಕಾನ್ವಿತಾಃ ॥ ೪೮ ॥
ಅಖನಂಸ್ತತ್ರ ವಲ್ಮೀಕಂ ಕುಶೀಭಿಃ ಪರ್ವತೋಪಮಂ ॥ ೪೯ ॥
ಅಥ ತೇ ದದೃಶುಸ್ತತ್ರ ವಿಶಾಖಂ ಮುನಿಸತ್ತಮಾಃ ।
ಜಪಂತಮಸಕೃನ್ಮಂತ್ರಂ ತಮೇವ ಚತುರಕ್ಷರಂ ॥ ೫೦ ॥
ತಂ ಸಮಾಧಿಗತಂ ಜ್ಞಾತ್ವಾ ಭೇಷಜ್ಯೈರ್ಯೋಗಸಂಮತೈಃ ।
ಮಮರ್ದುಃ ಸರ್ವತೋ ವಿಪ್ರಾಸ್ತತ್ರ ಸುಪ್ತತನೌ ಭೃಶಂ ॥ ೫೧ ॥
ತತೋಽಬ್ರವೀದೃಷೀನ್ಸರ್ವಾನ್ಸ್ವಮರ್ಥಂ ಗೃಹ್ಯತಾಂ ದ್ವಿಜಾಃ ।
ಯುಷ್ಮದೀಯಂ ಗೃಹೀತಂ ಯತ್ಪಾಪೇನಾಕೃತಬುದ್ಧಿನಾ ॥ ೫೨ ॥
ಗಮ್ಯತಾಂ ತೀರ್ಥಯಾತ್ರಾಯಾಂ ಸರ್ವೇ ಮುಕ್ತಾ ಮಯಾ ದ್ವಿಜಾಃ ।
ವಾಚ್ಯೌ ಮೇ ಪಿತರೌ ಗತ್ವಾ ತಥಾ ಭಾರ್ಯಾ ದ್ವಿಜೋತ್ತಮಾಃ ॥ ೫೩ ॥
ಸರ್ವಸಂಗಪರಿತ್ಯಕ್ತೋ ವಿಶಾಖಃ ಸಮಪದ್ಯತ ।
ದರ್ಶನಂ ಕಾಂಕ್ಷತೇ ನೈವ ಭವದ್ಭಿಸ್ತು ಯಥಾ ಪುರಾ ॥ ೫೪ ॥

ಋಷಯ ಊಚು :—

ಬಹುವರ್ಷಾಣ್ಯತೀತಾನಿ ತವಾತ್ರ ವಸತೋ ಮುನೇ ।
ಸರ್ವೇ ತೇ ನಿಧನಂ ಪ್ರಾಪ್ತಾ ಯೇ ಚಾನ್ಯೇ ತೇ ಕುಟುಂಬಿನಃ ॥ ೫೫ ॥

೪೮–೪೯. ಹೀಗೆ ಮಾತಾಡುತ್ತಿರುವ ಅವರು ಹುತ್ತದ ಮಧ್ಯದಿಂದ ಬಂದ ಸ್ಪಷ್ಟವಾದ ಸ್ವರವನ್ನು ಕೇಳಿ ಕುತೂಹಲಗೊಂಡವರಾಗಿ ಕಬ್ಬಿಣದ ಹಾರೆಯಿಂದ ಬೆಟ್ಟದಂತಿರುವ ಆ ಹುತ್ತವನ್ನು ಅಗೆದರು.

೫೦. ಬಳಿಕ ಅವರು ಅಲ್ಲಿ ಎಡೆಬಿಡದೆ ಆ ನಾಲ್ಕು ಅಕ್ಷರಗಳುಳ್ಳ ಮಂತ್ರವನ್ನು ಜಪಿಸುತ್ತಿರುವ ವಿಶಾಖನನ್ನು ಕಂಡರು.

೫೧. ಆ ಮುನಿಗಳು ಅವನು ಸಮಾಧಿಯಲ್ಲಿರುವನೆಂದರಿತು ಯೋಗಶಾಸ್ತ್ರೋಕ್ತವಾದ ಔಷಧಗಳಿಂದ ಮಲಗಿರುವ ಅವನ ದೇಹವನ್ನು ಚೆನ್ನಾಗಿ ಉಜ್ಜಿದರು.

೫೨. ಬಳಿಕ ಆ ವೈಶಾಖನು ಆ ಮುನಿಗಳನ್ನು ಕುರಿತು, "ಬ್ರಾಹ್ಮಣರ! ಪಾಪಿಯಾದ ನಾನು ಅಪಹರಿಸಿದ ನಿಮ್ಮ ವಸ್ತುಗಳನ್ನೆಲ್ಲ ತೆಗೆದುಕೊಳ್ಳಿರಿ.

೫೩–೫೪. ನೀವು ತೀರ್ಥಯಾತ್ರೆಗೆ ಹೋಗಿರಿ, ನನ್ನ ತಂದೆತಾಯಿಗಳಿಗೂ, ಪತ್ನಿಗೂ ವೈಶಾಖನು ವಿರಕ್ತನಾಗಿರುವನು. ನಿಮ್ಮ ದರ್ಶನವನ್ನು ಮೊದಲಿನಂತೆ ಬಯಸುವುದಿಲ್ಲ ಎಂದು ತಿಳಿಸಿರಿ" ಎಂದನು.

೫೫. ಋಷಿಗಳು ಹೇಳುತ್ತಾರೆ:—ಮುನಿಯೆ! ನೀನು ಇಲ್ಲಿ ವಾಸಿಸುತ್ತಿರುವಾಗಲೆ ಅನೇಕ ವರ್ಷಗಳು ಕಳೆದು ಹೋದುವು, ನಿನ್ನ ಬಂಧು ವರ್ಗದವರೆಲ್ಲ ಮೃತರಾಗಿರುವರು.

ವಯಂ ಚಿರಾತ್ಸಮಾಯಾತಾಃ ಸ್ಥಾನೇಽಸ್ಮಿನ್ಮನಿಸತ್ತಮಾಃ ।
ಸ ತ್ವಂ ಸಿದ್ಧಿಮನುಪ್ರಾಪ್ತೋ ಮಂತ್ರಾದಸ್ಮಾದಸಂಶಯಂ ॥ ೫೬ ॥
ಯಸ್ಮಾತ್ತ್ವಂ ಮಂತ್ರಮೇಕಾಗ್ರೋ ಧ್ಯಾಯನ್ವಲ್ಮೀಕಮಾಶ್ರಿತಃ ।
ತಸ್ಮಾದ್ವಾಲ್ಮೀಕಿನಾಮಾ ತ್ವಂ ಭವಿಷ್ಯಸಿ ಮಹೀತಲೇ ॥ ೫೭ ॥
ಸ್ವಚ್ಛಂದಾ ಭಾರತೀ ದೇವೀ ಜಿಹ್ವಾಗ್ರೇ ತೇ ಭವಿಸ್ಯತಿ ।
ಕೃತ್ವಾ ರಾಮಾಯಣಂ ಕಾವ್ಯಂ ತತೋ ಮೋಕ್ಷಂ ಗಮಿಷ್ಯಸಿ ॥ ೫೮ ॥

ವಿಶಾಖ ಉವಾಚ :—

ಗೃಹ್ಯತಾಂ ದ್ವಿಜಶಾರ್ದೂಲಾಃ ಪ್ರಸನ್ನಾ ಗುರುದಕ್ಷಿಣಾ ।
ಯೇನಾಹಮನೃಣೋ ಭೂತ್ವಾ ಕರೋಮಿ ಸುಮಹತ್ತಪಃ ॥ ೫೯ ॥

ಋಷಯ ಊಚುಃ :—

ಏಷಾ ನೋ ದಕ್ಷಿಣಾ ವಿಪ್ರ ಯಸ್ತ್ವಂ ಸಿದ್ಧಿಮುಪಾಗತಃ ।
ಸರ್ವಕಾಮಸಮೃದ್ಧಾತ್ಮಾ ಕೃತಕೃತ್ಯಾ ವಯಂ ಮುನೇ ॥ ೬೦ ॥
ವರಂ ವರಯ ಭೂಯಸ್ತ್ವಂ ಯಸ್ತೇ ಮನಸಿ ವರ್ತತೇ ॥ ೬೧ ॥

---

೫೬. ನಾವು ಅನೇಕ ವರ್ಷಗಳ ತರುವಾಯ ಇಲ್ಲಿಗೆ ಬಂದಿರುವೆವು. ನೀನು ಈ ಮಂತ್ರದಿಂದ ನಿಶ್ಚಯವಾಗಿಯೂ ಸಿದ್ಧಿಯನ್ನು ಹೊಂದಿರುವೆ.

೫೭. ನೀನು ಚಿತ್ತೈಕಾಗ್ರ್ಯದಿಂದ ಈ ಮಂತ್ರವನ್ನು ಜಪಿಸುತ್ತ ಹುತ್ತವನ್ನಾಶ್ರಯಿಸಿದ್ದರಿಂದ ಪ್ರಪಂಚದಲ್ಲಿ ವಾಲ್ಮೀಕಿಯೆಂದು ಪ್ರಸಿದ್ಧನಾಗುವೆ.

೫೮. ನಿನ್ನ ನಾಲಿಗೆಯ ತುದಿಯಲ್ಲಿ ಭಾರತೀದೇವಿಯು ಸ್ವೇಚ್ಛೆಯಾಗಿ ವಿಹರಿಸುವಳು. ನೀನು ರಾಮಾಯಣವೆಂಬ ಕಾವ್ಯವನ್ನು ರಚಿಸಿ ಮೋಕ್ಷವನ್ನು ಪಡೆಯುವೆ.

೫೯. ವಿಶಾಖನು ಹೇಳುತ್ತಾನೆ:—ದ್ವಿಜೋತ್ತಮರೆ! ಪ್ರಸನ್ನರಾಗಿ ಗುರುದಕ್ಷಿಣೆಯನ್ನು ತೆಗೆದುಕೊಳ್ಳಿರಿ. ಇದರಿಂದ ನಾನು ಋಣಮುಕ್ತನಾಗಿ ಮಹಾತಪಸ್ಸನ್ನಾಚರಿಸುವೆನು.

೬೦. ಋಷಿಗಳು ಹೇಳುತ್ತಾರೆ:—ಬ್ರಾಹ್ಮಣ! ನೀನು ಮಂತ್ರ ಸಿದ್ಧಿಯನ್ನು ಪಡೆದಿರುವುದೇ ನಮಗೆ ದಕ್ಷಿಣೆಯು. ನಾವು ಸಕಲೇಷ್ಟಾರ್ಥಗಳನ್ನೂ ಪಡೆದು ಧನ್ಯರಾಗಿರುವೆವು.

೬೧. ಮರಳಿ ನೀನು ನಿನಗಿಷ್ಟವಾದ ವರವನ್ನು ಕೇಳಿಕೊ.

ವಾಲ್ಮೀಕಿರುವಾಚ :—

ಭವಂತೋ ಯದಿ ತುಷ್ಟಾ ಮೇ ಯದಿ ದೇಯೋ ವರೋ ಮಮ ।
ಕಥ್ಯತಾಂ ತರ್ಹಿ ಮೇ ಶೀಘ್ರಂ ಕೋ ದೇವೋ ಹ್ಯತ್ರ ಸಂಸ್ಥಿತಃ ।
ದೇವಿಕಾಯಾಸ್ತಟೇ ರಮ್ಯೇ ಸರ್ವಕಾಮಫಲಪ್ರದಃ ॥ ೬೨ ॥

ಋಷಯ ಊಚುಃ :—

ಶೃಣುಷ್ವೈಕಮನಾ ವಿಪ್ರ ಯೋ ದೇವಶ್ಚಾತ್ರ ಸಂಸ್ಥಿತಃ ।
ಪಶ್ಯ ನಿಂಬಮಿಮಂ ವಿಪ್ರ ಬಹುಶಾಖಾಪ್ರವಿಸ್ತರಂ ॥ ೬೩ ॥
ಅಸ್ಯ ಮೂಲೇ ಸ್ಥಿತಃ ಸೂರ್ಯಃ ಕಲ್ಪಾದೌ ಬ್ರಹ್ಮಣೋಽಂಶಜಃ ।
ತಮಾರಾಧಯ ಯತ್ನೇಸಾವಸ್ಯ ಸ್ಥಾನಸ್ಯ ದೇವತಾ ॥ ೬೪ ॥
ಸೂರ್ಯಕ್ಷೇತ್ರಂ ಸಮಾಖ್ಯಾತಮಿದಂ ಗವ್ಯೂತಿಮಾತ್ರಕಂ ।
ಅತ್ರ ಸ್ಥಾನೇ ಸ್ಥಿತಾ ಯೇಽಪಿ ತೇಷಾಂ ಸ್ವರ್ಗೋ ಧ್ರುವಂ ಭವೇತ್ ॥೬೫॥
ಅದ್ಯಪ್ರಭೃತಿ ವಿಪ್ರೇಂದ್ರ ಮೂಲಸ್ಥಾನಮಿತಿ ಶ್ರುತಂ ।
ಸ್ಥಾನಂ ಸೂರ್ಯಸ್ಯ ವಿಪ್ರೇಂದ್ರ ಕಾರ್ಯಾ ಚಾತ್ರ ತ್ವಯಾ ಸ್ಥಿತಿಃ ॥ ೬೬ ॥
ಅದ್ಯಪ್ರಭೃತಿ ವಿಪ್ರೇಂದ್ರ ತೀರ್ಥಮೇತನ್ಮಹೀತಲೇ ।
ಗಮಿಷ್ಯತಿ ಪರಾಂ ಖ್ಯಾತಿಂ ದೇವಿಕಾತಟಮಾಶ್ರಿತಂ ॥ ೬೭ ॥

---

೬೨. ವಾಲ್ಮೀಕಿಯು ಹೇಳುತ್ತಾನೆ:—ಮುನಿವರ್ಯರೆ! ನೀವು ಸಂತುಷ್ಟರಾಗಿದ್ದರೆ ನನಗೆ ವರವನ್ನು ಕೊಡತಕ್ಕವರಾದರೆ ಈ ಮನೋಹರವಾದ ದೇವಿಕಾತಟದಲ್ಲಿ ಸಕಲೇಷ್ಟಾರ್ಥಗಳನ್ನೀಯುವ ಯಾವದೇವನು ನೆಲೆಸಿರುವನು? ಹೇಳಿರಿ.

೬೩-೬೪. ಋಷಿಗಳು ಹೇಳುತ್ತಾರೆ :—ಬ್ರಾಹ್ಮಣ! ಇಲ್ಲಿ ಯಾವ ದೇವನಿರುವನೆಂಬುದನ್ನು ಒಮ್ಮನಸ್ಸಿನಿಂದ ಕೇಳು. ಅನೇಕ ಕೊಂಬೆಗಳಿಂದ ವಿಸ್ತಾರವಾದ ಈ ಬೇವಿನ ಮರವನ್ನು ನೋಡು. ಇದರ ಬುಡದಲ್ಲಿ ಕಲ್ಪಾದಿಯಲ್ಲಿ ಬ್ರಹ್ಮನ ಅಂಶದಿಂದ ಜನಿಸಿದ ಸೂರ್ಯನಿರುವನು. ಈ ಸ್ಥಳದ ದೇವತೆಯಾದ ಅವನನ್ನು ಪೂಜಿಸು.

೬೫. ನಾಲ್ಕು ಮೈಲಿ ಪ್ರಮಾಣವಾದ ಈ ಸೂರ್ಯ ಕ್ಷೇತ್ರದಲ್ಲಿರುವವರಿಗೆ ನಿಶ್ಚಯವಾಗಿಯೂ ಸ್ವರ್ಗವು ಲಭಿಸುವುದು.

೬೬. ಬ್ರಾಹ್ಮಣೋತ್ತಮ! ಇದು ಮೊದಲ್ಗೊಂಡು ಮೂಲಸ್ಥಾನವೆಂಬ ಈ ಸೂರ್ಯನ ಸ್ಥಾನದಲ್ಲಿ ನೀನು ವಾಸಿಸು.

೬೭. ಬ್ರಾಹ್ಮಣೋತ್ತಮ! ಇದು ಮೊದಲ್ಗೊಂಡು ದೇವಿಕಾತಟದಲ್ಲಿರುವ ಈ ತೀರ್ಥವು ಅತ್ಯಂತ ಪ್ರಸಿದ್ಧವಾಗುವುದು.

ವಯಂ ಮುಷ್ಟಾ ಯತೋ ವಿಪ್ರ ಮೂಲಸ್ಥಾನೇ ಪುರಾ ಸ್ಥಿತಾಃ ।
ಮೂಲಸ್ಥಾನೇತಿ ವೈ ನಾಮ ಲೋಕೇ ಖ್ಯಾತಿಂ ಗಮಿಷ್ಯತಿ ॥ ೬೮ ॥
ಅತ್ರ ಯೇ ಮಾನವಾ ಭಕ್ತ್ಯಾ ಸ್ನಾನಂ ಸೂರ್ಯಸ್ಯ ಸಂಗಮೇ ।
ಉತ್ತರೇ ತು ಕರಿಷ್ಯಂತಿ ತೇ ಯಾಸ್ಯಂತಿ ತ್ರಿವಿಷ್ಟಪಂ ॥ ೬೯ ॥
ತರ್ಪಣಂ ತಿಲಮಿಶ್ರೇಣ ಜಲೇನ ದ್ವಿಜಸತ್ತಮಾಃ ।
ಗಯಾಶ್ರಾದ್ಧಸಮಾ ತುಷ್ಟಿಃ ಪಿತೄಣಾಂ ಚ ಭವಿಷ್ಯತಿ ॥ ೭೦ ॥
ಅತ್ರ ಯೇ ಮಾನವಾ ಭಕ್ತ್ಯಾ ಶ್ರಾದ್ಧಂ ದಾಸ್ಯಂತಿ ಸತ್ತಮಾಃ ।
ಶಾಕಮೂಲಫಲೈರ್ವಾಪಿ ಸಮ್ಯಕ್ಶ್ರಾದ್ಧಸಮನ್ವಿತಾಃ ॥ ೭೧ ॥
ತೇಷಾಂ ಯಾಸ್ಯಂತಿ ಪಿತರೋ ಮೋಕ್ಷಂ ನೈವಾತ್ರ ಸಂಶಯಃ ॥ ೭೨ ॥
ಅಪಿ ಕೀಟಪತಂಗಾ ಯೇ ಪಕ್ಷಿಣಃ ಪಶವೋ ಮೃಗಾಃ ।
ತೃಷಾರ್ತಾ ಜಲಸಂಸ್ಪರ್ಶಾದ್ಯಾಸ್ಯಂತಿ ಪರಮಾಂ ಗತಿಂ ॥ ೭೩ ॥
ವಯಮೇವ ಸದಾತ್ರಸ್ಥಾಃ ಶ್ರಾವಣೇ ಮಾಸಿ ಸತ್ತಮ ।
ಪೌರ್ಣಮಾಸ್ಯಾಂ ಭವಿಷ್ಯಾಮಸ್ತವ ಸ್ನೇಹಾದಸಂಶಯಂ ॥ ೭೪ ॥
ತಸ್ಮಿನ್ನಹನಿ ಯಸ್ತ್ವೋಯೈಃ ಪಿತೄನ್ಸಂತರ್ಪಯಿಷ್ಯತಿ ।
ತಸ್ಯಾಷ್ಟಾದಶಕುಷ್ಠಾನಿ ಕ್ಷಯಂ ಯಾಸ್ಯಂತಿ ತತ್ಕ್ಷಣಾತ್ ॥ ೭೫ ॥

---

೬೮. ಈ ಮೂಲಸ್ಥಾನದಲ್ಲಿ ನೀನು ಹಿಂದೆ ನಮ್ಮನ್ನು ಲೂಟಿಮಾಡಿರುವುದರಿಂದ ಇದು ಮೂಲಸ್ಥಾನವೆಂದು ಲೋಕದಲ್ಲಿ ಪ್ರಸಿದ್ಧಿಗೊಳ್ಳುವುದು.

೬೯. ಸೂರ್ಯಸಂಗಮದ ಉತ್ತರದಲ್ಲಿರುವ ಈ ಸ್ಥಾನದಲ್ಲಿ ಭಕ್ತಿಯಿಂದ ಮಿಂದ ಮಾನವರು ದೇವಲೋಕಕ್ಕೆ ತೆರಳುವರು.

೭೦. ದ್ವಿಜವರ್ಯರೆ! ಇಲ್ಲಿ ತಿಲಮಿಶ್ರವಾದ ನೀರಿನಿಂದ ಪಿತೃಗಳಿಗೆ ತರ್ಪಣ ಮಾಡಿದರೆ ಗಯೆಯಲ್ಲಿ ಮಾಡಿದ ಶ್ರಾದ್ಧಕ್ಕೆ ಸಮವಾದ ತೃಪ್ತಿಯುಂಟಾಗುವುದು.

೭೧-೭೨. ಇಲ್ಲಿ ಸಜ್ಜನರಾದ ಮಾನವರು ಭಕ್ತಿಯುಕ್ತರಾಗಿ ಶಾಕಮೂಲ ಫಲಗಳಿಂದ ಶ್ರಾದ್ಧಗೈದರೆ ಅವರ ಪಿತೃಗಳು ಮೋಕ್ಷವನ್ನು ಪಡೆಯುವರು.

೭೩. ಬಾಯಾರಿಕೆಗೊಂಡ ಕೀಟ, ಪತಂಗ, ಪಕ್ಷಿ, ಪಶು, ಮೃಗ ಇವುಗಳು ಇಲ್ಲಿರುವ ನೀರಿನ ಸ್ಪರ್ಶದಿಂದ ಉತ್ತಮಗತಿಯನ್ನು ಹೊಂದುವುವು.

೭೪. ಬ್ರಾಹ್ಮಣೋತ್ತಮ! ನಾವು ಶ್ರಾವಣ ಶುದ್ಧ ಹುಣಿಮೆಯದಿನ ನಿನ್ನಲ್ಲಿರುವ ಪ್ರೀತಿಯಿಂದ ಇಲ್ಲಿಗೆ ಬರುವೆವು.

೭೫. ಆದಿನ ಇಲ್ಲಿನ ನೀರಿನಿಂದ ಪಿತೃಗಳನ್ನು ತರ್ಪಣಗೈದವನ ಹದಿನೆಂಟು ವಿಧ ಕುಷ್ಠಗಳು ಕೂಡಲೆ ಮಾಯವಾಗುವುವು.

ಕಪಾಲೋದುಂಬರಾಖ್ಯೇಂದ್ರಮಂಡಲಾಖ್ಯವಿಚರ್ಚಿಕಾಃ ।
ಋಷ್ಯಚರ್ಮೈಕಕಿಟಿಭಸಿಧ್ಮಾಲಸವಿಪಾದಿಕಾಃ ॥ ೭೬ ॥
ದದ್ರೂಸಿತಾ ರುಚಿಸ್ಫೋಟಂ ಪುಂಡರೀಕಂ ಸಕಾಕಣಂ ।
ಪಾಮಾ ಚರ್ಮದಲಂ ಚೇತಿ ಕುಷ್ಠಾನಷ್ಟಾದಶೈವ ತು ॥ ೭೭ ॥
ಗಮಿಷ್ಯಂತಿ ನ ಸಂದೇಹ ಇತ್ಯುಕ್ತ್ವಾಂತರ್ದಧುಶ್ಚ ತೇ ।
ಋಷಿಃ ಸಿಷೇವೇ ಚ ರವಿಂ ಚಕ್ರೇ ರಾಮಾಯಣಂ ತತಃ ॥ ೭೮ ॥
ತಸ್ಮಾತ್ಪಶ್ಯೇಚ್ಚ ತಂ ದೇವಂ ಸರ್ವಯಜ್ಞಫಲಪ್ರದಂ ।
ಶೃಣುಯಾಚ್ಚ ಕಥಾಂ ಚೈನಾಂ ಸರ್ವಪಾತಕನಾಶಿನೀಂ ॥ ೭೯ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದೇವಿಕಾಮಾಹಾತ್ಮ್ಯವರ್ಣನಂ ನಾಮ
ನಾಮಾಷ್ಟಸಪ್ತತ್ಯುತ್ತರದ್ವಿಶತತಮೋಽಧ್ಯಾಯಃ

೭೬–೭೭. ಕಪಾಲ, ಉದುಂಬರ, ಇಂದ್ರ, ಮಂಡಲ, ವಿಚರ್ಚಿಕ, ಋಷ್ಯ ಚರ್ಮ, ಏಕಕಿಟಿಭ, ಸಿಧ್ಮಾಲಸ, ವಿಪಾದಿಕ, ದದ್ರು, ಸಿತಾ, ರುಚಿ, ಸ್ಫೋಟ, ಪುಂಡರೀಕ, ಕಾಕಣ, ಪಾಮಾ, ಚರ್ಮದಲ ಎಂದು ಹದಿನೆಂಟು ವಿಧ ಕುಷ್ಠಗಳು.

೭೮. ಈ ಕುಷ್ಠಗಳು ಪರಿಹಾರವಾಗಿ ಅವರು ಮೋಕ್ಷವನ್ನು ಪಡೆಯುವರೆಂದು ಆ ಋಷಿಗಳು ಹೇಳಿ ಅಲ್ಲಿಯೇ ಮಾಯವಾದರು. ಆ ವಾಲ್ಮೀಕಿಯೂ ಸೂರ್ಯನನ್ನು ಸೇವಿಸಿ ರಾಮಾಯಣವನ್ನು ರಚಿಸಿದನು.

೭೯. ಆದುದರಿಂದ ಸಕಲ ಯಜ್ಞಫಲವನ್ನೀಯುವ ಆ ಸೂರ್ಯನನ್ನು ದರ್ಶನ ಮಾಡಿ ಸಕಲ ಪಾಪವನ್ನು ಪರಿಹರಿಸುವ ಈ ಕಥೆಯನ್ನು ಕೇಳಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದೇವಿಕಾಮಾಹಾತ್ಮ್ಯ ವರ್ಣನವೆಂಬ
ಇನ್ನೂರ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಚ್ಯವನಾದಿತ್ಯಮಾಹಾತ್ಮ್ಯೇ ಸೂರ್ಯಾಷ್ಟೋತ್ತರಶತನಾಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚ್ಯವನಾರ್ಕಮನುತ್ತಮಂ ।
ಹಿರಣ್ಯಾಪೂರ್ವಭಾಗಸ್ಥಂ ಚ್ಯವನೇನ ಪ್ರತಿಷ್ಠಿತಂ ॥ ೧ ॥
ಸರ್ವಕಾಮಪ್ರದಂ ನೃಣಾಂ ಪೂಜಿತಂ ವಿಧಿವನ್ನರೈಃ ।
ಸಪ್ತಮ್ಯಾಂ ಚ ವಿಧಾನೇನ ಯಃ ಸ್ತೋಷ್ಯತಿ ರವಿಂ ನರಃ ॥ ೨ ॥
ಅಷ್ಟೋತ್ತರಶತೈರ್ನಾಮ್ನಾಂ ಸಮ್ಯಕ್ಛ್ರದ್ಧಾಸಮನ್ವಿತಃ ।
ಶೃಣು ತಾನಿ ಮಹಾದೇವಿ ಶುಚಿರ್ಭೂತ್ವಾ ಸಮಾಹಿತಃ ॥ ೩ ॥
ಕ್ಷಣಂ ತ್ವಂ ಕುರು ದೇವೇಶಿ ಸರ್ವಂ ವಕ್ಷ್ಯಾಮ್ಯಶೇಷತಃ ।
ಧೌಮ್ಯೇನ ತು ಯಥಾ ಪೂರ್ವಂ ಪಾರ್ಥಾಯ ಸುಮಹಾತ್ಮನೇ ॥ ೪ ॥

ಕನ್ನಡದ ಅನುವಾದ

ಚ್ಯವನಾದಿತ್ಯಮಾಹಾತ್ಮ್ಯೇ ಸೂರ್ಯಾಷ್ಟೋತ್ತರಶತನಾಮಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ಹಿರಣ್ಯಾನದಿಯ ಪೂರ್ವಭಾಗದಲ್ಲಿರುವ ಚ್ಯವನನು ಪ್ರತಿಷ್ಠೆಮಾಡಿದ ಚ್ಯವನಾರ್ಕನೆಡೆಗೆ ಹೋಗಬೇಕು.

೨–೩. ಸಪ್ತಮಿಯ ದಿನ ವಿಧಿಯಂತೆ ನೂರೆಂಟು ನಾಮಗಳಿಂದ ಶ್ರದ್ಧೆಯಿಂದ ಪೂಜಿಸಿ ಸ್ತುತಿಸುವ ಮಾನವರಿಗೆ ಅವನು ಸಕಲೇಷ್ಟಾರ್ಥಗಳನ್ನೀಯುವನು. ಮಹಾದೇವಿ ! ಶುದ್ಧಳಾಗಿ ಆ ನಾಮಗಳನ್ನು ಕೇಳು.

೪–೧೭. ಅವಧಾನಕ್ಕೆ ಅವಕಾಶವನ್ನು ಕಲ್ಪಿಸಿಕೊ. ಹಿಂದೆ ಧೌಮ್ಯನು ಅರ್ಜುನನಿಗೆ ಹೇಳಿದ ಆ ನೂರೆಂಟು ನಾಮಗಳನ್ನೆಲ್ಲ ಹೇಳುವೆನು. ಕೇಳು.

ನಾಮ್ನಾಷ್ಟಶತಮಾಖ್ಯಾತಂ ತಚ್ಛೃಣುಷ್ವ ಮಹಾಮತೇ ।
ಸೂರ್ಯೋಽರ್ಯಮಾ ಭಗಸ್ತ್ವಷ್ಟಾ ಪೂಷಾರ್ಕಃ ಸವಿತಾ ರವಿಃ॥೫॥
ಗಭಸ್ತಿಮಾನಜಃ ಕಾಲೋ ಮೃತ್ಯುರ್ಧಾತಾ ಪ್ರಭಾಕರಃ ।
ಪೃಥಿವ್ಯಾಪಶ್ಚ ತೇಜಶ್ಚ ಖಂ ವಾಯುಶ್ಚ ಪರಾಯಣಃ ॥ ೬ ॥
ಸೋಮೋ ಬೃಹಸ್ಪತಿಃ ಶುಕ್ರೋ ಬುಧೋಽಙ್ಗಾರಕ ಏವ ಚ ।
ಇಂದ್ರೋ ವಿವಸ್ವಾನ್ದೀಪ್ತಾಂಶುಃ ಶುಚಿಃ ಸೌರಿಃ ಶನೈಶ್ಚರಃ ॥ ೭ ॥
ಬ್ರಹ್ಮಾ ರುದ್ರಶ್ಚ ವಿಷ್ಣುಃ। ಸ್ಕಂದೋ ವೈಶ್ರವಣೋ ಯಮಃ ।
ವೈದ್ಯುತೋ ಜಾಠರಶ್ಚಾಗ್ನಿರಿಂಧನಸ್ತೇಜಸಾಂ ಪತಿಃ ॥ ೮ ॥
ಧರ್ಮಧ್ವಜೋ ವೇದಕರ್ತಾ ವೇದಾಂಗೋ ವೇದವಾಹನಃ ।
ಕೃತಂ ತ್ರೇತಾ ದ್ವಾಪರಶ್ಚ ಕಲಿಃ ಸರ್ವಾಮರಾಶ್ರಯಃ ॥ ೯ ॥
ಕಲಾಕಾಷ್ಠಾಮುಹೂರ್ತಾಶ್ಚ ಪಕ್ಷಾ ಮಾಸಾ ಅಹರ್ನಿಶಾಃ ।
ಸಂವತ್ಸರಕರೋಽಶ್ವತ್ಥಃ ಕಾಲಚಕ್ರೋ ವಿಭಾವಸುಃ ॥ ೧೦ ॥
ಪುರುಷಃ ಶಾಶ್ವತೋ ಯೋಗೀ ವ್ಯಕ್ತಾವ್ಯಕ್ತಃ ಸನಾತನಃ ।
ಲೋಕಾಧ್ಯಕ್ಷಃ ಪ್ರಜಾಧ್ಯಕ್ಷೋ ವಿಶ್ವಕರ್ಮಾ ತಮೋನುದಃ ॥ ೧೧ ॥
ವರುಣಃ ಸಾಗರೋಽಂಶುಶ್ಚ ಜೀವಂತೋ ಜೀವನೋಽರಿಹಾ ಃ
ಭೂತಾಶ್ರಯೋ ಭೂತಪತಿಃ ಸರ್ವಭೂತನಿಷೇವಿತಃ ॥ ೧೨ ॥

ಸೂರ್ಯ, ಅರ್ಯಮಾ, ಭಗ, ತ್ವಷ್ಟಾ, ಪೂಷಾ, ಅರ್ಕ, ಸವಿತಾ, ರವಿ, ಗಭಸ್ತಿಮಾನ್, ಅಜ, ಕಾಲ, ಮೃತ್ಯು, ಧಾತಾ, ಪ್ರಭಾಕರ, ಪೃಥಿವೀ, ಆಪ, ತೇಜ ಆಕಾಶ, ವಾಯು, ಪರಾಯಣ, ಸೋಮ, ಬೃಹಸ್ಪತಿ, ಶುಕ್ರ, ಬುಧ, ಅಂಗಾರಕ, ಇಂದ್ರ, ವಿವಸ್ವಾನ್, ದೀಪ್ತಾಂಶು, ಶುಚಿ, ಸೌರಿ, ಶನೈಶ್ಚರ, ಬ್ರಹ್ಮ, ರುದ್ರ, ವಿಷ್ಣು ಸ್ಕಂದ, ವೈಶ್ರವಣ, ವೈದ್ಯುತ, ಜಾಠರ, ಅಗ್ನಿ, ಇಂಧನ, ತೇಜಸಾಂಪತಿ, ಧರ್ಮಧ್ವಜ, ವೇದಕರ್ತಾ, ವೇದಾಂಗ, ವೇದವಾಹನ, ಕೃತ, ತ್ರೇತಾ, ದ್ವಾಪರ, ಕಲಿ, ಸರ್ವಾಮರಾಶ್ರಯ, ಕಲಾ, ಕಾಷ್ಠಾ, ಮುಹೂರ್ತ, ಪಕ್ಷ, ಮಾಸ, ಅಹರ್ನಿಶ, ಸಂವತ್ಸರಕರ, ಅಶ್ವತ್ಥ, ಕಾಲಚಕ್ರ, ವಿಭಾವಸು, ಪುರುಷ, ಶಾಶ್ವತ, ಯೋಗೀ, ವ್ಯಕ್ತಾವ್ಯಕ್ತ, ಸನಾತನ, ಲೋಕಾಧ್ಯಕ್ಷ, ಪ್ರಜಾಧ್ಯಕ್ಷ, ವಿಶ್ವಕರ್ಮ, ತಮೋನುದ; ವರುಣ, ಸಾಗರ, ಅಂಶು, ಜೀವಂತ, ಜೀವನ, ಅರಿಹಾ, ಭೂತಾಶ್ರಯ, ಭೂತಪತಿ, ಸರ್ವಭೂತನಿಷೇವಿತ, ಸ್ರಷ್ಟಾ, ಸಂವರ್ತಕ, ವಹ್ನಿ, ಸರ್ವಸ್ಯಾದಿಕರ, ಅಮಲ, ಅನಂತ, ಕಪಿಲ, ಭಾನು, ಕಾಮದ, ಸರ್ವತೋಮುಖ, ಜಯ, ವಿಶಾದ, ವರದ,

ಸ್ರಷ್ಟಾ ಸಂವರ್ತಕೋ ವಹ್ನಿಃ ಸರ್ವಸ್ಯಾದಿಕರೋಽಮಲಃ ।
ಅನಂತಃ ಕಪಿಲೋ ಭಾನುಃ ಕಾಮದಃ ಸರ್ವತೋಮುಖಃ ॥ ೧೩ ॥
ಜಯೋ ವಿಷಾದೋ ವರದಃ ಸರ್ವಧಾತುನಿಷೇವಿತಃ ।
ಸಮಃ ಸುವರ್ಣೋ ಭೂತಾದಿಃ ಶೀಘ್ರಗಃ ಪ್ರಾಣಧಾರಕಃ ॥ ೧೪ ॥
ಧನ್ವಂತರಿರ್ಧೂಮಕೇತುರಾದಿದೇವೋಽದಿತೇಃ ಸುತಃ ।
ದ್ವಾದಶಾತ್ಮಾರವಿಂದಾಕ್ಷಃ ಪಿತಾ ಮಾತಾ ಪಿತಾಮಹಃ ॥ ೧೫ ॥
ಸ್ವರ್ಗದ್ವಾರಂ ಪ್ರಜಾದ್ವಾರಂ ಮೋಕ್ಷದ್ವಾರಂ ತ್ರಿವಿಷ್ಟಪಂ ।
ದೇಹಕರ್ತಾ ಪ್ರಶಾಂತಾತ್ಮಾ ವಿಶ್ವಾತ್ಮಾ ವಿಶ್ವತೋಮುಖಃ ।
ಚರಾಚರಾತ್ಮಾ ಸೂಕ್ಷ್ಮಾತ್ಮಾ ಮೈತ್ರೇಣ ವಪುಷಾನ್ವಿತಃ ॥ ೧೬ ॥
ಏತದ್ವೈ ಕೀರ್ತನೀಯಸ್ಯ ಸೂರ್ಯಸ್ಯಾಮಿತತೇಜಸಃ ।
ನಾಮ್ನಾಮಷ್ಟೋತ್ತರಶತಂ ಪ್ರೋಕ್ತಂ ಶಕ್ರೇಣ ಧೀಮತಾ ॥ ೧೭ ॥
ಶಕ್ರಾಚ್ಚ ನಾರದಃ ಪ್ರಾಪ್ತೋ ಧೌಮ್ಯಸ್ತು ತದನಂತರಂ ।
ಧೌಮ್ಯಾದ್ಯುಧಿಷ್ಠಿರಃ ಪ್ರಾಪ್ಯ ಸರ್ವಾನ್ಕಾಮಾನವಾಪ್ತವಾನ್ ॥ ೧೮ ॥
ಏತಾನಿ ಕೀರ್ತನೀಯಸ್ಯ ಸೂರ್ಯಸ್ಯಾಮಿತತೇಜಸಃ ।
ನಾಮಾನಿ ಯಃ ಪಠೇನ್ನಿತ್ಯಂ ಸರ್ವಾನ್ಕಾಮಾನವಾಪ್ನುಯಾತ್ ॥ ೧೯ ॥
ಸುರಪಿತೃಮನುಜಯಕ್ಷಸೇವಿತಮಸುರನಿಶಾಚರಸಿದ್ಧವಂದಿತಂ ।
ವರಕನಕಹುತಾಶನಪ್ರಭಂ ತ್ವಮಪಿ ನಮ ಹಿತಾಯ ಭಾಸ್ಕರಂ ॥ ೨೦ ॥

ಸರ್ವಧಾತುನಿಷೇವಿತ, ಸಮ, ಸುವರ್ಣ, ಭೂತಾದಿ, ಶೀಘ್ರಗ, ಪ್ರಾಣಧಾರಕ, ಧನ್ವಂತರಿ, ಧೂಮಕೇತು, ಆದಿದೇವ, ಅದಿತಿಸುತ, ದ್ವಾದಶಾತ್ಮಾ, ಅರವಿಂದಾಕ್ಷ, ಪಿತೃ, ಮಾತೃ, ಪಿತಾಮಹ, ಸ್ವರ್ಗದ್ವಾರ, ಪ್ರಜಾದ್ವಾರ, ಮೋಕ್ಷದ್ವಾರ, ತ್ರಿವಿಷ್ಟಪ, ದೇಹಕರ್ತೃ, ಪ್ರಶಾಂತಾತ್ಮಾ, ವಿಶ್ವಾತ್ಮಾ, ವಿಶ್ವತೋಮುಖ, ಚರಾಚರಾತ್ಮಾ, ಸೂಕ್ಷ್ಮಾತ್ಮಾ, ಮಿತ್ರವಪುರನ್ವಿತ. ಸೂರ್ಯನ ಈ ನೂರೆಂಟು ನಾಮಗಳನ್ನು ದೇವೇಂದ್ರನು ಹೇಳಿರುವನು.

೧೮. ಇದನ್ನು ದೇವೇಂದ್ರನಿಂದ ನಾರದನೂ, ನಾರದನಿಂದ ಧೌಮ್ಯನೂ, ಧೌಮ್ಯನಿಂದ ಯುಧಿಷ್ಠಿರನೂ ಹೊಂದಿ ಸಕಲೇಷ್ಟಾರ್ಥಗಳನ್ನು ಪಡೆದಿರುವರು.

೧೯. ಶ್ಲಾಘ್ಯನಾದ ಸೂರ್ಯನ ನಾಮಗಳನ್ನು ಪಠಿಸುವವನು ಸಕಲೇಷ್ಟಾರ್ಥಗಳನ್ನು ಪಡೆಯುವನು.

೨೦. ಸುರರು, ಪಿತೃಗಳು, ಮನುಷ್ಯರು, ಯಕ್ಷರು ಇವರಿಂದ ಸೇವಿಸಲ್ಪಟ್ಟವನೂ, ದೈತ್ಯರು, ರಾಕ್ಷಸರು, ಸಿದ್ಧರು ಇವರಿಂದ ವಂದಿತನೂ, ಉತ್ತಮವಾದ ಸುವರ್ಣ, ಅಗ್ನಿಗೆ ಸಮಾನವಾದ ಕಾಂತಿಯುಳ್ಳವನೂ ಆದ ಸೂರ್ಯನನ್ನು ನೀನೂ ಹಿತಕ್ಕಾಗಿ ನಮಸ್ಕರಿಸು.

ಸೂರ್ಯೋದಯೇ ಯಸ್ತು ಸಮಾಹಿತಃ ಪಠೇ
ತ್ಸ ಪುತ್ರಲಾಭಂ ಧನರತ್ನಸಂಚಯಾನ್ ।
ಲಭೇತ ಜಾತಿಸ್ಮರತಾಂ ಸದಾ ನರಃ
ಸ್ಮೃತಿಂ ಚ ಮೇಧಾಂ ಚ ಸ ವಿಂದತೇ ಪುಮಾನ್ ॥ ೨೧ ॥
ಇಮಂ ಸ್ತವಂ ದೇವವರಸ್ಯ ಯೋ ನರಃ ।
ಪ್ರಕೀರ್ತಯೇಚ್ಛುದ್ಧಮನಾಃ ಸಮಾಹಿತಃ ।
ಸ ಮುಚ್ಯತೇ ಶೋಕದವಾಗ್ನಿಸಾಗರಾ
ಲ್ಲಭೇತ ಕಾಮಾನ್ಮನಸಾ ಯಥೇಪ್ಸಿತಾನ್ ॥ ೨೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನಾದಿತ್ಯ ಮಾಹಾತ್ಮ್ಯೇ ಸೂರ್ಯಾಷ್ಟೋತ್ತರಶತನಾಮಮಾಹಾತ್ಮ್ಯವರ್ಣನಂ ನಾಮ
ಏಕೋನಶೀತ್ಯುತ್ತರದ್ವಿಶತತಮೋಽಧ್ಯಾಯಃ

---

೨೧. ಸೂರ್ಯೋದಯ ಕಾಲದಲ್ಲಿ ಈ ಸ್ತೋತ್ರವನ್ನು ಸಾವಧಾನ ಮನಸ್ಸಿನಿಂದ ಪಠಿಸಿದವನು ಪುತ್ರರನ್ನೂ, ಧನ, ರತ್ನಗಳ ಸಮೂಹವನ್ನೂ, ಪೂರ್ವಜನ್ಮಸ್ಮರಣೆಯನ್ನೂ, ಸ್ಮೃತಿ, ಮೇಧಾ ಇವುಗಳನ್ನೂ ಹೊಂದುವನು.

೨೨. ದೇವಶ್ರೇಷ್ಠನಾದ ಸೂರ್ಯನ ಈ ಸ್ತೋತ್ರವನ್ನು ಶುದ್ಧ ಮನಸ್ಸಿನಿಂದ ಹೇಳುವವನು ದುಃಖವೆಂಬ ಕಾಳ್ಕಿಚ್ಚಿನಿಂದ ಮುಕ್ತನಾಗಿ ಅಭೀಷ್ಟವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಚ್ಯವನಾದಿತ್ಯಮಾಹಾತ್ಮ್ಯ ಸೂರ್ಯಾಷ್ಟೋತ್ತರಶತನಾಮಮಾಹಾತ್ಮ್ಯವರ್ಣನವೆಂಬ
ಇನ್ನೂರಎಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಶೀತ್ಯುತ್ತರದ್ವಿಶತತಮೋಽಧ್ಯಾಯಃ

ಚ್ಯವನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಚ್ಯವನೇಶ್ವರಮುತ್ತಮಂ ।
ತತ್ರೈವ ಸಂಸ್ಥಿತಂ ಲಿಂಗಂ ಸರ್ವಪಾತಕನಾಶನಂ ॥ ೧ ॥
ಯತ್ರ ಶರ್ಯಾತಿನಾ ದತ್ತಾ ಸುಕನ್ಯಾ ಸಾ ಮಹರ್ಷಯೇ ।
ಯತ್ರ ಸಂಸ್ತಂಭಿತಂ ಸೈನ್ಯಮಾನಾಹಾರ್ತಮಥಾಕರೋತ್ ॥ ೨ ॥
ಏಷ ಶರ್ಯಾತಿಯಜ್ಞಸ್ಯ ದೇಶೋ ದೇವಿ ಪ್ರಕಾಶತೇ ।
ಪ್ರಭಾಸಕ್ಷೇತ್ರಮಧ್ಯೇ ತು ಸಾಕ್ಷಾತ್ಪಾತಕನಾಶನಃ ॥ ೩ ॥
ಸಾಕ್ಷಾತ್ತತ್ರಾಭಜತ್ಸೋಮಮಶ್ವಿಭ್ಯಾಂ ಸಹ ಕೌಶಿಕಃ ।
ಚುಕೋಪ ಭಾರ್ಗವಶ್ಚೈವ ಮಹೇಂದ್ರಾಯ ಮಹಾತಪಾಃ ॥ ೪ ॥

ಕನ್ನಡದ ಅನುವಾದ

ಚ್ಯವನೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಅಲ್ಲಿಯೇ ಇರುವ ಸಕಲ ಪಾಪಗಳನ್ನು ಪರಿಹರಿಸುವ ಚ್ಯವನೇಶ್ವರ ಲಿಂಗದೆಡೆಗೆ ಹೋಗಬೇಕು.

೨. ಇಲ್ಲಿ ಶರ್ಯಾತಿರಾಜನು ತನ್ನ ಸೈನ್ಯವನ್ನು ತಡೆದು ಮಲಮೂತ್ರಾವರೋಧನದಿಂದ ಕಷ್ಟಪಡಿಸಿದ ಚ್ಯವನ ಮಹರ್ಷಿಗೆ ಸುಕನ್ಯೆಯೆಂಬ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟಿರುವನು.

೩. ದೇವಿ! ಪ್ರಭಾಸಕ್ಷೇತ್ರದ ನಡುವೆ ಪಾಪವನ್ನು ನಿವಾರಿಸುವ ಶರ್ಯಾತಿ ರಾಜನ ಯಜ್ಞಸ್ಥಳವು ಪ್ರಕಾಶಿಸುತ್ತಿರುವುದು.

೪. ಇಲ್ಲಿ ಕೌಶಿಕನು ಅಶ್ವಿನೀದೇವತೆಗಳೊಡನೆ ಸೋಮಪಾನ ಮಾಡಿದನು. ಅತ್ಯಂತ ತಪಸ್ವಿಯಾದ ಭಾರ್ಗವ ಚ್ಯವನನು ಮಹೇಂದ್ರನ ಮೇಲೆ ಕೋಪಿಸಿಕೊಂಡನು.

ಸಂಸ್ತಂಭಯಾಮಾಸ ಚ ತಂ ವಾಸವಂ ಚ್ಯವನಃ ಪ್ರಭುಃ ।
ಸುಕನ್ಯಾಂ ಚಾಪಿ ಭಾರ್ಯಾಂ ಸ ರಾಜಪುತ್ರೀಮವಾಪ್ತವಾನ್ ॥ ೫ ॥

ದೇವ್ಯುವಾಚ :—

ಕಥಂ ವಿಷ್ಟಂಭಿತಸ್ತೇನ ಭಗವಾನ್ಪಾಕಶಾಸನಃ ।
ಕಿಮರ್ಥಂ ಭಾರ್ಗವಶ್ಚಾಪಿ ಕೋಪಂ ಚಕ್ರೇ ಮಹಾತಪಾಃ ॥ ೬ ॥
ನಾಸತ್ಯಾ ಚ ಕಥಂ ಬ್ರಹ್ಮನ್ಕೃತವಾನ್ಸೋಮಪಾಯಿನೌ ।
ತತ್ಸರ್ವಂ ಚ ಯಥಾವೃತ್ತಮಾಖ್ಯಾತು ಭಗವಾನ್ಮಮ ॥ ೭ ॥

ಈಶ್ವರ ಉವಾಚ :—

ಭೃಗೋರ್ಮಹರ್ಷೇಃ ಪುತ್ರೋಽಭೂಚ್ಚ್ಯವನೋನಾಮ ನಾಮತಃ ।
ಸ ಪ್ರಭಾಸಂ ಸಮಾಸಾದ್ಯ ತಪಸ್ತೇಪೇ ಮಹಾಮುನಿಃ ॥ ೮ ॥
ಸ್ಥಾಣುಭೂತೋ ಮಹಾತೇಜಾ ವೀರಸ್ಥಾನೇ ಚ ಭಾಮಿನಿ ।
ಅತಿಷ್ಠತ್ಸುಚಿರಂ ಕಾಲಮೇಕದೇಶೇ ವರಾನನೇ ॥ ೯ ॥
ಸ ವಲ್ಮೀಕೋಽಭವತ್ತತ್ರ ಲತಾಭಿರಭಿಸಂವೃತಃ ।
ಕಾಲೇನ ಮಹತಾ ದೇವಿ ಸಮಾಕೀರ್ಣಃ ಪಿಪೀಲಕೈಃ ॥ ೧೦ ॥
ಸ ತಥಾ ಸಂವೃತೋ ಧೀಮಾನ್ಮೃತ್ಪಿಂಡ ಇವ ಸರ್ವತಃ ।
ತಪ್ಯತೇ ಸ್ಮ ತಪೋ ಘೋರಂ ವಲ್ಮೀಕೇನ ಸಮಾವೃತಃ ॥ ೧೧ ॥

---

೫. ಸಮರ್ಥನಾದ ಚ್ಯವನನು ಆ ಇಂದ್ರನನ್ನು ತಡೆದು ರಾಜಪುತ್ರಿಯಾದ ಸುಕನ್ಯೆಯನ್ನು ಹೊಂದಿದನು.

೬. ದೇವಿಯು ಹೇಳುತ್ತಾಳೆ:—ಆ ಚ್ಯವನನು ದೇವರಾಜನನ್ನು ಹೇಗೆ ತಡೆದನು ? ಮಹಾ ತಪಸ್ವಿಯಾದ ಅವನು ಕೋಪಗೊಳ್ಳಲು ಕಾರಣವೇನು ?

೭. ಪೂಜ್ಯನೆ! ಆ ಚ್ಯವನನು ಅಶ್ವಿನೀದೇವತೆಗಳಿಗೆ ಸೋಮವನ್ನು ಹೇಗೆ ಕುಡಿಸಿದನಂತೆ. ಅದನ್ನೆಲ್ಲ ನನಗೆ ನಡೆದಂತೆ ಹೇಳು.

೮. ಈಶ್ವರನು ಹೇಳುತ್ತಾನೆ:—ಭೃಗುಮಹರ್ಷಿಗೆ ಚ್ಯವನನೆಂಬ ಮಗ ನಿದ್ದನು. ಆ ಮುನಿಯು ಪ್ರಭಾಸಕ್ಕೆ ಬಂದು ತಪಸ್ಸನ್ನು ಮಾಡಿದನು.

೯. ಪ್ರಿಯಳೆ ! ಆ ಮುನಿಯು ಬಹುಕಾಲ ಒಂದೇ ಸ್ಥಳದಲ್ಲಿ ಸ್ಥಾಣುವಿನಂತೆ ವೀರಾಸನದಲ್ಲಿ ನಿಂತನು.

೧೦. ಅವನು ಹೀಗೆ ತಪಸ್ಸನ್ನು ಮಾಡುತ್ತಿರಲು ಬಹುಕಾಲದಮೇಲೆ ಲತೆಗಳಿಂದ ಸಹಿತವಾಗಿ ಹುತ್ತವು ಅವನ ಮೇಲೆ ಬೆಳೆಯಿತು. ಹಾಗೆಯೇ ಇರುವೆಗಳೂ ಮುತ್ತಿಕೊಂಡುವು.

೧೧. ಅವನು ಹಾಗೆ ಹುತ್ತದಿಂದ ಮಣ್ಣಿನ ಉಂಡೆಯಂತೆ ಆಗಿ ಘೋರ ತಪಸ್ಸನ್ನು ಮಾಡಿದನು.

ಅಥಾಸ್ಯ ಯಾತಕಾಲಸ್ಯ ಶರ್ಯಾತಿರ್ನಾಮ ಪಾರ್ಥಿವಃ ।
ತೀರ್ಥಯಾತ್ರಾಪ್ರಸಂಗೇನ ಶ್ರೀಸೋಮೇಶದಿದೃಕ್ಷಯಾ ।
ಆಜಗಾಮ ಮಹಾಕ್ಷೇತ್ರಂ ಪ್ರಭಾಸಂ ಪಾಪನಾಶನಂ ॥ ೧೨ ॥
ತಸ್ಯ ಸ್ತ್ರೀಣಾಂ ಸಹಸ್ರಾಣಿ ಚತ್ವಾರ್ಯಾಸನ್ಪರಿಗ್ರಹಾಃ ।
ಏಕೈವ ತು ಸುತಾ ಶುಭ್ರಾ ಸುಕನ್ಯಾನಾಮ ನಾಮತಃ ॥ ೧೩ ॥
ಸಾ ಸಖೀಭಿಃ ಪರಿವೃತಾ ಸರ್ವಾಭರಣಭೂಷಿತಾ ।
ಚಂಕ್ರಮ್ಯಮಾಣಾ ವಲ್ಮೀಕಂ ಭಾರ್ಗವಸ್ಯ ಸಮಾಸದತ್ ॥ ೧೪ ॥
ಸಾ ಚೈವ ಸುದತೀ ತತ್ರ ಪಶ್ಯಮಾನಾ ಮನೋರಮಾನ್ ।
ವನಸ್ಪತೀನ್ವಿಚಿನ್ವಂತೀ ವಿಜಹಾರ ಸಖೀವೃತಾ ॥ ೧೫ ॥
ರೂಪೇಣ ವಯಸಾ ಚೈವ ಸುರಾಪಾನಮದೇನ ಚ ।
ಬಭಂಜ ವನವೃಕ್ಷಾಣಾಂ ಶಾಖಾಃ ಪರಮಪುಷ್ಪಿತಾಃ ॥ ೧೬ ॥
ತಾಂ ಸಖೀರಹಿತಾಮೇಕಾಮೇಕವಸ್ತ್ರಾಮಲಂಕೃತಾಂ ।
ದದರ್ಶ ಭಾರ್ಗವೋ ಧೀಮಾಂಶ್ಚರಂತೀಮಿವ ವಿದ್ಯುತಂ ॥ ೧೭ ॥
ತಾಂ ಪಶ್ಯಮಾನೋ ವಿಜನೇ ಸ ರೇಮೇ ಪರಮದ್ಯುತಿಃ ।
ಕ್ಷಾಮಕಂಠಶ್ಚ ಬ್ರಹ್ಮರ್ಷಿಸ್ತಪೋಬಲಸಮನ್ವಿತಃ ॥ ೧೮ ॥

---

೧೨. ಬಳಿಕ ಅನೇಕ ಕಾಲವು ಕಳೆಯಲು ಶರ್ಯಾತಿಯೆಂಬ ರಾಜನು ತೀರ್ಥಯಾತ್ರಾಪ್ರಸಂಗದಿಂದ ಶ್ರೀ ಸೋಮೇಶನನ್ನು ನೋಡಲೋಸುಗ ಪವಿತ್ರವಾದ ಪ್ರಭಾಸಕ್ಷೇತ್ರಕ್ಕೆ ಬಂದನು.

೧೩. ಅವನಿಗೆ ನಾಲ್ಕು ಸಾವಿರ ಮಂದಿ ಪತ್ನಿಯರೂ, ಸುಕನ್ಯೆಯೆಂಬ ಒಬ್ಬಳೇ ಮಗಳೂ ಇದ್ದರು.

೧೪. ಆ ಸುಕನ್ಯೆಯು ಸಕಲಾಭರಣಭೂಷಿತಳಾಗಿ ಸಖಿಯರೊಡನೆ ಸಂಚರಿಸುತ್ತ ಚ್ಯವನನ ಹುತ್ತದೆಡೆಗೆ ಬಂದಳು.

೧೫. ಆ ಸುಂದರಿಯು ಸಖಿಯೊಡನೆ ಮನೋಹರವಾದ ವನವೃಕ್ಷಗಳನ್ನು ನೋಡುತ್ತ ಅವುಗಳ ಹೂವುಗಳನ್ನು ಕೊಯ್ಯುತ್ತ ವಿಹರಿಸಿದಳು.

೧೬. ಸೌಂದರ್ಯ, ವಯಸ್ಸು, ಮಧ್ಯಪಾನದ ಮದ ಇವುಗಳಿಂದ ಮತ್ತಳಾದ ಅವಳು ಹೂವುಗೊಂಡಿರುವ ವೃಕ್ಷಗಳ ಕೊಂಬೆಗಳನ್ನು ಮುರಿದಳು.

೧೭. ಸಖೀರಹಿತಳೂ, ಏಕವಸ್ತ್ರಳೂ, ಅಲಂಕಾರಗೊಂಡವಳೂ, ಚಲಿಸುವ ಮಿಂಚಿನಂತಿರುವವಳೂ ಆದ ಅವಳನ್ನು ಜ್ಞಾನಿಯಾದ ಚ್ಯವನನು ಕಂಡನು.

೧೮. ಅತಿಶಯಕಾಂತಿಯುಳ್ಳವನೂ, ಕುಗ್ಗಿದ ಧ್ವನಿಯುಳ್ಳವನೂ, ತಪಸ್ಸಿನ ಬಲದಿಂದ ಕೂಡಿದವನೂ ಆದ ಆ ಚ್ಯವನನು ಜನರಿಲ್ಲದ ಸ್ಥಳದಲ್ಲಿ ಆ ಸುಕನ್ಯೆಯನ್ನು ಕಂಡು ವಿನೋದಪಟ್ಟನು.

ತಾಮಭಾಷತ ಕಲ್ಯಾಣೀಂ ಸಾ ಚಾಸ್ಯ ನ ಶೃಣೋತಿ ವೈ ।
ತತಃ ಸುಕನ್ಯಾ ವಲ್ಮೀಕೇ ದೃಷ್ಟ್ವಾ ಭಾರ್ಗವಚಕ್ಷುಷೀ ॥ ೧೯ ॥
ಕೌತೂಹಲಾತ್ಕಂಟಕೇನ ಬುದ್ಧಿಮೋಹಬಲಾತ್ಕೃತಾ ।
ಕಿಂತು ಖಲ್ವಿದಮಿತ್ಯುಕ್ತ್ವಾ ನಿರ್ಬಿಭೇದಾಸ್ಯ ಲೋಚನೇ ॥ ೨೦ ॥
ಅಕ್ರುಧ್ಯತ್ಸ ತಯಾ ವಿದ್ಧೇ ನೇತ್ರೇ ಪರಮಮನ್ಯುಮಾನ್ ।
ತತಃ ಶರ್ಯಾತಿಸೈನ್ಯಸ್ಯ ಶಕೃನ್ಮೂತ್ರೇ ಸಮಾವೃಣೋತ್ ॥ ೨೧ ॥
ತತೋ ರುದ್ಧೇ ಶಕೃನ್ಮೂತ್ರೇ ಸೈನ್ಯಾನಾಹದುಃಖಿತಂ ।
ತಥಾಗತಮಭಿಪ್ರೇಕ್ಷ್ಯ ಪರ್ಯಪೃಚ್ಛತ ಪಾರ್ಥಿವಃ ॥ ೨೨ ॥
ತಪೋನಿತ್ಯಸ್ಯ ವೃದ್ಧಸ್ಯ ರೋಷಣಸ್ಯ ವಿಶೇಷತಃ ।
ಕೇನಾಪಕೃತಮದ್ಯೇಹ ಭಾರ್ಗವಸ್ಯ ಮಹಾತ್ಮನಃ ।
ಜ್ಞಾತಂ ವಾ ಯದಿ ವಾಽಜ್ಞಾತಂ ತದಿದಂ ಬ್ರೂತ ಮಾ ಚಿರಂ ॥ ೨೩ ॥
ತತ್ರೋಚುಃ ಸೈನಿಕಾಃ ಸರ್ವೇ ನ ವಿದ್ಮೋಽಪಕೃತಂ ವಯಂ ।
ಸರ್ವೋಪಾಯೈರ್ಯಥಾಕಾಮಂ ಭವಾನ್ಸಮಧಿಗಚ್ಛತು ॥ ೨೪ ॥
ತತಃ ಸ ಪೃಥಿವೀಪಾಲಃ ಸಾಮ್ನಾ ಚೋಗ್ರೇಣ ಚ ಸ್ವಯಂ ।
ಪರ್ಯಪೃಚ್ಛತ್ಸುಹೃದ್ವರ್ಗಂ ಪ್ರತ್ಯಜಾನನ್ನ ಚೈವ ತೇ ॥ ೨೫ ॥

೧೯–೨೦. ಅಲ್ಲದೆ ಆತನು ಆ ಸುಕನ್ಯೆಯನ್ನು ಮಾತಾಡಿಸಿದನು. ಆದರೆ ಅವಳು ಅವನ ಮಾತನ್ನು ಕೇಳಲಿಲ್ಲ. ಬಳಿಕ ಸುಕನ್ಯೆಯು ಹುತ್ತದಲ್ಲಿ ಚ್ಯವನನ ಕಣ್ಣುಗಳನ್ನು ಕಂಡು ಕುತೂಹಲದಿಂದಲೂ, ಭ್ರಾಂತಿಯಿಂದಲೂ ಇದೇನೆಂದು ಮುಳ್ಳಿನಿಂದ ಅವುಗಳನ್ನು ಚುಚ್ಚಿದಳು.

೨೧. ಅವಳು ಹಾಗೆ ಅವನ ಕಣ್ಣುಗಳನ್ನು ಚುಚ್ಚಲು ಅತ್ಯಂತ ಕೋಪಗೊಂಡ ಆ ಚ್ಯವನನು ಶರ್ಯಾತಿ ಸೈನ್ಯದ ಮಲಮೂತ್ರಗಳನ್ನು ಬಂಧಿಸಿದನು.

೨೨. ತರುವಾಯ ಶರ್ಯಾತಿಯು ಮಲಮೂತ್ರಬಂಧನದಿಂದ ದುಃಖಪಡುತ್ತಿರುವ ಸೈನ್ಯವನ್ನೂ. ಹಾಗಿರುವ ಮುನಿಯನ್ನೂ ಕಂಡು ವ್ಯಥೆಗೊಂಡನು.

೨೩. "ತಪ್ತೋನಿಷ್ಠನೂ, ಮುದುಕನೂ, ಅತಿಶಯಕೋಪಿಷ್ಠನೂ, ಆದ ಈ ಚ್ಯವನನಿಗೆ ತಿಳಿದೊ. ತಿಳಿಯದೆಯೊ ಯಾರು ಅಪಕಾರಮಾಡಿದರು? ಶೀಘ್ರವಾಗಿ ಹೇಳಿರಿ". ಎಂದು ಕೇಳಿದನು.

೨೪. ಅಲ್ಲಿರುವ ಸೈನಿಕರು ಇಂತೆಂದರು. "ಮಹಾರಾಜ! ಯಾರು ಮುನಿಗೆ ಅಪಕಾರಮಾಡಿದರೆಂಬುದನ್ನು ನಾವು ಅರಿಯೆವು. ನೀನೇ ಸಕಲೋಪಾಯಗಳಿಂದ ತಿಳಿದುಕೊ".

೨೫. ತರುವಾಯ ಆ ದೊರೆಯು ಸಾಮದಂಡೋಪಾಯಗಳನ್ನು ಉಪಯೋಗಿಸಿದರೂ ಮಿತ್ರರಿಂದ ನಡೆದ ವಿಷಯವನ್ನು ತಿಳಿಯಲಾಗಲಿಲ್ಲ.

ಆಹಾರ್ತಂ ಚ ತತೋ ದೃಷ್ಟ್ವಾ ತತ್ಸೈನ್ಯಂ ಸಂಮುಖೋದಿತಂ ।
ಪಿತರಂ ದುಃಖಿತಂ ಚಾಪಿ ಸುಕನ್ಯೈವಮಥಾಬ್ರವೀತ್ ॥ ೨೬ ॥
ಮಯಾ ತಾತೇಹ ವಲ್ಮೀಕೇ ದೃಷ್ಟಂ ಸರ್ವಮುಭಿಜ್ವಲತ್ ।
ಉದ್ಯೋತವದವಿಜ್ಞಾನಾತ್ತನ್ಮಯಾ ವಿದ್ಧಮಂತಿಕಾತ್ ॥ ೨೭ ॥
ಏತಚ್ಛ್ರುತ್ವಾ ತು ಶರ್ಯಾತಿರ್ವಲ್ಮೀಕಂ ಕ್ಷಿಪ್ರಮುಭ್ಯಗಾತ್ ।
ತತ್ರಾಪಶ್ಯತ್ತಪೋವೃದ್ಧಂ ವಯೋವೃದ್ಧಂ ಚ ಭಾರ್ಗವಂ ॥ ೨೮ ॥
ಅಥಾವದತ್ಸ್ವಸೈನ್ಯಾರ್ಥಂ ಪ್ರಾಂಜಲಿಃ ಸ ಮಹೀಪತಿಃ ।
ಅಜ್ಞಾನಾದ್ಬಾಲಯಾ ಯತ್ತೇ ಕೃತಂ ತತ್ಕ್ಷಂತುಮರ್ಹಸಿ ॥ ೨೯ ॥
ತತೋಽಬ್ರವೀನ್ಮಹೀಪಾಲಂ ಚ್ಯವನೋ ಭಾರ್ಗವಸ್ತದಾ ।
ರೂಪೌದಾರ್ಯಸಮಾಯುಕ್ತಾಂ ಲೋಭಮೋಹಸಮಾವೃತಾಂ ॥ ೩೦ ॥
ತಾಮೇವ ಪ್ರತಿಗೃಹ್ಯಾಹಂ ರಾಜನ್ದುಹಿತರಂ ತವ ।
ಕ್ಷಮಿಷ್ಯಾಮಿ ಮಹೀಪಾಲ ಸತ್ಯಮೇತದ್ಬ್ರವೀಮಿ ತೇ ॥ ೩೧ ॥

ಈಶ್ವರ ಉವಾಚ :—

ಋಷೇರ್ವಚನಮಾಜ್ಞಾಯ ಶರ್ಯಾತಿರವಿಚಾರಯನ್ ।
ದದೌ ದುಹಿತರಂ ತಸ್ಮೈ ಚ್ಯವನಾಯ ಮಹಾತ್ಮನೇ ॥ ೩೨ ॥

---

೨೬. ಆಗ ಸುಕನ್ಯೆಯು ಮಲಮೂತ್ರ ಬಂಧನದಿಂದ ದುಃಖಗೊಳ್ಳುತ್ತಿರುವ ಆ ಸೈನ್ಯವನ್ನೂ, ದುಃಖಿಸುತ್ತಿರುವ ತಂದೆಯನ್ನೂ ನೋಡಿ ಹೀಗೆಂದಳು.

೨೭. "ಅಪ್ಪ! ನಾನು ಈ ಹುತ್ತದಲ್ಲಿ ಸೂರ್ಯನಂತೆ (ಮಿಂಚು ಹುಳುವಿನಂತೆ) ಜ್ವಲಿಸುತ್ತಿರುವುದನ್ನು ನೋಡಿ ಅರಿಯದೆ ಕಡ್ಡಿಯಿಂದ ಚುಚ್ಚಿದೆನು".

೨೮. ಇದನ್ನು ಕೇಳಿ ಶರ್ಯಾತಿಯು ಶೀಘ್ರವಾಗಿ ಹುತ್ತದೆಡೆಗೆ ಬಂದು ಅಲ್ಲಿ ತಪೋವೃದ್ಧನೂ, ವಯೋವೃದ್ಧನೂ ಆದ ಚ್ಯವನನನ್ನು ಕಂಡನು.

೨೯. ಆ ದೊರೆಯು ಬಳಿಕ ತನ್ನ ಸೈನ್ಯದ ಸೌಖ್ಯಕ್ಕಾಗಿ ಕೈಮುಗಿದುಕೊಂಡು "ಈ ಬಾಲಿಕೆಯು ಅರಿಯದೆ ಮಾಡಿದ ತಪ್ಪನ್ನು ನೀನು ಕ್ಷಮಿಸಬೇಕು". ಎಂದು ಬೇಡಿಕೊಂಡನು.

೩೦–೩೧. ಅನಂತರ ಚ್ಯವನನು ಶರ್ಯಾತಿಯನ್ನು ಕುರಿತು, "ನೃಪಾಲ! ರೂಪ, ಔದಾರ್ಯ, ಲೋಭ, ಮೋಹ ಇವುಗಳಿಂದಕೂಡಿರುವ ನಿನ್ನ ಮಗಳನ್ನು ಮದುವೆ ಮಾಡಿಕೊಂಡು ಈ ತಪ್ಪನ್ನು ಕ್ಷಮಿಸುವೆನು. ಇದನ್ನು ಸತ್ಯವಾಗಿ ಹೇಳುವೆನು".

೩೨. ಈಶ್ವರನು ಹೇಳುತ್ತಾನೆ :—ಶರ್ಯಾತಿಯು ಮುನಿಯ ಮಾತನ್ನು ತಿಳಿದು ವಿಚಾರಮಾಡದೆ ಮಹಾತ್ಮನಾದ ಆ ಚ್ಯವನನಿಗೆ ಮಗಳನ್ನು ಮದುವೆಮಾಡಿ ಕೊಟ್ಟನು.

ಪ್ರತಿಗೃಹ್ಯ ಚ ತಾಂ ಕನ್ಯಾಂ ಭಗವಾನ್ಪ್ರಸಸಾದ ಹ ।
ಪ್ರಾಪ್ತೇ ಪ್ರಸಾದೇ ರಾಜಾ ತು ಸಸೈನ್ಯಃ ಪುರಮಾವ್ರಜತ್ ॥ ೩೩ ॥
ಸುಕನ್ಯಾಪಿ ಪತಿಂ ಲಬ್ಧ್ವಾ ತಪಸ್ವಿನಮನಿಂದಿತಂ ।
ನಿತ್ಯಂ ಪರ್ಯಚರತ್ಪ್ರೀತ್ಯಾ ತಪಸಾ ನಿಯಮೇನ ಚ ॥ ೩೪ ॥
ಅಗ್ನೀನಾಮತಿಥೀನಾಂ ಚ ಶುಶ್ರೂಷುರನಸೂಯಯಾ ।
ಸಮಾರಾಧಯತ ಕ್ಷಿಪ್ರಂ ಚ್ಯವನಂ ಸಾ ಶುಭಾನನಾ ॥ ೩೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

---

೩೩. ಚ್ಯವನನು ಅವಳನ್ನು ಸ್ವೀಕರಿಸಿ ಪ್ರಸನ್ನನಾಗಲು ಶರ್ಯಾತಿಯು ಸೈನ್ಯ ದೊಡನೆ ಪಟ್ಟಣಕ್ಕೆ ಹಿಂದಿರುಗಿದನು.

೩೪. ಸುಕನ್ಯೆಯೂ ನಿರ್ದುಷ್ಟನಾದ ಆ ಚ್ಯವನ ಮುನಿಯನ್ನು ಪತಿಯನ್ನಾಗಿ ಪಡೆದು ನಿತ್ಯದಲ್ಲಿಯೂ ಅವನನ್ನು ಪ್ರೀತಿ, ತಪಸ್ಸು, ನಿಯಮ ಇವುಗಳಿಂದ ಸೇವಿಸಿದಳು.

೩೫. ಸುಂದರಿಯಾದ ಆ ಸುಕನ್ಯೆಯು ಅಗ್ನಿ, ಅತಿಥಿ ಇವರನ್ನು ಅಸೂಯೆ ಯಿಲ್ಲದೆ ಸೇವಿಸುತ್ತ ಚ್ಯವನನನ್ನು ಶೀಘ್ರವಾಗಿ ಒಲಿಸಿಕೊಂಡಳು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚ್ಯವನೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಚ್ಯವನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಕಸ್ಯಚಿತ್ತ್ವಥ ಕಾಲಸ್ಯ ತ್ರಿದಶಾವಶ್ವಿನೌ ಪ್ರಿಯೇ ।
ಕೃತಾಭಿಷೇಕಾಂ ವಿವೃತಾಂ ಸುಕನ್ಯಾಂ ತಾಮಪಶ್ಯತಾಂ ॥ ೧ ॥
ತಾಂ ದೃಷ್ಟ್ವಾ ದರ್ಶನೀಯಾಂಗೀಂ ದೇವರಾಜಸುತಾಮಿವ ।
ಊಚತುಃ ಸಮಭಿದ್ರುತ್ಯ ನಾಸತ್ಯಾವಶ್ವಿನಾವಥ ॥ ೨ ॥
ಕಸ್ಯ ತ್ವಮಸಿ ವಾಮೋರು ಕಿಂ ವನೇಽಸ್ಮಿಂಶ್ಚಿಕೀರ್ಷಸಿ ।
ಇಚ್ಛಾವಸ್ತ್ವಾಂ ಚ ವಿಜ್ಞಾತುಂ ತತ್ತ್ವಮಾಖ್ಯಾಹಿ ಶೋಭನೇ ॥ ೩ ॥
ತತಃ ಸುಕನ್ಯಾ ಸಂವೀತಾ ತಾವುವಾಚ ಸುರೋತ್ತಮೌ ।
ಶರ್ಯಾತಿತನಯಾಂ ವಿತ್ತಂ ಭಾರ್ಯಾಂ ಚ ಚ್ಯವನಸ್ಯ ಮಾಂ ॥ ೪ ॥

ಕನ್ನಡದ ಅನುವಾದ

ಚ್ಯವನೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಒಂದಾನೊಂದು ದಿನ ಅಶ್ವಿನೀದೇವತೆಗಳು ಸ್ನಾನಮಾಡಿ ಬತ್ತಲೆಯಾಗಿರುವ ಆ ಸುಕನ್ಯೆಯನ್ನು ಕಂಡರು.

೨. ತರುವಾಯ ಅವರು ದೇವೇಂದ್ರನ ಮಗಳಂತೆ ಸುಂದರಾಂಗಿಯಾದ ಆ ಸುಕನ್ಯೆಯನ್ನು ಕಂಡು ಹತ್ತಿರ ಬಂದು ಇಂತೆಂದರು.

೩. "ಸುಂದರಿಯೆ! ನೀನು ಯಾರ ಪತ್ನಿಯು? ಈ ಕಾಡಿನಲ್ಲಿ ಏನನ್ನು ಮಾಡುತ್ತಿರುವೆ? ನಿನ್ನನ್ನರಿಯಲು ನಾವು ಬಯಸುವೆವು. ನೀನು ನಿಜವಿಷಯವನ್ನು ನಮಗೆ ಹೇಳು".

೪. ಅನಂತರ ಸುಕನ್ಯೆಯು ಬಟ್ಟೆಯನ್ನುಟ್ಟುಕೊಂಡು ಅವರನ್ನು ಕುರಿತು "ನನ್ನನ್ನು ಶರ್ಯಾತಿರಾಜನ ಮಗಳನ್ನಾಗಿಯೂ ಚ್ಯವನ ಮುನಿಯ ಪತ್ನಿಯನ್ನಾಗಿಯೂ ತಿಳಿಯಿರಿ" ಎಂದಳು.

ತತೋಽಶ್ವಿನೌ ಪ್ರಹಸ್ಯೈನಾಮಬ್ರೂತಾಂ ಪುನರೇವ ತು ।
ಕಥಂ ತ್ವಂ ಚ ವಿದಿತ್ವಾ ತು ಪಿತ್ರಾ ದತ್ತಾಽಽಗತಾ ವನೇ ॥ ೫ ॥
ಭ್ರಾಜಸೇ ಗಗನೋದ್ದೇಶೇ ವಿದ್ಯುತ್ಸೌದಾಮನೀ ಯಥಾ ।
ನ ದೇವೇಷ್ವಪಿ ತುಲ್ಯಾಂ ಹಿ ತವ ಪಶ್ಯಾವ ಭಾಮಿನಿ ॥ ೬ ॥
ಸರ್ವಾಭರಣಸಂಪನ್ನಾ ಪರಮಾಂಬರಧಾರಿಣೀ ।
ಮಾಮ್ಯೈವಮನವದ್ಯಾಂಗಿ ತ್ಯಜೈನಮವಿವೇಕಿನಂ ॥ ೭ ॥
ಕಸ್ಮಾದೇವಂವಿಧಾ ಭೂತ್ವಾ ಜರಾಜರ್ಜರಿತಂ ಭುವಿ ।
ತ್ವಮುಪಾಸ್ಸೇ ಹಿ ಕಲ್ಯಾಣಿ ಕಾಮಭಾವಬಹಿಷ್ಕೃತಂ ॥ ೮ ॥
ಅಸಮರ್ಥಂ ಪರಿತ್ರಾಣೇ ಪೋಷಣೇ ವಾ ಶುಚಿಸ್ಮಿತೇ ।
ಸಾ ತ್ವಂ ಚ್ಯವನಮುತ್ಸೃಜ್ಯ ವರಯಸ್ವೈಕಮಾವಯೋಃ ॥ ೯ ॥
ಪತ್ಯರ್ಥಂ ದೇವಗರ್ಭಾಭೇ ಮಾ ವೃಥಾ ಯೌವನಂ ಕೃಥಾಃ ।
ಏವಮುಕ್ತಾ ಸುಕನ್ಯಾ ಸಾ ಸುರೌ ತಾವಿದಮಬ್ರವೀತ್ ॥ ೧೦ ॥
ರತಾಹಂ ಚ್ಯವನೇ ಪತ್ಯೌ ನ ಚೈವಂ ಪರಿಶಂಕತಂ ।
ತಾವಬ್ರೂತಾಂ ಪುನಶ್ಚೈತಾಮಾವಾಂ ದೇವಭಿಷಗ್ವರೌ ॥ ೧೧ ॥

---

೫. ಬಳಿಕ ಅಶ್ವಿನೀದೇವತೆಗಳು ನಕ್ಕು ಹೀಗೆಂದರು, “ನಿನ್ನ ತಂದೆಯು ತಿಳಿದವನಾದರೂ ಕಾಡಿಗೆ ಬಂದ ನಿನ್ನನ್ನು ಹೇಗೆ ಚ್ಯವನನಿಗೆ ದಾನಮಾಡಿದನು?

೬. ಸುಂದರಿ! ನೀನು ಆಕಾಶದಲ್ಲಿ ಮಿಂಚಿನಂತೆ ವಿರಾಜಿಸುತ್ತಿರುವೆ. ದೇವತೆಗಳಲ್ಲಿಯೂ ನಿನಗೆ ಸಮಾನರಾದವರನ್ನು ಕಾಣೆವು.

೭. ನಿರ್ದುಷ್ಟವಾದ ಅವಯವಗಳುಳ್ಳವಳೇ! ಸಕಲ ಒಡವೆಗಳಿಂದ ಅಲಂಕೃತಳೂ, ಉತ್ತಮ ವಸ್ತ್ರವನ್ನು ಧರಿಸಿದವಳೂ ಆದ ನೀನು ಅವಿವೇಕಿಯಾದ ಈ ಚ್ಯವನನನ್ನು ತ್ಯಜಿಸು.

೮. ಮಂಗಳಕರಳೇ! ಹೀಗಿರುವ ನೀನು ಏತಕ್ಕೆ ಮುಪ್ಪಿನಿಂದ ಶಿಥಿಲವಾದ ಶರೀರವುಳ್ಳವನೂ, ಕಾಮರಹಿತನೂ ಆದ ಚ್ಯವನನನ್ನು ಸೇವಿಸುತ್ತಿರುವೆ.

೯. ಶುದ್ಧವಾದ ನಗುವುಳ್ಳವಳೇ! ನೀನು ರಕ್ಷಿಸುವುದರಲ್ಲಿಯೂ, ಪೋಷಿಸುವುದರಲ್ಲಿಯೂ ಅಶಕ್ತನಾದ ಚ್ಯವನನನ್ನು ತ್ಯಜಿಸಿ ನಮ್ಮಿಬ್ಬರಲ್ಲಿ ಒಬ್ಬನನ್ನು ವರಿಸು.

೧೦–೧೧. ದೇವತೆಯಂತಿರುವವಳೇ! ಪತಿಗಾಗಿ ಯೌವನವನ್ನು ವ್ಯರ್ಥಗೊಳಿಸಬೇಡ”. ಅವರು ಹೀಗೆನ್ನಲು ಸುಕನ್ಯೆಯು ಅವರನ್ನು ಕುರಿತು ನಾನುಚ್ಯವನನಲ್ಲಿ ಆಸಕ್ತಳಾಗಿರುವೆನು. ನೀವು ಹೀಗೆ ಶಂಕಿಸಬೇಡಿರಿ, ಎಂದಳು. ಅವರು ಮರಳಿ ಹೀಗೆಂದರು.

ಯುವಾನಂ ರೂಪಸಂಪನ್ನಂ ಕರಿಷ್ಯಾವಃ ಪತಿಂ ತವ ।
ತತಸ್ತ್ವಸ್ಯಾವಯೋಶ್ಚೈವ ಪತಿಮೇಕತಮಂ ವೃಣು ॥ ೧೨ ॥
ಏತೇನ ಸಮಯೇನಾವಾಂ ಶಮಂ ನಯ ಸುಮಧ್ಯಮೇ ।
ಸಾ ತಯೋರ್ವಚನಾದ್ದೇವಿ ಉಪಸಂಗಮ್ಯ ಭಾರ್ಗವಂ ।
ಉವಾಚ ವಾಕ್ಯಂ ಯತ್ತಾಭ್ಯಾಮುಕ್ತಂ ಭೃಗುಸುತಂ ಪ್ರತಿ ॥ ೧೩ ॥
ತದ್ವಾಕ್ಯಂ ಚ್ಯವನೋ ಭಾರ್ಯಾಮುವಾಚಾಕ್ರಿಯತಾಮಿತಿ ।
ಇತ್ಯುಕ್ತಾ ಚ್ಯವನೇನಾಥ ಸುಕನ್ಯಾ ತಾವುವಾಚ ವೈ ॥ ೧೪ ॥
ಏವಂ ದೇವೌ ಭವದ್ಭ್ಯಾಂ ಯತ್ಪ್ರೋಕ್ತಂ ತತ್ಕ್ರಿಯತಾಂ ಲಘು ।
ಇತ್ಯುಕ್ತೌ ಭಿಷಜೌ ತತ್ರ ತಯಾ ಚೈವ ಸುಕನ್ಯಯಾ ।
ಊಚತೂ ರಾಜಪುತ್ರೀಂ ತಾಂ ಪತಿಸ್ತವ ವಿಶತ್ವಪಃ ॥ ೧೫ ॥
ತತೋಽಪಶ್ಚ್ಯವನಃ ಶೀಘ್ರಂ ರೂಪಾರ್ಥೀ ಪ್ರವಿವೇಶ ಹ ।
ಅಶ್ವಿನಾವಪಿ ತದ್ದೇವಿ ತತಃ ಪ್ರಾವಿಶತಾಂ ಜಲಂ ॥ ೧೬ ॥
ತತೋ ಮುಹೂರ್ತಾದುತ್ತೀರ್ಣಾಃ ಸರ್ವೇ ತೇ ಸರಸಸ್ತತಃ ।
ದಿವ್ಯರೂಪಧರಾಃ ಸರ್ವೇ ಯುವಾನೋ ಮೃಷ್ಟಕುಂಡಲಾಃ ॥ ೧೭ ॥

---

೧೨. ನಾವು ನಿನ್ನ ಪತಿಯನ್ನು ಸುಂದರನನ್ನಾಗಿಸುವೆವು. ಬಳಿಕ ಮೂವರಾದ ನಮ್ಮಲ್ಲಿ ಒಬ್ಬನನ್ನು ಪತಿಯನ್ನಾಗಿ ವರಿಸು.

೧೩. ಈ ನಿರ್ಣಯದಿಂದ ನೀನು ನಮ್ಮನ್ನು ಶಾಂತರನ್ನಾಗಿ ಮಾಡು. ಎನ್ನಲು ಸುಕನ್ಯೆಯು ಅವರ ಮಾತಿನಂತೆ ಚ್ಯವನನ ಬಳಿಗೆ ಹೋಗಿ ಅಶ್ವಿನೀದೇವತೆಗಳು ಹೇಳಿದ ಮಾತನ್ನು ಅವನಿಗೆ ಹೇಳಿದಳು.

೧೪–೧೫. ಚ್ಯವನನು ಆ ಮಾತನ್ನು ಕೇಳಿ ಪತ್ನಿಯನ್ನು ಕುರಿತು ಅವರು ಹೇಳಿದ್ದನ್ನು ಒಪ್ಪಿಕೊ ಎಂದನು. ಅದರಂತೆ ಸುಕನ್ಯೆಯು ಆ ದೇವತೆಗಳನ್ನು ಕುರಿತು ನೀವು ಹೇಳಿದ್ದನ್ನು ಶೀಘ್ರವಾಗಿ ಮಾಡಿರಿ ಎಂದಳು. ಅವಳು ಹಾಗೆಯೇ ಹೇಳಲು ಆ ಅಶ್ವಿನೀದೇವತೆಗಳು ಆ ಸುಕನ್ಯೆಯನ್ನು ಕುರಿತು ನಿನ್ನಪತಿಯು ಕೂಡಲೆ ಜಲವನ್ನು ಪ್ರವೇಶಿಸಲಿ ಎಂದರು.

೧೬. ತರುವಾಯ ಸೌಂದರ್ಯವನ್ನು ಬಯಸುವ ಚ್ಯವನನು ಶೀಘ್ರವಾಗಿ ನೀರನ್ನು ಪ್ರವೇಶಿಸಿದನು. ಅಶ್ವಿನೀದೇವತೆಗಳೂ ಆ ನೀರನ್ನು ಹೊಕ್ಕರು.

೧೭–೧೮. ಅನಂತರ ಮುಹೂರ್ತ ಕಾಲದಲ್ಲಿ ಆ ಸರೋವರದಿಂದ ಮೇಲಕ್ಕೆದ್ದು ದಿವ್ಯರೂಪವನ್ನು ಧರಿಸಿದವರೂ, ಯುವಕರೂ, ಜ್ವಲಿಸುವ ಕುಂಡಲವುಳ್ಳವರೂ,

ದಿವ್ಯವೇಷಧರಾಶ್ಚೈವ ಮನಸಃ ಪ್ರೀತಿವರ್ಧನಾಃ ।
ತೇಽಬ್ರುವನ್ಸಹಿತಾಃ ಸರ್ವೇ ವೃಣೀಷ್ವಾನ್ಯತಮಂ ಶುಭೇ ॥ ೧೮ ॥
ಅಸ್ಮಾಕಮೀಪ್ಸಿತಂ ಭದ್ರೇ ಯತಸ್ತ್ವಂ ವರವರ್ಣಿನೀ ।
ಯತ್ರ ವಾಪ್ಯಭಿಕಾಮಾನಿ ತಂ ವೃಣೀಷ್ವ ಸುಶೋಭನೇ ॥ ೧೯ ॥
ಸಾ ಸಮೀಕ್ಷ್ಯ ತು ತಾನ್ಸರ್ವಾಂಸ್ತುಲ್ಯರೂಪಧರಾನ್ಸ್ಥಿತಾನ್ ।
ನಿಶ್ಚಿತ್ಯ ಮನಸಾ ಬುದ್ಧ್ಯಾ ದೇವೀ ವವ್ರೇ ಪತಿಂ ಸ್ವಕಂ ॥ ೨೦ ॥
ಲಬ್ಧ್ವಾತು ಚ್ಯವನೋ ಭಾರ್ಯಾಂ ವಯೋರೂಪಮವಸ್ಥಿತಃ ।
ಹೃಷ್ಟೋಽಬ್ರವೀನ್ಮಹಾತೇಜಾಸ್ತೌ ನಾಸತ್ಯಾವಿದಂ ವಚಃ ॥ ೨೧ ॥
ಯದಹಂ ರೂಪಸಂಪನ್ನೋ ವಯಸಾ ಚ ಸಮನ್ವಿತಃ ।
ಕೃತೋ ಭವದ್ಭ್ಯಾಂ ವೃದ್ಧಃ ಸನ್ಭಾರ್ಯಾಂ ಚ ಪ್ರಾಪ್ತವಾನ್ನಿಜಾಂ ।
ತದ್ಭ್ಯಾಂ ಕೃತಂ ವೈ ವಿಧಾಸ್ಯಾಮಿ ಭವತೋರ್ಯದಭೀಪ್ಸಿತಂ ॥ ೨೨ ॥

ಅಶ್ವಿನಾವೂಚತುಃ :—

ಆವಾಂ ತು ದೇವಭಿಷಜೌ ನ ಚ ಶಕ್ರಃ ಕರೋತಿ ನೌ ।
ಸೋಮಪಾನಾರ್ಹತಾಂ ತಸ್ಮಾತ್ಕುರು ನೋ ಸೋಮಪಾಯಿನೌ ॥ ೨೩ ॥

ದಿವ್ಯವೇಷವುಳ್ಳವರೂ, ಮನೋಹರರೂ ಆದ ಚ್ಯವನನು ಮತ್ತು ಆ ಅಶ್ವಿನೀ ದೇವತೆಗಳು ಒಟ್ಟಿಗೆ ಸೇರಿ ನಮ್ಮಲ್ಲಿ ಒಬ್ಬನನ್ನು ವರಿಸೆಂದರು.

೧೯. ಮಂಗಳಕರಳೇ! ನೀನು ನಮಗೆ ಇಷ್ಟಳಾಗಿರುವುದರಿಂದ ಯಾವನನ್ನು ಕಾಮಿಸುವೆಯೊ ಅವನನ್ನು ವರಿಸು.

೨೦. ಅವಳು ಸಮಾನರೂಪವುಳ್ಳವರಾಗಿ ನಿಂತಿರುವ ಅವರನ್ನೆಲ್ಲ ಕಂಡು ಮನಸ್ಸಿನಲ್ಲಿ ನಿರ್ಧರಿಸಿಕೊಂಡು ತನ್ನ ಪತಿಯನ್ನೇ ವರಿಸಿದಳು.

೨೧. ಚ್ಯವನನು ಯೌವನವನ್ನೂ, ಸೌಂದರ್ಯವನ್ನೂ ಪಡೆದು ಆ ಸುಕನ್ಯೆಯನ್ನು ಹೊಂದಿ ಸಂತೋಷಗೊಂಡು ಅಶ್ವಿನೀದೇವತೆಗಳನ್ನು ಕುರಿತು ಇಂತೆಂದನು.

೨೨. "ಅಶ್ವಿನೀದೇವತೆಗಳೇ ! ನೀವು ಮುದಕನಾದ ನನಗೆ ಯೌವನ, ಸೌಂದರ್ಯಗಳನ್ನಿತ್ತಿರುವಿರಿ. ಅದರಿಂದ ನಾನು ಭಾರ್ಯೆಯನ್ನು ಪಡೆದೆನು. ಆದುದರಿಂದ ಸಂತೋಷಗೊಂಡ ನಾನು ಯಾವ ನಿಮಗಿಷ್ಟವನ್ನುಂಟುಮಾಡಲಿ? ಹೇಳಿರಿ".

೨೩. ಅಶ್ವಿನೀದೇವತೆಗಳು ಹೇಳುತ್ತಾರೆ:—ದೇವತೆಗಳ ವೈದ್ಯರಾದ ನಮ್ಮನ್ನು ದೇವೇಂದ್ರನು ಸೋಮಪಾನಕ್ಕೆ ಅರ್ಹರನ್ನಾಗಿ ಮಾಡುವುದಿಲ್ಲ. ಆದ್ದರಿಂದ ನೀನು ನಮ್ಮನ್ನು ಸೋಮಪಾನಕ್ಕೆ ಯೋಗ್ಯರನ್ನಾಗಿ ಮಾಡು.

ಚ್ಯವನ ಉವಾಚ :—

ಅಹಂ ವಾ ಯಜ್ಞಭಾಗಾರ್ಹೌ ಕರಿಷ್ಯೇ ಸೋಮಪಾಯಿನೌ ॥ ೨೪ ॥

ಈಶ್ವರ ಉವಾಚ :—

ತತಸ್ತೌ ಹೃಷ್ಟಮನಸೌ ನಾಸತ್ಯೌ ದಿವಿ ಜಗ್ಮತುಃ ।
ಚ್ಯವನೋಽಪಿ ಸುಕನ್ಯಾ ಚ ಸುರಾವಿವ ವಿಜಹ್ರತುಃ ॥ ೨೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನೇಶ್ವರಮಾಹಾತ್ಮ್ಯವರ್ಣನಂನಾಮ
॥ ಏಕಾಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

---

೨೪. ಚ್ಯವನನು ಹೇಳುತ್ತಾನೆ :—ನಾನು ನಿಮ್ಮನ್ನು ಸೋಮಪಾನಕ್ಕೂ, ಯಜ್ಞಭಾಗಕ್ಕೂ ಅರ್ಹರನ್ನಾಗಿ ಮಾಡುವೆನು.

೨೫. ಈಶ್ವರನು ಹೇಳುತ್ತಾನೆ :—ಬಳಿಕ ಆ ಅಶ್ವಿನೀದೇವತೆಗಳು ಸಂತೋಷಗೊಂಡು ದೇವಲೋಕಕ್ಕೆ ಹೋದರು. ಚ್ಯವನ ಸುಕನ್ಯೆಯರು ದೇವತೆಗಳಂತೆ ವಿಹರಿಸಿದರು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚ್ಯವನೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವ್ಯಶೀತ್ಯುತ್ತರಶತತಮೋಽಧ್ಯಾಯಃ

ಚ್ಯವನ ಕೃತ್ತಮದಾಸುರಸೃಷ್ಟಿ ವರ್ಣನಂ

ಈಶ್ವರ ಉವಾಚ :—

ತತಃ ಶ್ರುತ್ವಾ ಚ ಶರ್ಯಾತಿರ್ವಲಭೀಸ್ಥಾನಸಂಸ್ಥಿತಃ ।
ವಯಸ್ಥಂ ಚ್ಯವನಂ ಶ್ರುತ್ವಾ ಆನಂದೋದ್ಗತಮಾನಸಃ ॥ ೧ ॥
ಪ್ರಹೃಷ್ಟಃ ಸೇನಯಾ ಸಾರ್ಧಂ ಸ ಪ್ರಾಯಾದ್ಭಾರ್ಗವಾಶ್ರಮಂ ।
ಚ್ಯವನಂ ಚ ಸುಕನ್ಯಾಂ ಚ ಹೃಷ್ಟ್ವಾಂ ದೇವಸುತಾಮಿವ ॥ ೨ ॥
ಗತೋ ಮಹೀಪಃ ಶರ್ಯಾತಿಃ ಕೃತ್ಸ್ನಾನಂದಮಹೋದಧಿಃ ।
ಋಷಿಣಾ ಸತ್ಕೃತಸ್ತೇನ ಸಭಾರ್ಯಃ ಪೃಥಿವೀಪತಿಃ ।
ತತ್ರೋಪವಿಷ್ಟಃ ಕಲ್ಯಾಣೀಃ ಕಥಾಶ್ಚಕ್ರೇ ಮಹಾಮನಾಃ ॥ ೩ ॥
ಅಥೈನಂ ಭಾರ್ಗವೋ ದೇವಿ ಹ್ಯುವಾಚ ಪರಿಸಾಂತ್ವಯನ್ ।
ಯಾಜಯಿಷ್ಯಾಮಿ ರಾಜಂಸ್ತ್ವಾಂ ಸಂಭಾರಾನುಪಕಲ್ಪಯ ॥ ೪ ॥

ಕನ್ನಡದ ಅನುವಾದ

ಚ್ಯವನ ಕೃತಮದಾಸುರಸೃಷ್ಟಿವರ್ಣನ

೧–೩. ಈಶ್ವರನು ಹೇಳುತ್ತಾನೆ:— ಬಳಿಕ ವಲಭೀಸ್ಥಾನದಲ್ಲಿರುವ ಶರ್ಯಾತಿಯು ಚ್ಯವನನು ಯುವಕನಾದುದನ್ನು ಕೇಳಿ ಸಂತೋಷಗೊಂಡ ಮನಸ್ಸುಳ್ಳವನಾಗಿ ಸೇನೆಯೊಡನೆ ಚ್ಯವನನಾಶ್ರಮಕ್ಕೆ ಹೋಗಿ ಚ್ಯವನನನ್ನೂ, ಸುಕನ್ಯೆಯನ್ನೂ ಕಂಡು ಅತ್ಯಾನಂದ ಭರಿತನಾಗಿ ಆ ಮುನಿಯಿಂದ ಸನ್ಮಾನವನ್ನು ಹೊಂದಿ ಪತ್ನಿಯೊಡನೆ ಅಲ್ಲಿ ಕುಳಿತು ಮಂಗಳಕರವಾದ ಮಾತುಗಳನ್ನಾಡಿದನು.

೪. ಅನಂತರ ಭಾರ್ಗವನು (ಚ್ಯವನನು) ಈ ಶರ್ಯಾತಿಯನ್ನು ಸಮಾಧಾನಗೊಳಿಸುತ್ತ ದೊರೆಯೆ ! ನಿನ್ನಿಂದ ಯಾಗಮಾಡಿಸುವೆನು. ಯಜ್ಞಸಾಮಗ್ರಿಯನ್ನು ಸಿದ್ಧಗೊಳಿಸು. ಎಂದನು.

ತತಃ ಪರಮಸಂಹೃಷ್ಟಃ ಶರ್ಯಾತಿಃ ಪೃಥಿವೀಪತಿಃ ।
ಚ್ಯವನಸ್ಯ ಮಹಾದೇವಿ ತದ್ವಾಕ್ಯಂ ಪ್ರತ್ಯಪೂಜಯತ್ ॥ ೫ ॥
ಪ್ರಶಸ್ತೇಽಹನಿ ಯಾಜ್ಞೀಯೇ ಸರ್ವಕಾಮಸಮೃದ್ಧಿಮತ್ ।
ಕಾರಯಾಮಾಸ ಶರ್ಯಾತಿರ್ಯಜ್ಞಾಯತನಮುತ್ತಮಂ ॥ ೬ ॥
ತತ್ರೈವ ಚ್ಯವನೋ ದೇವಿ ಯಾಜಯಾಮಾಸ ಭಾರ್ಗವಂ ।
ಅದ್ಭುತಾನಿ ಚ ತತ್ರಾಸನ್ಯಾನಿ ತಾನಿ ಮಹೇಶ್ವರಿ ॥ ೭ ॥
ಅಗೃಹ್ಣಾಚ್ಚ್ಯವನಃ ಸೋಮಮಶ್ವಿನೋರ್ದೇವಯೋಸ್ತದಾ ।
ತಮಿಂದ್ರೋ ವಾರಯಾಮಾಸ ಮಾ ಗೃಹಾಣ ತಯೋರ್ಗ್ರಹಂ ॥ ೮ ॥

ಇಂದ್ರ ಉವಾಚ :—

ಉಭಾವೇತೌ ನ ಸೋಮಾರ್ಹೌ ನಾಸತ್ಯಾವಿತಿ ಮೇ ಮತಿಃ ।
ಭಿಷಜೌ ದೇವತಾನಾಂ ಹಿ ಕರ್ಮಣಾ ತೇನ ಗರ್ಹಿತಾ ॥ ೯ ॥

ಚ್ಯವನ ಉವಾಚ :—

ಮಾವಮಂಸ್ಥಾ ಮಹಾತ್ಮಾನೌ ರೂಪದ್ರವಿಣವರ್ಚಸೌ ।
ಯೌ ಚಕ್ರತುಶ್ಚ ಮಾಮದ್ಯ ವೃಂದಾರಕಮಿವಾಜರಂ ॥ ೧೦ ॥

---

೫. ಮಹಾದೇವಿ! ತರುವಾಯ ಅತ್ಯಂತವಾಗಿ ಆನಂದಗೊಂಡ ಶರ್ಯಾತಿಯು ಚ್ಯವನನ ಆ ಮಾತನ್ನು ಅಭಿನಂದಿಸಿದನು.

೬. ಶರ್ಯಾತಿಯು ಯಜ್ಞಯೋಗ್ಯವಾದ ಉತ್ತಮ ದಿನದಲ್ಲಿ ಸಕಲೇಷ್ಟಾರ್ಥಗಳಿಂದ ಸಮೃದ್ಧಿಗೊಂಡ ಯಜ್ಞಶಾಲೆಯನ್ನು ಮಾಡಿಸಿದನು.

೭. ಅಲ್ಲಿ ಚ್ಯವನನು ರಾಜನಿಂದ ಯಾಗಮಾಡಿಸಿದನು. ಅಲ್ಲಿ ಆಶ್ಚರ್ಯಕರವಾದ ವಿಷಯಗಳು ನಡೆದುವು.

೮. ಚ್ಯವನನು ಅಶ್ವಿನೀ ದೇವತೆಗಳು ಸೋಮರಸವನ್ನು ಸ್ವೀಕರಿಸುವಂತೆ ಮಾಡಲು ದೇವೇಂದ್ರನು ಅದನ್ನು ತಡೆದನು.

೯. ಇಂದ್ರನು ಹೇಳುತ್ತಾನೆ:—ದೇವತೆಗಳ ವೈದ್ಯರಾದ ಕರ್ಮದಿಂದ ನಿಂದಿತರಾದ ಈ ಅಶ್ವಿನೀ ದೇವತೆಗಳು ಸೋಮರಸಕ್ಕೆ ಅರ್ಹರಲ್ಲವೆಂದು ನಾನು ತಿಳಿಯುತ್ತೇನೆ.

೧೦. ಚ್ಯವನನು ಹೇಳುತ್ತಾನೆ :—ನನ್ನನ್ನು ದೇವತೆಗಳಂತೆ ಅಮರ್ತ್ಯನನ್ನಾಗಿ ಮಾಡಿದ ಮಹಾತ್ಮರೂ, ಸೌಂದರ್ಯ, ವರ್ಚಸ್ಸುಗಳುಳ್ಳವರೂ ಆದ ಇವರನ್ನು ಅವಮಾನ ಮಾಡಬೇಡ.

ಸಮತ್ವೇನಾನ್ಯದೇವಾನಾಂ ಕಥಂ ವೈ ನೇಕ್ಷತೇ ಭವಾನ್ ।
ಅಶ್ವಿನಾವಪಿ ದೇವೇಂದ್ರ ದೇವೌ ವಿದ್ಧಿ ಪರಂತಪ ॥ ೧೧ ॥

ಇಂದ್ರ ಉವಾಚ :—

ಚಿಕಿತ್ಸಕೌ ಕರ್ಮಕರೌ ಕಾಮರೂಪಸಮನ್ವಿತೌ ।
ಲೋಕೇ ಚರಂತೌ ಮರ್ತ್ಯಾನಾಂ ಕಥಂ ಸೋಮಮಿಹಾರ್ಹತಃ ॥ ೧೨ ॥

ಈಶ್ವರ ಉವಾಚ :—

ಏತದೇವ ಯದಾ ವಾಕ್ಯಮಾಮ್ರೇಡಯತಿ ವಾಸವಃ ।
ಅನಾದೃತ್ಯ ತತಃ ಶಕ್ರಂ ಗ್ರಹಂ ಜಗ್ರಾಹ ಭಾರ್ಗವಃ ॥ ೧೩ ॥
ಗ್ರಹೀಷ್ಯಂತಂ ತತಃ ಸೋಮಮಶ್ವಿನೋಃ ಸತ್ತಮಂ ತದಾ ।
ಸಮೀಕ್ಷ್ಯ ಬಲಭಿದ್ದೇವ ಇದಂ ವಚನಮಬ್ರವೀತ್ ॥ ೧೪ ॥
ಆಭ್ಯಾಮರ್ಥಾಯ ಸೋಮಂ ತ್ವಂ ಗ್ರಹೀಷ್ಯಸಿ ಯದಿ ಸ್ವಯಂ ।
ವಜ್ರಂ ತೇ ಪ್ರಹರಿಷ್ಯಾಮಿ ಘೋರರೂಪಮನುತ್ತಮಂ ॥ ೧೫ ॥
ಏವಮುಕ್ತಃ ಸ್ಮಯಮಿಂದ್ರಮಭಿವೀಕ್ಷ್ಯ ಸ ಭಾರ್ಗವಃ ।
ಜಗ್ರಾಹ ವಿಧಿವತ್ಸೋಮಮಶ್ವಿಭ್ಯಾಮುತ್ತಮಂ ಗ್ರಹಂ ॥ ೧೬ ॥

---

೧೧. ದೇವರಾಜ ! ನೀನು ಇವರನ್ನು ಇತರ ದೇವತೆಗಳಿಗೆ ಸಮಾನರನ್ನಾಗಿ ಏಕೆ ಭಾವಿಸುವುದಿಲ್ಲ? ಈ ಅಶ್ವಿನೀ ದೇವತೆಗಳನ್ನು ದೇವತೆಗಳನ್ನಾಗಿ ತಿಳಿ.

೧೨. ಇಂದ್ರನು ಹೇಳುತ್ತಾನೆ :—ವೈದ್ಯರೂ, ಕರ್ಮಕರರೂ, ಸ್ವೇಚ್ಛಾ ರೂಪವುಳ್ಳವರೂ, ಮನುಷ್ಯ ಲೋಕದಲ್ಲಿ ಸಂಚರಿಸುವವರೂ ಆದ ಇವರು ಹೇಗೆ ಸೋಮಪಾನಕ್ಕೆ ಅರ್ಹರಾಗುವರು ?

೧೩. ಈಶ್ವರನು ಹೇಳುತ್ತಾನೆ :—ದೇವೇಂದ್ರನು ಇದೇ ಮಾತನ್ನು ತಿರುಗಿ ತಿರುಗಿ ಹೇಳುತ್ತಿರಲು ಚ್ಯವನನು ಅವನನ್ನಾದರಿಸದೆ ಅಶ್ವಿನೀ ದೇವತೆಗಳಿಗೆ ಸೋಮವನ್ನಿತ್ತನು

೧೪. ಆಗ ದೇವೇಂದ್ರನು ಅಶ್ವಿನೀ ದೇವತೆಗಳಿಗೆ ಸೋಮವನ್ನು ಕೊಡುತ್ತಿರುವ ಚ್ಯವನನ್ನು ಕಂಡು ಇಂತೆಂದನು.

೧೫. "ನೀನು ನನ್ನ ಮಾತನ್ನು ಲೆಕ್ಕಿಸದೆ ಸ್ವಂತವಾಗಿ ಇವರಿಗೆ ಸೋಮವನ್ನಿತ್ತರೆ ನಿನ್ನನ್ನು ವಜ್ರಾಯುಧದಿಂದ ಹೊಡೆಯುವೆನು".

೧೬. ಚ್ಯವನನು ಹೀಗೆ ಹೇಳಿದ ಇಂದ್ರನನ್ನು ಕಂಡು ಅಶ್ವಿನೀ ದೇವತೆಗಳಿಗೆ ವಿಧಿಯಂತೆ ಉತ್ತಮವಾದ ಸೋಮವನ್ನಿತ್ತನು.

ತತೋಽಸ್ಮೈ ಪ್ರಹರತ್ಕ್ರೋಧಾದ್ವಜ್ರಮಿಂದ್ರಃ ಶಚೀಪತಿಃ ।
ತಸ್ಯ ಪ್ರಹರತೋ ಬಾಹುಂ ಸ್ತಂಭಯಾಮಾಸ ಭಾರ್ಗವಃ ॥ ೧೭ ॥
ಸ್ತಂಭಯಿತ್ವಾಥ ಚ್ಯವನೋ ಜುಹುವೇ ಮಂತ್ರತೋಽನಲಂ ।
ಕೃತ್ಯಾರ್ಥೀ ಸುಮಹಾತೇಜಾ ದೇವಂ ಹಿಂಸಿತುಮುದ್ಯತಃ ॥ ೧೮ ॥
ತತ್ರ ಕೃತ್ಯೋದ್ಭವೋ ಯಜ್ಞೇ ಮುನೇಸ್ತಸ್ಯ ತಪೋಬಲಾತ್ ।
ಮದೋನಾಮ ಮಹಾವೀರ್ಯೋ ಮಹಾಕಾಯೋ ಮಹಾಸುರಃ ॥ ೧೯ ॥
ಶರೀರಂ ಯಸ್ಯ ನಿರ್ದೇಷ್ಟುಮಶಕ್ಯಂ ಚ ಸುರಾಸುರೈಃ ।
ತಸ್ಯ ಪ್ರಮಾಣಂ ವಪುಷಾ ನ ತುಲ್ಯಮಿಹ ವಿದ್ಯತೇ ॥ ೨೦ ॥
ತಸ್ಯಾಸ್ಯಂ ಚಾಭವೇದ್ಘೋರಂ ದಂಷ್ಟ್ರಾದುರ್ದರ್ಶನಂ ಮಹತ್ ।
ಹನುರೇಕಃ ಸ್ಥಿತಸ್ತಸ್ಯ ಭೂಮಾವೇಕೋ ದಿವಂ ಗತಃ ॥ ೨೧ ॥
ಚತಸ್ರಶ್ಚಾಪಿ ತಾ ದಂಷ್ಟ್ರಾ ಯೋಜನಾನಾಂ ಶತಂಶತಂ ।
ಇತರೇ ತ್ವಸ್ಯ ದಶನಾ ಬಭೂವುರ್ದಶಯೋಜನಾಃ ॥ ೨೨ ॥
ಪ್ರಾಕಾರಸದೃಶಾಕಾರಾ ಮೂಲಾಗ್ರಸಮದರ್ಶನಾಃ ।
ನಾಮ್ನಾ ಪರ್ವತಸಂಕಾಶ್ಚಾಯುತಾತಯೋಜನಾಃ ॥ ೨೩ ॥

---

೧೭. ತರುವಾಯ ಶಕ್ರನು ಕೋಪದಿಂದ ವಜ್ರದಿಂದ ಚ್ಯವನನನ್ನು ಹೊಡೆಯಲುದ್ಯುಕ್ತನಾಗಲು ಅವನು ಆ ಇಂದ್ರನ ತೋಳನ್ನು ಸ್ತಂಭನಗೊಳಿಸಿದನು.

೧೮. ಚ್ಯವನನು ಹೀಗೆ ಅವನ ತೋಳನ್ನು ತಡೆದು ಅಭಿಚಾರಿಕ ದೇವತೆಯಿಂದ ಆ ಇಂದ್ರನನ್ನು ಹಿಂಸಿಸಲೋಸುಗ ಮಂತ್ರದಿಂದ ಅಗ್ನಿಯಲ್ಲಿ ಹೋಮಿಸಿದನು.

೧೯. ಆಗ ಮುನಿಯ ತಪಸ್ಸಿನ ಬಲದಿಂದ ಯಜ್ಞದಲ್ಲಿ ಅತಿಪರಾಕ್ರಮಶಾಲಿಯೂ, ದೊಡ್ಡ ಶರೀರವುಳ್ಳವನೂ, ಆದ ಮದನೆಂಬ ಅಸುರನು ಉದ್ಭವಿಸಿದನು.

೨೦. ಸುರಾಸುರರಿಂದ ಅವನ ಶರೀರವನ್ನು ನಿರ್ದೇಶಿಸಲು ಸಾಧ್ಯವಾಗಲಿಲ್ಲ. ಅವನ ದೇಹಕ್ಕೆ ಸಮಾನವಾದ ವಸ್ತುವು ಪ್ರಪಂಚದಲ್ಲಿರಲಿಲ್ಲ.

೨೧. ಅವನ ಮುಖವು ಭಯಂಕರವೂ, ಹಲ್ಲುಗಳಿಂದ ನೋಡಲಶಕ್ಯವೂ ಆಗಿದ್ದಿತು. ಅವನ ಒಂದು ಕಪೋಲವು ಭೂಮಿಯಲ್ಲಿಯೂ, ಮತ್ತೊಂದು ಸ್ವರ್ಗದಲ್ಲಿಯೂ ಇದ್ದಿತು.

೨೨–೨೩. ಅವನ ನಾಲ್ಕು ಹಲ್ಲುಗಳು ನೂರು ನೂರು ಯೋಜನ ವಿಸ್ತೀರ್ಣವಾಗಿದ್ದುವು. ಅವನ ಇತರ ಹಲ್ಲುಗಳು ಹತ್ತು ಯೋಜನ ಪರಿಮಾಣವುಳ್ಳವೂ, ಪ್ರಾಕಾರಕ್ಕೆ ಸಮಾನವಾದ ಆಕಾರವುಳ್ಳವೂ, ಬುಡದಲ್ಲಿಯೂ ತುದಿಯಲ್ಲಿಯೂ ಒಂದೇ ರೀತಿಯಾದುವೂ, ಪರ್ವತಪಂಕ್ತಿರುವುವೂ, ಸಾವಿರ ಯೋಜನ ವಿಸ್ತೀರ್ಣವಾದುವೂ ಆಗಿದ್ದುವು.

ನೇತ್ರೇ ರವಿಶಶಿಪ್ರಖ್ಯೇ ಭ್ರುವಾವಂತಕಸನ್ನಿಭೇ ।
ಲೇಲಿಹಜ್ಜಿಹ್ವಯಾ ವಕ್ತ್ರಂ ವಿದ್ಯುಚ್ಚಲಿತಲೋಲಯಾ ।
ವ್ಯಾತ್ತಾನನೋ ಘೋರದೃಷ್ಟಿರ್ಗ್ರಸನ್ನಿವ ಜಗದ್ಬಲಾತ್ ॥ ೨೪ ॥
ಸ ಭಕ್ಷಯಿಷ್ಯನ್ಸಂಕ್ರುದ್ಧಃ ಶತಕ್ರತುಮುಪಾದ್ರವತ್ ।
ಮಹತಾ ಘೋರನಾದೇನ ಲೋಕಾಞ್ಛಬ್ದೇನ ಛಾದಯನ್ ॥ ೨೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನಕೃತಮದಾಸುರಸೃಷ್ಟಿವರ್ಣನಂನಾಮ
॥ದ್ವ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ॥

೨೪–೨೫. ಕಣ್ಣುಗಳು ಚಂದ್ರ ಸೂರ್ಯರಿಗೆ ಸಮಾನವಾದುವೂ, ಹುಬ್ಬುಗಳು ಯಮನಂತಿರುವುವೂ ಆಗಿದ್ದುವು. ಅವನು ಮಿಂಚಿನಂತೆ ಚಂಚಲವಾದ ನಾಲಿಗೆಯಿಂದ ಮುಖವನ್ನು ನೆಕ್ಕುತ್ತ ಬಾಯ್ದೆರೆದು ಭಯಂಕರ ನೋಟವುಳ್ಳವನಾಗಿ ಜಗತ್ತನ್ನು ನುಂಗುವನಂತೆ ಕೋಪದಿಂದ ಭಯಂಕರ ಧ್ವನಿಯಿಂದ ಲೋಕಗಳನ್ನು ತುಂಬಿಸುತ್ತ ದೇವೇಂದ್ರನನ್ನು ಅಟ್ಟಿಸಿಕೊಂಡು ಹೋದನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚ್ಯವನಕೃತಮದಾಸುರಸೃಷ್ಟಿವರ್ಣನವೆಂಬ
ಇನ್ನೂರಎಂಬತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ

ಚ್ಯವನೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಂ ದೃಷ್ಟ್ವಾ ಘೋರವದನಂ ಮದಂ ದೇವಃ ಶತಕ್ರತುಃ ।
ಆಯಾಂತಂ ಭಕ್ಷಯಿಷ್ಯಂತಂ ವ್ಯಾತ್ತಾನನಮಿವಾಂತಕಂ ॥ ೧ ॥
ಭಯಾತ್ಸ್ತಂಭಿತರೂಪೇಣ ಲೇಲಿಹಾನಂ ಮುಹುರ್ಮುಹುಃ ।
ಪ್ರಣತೋಽಬ್ರವೀನ್ಮಹಾದೇವಿ ಚ್ಯವನಂ ಭಯಪೀಡಿತಃ ॥ ೨ ॥
ಸೋಮಾರ್ಹಾವಶ್ವಿನಾವೇತಾವದ್ಯಪ್ರಭೃತಿ ಭಾರ್ಗವ ।
ಭವಿಷ್ಯತಃ ಸರ್ವಮೇತದ್ವಚಃ ಸತ್ಯಂ ಬ್ರವೀಮಿ ತೇ ॥ ೩ ॥
ಮಾ ತೇ ಮಿಥ್ಯಾ ಸಮಾರಂಭೋ ಭವತ್ವಥ ತಪೋಧನ ।
ಜಾನಾಮಿ ಚಾಹಂ ವಿಪ್ರರ್ಷೇ ನ ಮಿಥ್ಯಾ ತ್ವಂ ಕರಿಷ್ಯಸಿ ॥ ೪ ॥
ಸೋಮಾರ್ಹಾವಶ್ವಿನಾವೇತೌ ಯಥೈವಾದ್ಯ ತ್ವಯಾ ಕೃತೌ ।
ಭೂಯ ಏವ ತು ತೇ ವೀರ್ಯಂ ಪ್ರಕಾಶೇದಿತಿ ಭಾರ್ಗವ ॥ ೫ ॥

ಕನ್ನಡದ ಅನುವಾದ

ಚ್ಯವನೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :— ಮಹಾದೇವಿ ! ದೇವೇಂದ್ರನು ತನ್ನನ್ನು ತಿನ್ನಲು ಬರುತ್ತಿರುವ ಭಯಂಕರಮುಖವುಳ್ಳವನೂ, ಯಮನಂತೆ ತೆರೆದ ಬಾಯಿಯುಳ್ಳವನೂ ನುಂಗಲುದ್ಯುಕ್ತನೂ ಆದ ಆಮದಾಸುರನನ್ನು ಕಂಡು ಭಯದಿಂದ ಚ್ಯವನನ್ನು ವಂದಿಸಿ ಇಂತೆಂದನು.

೩. "ಭಾರ್ಗವ! ಇದು ಮೊದಲ್ಗೊಂಡು ಅಶ್ವಿನೀ ದೇವತೆಗಳು ಸೋಮಪಾನಕ್ಕೆ ಅರ್ಹರಾಗಿರುವರು. ಸತ್ಯವಾಗಿ ಹೇಳುತ್ತೇನೆ.

೪. ಮುನಿಯೇ ನಿನ್ನ ಉದ್ಯೋಗವು ಸುಳ್ಳಾಗದಿರಲಿ. ನಿನ್ನ ಕಾರ್ಯವು ಸುಳ್ಳಾಗುವುದಿಲ್ಲವೆಂದರಿತಿರುವೆನು.

೫. ನೀನು ಈ ಅಶ್ವಿನೀದೇವತೆಗಳನ್ನು ಸೋಮಕ್ಕೆ ಅರ್ಹರಾಗುವಂತೆ ಮಾಡಿದಂತೆಯೇ ನಿನ್ನ ಸಾಮರ್ಥ್ಯವು ಮರಳಿ ಪ್ರಕಾಶಿಸಲಿ.

ಸುಕನ್ಯಾಯಾಃ ಪಿತುಶ್ಚಾಸ್ಯ ಲೋಕೇ ಕೀರ್ತಿರ್ಭವೇದಿತಿ ।
ಅತೋ ಮಯೈತದ್ವಿಹಿತಂ ತದ್ವೀರ್ಯಸ್ಯ ಪ್ರಕಾಶನಂ ।
ತಸ್ಮಾತ್ಪ್ರಸಾದಂ ಕುರು ಮೇ ಭವತ್ವೇತದ್ಯಥೇಚ್ಛಸಿ ॥ ೬ ॥
ಏವಮುಕ್ತಸ್ಯ ಶಕ್ರೇಣ ಚ್ಯವನಸ್ಯ ಮಹಾತ್ಮನಃ ।
ಮನ್ಯುರಪ್ಯಗಪಾರಮುಚ್ಛೀಘ್ರಂ ಮಾನಶ್ಚೈವ ಸುರೇಶಿತುಃ ॥ ೭ ॥
ಮದಂ ಚ ವ್ಯಭಜದ್ದೇವಿ ಪಾನೇ ಸ್ತ್ರೀಷು ಚ ವೀರ್ಯವಾನ್ ।
ಅಕ್ಷೇಷು ಮೃಗಯಾಯಾಂ ಚ ಪೂರ್ವಂ ಸೃಷ್ಟಂ ಪುನಃಪುನಃ ।
ತಥಾ ಮದಂ ವಿನಿಕ್ಷಿಪ್ಯ ಶಕ್ರಂ ಸಂತರ್ಪ್ಯ ಚೇಂದುನಾ ॥ ೮ ॥
ಅಶ್ವಿಭ್ಯಾಂ ಸಹಿತಾನ್ಸರ್ವಾನ್ಯಾತಯಿತ್ವಾ ಚ ತಂ ನೃಪಂ ।
ವಿಖ್ಯಾಪ್ಯ ವೀರ್ಯಂ ಸರ್ವೇಷು ಲೋಕೇಷು ವರವರ್ಣಿನಿ ॥ ೯ ॥
ಸುಕನ್ಯಯಾ ಮಹಾರಣ್ಯೇ ಕ್ಷೇತ್ರೇಽಸ್ಮಿನ್ವಿಜಹಾರ ಸಃ ।
ತಸ್ಯೈತದ್ದೇವಿ ಸಂಯುಕ್ತಂ ಚ್ಯವನೇಶ್ವರನಾಮಭೃತ್ ॥ ೧೦ ॥
ಲಿಂಗಂ ಮಹಾಪಾಪಹರಂ ಚ್ಯವನೇನ ಪ್ರತಿಷ್ಠಿತಂ ।
ಪೂಜಯೇತ್ತಂ ವಿಧಾನೇನ ಸೋಽಶ್ವಮೇಧಫಲಂ ಲಭೇತ್ ॥ ೧೧ ॥
ತಸ್ಮಾಚ್ಚಂದ್ರಮಸಸ್ತೀರ್ಥಮೃಷಯಃ ಪರ್ಯುಪಾಸತೇ ।
ವೈಖಾನಸಾಖ್ಯಾ ಋಷಯೋ ವಾಲಖಿಲ್ಯಾಸ್ತಥೈವ ಚ ॥ ೧೨ ॥

---

೬. ಸುಕನ್ಯೆಯ ತಂದೆಯಾದ ಶರ್ಯಾತಿಯ ಕೀರ್ತಿಯು ಲೋಕದಲ್ಲಿ ಹರಡಲೆಂದು ನಿನ್ನ ಸಾಮರ್ಥ್ಯವನ್ನು ಪ್ರಕಾಶಗೊಳಿಸಿರುವೆನು. ಆದ್ದರಿಂದ ನನ್ನಲ್ಲಿ ಪ್ರಸನ್ನನಾಗು. ನಿನ್ನ ಇಷ್ಟದಂತಾಗಲಿ.

೭. ದೇವರಾಜನು ಹೀಗೆನ್ನಲು ಚ್ಯವನನ ಕೋಪವೂ, ಸುರೇಂದ್ರನ ಮಾನವೂ ಶೀಘ್ರವಾಗಿ ಶಾಂತವಾದುವು.

೮–೧೧. ಬಳಿಕ ಸಮರ್ಥನಾದ ಚ್ಯವನನು ತಾನು ಸೃಷ್ಟಿಸಿದ ಮದಾಸುರನನ್ನು ಪಾನ, ಸ್ತ್ರೀ, ದಾಳ, ಬೇಟೆ ಇವುಗಳಲ್ಲಿ ವಿಭಾಗಿಸಿಟ್ಟು ಸೋಮದಿಂದ ಇಂದ್ರನನ್ನು ಅಶ್ವಿನೀ ದೇವತೆಗಳೊಡನೆ ಇತರ ದೇವತೆಗಳನ್ನೂ ಸಂತೋಷಗೊಳಿಸಿ ಆ ಶರ್ಯಾತಿಯಿಂದ ಯಾಗಮಾಡಿಸಿ ಸಕಲಲೋಕಗಳಲ್ಲಿ ಸಾಮರ್ಥ್ಯವನ್ನು ಪ್ರಖ್ಯಾತಿಗೊಳಿಸಿ ಸುಕನ್ಯೆಯೊಡನೆ ಈ ಕ್ಷೇತ್ರದಲ್ಲಿ ವಿಹರಿಸಿದನು. ದೇವಿ! ಆ ಚ್ಯವನನು ಪ್ರತಿಷ್ಠೆ ಮಾಡಿದ ಚ್ಯವನೇಶ್ವರನೆಂಬ ಪಾಪವನ್ನು ಪರಿಹರಿಸುವ ಆ ಶಿವಲಿಂಗವನ್ನು ವಿಧಿಯಿಂದ ಪೂಜಿಸಿದವನು ಅಶ್ವಮೇಧಯಾಗದ ಫಲವನ್ನು ಪಡೆಯುವನು.

೧೨. ಆದ್ದರಿಂದ ಈ ಇಂದುತೀರ್ಥವನ್ನು ವೈಖಾನಸರೆಂಬ ಮುನಿಗಳೂ, ವಾಲಖಿಲ್ಯರೂ ಸೇವಿಸುವರು.

ಅತ್ರಾಶ್ವಿನೇ ಮಾಸಿ ನರಃ ಪೌರ್ಣಮಾಸ್ಯಾಂ ವಿಶೇಷತಃ ।
ಶ್ರಾದ್ಧಂ ಕುರ್ಯಾದ್ವಿಧಾನೇನ ಬ್ರಾಹ್ಮಣಾನ್ಭೋಜಯೇತ್ಪೃಥಕ್ ।
ಕೋಟಿತೀರ್ಥಫಲಂ ತಸ್ಯ ಭವೇನ್ನೈವಾತ್ರ ಸಂಶಯಃ ॥ ೧೩ ॥
ಯ ಇಮಾಂ ಶೃಣುಯಾದ್ದೇವಿ ಕಥಾಂ ಪಾತಕನಾಶಿನೀಂ ।
ಸಮಸ್ತಜನ್ಮಸಂಭೂತಾತ್ಪಾಪಾನ್ಮುಕ್ತೋ ಭವೇನ್ನರಃ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಂಯಾ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರ್ಯಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧೩. ಇಲ್ಲಿ ಆಶ್ವಿನ ಶುಕ್ಲ ಹುಣ್ಣಿಮೆ ದಿನ ವಿಧಿಯಿಂದ ಶ್ರಾದ್ಧಗೈದು ಬ್ರಾಹ್ಮಣರಿಗೆ ಭೋಜನಮಾಡಿಸಿದರೆ ಅವನಿಗೆ ಕೋಟಿತೀರ್ಥಫಲವು ನಿಶ್ಚಯವಾಗಿಯೂ ಲಭಿಸುವುದು.

೧೪. ಪಾಪವನ್ನು ನೀಗಿಸುವ ಈ ಕಥೆಯನ್ನು ಕೇಳಿದವನು ಸಕಲ ಜನ್ಮಗಳಲ್ಲಿ ಮಾಡಿದ ಪಾಪದಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚ್ಯವನೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಚತುರಶೀತ್ಯುತ್ತರದ್ವಿಶತತಮೋಽಧ್ಯಾಯಃ

ಸುಕನ್ಯಾಸರೋಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸುಕನ್ಯಾಸರ ಉತ್ತಮಂ ।
ಯತ್ರಾಶ್ವಿನೌ ನಿಮಗ್ನೌ ತೌ ಚ್ಯವನೇನ ಸಹಾಂಬಿಕೇ ।
ಸಮಾನರೂಪೋ ಹ್ಯಭವಚ್ಚ್ಯವನೋ ಯತ್ರ ಸೋಽಶ್ವಿನೌ ॥ ೧ ॥
ಯತ್ರ ಪ್ರಾಪ್ತವತೀ ಕಾಮಂ ಸುಕನ್ಯಾ ವರವರ್ಣಿನೀ ।
ಸರಃಸ್ನಾನಪ್ರಭಾವೇನ ತೇನ ಕನ್ಯಾಸರಃ ಸ್ಮೃತಂ ।
ತತ್ರ ಸ್ನಾತಾ ಶುಭಾ ನಾರೀ ತೃತೀಯಾಯಾಂ ವಿಶೇಷತಃ ॥ ೨ ॥
ಸಪ್ತಜನ್ಮಸಹಸ್ರಾಣಿ ಗೃಹಭಂಗಂ ನ ಚಾಪ್ನುಯಾತ್ ।
ದರಿದ್ರೋ ವಿಕಲೋ ದೀನೋ ನಾಂಧಸ್ತಸ್ಯಾ ಭವೇತ್ಪತಿಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸುಕನ್ಯಾಸರೋಮಾಹಾತ್ಮ್ಯವರ್ಣನಂ ನಾಮ
॥ ಚತುರಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಅಶ್ವಿನೀದೇವತೆಗಳು ಚ್ಯವನನೊಡನೆ ಮಿಂದಿರುವುದೂ ಚ್ಯವನಮುನಿಗೆ ಅಶ್ವಿನೀದೇವತೆಗಳಿಗೆ ಸಮಾನವಾದ ರೂಪವನ್ನಿತ್ತುದೂ ಆದ ಸುಕನ್ಯಾಸರೋವರದೆಡೆಗೆ ಹೋಗಬೇಕು.

೨-೩. ಇಲ್ಲಿ ಸುಕನ್ಯೆಯು ಸ್ನಾನಮಾಡುವುದರಿಂದ ಇಷ್ಟಾರ್ಥವನ್ನು ಪಡೆದಿರುವುದರಿಂದ ಇದು ಸುಕನ್ಯಾಸರಸ್ಸೆಂದು ವಿಖ್ಯಾತವಾಯಿತು. ಇಲ್ಲಿ ತದಿಗೆದಿನ ಮಿಂದ ನಾರಿಯು ಏಳು ಸಾವಿರ ಜನ್ಮಗಳಲ್ಲಿ ಗೃಹಭಂಗವನ್ನು ಹೊಂದುವುದಿಲ್ಲ. ಅವಳ ಪತಿಯು ಬಡವನೂ ಅಂಗವಿಕಲನೂ, ದೀನನೂ, ಕುರುಡನೂ ಆಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸುಕನ್ಯಾಸರೋಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ।

ಪಂಚಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಅಗಸ್ತ್ಯಾಶ್ರಮಗಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪುನರ್ನ್ಯಂಕುಮತೀಂ ನದೀಂ ।
ತತ್ರ ಕೃತ್ವಾ ಗಯಾಶ್ರಾದ್ಧಂ ಗೋಷ್ಪದೇ ತೀರ್ಥ ಉತ್ತಮೇ ॥ ೧ ॥
ತತಃ ಪಶ್ಯೇದ್ವರಾಹಂ ತು ತಸ್ಮಾದ್ಧರಿಗೃಹಂ ವ್ರಜೇತ್ ।
ತತ್ರ ಮಾತೄಸ್ತು ಸಂಪೂಜ್ಯ ಸ್ನಾತ್ವಾ ಸಾಗರಸಂಗಮೇ ॥ ೨ ॥
ನ್ಯಂಕುಮತ್ಯಾರ್ಣವೋಪೇತೇ ತತಃ ಪೂರ್ವಮನುವ್ರಜೇತ್ ।
ಅಗಸ್ತೇರಾಶ್ರಮಂ ದಿವ್ಯಂ ಕ್ಷುಧಾಹರಮಿತಿ ಸ್ಮೃತಂ ॥ ೩ ॥
ಯತ್ರೇಲ್ವಲಂ ಚ ವಾತಾಪಿಂ ಸಂಹೃತ್ಯ ಭಗವಾನ್ಮುನಿಃ ।
ಮುಕ್ತ್ವೋಪದ್ರವೇ ಬ್ರಾಹ್ಮಣಾಂಶ್ಚ ತೇಭ್ಯಃ ಸ್ಥಾನಂ ತತೋ ದದೌ ॥ ೪ ॥

ಕನ್ನಡದ ಅನುವಾದ

ಅಗಸ್ತ್ಯಾಶ್ರಮಗಂಗೇಶ್ವರಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ನ್ಯಂಕುಮತೀ ನದಿಗೆ ಹೋಗಬೇಕು. ಅಲ್ಲಿರುವ ಉತ್ತಮವಾದ ಗೋಷ್ಪದ ತೀರ್ಥದಲ್ಲಿ ಗಯಾಶ್ರಾದ್ಧವನ್ನು ಮಾಡಿ ವರಾಹಮೂರ್ತಿಯ ದರ್ಶನಗೈದು ಬಳಿಕ ಹರಿಮಂದಿರಕ್ಕೆ ಹೋಗಿ ಅಲ್ಲಿ ಮಾತೃದೇವತೆಗಳನ್ನು ಪೂಜಿಸಿ ನ್ಯಂಕುಮತೀಸಮುದ್ರ ಸಂಗಮದಲ್ಲಿ ಮಿಂದು ಅದಕ್ಕಿಂತ ಪೂರ್ವದಲ್ಲಿರುವ ಕ್ಷುಧಾಹರವೆಂಬ ಅಗಸ್ತ್ಯಾಶ್ರಮಕ್ಕೆ ಹೋಗಬೇಕು.

೪. ಅಲ್ಲಿ ಅಗಸ್ತ್ಯಮಹರ್ಷಿಯು ವಾತಾಪಿ ಮತ್ತು ಇಲ್ವಲರನ್ನು ಸಂಹರಿಸಿ ಬ್ರಾಹ್ಮಣರ ಆಪತ್ತುಗಳನ್ನು ಪರಿಹರಿಸಿ ಅವರಿಗೆ ಆ ಸ್ಥಾನವನ್ನು ದಾನಮಾಡಿರುವನು.

ಅಗಸ್ತ್ಯಾಶ್ರಮಮೇತದ್ಧಿ ಅಗಸ್ತಿಪ್ರಿಯಮುತ್ತಮಂ ।
ನ್ಯಂಕುಮತ್ಯಾಸ್ತಟೇ ರಮ್ಯೇ ಸರ್ವಪಾತಕನಾಶನೇ ॥ ೫ ॥

ದೇವ್ಯುವಾಚ :—

ಅಗಸ್ತಿನೇಹ ವಾತಾಪಿಃ ಕಿಮರ್ಥಮುಪಶಾಮಿತಃ ।
ಅತ್ರ ವೈ ಕಿಂ ಪ್ರಭಾವಶ್ಚ ಸ ದೈತ್ಯೋ ಬ್ರಾಹ್ಮಣಾಂತಕಃ ।
ಕಿಮರ್ಥಂ ಚೋದ್ಗತೋ ಮನ್ಯುರಗಸ್ತೇಸ್ತು ಮಹಾತ್ಮನಃ ॥ ೬ ॥

ಈಶ್ವರ ಉವಾಚ :—

ಇಲ್ವಲೋ ನಾಮ ದೈತ್ಯೇಂದ್ರ ಆಸೀದ್ದೈ ವರವರ್ಣಿನಿ ।
ಮಣಿಮತ್ಯಾಂ ಪುರಾ ಪುರ್ಯಾಂ ವಾತಾಪಿಸ್ತಸ್ಯ ಚಾನುಜಃ ॥ ೭ ॥
ಸ ಬ್ರಾಹ್ಮಣಂ ತಪೋಯುಕ್ತಮುವಾಚ ದಿತಿನಂದನಃ ।
ಪುತ್ರಂ ಮೇ ಭಗವನ್ನೇಕಮಿಂದ್ರತುಲ್ಯಂ ಪ್ರಯಚ್ಛತು ॥ ೮ ॥
ತಸ್ಮಿನ್ಸ ಬ್ರಾಹ್ಮಣೋ ನೈಚ್ಛತ್ಪುತ್ರಂ ದಾತುಂ ತಥಾವಿಧಂ ।
ಚುಕ್ರೋಧ ದಿತಿಜಸ್ತಸ್ಯ ಬ್ರಾಹ್ಮಣಸ್ಯ ತತೋ ಭೃಶಂ ॥ ೯ ॥
ಪ್ರಭಾಸಕ್ಷೇತ್ರಮಾಸಾದ್ಯ ಸ ದೈತ್ಯಃ ಪಾಪಬುದ್ಧಿಮಾನ್ ।
ಮೇಷರೂಪೀ ಚ ವಾತಾಪಿಃ ಕಾಮರೂಪೋಽಭವತ್ಕ್ಷಣಾತ್ ॥ ೧೦ ॥

---

೫. ಸಕಲ ಪಾತಕಗಳನ್ನು ನಿವಾರಿಸುವ ಮನೋಹರವಾದ ನ್ಯಂಕುಮತಿಯ ದಡದಲ್ಲಿ ಅಗಸ್ತ್ಯಪ್ರಿಯವಾದ ಅಗಸ್ತ್ಯಾಶ್ರಮವಿರುವುದು.

೬. ದೇವಿಯು ಹೇಳುತ್ತಾಳೆ :—ಅಗಸ್ತ್ಯನು ಇಲ್ಲಿ ವಾತಾಪಿಯನ್ನು ಏಕೆ ಕೊಂದನು? ಬ್ರಾಹ್ಮಣಾಂತಕನಾದ ಆ ದೈತ್ಯನು ಎಂತಹ ಪ್ರತಾಪವುಳ್ಳವನು? ಅಗಸ್ತ್ಯನಿಗೆ ಅವನ ಮೇಲೆ ಏಕೆ ಕೋಪವುಂಟಾಯಿತು?

೭. ಈಶ್ವರನು ಹೇಳುತ್ತಾನೆ :—ಹಿಂದೆ ಮಣಿಮತಿಯೆಂಬ ಪಟ್ಟಣದಲ್ಲಿ ಇಲ್ವಲನೂ, ಅವನ ತಮ್ಮನಾದ ವಾತಾಪಿಯೂ ಇದ್ದರು.

೮. ಇಲ್ವಲ ದೈತ್ಯನು ತಪಸ್ವಿಯಾದ ಒಬ್ಬ ಬ್ರಾಹ್ಮಣನನ್ನು ಕುರಿತು "ಪೂಜ್ಯನೆ! ನೀನು ನನಗೆ ಇಂದ್ರನಿಗೆ ಸಮಾನನಾದ ಒಬ್ಬ ಮಗನನ್ನು ಅನುಗ್ರಹಿಸು" ಎಂದನು.

೯. ಆ ಬ್ರಾಹ್ಮಣನು ಅವನಿಗೆ ಅಂತಹ ಮಗನನ್ನು ಕೊಡಲು ಒಪ್ಪದಿರಲು ಆ ಇಲ್ವಲನು ಅವನಲ್ಲಿ ಅತ್ಯಂತ ಕುಪಿತನಾದನು.

೧೦–೧೧. ಆ ದೈತ್ಯನು ಪ್ರಭಾಸಕ್ಷೇತ್ರಕ್ಕೆ ಬಂದು ಸ್ವೇಚ್ಛೆಯಿಂದ ಕುರಿಯಾದ ವಾತಾಪಿಯನ್ನು ಕತ್ತರಿಸಿ ಅಡಿಗೆ ಮಾಡಿಸಿ ಬ್ರಾಹ್ಮಣರಿಗೆ ಭೋಜನಮಾಡಿಸಿ

ಸ್ಸಂಸ್ಕೃತ್ಯ ಭೋಜಯೇತ್ತತ್ರ ವಿಪ್ರಾನ್ಸ ಚ ಜಿಘಾಂಸತಿ ।
ಸಮಾಹ್ವಯತಿ ತಂ ವಾಚಾ ಗತಂ ಚೈವ ತತಃ ಸ್ವಯಂ ॥ ೧೧ ॥
ಸ ಪುನರ್ದೇಹಮಾಸ್ಥಾಯ ಜೀವನ್ಸ್ಮ ಪ್ರತ್ಯದೃಶ್ಯತ ।
ತತೋ ವಾತಾಪಿರಪಿ ತಂ ಛಾಗಂ ಕೃತ್ವಾ ಸುಸಂಸ್ಕೃತಂ ।
ಬ್ರಾಹ್ಮಣಂ ಭೋಜಯಿತ್ವಾ ತು ಪುನರೇವ ಸಮಾಹ್ವಯತ್ ॥ ೧೨ ॥
ಸ ತಸ್ಯ ಪಾರ್ಶ್ವಂ ನಿರ್ಭಿದ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ವಾತಾಪಿಃ ಪ್ರಹಸಂಸ್ತತ್ರ ನಿಶ್ಚಕ್ರಾಮ ದ್ವಿಜೋದರಾತ್ ॥ ೧೩ ॥
ಏವಂ ಸ ಬ್ರಾಹ್ಮಣಾನ್ದೇವಿ ಭೋಜಯಿತ್ವಾ ಪುನಃಪುನಃ ।
ವಿನಿರ್ಭಿದ್ಯೋದರಂ ತೇಷಾಮೇವಂ ಹಂತಿ ದ್ವಿಜಾನ್ಬಹೂನ್ ॥ ೧೪ ॥
ತತೋ ವೈ ಬ್ರಾಹ್ಮಣಾಃ ಸರ್ವೇ ಭಯಭೀತಾಃ ಪ್ರದುದ್ರುವುಃ ।
ಅಗಸ್ತೇರಾಶ್ರಮಂ ಜಗ್ಮುಃ ಕಥಯಾಮಾಸುರಗ್ರತಃ ॥ ೧೫ ॥
ಭಗವಞ್ಛೃಣು ನೋ ವಾಕ್ಯಮಸ್ಮಾಕಂ ತು ಭಯಾವಹಂ ।
ನಿಮಂತ್ರಿತಾಃ ಸ್ಮ ಸರ್ವೇ ವಾ ಇಲ್ವಲೇನ ವಯಂ ಪ್ರಭೋ ॥ ೧೬ ॥
ಅಸ್ಮಾಕಂ ಮೃತ್ಯುರೂಪಂ ತದ್ಭೋಜನಂ ನಾಸ್ತಿ ಸಂಶಯಃ ।
ತದಸ್ಮಾನ್ರಕ್ಷ ಭಗವನ್ವಿಷಣ್ಣಾನ್ಗತಚೇತಸಃ ॥ ೧೭ ॥

ಆ ಬ್ರಾಹ್ಮಣರನ್ನು ಕೊಲ್ಲಲೋಸುಗ ಮೃತನಾಗಿರುವ ವಾತಾಪಿಯನ್ನು ಕರೆಯುವನು.

೧೨. ಅವನು ಮರಳಿ ದೇಹವನ್ನು ಧರಿಸಿ ಬದುಕುವನು. ಮರಳಿ ಕುರಿಯಾದ ವಾತಾಪಿಯನ್ನು ಕತ್ತರಿಸಿ ಅಡಿಗೆ ಮಾಡಿಸಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ ತಿರುಗಿ ಕರೆಯುವನು.

೧೩. ಆ ವಾತಾಪಿಯು ಆ ಬ್ರಾಹ್ಮಣನ ಹೊಟ್ಟೆಯನ್ನು ಸೀಳಿ ನಗುತ್ತ ಹೊರಗೆ ಬರುವನು.

೧೪. ದೇವಿ! ಹೀಗೆ ಅವನು ಬ್ರಾಹ್ಮಣರನ್ನು ಭೋಜನಮಾಡಿಸಿ ಅವರ ಹೊಟ್ಟೆಯನ್ನು ಸೀಳಿಸಿ ಅನೇಕ ಮಂದಿ ದ್ವಿಜರನ್ನು ಕೊಲ್ಲುತ್ತಿದ್ದನು.

೧೫. ಅನಂತರ ಸಕಲ ಬ್ರಾಹ್ಮಣರೂ ಭಯಗೊಂಡು ಓಡಿಹೋಗಿ ಅಗಸ್ತ್ಯ ಮುನಿಯ ಆಶ್ರಮವನ್ನು ಸೇರಿ ಆವನ ಮುಂದೆ ಅದನ್ನು ಹೇಳಿದರು.

೧೬–೧೭. "ಪೂಜ್ಯನೆ! ಭಯವನ್ನುಂಟುಮಾಡುವ ನಮ್ಮ ಮಾತನ್ನು ಕೇಳು. ಇಲ್ವಲನು ನಮ್ಮನ್ನೆಲ್ಲ ನಿಮಂತ್ರಣಮಾಡಿರುವನು. ಅವನು ಮಾಡಿಸುವ ಭೋಜನವು ನಮಗೆ ಮೃತ್ಯುರೂಪವಾಗಿರುವುದು. ಸಂದೇಹವಿಲ್ಲ. ಆದ್ದರಿಂದ ದುಃಖಗೊಂಡ ನಮ್ಮನ್ನು ರಕ್ಷಿಸು"

ತತಃ ಪ್ರಭಾಸಮಾಸಾದ್ಯ ಯತ್ರ ತೌ ದೈತ್ಯಪುಂಗವೌ ।
ಬ್ರಹ್ಮಘ್ನೌ ಪಾಪನಿರತೌ ದದರ್ಶ ಸ ಮಹಾಮುನಿಃ ॥ ೧೮ ॥
ವಾತಾಪಿಂ ಸಂಸ್ಕೃತಂ ದೃಷ್ಟ್ವಾ ಮೇಷರೂಪಂ ಮಹಾಸುರಂ ।
ಉವಾಚ ದೇಹಿ ಮೇ ಭೋಜ್ಯಂ ಬುಭುಕ್ಷಾ ಮಮ ವರ್ತತೇ ॥ ೧೯ ॥
ಇತ್ಯುಕ್ತೇ ಸ್ವಾಗತಂ ತತ್ರ ಚಕ್ರಾತೇ ಮುನಯೇ ತದಾ ।
ಭಗವನ್ಭೋಜನಂ ತುಭ್ಯಂ ದಾಸ್ಯೇಽಹಂ ಬಹುವಿಸ್ತರಂ ।
ಕಿಯನ್ಮಾನಸ್ತವಾಹಾರಸ್ತಾವನ್ಮಾನಂ ಪಚಾಮ್ಯಹಂ ॥ ೨೦ ॥

ಅಗಸ್ತ್ಯ ಉವಾಚ :—

ಅನ್ನಂ ಪಚಸ್ವ ದೈತ್ಯೇಂದ್ರ ಕಿಂಚಿತ್ತೃಪ್ತಿರ್ಭವಿಷ್ಯತಿ ।
ಏವಮಸ್ತ್ವಿತಿ ದೈತ್ಯೇಂದ್ರಃ ಪಕ್ವಮಾಹ ಮಹಾಮುನೇ ॥ ೨೧ ॥
ಆಸ್ಯತಾಮಾಸನಮಿದಂ ಭುಜ್ಯತಾಂ ಸ್ವೇಚ್ಛಯಾ ಮುನೇ ।
ಇತ್ಯುಕ್ತೋಽಘೋರಮಂತ್ರಂ ಸ ಜಪನ್ಕಲ್ಪಾಂತಕಾರಕಂ ।
ಧುರ್ಯಾಸನಮಥಾಸಾದ್ಯ ನಿಷಸಾದ ಮಹಾಮುನಿಃ ॥ ೨೨ ॥
ತಂ ಪರ್ಯವೇಷದ್ದೈತ್ಯೇಂದ್ರ ಇಲ್ವಲಃ ಪ್ರಹಸನ್ನಿವ ।
ಶತಹಸ್ತಪ್ರಮಾಣೇನ ರಾಶಿಮನ್ನಸ್ಯ ಸೋಽಕರೋತ್ ॥ ೨೩ ॥

---

೧೮. ಬಳಿಕ ಆ ಅಗಸ್ತ್ಯಮುನಿಯು ಪ್ರಭಾಸಕ್ಷೇತ್ರವನ್ನು ಹೊಂದಿ ಬ್ರಹ್ಮಘ್ನರೂ, ಪಾಪಿಷ್ಠರೂ ಆದ ಆ ದೈತ್ಯರನ್ನು ಕಂಡನು.

೧೯—೨೦. ಆ ಅಗಸ್ತ್ಯನು ಕುರಿಯಾದ ವಾತಾಪಿಯನ್ನು ಅಡಿಗೆ ಮಾಡಿರುವುದನ್ನು ಕಂಡು ನನಗೆ ಭೋಜನವನ್ನು ನೀಡು. ನಾನು ಹಸಿವಿನಿಂದ ಪೀಡಿತನಾಗಿರುವೆನು, ಎನ್ನಲು ಇಲ್ವಲನು ಅವನಿಗೆ ಸ್ವಾಗವನ್ನು ನೀಡಿ ಪೂಜ್ಯನೇ ! ನಾನು ನಿನಗೆ ಬಹಳ ವಿಸ್ತಾರವಾದ ಭೋಜನವನ್ನು ನೀಡುವೆನು. ನಿನಗೆ ಎಷ್ಟು ಪರಿಮಾಣದ ಆಹಾರವು ಬೇಕೊ ; ಅಷ್ಟು ಪರಿಮಾಣದ ಆಹಾರವನ್ನು ಅಡಿಗೆ ಮಾಡುವೆನು.

೨೧—೨೨. ಅಗಸ್ತ್ಯನು ಹೇಳುತ್ತಾನೆ :—ದೈತ್ಯೇಂದ್ರ ! ಅನ್ನವನ್ನು ಮಾಡಿಸು. ಅದರಿಂದ ಸ್ವಲ್ಪ ತೃಪ್ತಿಯುಂಟಾಗುವುದು. ಇಲ್ವಲನು "ಅಡಿಗೆಯಾಗಿದೆ. ಈ ಆಸನದಲ್ಲಿ ಕುಳಿತುಕೊ. ಸ್ವೇಚ್ಛೆಯಾಗಿ ಊಟಮಾಡು" ಎಂದನು. ಅಗಸ್ತ್ಯನು ಕಲ್ಪಾಂತವನ್ನುಂಟುಮಾಡುವ ಅಘೋರಮಂತ್ರವನ್ನು ಜಪಿಸುತ್ತ ಅಗ್ರಾಸನವನ್ನು ಹೊಂದಿ ಕೂತುಕೊಂಡನು.

೨೩. ದೈತ್ಯಶ್ರೇಷ್ಠನಾದ ಇಲ್ವಲನು ನಗುತ್ತ ನೂರು ಗೇಣುದ್ದದ ಅನ್ನದ ರಾಶಿಯನ್ನು ಬಡಿಸಿದನು.

ತತೋ ಹೃಷ್ಟಮನಾಗಸ್ತ್ಯಃ ಪ್ರಾಗ್ರಸತ್ಕಬಲದ್ವಯಂ ।
ರೂಪಂ ಕೃತ್ವಾ ಮಹತ್ತದ್ವದ್ಯದ್ವತ್ಸಾಗರಶೋಷಣೇ ॥ ೨೪ ॥
ಸಮಸ್ತಮೇವ ತದ್ಭೋಜ್ಯಂ ವಾತಾಪಿಂ ಬುಭುಜೇ ತತಃ ।
ಭುಕ್ತವತ್ಯಸುರೋಽಽಹ್ವಾನಮಕರೋತ್ತಸ್ಯ ಇಲ್ವಲಃ ॥ ೨೫ ॥
ತತೋಽಸೌ ದತ್ತವಾನನ್ನಮಗಸ್ತ್ಯಸ್ಯ ಮಹಾತ್ಮನಃ ।
ಭಸ್ಮೀಚಕಾರ ಸರ್ವಂ ಸ ತದನ್ನಂ ಚ ಸದಾನವಂ ॥ ೨೬ ॥
ಇಲ್ವಲಂ ಕ್ರೋಧಮುಷ್ಟ್ಯಾ ತು ಭಸ್ಮೀಚಕ್ರೇ ಮಹಾಮುನಿಃ ।
ತತೋ ಹಾಹಾರವಂ ಕೃತ್ವಾ ಸರ್ವೇ ದೈತ್ಯಾ ನನಂಶಿರೇ ॥ ೨೭ ॥
ತತೋಽಗಸ್ತ್ಯೋ ಮಹಾತೇಜಾ ಆಹೂಯ ದ್ವಿಜಪುಂಗವಾನ್ ।
ತತ್ಸ್ಥಾನಂ ಚ ದದೌ ತೇಭ್ಯೋ ದೈತ್ಯಾನಾಂ ದ್ರವ್ಯಪೂರಿತಂ ॥ ೨೮ ॥
ಕ್ಷುಧಾ ಹೃತಾ ತತೋ ದೇವಿ ತತ್ರಾಗಸ್ತ್ಯಸ್ಯ ದಾನವೈಃ ।
ತೇನ ಕ್ಷುಧಾಹರನುಂನಾಮ ಸ್ಥಾನಮಾಸೀದ್ದ್ವಿಜನ್ಮನಾಂ ॥ ೨೯ ॥
ತಸ್ಯ ಪಶ್ಚಿಮಭಾಗೇ ತು ನಾತಿದೂರೇ ವ್ಯವಸ್ಥಿತಂ ।
ಗಂಗೇಶ್ವರಮಿತಿ ಖ್ಯಾತಂ ಗಂಗಯಾ ಯತ್ಪ್ರತಿಷ್ಠಿತಂ ॥ ೩೦ ॥

---

೨೪. ಅಗಸ್ತ್ಯನು ಸಂತೋಷಗೊಂಡು ಸಮುದ್ರವನ್ನು ಒಣಗಿಸುವುದಕ್ಕೆ ತಾಳಿದ ಘೋರಾಕೃತಿಯನ್ನು ಹೊಂದಿ ಆ ಅನ್ನವನ್ನು ಎರಡು ಗ್ರಾಸಮಾಡಿ ನುಂಗಿದನು.

೨೫. ಆ ಅನ್ನವನ್ನೂ, ವಾತಾಪಿಯನ್ನೂ ಅಗಸ್ತ್ಯನು ತಿನ್ನಲು ಇಲ್ವಲನು ವಾತಾಪಿಯನ್ನು ಕರೆದನು.

೨೬. ಬಳಿಕ ಇಲ್ವಲನು ಕೊಟ್ಟ ಅನ್ನವನ್ನೂ, ವಾತಾಪಿಯನ್ನೂ ಅಗಸ್ತ್ಯನು ಬೂದಿಮಾಡಿದನು.

೨೭. ಹಾಗೆಯೇ ಕೋಪದಿಂದ ಇಲ್ವಲನನ್ನು ಮುಷ್ಟಿಯಿಂದ ಪುಡಿಮಾಡಿದನು. ಬಳಿಕ ಸಕಲ ದೈತ್ಯರೂ ಹಾಹಾಕಾರ ಮಾಡುತ್ತ ಅಡಗಿಹೋದರು.

೨೮. ತರುವಾಯ ಅತ್ಯಂತ ತೇಜಸ್ವಿಯಾದ ಅಗಸ್ತ್ಯನು ಬ್ರಾಹ್ಮಣರನ್ನು ಕರೆದು ದೈತ್ಯರ ದ್ರವ್ಯದಿಂದ ತುಂಬಿದ ಆ ಸ್ಥಳವನ್ನು ಅವರಿಗೆ ದಾನಮಾಡಿದನು.

೨೯. ದೇವಿ! ಅಲ್ಲಿ ದಾನವರು ಅಗಸ್ತ್ಯನ ಹಸಿವನ್ನು ಪರಿಹರಿಸಿದ್ದರಿಂದ ಆ ಸ್ಥಳವು ಕ್ಷುಧಾಹರಣವೆಂದು ಪ್ರಸಿದ್ಧಿಗೊಂಡಿತು.

೩೦. ಆ ಸ್ಥಳದ ಪಶ್ಚಿಮದಲ್ಲಿ ಸಮೀಪದಲ್ಲಿಯೇ ಗಂಗೆಯು ಪ್ರತಿಷ್ಠೆಮಾಡಿದ ಗಂಗೇಶ್ವರವೆಂಬ ಲಿಂಗವಿರುವುದು.

ವಾತಾಪಿಭಕ್ಷಣೇ ಪೂರ್ವಮಗಸ್ತ್ಯೇನ ಮಹಾತ್ಮನಾ ।
ದೈತ್ಯಸಂಭಕ್ಷಣೋತ್ಪನ್ನಸರ್ವಪಾತಕಶುದ್ಧಯೇ ।
ಸಮಾಹೂತಾ ಮಹಾದೇವಿ ಗಂಗಾ ಪಾತಕನಾಶಿನೀ ॥ ೩೧ ॥
ತತೋ ದೇವೀ ಸಮಾಯಾತಾ ಗಂಗಾ ಪಾತಕನಾಶಿನೀ ।
ಶುದ್ಧಿಂ ಚಕಾರ ತಸ್ಯರ್ಷೇಸ್ತತ್ರ ಸ್ಥಾನೇ ಸ್ಥಿತಾಭವತ್ ॥ ೩೨ ॥
ಅಗಸ್ತ್ಯಸ್ಯಾಶ್ರಮೇ ರಮ್ಯೇ ನೃಣಾಂ ಪಾಪಭಯಾಪಹೇ ।
ತತ್ರ ಗಂಗೇಶ್ವರಂ ದೃಷ್ಟ್ವಾ ಅಭಕ್ಷ್ಯೋದ್ಭವಪಾತಕಾತ್ ।
ಮುಚ್ಯತೇ ನಾತ್ರ ಸಂದೇಹಃ ಸ್ನಾನದಾನಜಪಾದಿನಾ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಗಸ್ತ್ಯಾಶ್ರಮಗಂಗೇಶ್ವರಮಾಹಾತ್ಮ್ಯವರ್ಣನಂನಾಮ
ಪಂಚಾಶೀತ್ಯುತ್ತರದ್ವಿಶತತಮೋಽಧ್ಯಾಯಃ

---

೩೧. ಹಿಂದೆ ಅಗಸ್ತ್ಯನು ದೈತ್ಯಭಕ್ಷಣದಿಂದುಂಟಾದ ಪಾಪಶುದ್ಧಿಗಾಗಿ ಪಾಪವನ್ನು ನಿವಾರಿಸುವ ಗಂಗೆಯನ್ನು ಅಲ್ಲಿಗೆ ಕರೆಯಿಸಿದನು.

೩೨. ಆ ಗಂಗೆಯು ಅಲ್ಲಿಗೆ ಬಂದು ಋಷಿಯನ್ನು ಪವಿತ್ರಗೊಳಿಸಿ ಅಲ್ಲಿಯೇ ನೆಲೆಸಿದಳು.

೩೩. ಮನೋಹರವಾದುದೂ, ಮಾನವರ ಪಾಪವನ್ನು ನಿವಾರಿಸುವುದೂ ಆದ ಆ ಅಗಸ್ತ್ಯಾಶ್ರಮದಲ್ಲಿರುವ ಗಂಗೇಶ್ವರನನ್ನು ನೋಡಿ ಸ್ನಾನ, ದಾನ, ಜಪಗಳನ್ನು ಮಾಡಿದ ಮಾನವನು ಅಭಕ್ಷ್ಯಭಕ್ಷಣದಿಂದುಂಟಾದ ಪಾಪದಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಗಸ್ತ್ಯಾಶ್ರಮಗಂಗೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡಶೀತ್ಯುತ್ತರದ್ವಿಶತತಮೋಽಧ್ಯಾಯಃ

ಬಾಲಾರ್ಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಬಾಲಾರ್ಕಂ ಪಾಪನಾಶನಂ ।
ಅಗಸ್ತ್ಯಾಶ್ರಮತೋ ದೇವಿ ಉತ್ತರೇ ನಾತಿದೂರತಃ ॥ ೧ ॥
ಬಾಲ ಏವ ತು ಯತ್ರಾರ್ಕಸ್ತಪಸ್ತೇಪೇ ಪುರಾ ಪ್ರಿಯೇ ।
ತೇನ ಬಾಲಾರ್ಕ ಇತ್ಯೇತನ್ನಾಮ ಖ್ಯಾತಂ ಧರಾತಲೇ ॥ ೨ ॥
ತಂ ದೃಷ್ಟ್ವಾ ರವಿವಾರೇಣ ನ ಕುಷ್ಠೀ ಜಾಯತೇ ನರಃ ।
ಬಾಲಾನಾಂ ರೋಗಜಾ ಪೀಡಾ ನ ಸಂಭೂಯಾತ್ಕದಾಚನ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಬಾಲಾರ್ಕಮಾಹಾತ್ಮ್ಯವರ್ಣನಂನಾಮ
॥ ಷಡಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಬಾಲಾರ್ಕಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಪಾಪವನ್ನು ನಿವಾರಿಸುವ ಅಗಸ್ತ್ಯಾಶ್ರಮದ ಉತ್ತರದಲ್ಲಿ ಸಮೀಪದಲ್ಲಿರುವ ಬಾಲಾರ್ಕನೆಡೆಗೆ ಹೋಗಬೇಕು.

೨. ಪ್ರಿಯಳೆ ! ಇಲ್ಲಿ ಸೂರ್ಯನು ಬಾಲಕನಾಗಿಯೇ ಹಿಂದೆ ತಪಸ್ಸನ್ನು ಮಾಡಿರುವನು. ಆದ್ದರಿಂದ ಇವನಿಗೆ ಬಾಲಾರ್ಕನೆಂದು ಹೆಸರು ಲೋಕದಲ್ಲಿ ಪ್ರಸಿದ್ಧವಾಯಿತು.

೩. ಭಾನುವಾರದ ದಿನ ಅವನನ್ನು ನೋಡಿದ ಮಾನವನು ಕುಷ್ಠರೋಗಿಯಾಗುವುದಿಲ್ಲ. ಬಾಲಕರಿಗೆ ಯಾವಾಗಲೂ ರೋಗದಿಂದ ಪೀಡೆಯುಂಟಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಬಾಲಾರ್ಕಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಅಜಾಪಾಲೇಶ್ವರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಅಜಾಪಾಲೇಶ್ವರೀಂ ಶುಭಾಂ ।
ಅಗಸ್ತ್ಯಸ್ಥಾನಪೂರ್ವೇಣ ನಾತಿದೂರೇ ವ್ಯವಸ್ಥಿತಾಂ ॥ ೧ ॥
ರಘುವಂಶಸಮುದ್ಭೂತೋ ಹ್ಯಜಾಪಾಲೋ ನೃಪೋತ್ತಮಃ ।
ಸ ತತ್ರ ದೇವೀಮಾರಾಧ್ಯ ಪಾಪರೋಗವಶಂಕರೀಂ ॥ ೨ ॥
ಅಜಾರೂಪಾಂಶ್ಚ ರೋಗಾನ್ವೈ ಚಾರಯಾಮಾಸ ಭೂಮಿಪಃ ।
ತತ್ರ ತಾಂ ಸ್ಥಾಪಯಾಮಾಸ ಸ್ವನಾಮ್ನಾ ಪಾಪನಾಶಿನೀಂ ॥ ೩ ॥
ಯಸ್ತಾಂ ಪೂಜಯತೇ ಭಕ್ತ್ಯಾ ತೃತೀಯಾಯಾಂ ವಿಧಾನತಃ ।
ಬಲಂ ಬುದ್ಧಿಂ ಯಶೋ ವಿದ್ಯಾಂ ಸೌಭಾಗ್ಯಂ ಪ್ರಾಪ್ನುಯಾನ್ನರಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಜಾಪಾಲೇಶ್ವರೀಮಾಹಾತ್ಮ್ಯವರ್ಣನಂ ನಾಮ
॥ ಸಪ್ತಾಶೀತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಅಜಾಪಾಲೇಶ್ವರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಅಗಸ್ತ್ಯಸ್ಥಾನದ ಪೂರ್ವದಲ್ಲಿ ಹತ್ತಿರದಲ್ಲಿರುವ ಅಜಾಪಾಲೇಶ್ವರಿಯೆಡೆಗೆ ಹೋಗಬೇಕು.

೨-೩. ರಘುಕುಲದಲ್ಲಿ ಜನಿಸಿದ ಅಜಾಪಾಲನೆಂಬ ದೊರೆಯು ಪಾಪರೋಗವನ್ನು ವಶಪಡಿಸಿಗೊಂಡ ದೇವಿಯನ್ನು ಪೂಜಿಸಿ ಆಡಿನ ರೂಪದ ರೋಗಗಳನ್ನು ಸಂಚಾರಮಾಡಿಸಿದನು. ಮತ್ತು ಅಲ್ಲಿ ಪಾಪವನ್ನು ಪರಿಹರಿಸುವ ದೇವಿಯನ್ನು ಪ್ರತಿಷ್ಠೆಮಾಡಿದನು.

೪. ತದಿಗೆ ದಿನ ಭಕ್ತಿಯಿಂದ ಅವಳನ್ನು ಪೂಜಿಸಿದ ಮಾನವನು ಬಲ, ಬುದ್ಧಿ, ಯಶಸ್ಸು, ವಿದ್ಯೆ, ಸೌಭಾಗ್ಯಗಳನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಜಾಪಾಲೇಶ್ವರೀಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾಶೀತ್ಯುತ್ತರದ್ವಿಶತತಮೋಽಧ್ಯಾಯಃ

ಬಾಲಾದಿತ್ಯಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಬಾಲಾದಿತ್ಯಮಿತಿ ಶ್ರುತಂ ।
ಅಗಸ್ತ್ಯಸ್ಥಾನತಃ ಪೂರ್ವೇ ಗವ್ಯೂತಿದ್ವಿತಯೇನ ತು ॥ ೧ ॥

ಸ್ಥಾನಂ ಸಪಾಟಿಕಾನಾಮ ತಸ್ಯ ದಕ್ಷಿಣತಃ ಸ್ಥಿತಂ ।
ಗವ್ಯೂತಿಮಾತ್ರಂ ದೇವೇಶಿ ಬಾಲಾರ್ಕ ಇತಿ ವಿಶ್ರುತಂ ॥ ೨ ॥

ಯತ್ರ ಚಾರಾಧಿತಾ ವಿದ್ಯಾ ವಿಶ್ವಾಮಿತ್ರೇಣ ಧೀಮತಾ ।
ಸಂಸ್ಥಾಪ್ಯ ಲಿಂಗತ್ರಿತಯಂ ಪ್ರತಿಷ್ಠಾಪ್ಯ ತಥಾ ರವಿಂ ॥ ೩ ॥

ವಿದ್ಯಾಯಾಃ ಸಾಧನಂ ಚಕ್ರೇ ಸಿದ್ಧಿಂ ಸೂರ್ಯಾದವಾಪ್ತವಾನ್ ।
ಬಾಲಾದಿತ್ಯೇತಿ ತೇನಾಸೌ ತತಃ ಖ್ಯಾತಿಮುಗಾತ್ಪ್ರಭುಃ ॥ ೪ ॥

ಕನ್ನಡದ ಅನುವಾದ

ಬಾಲಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ;—ಮಹಾದೇವಿ ! ತರುವಾಯ ಅಗಸ್ತ್ಯಸ್ಥಾನದ ಪೂರ್ವದಲ್ಲಿ ಎಂಟು ಮೈಲಿ ದೂರದಲ್ಲಿರುವ ಬಾಲಾದಿತ್ಯನೆಡೆಗೆ ಹೋಗಬೇಕು.

೨. ಅವನ ದಕ್ಷಿಣದಲ್ಲಿ ಗವ್ಯೂತಿ ಪರಿಮಾಣದ ಬಾಲಾರ್ಕನೆಂದು ಪ್ರಸಿದ್ಧವಾದ ಸಪಾಟಿಕಾ ಎಂಬ ಸ್ಥಾನವಿರುವುದು.

೩. ಇಲ್ಲಿ ವಿಶ್ವಾಮಿತ್ರನು ಮೂರು ಲಿಂಗಗಳನ್ನೂ, ಸೂರ್ಯದೇವನನ್ನೂ ಪ್ರತಿಷ್ಠೆಮಾಡಿ ವಿದ್ಯಾಧಿದೇವತೆಯನ್ನು ಪೂಜಿಸಿದನು.

೪. ಅವನು ವಿದ್ಯೆಯನ್ನು ಸಾಧಿಸಿ ಸೂರ್ಯನಿಂದ ಸಿದ್ಧಿಯನ್ನು ಪಡೆದಿರುವನು

ತಂ ದೃಷ್ಟ್ವಾ ಮಾನವೋ ದೇವಿ ಭಾಸ್ಕರಂ ಪಾಪತಸ್ಕರಂ ।
ನ ದಾರಿದ್ರ್ಯಮವಾಪ್ನೋತಿ ಯಾವಜ್ಜೀವತಿ ಮಾನವಃ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿತಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬಾಲಾದಿತ್ಯಮಾಹಾತ್ಮ್ಯವರ್ಣನಂನಾಮ
॥ಅಷ್ಟಾಶೀತ್ಯುತ್ತರದ್ವಿಶತತಮೋಽಧ್ಯಾಯಃ॥

---

೫. ಪಾಪವನ್ನು ಪರಿಹರಿಸುವ ಆ ಸೂರ್ಯನನ್ನು ದರ್ಶನಮಾಡಿದ ಮಾನವನು ಮರಣಕಾಲದವರೆಗೆ ಬಡತನವನ್ನು ಹೊಂದುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬಾಲಾದಿತ್ಯಮಾಹಾತ್ಮ್ಯವರ್ಣನವೆಂಬ
ಇನ್ನೂರಎಂಬತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನನವತ್ಯುತ್ತರದ್ವಿಶತತಮೋಽಧ್ಯಾಯಃ

ಪಾತಾಲಗಂಗೇಶ್ವರವಿಶ್ವಾಮಿತ್ರೇಶ್ವರಬಾಲೇಶ್ವರಾಭಿಧ ಲಿಂಗತ್ರಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ದಕ್ಷಿಣೇ ದೇವಿ ತಸ್ಮಾದ್ಧನ್ವ್ಯಾತಿಮಾತ್ರತಃ ।
ಪಾತಾಲಗಾಮಿನೀ ಗಂಗಾ ಸಂಸ್ಥಿತಾ ಪಾಪನಾಶಿನೀ ॥ ೧ ॥
ವಿಶ್ವಾಮಿತ್ರೇಣ ಚಾಹೂತಾ ಸ್ನಾನಾರ್ಥಂ ವರವರ್ಣಿನಿ ।
ತತ್ರ ಸ್ನಾತ್ವಾ ಮಹಾದೇವಿ ಮುಚ್ಯತೇ ಸರ್ವಪಾತಕೈಃ ॥ ೨ ॥
ತತ್ರ ಗಂಗೇಶ್ವರಂ ದೃಷ್ಟ್ವಾ ವಿಶ್ವಾಮಿತ್ರೇಶ್ವರಂ ತಥಾ ।
ಬಾಲೇಶ್ವರಂ ಚ ಸಂಪ್ರೇಕ್ಷ್ಯ ಸರ್ವಾನ್ಕಾಮಾನವಾಪ್ನುಯಾತ್ ॥ ೩ ॥

ಇತಿ ಶ್ರೀ ಸ್ಕಾಂದೇಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಪಾತಾಲಗಂಗೇಶ್ವರ ವಿಶ್ವಾಮಿತ್ರೇಶ್ವರ ಬಾಲೇಶ್ವರಾಭಿಧ ಲಿಂಗತ್ರಯಮಾಹಾತ್ಮ್ಯವರ್ಣನಂ ನಾಮ ಏಕೋನನವತ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಪಾತಾಲಗಂಗೇಶ್ವರ ವಿಶ್ವಾಮಿತ್ರೇಶ್ವರ ಬಾಲೇಶ್ವರಾಭಿಧ ಲಿಂಗತ್ರಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಆ ಬಾಲಾರ್ಕನ ದಕ್ಷಿಣದಲ್ಲಿ ನಾಲ್ಕು ಮೈಲಿ ದೂರದಲ್ಲಿ ಪಾಪವನ್ನು ನಿವಾರಿಸುವ ಪಾತಾಳಗಾಮಿನಿಯಾದ ಗಂಗೆಯು ಇರುವಳು.

೨. ವಿಶ್ವಾಮಿತ್ರನು ಸ್ನಾನಕ್ಕೋಸ್ಕರ ಆ ಗಂಗೆಯನ್ನು ಅಲ್ಲಿಗೆ ಕರೆಸಿರುವನು ಅಲ್ಲಿ ಮಿಂದ ಮಾನವನು ಸಕಲ ಪಾಪಗಳಿಂದಲೂ ಮುಕ್ತನಾಗುವನು.

೩. ಅಲ್ಲಿರುವ ಗಂಗೇಶ್ವರ, ವಿಶ್ವಾಮಿತ್ರೇಶ್ವರ, ಬಾಲೇಶ್ವರನನ್ನು ನೋಡಿದ ಮಾನವನು ಸಕಲೇಷ್ಟಾರ್ಥಗಳನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಪಾತಾಲಗಂಗೇಶ್ವರ ವಿಶ್ವಾಮಿತ್ರೇಶ್ವರ ಬಾಲೇಶ್ವರಾಭಿಧ ಲಿಂಗತ್ರಯಮಾಹಾತ್ಮ್ಯವರ್ಣನವೆಂಬ ಇನ್ನೂರಎಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವತ್ಯುತ್ತರದ್ವಿಶತತಮೋऽಧ್ಯಾಯಃ

ಕುಬೇರನಗರೋತ್ಪತ್ತಿ ಕುಬೇರಸ್ಥಾಪಿತ ಸೋಮನಾಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕುಬೇರಸ್ಥಾನಮುತ್ತಮಂ ।
ಯತ್ರ ಸಿದ್ಧಃ ಪುರಾ ದೇವಿ ಕುಬೇರೋ ಧನದೋऽಭವತ್ ॥ ೧ ॥
ಬ್ರಾಹ್ಮಣಶ್ಚೌರರೂಪೇಣ ತತ್ರ ಸ್ಥಾನೇऽವಸತ್ಪುರಾ ।
ಸ ಚ ಮೇ ಭಕ್ತಿಯೋಗೇನ ಪುರಾ ವೈ ಧನದಃ ಕೃತಃ ॥ ೨ ॥

ದೇವ್ಯುವಾಚ :—

ಕಥಂ ಸ ಬ್ರಾಹ್ಮಣೋ ಭೂತ್ವಾ ಚೌರರೂಪೋ ನರಾಧಮಃ ।
ತನ್ಮೇ ಕಥಯ ದೇವೇಶ ಧನದಃ ಸ ಯಥಾऽಭವತ್ ॥ ೩ ॥

ಈಶ್ವರ ಉವಾಚ :—

ತಸ್ಮಿನ್ನರ್ಥೇ ಮಹಾದೇವಿ ಯದ್ವೃತಂ ಚೌತ್ತಮೇऽನ್ತರೇ ।
ಕಥಯಿಷ್ಯಾಮಿ ತತ್ಸರ್ವಂ ಶಿವಮಾಹಾತ್ಮ್ಯಸೂಚಕಂ ॥ ೪ ॥

ಕನ್ನಡದ ಅನುವಾದ

ಕುಬೇರನಗರೋತ್ಪತ್ತಿ ಕುಬೇರಸ್ಥಾಪಿತ ಸೋಮನಾಥ ಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಹಿಂದೆ ಕುಬೇರನು ಸಿದ್ಧಿಯನ್ನು ಪಡೆದು ಧನದನಾಗಿರುವ ಉತ್ತಮವಾದ ಕುಬೇರಸ್ಥಾನಕ್ಕೆ ಹೋಗಬೇಕು.

೨. ಹಿಂದೆ ಆ ಸ್ಥಳದಲ್ಲಿ ಬ್ರಾಹ್ಮಣನು ಕಳ್ಳನ ರೂಪದಿಂದ ವಾಸಿಸುತ್ತಿದ್ದನು. ನಾನು ಅವನ ಭಕ್ತಿಯ ಸಂಬಂಧದಿಂದ ಅವನನ್ನು ಧನದನನ್ನಾಗಿ ಮಾಡಿದೆನು.

೩. ದೇವಿಯು ಹೇಳುತ್ತಾಳೆ :—ದೇವೇಶ! ಕಳ್ಳನಾದ ಆ ನೀಚ ಬ್ರಾಹ್ಮಣನು ಧನದನಾಗಿ ಹೇಗೆ ಮಾಡಲ್ಪಟ್ಟನು? ಅದನ್ನು ನನಗೆ ಹೇಳು.

೪. ಈಶ್ವರನು ಹೇಳುತ್ತಾನೆ :—ಮಹಾದೇವಿ! ಔತ್ತಮ ಮನ್ವಂತರದಲ್ಲಿ ನಡೆದ ಆ ಶಿವಮಾಹಾತ್ಮ್ಯಪ್ರಸಂಗವನ್ನು ಸೂಚಿಸುವ ಸಮಾಚಾರವನ್ನೆಲ್ಲ ನಿನಗೆ ನಾನು ಹೇಳುವೆನು; ಕೇಳು.

ಕಶ್ಚಿದಾಸೀದ್ದ್ವಿಜೋ ದೇವಿ ದೇವಶರ್ಮೇತಿ ವಿಶ್ರುತಃ ।
ಪ್ರಭಾಸಕ್ಷೇತ್ರನಿಲಯೋ ನ್ಯಂಕುಮತ್ಯಾಸ್ತಟೇಽವಸತ್ ॥ ೫ ॥
ಪುತ್ರಕ್ಷೇತ್ರಕಲತ್ರಾದಿವ್ಯಾಪಾರೈಕರತಃ ಸದಾ ।
ವಿಹಾಯಾಥ ಸ ಗಾರ್ಹಸ್ಥ್ಯಂ ಧನಾರ್ಥಂ ಲೋಭಮೋಹಿತಃ ।
ಪ್ರಚಚಾರ ಮಹೀಮೇತಾಂ ಸಗ್ರಾಮನಗರಾಂತರಾಂ ॥ ೬ ॥
ಭಾರ್ಯಾ ತಸ್ಯ ವಿಲೋಲಾಕ್ಷೀ ತಸ್ಯ ಗೇಹಾದ್ವಿನಿರ್ಗತಾ ।
ಸ್ವಚ್ಛಂದಚಾರಿಣೀ ನಿತ್ಯಂ ನಿತ್ಯಂ ಚಾನಂತಮೋಹಿತಾ ॥ ೭ ॥
ತಸ್ಯಾಂ ಕದಾಚಿತ್ಪುತ್ರಸ್ತು ಶೂದ್ರಾಜ್ಜಾತೋ ವಿಧೇರ್ವಶಾತ್ ।
ದುಷ್ಟಾತ್ಮಾತೀವ ನಿರ್ಮುಕ್ತೋ ನಾಮ್ನಾ ದುಃಸಹ ಇತ್ಯತಃ ॥ ೮ ॥
ಸೋಽಥ ಕಾಲೇನ ಮಹತಾ ನಾಮಕರ್ಮಪ್ರವರ್ತಿತಃ ।
ವ್ಯಸನೋಪಹತಃ ಪಾಪಸ್ತ್ಯಕ್ತೋ ಬಂಧುಜನೈಸ್ತಥಾ ॥ ೯ ॥
ಪೂಜೋಪಕರಣಂ ದ್ರವ್ಯಂ ಸ ಕಸ್ಮಿಂಶ್ಚಿಚ್ಛಿವಾಲಯೇ ।
ಬಹು ದೋಷಾಮುಖೇ ದೃಷ್ಟ್ವಾ ಹರ್ತುಕಾಮೋಽವಿಶತ್ತತಃ ॥ ೧೦ ॥
ಯಾವದ್ದೀಪೋ ಗತಪ್ರಾಯೋ ವರ್ತಿಚ್ಛೇದೋಽಭವತ್ಕಿಲ ।
ತಾವತ್ತೇನ ದಶಾ ದತ್ತಾ ದ್ರವ್ಯಾನ್ವೇಷಣಕಾರಣಾತ್ ॥ ೧೧ ॥

---

೫. ದೇವಿ! ದೇವಶರ್ಮನೆಂಬ ಒಬ್ಬ ಬ್ರಾಹ್ಮಣನು ಪ್ರಭಾಸಕ್ಷೇತ್ರದಲ್ಲಿರುವ ನ್ಯಂಕುಮತೀ ನದಿಯ ದಡದಲ್ಲಿ ವಾಸಮಾಡುತ್ತಿದ್ದನು.

೬. ಅವನು ಯಾವಾಗಲೂ ಮಕ್ಕಳು, ಹೊಲ, ಪತ್ನಿ ಇವರ ಪೋಷಣೆಯಲ್ಲಿ ನಿರತನಾಗಿ ಹಣಕ್ಕಾಗಿ ಗಾರ್ಹಸ್ಥ್ಯವನ್ನು ತ್ಯಜಿಸಿ ಅತ್ಯಾಶೆಯಿಂದ ಗ್ರಾಮನಗರಗಳಿಂದ ಸಹಿತವಾದ ಭೂಮಿಯಲ್ಲೆಲ್ಲ ಅಲೆದನು.

೭. ಕಾಮಮೋಹಿತಳಾದ ಅವನ ಹೆಂಡತಿಯು ಮನೆಯಿಂದ ಹೊರ ಹೊರಟು ಯಾವಾಗಲೂ ಸ್ವೇಚ್ಛಾಚಾರಿಣಿಯಾದಳು.

೮. ಒಂದಾನೊಂದು ವೇಳೆ ದೈವವಶದಿಂದ ಅವಳಲ್ಲಿ ಶೂದ್ರನಿಂದ ದುಷ್ಟನೂ, ಸ್ವೇಚ್ಛಾಚಾರಿಯೂ ಆದ ದುಸ್ಸಹನೆಂಬ ಮಗನು ಹುಟ್ಟಿದನು.

೯. ತನ್ನ ಹೆಸರಿಗೆ ತಕ್ಕ ದುಷ್ಟ ಕೆಲಸದಲ್ಲಿ ಆಸಕ್ತನಾದ ಅವನನ್ನು ಬಹು ಕಾಲದಮೇಲೆ ಬಂಧು ಜನರು ತ್ಯಜಿಸಿದರು.

೧೦. ಅವನು ಒಂದಾನೊಂದು ಶಿವಾಲಯದಲ್ಲಿರುವ ಪೂಜಾಸಾಮಗ್ರಿಯನ್ನು ಅಪಹರಿಸಲೋಸುಗ ಸಾಯಂಕಾಲ ಒಳಹೊಕ್ಕನು.

೧೧. ದೀಪವು ಬತ್ತಿಯು ಮುಗಿದುದರಿಂದ ಆರಿಹೋಗುತ್ತಿರಲು ಅವನ್ನು ತಾನು ದ್ರವ್ಯವನ್ನು ಹುಡುಕುವುದಕ್ಕಾಗಿ ಮತ್ತೊಂದು ಬತ್ತಿಯನ್ನು ಅದಕ್ಕೆ ಹಾಕಿದನು.

ಪ್ರಬುದ್ಧಶ್ಚೋತ್ಥಿತಸ್ತತ್ರ ದೇವಪೂಜಾಕರೋ ನರಃ ।
ಕೋಽಯಂ ಕೋಽಯಮಿತಿ ಪ್ರೋಚ್ಚೈರ್ವ್ಯಾಹರತ್ಪರಿಘಾಯುಧಃ॥ ೧೨ ॥
ಸ ಚ ಪ್ರಾಣಭಯಾನ್ನಷ್ಟಃ ಶೂದ್ರಜಶ್ಚಾಪಿ ಮೂಢಧೀಃ ।
ವಿನಿಂದನ್ನಾತ್ಮನೋ ಜನ್ಮ ಕರ್ಮ ಚಾಪಿ ಸುದುಃಖಿತಃ ॥ ೧೩ ॥
ಪುರಪಾಲೈರ್ಹತೋಽವನ್ಯಾಂ ಮೃತಃ ಕಾಲಾದಭೂಚ್ಚ ಸಃ ।
ಗಾಂಧಾರವಿಷಯೇ ರಾಜಾ ಖ್ಯಾತೋ ನಾಮ್ನಾ ಸುದುರ್ಮುಖಃ ॥ ೧೪ ॥
ಗೀತವಾದ್ಯರತಸ್ತತ್ರ ವೇಶ್ಯಾಸು ನಿರತೋ ಭೃಶಂ ।
ಪ್ರಜೋಪದ್ರವಕೃನ್ಮೂರ್ಖಃ ಸರ್ವಧರ್ಮಬಹಿಷ್ಕೃತಃ ॥ ೧೫ ॥
ಕಿಂತ್ವರ್ಚಯನ್ಸದೈವಾಸೌ ಲಿಂಗಂ ರಾಜ್ಯಕ್ರಮಾಗತಂ ।
ಪುಷ್ಪಸ್ರಗ್ಧೂಪನೈವೇದ್ಯಗಂಧಾದಿಭಿರಮಂತ್ರವತ್ ॥ ೧೬ ॥
ಮುಖ್ಯೇಷು ಚ ಸದಾ ಕಾಲೇ ದೇವತಾಯತನೇಷು ಚ ।
ದದ್ಯಾತ್ಸ ಬಹುಲಾನ್ದೀಪಾನ್ವರ್ತಿಭಿಶ್ಚ ಸಮುಜ್ಜ್ವಲಾನ್ ॥ ೧೭ ॥
ಕದಾಚಿನ್ಮೃಗಯಾಸಕ್ತೋ ಬಭ್ರಾಮ ಸ ಚ ವೀರ್ಯವಾನ್ ।
ಪ್ರಭಾಸಕ್ಷೇತ್ರಮಾಗತ್ಯ ಪೂರ್ವಸಂಸ್ಕಾರಭಾವಿತಃ ॥ ೧೮ ॥

---

೧೨. ಆಗ ದೇವಪೂಜಕನು ಎಚ್ಚರಗೊಂಡು ಪರಿಘಾಯುಧಧಾರಿಯಾಗಿ ಯಾವನಿವನು ? ಯಾವನಿವನು ? ಎಂದು ಗಟ್ಟಿಯಾಗಿ ಕೂಗಿಕೊಂಡನು.

೧೩. ಆ ಮೂಢನಾದ ಶೂದ್ರನು ಪ್ರಾಣಭಯದಿಂದ ಅಡಗಿಕೊಂಡವನಾಗಿ ಅತ್ಯಂತ ದುಃಖದಿಂದ ತನ್ನ ಜನ್ಮವನ್ನೂ, ಕರ್ಮವನ್ನೂ ನಿಂದಿಸಿದನು.

೧೪. ಪಟ್ಟಣ ರಕ್ಷಕರು ಅವನನ್ನು ಚೆನ್ನಾಗಿ ಹೊಡೆಯಲು ಅವನು ಮೃತನಾಗಿ ಭೂಮಿಯಲ್ಲಿ ಬಿದ್ದನು. ಬಹುಕಾಲದ ಮೇಲೆ ಅವನು ಮರಳಿ ಹುಟ್ಟಿ ದುರ್ಮುಖನೆಂಬ ಹೆಸರಿನಿಂದ ಗಾಂಧಾರದೇಶಕ್ಕೆ ರಾಜನಾದನು.

೧೫. ಅವನು ಅಲ್ಲಿ ಗೀತವಾದ್ಯಗಳಲ್ಲಿ ಆಸಕ್ತನೂ, ವೇಶ್ಯಾಲೋಲನೂ, ಪ್ರಜೆಗಳಿಗೆ ಉಪದ್ರವವನ್ನು ಮಾಡುವವನೂ, ಸಮಸ್ತ ಧರ್ಮಬಹಿಷ್ಕೃತನೂ ಆಗಿದ್ದನು.

೧೬. ಆದರೆ ಅವನು ಯಾವಾಗಲೂ ಮಂತ್ರವಿಲ್ಲದೆ ಪುಷ್ಪಮಾಲೆ, ಧೂಪ, ನೈವೇದ್ಯ ಮೊದಲಾದವುಗಳಿಂದ ರಾಜ್ಯಕ್ರಮದಿಂದ ಬಂದ ಲಿಂಗವನ್ನು ಅರ್ಚಿಸುತ್ತಿದ್ದನು.

೧೭. ಯಾವಾಗಲೂ ಮುಖ್ಯವಾದ ದೇವಾಲಯಗಳಲ್ಲಿ ಬತ್ತಿಗಳಿಂದ ವಿರಾಜಿಸುತ್ತಿದ್ದ ಅನೇಕ ದೀಪಗಳನ್ನು ಹೊತ್ತಿಸುತ್ತಿದ್ದನು.

೧೮–೧೯. ಒಂದಾನೊಂದುವೇಳೆ ಸಮರ್ಥನಾದ ಅವನು ಬೇಟೆಯಾಡುತ್ತ ಪೂರ್ವಸಂಸ್ಕಾರವಶದಿಂದ ಪ್ರಭಾಸಕ್ಷೇತ್ರಕ್ಕೆ ಬಂದು ಅಲ್ಲಿ ಯುದ್ಧದಲ್ಲಿ ಶತ್ರುಗಳಿಂದ

ಪರೈರಭಿಹತೋ ಯುದ್ಧೇ ನ್ಯಂಕುಮತ್ಯಾಸ್ತಟೇ ಶುಭೇ ।
ಶಿವಪೂಜಾವಿಧಾನೇನ ವಿಧ್ವಸ್ತಾಶೇಷಪಾತಕಃ ॥ ೧೯ ॥
ತತೋ ವಿಶ್ರವಸಶ್ಚಾಸೌ ಪುತ್ರೋಽಭೂದ್ಭುವಿ ವಿಶ್ರುತಃ ।
ಯಃ ಸ ಏವ ಮಹಾತೇಜಾಃ ಸರ್ವಯಜ್ಞಾಧಿಪೋ ಬಲೀ ॥ ೨೦ ॥
ಕುಬೇರ ಇತಿ ಧರ್ಮಾತ್ಮಾ ಶ್ರುತಶೀಲಸಮನ್ವಿತಃ ।
ಲಿಂಗಂ ಪ್ರತಿಷ್ಠಯಾಮಾಸ ನ್ಯಂಕುಮತ್ಯಾಶ್ಚ ಪೂರ್ವತಃ ॥ ೨೧ ॥
ಕೌಬೇರಾತ್ಪಶ್ಚಿಮೇ ಭಾಗೇ ಸೋಮನಾಥೇತಿ ವಿಶ್ರುತಂ ।
ಸಂಪೂಜ್ಯ ಚ ಯಥೇಶಾನಂ ನ್ಯಂಕುಮತ್ಯಾಸ್ತಟೇ ಶುಭೇ ।
ಸ್ತೋತ್ರೇಣಾನೇನ ಚಾಸ್ತೌಷೀದ್ಭಕ್ತ್ಯಾ ತಂ ಸರ್ವಕಾಮದಂ ॥ ೨೨ ॥
ಮೂರ್ತಿಃ ಕ್ವಾಪಿ ಮಹೇಶ್ವರಸ್ಯ ಮಹತೀ ಯಜ್ಞಸ್ಯ ಮೂಲೋದಯಾ
ತುಂಬೀ ತುಂಗಫಲಾವತೀ ಚ ಶತಶೋ ಬ್ರಹ್ಮಾಂಡಕೋಟಿಸ್ತಥಾ ।
ಯನ್ಮಾನಂ ನ ಪಿತಾಮಹೋ ನ ಚ ಹರಿರ್ಬ್ರಹ್ಮಾಂಡಮಧ್ಯಸಿ ತೋ
ಜಾನಾತ್ಯನ್ಯಸುರೇಷು ಕಾ ಚ ಗಣನಾ ಸಾ ಸಂತತಂ ಪೋಽವತಾತ್ ॥೩೨॥

ಹೊಡೆಯಲ್ಪಟ್ಟವನಾಗಿ ನ್ಯಂಕುಮತೀ ನದಿಯ ದಡದಲ್ಲಿ ಶಿವಪೂಜೆಯನ್ನು ಮಾಡಿ ಸಕಲ ಪಾಪಗಳನ್ನು ನೀಗಿಸಿಕೊಂಡನು.

೨೦–೨೧. ಬಳಿಕ ವಿಶ್ರವಸ್ಸಿನ ತನಯನಾಗಿ ಜನಿಸಿ ಸಕಲ ಯಜ್ಞಾಧಿಪನೂ, ಮಹಾ ತೇಜಸ್ವಿಯೂ, ವಿದ್ಯಾಸಚ್ಚರಿತೆಗಳಿಂದ ಕೂಡಿರುವವನೂ ಆದ ಕುಬೇರನೆಂದು ಪ್ರಸಿದ್ಧನಾಗಿ ನ್ಯಂಕುಮತಿಯ ಪೂರ್ವದಿಕ್ಕಿನಲ್ಲಿ ಲಿಂಗವನ್ನು ಪ್ರತಿಷ್ಠೆ ಮಾಡಿದನು.

೨೨. ಕುಬೇರೇಶ್ವರನ ಪಶ್ಚಿಮದಲ್ಲಿ ನ್ಯಂಕುಮತಿಯ ದಡದಲ್ಲಿರುವ ಸೋಮನಾಥನೆಂಬ ಮಹೇಶ್ವರನನ್ನು ಪೂಜಿಸಿ ಸಕಲೇಷ್ಟಾರ್ಥಗಳನ್ನೀಯುವ ಅವನನ್ನು ಭಕ್ತಿಯಿಂದ ಈ ಸ್ತೋತ್ರದಿಂದ ಸ್ತುತಿಸಿದನು.

೨೩. ಯಜ್ಞಕ್ಕೆ ಮೂಲಭೂತವೂ ಉನ್ನತವಾದ ಫಲಗಳುಳ್ಳ ಸೋರೆಗಿಡದಂತಿರುವ ಅನೇಕ ಕೋಟಿ ಬ್ರಹ್ಮಾಂಡಗಳ ರೂಪವೂ ಆದ ಮಹೇಶ್ವರನ ಶರೀರವು ನಿಮ್ಮನ್ನು ಕಾಪಾಡಲಿ. ಈ ಶರೀರದ ಪರಿಮಾಣವನ್ನು ಬ್ರಹ್ಮಾಂಡದ ಮಧ್ಯದಲ್ಲಿರುವ ಬ್ರಹ್ಮವಿಷ್ಣುಗಳೂ ತಿಳಿದಿರುವುದಿಲ್ಲ. ಅಸುರರು ತಿಳಿಯುವುದಿಲ್ಲವೆಂದು ಹೇಳತಕ್ಕುದೇನಿದೆ?

ನಮಾಮ್ಯಹಂ ದೇವಮಜಂ ಪುರಾಣ
ಮುಪೇಂದ್ರಮಿಂದ್ರಾವರರಾಜಜುಷ್ಟಂ ।
ಶಶಾಂಕಸೂರ್ಯಾಗ್ನಿಸಮಾನನೇತ್ರಂ
ವೃಷೇಂದ್ರಚಿಹ್ನಂ ಪ್ರಲಯಾದಿಹೇತುಂ ॥ ೨೪ ॥
ಸರ್ವೇಶ್ವರೈಕತ್ರಿಬಲೈಕಬಂಧುಂ
ಯೋಗಾಧಿಗಮ್ಯಂ ಜಗತೋಽಧಿವಾಸಂ ।
ತಂ ವಿಸ್ಮಯಾಧಾರಮನಂತಶಕ್ತಿಂ
ಜ್ಞಾನೋದ್ಭವಂ ಧೈರ್ಯಗುಣಾಧಿಕಂ ಚ ॥ ೨೫ ॥
ಪಿನಾಕಪಾಶಾಂಕುಶಶೂಲಹಸ್ತಂ
ಕಪರ್ದಿನಂ ಮೇಘಸಮಾನಘೋಷಂ ।
ಸಕಾಲಕಂಠಂ ಸ್ಫಟಿಕಾವಭಾಸಂ
ನಮಾಮಿ ಶಂಭುಂ ಭುವನೈಕನಾಥಂ ॥ ೨೬ ॥
ಕಪಾಲಿನಂಮಾಲಿನಮಾದಿದೇವಂ
ಜಟಾಧರಂ ಭೀಮಭುಜಂಗಹಾರಂ ।
ಪ್ರಭಾಸಿತಾರಂ ಚ ಸಹಸ್ರಮೂರ್ತಿಂ
ಸಹಸ್ರಶೀರ್ಷಂ ಪುರಷಂ ವಿಶಿಷ್ಟಂ ॥ ೨೭ ॥

---

೨೪. ಪುರಾತನನೂ, ಉಪೇಂದ್ರ, ಇಂದ್ರಾದಿಗಳಿಂದ ಸೇವಿಸಲ್ಪಟ್ಟವನೂ, ಸೂರ್ಯಚಂದ್ರರಿಗೆ ಸಮಾನವಾದ ಕಣ್ಣುಗಳುಳ್ಳವನೂ, ವೃಷಭರಾಜನ ಚಿಹ್ನೆಯುಳ್ಳವನೂ, ಸೃಷ್ಟಿಪ್ರಳಯಗಳಿಗೆ ಕಾರಣನೂ ಆದ ಮಹೇಶ್ವರನನ್ನು ವಂದಿಸುತ್ತೇನೆ.

೨೫–೨೬. ಸಮಸ್ತಕ್ಕೂ ಒಡೆಯನೂ, ಏಕತ್ರಿಬಲಗಳಿಗೆ ಮುಖ್ಯಬಂಧುವೂ ಯೋಗಶಕ್ತಿಯಿಂದ ಹೊಂದಲು ಶಕ್ಯನೂ, ಜಗತ್ತುಗಳಿಗೆ ಆಶ್ರಯನೂ, ಆಶ್ಚರ್ಯಕ್ಕೆ ಆಶ್ರಯನೂ, ಅಪರಿಮಿತಶಕ್ತಿಯುಳ್ಳವನೂ, ಜ್ಞಾನಕ್ಕೆ ಕಾರಣನೂ, ಧೈರ್ಯಗುಣಗಳಿಂದ ಅಧಿಕನೂ, ಪಿನಾಕ, ಪಾಶ, ಅಂಕುಶ, ಶೂಲಗಳನ್ನು ಹಿಡಿದವನೂ, ಕಪರ್ದವೆಂಬ ಜಟೆಯುಳ್ಳವನೂ, ಮೇಘಕ್ಕೆ ಸಮಾನವಾದ ಧ್ವನಿಯುಳ್ಳವನೂ, ಕಪ್ಪಾದ ಕತ್ತುಳ್ಳವನೂ, ಸ್ಫಟಿಕದಂತೆ ಪ್ರಕಾಶಿಸುವವನೂ, ಲೋಕಗಳಿಗೆ ಮುಖ್ಯಾಶ್ರಯನೂ ಆದ ಶಂಕರನನ್ನು ನಮಸ್ಕರಿಸುತ್ತೇನೆ.

೨೭. ಕಪಾಲಧಾರಿಯೂ, ಮಾಲಾಧಾರಿಯೂ, ಆದಿದೇವನೂ, ಜಟಾಧಾರಿಯೂ, ಭಯಂಕರವಾದ ಸರ್ಪಹಾರವುಳ್ಳವನಾಗಿ, ವಿರಾಜಿಸುವವನೂ, ಅನೇಕ ತಲೆ, ಶರೀರಗಳುಳ್ಳವನೂ ಆದ ಮಹೇಶ್ವರನನ್ನು ವಂದಿಸುತ್ತೇನೆ.

ಯದಕ್ಷರಂ ನಿರ್ಗುಣಮಪ್ರಮೇಯಂ
ಸಜ್ಜ್ಯೋತಿರೇಕಂ ಪ್ರವದಂತಿ ಸಂತಃ ।
ದೂರಂಗಮಂ ವೇದ್ಯಮನಿಂದ್ಯ ವಂದ್ಯಂ
ಸರ್ವೇಷು ಹೃತ್ಸ್ಥಂ ಪರಮಂ ಪವಿತ್ರಂ ॥ ೨೮ ॥

ತೇಜೋನಿಭಂ ಬಾಲಮೃಗಾಂಕಮೌಲಿಂ
ನಮಾಮಿ ರುದ್ರಂ ಸ್ಫುರದುಗ್ರವಕ್ತ್ರಂ ।
ಕಾಲೇಂಧನಂ ಕಾಮದಮಸ್ತಸಂಗಂ
ಧರ್ಮಾಸನಸ್ಥಂ ಪ್ರಕೃತಿದ್ವಯಸ್ಥಂ ॥ ೨೯ ॥

ಅತೀಂದ್ರಿಯಂ ವಿಶ್ವಭುಜಂ ಜಿತಾರಿಂ
ಗುಣತ್ರಯಾತೀತಮಜಂ ನಿರೀಹಂ ।
ತಮೋಮಯಂ ವೇದಮಯಂ ಚಿದಂಶಂ
ಪ್ರಜಾಪತೀಶಂ ಪುರುಹೂತಮಿಂದ್ರಂ ।
ಅನಾಗತೈಕಧ್ವನಿರೂಪಮಾದ್ಯಂ
ಧ್ಯಾಯಂತಿ ಯಂ ಯೋಗವಿದೋ ಯತೀಂದ್ರಾಃ॥೩೦॥

ಸಂಸಾರಪಾಶಚ್ಛಿದುರಂ ವಿಮುಕ್ತಃ
ಪುನಃ ಪುನಸ್ತ್ವಾಂ ಪ್ರಣಮಾಮಿ ದೇವಂ ॥ ೩೧ ॥

೨೮–೩೧. ಯಾವನನ್ನು ನಾಶರಹಿತನು, ನಿರ್ಗುಣನು ಅಪ್ರಮೇಯನು, ಕಾಂತಿಯುಳ್ಳವನು ಎಂದು ಸಜ್ಜನರು ಹೇಳುವರೋ; ಅಂತಹ ಜ್ಞೇಯನೂ, ಸಜ್ಜನ ವಂದ್ಯನೂ, ಸರ್ವರ ಹೃದಯದಲ್ಲಿರುವವನೂ, ಅತಿಪವಿತ್ರನೂ, ತೇಜಸ್ವಿನಂತಿರುವವನೂ. ಬಾಲಚಂದ್ರಮೌಳಿಯೂ, ಪ್ರಕಾಶಿಸುವ ಕ್ರೂರಮುಖವುಳ್ಳವನೂ, ಪ್ರಳಯಕಾಲವೆಂಬ ಕಟ್ಟಿಗೆಯುಳ್ಳವನೂ, ಕಾಮದಾಯಕನೂ, ವಿಷಯಸಂಗ ರಹಿತನೂ, ಧರ್ಮಾಸನದಲ್ಲಿರುವವನೂ, ಪ್ರಕೃತಿ ದ್ವಯಸ್ಥನೂ, ಇಂದ್ರಿಯಾಗೋಚರನೂ, ಸಮಸ್ತವನ್ನೂ ಭುಂಜಿಸುವವನೂ, ಶತ್ರುಗಳನ್ನು ಜಯಿಸಿದವನೂ, ಸತ್ವಾದಿ ಗುಣರಹಿತನೂ, ಉತ್ಪತ್ತಿಯಿಲ್ಲದವನೂ, ಆಶೆಯಿಲ್ಲದವನೂ, ತಮೋರೂಪನೂ, ವೇದಸ್ವರೂಪನೂ, ಚಿದ್ರೂಪನೂ, ಬ್ರಹ್ಮನಿಗೆ ಒಡೆಯನೂ, ದೇವೇಂದ್ರನೂ, ಭಾವಿಧ್ವನಿರೂಪನೂ, ಆದ್ಯನೂ ಆದ ಯಾವ ಮಹೇಶ್ವರನನ್ನು ಯೋಗಜ್ಞರಾದ ಯತಿವರ್ಯರು ಧ್ಯಾನಿಸುತ್ತಾರೊ, ಅಂತಹ ಸಂಸಾರ ಪಾಶವನ್ನು ನಿವಾರಿಸುವ ಮಹೇಶ್ವರ! ನಿನ್ನನ್ನು ವಂದಿಸುತ್ತೇನೆ.

ನಿರೂಪಮಾಸ್ಯಂ ಚ ಬಲಪ್ರಭಾವಂ
ನ ಚ ಸ್ವಭಾವಂ ಪರಮಸ್ಯ ಪುಂಸಃ ।
ವಿಜ್ಞಾಯತೇ ವಿಷ್ಣುಪಿತಾಮಹಾದ್ಯೈ-
ಸ್ತಂ ವಾಮದೇವಂ ಪ್ರಣಮಾಮ್ಯಚಿಂತ್ಯಂ ॥ ೩೨ ॥

ಶಿವಂ ಸಮಾರಾಧ್ಯ ತಮುಗ್ರಮೂರ್ತಿಂ
ಪಪೌ ಸಮುದ್ರಂ ಭಗವಾನಗಸ್ತ್ಯಃ ।
ಲೇಭೇ ದಿಲೀಪೋಽಪ್ಯಖಿಲಾಂಶ್ಚ ಕಾಮಾಂ-
ಸ್ತಂ ವಿಶ್ವಯೋನಿಂ ಶರಣಂ ಪ್ರಪದ್ಯೇ ॥ ೩೩ ॥

ದೇವೇಂದ್ರವಂದ್ಯೋದ್ಧರ ಮಾಮನಾಥಂ
ಶಂಭೋ ಕೃಪಾಕಾರುಣಿಕಃ ಕಿಲ ತ್ವಂ ।
ದುಃಖಾರ್ಣವೇ ಮಗ್ನಮುಮೇಶ ದೀನಂ
ಸಮುದ್ಧರ ತ್ವಂ ಭವ ಶಂಕರೋಽಸಿ ॥ ೩೪ ॥

ಸಂಪೂಜಯಂತೋ ದಿವಿ ದೇವಸಂಘಾ
ಬ್ರಹ್ಮೇಂದ್ರರುದ್ರಾ ವಿಹರಂತಿ ಕಾಮಂ ।
ತಂ ಸ್ತೌಮಿ ನೌಮೀಹ ಜಪಾಮಿ ಶರ್ವಂ
ವಂದೇಽಭಿವಂದ್ಯಂ ಶರಣಂ ಪ್ರಪನ್ನಃ ॥ ೩೫ ॥

---

೩೨. ಯಾವ ಶಂಕರನ ರೂಪ, ಮುಖ, ಸಾಮರ್ಥ್ಯ, ಸ್ವಭಾವಗಳನ್ನು ವಿಷ್ಣು ಬ್ರಹ್ಮಾದಿಗಳೂ ಅರಿಯುವುದಿಲ್ಲವೊ; ಅಂತಹ ಸುಂದರನಾದ ಶಂಕರನನ್ನು ವಂದಿಸುತ್ತೇನೆ.

೩೩–೩೪. ದೇವೇಂದ್ರನಿಂದ ವಂದಿತನಾದ ದಯಾಳುವಾದ ಓ ಶಂಕರ! ನೀನು ಅನಾಥನಾದ ನನ್ನನ್ನು ಉದ್ಧಾರಮಾಡು. ಉಮೇಶ! ಶಂಕರನಾದ ನೀನು ದುಃಖವೆಂಬ ಸಮುದ್ರದಲ್ಲಿ ಮುಳುಗಿದ ದೀನನಾದ ನನ್ನನ್ನು ಉದ್ಧರಿಸು. ಪೂಜ್ಯನಾದ ಅಗಸ್ತ್ಯನು ಶಿವನನ್ನಾರಾಧಿಸಿ ಉಗ್ರರೂಪವಾದ ಸಮುದ್ರವನ್ನು ಕುಡಿದನು. ದಿಲೀಪನು ಸಕಲೇಷ್ಟಗಳನ್ನು ಪಡೆದನು. ಅಂತಹ ಸಕಲಕ್ಕೂ ಕಾರಣನಾದ ಶಿವನನ್ನು ಮರೆ ಹೋಗುವೆನು.

೩೫. ದೇವಲೋಕದಲ್ಲಿ ಬ್ರಹ್ಮ, ಇಂದ್ರ, ರುದ್ರ ಮೊದಲಾದ ದಿವಿಜರು ಯಾವ ಶಂಕರನನ್ನು ಪೂಜಿಸುತ್ತ ಸ್ವೇಚ್ಛೆಯಾಗಿ ವಿಹರಿಸುತ್ತಿರುವರೊ; ಅಂತಹ ಶಂಕರನನ್ನು ಸ್ತುತಿಸುವೆನು; ವಂದಿಸುವೆನು; ಜಪಿಸುವೆನು; ಮರೆಹೋಗುವೆನು.

ಸ್ತುತ್ವೈವಮೀಶಂ ವಿರರಾಮ ಯಾವ
ತ್ತಾವತ್ಸ ರುದ್ರೋಽರ್ಕಸಹಸ್ರತೇಜಾಃ ।
ದದೌ ಚ ತಸ್ಮೈ ವರದೋಽನ್ಧಕಾರಿ
ರ್ವರತ್ರಯಂ ವೈಶ್ರವಣಾಯ ದೇವಃ ।
ಸಖ್ಯಂ ಚ ದಿಕ್ಪಾಲಪದಂ ಚತುರ್ಥಂ
ಧನಾಧಿಪತ್ಯಂ ಚ ದಿವೌಕಸಾಂ ಚ ॥ ೩೬ ॥
ಯಸ್ಮಾದತ್ರ ತ್ವಯಾ ಸಮ್ಯಙ್ನ್ಯಂಕುಮತ್ಯಾಸ್ತಟೇ ಶುಭೇ ।
ಆರಾಧಿತೋಽಹಂ ವಿಧಿವತ್ಕೃತ್ವಾ ಮೂರ್ತಿಂ ಮಹೀಮಯೀಂ ॥ ೩೭ ॥
ತಸ್ಮಾತ್ತವೈವ ನಾಮ್ನಾ ತತ್ಸ್ಥಾನಂ ಖ್ಯಾತಂ ಭವಿಷ್ಯತಿ ।
ಕುಬೇರನಗರೇತ್ಯೇವಂ ಮಮ ಪ್ರೀತಿಪ್ರದಾಯಕಂ ॥ ೩೮ ॥
ತ್ವಯಾ ಪ್ರತಿಷ್ಠಿತಂ ಲಿಂಗಮಸ್ಮಾತ್ಸ್ಥಾನಾಚ್ಚ ಪಶ್ಚಿಮೇ ।
ಉಮಾನಾಥಸ್ಯ ವಿಧಿವತ್ಸೋಮನಾಥೇತಿ ತತ್ಸ್ಮೃತಂ ॥ ೩೯ ॥
ಶ್ರೀಪಂಚಮ್ಯಾಂ ವಿಧಾನೇನ ಯಸ್ತಚ್ಚ ಪೂಜಯಿಷ್ಯತಿ ।
ಸಪ್ತಪುರುಷಾವಧಿರ್ಯಾವತ್ತಸ್ಯ ಲಕ್ಷ್ಮೀರ್ಭವಿಷ್ಯತಿ ॥ ೪೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕುಬೇರನಗರೋತ್ಪತ್ತಿ ಕುಬೇರಸ್ಥಾಪಿತಸೋಮನಾಥಮಾಹಾತ್ಮ್ಯ ವರ್ಣನಂ ನಾಮ
ನವತ್ಯುತ್ತರದ್ವಿಶತತಮೋಽಧ್ಯಾಯಃ

---

೩೬. ಅವನು ಹೀಗೆ ಸ್ತುತಿಸಿ ಸುಮ್ಮನಾಗಲು ಸಾವಿರಸೂರ್ಯರಂತೆ ತೇಜಸ್ಸುಳ್ಳ ಅಂಧಕಾರಾತಿಯಾದ ರುದ್ರನು ಆ ಕುಬೇರನಿಗೆ ದೇವತೆಗಳ ಸ್ನೇಹವನ್ನೂ, ನಾಲ್ಕನೆ ದಿಕ್ಪಾಲಪದವಿಯನ್ನೂ, ಧನಾಧಿಪತ್ಯವನ್ನೂ ವರವಾಗಿತ್ತನು.

೩೭–೩೮. ನೀನು ನ್ಯಂಕುಮತೀ ನದಿಯ ಮಂಗಳಕರವಾದ ದಡದಲ್ಲಿ ಮಣ್ಣಿನ ನನ್ನ ಪ್ರತಿಮೆಯನ್ನು ನಿರ್ಮಿಸಿ ವಿಧಿಯಂತೆ ಪೂಜಿಸಿದ್ದರಿಂದ ಆ ಸ್ಥಾನವು ನನಗೆ ಸಂತೋಷವನ್ನುಂಟುಮಾಡುತ್ತದೆ. ಕುಬೇರ ನಗರವೆಂದು ಅದು ನಿನ್ನ ಹೆಸರಿನಿಂದ ಪ್ರಸಿದ್ಧವಾಗುವುದು.

೩೯. ಈ ಸ್ಥಾನದ ಪಶ್ಚಿಮದಲ್ಲಿ ನೀನು ಪ್ರತಿಷ್ಠೆಮಾಡಿರುವ ಮಹೇಶ್ವರ ಲಿಂಗವು ಸೋಮನಾಥನೆಂದು ಪ್ರಸಿದ್ಧವಾಗುವುದು.

೪೦. ಶ್ರೀಪಂಚಮಿಯಂದು ಆ ಲಿಂಗವನ್ನು ವಿಧಿಯಂತೆ ಪೂಜಿಸಿದವನ ಸಂಪತ್ತು ಸಪ್ತ ಪುರುಷರವರೆಗೆ ಸ್ಥಿರವಾಗಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕುಬೇರನಗರೋತ್ಪತ್ತಿ ಕುಬೇರಸ್ಥಾಪಿತಸೋಮನಾಥಮಾಹಾತ್ಮ್ಯ ವರ್ಣನವೆಂಬ
ಇನ್ನೂರತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕನವತ್ಯುತ್ತರದ್ವಿಶತತಮೋಽಧ್ಯಾಯಃ

ಭದ್ರಕಾಲೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದುತ್ತರಭಾಗೇ ತು ಸ್ಥಾನಾತ್ಕೌಬೇರಸಂಜ್ಞಕಾತ್ ।
ಭದ್ರಕಾಲೀ ಮಹಾದೇವಿ ವಾಂಛಿತಾರ್ಥಪ್ರದಾಯಿನೀ ॥ ೧ ॥
ದಕ್ಷಯಜ್ಞಸ್ಯ ವಿಧ್ವಂಸೇ ವೀರಭದ್ರಸಮನ್ವಿತಾ ।
ಭದ್ರಕಾಲೀ ಮಹಾದೇವೀ ದಕ್ಷಯಜ್ಞವಿನಾಶಿನೀ ॥ ೨ ॥
ಚೈತ್ರೇ ಮಾಸಿ ತೃತೀಯಾಯಾಂ ದೇವೀಂ ತಾಂ ಯಸ್ತು ಪೂಜಯೇತ್ ।
ನವಕೋಟ್ಯಸ್ತು ಚಾಮುಂಡಾ ಭವಿಷ್ಯಂತಿ ಸುಪೂಜಿತಾಃ ।
ಸೌಭಾಗ್ಯಂ ವಿಜಯಂ ಚೈವ ತಸ್ಯ ಲಕ್ಷ್ಮೀರ್ಭವಿಷ್ಯತಿ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಭದ್ರಕಾಲೀಮಾಹಾತ್ಮ್ಯವರ್ಣನಂ ನಾಮ ಏಕನವತ್ಯುತ್ತರದ್ವಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಭದ್ರಕಾಲೀಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಆ ಕೌಬೇರ ನಗರದಿಂದ ಉತ್ತರ ದಿಕ್ಕಿನಲ್ಲಿ ಇಷ್ಟಾರ್ಥವನ್ನೀಯುವವಳೂ, ದಕ್ಷಯಜ್ಞ ವಿನಾಶದಲ್ಲಿ ವೀರಭದ್ರನಿಂದ ಸಹಿತಳೂ ಆದ ಭದ್ರಕಾಲಿಯು ನೆಲಸಿರುವಳು.

೩. ಚೈತ್ರಮಾಸದ ತದಿಗೆ ದಿನ ಆ ದೇವಿಯನ್ನು ಪೂಜಿಸಿದವನು ಒಂಬತ್ತು ಕೋಟಿ ಚಾಮುಂಡೆಯರನ್ನು ಪೂಜೆಮಾಡಿದವನಂತಾಗುವನು. ಅವನಿಗೆ ಸೌಭಾಗ್ಯ, ವಿಜಯ, ಸಂಪತ್ತುಗಳು ಉಂಟಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಭದ್ರಕಾಲೀಮಾಹಾತ್ಮ್ಯ ವರ್ಣನವೆಂಬ ಇನ್ನೂರ ತೊಂಬತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ದ್ವಿನವತ್ಯುತ್ತರದ್ವಿಶತತಮೋಽಧ್ಯಾಯಃ

ಭದ್ರಕಾಲೀಬಾಲಾರ್ಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದುತ್ತರಭಾಗೇ ತು ಸ್ಥಾನಾತ್ಕೌಬೇರಸಂಜ್ಞಕಾತ್ ।
ಭದ್ರಕಾಲೀ ಮಹಾದೇವಿ ತಪಃ ಕೃತ್ವಾ ಸುದುಸ್ತರಂ ॥ ೧ ॥
ರವಿಂ ಸಂಸ್ಥಾಪಯಾಮಾಸ ಭಕ್ತ್ಯಾ ಪರಮಯಾ ಯುತಾ ।
ರವಿವಾರೇಣ ಸಪ್ತಮ್ಯಾಂ ರಕ್ತಪುಷ್ಪಾನುಲೇಪನೈಃ ॥ ೨ ॥
ಯಸ್ತಂ ಪೂಜಯತೇ ಭಕ್ತ್ಯಾ ಕೋಟಿಯಜ್ಞಫಲಂ ಲಭೇತ್ ।
ಮುಚ್ಯತೇ ವಾತಪಿತ್ತೋತ್ಥೈ ರೋಗೈರನ್ಯೈಶ್ಚ ಪುಷ್ಕಲೈಃ ॥ ೩ ॥
ಅಶ್ವಸ್ತತ್ರೈವ ದಾತವ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಭದ್ರಕಾಲೀಬಾಲಾರ್ಕಮಾಹಾತ್ಮ್ಯವರ್ಣನಂ ನಾಮ
॥ ದ್ವಿನವತ್ಯುತ್ತರಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಭದ್ರಕಾಲೀಬಾಲಾರ್ಕಮಾಹಾತ್ಮ್ಯವರ್ಣನ

೧–೩. ಈಶ್ವರನು ಹೇಳುತ್ತಾನೆ :—ಆ ಕೌಬೇರಸ್ಥಾನದ ಉತ್ತರ ಭಾಗದಲ್ಲಿ ಭದ್ರಕಾಲಿಯು ಘೋರ ತಪಸ್ಸನ್ನಾಚರಿಸಿ ಅತಿ ಭಕ್ತಿಯಿಂದ ಸೂರ್ಯನನ್ನು ಪ್ರತಿಷ್ಠೆ ಮಾಡಿರುವಳು. ಭಾನುವಾರ ಸಪ್ತಮೀ ದಿನ ಕೆಂಪು ಹೂವು ಗಂಧಗಳಿಂದ ಆ ಸೂರ್ಯನನ್ನು ಭಕ್ತಿಯಿಂದ ಪೂಜಿಸಿದವನು ಕೋಟಿಯಜ್ಞಗಳ ಫಲವನ್ನು ಪಡೆದು ವಾತಪಿತ್ಥಗಳಿಂದುಂಟಾದ ರೋಗಗಳಿಂದ ಮುಕ್ತನಾಗುವನು.

೪. ಸಂಪೂರ್ಣ ಯಾತ್ರಾಫಲವನ್ನು ಬಯಸುವವರು ಅಲ್ಲಿ ಅಶ್ವವನ್ನು ದಾನ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಭದ್ರಕಾಲೀಬಾಲಾರ್ಕಮಾಹಾತ್ಮ್ಯ ವರ್ಣನವೆಂಬ
ಇನ್ನೂರತೊಂಬತ್ತೆರಡನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ತ್ರಿನವತ್ಯುತ್ತರದ್ವಿಶತತಮೋಽಧ್ಯಾಯಃ

ಕುಬೇರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದ್ವೈಶ್ರವಣಸ್ಥಾನಾನ್ನೈರ್ಋತ್ಯಾಂ ವರವರ್ಣಿನಿ ।
ಸ್ವಯಂ ಸ್ಥಿತಃ ಕುಬೇರಸ್ತು ಸರ್ವದಾರಿದ್ರ್ಯನಾಶನಃ ॥ ೧ ॥
ಮಕರಾದಿನಿಧಾನೈಸ್ತು ಅಷ್ಟಾಭಿಃ ಪರಿಭೂಷಿತಃ ।
ಪಂಚಮ್ಯಾಂ ಪೂಜಯೇದ್ಭಕ್ತ್ಯಾ ಗಂಧಪುಷ್ಪಾನುಲೇಪನೈಃ ।
ನಿಧಾನಪ್ರಾಪ್ತಿರತುಲಾ ನಿರ್ವಿಘ್ನಾ ತಸ್ಯ ಜಾಯತೇ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚ್ಯವನೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿನವತ್ಯುತ್ತರದ್ವಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕುಬೇರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಸುಂದರಿ! ಆ ವೈಶ್ರವಣಸ್ಥಾನದ ನೈರ್ಋತ್ಯ ದಿಕ್ಕಿನಲ್ಲಿ ಸಕಲ ದಾರಿದ್ರ್ಯವನ್ನು ನಾಶಗೊಳಿಸುವ ಕುಬೇರನು ಮಕರಾದ್ಯಷ್ಟ ನಿಧಿಗಳಿಂದ ಅಲಂಕೃತನಾಗಿ ನೆಲೆಸಿರುವನು. ಪಂಚಮಿಯ ದಿನ ಅವನನ್ನು ಗಂಧ, ಪುಷ್ಪ, ಅನುಲೇಪನ ದ್ರವ್ಯಗಳಿಂದ ಭಕ್ತಿಯಿಂದ ಪೂಜಿಸಿದವನಿಗೆ ನಿಧಿಯು ನಿರ್ವಿಘ್ನವಾಗಿ ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕುಬೇರಮಾಹಾತ್ಮ್ಯವರ್ಣನವೆಂಬ
ಇನ್ನೂರತೊಂಬತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ಣವತ್ಯುತ್ತರದ್ವಿಶತತಮೋಽಧ್ಯಾಯಃ

ಪುಷ್ಕರಮಾಹಾತ್ಮ್ಯೇ ಅಜೋಗಂಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೌಬೇರಾತ್ಪೂರ್ವಸಂಸ್ಥಿತಂ ।
ಗವ್ಯೂತಿಪಂಚಕೇ ದೇವಿ ಪುಷ್ಕರಂನಾಮ ನಾಮತಃ ।
ಯತ್ರ ಸಿದ್ಧೋ ಮಹಾದೇವಿ ಕೈವರ್ತೋ ಮತ್ಸ್ಯಘಾತಕಃ ॥ ೧ ॥

ದೇವ್ಯುವಾಚ :—

ಸವಿಸ್ತರಂ ಮಮ ಬ್ರೂಹಿ ಸ ಕಥಂ ಸಿದ್ಧಿಮಾಪ ವೈ ।
ಕಥಯಸ್ವ ಪ್ರಸಾದೇನ ದೇವದೇವ ಮಹೇಶ್ವರ ॥ ೨ ॥

ಈಶ್ವರ ಉವಾಚ :—

ಶೃಣು ತ್ವಂ ಯತ್ಪುರಾವೃತ್ತಂ ದೇವಿ ಸ್ವಾರೋಚಿಷೇಽನ್ತರೇ ।
ಆಸೀತ್ಕಶ್ಚಿದ್ದುರಾಚಾರಃ ಕೈವರ್ತೋ ಮತ್ಸ್ಯಘಾತಕಃ ॥ ೩ ॥
ಸ ಕದಾಚಿಚ್ಚರನ್ಪಾಪಃ ಪುಷ್ಕರೇ ತು ಜಗಾಮ ವೈ ।
ದದರ್ಶ ಶಾಂಕರಂ ವೇಶ್ಮ ಲತಾಪಾದಪಸಂಕುಲಂ ॥ ೪ ॥

ಕನ್ನಡದ ಅನುವಾದ

ಪುಷ್ಕರಮಾಹಾತ್ಮ್ಯೇ ಅಜೋಗಂಧೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಕುಬೇರ ಸ್ಥಾನಕ್ಕಿಂತ ಪೂರ್ವಕ್ಕೆ ಇಪ್ಪತ್ತುಮೈಲಿ ದೂರದಲ್ಲಿ ಪುಷ್ಕರವೆಂಬ ಕ್ಷೇತ್ರವಿರುವುದು. ಇಲ್ಲಿ ಮೀನನ್ನು ಕೊಲ್ಲುವ ಬೆಸ್ತನು ಸಿದ್ಧಿಯನ್ನು ಹೊಂದಿರುವನು.

೨. ದೇವಿಯು ಹೇಳುತ್ತಾಳೆ:—ಸ್ವಾಮಿ! ಆಬೆಸ್ತನು ಹೇಗೆ ಸಿದ್ಧಿಯನ್ನು ಹೊಂದಿದನು? ಇದನ್ನು ಅನುಗ್ರಹಿಸಿ ನನಗೆ ವಿಸ್ತಾರವಾಗಿ ಹೇಳು.

೩. ಈಶ್ವರನು ಹೇಳುತ್ತಾನೆ:—ದೇವಿ! ಕೇಳು. ಸ್ವಾರೋಚಿಷ ಮನ್ವಂತರದಲ್ಲಿ ಈ ಪುಷ್ಕರದಲ್ಲಿ ದುರಾಚಾರನಾದ ಬೆಸ್ತನೊಬ್ಬನಿದ್ದನು.

೪. ಅವನು ಒಂದಾನೊಂದು ದಿನ ಸಂಚರಿಸುತ್ತ ಪುಷ್ಕರ ಕ್ಷೇತ್ರಕ್ಕೆ ಹೋಗಿ ಲತೆ, ವೃಕ್ಷಗಳಿಂದ ಸಹಿತವಾದ ಶಿವಾಲಯವನ್ನು ನೋಡಿದನು.

ಸ ಮಾಘಮಾಸೇ ಶೀತಾರ್ತಃ ಕ್ಲಿನ್ನಜಾಲಸಮನ್ವಿತಃ ।
ಪ್ರಾಸಾದಮಾರುರೋಹಾರ್ತಃ ಸೂರ್ಯತಾಪಜಿಘೃಕ್ಷಯಾ ॥ ೫ ॥
ತತಃ ಸ ಕ್ಲಿನ್ನಜಾಲಂ ತಚ್ಛೋಷಣಾಯ ರವೇಃ ಕರೈಃ ।
ಪ್ರಾಸಾದಧ್ವಜದಂಡಾಗ್ರೇ ಸಂಪ್ರಸಾರಿತವಾಂಸ್ತದಾ ॥ ೬ ॥
ತತಃ ಪ್ರಾಸಾದತೋ ದೇವಿ ಜಾಡ್ಯಾತ್ಸಂಪತಿತಃ ಕ್ರಮಾತ್ ।
ಸ ಮೃತಃ ಸಹಸಾ ದೇವಿ ತಸ್ಮಿನ್ಕ್ಷೇತ್ರೇ ಶಿವಸ್ಯ ಚ ॥ ೭ ॥
ಜಾಲಂ ತಸ್ಯ ಪ್ರಭೂತೇನ ಜೀರ್ಣಂ ಕಾಲೇನ ಯತ್ತದಾ ।
ಧ್ವಜಾ ಬದ್ಧಾ ಯತೋ ಜಾಲೈಃ ಪ್ರಾಸಾದೇ ಸಾ ಶುಭೇಽಭವತ್ ॥ ೮ ॥
ತತೋಽಸೌ ಧ್ವಜಮಾಹಾತ್ಮ್ಯಜ್ಜಾತೋಽವನ್ಯಾಂ ನರಾಧಿಪಃ ।
ಋತಧ್ವಜೇತಿ ವಿಖ್ಯಾತಃ ಸೌರಾಷ್ಟ್ರವಿಷಯೇ ಸುಧೀಃ ।
ಸ ಹಿ ಸ್ಫೂರ್ಜದ್ಧ್ವಜಾಗ್ರೇಣ ರಥೇನ ಪರ್ಯಟನ್ಮಹೀಂ ॥ ೯ ॥
ಕಾಮಭೋಗಾಭಿಭೂತಾತ್ಮಾ ರಾಜ್ಯಂ ಚಕ್ರೇ ಪ್ರತಾಪವಾನ್ ।
ತತೋಽಸೌ ಭವನೇ ಶಂಭೋರ್ದದೌ ಶೋಭಾಸಮನ್ವಿತಾಂ ।
ಧ್ವಜಾಂ ಶುಭ್ರಾಂ ವಿಚಿತ್ರಾಂ ಚ ನಾನ್ಯತ್ಕಿಂಚಿದಪಿ ಪ್ರಭುಃ ॥ ೧೦ ॥

---

೫. ಅವನು ಮಾಘ ಮಾಸದಲ್ಲಿ ಶೀತದಿಂದ ಪೀಡಿತನಾಗಿ ಒದ್ದೆಯಾದ ಬಲೆಯೊಡನೆ ಬಿಸಿಲಿಗಾಗಿ ಮಹಡಿಯನ್ನು ಹತ್ತಿದನು.

೬. ತರುವಾಯ ಅವನು ಸೂರ್ಯನ ಬಿಸಿಲಿನಲ್ಲಿ ಒದ್ದೆಯಾದ ಆ ಬಲೆಯನ್ನು ಒಣಗಿಸುವುದಕ್ಕಾಗಿ ಮಹಡಿಯ ಮೇಲಿರುವ ಧ್ವಜದಂಡದ ಮೇಲೆ ಹರವಿದನು.

೭. ಅನಂತರ ಶೈತ್ಯ ಪೀಡಿತನಾದ ಅವನು ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದು ಆ ಶಿವಕ್ಷೇತ್ರದಲ್ಲಿ ಮೃತನಾದನು.

೮–೧೦. ಅವನ ಬಲೆಯು ಬಹುಕಾಲದ ಮೇಲೆ ಹಾಳಾಯಿತು. ಅವನು ಧ್ವಜಕ್ಕೆ ಬಲೆಯನ್ನು ಕಟ್ಟಿದ ಕಾರಣ ಆ ಧ್ವಜದ ಮಾಹಾತ್ಮ್ಯದಿಂದ ಭೂಮಿಯಲ್ಲಿ ಸೌರಾಷ್ಟ್ರ ದೇಶದಲ್ಲಿ ಋತಧ್ವಜನೆಂಬ ದೊರೆಯಾಗಿ ಜನಿಸಿದನು. ಅವನು ಪ್ರಕಾಶಮಾನವಾದ ಧ್ವಜವುಳ್ಳರಥದಿಂದ ಭೂಮಿಯಲ್ಲಿ ಸಂಚರಿಸುತ್ತ ಕಾಮಭೋಗಾಕ್ರಾಂತನಾಗಿ ರಾಜ್ಯವನ್ನು ಸ್ಥಾಪಿಸಿದನು. ತರುವಾಯ ಅವನು ಶಿವಾಲಯದಲ್ಲಿ ಪ್ರಕಾಶಿಸುತ್ತಿರುವ ನಾನಾ ವರ್ಣದ ಧ್ವಜವನ್ನು ಮಾತ್ರ ಕಂಡನು. ಬೇರೆ ಏನನ್ನೂ ಕಾಣಲಿಲ್ಲ.

ತತೋ ಜಾತಿಸ್ಮರೋ ರಾಜಾ ಪ್ರಭಾಸಕ್ಷೇತ್ರಮಾಗತಃ ।
ದದರ್ಶ ತತ್ರಾಯತನಂ ಧ್ವಜಜಾಲಸಮನ್ವಿತಂ ॥ ೧೧ ॥
ಅಜೋಗಂಧಸ್ಯ ದೇವಸ್ಯ ಪೂರ್ವಮಾರಾಧಿತಸ್ಯ ಚ ।
ಪ್ರಾಸಾದಂ ಕಾರಯಾಮಾಸ ಶಿವೋಪಕರಣಾನಿ ಚ ॥ ೧೨ ॥
ನಿತ್ಯಂ ಪೂಜಯತೇ ಭಕ್ತ್ಯಾ ತಲ್ಲಿಂಗಂ ಪಾಪನಾಶನಂ ।
ದಶವರ್ಷಸಹಸ್ರಾಣಿ ರಾಜ್ಯಂ ಚಕ್ರೇ ಮಹಾಮನಾಃ ॥ ೧೩ ॥
ತಲ್ಲಿಂಗಸ್ಯ ಪ್ರಭಾವೇನ ತತಃ ಕಾಲಾದ್ದಿವಂ ಗತಃ ।
ತಸ್ಮಾತ್ತತ್ರ ಪ್ರಯತ್ನೇನ ಗತ್ವಾ ಲಿಂಗಂ ಪ್ರಪೂಜಯೇತ್ ॥ ೧೪ ॥
ಸ್ನಾತ್ವಾ ಪಶ್ಚಿಮತಃ ಕುಂಡೇ ಪುಷ್ಕರೇ ಪಾಪತಸ್ಕರೇ ।
ಯತ್ರ ಬ್ರಹ್ಮಾಽಯಜತ್ಪೂರ್ವಂ ಯಜ್ಞೈರ್ವಿಪುಲದಕ್ಷಿಣೈಃ ॥ ೧೫ ॥
ಸಮಾಹೂಯ ಚ ತೀರ್ಥಾನಿ ಪುಷ್ಕರಾತ್ತತ್ರ ಭಾಮಿನಿ ।
ತಸ್ಮಿನ್ಕುಂಡೇ ತು ವಿನ್ಯಸ್ಯ ಅಜೋಗಂಧಸಮೀಪತಃ ।
ಪ್ರತಿಷ್ಠಾಪ್ಯ ಮಹಾದೇವಿ ಕುಂಡೇ ಪಾತಕನಾಶನೇ ।
ಸೌವರ್ಣಂ ಕಮಲಂ ತತ್ರ ದದ್ಯಾದ್ಬ್ರಾಹ್ಮಣಪುಂಗವೇ ॥ ೧೭ ॥

---

೧೧. ಅನಂತರ ಆ ರಾಜನು ಪೂರ್ವಜನ್ಮದ ಸ್ಮರಣೆಯಿಂದ ಪ್ರಭಾಸಕ್ಷೇತ್ರಕ್ಕೆ ಬಂದು ಧ್ವಜಗಳಿಂದ ಕೂಡಿದ ಶಿವಾಲಯವನ್ನು ಕಂಡನು.

೧೨. ಅವನು ತಾನು ಹಿಂದೆ ಪೂಜಿಸಿದ ಅಜೋಗಂಧನಿಗೆ ಆಲಯವನ್ನೂ ಪೂಜಾ ಸಾಮಗ್ರಿಗಳನ್ನೂ ಮಾಡಿಸಿದನು.

೧೩. ಪ್ರಾಜ್ಞನಾದ ಅವನು ನಿತ್ಯವೂ ಆ ಲಿಂಗವನ್ನು ಪೂಜಿಸುತ್ತ ಹತ್ತು ಸಾವಿರ ವರ್ಷಗಳಕಾಲ ರಾಜ್ಯವನ್ನಾಳಿದನು.

೧೪–೧೬. ಬಳಿಕ ಆ ಲಿಂಗದ ಮಾಹಾತ್ಮ್ಯದಿಂದ ಕಾಲಾಂತರದಲ್ಲಿ ಸ್ವರ್ಗಕ್ಕೆ ತೆರಳಿದನು. ಆದ್ದರಿಂದ ಅಲ್ಲಿ ಪ್ರಯತ್ನದಿಂದ ಹೋಗಿ ಪಶ್ಚಿಮದಲ್ಲಿರುವ ಪುಷ್ಕರವೆಂಬ ಕುಂಡದಲ್ಲಿ ಮಿಂದು ಲಿಂಗವನ್ನು ಪೂಜಿಸಬೇಕು. ಬ್ರಹ್ಮನು ಅಲ್ಲಿ ಹಿಂದೆ ಅಜೋಗಂಧನೆಂಬ ಮಹಾಲಿಂಗವನ್ನು ಪ್ರತಿಷ್ಠೆಮಾಡಿ ಪುಷ್ಕರ ಕ್ಷೇತ್ರದಿಂದ ತೀರ್ಥಗಳನ್ನು ತಂದು ಆ ಲಿಂಗದ ಹತ್ತಿರದಲ್ಲಿರುವ ಕುಂಡದಲ್ಲಿರಿಸಿ ಬಹು ದಕ್ಷಿಣೆ ಯಿಂದ ಮಾಡಲರ್ಹವಾದ ಯಜ್ಞವನ್ನು ಮಾಡಿದನು.

೧೭. ಮಹಾದೇವಿ ! ಪಾಪವನ್ನು ಪರಿಹರಿಸುವ ಆ ತ್ರಿಪುಷ್ಕರ ಕುಂಡದಲ್ಲಿ ಸುವರ್ಣ ಕಮಲವನ್ನು ಬ್ರಾಹ್ಮಣೋತ್ತಮನಿಗೆ ದಾನಮಾಡಬೇಕು.

ದೇವಂ ಸಂಪೂಜ್ಯ ವಿಧಿವದ್ಗಂಧಪುಷ್ಪಾಕ್ಷತಾದಿಭಿಃ ।
ಮುಚ್ಯತೇ ಪಾತಕೈಃ ಸರ್ವೈಃ ಸಪ್ತಜನ್ಮಾರ್ಜಿತೈರಪಿ ॥ ೧೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪುಷ್ಕರಮಾಹಾತ್ಮ್ಯೇಽಚೋಗಂಧೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುರ್ಣತ್ಯುತ್ತರದ್ವಿಶತತಮೋಽಧ್ಯಾಯಃ ॥

---

೧೮. ಆ ಮಹೇಶ್ವರ ಲಿಂಗವನ್ನು ಗಂಧ, ಪುಷ್ಪ, ಅಕ್ಷತಾದಿಗಳಿಂದ ವಿಧಿಯಂತೆ ಪೂಜಿಸಿದವನು ಏಳು ಜನ್ಮಗಳಲ್ಲಿ ಮಾಡಿದ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಪುಷ್ಕರಮಾಹಾತ್ಮ್ಯೇಽಜೋಗಂಧೇಶ್ವರಮಾಹಾತ್ಮ್ಯವರ್ಣನವೆಂಬ
ಇನ್ನೂರತ್ತೊಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚನವತ್ಯುತ್ತರದ್ವಿಶತತಮೋಽಧ್ಯಾಯಃ

ಚಂದ್ರೋದಕತೀರ್ಥಮಾಹಾತ್ಮ್ಯ–ಇಂದ್ರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದೀಶಾನದಿಗ್ಭಾಗೇ ಇಂದ್ರಸ್ಥಾನಮನುತ್ತಮಂ ।
ಗವ್ಯೂತಿಪಂಚಮಾತ್ರೇಣ ಯತ್ರ ಚಂದ್ರಸರಃ ಪ್ರಿಯೇ ॥ ೧ ॥
ತಸ್ಮಾದುತ್ತರದಿಗ್ಭಾಗೇ ನಾತಿದೂರೇ ವ್ಯವಸ್ಥಿತಂ ।
ಯತ್ರ ಚಂದ್ರೋದಕಂ ದೇವಿ ಜರಾದಾರಿದ್ರ್ಯನಾಶನಂ ॥ ೨ ॥
ಚಂದ್ರಾನುವೃದ್ಧ್ಯಾ ತದ್ವೃದ್ಧಿಃ ಕ್ಷಯಸ್ತತ್ಸಂಕ್ಷಯೇ ಭವೇತ್ ।
ತಸ್ಮಿನ್ಪಾಪಯುಗೇಽಪ್ಯೇವಂ ಕದಾಚಿತ್ಸಂಪ್ರದೃಶ್ಯತೇ ॥ ೩ ॥
ತತ್ರ ಸ್ನಾತ್ವಾ ಮಹಾದೇವಿ ಯದಿ ಪಾಪಸಹಸ್ರಕಂ ।
ಕೃತಂ ಸೋಽತ್ರ ಸಮಾಯಾತಿ ನಾತ್ರ ಕಾರ್ಯಾ ವಿಚಾರಣಾ ॥ ೪ ॥
ತತ್ರಾಹಲ್ಯಾಪ್ರಸಂಗೋತ್ಥಮಹಾಪಾತಕಭೀರುಣಾ ।
ಗೌತಮೋದ್ಭವಶಾಪೇನ ವಿಲಕ್ಷ್ಯೀಕೃತಚೇತಸಾ ॥ ೫ ॥

ಕನ್ನಡದ ಅನುವಾದ

ಚಂದ್ರೋದಕತೀರ್ಥಮಾಹಾತ್ಮ್ಯ–ಇಂದ್ರೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಪ್ರಿಯಳೆ! ಆ ಅಜೋಗಂಧೇಶ್ವರನ ಈಶಾನ್ಯ ದಿಕ್ಕಿನಲ್ಲಿ ಇಂದ್ರಸ್ಥಾನವಿರುವುದು. ಅಲ್ಲಿಂದ ಇಪ್ಪತ್ತು ಮೈಲಿ ದೂರದಲ್ಲಿ ಉತ್ತರ ದಿಕ್ಕಿನಲ್ಲಿ ಚಂದ್ರ ಸರೋವರವಿರುವುದು. ಈ ಸರಸ್ಸಿನ ನೀರು ಮುಪ್ಪು ಬಡತನಗಳನ್ನು ನೀಗಿಸುವುದು.

೩. ಅಲ್ಲಿ ನೀರು ಚಂದ್ರನ ವೃದ್ಧಿಯಿಂದ ಹೆಚ್ಚುವುದು. ಅವನ ಕ್ಷಯಕಾಲದಲ್ಲಿ ಕ್ಷಯಿಸುವುದು. ಅದು ಈ ಪಾಪಯುಗದಲ್ಲಿಯೂ ಕಾಣಿಸುವುದು.

೪. ಮಹಾದೇವಿ! ಅಲ್ಲಿ ಮಿಂದರೆ ಅನೇಕ ಪಾಪಗಳನ್ನೆಸಗಿದ್ದರೂ ಅವು ನಾಶವಾಗುವುವು. ಸಂದೇಹವಿಲ್ಲ.

೫–೬. ಅಲ್ಲಿ ಇಂದ್ರನು ಹಿಂದೆ ಅಹಲ್ಯೆಯ ಸಂಗವಿಂದ ಕುಪಿತನಾದ ಗೌತಮನಿಂದ ಶಾಪವನ್ನು ಹೊಂದಿ ಲಜ್ಜೆಗೊಂಡು ಸಕಲ ಪಾಪವನ್ನು ನಿವಾರಿಸುವ ಇಂದ್ರೇ

ಇಂದ್ರೇಣ ಚ ಪುರಾ ದೇವಿ ಇಷ್ಟಂ ವಿಪುಲದಕ್ಷಿಣೈಃ ।
ತತ್ರ ವರ್ಷಸಹಸ್ರಾಣಿ ಸಂಸ್ಥಾಪ್ಯ ಶಿವಮೀಶ್ವರಂ ।
ಇಂದ್ರೇಶ್ವರೇತಿ ನಾಮ್ನಾ ವೈ ಸರ್ವಪಾತಕನಾಶನಂ ॥ ೬ ॥
ಚಂದ್ರತೀರ್ಥೇ ನರಃ ಸ್ನಾತ್ವಾ ಸಂತರ್ಪ್ಯ ಪಿತೃದೇವತಾಃ ।
ಇಂದ್ರೇಶ್ವರಂ ಚ ಸಂಪೂಜ್ಯ ಮುಚ್ಯತೇ ನಾತ್ರ ಸಂಶಯಃ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಂದ್ರೋದಕತೀರ್ಥಮಾಹಾತ್ಮ್ಯೇ ಇಂದ್ರೇಶ್ವರಮಾಹಾತ್ಮ್ಯವರ್ಣನಂನಾಮ
। ಪಂಚನವತ್ಯುತ್ತರದ್ವಿಶತತಮೋಽಧ್ಯಾಯಃ ॥

ಶ್ವರನೆಂಬ ಶಿವಲಿಂಗವನ್ನು ಅಲ್ಲಿ ಸ್ಥಾಪಿಸಿ ಸಾವಿರ ವರ್ಷಗಳಕಾಲ ಅತಿಶಯ ದಕ್ಷಿಣೆಗಳಿಂದ ಸಾಧ್ಯವಾದ ಯಜ್ಞವನ್ನು ಮಾಡಿದನು.

೭. ಮನುಷ್ಯನು ಚಂದ್ರತೀರ್ಥದಲ್ಲಿ ಮಿಂದು ಪಿತೃದೇವತೆಗಳಿಗೆ ತರ್ಪಣಮಾಡಿ ಇಂದ್ರೇಶ್ವರನನ್ನು ಪೂಜಿಸಿದರೆ ಪಾಪಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಂದ್ರೋದಕತೀರ್ಥ-ಇಂದ್ರೇಶ್ವಮಾಹಾತ್ಮ್ಯವರ್ಣನವೆಂಬ
ಇನ್ನೂರತೊಂಬತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಣ್ಣವತ್ಯುತ್ತರದ್ವಿಶತತಮೋಽಧ್ಯಾಯಃ

ಋಷಿತೋಯಾನದೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದಾಗ್ನೇಯದಿಗ್ಭಾಗೇ ಗವ್ಯೂತಿಸಪ್ತಕೇನ ಚ ।
ಸ್ಥಾನಂ ದೇವಕುಲಂನಾಮ ದೇವಾನಾಂ ಯತ್ರ ಸಂಗಮಃ ॥ ೧ ॥

ಋಷೀಣಾಂ ಯತ್ರ ಸಿದ್ಧಾನಾಂ ಪುರಾ ಲಿಂಗೇ ನಿಪಾತಿತೇ ।
ಯಸ್ಮಾಜ್ಜಾತೋ ಮಹಾದೇವಿ ತಸ್ಮಾದ್ದೇವಕುಲಂ ಸ್ಮೃತಂ ॥ ೨ ॥

ತಸ್ಯ ಪಶ್ಚಿಮದಿಗ್ಭಾಗ ಋಷಿತೋಯಾ ಮಹಾನದೀ ।
ಋಷೀಣಾಂ ವಲ್ಲಭಾ ದೇವಿ ಸರ್ವಪಾತಕನಾಶಿನೀ ॥ ೩ ॥

ತತ್ರ ಸ್ನಾತ್ವಾ ನರಃ ಸಮ್ಯಕ್ಪಿತ್ರೂಣಾಂ ನಿರ್ವಪೇನ್ನರಃ ।
ಸಪ್ತವರ್ಷಾಯುತಾನ್ಯೇವ ಪಿತ್ರೂಣಾಂ ತೃಪ್ತಿಮಾವಹೇತ್ ॥ ೪ ॥

ಕನ್ನಡದ ಅನುವಾದ

ಋಷಿತೋಯಾನದೀಮಾಹಾತ್ಮ್ಯವರ್ಣನ

೧ ಈಶ್ವರನು ಹೇಳುತ್ತಾನೆ:—ಆ ಇಂದ್ರೇಶ್ವರನ ಆಗ್ನೇಯ ದಿಕ್ಕಿನಲ್ಲಿ ಇಪ್ಪತ್ತೆಂಟು ಮೈಲಿ ದೂರದಲ್ಲಿ ದೇವತೆಗಳು ಒಟ್ಟಿಗೆ ಸೇರಿರುವ ದೇವಕುಲವೆಂಬ ಸ್ಥಳವಿರುವುದು.

೨. ಮಹಾದೇವಿ! ಇಲ್ಲಿ ಸಿದ್ಧರಾದ ಮುನಿಗಳ ಲಿಂಗವು ಕೆಳಗೆ ಬೀಳಲು ಈ ಸ್ಥಾನವುಂಟಾದ್ದರಿಂದ ಇದಕ್ಕೆ ದೇವಕುಲವೆಂದು ಹೆಸರಾಯಿತು.

೩. ಅದರ ಪಶ್ಚಿಮದಲ್ಲಿ ಋಷಿಗಳಿಗೆ ಪ್ರಿಯವಾದ ಸಕಲ ಪಾಪಗಳನ್ನು ನಿವಾರಿಸುವ ಋಷಿತೋಯಾ ಎಂಬ ನದಿಯಿರುವುದು.

೪. ಮನುಷ್ಯನು ಅಲ್ಲಿ ಮಿಂದು ಪಿತೃಗಳಿಗೆ ತರ್ಪಣಮಾಡಬೇಕು. ಅದರಿಂದ ಎಪ್ಪತ್ತು ಸಾವಿರ ವರ್ಷಕಾಲ ಪಿತೃಗಳು ತೃಪ್ತಿಯನ್ನು ಹೊಂದುವರು.

ಸುವರ್ಣಂ ತತ್ರ ದೇಯಂ ತು ಅಜಿನಂ ಕಂಬಲಂ ತಥಾ ।
ಆಷಾಢೇ ತ್ವಮಾವಾಸ್ಯಾಯಾಂ ಯತ್ಕಿಂಚಿದ್ದೀಯತೇ ಧ್ರುವಂ ॥ ೫ ॥
ವರ್ಧತೇ ಷೋಡಶಗುಣಂ ಯಾವದಾಯಾತಿ ಪೂರ್ಣಿಮಾ ॥ ೬ ॥
ಸುವರ್ಣಂ ತತ್ರ ದೇಯಂ ತು ಅಜಿನಂ ಕಂಬಲಂ ತಥಾ ।
ಮುಚ್ಯತೇ ಪಾತಕೈಃ ಸರ್ವೈಃ ಸಪ್ತಜನ್ಮಕೃತೈರಪಿ ॥ ೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಋಷಿತೋಯಾನದೀಮಾಹಾತ್ಮ್ಯ ವರ್ಣನಂನಾಮ
॥ ಷಣ್ಣವತ್ಯುತ್ತರದ್ವಿಶತತಮೋಽಧ್ಯಾಯಃ ॥

೫-೭. ಅಲ್ಲಿ ಚಿನ್ನ, ಕೃಷ್ಣಾಜಿನಗಳನ್ನು ದಾನಮಾಡಬೇಕು. ಆಷಾಢ ಬಹುಳ ಅಮಾವಾಸ್ಯೆದಿನ ಅಲ್ಲಿ ದಾನಮಾಡಿದುದು ಹದಿನಾರರಷ್ಟು ವೃದ್ಧಿಗೊಳ್ಳುವುದು. ಹುಣ್ಣಿಮೆದಿನ ಅಲ್ಲಿ ಚಿನ್ನ, ಕೃಷ್ಣಾಜಿನಗಳನ್ನು ದಾನಮಾಡಿದವನು ಏಳು ಜನ್ಮಗಳಲ್ಲಿ ಮಾಡಿದ ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಋಷಿತೋಯಾನದೀಮಾಹಾತ್ಮ್ಯ ವರ್ಣನವೆಂಬ
ಇನ್ನೂರತ್ತೊಂಬತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತನವತ್ಯುತ್ತರದ್ವಿಶತತಮೋऽಧ್ಯಾಯಃ

ಋಷಿತೋಯಾಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ದೇವದೇವ ಜಗನ್ನಾಥ ಸಂಸಾರಾರ್ಣವತಾರಕ ।
ಸವಿಸ್ತರಂ ತು ಮೇ ಬ್ರೂಹಿ ಋಷಿತೋಯಾಮಹೋದಯಂ ॥ ೧ ॥
ಋಷಿತೋಯೇತಿ ತನ್ನಾಮ ಕಥಂ ಖ್ಯಾತಂ ಧರಾತಲೇ ।
ಕಥಂ ಸಾ ಪುನರಾಯಾತಾ ದೇವದಾರುವನೇ ಶುಭೇ ॥ ೨ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಸಾವಧಾನಾ ವಚೋ ಮಮ ।
ಮಾಹಾತ್ಮ್ಯಮೃಷಿತೋಯಾಯಾಃ ಸರ್ವಪಾತಕನಾಶನಂ ॥ ೩ ॥
ದೇವದಾರುವನೇ ಪುಣ್ಯೇ ಋಷಯಸ್ತಪಸಾ ಯುತಾಃ ।
ನಿವಸಂತಿ ವರಾರೋಹೇ ಶತಶೋऽಥ ಸಹಸ್ರಶಃ ॥ ೪ ॥

ಕನ್ನಡದ ಅನುವಾದ

ಋಷಿತೋಯಾಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ ;—ಜಗದೊಡೆಯನೂ, ಸಂಸಾರವೆಂಬ ಸಮುದ್ರವನ್ನು ದಾಟಿಸುವನೂ ಆದ ಓ ದೇವ ! ಋಷಿತೋಯಾ ನದಿಯ ಮಾಹಾತ್ಮ್ಯವನ್ನು ನನಗೆ ಹೇಳು.

೨. ಭೂಮಿಯಲ್ಲಿ ಆ ನದಿಗೆ ಋಷಿತೋಯಾ ನದಿಯೆಂದು ಹೆಸರಾಗಲು ಕಾರಣವೇನು. ಆ ನದಿಯು ಮರಳಿ ದೇವದಾರುವನಕ್ಕೆ ಹೇಗೆ ಬಂದಿತು.

೩. ಈಶ್ವರನು ಹೇಳುತ್ತಾನೆ :—ದೇವಿ ! ಋಷಿತೋಯಾನದಿಯು ಸಕಲ ಪಾಪಗಳನ್ನು ನಿವಾರಿಸುವ ಮಾಹಾತ್ಮ್ಯವನ್ನು ಹೇಳುವೆನು. ಸಾವಧಾನ ಮನಸಿನಿಂದ ಕೇಳು.

೪. ಸುಂದರಿ ! ತಪಸ್ವಿಗಳಾದ ಸಾವಿರಾರು ಮಂದಿ ಮುನಿಗಳು ಪುಣ್ಯಕರವಾದ ದೇವ ದಾರುವನದಲ್ಲಿ ವಾಸಮಾಡುತ್ತಾರೆ.

ತೇಷಾಂ ನಿವಸತಾಂ ತತ್ರ ಬಹುಕಾಲೋ ಗತಃ ಪ್ರಿಯೇ ।
ಪುತ್ರಪೌತ್ರೈಃ ಪ್ರವೃದ್ಧಾಸ್ತೇ ದಾರುಕಂ ವ್ಯಾಪ್ಯ ಸಂಸ್ಥಿತಾಃ ॥ ೫ ॥
ತೇ ಸರ್ವೇ ಚಿಂತಯಾಮಾಸುಃ ಸಮೇತ್ಯ ಚ ಪರಸ್ಪರಂ ।
ಸರಸ್ವತೀ ಮಹಾಪುಣ್ಯಾ ಶಿರಸ್ಯಾಧಾಯ ವಾಡವಂ ॥ ೬ ॥
ಪ್ರಭಾಸಂ ಚಿರಕಾಲೇನ ಕ್ಷೇತ್ರಂ ಚೈವ ಗಮಿಷ್ಯತಿ ।
ವಾಪೀಕೂಪತಡಾಗಾದಿ ಮುಕ್ತ್ವಾ ಸಾಗರಗಾಮಿನೀಂ ॥ ೭ ॥
ನಾಹ್ಲಾದಂ ಕುರುತೇ ಚೇತಃ ಸ್ನಾನದಾನಜಪೇಷು ಚ ।
ಬ್ರಹ್ಮಾಣಂ ಪ್ರಾರ್ಥಯಿಷ್ಯಾಮೋ ಗತ್ವಾ ಬ್ರಹ್ಮನಿಕೇತನಂ ॥ ೮ ॥

ಈಶ್ವರ ಉವಾಚ :—

ಏವಂ ನಿಮಂತ್ರ್ಯ ತೇ ಸರ್ವೇ ಋಷಯಸ್ತಪಸೋಜ್ಜ್ವಲಾಃ ।
ಗತಾಸ್ತೇ ಬ್ರಹ್ಮಲೋಕಂ ತು ದ್ರಷ್ಟುಂ ದೇವಂ ಪಿತಾಮಹಂ ।
ತುಷ್ಟುವುರ್ವಿವಿಧೈಃ ಸ್ತೋತ್ರೈರ್ಬ್ರಹ್ಮಾಣಂ ಕಮಲೋದ್ಭವಂ ॥ ೯ ॥

ಋಷಯ ಊಚುಃ :—

ನಮಃ ಪ್ರಣವರೂಪಾಯ ವಿಶ್ವಕರ್ತ್ರೇ ನಮೋನಮಃ ।
ತಥಾ ವಿಶ್ವಸ್ಯ ಕಿರತ್ರೇ ನಮೋಽಸ್ತು ಪರಮಾತ್ಮನೇ ॥ ೧೦ ॥

---

೫. ಪ್ರಿಯಳೆ! ಅವರು ಅಲ್ಲಿ ವಾಸಿಸುತ್ತಿರಲು ಬಹುಕಾಲವು ಕಳೆಯಿತು. ಪುತ್ರ ಪೌತ್ರರಿಂದ ವೃದ್ಧಿಗೊಂಡ ಅವರು ದೇವದಾರುವನವನ್ನು ಸುತ್ತಲೂ ವ್ಯಾಪಿಸಿ ನೆಲಸಿದ್ದರು.

೬–೮. "ಅವರುಅತಿ ಪವಿತ್ರಳಾದ ಸರಸ್ವತೀ ನದಿಯು ವಾಡವಾಗ್ನಿಯನ್ನು ತಲೆಯಲ್ಲಿಟ್ಟುಕೊಂಡು ಪ್ರಭಾಸಕ್ಷೇತ್ರಕ್ಕೆ ಹೋಗುವಳು. ಸಾಗರವನ್ನು ಸೇರುವ ಆ ನದಿಯನ್ನು ಬಿಟ್ಟು ಉಳಿದ ವಾಪೀ ಕೂಪ ತಟಾಕಾದಿಗಳು .ಸ್ನಾನ, ದಾನ, ಜಪಗಳಲ್ಲಿ ನಮಗೆ ಆನಂದವನ್ನುಂಟುಮಾಡುವುದಿಲ್ಲ ಆದ್ದರಿಂದ ಬ್ರಹ್ಮಲೋಕಕ್ಕೆ ಹೋಗಿ ಪಿತಾಮಹನನ್ನು ಪ್ರಾರ್ಥಿಸೋಣ". ಎಂದು ಅವರೆಲ್ಲ ಒಟ್ಟುಗೂಡಿ ಪರಸ್ಪರ ಆಲೋಚಿಸಿದರು.

೯. ಈಶ್ವರನು ಹೇಳುತ್ತಾನೆ :—ತಪಸ್ಸಿನಿಂದ ವಿರಾಜಮಾನರಾದ ಆ ಮುನಿಗಳು ಹೀಗೆ ಆಲೋಚಿಸಿ ಬ್ರಹ್ಮನನ್ನು ನೋಡುವುದಕ್ಕಾಗಿ ಬ್ರಹ್ಮಲೋಕಕ್ಕೆ ತೆರಳಿ ಅವನನ್ನು ಬಗೆಬಗೆಯ ಸ್ತೋತ್ರಗಳಿಂದ ಸ್ತುತಿಸಿದರು.

೧೦. ಋಷಿಗಳು ಹೇಳುತ್ತಾರೆ :—ಪ್ರಣವ ಸ್ವರೂಪನೂ, ಪ್ರಪಂಚಸೃಷ್ಟಿಕರ್ತನೂ, ಸಮಸ್ತ ರಕ್ಷಕನೂ ಆದ ಪರಮಾತ್ಮ! ನಿನಗೆ ನಮಸ್ಕಾರವು.

ತಥಾ ತಸ್ಯೈವ ಸಂಹರ್ತ್ರೇ ನಮೋ ಬ್ರಹ್ಮಸ್ವರೂಪಿಣೇ ।
ಪಿತಾಮಹ ನಮಸ್ತುಭ್ಯಂ ಸುರಜ್ಯೇಷ್ಠ ನಮೋಽಸ್ತು ತೇ ॥ ೧೧ ॥
ಚತುರ್ವಕ್ತ್ರ ನಮಸ್ತುಭ್ಯಂ ಪದ್ಮಯೋನೇ ನಮೋಽಸ್ತು ತೇ ।
ವಿರಂಚಯೇ ನಮಸ್ತುಭ್ಯಂ ವಿಧಯೇ ವೇಧಸೇ ನಮಃ ॥ ೧೨ ॥
ಚಿದಾನಂದ ನಮಸ್ತುಭ್ಯಂ ಹಿರಣ್ಯಗರ್ಭ ತೇ ನಮಃ ।
ಹಂಸವಾಹನ ತೇ ನಿತ್ಯಂ ಪದ್ಮಾಸನ ನಮೋಽಸ್ತು ತೇ ॥ ೧೩ ॥
ಏವಂ ಸಂಸ್ತುವತಾಂ ತೇಷಾಮೃಷೀಣಾಮೂರ್ಧ್ವರೇತಸಾಂ ।
ಉವಾಚ ಪರಮಪ್ರೀತೋ ಬ್ರಹ್ಮಾ ಲೋಕಪಿತಾಮಹಃ ॥ ೧೪ ॥
ಸ್ವಾಗತಂ ವೈ ದ್ವಿಜಶ್ರೇಷ್ಠ ಯುಷ್ಮಾಕಂ ಕೃತವಾನಹಂ ।
ಸ್ತೋತ್ರೇಣಾನೇನ ದಿವ್ಯೇನ ವೃಣುಧ್ವಂ ವರಮುತ್ತಮಂ ॥ ೧೫ ॥

ಋಷಯ ಊಚುಃ :—

ಅಭಿಷೇಕಾಯ ನೋ ದೇವ ನದೀ ಪಾಪಪ್ರಣಾಶಿನೀ ।
ವಿಲೋಕ್ಯತೇ ಸುರಶ್ರೇಷ್ಠ ದೇಹಿ ನೋ ವರಮುತ್ತಮಂ ॥ ೧೬ ॥

---

೧೧. ಪ್ರಪಂಚ ಸಂಹಾರಕನೂ, ಬ್ರಹ್ಮರೂಪಿಯೂ, ಸುರೋತ್ತಮನೂ ಆದ ಪಿತಾಮಹನೆ! ನಿನಗೆ ನಮಸ್ಕಾರವು.

೧೨. ಚತುರ್ಮುಖನೂ, ಪದ್ಮೋದ್ಭವನೂ, ವಿರಿಂಚಿಯೂ, ಆದ ಪಿತಾಮಹ! ನಿನಗೆ ನಮಸ್ಕಾರವು.

೧೩. ಜ್ಞಾನಾನಂದ ರೂಪನೂ, ಹಿರಣ್ಯಗರ್ಭನೂ, ಹಂಸವಾಹನನೂ ಆದ ಓಬ್ರಹ್ಮನೆ ! ನಿನಗೆ ನಮಸ್ಕಾರವು.

೧೪. ಬ್ರಹ್ಮಚಾರಿಗಳಾದ ಆ ಮುನಿಗಳು ಹೀಗೆ ಸ್ತುತಿಸುತ್ತಿರಲು ಚತುರ್ಮುಖನು ಅತ್ಯಂತ ಸಂತುಷ್ಟನಾಗಿ ಇಂತೆಂದನು.

೧೫. "ಬ್ರಾಹ್ಮಣವರ್ಯರೆ! ನಿಮಗೆ ಸುಖಾಗಮನವೆ? ನಿಮ್ಮ ದಿವ್ಯ ಸ್ತೋತ್ರದಿಂದ ನಾನು ಸಂತುಷ್ಟನಾಗಿರುವೆನು. ವರವನ್ನು ಕೇಳಿಕೊಳ್ಳಿರಿ".

೧೬. ಋಷಿಗಳು ಹೇಳುತ್ತಾರೆ:—ಸ್ವಾಮಿ! ನಮಗೆ ಸ್ನಾನಕ್ಕಾಗಿ ಪಾಪಗಳನ್ನು ನೀಗಿಸುವ ಒಂದು ನದಿಯನ್ನು ಕೊಡು. ಇದೇ ನಮಗೆ ಉತ್ತಮವಾದ ವರವಾಗುವುದು.

ಈಶ್ವರ ಉವಾಚ :—

ಇತ್ಯುಕ್ತಸ್ತೈಸ್ತದಾ ಬ್ರಹ್ಮಾ ಮುನಿಭಿಸ್ತಪಸೋಜ್ಜ್ವಲೈಃ ।
ವೀಕ್ಷಾಂಚಕ್ರೇ ತದಾ ಸರ್ವಾ ಮೂರ್ತಿಮತ್ಯಶ್ಚ ನಿಮ್ನಗಾಃ ॥ ೧೭ ॥
ಗಂಗಾ ಚ ಯಮುನಾ ಚೈವ ತಥಾ ದೇವೀ ಸರಸ್ವತೀ ।
ಚಂದ್ರಭಾಗಾ ಚ ರೇವಾ ಶರಯೂರ್ಗಂಡಕೀ ತಥಾ ॥ ೧೮ ॥
ತಾಪೀ ಚೈವ ವರಾರೋಹೇ ತಥಾ ಗೋದಾವರೀ ನದೀ ।
ಕಾವೇರೀ ಚಂದ್ರಪುತ್ರೀ ಚ ಶಿಪ್ರಾ ಚರ್ಮಣ್ವತೀ ತಥಾ ॥ ೧೯ ॥
ಸಿಂಧುಶ್ಚ ವೇದಿಕಾ ಚೈವ ನದಾಃ ಸರ್ವೇ ವರಾನನೇ ।
ಮೂರ್ತಿಮತ್ಯಃ ಸ್ಥಿತಾಃ ಸರ್ವಾಃ ಪವಿತ್ರಾಃ ಪಾಪನಾಶಿನೀಃ ॥ ೨೦ ॥
ದೃಷ್ಟ್ವಾ ಪಿತಾಮಹಃ ಸರ್ವಾ ಗತ್ವರಾ ಧರಣೀಂ ಪ್ರತಿ ।
ದೇವದಾರುವನೇ ರಮ್ಯೇ ಪ್ರಭಾಸೇ ಕ್ಷೇತ್ರ ಉತ್ತಮೇ ।
ಕಮಂಡಲೌ ಕೃತಾ ದೃಷ್ಟ್ವಾವಿವಿಶುಸ್ತಾಃ ಕಮಂಡಲುಂ ॥ ೨೧ ॥

ಬ್ರಹ್ಮೋವಾಚ :—

ಧೃತಾಃ ಸರ್ವಾ ಮಹಾಪುಣ್ಯಾ ನದ್ಯೋ ಬ್ರಹ್ಮಕಮಂಡಲೌ ।
ಪ್ರವಿಷ್ಟಾಃ ಪೃಥಿವೀಂ ಯಾಂತು ಋಷೀಣಾಮನುಕಂಪಯಾ ॥ ೨೨ ॥

---

೧೭. ಈಶ್ವರನು ಹೇಳುತ್ತಾನೆ :—ತಪಸ್ವಿಗಳಾದ ಆ ಮುನಿಗಳು ಹೀಗೆನ್ನಲು ಬ್ರಹ್ಮನು ಸಕಲ ದೇಹಧಾರಿಗಳಾದ ನದಿಗಳನ್ನು ಕಂಡನು.

೧೮–೨೦. ಆಗ ಗಂಗಾ, ಯಮುನಾ, ಸರಸ್ವತೀ, ಚಂದ್ರಭಾಗಾ, ರೇವಾ, ಸರಯೂ, ಗಂಡಕೀ, ತಾಪೀ, ಗೋದಾವರೀ, ಕಾವೇರೀ, ಚಂದ್ರಪುತ್ರೀ, ಶಿಪ್ರಾ, ಚರ್ಮಣ್ವತೀ, ಸಿಂಧು, ವೇದಿಕಾ ಇವೇ ಮೊದಲಾದ ನದಿಗಳೂ, ನದಗಳೂ ದೇಹವನ್ನು ಧರಿಸಿ ಬಂದು ನಿಂತುವು.

೨೧. ಬ್ರಹ್ಮನು ಪ್ರಭಾಸಕ್ಷೇತ್ರದಲ್ಲಿರುವ ದೇವದಾರುವದಲ್ಲಿ ಭೂಮಿಗೆ ಹೋಗುತ್ತಿರುವ ಆ ನದಿಗಳನ್ನು ಕಮಂಡಲುವಿನಲ್ಲಿ ಪ್ರವೇಶಿಸುವುದಕ್ಕೆ ಸೂಚಿಸಲು ಅವು ಅದನ್ನು ಪ್ರವೇಶಿಸಿದುವು.

೨೨. ಬ್ರಹ್ಮನು ಹೇಳುತ್ತಾನೆ :—ನಾನು ನನ್ನ ಕಮಂಡಲುವಿನಲ್ಲಿ ಹಿಡಿದ ಈ ನದಿಗಳೆಲ್ಲ ಋಷಿಗಳಲ್ಲಿ ದಯೆಯಿಂದ ಭೂಮಿಗೆ ತೆರಳಲಿ.

ಪ್ರಹಿಣೋಮಿ ಯದ್ಯೇಕಾಂ ಚ ಹ್ಯನ್ಯಾ ರುಷ್ಯಂತಿ ಮೇ ದ್ವಿಜಾಃ ।
ತಸ್ಮಾತ್ಸರ್ವಾಃ ಪ್ರಮೋಕ್ಷ್ಯಾಮಿ ಕಮಂಡಲುಕೃತಾಲಯಾಃ ॥ ೨೩ ॥

ಈಶ್ವರ ಉವಾಚ :—

ತತೋ ಬ್ರಹ್ಮಾ ಮುಮೋಚಾಥ ತತ್ರಸ್ಥಾಶ್ಚ ಮಹಾಪಗಾಃ ।
ಮುಕ್ತ್ವಾ ಬ್ರಹ್ಮಾ ಮುನೀನ್ಸರ್ವಾನ್ಪ್ರೋವಾಚೇದಂ ಪುನಃಪುನಃ ॥ ೨೪ ॥
ಋಷಿಭಿಃ ಪ್ರಾರ್ಥ್ಯಮಾನೇನ ನದ್ಯೋ ಮುಕ್ತಾ ಮಯಾ ತತಃ ।
ತೋಯರೂಪಾ ಮಹಾವೇಗಾ ಅಭಿಷೇಕಾಯ ಸತ್ವರಾಃ ॥ ೨೫ ॥
ಋಷಿತೋಯೇತಿ ನಾಮ್ನಾ ಸಾ ಭವಿಷ್ಯತಿ ಧರಾತಲೇ ।
ಋಷೀಣಾಂ ವಲ್ಲಭಾ ದೇವಿ ಸರ್ವಪಾತಕನಾಶಿನೀ ॥ ೨೬ ॥

ಈಶ್ವರ ಉವಾಚ :—

ಏವಂ ದೇವಿ ಸಮಾಯಾತಾ ದೇವದಾರುವನೇ ನದೀ ।
ಋಷಿತೋಯೇತಿ ವಿಖ್ಯಾತಾ ಪವಿತ್ರಾ ಚ ವರಾನನೇ ॥ ೨೭ ॥

---

೨೩. ಮುನಿಗಳೆ! ಒಂದು ನದಿಯನ್ನು ಕಳುಹಿಸಿದರೆ ಇತರ ನದಿಗಳು ಕೋಪಿಸಿಕೊಳ್ಳುವುವು. ಆದ್ದರಿಂದ ಕಮಂಡಲುವಿನಲ್ಲಿರುವ ಸಕಲ ನದಿಗಳನ್ನೂ ಇಲ್ಲಿಬಿಡುವೆನು.

೨೪. ಈಶ್ವರನು ಹೇಳುತ್ತಾನೆ :—ಅನಂತರ ಬ್ರಹ್ಮನು ಅಲ್ಲಿರುವ ನದಿಗಳನ್ನು ಬಿಟ್ಟು ಸಕಲ ಮುನಿಗಳನ್ನೂ ಕುರಿತು ಇಂತೆಂದನು.

೨೫. ಮುನಿಗಳೆ! ನಿಮ್ಮ ಪ್ರಾರ್ಥನೆಯಂತೆ ನಾನು ಸ್ನಾನಕ್ಕಾಗಿ ಅತಿವೇಗವುಳ್ಳ ನದಿಗಳನ್ನು ಇಲ್ಲಿ ಬಿಟ್ಟಿರುವೆನು.

೨೬. ಋಷಿಗಳಿಗೆ ಪ್ರಿಯವಾದುದೂ, ಸಕಲಪಾಪಗಳನ್ನು ನಾಶಗೊಳಿಸುವುದೂ ಆದ ಆ ನದಿಯು ಭೂಮಿಯಲ್ಲಿ ಋಷಿತೋಯೆಯೆಂದು ಪ್ರಖ್ಯಾತಿಗೊಳ್ಳುವುದು.

೨೭. ಈಶ್ವರನು ಹೇಳುತ್ತಾನೆ :—ಸುಂದರಿ! ಹೀಗೆ ಋಷಿತೋಯಾ ನದಿಯು ದೇವದಾರುವನಕ್ಕೆ ಬಂದಿರುವುದು.

೨೮. ವೇದ ಪಾರಂಗತರಾದ ಋಷಿಗಳು ಆ ನದಿಯನ್ನು ವಾದ್ಯ ಧ್ವನಿಗಳಿಂದಲೂ, ವೇದಘೋಷಗಳಿಂದಲೂ ಸಮುದ್ರಕ್ಕೆ ಸೇರಿಸಿದರು.

ತೂರ್ಯದುಂದುಭಿನಿರ್ಘೋಷೈರ್ವೇದಮಂಗಲನಿಃಸ್ವನೈಃ ।
ಸಮುದ್ರಂ ಪ್ರಾಪಿತಾ ದೇವೀ ಋಷಿಭಿರ್ವೇದಪಾರಗೈಃ ॥ ೨೮ ॥
ಸರ್ವತ್ರ ಸುಲಭಾ ದೇವೀ ತ್ರಿಷು ಸ್ಥಾನೇಷು ದುರ್ಲಭಾ ।
ಮಹೋದಯೇ ಮಹಾತೀರ್ಥೇ ಮೂಲಚಂಡೀಶಸಂನಿಧೌ ॥ ೨೯ ॥
ಸಮುದ್ರೇಣ ಸಮೇತಾ ತು ಯತ್ರ ಸಾ ಪೂರ್ವವಾಹಿನೀ ।
ಯತ್ರರ್ಷಿತೋಯಾ ಲಭ್ಯೇತ ತತ್ರ ಕಿಂ ಮೃಗ್ಯತೇ ಪರಂ ॥ ೩೦ ॥
ಮನುಷ್ಯಾಸ್ತೇ ಸದಾ ಧನ್ಯಾಸ್ತತ್ತೋಯಂ ತು ಪಿಬಂತಿ ಯೇ ।
ಅಸ್ಥೀನಿ ಯತ್ರ ಲೀಯಂತೇ ಷಣ್ಮಾಸಾಭ್ಯಂತರೇಣ ತು ॥ ೩೧ ॥
ಪ್ರಾತಃಕಾಲೇ ವಹೇದ್ಗಂಗಾ ಸಾಯಂ ಚ ಯಮುನಾ ತಥಾ ॥ ೩೨ ॥
ನದೀಸಹಸ್ರ ಸಂಯುಕ್ತಾ ಮಧ್ಯಾಹ್ನೇ ತು ಸರಸ್ವತೀ ।
ಅಪರಾಹ್ಣೇ ವಹೇದ್ರೇವಾ ಸಾಯಾಹ್ನೇ ಸೂರ್ಯಪುತ್ರಿಕಾ ॥ ೩೩ ॥
ಏವಂ ಜಾನನ್ನರೋ ಯಸ್ತು ತತ್ರ ಸ್ನಾನಂ ವಿಚಕ್ಷಣಃ ।
ಏವಂ ಜಾನನ್ನರೋ ಯಸ್ತು ತತ್ರ ಸ್ನಾನಂ ವಿಚಕ್ಷಣಃ ।
ಆಚರೇದ್ವಿಧಿನಾ ಶ್ರಾದ್ಧಂ ಸ ತಸ್ಯಾಃ ಫಲಭಾಗವೇತ್ ॥ ೩೪ ॥

೨೮–೨೯. ಆ ನದಿಯು ಎಲ್ಲೆಡೆಯಲ್ಲಿಯೂ, ಸುಲಭವಾದುದು. ಆದರೆ ಮಹೋದಯಕಾಲ, ಮಹಾತೀರ್ಥ, ಮೂಲಚಂಡೀಶನ ಸನ್ನಿಧಿ, ಇವುಗಳಲ್ಲಿ ದುರ್ಲಭವಾದುದು.

೩೦. ಪೂರ್ವದಿಕ್ಕಿಗೆ ಹರಿಯುತ್ತ ಸಮುದ್ರವನ್ನು ಸೇರಿದ ಋಷಿತೋಯಾ ನದಿಯು ಸಿಕ್ಕಿದರೆ ಬೇರೆ ಏನನ್ನು ಹುಡುಕಬೇಕು.

೩೧. ಆ ನದಿಯ ನೀರನ್ನು ಯಾವಾಗಲೂ ಕುಡಿಯುವವರೂ, ಆರು ತಿಂಗಳ ಕಾಲ ಆ ನದಿಯ ನೀರಿನಲ್ಲಿ ತಮ್ಮ ಮೂಳೆಗಳನ್ನು ಇರಿಸಿಕೊಂಡವರೂ ಧನ್ಯರು.

೩೨–೪. ಪ್ರಾತಃಕಾಲದಲ್ಲಿ ಗಂಗೆಯೂ, ಸಾಯಂಕಾಲದಲ್ಲಿ ಯಮುನೆಯೂ, ಮಧ್ಯಾಹ್ನದಲ್ಲಿ ಸರಸ್ವತಿಯೂ, ಅಪರಾಹ್ಣದಲ್ಲಿ ರೇವಾನದಿಯೂ, ಸಾಯಂಕಾಲದಲ್ಲಿ ಸೂರ್ಯತನಯಳೂ (ಯಮುನೆಯೂ) ಸಕಲ ನದಿಗಳೊಡನೆ ಹರಿಯುತ್ತಿರುವುವು ಎಂದು ತಿಳಿಯುತ್ತ ಅಲ್ಲಿ ಮಿಂದು ಶ್ರಾದ್ಧವನ್ನಾಚರಿಸಿದ ಮಾನವನು ಸಂಪೂರ್ಣ ಫಲವನ್ನು ಪಡೆಯುವನು.

ಏವಂ ಸಂಕ್ಷೇಪತಃ ಪ್ರೋಕ್ತಮೃಷಿತೋಯಾಮಹೋದಯಂ ।
ಸರ್ವಪಾಪಹರಂ ನೃಣಾಂ ಸರ್ವಕಾಮಫಲಪ್ರದಂ ॥ ೩೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಋಷಿತೋಯಾಮಾಹಾತ್ಮ್ಯವರ್ಣನಂನಾಮ
ಸಪ್ತನವತ್ಯುತ್ತರದ್ವಿಶತತಮೋಽಧ್ಯಾಯ ॥

---

೩೫. ಹೀಗೆ ಮನುಷ್ಯರ ಸಕಲಪಾಪಗಳನ್ನು ಪರಿಹರಿಸುವುದೂ, ಸಕಲೇಷ್ಟಾರ್ಥಗಳನ್ನೀಯುವುದೂ ಆದ ಋಷಿತೋಯಾನದಿಯ ಮಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಋಷಿತೋಯಾಮಾಹಾತ್ಮ್ಯವರ್ಣನವೆಂಬ
ಇನ್ನೂರತೊಂಬತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟನವತ್ಯುತ್ತರಶತತಮೋಽಧ್ಯಾಯಃ

ಗುಪ್ತಪ್ರಯಾಗಮಹಾತ್ಮ್ಯ ವರ್ಣನಂ

ಈಶ್ವರ ಉವಾಚ :—

ಋಷಿತೋಯಾಪಶ್ಚಿಮೇ ತು ತತ್ರ ಗವ್ಯೂತಿಮಾತ್ರತಃ ।
ಸಂಗಾಲೇಶ್ವರನಾಮಾಸ್ತಿ ಸರ್ವಪಾತಕನಾಶನಃ ॥ ೧ ॥
ಗುಪ್ತಸ್ತತ್ರ ಪ್ರಯಾಗಶ್ಚ ದೇವೋ ವೈ ಮಾಧವಸ್ತಥಾ ।
ಜಾಹ್ನವೀ ಯಮುನಾ ಚೈವ ದೇವೀ ತತ್ರ ಸರಸ್ವತೀ ॥ ೨ ॥
ಅನ್ಯಾನಿ ತತ್ರ ತೀರ್ಥಾನಿ ಬಹೂನಿ ಚ ವರಾನನೇ ।
ಸ್ನಾತ್ವಾ ದೃಷ್ಟ್ವಾ ಪೂಜಯಿತ್ವಾ ಮುಕ್ತಃ ಸ್ಯಾತ್ಸರ್ವಕಿಲ್ಬಿಷೈಃ ॥ ೩ ॥

ಪಾರ್ವತ್ಯುವಾಚ :—

ಕಥಯ ತ್ವಂ ಮಹೇಶಾನ ಸರ್ವದೇವನಮಸ್ಕೃತ ।
ತೀರ್ಥರಾಜಃ ಪ್ರಯಾಗಸ್ತು ಕಥಂ ವಿಷ್ಣುಃ ಸನಾತನಃ ॥ ೪ ॥

ಕನ್ನಡದ ಅನುವಾದ

ಗುಪ್ತಪ್ರಯಾಗಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಋಷಿತೋಯಾನದಿಯ ಪಶ್ಚಿಮದಲ್ಲಿ ನಾಲ್ಕು ಮೈಲಿ ದೂರದಲ್ಲಿ ಸಕಲ ಪಾಪಗಳನ್ನು ಪರಿಹರಿಸುವ ಸಂಗಾಲೇಶ್ವರ ಲಿಂಗವಿರುವುದು

೨-೩. ಅಲ್ಲಿ ಪ್ರಯಾಗ, ಮಾಧವ, ಗಂಗಾ, ಯಮುನಾ, ಸರಸ್ವತೀ ಇವೇ ಮೊದಲಾದ ಇತರ ಅನೇಕ ತೀರ್ಥಗಳು ಗುಪ್ತವಾಗಿರುವುವು. ಆ ತೀರ್ಥಗಳಲ್ಲಿ ಮಿಂದು ಈಶ್ವರನನ್ನು ದರ್ಶನಮಾಡಿ, ಪೂಜಿಸಿದವನು ಸಕಲ ಪಾಪಗಳಿಂದ ಮುಕ್ತನಾಗುವನು.

೪-೬, ಪಾರ್ವತಿಯು ಹೇಳುತ್ತಾಳೆ :—ಸಕಲ ದೇವತೆಗಳಿಂದ ನಮಸ್ಕೃತನಾದ ಓ ಮಹೇಶ್ವರ! ತೀರ್ಥಶ್ರೇಷ್ಠವಾದ ಪ್ರಯಾಗ, ಸನಾತನನಾದ ವಿಷ್ಣು, ಗಂಗಾ, ಯಮುನಾ, ಸರಸ್ವತೀ ನದಿಗಳೂ, ಇತರ ಅನೇಕ ತೀರ್ಥಗಳೂ ಸಂಗಾಲೇಶ್ವರನ

ಕಥಂ ಗಂಗಾ ಚ ಯಮುನಾ ತಥಾ ದೇವೀ ಸರಸ್ವತೀ ।
ಅನ್ಯಾನ್ಯಪಿ ಬಹೂನ್ಯೇವ ತೀರ್ಥಾನಿ ವೃಷಭಧ್ವಜ ॥ ೫ ॥
ಸಮಾಯಾತಾನಿ ತತ್ರೈವ ಸಂಗಾಲೇಶ್ವರಸಂನಿಧೌ।
ಸಂಗಾಲೇಶೇತಿ ಕಿಂ ನಾಮ ಹ್ಯೇತನ್ಮೇ ವದ ಕೌತುಕಂ ॥ ೬ ॥

ಈಶ್ವರ ಉವಾಚ :—

ಪುರಾ ವೈ ಲಿಂಗಪತನೇ ಸರ್ವದೇವಸಮಾಗಮೇ ।
ಸಾರ್ಧತ್ರಿತಯಕೋಟೀನಿ ಪುಣ್ಯಾನಿ ಸುರಸುಂದರಿ ॥ ೭ ॥
ತೀರ್ಥಾನಿ ತೀರ್ಥರಾಜೋಽಯಂ ಪ್ರಯಾಗಃ ಸಮುಪಸ್ಥಿತಃ ।
ಆತ್ಮಾನಂ ಗೋಪಯಾಮಾಸ ತೀರ್ಥಕೋಟಿಭಿರಾವೃತಂ ॥ ೮ ॥
ತತಸ್ತತ್ರ ಸಮಾಯಾತಾ ಬ್ರಹ್ಮವಿಷ್ಣುಪುರೋಗಮಾಃ ।
ವಿಬುಧಾಸ್ತೀರ್ಥರಾಜಂ ತಂ ದದೃಶುರ್ದಿವ್ಯಚಕ್ಷುಷಾ ॥ ೯ ॥
ತೀರ್ಥಕೋಟಿಭಿರಾಕೀರ್ಣಂ ಪವಿತ್ರಂ ಪಾಪನಾಶನಂ ।
ಲಿಂಗಸ್ಯ ಪತನಂ ಶ್ರುತ್ವಾ ಮಹಾದುಃಖೇನ ಸಂವೃತಾಃ ॥ ೧೦ ॥
ಸ್ಥಿತಾಃ ಸರ್ವೇ ತದಾ ದೇವಿ ಬ್ರಹ್ಮಾದ್ಯಾಃ ಸುರಸತ್ತಮಾಃ ॥ ೧೧ ॥
ಏತಸ್ಮಿನ್ನೇವ ಕಾಲೇ ತು ದೇವೋ ರುದ್ರಃ ಸನಾತನಃ ।
ನಿರಾನಂದಃ ಸಮಾಯಾತೋ ವಾಕ್ಯಮೇತದುವಾಚ ಹ ॥ ೧೨ ॥

ಸಮೀಪಕ್ಕೆ ಹೇಗೆ ಬಂದುವು? ಆ ಲಿಂಗಕ್ಕೆ ಸಂಗಾಲೇಶ ಎಂದು ಹೆಸರು ಬರಲು ಕಾರಣವೇನು ? ನನಗೆ ಕೌತೂಹಲವುಂಟಾಗಿದೆ. ಇದನ್ನು ನನಗೆ ಹೇಳು.

೭–೮, ಈಶ್ವರನು ಹೇಳುತ್ತಾನೆ :—ಸುಂದರಿ ! ಹಿಂದೆ ಶಿವಲಿಂಗವು ನೆಲಕ್ಕೆ ಬೀಳಲುದೇವತೆಗಳು ಅಲ್ಲಿ ನೆರೆದರು. ಆಗ ತೀರ್ಥರಾಜವಾದ ಪ್ರಯಾಗವು ಮೂರುವರೆ ಕೋಟಿ ತೀರ್ಥಗಳೊಡನೆ ಅಲ್ಲಿಗೆ ಬಂದು ತನ್ನನ್ನು ಅಡಗಿಸಿ ಕೊಂಡುನೆಲಸಿತು.

೯–೧೧, ಬಳಿಕ ಬ್ರಹ್ಮ ವಿಷ್ಣು ಮೊದಲಾದ ದೇವತೆಗಳು ಅಲ್ಲಿಗೆ ಬಂದು ದಿವ್ಯದೃಷ್ಟಿಯಿಂದ ಕೋಟಿ ತೀರ್ಥಗಳಿಂದ ಕೂಡಿರುವ ಪವಿತ್ರವಾದ ಆ ಪ್ರಯಾಗ ವನ್ನು ಕಂಡು ಶಿವಲಿಂಗವು ಬಿದ್ದಿರುವುದನ್ನು ಕೇಳಿ ಅತಿದುಃಖಗೊಂಡರು.

೧೨. ಈ ಸಮಯದಲ್ಲಿ ಆನಂದ ರಹಿತನಾದ ಮಹೇಶ್ವರನು ಅಲ್ಲಿಗೆ ಬಂದು ಇಂತೆಂದನು.

ಶೃಣುಧ್ವಂ ವಚನಂ ದೇವಾ ಬ್ರಹ್ಮವಿಷ್ಣುಪುರೋಗಮಾಃ ।
ಋಷಿಶಾಪಾನ್ನಿಪತಿತಂ ಮಮ ಲಿಂಗಮನುತ್ತಮಂ ।
ತಸ್ಮಾಲ್ಲಿಂಗಂ ಪೂಜಯತ ಸರ್ವಕಾಮಾರ್ಥಸಿದ್ಧಯೇ ॥ ೧೩ ॥
ಏವಮುಕ್ತ್ವಾ ಮಹಾದೇವೋ ದೇಶೇ ತಸ್ಮಿನ್ಸ್ಥಿತಃ ಪ್ರಿಯೇ ।
ಬ್ರಾಹ್ಮಂ ಚ ವೈಷ್ಣವಂ ರೌದ್ರಂ ತತ್ರ ಕುಂಡತ್ರಯಂ ಸ್ಮೃತಂ ॥ ೧೪ ॥
ಚತುರ್ಥಂ ತ್ರಿಸಂಗಮಾಖ್ಯಂ ನದೀನಾಂ ಯತ್ರ ಸಂಗಮಃ ।
ಗಂಗಾಯಾಶ್ಚ ಸರಸ್ವತ್ಯಾಃ ಸೂರ್ಯಪುತ್ರ್ಯಾಸ್ತಥೈವ ಚ ॥ ೧೫ ॥
ಕೋಟಿರೇಕಾ ಚ ತೀರ್ಥಾನಾಂ ಬ್ರಹ್ಮಕುಂಡೇ ವ್ಯವಸ್ಥಿತಾ ।
ತಥಾ ಚ ವೈಷ್ಣವೇ ಕುಂಡೇ ಕೋಟಿರೇಕಾ ಪ್ರಕೀರ್ತಿತಾ ॥ ೧೬ ॥
ಸಾರ್ಧಕೋಟಿಸ್ತು ಸಂಪ್ರೋಕ್ತಾ ಶಿವಕುಂಡೇ ಪ್ರಕೀರ್ತಿತಾ ।
ಪಶ್ಚಿಮೇ ಬ್ರಹ್ಮಕುಂಡಂ ಚ ಪೂರ್ವೇ ವೈ ವೈಷ್ಣವಂ ಸ್ಮೃತಂ ॥ ೧೭ ॥
ಮಧ್ಯಭಾಗೇ ಸ್ಥಿತಂ ಯಚ್ಚ ರುದ್ರಕುಂಡಂ ಪ್ರಕೀರ್ತಿತಂ ।
ಕುಂಡಮಧ್ಯಾದ್ವಿನಿರ್ಗತ್ಯ ಯತ್ರ ಗಂಗಾ ವರಾನನೇ ॥ ೧೮ ॥
ಸೂರ್ಯಪುತ್ರ್ಯಾ ಸಮೇತಾ ಚ ತತ್ತ್ರಿಸಂಗಮ ಉಚ್ಯತೇ ।
ಅನಯೋರಂತರೇ ಸೂಕ್ಷ್ಮೇ ತತ್ರ ಗುಪ್ತಾ ಸರಸ್ವತೀ ॥ ೧೯ ॥

---

೧೩. ಬ್ರಹ್ಮ ವಿಷ್ಣುಮೊದಲಾದ ದೇವತೆಗಳೇ! ನನ್ನ ಮಾತನ್ನು ಕೇಳಿರಿ. ಋಷಿ ಶಾಪದಿಂದ ನನ್ನ ಲಿಂಗವು ಕೆಳಗೆ ಬಿದ್ದಿರುವುದು. ನೀವು ಸಕಲೇಷ್ಟಾರ್ಥ, ಸಿದ್ಧಿಗಾಗಿ ಈ ಲಿಂಗವನ್ನು ಪೂಜಿಸಿರಿ.

೧೪. ಮಹೇಶನು ಹೀಗೆಂದು ನುಡಿದು ಅಲ್ಲಿ ನೆಲೆಸಿದನು. ಅಲ್ಲಿ ಬ್ರಾಹ್ಮ, ವೈಷ್ಣವ, ರೌದ್ರ ಎಂಬ ಮೂರು ಕುಂಡಗಳಿರುವುವು.

೧೫. ನಾಲ್ಕನೆಯ ಕುಂಡವು ಗಂಗಾ, ಸರಸ್ವತೀ, ಯಮುನಾ ನದಿಗಳು ಸೇರಿರುವುದರಿಂದ ತ್ರಿಸಂಗಮವೆಂದು ಪ್ರಸಿದ್ಧವಾಗಿರುವುದು.

೧೬–೧೯. ಒಂದು ಕೋಟಿ ತೀರ್ಥಗಳು ಬ್ರಹ್ಮಕುಂಡದಲ್ಲಿಯೂ, ಒಂದು ಕೋಟಿ ತೀರ್ಥಗಳು ವೈಷ್ಣವಕುಂಡದಲ್ಲಿಯೂ, ಒಂದುವರೆ ಕೋಟಿ ತೀರ್ಥಗಳ ಶಿವಕುಂಡದಲ್ಲಿಯೂ ಇರುವುವು. ಪಶ್ಚಿಮದಲ್ಲಿ ಬ್ರಹ್ಮಕುಂಡವೂ, ಪೂರ್ವದಲ್ಲಿ ವೈಷ್ಣವಕುಂಡವೂ, ಮಧ್ಯದಲ್ಲಿ ರುದ್ರಕುಂಡವೂ ಇರುವುವು. ಸುಂದರಿ! ಎಲ್ಲಿ ಗಂಗೆಯು ಕುಂಡಮಧ್ಯದಿಂದ ಹೊರಟು ಯಮುನೆಯೊಡನೆ ಸೇರಿರುವುದೊ; ಅದು ತ್ರಿಸಂಗಮವೆನ್ನಿಸಿಕೊಳ್ಳುವುದು. ಇವುಗಳ ನಡುವೆ ಸೂಕ್ಷ್ಮವಾಗಿರುವ ಸ್ಥಳದಲ್ಲಿ ಸರಸ್ವತೀ ನದಿಯು ಗುಪ್ತವಾಗಿರುವುದು.

ಏಷು ಸನ್ನಿಹಿತೋ ನಿತ್ಯಂ ಪ್ರಯಾಗಸ್ತೀರ್ಥನಾಯಕಃ ।
ಅತ್ರಾಗತ್ಯ ನರೋ ಯಸ್ತು ಮಾಘಮಾಸೇ ವರಾನನೇ ॥ ೨೦ ॥
ಸ್ನಾಯಾತ್ಪ್ರಭಾತಸಮಯೇ ಮಕರಸ್ಥೇ ರವೌ ಪ್ರಿಯೇ ।
ಕಿಂಚಿದಭ್ಯುದಿತೇ ಸೂರ್ಯೇ ಶೃಣು ತಸ್ಯ ಚ ಯತ್ಫಲಂ ॥ ೨೧ ॥
ಆದ್ಯೇನೈಕೇನ ಸ್ನಾನೇನ ಪಾಪಂ ಯನ್ಮನಸಾ ಕೃತಂ ।
ವ್ಯಪೋಹತಿ ನರಃ ಸಮ್ಯಕ್ಛ್ರದ್ಧಾಯುಕ್ತೋ ಜಿತೇಂದ್ರಿಯಃ ॥ ೨೨ ॥
ವಾಚಿಕಂ ತು ದ್ವಿತೀಯೇನ ಕಾಯಿಕಂ ತು ತೃತೀಯಕಾತ್ ।
ಸಂಸರ್ಗಜಂ ಚತುರ್ಥೇನ ರಹಸ್ಯಂ ಪಂಚಮೇನ ತು ॥ ೨೩ ॥
ಉಪಪಾತಕಾನಿ ಷಷ್ಠೇನ ಸ್ನಾನೇನೈವ ವ್ಯಪೋಹತಿ ॥ ೨೪ ॥
ಅಭಿಷೇಕೇಣ ಕುಂಡಾನಾಂ ಸಪ್ತಕೃತ್ವೋ ವರಾನನೇ ।
ಮಹಾಂತಿ ಚೈವ ಪಾಪಾನಿ ಕ್ಷಾಲ್ಯಂತೇ ಪುರುಷೈಃ ಸದಾ ॥ ೨೫ ॥
ಯಃ ಸ್ನಾತಿ ಸಕಲಂ ಮಾಸಂ ಪ್ರಯಾಗೇ ಗುಪ್ತಸಂಜ್ಞಕೇ ।
ಬ್ರಹ್ಮಾದಿಭಿರ್ನ ತದ್ವಕ್ತುಂ ಶಕ್ಯತೇ ಕಲ್ಪಕೋಟಿಭಿಃ ॥ ೨೬ ॥

೨೦—೨೧. ಇವುಗಳಲ್ಲಿ ಯಾವಾಗಲೂ ತೀರ್ಥಗಳಿಗೆ ಒಡೆಯನಾದ ಪ್ರಯಾಗವು ಸನ್ನಿಹಿತವಾಗಿರುವುದು. ಸುಂದರಿ! ಮಾಘ ಮಾಸದಲ್ಲಿ ಸೂರ್ಯನು ಮಕರರಾಶಿಯಲ್ಲಿರಲು ಸೂರ್ಯೋದಯ ಕಾಲದಲ್ಲಿ ಇಲ್ಲಿಗೆ ಬಂದು ಮಿಂದವನಿಗೆ ಉಂಟಾಗುವ ಫಲವನ್ನು ಕೇಳು.

೨೨. ಇಲ್ಲಿ ಮೊದಲಿನ ಸ್ನಾನದಿಂದ ಶ್ರದ್ಧೆಯುಳ್ಳವನೂ, ಜಿತೇಂದ್ರಿಯನೂ ಆದ ಮನುಷ್ಯನ ಮಾನಸಿಕಪಾಪವು ಪರಿಹಾರವಾಗುವುದು.

೨೩—೨೪. ಎರಡನೆಯ ಸ್ನಾನದಿಂದ ಮಾತಿನಿಂದುಂಟಾದಪಾಪವೂ, ಮೂರನೆಯ ಸ್ನಾನದಿಂದ ದೈಹಿಕ ಪಾಪವೂ, ನಾಲ್ಕನೆಯ ಸ್ನಾನದಿಂದ ಸಂಸರ್ಗಜನ್ಯ ಪಾಪವೂ, ಐದನೆಯ ಸ್ನಾನದಿಂದ ರಹಸ್ಯವಾದ ಪಾಪವೂ, ಆರನೆಯ ಸ್ನಾನದಿಂದ ಉಪಪಾತಗಳೂ ಪರಿಹಾರವಾಗುವುವು.

೨೫. ಕುಂಡಗಳಲ್ಲಿ ಏಳುಸಾರಿ ಮಿಂದ ಮಾನವನ ಮಹಾಪಾಪಗಳು ಪರಿಹಾರವಾಗುವುವು.

೨೬. ಗುಪ್ತಪ್ರಯಾಗದಲ್ಲಿ ಒಂದು ತಿಂಗಳು ಮಿಂದವನ ಪುಣ್ಯವನ್ನು ಬ್ರಹ್ಮಾದಿಗಳು ಕೋಟಿ ಕಲ್ಪಗಳಿಂದಲೂ ಹೇಳಲು ಶಕ್ತರಲ್ಲ.

ಯಾನಿ ಕಾನಿ ಚ ತೀರ್ಥಾನಿ ಪ್ರಭಾಸೇ ಸಂತಿ ಭಾಮಿನಿ ।
ತೇಭ್ಯೋಽತಿವಲ್ಲಭಂ ತೀರ್ಥಂ ಸರ್ವಪಾಪಪ್ರಣಾಶನಂ ॥ ೨೭ ॥

ಏಷಾಂ ಸಂರಕ್ಷಣಾರ್ಥಾಯ ಮಯಾ ವೈ ತತ್ರ ಮಾತರಃ ।
ಪೂಜನೀಯಾಃ ಪ್ರಯತ್ನೇನ ನೈವೇದ್ಯೈರ್ವಿವಿಧೈಃ ಶುಭೈಃ ॥ ೨೮ ॥

ಕೃಷ್ಣಪಕ್ಷೇ ಚತುರ್ದಶ್ಯಾಂ ಶ್ರದ್ಧಾಯುಕ್ತೇನ ಚೇತಸಾ ।
ತಾಸಾಮನುಚರಾ ದೇವಿ ಭೂತಪ್ರೇತಾಶ್ಚ ಕೋಟಿಶಃ ॥ ೨೯ ॥

ತೇಷಾಂ ಭಯವಿನಾಶಾಯ ತಾ ಮಾತೄಶ್ಚ ಪ್ರಪೂಜಯೇತ್ ।
ಅಸ್ಮಿಂಸ್ತೀರ್ಥೇ ನರಃ ಸ್ನಾತ್ವಾ ಬ್ರಹ್ಮಹತ್ಯಾಂ ವ್ಯಪೋಹತಿ ॥ ೩೦ ॥

ಯಃ ಕಶ್ಚಿತ್ಕುರುತೇ ಶ್ರಾದ್ಧಂ ಪಿತೄನುದ್ದಿಶ್ಯ ಭಕ್ತಿತಃ ।
ಉದ್ಧರೇಚ್ಚ ಪಿತುರ್ವರ್ಗಂ ಮಾತೃವರ್ಗಂ ನರೋತ್ತಮಃ ॥ ೩೧ ॥

ವೃಷಭಸ್ತತ್ರ ದಾತವ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ ।
ಏವಂ ಯಃ ಕುರುತೇ ಯಾತ್ರಾಂ ತಸ್ಯ ಫಲಮನಂತಕಂ ॥ ೩೨ ॥

---

೨೭. ಪ್ರಿಯಳೆ! ಪ್ರಭಾಸದಲ್ಲಿರುವ ಸಮಸ್ತ ತೀರ್ಥಗಳಿಗಿಂತ ಸಕಲಪಾಪವನ್ನು ಪರಿಹರಿಸುವ ಈ ಗುಪ್ತಪ್ರಯಾಗ ತೀರ್ಥವು ನನಗೆ ಪ್ರಿಯವಾದುದು.

೨೮. ಇವುಗಳನ್ನು ರಕ್ಷಿಸುವುದಕ್ಕಾಗಿ ಅಲ್ಲಿರುವ ಮಾತೃಗಳೊಡನೆ ನನ್ನನ್ನು ನಾನಾ ಬಗೆಯ ನೈವೇದ್ಯಗಳಿಂದ ಪೂಜಿಸಬೇಕು.

೨೯-೩೦. ಈ ಮಾತೃಗಳಿಗೆ ಸೇವಕರಾದ ಅನೇಕಕೋಟಿ ಭೂತಪ್ರೇತಗಳಿರುವುವು. ಇವುಗಳ ಭಯದ ಪರಿಹಾರಕ್ಕಾಗಿ ಕೃಷ್ಣಪಕ್ಷದ ಚತುರ್ದಶೀದಿನ ಶ್ರದ್ಧೆಯಿಂದ ಮಾತೃಗಳನ್ನು ಪೂಜಿಸಬೇಕು. ಇಲ್ಲಿ ಮಿಂದಮಾನವನ ಬ್ರಹ್ಮಹತ್ಯೆಯು ಪರಿಹಾರವಾಗುವುದು.

೩೧. ಇಲ್ಲಿ ಪಿತೃಗಳನ್ನುದ್ದೇಶಿಸಿ ಭಕ್ತಿಯಿಂದ ಶ್ರಾದ್ಧಮಾಡಿದವನು ಪಿತೃ ಮಾತೃವರ್ಗಗಳನ್ನು ಉದ್ಧರಿಸುವನು.

೩೨. ಯಾತ್ರಾಫಲವನ್ನು ಬಯಸುವವರು ಇಲ್ಲಿ ವೃಷಭವನ್ನು ದಾನಮಾಡಬೇಕು. ಹೀಗೆ ಯಾತ್ರೆಗೈದವನಿಗೆ ಅನಂತ ಫಲಗಳುಂಟಾಗುವುವು.

ಏವಂ ಗುಪ್ತಪ್ರಯಾಗಸ್ಯ ಮಾಹಾತ್ಮ್ಯಂ ಕಥಿತಂ ತವ ।
ಶ್ರುತ್ವಾಭಿನಂದ್ಯ ಪುರುಷಃ ಪ್ರಾಪ್ನುಯಾಚ್ಛಂಕರಾಲಯಂ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗುಪ್ತಪ್ರಯಾಗಮಾಹಾತ್ಮ್ಯವರ್ಣನಂ ನಾಮ
॥ ಅಷ್ಟನವತ್ಯುತ್ತರದ್ವಿಶತತಮೋಽಧ್ಯಾಯಃ ॥

---

೩೩. ಹೀಗೆ ನಿನಗೆ ಗುಪ್ತಪ್ರಯಾಗದ ಮಹಾತ್ಮ್ಯವನ್ನು ಹೇಳಿರುವನು. ಇದನ್ನು ಕೇಳಿ ಶ್ಲಾಘಿಸಿದ ಪುರುಷನು ಶಿವಾಲಯವನ್ನು ಹೊಂದುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ, ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗುಪ್ತಪ್ರಯಾಮಾಹಾತ್ಮ್ಯವರ್ಣನವೆಂಬ
ಇನ್ನೂರತೊಂಬತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವನವತ್ಯುತ್ತರದ್ವಿಶತತಮೋಽಧ್ಯಾಯಃ

ಮಾಧವಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವ ದಕ್ಷಿಣೇ ಭಾಗೇ ನಾತಿದೂರೇ ವ್ಯವಸ್ಥಿತಂ ।
ಶಂಖಚಕ್ರಗದಾಧಾರೀ ಮಾಧವಸ್ತತ್ರ ಸಂಸ್ಥಿತಃ । ॥ ೧ ॥

ಏಕಾದಶ್ಯಾಂ ಸಿತೇ ಪಕ್ಷೇ ಸೋಪವಾಸೋ ಜಿತೇಂದ್ರಿಯಃ ।
ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪಾನುಲೇಪನೈಃ ।
ಸ ಯಾತಿ ಪರಮಂ ಸ್ಥಾನಮಪುನರ್ಭವದಾಯಕಂ ॥ ೨ ॥

ಅತ್ರ ಗಾಥಾ ಪುರಾ ಗೀತಾ ಬ್ರಹ್ಮಣಾ ಲೋಕಕರ್ತೃಣಾ ।
ವಿಷ್ಣುಕುಂಡೇ ನರಃ ಸ್ನಾತ್ವಾ ಯೋ ವೈ ಮಾಧವಮರ್ಚಯೇತ್ ।
ಸ ಯಾಸ್ಯತಿ ಪರಂ ಸ್ಥಾನಂ ಯತ್ರ ದೇವೋ ಹರಿಃ ಸ್ವಯಂ ॥ ೩ ॥

ಕನ್ನಡದ ಅನುವಾದ

ಮಾಧವಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಗುಪ್ತ ಪ್ರಯಾಗದ ದಕ್ಷಿಣಭಾಗನಲ್ಲಿ ಸಮೀಪದಲ್ಲಿ ಶಂಖಚಕ್ರಗದೆಗಳನ್ನು ಧರಿಸಿದ ಮಾಧವನಿರುವನು.

೨. ಶುಕ್ಲಪಕ್ಷದ ಏಕಾದಶೀ ದಿನ ಉಪವಾಸಮಾಡಿ ಜಿತೇಂದ್ರಿಯನಾಗಿ ಗಂಧ, ಪುಷ್ಪ, ಅನುಲೇಪನದ್ರವ್ಯಗಳಿಂದ ಭಕ್ತಿಯಿಂದ ಆ ಮಾಧವನನ್ನು ಪೂಜಿಸಿದವನು, ಪುನರಾವೃತ್ತಿಯಿಲ್ಲದ ಸ್ಥಾನವನ್ನು ಪಡೆಯುವನು.

೩. ಲೋಕಗಳನ್ನು ಸೃಷ್ಟಿಸುವ ಬ್ರಹ್ಮನು ಈ ವಿಷಯದಲ್ಲಿ ಒಂದು ಶ್ಲೋಕವನ್ನು ಹೇಳಿರುವನು. ವಿಷ್ಣುಕುಂಡದಲ್ಲಿ ಮಿಂದುಮಾಧವನನ್ನು ಅರ್ಚಿಸಿದ ಮಾನವನು ವಿಷ್ಣುವಿನ ಸ್ಥಾನವನ್ನು ಪಡೆಯುವನು.

ಏತತ್ತೇ ಸರ್ವಮಾಖ್ಯಾತಂ ಮಾಹಾತ್ಮ್ಯಂ ವಿಷ್ಣುದೈವತಂ ।
ಸರ್ವಕಾಮಪ್ರದಂ ನೃಣಾಂ ಸರ್ವಪಾತಕನಾಶನಂ ॥ ೪ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾಧವಮಾಹಾತ್ಮ್ಯವರ್ಣನಂನಾಮ
। ನವನವತ್ಯುತ್ತರದ್ವಿಶತತಮೋಽಧ್ಯಾಯಃ ॥

---

೪. ಮನುಷ್ಯರಿಗೆ ಸಕಲೇಷ್ಟಗಳನ್ನೀಯುವುದೂ, ಸಮಸ್ತ ಪಾತಕಗಳನ್ನು ಪರಿಹರಿಸುವುದೂ ಆದ ವಿಷ್ಣುವಿನ ಮಾಹಾತ್ಮ್ಯವನ್ನೆಲ್ಲಾ ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾಧವಮಾಹಾತ್ಮ್ಯವರ್ಣನವೆಂಬ
ಇನ್ನೂರತೊಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಶತತಮೋಽಧ್ಯಾಯಃ

ಸಂಗಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯೈವೋತ್ತರದಿಗ್ಭಾಗೇ ಕಿಂಚಿದ್ವಾಯವ್ಯಸಂಸ್ಥಿತಂ ।
ಸಂಗಾಲೇಶ್ವರನಾಮಾಸ್ತಿ ಸರ್ವಪಾತಕನಾಶನಂ ॥ ೧ ॥
ತತ್ರ ಬ್ರಹ್ಮಾ ಚ ವಿಷ್ಣುಶ್ಚ ಲಿಂಗಸ್ಯಾರಾಧನೋದ್ಯತಾ ।
ಶಕ್ರಶ್ಚೈವ ಮಹಾತೇಜಾ ಲಿಂಗಂ ಪೂಜಿತವಾನ್ಪ್ರಿಯೇ ॥ ೨ ॥
ವರುಣೋ ಧನದಶ್ಚೈವ ಧರ್ಮರಾಜೋಽಥ ಪಾವಕಃ ।
ಆದಿತ್ಯೈರ್ವಸುಭಿಶ್ಚೈವ ಲೋಕಪಾಲೈಃ ಸಮಂತತಃ ॥ ೩ ॥
ಆರಾಧಿತಂ ಮಹಾಲಿಂಗಂ ಸಂಗಾಲೇಶ್ವರನಾಮಭೃತ್ ।
ಪೂಜಯಿತ್ವಾ ತು ತೇ ಸರ್ವೇ ದೃಷ್ಟ್ವಾ ಮಾಹಾತ್ಮ್ಯಮುತ್ತಮಂ ॥ ೪ ॥
ಊಚುಶ್ಚ ಸಹಸಾ ದೇವಿ ಪರಮಾನಂದಸಂಯುತಾಃ ।
ದೇವಾನಾಂ ನಿವಹೈರ್ಯಸ್ಮಾತ್ಸಮಾಗತ್ಯ ಪ್ರತಿಷ್ಠಿತಂ ।
ಸಂಗಾಲೇಶ್ವರನಾಮಾಸ್ಯ ಭವಿಷ್ಯತಿ ಧರಾತಲೇ ॥ ೫ ॥

ಕನ್ನಡದ ಅನುವಾದ

ಸಂಗಾಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಮಾಧವನು ಉತ್ತರದಲ್ಲಿ ಸ್ವಲ್ಪ ವಾಯವ್ಯ ದಿಕ್ಕಿನಲ್ಲಿ ಸಮಸ್ತ ಪಾಪಗಳನ್ನೂ ನಿವಾರಿಸುವ ಸಂಗಾಲೇಶ್ವರನೆಂಬ ಲಿಂಗವಿರುವುದು.

೨. ಪ್ರಿಯಳೆ! ಆ ಲಿಂಗವನ್ನು ಬ್ರಹ್ಮ, ವಿಷ್ಣು, ಶಕ್ರರು ಆರಾಧಿಸುತ್ತಿದ್ದರು.

೩-೫. ವರುಣ, ಕುಬೇರ, ಯಮ, ಅಗ್ನಿ ಇವರು ಆದಿತ್ಯರು, ವಸುಗಳು, ಲೋಕಪಾಲಕರುಗಳು ಇವರಿಂದ ಪೂಜಿಸಲ್ಪಟ್ಟ ಆ ಸಂಗಾಲೇಶ್ವರ ಮಹಾಲಿಂಗವನ್ನು ದರ್ಶನಗೈದು ಅವನ ಉತ್ತಮ ಮಾಹಾತ್ಮ್ಯವನ್ನು ನೋಡಿ ಅತ್ಯಂತ ಆನಂದದಿಂದ ಕೂಡಲೆ ಹೀಗೆಂದರು. "ದೇವತೆಗಳು ಎಲ್ಲರೂ ಒಟ್ಟುಗೂಡಿ ಈ ಲಿಂಗವನ್ನು ಪ್ರತಿಷ್ಠೆಮಾಡಿದ್ದರಿಂದ ಇದು ಭೂಮಿಯಲ್ಲಿ ಸಂಗಾಲೇಶ್ವರನೆಂದು ಹೆಸರನ್ನು ಪಡೆದಿರುವುದು.

ಸಂಗಾಲೇಶ್ವರನಾಮಾನಂ ಪೂಜಯಿಷ್ಯಂತಿ ಮಾನವಾಃ ।
ನ ತೇಷಾಮನ್ವಯೇ ಕಶ್ಚಿನ್ನಿರ್ಧನಃ ಸಂಭವಿಷ್ಯತಿ ॥ ೬ ॥
ಗೋಸಹಸ್ರಸ್ಯ ದತ್ತಸ್ಯ ಕುರುಕ್ಷೇತ್ರೇ ಚ ಯತ್ಫಲಂ ।
ತತ್ಫಲಂ ಸಮವಾಪ್ನೋತಿ ಸಂಗಾಲೇಶ್ವರದರ್ಶನಾತ್ ॥ ೭ ॥
ಅಮಾವಾಸ್ಯಾಂ ಚ ಸಂಪ್ರಾಪ್ಯ ಸ್ನಾನಂ ಕೃತ್ವಾ ವಿಧಾನತಃ ।
ಯಃ ಕರೋತಿ ನರಃ ಶ್ರಾದ್ಧಂ ಪಿತೄಣಾಂ ರೋಷವರ್ಜಿತಃ ।
ಪಿತರಸ್ತಸ್ಯ ತೃಪ್ಯಂತಿ ಯಾವದಾಭೂತಸಂಪ್ಲವಂ ॥ ೮ ॥
ಅರ್ಧಕ್ರೋಶಂ ಚ ತತ್ಕ್ಷೇತ್ರಂ ಸಮಂತಾತ್ಪರಿಮಂಡಲಂ ।
ಸರ್ವಕಾಮಪ್ರದಂ ನೄಣಾಂ ಸರ್ವಪಾತಕನಾಶನಂ ॥ ೯ ॥
ಅಸ್ಮಿನ್ಕ್ಷೇತ್ರೇ ಮಹಾದೇವಿ ಜೀವಾ ಉತ್ತಮಮಧ್ಯಮಾಃ ।
ಕಾಲೇನ ನಿಧನಂ ಪ್ರಾಪ್ತಾಸ್ತೇಽಪಿ ಯಾಂತಿ ಪರಾಂ ಗತಿಂ ॥ ೧೦ ॥
ಗೃಹೀತ್ವಾಽನಶನಂ ಯೇ ತು ಪ್ರಾಣಾಂಸ್ತ್ಯಕ್ಷ್ಯಂತಿ ಮಾನವಾಃ ।
ನಿಶ್ಚಯಂ ತೇ ಮಹಾದೇವಿ ಲೀಯಂತೇ ಪರಮೇಶ್ವರೇ ॥ ೧೧ ॥
ಗವಾ ಹತಾ ದ್ವಿಜಹತಾ ಯೇ ಚ ವೈ ದಂಷ್ಟ್ರಿಭಿರ್ಹತಾಃ ।
ಆತ್ಮನೋ ಘಾತಕಾ ಯೇ ತು ಸರ್ಪದಷ್ಟಾಶ್ಚ ಯೇ ಮೃತಾಃ ॥ ೧೨ ॥

---

೬. ಸಂಗಾಲೇಶ್ವರನನ್ನು ಪೂಜಿಸಿದ ಮಾನವರ ವಂಶದಲ್ಲಿ ಒಬ್ಬನೂ ಬಡವನಾದವನು ಜನಿಸುವುದಿಲ್ಲ.

೭. ಸಂಗಾಲೇಶ್ವರನನ್ನು ದರ್ಶನಮಾಡಿದರೆ ಕುರುಕ್ಷೇತ್ರದಲ್ಲಿ ಸಾವಿರ ಗೋವುಗಳನ್ನು ದಾನಮಾಡಿದ ಫಲವು ಲಭಿಸುವುದು.

೮. ಅಮಾವಾಸ್ಯೆಯ ದಿನ ಅಲ್ಲಿ ವಿಧಿಯಂತೆ ಮಿಂದು ಕೋಪರೋಷಗಳಿಲ್ಲದೆ ಪಿತೃಗಳಿಗೆ ಶ್ರಾದ್ಧಮಾಡಿದರೆ ಪಿತೃಗಳು ಪ್ರಳಯಕಾಲದವರೆಗೆ ತೃಪ್ತಿಗೊಳ್ಳುವರು.

೯. ಸುತ್ತಲೂ ಒಂದು ಮೈಲಿ ವಿಸ್ತೀರ್ಣವಾಗಿರುವ ಆ ಕ್ಷೇತ್ರವು ಮನುಷ್ಯರಿಗೆ ಸಕಲೇಷ್ಟಗಳನ್ನೂ ಕೊಡುವುದೂ, ಸಮಸ್ತ ಪಾಪಗಳನ್ನು ಪರಿಹರಿಸುವುದೂ ಆಗಿರುವುದು.

೧೦. ಮಹಾದೇವಿ! ಈ ಕ್ಷೇತ್ರದಲ್ಲಿ ಕಾಲವಶದಿಂದ ಮರಣಹೊಂದಿದ ಉತ್ತಮ ಮಧ್ಯಮ ಜೀವಿಗಳು ಉತ್ತಮ ಗತಿಯನ್ನು ಹೊಂದುವರು.

೧೧. ಮಹಾದೇವಿ! ಇಲ್ಲಿ ಉಪವಾಸಮಾಡಿ ಪ್ರಾಣವನ್ನು ತ್ಯಜಿಸಿದವರು ನಿಶ್ಚಯವಾಗಿಯೂ ಪರಮೇಶ್ವರನಲ್ಲಿ ಐಕ್ಯವನ್ನು ಹೊಂದುವರು.

೧೨–೧೪. ಗೋವು, ಬ್ರಾಹ್ಮಣ, ಕಾಡುಹಂದಿ ಮೊದಲಾದವುಗಳಿಂದ ಮೃತರಾದವರೂ, ಆತ್ಮಹತ್ಯೆಮಾಡಿಕೊಂಡವರೂ, ಸರ್ಪಕಡಿಗು ಮೃತರಾದವರೂ, ಹಾಸಿಗೆಯಲ್ಲಿ ಪ್ರಾಣಬಿಟ್ಟವರೂ, ಶೌಚವಿಲ್ಲದವರೂ ಮೋಕ್ಷಪ್ರದವಾದ ಈ

ಶಯ್ಯಾಯಾಂ ವಿಗತಪ್ರಾಣಾ ಯೇ ಚ ಶೌಚವಿವರ್ಜಿತಾಃ ।
ಅಸ್ಮಿಂಸ್ತೀರ್ಥೇ ಮಹಾಪುಣ್ಯೇ ಅಪುನರ್ಭವದಾಯಕೇ ॥ ೧೩ ॥
ದತ್ತೈಃ ಷೋಡಶಭಿಃ ಶ್ರಾದ್ಧೈರ್ವೃಷೋತ್ಸರ್ಗೇ ಕೃತೇ ಪುನಃ ।
ವಿಧಿವದ್ಭೋಜಿತೈರ್ವಿಪ್ರೈರ್ಭವೇನ್ಮುಕ್ತಿರ್ನ ಸಂಶಯಃ ॥ ೧೪ ॥
ಏವಮುಕ್ತ್ವಾ ಸುರಾಃ ಸರ್ವೇ ಗತವಂತಸ್ತ್ರಿವಿಷ್ಟಪಂ ॥ ೧೫ ॥
ಸಂಗಾಲೇಶ್ವರಮಾಹಾತ್ಮ್ಯಂ ಸಂಕ್ಷೇಪಾತ್ಕಥಿತಂ ತವ ।
ಶ್ರುತಂ ಹರತಿ ಪಾಪಾನಿ ದುಃಖಶೋಕಾಂಸ್ತಥೈವ ಚ ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಂಗಾಲೇಶ್ವರಮಾಹಾತ್ಮ್ಯವರ್ಣನಂ ನಾಮ
॥ ತ್ರಿಶತತಮೋಽಧ್ಯಾಯಃ ॥

ತೀರ್ಥದಲ್ಲಿ ವೃಷೋತ್ಸರ್ಗಮಾಡಿ ಷೋಡಶಶ್ರಾದ್ಧಗೈದು ವಿಧಿಯಂತೆ ಬ್ರಾಹ್ಮಣರಿಗೆ ಭೋಜನಮಾಡಿಸುವುದರಿಂದ ಮುಕ್ತರಾಗುವರು.

೧೫. ಸಮಸ್ತ ಸುರರೂ ಹೀಗೆಂದು ನುಡಿದು ಸ್ವರ್ಗಕ್ಕೆ ತೆರಳಿದರು.

೧೬. ಹೀಗೆ ನಿನಗೆ ಸಂಗಾಲೇಶ್ವರಮಾಹಾತ್ಮ್ಯವನ್ನು ಸಂಕ್ಷೇಪವಾಗಿ ಹೇಳಿರುವೆನು. ಇದನ್ನು ಕೇಳುವುದರಿಂದ ಎಲ್ಲಪಾಪಗಳೂ, ದುಃಖಗಳೂ ಪರಿಹಾರವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಂಗಾಲೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಏಕೋತ್ತರತ್ರಿಶತತಮೋಽಧ್ಯಾಯಃ

ಸಿದ್ಧೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಿದ್ಧೇಶ್ವರಮನುತ್ತಮಂ ।
ತಸ್ಯೈವ ಪೂರ್ವದಿಗ್ಭಾಗೇ ನಾತಿದೂರೇ ವ್ಯವಸ್ಥಿತಂ ॥ ೧ ॥
ಯದಾ ದೇವೈಃ ಸಮೇತೈಸ್ತು ಶಿವಲಿಂಗಂ ಪ್ರತಿಷ್ಠಿತಂ ।
ಸಂಗಾಲೇಶ್ವರನಾಮಾಖ್ಯಂ ಸರ್ವಪಾಪಹರಂ ಶುಭಂ ॥ ೨ ॥
ತದಾ ಸಿದ್ಧಿಗಣಾಃ ಸರ್ವೇ ಸಮಾರಾಧ್ಯ ವೃಷಧ್ವಜಂ ।
ಸ್ಥಾಪಯಾಂಚಕ್ರಿರೇ ಲಿಂಗಂ ಸರ್ವಸಿದ್ಧಿಪ್ರದಾಯಕಂ ॥ ೩ ॥
ತತ್ಸಿದ್ಧೇಶ್ವರನಾಮಾಖ್ಯಂ ಮಹಾಪಾತಕನಾಶನಂ ।
ತುಷ್ಟುವುರ್ವಿವಿಧೈಃ ಸ್ತೋತ್ರೈಸ್ತದಾ ಸಿದ್ಧಿಗಣಾಃ ಶಿವಂ ॥ ೪ ॥
ತತಸ್ತುಷ್ಟೋ ಮಹಾದೇವೋ ಯಾಚ್ಯತಾಂ ವರಮುತ್ತಮಂ ।
ನಮಸ್ಕೃತ್ಯ ತತಃ ಸರ್ವೇ ಪ್ರೋಚುಶ್ಚ ಶಶಿಶೇಖರಂ ॥ ೫ ॥

ಕನ್ನಡದ ಅನುವಾದ

ಸಿದ್ಧೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಆ ಸಂಗಾಲೇಶ್ವರನ ಪೂರ್ವದಲ್ಲಿ ಸಮೀಪದಲ್ಲಿರುವ ಸಿದ್ಧೇಶ್ವರನೆಡೆಗೆ ಹೋಗಬೇಕು.

೨–೪. ದೇವತೆಗಳು ಒಟ್ಟುಗೂಡಿ ಸಮಸ್ತ ಪಾಪವನ್ನು ಪರಿಹರಿಸುವ ಸಂಗಾಲೇಶ್ವರನೆಂಬ ಶಿವಲಿಂಗವನ್ನು ಪ್ರತಿಷ್ಠೆಮಾಡಲು ಸಕಲ ಸಿದ್ಧರು ಮಹೇಶ್ವರನನ್ನು ಪೂಜಿಸಿ ಸಮಸ್ತ ಸಿದ್ಧಿಯನ್ನೀಯುವ ಸಿದ್ಧೇಶ್ವರನೆಂಬ ಲಿಂಗವನ್ನು ಪ್ರತಿಷ್ಠೆಮಾಡಿ ವಿವಿಧಸ್ತೋತ್ರಗಳಿಂದ ಸ್ತುತಿಸಿದರು.

೫. ಆದರಿಂದ ಸಂತುಷ್ಟನಾದ ಮಹಾದೇವನು ಉತ್ತಮ ವರವನ್ನು ಬೇಡಿಕೊಳ್ಳಿರಿ ಎನ್ನಲು ಸಮಸ್ತ ಸಿದ್ಧರೂ ನಮಸ್ಕಾರಗೈದು ಅವನನ್ನು ಕುರಿತು ಇಂತೆಂದರು.

ಇಹಾಗತ್ಯ ಸರೋ ಯಸ್ತು ಸ್ನಾತ್ವಾ ಚ ವಿಧಿಪೂರ್ವಕಂ ।
ಅರ್ಚಯೇತ್ಸಿದ್ಧನಾಥಂ ಚ ಜಪೇಚ್ಚ ಶತರುದ್ರಿಯಂ ॥ ೬ ॥
ಅಘೋರಂ ವಾ ಜಪೇನ್ಮಂತ್ರಂ ಗಾಯತ್ರ್ಯಂ ಚ ಮಹೇಶ್ವರಂ ।
ಷಣ್ಮಾಸಾಭ್ಯಂತರೇಣೈವ ಜಪೇಚ್ಚ ಮುನಿಸತ್ತಮಾಃ ।
ಅಣಿಮಾದಿಗುಣೈಶ್ವರ್ಯಂ ಸಂಸಿದ್ಧಿಂ ಪ್ರಾಪ್ನುಯಾದ್ಧ್ರುವಂ ॥ ೭ ॥

ಈಶ್ವರ ಉವಾಚ :—

ಏವಂ ಭವಿಷ್ಯತೀತ್ಯುಕ್ತ್ವಾ ಹ್ಯಂತರ್ಧಾನಂ ಗತೋ ಹರಃ ।
ಸಿದ್ಧೇಶ್ವರಂ ತು ಸಂಪೂಜ್ಯ ಹ್ಯಘೋರಂ ಚ ಜಪೇನ್ನರಃ ॥ ೮ ॥
ಆಶ್ವಯುಕ್ಕೃಷ್ಣಪಕ್ಷೇ ತು ಚತುರ್ದಶ್ಯಾಂ ಮಹಾನಿಶಿ ।
ಧೈರ್ಯಮಾಲಂಬ್ಯ ನಿರ್ಭೀಕಃ ಸ ಸಿದ್ಧಿಂ ಪ್ರಾಪ್ನುಯಾನ್ನರಃ ॥ ೯ ॥
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಸಿದ್ಧೇಶ್ವರಸ್ಯ ದೇವಸ್ಯ ಸರ್ವಕಾಮಫಲಪ್ರದಂ ॥ ೧೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಿದ್ಧೇಶ್ವರಮಾಹಾತ್ಮ್ಯವರ್ಣನಂನಾಮ
॥ ಏಕೋತ್ತರಶತತಮೋಽಧ್ಯಾಯಃ ॥

೬–೭. ಇಲ್ಲಿಗೆ ಬಂದು ವಿಧಿಯಂತೆ ಮಿಂದು ಸಿದ್ಧನಾಥನನ್ನು ಪೂಜಿಸಿ ಶತರುದ್ರೀಯವನ್ನೂ ಅಘೋರಮಂತ್ರವನ್ನೂ, ಗಾಯತ್ರಿಯನ್ನೂ ಜಪಿಸಿದ ಮಾನವನು ಆರು ತಿಂಗಳೊಳಗೆ ಅಣಿಮಾದ್ಯಷ್ಟಸಿದ್ಧಿಯನ್ನು ನಿಶ್ಚಯವಾಗಿಯೂ ಹೊಂದುವನು.

೮–೯. ಈಶ್ವರನು ಹೇಳುತ್ತಾನೆ :—ಮಹೇಶ್ವರನು ಹೀಗೆಯೇ ಆಗುವುದೆಂದು ಹೇಳಿ ಅಂತರ್ಧಾನನಾಗಿಹೋದನು. ಆಶ್ವಿನ ಕೃಷ್ಣಪಕ್ಷದ ಚತುರ್ದಶೀಯ ರಾತ್ರಿ ಭಯವಿಲ್ಲದೆ ಧೈರ್ಯವನ್ನು ಹೊಂದಿ ಸಿದ್ಧೇಶ್ವರನನ್ನು ಪೂಜಿಸಿ ಅಘೋರ ಮಂತ್ರವನ್ನು ಜಪಿಸಿದ ಮಾನವನು ಸಿದ್ಧಿಯನ್ನು ಪಡೆಯುವನು.

೧೦. ದೇವಿ ! ಸಕಲೇಷ್ಟಾರ್ಥಗಳನ್ನೀಯುವುದೂ ಪಾಪವನ್ನು ಪರಿಹರಿಸುವುದೂ ಸಿದ್ಧೇಶ್ವರನ ಆದ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಿದ್ಧೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವ್ಯುತ್ತರತ್ರಿಶತತಮೋಽಧ್ಯಾಯಃ

ಗಂಧರ್ವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ —

ತತೋ ಗಚ್ಛೇನ್ಮಹಾದೇವಿ ಗಂಧರ್ವೇಶ್ವರಮುತ್ತಮಂ ।
ತಸ್ಯೈವೋತ್ತರದಿಗ್ಭಾಗೇ ಧನುಷಾಂ ಪಂಚಕೇ ಸ್ಥಿತಂ ॥ ೧ ॥
ತಂ ದೃಷ್ಟ್ವಾ ಮಹಾದೇವಿ ರೂಪವಾಂಜಾಯತೇ ನರಃ ।
ಗಂಧರ್ವೈಃ ಸ್ಥಾಪಿತಂ ಲಿಂಗಂ ಸ್ನಾತ್ವಾ ಸಂಪೂಜಯೇತ್ಸಕೃತ್ ॥
ಸರ್ವಾನ್ಕಾಮಾನವಾಪ್ನೋತಿ ರಕ್ತಕಂಠಶ್ಚ ಜಾಯತೇ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಂಧರ್ವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದ್ವ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಗಂಧರ್ವೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಸಿದ್ಧೇಶ್ವರನ ಉತ್ತರದಿಕ್ಕಿನಲ್ಲಿ ಐದು ಬಿಲ್ಲುಗಳ ದೂರದಲ್ಲಿರುವ ಗಂಧರ್ವೇಶ್ವರನೆಡೆಗೆ ಹೋಗಬೇಕು.

೨. ಅವನನ್ನು ದರ್ಶನ ಮಾಡಿದ ಮಾನವನು ಸುಂದರನಾಗುವನು. ಅಲ್ಲಿ ಮಿಂದು ಗಂಧರ್ವರು ಸ್ಥಾಪಿಸಿದ ಲಿಂಗವನ್ನು ಪೂಜಿಸಿದ ಮನುಷ್ಯನು ಸಕಲೇಷ್ಟಾರ್ಥಗಳನ್ನು ಪಡೆದು ಸುಸ್ವರವಾದ ಕಂಠವುಳ್ಳವನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಂಧರ್ವೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಎರಡನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ತ್ರ್ಯುತ್ತರತ್ರಿಶತತಮೋಽಧ್ಯಾಯಃ

ಉತ್ತರೇಶ್ವರಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಉತ್ತರೇ ದೇವಮುತ್ತಮಂ ।
ಯಸ್ತಮಾರಾಧಯೇದ್ದೇವಂ ಮಹಾಪಾತಕನಾಶನಂ ॥ ೧ ॥
ತಸ್ಯೈವ ಪಶ್ಚಿಮೇ ಭಾಗೇ ಧನುಷಾಂ ತ್ರಿತಯೇ ಸ್ಥಿತಂ
ಶೇಷಾದಿಪ್ರಮುಖೈರ್ನಾಗೈರ್ಮಹತಾ ತಪಸಾ ಯುತೈಃ ॥
ಸಮಾರಾಧ್ಯ ಮಹಾದೇವಂ ಸ್ಥಾಪಿತಂ ಲಿಂಗಮುತ್ತಮಂ ॥ ೨ ॥
ಯಸ್ತಮಾರಾಧಯೇದ್ದೇವಂ ಸರ್ಪೈರಾರಾಧಿತಂ ಪುರಾ ।
ನ ವಿಷಂ ಕ್ರಮತೇ ದೇಹೇ ತಸ್ಯ ಜನ್ಮಾವಧಿ ಪ್ರಿಯೇ ॥ ೩ ॥
ಸರ್ಪಾಸ್ತಸ್ಯ ಪ್ರಸೀದಂತಿ ನ ಕುಂಥಂತಿ ಕದಾಚನ ।
ತಸ್ಮಾತ್ಸರ್ವಪ್ರಯತ್ನೇನ ತಂಲಿಂಗಂ ಪೂಜಯೇನ್ನರಃ ॥ ೪ ॥
ತತ್ರ ಲಿಂಗಾನ್ಯನೇಕಾನಿ ಋಷಿಭಿಃ ಸ್ಥಾಪಿತಾನಿ ತು ।
ಗಂಗಾತೀರೇ ಮಹಾಪುಣ್ಯೇ ಪಶ್ಚಿಮೇ ವರವರ್ಣಿನಿ ॥ ೫ ॥

ಕನ್ನಡದ ಅನುವಾದ

ಉತ್ತರೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಆ ಗಂಧರ್ವೇಶ್ವರನ ಉತ್ತರ ಪಶ್ಚಿಮದಲ್ಲಿ ಮೂರು ಬಿಲ್ಲುಗಳ ದೂರದಲ್ಲಿರುವ ಶೇಷಾದಿ ನಾಗಗಳು ಅತ್ಯಂತ ತಪಸ್ಸನ್ನು ಮಾಡಿ ಸ್ಥಾಪಿಸಿ ಪೂಜಿಸಿದ ಮಹೇಶ್ವರನೆಡೆಗೆ ಹೋಗಬೇಕು.

೩. ಪ್ರಿಯಳೆ! ಹಿಂದೆ ಸರ್ಪಗಳು ಪೂಜಿಸಿದ ಆ ಮಹೇಶ್ವರಲಿಂಗವನ್ನು ಆರಾಧಿಸಿದ ಮಾನವನ ಶರೀರದಲ್ಲಿ ಮರಣಕಾಲದವರೆಗೆ ವಿಷವು ಏರುವುದಿಲ್ಲ.

೪. ಸರ್ಪಗಳು ಪ್ರಸನ್ನವಾಗುವುದರಿಂದಲೂ, ಅವು ಯಾವಾಗಲೂ ಕಚ್ಚುವುದಿಲ್ಲವಾದ್ದರಿಂದಲೂ ಆ ಲಿಂಗವನ್ನು ಮಾನವನು ಪೂಜಿಸಬೇಕು.

೫. ಸುಂದರಿ! ಅತಿ ಪುಣ್ಯಕರವಾದ ಪಶ್ಚಿಮ ಗಂಗಾದಡದಲ್ಲಿ ಋಷಿಗಳು ಅನೇಕ ಲಿಂಗಗಳನ್ನು ಸ್ಥಾಪಿಸಿರುವರು.

ತಾಸು ದೃಷ್ಟ್ವಾ ಪೂಜಯಿತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಅಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉತ್ತರೇಶ್ವರಮಾಹಾತ್ಮ್ಯವರ್ಣನಂನಾಮ
ತ್ರ್ಯುತ್ತರತ್ರಿಶತತಮೋಽಧ್ಯಾಯಃ

---

೬. ಮನುಷ್ಯನು ಅವುಗಳನ್ನು ನೋಡಿ ಪೂಜಿಸಿದರೆ ಸಕಲ ಪಾಪಮುಕ್ತನಾಗಿ ಸಾವಿರ ಅಶ್ವಮೇಧ ಯಾಗಗಳ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉತ್ತರೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರುತ್ತರತ್ರಿಶತತಮೋಽಧ್ಯಾಯಃ

ಸಂಗಾಲೇಶ್ವರಸಮೀಪವರ್ತಿಗಂಗಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವ ಗಂಗಾಂ ತ್ರಿಪಥಗಾಮಿನೀಂ ।
ಸಂಗಾಲೇಶಾದಥೈಶಾನ್ಯಾಂ ಧನುಷಾಂ ಸಪ್ತಕೇ ಸ್ಥಿತಾಂ ॥ ೧ ॥
ತಸ್ಯಾಂ ತ್ರಿನೇತ್ರಾ ಮತ್ಸ್ಯಾಃ ಸ್ಯುರ್ನಿತ್ಯಮಾಂಭಸಿಕಾಃ ಪ್ರಿಯೇ ।
ಕಲೌ ಯುಗೇಽಪಿ ದೃಶ್ಯಂತೇ ಸತ್ಯಂಸತ್ಯಂ ಮಯೋದಿತಂ ॥ ೨ ॥
ತಸ್ಯಾಂ ಸ್ನಾತ್ವಾ ಮಹಾದೇವಿ ಮುಚ್ಯತೇ ಪಂಚಪಾತಕೈಃ ॥ ೩ ॥

ಸೂತ ಉವಾಚ :—

ತಸ್ಯ ತದ್ವಚನಂ ಶ್ರುತ್ವಾ ವಿಸ್ಮಿತಾ ಗಿರಿಜಾ ಸತೀ ।
ಉವಾಚ ತಂ ದ್ವಿಜಶ್ರೇಷ್ಠಾಃ ಪ್ರಚಲಚ್ಚಂದ್ರಶೇಖರಂ ॥ ೪ ॥

ಕನ್ನಡದ ಅನುವಾದ

ಸಂಗಾಲೇಶ್ವರಸಮೀಪವರ್ತಿಗಂಗಾಮಾಹಾತ್ಮ್ಯವರ್ಣನ

೧. ಮಹಾದೇವಿ! ಅನಂತರ ಸಂಗಾಲೇಶನ ಈಶಾನ್ಯದಿಕ್ಕಿನಲ್ಲಿ ಏಳು ಬಿಲ್ಲುಗಳ ದೂರದಲ್ಲಿರುವ ಮೂರು ದಾರಿಗಳಿಂದ ಹರಿಯುವ ಗಂಗೆಯೆಡೆಗೆ ಹೋಗಬೇಕು.

೨. ಆ ಗಂಗೆಯ ನೀರಿನಲ್ಲಿ ಈ ಕಲಿಯುಗದಲ್ಲಿಯೂ ಮೂರು ಕಣ್ಣುಗಳುಳ್ಳ ಮತ್ಸ್ಯಗಳು ಕಾಣಿಸುವುವು.

೩. ಅಲ್ಲಿ ಮಿಂದ ಮಾನವನು ಪಂಚಮಹಾಪಾತಕಗಳಿಂದ ಮುಕ್ತನಾಗುವನು.

೪. ಸೂತನು ಹೇಳುತ್ತಾನೆ:—ದ್ವಿಜವರ್ಯರೆ! ಅವನ ಆ ಮಾತನ್ನು ಕೇಳಿ ಗಿರಿಜೆಯು ಆಶ್ಚರ್ಯಗೊಂಡು ಚಂಚಲನೂ ಚಂದ್ರಮೌಳೀಶ್ವರನೂ ಆದ ಶಿವನನ್ನು ಕುರಿತು ಇಂತೆಂದಳು.

ಪಾರ್ವತ್ಯುವಾಚ :—

ಕಥಂ ತತ್ರ ಸಮಾಯಾತಾ ಗಂಗಾ ತ್ರಿಪಥಗಾಮಿನೀ ।
ಕಥಂ ತ್ರಿನೇತ್ರಾಃ ಸಂಜಾತಾಃ ಮತ್ಸ್ಯಾ ಅಂಭಸಿಕಾಃ ಶಿವ ॥ ೫ ॥
ಏತದ್ವಿಸ್ತರತೋ ಬ್ರೂಹಿ ಯದ್ಯಹಂ ತೇ ಪ್ರಿಯಾ ವಿಭೋ ॥ ೬ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಯದಿ ಪೃಚ್ಛಸಿ ಮಾಂ ಶುಭೇ ।
ಆಸ್ತಿಕಾಃ ಶ್ರದ್ಧಧಾನಾಶ್ಚ ಭವಂತೀತಿ ಮತಿರ್ಮಮ ॥ ೭ ॥
ಯದಾ ಶಪ್ತೋ ಮಹಾದೇವೋ ಹ್ಯಜ್ಞಾನತಿಮಿರಾವೃತೈಃ ।
ಋಷಿಭಿಃ ಕೋಪಯುಕ್ತೈಶ್ಚ ಕಸ್ಮಿಂಶ್ಚಿತ್ಕಾರಣಾಂತರೇ ॥ ೮ ॥
ತದಾ ತೇ ಮುನಯಃ ಸರ್ವೇ ಶಪ್ತಂ ಜ್ಞಾತ್ವಾ ಮಹೇಶ್ವರಂ ।
ನಿರಾನಂದಂ ಜಗತ್ಸರ್ವಂ ದೃಷ್ಟ್ವಾ ಚಾತ್ಮನಮೇವ ಚ ॥ ೯ ॥
ಆರಾಧ್ಯ ಪರಮೇಶಾನಂ ದಧತಂ ಗಜರೂಪಕಂ ।
ಉನ್ನತಂ ಸ್ಥಾನಮಾನೀಯ ಸಾನಂದಂ ಚಕ್ರಿರೇ ದ್ವಿಜಾಃ ॥ ೧೦ ॥

---

೫. ಪಾರ್ವತಿಯು ಹೇಳುತ್ತಾಳೆ ಶಂಕರ! ಗಂಗೆಯು ಅಲ್ಲಿಗೆ ಹೇಗೆ ಬಂದಳು? ಜಲವಾಸಿಗಳಾದ ಮೀನುಗಳಿಗೆ ಮೂರು ಕಣ್ಣುಗಳಾದದ್ದು ಹೇಗೆ?

೬. ಸ್ವಾಮಿ! ನಾನು ನಿನಗೆ ಪ್ರಿಯಳಾಗಿದ್ದರೆ ಅದನ್ನು ವಿಸ್ತಾರವಾಗಿ ನನಗೆ ಹೇಳು.

೭. ಈಶ್ವರನು ಹೇಳುತ್ತಾನೆ:—ದೇವಿ! ನೀನು ಕೇಳುವುದಾದರೆ ನಾನು ಹೇಳುವೆನು. ಲೋಕದಲ್ಲಿ ಆಸ್ತಿಕರೂ, ಶ್ರದ್ಧೆಯುಳ್ಳವರೂ ಇದ್ದಾರೆಂದು ನಾನು ತಿಳಿಯುತ್ತೇನೆ.

೮-೧೦. ಅಜ್ಞಾನವೆಂಬ ಕತ್ತಲೆಯಿಂದ ಮುಚ್ಚಿದ ಋಷಿಗಳು ಕೋಪಗೊಂಡು ಯಾವುದೋ ಒಂದು ಕಾರಣದಿಂದ ಯಾವಾಗ ಮಹೇಶ್ವರನನ್ನು ಶಪಿಸಿದರೋ ಆಗ ಅವರು ಮಹೇಶ್ವರನು ಶಾಪಗ್ರಸ್ತನಾಗಿರುವುದನ್ನೂ, ಪ್ರಪಂಚವೂ, ತಾವೂ, ಆನಂದರಹಿತವಾಗಿರುವುದನ್ನೂ ತಿಳಿದು ಗಜರೂಪವನ್ನು ತಾಳಿದ ಪರಮೇಶ್ವರನನ್ನು ಉನ್ನತಸ್ಥಾನಕ್ಕೊಯ್ದು ಸಂತೋಷಗೊಳಿಸಿದರು.

ತತಃ ಪ್ರಭೃತಿ ಸರ್ವೇ ತೇ ಶಿವದ್ರೋಹಕರಂ ಪರಂ ।
ಆತ್ಮಾನಂ ಮೇನಿರೇ ನಿತ್ಯಂ ಪ್ರಸನ್ನೇಽಪಿ ಮಹೇಶ್ವರೇ ॥ ೧೧ ॥
ಮಹೋದಯಾನ್ಮಹಾತೀರ್ಥಂ ಸರ್ವ ಆಗತ್ಯ ಸತ್ವರಂ ।
ತಪಸ್ತೇಪುರ್ಮಹಾಘೋರಂ ಸಂಗಾಲೇಶ್ವರಸನ್ನಿಧೌ ॥ ೧೨ ॥
ಸಂಗಾಲೇಶ್ವರನಾಮಾನಂ ಸರ್ವೇ ಪೂಜ್ಯ ಯಥಾವಿಧಿ ।
ಭೃಗುರತ್ರಿಸ್ತಥಾ ಮಂಕಿಃ ಕಶ್ಯಪಃ ಕಣ್ವ ಏವ ಚ ॥ ೧೩ ॥
ಗೌತಮಃ ಕೌಶಿಕಶ್ಚೈವ ಕುಶಿಕಶ್ಚ ಮಹಾತಪಾಃ ।
ಶೂಕರೋಽಥ ಭರದ್ವಾಜೋ ಭಾರ್ಗವಿಶ್ಚ ಮಹಾತಪಾಃ ॥ ೧೪ ॥
ಜಾತೂಕರ್ಣೋ ವಶಿಷ್ಠಶ್ಚ ಸಾವರ್ಣಿಶ್ಚ ಪರಾಶರಃ ।
ಶಾಂಡಿಲ್ಯಶ್ಚ ಪುಲಸ್ತ್ಯಶ್ಚ ವತ್ಸಶ್ಚೈವ ಮಹಾತಪಾಃ ॥ ೧೫ ॥
ಏತೇ ಚಾನ್ಯೇ ಚ ಬಹವೋ ಹ್ಯಸಂಖ್ಯಾತಾ ಮಹರ್ಷಯಃ ॥ ೧೬ ॥
ಸಂಗಾಲೇಶ್ವರಮಾಸಾದ್ಯ ಪ್ರಭಾಸೇ ಪಾಪನಾಶನೇ ।
ತಪಃ ಕುರ್ವಂತಿ ಸತತಂ ಪ್ರತಿಷ್ಠಾಪ್ಯ ಮಹೇಶ್ವರಂ ॥ ೧೭ ॥
ತತಃ ಕಾಲೇನ ಮಹತಾ ತೇ ಸರ್ವೇ ಮುನಿಪುಂಗವಾಃ ।
ಧ್ಯಾನಾತ್ತ್ರಿಲೋಚನಸ್ಯೈವ ಅದೃಷ್ಟೇ ತು ಮಹೇಶ್ವರೇ ॥ ೧೮ ॥

---

೧೧. ಅದು ಮೊದಲ್ಗೊಂಡು ಆ ಮುನಿಗಳು ಪರಮೇಶ್ವರನು ಪ್ರಸನ್ನನಾಗಿದ್ದರೂ ತಾವು ಅವನಿಗೆ ದ್ರೋಹಮಾಡಿದವರೆಂದು ತಿಳಿದಿದ್ದರು.

೧೨. ಅವರು ಮಹೋದಯದಿಂದ ಮಹಾತೀರ್ಥಕ್ಕೆ ಬಂದ ಸಂಗಾಲೇಶ್ವರನ ಹತ್ತಿರ ಘೋರ ತಪಸ್ಸನ್ನು ಮಾಡಿದರು.

೧೩–೧೭. ಭೃಗು, ಅತ್ರಿ, ಮಂಕಿ, ಕಶ್ಯಪ, ಕಣ್ವ, ಗೌತಮ, ಕೌಶಿಕ, ಕುಶಿಕ, ಸೂಕರ, ಭರದ್ವಾಜ, ಭಾರ್ಗವಿ, ಜಾತೂಕರ್ಣ್ಯ, ವಸಿಷ್ಠ, ಸಾವರ್ಣಿ, ಪರಾಶರ, ಶಾಂಡಿಲ್ಯ, ಪುಲಸ್ತ್ಯ, ವತ್ಸ ಇವರೂ ಇನ್ನೂ ಇತರ ಋಷಿಗಳೂ ಪ್ರಭಾಸಕ್ಷೇತ್ರಕ್ಕೆ ಹೋಗಿ ಸಂಗಾಲೇಶ್ವರನನ್ನು ಹೊಂದಿ ಮಹೇಶ್ವರನನ್ನು ಪ್ರತಿಷ್ಠೆಮಾಡಿ ಪೂಜಿಸಿ ತಪಸ್ಸನ್ನು ಮಾಡುತ್ತಿದ್ದರು.

೧೮–೨೨. ಅನಂತರ ಆ ಮುನಿವರ್ಯರು ಬಹುಕಾಲದಮೇಲೆ ಮಹೇಶ್ವರನು ಅದೃಶ್ಯನಾಗಿರಲು ಅವನ ಧ್ಯಾನದಿಂದ ಮೂರು ಕಣ್ಣುಗಳನ್ನು ಹೊಂದಿ ಶಿವನೆಂಬ ಸಂದೇಹದಿಂದ ಪರಸ್ಪರ ನೋಡಿಕೊಳ್ಳುತ್ತ ಆ ಮಹೇಶ್ವರನ ಧ್ಯಾನದಿಂದ ತಾವು

ತ್ರಿನೇತ್ರತ್ವಮನುಪ್ರಾಪ್ತಾಸ್ತಪೋನಿಷ್ಠಾಸ್ತಪೋಧನಾಃ ।
ಪರಸ್ಪರಂ ವೀಕ್ಷಮಾಣಾಸ್ತ್ರಿನೇತ್ರಸ್ಯಾಭಿಶಂಕಯಾ ॥ ೧೯ ॥

ಸ್ತುವಂತಿ ವಿವಿಧೈಃ ಸ್ತೋತ್ರೈರ್ಮನ್ಯಮಾನಾ ಮಹೇಶ್ವರಂ ।
ಜ್ಞಾತ್ವಾ ಧ್ಯಾನೇನ ದೇವಸ್ಯ ತ್ರಿನೇತ್ರತ್ವಮುಪಾಗತಾಃ ॥ ೨೦ ॥

ಚಕ್ರುರುಗ್ರಂ ತಪಸ್ತೇ ತು ಪೂಜಾಂ ದೇವಸ್ಯ ಶೂಲಿನಃ ।
ತೇಷು ವೈ ತಪ್ಯಮಾನೇಷು ಕೃಪಾವಿಷ್ಟೋ ಮಹೇಶ್ವರಃ ॥ ೨೧ ॥

ಉವಾಚ ತಾನ್ಮುನೀನ್ಸರ್ವಾನ್ಗೃಣುಧ್ವಂ ವರಮುತ್ತಮಂ ।
ಪ್ರಸನ್ನೋಽಹಂ ಮುನಿಶ್ರೇಷ್ಠಾಸ್ತಪಸಾ ಪೂಜಯಾಪಿ ಚ ॥ ೨೨ ॥

ಋಷಯ ಊಚುಃ :—

ಯದಿ ಪ್ರಸನ್ನೋ ದೇವೇಶ ವರಂ ನೋ ದಾತುಮರ್ಹಸಿ ।
ಗಂಗಾಮಾನಯ ವೇಗೇನ ಹ್ಯಭಿಷೇಕಾಯ ನೋ ಹಸ ॥ ೨೩ ॥

ತಸ್ಯಾಂ ಕೃತಾಭಿಷೇಕಾಸ್ತು ತವ ದ್ರೋಹಕರಾ ವಯಂ ।
ಅಜ್ಞಾನಭಾವಾತ್ಪೂತತ್ವಂ ಯಾಸ್ಯಾಮಃ ಪೃಥಿವೀತಲೇ ॥ ೨೪ ॥

ಈಶ್ವರ ಉವಾಚ :—

ಯೂಯಂ ಪವಿತ್ರಕರಣಾಃ ಪಾವನಾನಾಂ ಚ ಪಾವನಾಃ ।
ಗಂಗಾಂ ಚೈವಾನಯಿಷ್ಯಾಮಿ ಯುಷ್ಮಾಕಂ ಚಿತ್ತತುಷ್ಟಯೇ ॥ ೨೫ ॥

ಮೂರು ಕಣ್ಣುಗಳುಳ್ಳವರಾಗಿದ್ದೇವೆಂದರಿತು ಅವನನ್ನು ವಿವಿಧ ಸ್ತೋತ್ರಗಳಿಂದ ಸ್ತುತಿಸುತ್ತ, ಪೂಜಿಸುತ್ತ ಘೋರ ತಪಸ್ಸನ್ನು ಮಾಡುತ್ತಿರಲು ದಯಾಳುವಾದ ಮಹೇಶ್ವರನು ಪ್ರಸನ್ನನಾಗಿ ಆ ಮುನಿಗಳನ್ನು ಕುರಿತು ವರವನ್ನು ಕೇಳಿಕೊಳ್ಳಿರಿ ಎಂದನು.

೨೩. ಋಷಿಗಳು ಹೇಳುತ್ತಾರೆ :—ದೇವೇಶ ! ನೀನು ಪ್ರಸನ್ನನಾಗಿದ್ದರೆ ನಮಗೆ ವರವನ್ನು ಕೊಡು. ನಮ್ಮ ಸ್ನಾನಕ್ಕಾಗಿ ಗಂಗೆಯನ್ನು ಶೀಘ್ರವಾಗಿ ಕರೆದು ಕೊಂಡು ಬಾ.

೨೪. ನಿನಗೆ ಅಜ್ಞಾನದಿಂದ ದ್ರೋಹಮಾಡಿದ ನಾವು ಆ ಗಂಗೆಯಲ್ಲಿ ಮಿಂದು ಭೂಮಿಯಲ್ಲಿ ಪವಿತ್ರರಾಗುವೆವು.

೨೫. ಈಶ್ವರನು ಹೇಳುತ್ತಾನೆ :—ನೀವು ಪವಿತ್ರವಾದ ಇಂದ್ರಿಯಗಳುಳ್ಳವರೂ, ಅತ್ಯಂತ ಪರಿಶುದ್ಧರೂ ಆಗಿದ್ದೀರಿ. ನಿಮ್ಮ ಮನಸ್ಸಿನ ತೃಪ್ತಿಗಾಗಿ ಗಂಗೆಯನ್ನು ಇಲ್ಲಿಗೆ ತರುವೆನು.

ಸಾವಿತ್ರ್ಯಾಧ್ವವತಾಂ ಜಾತಂ ತ್ರೈನೇತ್ರ್ಯಂ ಮುನಿಸತ್ತಮಾಃ ।
ಏವಮುಕ್ತ್ವಾ ತತಃ ಶಂಭುರ್ಧ್ಯಾನಸ್ತಿಮಿತಲೋಚನಃ ।
ಸಸ್ಮಾರ ಕ್ಷಣಮಾತ್ರೇಣ ಗಂಗಾಂ ಮೀನಕುಲಾವೃತಾಂ ॥ ೨೬ ॥
ಸ್ಮೃತಮಾತ್ರಾ ತದಾ ದೇವೀ ಗಂಗಾ ತ್ರಿಪಥಗಾಮಿನೀ ।
ಭಿತ್ವಾ ಭೂಮಿತಲಂ ಪ್ರಾಪ್ತಾ ತತ್ರ ಮೀನಕುಲಾವೃತಾ ॥ ೨೭ ॥
ಋಷಿಭಿಶ್ಚ ಯದಾ ದೃಷ್ಟ್ವಾ ಗಂಗಾ ಮೀನಯುತಾ ಶುಭಾ ।
ದೃಷ್ಟಮಾತ್ರಾಸ್ತು ತೇ ಮತ್ಸ್ಯಾಸ್ತ್ರಿನೇತ್ರತ್ವಮುಪಾಗತಾಃ ॥ ೨೮ ॥

ಈಶ್ವರ ಉವಾಚ —

ಯುಷ್ಮಾಕಂ ದರ್ಶನಾದ್ವಿಪ್ರಾಸ್ತ್ರಿನೇತ್ರತ್ವಮುಪಾಗತಾಃ ।
ಏತನ್ನಿದರ್ಶನಂ ಸರ್ವಂ ಲೋಕಾನಾಂ ಚ ಪ್ರದರ್ಶಿತಂ ॥ ೨೯ ॥

ಋಷಯ ಊಚುಃ :—

ಅಸ್ಮಿನ್ಕುಂಡೇ ಮಹಾದೇವ ಮತ್ಸ್ಯಾನಾಂ ಸಂತತಿಃ ಸದಾ ।
ತ್ರಿನೇತ್ರಾ ತ್ವತ್ಪ್ರಸಾದೇನ ಭೂಯಾತ್ಸರ್ವಾ ಯುಗೇಯುಗೇ ॥ ೩೦ ॥
ಅಸ್ಮಿನ್ಕುಂಡೇ ಸಮಾಗತ್ಯ ನರಃ ಸ್ನಾನಂ ಕರೋತಿ ಯಃ ।
ದದಾತಿ ಹೇಮ ವಿಪ್ರಾಯ ಗಾಶ್ಚ ವಸ್ತ್ರಂ ತಥಾ ತಿಲಾನ್ ॥ ೩೧ ॥

---

೨೬. ನೀವು ಶುದ್ಧರಾದ್ದರಿಂದ ನಿಮಗೆ ತ್ರಿನೇತ್ರತ್ವವುಂಟಾಯಿತು. ಶಿವನು ಹೀಗೆಂದು ಧ್ಯಾನದಿಂದ ನಿಶ್ಚಲವಾದ ಕಣ್ಣುಗಳುಳ್ಳವನಾಗಿ ಕ್ಷಣಕಾಲದಲ್ಲಿ ಮತ್ಸ್ಯಗಳಿಂದ ತುಂಬಿರುವ ಗಂಗೆಯನ್ನು ಸ್ಮರಿಸಿದನು.

೨೭. ಆಗ ಶಿವನ ಸ್ಮರಣೆಯಿಂದ ಮೀನುಗಳಿಂದ ಸಹಿತಳಾದ ಗಂಗೆಯು ಭೂಮಿಯನ್ನು ಭೇದಿಸಿಕೊಂಡು ಬಂದಳು.

೨೮. ಋಷಿಗಳು ಆ ಗಂಗೆಯನ್ನು ನೋಡಿದ ಕೂಡಲೆ ಅಲ್ಲಿರುವ ಮೀನುಗಳು ಮೂರು ಕಣ್ಣುಗಳುಳ್ಳವು ವಾದುವು.

೨೯. ಈಶ್ವರನು ಹೇಳುತ್ತಾನೆ:—ಬ್ರಾಹ್ಮಣರೆ! ನೀವು ನೋಡಿದಕೂಡಲೆ ಈ ಮೀನುಗಳು ತ್ರಿನೇತ್ರಗಳಾದುವು. ಜನರಿಗೆ ತಿಳಿಸುವುದಕ್ಕಾಗಿ ಈ ನಿದರ್ಶನವನ್ನು ತೋರಿಸಿರುತ್ತೇನೆ.

೩೦. ಋಷಿಗಳು ಹೇಳುತ್ತಾರೆ:—ಮಹಾದೇವ! ನಿನ್ನ ಅನುಗ್ರಹದಿಂದ ಪ್ರತಿ ಯುಗದಲ್ಲಿಯೂ ಈ ಕುಂಡದಲ್ಲಿರುವ ಮೀನುಗಳ ಸಂತತಿಯು ತ್ರಿನೇತ್ರವಾಗಲಿ.

೩೧–೩೨. ಮನುಷ್ಯನು ಈ ಕುಂಡಕ್ಕೆ ಬಂದು ಮಿಂದು ಅಮಾವಾಸ್ಯೆದಿನ ಬ್ರಾಹ್ಮಣನಿಗೆ ಚಿನ್ನ, ಗೋವು, ವಸ್ತ್ರ, ಎಳ್ಳುಗಳನ್ನು ದಾನಮಾಡಿದರೆ

ಅಮಾವಾಸ್ಯಾಂ ವಿಶೇಷೇಣ ತ್ರಿನೇತ್ರಃ ಸ ಪ್ರಜಾಯತಾಂ ।
ಏವಂ ಭವಿಷ್ಯತೀತ್ಯುಕ್ತ್ವಾ ಹ್ಯಂತರ್ಧಾನಂ ಗತೋ ಹರಃ ॥ ೩೨ ॥
ಬ್ರಾಹ್ಮಣಾಸ್ತುಷ್ಟಿಸಂಯುಕ್ತಾ ಗತಾಃ ಸರ್ವೇ ಮಹೋದಯಂ ॥ ೩೩ ॥
ಏತತ್ತೇ ಕಥಿತಂ ದೇವಿ ಗಂಗಾಮಾಹಾತ್ಮ್ಯಮುತ್ತಮಂ ।
ಶ್ರುತಂ ಪಾಪಪ್ರಶಮನಂ ಸರ್ವಕಾಮಫಲಪ್ರದಂ ॥ ೩೪ ॥

ಇತಿ ಶ್ರೀ ಸ್ಕಾಂದಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಂಗಾಲೇಶ್ವರಸಮೀಪವರ್ತಿಗಂಗಾಮಾಹಾತ್ಮ್ಯವರ್ಣನಂ ನಾಮ
ಚತುರುತ್ತರತ್ರಿಶತತಮೋಽಧ್ಯಾಯಃ

ಅವನು ತ್ರಿನೇತ್ರನಾಗಲಿ, ಶಿವನು ಹೀಗೆಯೇ ಆಗುವುದೆಂದು ಹೇಳಿ ಅದೃಶ್ಯನಾದನು.

೩೩. ಬ್ರಾಹ್ಮಣರು ಸಂತುಷ್ಟರಾಗಿ ಎಲ್ಲರೂ ಮಹೋದಯಕ್ಕೆ ಹೋದರು.

೩೪. ದೇವಿ ! ನಿನಗೆ ಈ ಉತ್ತಮವಾದ ಗಂಗಾಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ಕೇಳುವುದರಿಂದ ಸಕಲ ಪಾಪಗಳು ನಾಶವಾಗುವುವು. ಸಮಸ್ತೇಷ್ಟಾರ್ಥಗಳು ಲಭಿಸುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಂಗಾಲೇಶ್ವರಸಮೀಪವರ್ತಿಗಂಗಾಮಾಹಾತ್ಮ್ಯವರ್ಣನವೆಂಬ
ಮುನ್ನೂರನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ।

ಪಂಚೋತ್ತರತ್ರಿಶತತಮೋಽಧ್ಯಾಯಃ

ನಾರದಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಯಾಃ ಪೂರ್ವೇಣ ಸಂಸ್ಥಿತಂ ।
ನಾರದಾದಿತ್ಯನಾಮಾನಂ ಜರಾದಾರಿದ್ರ್ಯನಾಶನಂ ॥ ೧ ॥
ಪಶ್ಚಿಮೇ ಮೂಲಚಂಡೀಶಾದ್ಧನುಷಾಂ ಚ ಶತತ್ರಯೇ ।
ಆರಾಧ್ಯ ನಾರದೋ ದೇವಿ ಭಾಸ್ಕರಂ ಲೋಕಭಾಸ್ಕರಂ ।
ಜರಾನಿರ್ಮುಕ್ತದೇಹಸ್ತು ತತ್ಕ್ಷಣಾತ್ಸಮಪದ್ಯತ ॥ ೨ ॥

ದೇವ್ಯುವಾಚ :—

ಕಥಂ ಜರಾಮನುಪ್ರಾಪ್ತೋ ನಾರದೋ ಮುನಿಪುಂಗವಃ ।
ಕಥಮಾರಾಧಿತಃ ಸೂರ್ಯ ಏತನ್ಮೇ ವದ ಶಂಕರ ॥ ೩ ॥

ಈಶ್ವರ ಉವಾಚ :—

ಯದಾ ದ್ವಾರವತೀಂ ಪ್ರಾಪ್ತೋ ನಾರದೋ ಮುನಿಪುಂಗವಃ ।
ಸರ್ವೇ ದೃಷ್ಟಾಸ್ತದಾ ತೇನ ವಿಷ್ಣೋಃ ಪುತ್ರಾ ಮಹಾಬಲಾಃ ॥ ೪ ॥

ಕನ್ನಡದ ಅನುವಾದ

ನಾರದಾದಿತ್ಯಮಾಹಾತ್ಮ್ಯವರ್ಣನಂ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಗಂಗೆಯ ಪೂರ್ವದಲ್ಲಿ ಮೂಲ ಚಂಡೀಶನ ಪಶ್ಚಿಮದಲ್ಲಿ ಮುನ್ನೂರು ಬಿಲ್ಲುಗಳ ದೂರದಲ್ಲಿರುವ ಮುಪ್ಪು, ಬಡತನಗಳನ್ನು ಪರಿಹರಿಸುವ ನಾರದಾದಿತ್ಯನೆಡೆಗೆ ಹೋಗಬೇಕು. ಇಲ್ಲಿ ನಾರದನು ಭಾಸ್ಕರನನ್ನು ಆರಾಧಿಸಿ ಕೂಡಲೇ ಮುಪ್ಪಿಲ್ಲದ ಶರೀರವುಳ್ಳವನಾದನು.

೩. ದೇವಿಯು ಹೇಳುತ್ತಾಳೆ :—ಶಂಕರ ! ಮುನಿವರ್ಯನಾದ ನಾರದನು ಹೇಗೆ ಮುಪ್ಪನ್ನು ಹೊಂದಿದನು. ಅವನು ಹೇಗೆ ಸೂರ್ಯನನ್ನು ಪೂಜಿಸಿದನು ? ಇದನ್ನು ನನಗೆ ಹೇಳು.

೪. ಈಶ್ವರನು ಹೇಳುತ್ತಾನೆ :—ಮುನಿವರ್ಯನಾದ ನಾರದನು ದ್ವಾರವತಿಗೆ ಬರಲು ಕೃಷ್ಣನ ಮಕ್ಕಳುಗಳೆಲ್ಲ ಅವನನ್ನು ಕಂಡರು.

ತದ್ರಾಜಕುಲಮಧ್ಯೇತು ಕ್ರೀಡಮಾನಾಃ ಪರಸ್ಪರಂ ।
ಆಯಾಂತಂ ನಾರದಂ ದೃಷ್ಟ್ವಾ ಸರ್ವೇ ವಿನಯಸಂಯುತಾಃ ॥ ೫ ॥
ನಮಶ್ಚಕ್ರುರ್ಯಥಾನ್ಯಾಯಂ ವಿನಾ ಸಾಂಬಂ ತ್ವರಾನ್ವಿತಾಃ ।
ಅವಿನೀತಂ ತು ತಂ ದೃಷ್ಟ್ವಾ ಕಥಯಾಮಾಸ ನಾರದಃ ॥ ೬ ॥
ಶರೀರಮದಮತ್ತೋಽಸಿ ಯಸ್ಮಾತ್ಸಾಂಬ ಹರೇಃ ಸುತ ।
ಅಚಿರೇಣೈವ ಕಾಲೇನ ಶಾಪಂ ಪ್ರಾಪ್ಸ್ಯಸಿ ದಾರುಣಂ ॥ ೭ ॥

ಸಾಂಬ ಉವಾಚ :—

ನಮಸ್ಕಾರೇಣ ಕಿಂ ಕಾರ್ಯಮೃಷೀಣಾಂ ಚ ಜಿತಾತ್ಮನಾಂ ।
ಆಶೀರ್ವಾದೇನ ತೇಷಾಂ ಚ ತಪೋಹಾನಿಃ ಪ್ರಜಾಯತೇ ॥ ೮ ॥
ಮುನೀನಾಂ ಯಃ ಸ್ವಭಾವೋ ಹಿ ತ್ವಯಿ ಲೇಶೋ ನ ನಾರದ ।
ವಿದ್ಯತೇ ಬ್ರಹ್ಮಣಃ ಪುತ್ರ ಉಚ್ಯತೇ ಕಿಮತಃ ಪರಂ ॥ ೯ ॥
ನ ಕಲತ್ರಂ ನ ತೇ ಪುತ್ರಾ ನ ಚ ಪೌತ್ರಪ್ರಪೌತ್ರಕಾಃ ।
ನ ಗೃಹಂ ನೈವ ಚ ದ್ವಾರಂ ನ ಹಿ ಗಾವೋ ನ ವತ್ಸಕಾಃ । ॥ ೧೦ ॥

೫-೬. ಆ ಅರಮನೆಯಲ್ಲಿ ಆಡುತ್ತಿರುವ ಅವರು ಬರುತ್ತಿರುವ ನಾರದನನ್ನು ಕಂಡು ವಿನಯದಿಂದ ನ್ಯಾಯವನ್ನನುಸರಿಸಿ ತ್ವರೆಯಿಂದ ನಮಸ್ಕರಿಸಿದರು. ಆಗ ಅವಿಧೇಯನಾದ ಸಾಂಬನು ಮಾತ್ರ ನಮಸ್ಕಾರಮಾಡದಿರುವುದನ್ನು ನಾರದನು ಕಂಡು ಇಂತೆಂದನು.

೭. "ಕೃಷ್ಣಸುತನಾದ ಸಾಂಬ! ನೀನು ಶರೀರಮದದಿಂದ ಮತ್ತನಾದ ಕಾರಣ ಶೀಘ್ರವಾಗಿ ಭಯಂಕರ ಶಾಪವನ್ನು ಹೊಂದುವೆ".

೮. ಸಾಂಬನು ಹೇಳುತ್ತಾನೆ :—ಜಿತೇಂದ್ರಿಯರಾದ ಮುನಿಗಳಿಗೆ ನಮಸ್ಕಾರದಿಂದೇನು ಪ್ರಯೋಜನ? ಅವರು ಆಶೀರ್ವಾದಮಾಡಿದರೆ ಅವರ ತಪಸ್ಸು ಹಾಳಾಗುವುದು.

೯. ಬ್ರಹ್ಮನ ತನಯನಾದ ನಾರದ! ನಿನ್ನಲ್ಲಿ ಮುನಿಗಳ ಸ್ವಭಾವವು ಲೇಶವಾದರೂ ಇರುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ಏನನ್ನು ಹೇಳಲಿ.

೧೦. ನಿನಗೆ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಮನೆ, ಬಾಗಿಲು, ಗೋವು, ಕರು, ಇವುಗಳು ಯಾವುವೂ ಇಲ್ಲ.

ಬ್ರಹ್ಮಣೋ ಮಾನಸಃ ಪುತ್ರೋ ಬ್ರಹ್ಮಚರ್ಯೇ ವ್ಯವಸ್ಥಿತಃ ।
ಅಯುಕ್ತಂ ಕುರುತೇ ನಿತ್ಯಂ ಕಸ್ಮಾತ್ಪ್ರಕೃತಿರೀದೃಶೀ ॥ ೧೧ ॥
ಯುದ್ಧಂ ವಿನಾ ನ ತೇ ಸೌಖ್ಯಂ ನ ಕಲಹಂ ವಿನಾ।
ಯಾದೃಶಸ್ತಾದೃಶೋ ವಾಪಿ ವಾಗ್ವಾದೋಽಪಿ ಸದಾ ಪ್ರಿಯಃ ॥ ೧೨ ॥
ಸ್ನಾನಂ ಸಂಧ್ಯಾ ಜಪೋ ಹೋಮಸ್ತರ್ಪಣಂ ಪಿತೃದೇವಯೋಃ ।
ನಾರದಃ ಕುರುತೇ ಚಾನ್ಯದನ್ಯತ್ಕುರ್ವಂತಿ ಬ್ರಾಹ್ಮಣಾಃ ॥ ೧೩ ॥
ಕೌಮಾರೇಣ ತು ಗರ್ವಿಷ್ಠೋ ಯಸ್ಮಾನ್ಮಾಂ ಶಾಪಯಿಷ್ಯಸಿ ।
ತಸ್ಮಾತ್ತ್ವಮಪಿ ವಿಪ್ರರ್ಷೇ ಜರಾಯುಕ್ತೋ ಭವಿಷ್ಯಸಿ ॥ ೧೪ ॥
ಏವಂ ಶಪ್ತಸ್ತದಾ ದೇವಿ ನಾರದೋ ಮುನಿಪುಂಗವಃ ।
ಏಕಾಂತೇ ನಿರ್ಮಲೇ ಸ್ಥಾನೇ ಕಂಟಕಾಸ್ಥಿವಿವರ್ಜಿತೇ ॥ ೧೫ ॥
ಕೃಷ್ಣಾಜಿನಪರಿಚ್ಛನ್ನೇ ಹ್ಯುಪವಿಷ್ಟೋ ವರಾಸನೇ ।
ಋಷಿತೋಯಾತಟೇ ರಮ್ಯೇ ಪ್ರತಿಷ್ಠಾಪ್ಯ ಮಹಾಮುನಿಃ ॥ ೧೬ ॥
ಸೂರ್ಯಸ್ಯ ಪ್ರತಿಮಾಂ ರಮ್ಯಾಂ ಸರ್ವದಾರಿದ್ರ್ಯನಾಶಿನೀಂ ।
ತುಷ್ಟಾವ ವಿವಿಧೈಃ ಸ್ತೋತ್ರೈರಾದಿತ್ಯಂ ತಿಮಿರಾಪಹಂ ॥ ೧೭ ॥

---

೧೧. ಬ್ರಹ್ಮಚರ್ಯದಲ್ಲಿರುವ ಬ್ರಹ್ಮನ ಮಾನಸಪುತ್ರನಾದ ನೀನು ಏಕೆ ಇಂತಹ ಅಯೋಗ್ಯವಾದ ಕೆಲಸವನ್ನು ಮಾಡುವೆ? ಏಕೆ ನಿನ್ನ ಸ್ವಭಾವವು ಹೀಗಾಗಿರುವುದು?

೧೨. ನಿನಗೆ ಯುದ್ಧ, ಜಗಳಗಳನ್ನು ಬಿಟ್ಟರೆ ಸೌಖ್ಯವುಂಟಾಗುವುದಿಲ್ಲ. ಎಂತಹ ವಾಗ್ವಾದವೇ ಆಗಲಿ ಅದು ನಿನಗೆ ಪ್ರಿಯವಾದುದು.

೧೩. ನಾರದ! ಸ್ನಾನ, ಸಂಧ್ಯಾವಂದನೆ, ಜಪ, ಹೋಮ, ಪಿತೃದೇವತರ್ಪಣ ಇವುಗಳನ್ನು ನೀನೇ ಒಂದು ವಿಧವಾಗಿ ಮಾಡುತ್ತಿರುವೆ. ಇತರ ಬ್ರಾಹ್ಮಣರು ಬೇರೆ ವಿಧವಾಗಿ ಮಾಡುತ್ತಿರುವರು.

೧೪. ಕೌಮಾರದಿಂದ ಅಹಂಕಾರಗೊಂಡ ನೀನು ನನ್ನನ್ನು ಶಪಿಸುವುದಾದರೆ ನೀನೂ ಮುದುಕನಾಗುವೆ.

೧೫–೧೭. ದೇವಿ! ಹೀಗೆ ಸಾಂಬನು ಶಪಿಸಲು ನಾರದಮುನಿಯು ಮನೋಹರವಾದ ಋಷಿತೋಯಾ ನದಿಯ ದಡದಲ್ಲಿ ಜನರಿಲ್ಲದುದೂ, ಶುದ್ಧವೂ, ಮುಳ್ಳು ಮೂಳೆಗಳಿಲ್ಲದುದೂ ಆದ ಸ್ಥಳದಲ್ಲಿ ಕೃಷ್ಣಾಜಿನದ ಹಾಸುಗೆಯುಳ್ಳ ಉತ್ತಮಾಸದಲ್ಲಿ ಕುಳಿತುಕೊಂಡವನಾಗಿ ದಾರಿದ್ರ್ಯವನ್ನು ನಿವಾರಿಸುವ ಸೂರ್ಯನ ಪ್ರತಿಮೆಯನ್ನು ಪ್ರತಿಷ್ಠೆಮಾಡಿ ಅಂಧಕಾರವನ್ನು ಪರಿಹರಿಸುವ ಸೂರ್ಯನನ್ನು ಬಗೆಬಗೆಯ ಸ್ತೋತ್ರಗಳಿಂದ ಸ್ತುತಿಸಿದನು.

ನಮಸ್ತೃಗ್ಯಜುಸ್ಸ್ವರೂಪಾಯ ಸಾಮ್ನಾಂ ಧಾಮಗತೇ ನಮಃ ।
ಜ್ಞಾನೈಕರೂಪದೇಹಾಯ ನಿರ್ಧೂತತಮಸೇ ನಮಃ ॥ ೧೮ ॥
ಶುದ್ಧಜ್ಯೋತಿಃಸ್ವರೂಪಾಯ ನಿರ್ಮೂರ್ತಾಯಾಮಲಾತ್ಮನೇ ।
ವರಿಷ್ಠಾಯ ವರೇಣ್ಯಾಯ ಸರ್ವಸ್ಮೈ ಪರಮಾತ್ಮನೇ ॥ ೧೯ ॥
ನಮೋಽಖಿಲಜಗದ್ವ್ಯಾಪಿಸ್ವರೂಪಾನಂದಮೂರ್ತಯೇ ।
ಸರ್ವಕಾರಣಭೂತಾಯ ನಿಷ್ಠಾಯೈ ಜ್ಞಾನಚೇತಸಾಂ ॥ ೨೦ ॥
ನಮಃ ಸರ್ವಸ್ವರೂಪಾಯ ಪ್ರಕಾಶಾಲಕ್ಷ್ಯರೂಪಿಣೇ ।
ಭಾಸ್ಕರಾಯ ನಮಸ್ತುಭ್ಯಂ ತಥಾ ದಿನಕೃತೇ ನಮಃ ॥ ೨೧ ॥

ಈಶ್ವರ ಉವಾಚ :—

ಏವಂ ಸಂಸ್ತುವತಸ್ತಸ್ಯ ಪುರತಸ್ತಸ್ಯ ಚೇತಸಾ ।
ಪ್ರಾದುರ್ಬಭೂವ ದೇವೇಶಿ ಜಗಚ್ಚಕ್ಷುಃ ಸನಾತನಃ ।
ಉವಾಚ ಪರಮಂ ಪ್ರೀತೋ ನಾರದಂ ಮುನಿಪುಂಗವಂ ॥ ೨೨ ॥

ಸೂರ್ಯ ಉವಾಚ :—

ವರಂ ವರಯ ವಿಪ್ರರ್ಷೇ ಯಸ್ತೇ ಮನಸಿ ವರ್ತತೇ ।
ತುಷ್ಟೋಽಹಂ ತವ ದಾಸ್ಯಾಮಿ ಯದ್ಯಪಿ ಸ್ಯಾತ್ಸುದುರ್ಲಭಂ ॥ ೨೩ ॥

---

೧೮. "ಋಕ್ಸ್ವರೂಪನೂ, ಸಾಮವೇದಗಳಿಗೆ ಆಶ್ರಯನೂ, ಜ್ಞಾನವೇ ಮುಖ್ಯ ದೇಹವಾಗುಳ್ಳವನೂ, ತಮಸ್ಸನ್ನು ಪರಿಹರಿಸುವವನೂ ಆದ ಓ ಸೂರ್ಯ! ನಿನಗೆ ನಮಸ್ಕಾರವು.

೧೯. ಶುದ್ಧ ತೇಜಸ್ಸ್ವರೂಪನೂ, ದೇಹರಹಿತನೂ, ನಿರ್ಮಲಸ್ವರೂಪನೂ, ಶ್ರೇಷ್ಠನೂ ಆದ ಎಲೈ ಸೂರ್ಯನೆ! ನಿನಗೆ ನಮಸ್ಕಾರವು.

೨೦. ಸಮಸ್ತ ಜಗತ್ತುಗಳನ್ನು ವ್ಯಾಪಿಸಿರುವ ಆನಂದಮೂರ್ತಿಯೂ, ಸಮಸ್ತ ಕಾರಣನೂ, ಜ್ಞಾನಿಗಳಿಗೆ ಆಶ್ರಯನೂ ಆದ ಸೂರ್ಯನಿಗೆ ನಮಸ್ಕಾರವು.

೨೧. ಸಕಲಸ್ವರೂಪನೂ, ಪ್ರಕಾಶವೂ, ಅಲಕ್ಷ್ಯವೂ ಆದ ಸ್ವರೂಪವುಳ್ಳ ಭಾಸ್ಕರನಿಗೆ ನಮಸ್ಕಾರವು.

೨೨. ಈಶ್ವರನು ಹೇಳುತ್ತಾನೆ :—ದೇವೇಶಿ ! ಹೀಗೆ ಸ್ತುತಿಸುತ್ತಿರುವ ಆ ನಾರದನ ಮುಂದೆ ಜಗತ್ತಿಗೆ ಕಣ್ಣಾದ ಸೂರ್ಯನು ಪ್ರತ್ಯಕ್ಷನಾಗಿ ಅವನನ್ನು ಕುರಿತು ಇಂತೆಂದನು.

೨೩. ಸೂರ್ಯನು ಹೇಳುತ್ತಾನೆ :—ವಿಪ್ರರ್ಷೇ! ನಿನಗಿಷ್ಟವಾದ ವರವನ್ನು ಕೇಳಿಕೊ. ಸಂತುಷ್ಟನಾದ ನಾನು ಅದು ದುರ್ಲಭವಾಗಿದ್ದರೂ ನಿನಗೆ ಕೊಡುವೆನು.

ನಾರದ ಉವಾಚ :—

ಕುಮಾರವಯಸಾ ಯುಕ್ತೋ ಜರಾಯುಕ್ತಕಲೇವರಃ ।
ಪ್ರಸಾದಾತ್ತ್ವಂ ಹಿ ತೇ ದೇವ ಯದಿ ತುಷ್ಟೋ ದಿವಾಕರ ॥ ೨೪ ॥
ಸಪ್ತಮ್ಯಾಂ ರವಿವಾರೇಣ ಯಸ್ತ್ವಾಂ ಪಶ್ಯತಿ ಮಾನವಃ ।
ತಸ್ಯ ರೋಗಭಯಂ ಮಾಸ್ತು ಪ್ರಸಾದಾತ್ತಿಮಿರಾಪಹ ॥ ೨೫ ॥

ಈಶ್ವರ ಉವಾಚ :—

ಏವಂ ಭವಿಷ್ಯತೀತ್ಯುಕ್ತ್ವಾ ಹ್ಯಂತರ್ಧಾನಂ ಗತೋ ರವಿಃ ।
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಸಕಲಂ ತವ ।
ನಾರದಾದಿತ್ಯದೇವಸ್ಯ ಸರ್ವಪಾತಕನಾಶನಂ ॥ ೨೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾರದಾದಿತ್ಯಮಾಹಾತ್ಮ್ಯವರ್ಣನಂ ನಾಮ
॥ ಪಂಚೋತ್ತರತ್ರಿಶತತಮೋಽಧ್ಯಾಯಃ ॥

---

೨೪. ನಾರದನು ಹೇಳುತ್ತಾನೆ:—ಭಾಸ್ಕರ! ನೀನು ಸಂತುಷ್ಟನಾಗಿದ್ದರೆ ನಿನ್ನ ಅನುಗ್ರಹದಿಂದ ಮುದುಕನಾದ ನಾನು ಕುಮಾರನಾಗುವಂತೆ ಮಾಡು.

೨೫ ಅಂಧಕಾರನಿವಾರಕನಾದ ಎಲೈ ಸೂರ್ಯನೆ! ಸಪ್ತಮೀ ಭಾನುವಾರದಿನ ನಿನ್ನನ್ನು ನೋಡಿದವನಿಗೆ ನಿನ್ನ ಅನುಗ್ರಹದಿಂದ ರೋಗಭಯವುಂಟಾಗದಿರಲಿ.

೨೬. ಈಶ್ವರನು ಹೇಳುತ್ತಾನೆ:—ಸೂರ್ಯನು ಹೀಗೆಯೆ ಆಗುವುದೆಂದು ಹೇಳಿ ಅದೃಶ್ಯನಾದನು ದೇವಿ! ನಾರದಾದಿತ್ಯದೇವನ ಸಕಲಪಾಪಗಳನ್ನು ನಿವಾರಿಸುವ ಈ ಸಂಪೂರ್ಣ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ನಾರದಾದಿತ್ಯಮಾಹಾತ್ಮ್ಯವರ್ಣನವೆಂಬ
ಮುನ್ನೂರಐದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡುತ್ತರತ್ರಿಶತತಮೋಽಧ್ಯಾಯಃ

ಸಾಂಬಾದಿತ್ಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಾಂಬಾದಿತ್ಯಮನುತ್ತಮಂ ।
ತಸ್ಮಾದುತ್ತರಭಾಗೇ ತು ಸರ್ವಪಾತಕನಾಶನಂ ॥ ೧ ॥
ಯತ್ರ ಸಾಂಬಸ್ತಪಸ್ತಪ್ತ್ವಾ ಹ್ಯಾರಾಧ್ಯ ಚ ದಿವಾಕರಂ ।
ಪ್ರಾಪ್ತವಾನ್ಸುಂದರಂ ದೇಹಂ ಸಹಸ್ರಾಂಶುಪ್ರಸಾದತಃ ॥ ೨ ॥
ಯದಾ ರೋಷೇಣ ಸಂಶಪ್ತಃ ಪಿತ್ರಾ ಜಾಂಬವತೀಸುತಃ ।
ಆರಾಧಯಾಮಾಸ ತದಾ ವಿಷ್ಣುಂ ಕಮಲಲೋಚನಂ ॥ ೩ ॥
ಅನುಗ್ರಹಾರ್ಥಂ ಶಾಪಸ್ಯ ಸಾಂಬೋ ಜಾಂಬವತೀಸುತಃ ।
ಪ್ರಸನ್ನವದನೋ ಭೂತ್ವಾ ವಿಷ್ಣುಃ ಪ್ರೋವಾಚ ತಂ ಪ್ರತಿ ॥ ೪ ॥
ಗಚ್ಛ ಪ್ರಾಭಾಸಿಕೇ ಕ್ಷೇತ್ರೇ ಬ್ರಹ್ಮಭಾಗಮನುತ್ತಮಂ ।
ಋಷಿತೋಯಾತಟೇ ರಮ್ಯೇ ಬ್ರಾಹ್ಮಣೈರುಪಶೋಭಿತೇ ॥ ೫ ॥

ಕನ್ನಡದ ಅನುವಾದ

ಸಾಂಬಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಆ ನಾರದಾದಿತ್ಯನ ಉತ್ತರ ದಿಕ್ಕಿನಲ್ಲಿರುವ ಸಕಲಪಾಪಗಳನ್ನೂ ಪರಿಹರಿಸುವ ಸಾಂಬಾದಿತ್ಯನೆಡೆಗೆ ಹೋಗಬೇಕು.

೨. ಅಲ್ಲಿ ಸಾಂಬನು ತಪಸ್ಸನ್ನು ಮಾಡಿ ಸೂರ್ಯನನ್ನಾರಾಧಿಸಿ ಅವನ ಅನುಗ್ರಹದಿಂದ ಸುಂದರವಾದ ಶರೀರವನ್ನು ಪಡೆದಿರುವನು.

೩. ತಂದೆಯಾದ ಕೃಷ್ಣನು ಕೋಪದಿಂದ ಜಾಂಬವತೀ ಸುತನಾದ ಸಾಂಬನನ್ನು ಶಪಿಸಲು ಅವನು ವಿಷ್ಣುವನ್ನು ಪೂಜಿಸಿದನು.

೪. ವಿಷ್ಣುವು ಜಾಂಬವತೀಸುತನಾದ ಆ ಸಾಂಬನಿಗೆ ಅನುಗ್ರಹಮಾಡಲು ಪ್ರಸನ್ನಮುಖನಾಗಿ ಅವನನ್ನು ಕುರಿತು ಇಂತೆಂದನು.

೫. "ನೀನು ಪ್ರಾಭಾಸಿಕ ಕ್ಷೇತ್ರಕ್ಕೆ ಹೋಗಿ ಮನೋಹರವೂ, ಬ್ರಾಹ್ಮಣರಿಂದ ವಿರಾಜಿಸುವುದೂ ಆದ ಋಷಿತೋಯಾ ದಡದಲ್ಲಿರುವ ಬ್ರಹ್ಮಭಾಗವನ್ನು ಹೊಂದು.

ತತ್ರಾಹಂ ಸೂರ್ಯರೂಪೇಣ ವರಂ ದಾಸ್ಯಾಮಿ ಪುತ್ರಕ ।
ಇತ್ಯುಕ್ತಃ ಸ ತದಾ ಸಾಂಬೋ ವಿಷ್ಣುನಾ ಪ್ರಭವಿಷ್ಣುನಾ ॥ ೬ ॥
ಗತಃ ಪ್ರಾಭಾಸಿಕೇ ಕ್ಷೇತ್ರೇ ರಮ್ಯೇ ಶಿವಪುರೇ ಶಿವೇ ।
ತತ್ರಾರಾಧ್ಯ ಪರಂ ದೇವಂ ಭಾಸ್ಕರಂ ಪಾರಿತಸ್ಕರಂ ॥ ೭ ॥
ಪ್ರಸಾದಯಾಮಾಸ ತದಾ ಸ್ತುತ್ವಾ ಸ್ತೋತ್ರೈರನೇಕಧಾ ॥ ೮ ॥
ಪ್ರತ್ಯುವಾಚ ರವಿಃ ಸಾಂಬಂ ಪ್ರಸನ್ನಸ್ತೇ ಸ್ತವೇನ ವೈ ।
ಶೀಘ್ರಂ ಗಚ್ಛ ನರಶ್ರೇಷ್ಠ ಋಷಿತೋಯಾತಟೇ ಶುಭೇ ॥ ೯ ॥
ಇತ್ಯುಕ್ತಃ ಸ ತವಾಗತ್ಯ ಋಷಿತೋಯಾತಟಂ ಶುಭಂ ।
ನಾರದೋ ಯತ್ರ ಬ್ರಹ್ಮರ್ಷಿಸ್ತಪಸ್ತಪ್ಯತಿ ಚೈವ ಹಿ ॥ ೧೦ ॥
ತತ್ರ ಗತ್ವಾ ಹರೇಃ ಸೂನುರುನ್ನತಸ್ಥಾನವಾಸಿನಃ ।
ಆಸನ್ಯೇ ಬ್ರಾಹ್ಮಣಾಸ್ತಾನ್ಸ ಇದಂ ವಚನಮುಬ್ರವೀತ್ ॥ ೧೧ ॥

ಸಾಂಬ ಉವಾಚ :—

ಏಷ ವೈ ಬ್ರಹ್ಮಣೋ ಭಾಗಃ ಪ್ರಭಾಸೇ ಕ್ಷೇತ್ರ ಉತ್ತಮೇ ।
ಅತ್ರ ವೈ ಬ್ರಾಹ್ಮಣಾ ಯೇ ತು ತೇ ವೈ ಶ್ರೇಷ್ಠಾಃ ಸ್ಮೃತಾ ಭುವಿ ॥ ೧೨ ॥

೬–೮. ಮಗು! ಅಲ್ಲಿ ನಾನು ಸೂರ್ಯರೂಪದಿಂದ ನಿನಗೆ ವರವನ್ನೀಯುವೆನು. ವಿಷ್ಣುವು ಹೀಗೆನ್ನಲು ಸಾಂಬನು ಪ್ರಾಭಾಸಿಕಕ್ಷೇತ್ರಕ್ಕೆ ಹೋಗಿ ಅಲ್ಲಿ ಮನೋಹರವಾದ ಶಿವಪುರದಲ್ಲಿ ಭಾಸ್ಕರನನ್ನು ಪೂಜಿಸಿ ಅನೇಕ ಬಗೆಯ ಸ್ತೋತ್ರಗಳಿಂದ ಅವನನ್ನು ಸಂತೋಷಗೊಳಿಸಿದನು.

೯. ಸೂರ್ಯನು ಸಾಂಬನನ್ನು ಕುರಿತು, "ನಿನ್ನೀ ಸ್ತೋತ್ರದಿಂದ ಪ್ರಸನ್ನನಾಗಿದ್ದೇನೆ. ನೀನು ಶೀಘ್ರವಾಗಿ ಋಷಿತೋಯಾತಟಕ್ಕೆ ಹೋಗು" ಎಂದನು.

೧೦. ಸೂರ್ಯನು ಹೀಗೆ ಹೇಳಲು ಸಾಂಬನು ಬ್ರಹ್ಮರ್ಷಿಯಾದ ನಾರದನು ತಪಸ್ಸನ್ನು ಮಾಡುತ್ತಿರುವ ಋಷಿತೋಯಾ ತಟಕ್ಕೆ ಹೋಗಿ ಅಲ್ಲಿ ಉನ್ನತ ಸ್ಥಾನದಲ್ಲಿ ವಾಸಿಸುತ್ತಿರುವ ಬ್ರಾಹ್ಮಣರನ್ನು ಕುರಿತು ಇಂತೆಂದನು.

೧೧. ಸಾಂಬನು ಹೇಳುತ್ತಾನೆ:—ಇದು ಉತ್ತಮವಾದ ಪ್ರಭಾಸಕ್ಷೇತ್ರದಲ್ಲಿರುವ ಬ್ರಾಹ್ಮಣ ಭಾಗವು. ಇಲ್ಲಿ ವಾಸಿಸುವ ಬ್ರಾಹ್ಮಣರು ಶ್ರೇಷ್ಠರು.

೧೨. ದ್ವಿಜರೆ! ನಾನು ನಿಮ್ಮ ಮಾತಿನಿಂದ ಸೂರ್ಯನನ್ನು ಪೂಜಿಸುವೆನು. ನನಗೆ ವಿಷ್ಣುವು ಹಿಂದೆ ಈ ಸ್ಥಾನವನ್ನು ಸೂಚಿಸಿರುವನು.

ಭವತಾಂ ವಚನಾದ್ವಿಪ್ರಾಃ ಸೂರ್ಯಮಾರಾಧಯಾಮ್ಯಹಂ ।
ಮಮ ವೈ ಪೂರ್ವಮಾದಿಷ್ಟಂ ಸ್ಥಾನಮೇತಚ್ಚ ವಿಷ್ಣುನಾ ॥ ೧೩ ॥

ವಿಪ್ರಾ ಊಚುಃ :—

ಸಿದ್ಧಿಸ್ತೇ ಭವಿತಾ ಸಾಂಬ ಆರಾಧಯ ದಿವಾಕರಂ ।
ಇತ್ಯುಕ್ತಃ ಸ ತದಾ ವಿಪ್ರೈಃ ಪ್ರವಿಷ್ಟೋಽಥ ಪ್ರಭಾಕರಂ ॥ ೧೪ ॥
ನಿತ್ಯಮಾರಾಧಯಾಮಾಸ ಸಾಂಬೋ ಜಾಂಬವತೀಸುತಃ ।
ತಪೋನಿಷ್ಠಂ ಚ ತಂ ದೃಷ್ಟ್ವಾ ವಿಷ್ಣುಃ ಕಾರುಣಿಕೋ ಮಹಾನ್ ॥ ೧೫ ॥
ಇದಂ ವೈ ಚಿಂತಯಾಮಾಸ ಪುತ್ರವಾತ್ಸಲ್ಯಸಂಯುತಃ ।
ಯಥೈಶ್ವರ್ಯಪ್ರದೋ ರುದ್ರೋ ಯಥಾ ವಿಷ್ಣುಶ್ಚ ಮುಕ್ತಿದಃ ॥ ೧೬ ॥
ಯಜ್ಞೈರಿಷ್ಟೋ ಹಿ ದೇವೇಂದ್ರೋ ಯಥಾ ಸ್ವರ್ಗಪ್ರದಃ ಸ್ಮೃತಃ ।
ಶುದ್ಧಿಕರ್ತೃ ಯಥಾ ತೋಯಂ ಮೃತ್ತಿಕಾಭಸ್ಮಸಂಯುತಂ ।
ದಹನಾತ್ಮಾ ಯಥಾ ವಹ್ನಿರ್ವಿಘ್ನಹರ್ತಾ ಗಣೇಶ್ವರಃ ॥ ೧೭ ॥
ಸ್ವಚ್ಛಂದಭಾರತೀದಾನೇ ಯಥಾ ಬ್ರಹ್ಮಸುತಾ ನೃಣಾಂ ।
ತಥಾರೋಗ್ಯಪ್ರದಾತಾ ಚ ನಾನ್ಯೋ ದೇವೋ ದಿವಾಕರಾತ್ ॥ ೧೮ ॥
ಅನೇಕಧಾಽಽರಾಧಿತೋಽಪಿ ಸ ದೇವೋ ಭಾಸ್ಕರಃ ಶುಚಿಃ ।
ನ ದದಾತಿ ವರಂ ಯತ್ತು ತನ್ಮೇ ಶಾಪಸ್ಯ ಕಾರಣಾತ್ ॥ ೧೯ ॥

೧೪–೧೮. "ಸಾಂಬ! ನಿನ್ನ ತಪಸ್ಸು ಸಿದ್ಧಿಸುವುದು. ನೀನು ಸೂರ್ಯನನ್ನು ಆರಾಧಿಸು". ಎಂದು ಬ್ರಾಹ್ಮಣರು ಹೇಳಲು ಸಾಂಬನು ಆ ಬ್ರಹ್ಮಭಾಗವನ್ನು ಪ್ರವೇಶಿಸಿ ನಿತ್ಯವೂ ಸೂರ್ಯನನ್ನು ಪೂಜಿಸಿದನು. ಅತ್ಯಂತ ದಯಾಳುವಾದ ವಿಷ್ಣುವು ತಪೋನಿರತನಾದ ಆ ಸಾಂಬನನ್ನು ಕಂಡು ಮಗನಲ್ಲಿರುವ ಪ್ರೀತಿಯಿಂದ ಹೀಗೆ ಆಲೋಚಿಸಿದನು. ರುದ್ರನು ಐಶ್ವರ್ಯವನ್ನೂ, ವಿಷ್ಣುವು ಮುಕ್ತಿಯನ್ನೂ, ಯಜ್ಞಗಳಿಂದ ಪೂಜಿಸಲ್ಪಟ್ಟ ಇಂದ್ರನು ಸ್ವರ್ಗವನ್ನೂ ಕೊಡುವಂತೆಯೂ, ಮೃತ್ತಿಕಾ, ಭಸ್ಮಗಳಿಂದ ಸಹಿತವಾದ ನೀರು ಶುದ್ಧಿ ಮಾಡುವಂತೆಯೂ, ಗಣೇಶನು ವಿಘ್ನಗಳನ್ನು ಪರಿಹರಿಸುವಂತೆಯೂ, ಸರಸ್ವತಿಯು ಸ್ವೇಚ್ಛೆಯಾಗಿ, ವಿದ್ಯೆಯನ್ನೀಯುವಂತೆಯೂ. ಸೂರ್ಯನ ಹೊರತು ಬೇರೆ ಆರೋಗ್ಯವನ್ನು ಕೊಡುವವರಿಲ್ಲ

೧೯. ಬಹುವಿಧವಾಗಿ ಪೂಜಿಸಿದರೂ ಸೂರ್ಯನು ವರವನ್ನು ಕೊಡದಿರುವುದಕ್ಕೆ ನನ್ನ ಶಾಪವೇ ಕಾರಣವಾಗಿರುವುದು.

ಏವಂ ಸಂಚಿಂತ್ಯ ಭಗವಾನ್ವಿಷ್ಣುಃ ಕಮಲಲೋಚನಃ ।
ಸೂರ್ಯರೂಪಂ ಸಮಾಶ್ರಿತ್ಯ ತಸ್ಯ ತುಷ್ಟೋ ಜನಾರ್ದನಃ ॥ ೨೦ ॥
ಯೋಽಪರನಾರಾಯಣಾಖ್ಯಸ್ತಸ್ಯೈವ ಸನ್ನಿಧೌ ಸ್ಥಿತಃ ।
ಪ್ರತ್ಯಕ್ಷಃ ಸ ತತೋ ವಿಷ್ಣುಃ ಸೂರ್ಯರೂಪೀ ದಿವಾಕರಃ ।
ಉವಾಚ ಪರಮಪ್ರೀತೋ ವರದಃ ಪುಣ್ಯಕರ್ಮಣಾಂ ॥ ೨೧ ॥
ಅಲಂ ಕ್ಲೇಶೇನ ತೇ ಸಾಂಬ ಕಿಮರ್ಥಂ ತಪ್ಯಸೇ ತಪಃ ।
ಪ್ರಸನ್ನೋಽಹಂ ಹರೇಃ ಸೂನೋ ವರಂ ವರಯ ಸುವ್ರತ ॥ ೨೨ ॥

ಸಾಂಬ ಉವಾಚ :—

ನಿರ್ಮಲಸ್ತ್ವತ್ಪ್ರಸಾದೇನ ಕುಷ್ಠಮುಕ್ತಕಲೇವರಃ ।
ಭವಾನಿ ದೇವದೇವೇಶ ಪ್ರತ್ಯಕ್ಷಾಂಬರಭೂಷಣ ।
ಅಸ್ಮಿನ್ಸ್ಥಾನೇ ಸ್ಥಿತೋ ರಮ್ಯೇ ನಿತ್ಯಂ ಸನ್ನಿಹಿತೋ ಭವ ॥ ೨೩ ॥

ಸೂರ್ಯ ಉವಾಚ :—

ಅಧುನಾ ನಿರ್ಮಲೋ ದೇಹಸ್ತವ ಸಾಂಬ ಭವಿಷ್ಯತಿ ।
ಇಹಾಗತ್ಯ ನರೋ ಯಸ್ತು ಸಪ್ತಮ್ಯಾಂ ರವಿವಾಸರೇ ।
ಉಪವಾಸಪರೋ ಭೂತ್ವಾ ರಾತ್ರೌ ಜಾಗರಣೇ ಸ್ಥಿತಃ ॥ ೨೪ ॥
ಅಷ್ಟಾದಶಾನಿ ಕುಷ್ಠಾನಿ ಪಾಪರೋಗಾಸ್ತಥೈವ ಚ ।
ಕದಾಚಿನ್ನ ಭವಿಷ್ಯಂತಿ ಕುಲೇ ತಸ್ಯ ಮಹಾತ್ಮನಃ ॥ ೨೫ ॥

---

೨೦. ಪೂಜ್ಯನೂ, ಪುಂಡರೀಕಾಕ್ಷನೂ ಆದ ವಿಷ್ಣುವು ಹೀಗೆ ಆಲೋಚಿಸಿ ಸೂರ್ಯನ ರೂಪವನ್ನು ಆಶ್ರಯಿಸಿ ಆ ಸಾಂಬನಿಗೆ ಪ್ರಸನ್ನನಾದನು.

೨೧. ಸೂರ್ಯರೂಪಿಯನೂ ಪುಣ್ಯಕರ್ಮಗಳಿಗೆ ವರವನ್ನೀಯುವನೂ ಆದ ನಾರಾಯಣನು ಅಪರನಾರಾಯಣನ ಹತ್ತಿರ ಸಾಂಬನಿಗೆ ಪ್ರತ್ಯಕ್ಷನಾಗಿ ಅತ್ಯಂತ ಸಂತೋಷದಿಂದ ಇಂತೆಂದನು.

೨೨. "ಸಾಂಬ! ದುಃಖಪಡಬೇಡ ಏತಕ್ಕೆ ತಪಸ್ಸನ್ನು ಮಾಡುವೆ? ನಾನು ನಿನ್ನಲ್ಲಿ ಪ್ರಸನ್ನನಾಗಿರುವೆನು. ವರವನ್ನು ಕೇಳಿಕೊ".

೨೩. ಸಾಂಬನು ಹೇಳುತ್ತಾನೆ :—ಆಕಾಶಕ್ಕೆ ಅಲಂಕಾರ ಭೂತನಾದ ಭಾಸ್ಕರ! ನಿನ್ನ ಅನುಗ್ರಹದಿಂದ ಶುದ್ಧನೂ, ಕುಷ್ಠರೋಗವಿಲ್ಲದ ಶರೀರವುಳ್ಳವನೂ ಆಗುವಂತೆ ಮಾಡು. ಈ ರಮ್ಯಸ್ಥಾನದಲ್ಲಿ ಯಾವಾಗಲೂ ಸನ್ನಿಹಿತನಾಗಿರು.

೨೪–೨೫. ಸೂರ್ಯನು ಹೇಳುತ್ತಾನೆ:—ಸಾಂಬ! ಈಗ ನಿನ್ನ ದೇಹವು ನಿರ್ಮಲವಾಗುವುದು. ಸಪ್ತಮೀ ಭಾನುವಾರದಿನ ಇಲ್ಲಿಗೆ ಬಂದು ಉಪವಾಸ, ಜಾಗರಣೆಗಳನ್ನು ಮಾಡಿದ ಮಹಾತ್ಮನ ವಂಶದಲ್ಲಿ ಹದಿನೆಂಟು ವಿಧಕುಷ್ಠರೋಗಗಳೂ, ಪಾಪರೋಗಗಳೂ ಉಂಟಾಗುವುದಿಲ್ಲ.

ಕೃತ್ವಾ ಸ್ನಾನಂ ನರೋ ಯಸ್ತು ಭಕ್ತಿಯುಕ್ತೋ ಜಿತೇಂದ್ರಿಯಃ ।
ಪೂಜಯೇದ್ರವಿವಾರೇಣ ಸಾಂಬಾದಿತ್ಯಂ ಮಹಾಪ್ರಭಂ ।
ಸ ರೋಗಹೀನೋ ಧನವಾನ್ಪುತ್ರವಾಞ್ಜಾಯತೇ ನರಃ ॥ ೨೬ ॥
ತಸ್ಯೈವ ಪೂರ್ವದಿಗ್ಭಾಗೇ ಕಿಂಚಿದೀಶಾನಮಾಶ್ರಿತಂ ।
ಕುಂಡಂ ಪಾಪಹರಂ ಪುಣ್ಯಂ ಸ್ವಚ್ಛೋದಪರಿಪೂರಿತಂ ॥ ೨೭ ॥
ತತ್ರ ಸ್ನಾತ್ವಾ ಚ ವಿಧಿವತ್ಕುರ್ಯಾಚ್ಛ್ರಾದ್ಧಂ ವಿಚಕ್ಷಣಃ ।
ಭೋಜಯೇದ್ಬ್ರಾಹ್ಮಣಾನ್ಯಸ್ತು ಸಾಂಬಾದಿತ್ಯಂ ಪ್ರಪೂಜಯೇತ್
ಸರ್ವಕಾಮಸಮೃದ್ಧಾತ್ಮಾ ಸೂರ್ಯಲೋಕೇ ಮಹೀಯತೇ ॥ ೨೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಾಂಬಾದಿತ್ಯಮಾಹಾತ್ಮ್ಯವರ್ಣನಂ ನಾಮ
॥ ಷಡುತ್ತರತ್ರಿಶತತಮೋಽಧ್ಯಾಯಃ ॥

---

೨೬. ಭಾನುವಾರದದಿನ ಭಕ್ತಿಯಿಂದ ಜಿತೇಂದ್ರಿಯನಾಗಿ ಇಲ್ಲಿ ಮಿಂದು ಅತ್ಯಂತ ಕಾಂತಿಯುಳ್ಳ ಸಾಂಬಾದಿತ್ಯನನ್ನು ಪೂಜಿಸಿದವನು ರೋಗಹೀನನೂ, ಧನಪುತ್ರರುಳ್ಳವನೂ ಆಗುವನು.

೨೭—೨೮. ಆ ಸಾಂಬಾದಿತ್ಯನಿಗೆ ಪೂರ್ವದಲ್ಲಿ ಸ್ವಲ್ಪ ಈಶಾನ್ಯ ದಿಕ್ಕಿನಲ್ಲಿ ಸ್ವಚ್ಛವಾದ ನೀರುಳ್ಳ ಪುಣ್ಯಕರವಾದ ಕುಂಡವಿರುವುದು. ಅಲ್ಲಿ ಮಿಂದು ವಿಧಿಯಂತೆ ಶ್ರಾದ್ಧಮಾಡಿ ಬ್ರಾಹ್ಮಣರಿಗೆ ಭೋಜನಮಾಡಿಸಿ ಸಾಂಬಾದಿತ್ಯನನ್ನು ಪೂಜಿಸಿದವನು ಸಮಸ್ತೇಷ್ಟಾರ್ಥಗಳನ್ನು ಪಡೆದು ಸೂರ್ಯಲೋಕದಲ್ಲಿ ಪೂಜ್ಯನಾಗುತ್ತಾನೆ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಾಂಬಾದಿತ್ಯಮಾಹಾತ್ಮ್ಯವರ್ಣನವೆಂಬ
ಮುನ್ನೂರಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತೋತ್ತರತ್ರಿಶತತಮೋಽಧ್ಯಾಯಃ

ಅಪರನಾರಾಯಣಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಸಾಂಬಾದಿತ್ಯಾಚ್ಚ ಪೂರ್ವೇಣ ಕಿಂಚಿದಾಗ್ನೇಯಸಂಸ್ಥಿತಃ ।
ಅಪರನಾರಾಯಣೋನಾಮ ಯಸ್ಮಾನ್ನಾಸ್ತಿ ಪರೋ ಭುವಿ ॥ ೧ ॥
ಸ ತು ಸಾಂಬಸ್ಯ ದೇವೇಶಿ ಸೂರ್ಯೋ ವಿಷ್ಣುಸ್ವರೂಪವಾನ್ ।
ಅಪರಾಂ ಮೂರ್ತಿಮಾಸ್ಥಾಯ ವಿಷ್ಣುರೂಪೋ ವರಂ ದದೌ ॥ ೨ ॥
ತೇನಾಪರೇತಿ ನಾಮ್ನಾ ವೈ ಖ್ಯಾತೋ ವಿಷ್ಣುಃ ಪುರಾಭವತ್ ।
ಫಾಲ್ಗುನಾಮಲಪಕ್ಷೇ ತು ಏಕಾದಶ್ಯಾಂ ವಿಧಾನತಃ ॥ ೩ ॥
ಪೂಜಯೇತ್ಪುಂಡರೀಕಾಕ್ಷಂ ತತ್ರ ಸೂರ್ಯಸ್ವರೂಪಿಣಂ ।
ಮುಕ್ತೋ ಭವತಿ ಪಾಪೇಭ್ಯಃ ಸರ್ವಕಾಮೈಃ ಸಮೃಧ್ಯತೇ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಅಪರನಾರಾಯಣಮಾಹಾತ್ಮ್ಯವರ್ಣನಂ ನಾಮ
॥ ಸಪ್ತೋತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಅಪರನಾರಾಯಣಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಸಾಂಬಾದಿತ್ಯನ ಪೂರ್ವದಲ್ಲಿ ಸ್ವಲ್ಪ ಆಗ್ನೇಯ ದಿಕ್ಕಿನಲ್ಲಿರುವ ಅಪರನಾರಾಯಣನಿಗಿಂತ ಉತ್ತಮ ದೇವತೆಯು ಭೂಮಿಯಲ್ಲಿಲ್ಲ.

೨-೪. ದೇವೇಶಿ! ಆ ನಾರಾಯಣನು ಬೇರೆ ಸೂರ್ಯರೂಪವನ್ನು ತಾಳಿ ಸಾಂಬನಿಗೆ ವರವನ್ನಿತ್ತನು. ಆದರಿಂದವನು ಅಪರನಾರಾಯಣನೆಂದು ವಿಖ್ಯಾತನಾದನು. ಫಾಲ್ಗುನ ಶುಕ್ಲಪಕ್ಷ ಏಕಾದಶಿಯದಿನ ವಿಧಿಯಿಂದ ಸೂರ್ಯರೂಪಿಯಾದ ಆ ವಿಷ್ಣುವನ್ನು ಪೂಜಿಸಿದವನು ಪಾಪಮುಕ್ತನಾಗಿ ಸಕಲೇಷ್ಟಾರ್ಥಗಳಿಂದ ಸಮೃದ್ಧನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಅಪರನಾರಾಯಣಮಾಹಾತ್ಮ್ಯವರ್ಣನವೆಂಬ
ಮುನ್ನೂರಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟೋತ್ತರತ್ರಿಶತತಮೋಽಧ್ಯಾಯಃ

ಮೂಲಚಂಡೀಶೋತ್ಪತ್ತಿ ಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾನ್ನಾರಾಯಣಾತ್ಪೂರ್ವೇ ಕಿಂಚಿದೀಶಾನ್ಯಸಂಸ್ಥಿತಂ ।
ಮೂಲಚಂಡೀಶನಾಮ್ನಾ ತು ವಿಖ್ಯಾತಂ ಭುವನತ್ರಯೇ ॥ ೧ ॥

ಯತ್ರ ಲಿಂಗಂ ಪುರಾಸ್ಮಾಕಂ ಪಾತಿತಂತ್ವೃಷಿಭಿಃ ಪ್ರಿಯೇ ।
ಕ್ರೋಧರಕ್ತೇಕ್ಷಣೈರ್ದೇವಿ ಮೂಲಚಂಡೀಶತಾಂ ಗತಂ ॥ ೨ ॥

ಆದ್ಯಂ ಲಿಂಗೋದ್ಭವಂ ದೇವಿ ಋಷಿಕೋಪಾನ್ನಿಪಾತಿತಂ ।
ಯೇ ಕೇಚಿದೃಷಯಸ್ತತ್ರ ದೇವದಾರುವನೇ ಸ್ಥಿತಾಃ ॥ ೩ ॥

ಕಾಲಾಂತರೇ ಮಹಾದೇವಿ ಅಹಂ ತತ್ರ ಸಮಾಗತಃ ।
ತೇಷಾಂ ಜಿಜ್ಞಾಸಯಾ ದೇವಿ ತತಸ್ತೇ ರೋಷಿತಾಭವನ್ ।
ಶಪ್ತಸ್ತತೋಽಹಂ ದೇವೇಶಿ ಚಕ್ರುರ್ಮೇ ಲಿಂಗಪಾತನಂ ॥ ೪ ॥

ಕನ್ನಡದ ಅನುವಾದ

ಮೂಲಚಂಡೀಶೋತ್ಪತ್ತಿ ಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ನಾರಾಯಣನಿಗಿಂತ ಪೂರ್ವದಲ್ಲಿ ಸ್ವಲ್ಪ ಈಶಾನ್ಯದಿಕ್ಕಿನಲ್ಲಿ ತ್ರಿಭುವನದಲ್ಲಿ ಮೂಲಚಂಡೀಶನೆಂದು ಪ್ರಸಿದ್ಧವಾದ ಲಿಂಗವಿರುವುದು.

೨–೪. ಪ್ರಿಯಳೆ! ಹಿಂದೆ ದೇವದಾರುವನದಲ್ಲಿರುವ ಮುನಿಗಳನ್ನು ನಾನು ನೋಡಲು ಹೋಗಲು ಕುಪಿತರಾದ ಅವರು ನನ್ನನ್ನು ಶಪಿಸಿ ಲಿಂಗವು ಬೀಳುವಂತೆ ಮಾಡಿರುವರು. ಅದೇ ಲಿಂಗವು ಚಂಡೀಶನೆಂದು ಪ್ರಸಿದ್ಧನಾಗಿರುವುದು.

ದೇವ್ಯುವಾಚ :—

ರೋಷೋಪಹತಸದ್ಭಾವಾಃ ಕಥಮೇತೇ ದ್ವಿಜಾತಯಃ ।
ಸಂಜಾತಾ ಏತದಾಖ್ಯಾಹಿ ಪರಂ ಕೌತೂಹಲಂ ಮಮ ॥ ೫ ॥

ಈಶ್ವರ ಉವಾಚ :—

ಡಿಂಡಿರೂಪಃ ಪುರಾ ದೇವಿ ಭೂತ್ವಾಹಂ ದಾರುಕೇ ವನೇ ।
ಋಷೀಣಾಮಾಶ್ರಮೇ ಪುಣ್ಯೇ ನಗ್ನೋ ಭಿಕ್ಷಾಚರೋಽಭವಂ ।
ಭಿಕ್ಷಂತಮಾಶ್ರಮೇ ದೃಷ್ಟ್ವಾ ತಾಃ ಸರ್ವಾ ಋಷಿಯೋಷಿತಃ ॥ ೬ ॥

ಕಾಮಸ್ಯ ವಶಮಾಪನ್ನಾಃ ಪ್ರಿಯಮುತ್ಸೃಜ್ಯ ಸರ್ವತಃ ।
ತಮೂರ್ಧ್ವಲಿಂಗಮಾಲೋಕ್ಯ ಜಟಾಮುಕುಟಧಾರಿಣಂ ॥ ೭ ॥

ಭಿಕ್ಷಂತಂ ಭಸ್ಮದಿಗ್ಧಾಂಗಂ ಝುಷಕೇತುಮಿವಾಪರಂ ।
ವಿಕ್ಷೋಭಿತಾಶ್ಚ ನಃ ಸರ್ವೇ ದಾರಾ ಏತೇನ ಡಿಂಡಿನಾ ॥ ೮ ॥

ತಸ್ಮಾಚ್ಛಾಪಂ ಚ ದಾಸ್ಯಾಮ ಋಷಯಸ್ತೇ ತದಾಬ್ರುವನ್ ।
ತತಃ ಶಾಪೋದಕಂ ಗೃಹ್ಯ ಸಂಧ್ಯಾತ್ವಾಥ ತಪೋಧನಾಃ ॥ ೯ ॥

ಅಸ್ಯ ಲಿಂಗಮಧೋ ಯಾತು ದೃಶ್ಯತೇ ಯತ್ಸದೋನ್ನತಂ ।
ಇತ್ಯುಕ್ತೇ ಪತಿತಂ ಲಿಂಗಂ ತತ್ರ ದೇವಕುಲೇ ಮಮ ॥ ೧೦ ॥

---

೫. ದೇವಿಯು ಹೇಳುತ್ತಾಳೆ :—ಈ ಬ್ರಾಹ್ಮಣರು ಕೋಪದಿಂದ ಹೇಗೆ ತಮ್ಮ ಸಾಧುತ್ವವನ್ನು ಕಳೆದುಕೊಂಡರು? ಇದನ್ನು ನನಗೆ ಹೇಳು. ಅತ್ಯಂತ ಕುತೂಹಲ ವುಂಟಾಗಿದೆ.

೬-೧೦. ದೇವಿ! ನಾನು ಹಿಂದೆ ಡಿಂಡಿರೂಪದಿಂದ ದಾರುವನದಲ್ಲಿರುವ ಋಷಿಗಳ ಪುಣ್ಯಾಶ್ರಮದಲ್ಲಿ ದಿಗಂಬರನಾಗಿ ಭಿಕ್ಷಾಟನ ಮಾಡುತ್ತಿದ್ದೆನು. ಹೀಗೆ ಆಶ್ರಮದಲ್ಲಿ ಭಿಕ್ಷಾಟನಮಾಡುತ್ತಿದ್ದ ಊರ್ಧ್ವಲಿಂಗನೂ, ಜಟಾಮುಕುಟಧಾರಿಯೂ, ಮತ್ತೊಬ್ಬ ಮನ್ಮಥನಂತಿರುವವನೂ ಆದ ನನ್ನನ್ನು ಋಷಿಪತ್ನಿಯರು ಕಂಡು ತಮ್ಮ ಪ್ರಿಯರನ್ನು ಬಿಟ್ಟು ಕಾಮವಶರಾದರು. ಆಗ ಮುನಿಗಳು ಡಿಂಡಿರೂಪಿಯಾದ ಈ ಶಿವನಿಂದ ನಮ್ಮ ಪತ್ನಿಯರು ಚಂಚಲ ಚಿತ್ತರಾದರೆಂದು ತಿಳಿದು ಕುಪಿತರಾಗಿ ಶಾಪವನ್ನು ಕೊಡವೆವು ಎಂದರು. ಬಳಿಕ ಅವರು ಶಾಪೋದಕವನ್ನು ತೆಗೆದುಕೊಂಡು ಧ್ಯಾನಮಾಡಿ ಇವನ ಊರ್ಧ್ವಮುಖವಾದ ಲಿಂಗವು ಕೆಳಗೆ ಬೀಳಲಿ ಎಂದು ಶಪಿಸಿದರು. ಆಗ ನನ್ನ ಲಿಂಗವು ಆ ದೇವಾಲಯದಲ್ಲಿ ಬಿದ್ದಿತು.

ಮೂಲಚಂಡೀಶನಾಮ್ನಾ ತು ವಿಖ್ಯಾತಂ ಭುವನತ್ರಯೇ ।
ತಲ್ಲಿಂಗಂ ಪತಿತಂ ದೃಷ್ಟ್ವಾ ಕೋಪೋಪಹತಚೇತಸಃ ।
ಪುನರ್ಹಂತುಂ ಸಮಾರಬ್ಧಾ ಡಿಂಡಿನಂ ತೇ ತಪೋಧನಾಃ ॥ ೧೧ ॥
ಬೃಸಿಕಾಪಾಣಯಃ ಕೇಚಿತ್ಕಮಂಡಲುಧರಾಃ ಪರೇ ।
ಗೃಹೀತ್ವಾ ಪಾದುಕಾಶ್ಚಾನ್ಯೇ ತಸ್ಯ ಧಾವಂತಿ ಪೃಷ್ಠತಃ ॥ ೧೨ ॥
ಡಿಂಡಿಶ್ಚಾಂತರ್ಹಿತೋ ಭೂತ್ವಾ ತ್ವಾಮುವಾಚ ಸುಮಧ್ಯಮಾಂ ।
ರೋಷೋಪಹತಚೇತಸ್ಕಾನ್ಪಶ್ಯೈತಾಂಸ್ತ್ವಂ ತಪೋಧನಾನ್ ॥ ೧೩ ॥
ಏತಸ್ಮಾತ್ಕಾರಣಾದ್ದೇವಿ ತವ ವಾಕ್ಯಾನ್ಮಯಾನಘೇ ।
ನ ಕೃತೋಽನುಗ್ರಹಸ್ತೇಷಾಂ ಸರೋಷಾಣಾಂ ತಪಸ್ವಿನಾಂ ॥ ೧೪ ॥
ಅತ್ರಾಂತರೇ ತು ಮುನಯೋ ಹ್ಯಪಶ್ಯಂತೋ ಹಿ ಡಿಂಡಿನಂ ।
ನಿರಾನಂದಂ ಗತಾಃ ಸರ್ವೇ ದ್ರಷ್ಟುಂ ದೇವಂ ಪಿತಾಮಹಂ ॥ ೧೫ ॥
ತಂ ದೃಷ್ಟ್ವಾ ವಿಬುಧೇಶಾನಂ ವಿರಿಂಚಿಂ ವಿಗತಜ್ವರಂ ।
ಪ್ರಣಮ್ಯ ಶಿರಸಾ ಸರ್ವ ಋಷಯಃ ಪ್ರಾಹುರಂಜಸಾ ॥ ೧೬ ॥

---

೧೧. ಆ ಮುನಿಗಳು ಹಾಗೆ ಬಿದ್ದಲಿಂಗವು ಮೂಲಚಂಡೀಶನೆಂದು ಪ್ರಸಿದ್ಧವಾದುದನ್ನು ನೋಡಿ ಕೋಪಾಂಧರಾಗಿ ಆ ಡಿಂಡಿಯನ್ನು ಮರಳಿ ಹೊಡೆಯಲಾರಂಭಿಸಿದರು.

೧೨. ಅವರಲ್ಲಿ ಕೆಲವರು ಆಸನವನ್ನು ಹಿಡಿದವರೂ, ಕೆಲವರು ಕಮಂಡಲುಧಾರಿಗಳೂ, ಕೆಲವರು ಪಾದರಕ್ಷೆಯನ್ನು ಹಿಡಿದವರೂ ಆಗಿ ಅವನ ಹಿಂದೆ ಓಡಿದರು.

೧೩. ಆಗ ಡಿಂಡಿಯು ಅಡಗಿಕೊಂಡು ಸುಂದರವಾದ ನಡುವುಳ್ಳ ನಿನ್ನನ್ನು ಕುರಿತು ಕುಪಿತರಾದ ಈ ಮುನಿಗಳನ್ನು ನೋಡೆಂದನು.

೧೪. ನಿರ್ದುಷ್ಟಳೆ! ನಿನ್ನ ಮಾತಿನಿಂದ ನಾನು ಕೋಪಗೊಂಡ ಆ ಮುನಿಗಳಿಗೆ ಅನುಗ್ರಹಮಾಡಲಿಲ್ಲ.

೧೫. ಈ ಮಧ್ಯದಲ್ಲಿ ಆ ಮುನಿಗಳು ಆ ಡಿಂಡಿಯನ್ನು ಕಾಣದೆ ದುಃಖಿತರಾಗಿ ಚತುರ್ಮುಖನನ್ನು ನೋಡಲು ಹೊರಟರು.

೧೬. ಆವರು ದೇವತೆಗಳಿಗೆ ಒಡೆಯನೂ, ನಿರ್ದುಃಖನೂ ಆದ ಬ್ರಹ್ಮನನ್ನು ಕಂಡು ತಲೆಬಾಗಿವಂದಿಸಿ ಇಂತೆಂದರು.

ಭಗವನ್ಡಿಂಡಿರೂಪೇಣ ಕಶ್ಚಿದಸ್ತಿ ತಪೋಧನಃ ।
ವಿಧ್ವಂಸನಾಯ ದಾರಾಣಾಂ ಪ್ರವಿಷ್ಟಃ ಕಿಲ ಭಿಕ್ಷಿತುಂ ॥ ೧೭ ॥
ಶಪ್ತೋಽಸ್ಮಾಭಿಸ್ತು ದುರ್ವೃತ್ತಸ್ತಸ್ಯ ಲಿಂಗಂ ನಿಪಾತಿತಂ ।
ತಸ್ಮಿನ್ನಿಪತಿತೇಽಸ್ಮಾಕಂ ತಥೈವ ಪತಿತಾನಿ ಚ ॥ ೧೮ ॥
ಗತೋಽಸೌ ಕಾರಣಾತ್ತಸ್ಮಾತ್ತಲ್ಲಿಂಗೇ ಪತಿತೇ ವಯಂ ।
ನಿರಾನಂದಾಃ ಸ್ಥಿತಾಃ ಸರ್ವ ಆಚಕ್ಷ್ವೈತದ್ಧಿ ಕಾರಣಂ ॥ ೧೯ ॥

ಬ್ರಹ್ಮೋವಾಚ :—

ಅಶೋಭನಮಿದಂ ಕಾರ್ಯಂ ಯುಷ್ಮಾಭಿರ್ಯತ್ಕೃತಂ ಮಹತ್ ।
ರುದ್ರಸ್ಯಾತಿಸುರೂಪಸ್ಯ ಸೇರ್ಷ್ಯಾ ಯೇ ಹಂತುಮುದ್ಯತಾಃ ॥ ೨೦ ॥
ಆಸುರೀಂ ದಾನವೀಂ ದೈವೀಂ ಯಕ್ಷಿಣೀಂ ಕಿನ್ನರೀಂ ತಥಾ ।
ವಿದ್ಯಾಧರೀಂ ಚ ಗಂಧರ್ವೀಂ ನಾಗಕನ್ಯಾಂ ಮನೋರಮಾಂ ।
ಏತಾ ವರಸ್ತ್ರಿಯಸ್ತ್ಯಕ್ತ್ವಾ ಯುಷ್ಮದೀಯಾಸು ತಾಸ್ವಪಿ ॥ ೨೧ ॥
ಆಹ್ಲಾದಂ ಕುರುತೇ ಸರ್ವೇ ನೈವ ಜಾನೀತ ಭೋ ದ್ವಿಜಾಃ ।
ತ್ರೈಲೋಕ್ಯನಾಯಿಕಾಂ ಸರ್ವಾಂ ರೂಪಾತಿಶಯಸಂಯುತಾಂ ॥ ೨೨ ॥

---

೧೭. ಪೂಜ್ಯನೆ! ಡಿಂಡಿರೂಪನಾದ ಓರ್ವಮುನಿಯಿರುವನು. ಅವನು ನಮ್ಮ ಪತ್ನಿಯರನ್ನು ಕೆಡಿಸುವುದಕ್ಕಾಗಿ ನಮ್ಮ ಆಶ್ರಮದಲ್ಲಿ ಭಿಕ್ಷಾಟನೆಮಾಡುತ್ತಿದ್ದನು

೧೮. ಅದರಿಂದ ನಾವು ದುರ್ನಡತೆಯುಳ್ಳ ಅವನನ್ನು ಶಪಿಸಿ ಅವನ ಲಿಂಗವನ್ನು ಕೆಡವಿದೆವು. ಅವನ ಲಿಂಗವು ಬಿದ್ದಕೂಡಲೆ ನಾವೂ ಪತಿತರಾದೆವು.

೧೯. ಅವನ ಲಿಂಗವು ಬಿದ್ದಕೂಡಲೆ ಅವನು ಹೊರಟು ಹೋದನು. ಬಳಿಕ ನಾವು ದುಃಖಗೊಂಡೆವು. ಇದಕ್ಕೆ ಕಾರಣವನ್ನು ಹೇಳು.

೨೦. ಬ್ರಹ್ಮನು ಹೇಳುತ್ತಾನೆ :—ನೀವು ಸುಂದರನಾದ ರುದ್ರನನ್ನು ಹೊಡೆಯಲುದ್ಯುಕ್ತರಾಗಿ ದೊಡ್ಡ ಅಕಾರ್ಯವನ್ನು ಮಾಡಿದಿರಿ.

೨೧ ಎಲೈ ಬ್ರಾಹ್ಮಣರೆ! ಆ ಶಿವನು ಅಸುರ, ದಾನವ, ದೇವ, ಯಕ್ಷ, ಕಿನ್ನರ ವಿದ್ಯಾಧರ, ಗಂಧರ್ವ, ನಾಗ ಇವರ ಸುಂದರಿಯರಾದ ಸ್ತ್ರೀಯರನ್ನು ಬಿಟ್ಟು ನಿಮ್ಮ ಪತ್ನಿಯಲ್ಲಿ ಪ್ರೀತಿಯನ್ನು ಮಾಡಲಾರನು. ಅದನ್ನು ನೀವು ತಿಳಿಯಿರಿ. ಆ ಶಂಕರನು ತ್ರೈಲೋಕ್ಯನಾಯಕಳೂ, ಅತಿಸುಂದರಿಯೂ ಆದ ಪಾರ್ವತಿಯನ್ನು ಬಿಟ್ಟು ಮುನಿ

ತಾಂ ತ್ಯಕ್ತ್ವಾ ಮುನಿಪತ್ನೀನಾಮಾಹ್ಲಾದಂ ಕುರುತೇ ಕಥಂ ।
ತಯಾ ರುದ್ರೋ ಹಿ ವಿಜ್ಞಪ್ತ ಋಷೀಣಾಂ ಕುರ್ವನುಗ್ರಹಂ ॥ ೨೩ ॥
ತೇನ ವಾಕ್ಯೇನ ಪಾರ್ವತ್ಯಾ ಜಿಜ್ಞಾಸಾರ್ಥಂ ಕೃತಂ ಪುನಃ ।
ಚತುರ್ದಶವಿಧಸ್ಯಾಪಿ ಭೂತಗ್ರಾಮಸ್ಯ ಯಃ ಪ್ರಭುಃ ॥ ೨೪ ॥
ಸ ಶಪ್ತೋ ಡಿಂಡಿರೂಪಸ್ತು ಭವದ್ಭಿಃ ಕರಣೇಶ್ವರಃ ।
ತಚ್ಛಾಪಾಚ್ಛಪ್ತಮೇವೈತತ್ಸಮಸ್ತಂ ತದ್ಗುಣಾಸ್ಪದಂ ।
ದೇವತಿರ್ಯಙ್ಮನುಷ್ಯಾಣಾಂ ನಿರಾನಂದಮಿತಿ ಸ್ಥಿತಂ ॥ ೨೫ ॥
ಶಾಪೇನಾನೇನ ಭವತಾಂ ಮಹಾದೋಷಃ ಪ್ರಜಾಯತೇ ।
ಆರಾಧ್ಯಂ ನಾನ್ಯಥಾ ಲಿಂಗಮುನ್ನತಿಂ ಯಾತ್ಯಧೋಗತಂ ॥ ೨೬ ॥
ಏವಮುಕ್ತೇಽಥ ದೇವೇನ ವಿಪ್ರಾ ಊಚುಃ ಪಿತಾಮಹಂ ।
ದ್ರಷ್ಟವ್ಯಃ ಕುತ್ರ ಸೋಽಸ್ಮಾಭಿಃ ಕಥಯಸ್ವ ಯಥಾಸ್ಥಿತಂ ॥ ೨೭ ॥
ಬ್ರಹ್ಮೋವಾಚ :—
ಆಸ್ತೇ ಗಜಸ್ವರೂಪೇಣ ಕುಬೇರಾಶ್ರಮಸಂಸ್ಥಿತಃ ।
ತತ್ರ ಗತ್ವಾ ತಮಾಸಾದ್ಯ ತೋಷಯಧ್ವಂ ಪಿನಾಕಿನಂ ॥ ೨೮ ॥

ಪತ್ನಿಯರನ್ನು ಹೇಗೆ ಪ್ರೀತಿಸುವನು? ಆ ಪಾರ್ವತಿಯು ಋಷಿಗಳಿಗೆ ಅನುಗ್ರಹ ಮಾಡೆಂದು ವಿಜ್ಞಾಪಿಸಿಕೊಂಡಳು". ಅವನ ಮಾತಿನಿಂದ ಶಂಕರನು ನಿಮ್ಮನ್ನು ಪರೀಕ್ಷಿಸಬೇಕೆಂದು ಆಲೋಚಿಸಿದನು ಹದಿನಾಲ್ಕು ವಿಧವಾದ ಪ್ರಾಣಿಗಳ ಸಮೂಹಕ್ಕೆ ಸ್ವಾಮಿಯೂ, ಇಂದ್ರಿಯಗಳಿಗೆ ಒಡೆಯನೂ ಆದ ಶಿವನನ್ನು ನೀವು ಶಪಿಸಿರುವಿರಿ. ಆ ಶಿವನಿಗೆ ನೀವು ಶಾಪಕೊಟ್ಟದ್ದರಿಂದ ಅವನ ಗುಣಗಳಿಗೆ ಆಶ್ರಯವಾದ ದೇವತೆಗಳು, ಪಶುಪಕ್ಷಿಗಳು, ಮನುಷ್ಯರು, ಇವರ ಸಮೂಹವು ಶಪಿಸಲ್ಪಟ್ಟಂತಾಗಿ ದುಃಖಗೊಂಡಿರುವುದು.

೨೬. ನಿಮಗೆ ಈ ಶಾಪದಿಂದ ಬಹುದೋಷವುಂಟಾಗುವುದು. ನೀವು ಲಿಂಗವನ್ನು ಪೂಜಿಸಬೇಕು. ಹಾಗೆಮಾಡದಿದ್ದಲ್ಲಿ ಕೆಳಗೆ ಬಿದ್ದಲಿಂಗವು ಉನ್ನತಿಯನ್ನು ಹೊಂದುವುದಿಲ್ಲ.

೨೭. ಬ್ರಹ್ಮನು ಹೀಗೆನ್ನಲು ಬ್ರಾಹ್ಮಣರು ಅವನನ್ನು ಕುರಿತು, "ಆ ಶಿವನನ್ನು ನಾವು ಎಲ್ಲಿ ನೋಡಬೇಕು ; ಹೇಳು" ಎಂದು ಕೇಳಿದರು

೨೮. ಬ್ರಹ್ಮನು ಹೇಳುತ್ತಾನೆ :—ಆ ಶಿವನು ಆನೆಯ ರೂಪದಿಂದ ಕುಬೇರಾಶ್ರಮದಲ್ಲಿರುವನು. ಅಲ್ಲಿಗೆ ಹೋಗಿ ಅವನನ್ನು ಹೊಂದಿ ಸಂತೋಷಪಡಿಸಿರಿ.

ಏತಚ್ಛ್ರುತ್ವಾ ವಚಸ್ತಸ್ಯ ಸರ್ವೇ ತೇ ಹೃಷ್ಟಮಾನಸಾಃ ।
ಗಂತುಂ ಪ್ರವೃತ್ತಾಃ ಸಹಸಾ ಕೋಟಿಸಂಖ್ಯಾಸ್ತಪೋಧನಾಃ ॥ ೨೯ ॥
ಚಿಂತಯಂತಃ ಶುಭಂ ದೇಶಂ ದ್ರಷ್ಟುಂ ತಂ ಗಜರೂಪಿಣಂ ।
ರುದ್ರಂ ಪಿತಾಮಹಾಖ್ಯಾತಂ ಕುಬೇರಾಶ್ರಮವಾಸಿನಂ ॥ ೩೦ ॥
ಕ್ಷುತ್ಕ್ಷಾಮಕಂಠಾಂಸ್ತೃಷಿತಾನ್ಗೌರೀ ಮತ್ವಾ ತಪೋಧನಾನ್ ।
ಆದಾಯ ಗೋರಸಂ ತೇಷಾಂ ಕಾರುಣ್ಯಾತ್ಸಾ ಪುರಃಸ್ಥಿತಾ ॥ ೩೧ ॥
ಅಸಿತಾಂ ಕುಟಿಲಾಂ ಸ್ನಿಗ್ಧಾಮಾಯತಾಂ ಭುಜಗೀಮಿವ ।
ವೇಣೀಂ ಶಿರಸಿ ಬಿಭ್ರಾಣಾ ಗೌರೀ ಗೋರಸಸಂಯುತಾ ॥ ೩೨ ॥
ಸಾ ತಾನಾಹ ಮುನೀನ್ಸರ್ವಾನ್ಮಯಾ ಪರ್ವತಾಹೃತಂ ।
ಕಪಿತ್ಥಫಲಸಂಗಂಧಂ ಗೋರಸಂ ತ್ವಮೃತೋಪಮಂ ॥ ೩೩ ॥
ತಯೈವಮುಕ್ತಾ ವಿಪ್ರಾಸ್ತು ಆಹುಸ್ತಾಂ ವಿಪುಲೇಕ್ಷಣಾಂ ।
ಸ್ನಾತ್ವಾ ಚ ಸರ್ವೇ ಪಾಸ್ಯಾಮೋ ಗೋರಸಂ ತು ತ್ವಯಾಹೃತಂ ॥ ೩೪ ॥
ತತಃ ಶ್ರುತ್ವಾ ತಥಾ ದೇವ್ಯಾ ಸ್ನಾನಾರ್ಥಂ ತೀರ್ಥಮುತ್ತಮಂ ।
ತಪ್ತೋದಕೇನ ಸಂಪೂರ್ಣಂ ಕೃತಂ ಕುಂಡಂ ಮನೋರಮಂ ॥ ೩೫ ॥

೨೯–೩೦. ಬ್ರಹ್ಮನ ಆ ಮಾತನ್ನು ಕೇಳಿ ಕೋಟಿಸಂಖ್ಯಾಕರಾದ ಆ ಮುನಿಗಳು ಸಂತೋಷಗೊಂಡು ಕುಬೇರಾಶ್ರಮದಲ್ಲಿರುವ ಗಜರೂಪಿಯಾದ ರುದ್ರನನ್ನು ನೋಡಲು ಉತ್ತಮಸ್ಥಳವನ್ನು ಆಲೋಚಿಸುತ್ತ ಅಲ್ಲಿಗೆ ಹೊರಡಲುದ್ಯುಕ್ತರಾದರು.

೩೧. ಗೌರಿಯು ಆ ಮುನಿಗಳನ್ನು ಹಸಿವಿನಿಂದ ಕುಗ್ಗಿದ ಧ್ವನಿಯುಳ್ಳವರನ್ನಾಗಿ ತಿಳಿದು ದಯೆಯಿಂದ ಗೋರಸವನ್ನು ತೆಗೆದುಕೊಂಡು ಅವರ ಮುಂದೆ ನಿಂತಳು.

೩೨–೩೩. ತಲೆಯಲ್ಲಿ ಕಪ್ಪಗೂ, ವಕ್ರವೂ, ಮನೋಹರವೂ, ಹಾವಿನಂತೆ ಉದ್ದವೂ ಆಗಿರುವ ಜಡೆಯನ್ನು ಧರಿಸಿದ ಗೌರಿಯು ಗೋರಸವನ್ನು ಹಿಡಿದುಕೊಂಡು ಆ ಮುನಿಗಳನ್ನು ಕುರಿತು, "ನಾನು ಪರ್ವತದಿಂದ ಬೇಲದ ಹಣ್ಣಿನ ಸುವಾಸನೆಯುಳ್ಳ ಅಮೃತದಂತಿರುವ ಗೋರಸವನ್ನು ತಂದಿರುವೆನು". ಎಂದಳು.

೩೪. ಅವಳು ಹೀಗೆನ್ನಲು ಆ ಬ್ರಾಹ್ಮಣರು ವಿಶಾಲಾಕ್ಷಿಯಾದ ಅವಳನ್ನು ಕುರಿತು, "ನಾವೆಲ್ಲ ಮಿಂದು ನೀನು ತಂದ ಗೋರಸವನ್ನು ಕುಡಿಯುವೆವು" ಎಂದರು.

೩೫. ಬಳಿಕ ದೇವಿಯು ಆ ಬ್ರಾಹ್ಮಣರ ಸ್ನಾನಕ್ಕಾಗಿ ಬಿಸಿನೀರಿನಿಂದ ತುಂಬಿದ ಮನೋಹರವಾದ ಒಂದು ಕುಂಡವನ್ನು ನಿರ್ಮಿಸಿದಳು.

ತತ್ರ ತೇ ಸಂಪ್ಲುತಾಃ ಸರ್ವೇ ವಿಮುಕ್ತಾ ವಿಪುಲಾಚ್ಛ್ರಮಾತ್ ।
ಕೃತಾಹ್ನಾ ಗೋರಸಸ್ಯೈವ ಪಾನಾರ್ಥಂ ಸಮುಪಸ್ಥಿತಾಃ ॥ ೩೬ ॥
ಪತ್ರೈರ್ದಿವಾಕರತರೋರ್ವಿಧಾಯ ಪುಟಿಕಾಃಶುಭಾನ್ ।
ಉಪವಿಶ್ಯ ಕ್ರಮಾತ್ಸರ್ವೇ ತೇ ಪಿಬಂತಿಸ್ಮ ಗೋರಸಂ ॥ ೩೭ ॥
ಗೋರಸೇನ ತದಾ ತೇಷಾಮಮೃತೇನೈವ ಪೂರಿತಾನ್ ।
ಬುಭುಕ್ಷಿತಾನಾಂ ಪುಟಿಕಾನ್ಮುನೀನಾಂ ತೃಪ್ತಿಕಾರಣಾತ್ ॥ ೩೮ ॥
ಪುನಃ ಪೂರಯತೇ ಗೌರೀ ಪೀತ್ವಾ ತೇ ತೃಪ್ತಿಮಾಗತಾಃ ।
ಕ್ಷುತ್ತೃಷಾಶ್ರಮನಿರ್ಮುಕ್ತಾಃ ಪುನರ್ಜಾತಾ ಇವ ಸ್ಥಿತಾಃ ॥ ೩೯ ॥
ಸ್ವಸ್ಥಚಿತ್ತೈಸ್ತತೋ ಜ್ಞಾತ್ವಾ ನೇಯಂ ಗೋಪಾಲಿಸಂಜ್ಞಿಕಾ ।
ಅನುಗ್ರಹಾರ್ಥಮಸ್ಮಾಕಂ ಗೌರೀಯಂ ಸಮುಪಾಗತಾ ॥ ೪೦ ॥
ಪ್ರಣಮ್ಯ ಶಿರಸಾ ಸರ್ವೇ ತಾಮೂಚುಸ್ತೇ ಸುಮಧ್ಯಮಾಂ ।
ಉಮೇ ಕಥಯ ಕುತ್ರಸ್ಥಂ ದ್ರಕ್ಷ್ಯಾಮೋ ರುದ್ರಮೇಕದಾ ॥ ೪೧ ॥
ತಥೋಕ್ತಾಸ್ತೇ ಮಹಾತ್ಮಾನಸ್ತಂ ಪಶ್ಯತ ಮಹಾಗಜಂ ।
ಗಜತಾಂ ಚ ಸಮಾಸಾದ್ಯ ಸಂಚರಂತಂ ಮಹಾಬಲಂ ॥ ೪೨ ॥

---

೩೬. ಅವರೆಲ್ಲ ಅಲ್ಲಿ ಮಿಂದು ಅತಿಶ್ರಮದಿಂದ ಮುಕ್ತರಾಗಿ ಆಹ್ನಿಕಗಳನ್ನು ಪೂರೈಸಿ ಗೋರಸದ ಪಾನಕ್ಕಾಗಿ ಒಟ್ಟುಸೇರಿದರು.

೩೭. ಅವರು ಎಕ್ಕದೆಲೆಯ ದೊನ್ನೆಯನ್ನು ಮಾಡಿಕೊಂಡು ಕ್ರಮವಾಗಿ ಕುಳಿತುಕೊಂಡು ಗೋರಸವನ್ನು ಕುಡಿದರು.

೩೮–೩೯. ಗೌರಿಯು ಅಮೃತದಂತಿರುವ ಗೋರಸದಿಂದ ತುಂಬಿರುವ ಹಸಿವುಗೊಂಡ ಆ ಮುನಿಗಳ ದೊನ್ನೆಗಳನ್ನು ಅವರ ತೃಪ್ತಿಗಾಗಿ ಮತ್ತು ಮತ್ತೂ ತುಂಬುತ್ತಿದ್ದಳು. ಅವರು ಅದನ್ನು ಕುಡಿದು ತೃಪ್ತಿಗೊಂಡು ಹಸಿವು, ಬಾಯಾರಿಕೆ, ಆಯಾಸವಿಲ್ಲದವರಾಗಿ ತಿರುಗಿ ಜನಿಸಿದವರಂತಾದರು.

೪೦–೪೧. ಸ್ವಸ್ಥಚಿತ್ತರಾದ ಅವರು ಇವಳು ಗೊಲ್ಲತಿಯಲ್ಲ. ನಮ್ಮನ್ನು ಅನುಗ್ರಹಿಸುವುದಕ್ಕಾಗಿ ಬಂದ ಗೌರೀದೇವಿಯೆಂದರಿತು ಅವಳಿಗೆ ತಲೆಬಾಗಿ ನಮಿಸಿ, "ಪಾರ್ವತಿ! ರುದ್ರನೆಲ್ಲಿರುವನು? ಅವನನ್ನು ನಾವು ಎಲ್ಲಿ ನೋಡುವೆವು"? ಹೇಳು. ಎಂದು ಕೇಳಿದರು.

೪೨–೪೩. ಅವರು ಹೀಗೆ ಕೇಳಲು ಗೌರಿಯು ಮಹಾತ್ಮರೆ! ಆ ಆನೆಯನ್ನು ನೋಡಿರಿ, ಗಜರೂಪವನ್ನು ಹೊಂದಿ ಸಂಚರಿಸುತ್ತಿರುವ ಅತಿಬಲಿಷ್ಠನಾದ ರುದ್ರನನ್ನು

ಭವದ್ಭಿರ್ನಿಜಭಕ್ತ್ಯಾಯಂ ಸಂಗ್ರಾಹ್ಯೋ ಹಿ ಯಥಾಸುಖಂ ।
ತೇ ತದ್ವಚಸಮಾಸಾದ್ಯ ಸಮೇತ್ಯೈಕತ್ರ ಚ ದ್ವಿಜಾಃ ॥ ४३ ॥
ಪವಿತ್ರಾಸ್ತಂ ಗಜಂ ದ್ರಷ್ಟುಂ ಭಾವಿತೇನಾಂತರಾತ್ಮನಾ ।
ಯತ್ರೈಕತ್ರ ಸ್ಥಿತಾ ವಿಪ್ರಾಸ್ತತ್ರ ತೀರ್ಥಂ ಮಹೋದಯಂ ।
ಸಂಗಮೇಶ್ವರಸಂಜ್ಞಂ ತು ಪೂರ್ವಂ ಸರ್ವತ್ರ ವಿಶ್ರುತಂ ॥ ४४ ॥
ತತಸ್ತಸ್ಮಾತ್ಪ್ರಸೃತಾಸ್ತೇ ದ್ರಷ್ಟುಕಾಮಾ ಮಹಾಗಜಂ ।
ಕುಂಡಿಕಾಃ ಸಂಪರಿತ್ಯಜ್ಯ ಸಂನಹ್ಯಾತ್ಮಾನಮಾತ್ಮನಾ ॥ ४೫ ॥
ಯತ್ರ ತಾಃ ಕುಂಡಿಕಾಸ್ತ್ಯಕ್ತಾಸ್ತತ್ತೀರ್ಥಂ ಕುಂಡಿಕಾಹ್ವಯಂ ।
ಸರ್ವಪಾಪಹರಂ ಪುಂಸಾಂ ದೃಷ್ಟಾದೃಷ್ಟಫಲಪ್ರದಂ ॥ ४೬ ॥
ಕುಬೇರಸ್ಯಾಶ್ರಮಂ ಪ್ರಾಪ್ಯ ತತಸ್ತೇ ಮುನಿಸತ್ತಮಾಃ ।
ನಾಲಿಕೇರವನೀಸಂಸ್ಥಂ ದದೃಶುಸ್ತಂ ದ್ವಿಪಂ ತದಾ ॥ ४೭ ॥
ಕರೇ ಗೃಹೀತುಮಾರಬ್ಧಾಃ ಸ್ವಕರೈರ್ಹೃಷ್ಟಮಾನಸಾಃ ।
ಗಜಸ್ತಾನ್ಕರಸಂಲಗ್ನಾನ್ನಿಚಿಕ್ಷೇಪ ತಪೋಧನಾನ್ ॥ ४೮ ॥

ಅತಿಶಯ ಭಕ್ತಿಯಿಂದ ವಶಮಾಡಿಕೊಳ್ಳಿರಿ". ಎಂದಳು. ಆ ಬ್ರಾಹ್ಮಣರು ಅವಳ ಮಾತನ್ನು ಕೇಳಿ ಒಂದೆಡೆಯಲ್ಲಿ ಸೇರಿದರು.

४४. ಪರಿಶುದ್ಧರಾದ ಬ್ರಾಹ್ಮಣರು ಭಕ್ತಿಯಿಂದ ಆನೆಯನ್ನು ನೋಡುವುದಕ್ಕಾಗಿ ಒಂದೆಡೆಯಲ್ಲಿ ಸೇರಿದ ಸ್ಥಾನವು ಮಹೋದಯ ತೀರ್ಥವೆನ್ನಿಸಿಕೊಂಡಿತು. ಅದು ಹಿಂದೆ ಸಂಗಮೇಶ್ವರವೆಂದು ಪ್ರಸಿದ್ಧವಾಗಿದ್ದಿತು.

४೫–४೬. ಅವರು ಅಲ್ಲಿಂದ ಮಹಾಗಜವನ್ನು ನೋಡಲಪೇಕ್ಷೆಯಿಂದ ಜಲಪಾತ್ರೆಯನ್ನು ಬಿಟ್ಟು ನಿಶ್ಚಲ ಮನಸ್ಕರಾಗಿ ಹೊರಟು ಹೋದಸ್ಥಳವು ಕುಂಡಿಕಾ ತೀರ್ಥವೆನ್ನಿಸಿಕೊಳ್ಳುವುದು. ಅದು ಮಾನವರ ಸಕಲಪಾಪವನ್ನು ಪರಿಹರಿಸುವುದೂ, ದೃಷ್ಟಾದೃಷ್ಟಫಲಗಳನ್ನೀಯುವುದೂ ಆಗಿರುವುದು.

४೭. ತರುವಾಯ ಆ ಮುನಿವರ್ಯರು ಕುಬೇರನ ಆಶ್ರಮವನ್ನು ಹೊಂದಿ ತೆಂಗಿನತೋಟದಲ್ಲಿರುವ ಆ ಆನೆಯನ್ನು ಕಂಡರು.

४೮–४೯. ಸಂತೋಷಗೊಂಡ ಆ ಮುನಿಗಳು ಆ ಆನೆಯ ಸೊಂಡಿಲನ್ನು ತಮ್ಮ ಕೈಗಳಿಂದ ಹಿಡಿದುಕೊಳ್ಳಲಾರಂಭಿಸಿದರು. ಆನೆಯು ಸೊಂಡಿಲನ್ನು ಹಿಡಿದುಕೊಂಡಿರುವರೂ, ಅವಯವಗಳನ್ನು ಹಿಡಿದುಕೊಂಡಿರುವವರೂ, ಭಯವಿಲ್ಲದವರೂ ಆದ

ಕಾಂಶ್ಚಿದಂಗಸಮಾಲಗ್ನಾನ್ಸಮಂತಾದ್ಭಯವರ್ಜಿತಾನ್ ।
ಏವಂ ಸ ತೈಃ ಪುನಃ ಸರ್ವೈರ್ಮಶಕೈರಿವ ಚೇಷ್ಟಿತಂ ॥ ೪೯ ॥
ಕ್ರೀಡಾಂ ಕರೋತಿ ವಿವಿಧಾಂ ವನಸಂಸ್ಥೋ ಹರದ್ವಿಪಃ ।
ತದ್ರೂಪಂ ಸಂಪರಿತ್ಯಜ್ಯ ರುದ್ರೋ ರೌದ್ರಗಜಾತ್ಮಕಂ ॥ ೫೦ ॥
ಪುನರನ್ಯಚ್ಚಕಾರಾಸೌ ಡಿಂಡಿರೂಪಂ ಮನೋರಮಂ ।
ಜಯಶಬ್ದಪ್ರಘೋಷೇಣ ವೇದಮಂಗಲಗೀತಕೈಃ ॥ ೫೧ ॥
ಉನ್ನಾಮಿತಂ ಪುನಸ್ತೇನ ಯತ್ರ ಲಿಂಗಂ ಮಹೋದಯಂ ।
ತದುನ್ನತಮಿತಿ ಪ್ರೋಕ್ತಂ ಸ್ಥಾನಂ ಸ್ಥಾನವತಾಂ ವರಂ ॥ ೫೨ ॥
ಗಜರೂಪಧರಸ್ತತ್ರ ಸ್ಥಿತಃ ಸ್ಥಾನೇ ಮಹಾಬಲಃ ।
ಗಣನಾಥಸ್ವರೂಪೇಣ ಹ್ಯುನ್ನತೋ ಜಗತಿ ಸ್ಥಿತಃ ॥ ೫೩ ॥
ಡಿಂಡಿರೂಪಧರೋ ಭೂತ್ವಾ ರುದ್ರಃ ಪ್ರಾಹ ತಪೋಧನಾನ್ ।
ಯನ್ಮಯಾ ಭವತಾಂ ಕಾರ್ಯಂ ಕರ್ತವ್ಯಂ ತದಿಹೋಚ್ಯತಾಂ ॥ ೫೪ ॥
ಏವಮುಕ್ತಸ್ತು ತೈರುಕ್ತಃ ಸರ್ವಜ್ಞಾನಕ್ರಿಯಾಪರೈಃ ।
ಸಾನಂದಾಃ ಪ್ರಾಣಿನಃ ಸಂತು ತ್ವತ್ಪ್ರಸಾದಾತ್ಪುರಾ ಯಥಾ ॥ ೫೫ ॥

ಆ ಮುನಿಗಳನ್ನು ಎಸೆಯಿತು. ಹೀಗೆ ಅವರು ಬಾರಿ ಬಾರಿಗೂ ಸೊಳ್ಳೆಗಳಂತೆ ಕಾರ್ಯವನ್ನೆಸಗಿದರು.

೫೦–೫೧. ಆ ಕಾಡಿನ ಹರಗಜವು ನಾನಾ ಬಗೆಯ ಆಟಗಳನ್ನಾಡಿತು. ತರುವಾಯ ಶಿವನು ಆ ಭಯಂಕರ ಗಜಸ್ವರೂಪವನ್ನು ತ್ಯಜಿಸಿ ಜಯಶಬ್ದ, ವೇದ, ಮಂಗಳಗೀತಗಳಿಂದ ಮನೋಹರವಾದ ಡಿಂಡಿರೂಪವನ್ನು ತಾಳಿದನು.

೫೨. ಮರಳಿ ಎಲ್ಲಿ ಲಿಂಗವು ಮೇಲಕ್ಕೆತ್ತಲ್ಪಟ್ಟಿತೊ ಸಕಲ ಸ್ಥಳಗಳಿಗಿಂತ ಶ್ರೇಷ್ಠವಾದ ಆ ಉನ್ನತ ಸ್ಥಾನವನ್ನು ಉನ್ನತ ಸ್ಥಳವೆನ್ನುವರು.

೫೩. ಆ ಸ್ಥಳದಲ್ಲಿ ರುದ್ರನು ಗಣನಾಥನ ರೂಪವನ್ನು ಧರಿಸಿ ಉನ್ನತನಾಗಿದ್ದನು.

೫೪. ರುದ್ರನು ಡಿಂಡಿರೂಪವನ್ನು ತಾಳಿ ಆ ಮುನಿಗಳನ್ನು "ಕುರಿತು, ನಿಮ್ಮ ಕರ್ತವ್ಯ ಕಾರ್ಯವಾವುದು? ಅದನ್ನು ಹೇಳಿರಿ" ಎಂದನು.

೫೫. ರುದ್ರನು ಹೀಗೆನ್ನಲು ಜ್ಞಾನಕ್ರಿಯೆಗಳಲ್ಲಿ ನಿರತರಾದ ಆ ಮುನಿಗಳು ಇಂತೆಂದರು. "ನಿನ್ನ ಅನುಗ್ರಹದಿಂದ ಸಕಲ ಪ್ರಾಣಿಗಳು ಮೊದಲಿನಂತೆ ಆನಂದಗೊಳ್ಳಲಿ."

ಕ್ಷಂತವ್ಯಂ ದೇವದೇವೇಶ ಕೃತಂ ಯನ್ಮೂಢಮಾನಸೈಃ ।
ತ್ವತ್ಪ್ರಸಾದಾತ್ಸುರೇಶಾನ ತತ್ತ್ವಂ ಸಾನುಗ್ರಹೋ ಭವ   ॥ ೫೬ ॥
ಏವಮಸ್ತ್ವಿತಿ ತೇನೋಕ್ತಾಸ್ತೇ ಸರ್ವೇ ವಿಗತಜ್ವರಾಃ ।
ತಲ್ಲಿಂಗಾನುಕೃತಿಂ ಲಿಂಗಮಾಜಿರೇ ಮುನಯಸ್ತಥಾ ।
ಚಕ್ರುಸ್ತೇ ಮುನಯಃ ಸರ್ವೇ ಸ್ತುತಿಂ ವಿಗತಮತ್ಸರಾಃ   ॥ ೫೭ ॥
ಕ್ಷಮಸ್ವ ದೇವದೇವೇಶ ಕುರ್ವಸ್ಮಾಕಮನುಗ್ರಹಂ ।
ಅಸ್ಮಿಂಲ್ಲಿಂಗೇ ಲಯಂ ಗಚ್ಛ ಮೂಲಚಂಡೀಶಸಂಜ್ಞಕೇ ।
ತ್ರಿಕಾಲಂ ದೇವದೇವೇಶ ಗ್ರಾಹ್ಯಾ ಹ್ಯತ್ರ ಕಲಾ ತ್ವಯಾ   ॥ ೫೮ ॥

ಈಶ್ವರ ಉವಾಚ :—

ಚಂಡೀ ತು ಪ್ರೋಚ್ಯತೇ ದೇವೀ ತಸ್ಯಾ ಈಶಸ್ತ್ವಹಂ ಸ್ಮೃತಃ ।
ತಸ್ಯ ಮೂಲಂ ಸ್ಮೃತಂ ಲಿಂಗಂ ತದತ್ರ ಪತಿತಂ ಯತಃ   ॥ ೫೯ ॥
ತಸ್ಮಾತ್ತನ್ಮೂಲಚಂಡೀಶ ಇತಿ ಖ್ಯಾತಿಂ ಗಮಿಷ್ಯತಿ ।
ವಾಪೀಕೂಪತಡಾಗಾನಾಂ ಶತೈಸ್ತು ವಿಪುಲೈರಪಿ   ॥ ೬೦ ॥
ಕೃತೈರ್ಯಜ್ಜಾಯತೇ ಪುಣ್ಯಂ ತತ್ಪುಣ್ಯಂ ಲಿಂಗದರ್ಶನಾತ್ ।
ಬ್ರಹ್ಮಾಂಡಂ ಸಕಲಂ ದತ್ವಾ ಯತ್ಪುಣ್ಯಫಲಮಾಪ್ನುಯಾತ್   ॥ ೬೧ ॥
ತತ್ಪುಣ್ಯಂ ಲಭತೇ ದೇವಿ ಮೂಲಚಂಡೀಶದರ್ಶನಾತ್ ।
ತತ್ರ ದಾನಾನಿ ದೇಯಾನಿ ಷೋಡಶೈವ ನರೋತ್ತಮೈಃ   ॥ ೬೨ ॥

---

೫೬. ದೇವೇಶ! ಮೂಢಬುದ್ಧಿಯುಳ್ಳ ನಾವು ಮಾಡಿದ ಅಪರಾಧವನ್ನು ಕ್ಷಮಿಸು. ಸುರೇಶ್ವರ! ನೀನು ಪ್ರಸನ್ನನಾಗು.”

೫೭. ಶಂಕರನು ಹೀಗೆಯೇ ಆಗಲೆಂದು ಹೇಳಲು ಮಾತ್ಸರ್ಯವಿಲ್ಲದ ಆ ಬ್ರಾಹ್ಮಣರೆಲ್ಲ ವ್ಯಥೆಯಿಲ್ಲದವರಾಗಿ ಅವನ ಆ ಲಿಂಗದಂತಿರುವ ಶಿವಲಿಂಗವನ್ನು ಪೂಜಿಸುತ್ತಿದ್ದರು.

೫೮. “ದೇವೇಶ! ಕ್ಷಮಿಸು. ನಮಗೆ ಅನುಗ್ರಹಮಾಡು. ಮೂಲಚಂಡೀಶನೆಂಬ ಈ ಲಿಂಗದಲ್ಲಿ ಅದೃಶ್ಯನಾಗಿರು. ನೀನು ತ್ರಿಕಾಲದಲ್ಲಿಯೂ ಸನ್ನಿಹಿತನಾಗಿರು” ಎಂದು ಸ್ತೋತ್ರ ಮಾಡುತ್ತಿದ್ದರು.

೫೯–೬೨. ಈಶ್ವರನು ಹೇಳುತ್ತಾನೆ:—ದೇವಿಯು ಚಂಡಿಯೆನ್ನಿಸಿಕೊಳ್ಳುವಳು. ಅವಳ ಸ್ವಾಮಿಯು ನಾನು. ನನ್ನ ಮೂಲವು ಲಿಂಗವು. ಅದು ಇಲ್ಲಿ ಬಿದ್ದುದರಿಂದ ಈ ಸ್ಥಳವು ಚಂಡೀಶ ಎಂದು ಪ್ರಸಿದ್ಧವಾಗುವುದು. ಈ ಚಂಡೀಶ ಮೂಲ ಲಿಂಗದ ದರ್ಶನದಿಂದ ಅನೇಕ ವಾಪೀ, ಕೂಪ, ತಟಾಗಗಳನ್ನು ನಿರ್ಮಿಸಿದ ಪುಣ್ಯವೂ ಸಕಲ ಬ್ರಹ್ಮಾಂಡವನ್ನು ದಾನ ಮಾಡಿದ ಪುಣ್ಯವೂ ಲಭಿಸುವುದು. ಇಲ್ಲಿ ಮಾನವೋತ್ತಮರು ಷೋಡಶ ದಾನಗಳನ್ನು ಮಾಡಬೇಕು.

ಏವಂ ತದ್ಭವಿತಾ ಸರ್ವಂ ಯನ್ಮಯೋಕ್ತಂ ದ್ವಿಜೋತ್ತಮಾಃ ।
ಯಾತ ದಾರುವನಂ ವಿಪ್ರಾಃ ಸರ್ವೇ ಯೂಯಂ ತಪೋಧನಾಃ ।
ಮಯಾ ಸರ್ವೇ ಸಮಾದಿಷ್ಟಾ ಯಾತ ದಾರುವನಂ ದ್ವಿಜಾಃ ॥ ೬೩ ॥

ತತಸ್ತು ಸಂಪ್ರಾಪ್ಯ ಮಹದ್ವಚೋ ಮಮ
ಸರ್ವೇ ಪ್ರಹೃಷ್ಟಾ ಮುನಯೋ ಮಹೋದಯಂ ।
ಗತ್ವಾ ಚ ತದ್ದಾರುವನಂ ಮಹೇಶ್ವರಿ ।
ಪುನಶ್ಚ ಚೇರುಃ ಸುತಪಸ್ತಪೋಧನಾಃ ॥ ೬೪ ॥

ಏತಸ್ಮಾತ್ಕಾರಣಾದ್ದೇವಿ ತ್ವಯಾ ಮೂಲಚಂಡೀಶಸಂಜ್ಞಿತಂ ।
ಲಿಂಗಂ ಪಾಪಹರಂ ನೄಣಾಮರ್ಧಚಂದ್ರೇಣ ಭೂಷಿತಂ ॥ ೬೫ ॥
ದೋಹನೀ ದುಗ್ಧದಾನೇನ ಮುನೀನಾಂ ತೃಷಿತಾತ್ಮನಾಂ ।
ಶ್ರಮಾಪಹರಂ ಯದ್ದೇವಿ ತ್ವಯಾ ಕೃತಮನುತ್ತಮಂ ।
ತತ್ತಪ್ತೋದಕನಾಮ್ನಾ ವಾ ಅಭೂತ್ಕುಂಡಂ ಧರಾತಲೇ ॥ ೬೬ ॥
ಋಷಿತೋಯಾಜಲೇ ಸ್ನಾತ್ವಾ ಚಂಡೀಶಂ ಯಃ ಪ್ರಪೂಜಯೇತ್ ।
ಸ ಪ್ರಚಂಡೋ ಭವೇದ್ಭೂಮೌ ಭುವನಾನಾಮಧೀಶ್ವರಃ ॥ ೬೭ ॥

---

೬೩. ದ್ವಿಜವರ್ಯರೆ ! ನಾನು ಹೇಳಿರುವುದೆಲ್ಲ ಆಗುವುದು, ನೀವು ನನ್ನ ಅಪ್ಪಣೆಯಂತೆ ದಾರುವನಕ್ಕೆ ತೆರಳಿರಿ.

೬೪. ಬಳಿಕ ಆ ಸಮಸ್ತ ಮುನಿಗಳೂ, ನನ್ನ ಮಾತನ್ನು ಕೇಳಿ ಸಂತೋಷಗೊಂಡು ಮಹೋದಯವನ್ನೂ ದಾರುವನವನ್ನೂ ಹೊಂದಿ ಮರಳಿ ತಪಸ್ಸನ್ನು ಮಾಡಿದರು.

೬೫. ದೇವಿ ! ಇದರಿಂದ ಅರ್ಧ ಚಂದ್ರಭೂಷಿತವಾದ ಆ ಲಿಂಗವು ಮೂಲಚಂಡೀಶ ಎಂದು ವಿಖ್ಯಾತವಾಯಿತು.

೬೬. ನೀನು ಬಾಯಾರಿಕೆಗೊಂಡ ಮುನಿಗಳಿಗೆ ಗೋರಸವನ್ನು ಕೊಟ್ಟು ಆಯಾಸವನ್ನು ಹೋಗಲಾಡಿಸಿದ್ದರಿಂದ ಆ ಕುಂಡವು ಭೂಮಿಯಲ್ಲಿ ತಪ್ತೋದಕವೆಂದು ಪ್ರಸಿದ್ಧವಾಯಿತು.

೬೭. ಋಷಿತೋಯಾನದಿಯ ನೀರಿನಲ್ಲಿ ಮಿಂದು ಚಂಡೀಶನನ್ನು ಪೂಜಿಸಿದವನು ಲೋಕಗಳಿಗೆ ಧೀರನಾದ ರಾಜನಾಗುವನು.

ಏತತ್ಸಂಕ್ಷೇಪತೋ ದೇವಿ ಮಾಹಾತ್ಮ್ಯಂ ಕೀರ್ತಿತಂ ತವ ।
ಮೂಲಚಂಡೀಶದೇವಸ್ಯ ಶ್ರುತಂ ಪಾತಕನಾಶನಂ ॥ ೬೮ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತಪ್ತೋದಕಕುಂಡೋತ್ಪತ್ತೌ ಮೂಲಚಂಡೀಶೋತ್ಪತ್ತಿಮಾಹಾತ್ಮ್ಯವರ್ಣನಂ ನಾಮ
॥ ಅಷ್ಟೋತ್ತರಶತತಮೋಽಧ್ಯಾಯಃ ॥

---

೬೮. ದೇವಿ! ಕೇಳುವುದರಿಂದ ಪಾಪವನ್ನು ನಿವಾರಿಸುವ ಮೂಲಚಂಡೀಶ ದೇವನ ಈ ಮಾಹಾತ್ಮ್ಯವನ್ನು ನಿನಗೆ ಸಂಕ್ಷೇಪವಾಗಿ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತಪ್ತೋದಕಕುಂಡೋತ್ಪತ್ತಿಮೂಲಚಂಡೀಶೋತ್ಪತ್ತಿಮಾಹಾತ್ಮ್ಯವರ್ಣನವೆಂಬ
ನೂರೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ನವೋತ್ತರತ್ರಿಶತತಮೋಽಧ್ಯಾಯಃ

ಚತುರ್ಮುಖವಿನಾಯಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿನಾಯಕಮನುತ್ತಮಂ ।
ಚತುರ್ಮುಖೇತಿ ವಿಖ್ಯಾತಂ ಚಂಡೀಶಾದುತ್ತರೇ ಸ್ಥಿತಂ ॥ ೧ ॥
ಕಿಂಚಿದೀಶಾನದಿಗ್ಭಾಗೇ ಧನುಷಾಂ ಚ ಚತುಷ್ಟಯೇ ।
ತಂ ಪ್ರಯತ್ನಾಚ್ಚ ಸಂಪೂಜ್ಯ ಸರ್ವವಿಘ್ನೈಃ ಪ್ರಮುಚ್ಯತೇ ॥ ೨ ॥
ಗಂಧಪುಷ್ಪಾಕ್ಷತಾದಿಭಿಸ್ತತ್ರ ಭಕ್ಷ್ಯೈಃ ಭೋಜ್ಯೈಃ ಸಮೋದಕೈಃ ।
ಚತುರ್ಮುಖಂ ಚತುರ್ಥ್ಯಾಂ ತು ಸಂಪೂಜ್ಯ ಸಿದ್ಧಿಭಾಗ್ಭವೇತ್ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚತುರ್ಮುಖವಿನಾಯಕಮಾಹಾತ್ಮ್ಯವರ್ಣನಂ ನಾಮ
ನವೋತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಚತುರ್ಮುಖವಿನಾಯಕಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ:— ಮಹಾದೇವಿ ! ತರುವಾಯ ಚಂಡೀಶನ ಉತ್ತರದಲ್ಲಿ ಸ್ವಲ್ಪ ಈಶಾನ್ಯ ದಿಕ್ಕಿನಲ್ಲಿ ನಾಲ್ಕು ಬಿಲ್ಲುಗಳ ದೂರದಲ್ಲಿರುವ ಚತುರ್ಮುಖನೆಂಬ ವಿನಾಯಕನ ಸನ್ನಿಧಿಗೆ ಹೋಗಬೇಕು. ಅವನನ್ನು ಪ್ರಯತ್ನದಿಂದ ಪೂಜಿಸಿದವನು ಸಕಲ ವಿಘ್ನಗಳಿಂದ ಮುಕ್ತನಾಗುವನು.

೩. ಅಲ್ಲಿ ಚತುರ್ಥೀದಿನ ಚತುರ್ಮುಖ ವಿನಾಯಕನನ್ನು ಗಂಧ, ಪುಷ್ಪ, ಭಕ್ಷ್ಯ, ಭೋಜ್ಯ, ಮೋದಕಗಳಿಂದ ಪೂಜಿಸಿದವನು ಸಿದ್ಧಿಯನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚತುರ್ಮುಖವಿನಾಯಕಮಾಹಾತ್ಮ್ಯ ವರ್ಣನವೆಂಬ
ಮುನ್ನೂರಒಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದಶೋತ್ತರತ್ರಿಶತತಮೋಽಧ್ಯಾಯಃ

ಕಲಂಬೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದ್ವಾಯವ್ಯದಿಗ್ಭಾಗೇ ಧನುಷಾಂ ದ್ವಿತಯೇ ಸ್ಥಿತಂ ।
ಕಲಂಬೇಶ್ವರನಾಮಾನಂ ಸರ್ವಪಾತಕನಾಶನಂ ॥ ೧ ॥
ತಂ ದೃಷ್ಟ್ವಾ ಪೂಜಯಿತ್ವಾ ಚ ಮುಕ್ತಃ ಸ್ಯಾತ್ಸರ್ವಕಿಲ್ಬಿಷೈಃ ।
ಸೋಮವಾರೇ ತ್ವಮಾವಾಸ್ಯಾ ತತ್ರೈವ ಬಹುಪುಣ್ಯದಾ ।
ವಿಪ್ರಾಣಾಂ ಭೋಜನಂ ದೇಯಂ ತತ್ರ ಪುಣ್ಯಫಲೇಪ್ಸುಭಿಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಲಂಬೇಶ್ವರಮಾಹಾತ್ಮ್ಯವರ್ಣನಂ ನಾಮ
॥ ದಶೋತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕಲಂಬೇಶ್ವರಮಾಹಾತ್ಮ್ಯವರ್ಣನಂ

೧–೨. ಈಶ್ವರನು ಹೇಳುತ್ತಾನೆ :—ಆ ಚತುರ್ಮುಖ ವಿನಾಯಕನ ವಾಯುವ್ಯ ದಿಕ್ಕಿನಲ್ಲಿ ಎರಡು ಬಿಲ್ಲುಗಳ ದೂರದಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಕಲಂಬೇಶ್ವರನನ್ನು ದರ್ಶನ ಮಾಡಿ ಪೂಜಿಸಿದವನು ಸಕಲ ಪಾಪಗಳಿಂದ ಮುಕ್ತನಾಗುವನು. ಅಲ್ಲಿ ಪುಣ್ಯ ಫಲವನ್ನು ಬಯಸುವವರು ಬಹು ಪುಣ್ಯವನ್ನೀಯುವ ಅಮಾವಾಸ್ಯೆ ಸೋಮವಾರದ ದಿನ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಲಂಬೇಶ್ವರಮಾಹಾತ್ಮ್ಯ ವರ್ಣನವೆಂಬ
ಮುನ್ನೂರಹತ್ತನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕಾದಶೋತ್ತರತ್ರಿಶತತಮೋಽಧ್ಯಾಯಃ

ಗೋಪಾಲಸ್ವಾಮಿಪರಿಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗೋಪಾಲಸ್ವಾಮಿನಂ ಹರಿಂ ।
ಚಂಡೀಶಾತ್ಪೂರ್ವದಿಗ್ಭಾಗೇ ಧನುಷಾಂ ವಿಂಶತೌ ಸ್ಥಿತಂ ॥ ೧ ॥
ಸರ್ವಪಾಪೋಪಶಮನಂ ದಾರಿದ್ರ್ಯೌಘವಿನಾಶನಂ ।
ತಂ ದೃಷ್ಟ್ವಾ ಪೂಜಯಿತ್ವಾ ಚ ಮಾಘೇ ಮಾಸಿ ವಿಶೇಷತಃ ।
ಪೂಜಾಜಾಗರಣಂ ಕೃತ್ವಾ ತತ್ರ ಗಚ್ಛೇತ್ಪರಂ ಪದಂ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗೋಪಾಲಸ್ವಾಮಿಹರಿಮಾಹಾತ್ಮ್ಯವರ್ಣನಂನಾಮ
॥ ಏಕಾದಶೋತ್ತರತ್ರಿಶತತಮೋಽಧ್ಯಾಯಃ.

ಕನ್ನಡದ ಅನುವಾದ

ಗೋಪಾಲಸ್ವಾಮಿಪರಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಚಂಡೀಶನಿಗೆ ಪೂರ್ವ ದಿಕ್ಕಿನಲ್ಲಿ ಇಪ್ಪತ್ತು ಬಿಲ್ಲುಗಳ ದೂರದಲ್ಲಿರುವ ಗೋಪಾಲಸ್ವಾಮಿಯೆಡೆಗೆ ಹೋಗಬೇಕು.

೨. ಸಕಲ ಪಾಪವನ್ನು ಪರಿಹರಿಸುವವನೂ. ಬಡತನವನ್ನು ನೀಗಿಸುವವನೂ, ಆದ ಆ ಗೋಪಾಲಸ್ವಾಮಿಯನ್ನು ಮಾಘ ಮಾಸದಲ್ಲಿ ಪೂಜಿಸಿ ಜಾಗರಣೆ ಮಾಡಿದವನು ಉತ್ತಮಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗೋಪಾಲಸ್ವಾಮಿಪರಿಮಾಹಾತ್ಮ್ಯವರ್ಣನವೆಂಬ
ಮುನ್ನೂರಹತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾದಶೋತ್ತರತ್ರಿಶತತಮೋಽಧ್ಯಾಯಃ

ಬಕುಲಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತಸ್ಮಾದುತ್ತರದಿಗ್ಭಾಗೇ ಧನುಷಾಮಷ್ಟಭಿಃ ಪ್ರಿಯೇ ।
ಬಕುಲಸ್ವಾಮಿನಂ ಸೂರ್ಯಂ ತಂ ಪಶ್ಯೇದ್ದುಃಖನಾಶನಃ ॥ ೧ ॥
ರವಿವಾರೇಣ ಸಪ್ತಮ್ಯಾಂ ಕುರ್ಯಾಜ್ಜಾಗರಣಂ ನರಃ ।
ಸರ್ವಾನ್ಕಾಮಾನವಾಪ್ನೋತಿ ಸೂರ್ಯಲೋಕೇ ಮಹೀಯತೇ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಬಕುಲಸ್ವಾಮಿಮಾಹಾತ್ಮ್ಯವರ್ಣನಂನಾಮ ॥ ದ್ವಾದಶೋತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಬಕುಲಸ್ವಾಮಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಪ್ರಿಯಳೆ! ಆ ಗೋಪಾಲಸ್ವಾಮಿಯ ಉತ್ತರ ದಿಕ್ಕಿನಲ್ಲಿ ಎಂಟು ಬಿಲ್ಲುಗಳ ದೂರದಲ್ಲಿರುವ ದುಃಖವನ್ನು ನಿವಾರಿಸುವ ಬಕುಲ ಸ್ವಾಮಿಯು ಸೂರ್ಯನನ್ನು ನೋಡಬೇಕು.

೨. ಸಪ್ತಮೀ ಭಾನುವಾರದ ದಿನ ಅಲ್ಲಿ ಜಾಗರಣೆ ಮಾಡಿದವನು ಸಮಸ್ತೇಷ್ಟಾರ್ಥಗಳನ್ನು ಹೊಂದಿ ಸೂರ್ಯ ಲೋಕದಲ್ಲಿ ಪೂಜ್ಯನಾಗುತ್ತಾನೆ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಬಕುಲಸ್ವಾಮಿಮಾಹಾತ್ಮ್ಯ ವರ್ಣನವೆಂಬ ಮುನ್ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯೋದಶೋತ್ತರತ್ರಿಶತತಮೋऽಧ್ಯಾಯಃ

ಉತ್ತರಾರ್ಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದ್ವಾಯವ್ಯದಿಗ್ಭಾಗೇ ಧನುಃಷೋಡಶಭಿಃ ಸ್ಥಿತಃ ।
ಉತ್ತರಾರ್ಕಶ್ಚ ನಾಮ್ನಾ ವೈ ಸದ್ಯಃ ಪ್ರತ್ಯಯಕಾರಕಃ ।
ಮುಚ್ಯತೇ ಸರ್ವರೋಗೈಸ್ತು ಕೃತ್ವಾ ವೈ ನಿಂಬಸಪ್ತಮೀಂ ॥ ೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಉತ್ತರಾರ್ಕಮಾಹಾತ್ಮ್ಯವರ್ಣನಂನಾಮ ತ್ರಯೋದಶೋತ್ತರತ್ರಿಶತತಮೋऽಧ್ಯಾಯಃ

ಕನ್ನಡದ ಅನುವಾದ

ಉತ್ತರಾರ್ಕಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಬಕುಲ ಸ್ವಾಮಿಯ ವಾಯವ್ಯ ದಿಕ್ಕಿನಲ್ಲಿ ಹದಿನಾರು ಬಿಲ್ಲುಗಳ ದೂರದಲ್ಲಿ ಕೂಡಲೆ ಫಲವನ್ನಿತ್ತು ನಂಬಿಕೆಯನ್ನುಂಟುಮಾಡುವ ಉತ್ತರಾರ್ಕನಿರುವನು. ಅಲ್ಲಿ ನಿಂಬಸಪ್ತಮಿಯನ್ನು ಆಚರಿಸಿದವನು ಸಮಸ್ತ ರೋಗಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಉತ್ತರಾರ್ಕಮಾಹಾತ್ಮ್ಯವರ್ಣನವೆಂಬ ಮುನ್ನೂರಹದಿಮೂರನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಚತುರ್ದಶೋತ್ತರತ್ರಿಶತತಮೋಽಧ್ಯಾಯಃ

ಋಷಿತೀರ್ಥಸಂಗಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ದೇವಕುಲಾಗ್ನೇಯ್ಯಾಂ ಗವ್ಯೂತ್ಯಾ ತತ್ರ ಸಂಸ್ಥಿತಂ ।
ಸಮುದ್ರಸ್ಯ ತಟೇ ರಮ್ಯಮೃಷಿತೀರ್ಥಮನುತ್ತಮಂ ॥ ೧ ॥

ಪಾಷಾಣಾಕೃತಯಸ್ತತ್ರ ಋಷಯೋಽದ್ಯಾಪಿ ಸಂಸ್ಥಿತಾಃ ।
ದೃಶ್ಯಂತೇ ಮಾನುಷೇ ದೇವಿ ಸರ್ವಪಾತಕನಾಶನಾಃ ॥ ೨ ॥

ತತ್ರ ಜ್ಯೇಷ್ಠೇ ತ್ವಮಾವಾಸ್ಯಾಂ ಪ್ರಾಪ್ಯಂತೇ ನಾಧಮೈರ್ನರೈಃ ।
ಪಿಂಡದಾನಂ ವಿಶೇಷೇಣ ಸ್ನಾನಂ ಶ್ರದ್ಧಾಸಮನ್ವಿತೈಃ ॥ ೩ ॥

ಕನ್ನಡದ ಅನುವಾದ

ಋಷಿತೀರ್ಥಸಂಗಮಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ತರುವಾಯ ದೇವಕುಲದ ಆಗ್ನೇಯ ದಿಕ್ಕಿನಲ್ಲಿ ಸಮುದ್ರದ ದಡದಲ್ಲಿ ನಾಲ್ಕು ಮೈಲಿ ದೂರದಲ್ಲಿ ಮನೋಹರವಾದ ಋಷಿತೀರ್ಥವಿರುವುದು.

೨. ದೇವಿ! ಅಲ್ಲಿ ಈಗಲೂ ಸಮಸ್ತ ಪಾತಕಗಳನ್ನು ಪರಿಹರಿಸುವ ಪಾಷಾಣಾಕೃತಿಯುಳ್ಳ ಋಷಿಗಳು ಕಾಣಿಸುವರು.

೩. ಅಲ್ಲಿ ಜ್ಯೇಷ್ಠ ಬಹುಳ ಅಮಾವಾಸ್ಯೆ ದಿನ ಪಿಂಡಪ್ರದಾನ, ಸ್ನಾನ ಇವುಗಳು ಅಧಮ ಜನರಿಗೆ ಲಭಿಸುವುದಿಲ್ಲ. ಶ್ರದ್ಧೆಯುಳ್ಳ ಉತ್ತಮರಿಗೆ ಮಾತ್ರ ಲಭಿಸುವುದು.

ಋಷಿತೋಯಾಸಂಗಮೇ ತು ಸ್ನಾನಂ ಶ್ರಾದ್ಧಂ ಸುದುರ್ಲಭಂ ।
ಗೋಪ್ರದಾನಂ ಪ್ರಶಂಸಂತಿ ತತ್ರ ತೇ ಮುನಿಪುಂಗವಾಃ ।
ಭೋಜನಂ ಬ್ರಾಹ್ಮಣಾನಾಂ ತು ಯಥಾಶಕ್ತ್ಯಾ ಪ್ರದಾಪಯೇತ್ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಋಷಿತೀರ್ಥಸಂಗಮಮಾಹಾತ್ಮ್ಯವರ್ಣನಂ
ಚತುರ್ದಶೋತ್ತರತ್ರಿಶತತಮೋಽಧ್ಯಾಯಃ

---

೪. ಋಷಿತೋಯಾ ಸಂಗಮದಲ್ಲಿ ಸ್ನಾನವು ಅತಿ ದುರ್ಲಭವಾದುದು. ಅಲ್ಲಿ ಮುನಿವರ್ಯರು ಗೋದಾನವನ್ನು ಹೊಗಳುತ್ತಾರೆ. ಅಲ್ಲಿ ಬ್ರಾಹ್ಮಣರಿಗೆ ಶಕ್ತ್ಯನುಸಾರ ಭೋಜನ ಮಾಡಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಋಷಿತೀರ್ಥಸಂಗಮಮಾಹಾತ್ಮ್ಯವರ್ಣನಂ
ಮುನ್ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾದಶೋತ್ತರತ್ರಿಶತತಮೋಽಧ್ಯಾಯಃ

ಮರುದಾರ್ಯಾದೇವೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮರುದಾರ್ಯಾಂ ಮಹಾಪ್ರಭಾಂ ।
ತಸ್ಮಾತ್ಪಶ್ಚಿಮದಿಗ್ಭಾಗೇ ಕೋಶಾರ್ಧೇನ ವ್ಯವಸ್ಥಿತಾಂ ॥ ೧ ॥
ಮರುದ್ಭಿಃ ಪೂಜಿತಾಂ ದೇವೀಂ ಸರ್ವಕಾಮಫಲಪ್ರದಾಂ ।
ಮಹಾನವಮ್ಯಾಂ ಯತ್ನೇನ ಸಪ್ತಮ್ಯಾಂ ಪೂಜಯೇನ್ನರಃ ।
ಗಂಧಪುಷ್ಪಾದಿವಿಧಿನಾ ಸರ್ವಕಾಮಪ್ರಸಿದ್ಧಯೇ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಮರುದಾರ್ಯಾದೇವೀಮಾಹಾತ್ಮ್ಯವರ್ಣನಂ ನಾಮ
॥ ಪಂಚಾದಶೋತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮರುದಾರ್ಯಾದೇವೀಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಋಷಿತೀರ್ಥ ಸಂಗಮದ ಪಶ್ಚಿಮ ದಿಕ್ಕಿನಲ್ಲಿ ಒಂದು ಮೈಲಿ ದೂರದಲ್ಲಿರುವ ಮರುತ್ತುಗಳು ಪೂಜಿಸಿರುವ ಸಕಲೇಷ್ಟಾರ್ಥಗಳನ್ನು ಕೊಡುವ ಮರುದಾರ್ಯಾದೇವಿಯ ಸನ್ನಿಧಿಗೆ ಹೋಗಬೇಕು. ಮನುಷ್ಯನು ಮಹಾನವಮೀ, ಸಪ್ತಮೀ ದಿನಗಳಲ್ಲಿ ಸಮಸ್ತೇಷ್ಟಾರ್ಥ ಸಿದ್ಧಿಗಾಗಿ ಗಂಧ ಪುಷ್ಪಾದಿಗಳಿಂದ ಆ ದೇವಿಯನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ ಮರುದಾರ್ಯಾದೇವೀಮಾಹಾತ್ಮ್ಯವರ್ಣನವೆಂಬ ಮುನ್ನೂರಹದಿನೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷೋಡಶೋತ್ತರತ್ರಿಶತತಮೋಽಧ್ಯಾಯಃ

ಕ್ಷೇಮಾದಿತ್ಯಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ಅಥ ದೇವಕುಲಾತ್ಪೂರ್ವೇ ಪಂಚಗವ್ಯೂತಿಮಾತ್ರತಃ ।
ಶಂಬರಸ್ಥಾನಮಧ್ಯೇ ತು ಕ್ಷೇಮಾದಿತ್ಯೇ ತು ವಿಶ್ರುತಃ ॥ ೧ ॥
ತಂ ದೃಷ್ಟ್ವಾ ಮಾನವೋ ದೇವಿ ಭವೇತ್ಕ್ಷೇಮಾರ್ಥಸಿದ್ಧಿಭಾಕ್ ।
ಸಪ್ತಮ್ಯಾಂ ರವಿವಾರೇಣ ಪೂಜಿತಃ ಸರ್ವಕಾಮದಃ ॥ ೨ ॥
ಇತಿ ದೇವಕುಲಸ್ಥಾನೇ ಕಥಿತಾ ತೀರ್ಥಸಂಸ್ಥಿತಿಃ ॥ ೩ ॥

ಇತಿ ಶ್ರೀ ಸ್ಕಾಂದಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕ್ಷೇಮಾದಿತ್ಯಮಾಹಾತ್ಮ್ಯವರ್ಣನಂ ನಾಮ
ಷೋಡಶೋತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕ್ಷೇಮಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ತರುವಾಯ ದೇವಕುಲದ ಪೂರ್ವದಲ್ಲಿ ಇಪ್ಪತ್ತು ಮೈಲಿ ದೂರದಲ್ಲಿರುವ ಶಂಬರ ಸ್ಥಾನ ಮಧ್ಯದಲ್ಲಿ ಕ್ಷೇಮಾದಿತ್ಯನಿರುವನು.

೨. ದೇವಿ! ಭಾನುವಾರ ಸಪ್ತಮಿ ದಿನ ಆ ಕ್ಷೇಮಾದಿತ್ಯನನ್ನು ನೋಡಿ ಪೂಜಿಸಿದವನು ಕ್ಷೇಮ, ಅರ್ಥಗಳ ಸಿದ್ಧಿಯನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕ್ಷೇಮಾದಿತ್ಯಮಾಹಾತ್ಮ್ಯವರ್ಣನವೆಂಬ
ಮುನ್ನೂರಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತದಶೋತ್ತರತ್ರಿಶತತಮೋಽಧ್ಯಾಯಃ

ಕಂಟಕಶೋಷಣೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವೀಂ ಕಂಟಕಶೋಷಿಣೀಂ ।
ಉತ್ತರೇಣ ದೇವಕುಲಾದ್ದಕ್ಷಿಣೇನೋನ್ನತಾತ್ಸ್ಥಿತಾತ್ ॥ ೧ ॥
ತಸ್ಯೋತ್ಪತ್ತಿಂ ಪ್ರವಕ್ಷ್ಯಾಮಿ ಶೃಣು ಹ್ಯೇಕಮನಾಃ ಪ್ರಿಯೇ ।
ಉನ್ನತಾದ್ದಕ್ಷಿಣೇ ಭಾಗೇ ಯಜಂತೇ ದ್ವಿಜಸತ್ತಮಾಃ ॥ ೨ ॥
ಭೃಗುರತ್ರಿರ್ಮರೀಚಿಶ್ಚ ಭರದ್ವಾಜೋಽಥ ಕಶ್ಯಪಃ ।
ಕಣ್ವೋ ಮಂಕಿಶ್ಚ ಸಾವರ್ಣಿರ್ಜಾತೂಕರ್ಣ್ಯಸ್ತಥೈವ ಚ ॥ ೩ ॥
ವತ್ಸಶ್ಚೈವ ವಸಿಷ್ಠಶ್ಚ ಪುಲಸ್ತ್ಯಃ ಪುಲಹಃ ಕ್ರತುಃ ।
ಮನುರ್ಯಮೋಽಙ್ಗಿರಾ ವಿಷ್ಣುಃ ಶಾತಾತಪಪರಾಶರೌ ॥ ೪ ॥
ಶಾಂಡಿಲ್ಯಃ ಕೌಶಿಕಶ್ಚೈವ ಗೌತಮೋ ಗಾರ್ಗ್ಯ ಏವ ಚ ।
ದಾಲ್ಭ್ಯಶ್ಚ ಶೌನಕಶ್ಚೈವ ಶಾಕಲ್ಯೋ ಗಾಲವಸ್ತಥಾ ॥ ೫ ॥

ಕನ್ನಡದ ಅನುವಾದ

ಕಂಟಕಶೋಷಣೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ ! ಬಳಿಕ ದೇವಕುಲದ ಉತ್ತರದಲ್ಲಿಯೂ, ಉನ್ನತಸ್ಥಾನದ ದಕ್ಷಿಣದಲ್ಲಿಯೂ ಇರುವ ಕಂಟಕಶೋಷಣೀ ದೇವಿಯೆಡೆಗೆ ಹೋಗಬೇಕು.

೨–೭. ಪ್ರಿಯಳೆ ! ಅವಳ ಉತ್ಪತ್ತಿಯನ್ನು ಹೇಳುವೆನು. ಒಮ್ಮನಸ್ಸಿನಿಂದ ಕೇಳು. ಉನ್ನತಸ್ಥಾನದ ದಕ್ಷಿಣದಲ್ಲಿ ಭೃಗು, ಅತ್ರಿ, ಮರೀಚಿ, ಭರದ್ವಾಜ, ಕಶ್ಯಪ, ಕಣ್ವ, ಮಂಕಿ, ಸಾವರ್ಣಿ, ಜಾತೂಕರ್ಣ್ಯ, ವತ್ಸ, ವಸಿಷ್ಠ, ಪುಲಸ್ತ್ಯ, ಪುಲಹ, ಕ್ರತು, ಮನು, ಯಮ, ಅಂಗಿರಾ, ವಿಷ್ಣು, ಶಾತಾತಪ, ಪರಾಶರ, ಶಾಂಡಿಲ್ಯ, ಕೌಶಿಕ, ಗೌತಮ, ಗಾರ್ಗ್ಯ, ದಾಲ್ಭ್ಯ, ಶೌನಕ, ಶಾಕಲ್ಯ, ಗಾಲವ, ಜಾಬಾಲಿ, ಮುದ್ಗಲ, ಋಷ್ಯಶೃಂಗ, ವಿಭಾಂಡಕ, ವಿಶ್ವಾಮಿತ್ರ, ಶತಾನಂದ, ಜಹ್ನು, ವಿಶ್ವಾವಸು

ಜಾಬಾಲಿರ್ಮುದ್ಗಲಶ್ಚೈವ ಋಷ್ಯಶೃಂಗೋ ವಿಭಾಂಡಕಃ ।
ವಿಶ್ವಾಮಿತ್ರಃ ಶತಾನಂದೋ ಜಹ್ನುರ್ವಿಶ್ವಾವಸುಸ್ತಥಾ ॥ ೬ ॥
ಏತೇ ಚಾನ್ಯೇ ಚ ಮುನಯೋ ಯಜಂತೇ ವಿವಿಧೈರ್ಮಖೈಃ ।
ಯಜ್ಞವಾಟಂ ಚ ನಿರ್ಮಾಯ ಋಷಿತೋಯಾತಟೇ ಶುಭೇ ॥ ೭ ॥
ದೇವಗಂಧರ್ವನೃತ್ಯೈಶ್ಚ ವೇಣುವೀಣಾನಿನಾದಿತಂ ।
ವೇದಧ್ವನಿತಘೋಷೇಣ ಯಜ್ಞಹೋಮಾಗ್ನಿಹೋತ್ರಜೈಃ ॥ ೮ ॥
ಧೂಪೈಃ ಸಮಾವೃತಂ ಸರ್ವಮಾಜ್ಯಗಂಧಿಭಿರರ್ಚಿತಂ ।
ಶೋಭಿತಂ ಮುನಿಭಿರ್ದಿವ್ಯೈಶ್ಚಾತುರ್ವೇದ್ಯೈರ್ದ್ವಿಜೋತ್ತಮೈಃ ॥ ೯ ॥
ಏವಂವಿಧಂ ಪ್ರದೇಶಂ ತು ದೃಷ್ಟ್ವಾ ದೈತ್ಯಾ ಮಹಾಬಲಾಃ ।
ಸಮುದ್ರಮಧ್ಯಾದಾಯಾತಾಃ ಯಜ್ಞವಿಧ್ವಂಸಹೇತವೇ ॥ ೧೦ ॥
ಮಾಯಾವಿನೋ ಮಹಾಕಾಯಾಃ ಶ್ಯಾಮವರ್ಣಾ ಮಹೋದರಾಃ ।
ಲಂಬಭ್ರೂಶ್ಮಶ್ರುನಾಸಾಗ್ರಾ ರಕ್ತಾಕ್ಷಾ ರಕ್ತಮೂರ್ಧಜಾಃ ॥ ೧೧ ॥
ಯಜ್ಞಂ ಸಮಾಗತಾಃ ಸರ್ವೇ ದೈತ್ಯಾಶ್ಚೈವ ವರಾನನೇ ।
ತಾನ್ದೃಷ್ಟ್ವಾ ಮುನಯಃ ಸರ್ವೇ ರೌದ್ರರೂಪಾನ್ಭಯಂಕರಾನ್ ॥ ೧೨ ॥
ಕೇಚಿನ್ನಿಪತಿತಾ ಭೂಮೌ ತಥಾನ್ಯೇಽಗ್ನೌ ಸ್ರುಚೀಕರಾಃ ।
ಪತ್ನೀಶಾಲಾಂ ಸಮಾವಿಷ್ಟಾ ಹವಿರ್ಧಾನಂ ತಥಾಪರೇ ॥ ೧೩ ॥

ಇವರೂ ಇತರ ಮುನಿಗಳೂ ಋಷಿತೋಯಾ ದಡದಲ್ಲಿ ಯಜ್ಞಶಾಲೆಯನ್ನು ನಿರ್ಮಿಸಿ ನಾನಾವಿಧ ಯಜ್ಞಗಳನ್ನು ಮಾಡುತ್ತಾರೆ.

೮–೧೦. ದೇವಗಂಧರ್ವರ ಕುಣಿತಗಳಿಂದಲೂ, ಕೊಳಲು, ವೀಣೆ, ವೇದ ಘೋಷ ಇವುಗಳಿಂದಲೂ ಶಬ್ದಗೊಂಡುದೂ, ಯಜ್ಞ, ಹೋಮ ಅಗ್ನಿಹೋತ್ರ ಇವುಗಳ ಆಜ್ಯ ಗಂಧವುಳ್ಳ ಹೊಗೆಗಳಿಂದ ತುಂಬಿರುವುದೂ, ದಿವ್ಯ ಮುನಿಗಳು, ಚತುರ್ವೇದ ಪಾರಂಗತರಾದ ದ್ವಿಜೋತ್ತಮರು ಇವರಿಂದ ಅಲಂಕಾರಗೊಂಡುದೂ, ಆದ ಆ ಪ್ರದೇಶವನ್ನು ಅತಿ ಬಲಿಷ್ಠರಾದ ದೈತ್ಯರು ನೋಡಿ ಯಜ್ಞದ ನಾಶಕ್ಕಾಗಿ ಸಮುದ್ರದ ಮಧ್ಯದಿಂದ ಬಂದರು.

೧೧–೧೩. ಯಜ್ಞ ನಾಶಕ್ಕಾಗಿ ಬಂದ ಮಾಯಾವಿಗಳೂ, ದೊಡ್ಡ ದೇಹ ವುಳ್ಳವರೂ, ನೀಲವರ್ಣರೂ, ದೊಡ್ಡ ಹೊಟ್ಟೆಯುಳ್ಳವರೂ, ಜೋಲಾಡುತ್ತಿರುವ ಹುಬ್ಬು, ಮೀಸೆ, ಮೂಗುಗಳುಳ್ಳವರೂ, ಕೆಂಪು ಕಣ್ಣು ತಲೆಗೂದಲುಗಳುಳ್ಳವರೂ, ಆದ ಆ ದೈತ್ಯರನ್ನು ಕಂಡು ಮುನಿಗಳಲ್ಲಿ ಕೆಲವರು ಭೂಮಿಯಲ್ಲಿ ಬಿದ್ದರು. ಸ್ರುಕ್ಕನ್ನು ಹಿಡಿದುಕೊಂಡ ಇನ್ನು ಕೆಲವರು ಅಗ್ನಿಯಲ್ಲಿ ಬಿದ್ದರು. ಕೆಲವರು ಪತ್ನೀಶಾಲೆಯನ್ನೂ, ಕೆಲವರು ಹವಿಸ್ಸಿನ ಮನೆಯನ್ನೂ ಹೊಕ್ಕರು.

ಋತ್ವಿಜಸ್ತು ಸದೋಮಧ್ಯೇ ಸ್ಥಿತಾ ವಾಚಂಯಮಾಸ್ತಥಾ ॥ ೧೪ ॥
ಏವಂ ದೇವಿ ಯದಾವೃತ್ತಂ ಮುನೀನಾಂ ಚ ಮಹಾತ್ಮನಾಂ ।
ತದಾಧ್ವರ್ಯುರ್ಮಹಾತೇಜಾ ಧೈರ್ಯಮಾಲಂಬ್ಯ ಸಾದರಃ ॥ ೧೫ ॥
ಅಗ್ನಿಹೋತ್ರಂ ಹವಿಷ್ಯಂ ಚ ಹವಿರ್ನ್ಯಸ್ಯ ಮಂತ್ರವಿತ್ ।
ಸುಸಮಿದ್ಧಂ ಜುಹಾವಾಗ್ನಿಂ ರಕ್ಷಸಾಂ ನಾಶಹೇತವೇ ॥ ೧೬ ॥
ಹುತೇ ಹವಿಷಿ ದೇವೇಶಿ ತತ್ಕ್ಷಣಾದೇವಿ ಚೋತ್ಥಿತಾ ।
ಶಕ್ತಿಃ ಶಕ್ತಿತ್ರಿಶೂಲಾಢ್ಯಾ ಚರ್ಮಹಸ್ತಾ ಮಹೋಜ್ಜ್ವಲಾ ॥ ೧೭ ॥
ತಥಾ ತೇ ನಿಹತಾ ದೈತ್ಯಾ ಯಜ್ಞವಿಧ್ವಂಸಕಾರಿಣಃ ।
ತತಸ್ತಾಂ ವಿವಿಧೈಃ ಸ್ತೋತ್ರೈರ್ಮುನಯಸ್ತುಷ್ಟುವುಸ್ತದಾ ॥ ೧೮ ॥
ಪ್ರಸನ್ನಾಭಯದಾ ದೇವೀ ತಾನೃಷೀನ್ಪ್ರತ್ಯುವಾಚ ಹ ।
ವರಂ ವೃಣುಧ್ವಂ ಮುನಯೋ ದಾಸ್ಯಾಮಿ ವರಮುತ್ತಮಂ ॥ ೧೯ ॥

ಋಷಯ ಊಚುಃ :—

ಕೃತಂ ವೈ ಸಕಲಂ ಕಾರ್ಯಂ ಯಜ್ಞಾನೋ ರಕ್ಷಿತಾಸ್ತ್ವಯಾ ।
ಯದಿ ದೇಯೋ ವರೋಽಸ್ಮಾಕಂ ತ್ವಯಾ ಚಾಸುರಮರ್ದಿನಿ ॥ ೨೦ ॥

---

೧೪. ಋತ್ವಿಜರು ಸಭಾಮಧ್ಯದಲ್ಲಿ ಮೌನವಾಗಿ ಕುಳಿತುಕೊಂಡರು.

೧೫–೧೬. ದೇವಿ ! ಮಹಾತ್ಮರಾದ ಮುನಿಗಳ ಸ್ಥಿತಿಯು ಹೀಗಾಗಲು ಅತಿ ತೇಜಸ್ವಿಯಾದ ಮಂತ್ರವನ್ನರಿತ ಅಧ್ವರ್ಯುವು ಧೈರ್ಯವನ್ನು ತಾಳಿ ಆದರದಿಂದ ರಾಕ್ಷಸರ ನಾಶಕ್ಕಾಗಿ ಜ್ವಲಿಸುವ ಅಗ್ನಿಯಲ್ಲಿ ಹವಿಸ್ಸಿನಿಂದ ಹೋಮ ಮಾಡಿದನು.

೧೭. ದೇವೇಶಿ ! ಹವಿಸ್ಸಿನಿಂದ ಹೋಮ ಮಾಡಿದ ಕೂಡಲೆ ಶಕ್ತಿ, ತ್ರಿಶೂಲ, ಗುರಾಣಿಗಳನ್ನು ಹಿಡಿದುಕೊಂಡ ಅತಿ ಪ್ರಕಾಶಮಾನಳಾದ ಶಕ್ತಿ ದೇವತೆಯು ಅಗ್ನಿ ಕುಂಡದಿಂದ ಮೇಲಕ್ಕೆದ್ದಳು.

೧೮. ಅವಳು ಯಜ್ಞವನ್ನು ಹಾಳುಮಾಡುತ್ತಿರುವ ದೈತ್ಯರನ್ನು ಕೊಲ್ಲಲು ಮುನಿಗಳು ಅವಳನ್ನು ನಾನಾ ಬಗೆಯ ಸ್ತೋತ್ರಗಳಿಂದ ಸ್ತುತಿಸಿದರು.

೧೯. ಆಗ ಆ ದೇವಿಯು ಪ್ರಸನ್ನಳಾಗಿ ಆ ಮುನಿಗಳನ್ನು ಕುರಿತು, "ಮುನಿಗಳೆ! ವರವನ್ನು ಕೇಳಿಕೊಳ್ಳಿರಿ, ಕೊಡುವೆನೆಂದಳು".

೨೦–೨೧. ಋಷಿಗಳು ಹೇಳುತ್ತಾರೆ : – ನೀನು ನಮ್ಮ ಕಾರ್ಯವನ್ನೆಲ್ಲ ಮಾಡಿ ರುವೆ, ನಮ್ಮ ಯಜ್ಞವನ್ನು ರಕ್ಷಿಸಿರುವೆ. ನಮಗೆ ವರವನ್ನು ಕೊಡುವುದಾದರೆ ಮುನಿ ಗಳಿಗೆ ಹಿತವನ್ನುಂಟುಮಾಡಲು ಈ ಸ್ಥಳದಲ್ಲಿ ಯಾವಾಗಲೂ ನೆಲೆಸು. ನೀನು ಮುಳ್ಳಿ

ಅಸ್ಮಿನ್ಸ್ಥಾನೇ ಸದಾ ತಿಷ್ಠ ಮುನೀನಾಂ ಹಿತಕಾಮ್ಯಯಾ ।
ಕಂಟಕಾಃ ಶೋಷಿತಾ ದೈತ್ಯಾಸ್ತೇನ ಕಂಟಕಶೋಷಿಣೀ ।
ಅದ್ಯಪ್ರಭೃತಿ ನಾಮಾಸ್ತು ತೇನ ದೇವಿ ಸದಾ ತ್ವಿಹ ॥ ೨೦ ॥

ಈಶ್ವರ ಉವಾಚ :—

ಏವಂ ಭವಿಷ್ಯತೀತ್ಯುಕ್ತ್ವಾ ಸಾ ದೇವ್ಯಂತರ್ಹಿತಾ ತದಾ ।
ಅಷ್ಟಮ್ಯಾಂ ವಾ ನವಮ್ಯಾಂ ವಾ ಪೂಜಯಿಷ್ಯತಿ ಮಾನವಾಃ ॥ ೨೧ ॥
ರಾಕ್ಷಸೇಭ್ಯಃ ಪಿಶಾಚೇಭ್ಯೋ ಭಯಂ ತಸ್ಯ ನ ಜಾಯತೇ ।
ಪ್ರಾಪ್ನುಯಾತ್ಪರಮಾಂ ಸಿದ್ಧಿಂ ಮಾನವೋ ನಾತ್ರ ಸಂಶಯಃ ॥ ೨೨ ॥

ಇತಿ ಶ್ರೀ ಸ್ಕಾಂದಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಂಟಕಶೋಷಣೀಮಾಹಾತ್ಮ್ಯವರ್ಣನಂ ನಾಮ
ಸಪ್ತದಶೋತ್ತರತ್ರಿಶತತಮೋಽಧ್ಯಾಯಃ

ನಂತಿರುವ ದೈತ್ಯರನ್ನು ನಾಶಗೊಳಿಸಿದ್ದರಿಂದ ಇದು ಮೊದಲ್ಗೊಂಡು ನಿನಗೆ ಕಂಟಕ ಶೋಷಿಣೀ ಎಂದು ಹೆಸರಾಗಲಿ.

೨೨: ಈಶ್ವರನು ಹೇಳುತ್ತಾನೆ :—ಆ ದೇವಿಯು ಹೀಗೆಯೇ ಆಗುವುದೆಂದು ಹೇಳಿ ಅಂತರ್ಧಾನವಾಗಿಹೋದಳು. ಅಷ್ಟಮೀ ನವಮೀ ದಿನಗಳಲ್ಲಿ ಆ ದೇವಿಯನ್ನು ಮಾನವನಿಗೆ ರಾಕ್ಷಸರಿಂದಲೂ, ಪಿಶಾಚಿಗಳಿಂದಲೂ ಭಯವುಂಟಾಗುವುದಿಲ್ಲ, ಅವನು ಉತ್ತಮ ಸಿದ್ಧಿಯನ್ನು ನಿಶ್ಚಯವಾಗಿಯೂ ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಂಟಕಶೋಷಣೀಮಾಹಾತ್ಮ್ಯವರ್ಣನವೆಂಬ
ಮುನ್ನೂರಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಥಾಽಷ್ಟಾದಶೋತ್ತರತ್ರಿಶತತಮೋಽಧ್ಯಾಯಃ

ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯಾಶ್ಚ ಪೂರ್ವದಿಗ್ಭಾಗೇ ನಾತಿದೂರೇ ವ್ಯವಸ್ಥಿತಂ ।
ಲಿಂಗಂ ಮಹಾಪ್ರಭಾವಂ ಹಿ ಸರ್ವಪಾತಕನಾಶನಂ ॥ ೧ ॥
ಬ್ರಹ್ಮೇಶ್ವರೇತಿ ನಾಮಾಖ್ಯಂ ಬ್ರಾಹ್ಮಣೈಶ್ಚ ಪ್ರತಿಷ್ಠಿತಂ ।
ಋಷಿತೋಯಾಜಲೇ ಸ್ನಾತ್ವಾ ತಲ್ಲಿಂಗಂ ಯಃ ಪ್ರಪೂಜಯೇತ್ ।
ಸ ಭವೇದ್ವೇದವಿದ್ವಿಪ್ರೋ ಜಾಡ್ಯಭಾವವಿವರ್ಜಿತಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಥಾಷ್ಟಾದಶೋತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಬ್ರಹ್ಮೇಶ್ವರಮಾಹಾತ್ಮ್ಯವರ್ಣನ

೧—೨. ಈಶ್ವರನು ಹೇಳುತ್ತಾನೆ :—ಆ ಕಂಟಕಶೋಷಿಣಿಯ ಪೂರ್ವದಲ್ಲಿ ಸಮೀಪದಲ್ಲಿರುವುದೂ ಅತಿಶಯ ಮಾಹಾತ್ಮ್ಯವುಳ್ಳುದೂ, ಸಕಲ ಪಾಪಗಳನ್ನು ನಾಶಗೊಳಿಸುವುದೂ, ಬ್ರಾಹ್ಮಣರು ಪ್ರತಿಷ್ಠೆ ಮಾಡಿರುವುದೂ ಆದ ಬ್ರಹ್ಮೇಶ್ವರ ಲಿಂಗವನ್ನು ಋಷಿತೋಯಾ ಜಲದಲ್ಲಿ ಮಿಂದು ಪೂಜಿಸಿದ ವಿಪ್ರನು ವೇದಜ್ಞನೂ, ಜಾಡ್ಯರಹಿತನೂ ಆಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಬ್ರಹ್ಮೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಹದಿನೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನವಿಂಶತ್ಯುತ್ತರಶ್ರಿಶತತಮೋಽಧ್ಯಾಯಃ

ಉನ್ನತಸ್ಥಾನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹ್ಯುನ್ನತಸ್ಥಾನಮುತ್ತಮಂ ।
ತಸ್ಯೈವೋತ್ತರದಿಗ್ಭಾಗ ಋಷಿತೋಯಾತಟೇ ಶುಭೇ ॥ ೧ ॥
ಏತತ್ಸ್ಥಾನಂ ಮಹಾದೇವಿ ವಿಪ್ರೇಭ್ಯಃ ಪ್ರಾದದಾಂ ಬಲಾತ್ ।
ಸರ್ವಸೀಮಾಸಮಾಯುಕ್ತಂ ಚಂಡೀಗಣಸುರಕ್ಷಿತಂ ॥ ೨ ॥

ದೇವ್ಯುವಾಚ :—

ಕಥಮುನ್ನತನಾಮಾಸ್ಯ ಬಭೂವ ಸುರಸತ್ತಮ ।
ಕಥಂ ತ್ವಯಾ ಬಲಾದ್ದತ್ತಂ ಕಿಯತ್ಸೀಮಾಸಮನ್ವಿತಂ ॥ ೩ ॥
ಏತತ್ಸರ್ವಂ ಸಮಾಚಕ್ಷ್ವ ಸಂಕ್ಷೇಪಾನ್ನಾತಿವಿಸ್ತರಾತ್ ॥ ೪ ॥

ಕನ್ನಡದ ಅನುವಾದ

ಉನ್ನತಸ್ಥಾನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಬ್ರಹ್ಮೇಶ್ವರನ ಉತ್ತರ ದಿಕ್ಕಿನಲ್ಲಿ ಋಷಿತೋಯಾ ದಡದಲ್ಲಿರುವ ಉನ್ನತ ಸ್ಥಾನಕ್ಕೆ ಹೋಗಬೇಕು.

೨. ಮಹಾದೇವಿ ! ಎಲ್ಲ ಎಲ್ಲೆಗಳಿಂದಲೂ ಕೂಡಿರುವ, ಚಂಡಿಯರ ಸಮೂಹ ದಿಂದ ರಕ್ಷಿಸಲ್ಪಟ್ಟ ಈ ಸ್ಥಾನವನ್ನು ಬ್ರಾಹ್ಮಣರಿಗೆ ಕೊಟ್ಟಿರುವೆನು.

೩. ದೇವಿಯು ಹೇಳುತ್ತಾಳೆ :—ಸುರೋತ್ತಮ ! ಇದಕ್ಕೆ ಉನ್ನತ ಎಂದು ಹೆಸರು ಬರಲು ಕಾರಣವೇನು ? ನೀನು ಇದನ್ನು ಬ್ರಾಹ್ಮಣರಿಗೆ ಹೇಗೆ ಕೊಟ್ಟಿರುವೆ ? ಇದಕ್ಕೆ ಎಷ್ಟು ಎಲ್ಲೆಗಳಿರುವುವು ?

೪. ಇದನ್ನೆಲ್ಲ ನನಗೆ ಸಂಕ್ಷೇಪವಾಗಿ ಹೇಳು.

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ಕಥಾಂ ಪಾಪಪ್ರಣಾಶಿನೀಂ ।
ಯಸ್ಯಾಂ ಶ್ರುತ್ವಾ ಮಾನವೋ ದೇವಿ ಮುಚ್ಯತೇ ಸರ್ವಪಾತಕೈಃ ॥ ೫ ॥
ಏತತ್ಸರ್ವಂ ಪುರಾ ಪ್ರೋಕ್ತಂ ಸ್ಥಾನಸಂಕೇತಕಾರಣಂ ।
ತೃತೀಯೇ ಬ್ರಹ್ಮಣಃ ಕುಂಡೇ ಸೃಷ್ಟಿಸಂಕ್ಷೇಪಸೂಚಕೇ ॥ ೬ ॥
ತಥಾಪಿ ತೇ ಪ್ರವಕ್ಷ್ಯಾಮಿ ಸಂಕ್ಷೇಪಾಚ್ಛೃಣು ಪಾರ್ವತಿ ॥ ೭ ॥
ಉನ್ನಾಮಿತಂ ಪುನಸ್ತತ್ರ ಯತ್ರ ಲಿಂಗಂ ಮಹೋದಯೇ ।
ತದುನ್ನತಮಿತಿ ಪ್ರೋಕ್ತಂ ಸ್ಥಾನಂ ಸ್ಥಾನವತಾಂ ವರಂ ॥ ೮ ॥
ಅಥವಾ ಚೋನ್ನತಂ ದ್ವಾರಂ ಪೂರ್ವಂ ಪ್ರಾಭಾಸಿಕಸ್ಯ ವೈ ।
ತದುನ್ನತಮಿತಿ ಪ್ರೋಕ್ತಂ ಸ್ಥಾನಂ ಸ್ಥಾನವತಾಂ ಪರಂ ॥ ೯ ॥
ವಿದ್ಯಯಾ ತಪಸಾ ಚೈವ ಯತ್ರೋತ್ಕೃಷ್ಟಾ ಮಹರ್ಷಯಃ ।
ತದುನ್ನತಮಿತಿ ಪ್ರೋಕ್ತಂ ಸ್ಥಾನಂ ಸ್ಥಾನವತಾಂ ವರಂ ॥ ೧೦ ॥
ಯದಾ ದೇವಕುಲೇ ವಿಪ್ರಾ ಮೂಲಚಂಡೀಶಸಂಜ್ಞಕಂ ।
ಪ್ರಸಾದ್ಯ ಚ ಮಹಾದೇವಂ ಪುನಃ ಪ್ರಾಪ್ತಾ ಮಹೋದಯಂ ॥ ೧೧ ॥

---

೫. ಈಶ್ವರನು ಹೇಳುತ್ತಾನೆ :—ದೇವಿ ! ಪಾಪವನ್ನು ನೀಗಿಸುವ ಕಥೆಯನ್ನು ಹೇಳುವೆನು, ಕೇಳು. ಇದನ್ನು ಕೇಳಿದ ಮಾನವನು ಸಕಲ ಪಾತಕಗಳಿಂದಲೂ ಮುಕ್ತನಾಗುವನು.

೬. ಈ ಸ್ಥಾನದ ಹೆಸರಿಗೆ ಕಾರಣವನ್ನು ಸೃಷ್ಟಿಸಂಕ್ಷೇಪವನ್ನು ಸೂಚಿಸುವ ಮೂರನೆಯ ಬ್ರಹ್ಮ ಕುಂಡದಲ್ಲಿ ಹೇಳಿರುವೆನು

೭. ಪಾರ್ವತಿ ! ಆದರೂ ಸಂಕ್ಷೇಪವಾಗಿ ನಿನಗೆ ಅದನ್ನು ಹೇಳುವೆನು.

೮. ಯಾವ ಮಹೋದಯ ತೀರ್ಥದಲ್ಲಿ ಲಿಂಗವು ಮೇಲಕ್ಕೆ ಎಬ್ಬಿಸಲ್ಪಟ್ಟಿತೊ, ಅದು ಉನ್ನತಸ್ಥಾನವಾಯಿತು,

೯. ಅಥವಾ ಹಿಂದೆ ಪ್ರಾಭಾಸಿಕದ ದ್ವಾರವು ಉನ್ನತವಾದ್ದರಿಂದ ಅದು ಉನ್ನತ ಸ್ಥಾನವಾಯಿತು.

೧೦. ವಿದ್ಯಾ ತಪಸ್ಸಿನಿಂದ ಉತ್ಕೃಷ್ಟರಾದ ಮಹರ್ಷಿಗಳು ಇಲ್ಲಿ ನೆಲೆಸಿರುವುದರಿಂದ ಇದು ಉನ್ನತ ಸ್ಥಾನವೆಂದಾಯಿತು.

೧೧. ಬಳಿಕ ಬ್ರಾಹ್ಮಣರು ದೇವಕುಲದಲ್ಲಿ ಮೂಲ ಚಂಡೀಶನನ್ನು ಸಂತೋಷಗೊಳಿಸಿ ಮರಳಿ ಮಹೋದಯಕ್ಕೆ ಹೋದರು.

ಷಷ್ಟಿವರ್ಷಸಹಸ್ರಾಣಿ ತಪಸ್ತೇಪುರ್ಮಹರ್ಷಯಃ ।
ಧ್ಯಾಯಮಾನಾ ಮಹೇಶಾನಮನಾದಿನಿಧನಂ ಪರಂ ॥ ೧೨ ॥
ತೇಷು ವೈ ತಪ್ಯಮಾನೇಷು ಕೋಟಿಸಂಖ್ಯೇಷು ಪಾರ್ವತಿ ।
ಋಷಿತೋಯಾತಟೇ ರಮ್ಯೇ ಪವಿತ್ರೇ ಪಾಪನಾಶನೇ ।
ಭಿಕ್ಷುರ್ಭೂತ್ವಾ ಗತಶ್ಚಾಹಂ ಪುನಸ್ತತ್ರೈವ ಭಾಮಿನಿ ॥ ೧೩ ॥
ತ್ರಿಕಾಲದರ್ಶಿಭಿಸ್ತತ್ರ ದೋಷರಾಗವಿವರ್ಜಿತೈಃ ।
ತಪಸ್ವಿಭಿಸ್ತದಾ ಸರ್ವೈರ್ಲಕ್ಷಿತೋಽಹಂ ವರಾನನೇ ॥ ೧೪ ॥
ದೃಷ್ಟಮಾತ್ರಸ್ತದಾ ವಿಪ್ರೈರ್ವಿರರಾಮ ಮಹೇಶ್ವರಃ ।
ಕ್ವ ಯಾಸಿ ವಿದಿತೋ ದೇವ ಇತ್ಯುಕ್ತ್ವಾನುಯಯುರ್ದ್ವಿಜಾಃ ॥ ೧೫ ॥
ಯಾವದಾಯಾಂತಿ ಮುನಯ ಈಶೇಶೇತಿ ಪ್ರಭಾಷಕಾಃ ।
ಧಾವಮಾನಾಃ ಸ್ವತಪಸಾ ದ್ಯೋತಯಂತೋ ದಿಶೋ ದಶ ॥ ೧೬ ॥
ಲಿಂಗಮೇವ ಪ್ರಪಶ್ಯಂತಿ ನ ಪಶ್ಯಂತಿ ಮಹೇಶ್ವರಂ ॥ ೧೭ ॥
ಯೇ ಯೇ ಚ ದದೃಶುರ್ಲಿಂಗಂ ಮೂಲಚಂಡೀಶಸಂಜ್ಞಕಂ ।
ತಥಾ ಚ ಮುನಯಃ ಸರ್ವೇ ಸದೇಹಾಃ ಸ್ವರ್ಗಮಾಯಯುಃ ॥ ೧೮ ॥

---

೧೨. ಅಲ್ಲಿ ಸನಾತನನಾದ ಮಹೇಶ್ವರನನ್ನು ಧ್ಯಾನಿಸುತ್ತ ಅರುವತ್ತು ವರ್ಷಗಳ ಕಾಲ ತಪಸ್ಸನ್ನಾಚರಿಸಿದರು.

೧೩. ಆ ಕೋಟಿ ಮಂದಿ ಮುನಿಗಳು ಪವಿತ್ರವಾದ ಪಾಪವನ್ನು ನೀಗಿಸುವ ಋಷಿತೋಯಾ ದಡದಲ್ಲಿ ತಪಸ್ಸನ್ನು ಮಾಡುತ್ತಿರಲು ನಾನು ಅಲ್ಲಿಗೆ ಸನ್ಯಾಸಿಯಾಗಿ ಹೋದೆನು.

೧೪. ಸುಂದರಿ! ಆಗ ತ್ರಿಕಾಲದರ್ಶಿಗಳೂ, ದೋಷ, ರಾಗಗಳಿಲ್ಲದವರೂ, ಆದ ಆ ಸಕಲ ಮುನಿಗಳೂ ನನ್ನನ್ನು ಗುರುತಿಸಿದರು.

೧೫. ಮುನಿಗಳು ನನ್ನನ್ನು ನೋಡಿದ ಕೂಡಲೆ ನಾನು ಅಲ್ಲಿ ನಿಂತೆನು. ಅವರು ನನ್ನನ್ನು ತಿಳಿದು. ಎಲ್ಲಿಗೆ ಹೋಗುವೆ ಎಂದು ಹಿಂಬಾಲಿಸಿದರು.

೧೬–೧೭. ಆ ಮುನಿಗಳು ತಮ್ಮ ತಪಸ್ಸಿನಿಂದ ಹತ್ತು ದಿಕ್ಕುಗಳನ್ನು ಪ್ರಕಾಶಗೊಳಿಸುತ್ತ ಈಶ ಈಶ ಎಂದು ಹೇಳುತ್ತ ಓಡುತ್ತಿರಲು ಲಿಂಗವು ಮಾತ್ರ ಕಾಣಿಸಿತು. ಮಹೇಶ್ವರನು ಕಾಣಿಸಲಿಲ್ಲ.

೧೮. ಆಗ ಮೂಲಚಂಡೀಶ ಲಿಂಗವನ್ನು ನೋಡಿದ ಮುನಿಗಳೆಲ್ಲ ದೇಹಸಹಿತರಾಗಿ ಸ್ವರ್ಗಕ್ಕೆ ತೆರಳಿದರು.

ಯದಾ ತ್ರಿವಿಷ್ಟಪಂ ವ್ಯಾಪ್ತಂ ದೃಷ್ಟಂ ವೈ ಶತಯಜ್ವನಾ ।
ಆಯಾಂತಿ ಚ ತಥೈವಾನ್ಯೇ ಮುನಯಸ್ತಪಸೋಜ್ಜ್ವಲಾಃ ॥ ೧೯ ॥
ಏತದಂತರಮಾಸಾದ್ಯ ಸಮಾಗತ್ಯ ಮಹೀತಲೇ ।
ಲಿಂಗಮಾಚ್ಛಾದಯಾಮಾಸ ವಜ್ರೇಣೈವ ಶತಕ್ರತುಃ ॥ ೨೦ ॥
ಅಷ್ಟಾದಶಸಹಸ್ರಾಣಿ ಮುನೀನಾಮೂರ್ಧ್ವರೇತಸಾಂ ।
ಸ್ಥಿತಾನಿ ನ ತು ಪಶ್ಯಂತಿ ಲಿಂಗಮೇತದನುತ್ತಮಂ ॥ ೨೧ ॥
ಶಕ್ರಸ್ತು ಸಹಸಾ ದೃಷ್ಟೋ ವಜ್ರೇಣೈವ ಸಮನ್ವಿತಃ ।
ಯಾವದ್ವದಂತಿ ಶಾಪಂ ತೇ ತಾವನ್ನಷ್ಟಃ ಪುರಂದರಃ ॥ ೨೨ ॥
ದೃಷ್ಟ್ವಾ ತಾನ್ಕೋಪಸಂಯುಕ್ತಾನ್ಸ್ವಗಣಾಂಸ್ತ್ರಿಪುರಾಂತಕಃ ।
ಉವಾಚ ಸಾಂತ್ವಯನ್ದೇವೋ ವಾಚಾ ಮಧುರಯಾ ಮುನೀನ್ ॥ ೨೩ ॥
ಕಥಂ ಖಿನ್ನಾ ದ್ವಿಜಶ್ರೇಷ್ಠಾಃ ಸದಾ ಶಾಂತಿಪರಾಯಣಾಃ ।
ಪ್ರಸನ್ನವದನಾ ಭೂತ್ವಾ ಶ್ರೂಯತಾಂ ವಚನಂ ಮಮ ॥ ೨೪ ॥
ಭವದ್ಭಿರ್ಜ್ಞಾನಸಂಯುಕ್ತೈಃ ಸ್ವರ್ಗಃ ಕಿಂ ಮನ್ಯತೇ ಬಹು ।
ಯತ್ರೈಕೇ ವಸವಃ ಪ್ರೋಕ್ತಾ ಆದಿತ್ಯಾಶ್ಚ ತಥಾ ಪರೇ ॥ ೨೫ ॥

---

೧೯. ಮುನಿಗಳಿಂದ ಸ್ವರ್ಗವು ತುಂಬಲು ಮಹೇಂದ್ರನು ಅದನ್ನು ಕಂಡನು. ಹಾಗೆಯೇ ತಪಸ್ಸಿನಿಂದ ವಿರಾಜಿಸುತ್ತಿರುವ ಇತರಮುನಿಗಳೂ ಸ್ವರ್ಗಕ್ಕೆಬರುತ್ತಿದ್ದರು.

೨೦. ಇಷ್ಟರಲ್ಲಿ ದೇವೇಂದ್ರನು ಭೂಮಿಗೆ ಬಂದು ಲಿಂಗವನ್ನು ವಜ್ರದಿಂದ ಮುಚ್ಚಿದನು.

೨೧–೨೨. ಜಿತೇಂದ್ರಿಯರಾದ (ಬ್ರಹ್ಮಚಾರಿಗಳಾದ) ಹದಿನೆಂಟುಸಾವಿರಮಂದಿ ಮುನಿಗಳು ಉತ್ತಮವಾದ ಆ ಲಿಂಗವನ್ನು ಕಾಣದೆ ವಜ್ರದಿಂದ ಸಹಿತನಾದ ದೇವೇಂದ್ರನನ್ನು ಕಂಡು ಶಾಪವನ್ನು ಕೊಡಲುದ್ಯುಕ್ತರಾಗಲು ದೇವೇಂದ್ರನುಅಲ್ಲಿಯೇ ಅಂತರ್ಧಾನವಾದನು.

೨೩ ಆಗ ಕುಪಿತರಾದ ಆ ಮುನಿಗಳನ್ನು ಮಹೇಶ್ವರನು ಸವಿನುಡಿಯಿಂದ ಅವರನ್ನು ಸಮಾಧಾನಗೊಳಿಸುತ್ತ ಇಂತೆಂದನು.

೨೪. "ಯಾವಾಗಲೂ ಶಾಂತರಾಗಿದ್ದ ಎಲೈ ಬ್ರಾಹ್ಮಣರೆ! ಏಕೆ ವ್ಯಥೆಗೊಳ್ಳುತ್ತಿದ್ದೀರಿ? ಪ್ರಸನ್ನಮುಖರಾಗಿ ನನ್ನ ಮಾತನ್ನು ಕೇಳಿರಿ.

೨೫–೨೬. ಜ್ಞಾನಿಗಳಾದ ನೀವು ಸ್ವರ್ಗವನ್ನು ಏಕೆ ಬಹುಮಾನಿಸುತ್ತೀರಿ. ಆ ಸ್ವರ್ಗದಲ್ಲಿ ಕೆಲವರು ವಸುಗಳೆಂದೂ, ಕೆಲವರು ಆದಿತ್ಯರೆಂದೂ, ಇನ್ನು ಕೆಲವರು

ರುದ್ರಸಂಜ್ಞಾಸ್ತಥಾ ಚೈಕೇ ಹ್ಯಶ್ವಿನಾವಪಿ ಚಾಪರೌ ।
ಏತೇಷಾಮಧಿಪಃ ಕಶ್ಚಿದೇಕ ಇಂದ್ರಃ ಪ್ರಕೀರ್ತಿತಃ ॥ ೨೬ ॥
ಸ್ವಪುಣ್ಯಸಂಖ್ಯಯಾ ಪ್ರಾಪ್ತೇ ಯಸ್ಮಾದ್ವಿಭ್ರಶ್ಯತೇ ನರೈಃ ।
ಏವಂ ದುಃಖಸಮಾಯುಕ್ತಃ ಸ್ವರ್ಗೋ ನೈವೇಷ್ಯತೇ ಬುಧೈಃ ॥ ೨೭ ॥
ಏತಸ್ಮಾತ್ಕಾರಣಾದ್ವಿಪ್ರಾಃ ಕುರುಧ್ವಂ ವಚನಂ ಮಮ ।
ಗೃಹ್ಣೀಧ್ವಂ ನಗರಂ ರಮ್ಯಂ ನಿವಾಸಾಯ ಮಹಾಪ್ರಭಂ ॥ ೨೮ ॥
ಹೂಯಂತಾಮಗ್ನಿಹೋತ್ರಾಣಿ ದೇವತಾಃ ಸರ್ವದಾ ದ್ವಿಜಾಃ ।
ಇಜ್ಯಂತಾಂ ವಿವಿಧೈರ್ಯಾಗೈಃ ಕ್ರಿಯತಾಂ ಪಿತೃಪೂಜನಂ ॥ ೨೯ ॥
ಆತಿಥ್ಯಂ ಕ್ರಿಯತಾಂ ನಿತ್ಯಂ ವೇದಾಭ್ಯಾಸಸ್ತಥೈವ ಹಿ ॥ ೩೦ ॥
ಏವಂ ಹಿ ಕುರ್ವತಾಂ ನಿತ್ಯಂ ವಿನಾ ಜ್ಞಾನಸ್ಯ ಸಂಚಯೈಃ ।
ಪ್ರಸಾದಾನ್ಮಮ ವಿಪ್ರೇಂದ್ರಾಃ ಪ್ರಾಂತೇ ಮುಕ್ತಿರ್ಭವಿಷ್ಯತಿ ॥ ೩೧ ॥

ಋಷಯ ಊಚುಃ :—

ಅಸಮರ್ಥಾಃ ಪರಿತ್ರಾಣೇ ಜಿತಾಹಾರಾಸ್ತಪೋನ್ವಿತಾಃ ।
ನಗರೇಣೇಹ ಕಿಂ ಕುರ್ಮಸ್ತವ ಭಕ್ತಿಮಭೀಪ್ಸವಃ ॥ ೩೨ ॥

ರುದ್ರರೆಂದೂ, ಮತ್ತೆ ಕೆಲವರು ಅಶ್ವಿನೀ ದೇವತೆಗಳೆಂದೂ ಇರುವರು. ಇವರಿಗೆಲ್ಲ ಇಂದ್ರನೆಂಬೊಬ್ಬ ಒಡೆಯನಿರುವನು.

೨೭. ನರರು ತಮ್ಮ ಪುಣ್ಯವು ನಷ್ಟವಾಗಲು ಸ್ವರ್ಗದಿಂದ ಭ್ರಂಶರಾಗುವರು. ಆದ್ದರಿಂದ ಜ್ಞಾನಿಗಳು ದುಃಖದಿಂದ ಕೂಡಿದ ಸ್ವರ್ಗವನ್ನು ಬಯಸುವುದಿಲ್ಲ.

೨೮. ಎಲೈ ಬ್ರಾಹ್ಮಣರೆ! ಈ ಕಾರಣದಿಂದ ನನ್ನ ಮಾತನ್ನು ನಡೆಸಿರಿ. ಅತಿಶಯ ಕಾಂತಿಯುಳ್ಳ ರಮ್ಯವಾದ ಒಂದು ನಗರವನ್ನು ವಾಸಕ್ಕಾಗಿ ಸ್ವೀಕರಿಸಿರಿ.

೨೯. ಯಾವಾಗಲೂ ಅಗ್ನಿಹೋತ್ರವನ್ನು ಮಾಡಿರಿ. ದೇವತೆಗಳನ್ನುದ್ದೇಶಿಸಿ ನಾನಾಬಗೆಯ ಯಾಗಗಳನ್ನು ಮಾಡಿರಿ. ಪಿತೃಗಳನ್ನು ಪೂಜಿಸಿರಿ.

೩೦. ನಿತ್ಯವೂ ಅತಿಥಿ ಪೂಜೆ, ವೇದಾಧ್ಯಯನಗಳನ್ನು ಮಾಡಿರಿ.

೩೧. ದ್ವಿಜವರ್ಯರೆ! ಜ್ಞಾನ ಸಂಚಯವಿಲ್ಲದೆ ಹೀಗೆಯೇ ಮಾಡುತ್ತಿರುವ ನಿಮಗೆ ನನ್ನ ಅನುಗ್ರಹದಿಂದ ಕೊನೆಯಲ್ಲಿ ಮುಕ್ತಿಯು ಲಭಿಸುವುದು.

೩೨. ಋಷಿಗಳು ಹೇಳುತ್ತಾರೆ :—ಕಾಪಾಡುವುದರಲ್ಲಿ ಅಶಕ್ತರೂ, ಮಿತಾಹಾರಿಗಳೂ, ತಪಸ್ವಿಗಳೂ, ಭಕ್ತಿಯನ್ನು ಬಯಸುವವರೂ ಆದ ನಾವು ಈ ಪಟ್ಟಣದಿಂದ ಏನು ಮಾಡುವೆವು ?

ಈಶ್ವರ ಉವಾಚ :—
ಭವಿಷ್ಯತಿ ಸದಾ ಭಕ್ತಿರ್ಯುಷ್ಮಾಕಂ ಪರಮೇಶ್ವರೇ ।
ಗೃಹ್ಣೀಧ್ವಂ ನಗರಂ ರಮ್ಯಂ ಕುರುಧ್ವಂ ವಚನಂ ಮಮ ॥ ೩೩ ॥
ಇತ್ಯುಕ್ತ್ವಾ ಭಗವಾನ್ದೇವ ಈಷನ್ಮೀಲಿತಲೋಚನಃ ।
ಸಸ್ಮಾರ ವಿಶ್ವಕರ್ಮಾಣಂ ಸರ್ವಶಿಲ್ಪಿವತಾಂ ವರಂ ॥ ೩೪ ॥
ಸ್ಮೃತಮಾತ್ರೋ ವಿಶ್ವಕರ್ಮಾ ಪ್ರಾಂಜಲಿಶ್ಚಾಗ್ರತಃ ಸ್ಥಿತಃ ।
ಆಜ್ಞಾಪಯತು ಮಾಂ ದೇವೋ ವಚನಂ ಕರವಾಣಿ ತೇ ॥ ೩೫ ॥
ಈಶ್ವರ ಉವಾಚ :—
ನಗರಂ ಕ್ರಿಯತಾಂ ತ್ವಷ್ಟರ್ವಿಪ್ರಾರ್ಥಂ ಸುಂದರಂ ಶುಭಂ ॥ ೩೬ ॥
ಇತ್ಯುಕ್ತೋ ವಿಶ್ವಕರ್ಮಾ ಸ ಭೂಮಿಂ ವೀಕ್ಷ್ಯ ಸಮಂತತಃ ।
ಉವಾಚ ಪ್ರಣತೋ ಭೂತ್ವಾ ಶಂಕರಂ ಲೋಕಶಂಕರಂ ॥ ೩೭ ॥
ಪರೀಕ್ಷಿತಾ ಮಯಾ ಭೂಮಿರ್ನ ಯುಕ್ತಂ ನಗರಂ ತ್ವಿಹ ।
ಅತ್ರ ದೇವಕುಲಂ ಸಾಕ್ಷಾಲ್ಲಿಂಗಸ್ಯ ಪತನಂ ತಥಾ ॥ ೩೮ ॥
ಯತಿಭಿಶ್ಚಾತ್ರ ವಸ್ತವ್ಯಂ ನ ಯುಕ್ತಂ ಗೃಹಮೇಧಿನಾಂ ॥ ೩೯ ॥

---

೩೩. ಈಶ್ವರನು ಹೇಳುತ್ತಾನೆ :—ನಿಮಗೆ ಯಾವಾಗಲೂ ಪರಮೇಶ್ವರನಲ್ಲಿ ಭಕ್ತಿಯುಂಟಾಗುವುದು. ಮನೋಹರವಾದ ಪಟ್ಟಣವನ್ನು ತೆಗೆದುಕೊಳ್ಳಿರಿ. ನನ್ನ ಮಾತನ್ನು ಕೇಳಿರಿ.

೩೪. ಪೂಜ್ಯನಾದ ಪರಮೇಶ್ವರನು ಹೀಗೆ ಹೇಳಿ ಸ್ವಲ್ಪ ಕಣ್ಣನ್ನು ಮುಚ್ಚಿಕೊಂಡು ಸಕಲ ಶಿಲ್ಪಿಗಳಲ್ಲಿ ಶ್ರೇಷ್ಠನಾದ ವಿಶ್ವಕರ್ಮನನ್ನು ಸ್ಮರಿಸಿದನು.

೩೫. ಸ್ಮರಿಸಿದ ಕೂಡಲೆ ವಿಶ್ವಕರ್ಮನು ಕೈಮುಗಿದುಕೊಂಡು ಮುಂದೆ ನಿಂತು " ಪರಮೇಶ್ವರ ! ಅಪ್ಪಣೆ ಮಾಡು. ಏನನ್ನು ಮಾಡಲಿ? " ಎಂದನು.

೩೬. ಈಶ್ವರನು ಹೇಳುತ್ತಾನೆ :—ವಿಶ್ವಕರ್ಮ ! ಬ್ರಾಹ್ಮಣರಿಗಾಗಿ ಸುಂದರವಾದ ನಗರವೊಂದನ್ನು ನಿರ್ಮಿಸು.

೩೭. ಶಿವನು ಹೀಗೆನ್ನಲು ವಿಶ್ವಕರ್ಮನು ಸುತ್ತಲೂ ಭೂಮಿಯನ್ನು ನೋಡಿ ನಮಸ್ಕರಿಸಿ ಶಿವನನ್ನು ಕುರಿತು ಇಂತೆಂದನು.

೩೮. "ನಾನು ಭೂಮಿಯನ್ನು ಪರೀಕ್ಷಿಸಿದೆನು. ಇದು ಲಿಂಗವು ಬಿದ್ದಿರುವ ದೇವಕುಲವು, ಇದು ಯತಿಗಳ ವಾಸಕ್ಕುಚಿತವಾದುದು, ಗೃಹಸ್ಥರಿಗಲ್ಲ.

೩೯–೪೦. ಮಹೇಶ್ವರ ! ಪತ್ನೀ ಪುತ್ರ, ಸಹಿತರಾದ ಗೃಹಸ್ಥರು ಇಲ್ಲಿ ಮೂರು ರಾತ್ರಿ, ಐದುರಾತ್ರಿ, ಏಳು ರಾತ್ರಿ, ಒಂದು ಪಕ್ಷ, ಒಂದು ತಿಂಗಳು, ಒಂದು ಋತು,

ತ್ರಿರಾತ್ರಂ ಪಂಚರಾತ್ರಂ ವಾ ಸಪ್ತರಾತ್ರಂ ಮಹೇಶ್ವರ ।
ಪಕ್ಷಂ ಮಾಸಮೃತುಂ ವಾಪಿ ಹ್ಯಯನಂ ಯಾವದೇವ ಚ ॥
ಪುತ್ರದಾರಯುತೈಸ್ತೀರ್ಥೇ ವಸ್ತವ್ಯಂ ಗೃಹಮೇಧಿಭಿಃ ॥ ೪೦ ॥
ವಸತಶ್ಚೋರ್ಧ್ವಂ ತು ಷಣ್ಮಾಸಾದ್ಯದಾ ತೀರ್ಥೇ ಗೃಹಾಧಿಪಃ ।
ಅವಜ್ಞಾ ಜಾಯತೇ ತಸ್ಯ ಮನಶ್ಚಾಪಲ್ಯಭಾವತಃ ।
ತದಾ ಧರ್ಮಾದ್ವಿನಶ್ಯಂತಿ ಸಕಲಾ ಗೃಹಮೇಧಿನಃ ॥ ೪೧ ॥
ಇತ್ಯುಕ್ತಃ ಸ ತದಾ ದೇವಸ್ತೇನ ವೈ ವಿಶ್ವಕರ್ಮಣಾ ।
ಪುನಃ ಪ್ರೋವಾಚ ತಂ ತಸ್ಯ ಪ್ರಶಸ್ಯ ವಚನಂ ಶಿವಃ ॥ ೪೨ ॥
ರೋಚತೇ ಮೇ ನ ವಾಸೋಽತ್ರ ವಿಪ್ರಾಣಾಂ ಗೃಹಮೇಧಿನಾಂ ।
ಯತ್ರ ಚೋನ್ನಾಮಿತಂ ಲಿಂಗಮೃಷಿತೋಯಾತಟೇ ಶುಭೇ ।
ತತ್ರ ನಿರ್ಮಾಪಯ ತ್ವಷ್ಟರ್ನಗರಂ ಶಿಲ್ಪಿನಾಂ ವರ ॥ ೪೩ ॥
ತಸ್ಯ ತದ್ವಚನಂ ಶ್ರುತ್ವಾ ವಿಶ್ವಕರ್ಮಾ ತ್ವರಾನ್ವಿತಃ ।
ಗತ್ವಾ ಚಕಾರ ನಗರಂ ಶಿಲ್ಪಿಕೋಟಿಭಿರಾವೃತಃ ॥ ೪೪ ॥
ಉನ್ನತಂ ನಾಮ ಯಲ್ಲೋಕೇ ವಿಖ್ಯಾತಂ ಸುರಸುಂದರಿ ।
ತತೋ ಹೃಷ್ಟಮನಾ ಭೂತ್ವಾ ವಿಲೋಕ್ಯ ನಗರಂ ಶಿವಃ ।
ಆಹೂಯ ಬ್ರಾಹ್ಮಣಾನ್ಸರ್ವಾನುವಾಚಾನತಕಂಧರಃ ॥ ೪೫ ॥

ಒಂದು ಅಯನ (ಆರು ತಿಂಗಳು) ಕಾಲಗಳು ಮಾತ್ರ ಇಲ್ಲಿ ವಾಸಮಾಡಲರ್ಹರು.

೪೧. ಗೃಹಸ್ಥನು ಆರುತಿಂಗಳ ಮೇಲೆ ತೀರ್ಥದಲ್ಲಿ ವಾಸಮಾಡಿದರೆ ಮನಸ್ಸು ಚಂಚಲವಾಗುವುದರಿಂದ ಅವಮಾನವನ್ನು ಹೊಂದುವನು. ಆಗ ಅವರು ಧರ್ಮಭ್ರಷ್ಟರಾಗುವರು.

೪೨. ವಿಶ್ವಕರ್ಮನು ಹೀಗೆನ್ನಲು ಮಹೇಶ್ವರನು ಅವನ ಮಾತನ್ನು ಒಪ್ಪಿ ಹೊಗಳಿ ಮರಳಿ ಇಂತೆಂದನು.

೪೩. "ಶಿಲ್ಪಿಗಳಲ್ಲಿ ಶ್ರೇಷ್ಠನಾದ ವಿಶ್ವಕರ್ಮ ! ನಾನು ಗೃಹಸ್ಥರಾದ ಈ ಬ್ರಾಹ್ಮಣರು ಇಲ್ಲಿ ವಾಸಮಾಡುವುದನ್ನು ಇಷ್ಟಪಡುವುದಿಲ್ಲ, ಋಷಿತೋಯಾ ದಡನಲ್ಲಿ ಲಿಂಗವು ಮೇಲ್ಮುಖವಾಗಿ ಮಾಡಲ್ಪಟ್ಟ ಸ್ಥಳದಲ್ಲಿ ಪಟ್ಟಣವನ್ನು ನಿರ್ಮಿಸು.

೪೪–೪೫ ವಿಶ್ವಕರ್ಮನು ಆ ಮಾತನ್ನು ಕೇಳಿ ತ್ವರೆಯಿಂದ ಅಲ್ಲಿಗೆ ಹೋಗಿ ಕೋಟಿ ಮಂದಿ ಶಿಲ್ಪಿಗಳೊಡನೆ ಉನ್ನತವೆಂದು ಪ್ರಸಿದ್ಧವಾದ ಪಟ್ಟಣವನ್ನು ನಿರ್ಮಿಸಿದನು. ಬಳಿಕ ಶಿವನು ಸಂತುಷ್ಟಚಿತ್ತನಾಗಿ ಪಟ್ಟಣವನ್ನು ಕಂಡು ಸಕಲ ಬ್ರಾಹ್ಮಣರನ್ನೂ ಕರೆದು ಬಗ್ಗಿದ ಕುತ್ತಿಗೆಯುಳ್ಳವನಾಗಿ ಇಂತೆಂದನು.

ಇದಂ ಸ್ಥಾನಂ ವರಂ ರಮ್ಯಂ ನಿರ್ಮಿತಂ ವಿಶ್ವಕರ್ಮಣಾ ।
ಗ್ರಾಮಾಣಾಂ ಚೈವ ಸಹಸ್ರೈಸ್ತು ಪ್ರೋಕ್ತಂ ಸರ್ವಾಸು ದಿಕ್ಷು ಚ ॥ ೪೬ ॥
ನಗರಾತ್ಸರ್ವತಃ ಪುಣ್ಯೋ ದೇಶೋ ನಗ್ನಹರಃ ಸ್ಮೃತಃ ।
ಅಷ್ಟಯೋಜನವಿಸ್ತೀರ್ಣ ಆಯಾಮವ್ಯಾಸತಸ್ತಥಾ ॥ ೪೭ ॥
ನಗ್ನೋ ಭೂತ್ವಾ ಹರೋ ಯತ್ರ ದೇಶೇ ಭ್ರಾಂತೋ ಯದೃಚ್ಛಯಾ ।
ತಂ ನಗ್ನಹರಮಿತ್ಯಾಹುರ್ದೇಶಂ ಪುಣ್ಯತಮಂ ಜನಾಃ ॥ ೪೮ ॥
ಪೂರ್ವೇ ತು ಶಾಂಕರೀ ಚಾರ್ಯಾ ಪಶ್ಚಿಮೇ ನ್ಯಂಕುಮತ್ಯಪಿ ।
ಉತ್ತರೇ ಕನಕನಂದಾ ಚ ದಕ್ಷಿಣೇ ಸಾಗರಾವಧಿಃ ।
ಏತದಂತರಮಾಸಾದ್ಯ ದೇಶೋ ನಗ್ನಹರಃ ಸ್ಮೃತಃ ॥ ೪೯ ॥
ಅಷ್ಟಯೋಜನಮಾನೇನ ಆಯಾಮವ್ಯಾಸತಸ್ತಥಾ ।
ಪ್ರೋಕ್ತೋಽಯಂ ಸಕಲೋ ದೇಶ ಉನ್ನತೇನ ಸಮಂ ಮಯಾ ॥ ೫೦ ॥
ಗೃಹ್ಯತಾಂ ನಗರಶ್ರೇಷ್ಠಂ ಪ್ರಸೀದಧ್ವಂ ದ್ವಿಜೋತ್ತಮಾಃ ।
ಅತ್ರ ಭುಕ್ತಿಶ್ಚ ಮುಕ್ತಿಶ್ಚ ಭವಿಷ್ಯತಿ ನ ಸಂಶಯಃ ॥ ೫೧ ॥
ಇತ್ಯುಕ್ತಾಸ್ತೇ ತದಾ ಸರ್ವೇ ವಿಪ್ರಾ ಊಚುರ್ಮಹೇಶ್ವರಂ ॥ ೫೨ ॥

---

೪೬. ಸಮಸ್ತ ದಿಕ್ಕುಗಳಲ್ಲಿರುವ ಸಹಸ್ರ ಗ್ರಾಮಗಳಿಂದ ಕೂಡಿದ ಈ ರಮ್ಯವಾದ ನಗರವನ್ನು ವಿಶ್ವಕರ್ಮನು ನಿರ್ಮಿಸಿದನು.

೪೭. ಈ ನಗರದ ಸುತ್ತಲೂ ಉದ್ದ ಅಗಲಗಳಿಂದ ಎಂಟು ಯೋಜನ ವಿಸ್ತೀರ್ಣವಾದ ನಗ್ನಹರವೆಂಬ ಪುಣ್ಯಕರವಾದ ದೇಶವಿರುವುದು.

೪೮. ಇಲ್ಲಿ ಶಿವನು ಬತ್ತಲೆಯಾಗಿ ಸ್ವೇಚ್ಛೆಯಿಂದ ಸಂಚರಿಸಿದ್ದರಿಂದ ಜನರು ಈ ದೇಶವನ್ನು ನಗ್ನಹರವೆಂದು ಹೇಳುವರು.

೪೯. ಇದರ ಪೂರ್ವದಲ್ಲಿ ಶಾಂಕರಿಯೂ, ಪಶ್ಚಿಮದಲ್ಲಿ ನ್ಯಂಕುಮತಿಯೂ, ಉತ್ತರದಲ್ಲಿ ಕನಕನಂದೆಯೂ; ದಕ್ಷಿಣದಲ್ಲಿ ಸಮುದ್ರವೂ ಇರುವುದು.

೫೦. ಉನ್ನತ ದೇಶದೊಡನೆ ಸಂಪೂರ್ಣವಾದ ಈ ದೇಶವು ಉದ್ದ ಅಗಲಗಳಿಂದ ಎಂಟು ಯೋಜನ ವಿಸ್ತೀರ್ಣವಾದುದು.

೫೧. ದ್ವಿಜವರ್ಯರೆ! ಉತ್ತಮವಾದ ಈ ದೇಶವನ್ನು ತೆಗೆದುಕೊಳ್ಳಿರಿ. ಇಲ್ಲಿ ನಿಶ್ಚಯವಾಗಿಯೂ ಭುಕ್ತಿಮುಕ್ತಿಗಳು ಲಭಿಸುವುವು.

೫೨. ಶಿವನು ಹೀಗೆನ್ನಲು ವಿಪ್ರರು ಅವನನ್ನು ಕುರಿತು ಇಂತೆಂದರು.

ವಿಪ್ರಾ ಊಚುಃ :—

ಈಶ್ವರಾಜ್ಞಾ ವೃಥಾ ಕರ್ತುಂ ನ ಶಕ್ಯಾ ಪರಮಾತ್ಮನಃ ।
ತಪೋಽಗ್ನಿಹೋತ್ರನಿಷ್ಠಾನಾಂ ವೇದಾಧ್ಯಯನಶಾಲಿನಾಂ ॥ ೫೩ ॥
ಅಸ್ಮಾಕಂ ರಕ್ಷಿತಾ ಕೋಽಸ್ತಿ ಕಲಿಕಾಲೇ ಚ ದಾರುಣೇ ।
ಕೋ ದಾತಾಽಽರೋಗ್ಯದಃ ಕಶ್ಚ ಕೋ ವೈ ಮುಕ್ತಿಂ ಪ್ರದಾಸ್ಯತಿ ॥ ೫೪ ॥

ಈಶ್ವರ ಉವಾಚ :—

ಮಹಾಕಾಲಸ್ವರೂಪೇಣ ಸ್ಥಿತ್ವಾ ತೀರ್ಥೇ ಮಹೋದಯೇ ।
ನಾಶಯಿಷ್ಯಾಮಿ ಶತ್ರೂನ್ವಃ ಸಮ್ಯಗಾರಾಧಿತೋ ಹ್ಯಹಂ ॥ ೫೫ ॥
ಉನ್ನತೋ ವಿಘ್ನರಾಜಸ್ತು ವಿಘ್ನಚ್ಛೇತ್ತಾ ಭವಿಷ್ಯತಿ ।
ಗಣನಾಥಸ್ವರೂಪೋಽಯಂ ಧನದೋ ನಿಧಿಸ್ವಯಂ ಪತಿಃ ॥ ೫೬ ॥
ಯುಷ್ಮಭ್ಯಂ ದಾಸ್ಯತಿ ದ್ರವ್ಯಂ ಸಮ್ಯಗಾರಾಧಿತೋಽಪಿ ಸಃ ।
ಆರೋಗ್ಯದಾಯಕೋ ನಿತ್ಯಂ ದುರ್ಗಾದಿತ್ಯೋ ಭವಿಷ್ಯತಿ ॥ ೫೭ ॥
ಮಹೋದಯಂ ಮಹಾನಂದದಾಯಕಂ ವೋ ಭವಿಷ್ಯತಿ ।
ಸಮ್ಯಗಾರಾಧಿತೋ ಬ್ರಹ್ಮಾ ಸರ್ವಕಾರ್ಯೇಷು ಸರ್ವದಾ ॥
ಸರ್ವಾನ್ಕಾಮಾಂಶ್ಚ ಮುಕ್ತಿಂ ಚ ಯುಷ್ಮಭ್ಯಂ ಸಂಪ್ರದಾಸ್ಯತಿ ॥ ೫೮ ॥

೫೩–೫೪. ಬ್ರಾಹ್ಮಣರು ಹೇಳುತ್ತಾರೆ:— ಪರಮೇಶ್ವರನಾಜ್ಞೆಯನ್ನು ವ್ಯರ್ಥಗೊಳಿಸಲು ನಾವು ಶಕ್ತರಲ್ಲ. ಭಯಂಕರವಾದ ಈ ಕಲಿಕಾಲದಲ್ಲಿ ತಪಸ್ಸು, ಅಗ್ನಿಹೋತ್ರ, ವೇದಾಧ್ಯಯನಗಳಲ್ಲಿ ನಿರತರಾದ ನಮ್ಮನ್ನು ಕಾಪಾಡುವವರಾರು ? ದಾನಮಾಡುವವನೂ, ಆರೋಗ್ಯವನ್ನೀಯುವವನೂ, ಮುಕ್ತಿಯನ್ನು ಕೊಡುವವನೂ ಯಾರು ?

೫೫. ಈಶ್ವರನು ಹೇಳುತ್ತಾನೆ :—ನಾನು ಮಹೋದಯ ತೀರ್ಥದಲ್ಲಿ ನೆಲಸಿ ನಿಮ್ಮಿಂದ ಚೆನ್ನಾಗಿ ಪೂಜಿಸಲ್ಪಟ್ಟವನಾಗಿ ನಿಮ್ಮ ಶತ್ರುಗಳನ್ನು ನಾಶಗೊಳಿಸುವೆನು.

೫೬–೫೭. ವಿಘ್ನರಾಜನು ಉನ್ನತ ಗಣನಾಥ ಸ್ವರೂಪದಿಂದ ವಿಘ್ನಗಳನ್ನು ನಿವಾರಿಸುವನು. ನಿಧಿಗಳಿಗೊಡೆಯನಾದ ಕುಬೇರನು ದ್ರವ್ಯವನ್ನೀಯುವನು. ದುರ್ಗಾದಿತ್ಯನು ಆರೋಗ್ಯವನ್ನು ಕೊಡುವನು.

೫೮. ಮಹೋದಯ ತೀರ್ಥವು ಅತಿಶಯಾನಂದವನ್ನು ಕೊಡುವುದು. ಚೆನ್ನಾಗಿ ಪೂಜಿಸಲ್ಪಟ್ಟ ಬ್ರಹ್ಮನು ಸಕಲ ಕಾರ್ಯಗಳಲ್ಲಿ ಸಕಲೇಷ್ಟಾರ್ಥಗಳನ್ನೂ, ಮುಕ್ತಿಯನ್ನೂ ನಿಮಗೆ ಕೊಡುವನು.

ವಿಪ್ರಾ ಊಚುಃ :—

ಯದಿ ತೀರ್ಥಾನಿ ತಿಷ್ಠಂತಿ ಸರ್ವಾಣಿ ಸುರಸತ್ತಮ ।
ಸಂಗಾಲೇಶ್ವರ ತೀರ್ಥೇ ಚ ತಥಾ ದೇವಕುಲೇ ಶಿವೇ ॥ ೫೯ ॥
ಕಲಾವಪಿ ಮಹಾರೌದ್ರೇ ಹ್ಯಸ್ಮಾಕಂ ಪಾವನಾಯ ವೈ ।
ಸ್ಥಾತವ್ಯಂ ತರ್ಹಿ ಗೃಹ್ಣೀಮೋ ನಾನ್ಯಥಾ ಚ ಮಹೇಶ್ವರ ॥ ೬೦ ॥
ಸ ತಥೇತಿ ಪ್ರತಿಜ್ಞಾಯ ದದೌ ತೇಭ್ಯಃ ಪುರಂ ವರಂ ॥
ಸಪ್ತಭೌಮೈಃ ಶಶಾಂಕಾಭೈಃ ಪ್ರಾಸಾದೈಃ ಪರಿಭೂಷಿತಂ ।
ನಾನಾಗ್ರಾಮಸಮಾಯುಕ್ತಂ ಸರ್ವತಃ ಸೀಮಯಾನ್ವಿತಂ ॥ ೬೧ ॥

ಸೂತ ಉವಾಚ :—

ಏವಂ ತೇಭ್ಯೋ ಹಿ ನಗರಂ ದತ್ವಾ ದೇವೋ ಮಹೇಶ್ವರಃ ।
ದದರ್ಶ ವಿಶ್ವಕರ್ಮಾಣಂ ಪ್ರಾಂಜಲಿಂ ಪುರತಃ ಸ್ಥಿತಂ ॥ ೬೨ ॥

ವಿಶ್ವಕರ್ಮೋವಾಚ :—

ವಿಲೋಕ್ಯತಾಂ ಮಹಾದೇವ ನಗರಂ ನಗರೋಪಮಂ ।
ಸೌವರ್ಣಸ್ಥಲಮಾರುಹ್ಯ ನಿರ್ಮಿತಂ ತ್ವತ್ಪ್ರಸಾದತಃ ॥ ೬೩ ॥

೫೯-೬೦. ಬ್ರಾಹ್ಮಣರು ಹೇಳುತ್ತಾರೆ :—ದೇವೋತ್ತಮ ! ಸಮಸ್ತ ತೀರ್ಥಗಳೇನೊ ಇರುವುವು. ಆದರೂ ನೀನು ಭಯಂಕರವಾದ ಈ ಕಲಿಯುಗದಲ್ಲಿ ನಮ್ಮ ಶುದ್ಧಿಗಾಗಿ ಸಂಗಾಲೇಶ್ವರ ತೀರ್ಥದಲ್ಲಿಯೂ, ದೇವ ಕುಲದಲ್ಲಿಯೂ ಇರುವುದಾದರೆ ನಾನು ಈ ನಗರವನ್ನು ಪರಿಗ್ರಹಿಸುವೆವು. ಇಲ್ಲದಿದ್ದರೆ ಸಾಧ್ಯವಿಲ್ಲ.

೬೧. ಅವನು ಹಾಗೆಯೇ ಆಗಲೆಂದು ಒಪ್ಪಿ ಅವರಿಗೆ ಚಂದ್ರನಂತಿರುವ ಏಳು ಮಹಡಿಗಳುಳ್ಳ ಮನೆಗಳಿಂದ ಅಲಂಕಾರಗೊಂಡುದೂ, ಅನೇಕ ಗ್ರಾಮಗಳಿಂದಲೂ, ಎಲ್ಲೆಗಳಿಂದಲೂ ಕೂಡಿರುವುದೂ ಆದ ಆ ಪಟ್ಟಣವನ್ನು ಕೊಟ್ಟನು.

೬೨. ಸೂತನು ಹೇಳುತ್ತಾನೆ :— ಮಹೇಶ್ವರನು ಹೀಗೆ ಅವರಿಗೆ ಪಟ್ಟಣವನ್ನಿತ್ತು ಮುಂದೆ ಕೈಮುಗಿದುಕೊಂಡು ನಿಂತಿರುವ ವಿಶ್ವಕರ್ಮನನ್ನು ನೋಡಿದನು

೬೩. ವಿಶ್ವಕರ್ಮನು ಹೇಳುತ್ತಾನೆ :—ಮಹಾದೇವ! ನಗರೋಪಮವಾದ ಸುವರ್ಣ ಸ್ಥಳವನ್ನು ಹತ್ತಿ ನಿನ್ನ ಅನುಗ್ರಹದಿಂದ ನಿರ್ಮಿಸಿರುವ ನಗರವನ್ನು ನೋಡು.

ವಿಶ್ವಕರ್ಮವಚಃ ಶ್ರುತ್ವಾ ಭಗವಾಂಸ್ತ್ರಿಪುರಾಂತಕಃ ।
ಸಮಾರುರೋಹ ಸ್ಥಲಕಂ ಸಹ ಸರ್ವೈರ್ಮಹರ್ಷಿಭಿಃ ॥ ೭೪ ॥
ನಗರಂ ವಿಲೋಕಯಾಮಾಸ ರಮ್ಯಂ ಪ್ರಾಕಾರಮಂಡಿತಂ ।
ಋಷಯಸ್ತುಷ್ಟುವುಃ ಸರ್ವೇ ತತ್ರಸ್ಥಂ ತ್ರಿಪುರಾಂತಕಂ ।
ತಾನುವಾಚ ಮಹಾದೇವೋ ವೃಣುಧ್ವಂ ವರಮುತ್ತಮಂ ॥ ೭೫ ॥

ಋಷಯ ಊಚುಃ :—

ಯದಿ ತುಷ್ಟೋ ಮಹಾದೇವ ಸ್ಥಲಕೇಶ್ವರನಾಮಭೃತ್ ।
ಅವಲೋಕಯಂಶ್ಚ ನಗರಂ ಸದಾ ತಿಷ್ಠ ಸ್ಥಲೇ ಹರ ॥ ೭೬ ॥
ಇತ್ಯುಕ್ತಸ್ತೈಸ್ತದಾ ದೇವಃ ಸ್ಥಲಕೇಽಸ್ಮಿನ್ಸದಾ ಸ್ಥಿತಃ ।
ಕೃತೇ ರತ್ನಮಯಂ ದೇವಿ ತ್ರೇತಾಯಾಂ ಚ ಹಿರಣ್ಮಯಂ ॥ ೭೭ ॥
ರೌಪ್ಯಂ ಚ ದ್ವಾಪರೇ ಪ್ರೋಕ್ತಂ ಸ್ಥಲಮಶ್ಮಮಯಂ ಕಲೌ ।
ಏವಂ ತತ್ರ ಸ್ಥಿತೋ ದೇವಃ ಸ್ಥಲಕೇಶ್ವರನಾಮತಃ ॥ ೭೮ ॥
ಸದಾ ಪೂಜ್ಯೋ ಮಹಾದೇವ ಉನ್ನತಸ್ಥಾನವಾಸಿಭಿಃ ।
ಮಾಘೇ ಮಾಸಿ ಚತುರ್ದಶ್ಯಾಂ ವಿಶೇಷಸ್ತತ್ರ ಜಾಗರೇ ॥ ೭೯ ॥

---

೭೪. ಪೂಜ್ಯನಾದ ಮಹೇಶ್ವರನು ವಿಶ್ವಕರ್ಮನ ಮಾತನ್ನು ಕೇಳಿ ಸಕಲ ಮಹರ್ಷಿಗಳೊಡನೆ ಸುವರ್ಣ ಸ್ಥಳವನ್ನು ಹತ್ತಿದನು.

೭೫. ಅವನು ಪ್ರಾಕಾರಗಳಿಂದ ಅಲಂಕಾರಗೊಂಡ ಮನೋಹರವಾದ ನಗರವನ್ನು ನೋಡಿದನು. ಸಕಲ ಮುನಿಗಳೂ ಅಲ್ಲಿರುವ ಮಹೇಶ್ವರನನ್ನು ಸ್ತುತಿಸಲು ಅವನು ಉತ್ತಮವಾದ ವರವನ್ನು ಕೇಳಿಕೊಳ್ಳಿರಿ ಎಂದನು.

೭೬. ಋಷಿಗಳು ಹೇಳುತ್ತಾರೆ:—ಮಹೇಶ್ವರ! ನೀನು ಸಂತುಷ್ಟನಾಗಿದ್ದರೆ ಸ್ಥಳಕೇಶ್ವರನೆಂಬ ಹೆಸರನ್ನು ಹೊಂದಿ ಯಾವಾಗಲೂ ಪಟ್ಟಣವನ್ನು ನೋಡುತ್ತ ಈ ಸ್ಥಳದಲ್ಲಿ ನೆಲಸು.

೭೭–೭೮. ಅವರು ಹಾಗೆ ಹೇಳಲು ಮಹೇಶ್ವರನು ಈ ಸ್ಥಳದಲ್ಲಿ ನೆಲಸಿದನ್ನು ದೇವಿ! ಆ ಸ್ಥಳವು ಕೃತಯುಗದಲ್ಲಿ ರತ್ನಮಯವಾಗಿಯೂ, ತ್ರೇತಾಯುಗದಲ್ಲಿ ಸುವರ್ಣಮಯವಾಗಿಯೂ, ದ್ವಾಪರಯುಗದಲ್ಲಿ ರಜತಮಯವಾಗಿಯೂ ಇರುವುದು ಕಲಿಯಲ್ಲಿ ಅಶ್ಮಮಯವಾಗಿರುವುದು. ಹೀಗೆ ಮಹೇಶ್ವರನು ಆಸ್ಥಳದಲ್ಲಿ ಸ್ಥಳಕೇಶ್ವರನೆಂಬ ಹೆಸರಿನಿಂದ ಇದ್ದನು.

೭೯. ಉನ್ನತ ಸ್ಥಾನವಾಸಿಗಳಾದ ಜನರು ಯಾವಾಗಲೂ ಮಹಾದೇವನನ್ನು ಪೂಜಿಸಬೇಕು. ಮಾಘಮಾಸದ ಚತುರ್ದಶಿಯ ದಿನ ಅಲ್ಲಿ ಜಾಗರಣೆಯು ಅತಿಶಯವಾದುದು

ಇತ್ಯೇತತ್ಕಥಿತಂ ದೇವಿ ಹ್ಯುನ್ನತಸ್ಯ ಮಹೋದಯಂ ।
ಶ್ರುತಂ ಪಾಪಹರಂ ನೃಣಾಂ ಸರ್ವಕಾಮಫಲಪ್ರದಂ ॥ ೭೦ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉನ್ನತಸ್ಥಾನಮಾಹಾತ್ಮ್ಯವರ್ಣನಂನಾಮ
॥ ಏಕೋನವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

---

೭೦. ದೇವಿ! ಹೀಗೆ ಉನ್ನತಸ್ಥಾನದ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು ಇದನ್ನು ಕೇಳಿದರೆ ಮನುಷ್ಯರ ಪಾಪವು ಪರಿಹಾರವಾಗುವುದು. ಅಲ್ಲದೆ ಸಕಲ ಇಷ್ಟಾರ್ಥಗಳೂ ಲಭಿಸುವವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉನ್ನತಸ್ಥಾನಮಾಹಾತ್ಮ್ಯವರ್ಣನವೆಂಬ
ಮುನ್ನೂರಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಲಿಂಗದ್ವಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾಚ್ಚ ಪೂರ್ವದಿಗ್ಭಾಗೇ ಕಿಂಚಿದಾಗ್ನೇಯಸಂಸ್ಥಿತಂ ।
ಲಿಂಗದ್ವಯಯಂ ಮಹಾಪುಣ್ಯಂ ವಿಶ್ವಕರ್ಮಪ್ರತಿಷ್ಠಿತಂ ॥ ೧ ॥

ಯದಾ ವೈ ನಗರಂ ಕರ್ತುಂ ತ್ವಷ್ಟಾ ತತ್ರ ಸಮಾಗತಃ ।
ಪ್ರತಿಷ್ಠಾಪ್ಯ ಮಹಾದೇವಂ ನಗರಂ ಕೃತವಾಂಸ್ತತಃ ॥ ೨ ॥

ಕೃತ್ವಾ ಚ ನಗರಂ ರಮ್ಯಂ ಲಿಂಗಸ್ಯಾಸ್ಯ ಪ್ರಭಾವತಃ ।
ಪುನಃ ಪ್ರತಿಷ್ಠಿತಂ ಲಿಂಗಂ ತೇನ ವೈ ವಿಶಕರ್ಮಣಾ ॥ ೩ ॥

ಕರ್ಮಾದೌ ಕರ್ಮಣಶ್ಚಾಂತೇ ಯಾತ್ರೋದ್ವಾಹಗೃಹಾದಿಕೇ ।
ಲಿಂಗದ್ವಯಂ ಪೂಜಯಿತ್ವಾ ಸಿದ್ಧಿಮಾಪ್ನೋತಿ ತತ್ಕ್ಷಣಾತ್ ॥ ೪ ॥

ಕನ್ನಡದ ಅನುವಾದ

ಲಿಂಗದ್ವಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಉನ್ನತ ಸ್ಥಾನಕ್ಕಿಂತ ಪೂರ್ವದಲ್ಲಿ ಸ್ವಲ್ಪ ಆಗ್ನೇಯ ದಿಕ್ಕಿನಲ್ಲಿ ವಿಶ್ವಕರ್ಮನು ಪ್ರತಿಷ್ಠೆ ಮಾಡಿರುವ ಪುಣ್ಯಕರವಾದ ಎರಡು ಲಿಂಗಗಳಿರುವವು.

೨. ವಿಶ್ವಕರ್ಮನು ನಗರ ನಿರ್ಮಾಣಕ್ಕಾಗಿ ಅಲ್ಲಿಗೆ ಬಂದು ಮಹೇಶ್ವರನನ್ನು ಪ್ರತಿಷ್ಠೆಮಾಡಿ ಆ ಪಟ್ಟಣವನ್ನು ನಿರ್ಮಿಸಿದನು.

೩. ಅವನು ಈ ಲಿಂಗದ ಪ್ರಭಾವದಿಂದ ನಗರವನ್ನು ನಿರ್ಮಿಸಿ ಮರಳಿ ಮತ್ತೊಂದು ಲಿಂಗವನ್ನು ಪ್ರತಿಷ್ಠೆಮಾಡಿದನು.

೪. ಯಾತ್ರೆ, ವಿವಾಹ, ಗೃಹಾದಿಕರ್ಮಗಳಲ್ಲಿ ಆದ್ಯಂತಗಳಲ್ಲಿ ಈ ಲಿಂಗದ್ವಯವನ್ನು ಪೂಜಿಸಿದವನು ಕೂಡಲೆ ಸಿದ್ಧಿಯನ್ನು ಪಡೆಯುವನು.

ತಸ್ಮಾತ್ಸರ್ವಪ್ರಯತ್ನೇನ ಗಂಧಾಮೃತರಸೋದಕೈಃ ।
ನೈವೇದ್ಯೈರ್ವಿವಿಧೈರ್ದೇವಿ ಲಿಂಗಯುಗ್ಮಂ ಪ್ರಪೂಜಯೇತ್ ॥ ೫॥

ಇತಿ ಶ್ರೀ ಸ್ಕಾಂದೇ ಮಹಾಪುರಾಣೇ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಲಿಂಗದ್ವಯಮಾಹಾತ್ಮ್ಯವರ್ಣನಂ ನಾಮ
ದ್ವಿಸಪ್ತೋತ್ತರತ್ರಿಶತತಮೋಽಧ್ಯಾಯಃ

೫. ದೇವಿ! ಆದ್ದರಿಂದ ಪ್ರಯತ್ನಿಸಿ ಗಂಧ, ಪಂಚಾಮೃತ, ಉದಕ, ನಾನಾವಿಧ ನೈವೇದ್ಯ, ಇವುಗಳಿಂದ ಆ ಎರಡು ಲಿಂಗಗಳನ್ನು ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಲಿಂಗದ್ವಯಮಾಹಾತ್ಮ್ಯ ವರ್ಣನವೆಂಬ
ಮುನ್ನೂರಎಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಬ್ರಹ್ಮಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥ ತೇ ಕೀರ್ತಯಿಷ್ಯಾಮಿ ರಹಸ್ಯಂ ಸ್ಥಾನಮುತ್ತಮಂ।
ಸರ್ವಪಾಪಹರಂ ನೃಣಾಮುನ್ನತಸ್ಥಾನವಾಸಿನಾಂ ॥ ೧ ॥
ಶ್ರೇಷ್ಠದೇವಸ್ಯ ಮಾಹಾತ್ಮ್ಯಂ ಬ್ರಹ್ಮಣೋಽವ್ಯಕ್ತಜನ್ಮನಃ ।
ಉನ್ನತಸ್ಥಾನಸಂಸ್ಥಸ್ಯ ದೇವಸ್ಯ ಬಾಲರೂಪಿಣಃ ।
ಯಸ್ಯ ದರ್ಶನಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥ ೨ ॥

ದೇವ್ಯುವಾಚ :—

ಬಾಲರೂಪೀತಿ ಯತ್ಪ್ರೋಕ್ತಮುನ್ನತಂ ತತ್ಕಥಂ ವದ ।
ಸ್ಥಾನೇಷ್ವನ್ಯೇಷು ಸರ್ವತ್ರ ವೃದ್ಧರೂಪೀ ಪಿತಾಮಹಃ ॥ ೩ ॥
ಕಸ್ಮಿನ್ಸ್ಥಾನೇ ಸ್ಥಿತಸ್ತತ್ರ ಕಿಮರ್ಥಂ ತತ್ರ ವಾ ಗತಃ ।
ಕಥಂ ಸ ಪೂಜ್ಯೋ ವಿಪ್ರೇಂದ್ರೈಸ್ತಿಥೌ ಕಸ್ಯಾಂ ಕ್ರಮಾದ್ವದ ॥ ೪ ॥

ಕನ್ನಡದ ಅನುವಾದ

ಬ್ರಹ್ಮಮಾಹಾತ್ಮ್ಯವರ್ಣನ

೧. ಬಳಿಕ ನಿನಗೆ ಉನ್ನತ ಸ್ಥಾನವಾಸಿಗಳಾದ ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವ ರಹಸ್ಯ ಸ್ಥಾನವನ್ನು ಹೇಳುವೆನು.

೨. ಉತ್ಪತ್ತಿರಹಿತನೂ, ಉನ್ನತ ಸ್ಥಾನವಾಸಿಯೂ, ಬಾಲರೂಪಿಯೂ, ದರ್ಶನ ಮಾತ್ರದಿಂದ ಪಾಪವನ್ನು ನೀಗಿಸುವವನೂ ಆದ ಬ್ರಹ್ಮನ ಮಾಹಾತ್ಮ್ಯವನ್ನು ಹೇಳುವೆನು.

೩. ದೇವಿಯು ಹೇಳುತ್ತಾಳೆ:—ಉನ್ನತ ಸ್ಥಾನದಲ್ಲಿರುವ ಬ್ರಹ್ಮನು ಬಾಲರೂಪಿಯೆಂದು ಹೇಳಿದೆ. ಇತರ ಸ್ಥಾನಗಳಲ್ಲಿ ವೃದ್ಧರೂಪಿಯಾದ ಬ್ರಹ್ಮ ನಿರುವನು ಇದು ಹೇಗೆ! ಹೇಳು.

೪. ಆ ಬ್ರಹ್ಮನು ಯಾವಸ್ಥಳದಲ್ಲಿರುವನು? ಏತಕ್ಕೆ ಅಲ್ಲಿಗೆ ಬಂದನು? ಅವನನ್ನು ಬ್ರಾಹ್ಮಣರು ಯಾವ ತಿಥಿಯಲ್ಲಿ ಪೂಜಿಸಬೇಕು? ಕ್ರಮವಾಗಿ ಹೇಳು.

ಈಶ್ವರ ಉವಾಚ :—

ಋಷಿತೋಯಾಪಶ್ಚಿಮೇ ತು ಐಶಾನ್ಯಾಂ ಸ್ಥಲಕೇಶ್ವರಾತ್ ।
ಬ್ರಹ್ಮಣಃ ಪರಮಂ ಸ್ಥಾನಂ ಬ್ರಹ್ಮಲೋಕ ಇವಾಪರಃ ॥ ೫ ॥
ಬ್ರಹ್ಮಾ ವಿಷ್ಣುಶ್ಚ ರುದ್ರಶ್ಚ ಪೂಜ್ಯಾಃ ಪ್ರಾಭಾಸಿಕೇ ಸದಾ ।
ಬ್ರಹ್ಮಭಾಗೇ ಸ್ಥಿತೋ ಬ್ರಹ್ಮಾ ಋಷಿತೋಯಾತಟೇ ಶುಭೇ ॥ ೬ ॥
ರುದ್ರಭಾಗೇಽಗ್ನಿತೀರ್ಥೇ ಚ ಪೂಜ್ಯೋ ರುದ್ರಃ ಸನಾತನಃ ।
ಗಿರೌ ರೈವತಕೇ ರಮ್ಯೇ ಪೂಜ್ಯೋ ದಾಮೋದರೋ ಹರಿಃ ॥ ೭ ॥
ಸೋಮೇನ ಪ್ರಾರ್ಥಿತೋ ದೇವೋ ಬಾಲರೂಪೀ ಪಿತಾಮಹಃ ।
ಆಗತಶ್ಚಾಷ್ಟವರ್ಷಸ್ತು ಹ್ಯುನ್ನತೇ ಸ್ಥಾನ ಉತ್ತಮೇ ॥ ೮ ॥
ದೃಷ್ಟ್ವಾ ಬ್ರಹ್ಮಾ ದ್ವಿಜಾಞ್ಶ್ರೇಷ್ಠಾಂಸ್ತತ್ರ ಸ್ಥಾನೇ ಸ್ಥಿತೋ ವಿಭುಃ ॥ ೯ ॥
ನಾಸ್ತಿ ಬ್ರಹ್ಮಸಮೋ ದೇವೋ ನಾಸ್ತಿ ಬ್ರಹ್ಮಸಮೋ ಗುರುಃ ।
ನಾಸ್ತಿ ಬ್ರಹ್ಮಸಮಂ ಜ್ಞಾನಂ ನಾಸ್ತಿ ಬ್ರಹ್ಮಸಮಂ ತಪಃ ॥ ೧೦ ॥
ತಾವದ್ಭ್ರಮಂತಿ ಸಂಸಾರೇ ದುಃಖಶೋಕಭಯಾಪ್ಲುತಾಃ ।
ನ ಭವಂತಿ ಸುರಜ್ಯೇಷ್ಠೇ ಯಾವದ್ಭಕ್ತಾಃ ಪಿತಾಮಹೇ ॥ ೧೧ ॥
ಸಮಾಸಕ್ತಂ ಯಥಾ ಚಿತ್ತಂ ಜಂತೋರ್ವಿಷಯಗೋಚರೇ ।
ಯದ್ಯೇವಂ ಬ್ರಹ್ಮಣಿ ನ್ಯಸ್ತಂ ಕೋ ನ ಮುಚ್ಯೇತ ಬಂಧನಾತ್ ॥ ೧೨ ॥

---

೫. ಈಶ್ವರನು ಹೇಳುತ್ತಾನೆ:— ಋಷಿತೋಯಾ ನದಿಗೆ ಪಶ್ಚಿಮದಲ್ಲಿಯೂ, ಸ್ಥಳಕೇಶ್ವರನಿಗೆ ಈಶಾನ್ಯ ದಿಕ್ಕಿನಲ್ಲಿಯೂ ಮತ್ತೊಂದು ಬ್ರಹ್ಮಲೋಕದಂತಿರುವ ಉತ್ತಮ ಬ್ರಹ್ಮಸ್ಥಾನವಿರುವುದು

೬. ಪ್ರಾಭಾಸಿಕದಲ್ಲಿರುವ ಬ್ರಹ್ಮ ವಿಷ್ಣು ರುದ್ರರನ್ನು ಯಾವಾಗಲೂ ಪೂಜಿಸಬೇಕು. ಋಷಿತೋಯಾತಟದಲ್ಲಿರುವ ಬ್ರಹ್ಮಭಾಗದಲ್ಲಿ ಬ್ರಹ್ಮನಿರುವನು.

೭. ರುದ್ರಭಾಗದಲ್ಲಿರುವ ಅಗ್ನಿತೀರ್ಥದಲ್ಲಿ ರುದ್ರನು ಪೂಜ್ಯನು. ಮನೋಹರವಾದ ರೈವತಕಪರ್ವತದಲ್ಲಿ ಹರಿಯು ಪೂಜ್ಯನು.

೮-೯. ಚಂದ್ರನು ಪ್ರಾರ್ಥಿಸಲು ಬ್ರಹ್ಮನು ಎಂಟುವರ್ಷದ ಬಾಲಕನ ರೂಪವನ್ನು ತಾಳಿ ಬಂದು ಉನ್ನತಸ್ಥಾನದಲ್ಲಿರುವ ಶ್ರೇಷ್ಠರಾದ ದ್ವಿಜರನ್ನು ನೋಡಿ ಅಲ್ಲಿಯೇ ನೆಲೆಸಿದನು.

೧೦. ಬ್ರಹ್ಮನಿಗೆ ಸಮನಾದ ದೇವತೆಯೂ, ಗುರುವೂ, ಜ್ಞಾನವೂ, ತಪಸ್ಸೂ ಇರುವುದಿಲ್ಲ.

೧೧. ಸುರಜ್ಯೇಷ್ಠನಾದ ಬ್ರಹ್ಮನಲ್ಲಿ ಭಕ್ತಿಯನ್ನಿಡುವವರೆಗೆ ಮಾತ್ರವೇ ಮನುಷ್ಯನು ದುಃಖ, ಶೋಕ, ಭಯಗಳಿಂದ ತುಂಬಿದವನಾಗಿ ಸಂಸಾರದಲ್ಲಿ ಅಲೆಯುತ್ತಾನೆ.

೧೨. ಪ್ರಾಣಿಯ ಮನಸ್ಸು ವಿಷಯಗಳಲ್ಲಿ ಆಸಕ್ತವಾದಂತೆ ಬ್ರಹ್ಮನಲ್ಲಿ ಸಂಬದ್ಧವಾದರೆ ಯಾವ ಪ್ರಾಣಿಯು ಬಂಧಮುಕ್ತವಾಗಲಾರದು.

ಪರಮಾಯುಃ ಸ್ಮೃತೋ ಬ್ರಹ್ಮಾ ಪರಾರ್ಧಂ ತಸ್ಯ ವೈ ಗತಂ ।
ಉನ್ನತಸ್ಥಾನಸಂಸ್ಥಸ್ಯ ದ್ವಿತೀಯಂ ಭವಿತಾಧುನಾ ॥ ೧೩ ॥
ಯದಾಸಾವುನ್ನತೇ ಸ್ಥಾನೇ ಬ್ರಹ್ಮಲೋಕಾತ್ಪಿತಾಮಹಃ ।
ಆಗತಶ್ಚಾಷ್ಟವರ್ಷಸ್ತು ಬಾಲರೂಪೀ ತದೋಚ್ಯತೇ ॥ ೧೪ ॥
ಸ್ಥಾನೇಷ್ವನ್ಯೇಷು ವಿಪ್ರಾಣಾಂ ವೃದ್ಧರೂಪೀ ಪಿತಾಮಹಃ ।
ಯುಕ್ತಂ ತದುನ್ನತಸ್ಥಾನಂ ಸದಾ ಚ ಬ್ರಹ್ಮಣಃ ಪ್ರಿಯಂ ॥ ೧೫ ॥
ಸ್ನಾತ್ವಾ ಚ ವಿಧಿವತ್ಪೂರ್ವಂ ಬ್ರಹ್ಮಕುಂಡೇ ನರೋತ್ತಮ ।
ಪೂಜಯೇತ್ಪುಷ್ಪಧೂಪಾದ್ಯೈರ್ಬ್ರಹ್ಮಾಣಂ ಬಾಲರೂಪಿಣಂ ॥ ೧೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬ್ರಹ್ಮಮಾಹಾತ್ಮ್ಯವರ್ಣನಂ ನಾಮ
॥ ಏಕವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

---

೧೩. ಬ್ರಹ್ಮನ ಸಂಪೂರ್ಣ ಆಯುಸ್ಸಿನಲ್ಲಿ ಪರಾರ್ಧವು ಕಳೆಯಿತು. ಉನ್ನತ ಸ್ಥಾನದಲ್ಲಿರುವ ಅವನ ಎರಡನೆಯ ಪರಾರ್ಧವು ಈಗ ಕಳೆಯುತ್ತಿರುವುದು.

೧೪. ಈ ಪಿತಾಮಹನು ಬ್ರಹ್ಮಲೋಕದಿಂದ ಎಂಟುವರ್ಷದ ಬಾಲಕನಾಗಿ ಬಂದಿರುವುದರಿಂದ ಬಾಲರೂಪಿಯೆಂದು ಹೇಳಿಸಿಕೊಳ್ಳುವನು.

೧೫. ಬ್ರಾಹ್ಮಣರ ಅನ್ಯಸ್ಥಾನಗಳಲ್ಲಿ ವೃದ್ಧರೂಪಿಯಾದ ಬ್ರಹ್ಮನಿರುವನು. ಆ ಉನ್ನತಸ್ಥಾನವು ಯಾವಾಗಲೂ, ಬ್ರಹ್ಮನಿಗೆ ಪ್ರಿಯವಾದುದು.

೧೬. ಮನುಷ್ಯನು ಬ್ರಹ್ಮಕುಂಡದಲ್ಲಿ ವಿಧಿಯಂತೆ ಮಿಂದು ಬಾಲರೂಪಿಯಾದ ಬ್ರಹ್ಮನನ್ನು ಪುಷ್ಪಧೂಪ ಮೊದಲಾದುವುಗಳಿಂದ ಪೂಜಿಸಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬ್ರಹ್ಮಮಾಹಾತ್ಮ್ಯವರ್ಣನವೆಂಬ
ಮುನ್ನೂರಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ದುರ್ಗಾದಿತ್ಯಮಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತತೋ ಗಚ್ಛೇನ್ಮಹಾದೇವಿ ತಸ್ಯ ದಕ್ಷಿಣಸಂಸ್ಥಿತಂ ।
ದುರ್ಗಾದಿತ್ಯೇತಿನಾಮಾನಂ ಸರ್ವಪಾಪಪ್ರಣಾಶನಂ ॥ ೧ ॥
ಯದಾ ದುಃಖಮನುಪ್ರಾಪ್ತಾ ದುರ್ಗಾ ದುಃಖವಿನಾಶಿನೀ ।
ಸೂರ್ಯಮಾರಾಧಯಾಮಾಸ ತದಾ ದುಃಖವಿಮುಕ್ತಯೇ ॥ ೨ ॥
ತತಃ ಕಾಲೇನ ಬಹುನಾ ತಸ್ಯಾಸ್ತುಷ್ಟೋ ದಿವಾಕರಃ ।
ಉವಾಚ ಮಧುರಂ ವಾಕ್ಯಂ ದುರ್ಗಾಂ ದೇವೋ ಮಹಾಪ್ರಭಾಂ ।
ವರಂ ವರಯ ದೇವೇಶಿ ತಪಸಾ ತುಷ್ಟವಾನಹಂ ॥ ೩ ॥
ದುರ್ಗೋವಾಚ :—
ಯದಿ ತುಷ್ಟೋ ದಿವಾನಾಥ ದುಃಖಸಂಘಂ ವಿನಾಶಯ ॥ ೪ ॥

ಕನ್ನಡದ ಅನುವಾದ

ದುರ್ಗಾದಿತ್ಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ;—ಮಹಾದೇವಿ ! ಬಳಿಕ ಆ ಬ್ರಹ್ಮನ ದಕ್ಷಿಣದಲ್ಲಿರುವ ಸಕಲಪಾಪಗಳನ್ನು ಪರಿಹರಿಸುವ ದುರ್ಗಾದಿತ್ಯನೆಡೆಗೆ ಹೋಗಬೇಕು.

೨. ದುಃಖವನ್ನು ನಿವಾರಿಸುವ ದುರ್ಗೆಯು ದುಃಖಗೊಂಡಾಗ ದುಃಖದ ಪರಿಹಾರಕ್ಕಾಗಿ ಸೂರ್ಯನನ್ನು ಪೂಜಿಸಿದಳು

೩. ಬಹುಕಾಲದ ತರುವಾಯ ಅವಳಲ್ಲಿ ಸಂತುಷ್ಟನಾದ ಸೂರ್ಯನು ಅತಿಶಯ ಕಾಂತಿಯುಳ್ಳ ದುರ್ಗೆಯನ್ನು ಕುರಿತು ಹೀಗೆ ಹೇಳಿದನು: "ದೇವೇಶಿ ! ನಿನ್ನ ತಪಸ್ಸಿನಿಂದ ನಾನು ಸಂತುಷ್ಟನಾಗಿದ್ದೇನೆ. ವರವನ್ನು ಕೇಳಿಕೋ".

೪. ದುರ್ಗೆಯು ಹೇಳುತ್ತಾಳೆ :—ಭಾಸ್ಕರ ನೀನು ಸಂತುಷ್ಟನಾಗಿದ್ದರೆ ದುಃಖ ಸಮೂಹವನ್ನು ಪರಿಹರಿಸು.

ಸೂರ್ಯ ಉವಾಚ :—

ಅಚಿರೇಣೈವ ಕಾಲೇನ ಭಗವಾಂಸ್ತ್ರಿಪುರಾಂತಕಃ ।
ಸಂಪ್ರಾಪ್ಸ್ಯತ್ಯುತ್ತಮಂ ಲಿಂಗಮುನ್ನತೇ ಸ್ಥಾನ ಉತ್ತಮೇ ॥ ೫ ॥
ದುರ್ಗಾದಿತ್ಯೇತಿ ಮೇ ನಾಮ ಇಹ ದೇವಿ ಭವಿಷ್ಯತಿ ।
ಏವಮುಕ್ತ್ವಾ ಮಹಾದೇವಿ ತತ್ರೈವಾಂತರ್ದಧೇ ರವಿಃ ।
ಸಪ್ತಮ್ಯಾಂ ರವಿವಾರೇಣ ದುರ್ಗಾದಿತ್ಯಂ ಪ್ರಪೂಜಯೇತ್ ॥ ೬ ॥
ತಸ್ಯ ದುಃಖಾನಿ ಸರ್ವಾಣಿ ಕುಷ್ಠಾನಿ ವಿವಿಧಾನಿ ಚ ।
ವಿಲಯಂ ಯಾಂತಿ ದೇವೇಶಿ ದುರ್ಗಾದಿತ್ಯಪ್ರಪೂಜನಾತ್ ॥ ೭ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದುರ್ಗಾದಿತ್ಯಮಾಹಾತ್ಮ್ಯವರ್ಣನಂ ನಾಮ
ದ್ವಾವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

---

೫. ಸೂರ್ಯನು ಹೇಳುತ್ತಾನೆ :—ಪೂಜ್ಯನಾದ ಮಹೇಶ್ವರನು ಶೀಘ್ರವಾಗಿ ಉತ್ತಮವಾದ ಉನ್ನತಸ್ಥಾನದಲ್ಲಿ ಲಿಂಗವನ್ನು ಪಡೆಯುವನು.

೬–೭. ಇಲ್ಲಿ ನನಗೆ ದುರ್ಗಾದಿತ್ಯನೆಂಬ ಹೆಸರಾಗುವುದು. ಮಹಾದೇವಿ ! ರವಿಯು ಹೀಗೆ ಹೇಳಿ ಅಲ್ಲಿಯೇ ಅದೃಶ್ಯನಾದನು ಸಪ್ತಮೀಭಾನುವಾರದಂದು ಆ ಸೂರ್ಯನನ್ನು ಪೂಜಿಸಿದವನ ಸಕಲದುಃಖಗಳೂ, ನಾನಾ ಬಗೆಯ ಕುಷ್ಠಗಳೂ ಪರಿಹಾರವಾಗುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದುರ್ಗಾದಿತ್ಯಮಾಹಾತ್ಮ್ಯ ವರ್ಣನವೆಂಬ
ಮುನ್ನೂರಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ತ್ರಯೋಽಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕ್ಷೇಮೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತಃ ಪಶ್ಯೇನ್ಮಹಾದೇವಿ ತಸ್ಯ ದಕ್ಷಿಣತಃ ಸ್ಥಿತಂ ।
ಕ್ಷೇಮೇಶ್ವರೇತಿ ವಿಖ್ಯಾತಮೃಷಿತೋಯಾತಟೇ ಸ್ಥಿತಂ ॥ ೧ ॥
ಭೂತೀಶ್ವರೇತಿ ನಾಮಾಸ್ಯ ಪೂರ್ವಂ ಚ ಪರಿಕೀರ್ತಿತಂ ।
ಕ್ಷೇಮೇಶೇತಿ ಕಲೌ ದೇವಿ ತಸ್ಯ ನಾಮ ಪ್ರಕೀರ್ತಿತಂ ॥ ೨ ॥
ತಂ ದೃಷ್ಟ್ವಾ ಪೂಜಯಿತ್ವಾ ಚ ಮುಕ್ತಃ ಸ್ಯಾತ್ಸರ್ವಕಿಲ್ಬಿಷೈಃ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕ್ಷೇಮೇಶ್ವರಮಾಹಾತ್ಮ್ಯ ವರ್ಣನಂ ನಾಮ
ತ್ರಯೋಽಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕ್ಷೇಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಆ ದುರ್ಗಾದಿತ್ಯನ ದಕ್ಷಿಣದಲ್ಲಿ ಋಷಿತೋಯಾ ದಡದಲ್ಲಿರುವ ಕ್ಷೇಮೇಶ್ವರನನ್ನು ನೋಡಬೇಕು.

೨. ಇವನಿಗೆ ಹಿಂದೆ ಭೂತೀಶ್ವರನೆಂದು ಹೆಸರಿದ್ದಿತು. ಈಗ ಕಲಿಯುಗದಲ್ಲಿ ಕ್ಷೇಮೇಶನೆಂದು ಹೆಸರಾಗಿರುವುದು.

೩. ಅವನನ್ನು ನೋಡಿ ಪೂಜಿಸಿದ ಮಾನವನು ಸಕಲಪಾಪಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕ್ಷೇಮೇಶ್ವರಮಾಹಾತ್ಮ್ಯ ವರ್ಣನವೆಂಬ
ಮುನ್ನೂರಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುರ್ವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಗಣನಾಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದುತ್ತರದಿಗ್ಭಾಗೇ ಕಿಂಚಿದ್ವಾಯವ್ಯಮಾಶ್ರಿತಂ ।
ವಿನಾಯಕಂ ಪ್ರಪಶ್ಯೇಚ್ಚ ಸರ್ವಸಿದ್ಧಿಪ್ರದಾಯಕಂ ॥ ೧ ॥
ಯೋಽಸೌ ದೇವಿ ಮಯಾಖ್ಯಾತಃ ಸಖಾ ಮೇ ಧನದಃ ಪುರಾ ।
ಗಣನಾಥಸ್ವರೂಪೇಣ ನಿಧೀನಾಂ ಪರಿಪಾಲಕಃ ।
ಲೋಕಾನಾಂ ಸಿದ್ಧಿದಾನಾರ್ಥಮಸ್ಮಿನ್ಸ್ಥಾನೇ ಸ್ಥಿತಃ ಪ್ರಿಯೇ ॥ ೨ ॥
ಚತುರ್ಥ್ಯಾಂ ಭೌಮವಾರೇಣ ಭಕ್ಷ್ಯಭೋಜ್ಯೈಃ ಸಮೋದಕೈಃ ।
ಪೂಜಯೇದ್ವಿಧಿವದ್ದೇವಿ ತಸ್ಯ ಸಿದ್ಧಿರ್ಭವೇದ್ಧ್ರುವಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗಣನಾಥಮಾಹಾತ್ಮ್ಯವರ್ಣನಂ ನಾಮ
॥ ಚತುರ್ವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಗಣನಾಥಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಕ್ಷೇಮೇಶ್ವರನ ಉತ್ತರದಿಕ್ಕಿನಲ್ಲಿ ಸ್ವಲ್ಪ ವಾಯವ್ಯದಲ್ಲಿರುವ ಸಕಲೇಷ್ಟಗಳನ್ನೀಯುವ ವಿನಾಯಕನನ್ನು ನೋಡಬೇಕು

೨. ಪ್ರಿಯಳೆ! ನಾನು ಹಿಂದೆ ಹೇಳಿರುವ ನನ್ನ ಮಿತ್ರನಾದ ಕುಬೇರನು ಗಣನಾಥಸ್ವರೂಪದಿಂದ ನಿಧಿಗಳನ್ನು ಪಾಲಿಸುತ್ತ ಜನರಿಗೆ ಇಷ್ಟಾರ್ಥಗಳನ್ನೀಯಲು ಇಲ್ಲಿ ನೆಲಸಿರುವನು.

೩. ಮಂಗಳವಾರ ಚತುರ್ಥೀದಿನ ಮೋದಕಸಹಿತವಾದ ಭಕ್ಷ್ಯಭೋಜ್ಯಗಳಿಂದ ಅವನನ್ನು ವಿಧಿಯಂತೆ ಪೂಜಿಸಿದರೆ ನಿಶ್ಚಯವಾಗಿಯೂ ಇಷ್ಟವು ಸಿದ್ಧಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಗಣನಾಥಮಾಹಾತ್ಮ್ಯವರ್ಣನವೆಂಬ
ಮುನ್ನೂರಿಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಉನ್ನತಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿನಾಯಕಮನುತ್ತಮಂ ।
ಋಷಿತೋಯಾತಟೇ ರಮ್ಯೇ ಸರ್ವವಿಘ್ನನಿವಾರಣಂ ॥ ೧ ॥
ಯೋಽಸೌ ದೇವಗಣಾಧ್ಯಕ್ಷಃ ಸಾಕ್ಷಾಚ್ಚ ತ್ರಿಪುರಾಂತಕಃ ।
ಗಜರೂಪಂ ಸಮಾಶ್ರಿತ್ಯ ಹ್ಯುನ್ನತೇ ಜಗತಿ ಸ್ಥಿತಃ ।
ಪ್ರಾಭಾಸಿಕೇ ಮಹಾಕ್ಷೇತ್ರೇ ಗಣಾನಾಂ ಕೋಟಿಭಿರ್ವೃತಃ ॥ ೨ ॥
ತಸ್ಮಾತ್ಸರ್ವಪ್ರಯತ್ನೇನ ಯಾತ್ರಾನಿರ್ವಿಘ್ನಹೇತವೇ ।
ಆರಾಧ್ಯೋ ಗಣನಾಥಶ್ಚ ಪುಷ್ಪಧೂಪಾದಿಭಿಃ ಸದಾ ॥ ೩ ॥
ಚತುರ್ಥ್ಯಾಂ ಚ ಚತುರ್ಥ್ಯಾಂ ಚ ಸರ್ವೈರ್ನಗರವಾಸಿಭಿಃ ।
ತಸ್ಮಿನ್ಮಹೋತ್ಸವಃ ಕಾರ್ಯೋ ರಾಷ್ಟ್ರಕ್ಷೇಮಾರ್ಥಸಿದ್ಧಯೇ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಉನ್ನತಸ್ವಾಮಿಮಾಹಾತ್ಮ್ಯವರ್ಣನಂನಾಮ
। ಪಂಚವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಉನ್ನತಸ್ವಾಮಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾ :—ಮಹಾದೇವಿ! ಬಳಿಕ ಮನೋಹರವಾದ ಋಷಿತೋಯಾತಟದಲ್ಲಿರುವ ಸಕಲ ವಿಘ್ನಗಳನ್ನು ಪರಿಹರಿಸುವ ವಿನಾಯಕನೆಡೆಗೆ ಹೋಗಬೇಕು.

೨-೩. ಗಣಾಧಿಪನೂ, ಮಹೇಶ್ವರನೂ ಗಜರೂಪವನ್ನು ಆಶ್ರಯಿಸಿ ಕೋಟಿ ಸಂಖ್ಯೆಯ ಗಣಗಳೊಡನೆ ಈ ಪ್ರಾಭಾಸಿಕ ಕ್ಷೇತ್ರದಲ್ಲಿ ನೆಲೆಸಿರುವುದರಿಂದ ವಿಘ್ನ ಪರಿಹಾರಕ್ಕಾಗಿ ಪುಷ್ಪ ಧೂಪಾದಿಗಳಿಂದ ಉನ್ನತಸ್ವಾಮಿ ಯೆನಿಸಿರುವ ಪೂಜಿಸಬೇಕು

೪. ಪ್ರತಿ ಚತುರ್ಥೀ ದಿನ ಎಲ್ಲ ಪಟ್ಟಣಿಗರೂ ರಾಜ್ಯದ ಕ್ಷೇಮಕ್ಕಾಗಿ ಉನ್ನತಸ್ವಾಮಿಯ ಮಹೋತ್ಸವವನ್ನು ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಉನ್ನತಸ್ವಾಮಿಮಾಹಾತ್ಮ್ಯವರ್ಣನವೆಂಬ
ಮುನ್ನೂರಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಡಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಮಹಾಕಾಲಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಯೈವೋತ್ತರತಃ ಸ್ಥಿತಂ ।
ಮಹಾಕಾಲೇಶ್ವರಂ ದೇವಂ ಸರ್ವರಕ್ಷಾಕರಂ ಪರಂ ॥ ೧ ॥
ಅಧಿಷ್ಠಾತಾ ಪುರಸ್ಯಾಸ್ಯ ಭೈರವೋ ರುದ್ರರೂಪಧೃಕ್ ।
ದರ್ಶೇ ಚ ಪೂರ್ಣಿಮಾಯಾಂ ಚ ಮಹಾಪೂಜಾಂ ಪ್ರಕಾರಯೇತ್ ॥ ೨ ॥
ಮಹೋದಯೇ ನರಃ ಸ್ನಾತ್ವಾ ಮಹಾಕಾಲಂ ಪ್ರಪಶ್ಯತಿ ।
ಧನಾಢ್ಯೋ ಜಾಯತೇ ಲೋಕೇ ಸಪ್ತಜನ್ಮಸಹಸ್ರಕಂ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಹಾಕಾಲಮಾಹಾತ್ಮ್ಯವರ್ಣನಂ ನಾಮ
॥ ಷಡ್ವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮಹಾಕಾಲಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಆ ಉನ್ನತಸ್ವಾಮಿಯ ಉತ್ತರದಲ್ಲಿರುವ ಸಕಲವನ್ನೂ ರಕ್ಷಿಸುವ ಮಹಾಕಾಲೇಶ್ವರನೆಡೆಗೆ ಹೋಗಬೇಕು.

೨. ರುದ್ರ ರೂಪಧಾರಿಯಾದ ಭೈರವನು ಈ ಪಟ್ಟಣದ ಅಧಿದೇವತೆಯು, ದರ್ಶ ಪೂರ್ಣಿಮೆಗಳಲ್ಲಿ ಅವನನ್ನು ಪೂಜಿಸಬೇಕು.

೩. ಮನುಷ್ಯನು ಮಹೋದಯದಲ್ಲಿ ಮಿಂದು ಮಹಾಕಾಲನನ್ನು ನೋಡಿದರೆ ಏಳುಸಾವಿರ ಜನ್ಮಗಳಲ್ಲಿ ಧನವಂತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಮಹಾಕಾಲಮಾಹಾತ್ಮ್ಯವರ್ಣನವೆಂಬ
ಮುನ್ನೂರಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಮಹೋದಯಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಮಹೋದಯಂ ಗಚ್ಛೇತ್ತಸ್ಮಾದೀಶಾನ ಸಂಸ್ಥಿತಂ ॥ ೧ ॥
ವಿಧಿನಾ ತತ್ರ ಯಃ ಸ್ನಾತಿ ತರ್ಪಯೇತ್ಪಿತೃದೇವತಾಃ ।
ಪ್ರತಿಗ್ರಹಕೃತಾದ್ದೋಷಾನ್ನ ಭಯಂ ತಸ್ಯ ವಿದ್ಯತೇ ॥ ೨ ॥
ಮಹೋದಯಂ ಮಹಾನಂದದಾಯಕಂ ಚ ದ್ವಿಜನ್ಮನಾಂ ।
ಪ್ರತಿಗ್ರಹಪ್ರಸಕ್ತಾನಾಂ ವಿಷಯಾಸಕ್ತಚೇತಸಾಂ ।
ತೇಷಾಮಪಿ ದದೇನ್ಮುಕ್ತಿಂ ತೇನ ಖ್ಯಾತಂ ಮಹೋದಯಂ ॥ ೩ ॥
ತಸ್ಯ ವೈ ರಕ್ಷಣಾರ್ಥಾಯ ಮಹಾಕಾಲಸ್ಯ ಚೋತ್ತರೇ ।
ನಿಯುಕ್ತಾಶ್ಚ ಮಹಾದೇವಿ ಮಾತರಸ್ತತ್ರ ಸಂಸ್ಥಿತಾಃ ।
ತಸ್ಮಿನ್ಸ್ನಾತ್ವಾ ನರಃ ಪೂರ್ವಂ ಮಾತೄಸ್ತಾಶ್ಚ ಪ್ರಪೂಜಯೇತ್ ॥ ೪ ॥

ಕನ್ನಡದ ಅನುವಾದ

ಮಹೋದಯಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಅನಂತರ ಆ ಮಹಾಕಾಲನ ಈಶಾನ್ಯ ದಿಕ್ಕಿನಲ್ಲಿರುವ ಮಹೋದಯ ತೀರ್ಥಕ್ಕೆ ಹೋಗಬೇಕು.

೨. ಅಲ್ಲಿ ವಿಧಿಯಂತೆ ಮಿಂದು ಪಿತೃದೇವತೆಗಳಿಗೆ ತರ್ಪಣಮಾಡಿದವರಿಗೆ ಪ್ರತಿಗ್ರಹವನ್ನು ಮಾಡಿದ್ದರಿಂದುಂಟಾದ ದೋಷದ ಭಯವಿರುವುದಿಲ್ಲ.

೩. ಆತ್ಮಾನಂದವನ್ನೀಯುವ ಮಹೋದಯವು ಪ್ರತಿ ಗ್ರಹ, ವಿಷಯ ಭೋಗಗಳು ಇವುಗಳಲ್ಲಿ ಆಸಕ್ತರಾದ ಬ್ರಾಹ್ಮಣರಿಗೂ ಮುಕ್ತಿಯನ್ನೀಯುವುದರಿಂದ ಮಹೋದಯವೆಂದು ಪ್ರಸಿದ್ಧವಾಯಿತು.

೪. ಮಹಾದೇವಿ! ಮಹಾಕಾಲನ ಉತ್ತರದಲ್ಲಿರುವ ಆ ಮಹೋದಯವನ್ನು ರಕ್ಷಿಸುವುದಕ್ಕಾಗಿ ಮಾತೃದೇವತೆಗಳು ನಿಯಮಿಸಲ್ಪಟ್ಟಿದ್ದಾರೆ. ಮನುಷ್ಯನು ಮೊದಲು ಅಲ್ಲಿ ಮಿಂದು ಆ ಮಾತೃದೇವತೆಗಳನ್ನು ಪೂಜಿಸಬೇಕು.

ಏವಂ ದೇವಿ ಮಯಾಖ್ಯಾತಂ ಮಹೋದಯಮಹೋದಯಂ ।
ಸರ್ವಪಾಪಹರಂ ನೃಣಾಮಭಿಷೇಕಾಚ್ಚ ಮುಕ್ತಿದಂ ॥ ೫ ॥
ಅರ್ಧಕ್ರೋಶೇ ಚ ತತ್ತೀರ್ಥಂ ಸಮಂತಾತ್ಪರಿಮಂಡಲಂ ।
ಏತನ್ಮಧ್ಯಂ ಮಹಾಸಾರಂ ಸದೈವ ಮುನಿವಲ್ಲಭಂ ॥ ೬ ॥

ಇತಿ ಶ್ರೀ ಸ್ಕಾಂದಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಹೋದಯಮಾಹಾತ್ಮ್ಯವರ್ಣನಂ ನಾಮ
ಸಪ್ತವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

---

೫. ದೇವಿ ! ಹೀಗೆ ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವುದೂ, ಮುಕ್ತಿಯನ್ನೀಯುವುದೂ ಆದ ಮಹೋದಯ ತೀರ್ಥದ ಮಾಹಾತ್ಮ್ಯವನ್ನು ಹೇಳಿರುವೆನು.

೬. ಆ ತೀರ್ಥವು ಸುತ್ತಲೂ ಒಂದು ಮೈಲಿ ವಿಸ್ತೀರ್ಣವಾಗಿರುವುದು, ಇದರ ಮಧ್ಯಪ್ರದೇಶವು ಯಾವಾಗಲೂ ಮುನಿಗಳಿಗೆ ಪ್ರಿಯವಾಗಿ ಅತಿ ಶ್ರೇಷ್ಠವಾಗಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಹೋದಯಮಾಹಾತ್ಮ್ಯವರ್ಣನವೆಂಬ
ಮುನ್ನೂರಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಾಪಂಚಾಶತ್ಯುತ್ತರತ್ರಿಶತತಮೋಽಧ್ಯಾಯಃ

ಸಂಗಮೇಶ್ವರಮಾಹಾತ್ಮ್ಯವರ್ಣನ

ಈಶ್ವರ ಉವಾಚ :—

ತಸ್ಮಾದ್ವಾಯವ್ಯದಿಗ್ಭಾಗೇ ಸ್ಥಿತಂ ಪಾಪಪ್ರಣಾಶನಂ ।
ಸಂಗಮೇಶ್ವರನಾಮಾಖ್ಯಮೃಷಯೋ ಯತ್ರ ಸಂಗತಾಃ ॥ ೧ ॥
ತಸ್ಯೈವ ಪೂರ್ವದಿಗ್ಭಾಗೇ ಕುಂಡಿಕಾ ಪಾಪನಾಶಿನೀ ।
ವಡವಾನಲಸಂಯುಕ್ತಾ ಯತ್ರಾಯಾತಾ ಸರಸ್ವತೀ ॥ ೨ ॥
ಕುಂಡಿಕಾಯಾಂ ನರಃ ಸ್ನಾತ್ವಾ ಸಂಗಮೇಶ್ವರಮರ್ಚಯೇತ್ ।
ತಸ್ಯ ಜನ್ಮಸಹಸ್ರಾಣಿ ಲಕ್ಷ್ಮ್ಯಾಃ ಪುತ್ರೈಃ ಪ್ರಿಯೈಃ ಸಹ ।
ಅಸಂಗಮಂ ಮಹಾದೇವಿ ನ ಕದಾಚಿತ್ಪ್ರಜಾಯತೇ ॥ ೩ ॥

ಕನ್ನಡದ ಅನುವಾದ

ಸಂಗಮೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಮಹೋದಯದ ವಾಯವ್ಯ ದಿಕ್ಕಿನಲ್ಲಿ ಪಾಪವನ್ನು ಪರಿಹರಿಸುವ ಸಂಗಮೇಶ್ವರವೆಂಬ ಲಿಂಗವಿರುವುದು. ಇಲ್ಲಿ ಋಷಿಗಳು ಒಟ್ಟಿಗೆ ಸೇರಿರುವರು.

೨. ಅದರ ಪೂರ್ವದಿಕ್ಕಿನಲ್ಲಿ ವಡವಾನಲದೊಡನೆ ಸರಸ್ವತಿಯು ಬಂದಿರುವ ಪಾಪನಾಶಿನೀ ಕುಂಡಿಕೆಯಿರುವುದು.

೩. ಈ ಕುಂಡಿಕೆಯಲ್ಲಿ ಮಿಂದು ಸಂಗಮೇಶ್ವರನನ್ನು ಅರ್ಚಿಸುವ ಮನುಷ್ಯನಿಗೆ ಸಾವಿರ ಜನ್ಮಗಳಲ್ಲಿ ಸಂಪತ್ತು, ಪುತ್ರರು, ಪ್ರಿಯರು ಇವರಿಂದ ಯಾವಾಗಲೂ ವಿಯೋಗವುಂಟಾಗುವುದಿಲ್ಲ.

ಮುಚ್ಯತೇ ಪಾತಕೈಃ ಸರ್ವೈರಾಜನ್ಮಮರಣಾಂತಿಕೈಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಂಗಮೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಅಷ್ಟಾವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

---

೪. ಮತ್ತು ಹುಟ್ಟಿದ ಮೊದಲ್ಗೊಂಡು ಅವಸಾನ ಕಾಲದವರೆಗೆ ಮಾಡಿದ ಸಕಲಪಾಪಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಂಗಮೇಶ್ವರಮಾಹಾತ್ಮ್ಯ ವರ್ಣನವೆಂಬ
ಮುನ್ನೂರಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನವಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಉನ್ನತವಿನಾಯಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಅಥೋತ್ತರೇ ದೇವಕುಲಾತ್ತತ್ರ ಗವ್ಯೂತಿಮಾತ್ರತಃ ।
ಉತ್ತಮಸ್ಥಾನಮಿತಿ ಚ ಪ್ರಖ್ಯಾತಂ ಧರಣೀತಲೇ ॥ ೧ ॥
ತಸ್ಯೋತ್ತರೇ ತು ದಿಗ್ಭಾಗೇ ಧನುರ್ದ್ವಾದಶಕಾಂತರೇ ।
ಉನ್ನತೋ ವಿಘ್ನರಾಜಸ್ತು ಸರ್ವಪ್ರತ್ಯೂಹನಾಶನಃ ॥ ೨ ॥
ಚತುರ್ಥ್ಯಾಂ ಪೂಜಿತಃ ಸಮ್ಯಕ್ಸ್ರಗಂಧೈಃ ಫಲಮೋದಕೈಃ ।
ದದಾತಿ ವಾಂಛಿತಾನ್ಕಾಮಾಂಸ್ತ್ರೈಲೋಕ್ಯೇ ವಿಜಯೀ ಭವೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಉನ್ನತವಿನಾಯಕಮಾಹಾತ್ಮ್ಯವರ್ಣನಂನಾಮ ॥ ಏಕೋನವಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಉನ್ನತವಿನಾಯಕಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಆ ಸಂಗಮೇಶ್ವರನ ಉತ್ತರದಲ್ಲಿ ದೇವಕುಲದಿಂದ ನಾಲ್ಕು ಮೈಲಿಗಳ ದೂರದಲ್ಲಿ ಪ್ರಖ್ಯಾತವಾದ ಉತ್ತಮ ಸ್ಥಾನವಿರುವುದು.

೨. ಅದರ ಉತ್ತರ ದಿಕ್ಕಿನಲ್ಲಿ ಹನ್ನೆರಡು ಬಿಲ್ಲುಗಳ ದೂರದಲ್ಲಿ ಸಕಲ ವಿಘ್ನಗಳನ್ನೂ ಪರಿಹರಿಸುವ ಉನ್ನತ ವಿಘ್ನರಾಜನು ಇರುವನು.

೩. ಚೌತಿಯದಿನ ಗಂಧ, ಫಲ, ಮೋದಕಗಳಿಂದ ಪೂಜಿಸಿದವನಿಗೆ ವಿನಾಯಕನು ಇಷ್ಟಾರ್ಥಗಳನ್ನೀಯುವನು. ಅವನ ಅನುಗ್ರಹದಿಂದ ಭಕ್ತನಾದವನು ಮೂರು ಲೋಕಗಳಲ್ಲಿ ಜಯಶಾಲಿಯಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಉನ್ನತವಿನಾಯಕಮಾಹಾತ್ಮ್ಯವರ್ಣನವೆಂಬ ಮುನ್ನೂರಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಶಂದುತ್ತರತ್ರಿಶತತಮೋಽಧ್ಯಾಯಃ

ತಲಸ್ವಾಮಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದುನ್ನತಸ್ಥಾನಾದುತ್ತರೇ ಯೋಜನತ್ರಯಾತ್ ।
ತತ್ರ ತಪ್ತೋದಕಸ್ವಾಮೀ ತಲೋ ಯತ್ರ ಹತಃ ಪುರಾ ॥ ೧ ॥
ದೈತ್ಯಾನಾಮಧಿಪೋ ದೇವಿ ವಿಷ್ಣುನಾ ಪ್ರಭವಿಷ್ಣುನಾ ।
ಕೃತ್ವಾ ವರ್ಷಶತಂ ಯುದ್ಧಂ ತಲಸ್ವಾಮೀ ತತೋಽಭವತ್ ॥ ೨ ॥
ತಪ್ತಕುಂಡೇ ನರಃ ಸ್ನಾತ್ವಾ ತಲಸ್ವಾಮಿನಮರ್ಚಯೇತ್ ।
ಕೃತ್ವಾ ಪಿಂಡಪ್ರದಾನಂ ತು ಕೋಟಿಯಾತ್ರಾಫಲಂ ಲಭೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತಲಸ್ವಾಮಿಮಾಹಾತ್ಮ್ಯವರ್ಣನಂ ನಾಮ
॥ ತ್ರಿಶದುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ತಲಸ್ವಾಮಿಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಆ ಉನ್ನತ ಸ್ಥಾನದ ಉತ್ತರದಲ್ಲಿ ಮೂರು ಗಾವುದ ದೂರದಲ್ಲಿ ತಪ್ತೋದಕಸ್ವಾಮಿಯಿರುವನು. ಇಲ್ಲಿ ಸಮರ್ಥನಾದ ವಿಷ್ಣುವು ನೂರು ವರ್ಷಕಾಲ ಯುದ್ಧಮಾಡಿ ದೈತ್ಯರೊಡೆಯನಾದ ತಲನನ್ನು ಕೊಂದುದರಿಂದ ತಲಸ್ವಾಮಿಯೆಂದು ವಿಖ್ಯಾತನಾದನು.

೩. ಮನುಷ್ಯನು ತಪ್ತಕುಂಡದಲ್ಲಿ ಮಿಂದು ತಲಸ್ವಾಮಿಯನ್ನರ್ಚಿಸಿ ಪಿಂಡಪ್ರದಾನ ಮಾಡಿದರೆ ಕೋಟಿಸಂಖ್ಯೆಯ ಯಾತ್ರೆ ಮಾಡಿದ ಫಲವು ಲಭಿಸುವುದು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತಲಸ್ವಾಮಿಮಾಹಾತ್ಮ್ಯ ವರ್ಣನವೆಂಬ
ಮುನ್ನೂರಮುತ್ತನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕತ್ರಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕಾಲಮೇಘಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕಾಲಮೇಘೇತಿ ವಿಶ್ರುತಂ ।
ತಸ್ಮಾತ್ತಂ ಪೂರ್ವದಿಗ್ಭಾಗೇ ಕ್ಷೇತ್ರಪಂ ಲಿಂಗರೂಪಿಣಂ ॥ ೧ ॥
ಅಷ್ಟಮ್ಯಾಂ ವಾ ಚತುರ್ದಶ್ಯಾಂ ಪೂಜ್ಯೋಽಸೌ ಬಲಿಭಿರ್ನರೈಃ ।
ವಾಂಛಿತಾರ್ಥಪ್ರದಃ ಸಮ್ಯಕ್ಸ ಕಲೌ ಕಲ್ಪಪಾದಪಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಾಲಮೇಘಮಾಹಾತ್ಮ್ಯ ವರ್ಣನಂ ನಾಮ
ಏಕತ್ರಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕಾಲಮೇಘಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ತಲಸ್ವಾಮಿಯ ಪೂರ್ವದಲ್ಲಿ ಲಿಂಗರೂಪಿಯಾಗಿರುವ ಕಾಲಮೇಘನೆಂದು ಪ್ರಸಿದ್ಧನಾದ ಕ್ಷೇತ್ರಪಾಲಕನೆಡೆಗೆ ಹೋಗಬೇಕು.

೨. ಮನುಷ್ಯರು ಅವನನ್ನು ಅಷ್ಟಮಿ, ಅಥವಾ ಚತುರ್ದಶೀದಿನ ಬಲಿಯಿಂದ ಪೂಜಿಸಬೇಕು. ಅವನು ಕಲಿಯುಗದಲ್ಲಿ ಇಷ್ಟಾರ್ಥಗಳನ್ನೀಯುವ ಕಲ್ಪವೃಕ್ಷದಂತಿರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕಾಲಮೇಘಮಾಹಾತ್ಮ್ಯ ವರ್ಣನವೆಂಬ
ಮುನ್ನೂರಮುವ್ವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಾತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ರುಕ್ಮಿಣೀಮಾಹಾತ್ಮ್ಯವರ್ಣನಂ

ತಸ್ಮಾದ್ದಕ್ಷಿಣದಿಗ್ಭಾಗೇ ಧನುಷಾಂ ಪಂಚಭಿಃ ಪ್ರಿಯೇ ।
ತತ್ರ ತಪ್ತೋದಕುಂಡಾನಿ ಸಂತ್ಯದ್ಯಾಪಿ ವರಾನನೇ ॥ ೧ ॥
ಕುಂಡತಃ ಪೂರ್ವದಿಗ್ಭಾಗೇ ಧನುಷಾಂ ಪಂಚವಿಂಶತೌ ।
ರುಕ್ಮಿಣೀ ಸಂಸ್ಥಿತಾ ದೇವೀ ಸರ್ವಪಾತಕನಾಶಿನೀ ॥ ೨ ॥
ಸ್ನಾತ್ವಾ ತಪ್ತೋದಕೇ ಕುಂಡೇ ಕೋಟಿಹತ್ಯಾವಿನಾಶನೇ ।
ತತಃ ಸಂಪೂಜಯೇದ್ದೇವೀಂ ರುಕ್ಮಿಣೀಂ ರುಕ್ಮದಾಯಿನೀಂ ।
ಸಪ್ತ ಜನ್ಮಾನಿ ನಾರೀಣಾಂ ಗೃಹಭಂಗೋ ನ ಜಾಯತೇ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ರುಕ್ಮಿಣೀಮಾಹಾತ್ಮ್ಯವರ್ಣನಂ ನಾಮ
॥ ದ್ವಾತ್ರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ರುಕ್ಮಿಣೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಪ್ರಿಯಳೆ! ಆ ಕಾಲಮೇಘನ ದಕ್ಷಿಣದಲ್ಲಿ ಐದು ಬಿಲ್ಲುಗಳ ದೂರದಲ್ಲಿ ಈಗಲೂ ತಪ್ತೋದಕ ಕುಂಡಗಳಿರುವವು.

೨. ಆ ಕುಂಡದ ಪೂರ್ವದಿಕ್ಕಿನಲ್ಲಿ ಇಪ್ಪತ್ತೈದು ಬಿಲ್ಲುಗಳ ದೂರದಲ್ಲಿ ಸಕಲ ಪಾಪಗಳನ್ನು ಪರಿಹರಿಸುವ ರುಕ್ಮಿಣೀದೇವಿಯಿರುವಳು.

೩. ಹೆಂಗಸರು ಕೋಟಿ ಬ್ರಹ್ಮಹತ್ಯಗಳನ್ನು ಪರಿಹರಿಸುವ ತಪ್ತೋದಕ ಕುಂಡದಲ್ಲಿ ಮಿಂದು ಸುವರ್ಣವನ್ನು ಕೊಡುವ ರುಕ್ಮಿಣೀದೇವಿಯನ್ನು ಪೂಜಿಸಬೇಕು. ಇದರಿಂದ ನಾರಿಯರಿಗೆ ಏಳುಜನ್ಮಗಳಲ್ಲಿ ಗೃಹಭಂಗವು ಉಂಟಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ರುಕ್ಮಿಣೀಮಾಹಾತ್ಮ್ಯವರ್ಣನವೆಂಬ
ಮುನ್ನೂರಮುವ್ವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಯಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ತಪ್ತೋದಕಸ್ವಾಮಿಮಾಹಾತ್ಮ್ಯಂ ಪಿಂಗೇಶ್ವರಭದ್ರಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಬಲಭದ್ರಾಶ್ಚ ಪೂರ್ವೇಣ ಸ್ಥಿತಾ ಚಾಸೀತ್ಸರಿದ್ವರಾ ।
ದುರ್ವಾಸೇಶ್ವರನಾಮೇತಿ ಬಲಲಿಂಗಂ ಪ್ರತಿಷ್ಠಿತಂ ॥ ೧ ॥
ಸರ್ವಪಾಪಪ್ರಶಮನಂ ದೃಷ್ಟಂ ಸರ್ವಸುಖಾವಹಂ ।
ಸ್ನಾತ್ವಾ ಚಾಸ್ಯ ತ್ವಮಾವಾಸ್ಯಾಂ ಪಿಂಡದಾನಂ ದದಾತಿ ಯಃ ॥ ೨ ॥
ಕಲ್ಪಕೋಟಿಶತಂ ಸಾಗ್ರಂ ಪಿತೄಣಾಂ ತೃಪ್ತಿಮಾವಹೇತ್ ।
ದುರ್ವಾಸೇಶ್ವರನಾಮಾನಂ ತತ್ರ ಪೂಜ್ಯ ವಿಧಾನತಃ ॥ ೩ ॥
ಕೋಟಿಯಜ್ಞಫಲಂ ಪ್ರಾಪ್ಯ ಸರ್ವಾನ್ಕಾಮಾನವಾಪ್ನುಯಾತ್ ।
ತತ್ರ ಲಿಂಗಾನ್ಯನೇಕಾನಿ ಋಷಿಭಿಃ ಸ್ಥಾಪಿತಾನಿ ತು ॥ ೪ ॥
ದೃಷ್ಟ್ವಾ ಸ್ಪೃಷ್ಟ್ವಾ ಪೂಜಯಿತ್ವಾ ಮುಕ್ತಃ ಸ್ಯಾತ್ಸರ್ವಕಿಲ್ಬಿಷೈಃ ।
ಇತ್ಯೇತತ್ಕಥಿತಂ ದೇವಿ ಕ್ಷೇತ್ರಾದ್ಯಂತಂ ಯಥಾಕ್ರಮಂ ॥ ೫ ॥
ಭದ್ರಾಯಾಃ ಪಶ್ಚಿಮಾತ್ಪೂರ್ವಂ ಯಥಾನುಕ್ರಮಮಾದಿತಃ ।
ಶ್ರುತಂ ಪಾಪೋಪಶಮನಂ ಕೋಟಿಯಜ್ಞಫಲಪ್ರದಂ ॥ ೬ ॥

ಕನ್ನಡದ ಅನುವಾದ

ತಪ್ತೋದಕಸ್ವಾಮಿಮಾಹಾತ್ಮ್ಯ ಮತ್ತು ಪಿಂಗೇಶ್ವರಭದ್ರಾಮಾಹಾತ್ಮ್ಯಗಳವರ್ಣನ

೧-೬. ಈಶ್ವರನು ಹೇಳುತ್ತಾನೆ:— ಬಲರಾಮನಿಗೆ ಪೂರ್ವದಲ್ಲಿ ಉತ್ತಮವಾದ ನದಿಯೊಂದಿರುವುದು. ಅಲ್ಲಿ ದೂರ್ವಾಸೇಶ್ವರನೆಂಬ ಬಲಲಿಂಗವು ಪ್ರತಿಷ್ಠೆ ಮಾಡಲ್ಪಟ್ಟಿರುವುದು. ಇದರ ದರ್ಶನದಿಂದ ಸಕಲಪಾಪಗಳು ಪರಿಹಾರವಾಗಿ ಸಮಸ್ತ ಸೌಖ್ಯಗಳುಂಟಾಗುವವು. ಅಮಾವಾಸ್ಯೆಯ ದಿನ ಇಲ್ಲಿಮಿಂದು ಪಿಂಡಪ್ರದಾನಮಾಡಿದವನ ಪಿತೃಗಳು ನೂರುಕೋಟಿ ಕಲ್ಪಗಳ ಕಾಲ ತೃಪ್ತರಾಗಿರುವರು. ಅಲ್ಲಿ ವಿಧಿಯಿಂದ ದುರ್ವಾಸೇಶ್ವರನನ್ನು ಪೂಜಿಸಿದವನು ಕೋಟಿಯಜ್ಞಫಲವನ್ನು ಹೊಂದಿ ಸಕಲ ಇಷ್ಟಾರ್ಥಗಳನ್ನು ಪಡೆಯುವನು. ಅಲ್ಲಿ ಮುನಿಗಳು ಪ್ರತಿಷ್ಠೆಮಾಡಿರುವ ಅನೇಕ ಲಿಂಗಗಳ ದರ್ಶನ, ಸ್ಪರ್ಶನ, ಪೂಜೆಗಳಿಂದ ಮಾನವನು ಸಕಲ ಪಾಪಗಳಿಂದ ಮುಕ್ತನಾಗುವನು. ದೇವಿ! ಹೀಗೆ ಭದ್ರಾನದಿಯ ಪಶ್ಚಿಮ ಮತ್ತು ಪೂರ್ವದಲ್ಲಿರುವ ಪಾಪಗಳನ್ನು ಪರಿಹರಿಸುವುದೂ, ಕೋಟಿಯಜ್ಞಫಲವನ್ನೀಯುವುದೂ ಆದ ಕ್ಷೇತ್ರವನ್ನು ಹೇಳಿರುವೆನು.

ಅಥ ಕ್ಷೇತ್ರಸ್ಯ ಪರಿಧಿಸ್ಥಾನಂ ಮಧುಮತೀತಿ ಚ ।
ತಸ್ಮಾನ್ನೈರ್ಋತ್ಯದಿಗ್ಭಾಗೇ ಸ್ಥಾನಂ ಖಂಡಘಟೇತಿ ಚ ॥ ೭ ॥
ತತ್ರ ಪಿಂಗೇಶ್ವರೋ ದೇವಃ ಸಮುದ್ರತಟಸನ್ನಿಧೌ ।
ಕೂಪಾನಾಂ ಸಪ್ತಕಂ ತತ್ರ ಪಿತೄಣಾಂ ಯತ್ರ ಪಾಣಯಃ ।
ದೃಶ್ಯಂತೇಽದ್ಯಾಪಿ ದೇವೇಶಿ ಯತ್ರ ಪರ್ವಣಿ ಪರ್ವಣಿ ॥ ೮ ॥
ತತ್ರ ಶ್ರಾದ್ಧಂ ನರಃ ಕೃತ್ವಾ ಗಯಾಕೋಟಿಗುಣಂ ಫಲಂ ।
ಲಭತೇ ನಾತ್ರ ಸಂದೇಹಃ ಸೋಮಾಮಾ ಯದಿ ಜಾಯತೇ ॥ ೯ ॥
ತತ್ರೈವ ನಾತಿದೂರೇ ತು ಭದ್ರಾಯಾಃ ಸಂಗಮಃ ಸ್ಮೃತಃ ।
ಪಶ್ಚಿಮಾತ್ಸಂಗಮಾತ್ಪೂರ್ವಃ ಸಂಗಮಃ ಸಮುದಾಹೃತಃ ॥ ೧೦ ॥
ಯತ್ಪುಣ್ಯಂ ಲಭತೇ ದೇವಿ ಪೂರ್ವಪಶ್ಚಿಮಸಂಗಮೇ ।
ಗಂಗಾಸಾಗರಯೋಸ್ತತ್ರ ತದ್ಭದ್ರಾಸಂಗಮೇ ಲಭೇತ್ ॥ ೧೧ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತಪ್ತೋದಕಸ್ವಾಮಿಮಾಹಾತ್ಮ್ಯಂಪಿಂಗೇಶ್ವರಭದ್ರಾವರ್ಣನಂ ಚೇತಿ
ತ್ರಯಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ॥

---

೭. ಆ ಕ್ಷೇತ್ರದ ನೈರುತ್ಯದಲ್ಲಿ ಮಧುಮತೀ, ಖಂಡಘಟಾ ಎಂಬ ಸ್ಥಾನಗಳಿರುವವು.

೮. ಅಲ್ಲಿ ಸಮುದ್ರದಡದಲ್ಲಿ ಪಿಂಗೇಶ್ವರದೇವನೂ ಏಳು ಕೂಪಗಳೂ ಇರುವವು. ಅಲ್ಲಿ ಈಗಲೂ ಪ್ರತಿಪರ್ವಕಾಲಗಳಲ್ಲಿ ಪಿತೃಗಳ ಹಸ್ತಗಳು ಕಾಣಿಸುವವು.

೯. ಅಲ್ಲಿ ಸೋಮವಾರ ಅಮಾವಾಸ್ಯೆಯ ದಿನ ಶ್ರಾದ್ಧವನ್ನು ಮಾಡಿದವನು ಗಯಾಶ್ರಾದ್ಧದ ಕೋಟಿಯಷ್ಟು ಹೆಚ್ಚುಫಲಗಳನ್ನು ಪಡೆಯುವನು.

೧೦. ಅಲ್ಲಿಯೇ ಸಮೀಪದಲ್ಲಿ ಭದ್ರಾನದಿಯ ಪೂರ್ವಪಶ್ಚಿಮ ಸಂಗಮಗಳಿರುವುವು.

೧೧. ಗಂಗಾಸಾಗರಗಳ ಸಂಗಮಗಳಲ್ಲಿ ಲಭಿಸುವ ಪುಣ್ಯವು ಆ ಭದ್ರಾನದಿಯ ಸಂಗಮದಲ್ಲುಂಟಾಗುವವು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತಪ್ತೋದಕಸ್ವಾಮಿಮಾಹಾತ್ಮ್ಯ ಮತ್ತು ಪಿಂಗೇಶ್ವರಭದ್ರಾಮಾಹಾತ್ಮ್ಯವರ್ಣನಗಳೆಂಬ
ಮುನ್ನೂರಮೂವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ತಲಸ್ವಾಮಿಮಾಹಾತ್ಮ್ಯವರ್ಣನಂ

ದೇವ್ಯುವಾಚ :—

ಭಗವನ್ದೇವದೇವೇಶ ಸಂಸಾರಾರ್ಣವತಾರಕ ।
ಪೃಚ್ಛಾಮಿ ತ್ವಾಮಹಂ ಭಕ್ತ್ಯಾ ಕಿಂಚಿತ್ಕೌತೂಹಲಾತ್ಪ್ರಭೋ ॥ ೧ ॥
ಯತ್ತ್ವಯಾ ಕಥಿತಂ ದೇವ ತಲಸ್ವಾಮಿಮಹೋದಯಂ ।
ಕಿಂ ತತ್ರ ಕಾರಣಂ ದೇವ ತಲೋ ಯೇನ ನಿಪಾತಿತಃ ॥ ೨ ॥
ಕೋಽಸೌ ತತಃ ಸಮಾಖ್ಯಾತಃ ಕಿಂ ವೀರ್ಯಃ ಕಿಂ ಪರಾಯಣಃ ।
ಕಸ್ಮಾತ್ಸ್ಥಾನಾತ್ಸಮುತ್ಪನ್ನಃ ಕಥಂ ಜಾತಶ್ಚ ಮೇ ವದ ॥ ೩ ॥

ಈಶ್ವರ ಉವಾಚ :—

ಶೃಣು ದೇವಿ ಪ್ರವಕ್ಷ್ಯಾಮಿ ರಹಸ್ಯಂ ಪಾಪನಾಶನಂ ।
ಯನ್ನ ಕಸ್ಯಚಿದಾಖ್ಯಾತಂ ತತ್ತೇ ವಕ್ಷ್ಯಾಮ್ಯಶೇಷತಃ ॥ ೪ ॥

ಕನ್ನಡದ ಅನುವಾದ

ತಲಸ್ವಾಮಿಮಾಹಾತ್ಮ್ಯವರ್ಣನ

೧. ದೇವಿಯು ಹೇಳುತ್ತಾಳೆ :—ಸಂಸಾರ ಸಾಗರವನ್ನು ದಾಟಿಸುವ ಓ ದೇವ ದೇವೇಶ! ಕುತೂಹಲಗೊಂಡ ನಾನು ಭಕ್ತಿಯಿಂದ ನಿನ್ನನ್ನು ಮರಳಿ ಒಂದು ವಿಷಯವನ್ನು ಪ್ರಶ್ನಿಸುವೆನು.

೨. ಸ್ವಾಮಿ! ನೀನು ತಲಸ್ವಾಮಿಯ ಮಹಾತ್ಮ್ಯವನ್ನು ಹೇಳಿರುವೆ. ಅದಕ್ಕೆ ಕಾರಣವೇನು? ತಲನನ್ನು ಯಾರು ಕೊಂದರು?

೩. ಈ ತಲನಾರು? ಅವನು ಎಷ್ಟು ಬಲವುಳ್ಳವನು? ಯಾವ ಕಾರ್ಯದಲ್ಲಿ ಆಸಕ್ತನಾಗಿರುವವನು? ಅವನು ಎಲ್ಲಿ ಹೇಗೆ ಹುಟ್ಟಿದನು? ಅದನ್ನು ನನಗೆ ಹೇಳು.

೪. ಈಶ್ವರನು ಹೇಳುತ್ತಾನೆ:—ದೇವಿ! ಕೇಳು. ನಾನು ಯಾರಿಗೂ ಹೇಳದ ರಹಸ್ಯವನ್ನು ನಿನಗೆ ಹೇಳುವೆನು.

ದೇವಾ ಅಪಿ ನ ಜಾನಂತಿ ತಲಸ್ಯೋತ್ಪತ್ತಿಕಾರಣಂ ।
ಪೂರ್ವಂ ಕೃತಯುಗೇ ದೇವಿ ಗೋವಿಂದೇತಿ ಪ್ರಕೀರ್ತಿತಃ ॥ ೫ ॥
ತ್ರೇತಾಯಾಂ ವಾಮನಃ ಸ್ವಾಮಿಾ ಸ್ತುತಿಸ್ವಾಮಿಾ ತೃತೀಯಕೇ ।
ಕಲೌ ಯುಗೇ ಮಹಾದೇವಿ ತಲಸ್ವಾಮಿಾ ಪ್ರಕೀರ್ತಿತಃ ॥ ೬ ॥
ತಥಾ ತಪ್ತೋದಕಸ್ವಾಮಿಾ ತಸ್ಯ ನಾಮಾಂತರಂ ಪ್ರಿಯೇ ।
ಅಧುನಾ ಸಂಪ್ರವಕ್ಷ್ಯಾಮಿ ತಲೋತ್ಪತ್ತಿಂ ತವ ಪ್ರಿಯೇ ॥ ೭ ॥
ಅಸ್ಮಿನ್ಮಹೇಂದ್ರನಾಮಾ ಚ ದಾನವೋ ರೌದ್ರರೂಪಧೃಕ್ ।
ಕೋಟಿವರ್ಷಾಣಿ ತೇನೈವ ತಪಸ್ತಪ್ತಂ ಪುರಾ ಪ್ರಿಯೇ ॥ ೮ ॥
ಸ ತಪೋಬಲಮಾವಿಷ್ಟೋ ಜಿಗ್ಯೇ ದೇವಾನ್ಸವಾಸವಾನ್ ।
ಜಿತ್ವಾ ದೇವಾಂಸ್ತತಃ ಸರ್ವಾಂಸ್ತತಃ ಕಾಲೇ ಸಮಾಗತಃ ॥ ೯ ॥
ಯುದ್ಧಂ ಸ ಪ್ರಾರ್ಥಯಾಮಾಸ ಮಯಾ ಸಾರ್ಧಂ ಸುಭೀಷಣಂ ।
ತತೋಽಭವನ್ಮಹಾಯುದ್ಧಂ ಬ್ರಹ್ಮಾಂಡಕ್ಷಯಕಾರಕಂ ॥ ೧೦ ॥
ತತಃ ಕೋಪಾನ್ಮಹಾಯುದ್ಧೇ ಮಮ ದೇಹಾದ್ವರಾನನೇ ।
ಜ್ವಾಲಾ ತತ್ರ ಸಮುತ್ಪನ್ನಾ ತನ್ಮಧ್ಯೇ ಸ ತಲೋಽಭವತ್ ॥ ೧೧ ॥

೫-೬. ಆ ತಲನ ಉತ್ಪತ್ತಿ ಕಾರಣವು ದೇವತೆಗಳಿಗೂ ತಿಳಿಯದು. ಹಿಂದೆ ಕೃತಯುಗದಲ್ಲಿ ವಿಷ್ಣುವು ಗೋವಿಂದನೆಂದೂ. ತ್ರೇತಾಯುಗದಲ್ಲಿ ವಾಮನನೆಂದೂ, ದ್ವಾಪರಯುಗದಲ್ಲಿ ಸ್ತುತಿಸ್ವಾಮಿಯೆಂದೂ, ಕಲಿಯುಗದಲ್ಲಿ ತಲಸ್ವಾಮಿ, ತಪ್ತೋದಕ ಸ್ವಾಮಿಯೆಂದೂ ಪ್ರಸಿದ್ಧನಾಗಿದ್ದನು. ಈಗ ತಲನ ಉತ್ಪತ್ತಿಯನ್ನು ನಿನಗೆ ಹೇಳುವೆನು.

೮. ಹಿಂದೆ ಭಯಂಕರರೂಪಿಯಾದ ಮಹೇಂದ್ರನೆಂಬ ದಾನವನಿದ್ದನು. ಅವನು ಕೋಟಿವರ್ಷಗಳಕಾಲ ತಪಸ್ಸನ್ನು ಮಾಡಿದನು.

೯. ಅವನು ತಪೋಬಲದಿಂದ ಇಂದ್ರನಿಂದ ಸಹಿತರಾದ ದೇವತೆಗಳನ್ನು ಜಯಿಸಿ ನನ್ನೆಡೆಗೆ ಬಂದನು.

೧೦. ಅವನು ನನ್ನೊಡನೆ ಭಯಂಕರವಾದ ಯುದ್ಧವನ್ನು ಪ್ರಾರ್ಥಿಸಲು ನನಗೂ ಅವನಿಗೆ ಬ್ರಹ್ಮಾಂಡವನ್ನು ನಾಶಗೊಳಿಸುವ ಘೋರ ಯುದ್ಧವು ನಡೆಯಿತು

೧೧. ಅನಂತರ ಆ ಮಹಾಯುದ್ಧದಲ್ಲಿ ಕುಪಿತನಾದ ನನ್ನ ದೇಹದಿಂದ ಜ್ವಾಲೆಯುಂಟಾಗಲು ಅದರಲ್ಲಿ ಆ ತಲನಿದ್ದನು.

ತೇನ ದೃಷ್ಟೋ ಮಹೇಂದ್ರೋಽಸೌ ಗರ್ಜನ್ಗಿರಿಗುಹಾಶ್ರಯಃ ॥ ೧೨ ॥
ಕಥಂ ಗರ್ಜಸಿ ಹೇ ಮೂಢ ಯುದ್ಧಂ ಕುರು ಮಯಾ ಸಹ ।
ಇತ್ಯುಕ್ತೇ ತತ್ರ ದೇವೇಶಿ ತೇನ ಯುದ್ಧಮವರ್ತತ ॥ ೧೩ ॥
ತತ್ರ ಪ್ರವರ್ತಿತೇ ಯುದ್ಧೇ ತಲಮಾಹೇಂದ್ರಯೋಸ್ತಯೋಃ ॥ ೧೪ ॥
ರುದ್ರವೀರ್ಯಸ್ಯ ಯುಕ್ತೇನ ತಲೇನೋದಾರಕರ್ಮಣಾ ।
ಮಲ್ಲಯುದ್ಧೇನ ಬಲಿನಾ ಮಹೇಂದ್ರೋ ವಿನಿಪಾತಿತಃ ॥ ೧೫ ॥
ತತಸ್ತಂ ಪತಿತಂ ದೃಷ್ಟ್ವಾ ವಿಸ್ಮಯಂ ಸ ತಲೋ ಗತಃ ।
ಗತಪ್ರಾಣಂ ತದಾ ಜ್ಞಾತ್ವಾ ಹರ್ಷಾನ್ನೃತ್ಯಮಥಾಕರೋತ್ ॥ ೧೬ ॥
ತಸ್ಮಿನ್ಸಂನೃತ್ಯಮಾನೇ ತು ಸರ್ವಂ ಸ್ಥಾವರಜಂಗಮಂ ।
ಚಕಂಪೇ ತು ವರಾರೋಹೇ ಪ್ರಭಾವಾತ್ತಸ್ಯ ವೀರ್ಯತಃ ॥ ೧೭ ॥
ತತೋ ಭಾರಭರಾಕ್ರಾಂತಾ ಧರಣೀ ತಲಪೀಡಿತಾ ।
ಅತೀವಭಯಸಂತ್ರಸ್ತಾಃ ಸದೇವಾಸುರಮಾನುಷಾಃ ॥ ೧೮ ॥
ಕ್ಷುಭಿತಾ ಗಿರಯಃ ಸರ್ವೇ ವಿದ್ರುತಾಶ್ಚ ಮಹಾರ್ಣವಾಃ ।
ತರವೋ ನಿಧನಂ ಜಗ್ಮುರ್ನದ್ಯೋ ವಾಹಾಂಶ್ಚ ತತ್ಯಜುಃ ॥ ೧೯ ॥

೧೨-೧೩. ಅವನು ಗಿರಿ ಗುಹೆಯಲ್ಲಿದ್ದು ಗರ್ಜಿಸುತ್ತಿರುವ ಮಹೇಂದ್ರನನ್ನು ನೋಡಿ ಮೂಢ! ಏಕೆ ಗರ್ಜಿಸುತ್ತೀಯೆ? ನನ್ನೊಡನೆ ಯುದ್ಧಮಾಡು, ಎನ್ನಲು ಅವನಿಗೆ ಮಹೇಂದ್ರನೊಡನೆ ಯುದ್ಧವು ನಡೆಯಿತು.

೧೪-೧೫. ಅಲ್ಲಿ ತಲ ಮಹೇಂದ್ರರಿಗೆ ಯುದ್ಧವು ನಡೆಯಲು ಶಿವನ ವೀರ್ಯದಿಂದ ಸಹಿತನಾದ ಬಲಿಷ್ಠನಾದ ತಲನು ಮಹೇಂದ್ರನನ್ನು ಕೆಡವಿದನು.

೧೬. ತರುವಾಯ ಆ ತಲನು ಕೆಳಗೆ ಬಿದ್ದಿರುವ ಮಹೇಂದ್ರನನ್ನು ಕಂಡು ಆಶ್ಚರ್ಯಗೊಂಡು ಅವನು ಮೃತನಾಗಿರುವನೆಂದರಿತು ಸಂತೋಷದಿಂದ ಕುಣಿದನು.

೧೭. ಅವನು ಹೀಗೆ ಕುಣಿಯುತ್ತಿರಲು ಅವನ ಸಾಮರ್ಥ್ಯದಿಂದ ಸ್ಥಾವರ ಜಂಗಮಾತ್ಮಕವಾದ ಪ್ರಪಂಚವೆಲ್ಲ ನಡುಗಿತು.

೧೮. ತರುವಾಯ ತಲನಿಂದ ಪೀಡಿಸಲ್ಪಟ್ಟ ಭೂಮಿಯು ಭಾರಗೊಂಡಿತು. ದೇವ, ದಾನವ, ಮಾನವರು ಅತ್ಯಂತ ಭಯಗೊಂಡರು.

೧೯. ಬೆಟ್ಟಗಳು ಅಲ್ಲಾಡಿದುವು, ಸಮುದ್ರಗಳು ಅಲ್ಲೋಲಕಲ್ಲೋಲವಾದುವು. ಮರಗಳು ಮುರಿದುವು. ನದಿಗಳು ಪ್ರವಾಹವನ್ನುಂಟುಮಾಡಿದುವು.

ಗತಪ್ರಭಾವಾಃ ಸೂರ್ಯಾದ್ಯಾ ಜ್ಯೋತೀಂಷಿ ನ ವಿರೇಜಿರೇ ।
ತ್ರೈಲೋಕ್ಯಂ ವ್ಯಾಕುಲೀಭೂತಂ ತಲಸ್ಯತ್ಯಪ್ರಭಾವತಃ ॥ ೨೦ ॥
ತತೋ ದೇವಗಣಾಃ ಸರ್ವೇ ಶರಣಂ ರುದ್ರಮಾಯಯುಃ ।
ವೃತ್ತಂ ಯಥಾವತ್ಕಥಿತಂ ತತೋ ರುದ್ರ ಉವಾಚ ತಾನ್ ॥ ೨೧ ॥
ಅವಧ್ಯೋ ಮೇ ತಲೋ ದೇವಾಃ ಪುತ್ರತ್ವೇ ಹಿ ಪ್ರತಿಷ್ಠಿತಃ ।
ಏವಮುಕ್ತ್ವಾ ಹೃಷೀಕೇಶಂ ಪ್ರಭಾಸಕ್ಷೇತ್ರವಾಸಿನಂ ॥ ೨೨ ॥
ಸ್ತುತಿಸ್ವಾಮೀತಿನಾಮಾನಂ ಸ್ಥಿತಂ ದುರ್ವಾಸಸಃ ಪುರಃ ।
ಪ್ರಭಾಸಕ್ಷೇತ್ರಸಾಮೀಪ್ಯೇ ಪೂರ್ವಭಾಗೇ ಪ್ರತಿಷ್ಠಿತಂ ॥ ೨೩ ॥
ತಪ್ತೋದಕುಂಭ ಸಾಮೀಪ್ಯೇ ತತ್ರ ಗಚ್ಛತ ಭೋಃ ಸುರಾಃ ।
ಕಲ್ಪೇ ಕಲ್ಪೇ ತು ತೇನೈವ ವಿಧ್ಯತೇಽಸೌ ಹಿ ದಾನವಃ ॥ ೨೪ ॥
ಏವಮುಕ್ತೇ ತದಾ ದೇವಾಃ ಪ್ರಭಾಸಂ ಕ್ಷೇತ್ರಮಾಗತಾಃ ।
ತತ್ರ ತೇ ವಿಬುಧಾ ಜಗ್ಮುರ್ಯತ್ರ ತಪ್ತೋದಕಾಧಿಪಃ ॥ ೨೫ ॥
ದೃಷ್ಟ್ವಾ ನಾರಾಯಣಂ ತತ್ರ ದೇವಾಃ ಶ್ರದ್ಧಾಸಮನ್ವಿತಾಃ ।
ತುಷ್ಟುವುಃ ಪರಯಾ ಭಕ್ತ್ಯಾ ದೇವದೇವಂ ಜನಾರ್ದನಂ ॥ ೨೬ ॥

---

೨೦. ಸೂರ್ಯನೇ ಮೊದಲಾದ ಗ್ರಹಗಳು ಕಳೆಗುಂದಿದುವು. ನಕ್ಷತ್ರಗಳು ಮಿನುಗಲಿಲ್ಲ. ಹೀಗೆ ತಲನ ಕುಣಿತದಿಂದ ಮೂರು ಲೋಕಗಳು ವ್ಯಾಕುಲಗೊಂಡುವು

೨೧. ಅನಂತರ ಸಮಸ್ತ ದೇವತೆಗಳು ರುದ್ರನನ್ನು ಮರೆಹೊಕ್ಕು ನಡೆದ ಸಂಗತಿಗಳನ್ನು ತಿಳಿಸಲು ಅವನು ಅವರನ್ನು ಕುರಿತು ಇಂತೆಂದನು.

೨೨–೨೪. "ಎಲೈ ದೇವತೆಗಳೆ! ನನಗೆ ಪುತ್ರನಂತಿರುವ ತಲನನ್ನು ನಾನು ಕೊಲ್ಲಲಾರೆ, ನೀವು ಪ್ರಭಾಸ ಕ್ಷೇತ್ರದಲ್ಲಿ ದೂರ್ವಾಸರ ಮುಂದೆ ಪೂರ್ವಭಾಗದಲ್ಲಿ ತಪ್ತೋದಕ ಕುಂಡದ ಹತ್ತಿರ ನೆಲೆಸಿರುವ ಸ್ತುತಿಸ್ವಾಮಿಯೆಂದು ಪ್ರಸಿದ್ಧನಾದ ಶ್ರೀ ಹರಿಯನ್ನು ಮರೆಹೋಗಿರಿ, ಪ್ರತಿ ಕಲ್ಪದಲ್ಲಿಯೂ ಅವನೇ ಈ ದಾನವನನ್ನು ಕೊಲ್ಲತಕ್ಕವನು.

೨೫. ರುದ್ರನು ಹೀಗೆನ್ನಲು ಆ ದೇವತೆಗಳು ಪ್ರಭಾಸಕ್ಷೇತ್ರಕ್ಕೆ ಬಂದು ತಪ್ತೋದಕ ಸ್ವಾಮಿಯೆಡೆಗೆ ಹೋದರು.

೨೬. ಅಲ್ಲಿ ದೇವತೆಗಳು ನಾರಾಯಣನನ್ನು ಕಂಡು ಶ್ರದ್ಧಾ ಭಕ್ತಿಯಿಂದ ಅವನನ್ನು ಸ್ತುತಿಸಿದರು.

ವೈಕುಂಠ ತ್ರಾಹಿ ನೋ ದೇವಾಂಸ್ತಲೇನೋಚ್ಚಾಟಿತಾ ವಯಂ ।
ಮಹೇಂದ್ರಕ್ರೋಧಸಂಭೂತರುದ್ರತೇಜೋದ್ಭವೇನ ವೈ ॥ ೨೭ ॥
ಅಸ್ಮಾಭೀ ರುದ್ರಸಾಮೀಪ್ಯೇ ಕಾರ್ಯಂ ಸರ್ವಂ ನಿವೇದಿತಂ ।
ತತಃ ಪ್ರಸ್ಥಾಪಿತಾಃ ಸರ್ವೇ ರುದ್ರೇಣ ಪರಮೇಷ್ಠಿನಾ ।
ತವ ಪಾರ್ಶ್ವೇ ಮಹಾದೇವ ನಸ್ತ್ವಂ ದೇವ ಗತಿರ್ಭವ ॥ ೨೮ ॥
ಇತಿ ಶ್ರುತ್ವಾ ವಚಸ್ತೇಷಾಂ ದೇವದೇವೋ ಜನಾರ್ದನಃ ।
ದಾನವಸ್ಯ ವಧಾರ್ಥಾಯ ದೇವಾನಾಂ ರಕ್ಷಣಾಯ ಚ ।
ಚಕ್ರೇ ಯತ್ನಂ ಮಹಾಬಾಹುಃ ಪ್ರಭಾಸಕ್ಷೇತ್ರವಲ್ಲಭಃ ॥ ೨೯ ॥
ಸಮಾಹೂಯ ತದಾ ದೈತ್ಯಂ ಪ್ರಭಾಸಕ್ಷೇತ್ರಮಧ್ಯತಃ ।
ಯುದ್ಧಂ ಚಕ್ರೇ ತತೋ ದೇವಿ ವಿಶ್ವಪ್ರಲಯಕಾರಕಂ ॥ ೩೦ ॥
ತತಸ್ತು ದೇವಾಃ ಸರ್ವೇ ಚ ಸ್ವಸೈನ್ಯಪರಿವಾರಿತಾಃ ।
ಚಕ್ರುರ್ಯುದ್ಧಂ ಚ ದೈತ್ಯೇನ ಸುಮಹಲ್ಲೋಮಹರ್ಷಣಂ ॥ ೩೧ ॥
ತತಃ ಪರ್ವತಸಂಕಾಶಂ ದೃಷ್ಟ್ವಾ ದೈತ್ಯಂ ಮಹಾಬಲಂ ।
ಉವಾಚ ಚಪಲಾಪಾಂಗೋ ಗರುಡಕೃತವಾಹನಃ ॥ ೩೨ ॥

---

೨೭. "ನಾರಾಯಣ! ಮಹೇಂದ್ರದಾನವನಲ್ಲಿರುವ ಕೋಪದಿಂದುಂಟಾದ ರುದ್ರನ ತೇಜಸ್ಸಿನಿಂದ ಹುಟ್ಟಿದ ತಲನು ನಮ್ಮನ್ನು ಓಡಿಸಿರುವನು. ಕಾಪಾಡು.

೨೮. ನಾವು ರುದ್ರನ ಹತ್ತಿರ ಆ ತಲನ ಕಾರ್ಯವನ್ನೆಲ್ಲ ತಿಳಿಸಿದೆವು. ಆ ರುದ್ರನು ನಮ್ಮನ್ನು ನಿನ್ನ ಬಳಿಗೆ ಕಳುಹಿಸಿದನು. ನೀನೇ ನಮಗೆ ಗತಿಯು".

೨೯. ಪ್ರಭಾಸಕ್ಷೇತ್ರ ಪ್ರಿಯನಾದ ನಾರಾಯಣನು ದೇವತೆಗಳ ಈ ಮಾತನ್ನು ಕೇಳಿ ಆ ದಾನವನ ನಾಶಕ್ಕೂ, ದೇವತೆಗಳ ರಕ್ಷಣೆಗೂ ಪ್ರಯತ್ನಿಸಿದನು.

೩೦. ಅವನು ಪ್ರಭಾಸ ಕ್ಷೇತ್ರಮಧ್ಯದಲ್ಲಿ ಆ ತಲದೈತ್ಯನನ್ನು ಕರೆದು ಪ್ರಪಂಚವನ್ನು ಪ್ರಳಯಗೊಳಿಸುವ ಯುದ್ಧವನ್ನು ಮಾಡಿದನು.

೩೧. ತರುವಾಯ ದೇವತೆಗಳೂ ತಮ್ಮ ಸೈನ್ಯದಿಂದೊಡಗೂಡಿ ಆ ದೈತ್ಯನೊಡನೆ ರೋಮಾಂಚವನ್ನುಂಟುಮಾಡುವ ಘೋರಯುದ್ಧವನ್ನು ಮಾಡಿದರು.

೩೨. ಗರುಡವಾಹನನಾದ ನಾರಾಯಣನು ಪರ್ವತದಂತಿರುವ ಆ ಬಲಿಷ್ಠನಾದ ದೈತ್ಯನನ್ನು ನೋಡಿ ಇಂತೆಂದನು.

ಅಹೋ ದೈತ್ಯ ಮಹಾಬಾಹೋ ಮಲ್ಲಯುದ್ಧಂ ದದಸ್ವ ಮೇ ।
ತ್ವದ್ಬಾಹುಯುಗಲಂ ದೃಷ್ಟ್ವಾ ನ ಯುದ್ಧೇ ವಾಂಛಿತಂ ಮಮ ॥ ३३ ॥
ನಾರಾಯಣವಚಃ ಶ್ರುತ್ವಾ ಕರಮುದ್ಯಮ್ಯ ದಾನವಃ ।
ಅಭ್ಯಧಾವತ್ತದಾ ದೈತ್ಯಃ ಕಾಲಾಂತಕಸಮಪ್ರಭಃ ॥ ३४ ॥
ತತಃ ಪ್ರವರ್ತಿತಂ ಯುದ್ಧಮನ್ಯೋಽನ್ಯಂ ಜಯಕಾಂಕ್ಷಿಣೋಃ ।
ಜಂಘಾಭ್ಯಾಂ ಪಾದಬಂಧೇನ ಬಾಹುಭ್ಯಾಂ ಬಾಹುಬಂಧನಂ ॥ ३५ ॥
ಕಂಠೇನ ಬಂಧಯನ್ಕಂಠಮುದರೇಣೋದರಂ ತಥಾ ।
ಏತಸ್ಮಿನ್ನಂತರೇ ದೇವಾಃ ಸಭಯಾಃ ಸಂಬಭೂವಿರೇ ॥ ३६ ॥
ತತಃ ಪೀಡಾಸಮಾಕಾಂತ್ರೋ ವಿಷ್ಣುಃ ಸಂಸ್ಮರತೇ ಹರಂ ।
ತತ್ಕ್ಷಣಾದಾಗತೋ ರುದ್ರಃ ಕಿಂ ಕರೋಮಿ ಮಹಾಬಲ ॥ ३७ ॥

ವಿಷ್ಣುರುವಾಚ :—

ಶ್ರಾಂತೋಽಹಂ ದೇವದೇವೇಶ ಮಲ್ಲಯುದ್ಧೇನ ಶಂಕರ ।
ತಪ್ತೋದಕಂ ಕುರುಷ್ವೇಹ ಶ್ರಮನಾಶಾಯ ಸಾಂಪ್ರತಂ ॥ ३८ ॥
ತತಸ್ತ್ವಲಂ ಹನಿಷ್ಯಾಮಿ ಕ್ಷಣಮಾತ್ರೇಣ ಭೈರವಂ ॥ ३९ ॥

---

३३. ಬಲಿಷ್ಠನಾದ ದೈತ್ಯನೆ ! ನನ್ನೊಡನೆ ಮಲ್ಲಯುದ್ಧವನ್ನು ಮಾಡು. ನಿನ್ನ ತೋಳನ್ನು ನೋಡಿ ನಾನು ಬೇರೆಯುದ್ಧವನ್ನು ಮಾಡಲು ಬಯಸುವುದಿಲ್ಲ.

३४. ಪ್ರಳಯಕಾಲದ ಯಮನಂತಿರುವ ಆ ದೈತ್ಯನು ನಾರಾಯಣನ ಮಾತನ್ನು ಕೇಳಿ ಕೈಯನ್ನು ಎತ್ತಿಕೊಂಡು ಅವನನ್ನು ಎದುರುಗೊಂಡನು.

३५–३६. ತರುವಾಯ ಪರಸ್ಪರ ಜಯವನ್ನು ಅಪೇಕ್ಷಿಸುವ ಆ ನಾರಾಯಣ ಮತ್ತು ತಲರಿಗೆ ಮೊಣಕಾಲು, ಪಾದ, ತೋಳು, ಕಂಠ, ಹೊಟ್ಟೆ ಇವುಗಳ ಬಂಧನದಿಂದ ಘೋರಯುದ್ಧವು ನಡೆಯಿತು. ಇಷ್ಟರಲ್ಲಿ ದೇವತೆಗಳು ಭಯಗೊಂಡರು.

३७. ಬಳಿಕ ತಲನಿಂದ ಪೀಡಿತನಾದ ವಿಷ್ಣುವು ಹರನನ್ನು ಸ್ಮರಿಸಿದನು. ಕೂಡಲೆ ರುದ್ರನು ಅಲ್ಲಿಗೆ ಬಂದನು. ಅವನು ಈ "ದೈತ್ಯನು ಅತಿ ಬಲಿಷ್ಠನು, ನಾನು ಏನು ಮಾಡಲಿ" ಎಂದನು.

३८. ವಿಷ್ಣುವು ಹೇಳುತ್ತಾನೆ :—ಶಂಕರ ! ನಾನು ಮಲ್ಲಯುದ್ಧದಿಂದ (ಜಟ್ಟಿಕಾಳಗದಿಂದ) ಬಳಲಿದ್ದೇನೆ. ಈಗ ನನ್ನ ಶ್ರಮಪರಿಹಾರಕ್ಕಾಗಿ ಇಲ್ಲಿ ಬಿಸಿ ನೀರನ್ನುಂಟುಮಾಡು.

३९. ಕೂಡಲೆ ಒಂದು ಕ್ಷಣದಲ್ಲಿ ನಾನು ತಳನನ್ನು ಕೊಲ್ಲುವೆನು.

ಈಶ್ವರ ಉವಾಚ :—
ಆದೌ ಕೃತಯುಗೇ ಕೃಷ್ಣ ಉಮಯಾ ಯತ್ಕೃತಂ ಪುರಾ ।
ಋಷೀಣಾಂ ಶ್ರಮನಾಶಾರ್ಥಂ ತಪ್ತೋದಂ ತತ್ರ ನಿರ್ಮಿತಂ ॥ ೪೦ ॥
ತದ್ದೈತ್ಯಪಾಪಮಾಹಾತ್ಮ್ಯಾತ್ಪುನಃ ಶೀತಲತಾಂ ಗತಂ ।
ಪುನಸ್ತದುಷ್ಣತಾಂ ನೀತಂ ತತಃ ಕಲ್ಪಾಂತಸಂಸ್ಥಿತೌ ॥ ೪೧ ॥
ಏವಮುಕ್ತ್ವಾ ತದಾ ದೇವಂ ವೀಕ್ಷಾಂಚಕ್ರೇ ಮಹೇಶ್ವರಃ ।
ತೃತೀಯಲೋಚನೇನೈವ ಜ್ವಾಲಾಮಾಲೋಪಶೋಭಿನಾ ॥ ೪೨ ॥
ತೇನ ಜ್ವಾಲಾಸಮೂಹೇನ ವ್ಯಾಪ್ತಂ ಕುಂಡಂ ಚತುರ್ದಿಶಂ ।
ತಪ್ತೋದಕುಂಡಮಭವತ್ತೇನ ಖ್ಯಾತಂ ಧರಾತಲೇ ॥ ೪೩ ॥
ತತೋ ನಾರಾಯಣೇನೇಹ ಕ್ಷಾಲಿತಂ ಗಾತ್ರಮುತ್ತಮಂ ।
ಕ್ಷಾಲನಾತ್ತಸ್ಯ ದೇವಸ್ಯ ಶ್ರಮೋ ನಾಶಮುಪಾಗತಂ ॥ ೪೪ ॥
ತತಸ್ತುಷ್ಟಮನಾ ದೇವಸ್ತೀರ್ಥಾನಾಂ ದಶಕೋಟಿಕಾಃ ।
ಸ ಸ್ಮೃತ್ವಾ ತತ್ರ ವಿಧಿವತ್ಕ್ಷಿಪ್ತ್ವಾ ಸ್ನಾತ್ವಾ ವರಾನನೇ ॥ ೪೫ ॥
ತತಶ್ಚಕ್ರೇ ಮಹಾಯುದ್ಧಂ ತಲೇನಾತಿಭಯಂಕರಂ ।
ಜಘಾನ ಸ ತಲಂ ದೈತ್ಯಂ ಮುಷ್ಟಿಘಾತೇನ ಮಸ್ತಕೇ ॥ ೪೬ ॥

---

೪೦. ಈಶ್ವರನು ಹೇಳುತ್ತಾನೆ :—ಕೃಷ್ಣ ! ಮೊದಲನೆಯ ಕೃತಯುಗದಲ್ಲಿ ಪಾರ್ವತಿಯು ಋಷಿಗಳ ಶ್ರಮಪರಿಹಾರಕ್ಕಾಗಿ ತಪ್ತೋದಕ ಕುಂಡವನ್ನು ನಿರ್ಮಿಸಿದಳು.

೪೧. ಅದು ದೈತ್ಯನ ಪಾಪಮಾಹಾತ್ಮ್ಯದಿಂದಮರಳಿ ತಣ್ಣಗಾಯಿತು. ಬಳಿಕ ಕಲ್ಪಾಂತದಲ್ಲಿ ತಿರುಗಿ ಅದನ್ನು ಉಷ್ಣಗೊಳಿಸಿದಳು.

೪೨. ಮಹೇಶ್ವರನು ವಿಷ್ಣುವನ್ನು ಕುರಿತು ಇಂತೆಂದು ನುಡಿದು ಜ್ವಾಲೆಗಳಿಂದ ಶೋಭಿಸುತ್ತಿರುವ ತೃತೀಯ ಲೋಚನದಿಂದ ಆ ಕುಂಡವನ್ನು ಕಂಡನು.

೪೩. ಆ ಜ್ವಾಲೆಯ ಸಮೂಹದಿಂದ ಆ ಕುಂಡವು ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪ್ತವಾಗಿ ತಪೋದಕ ಕುಂಡವೆಂದು ಪ್ರಪಂಚದಲ್ಲಿ ವಿಖ್ಯಾತವಾಯಿತು.

೪೪. ಅನಂತರ ನಾರಾಯಣನು ತನ್ನ ಉತ್ತಮವಾದ ದೇಹವನ್ನು ಅಲ್ಲಿ ತೊಳೆದುಕೊಳ್ಳಲು ಕೂಡಲೆ ಶ್ರಮವು ಪರಿಹಾರವಾಯಿತು.

೪೫–೪೬. ಅನಂತರ ವಿಷ್ಣುವು ಸಂತುಷ್ಟನಾಗಿ ಹತ್ತು ಕೋಟಿ ತೀರ್ಥಗಳನ್ನು ಸ್ಮರಿಸಿ ಅವುಗಳನ್ನು ಆ ತಪ್ತ ಕುಂಡೋದಕದಲ್ಲಿ ಬೆರೆಸಿ ಮಿಂದು ಆ ತಲನೊಡನೆ ಘೋರ ಕಾಳಗ ಮಾಡಿ ತಲೆಗೆ ಮುಷ್ಟಿಯಿಂದ ಗುದ್ದಿದನು.

ತಸ್ಮಿನ್ಪ್ರವೃತ್ತೇ ತುಮುಲೇ ತು ಯುದ್ಧೇ ।
ಚಕಂಪಿರೇ ಭೂಮಿಸಮೇತಲೋಕಾಃ ।
ವಿತ್ರಸ್ತದೇವಾ ನ ದಿಶೋ ವಿರೇಜು
ರ್ಮಹಾಂಧಕಾರಾವೃತಮೂರ್ಚ್ಛಿತಂ ಜಗತ್ ॥ ೪೭ ॥

ನಷ್ಟಾಶ್ಚ ಸಿದ್ಧಾ ಜಗತೋಽಸ್ಯ ಶಾಂತಿಂ ।
ಕರೋತು ವೈ ಪಾಪವಿನಾಶನೋ ಹರಿಃ ।
ತ್ರಾಹೀತಿ ದೇವೇಶಿ ಮಹರ್ಷಿಸಂಘಾ
ಭೂತಾನಿ ಭೀತಾನಿ ತಥಾ ವದಂತಿ ॥ ೪೮ ॥

ತತೋ ವೈ ಮಲ್ಲಯುದ್ಧೇನ ಪಾತಿತೋ ಭುವಿ ದಾನವಃ ।
ಕಂಠಮಾಕ್ರಮ್ಯ ಪಾದೇನ ಖಡ್ಗೇನ ಪರಿಪೀಡಿತಃ ॥ ೪೯ ॥

ಹಾಸ್ಯಂ ಚಕಾರ ದೈತ್ಯೋಽಥ ವಿಷ್ಣುನಾಕ್ರಾಂತಕಂಧರಃ ।
ತಮಾಹ ಪುಂಡರೀಕಾಕ್ಷ ಕಿಮೇತದ್ಧಾಸ್ಯಕಾರಣಂ ॥ ೫೦ ॥

ವೃದ್ಧ್ಯಾ ಹರ್ಷಮವಾಪ್ನೋತಿ ಕ್ಷಯೇ ಭವತಿ ದುಃಖಿತಃ ।
ಇತ್ಯೇಷಾ ಲೌಕಿಕೀ ಗಾಥಾ ತತ್ತೇ ದೈತ್ಯ ವಿಪರ್ಯಯಃ ॥ ೫೧ ॥

೪೭–೪೮. ಆ ದ್ವಂದ್ವಯುದ್ಧವು ಆರಂಭವಾಗಲು ಭೂಮಿಯೊಡನೆ ಸಮಸ್ತ ಲೋಕಗಳೂ ನಡುಗಿದುವು, ದಿಕ್ಕುಗಳು ಭಯಗೊಂಡ ದೇವತೆಗಳುಳ್ಳುವಾಗಿ ಪ್ರಕಾಶಿಸಿದುವು, ಲೋಕವು ಕತ್ತಲೆಯಿಂದ ವ್ಯಾಪ್ತವಾಯಿತು, ಸಿದ್ಧರು ನಷ್ಟರಾದರು. ದೇವೇಶಿ ! ಮಹರ್ಷಿಗಳೂ, ಪ್ರಾಣಿಗಳೂ ಭಯಗೊಂಡು ಪಾಪವನ್ನು ಪರಿಹರಿಸುವ ವಿಷ್ಣುವು ಈ ಜಗತ್ತಿಗೆ ಶಾಂತಿಯನ್ನುಂಟುಮಾಡಲಿ, ನಮ್ಮನ್ನು ಕಾಪಾಡಲಿ, ಎಂದು ಮರುಗಿದರು.

೪೯. ಬಳಿಕ ವಿಷ್ಣುವು ಮಲ್ಲಯುದ್ಧದಿಂದ ಆ ತಲ ದಾನವನನ್ನು ಕೆಡವಿ ಕಾಲಿನಿಂದ ಕುತ್ತಿಗೆಯನ್ನು ತುಳಿದು ಕತ್ತಿಯಿಂದ ಕಡಿದನು.

೫೦–೫೧. ಹಾಗೆ ವಿಷ್ಣುವು ಕುತ್ತಿಗೆಯನ್ನು ತುಳಿಯುತ್ತಿರಲು ತಲನು ನಕ್ಕನು. ಆಗ ವಿಷ್ಣುವು ಆ ದೈತ್ಯನನ್ನು ಕುರಿತು ನೀನು ನಗಲು ಕಾರಣವೇನು ? ಮಾನವನು ಸಂಪತ್ತಿನ ವೃದ್ಧಿಯಲ್ಲಿ ಸಂತೋಷಗೊಳ್ಳುವನು, ಸಂಪತ್ತಿನ ನಾಶದಲ್ಲಿ ದುಃಖಗೊಳ್ಳುವನು ಎಂದು ಲೋಕದ ಗಾದೆಯಿರುವುದು, ಅದು ನಿನ್ನಲ್ಲಿ ವ್ಯತ್ಯಾಸವಾಗಿ ತೋರುವುದು.

ಇತ್ಯುಕ್ತಸ್ತು ತದಾ ದೈತ್ಯಃ ಪ್ರತ್ಯುವಾಚ ಜನಾರ್ದನಂ ।
ಅಗ್ನಿಷ್ಟೋಮಾದಿಭಿರ್ಯಜ್ಞೈರ್ವೇದಾಭ್ಯಾಸೈರನೇಕಧಾ ॥ ೫೨ ॥
ನಿತ್ಯೋಪವಾಸನಿಯಮೈಃ ಸ್ನಾನದಾನೈರ್ಜಪಾದಿಭಿಃ ।
ನಿರ್ಮಲೈರ್ಯೋಗಯುಕ್ತೈಶ್ಚ ಪ್ರಾಪ್ಯತೇ ಯತ್ಪರಂ ಪದಂ ॥ ೫೩ ॥
ತನ್ಮಯಾ ದುಷ್ಟಭಾವೇನ ಪ್ರಾಪ್ತಂ ವಿಷ್ಣೋಃ ಪರಂ ಪದಂ ।
ಇತ್ಯುಕ್ತೇ ಭಗವಾನ್ವಿಷ್ಣುರ್ವರದಾನಪರೋಽಭವತ್ ॥ ೫೪ ॥
ಉವಾಚ ಪರಮಂ ವಾಕ್ಯಂ ತಲಂ ದೈತ್ಯಾಧಿನಾಯಕಂ ।
ವರಂ ವರಯ ದೈತ್ಯೇಂದ್ರ ಯತ್ತೇ ಮನಸಿ ಸಂಸ್ಥಿತಂ ॥ ೫೫ ॥
ಇತಿ ವಿಷ್ಣೋರ್ವಚಃ ಶ್ರುತ್ವಾ ಪ್ರಾರ್ಥಯಾಮಾಸ ದಾನವಃ ।
ಮಮಾಖ್ಯಾ ವರ್ತತೇ ಲೋಕೇ ತಥಾ ಕುರು ಮಹೀಧರ ॥ ೫೬ ॥
ಮಾರ್ಗಮಾಸೇ ತು ಶುಕ್ಲಾಯಾಮೇಕಾದಶ್ಯಾಂ ಸಮಾಹಿತಃ ।
ಯಸ್ತ್ವಾಂ ಪಶ್ಯತಿ ಭಾವೇನ ತಸ್ಯ ಪಾಪಂ ವಿನಶ್ಯತು ॥ ೫೭ ॥
ಏವಂ ಭವಿಷ್ಯತೀತ್ಯುಕ್ತ್ವಾ ದೇವೋ ಹರ್ಷಮುಪಾಗತಃ ।
ನಾನಾದುಂದುಭಯೋ ನೇದುಃ ಪುಷ್ಪವರ್ಷಂ ಪಪಾತ ಚ ॥ ೫೮ ॥

೫೨-೫೪. ವಿಷ್ಣುವು ಹೀಗೆನ್ನಲು ತಲನು ಹೀಗೆ ಪ್ರತ್ಯುತ್ತರವಿತ್ತನು. ಅಗ್ನಿಷ್ಟೋಮ ಮೊದಲಾದ ಯಜ್ಞಗಳಿಂದಲೂ, ಅನೇಕ ಬಗೆಯ ವೇದಾಭ್ಯಾಸದಿಂದಲೂ, ನಿತ್ಯೋಪವಾಸ ವ್ರತಗಳಿಂದಲೂ, ಸ್ನಾನ, ಜಪಗಳಿಂದಲೂ, ನಿರ್ಮಲ ಯೋಗಗಳಿಂದಲೂ ಪಡೆಯಲರ್ಹವಾದ ಉತ್ತಮ ವಿಷ್ಣುಪದವನ್ನು ನಾನು ದುಷ್ಟತನದಿಂದ ಹೊಂದಿದೆನು." ತಲನು ಹೀಗೆನ್ನಲು ವಿಷ್ಣುವು ಅವನಿಗೆ ವರವನ್ನೀಯಲುದ್ಯುಕ್ತನಾದನು.

೫೫. ಅವನು ಆ ದೈತ್ಯನಾಯಕನಾದ ತಲನನ್ನು ಕುರಿತು, "ದೈತ್ಯೇಂದ್ರ ! ನಿನಗಿಷ್ಟವಾದ ವರವನ್ನು ಕೇಳಿಕೋ" ಎಂದನು.

೫೬. ಆಗ ತಲ ದಾನವನು ವಿಷ್ಣುವಿನ ಮಾತನ್ನು ಕೇಳಿ ಹೀಗೆ ಬೇಡಿಕೊಂಡನು. "ವರಾಹ ರೂಪಿಯಾಗಿ ಭೂಮಿಯನ್ನುದ್ಧರಿಸಿದ ವಿಷ್ಣುವೆ ! ನನ್ನ ಹೆಸರು ಲೋಕದಲ್ಲಿ ನಿಲ್ಲುವಂತೆ ಮಾಡು.

೫೭. ಮಾರ್ಗಶೀರ್ಷ ಮಾಸದ ಶುಕ್ಲಪಕ್ಷದ ಏಕಾದಶೀ ದಿನ ನಿನ್ನನ್ನು ಭಕ್ತಿಯಿಂದ ದರ್ಶನ ಮಾಡಿದವನ ಪಾಪವು ಪರಿಹಾರವಾಗಲಿ."

೫೮-೫೯. ವಿಷ್ಣುವು ಹಾಗೆಯೇ ಆಗಲೆಂದುಸುರಿ ಸಂತೋಷಗೊಂಡನು. ನಾನಾ ನಗಾರಿಗಳು ಮೊಳಗಿದುವು. ವಿಷ್ಣುವಿನ ತಲೆಯಮೇಲೆ ಪುಷ್ಪವೃಷ್ಟಿಯಾಯಿತು.

ವಿಷ್ಣೋರ್ಮೂರ್ಧ್ನಿ ಮಹಾಭಾಗೇ ಲೋಕಾಃ ಸ್ವಸ್ಥಾ ಬಭೂವಿರೇ ।
ತತೋ ದೇವಗಣಾಃ ಸರ್ವೇ ನೃತ್ಯಂತಿ ಚ ಮುದಾನ್ವಿತಾಃ ।
ವದಂತಿ ಹರ್ಷಸಂಯುಕ್ತಾ ನಾರಾಯಣಪರಾಯಣಾಃ ॥ ೫೯ ॥
ಏತತ್ತೀರ್ಥಂ ಮಹಾತೀರ್ಥಂ ಸರ್ವಪಾಪಪ್ರಣಾಶನಂ ।
ಶ್ರಮಾಪನೋದನಂ ವಿಷ್ಣೋರ್ಬ್ರಹ್ಮಹತ್ಯಾದಿಶೋಧನಂ ॥ ೬೦ ॥
ಸ್ಥಿತೋ ನಾರಾಯಣಸ್ತತ್ರ ಭೈರವಸ್ತತ್ರ ಶಂಕರಃ ।
ಕ್ಷೇತ್ರಪಾಲಸ್ವರೂಪೇಣ ಕಾಲಮೇಘೇತಿ ವಿಶ್ರುತಃ ॥ ೬೧ ॥
ತಸ್ಯ ಯಾತ್ರಾವಿಧಿಂ ವಕ್ಷ್ಯೇ ಗತ್ವಾ ತತ್ರ ಶುಚಿರ್ನರಃ ।
ಸ್ಮರೇದ್ವಿಷ್ಣುಂ ಮಹಾದೇವಿ ತಲಸ್ವಾಮೀತಿ ಯಃ ಶ್ರುತಃ ॥ ೬೨ ॥
ಸ್ತುಯಾದ್ವಿಷ್ಣುಂ ಮಹಾದೇವಿ ಇದಂ ವಿಷ್ಣುಋಚಾ ಪ್ರಿಯೇ ।
ಸಹಸ್ರಶೀರ್ಷಾಮಂತ್ರೇಣ ತರ್ಪಣಾದಿ ಪ್ರಕಾರಯೇತ್ ॥ ೬೩ ॥
ಏವಂ ಸ್ನಾತ್ವಾ ವಿಧಾನೇನ ದತ್ವಾ ಚಾರ್ಘ್ಯಂ ಜನಾರ್ದನೇ ।
ಸಂಪೂಜ್ಯ ಗಂಧಪುಷ್ಪೈಶ್ಚ ವಸ್ತ್ರೈಃ ಪುಷ್ಪಾನುಲೇಪನೈಃ ॥ ೬೪ ॥
ಮಧುನೇಕ್ಷುರಸೇನೈವ ಕುಂಕುಮೇನ ವಿಲೇಪಯೇತ್ ।
ಕರ್ಪೂರರೋಶೀರಮಿಶ್ರೇಣ ಮೃಗನಾಭಿಯುತೇನ ಚ ॥ ೬೫ ॥

ಜನರು ಸುಖಗೊಂಡರು. ಬಳಿಕ ದೇವತೆಗಳೆಲ್ಲ ನಾರಾಯಣನಲ್ಲಿ ಭಕ್ತಿಯುಳ್ಳವರಾಗಿ ಸಂತೋಷದಿಂದ ಕುಣಿದರು.

೬೦. ಈ ತೀರ್ಥವು ಸಕಲ ಪಾಪಗಳನ್ನು ಪರಿಹರಿಸುವುದೂ, ಶ್ರಮವನ್ನೂ, ಬ್ರಹ್ಮಹತ್ಯೆಗಳನ್ನೂ ನಿವಾರಿಸುವುದೂ ಆಗಿರುವುದು.

೬೧. ಅಲ್ಲಿ ನಾರಾಯಣನೂ, ಕಾಲಮೇಘನೆಂದು ಪ್ರಸಿದ್ಧನೂ, ಕ್ಷೇತ್ರಪಾಲ ಸ್ವರೂಪನೂ ಆದ ಶಂಕರನೂ ನೆಲೆಸಿರುವರು.

೬೨. ಈಗ ಆ ಕ್ಷೇತ್ರದ ಯಾತ್ರಾಕ್ರಮವನ್ನು ಹೇಳಿರುವೆನು. ಮಾನವನು ಅಲ್ಲಿ ಶುದ್ಧನಾಗಿ ತಲಸ್ವಾಮಿಯೆಂದು ಪ್ರಸಿದ್ಧನಾದ ವಿಷ್ಣುವನ್ನು ಸ್ಮರಿಸಬೇಕು.

೬೩. ಅವನನ್ನು ಇದಂ ವಿಷ್ಣು ಇತ್ಯಾದಿ ಮಂತ್ರದಿಂದಲೂ, ಸಹಸ್ರ ಶೀರ್ಷೇತ್ಯಾದಿ ಮಂತ್ರದಿಂದಲೂ ಸ್ತುತಿಸಿ ತರ್ಪಣ ಮೊದಲಾದುವುಗಳನ್ನು ಮಾಡಬೇಕು.

೬೪-೬೬. ಹೀಗೆ ವಿಧಿಪ್ರಕಾರ ಮಿಂದು ವಿಷ್ಣುವಿಗೆ ಅರ್ಘ್ಯವನ್ನಿತ್ತು ಅವನನ್ನು ಗಂಧ, ಪುಷ್ಪ, ವಸ್ತ್ರಗಳಿಂದ ಪೂಜಿಸಿ ಜೇನು, ಬೆಲ್ಲ, ಕುಂಕುಮ, ಕರ್ಪೂರ,

ವಸ್ತ್ರೈಃ ಸಂವೇಷ್ಟಯೇತ್ಪಶ್ಚಾದ್ದದ್ಯಾನ್ನೈವೇದ್ಯಮುತ್ತಮಂ ।
ಧರ್ಮಶ್ರವಣಸಂಯುಕ್ತಂ ಕಾರ್ಯಂ ಜಾಗರಣಂ ತತಃ ॥ ೬೬ ॥
ವೃಷಭಸ್ತತ್ರ ದಾತವ್ಯಃ ಸುವರ್ಣಂ ವಸ್ತ್ರಯುಗ್ಮಕಂ ।
ವಿಪ್ರಾಯ ವೇದಯುಕ್ತಾಯ ಶ್ರೋತ್ರಿಯಾಯ ಪ್ರದಾಪಯೇತ್ ॥ ೬೭ ॥
ಉಪವಾಸಂ ತತಃ ಕುರ್ಯಾತ್ತಸ್ಮಿನ್ನಹನಿ ಭಾಮಿನಿ ।
ರುಕ್ಮಿಣೀಂ ಚ ಪ್ರಪಶ್ಯೇತ ನಮಸ್ಕೃತ್ಯ ಜನಾರ್ದನಂ ॥ ೬೮ ॥
ಏವಂ ಕೃತ್ವಾ ನರೋ ಭಕ್ತ್ಯಾ ಲಭತೇ ಜನ್ಮಜಂ ಫಲಂ ।
ಸರ್ವೇಷಾಮೇವ ಯಜ್ಞಾನಾಂ ದಾನಾನಾಂ ಲಭತೇ ಫಲಂ ॥ ೬೯ ॥
ತಥಾ ಚ ಸರ್ವತೀರ್ಥಾನಾಂ ವ್ರತಾನಾಂ ಲಭತೇ ಫಲಂ ।
ಉದ್ಧರೇತ್ತು ಪಿತುರ್ವರ್ಗಂ ಮಾತೃವರ್ಗಂ ತಥೈವ ಚ ॥ ೭೦ ॥
ಜನ್ಮಪ್ರಭೃತಿಪಾಪಾನಾಂ ಕೃತಾನಾಂ ನಾಶನಂ ಭವೇತ್ ।
ನ ದುಃಖಂ ಚ ನ ದಾರಿದ್ರ್ಯಂ ದುರ್ಭಗತ್ವಂ ನ ಜಾಯತೇ ॥ ೭೧ ॥
ಸಪ್ತಜನ್ಮಾಂತರಂ ಯಾವತ್ತಲಸ್ವಾಮಿಪ್ರದರ್ಶನಾತ್ ।
ಸುವರ್ಣಾನಾಂ ಸಹಸ್ರೇಣ ಬ್ರಾಹ್ಮಣೇ ವೇದಪಾರಗೇ ।
ದತ್ತೇ ಚ ಯತ್ಫಲಂ ದೇವಿ ತತ್ಕುಂಡೇ ಸ್ನಾನತೋ ಲಭೇತ್ ॥ ೭೨ ॥

ಲಾವಂಚ, ಕಸ್ತೂರಿಗಳನ್ನು ಲೇಪಿಸಿ ವಸ್ತ್ರವನ್ನುಡಿಸಿ ನೈವೇದ್ಯವನ್ನರ್ಪಿಸಿ ರಾತ್ರಿ ಧರ್ಮಶ್ರವಣಗೈಯುತ್ತ ಜಾಗರಣೆ ಮಾಡಬೇಕು.

೬೭. ವೇದಾಧ್ಯಯನಸಂಪನ್ನನೂ, ಶ್ರೋತ್ರಿಯನೂ ಆದ ಬ್ರಾಹ್ಮಣನಿಗೆ ಬ್ರಾಹ್ಮಣನಿಗೆ ವೃಷಭ, ಸುವರ್ಣ, ಮತ್ತು ಯುಗ್ಮ ವಸ್ತ್ರಗಳನ್ನು ದಾನಮಾಡಬೇಕು.

೬೮. ಪ್ರಿಯಳೆ! ಆದಿನ ಉಪವಾಸಮಾಡಬೇಕು. ಮೊದಲು ವಿಷ್ಣುವನು ವಂದಿಸಿ ಅನಂತರ ರುಕ್ಮಿಣಿಯ ದರ್ಶನವನ್ನು ಮಾಡಬೇಕು.

೬೯. ಹೀಗೆ ಭಕ್ತಿಯಿಂದ ಮಾಡಿದ ಮನುಷ್ಯನ ಜನ್ಮವು ಸಫಲವಾಗುವುದು ಸಮಸ್ತ ಯಜ್ಞ ದಾನಗಳ ಫಲವು ಲಭಿಸುವುದು.

೭೦. ಹಾಗೆಯೇ ಸಕಲ ತೀರ್ಥ, ವ್ರತಗಳ ಫಲವನ್ನು ಹೊಂದುವನು. ಪಿತೃ, ಮಾತೃ ವರ್ಗವನ್ನು ಉದ್ಧರಿಸುವನು.

೭೧–೭೨. ಆ ತಲಸ್ವಾಮಿಯ ದರ್ಶನದಿಂದ ಏಳು ಜನ್ಮಗಳಲ್ಲಿ ಹುಟ್ಟಿದ ಮೊದಲ್ಗೊಂಡ ಮಾಡಿದ ಪಾಪಗಳು ನಾಶವಾಗುವುವು. ದುಃಖ, ಬಡತನ, ದೌರ್ಭಾಗ್ಯಗಳುಂಟಾಗುವುದಿಲ್ಲ. ವೇದಪಾರಂಗತನಾದ ಬ್ರಾಹ್ಮಣನಿಗೆ ಸಾವಿರ ಸುವರ್ಣಗಳನ್ನು ದಾನಮಾಡಿದ ಪುಣ್ಯವು ಆ ಕುಂಡದಲ್ಲಿ ಸ್ನಾನಮಾಡುವುದರಿಂದ ಲಭಿಸುವುದು.

ಏವಂ ತಲಸ್ವಾಮಿಚಾರಿತ್ರಮುತ್ತಮಂ
ಶ್ರುತಂ ಪುರಾ ಸಿದ್ಧಮಹರ್ಷಿಸಂಘೈಃ ।
ಶ್ರುತ್ವಾ ಪ್ರಭಾವಂ ತಲದೇವಸನ್ನಿಧೌ
ಪ್ರಾಪ್ನೋತಿ ಸರ್ವಂ ಮನಸಾ ಯದೀಪ್ಸಿತಂ ॥ ೭೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ತಲಸ್ವಾಮಿಮಾಹಾತ್ಮ್ಯವರ್ಣನಂನಾಮ
ಚತುಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

---

೭೩. ಹೀಗೆ ತಲಸ್ವಾಮಿಯ ದಿವ್ಯ ಚರಿತ್ರೆಯನ್ನು ಹಿಂದೆ ಸಿದ್ಧರೂ, ಮಹರ್ಷಿಗಳೂ ಕೇಳಿದ್ದಾರೆ. ಆ ತಲದೇವನ ಹತ್ತಿರದಲ್ಲಿ ಅವನ ಮಾಹಾತ್ಮ್ಯವನ್ನು ಕೇಳಿದವನು ಸಕಲೇಷ್ಟಾರ್ಥಗಳನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ತಲಸ್ವಾಮಿಮಾಹಾತ್ಮ್ಯವರ್ಣನವೆಂಬ
ಮುನ್ನೂರಮುವತ್ತೆನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಪಂಚತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ಶಂಖಾವರ್ತತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತಃ ಪಶ್ಚಿಮತೋ ಗಚ್ಛೇನ್ನ್ಯಂಕುಮತ್ಯಾಸ್ತಟೇ ಶುಭೇ ।
ದಕ್ಷಿಣಾಂ ದಿಶಮಾಶ್ರಿತ್ಯ ಸ್ಥಿತಂ ತೀರ್ಥಂ ಮಹಾಪ್ರಭಂ ॥ ೧ ॥
ಶಂಖಾವರ್ತಮಿತಿ ಖ್ಯಾತಂ ಯತ್ರ ಚಿತ್ರಾಂಕಿತಾ ಶಿಲಾ ।
ಸ್ವಯಂಭೂತಾ ಮಹಾದೇವಿ ರಕ್ತಗರ್ಭಾ ಸುಶೋಭನಾ ॥ ೨ ॥
ಭಿನ್ನೇ ಸ್ವದ್ಯಾಪಿ ತತ್ರೈವ ಸುರಕ್ತಂ ಸಂಪ್ರದೃಶ್ಯತೇ ।
ವಿಷ್ಣುಕ್ಷೇತ್ರಂ ಹಿ ತತ್ಪ್ರೋಕ್ತಂ ಶಂಖೋ ಯತ್ರ ಹತಃ ಪುರಾ ॥ ೩ ॥
ವೇದಾಪಹಾರೀ ದೇವೇಶಿ ವಿಷ್ಣುನಾ ಪ್ರಭವಿಷ್ಣುನಾ ।
ಕೃತಂ ಶಂಖೋದಕಂ ತೀರ್ಥಂ ಶಂಖಾಕಾರಂ ತು ದೃಶ್ಯತೇ ॥ ೪ ॥
ತತ್ರ ಸ್ನಾತ್ವಾ ನರೋ ದೇವಿ ಮುಚ್ಯತೇ ಬ್ರಹ್ಮಹತ್ಯಯಾ ।
ಸಪ್ತ ಜನ್ಮಾನಿ ವಿಪ್ರತ್ವಂ ಶೂದ್ರಸ್ಯಾಪಿ ಪ್ರಜಾಯತೇ ॥ ೫ ॥

ಕನ್ನಡದ ಅನುವಾದ

ಶಂಖಾವರ್ತತೀರ್ಥಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಬಳಿಕ ದಕ್ಷಿಣ ದಿಕ್ಕಿನಲ್ಲಿ ನ್ಯಂಕುಮತೀ ದಡದಲ್ಲಿರುವ ಅತಿಶಯ ಕಾಂತಿಯುಳ್ಳ ಶಂಖಾವರ್ತ ತೀರ್ಥದೆಡೆಗೆ ಹೋಗಬೇಕು. ಅಲ್ಲಿ ಮಧ್ಯದಲ್ಲಿ ರಕ್ತವಿರುವ ಸ್ವಯಂವ್ಯಕ್ತವಾದ ಚಿತ್ರಾಂಕಿತ ಶಿಲೆಯಿರುವುದು.

೩–೪. ಅಲ್ಲಿರುವ ಶಿಲೆಯನ್ನು ಕತ್ತರಿಸಿದರೆ ಈಗಲೂ ಮಧ್ಯದಲ್ಲಿ ಕೆಂಪಾಗಿ ಕಾಣುವುದು. ಅದು ವಿಷ್ಣುಕ್ಷೇತ್ರವು. ಅಲ್ಲಿ ಸಮರ್ಥನಾದ ವಿಷ್ಣುವು ವೇದವನ್ನಪಹರಿಸಿದ ಶಂಖನೆಂಬ ದಾನವನನ್ನು ಕೊಂದು ಶಂಖೋದಕ ತೀರ್ಥವನ್ನುನಿರ್ಮಿಸಿದನು. ಅದು ಈಗಲೂ ಶಂಖಾಕಾರವಾಗಿ ಕಾಣುವುದು.

೫. ಅಲ್ಲಿ ಮಿಂದ ಮಾನವನು ಬ್ರಹ್ಮಹತ್ಯೆಯಿಂದ ಮುಕ್ತನಾಗುವನು. ಶೂದ್ರನೂ ಏಳು ಜನ್ಮಗಳಲ್ಲಿ ಬ್ರಾಹ್ಮಣನಾಗುವನು.

ಪೂರ್ವಂ ತತ್ರೈವ ಗತ್ವಾ ಚ ತತೋ ರುದ್ರಗಯಾಂ ವ್ರಜೇತ್ ।
ಗೋದಾನಂ ತತ್ರ ದೇಯಂ ತು ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶಂಖಾವರ್ತತೀರ್ಥಮಾಹಾತ್ಮ್ಯವರ್ಣನಂ
ಪಂಚತ್ರಿಂಶದುತ್ತರತ್ರಿಶತತಮೋಽಧ್ಯಾಯಃ

---

೬. ಮೊದಲು ಶಂಖಾವರ್ತ ತೀರ್ಥಕ್ಕೆ ಹೋಗಿ ಬಳಿಕ ರುದ್ರಗಯೆಗೆ ಹೋಗಬೇಕು. ಸಂಪೂರ್ಣ ಯಾತ್ರಾಫಲವನ್ನಿಚ್ಛಿಸುವನು ಅಲ್ಲಿ ಗೋವುವನ್ನು ದಾನ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶಂಖಾವರ್ತತೀರ್ಥಮಾಹಾತ್ಮ್ಯವರ್ಣನವೆಂಬ
ಮುನ್ನೂರಮುವ್ವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಷಟ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ಗೋಷ್ಪದತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗೋಷ್ಪದಂ ತೀರ್ಥಮುತ್ತಮಂ ।
ಯತ್ರ ಶ್ರಾದ್ಧಂ ನರಃ ಕೃತ್ವಾ ಗಯಾಸಪ್ತಗುಣಂಫಲಂ ।
ಲಭತೇ ನಾತ್ರ ಸಂದೇಹೋ ಯದಿ ಶ್ರದ್ಧಾ ದೃಢಾ ಭವೇತ್ ॥ ೧ ॥
ಯತ್ರ ಶ್ರಾದ್ಧಂ ಪೃಥುಃ ಕೃತ್ವಾ ಪಿತರಂ ಪಾಪಯೋನಿತಃ ।
ಉದ್ದಧಾರ ಮಹಾದೇವಿ ವೇನಂ ನಾಮ ಮಹಾಪ್ರಭುಂ ॥ ೨ ॥

ದೇವ್ಯುವಾಚ :—

ಕಸ್ಮಿನ್ಸ್ಥಾನೇ ಸ್ಥಿತಂ ತೀರ್ಥಮುತ್ಪತ್ತಿಸ್ತಸ್ಯ ಕೀದೃಶೀ ।
ಕಥಂ ಸ ವೇನರಾಜೋ ವಾ ಉದ್ಧೃತಃ ಪಾಪಯೋನಿತಃ ॥ ೩ ॥
ಗಯಾಸಪ್ತಗುಣಂ ಪುಣ್ಯಂ ಕಥಂ ತತ್ರ ಪ್ರಜಾಯತೇ ।
ಶ್ರಾದ್ಧಸ್ಯ ಕಿಂ ವಿಧಾನಂ ತು ಕೇ ಮಂತ್ರಾಸ್ತತ್ರ ತೇ ದ್ವಿಜಾಃ ।
ಏತನ್ಮೇ ಕೌತುಕಂ ದೇವ ಯಥಾವದ್ವಕ್ತುಮರ್ಹಸಿ ॥ ೪ ॥

ಕನ್ನಡದ ಅನುವಾದ

ಗೋಷ್ಪದತೀರ್ಥಮಾಹಾತ್ಮ್ಯವರ್ಣನಂ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಗೋಷ್ಪದ ತೀರ್ಥಕ್ಕೆ ಹೋಗಬೇಕು. ಇಲ್ಲಿ ಶ್ರಾದ್ಧ ಮಾಡಿದ ಮಾನವನು ದೃಢ ಶ್ರದ್ಧೆಯುಳ್ಳವನಾದರೆ ಗಯಾಶ್ರಾದ್ಧಕ್ಕಿಂತ ಏಳರಷ್ಟು ಪುಣ್ಯವು ಲಭಿಸುವುದು.

೨. ಮಹಾದೇವಿ ! ಇಲ್ಲಿ ಪೃಥುವು ಶ್ರಾದ್ಧಗೈದು ತಂದೆಯಾದ ವೇನನನ್ನು ಪಾಪಯೋನಿಯಿಂದ ಉದ್ಧರಿಸಿರುವನು.

೩. ದೇವಿಯು ಹೇಳುತ್ತಾಳೆ :—ಆ ತೀರ್ಥವು ಎಲ್ಲಿರುವುದು ? ಅದರ ಉತ್ಪತ್ತಿಯು ಹೇಗಾಯಿತು ? ವೇನ ರಾಜನನ್ನು ಆ ಪೃಥುವು ಹೇಗೆ ಉದ್ಧರಿಸಿದನು ?

೪. ಅಲ್ಲಿಗಯೆಗಿಂತ ಏಳರಷ್ಟು ಪುಣ್ಯವು ಹೇಗೆ ಲಭಿಸುವುದು ? ಅಲ್ಲಿ ಶ್ರಾದ್ಧವನ್ನು ಯಾವ ವಿಧಿಯಿಂದ ಮಾಡಬೇಕು. ಮಂತ್ರಗಳಾವುವು ? ಬ್ರಾಹ್ಮಣರಾರು ? ಸ್ವಾಮಿ ! ಈ ವಿಷಯದಲ್ಲಿ ಕುತೂಹಲವುಂಟಾಗಿದೆ. ಅದನ್ನು ವಿವರಿಸು.

ಈಶ್ವರ ಉವಾಚ :—

ಇದಂ ರಹಸ್ಯಂ ದೇವೇಶಿ ಯತ್ತ್ವಯಾ ಪರಿಪೃಚ್ಛಿತಂ ।
ಅಪ್ರಕಾಶ್ಯಮಿದಂ ತೀರ್ಥಮಸ್ಮಿನ್ಪಾಪಯುಗೇ ಪ್ರಿಯೇ ॥ ೫ ॥

ತಥಾಪಿ ಸಂಪ್ರವಕ್ಷ್ಯಾಮಿ ತವ ಸ್ನೇಹಾತ್ಸುರೇಶ್ವರಿ ।
ನ ನಾಸ್ತಿಕಾಯ ದೇವೇಶಿ ನ ಸುವರ್ಣೇತರಾಯ ಚ ।
ಅಸ್ತಿ ದೇವಿ ಮಹಾಸಿದ್ಧಾ ಪುಣ್ಯಾ ನ್ಯಂಕುಮತೀ ನದೀ ॥ ೭ ॥

ಮರ್ಯಾದಾರ್ಥಂ ಮಯಾ ನೀತಾ ಕ್ಷೇತ್ರಸ್ಯಾಸ್ಯ ಮಹೇಶ್ವರಿ ।
ಸಂಸ್ಥಿತಾ ಪಾಪಶಮನೀ ಪರ್ಣಾದಿತ್ಯಾಚ್ಚ ದಕ್ಷಿಣೇ ॥ ೮ ॥

ನಾರಾಯಣಗೃಹಾತ್ಸೌಮ್ಯೇ ನಾತಿದೂರೇ ವ್ಯವಸ್ಥಿತಾ ।
ತಸ್ಯಾ ಮಧ್ಯೇ ಮಹಾದೇವಿ ತೀರ್ಥಂ ತ್ರೈಲೋಕ್ಯವಿಶ್ರುತಂ ॥ ೯ ॥

ಗೋಷ್ಪದಂ ನಾಮ ವಿಖ್ಯಾತಂ ಕೋಟಿಪಾಪಹರಂ ನೃಣಾಂ ।
ಗೋಷ್ಪದಸ್ಯ ಸಮೀಪೇ ತು ನಾತಿದೂರೇ ವ್ಯವಸ್ಥಿತಃ ॥ ೧೦ ॥

ಅನಂತೋ ನಾಮ ನಾಗೇಂದ್ರಃ ಸ್ವಯಂಭೂತೋ ಧರಾತಲೇ ।
ತಸ್ಯ ತೀರ್ಥಸ್ಯ ರಕ್ಷಾರ್ಥಂ ವಿಷ್ಣುನಾ ಸಂನಿಯೋಜಿತಃ ॥ ೧೧ ॥

---

೫. ಈಶ್ವರನು ಹೇಳುತ್ತಾನೆ :—ದೇವೇಶಿ! ನೀನು ಕೇಳಿದ ವಿಷಯವು ರಹಸ್ಯವಾದುದು. ಈ ಪಾಪಯುಗದಲ್ಲಿ ಈ ತೀರ್ಥವನ್ನು ಪ್ರಕಾಶಗೊಳಿಸ ಕೂಡದು.

೬–೮. ಹಾಗಾದರೂ ನಿನ್ನಲ್ಲಿರುವ ಪ್ರೀತಿಯಿಂದ ಇದನ್ನು ಹೇಳುವೆನು. ಇದನ್ನು ಪಾಪಿಗೂ, ಯುಕ್ತಿವಾದಿಗೂ, ನಾಸ್ತಿಕನಿಗೂ, ಸುವರ್ಣೇತರನಿಗೂ ಹೇಳಬಾರದು. ದೇವಿ! ಈ ಕ್ಷೇತ್ರದ ಎಲ್ಲೆಗಾಗಿ ನಾನು ತಂದ ನ್ಯಂಕುಮತಿಯೆಂಬ ಪುಣ್ಯನದಿಯು ಪರ್ಣಾದಿತ್ಯನಿಗೆ ದಕ್ಷಿಣದಲ್ಲಿದೆ.

೯–೧೧. ನಾರಾಯಣಾಲಯಕ್ಕಿಂತ ಉತ್ತರದಲ್ಲಿ ಸಮೀಪದಲ್ಲಿಯೇ ಇರುವ ಆ ನ್ಯಂಕುಮತೀ ನದಿಯ ಮಧ್ಯದಲ್ಲಿ ಮೂರುಲೋಕಗಳಲ್ಲಿಯೂ ಪ್ರಸಿದ್ಧವಾದ ನರರ ಅನೇಕ ಪಾಪಗಳನ್ನು ನೀಗಿಸುವ ಗೋಷ್ಪದವೆಂಬ ತೀರ್ಥವಿರುವುದು. ಆ ಗೋಷ್ಪದ ತೀರ್ಥದ ಹತ್ತಿರದಲ್ಲಿಯೇ ವಿಷ್ಣುವು ಸ್ವಯಂವ್ಯಕ್ತನಾದ ಅನಂತನೆಂಬ ನಾಗರಾಜನನ್ನು ಆ ತೀರ್ಥದ ರಕ್ಷಣೆಗಾಗಿ ನೇಮಿಸಿರುವನು.

ಕಾಂಕ್ಷಂತಿ ಪಿತರಃ ಪುತ್ರಾನ್ನರಕಾದತಿಭೀರವಃ ।
ಗಂತಾ ಯೋ ಗೋಷ್ಪದೇ ಪುತ್ರಃ ಸ ನಸ್ತ್ರಾತಾ ಭವಿಷ್ಯತಿ ।
ಗೋಷ್ಪದೇ ಚ ಸುತಂ ದೃಷ್ಟ್ವಾ ಪಿತೄಣಾಮುತ್ಸವೋ ಭವೇತ್ ॥ ೧೨ ॥
ಪದ್ಭ್ಯಾಮಪಿ ಜಲಂ ಸ್ಪೃಷ್ಟ್ವಾ ಅಸ್ಮಭ್ಯಂ ಕಿಂ ನ ದಾಸ್ಯತಿ ।
ಅಪಿ ಸ್ಯಾತ್ಸ ಕುಲೇಽಸ್ಮಾಕಂ ಯೋ ನೋ ದದ್ಯಾಜ್ಜಲಾಂಜಲಿಂ ।
ಪ್ರಭಾಸಕ್ಷೇತ್ರಮಾಸಾದ್ಯ ಗೋಷ್ಪದೇ ತೀರ್ಥ ಉತ್ತಮೇ ॥ ೧೩ ॥
ಅಪಿ ಸ್ಯಾತ್ಸ ಕುಲೇಽಸ್ಮಾಕಂ ಖಡ್ಗಮಾಂಸೇನ ಯಃ ಸಕೃತ್ ।
ಶ್ರಾದ್ಧಂ ಕುರ್ಯಾತ್ಪ್ರಯತ್ನೇನ ಕಾಲಶಾಕೇನ ವಾ ಪುನಃ ॥ ೧೪ ॥
ಅಪಿ ಸ್ಯಾತ್ಸ ಕುಲೇಽಸ್ಮಾಕಂ ಗೋಷ್ಪದೇ ದತ್ತದೀಪಕಃ ।
ಆಕಲ್ಪಕಾಲಿಕಾ ದೀಪ್ತಿಸ್ತೇನಾಸ್ಮಾಕಂ ಭವಿಷ್ಯತಿ ॥ ೧೫ ॥
ಗೋಷ್ಪದೇ ಚಾನ್ನದಾತಾ ಯಃ ಪಿತರಸ್ತೇನ ಪುತ್ರಿಣಃ ।
ದಿನಮೇಕಮಪಿ ಸ್ಥಿತ್ವಾ ಪುನಾತ್ಯಾಸಪ್ತಮಂ ಕುಲಂ ॥ ೧೬ ॥
ಪಿಂಡಂ ದದ್ಯಾಚ್ಚ ಪಿತ್ರಾದೇರಾತ್ಮನೋಽಪಿ ಸ್ವಯಂ ನರಃ ।
ಪಿಣ್ಯಾಕೇಂಗುದಕೇನಾಪಿ ತೇನ ಮುಚ್ಯೇದ್ವರಾನನೇ ॥ ೧೭ ॥

---

೧೨. ನರಕದಿಂದ ಭಯಗೊಂಡ ಪಿತೃಗಳು ಪುತ್ರರು ಗೋಷ್ಪದ ತೀರ್ಥಕ್ಕೆ ಹೋಗಿ ನಮ್ಮನ್ನು ಉದ್ಧಾರ ಮಾಡುವವರಾಗಲೆಂದು ಬಯಸುವರು. ಗೋಷ್ಪದಕ್ಕೆ ಹೋದ ಮಕ್ಕಳನ್ನು ನೋಡಿದರೆ ಪಿತೃಗಳಿಗೆ ಸಂತೋಷವಾಗುವುದು.

೧೩. ಪುತ್ರನು ಕಾಲಿನಿಂದಲಾದರೂ ನೀರನ್ನು ಸ್ಪರ್ಶಿಸಿ ನಮಗೇನಾದರೂ ಜಲಾಂಜಲಿಯನ್ನು ಕೊಡಲಾರನೆ? ನಮ್ಮ ವಂಶದಲ್ಲಿ ಯಾವನಾದರೂ ಪುತ್ರನು ಪ್ರಭಾಸಕ್ಷೇತ್ರಕ್ಕೆ ತೆರಳಿ ನಮಗೆ ತರ್ಪಣಮಾಡುವನೆ?

೧೪. ಅಲ್ಲಿ ಖಡ್ಗಮೃಗ ಮಾಂಸದಿಂದಾಗಲಿ, ಕಾಲಶಾಕ (ಕರೀಬೇವು)ದಿಂದಾಗಲಿ ಶ್ರಾದ್ಧಮಾಡಿಯಾನೆ?.

೧೫. ಅಲ್ಲಿ ದೀಪವನ್ನು ಹೊತ್ತಿಸಿಯಾನೆ? ಅದರಿಂದ ನಮಗೆ ಕಲ್ಪಾಂತ್ಯದ ವರೆಗೆ ಪ್ರಕಾಶವಾದೀತೆ?.

೧೬. ಗೋಷ್ಪದದಲ್ಲಿ ಅನ್ನದಾನಮಾಡಿದ ಪುತ್ರನಿಂದ ಪಿತೃಗಳು ಸತ್ಪುತ್ರನುಳ್ಳವರಾಗುವರು. ಅವನು ಒಂದು ದಿನ ಅಲ್ಲಿ ವಾಸಿಸಿದರೂ ಅವನ ಏಳು ಕುಲದವರೆಗಿನ ಜನರು ಪವಿತ್ರರಾಗುವರು.

೧೭. ಅಲ್ಲಿ ತನಗೂ, ತನ್ನ ಪಿತೃಗಳಿಗೂ ಇಂಗಳದ ಹಿಂಡಿಯಿಂದಲಾದರೂ ಪಿಂಡಪ್ರದಾನಮಾಡಿದ ಮಾನವನು ಪಾಪಮುಕ್ತನಾಗುವನು.

ಬ್ರಹ್ಮಜ್ಞಾನೇನ ಕಿಂ ಯೋಗ್ಯೈರ್ಗೋಗ್ರಹೇ ಮರಣೇನ ಕಿಂ ।
ಕಿಂ ಕುರುಕ್ಷೇತ್ರವಾಸೇನ ಗೋಷ್ಪದೇ ಯದಿ ಗಚ್ಛತಿ ॥ ೧೮ ॥
ಸಕೃತ್ತೀರ್ಥಾಭಿಗಮನಂ ಸಕೃತ್ಪಿಂಡಪ್ರಪಾತನಂ ।
ದುರ್ಲಭಂ ಕಿಂ ಪುನರ್ನಿತ್ಯಮಸ್ಮಿಂಸ್ತೀರ್ಥೇ ವ್ಯವಸ್ಥಿತಂ ॥ ೧೯ ॥
ಅರ್ಧಕ್ರೋಶಂ ತು ತತ್ತೀರ್ಥಂ ತದರ್ಧಾರ್ಧಂ ತು ದುರ್ಲಭಂ ।
ತನ್ಮಧ್ಯೇ ಶ್ರಾದ್ಧಕೃತ್ಪುಣ್ಯಂ ಗಯಾಸಪ್ತಗುಣಂ ಲಭೇತ್ ॥ ೨೦ ॥
ಶ್ರಾದ್ಧಕೃದ್ಗೋಷ್ಪದೇ ಯಸ್ತು ಪಿತೄಣಾಮನೃಣೋ ಹಿ ಸಃ ।
ಪದಮಧ್ಯೇ ವಿಶೇಷೇಣ ಕುಲಾನಾಂ ಶತಮುದ್ಧರೇತ್ ॥ ೨೧ ॥
ಗೃಹಾಚ್ಚಲಿತಮಾತ್ರಸ್ಯ ಗೋಷ್ಪದೇ ಗಮನಂ ಪ್ರತಿ ।
ಸ್ವರ್ಗಾರೋಹಣಸೋಪಾನಂ ಪಿತೄಣಾಂ ತು ಪದೇಪದೇ ॥ ೨೨ ॥
ಪಾಯಸೇನೈವ ಮಧುನಾ ಸಕ್ತುನಾ ಪಿಷ್ಟಕೇನ ಚ ।
ಚರುಣಾ ತಂಡುಲಾದ್ಯೈರ್ವಾ ಪಿಂಡದಾನಂ ವಿಧೀಯತೇ ॥ ೨೩ ॥
ಗೋಪ್ರಚಾರೇ ತು ಯಃ ಪಿಂಡಾಞ್ಛಮೀಪತ್ರಪ್ರಮಾಣತಃ ।
ಕಂದಮೂಲಫಲಾದ್ಯೈರ್ವಾ ದತ್ವಾ ಸ್ವರ್ಗಂ ನಯೇತ್ಪಿತೄನ್ ॥ ೨೪ ॥

---

೧೮. ಗೋಷ್ಪದಕ್ಕೆ ಹೋದವನಿಗೆ ಬ್ರಹ್ಮಜ್ಞಾನ, ಯೋಗ, ಗೋಗ್ರಹಣದಲ್ಲಿ ಮರಣ ಕುರುಕ್ಷೇತ್ರವಾಸ ಇವುಗಳಿಂದ ಪ್ರಯೋಜನವಿಲ್ಲ.

೧೯. ಈ ತೀರ್ಥಕ್ಕೆ ಒಂದುಸಾರಿ ಹೋಗುವುದು, ಒಂದುಸಾರಿ ಪಿಂಡಪ್ರದಾನ ಮಾಡುವುದು ಇವುಗಳಿಂದ ಲಭಿಸದಿರುವುದೇನಿದೆ?

೨೦. ಆ ತೀರ್ಥವು ಒಂದು ಮೈಲಿ ವಿಸ್ತೀರ್ಣವಾಗಿರುವುದು. ಅದರ ಅರ್ಧದಲ್ಲಿ ಅರ್ಧಭಾಗವು ದುರ್ಲಭವಾದುದು. ಅದರ ಮಧ್ಯದಲ್ಲಿ ಶ್ರಾದ್ಧಮಾಡಿದವನು ಗಯೆಗಿಂತ ಏಳರಷ್ಟು ಪುಣ್ಯವನ್ನು ಹೊಂದುವನು.

೨೧. ಗೋಷ್ಪದದಲ್ಲಿ ಪಿತೃಗಳಿಗೆ ಶ್ರಾದ್ಧಮಾಡಿದವನು ಋಣಮುಕ್ತನಾಗುವನು. ಅದರ ಮಧ್ಯದಲ್ಲಿ ಶ್ರಾದ್ಧಮಾಡಿದವನು ನೂರು ವಂಶಗಳನ್ನು ಉದ್ಧರಿಸುವನು.

೨೨. ಗೋಷ್ಪದಕ್ಕಾಗಿ ಮನೆಯಿಂದ ಹೊರಡುವುದರಿಂದಲೇ ಪಿತೃಗಳಿಗೆ ಸ್ವರ್ಗದ ಮೆಟ್ಟಲು ಲಭಿಸುವುದು.

೨೩. ಪಾಯಸ, ಜೇನು, ಸತ್ತು, ಹಿಟ್ಟು, ಚರು ಇವುಗಳಿಂದ ಪಿಂಡಪ್ರದಾನವು ಮಾಡಬೇಕು.

೨೪. ಗೋಷ್ಪದದಲ್ಲಿ ಗಡ್ಡೆ, ಗೆಣಸು, ಹಣ್ಣುಗಳಿಂದ ಶಮೀಪತ್ರದಷ್ಟು ಪಿಂಡ ಪ್ರದಾನಮಾಡುವುದರಿಂದಲೇ ಪಿತೃಗಳು ಸ್ವರ್ಗಕ್ಕೆ ತೆರಳುವರು.

ಗೋಷ್ಪದೇ ಪಿಂಡದಾನೇನ ಯತ್ಫಲಂ ಲಭತೇ ನರಃ ।
ನ ತಚ್ಛಕ್ಯಂ ಮಯಾ ವಕ್ತುಂ ಕಲ್ಪಕೋಟಿಶತೈರಪಿ ॥ ೨೫ ॥
ಅಥಾತಃ ಸಂಪ್ರವಕ್ಷ್ಯಾಮಿ ಸಮ್ಯಗ್ಯಾತ್ರಾವಿಧಿಂ ಶುಭಂ ।
ಯಾತ್ರಾವಿಧಾನಂ ಚ ತಥಾ ಸಮ್ಯಕ್ಛ್ರದ್ಧಾನ್ವಿತಾ ಶೃಣು ॥ ೨೬ ॥
ಯದಿ ತೀರ್ಥಂ ನರೋ ಗಚ್ಛೇದ್ಗಯಾಶ್ರಾದ್ಧಫಲೇಪ್ಸಯಾ ।
ತಥಾವಿಧವಿಧಾನೇನ ಯಾತ್ರಾಂ ಕುರ್ಯಾದ್ವಿಚಕ್ಷಣಃ ॥ ೨೭ ॥
ಬ್ರಹ್ಮಚಾರೀ ಶುಚಿರ್ಭೂತ್ವಾ ಹಸ್ತಪಾದೇಷು ಸಂಯತಃ ।
ಶ್ರದ್ಧಾವಾನಾಸ್ತಿಕೋ ಭಾವೀ ಗಚ್ಛೇತ್ತೀರ್ಥಂ ತತಃ ಸುಧೀಃ ॥ ೨೮ ॥
ನ ನಾಸ್ತಿಕಸ್ಯ ಸಂಸರ್ಗಂ ತಸ್ಮಿಂಸ್ತೀರ್ಥೇ ನರಶ್ಚರೇತ್ ।
ಸರ್ವೋಪಸ್ಕರಸಂಯುಕ್ತಃ ಶ್ರಾದ್ಧಾರ್ಹದ್ರವ್ಯಸಂಯುತಃ ।
ಗಚ್ಛೇತ್ತೀರ್ಥಂ ಸಾಧುಸಂಗೀ ಗಯಾಂ ಮನಸಿ ಭಾವಯನ್ ॥ ೨೯ ॥
ಏವಂ ಯಸ್ತು ದ್ವಿಜೋ ಗಚ್ಛೇತ್ಪ್ರತಿಗ್ರಹವಿವರ್ಜಿತಃ ।
ಪದೇಪದೇಽಶ್ವಮೇಧಸ್ಯ ಫಲಂ ಪ್ರಾಪ್ನೋತ್ಯಸಂಶಯಂ ॥ ೩೦ ॥
ತತ್ರ ಸ್ನಾತ್ವಾ ನ್ಯಂಕುಮತ್ಯಾಂ ಸಿದ್ಧಯೇ ಪಿತೃಮುಕ್ತಯೇ ।
ಸ್ನಾತ್ವಾಥ ತರ್ಪಣಂ ಕುರ್ಯಾದ್ದೇವಾದೀನಾಂ ಯಥಾವಿಧಿ ॥ ೩೧ ॥

---

೨೫. ಗೋಷ್ಪದದಲ್ಲಿ ಪಿಂಡಪ್ರದಾನಮಾಡುವುದರಿಂದ ಮನುಷ್ಯನು ಪಡೆಯುವ ಫಲವನ್ನು ನಾನು ಅನೇಕ ಕೋಟಿಕಲ್ಪಗಳಿಂದಲೂ ಹೇಳಲಾರೆನು.

೨೬. ಬಳಿಕ ನಿನಗೆ ಯಾತ್ರಾಕ್ರಮವನ್ನು ಹೇಳುವೆನು. ಇದನ್ನು ಶ್ರದ್ಧೆಯಿಂದ ಕೇಳು.

೨೭. ನರನು ಗಯಾಶ್ರಾದ್ಧದ ಫಲಾಪೇಕ್ಷೆಯಿಂದ ಗೋಷ್ಪದಕ್ಕೆ ಹೋಗುವುದಾದರೆ ನಾನು ಹೇಳಿದ ರೀತಿಯಿಂದ ಯಾತ್ರೆಯನ್ನು ಮಾಡಬೇಕು,

೨೮. ಮನುಷ್ಯನು ಬ್ರಹ್ಮಚಾರಿಯೂ, ಶುದ್ಧನೂ, ಹಸ್ತಪಾದಗಳಲ್ಲಿ ನಿಯಮವುಳ್ಳವನೂ, ಶ್ರದ್ಧೆಯುಳ್ಳವನೂ, ಆಸ್ತಿಕನೂ ಆಗಿ ಆ ತೀರ್ಥಕ್ಕೆ ಹೋಗಬೇಕು.

೨೯. ಆ ತೀರ್ಥದಲ್ಲಿ ನಾಸ್ತಿಕನ ಸಂಬಂಧವನ್ನು ಮಾಡಕೂಡದು. ಸಾಧುಗಳ ಸಹವಾಸವುಳ್ಳವನೂ, ಶ್ರಾದ್ಧಾರ್ಹವಾದ ದ್ರವ್ಯಗಳಿಂದ ಕೂಡಿದವನೂ ಆಗಿ ಗಯೆಯನ್ನು ಮನಸ್ಸಿನಲ್ಲಿ ಸ್ಮರಿಸುತ್ತ ಆ ತೀರ್ಥಕ್ಕೆ ಹೋಗಬೇಕು.

೩೦. ದ್ವಿಜನು ಹೀಗೆ ಪ್ರತಿಗ್ರಹವನ್ನು ಬಿಟ್ಟು ಆ ತೀರ್ಥಕ್ಕೆ ಹೋದರೆ ಪ್ರತಿ ಹೆಜ್ಜೆಯಲ್ಲಿಯೂ, ಅಶ್ವಮೇಧಯಾಗದ ಫಲವನ್ನು ಪಡೆಯುವನು.

೩೧. ಮನುಷ್ಯನು ಪಿತೃಮುಕ್ತಿಸಿದ್ಧಿಗಾಗಿ ನ್ಯಂಕುಮತಿಯಲ್ಲಿ ಮಿಂದು ದೇವತೆಗಳೇ ಮೊದಲಾದವರಿಗೆ ಕ್ರಮದಂತೆ ತರ್ಪಣಮಾಡಬೇಕು.

ಬ್ರಹ್ಮಾದಿಸ್ತಂಬಪರ್ಯಂತಾ ದೇವರ್ಷಿಮನುಮಾನವಾಃ ।
ತೃಪ್ಯಂತು ಪಿತರಃ ಸರ್ವೇ ಮಾತೃಮಾತಾಮಹಾದಯಃ ॥ ೩೨ ॥
ಏವಂ ಸಂತರ್ಪ್ಯ ವಿಧಿನಾ ಕೃತ್ವಾ ಹೋಮಾದಿಕಂ ನರಃ ।
ಶ್ರಾದ್ಧಂ ಸಪಿಂಡಕಂ ಕುರ್ಯಾತ್ಸ್ವತಂತ್ರೋಕ್ತವಿಧಾನತಃ ॥ ೩೩ ॥
ಆಮಂತ್ರ್ಯ ಬ್ರಾಹ್ಮಣಾಂಸ್ತತ್ರ ಶಾಸ್ತ್ರಜ್ಞಾನ್ದೋಷವರ್ಜಿತಾನ್ ।
ಏವಂ ಕೃತೋಪಚಾರಸ್ತು ಇಮಂ ಮಂತ್ರಮುದೀರಯೇತ್ ॥ ೩೪ ॥
ಕವ್ಯವಾಡನಲಃ ಸೋಮೋ ಯಮಶ್ಚೈವಾರ್ಯಮಾ ತಥಾ ।
ಅಗ್ನಿಷ್ವಾತ್ತಾ ಬರ್ಹಿಷದಃ ಸೋಮಪಾಃ ಪಿತೃದೇವತಾಃ ।
ಆಗಚ್ಛಂತು ಮಹಾಭಾಗಾ ಯುಷ್ಮಾಭೀ ರಕ್ಷಿತಾಸ್ತ್ವಿಹ ॥ ೩೫ ॥
ಮದೀಯಾಃ ಪಿತರೋ ಯೇ ಚ ಕುಲೇ ಜಾತಾಃ ಸನಾಭಯಃ ।
ತೇಷಾಂ ಪಿಂಡಪ್ರದಾತಾಹಮಾಗತೋಽಸ್ಮಿನ್ಪಿತಾಮಹಾಃ ॥ ೩೬ ॥
ಏವಮುಕ್ತ್ವಾ ಮಹಾದೇವಿ ಇಮಂ ಮಂತ್ರಮುದೀರಯೇತ್ ॥ ೩೭ ॥
ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಮಾತಾ ಪಿತಾಮಹೀ ಚೈವ ತಥೈವ ಪ್ರಪಿತಾಮಹೀ ॥ ೩೮ ॥

---

೩೨. ಬ್ರಹ್ಮನೊದಲ್ಗೊಂಡು ಹುಲ್ಲಿನವರೆಗೆ ದೇವತೆಗಳೂ, ಋಷಿಗಳೂ, ಮನುಗಳೂ, ಮಾನವರೂ, ಮಾತೃ ಮೊದಲಾದ ಸಕಲ ಪಿತೃಗಳೂ ತೃಪ್ತರಾಗಲಿ.

೩೩. ಮನುಷ್ಯನು ಹೀಗೆ ವಿಧಿಯಂತೆ ತರ್ಪಣಮಾಡಿ ಹೋಮ, ಪಿಂಡಸಹಿತವಾದ ಶ್ರಾದ್ಧ ಇವುಗಳನ್ನು ತನ್ನ ಶಾಖೆಗೆ ವಿಹಿತವಾದ ಕ್ರಮದಿಂದ ನೆರವೇರಿಸಬೇಕು.

೩೪. ಅಲ್ಲಿ ಶಾಸ್ತ್ರವನ್ನರಿತವರೂ, ದೋಷವಿಲ್ಲದವರೂ ಆದ ಬ್ರಾಹ್ಮಣರನ್ನು ಆಮಂತ್ರಣಮಾಡಿ ಉಪಚರಿಸಿ ಈ ಮಂತ್ರವನ್ನು ಹೇಳಬೇಕು.

೩೫ ೩೬. ಕವ್ಯವಾಟ್, ಅನಲಃ, ಸೋಮಃ, ಯಮः, ಅರ್ಯಮಾ, ಅಗ್ನಿಷ್ವಾತ್ತಾ, ಬರ್ಹಿಷದಃ, ಸೋಮಪಾಃ ಎಂಬ ಭಾಗ್ಯಶಾಲಿಗಳಾದ ಪಿತೃದೇವತೆಗಳೇ ಇಲ್ಲಿಗೆ ಬನ್ನಿರಿ. ನೀವು ನನ್ನ ಪಿತೃಗಳನ್ನೂ, ಬಂಧುಗಳನ್ನೂ ರಕ್ಷಿಸಿರಿ. ನಾನು ಅವರಿಗೆ ಪಿಂಡವನ್ನು ಕೊಡುವೆನು. ಪಿತಾಮಹರು ಇಲ್ಲಿಗೆ ಬಂದಿರುವರು.

೩೭. ಮಹಾದೇವಿ! ಹೀಗೆಂದು ಈ ಮಂತ್ರವನ್ನುಚ್ಚರಿಸಬೇಕು.

೩೮. ಪಿತೃ, ಪಿತಾಮಹ, ಪ್ರಪಿತಾಮಹ, ಮಾತೃ, ಪಿತಾಮಹೀ, ಪ್ರಪಿತಾಮಹೀ, ಮಾತಾಮಹ, ಪ್ರಮಾತೃ, ವೃದ್ಧಪ್ರಮಾತೃ ಇವರಿಗೆ ನಾನಿತ್ತ ಪಿಂಡವು ಅಕ್ಷಯವಾಗಿ ಸೇರಲಿ.

ಮಾತಾಮಹಃ ಪ್ರಮಾತಾ ಚ ತಥಾ ವೃದ್ಧಪ್ರಮಾತೃಕಃ ।
ತೇಷಾಂ ಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತಾಂ ॥ ೪೯ ॥
ಓಂ ನಮೋ ಭಾನವೇ ಭರ್ತ್ರೇಽಬ್ಜಧೌಮಸೋಮರೂಪಿಣೇ ।
ಏವಂ ನತ್ವಾರ್ಚಯಿತ್ವಾ ತು ಇಮಾಂ ಸ್ತುತಿಮಥೋ ಪಠೇತ್ ॥ ೫೦ ॥
ತತ್ರ ಗೋಷ್ಪದಸಾನ್ನಿಧ್ಯೇ ಚರುಣಾ ಸುಶೃತೇನ ಚ ।
ಪಿತೄಣಾಮನಾಥಾನಾಂ ಚ ಮಂತ್ರೈಃ ಪಿಂಡಾಂಶ್ಚ ನಿರ್ವಪೇತ್ ॥ ೫೧ ॥
ಅಸ್ಮತ್ಕುಲೇ ಮೃತಾ ಯೇ ಚ ಗತಿರ್ಯೇಷಾಂ ನ ವಿದ್ಯತೇ ।
ರೌರವೇ ಚಾಂಧತಾಮಿಸ್ರೇ ಕಾಲಸೂತ್ರೇ ಚ ಯೇ ಗತಾಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥ ೫೨ ॥
ಅನೇಕಯಾತನಾಸಂಸ್ಥಾಃ ಪ್ರೇತಲೋಕೇಷು ಯೇ ಗತಾಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥ ೫೩ ॥
ಪಶುಯೋನಿಗತಾ ಯೇ ಚ ಯೇ ಚ ಕೀಟಸರೀಸೃಪಾಃ ।
ಅಥವಾ ವೃಕ್ಷಯೋನಿಸ್ಥಾಸ್ತೇಭ್ಯಃ ಪಿಂಡಂ ದದಾಮ್ಯಹಂ ॥ ೫೪ ॥
ಅಸಂಖ್ಯಾ ಯಾತನಾ ಸಂಸ್ಥಾ ಯೇ ನೀತಾ ಯಮಶಾಸಕೈಃ ।
ತೇಷಾಮುದ್ಧರಣಾರ್ಥಾಯ ಇಮಂ ಪಿಂಡಂ ದದಾಮ್ಯಹಂ ॥ ೫೫ ॥

---

೪೯. ಬಳಿಕ ಸೂರ್ಯನನ್ನು ಪೂಜಿಸಿ, ನಮಸ್ಕರಿಸಿ ಚಂದ್ರಾಂಗಾರಕ ರೂಪಿಯಾದ ಸೂರ್ಯ ! ನಿನಗೆ ನಮಸ್ಕಾರವು ಎಂಬ ಮಂತ್ರದಿಂದ ಸ್ತುತಿಸಬೇಕು.

೫೦. ಆ ಗೋಷ್ಪದದ ಹತ್ತಿರ ಚೆನ್ನಾಗಿ ಪಾಪಮಾಡಿದ ಚರುವಿನಿಂದ ಅನಾಥರಾದ ಪಿತೃಗಳಿಗೆ ಮುಂದಿನ ಮಂತ್ರಗಳಿಂದ ಪಿಂಡಪ್ರದಾನಮಾಡಬೇಕು.

೫೧–೫೨. ವಂಶದಲ್ಲಿ ಮೃತರಾಗಿ ಗತಿಯಿಲ್ಲದವರೂ, ಅಂಧತಾಮಿಸ್ರಕಾಲ ಸೂತ್ರಗಳೆಂಬ ನರಕವನ್ನು ಹೊಂದಿದವರೂ ಆದ ಪಿತೃಗಳ ಉದ್ಧಾರಕ್ಕಾಗಿ ಈ ಪಿಂಡವನ್ನು ಕೊಡುವೆನು.

೫೩. ನಾನಾ ಬಗೆಯ ಕಷ್ಟಕ್ಕೀಡಾಗಿರುವವರೂ, ಪ್ರೇತಲೋಕವನ್ನು ಸೇರಿರುವವರೂ ಆದ ಪಿತೃಗಳ ಉದ್ಧಾರಕ್ಕಾಗಿ ನಾನು ಈ ಪಿಂಡವನ್ನು ಕೊಡುವೆನು.

೫೪. ಪಶುಯೋನಿಯನ್ನು ಹೊಂದಿದವರೂ, ಕೀಟ ಹಾವುಗಳಾದವರೂ, ಅಥವಾ ವೃಕ್ಷವಾಗಿರುವವರೂ ಆದ ಪಿತೃಗಳ ಉದ್ಧಾರಕಾಗಿ ನಾನು ಈ ಪಿಂಡವನ್ನು ಕೊಡುವೆನು.

೫೫. ಯಮಭಟರಿಂದ ಒಯ್ಯಲ್ಪಟ್ಟು ಪೀಡೆಗೊಳಗಾದ ಅನೇಕಮಂದಿ ಪಿತೃಗಳ ಉದ್ಧಾರಕ್ಕಾಗಿ ನಾನು ಈ ಪಿಂಡವನ್ನು ಕೊಡುವೆನು.

ಯೇಽಬಾಂಧವಾ ಬಾಂದವಾ ಯೇ ಯೇಽನ್ಯಜನ್ಮನಿ ಬಾಂಧವಾಃ ।
ತೇ ಸರ್ವೇ ತೃಪ್ತಿಮಾಯಾಂತು ಪಿಂಡೇನಾನೇನ ಸರ್ವದಾ ॥ ೪೬ ॥
ಯೇ ಕೇಚಿತ್ಪ್ರೇತರೂಪೇಣ ವರ್ತಂತೇ ಪಿತರೋ ಮಮ ।
ತೇ ಸರ್ವೇ ತೃಪ್ತಿಮಾಯಾಂತು ಪಿಂಡೇನಾನೇನ ಸರ್ವದಾ ॥ ೪೭ ॥
ದಿವ್ಯಾಂತರಿಕ್ಷಭೂಮಿಸ್ಥಪಿತರೋ ಬಾಂಧವಾದಯಃ ।
ಮೃತಾಶ್ಚಾಸಂಸ್ಕೃತಾ ಯೇ ಚ ತೇಷಾಂ ಪಿಂಡೋಽಸ್ತು ಮುಕ್ತಯೇ ॥೪೮॥
ಪಿತೃವಂಶೇ ಮೃತಾ ಯೇ ಚ ಮಾತೃವಂಶೇ ತಥೈವ ಚ ।
ಗುರುಶ್ವಶುರಬಂಧೂನಾಂ ಯೇ ಚಾನ್ಯೇ ಬಾಂಧವಾ ಮೃತಾಃ ॥ ೪೯ ॥
ಯೇ ಮೇ ಕುಲೇ ಲುಪ್ತಪಿಂಡಾಃ ಪುತ್ರದಾರವಿವರ್ಜಿತಾಃ ।
ಕ್ರಿಯಾಲೋಪಗತಾ ಯೇ ಚ ಜಾತ್ಯಂಧಾಃ ಪಂಗವಸ್ತಥಾ ॥ ೫೦ ॥
ವಿರೂಪಾ ಆಮಗರ್ಭಾಯೇಽಜ್ಞಾತಾ ಜ್ಞಾತಾಃ ಕುಲೇ ಮಮ ।
ತೇಷಾಂ ಪಿಂಡೋ ಮಯಾ ದತ್ತೋ ಹ್ಯಕ್ಷಯ್ಯಮುಪತಿಷ್ಠತಾಂ ॥ ೫೧ ॥
ಪ್ರೇತತ್ವಾತ್ಪಿತರೋ ಮುಕ್ತಾ ಭವಂತು ಮಮ ಶಾಶ್ವತಂ ।
ಯತ್ಕಿಂಚಿನ್ಮಧುಸಂಮಿಶ್ರಂ ಗೋಕ್ಷೀರಂ ಘೃತಪಾಯಸಂ ॥ ೫೨ ॥

---

೪೬. ಬಾಂಧವರೂ, ಬಾಂಧವರಲ್ಲದವರೂ, ಬೇರೆ ಜನ್ಮದಲ್ಲಿ ಬಂಧುಗಳೂ ಆದ ಪಿತೃಗಳು ಈ ಪಿಂಡದಿಂದ ಯಾವಾಗಲೂ ತೃಪ್ತಿಗೊಳ್ಳಲಿ.

೪೭. ಪ್ರೇತರೂಪದಿಂದಿರುವ ನನ್ನ ಪಿತೃಗಳೆಲ್ಲ ಈ ಪಿಂಡದಿಂದ ಯಾವಾಗಲೂ ತೃಪ್ತರಾಗಲಿ.

೪೮. ದೇವಲೋಕ, ಆಕಾಶ, ಭೂಮಿಯಲ್ಲಿರುವ ಪಿತೃಗಳಿಗೂ ಮೃತರಾಗಿ ಸಂಸ್ಕಾರವಿಲ್ಲದ ಬಂಧುಗಳಿಗೂ ಈ ಪಿಂಡವು ಮುಕ್ತಿಗಾಗಲಿ.

೪೯-೫೧. ಪಿತೃಮಾತೃ ವಂಶದಲ್ಲಿ ಮೃತರಾದವರು, ಗುರು, ಶ್ವಶುರರು ಇತರ ಬಂಧುಗಳು, ನನ್ನ ವಂಶದಲ್ಲಿ ಪಿಂಡವನ್ನು ಹೊಂದಿದವರು, ಮಗ, ಹೆಂಡತಿಯರಿಲ್ಲದವರು, ಕ್ರಿಯೆಯುಲ್ಲದದರು, ಹುಟ್ಟುಕುರುಡರು, ಕುಂಟರು, ಆಕೃತಿಯಿಲ್ಲದವರು, ಬೆಳೆಯದೆ ಗರ್ಭದಲ್ಲಿ ಜನಿಸಿ ಮೃತರಾದವರು, ತಿಳಿದವರು, ತಿಳಿಯದವರು ಇವರಿಗೆ ನಾನಿತ್ತ ಪಿಂಡವು ಅಕ್ಷಯವಾಗಿ ಸೇರಲಿ.

೫೨-೫೩. ಈ ಗೋಷ್ಪದ ತೀರ್ಥದಲ್ಲಿ ನಾನು ಕೊಟ್ಟ ಜೇನಿನಿಂದ ಸಹಿತವಾದ್ದ ಹಸುವಿನ ಹಾಲು, ತುಪ್ಪ, ಪಾಯಸ ಇವುಗಳು ಪಿತೃಗಳಿಗೆ ಸೇರಿ ಅವರು ಪ್ರೇತತ

ಅಕ್ಷಯ್ಯಮುಪತಿಷ್ಠೇತ್ತಸ್ಮಿಂಸ್ತೀರ್ಥೇ ತು ಗೋಷ್ಪದೇ ।
ಸ್ವಾಧ್ಯಾಯಂ ಶ್ರಾವಯೇತ್ತತ್ರ ಪುರಾಣಾನ್ಯಖಿಲಾನ್ಯಪಿ ॥ ೫೩ ॥
ಬ್ರಹ್ಮವಿಷ್ಣ್ವರ್ಕರುದ್ರಾಣಾಂ ಸ್ತವಾನಿ ವಿವಿಧಾನಿ ಚ ।
ಐಂದ್ರಾಣಿ ಸೋಮಸೂಕ್ತಾನಿ ಪಾವಮಾನೀಶ್ಚ ಶಕ್ತಿತಃ ॥ ೫೪ ॥
ಬೃಹದ್ರಥಂತರಂ ತದ್ವಜ್ಜ್ಯೇಷ್ಠಸಾಮ ಸರೌರವಂ ।
ತಥೈವ ಶಾಂತಿಕಾಧ್ಯಾಯಂ ಮಧುಬ್ರಾಹ್ಮಣಮೇವ ಚ ॥ ೫೫ ॥
ಮಂಡಲಂ ಬ್ರಾಹ್ಮಣಂ ತತ್ರ ಪ್ರೀತಕಾರಿ ಚ ಯತ್ಪುನಃ ।
ವಿಪ್ರಾಣಾಮಾತ್ಮನಶ್ಚೈವ ತತ್ಸರ್ವಂ ಸಮುದೀರಯೇತ್ ॥ ೫೬ ॥
ಏವಂ ನ್ಯಂಕುಮತೀಮಧ್ಯೇ ಗೋಷ್ಪದೇ ತೀರ್ಥ ಉತ್ತಮೇ ।
ದತ್ವಾ ಪಿಂಡಾಂಶ್ಚ ವಿಧಿವತ್ಪುನರ್ಮಂತ್ರಮಿಮಂ ಪಠೇತ್ ॥ ೫೭ ॥
ಸಾಕ್ಷಿಣಃ ಸಂತು ಮೇ ದೇವಾ ಬ್ರಹ್ಮಾದ್ಯಾ ಋಷಿಪುಂಗವಾಃ ।
ಮಯೇದಂ ತೀರ್ಥಮಾಸಾದ್ಯ ಪಿತ್ರೂಣಾಂ ನಿಷ್ಕೃತಿಃ ಕೃತಾ ॥ ೫೮ ॥
ಆಗತೋಽಸ್ಮಿ ಇದಂ ತೀರ್ಥಂ ಪಿತೃಕಾರ್ಯೇ ಸುರೋತ್ತಮಾಃ ।
ಭವಂತು ಸಾಕ್ಷಿಣಃ ಸರ್ವೇ ಮುಕ್ತಶ್ಚಾಹಮೃಣತ್ರಯಾತ್ ॥ ೫೯ ॥

ದಿಂದ ಮುಕ್ತರಾಗಲಿ. ಅಲ್ಲಿ ವೇದಾಧ್ಯಯನ, ಪುರಾಣ ಶ್ರವಣಗಳನ್ನು ಮಾಡಬೇಕು.

೫೪–೫೬. ಬ್ರಹ್ಮ, ವಿಷ್ಣು, ಸೂರ್ಯ, ರುದ್ರರ ನಾನಾ ಬಗೆಯ ಸ್ತೋತ್ರಗಳು, ಇಂದ್ರ ಸೋಮ, ಪವಮಾನ ಸೂಕ್ತಗಳು, ಬೃಹದ್ರಥಂತರ, ಜ್ಯೇಷ್ಠ, ರೌರವಸಾಮಗಳು, ಶಾಂತಿರಾಧ್ಯಾಯ, ಮಧು ಬ್ರಾಹ್ಮಣ, ಮಂಡಲಬ್ರಾಹ್ಮಣ, ಇವುಗಳನ್ನೂ, ತನಗೂ, ಪಿತೃಗಳಿಗೂ ಸಂತೋಷವನ್ನುಂಟುಮಾಡುವ ಇತರ ಮಂತ್ರಗಳನ್ನೂ ಪಾರಾಯಣಮಾಡಬೇಕು.

೫೭. ಹೀಗೆ ನ್ಯಂಕುಮತೀನದಿಯ ಮಧ್ಯದಲ್ಲಿರುವ ಗೋಷ್ಪದ ತೀರ್ಥದಲ್ಲಿ ವಿಧಿಯಂತೆ ಪಿಂಡಪ್ರದಾನಮಾಡಿ ಈ ಮಂತ್ರವನ್ನು ಪಠಿಸಬೇಕು.

೫೮. ನನಗೆ ಬ್ರಹ್ಮಾದಿ ದೇವತೆಗಳೂ, ಋಷಿವರ್ಯರೂ ಸಾಕ್ಷಿಗಳಾಗಿರಲಿ. ನಾನು ಈ ತೀರ್ಥಕ್ಕೆ ಬಂದು ಪಿತೃಗಳಿಗೆ ಶ್ರಾದ್ಧವನ್ನು ಮಾಡಿರುವೆನು.

೫೯. ದೇವೋತ್ತಮರೆ! ನಾನು ಪಿತೃಕಾರ್ಯಕ್ಕಾಗಿ ಈ ತೀರ್ಥಕ್ಕೆ ಬಂದಿರುವೆನು. ನೀವು ಸಾಕ್ಷಿಗಳಾಗಿರಿ. ನಾನು ಋಣತ್ರಯದಿಂದ ಮುಕ್ತನಾಗುವಂತೆ ಮಾಡಿರಿ.

ಏವಂ ಪ್ರದಕ್ಷಿಣೀಕೃತ್ಯ ಗೋಷ್ಪದಂ ತೀರ್ಥಮುತ್ತಮಂ ।
ವಿಪ್ರೇಭ್ಯೋ ದಕ್ಷಿಣಾಂ ದತ್ವಾ ನದ್ಯಾಂ ಪಿಂಡಾನ್ವಿಸರ್ಜಯೇತ್ ॥ ೬೦ ॥
ಗೋದಾನಂ ತತ್ರ ದೇಯಂ ತು ತದ್ವತ್ಕೃಷ್ಣಾಜಿನಂ ಪ್ರಿಯೇ ।
ಅಷ್ಟಕಾಸು ಚ ವೃದ್ಧೌ ಚ ಗಯಾಯಾಂ ಮೃತವಾಸರೇ ॥ ೬೧ ॥
ಅತ್ರ ಮಾತುಃ ಪೃಥಕ್ಛ್ರಾದ್ಧಮನ್ಯತ್ರ ಪತಿನಾ ಸಹ ।
ವೃದ್ಧಿಶ್ರಾದ್ಧೇ ತು ಮಾತ್ರಾದಿ ಗಯಾಯಾಂ ಪಿತೃಪೂರ್ವಕಂ ॥ ೬೨ ॥
ಗಯಾವದತ್ರೈವ ಪುನಃ ಶ್ರಾದ್ಧಂ ಕಾರ್ಯಂ ನರೋತ್ತಮೈಃ ।
ತಸ್ಮಾದ್ಗುಪ್ತಗಯಾ ಪ್ರೋಕ್ತಾ ಇಯಂ ಸಾ ವಿಷ್ಣುನಾ ಸ್ವಯಂ ॥ ೬೩ ॥
ಗಂಧದಾನೇನ ಗಂಧಾಪ್ತಿಃ ಸೌಭಾಗ್ಯಂ ಪುಷ್ಪದಾನತಃ ।
ಧೂಪದಾನೇನ ರಾಜ್ಯಾಪ್ತಿರ್ದೀಪ್ತಿರ್ದೀಪಪ್ರದಾನತಃ ॥ ೬೪ ॥
ಧ್ವಜದಾನಾತ್ಪಾಪಹಾನಿರ್ಯಾತ್ರಾಕೃದ್ಬ್ರಹ್ಮಲೋಕಭಾಕ್ ।
ಶ್ರಾದ್ಧಪಿಂಡಪ್ರದೋ ಲೋಕೇ ವಿಷ್ಣುರ್ನೇಷ್ಯತಿ ವೈ ಪಿತೄನ್ ॥ ೬೫ ॥

---

೬೦. ಹೀಗೆ ಗೋಷ್ಪದ ತೀರ್ಥಕ್ಕೆ ಪ್ರದಕ್ಷಿಣೆಮಾಡಿ ಬ್ರಾಹ್ಮಣರಿಗೆ ದಕ್ಷಿಣೆಯನ್ನಿತ್ತು ನದಿಯಲ್ಲಿ ಪಿಂಡವನ್ನು ವಿಸರ್ಜಿಸಬೇಕು.

೬೧-೬೨. ಪ್ರಿಯಳೆ! ಅಲ್ಲಿ ಗೋವು, ಕೃಷ್ಣಾಜಿನಗಳನ್ನು ದಾನಮಾಡಬೇಕು. ಗಯೆಯಲ್ಲಿ ಅಷ್ಟಕ, ವೃದ್ಧಿ, ಆಬ್ದಿಕ ಶ್ರಾದ್ಧಗಳಲ್ಲಿ ತಾಯಿಗೆ ಪ್ರತ್ಯೇಕವಾಗಿಯೂ, ಇತರ ಕಡೆಯಲ್ಲಿ ತಂದೆಯೊಡನೆಯೂ, ಶ್ರಾದ್ಧಮಾಡಬೇಕು, ಗಯೆಯಲ್ಲಿ ವೃದ್ಧಿ ಶ್ರಾದ್ಧದಲ್ಲಿ ಮಾತೃಪೂರ್ವಕವಾಗಿಯೂ, ಇತರ ಶ್ರಾದ್ಧಗಳಲ್ಲಿ ಪಿತೃಪೂರ್ವಕವಾಗಿಯೂ ಶ್ರಾದ್ಧಮಾಡಬೇಕು.

೬೩. ಈ ಗೋಷ್ಪದ ತೀರ್ಥದಲ್ಲಿ ನರೋತ್ತಮರು ಗಯೆಯಲ್ಲಿ ಮಾಡಿದಂತೆಯೇ ಶ್ರಾದ್ಧಗಳ್ಮಾಬೇಕು. ಆದ್ದರಿಂದ ವಿಷ್ಣುವು ಇದನ್ನು ಗುಪ್ತಗಯೆಯೆಂದು ಹೇಳಿರುವನು.

೬೪. ಇಲ್ಲಿ ಗಂಧವನ್ನು ದಾನಮಾಡುವುದರಿಂದ ಗಂಧವೂ, ಪುಷ್ಪದಾನದಿಂದ ಸೌಭಾಗ್ಯವೂ, ಧೂಪದಾನದಿಂದ ರಾಜ್ಯವೂ, ದೀಪದಾನದಿಂದ ಪ್ರಕಾಶವೂ ಲಭಿಸುವುದು.

೬೫. ಧ್ವಜದಾನದಿಂದ ಪಾಪವು ಪರಿಹಾರವಾಗುವುದು. ಯಾತ್ರೆಯನ್ನು ಮಾಡಿದವನು ಬ್ರಹ್ಮಲೋಕವನ್ನು ಹೊಂದುವನು. ಶ್ರಾದ್ಧದಲ್ಲಿ ಪಿಂಡಪ್ರದಾನಮಾಡಿದವನನ್ನು ವಿಷ್ಣುವು ತನ್ನ ಲೋಕಕ್ಕೆ ಒಯ್ಯುವನು.

ಏಕಂ ಯೋ ಭೋಜಯೇತ್ತತ್ರ ಬ್ರಾಹ್ಮಣಂ ಶಂಸತವ್ರತಂ ।
ಗೋಪ್ರಚಾರೇ ಮಹಾತೀರ್ಥೇ ಕೋಟಿರ್ಭವತಿ ಭೋಜಿತಾ ॥ ೬೬ ॥
ಅತಿ ಸಂಕ್ಷೇಪತಃ ಪ್ರೋಕ್ತಸ್ತತ್ರ ಶ್ರಾದ್ಧವಿಧಿಸ್ತವ ।
ಅಥ ತೇ ಕಥಯಿಷ್ಯಾಮಿ ಇತಿಹಾಸಂ ಪುರಾತನಂ ॥ ೬೭ ॥
ವೇನಸ್ಯ ರಾಜ್ಞಶ್ಚರಿತಂ ಪೃಥೋಶ್ಚೈವ ಮಹಾತ್ಮನಃ ।
ಯಥಾ ತತ್ರಾಭವನ್ಮುಕ್ತಿಸ್ತಸ್ಯ ಚಾಂಡಾಲಯೋನಿತಃ ।
ತತ್ಸರ್ವಂ ಶೃಣು ದೇವೇಶಿ ಸಮ್ಯಕ್ಛ್ರದ್ಧಾಸಮನ್ವಿತಾ ॥ ೬೮ ॥
ಪಿಶುನಾಯ ನ ಪಾಪಾಯ ನಾಶಿಷ್ಯಾಯಾಹಿತಾಯ ಚ ।
ಕಥನೀಯಮಿದಂ ಪುಣ್ಯಂ ನಾವ್ರತಾಯ ಕಥಂಚನ ॥ ೬೯ ॥
ಸ್ವರ್ಗ್ಯಂ ಯಶಸ್ಯಮಾಯುಷ್ಯಂ ಧನ್ಯಂ ವೇದೇನ ಸಂಮಿತಂ ।
ರಹಸ್ಯಮೃಷಿಭಿಃ ಪ್ರೋಕ್ತಂ ಶೃಣುಯಾದ್ಯೋಽನಸೂಯಕಃ ॥ ೭೦ ॥
ಯಶ್ಚೈನಂ ಶ್ರಾವಯೇನ್ಮರ್ತ್ಯಃ ಪೃಥೋರ್ವೈನ್ಯಸ್ಯ ಸಂಭವಂ ।
ಬ್ರಾಹ್ಮಣೇಭ್ಯೋ ನಮಸ್ಕೃತ್ವಾ ನ ಸ ಶೋಚೇತ್ಕೃತಾಕೃತೇ ॥ ೭೧ ॥

---

೬೬. ಈ ಗೋಷ್ಪದ ಮಹಾತೀರ್ಥದಲ್ಲಿ ಒಬ್ಬ ಬ್ರಾಹ್ಮಣನನ್ನು ಭೋಜನ ಮಾಡಿಸಿದರೆ ಕೋಟಿ ಬ್ರಾಹ್ಮಣರನ್ನು ಭೋಜನಮಾಡಿಸಿದಂತಾಗುವುದು.

೬೭. ಹೀಗೆ ನಿನಗೆ ಸಂಕ್ಷೇಪವಾಗಿ ಶ್ರಾದ್ಧವಿಧಿಯನ್ನು ಹೇಳಿರುವೆನು. ತರುವಾಯ ನಿನಗೆ ಹಿಂದಿನ ಒಂದು ಕಥೆಯನ್ನು ಹೇಳುತ್ತೇನೆ.

೬೮. ದೇವೇಶಿ! ವೇನ, ಮತ್ತು ಪೃಥುರಾಜರ ಚರಿತೆಯನ್ನೂ, ಅವನಿಗೆ ಚಂಡಾಲ ಜಾತಿಯಿಂದ ಮೋಕ್ಷವಾದ ಬಗೆಯನ್ನೂ ಹೇಳುವೆನು. ಇದನ್ನೆಲ್ಲ ನೀನು ಶ್ರದ್ಧೆಯಿಂದ ಚೆನ್ನಾಗಿ ಕೇಳು.

೬೯. ಇದನ್ನು ಚಾಡಿ ಹೇಳುವವನಿಗೂ, ಪಾಪಿಗೂ, ಶಿಷ್ಯನಲ್ಲದವನಿಗೂ ಶತ್ರುವಿಗೂ, ನೇಮವಿಲ್ಲದವನಿಗೂ ಹೇಳಬಾರದು.

೭೦–೭೧. ಸ್ವರ್ಗ, ಯಶಸ್ಸು, ಆಯುಷ್ಯ, ಧನಗಳನ್ನೀಯುವುದೂ, ವೇದಕ್ಕೆ ಸಮಾನವೂ, ರಹಸ್ಯವೂ, ಋಷಿಗಳು ಹೇಳಿರುವುದೂ ಆದ ಈ ಪೃಥು, ವೇನರ ಕಥೆಯನ್ನು ಅಸೂಯೆಯಿಲ್ಲದೆ ಯಾವನು ಕೇಳುವನೊ, ಬ್ರಾಹ್ಮಣರಿಗೆ ನಮಸ್ಕರಿಸಿ ಹೇಳುವನೊ ಅವನು ಶುಭಾಶುಭ ಕರ್ಮಗಳಲ್ಲಿ ದುಃಖಗೊಳ್ಳುವುದಿಲ್ಲ.

ಗೋಪ್ತಾ ಧರ್ಮಸ್ಯ ರಾಜಾಸೌ ಬಭೌ ಚಾತ್ರಿಸಮಪ್ರಭಃ ।
ಅತ್ರಿವಂಶಸಮುತ್ಪನ್ನೋ ಹ್ಯಂಗೋ ನಾಮ ಪ್ರಜಾಪತಿಃ ॥ ೭೨ ॥
ತಸ್ಯ ಪುತ್ರೋ ಭವೇದ್ವೇನೋ ನಾತ್ಯರ್ಥಂ ಧಾರ್ಮಿಕಸ್ತಥಾ ।
ಜಾತೋ ಮೃತ್ಯುಸುತಾಯಾಂ ವೈ ಸುನೀಥಾಯಾಂ ಪ್ರಜಾಪತಿಃ ॥ ೭೩ ॥
ಸ ಮಾತಾಮಹದೋಷೇಣ ತೇನ ಕಾಲಾತ್ಮಕಾನನಃ ।
ಸ ಧರ್ಮಂ ಪೃಷ್ಠತಃ ಕೃತ್ವಾ ಪಾಪಬುದ್ಧಿರಜಾಯತ ॥ ೭೪ ॥
ಸ್ಥಿತಿಮುತ್ಥಾಪಯಾಮಾಸ ಧರ್ಮೋಪೇತಾಂ ಸನಾತನೀಂ ।
ವೇದಶಾಸ್ತ್ರಾಣ್ಯತಿಕ್ರಮ್ಯ ಹ್ಯಧರ್ಮನಿರತೋಽಭವತ್ ॥ ೭೫ ॥
ನಿಃಸ್ವಾಧ್ಯಾಯವಷಟ್ಕಾರಾಃ ಪ್ರಜಾಸ್ತಸ್ಮಿನ್ಪ್ರಶಾಸತಿ ।
ಡಿಂಡಿಮಂ ಘೋಷಯಾಮಾಸ ಸ ರಾಜಾ ವಿಷಯೇ ಸ್ವಕೇ ॥ ೭೬ ॥
ನ ದಾತವ್ಯಂ ನ ಯಷ್ಟವ್ಯಂ ಮಯಿ ರಾಜ್ಯಂ ಪ್ರಶಾಸತಿ ।
ಆಸೀತ್ಪ್ರತಿಜ್ಞಾ ಕ್ರೂರೇಯಂ ವಿನಾಶೇ ಪ್ರತ್ಯುಪಸ್ಥಿತೇ ॥ ೭೭ ॥
ಅಹಮೀಡ್ಯಶ್ಚ ಪೂಜ್ಯಶ್ಚ ಸರ್ವಯಜ್ಞೈರ್ದ್ವಿಜೋತ್ತಮೈಃ ।
ಮಯಿ ಯಜ್ಞಾ ವಿಧಾತವ್ಯಾ ಮಯಿ ಹೋತವ್ಯಮಿತ್ಯಪಿ ॥ ೭೮ ॥

---

೭೨. ಧರ್ಮವನ್ನು ರಕ್ಷಿಸುವವನೂ, ಅತ್ರಿಗೋತ್ರದಲ್ಲಿ ಜನಿಸಿ ಅತ್ರಿಗೆ ಸಮಾನನೂ, ಆದ ಅಂಗನೆಂಬ ದೊರೆಯಿದ್ದನು.

೭೩. ಅವನಿಂದ ಮೃತ್ಯುವಿನ ಸುತೆಯಾದ ಸುನೀಥೆಯಲ್ಲಿ ಅತ್ಯಂತ ಅಧಾರ್ಮಿಕನಾದ ವೇನನೆಂಬ ಅರಸು ಹುಟ್ಟಿದನು.

೭೪. ಆ ವೇನನು ತನ್ನ ಅಜ್ಜನ ದೋಷದಿಂದ ಧರ್ಮಬಾಹ್ಯನಾಗಿ ಪಾಪಬುದ್ಧಿಯುಳ್ಳವನಾದನು.

೭೫. ಅವನು ಧರ್ಮಯುಕ್ತವಾದ ಸನಾತನ ಸಂಪ್ರದಾಯವನ್ನು ಅಳಿಸಿ ವೇದಶಾಸ್ತ್ರಗಳನ್ನು ಮೀರಿ ಅಧರ್ಮಾಸಕ್ತನಾದನು.

೭೬–೭೮. ಅವನು ರಾಜ್ಯವಾಳುತ್ತಿರಲು ಪ್ರಜೆಗಳು ವೇದಾಧ್ಯನ, ಯಜ್ಞಗಳಿಲ್ಲದವರಾದರು. ಅವನು ತನ್ನ ರಾಜ್ಯದಲ್ಲಿ, "ನಾನು ರಾಜ್ಯವಾಳುತ್ತಿರುವಾಗ ಯಾರೂ ದಾನಮಾಡಬಾರದು. ಹೋಮಿಸಕಊಡದು". ಎಂದು ಡಂಗುರ ಹಾಕಿಸಿದನು. ಈ ಕ್ರೂರ ಪ್ರತಿಜ್ಞೆಯಿಂದ ವಿನಾಶವುಂಟಾಗಲು ಕುಪಿತರಾದ ಮರೀಚಿ ಮೊದಲಾದ ಮಹರ್ಷಿಗಳು ನನ್ನನ್ನು ಸ್ತುತಿಸಬೇಕೆಂದೂ, ಸಕಲಯಜ್ಞಗಳಿಂದ ಪೂಜಿಸಬೇಕೆಂದೂ, ಹೋಮಿಸಬೇಕೆಂದೂ, ಆಜ್ಞೋಪಿಸಿ ಧರ್ಮದ ಮೇರೆಯನ್ನು ಮೀರಿ ಪ್ರಜೆಗಳನ್ನು ಪೀಡಿಸುತ್ತಿರುವ ಆ ವೇನರಾಜನನ್ನು ಕುರಿತು ಇಂತೆಂದರು.

ತಮತಿಕ್ರಾಂತಮರ್ಯಾದಂ ಪ್ರಜಾಪೀಡನತತ್ಪರಃ ।
ಊಚುರ್ಮಹರ್ಷಯಃ ಕ್ರುದ್ಧಾ ಮರೀಚಿಪ್ರಮುಖಾಸ್ತದಾ ॥ ೭೯ ॥
ಮಾಧರ್ಮಂ ವೇನ ಕಾರ್ಷೀಸ್ತ್ವಂ ನೈಷ ಧರ್ಮಃ ಸನಾತನಃ ।
ಅತ್ರೇರ್ವಂಶೇ ಪ್ರಸೂತೋಽಸಿ ಪ್ರಜಾಪತಿರಸಂಶಯಂ ॥ ೮೦ ॥
ಪಾಲಯಿಷ್ಯೇ ಪ್ರಜಾಶ್ಚೇತಿ ಪೂರ್ವಂ ತೇ ಸಮಯಃ ಕೃತಃ ।
ತಾಂಸ್ತಥಾವಾದಿನಃ ಸರ್ವಾನ್ಬ್ರಹ್ಮರ್ಷೀನಬ್ರವೀತ್ತದಾ ॥ ೮೧ ॥
ವೇನಃ ಪ್ರಹಸ್ಯ ದುರ್ಬುದ್ಧಿರಿದಂ ವಚನಕೋವಿದಃ ।
ಸ್ರಷ್ಟಾ ಧರ್ಮಸ್ಯ ಕಶ್ಚಾನ್ಯಃ ಶ್ರೋತವ್ಯಂ ಕಸ್ಯ ವಾ ಮಯಾ ॥ ೮೨ ॥
ವೀರ್ಯಶ್ರುತತಪಸ್ಸತ್ಯೈರ್ಮಯಾನ್ಯಃ ಕಃ ಸಮೋ ಭುವಿ ।
ಮದಾತ್ಮಾನೋ ನ ನೂನಂ ಯೂಯಂ ಜಾನೀಥ ತತ್ತ್ವತಃ ॥ ೮೩ ॥
ಪ್ರಭವಂ ಸರ್ವಲೋಕಾನಾಂ ಧರ್ಮಾಣಾಂ ಚ ವಿಶೇಷತಃ ।
ಇತ್ಥಂ ದೇಹೇನ ಪೃಥಿವೀಂ ಭಾವೇನ ಯಜನೇನ ಚ ॥ ೮೪ ॥
ಸೃಜೇಯಂ ಚ ಗ್ರಸೇಯಂ ಚ ನಾತ್ರ ಕಾರ್ಯಾ ವಿಚಾರಣಾ ।
ಯದಾ ನ ಶಕ್ಯತೇ ಸ್ತಂಭಾನ್ಮತ್ತಶ್ಚೈವ ವಿಮೋಹಿತಃ ॥ ೮೫ ॥

೮೦–೮೨. "ವೇನ! ನೀನು ಅಧರ್ಮವನ್ನಾಚರಿಸಬೇಡ, ಇದು ಸನಾತನ ಧರ್ಮದ ಸಂಪ್ರದಾಯವಲ್ಲ. ಅತ್ರಿವಂಶದಲ್ಲಿ ಜನಿಸಿದ ನೀನು ನಿಶ್ಚಯವಾಗಿಯೂ ಪ್ರಜಾಪಾಲನಾಗಿರುವೆ. ಪ್ರಜೆಗಳನ್ನು ಕಾಪಾಡುವೆನೆಂದು ಹಿಂದೆ ಪ್ರತಿಜ್ಞೆ ಮಾಡಿರುವೆ" ಋಷಿಗಳು ಹೀಗೆನ್ನಲು ಅವರನ್ನು ಕುರಿತು ದುರ್ಬುದ್ಧಿಯೂ, ಮಾತಿನಲ್ಲಿ ಚತುರನೂ ಆದ ವೇನನು ನಕ್ಕುಹೀಗೆಂದನು. "ಧರ್ಮವನ್ನು ಸೃಷ್ಟಿಸಿದವರು ಬೇರೆಯಾರಿರುವರು. ನಾನು ಯಾರು ಹೇಳಿದ ಧರ್ಮವನ್ನು ಕೇಳಬೇಕು.

೮೩–೮೮, ಲೋಕದಲ್ಲಿ ಶಕ್ತಿ, ವಿದ್ಯೆ, ತಪಸ್ಸು, ಸತ್ಯಗಳಲ್ಲಿ ನನಗೆ ಸಮನಾರು ? ನನ್ನ ಸ್ವರೂಪರಾದ ನೀವು ಸಮಸ್ತ ಲೋಕಗಳಿಗೂ, ಧರ್ಮಗಳಿಗೂ ಉತ್ಪತ್ತಿಕಾರಣನಾದ ನನ್ನನ್ನು ನಿಜವಾಗಿ ಅರಿಯಲಿಲ್ಲ. ನಾನು ಇಂತಹ ಭೂಮಿಯನ್ನು ಮನಸ್ಸಿನಿಂದಲೂ, ಯಜ್ಞದಿಂದಲೂ, ಸೃಷ್ಟಿಸುವೆನು. ಸಂಹರಿಸುವೆನು. ಈ ವಿಷಯದಲ್ಲಿ ಸಂದೇಹವಿಲ್ಲ ಹೀಗೆ ಭ್ರಾಂತಿಯಿಂದ ನುಡಿಯುತ್ತಿರುವ ಆ ವೇನನ್ನು ಸಮಾಧಾನಗೊಳಿಸಲು ಸಾಧ್ಯವಾಗದಿರಲು ಕುಪಿತರಾದ ಮಹರ್ಷಿಗಳು ಆಥರ್ವಣ ಮಂತ್ರದಿಂದ ಬಲಿಷ್ಠನಾದ ಅವನನ್ನು ಕೊಂದು ಕೋಪದಿಂದ ಅವನ ಎಡತೋಳನ್ನು ಕಡೆದರು. ಆಗ ಕಡೆಯಲ್ಪಡುತ್ತಿರುವ ಅವನ ತೋಳಿನಿಂದ ಮೊದಲು ಕುಳ್ಳನೂ, ಅತ್ಯಂತ

ಅಪನೇತುಂ ನೃಪೋ ವೇನಸ್ತತ್ರ ಕ್ರುದ್ಧಾ ಮಹರ್ಷಯಃ ।
ಆಥರ್ವಣೇನ ಮಂತ್ರೇಣ ಹತ್ವಾ ತಂ ತೇ ಮಹಾಬಲಂ ॥ ೮೬ ॥
ತತೋಽಸ್ಯ ವಾಮಬಾಹುಂ ತೇ ಮಮಂಥುರ್ಭೃಶಕೋಪಿತಾಃ ।
ತಸ್ಮಾಚ್ಚ ಮಥ್ಯಮಾನಾನ್ವೈ ಜಜ್ಞೇ ಪೂರ್ವಮಿತಿ ಶ್ರುತಿಃ ॥ ೮೭ ॥
ಹ್ರಸ್ವೋಽತಿಮಾತ್ರಃ ಪುರುಷಃ ಕೃಷ್ಣಶ್ಚಾಪಿ ತದಾ ಪ್ರಿಯೇ ।
ಸ ಭೀತಃ ಪ್ರಾಂಜಲಿಶ್ಚೈವ ತಸ್ಥಿವಾನ್ಸಂಮುಖೇ ಪ್ರಿಯೇ ॥ ೮೮ ॥
ತಮಾರ್ತಂ ವಿಹ್ವಲಂ ದೃಷ್ಟ್ವಾ ನಿಷೀದೇತ್ಯಬ್ರುವನ್ಕಿಲ ।
ನಿಷಾದೋ ವಂಶಕರ್ತಾ ವೈ ತೇನಾಭೂತ್ಪೃಥುವಿಕ್ರಮಃ ॥ ೮೯ ॥
ಧೀವರಾನಸೃಜಚ್ಚಾಪಿ ವೇನಪಾಪಸಮುದ್ಭವಾನ್ ।
ಯೇ ಚಾನ್ಯೇ ವಿಂಧ್ಯನಿಲಯಾಸ್ತಥಾ ವೈ ತುಂಬರಾಃ ಖಸಾಃ ॥ ೯೦ ॥
ಅಧರ್ಮೇ ರುಚಯಶ್ಚಾಪಿ ವರ್ಧಿತಾ ವೇನಪಾಪಜಾಃ ।
ಪುನರ್ಮಹರ್ಷಯಸ್ತೇಽಥ ಪಾಣಿಂ ವೇನಸ್ಯ ದಕ್ಷಿಣಂ ॥ ೯೧ ॥
ಅರಣೀಮಿವ ಸಂರಬ್ಧಾ ಮಮಂಥುರ್ಜಾತಮನ್ಯವಃ ।
ಪೃಥುಸ್ತಸ್ಮಾತ್ಸಮುತ್ಪನ್ನಃ ಕರಾಜ್ಜ್ವಲನಸಂನಿಭಃ ॥ ೯೨ ॥
ಪೃಥೋಃ ಕರತಲಾಚ್ಚಾಪಿ ಯಸ್ಮಾಜ್ಜಾತಸ್ತತಃ ಪೃಥುಃ ।
ದೀಪ್ಯಮಾನಶ್ಚ ವಪುಷಾ ಸಾಕ್ಷಾದಗ್ನಿರಿವ ಜ್ವಲನ್ ॥ ೯೩ ॥

ಪುಟ್ಟನೂ, ಕರಿಬಣ್ಣದವನೂ, ಭೀತನೂ ಆದ ಪುರುಷನೊಬ್ಬನು ಜನಿಸಿ ಕೈಮುಗಿದು ಕೊಂಡು ಮುಂದೆ ನಿಂತನು.

೮೯—೯೨. ಋಷಿಗಳು ದುಃಖಗೊಂಡ ಅವನನ್ನು ಕಂಡು 'ನಿಷೀದ' ಎಂದರು. ಅದರಿಂದ ನಿಷಾದನಾದ ಅವನು ವಂಶವನ್ನು ಸೃಷ್ಟಿಸುವ ಪರಾಕ್ರಮಶಾಲಿಯಾಗಿ ವೇನನ ಪಾಪದಿಂದ ಬೆಸ್ತರನ್ನೂ, ವಿಂಧ್ಯಪರ್ವತವಾಸಿಗಳಾದ ಅಧರ್ಮಬುದ್ಧಿಯುಳ್ಳ ತುಂಬರ, ಖಸರನ್ನೂ ಉಂಟುಮಾಡಿ ಅಭಿವೃದ್ಧಿಗೊಳಿಸಿದನು. ತರುವಾಯ ಮಹರ್ಷಿಗಳು ಕ್ರುದ್ಧರಾಗಿ ವೇನನ ಬಲಗೈಯನ್ನು ಅರಣಿಯನ್ನು ಮಾಡಿಕೊಂಡು ಕಡೆದರು. ಅದರಿಂದ ಬೆಂಕಿಯಂತಿರುವ ಪೃಥುರಾಜನು ಜನಿಸಿದನು.

೯೩—೯೪. ಅವನು ವಿಶಾಲವಾದ ಅಂಗೈಯಿಂದ ಹುಟ್ಟಿದ್ದರಿಂದ ಪೃಥುವೆಂದು ವಿಖ್ಯಾತನಾದನು. ಅಗ್ನಿಯಂತೆ ಜ್ವಲಿಸುತ್ತಿರುವ ಅವನ ಆಜಗವವೆಂಬ ಬಿಲ್ಲನ್ನೂ,

ಧನುರಾಜಗವಂ ಗೃಹ್ಯ ಶರಾಂಶ್ಚಾಶೀವಿಷೋಪಮಾನ್ ।
ಖಡ್ಗಂ ಚ ರಕ್ಷ ಬ್ರಹ್ಮಾರ್ಥಂ ಕವಚಂ ಚ ಮಹಾಪ್ರಭಂ ॥ ೯೪ ॥

ತಸ್ಮಿಞ್ಜಾತೇಽಥ ಭೂತಾನಿ ಸಂಪ್ರಹೃಷ್ಟಾನಿ ಸರ್ವಶಃ ।
ಸಂಬಭೂವುರ್ಮಹಾದೇವಿ ವೇನಶ್ಚ ತ್ರಿದಿವಂ ಗತಃ ॥ ೯೫ ॥

ತತೋ ನದ್ಯಃ ಸಮುದ್ರಾಶ್ಚ ರತ್ನಾನ್ಯಾದಾಯ ಸರ್ವಶಃ ।
ಅಭಿಷೇಕಾಯ ತೇ ಸರ್ವೇ ರಾಜಾನಮುಪತಸ್ಥಿರೇ ॥ ೯೬ ॥

ಪಿತಾಮಹಶ್ಚ ಭಗವಾನ್ನೃಷಿಭಿಶ್ಚ ಸಹಾಮರೈಃ ।
ಸ್ಥಾವರಾಣಿ ಚ ಭೂತಾನಿ ಜಂಗಮಾನಿ ಚ ಸರ್ವಶಃ ॥ ೯೭ ॥

ಸಮಾಗಮ್ಯ ತದಾ ವೈನ್ಯಮಭ್ಯಷಿಂಚನ್ನರಾಧಿಪಂ ।
ಸೋಽಭಿಷಿಕ್ತೋ ಮಹಾತೇಜಾ ದೇವೈರಂಗಿರಸಾದಿಭಿಃ ॥ ೯೮ ॥

ಅಧಿರಾಜ್ಯೇ ಮಹಾಭಾಗಃ ಪೃಥುರ್ವೈನ್ಯಃ ಪ್ರತಾಪವಾನ್ ।
ಪಿತ್ರಾ ನ ರಂಜಿತಾಶ್ಚಾಸ್ಯ ಪ್ರಜಾ ವೈನ್ಯೇನ ರಂಜಿತಾಃ ॥ ೯೯ ॥

ಸರ್ಪಗಳಂತಿರುವ ಬಾಣಗಳನ್ನೂ, ಕತ್ತಿಯನ್ನೂ, ಅತಿಶಯಕಾಂತಿಯುಳ್ಳ ಕವಚವನ್ನೂ, ಲೋಕರಕ್ಷಣೆಗಾಗಿ ಹಿಡಿದುಕೊಂಡೇ ಹುಟ್ಟಿದನು.

೯೫. ಮಹಾದೇವಿ! ಅವನು ಜನಿಸಿದ ಕೂಡಲೆ ಪ್ರಾಣಿಗಳು ಎಲ್ಲೆಡೆಯಲ್ಲಿಯೂ ಹರ್ಷಗೊಂಡುವು. ವೇನನು ದೇವಲೋಕಕ್ಕೆ ತೆರಳಿದನು.

೯೬. ತರುವಾಯ ನದಿಗಳೂ, ಸಮುದ್ರಗಳೂ, ರತ್ನಗಳನ್ನು ಹಿಡಿದುಕೊಂಡು ಅಭಿಷೇಕ ಮಾಡುವುದಕ್ಕಾಗಿ ದೊರೆಯನ್ನು ಸಮೀಪಿಸಿದುವು.

೯೭-೯೯. ಬ್ರಹ್ಮನು ಮುನಿಗಳಿಂದಲೂ, ದೇವತೆಗಳಿಂದಲೂ, ಸ್ಥಾವರ ಜಂಗಮ ಪ್ರಾಣಿಗಳಿಂದಲೂ ಸಹಿತನಾಗಿ ಆ ಪೃಥುವಿದ್ದೆಡೆಗೆ ಬಂದು ಅವನಿಗೆ ಪಟ್ಟಾಭಿಷೇಕಮಾಡಿದನು. ಹೀಗೆ ಅಂಗಿರ ಮೊದಲಾದ ಮುನಿವರ್ಯರಿಂದ ರಾಜ್ಯದಲ್ಲಿ ಅಭಿಷಿಕ್ತನಾದ ಅತಿ ತೇಜಸ್ವಿಯಾದ ಅವನು ತಂದೆಯಾದ ವೇನನು ಸಂತೋಷಗೊಳಿಸದ ಪ್ರಜೆಗಳನ್ನು ಆನಂದಗೊಳಿಸಿದನು.

ತತೋ ರಾಜೇತಿ ನಾಮಾಸ್ಯ ಅನುರಾಗಾದಜಾಯತ ।
ಆಪಃ ಸಸ್ತಂಭಿರೇ ಚಾಸ್ಯ ಸಮುದ್ರಮಭಿಯಾಸತ್ಯಃ ॥ ೧೦೦ ॥
ಪರ್ವತಾಶ್ಚಾಪಿ ಶೀರ್ಯಂತೇ ಧ್ವಜಸಂಗೋಽಪಿ ನಾಭವತ್ ।
ಅಕೃಷ್ಟಪಚ್ಯಾ ಪೃಥಿವೀ ಸಿಧ್ಯಂತ್ಯನ್ನಾನಿ ಚಿಂತಯಾ ॥
ಸರ್ವಕಾಮದುಘಾವಃ ಪುಟಕೇಪುಟಕೇ ಮಧು ॥ ೧೦೧ ॥
ತಸ್ಮಿನ್ನೇವ ತದಾ ಕಾಲೇ ಪುನರ್ಜಜ್ಞೇಽಥ ಮಾಗಧಃ ।
ಸಾಮಾಜೇಷು ಚ ಗಾಯತ್ಸು ಸ್ರುಗ್ಭಾಂಡಾದ್ವೈಶ್ವದೇವಿಕಾತ್ ॥ ೧೦೨ ॥
ಸಾಮಗೇಷು ಸಮುತ್ಪನ್ನಸ್ತಸ್ಮಾನ್ಮಗಧ ಉಚ್ಯತೇ ।
ಐಂದ್ರೇಣ ಹವಿಷಾ ಚಾಪಿ ಹವಿಃ ಪೃಕ್ತಂ ಬೃಹಸ್ಪತಿಃ ॥ ೧೦೩ ॥
ಯದಾ ಜುಹಾವ ಚೇಂದ್ರಾಯ ತತಸ್ತತೋ ವ್ಯಜಾಯತ ।
ಪ್ರಮಾದಸ್ತತ್ರ ಸಂಜಜ್ಞೇ ಪ್ರಾಯಶ್ಚಿತ್ತಂ ಚ ಕರ್ಮಸು ॥ ೧೦೪ ॥
ಶೇಷಹವ್ಯೇನ ಯತ್ಪೃಕ್ತಮಭಿಭೂತಂ ಗುರೋರ್ಹವಿಃ ।
ಅಧರೋತ್ತರಸ್ವಾರೇಣ ಜಜ್ಞೇ ತದ್ವರ್ಣವೈಕೃತಂ ॥ ೧೦೫ ॥
ಯಜ್ಞಸ್ತಸ್ಯಾಂ ಸಮಭವದ್ಬ್ರಾಹ್ಮಣ್ಯಾಂ ಕ್ಷತ್ರಯೋನಿತಃ ।
ತತಃ ಪೂರ್ವೇಣ ಸಾಧರ್ಮ್ಯಾತ್ತುಲ್ಯಧರ್ಮಾಃ ಪ್ರಕೀರ್ತಿತಾಃ ॥ ೧೦೬ ॥

೧೦೦–೧೦೧. ಆದರಿಂದ ಇವನಿಗೆ ರಾಜನೆಂದು ಹೆಸರಾಯಿತು. ಇವನು ಸಮುದ್ರಕ್ಕೆ ಅಭಿಮುಖನಾಗಲು ನೀರು ಸ್ತಬ್ಧವಾಯಿತು. ಧ್ವಜವಿಲ್ಲದಿದ್ದರೂ ಪರ್ವತಗಳು ಸೀಳಾದುವು. ಚಿಂತಿಸುವುದರಿಂದಲೆ ಉಳದ ಭೂಮಿಯು ಧಾನ್ಯಗಳನ್ನು ಉಂಟುಮಾಡಿತು. ಗೋವುಗಳು ಸಕಲೇಷ್ಟಾರ್ಥಗಳನ್ನು ಕರೆದುವು. ಪ್ರತಿ ಜೇನು ಗೂಡಿನಲ್ಲಿಯೂ ಜೇನುತುಪ್ಪವು ತುಂಬಿಕೊಂಡಿತು.

೧೦೨. ಅದೇ ಸಮಯದಲ್ಲಿ ಸಾಮವೇದಿಗಳು ಸಾಮಗಾನ ಮಾಡುತ್ತಿರಲು ವೈಶ್ವದೇವಸ್ರುಗ್ಭಾಂಡದಿಂದ ಸ್ತುತಿಪಾಠಕನು ಹುಟ್ಟಿದನು.

೧೦೩–೧೦೪. ಸಾಮಗಾನದಿಂದ ಹುಟ್ಟಿದ ಕಾರಣ ಅವನು ಮಾಗಧನೆಂದು ಪ್ರಸಿದ್ಧನಾದನು. ಬೃಹಸ್ಪತಿಯು ಇಂದ್ರನ ಹವಿಸ್ಸಿನಿಂದ ಇಂದ್ರನನ್ನುದ್ದೇಶಿಸಿ ಹೋಮಿಸಲು ಮಾಗಧನು ಜನಿಸಿದನು. ಅಲ್ಲಿ ಕರ್ಮದಲ್ಲಿ ವ್ಯತ್ಯಾಸವಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಯಿತು.

೧೦೫–೧೦೬. ಶೇಷಹವಿಸ್ಸಿನಿಂದ ಬೃಹಸ್ಪತಿಯ ಹವಿಸ್ಸು ಕೆಟ್ಟಿತು. ಸ್ವರ ವ್ಯಾತ್ಯಾಸವಾದ್ದರಿಂದ ವರ್ಣವ್ಯತ್ಯಾಸವಾಗಿ ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಹಿಂದಿನ ಮಾಗಧನಿಗೆ ಸಮಾನನಾದ ಮತ್ತೊಬ್ಬನು ಜನಿಸಿದನು.

ಮಧ್ಯಮೋ ಹ್ಯೇಷ ತತ್ತ್ವಸ್ಯ ಧರ್ಮಃ ಕ್ಷತ್ರೋಪಜೀವನಂ ।
ರಥನಾಗಾಶ್ವಚರಿತಂ ಜಘನ್ಯಂ ಚ ಚಿಕಿತ್ಸಿತಂ ॥ ೧೦೭ ॥
ಪೃಥೋಃ ಕಥಾರ್ಥಂ ತೌ ತತ್ರ ಸಮಾಹೂತೌ ಮಹರ್ಷಿಭಿಃ ।
ತಾವೂಚುರ್ಮುನಯಃ ಸರ್ವೇ ಸ್ತೂಯತಾಮಿತಿ ಪಾರ್ಥಿತಃ ॥ ೧೦೮ ॥
ಕರ್ಮಭಿಶ್ಚಾನುರೂಪೋಽಹಿ ಯತೋಽಯಂ ಪೃಥಿವೀಪತಿಃ ।
ತಾನೂಚುಸ್ತದಾ ಸರ್ವಾನ್ನೃಷೀಂಶ್ಚ ಸೂತಮಾಗಧೌ ॥ ೧೦೯ ॥
ಆವಾಂ ದೇವಾನೃಷೀಂಶ್ಚ ಪ್ರೀಣಯಾವ ಸ್ವಕರ್ಮಭಿಃ ।
ನ ಚಾಸ್ಯ ವಿದ್ಮೋ ವೈ ಕರ್ಮ ನ ತಥಾ ಲಕ್ಷಣಂ ಯಶಃ ॥ ೧೧೦ ॥
ಸ್ತೋತ್ರಂ ಯೇನಾಸ್ಯ ಸಂಕುರ್ವೋ ರಾಜ್ಞಸ್ತೇಜಸ್ವಿನೋ ದ್ವಿಜಾಃ ।
ಋಷಿಭಿಸ್ತೌ ನಿಯುಕ್ತೌ ತು ಭವಿಷ್ಯೈಃ ಸ್ತೂಯತಾಮಿತಿ ॥ ೧೧೧ ॥
ಯಾನಿ ಕರ್ಮಾಣಿ ಕೃತವಾನ್ಪೃಥುಃ ಪಶ್ಚಾನ್ಮಹಾಬಲಃ ।
ತಾನಿ ಗೀತಾನಿ ಬದ್ಧಾನಿ ಸ್ತುವದ್ಭಿಃ ಸೂತಮಾಗಧೈಃ ॥ ೧೧೨ ॥
ತತಃ ಶ್ರುತಾರ್ಥಃ ಸುಪ್ರೀತಃ ಪೃಥುಃ ಪ್ರಾದಾತ್ಪ್ರಜೇಶ್ವರಃ ।
ಅನೂಪದೇಶಂ ಸೂತಾಯ ಮಾಗಧಾನ್ಮಾಗಧಾಯ ಚ ॥ ೧೧೩ ॥

೧೦೭–೧೧೧. ಬ್ರಹ್ಮಜ್ಞಾನ ಬಾಹ್ಯನೂ, ಕ್ಷತ್ರಿಯಸೇವಕನೂ. ರಥ, ಆನೆ, ಕುದುರೆಗಳನ್ನು ನಡೆಯಿಸುವವನೂ, ನೀಚನೂ, ವೈದ್ಯವೃತ್ತಿಯವನೂ ಆದ ಇವನನ್ನೂ, ಮಾಗಧನನ್ನೂ ಮುನಿಗಳು ಕರೆಯಿಸಿ ಅನುರೂಪ ಕರ್ಮವುಳ್ಳ ಪೃಥುವನ್ನು ಹೊಗಳಿರಿ ಎಂದರು. ಆಗ ಆ ಸೂತಮಾಗಧರು ಆ ಮುನಿಗಳನ್ನು ಕುರಿತು ಇಂತೆಂದರು. ನಾವು ದೇವತೆಗಳನ್ನೂ ಮುನಿಗಳನ್ನೂ, ನಮ್ಮ ಕಾರ್ಯಗಳಿಂದ ಸಂತೋಷಗೊಳಿಸುವೆವು. ನಾವು ಈ ಪೃಥುವಿನ ಕಾರ್ಯಗಳನ್ನೂ, ಲಕ್ಷಣವನ್ನೂ, ಕೀರ್ತಿಯನ್ನೂ ಅರಿಯೆವು. ಬ್ರಾಹ್ಮಣರೆ! ಆದರಿಂದ ತೇಜಸ್ವಿಯಾದ ಈ ರಾಜನನ್ನು ಹೇಗೆ ಹೊಗಳುವೆವು". ಆಗ ಮುನಿಗಳು ಅವನ ಮುಂದಿನ ಕಾರ್ಯಗಳನ್ನು ಸ್ತುತಿಸುವಂತೆ ಆ ಸೂತಮಾಗಧರನ್ನು ನೇಮಿಸಿದರು.

೧೧೨. ಅತಿಬಲಿಷ್ಠನಾದ ಪೃಥುವು ಮಾಡಿದ ಕಾರ್ಯಗಳನ್ನು ಸೂತಮಾಗಧರು ಹಾಡುಗಳನ್ನು ರಚಿಸಿ ಹೊಗಳಿದರು.

೧೧೩. ಸಾರ್ವಭೌಮನಾದ ಪೃಥುವು ಆ ಹಾಡುಗಳನ್ನು ಕೇಳಿ ಸಂತುಷ್ಟನಾಗಿ ಸೂತನಿಗೆ ಅನೂಪ ದೇಶವನ್ನೂ, ಮಾಗಧನಿಗೆ ಮಗಧ ದೇಶವನ್ನು ಕೊಟ್ಟನು.

ತದಾದಿ ಪೃಥಿವೀಪಾಲಾಃ ಸ್ತೂಯಂತೇ ಸೂತಮಾಗಧೈಃ ।
ಆಶೀರ್ವಾದೈಃ ಪ್ರಶಂಸ್ಯಂತೇ ಸೂತಮಾಗಧವಂದಿಭಿಃ ॥ ೧೧೪ ॥
ತಂ ದೃಷ್ಟ್ವಾ ಪರಂ ಪ್ರೀತಾಃ ಪ್ರಜಾ ಊಚುರ್ಮಹರ್ಷಯಃ ।
ಏಷ ವೋ ವೃತ್ತಿದೋ ವೈನ್ಯೋ ವಿಹಿತೋಽಥ ನರಾಧಿಪಃ ॥ ೧೧೫ ॥
ತತೋ ವೈನ್ಯಂ ಮಹಾಭಾಗಂ ಪ್ರಜಾಃ ಸಮಭಿದುದ್ರುವುಃ ।
ತ್ವಂ ಪೃಥೋ ಶಕ್ತಿವಿಧಾತೇತಿ ಮಹರ್ಷಿವಚನಾತ್ತಥಾ ॥ ೧೧೬ ॥
ಸೋಽಭೀಹಿತಃ ಪ್ರಜಾಭಿಸ್ತು ಪ್ರಜಾಹಿತಚಿಕೀರ್ಷಯಾ ।
ಧನುರ್ಗೃಹೀತ್ವಾ ಬಾಣಾಂಶ್ಚ ವಸುಧಾಮಾರ್ದಯದ್ಬಲೀ ॥ ೧೧೭ ॥
ತತೋ ವೈನ್ಯಭಯತ್ರಸ್ತಾ ಗೌರ್ಭೂತ್ವಾ ಪ್ರಾದ್ರವನ್ಮಹೀ ।
ತಾಂ ಧೇನುಂ ಪೃಥುರಾದಾಯ ದ್ರವಂತೀಮನ್ವಧಾವತ ॥ ೧೧೮ ॥
ಸಾ ಲೋಕಾನ್ಬ್ರಹ್ಮಲೋಕಾದೀನ್ಗತ್ವಾ ವೈನ್ಯಭಯಾತ್ತದಾ ।
ದದರ್ಶ ಜಾಗ್ರತೋ ವೈನ್ಯಂ ಕಾರ್ಮುಕೋದ್ಯತಪಾಣಿನಂ ॥ ೧೧೯ ॥
ಜ್ವಲದ್ಭಿರ್ವಿಶಿಖೈಸ್ತೀಕ್ಷ್ಣೈರ್ದೀಪ್ತತೇಜಸ್ಸಮನ್ವಿತೈಃ ।
ಮಹಾಯೋಗಂ ಮಹಾತ್ಮನಂ ದುರ್ಧರ್ಷಮಮರೈರಪಿ ॥ ೧೨೦ ॥

---

೧೧೪. ಅದು ಮೊದಲ್ಗೊಂಡು ದೊರೆಗಳನ್ನು ಸೂತ ಮಾಗಧರು ಸ್ತುತಿಸಿ ಆಶೀರ್ವಚನಗಳಿಂದ ಪ್ರಶಂಸಿಸುವರು.

೧೧೫. ವೈನ್ಯನನ್ನು ಮಹರ್ಷಿಗಳು ಕಂಡು ಸಂತೋಷಗೊಂಡು ಪ್ರಜೆಗಳನ್ನು ಕುರಿತು ನಿಮಗೆ ವೃತ್ತಿಯನ್ನೀಯಲು ಈ ದೊರೆಯನ್ನು ನೇಮಿಸಿದ್ದೇವೆ.

೧೧೬. ಪ್ರಜೆಗಳು ಮುನಿಗಳ ಮಾತಿನಂತೆ ವೈನ್ಯನನ್ನು ಎದುರುಗೊಂಡು ನೀನು ನಮಗೆ ಜೀವನವನ್ನು ಕಲ್ಪಿಸತಕ್ಕವನೆಂದರು.

೧೧೭. ಪ್ರಜೆಗಳು ಹೀಗೆನ್ನಲು ಅವನು ಅವರಿಗೆ ಹಿತವನ್ನುಂಟುಮಾಡಲು ಬಿಲ್ಲು ಬಾಣಗಳನ್ನು ತೆಗೆದುಕೊಂಡು ಭೂಮಿಯನ್ನು ಹೊಡೆದನು.

೧೧೮. ಬಳಿಕ ವೈನ್ಯನಿಂದ ಹೆದರಿದ ಧರೆಯು ಗೋವಿನ ಆಕಾರವನ್ನು ತಾಳಿ ಓಡಿದಳು. ಅವಳನ್ನು ಧನುರ್ಧಾರಿಯಾದ ಪೃಥುವು ಅಟ್ಟಿಸಿಕೊಂಡು ಹೋದನು.

೧೧೯–೧೨೦. ಆ ಭೂಮಿಯು ವೈನ್ಯನಭಯದಿಂದ ಬ್ರಹ್ಮಲೋಕ ಮೊದಲಾದುವುಗಳಿಗೆ ಹೋಗಿ ಮುಂದೆ ಪ್ರಕಾಶಿಸುತ್ತಿರುವ ಬಾಣಗಳಿಂದ ಸಹಿತನೂ, ಮಹಾಯೋಗಿಯೂ, ಮಹಾತ್ಮನೂ, ದೇವತೆಗಳಿಂದಲೂ ತಿರಸ್ಕರಿಸಲಶಕ್ಯನೂ ಆದ ವೈನ್ಯನನ್ನು ಕಂಡಳು.

ಅಲಭಂತೀ ತು ಸಾ ತ್ರಾಣಂ ವೈನ್ಯಮೇವಾಭ್ಯಪದ್ಯತ ।
ಕೃತಾಂಜಲಿಪುಟಾ ದೇವೀ ಪೂಜ್ಯಾ ಲೋಕೈಸ್ತ್ರಿಭಿಸ್ಸದಾ ॥ ೧೨೧ ॥
ಉವಾಚ ಚೈನಂ ನಾಧರ್ಮ್ಯಂ ಸ್ತ್ರೀವಧಂ ಪರಿಪಶ್ಯಸಿ ।
ಕಥಂ ಧಾರಯಿತಾ ಚಾಸಿ ಪ್ರಜಾ ರಾಜನ್ಮಯಾ ವಿನಾ ॥ ೧೨೨ ॥
ಮಯಿ ಲೋಕಾಃ ಸ್ಥಿತಾ ರಾಜನ್ಮಯೇದಂ ಧಾರ್ಯತೇ ಜಗತ್ ।
ಮದ್ವೃತೇ ತು ವಿನಶ್ಯೇಯುಃ ಪ್ರಜಾಃ ಪಾರ್ಥಿವ ವಿದ್ಧಿ ತತ್ ॥ ೧೨೩ ॥
ಸ ಮಾಂ ನಾರ್ಹಸಿ ಹಂತುಂ ವೈ ಶ್ರೇಯಶ್ಚೇತ್ತ್ವಂ ಚಿಕೀರ್ಷಸಿ ।
ಪ್ರಜಾನಾಂ ಪೃಥಿವೀಪಾಲ ಶೃಣುಷ್ವೇದಂ ವಚೋ ಮಮ ॥ ೧೨೪ ॥
ಉಪಾಯತಃ ಸಮಾರಬ್ಧಾಃ ಸರ್ವೇ ಸಿದ್ಧಂತ್ಯುಪಕ್ರಮಾಃ ।
ಹತ್ವಾ ಮಾಂ ತ್ವಂ ನ ಶಕ್ತೋ ವೈ ಪ್ರಜಾಃ ಪಾಲಯಿತುಂ ನೃಪ ॥ ೧೨೫ ॥
ಅನುಕೂಲಾ ಭವಿಷ್ಯಾಮಿ ತ್ಯಜ ಕೋಪಂ ಮಹಾದ್ಯುತೇ ।
ಅವಧ್ಯಾಶ್ಚ ಸ್ತ್ರಿಯಃ ಪ್ರಾಹುಸ್ತಿರ್ಯಗ್ಯೋನಿಗತಾ ಅಪಿ ॥ ೧೨೬ ॥

---

೧೨೧. ತ್ರೈಲೋಕ್ಯ ಪೂಜ್ಯಳಾದ ಭೂಮಿಯು ಬೇರೆ ರಕ್ಷಕರನ್ನು ಪಡೆಯದೆ ಕೈಮುಗಿದುಕೊಂಡು ವೈನ್ಯನನ್ನೇ ಮರೆಹೊಕ್ಕಳು.

೧೨೨. ಅವಳು, "ಅರಸ! ನೀನು ಸ್ತ್ರೀವಧೆಯನ್ನು ಅಧರ್ಮವೆಂದರಿಯುವುದಿಲ್ಲವೆ? ನನ್ನನ್ನು ಬಿಟ್ಟು ನೀನು ಪ್ರಜೆಗಳನ್ನು ಹೇಗೆ ಪೋಷಿಸುವೆ?.

೧೨೩. ಲೋಕಗಳೆಲ್ಲ ನನ್ನಲ್ಲಿ ನೆಲೆಸಿರುವುವು. ನಾನು ಈ ಜಗತ್ತನ್ನು ಧರಿಸುವೆನು. ನಾನಿಲ್ಲದಿದ್ದರೆ ಪ್ರಜೆಗಳು ನಾಶವಾಗುವರು ಅರಸ! ನೀನು ಅದನ್ನು ತಿಳಿದುಕೊ.

೧೨೪. ನೀನು ಪ್ರಜೆಗಳಿಗೆ ಹಿತವನ್ನುಂಟುಮಾಡಲು ಬಯಸುವುದಾದರೆ ನನ್ನನ್ನು ಕೊಲ್ಲಲರ್ಹನಲ್ಲ ನನ್ನೀಮಾತನ್ನು ಕೇಳು.

೧೨೫ ಯುಕ್ತಿಯಿಂದ ಮಾಡಿದ ಕೆಲಸಗಳೆಲ್ಲ ಕೈಗೂಡುವುವು. ನೀನು ನನ್ನನ್ನು ಕೊಂದು ಪ್ರಜೆಗಳನ್ನು ಕಾಪಾಡಲು ಸಮರ್ಥನಲ್ಲ.

೧೨೬. ಅತಿ ತೇಜಸ್ವಿಯಾದ ದೊರೆಯೆ! ನಾನು ನಿನಗೆ ಸಹಾಯಕಳಾಗುವೆನು. ನೀನು ಕೋಪವನ್ನು ಬಿಡು. ಹೆಣ್ಣು ಪಶುಪಕ್ಷಿಗಳನ್ನೂ ಕೊಲ್ಲಬಾರದೆಂದು ಶಾಸ್ತ್ರಕಾರರು ಹೇಳುವರು.

ಏಕಸ್ಮಿನ್ನಿಧನಂ ಪ್ರಾಪ್ತೇ ಪಾಪಿಷ್ಠೇ ಕ್ರೂರಕರ್ಮಣಿ ।
ಬಹೂನಾಂ ಭವತಿ ಕ್ಷೇಮಸ್ತತ್ರ ಪುಣ್ಯಪ್ರದೋ ವಧಃ ।
ಸತ್ಯೇವಂ ಪೃಥಿವೀಪಾಲ ಧರ್ಮಂ ಮಾ ತ್ಯಕ್ತುಮರ್ಹಸಿ ॥ ೧೨೭ ॥
ಏವಂ ವಿಧಂ ತು ತದ್ವಾಕ್ಯಂ ಶ್ರುತ್ವಾ ರಾಜಾ ಮಹಾಬಲಃ ।
ಕ್ರೋಧಂ ನಿಗೃಹ್ಯ ಧರ್ಮಾತ್ಮಾ ವಸುಧಾಮಿದಮಬ್ರವೀತ್ ॥ ೧೨೮ ॥
ಏಕಸ್ಯಾರ್ಥೇ ಚ ಯೋ ಹನ್ಯಾದಾತ್ಮನೋ ವಾ ಪರಸ್ಯ ವಾ ।
ಏಕಂ ವಾಪಿ ಬಹೂನ್ವಾಪಿ ಕಾಮತಶ್ಚಾಸ್ತಿ ಪಾತಕಂ ॥ ೧೨೯ ॥
ಯಸ್ಮಿಂಸ್ತು ನಿಧನಂ ಪ್ರಾಪ್ತಾ ಏಧಂತೇ ಬಹವಃ ಸುಖಂ ।
ತಸ್ಮಿನ್ಹತೇ ಚ ಭೂಯೋ ಹಿ ಪಾತಕಂ ನಾಸ್ತಿ ತಸ್ಯ ವೈ ॥ ೧೩೦ ॥
ಸೋಽಹಂ ಪ್ರಜಾನಿಮಿತ್ತಂ ತ್ವಾಂ ಹನಿಷ್ಯಾಮಿ ವಸುಂಧರೇ ।
ಯದಿ ಮೇ ವಚನಂ ನಾದ್ಯ ಕರಿಷ್ಯಸಿ ಜಗದ್ಧಿತಂ ॥ ೧೩೧ ॥
ತ್ವಾಂ ನಿಹತ್ಯಾದ್ಯ ಬಾಣೇನ ಮಚ್ಛಾಸನಪರಾಙ್ಮುಖೀಂ ।
ಆತ್ಮಾನಂ ಪ್ರಥುಕೃತ್ವೇಹ ಪ್ರಜಾ ಧಾರಯಿತಾಸ್ಮ್ಯಹಂ ॥ ೧೩೨ ॥
ಸಾ ತ್ವಂ ವಚನಮಾಸ್ಥಾಯ ಮಮ ಧರ್ಮಭೃತಾಂ ವರೇ ।
ಸಂಜೀವಯ ಪ್ರಜಾ ನಿತ್ಯಂ ಶಕ್ತಾ ಹ್ಯಸಿ ನ ಸಂಶಯಃ ॥ ೧೩೩ ॥

---

೧೨೭. ಪಾಪಿಷ್ಠನೂ, ಹಿಂಸಕನೂ ಆದ ಒಬ್ಬನನ್ನು ಕೊಂದರೆ ಅನೇಕರಿಗೆ ಕ್ಷೇಮವಾಗುವುದಾದರೆ ಆ ವಧೆಯು ಪುಣ್ಯವನ್ನೀಯುವುದು. ಅರಸ! ಹೀಗಿರುವಾಗ ನೀನು ಧರ್ಮವನ್ನು ತ್ಯಜಿಸಬಾರದು". ಎಂದಳು.

೧೨೮. ಧರ್ಮಾತ್ಮನಾದ ಪೃಥುವು ಭೂಮಿಯ ಈ ಮಾತನ್ನು ಕೇಳಿ ಕೋಪವನ್ನು ತಡೆದುಕೊಂಡು ಅವಳನ್ನು ಕುರಿತು ಇಂತೆಂದನು.

೧೨೯. "ತನ್ನ ಅಥವಾ ಇತರನೊಬ್ಬನ ಪ್ರಯೋಜನಕ್ಕಾಗಿ ಒಬ್ಬನನ್ನಾಗಲಿ, ಅನೇಕ ಜನಗಳನ್ನಾಗಲಿ ಕೊಂದರೆ ಪಾಪವಿರುವುದು.

೧೩೦. ಯಾವನು ಮೃತನಾದರೆ ಅನೇಕರು ಸುಖವನ್ನು ಪಡೆಯುವರೊ ಅವನನ್ನು ಕೊಂದರೆ ಪಾಪವಿಲ್ಲ.

೧೩೧. ಎಲೌ ಭೂಮಿಯೆ! ಈಗ ನೀನು ಪ್ರಪಂಚಕ್ಕೆ ಹಿತಕರವಾದ ನನ್ನೀ ಮಾತನ್ನು ನಡೆಯಿಸದಿದ್ದರೆ ನಾನು ಪ್ರಜೆಗಳಿಗಾಗಿ ನಿನ್ನನ್ನು ವಧಿಸುವೆನು.

೧೩೨. ಈಗ ನನ್ನ ಮಾತನ್ನು ಕೇಳದ ನಿನ್ನನ್ನು ಬಾಣದಿಂದ ಕೊಂದು ನಿನ್ನನ್ನು ವಿಶಾಲಗೊಳಿಸಿ ಪ್ರಜೆಗಳನ್ನು ಧರಿಸುವೆನು.

೧೩೩. ಆ ಧರ್ಮಿಷ್ಠರಲ್ಲಿ ಶ್ರೇಷ್ಠಳಾದ ನೀನು ನನ್ನ ಮಾತನ್ನು ಲಾಲಿಸಿ ಪ್ರಜೆಗಳನ್ನು ಯಾವಾಗಲೂ ರಕ್ಷಿಸು. ನೀನು ಈ ಕಾರ್ಯದಲ್ಲಿ ಶಕ್ತಳಾಗಿರುವೆ.

ದುಹಿತೃತ್ವಂ ಹಿ ಮೇ ಗಚ್ಛ ಏವಮೇತನ್ಮಹಚ್ಛರಂ ।
ನಿಯಚ್ಛೇ ತ್ವದ್ವಧಾರ್ಥಂ ಚ ಪ್ರಯುಕ್ತಂ ಘೋರದರ್ಶನಂ ।
ಪ್ರತ್ಯುವಾಚ ತತೋ ವೈನ್ಯಮೇವಮುಕ್ತಾ ಮಹಾಸತೀ ॥ ೧೩೪ ॥
ಸರ್ವಮೇತದಹಂ ರಾಜನ್ವಿಧಾಸ್ಯಾಮಿ ನ ಸಂಶಯಃ ।
ವತ್ಸಂ ತು ಮಮ ಸಂಯುಂಕ್ಷ್ವ ಕ್ಷರೇಯಂ ಯೇ ವತ್ಸಲಾ ॥ ೧೩೫ ॥
ಸಮಾಂ ಚ ಕುರು ಸರ್ವತ್ರ ಮಾಂ ತ್ವಂ ಸರ್ವಭೃತಾಂ ವರ ।
ಯಥಾ ವಿಸ್ಯಂದಮಾನಾಹಂ ಕ್ಷೀರಂ ಸರ್ವತ್ರ ಭಾವಯೇ ॥ ೧೩೬ ॥

ಈಶ್ವರ ಉವಾಚ :—

ತತ ಉತ್ಸಾರಯಾಮಾಸ ಶಿಲಾಜಾಲಾನಿ ಸರ್ವಶಃ ।
ಧನುಷ್ಕೋಟ್ಯಾ ತತೋ ವೈನ್ಯಸ್ತೇನ ಶೈಲಾ ವಿವರ್ಧಿತಾಃ ॥ ೧೩೭ ॥
ಮನ್ವಂತರೇಷ್ವತೀತೇಷು ಚೈವಮಾಸೀದ್ವಸುಂಧರಾ ।
ಸ್ವಭಾವೇನಾಭವತ್ತಸ್ಯಾಃ ಸಮಾನಿ ವಿಷಮಾಣಿ ಚ ॥ ೧೩೮ ॥
ನ ಹಿ ಪೂರ್ವನಿಸರ್ಗೇ ವೈ ವಿಷಮಂ ಪೃಥಿವೀಗತಂ ।
ಪ್ರವಿಭಾಗಃ ಪುರಾಣಾಂ ಚ ಗ್ರಾಮಾಣಾಂ ಚಾಥ ವಿದ್ಯತೇ ॥ ೧೩೯ ॥
ನ ಸಸ್ಯಾನಿ ನ ಗೋರಕ್ಷಂ ನ ಕೃಷಿರ್ನ ವಣಿಕ್ಪಥಃ ॥ ೧೪೦ ॥

---

೧೩೪. ನೀನು ನನ್ನ ಮಗಳಾಗು. ಹೀಗಾದರೆ ನಾನು ನಿನ್ನ ವಧೆಗಾಗಿ ಹೆಡೆಯೇರಿಸಿದ ಬಿಲ್ಲನ್ನು ಹಿಂದಕ್ಕೆ ತೆಗೆದುಗೊಳ್ಳುವೆನು". ಎಂದು ವೈನ್ಯನು ಹೇಳಲು ಭೂಮಿಯು ಹೀಗೆಂದಳು.

೧೩೫. "ದೊರೆಯೆ! ನಾನು ಇದನ್ನೆಲ್ಲ ಮಾಡುವೆನು. ನನಗೊಂದು ಕರುವನ್ನು ಕೊಡು. ಅದರಿಂದ ನಾನು ಹಾಲನ್ನು ಕರೆಯುವೆನು.

೧೩೬. ನಾನು ಕರೆದ ಹಾಲು ಸಮಸ್ತ ಕಡೆಯಲ್ಲಿ ಹರಡುವಂತೆ ನನ್ನನ್ನು ಸಮತಟ್ಟಾಗಿಮಾಡು.

೧೩೭. ಬಳಿಕ ವೈನ್ಯನು ಬಿಲ್ಲಿನ ತುದಿಯಿಂದ ಕಲ್ಲುಗಳನ್ನು ದೂರಮಾಡಲು ಅದರಿಂದ ಪರ್ವತಗಳಾದುವು.

೧೩೮. ಮನ್ವಂತರಗಳು ಕಳೆಯಲು ಭೂಮಿಯು ತನ್ನ ಸ್ವಭಾವದಂತೆ ಸಮ ವಿಷಮವಾಯಿತು.

೧೩೯–೧೪೦. ಹಿಂದೆ ಸೃಷ್ಟಿಕಾಲದಲ್ಲಿ ಭೂಮಿಯು ವಿಷಮವಾಗಿರಲಿಲ್ಲ. ಗ್ರಾಮ, ನಗರಗಳ ವಿಭಾಗವೂ, ಸಸ್ಯ, ಗೋರಕ್ಷಣೆ, ಕೃಷಿ, ಅಂಗಡಿ ಬೀದಿಗಳೂ ಇರಲಿಲ್ಲ.

ಚಾಕ್ಷುಷಸ್ಯಾಂತರೇ ಪೂರ್ವಮಾಸೀದೇತತ್ಪುರಾ ಕಿಲ ।
ವೈವಸ್ವತೇಽನ್ತರೇ ಚಾಸ್ಮಿನ್ಸರ್ವಸ್ಯೈತಸ್ಯ ಸಂಭವಃ ।
ಸಮುತ್ಪನ್ನಂ ಯತ್ರ ಯತ್ರಾಸೀದ್ಭೂಮೇಃ ಕಸ್ಮಿಂಶ್ಚಿದೇವ ಹಿ ॥ ೧೪೧ ॥
ತತ್ರ ತತ್ರ ಪ್ರಜಾಸ್ತಾ ವೈ ನಿವಸಂತಿ ಸ್ಮ ಸರ್ವದಾ ।
ಆಹಾರಃ ಫಲಮೂಲಂ ತು ಪ್ರಜಾನಾಮಭವತ್ಕಿಲ ॥ ೧೪೨ ॥
ಕೃಚ್ಛ್ರೇಣೈವ ತದಾ ತಾಸಾಮಿತ್ಯೇವಮನುಶುಶ್ರುಮ ।
ವೈನ್ಯಾತ್ಪ್ರಭೃತಿ ಲೋಕೇಽಸ್ಮಿನ್ಸರ್ವಸ್ಯೈತಸ್ಯ ಸಂಭವಃ ॥ ೧೪೩ ॥
ಸಂಕಲ್ಪಯಿತ್ವಾ ವತ್ಸಂ ತು ಚಾಕ್ಷುಷಂ ಮನುಮೀಶ್ವರಂ ।
ಪೃಥುರ್ದುದೋಹ ಸಸ್ಯಾನಿ ಸ್ವಹಸ್ತೇ ಪೃಥಿವೀಂ ತತಃ ॥ ೧೪೪ ॥
ಸಸ್ಯಾಥ ತೇನ ದುಗ್ಧಾ ವೈ ವೈನ್ಯೇನೇಯಂ ವಸುಂಧರಾ ।
ಮನುಂ ವೈ ಚಾಕ್ಷುಷಂ ಕೃತ್ವಾ ವತ್ಸಂ ಪಾತ್ರೇ ಚ ಭೂಮಯೇ ॥ ೧೪೫ ॥
ತೇನಾನ್ನೇನ ತದಾ ತಾ ವೈ ವರ್ತಯಂತೇ ಸದಾ ಪ್ರಜಾಃ ।
ಋಷಿಭಿಃ ಶ್ರೂಯತೇ ಚಾಪಿ ಪುನರ್ದುಗ್ಧಾ ವಸುಂಧರಾ ॥ ೧೪೬ ॥
ವತ್ಸಃ ಸೋಮಸ್ತತಸ್ತೇಷಾಂ ದೋಗ್ಧಾ ಚಾಪಿ ಬೃಹಸ್ಪತಿಃ ।
ಪಾತ್ರಮಾಸನ್ಹಿ ಛಂದಾಂಸಿ ಗಾಯತ್ರ್ಯಾದೀನಿ ಸರ್ವಶಃ ॥ ೧೪೭ ॥

೧೪೧—೧೪೨. ಚಾಕ್ಷುಷ ಮನ್ವಂತರದಲ್ಲಿ ಹೀಗೆಯೇ ಇದ್ದಿತು. ಈ ವೈವಸ್ವತ ಮನ್ವಂತರದಲ್ಲಿ ಇವೆಲ್ಲ ಉಂಟಾದುವು. ಭೂಮಿಯು ಸಮವಾಗಿದ್ದಲ್ಲೆಲ್ಲ ಪ್ರಜೆಗಳು ಯಾವಾಗಲೂ ವಾಸಿಸುವರು. ಅವರಿಗೆ ಆಹಾರ, ವಸ್ತುಗಳು ಹಣ್ಣು ಗೆಣಸುಗಳೂ ಸಿಕ್ಕುತ್ತಿದ್ದುವು.

೧೪೩. ಅನಂತರ ಪೃಥುವು ಚಾಕ್ಷುಷಮನುವನ್ನು ಕರುವನ್ನಾಗಿಮಾಡಿ ತನ್ನ ಕೈಯಿಂದಲೆ ಭೂಮಿಯಿಂದ ಸಸ್ಯಗಳನ್ನು ಕರೆದನು.

೧೪೪—೧೪೬. ಹೀಗೆ ವೈನ್ಯನು ಚಾಕ್ಷುಷ ಮನುವನ್ನು ಕರುವನ್ನಾಗಿಮಾಡಿ ಮಣ್ಣಿನ ಪಾತ್ರೆಯಲ್ಲಿ ಸಸ್ಯಗಳನ್ನು ಕರೆಯಲು ಆ ಅನ್ನದಿಂದ ಪ್ರಜೆಗಳು ಜೀವಿಸುತ್ತಿದ್ದರು. ಮರಳಿ ಮುನಿಗಳು ಭೂಮಿಯನ್ನು ಕರೆದರೆಂದು ಕೇಳಲ್ಪಡುತ್ತದೆ.

೧೪೭—೧೫೪. ಆ ಮುನಿಗಳು ಕರೆಯುವಾಗ ಸೋಮನು ಕರುವೂ, ಬೃಹಸ್ಪತಿಯು ಕರೆಯುವವನೂ, ಗಾಯತ್ರ್ಯಾದಿ ಛಂದಸ್ಸುಗಳು ಪಾತ್ರೆಯೂ, ಆ ಮುನಿಗಳ

ಕ್ಷೀರಮಾಸೀತ್ತದಾ ತೇಷಾಂ ತಪೋ ಬ್ರಹ್ಮ ಚ ಶಾಶ್ವತಂ ।
ಪುನಸ್ತತೋ ದೇವಗಣೈಃ ಪುರಂದರಪುರೋಗಮೈಃ ॥ ೧೪೮ ॥

ಸೌವರ್ಣತಂ ಪಾತ್ರಮಾದಾಯ ದುಗ್ಧೇಯಂ ಶ್ರೂಯತೇ ಮಹೀ ।
ವತ್ಸಸ್ತು ಮಘವಾ ಚಾಸೀದ್ದೋಗ್ಧಾ ಚ ಸವಿತಾಭವತ್ ॥ ೧೪೯ ॥

ಕ್ಷೀರಮೂರ್ಜಾಮಧು ಪ್ರೋಕ್ತಂ ವರ್ತಂತೇ ತೇನ ದೇವತಾಃ ।
ಪಿತೃಭಿಃ ಶ್ರೂಯತೇ ಚಾಪಿ ಪುನರ್ದುಗ್ಧಾ ವಸುಂಧರಾ ॥ ೧೫೦ ॥

ರಾಜತಂ ಪಾತ್ರಮಾದಾಯ ಸ್ವಧಾ ತ್ವಕ್ಷಯ್ಯತೃಪ್ತಯೇ ।
ವೈವಸ್ವತೋ ಯಮಸ್ತ್ವಾಸೀತ್ತೇಷಾಂ ವತ್ಸಃ ಪ್ರತಾಪವಾನ್ ॥ ೧೫೧ ॥

ಅಂತಕಶ್ಚಾಭವದ್ದೋಗ್ಧಾ ಪಿತ್ರ್ಯಾಣಾಂ ಭಗವಾನ್ಪ್ರಭುಃ ।
ಅಸುರೈಃ ಶ್ರೂಯತೇ ಚಾಪಿ ಪುನರ್ದುಗ್ಧಾ ವಸುಂಧರಾ ॥ ೧೫೨ ॥

ಆಯಸಂ ಪಾತ್ರಮಾದಾಯ ಬಲಮಾಧಾಯ ಸರ್ವಶಃ ।
ವಿರೋಚನಸ್ತು ಪ್ರಾಹ್ಲಾದಿಸ್ತೇಷಾಂ ವತ್ಸಃ ಪ್ರತಾಪವಾನ್ ॥ ೧೫೩ ॥

ಋತ್ವಿಗ್ದ್ವಿಮೂರ್ಧಾ ದೈತ್ಯಾನಾಂ ದೋಗ್ಧಾ ತು ದಿತಿನಂದನಃ ।
ಮಾಯಾಕ್ಷೀರಂ ದುದೋಹಾಸೌ ದೈತ್ಯಾನಾಂ ತೃಪ್ತಿಕಾರಕಂ ॥ ೧೫೪ ॥

ತೇನೈತೇ ಮಾಯಯಾದ್ಯಾಪಿ ಸರ್ವೇ ಮಾಯಾವಿದೋಽಸುರಾಃ ।
ವರ್ತಯಂತಿ ಮಹಾವೀರ್ಯಾಸ್ತದೇತೇಷಾಂ ಪರಂ ಬಲಂ ॥ ೧೫೫ ॥

ತಪಸ್ಸೂ, ಬ್ರಹ್ಮನೂ ಕ್ಷೀರವೂ ಆದುವು. ಮರಳಿ ಇಂದ್ರನೇ ಮೊದಲಾದ ದಿವಿಜರು ಸುವರ್ಣ ಪಾತ್ರೆಯಿಂದ ಕರೆದರು. ಆಗ ಇಂದ್ರನು ಕರುವೂ, ಸೂರ್ಯನು ಕರೆಯುವವನೂ, ವೂರ್ಜಾಮಧುವು ಹಾಲೂ ಆದುವು. ಅದರಿಂದ ದೇವತೆಗಳು ಜೀವಿಸುವರು. ಪುನಃ ಪಿತೃಗಳೂ ಬೆಳ್ಳಿಯ ಪಾತ್ರೆಯಿಂದ ಶಾಶ್ವತತೃಪ್ತಿಗಾಗಿ ಭೂಮಿಯಿಂದ ಸ್ವಧೆಯನ್ನು ಕರೆದರು. ಆಗ ಸೂರ್ಯನ ಮಗನಾದ ಯಮನು ಕರುವೂ, ಪಿತೃಗಳಲ್ಲಿ ಅಂತಕನೆಂಬುವವನು ಕರೆಯುವವನೂ, ಆದರು. ಅಸುರರೂ ಕಬ್ಬಿಣದ ಪಾತ್ರೆಯಿಂದ ಕರೆದರು ಆಗ ಪ್ರಹ್ಲಾದನ ಮಗನಾದ ವಿರೋಚನನು ಕರುವೂ, ದೈತ್ಯ ಪುರೋಹಿತನಾದ ದ್ವಿಮೂರ್ಧನು ಕರೆಯುವವನೂ, ಅವರಿಗೆ ತೃಪ್ತಿಯನ್ನೀಯುವ ಮಾಯೆಯು ಕ್ಷೀರವೂ ಆದುವು.

೧೫೫. ಆ ಮಾಯೆಯಿಂದಲೆ ಈಗಲೂ ದಾನವರು ಅತ್ಯಂತ ಶಕ್ತಿಯುಳ್ಳವರಾಗಿ ಜೀವಿಸುತ್ತಾರೆ. ಅದೇ ಅವರಿಗೆ ಉತ್ತಮ ಬಲವು.

ನಾಗೈಶ್ಚ ಶ್ರೂಯತೇ ದುಗ್ಧಾ ವತ್ಸಂ ಕೃತ್ವಾ ತು ತಕ್ಷಕಂ ।
ಅಲಾಬುಪಾತ್ರಮಾದಾಯ ವಿಷಂ ಕ್ಷೀರಂ ತದಾ ಮಹತ್ ॥ ೧೫೬ ॥

ತೇಷಾಂ ವೈ ವಾಸುಕಿರ್ದೋಗ್ಧಾ ಕಾದ್ರವೇಯೋ ಮಹಾಯಶಾಃ ।
ನಾಗಾನಾಂ ವೈ ಮಹಾದೇವಿ ಸರ್ಪಾಣಾಂ ಚೈವ ಸರ್ವಶಃ ॥ ೧೫೭ ॥

ತೇನ ವೈ ವರ್ತಯಂತ್ಯುಗ್ರಾ ಮಹಾಕಾಯಾ ವಿಷೋಲ್ಬಣಾಃ ।
ತದಾಹಾರಾಸ್ತದಾಚಾರಾಸ್ತದ್ವೀರ್ಯಾಸ್ತದಪಾಶ್ರಯಾಃ ॥ ೧೫೮ ॥

ಆಮಪಾತ್ರೇ ಪುನರ್ದುಗ್ಧಾ ತ್ವಂತರ್ಧಾನಮಿಯಂ ಮಹೀ ।
ವತ್ಸಂ ವೈಶ್ರವಣಂ ಕೃತ್ವಾ ಯಕ್ಷಪುಣ್ಯಜನೈಸ್ತಥಾ ॥ ೧೫೯ ॥

ದೋಗ್ಧಾ ರಜತನಾಗಸ್ತು ಚಿಂತಾಮಣಿಚರಸ್ತು ಯಃ ।
ಯಕ್ಷಾಧಿಪೋ ಮಹಾತೇಜಾ ವಶೀ ಜ್ಞಾನೀ ಮಹಾತಪಾಃ ॥ ೧೬೦ ॥

ತೇನ ತೇ ವರ್ತಯಂತೀತಿ ಯಕ್ಷಾ ವಸುಭಿರೂರ್ಜಿತೈಃ ।
ರಾಕ್ಷಸೈಶ್ಚ ಪಿಶಾಚೈಶ್ಚ ಪುನರ್ದುಗ್ಧಾ ವಸುಂಧರಾ ॥ ೧೬೧ ॥

ಬ್ರಹ್ಮೋಪೇಂದ್ರಸ್ತು ದೋಗ್ಧಾ ವೈ ತೇಷಾಮಾಸೀತ್ಕುಬೇರತಃ ।
ವತ್ಸಃ ಸುಮಾಲೀ ಬಲವಾನ್ಕ್ಷೀರಂ ರುಧಿರಮೇವ ಚ ॥ ೧೬೨ ॥

೧೫೬–೧೫೭. ನಾಗಗಳೂ ತಕ್ಷಕನನ್ನು ಕರುವನ್ನಾಗಿಯೂ, ಸರ್ಪಗಳಲ್ಲಿ ಅತಿಯಶಸ್ವಿಯಾದ ವಾಸುಕಿಯನ್ನು ಕರೆಯುವವನನ್ನಾಗಿಯೂ ಮಾಡಿ ಸೋರೆಯ ಬುರುಡೆಯ ಪಾತ್ರೆಯಿಂದ ವಿಷವೆಂಬ ಹಾಲನ್ನು ಭೂಮಿಯಿಂದ ಕರೆದರು.

೧೫೮. ದೊಡ್ಡ ಶರೀರವುಳ್ಳವೂ, ವಿಷದಿಂದ ಭಯಂಕರಗಳೂ, ವಿಷಾಹಾರವುಳ್ಳವೂ, ವಿಷದ ಸ್ವಭಾವವುಳ್ಳವೂ, ವಿಷದ ಶಕ್ತಿಯುಳ್ಳವೂ ಆದ ಸರ್ಪಗಳು ಆ ವಿಷದಿಂದ ಜೀವಿಸುತ್ತವೆ.

೧೫೯–೧೬೨. ಜ್ಞಾನಿಯೂ, ತೇಜಸ್ವಿಯೂ, ಸ್ವತಂತ್ರನೂ, ಮಹಾತಪಸ್ವಿಯೂ ಆದ ಯಕ್ಷಾಧಿಪನು ಆಮಪಾತ್ರೆಯಲ್ಲಿ ಕುಬೇರನನ್ನು ಕರುವನ್ನಾಗಿಯೂ, ಚಿಂತಾಮಣಿಯಿಂದ ಸಂಚರಿಸುವ ರಜತನಾಗನನ್ನು ಕರೆಯುವವನನ್ನಾಗಿಯೂ ಮಾಡಿ ಭೂಮಿಯಿಂದ ದ್ರವ್ಯಗಳನ್ನು ಕರೆದನು. ಆದರಿಂದ ಯಕ್ಷರು ಜೀವಿಸುವರು. ರಾಕ್ಷಸರೂ, ಪಿಶಾಚಗಳೂ ಸೇರಿ ಬ್ರಹ್ಮೋಪೇಂದ್ರನನ್ನು ಕರೆಯುವವನನ್ನಾಗಿಯೂ,

ಕಪಾಲಪಾತ್ರೇ ನಿರ್ದುಗ್ಧಾ ತ್ವಂತರ್ಧಾನಂ ತು ರಾಕ್ಷಸೈಃ ।
ತೇನ ಕ್ಷೀರೇಣ ರಕ್ಷಾಂಸಿ ವರ್ತಯಂತೀಹ ಸರ್ವಶಃ ॥ ೧೬೩ ॥
ಪದ್ಮಪತ್ರೇಷು ವೈ ದುಗ್ಧಾ ಗಂಧರ್ವಾಪ್ಸರಸಾಂ ಗಣೈಃ ।
ವತ್ಸಂ ಚೈತ್ರರಥಂ ಕೃತ್ವಾ ಶುಚಿಗಂಧಾನ್ಮಹೀ ತದಾ ॥ ೧೬೪ ॥
ತೇಷಾಂ ವತ್ಸೋ ರುಚಿಸ್ತ್ವಾಸೀದ್ದೋಗ್ಧಾ ಪುತ್ರೋ ಮುನೇಃ ಶುಭಃ ।
ಶೈಲೈಸ್ತು ಶ್ರೂಯತೇ ದೇವಿ ಪುನರ್ದುಗ್ಧಾ ವಸುಂಧರಾ ॥ ೧೬೫ ॥
ತದೌಷಧೀರ್ಮೂರ್ತಿಮತೀ ರತ್ನಾನಿ ವಿವಿಧಾನಿ ಚ ।
ವತ್ಸಸ್ತು ಹಿಮವಾಂಸ್ತೇಷಾಂ ದೋಗ್ಧಾ ಮೇರುರ್ಮಹಾಗಿರಿಃ ॥ ೧೬೬ ॥
ಪಾತ್ರಂ ಶಿಲಾಮಯಂ ಹ್ಯಾಸೀತ್ತೇನ ಶೈಲಾಃ ಪ್ರತಿಷ್ಠಿತಾಃ ।
ಶ್ರೂಯತೇ ವೃಕ್ಷವೀರುದ್ಭಿಃ ಪುನರ್ದುಗ್ಧಾ ವಸುಂಧರಾ ॥ ೧೬೭ ॥
ಪಾಲಾಶಂ ಪಾತ್ರಮಾದಾಯ ಛಿನ್ನದಗ್ಧಪ್ರರೋಹಣಂ ।
ದೋಗ್ಧಾ ತು ಪುಷ್ಪಿತಃ ಶಾಲಃ ಪ್ಲಕ್ಷೋ ವತ್ಸೋ ಯಶಸ್ವಿನಿ ।
ಸರ್ವಕಾಮದುಘಾ ದೋಗ್ಧ್ರೀ ಪೃಥಿವೀ ಭೂತಭಾವಿನೀ ॥ ೧೬೮ ॥
ಸೈಷಾ ಧಾತ್ರೀ ವಿಧಾತ್ರೀ ಚ ಧರಣೀ ಚ ವಸುಂಧರಾ ॥
ದುಗ್ಧಾ ಹಿತಾರ್ಥಂ ಲೋಕಾನಾಂ ಪೃಥುನಾ ಇತಿ ನಃ ಶ್ರುತಂ ॥ ೧೬೯ ॥

ಸುಮಾಲಿಯನ್ನು ಕರುವನ್ನಾಗಿಯೂ ಮಾಡಿ ಕಪಾಲವೆಂಬ ಪಾತ್ರೆಯಲ್ಲಿ ರಕ್ತವೆಂಬ ಕ್ಷೀರವನ್ನು ಕರೆದರು. ಆ ರುಧಿರಕ್ಷೀರದಿಂದ ರಾಕ್ಷಸರು ಜೀವಿಸುವರು.

೧೬೪. ಗಂಧರ್ವರೂ. ಅಪ್ಸರರೂ ಸೇರಿ ತಾವರೆಯೆಲೆಯಲ್ಲಿ ಚೈತ್ರರಥೋದ್ಯಾನವನ್ನು ಕರುವನ್ನಾಗಿಯೂ, ಮುನಿತನಯನಾದ ರುಚಿಯನ್ನು ಕರೆಯುವವನನ್ನಾಗಿಯೂ ಮಾಡಿ ಭೂಮಿಯಿಂದ ಶುಚಿ ಗಂಧವನ್ನು ಕರೆದರು.

೧೬೫–೧೬೮. ದೇವಿ! ಬೆಟ್ಟಗಳು ಹಿಮಾಲಯನನ್ನು ಕರುವನ್ನಾಗಿಯೂ, ಮೇರು ಪರ್ವತವನ್ನು ಕರೆಯುವವನನ್ನಾಗಿಯೂ, ಮಾಡಿ ಕಲ್ಲಿನ ಪಾತ್ರೆಯಿಂದ ಔಷಧಿಗಳನ್ನೂ, ನಾನಾವಿಧ ರತ್ನಗಳನ್ನೂ ಭೂಮಿಯಿಂದ ಕರೆದರು. ಮತ್ತು ಮರ, ಬಳ್ಳಿಗಳು ಹೂವಾಗಿರುವ ಶಾಲವೃಕ್ಷವನ್ನು ಕರೆಯುವುದನ್ನಾಗಿಯೂ, ಪ್ಲಕ್ಷ ವೃಕ್ಷವನ್ನು ಕರುವನ್ನಾಗಿಯೂ ಮಾಡಿ ಮುತ್ತುಗದ ಪಾತ್ರೆಯಿಂದ ಕಡಿದ ಮತ್ತು ಸುಟ್ಟ ಮರಗಳ ಮೊಳಕೆ ಚಿಗುರುವಿಕೆಯನ್ನು ಕರೆದನು.

೧೬೯. ಪೃಥುವು ಪೋಷಿಸುವುದೂ, ಸೃಷ್ಟಿಸುವುದೂ, ಆದ ಭೂಮಿಯನ್ನು ಲೋಕದ ಹಿತಕ್ಕಾಗಿ ಈ ರೀತಿ ಕರೆದನು.

ಚರಾಚರಸ್ಯ ಲೋಕಸ್ಯ ಪ್ರತಿಷ್ಠಾ ಯೋನಿರೇವ ಚ ।
ಆಸೀದಿಯಂ ಸಮುದ್ರಾಂತಾ ಮೇದಿನೀತಿ ಪರಿಶ್ರುತಾ ॥ ೧೭೦ ॥
ಮಧುಕೈಟಭಯೋಃ ಪೂರ್ವಂ ಮೇದೋಮಾಂಸಪರಿಪ್ಲುತಾ ।
ವಸುಂ ಧಾರಯತೇ ಯಸ್ಮಾದ್ವಸುಧಾ ತೇನ ಕೀರ್ತಿತಾ ॥ ೧೭೧ ॥
ತತೋಽಭ್ಯುಪಗಮಾದ್ರಾಜ್ಞಃ ಪೃಥೋರ್ವೈನ್ಯಸ್ಯ ಧೀಮತಃ ।
ದುಹಿತೃತ್ವಮನುಪ್ರಾಪ್ತಾ ಪೃಥಿವೀತ್ಯುಚ್ಯತೇ ತತಃ ॥ ೧೭೨ ॥
ಪೃಥಿತಾ ಪ್ರವಿಭಕ್ತಾ ಚ ಶೋಭಿತಾ ಚ ವಸುಂಧರಾ ।
ದುಗ್ಧಾ ಹಿ ಯತ್ನತೋ ರಾಜ್ಞಾ ಪತ್ತನಾಕರಮಾಲಿನೀ ॥ ೧೭೩ ॥
ಏವಂಪ್ರಭಾವೋ ರಾಜಾಸೀದ್ವೈನ್ಯಃ ಸ ನೃಪಸತ್ತಮಃ ।
ತತಃ ಸ ರಂಜಯಾಮಾಸ ಧರ್ಮೇಣ ಪೃಥಿವೀಂ ತದಾ ॥ ೧೭೪ ॥
ತತೋ ರಾಜೇತಿ ಶಬ್ದೋಽಥ ಪೃಥಿವ್ಯಾ ರಂಜನಾದಭೂತ್ ।
ಸ ರಾಜ್ಯಂ ಪ್ರಾಪ್ಯ ವೈನ್ಯಸ್ತು ಚಿಂತಯಾಮಾಸ ಪಾರ್ಥಿವಃ ॥ ೧೭೫ ॥
ಪಿತಾ ಮಮ ಹ್ಯಧರ್ಮಿಷ್ಠೋ ಯಜ್ಞವ್ಯುಚ್ಛಿತ್ತಿಕಾರಕಃ ।
ಕಸ್ಮಿನ್ಸ್ಥಾನೇ ಗತಶ್ಚಾಸೌ ಜ್ಞೇಯಂ ಸ್ಥಾನಂ ಕಥಂ ಮಯಾ ॥ ೧೭೬ ॥

---

೧೭೦. ಈ ಸಮುದ್ರದವರೆಗೆ ಇರುವ ಭೂಮಿಯು ಚರಾಚರಾತ್ಮಕವಾದ ಲೋಕದ ಸ್ಥಿತಿಗೂ ಉತ್ಪತ್ತಿಗೂ ಕಾರಣವಾಗಿರುವುದು.

೧೭೧. ಹಿಂದೆ ಮಧುಕೈಟಭರ ಮೇದಸ್ಸು ಮಾಂಸಗಳಿಂದ ವ್ಯಾಪ್ತವಾದ ಈ ಭೂಮಿಯು ದ್ರವ್ಯಗಳನ್ನು ಧರಿಸಿರುವುದರಿಂದ ವಸುಧಾ ಎಂದು ಪ್ರಸಿದ್ಧವಾಯಿತು.

೧೭೨. ಅನಂತರ ಜ್ಞಾನಿಯಾದ ಪೃಥುವು ಅವಳನ್ನು ಮಗಳನ್ನಾಗಿ ಪರಿಗ್ರಹಿಸಿದ್ದರಿಂದ ಪೃಥಿವೀ ಎನ್ನಿಸಿಕೊಂಡಳು.

೧೭೩. ಪೃಥುರಾಜನು ಪಟ್ಟಣಗಳೂ, ಗಣಿಗಳೂಳುಳ್ಳ ಭೂಮಿಯನ್ನು ವಿಸ್ತಾರಗೊಳಿಸಿದನು. ವಿಭಾಗಿಸಿದನು. ಅಲಂಕರಿಸಿದನು, ಮತ್ತು ಕರೆದನು.

೧೭೪. ಇಂತಹ ಮಾಹಾತ್ಮ್ಯವುಳ್ಳ ವೈನ್ಯನೆಂಬ ದೊರೆಯು ಧರ್ಮದಿಂದ ಭೂಮಿಯನ್ನು ಆಹ್ಲಾದಗೊಳಿಸಿದನು.

೧೭೫. ಅದರಿಂದ ಅವನು ರಾಜನೆಂಬ ಹೆಸರನ್ನು ಪಡೆದು ರಾಜ್ಯವನ್ನು ಹೊಂದಿ ಹೀಗೆ ಚಿಂತಿಸಿದನು.

೧೭೬. "ಅಧರ್ಮಿಷ್ಠನೂ ಯಜ್ಞಾದಿಗಳನ್ನು ನಾಶಗೊಳಿಸಿದವನೂ ಆದ ನನ್ನ ತಂದೆಯು ಎಲ್ಲಿಗೆ ಹೋದನು? ನಾನು ಅದನ್ನು ಹೇಗೆ ತಿಳಿಯಬೇಕು.

ಕಥಂ ತಸ್ಯ ಕ್ರಿಯಾ ಕಾರ್ಯಾ ಹತಸ್ಯ ಬ್ರಾಹ್ಮಣೈಃ ಕಿಲ ।
ಕಥಂ ಗತಿರ್ಭವೇತ್ತಸ್ಯ ಯಜ್ಞದಾನಕ್ರಿಯಾಬಲಾತ್ ॥ ೧೭೭ ॥
ಇತ್ಯೇವಂ ಚಿಂತಯಾನಸ್ಯ ನಾರದೋಽಭ್ಯಾಜಗಾಮ ಹ ।
ತಸ್ಯೈವಮಾಸನಂ ದತ್ವಾ ಪ್ರಣಿಪತ್ಯ ಚ ಪೃಷ್ಟವಾನ್ ॥ ೧೭೮ ॥
ಭಗವನ್ಸರ್ವಲೋಕಸ್ಯ ಜಾನಾಸಿ ತ್ವಂ ಶುಭಾಶುಭಂ ।
ಪಿತಾ ಮಮ ದುರಾಚಾರೋ ದೇವಬ್ರಾಹ್ಮಣನಿಂದಕಃ ॥ ೧೭೯ ॥
ಸ್ವಕರ್ಮಣಾ ಹತೋ ವಿಪ್ರೈಃ ಪರಲೋಕಮವಾಪ್ತವಾನ್ ।
ಕಸ್ಮಿಂಸ್ಥಾನೇ ಗತಸ್ತಾತಃ ಶ್ವಭ್ರಂ ವಾ ಸ್ವರ್ಗಮೇವ ಚ ॥ ೧೮೦ ॥
ತತೋಽಬ್ರವೀನ್ನಾರದಸ್ತು ಜ್ಞಾತ್ವಾ ದಿವ್ಯೇನ ಚಕ್ಷುಷಾ ।
ಶೃಣು ರಾಜನ್ಮಹಾಬಾಹೋ ಯತ್ರ ತಿಷ್ಠತಿ ತೇ ಪಿತಾ ॥ ೧೮೧ ॥
ಅತ್ರ ದೇಶೋ ಮರುರ್ನಾಮ ಜಲವೃಕ್ಷವಿವರ್ಜಿತಃ ।
ತತ್ರ ದೇಶೇ ಮಹಾರೌದ್ರೇ ಜನಕಸ್ತೇ ನರೋತ್ತಮ ॥ ೧೮೨ ॥
ಮ್ಲೇಚ್ಛಮಧ್ಯೇ ಸಮುತ್ಪನ್ನೋ ಯಕ್ಷ್ಮೀ ಕುಷ್ಠಸಮನ್ವಿತಃ ।
ಉಚ್ಛಿಷ್ಟಭೋಜೀ ಮ್ಲೇಚ್ಛಾನಾಂ ಕೃಮಿಭಿಃ ಸಂಯುತೋ ವ್ರಣೈಃ ॥ ೧೮೩ ॥

---

೧೭೭. ಬ್ರಾಹ್ಮಣರಿಂದ ಕೊಲ್ಲಲ್ಪಟ್ಟ ಅವನಿಗೆ ಕ್ರಿಯೆಯನ್ನು ಹೇಗೆ ಮಾಡಬೇಕು. ಯಜ್ಞದಾನ ಕ್ರಿಯೆಗಳಿಂದ ಅವನಿಗೆ ಗತಿಯು ಹೇಗುಂಟಾದೀತು ?"

೧೭೮. ಅವನು ಹೀಗೆ ಚಿಂತಿಸುತ್ತಿರಲು ನಾರದನು ಅಲ್ಲಿಗೆ ಬಂದನು. ಆಗ ವೈನ್ಯನು ಅವನಿಗೆ ಆಸನವನ್ನಿತ್ತು ನಮಸ್ಕರಿಸಿ ಹೀಗೆ ಪ್ರಶ್ನಿಸಿದನು.

೧೭೯–೧೮೦. "ಪೂಜ್ಯನೆ! ನೀನು ಸಮಸ್ತಲೋಕದ ಶುಭಾಶುಭಗಳನ್ನು ಅರಿತಿರುವೆ. ದುರ್ನಡತೆಯುಳ್ಳವನೂ, ದೇವಬ್ರಾಹ್ಮಣರನ್ನು ನಿಂದಿಸುವವನೂ ಆದ ನನ್ನ ತಂದೆಯು ಬ್ರಾಹ್ಮಣರಿಂದ ಕೊಲ್ಲಲ್ಪಟ್ಟು ಪರಲೋಕಕ್ಕೆ ತೆರಳಿದನು. ಅವನು ಸ್ವರ್ಗನರಕಗಳಲ್ಲಿ ಯಾವ ಸ್ಥಾನವನ್ನು ಹೊಂದಿದನು?"

೧೮೧. ತರುವಾಯ ನಾರದನು ದಿವ್ಯದೃಷ್ಟಿಯಿಂದ ನೋಡಿ ಇಂತೆಂದನು. "ವೀರನಾದ ದೊರೆಯೆ ! ನಿನ್ನ ತಂದೆಯು ಎಲ್ಲಿರುವನೆಂಬುದನ್ನು ಕೇಳು.

೧೮೨–೧೮೩. ಇಲ್ಲಿ ನೀರು ಮರಗಳಿಲ್ಲದ ಮರುವೆಂಬ ದೇಶವಿರುವುದು. ಅತಿಭಯಂಕರವಾದ ಆದೇಶದಲ್ಲಿ ಮ್ಲೇಚ್ಛರ ಮಧ್ಯದಲ್ಲಿ ನಿನ್ನ ತಂದೆಯು ಹುಟ್ಟಿ ಕುಷ್ಠರೋಗಿಯೂ, ಮ್ಲೇಚ್ಛರ ಎಂಜಲನ್ನು ತಿನ್ನುವವನೂ, ಕೃಮಿಗಳಿರುವ ವ್ರಣವುಳ್ಳವನೂ ಆಗಿರುವನು".

ತಚ್ಛ್ರುತ್ವಾ ವಚನಂ ತಸ್ಯ ನಾರದಸ್ಯ ಮಹಾತ್ಮನಃ ।
ಹಾಹಾಕಾರಂ ತತಃ ಕೃತ್ವಾ ಮೂರ್ಛಿತೋ ನಿಪಪಾತ ಹ ॥ ೧೮೪ ॥
ಚಿಂತಯಾಮಾಸ ದುಃಖಾರ್ತಃ ಕಥಂ ಕಾರ್ಯಂ ಮಯಾ ಭವೇತ್
ಇತ್ಯೇವಂ ಚಿಂತಯಾನಸ್ಯ ಮತಿರ್ಜಾತಾ ಮಹಾತ್ಮನಃ ॥
ಪುತ್ರಃ ಸ ಕಥ್ಯತೇ ಲೋಕೇ ಪಿತರಂ ತ್ರಾಯತೇ ತು ಯಃ ॥ ೧೮೫ ॥
ಸ ಕಥಂ ತು ಮಯಾ ತಾತಃ ಪಾಪಾನ್ಮುಕ್ತೋ ಭವಿಷ್ಯತಿ ।
ಏವಂ ಸಂಚಿಂತ್ಯ ಸ ತತೋ ನಾರದಂ ಪರ್ಯಪೃಚ್ಛತ ॥ ೧೮೬ ॥
ಭಗವನ್ಕಥಿತಂ ಸರ್ವಂ ಪಿತುರ್ಮಮ ವಿಚೇಷ್ಟಿತಂ ।
ಕೇನ ತಸ್ಯ ಭವೇನ್ಮುಕ್ತಿಃ ಕರ್ಮಣಾ ದ್ವಿಜಸತ್ತಮ ॥
ವ್ರತೈರ್ದಾನೈಸ್ತಪೋಭಿರ್ವಾ ತೀರ್ಥಾನಾಂ ಯಾತ್ರಯಾ ವದ ॥ ೧೮೭ ॥

ನಾರದ ಉವಾಚ :—

ಗಚ್ಛ ರಾಜನ್ಪ್ರಧಾನಾನಿ ತೀರ್ಥಾನಿ ಮನುಜೇಶ್ವರ ।
ಪಿತರಂ ತೇಷು ಚಾನೀಯ ತಸ್ಮಾದ್ರಾಜನ್ಮರುಸ್ಥಲಾತ್ ॥ ೧೮೮ ॥
ಯತ್ರ ದೇವಾಃ ಸಪ್ರಭಾವಾಸ್ತೀರ್ಥಾನಿ ವಿಮಲಾನಿ ಚ ।
ತತ್ರ ಗಚ್ಛ ಮಹಾರಾಜ ತೀರ್ಥಯಾತ್ರಾಂ ಕುರು ಪ್ರಭೋ ॥ ೧೮೯ ॥

---

೧೮೪. ಮಹಾತ್ಮನಾದ ಆ ನಾರದನ ಆ ಮಾತನ್ನು ಕೇಳಿ ಪೃಥುವು ಹಾಹಾಕಾರ ಮಾಡುತ್ತ ಮೂರ್ಛೆಗೊಂಡು ಬಿದ್ದನು.

೧೮೫. ದುಃಖಗೊಂಡು ಏನುಮಾಡಲಿ ಎಂದು ಚಿಂತಿಸಿದನು. ಹೀಗೆ ಚಿಂತಿಸುತ್ತಿರುವ ಅವನ ಮನಸ್ಸಿನಲ್ಲಿ ಹೀಗೆ ಭಾಸವಾಯಿತು. ಲೋಕದಲ್ಲಿ ತಂದೆಯನ್ನು ರಕ್ಷಿಸುವವನೆ ಪುತ್ರನು.

೧೮೬. ಪುತ್ರನಾದ ನಾನು ತಂದೆಯ ಪಾಪವನ್ನು ಹೇಗೆ ಪರಿಹರಿಸಲಿ" ! ಎಂದಾಲೋಚಿಸಿ ಮತ್ತೆ ನಾರದನನ್ನು ಪ್ರಶ್ನಿಸಿದನು.

೧೮೭. "ಪೂಜ್ಯನೆ! ನನ್ನ ತಂದೆಯ ಸ್ಥಿತಿಯನ್ನೆಲ್ಲ ನೀನು ಹೇಳಿದೆ. ದ್ವಿಜವರ್ಯನೆ! ನಾನು ಏನನ್ನು ಮಾಡಿದರೆ ನನ್ನ ತಂದೆಗೆ ಮುಕ್ತಿಯಾದೀತು? ವ್ರತ, ದಾನ, ತಪಸ್ಸು, ತೀರ್ಥಯಾತ್ರೆಗಳಲ್ಲಿ ಯಾವುದನ್ನು ಮಾಡಲಿ? ಹೇಳು".

೧೮೮. ನಾರದನು ಹೇಳುತ್ತಾನೆ:—ದೊರೆಯೆ! ತಂದೆಯನ್ನು ಆ ಮರುಸ್ಥಳದಿಂದ ಕರೆತಂದು ಭೂಮಿಯಲ್ಲಿ ಮುಖ್ಯವಾದ ತೀರ್ಥಗಳಿಗೆ ಹೋಗು.

೧೮೯, ಮಹಾರಾಜ! ಮಹಾತ್ಮ್ಯವುಳ್ಳ ದೇವತೆಗಳಿರುವ ಪರಿಶುದ್ಧ ತೀರ್ಥಗಳಲ್ಲಿ ಯಾತ್ರೆಯನ್ನು ಮಾಡು.

ಏವಂ ಹ್ಯವಿತಥಂ ವಿದ್ಧಿ ಮೋಕ್ಷಸ್ತೇ ಭವಿತಾ ಪಿತುಃ ।
ತಚ್ಛ್ರುತ್ವಾ ವಚನಂ ರಾಜಾ ನಾರದಸ್ಯ ಮಹಾತ್ಮನಃ ।
ಸಚಿವೇ ಭಾರಮಾಧಾಯ ಸ್ವರಾಜಸ್ಯ ಜಗಾಮ ಹ ॥ ೧೯೦ ॥
ಸ ಗತ್ವಾ ಮರುಭೂಮಿಂ ತು ಮ್ಲೇಚ್ಛಮಧ್ಯೇ ದದರ್ಶ ಹ ।
ಕುಷ್ಠರೋಗೇಣ ಮಹತಾ ಕ್ಷಯೇಣ ಚ ಸಮಾವೃತಂ ॥ ೧೯೧ ॥
ಗವ್ಯೂತಿಮಾತ್ರಂ ತತ್ರೈವ ಶೂನ್ಯಂ ಮಾನುಷವರ್ಜಿತಂ ।
ಏವಂ ದೃಷ್ಟ್ವಾ ಸ ರಾಜಾ ತು ಸಂತಪ್ತೋ ವಾಕ್ಯಮಬ್ರವೀತ್ ॥ ೧೯೨ ॥
ಹೇ ಮ್ಲೇಚ್ಛ ರೋಗಿಪುರುಷಂ ಸ್ವಗೃಹಂ ಚ ನಯಾಮ್ಯಹಂ ।
ತತ್ರಾಹಮೇನಂ ನಿರುಜಂ ಕರೋಮಿ ಯದಿ ಮನ್ಯಥ ॥ ೧೯೩ ॥
ಜ್ಞಾತ್ವೇತಿ ಸರ್ವೇ ತೇ ಮ್ಲೇಚ್ಛಾಃ ಪುರುಷಂ ತಂ ದಯಾಪರಂ ।
ಊಚುಃ ಪ್ರಣತಸರ್ವಾಂಗಾಃ ಶೀಘ್ರಂ ನಯ ಜಗತ್ಪತೇ ।
ಅಸ್ಮದ್ಭಾಗ್ಯವಶಾನ್ನಾಥ ತ್ವಮೇವಾತ್ರ ಸಮಾಗತಃ ॥ ೧೯೪ ॥
ದುರ್ಗಂಧೋಪಹತಾ ಲೋಕಾಸ್ತ್ವಯಾ ನಾಥ ಸುಖೀಕೃತಾಃ ।
ತತ ಆನಾಯ್ಯ ಪುರುಷಾಞ್ಛಿಬಿಕಾವಾಹನೋಚಿತಾನ್ ॥ ೧೯೫ ॥

---

೧೯೦. ಹೀಗೆ ಮಾಡಿದರೆ ನಿನ್ನ ತಂದೆಗೆ ನಿಶ್ಚಯವಾಗಿಯೂ ಮೋಕ್ಷವುಂಟಾಗುವುದು." ಎಂದನು. ರಾಜನು ಮಹಾತ್ಮನಾದ ನಾರದನ ಮಾತನ್ನು ಕೇಳಿ ಮಂತ್ರಿಯಲ್ಲಿ ರಾಜ್ಯಭಾರವನ್ನಿಟ್ಟು ತಾನು ಪಟ್ಟಣದಿಂದ ಹೊರಟನು.

೧೯೧–೧೯೨. ಅವನು ಮರುಭೂಮಿಯಲ್ಲಿ ನಾಲ್ಕು ಮೈಲಿದೂರ ಹೋಗಿ ಮ್ಲೇಚ್ಛರ ಮಧ್ಯದಲ್ಲಿ ಮಹಾಕುಷ್ಠರೋಗದಿಂದಲೂ, ಕ್ಷಯದಿಂದಲೂ ಪೀಡಿತನಾಗಿ ಮನುಷ್ಯರಿಂದ ತ್ಯಜಿಸಲ್ಪಟ್ಟ ತಂದೆಯನ್ನು ನೋಡಿ ವ್ಯಥೆಗೊಂಡು ಹೀಗೆಂದನು.

೧೯೩. " ಎಲೈ ಮ್ಲೇಚ್ಛರೆ ! ನಾನು ರೋಗಿಷ್ಠನಾದ ಈ ಮನುಷ್ಯನನ್ನು ನನ್ನ ಮನೆಗೆ ಕರೆದುಕೊಂಡು ಹೋಗುವೆನು. ನೀವು ಒಪ್ಪುವುದಾದರೆ ಅಲ್ಲಿ ನಾನು ಇವನನ್ನು ರೋಗವಿಲ್ಲದವನನ್ನಾಗಿ ಮಾಡುವೆನು."

೧೯೪. ಆ ಮ್ಲೇಚ್ಛರೆಲ್ಲರೂ ಅವನು ದಯಾಳುವೆಂದರಿತು ಅವನಿಗೆ ನಮಸ್ಕರಿಸಿ "ಜಗದೊಡೆಯ! ಶೀಘ್ರವಾಗಿ ಇವನನ್ನು ಕರೆದುಕೊಂಡು ಹೋಗು. ಸ್ವಾಮಿ ! ನಮ್ಮ ಅದೃಷ್ಟವಶದಿಂದ ನೀನಿಲ್ಲಿಗೆ ಬಂದಿರುವೆ.

೧೯೫. ನೀನು ಇವನ ದುರ್ಗಂಧದಿಂದ ವ್ಯಥೆಗೊಂಡ ಜನರನ್ನು ಸುಖಗೊಳಿಸುವೆ." ಬಳಿಕ ವೈಶ್ಯನು ಮೇನವನ್ನು ಹೊರು ಜನರನ್ನು ಕರೆಯಿಸಿದನು.

ತತಃ ಶ್ರುತ್ವಾ ತು ವಚನಂ ತಸ್ಯ ರಾಜ್ಞೋ ದಯಾವಹಂ ।
ಪ್ರಾಪುಸ್ತೀರ್ಥಾನ್ಯನೇಕಾನಿ ಕೇದಾರಾದೀನಿ ಕೋಟಿಶಃ ॥ ೧೯೬ ॥
ಯತ್ರ ಯತ್ರ ಸ ಗಚ್ಛೇತ ವೈನ್ಯೋ ವೇನೇನ ಸಂಯುತಃ ।
ತತ್ರ ತತ್ರೈವ ತೀರ್ಥಾನಾಮಾಕ್ರಂದಃ ಶ್ರೂಯತೇ ಮಹಾನ್ ॥ ೧೯೭ ॥
ಹಾ ದೈವ ರಿಪುರಾಯಾತಿ ಅಸ್ಮಾಕಂ ನಾಶಹೇತವೇ ।
ಅಧುನಾ ಕ್ವ ಗಮಿಷ್ಯಾಮ ಇತಿ ಚಿಂತಾ ಪುನಃ ಪುನಃ ॥ ೧೯೮ ॥
ದರ್ಶನೇನಾಪಿ ತಸ್ಯೈವ ಹಾಹಾಕಾರಂ ವಿಧಾಯ ವೈ ।
ಪಲಾಯಂತೇ ಚ ತೀರ್ಥಾನಿ ದೇವಾ ನಶ್ಯಂತಿ ತತ್ಕ್ಷಣಾತ್ ॥ ೧೯೯ ॥
ಏವಂ ವರ್ಷತ್ರಯಂ ರಾಜಾ ತೀರ್ಥಯಾತ್ರಾಂ ಚಕಾರ ವೈ ।
ನ ತಸ್ಯ ಮುಕ್ತಿರ್ದದೃಶೇ ತತಃ ಶೋಕಮಗಾತ್ಪರಂ ॥ ೨೦೦ ॥
ತತಸ್ತು ಪ್ರೇರಿತಾ ಭೃತ್ಯಾಃ ಕುರುಕ್ಷೇತ್ರೇ ಮಹಾಪ್ರಭೇ ।
ಯದಿ ವಾಪಿ ಪುನಸ್ತತ್ರ ಪಾಪಮುಕ್ತಿರ್ಭವೇತ್ತತಃ ॥ ೨೦೧ ॥

---

೧೯೬. ಆ ರಾಜನ ಕರುಣೆಯ ನುಡಿಯನ್ನು ಕೇಳಿ ಕೇದಾರಾದಿ ಅನೇಕ ಕೋಟಿ ತೀರ್ಥಗಳು ಅಲ್ಲಿಗೆ ಬಂದುವು.

೧೯೭. ಆ ವೈನ್ಯನು ವೇನನೊಡನೆ ಯಾವ ಯಾವ ತೀರ್ಥಕ್ಕೆ ಹೋಗುವನೊ; ಅಲ್ಲಿ ಆ ತೀರ್ಥಗಳ ದೊಡ್ಡ ಶಬ್ದವು ಕೇಳಿಸುವುದು.

೧೯೮. "ಅಯ್ಯೋ ದೇವರೆ! ನಮ್ಮನ್ನು ಕೊಲ್ಲುವುದಕ್ಕಾಗಿ ಶತ್ರುವು ಬರುತ್ತಿರುವನು. ಈಗ ಎಲ್ಲಿಗೆ ಹೋಗುವೆವು" ಎಂದು ಆ ತೀರ್ಥಗಳು ಚಿಂತಿಸಿದುವು.

೧೯೯. ಅವನ ದರ್ಶನದಿಂದಲೇ ತೀರ್ಥಗಳು ಹಾಹಾಕಾರವನ್ನು ಮಾಡಿ ಓಡುತ್ತಿರವುವು ದೇವತೆಗಳು ಕೂಡಲೆ ಅಂತರ್ಧಾನವಾದರು.

೨೦೦. ಹೀಗೆ ರಾಜನು ಮೂರು ವರ್ಷಕಾಲ ತೀರ್ಥಯಾತ್ರೆಯನ್ನು ಮಾಡಿದರೂ ವೇನನಿಗೆ ಮೋಕ್ಷವಾಗದಿರಲು ಅವನು ಅತ್ಯಂತವಾಗಿ ದುಃಖಗೊಂಡನು.

೨೦೧. ಅನಂತರ ವೈನ್ಯನು ಕುರುಕ್ಷೇತ್ರದಲ್ಲಿಯಾದರೂ ಪಾಪಮೋಕ್ಷವಾದೀತೆಂದು ಅಲ್ಲಿಗೆ ಭೃತ್ಯರನ್ನು ಹೋಗುವಂತೆ ಹೇಳಿದನು.

ಗೃಹೀತ್ವಾ ಶಿಬಿಕಾಂ ಸ್ಕಂಧೇ ಕುರುಕ್ಷೇತ್ರೇ ಗತಾಃ ಪ್ರಿಯೇ ।
ತತ್ರ ನೀತ್ವಾ ಸ್ಥಾಣುತೀರ್ಥಮವತಾರ್ಯ ಚ ತೇ ಗತಾಃ ॥ ೨೦೨ ॥
ತತಃ ಸ ರಾಜಾ ಮಧ್ಯಾಹ್ನೇ ಚಿಕೀರ್ಷುಃ ಸ್ನಾನಮಾದರಾತ್ ।
ತಸ್ಯೈವ ತು ಪಿತುಸ್ತತ್ರ ತಥಾ ದಾನಾನಿ ಷೋಡಶ ॥ ೨೦೩ ॥
ಬ್ರಾಹ್ಮಣೇಭ್ಯಸ್ತಥಾ ದಿತ್ಸುಃ ಶ್ರದ್ಧಾವಾನ್ಭಾವತತ್ಪರಃ ।
ತತೋ ವಾಯುಶ್ಚಾಂತರಿಕ್ಷ ಇದಂ ವಚನಮಬ್ರವೀತ್ ॥ ೨೦೪ ॥
ಮಾ ತಾತ ಸಾಹಸಂ ಕುರ್ಯಾಸ್ತೀರ್ಥಂ ರಕ್ಷ ಪ್ರಯತ್ನತಃ ।
ಅಯಂ ಪಾಪೇನ ಘೋರೇಣ ಸಮಂತಾತ್ಪರಿವೇಷ್ಟಿತಃ ॥ ೨೦೫ ॥
ವೇದನಿಂದಾಸಮಾಚಾರೋ ಬ್ರಹ್ಮಹತ್ಯಾಶತೈರ್ಯುತಃ ।
ಸೋಽಯಂ ಪಾಪೋ ದುರಾಚಾರಸ್ತೀರ್ಥಂ ನಾಶಂ ನಯಿಷ್ಯತಿ ॥ ೨೦೬ ॥
ಮಾ ತೀರ್ಥಂ ನಾಶಯ ವಿಭೋ ಮಹದೇನೋ ಭವಿಷ್ಯತಿ ।
ಏತದ್ವಾಯೋರ್ವಚಃ ಶ್ರುತ್ವಾ ದುಃಖೇನ ಮಹತಾರ್ದಿತಃ ।
ಉವಾಚ ಶೋಕಸಂತಪ್ತಃ ಪಿತುರ್ದುಃಖೇನ ದುಃಖಿತಃ ॥ ೨೦೭ ॥
ಹಾ ದೈವೇತಿ ಚ ಚುಕ್ರೋಶ ಊರ್ಧ್ವಬಾಹುಃ ಪುನಃಪುನಃ ।
ಹಾ ದೈವೇತಿ ಚ ಚುಕ್ರೋಶ ಊರ್ಧ್ವಬಾಹುಃ ಪುನಃಪುನಃ ।
ಏಷ ಘೋರೇಣ ಪಾಪೇನ ಅತೀವ ಪರಿವೇಷ್ಟಿತಃ ॥ ೨೦೮ ॥

---

೨೦೨. ಪ್ರಿಯಳೆ! ಆ ಸೇವಕರು ಹೆಗಲಿನಲ್ಲಿ ಮೇನವನ್ನು ಹೊತ್ತುಕೊಂಡು ಕುರುಕ್ಷೇತ್ರಕ್ಕೆ ಹೋಗಿ ಅಲ್ಲಿರುವ ಸ್ಥಾಣುತೀರ್ಥದಲ್ಲಿಳಿಸಿ ಹೊರಟು ಹೋದರು.

೨೦೩–೨೦೪. ಬಳಿಕ ಆ ವೈಶ್ಯನು ಅಲ್ಲಿ ಮಧ್ಯಾಹ್ನದಲ್ಲಿ ತಂದೆಗೆ ಸ್ನಾನ ಮಾಡಿಸಬೇಕೆಂದೂ. ಬ್ರಾಹ್ಮಣರಿಗೆ ಶ್ರದ್ಧೆಯಿಂದ ಷೋಡಶದಾನಗಳನ್ನು ಕೊಡಬೇಕೆಂದೂ ಅಪೇಕ್ಷಿಸುತ್ತಿರಲು ಅಂತರಿಕ್ಷದಲ್ಲಿ ವಾಯುದೇವನು ಇಂತೆಂದನು.

೨೦೫. "ಅಪ್ಪ! ಸಾಹಸಮಾಡಬೇಡ, ಪ್ರಯತ್ನದಿಂದ ಈ ತೀರ್ಥವನ್ನು ರಕ್ಷಿಸು. ಇವನು ಘೋರಪಾಪದಿಂದ ಬಳಸಲ್ಪಟ್ಟಿದ್ದಾನೆ.

೨೦೬. ವೇದನಿಂದಕನೂ, ಅನೇಕ ಬ್ರಹ್ಮಹತ್ಯೆಯನ್ನು ಮಾಡಿದವನೂ, ದುರಾಚಾರನೂ ಆದ ಇವನು ತೀರ್ಥವನ್ನು ನಾಶಗೊಳಿಸುವನು,

೨೦೭. ಅರಸ! ನೀನು ಈ ತೀರ್ಥವನ್ನು ಹಾಳುಮಾಡಬೇಡ, ಇದರಿಂದ ನಿನಗೆ ಬಹಳ ಪಾಪವುಂಟಾಗುವುದು." ಎಂದು ವಾಯುದೇವನು ನುಡಿಯಲು ಅದನ್ನು ಕೇಳಿ ಅತ್ಯಂತ ದುಃಖಗೊಂಡ ವೈಶ್ಯನು ಇಂತೆಂದನು.

೨೦೮. "ಅವನು ತೋಳನ್ನು ಎತ್ತಿಕೊಂಡು ಅಯ್ಯೋ ದೇವರೆ! ಎಂದು ಕಿರಿಚಿಕೊಂಡು ಈ ನನ್ನ ತಂದೆಯು ಘೋರಪಾಪದಿಂದ ಪೀಡಿತನಾಗಿದ್ದಾನೆ.

ಯದನೇನಾಪಿ ತೀರ್ಥೇನ ಶುದ್ಧಃ ಕರ್ತುಂ ನ ಶಕ್ಯತೇ ।
ಪ್ರಾಯಶ್ಚಿತ್ತಂ ಕರಿಷ್ಯೇಽಹಂ ಪಿತುರರ್ಥೇ ನ ಸಂಶಯಃ ॥ ೨೦೯ ॥
ಏವಂ ತಸ್ಯ ವಚಃ ಶ್ರುತ್ವಾ ದಯಾಂ ಕೃತ್ವಾ ಮಹೀಯಸೀಂ ।
ಅಂತರಿಕ್ಷಭವಾಂ ವಾಚಂ ಖೇಚರಾಃ ಪುನರಬ್ರುವನ್ ॥ ೨೧೦ ॥
ಭೋ ಭೋ ರಾಜನ್ನೃಪಶ್ರೇಷ್ಠ ತ್ಯಕ್ತ್ವಾ ಶೋಕಂ ವಚಃ ಶೃಣು ।
ಯೇನ ತೇ ಜನಕಸ್ಯಾಸ್ಯ ಭವೇತ್ಪಾಪಕ್ಷಯೋ ಮಹಾನ್ ॥ ೨೧೧ ॥
ಅಸ್ತಿ ಕ್ಷೇತ್ರಂ ಮಹಾಸಿದ್ಧಂ ಪ್ರಭಾಸಮಿತಿ ವಿಶ್ರುತಂ ।
ಸರ್ವಪಾಪಪ್ರಶಮನಂ ಮಹಾಪಾತಕನಾಶನಂ ॥ ೨೧೨ ॥
ಬ್ರಹ್ಮತತ್ತ್ವಂ ಹರೇಸ್ತತ್ತ್ವಂ ರುದ್ರತತ್ತ್ವಂ ತೃತೀಯಕಂ
ತಸ್ಮಿನ್ನೇವ ಮಹಾಕ್ಷೇತ್ರೇ ಪ್ರಭಾಸೇ ಶಂಕರಪ್ರಿಯೇ ॥ ೨೧೩ ॥
ಶಾಕ್ತೇಯಂ ಯದಿ ವಾ ಚಾಂದ್ರಂ ಸೌರಂ ಸಾರಸ್ವತಂ ತಥಾ ।
ಆಗ್ನೇಯಂ ವಾರುಣಂ ಚಾಪಿ ಸ್ಮೃತಂ ಕ್ಷೇತ್ರಮನುತ್ತಮಂ ॥ ೨೧೪ ॥

---

೨೦೯. ಈ ತೀರ್ಥದಿಂದ ಇವನನ್ನು ಶುದ್ಧಿಗೊಳಿಸಲಾಗದಿದ್ದರೆ ನಾನು ಈ ನನ್ನ ತಂದೆಗಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವೆನು.

೨೧೦. ವೈನ್ಯನ ಈ ಮಾತನ್ನು ಕೇಳಿ ಅತ್ಯಂತ ದಯೆಗೊಂಡ ದೇವತೆಗಳು ಅಂತರಿಕ್ಷದಿಂದ ಹೀಗೆ ನುಡಿದರು.

೨೧೧. "ಎಲೈ ನೃಪವರ್ಯನೆ! ನೀನು ದುಃಖವನ್ನು ಬಿಟ್ಟು ನಮ್ಮ ಮಾತನ್ನು ಕೇಳು. ಆದರಿಂದ ಈ ನಿನ್ನ ತಂದೆಯ ಪಾಪವು ಪರಿಹಾರವಾಗುವುದು.

೨೧೨. ಸಕಲ ಪಾಪಗಳನ್ನು ನೀಗಿಸುವುದೂ, ಮಹಾಪಾತಕವನ್ನು ಪರಿಹರಿಸುವುದೂ ಆದ ಪ್ರಭಾಸವೆಂಬ ಸಿದ್ಧಕ್ಷೇತ್ರವಿರುವುದು.

೨೧೩. ಶಂಕರ ಪ್ರಿಯವಾದ ಆ ತೀರ್ಥದಲ್ಲಿಯೇ ಬ್ರಹ್ಮ. ವಿಷ್ಣು, ಮಹೇಶ್ವರ ತತ್ವಗಳು ನೆಲೆಸಿರುವುವು.

೨೧೪. ಅದು ಶಕ್ತಿ, ಚಂದ್ರ, ಸೂರ್ಯ, ಸರಸ್ವತೀ, ಅಗ್ನಿ, ವರುಣ ಕ್ಷೇತ್ರವಾಗಿರುವುದು.

ಬ್ರಹ್ಮಾಂಡೇ ಯಾನಿ ತೀರ್ಥಾನಿ ಪುರಾ ಕ್ಷೇತ್ರಾಣಿ ಯಾನಿ ತು ।
ಪ್ರಭಾಸಮಾಗಮಿಷ್ಯಂತಿ ಸಂಪ್ರಾಪ್ತೇ ತು ಕಲೌ ಯುಗೇ ॥ ೨೧೫ ॥
ಅಷ್ಟೌ ಕೋಟಿಸಹಸ್ರಾಣಿ ಅಷ್ಟೌ ಕೋಟಿಶತಾನಿ ಚ ।
ಕ್ಷೇತ್ರಂ ರಕ್ಷಂತಿ ತತ್ರಸ್ಥಾಃ ಪ್ರಭಾಸಂ ಶಾಂಕರಾ ಗಣಾಃ ॥ ೨೧೬ ॥
ಇಯಂ ಸರಸ್ವತೀ ಪುಣ್ಯಾ ಸರ್ವತ್ರೈವ ಹಿ ವಿದ್ಯತೇ ।
ಪಂಚಸ್ರೋತಾಃ ಪ್ರಭಾಸೇ ತು ದುಷ್ಪ್ರಾಪ್ಯಾ ತ್ರಿದಶೈರಪಿ ॥ ೨೧೭ ॥
ತಸ್ಯಾ ಯತ್ಪಂಚಮಂ ಸ್ರೋತಂ ನ್ಯಂಕುಮತ್ಯಾಸ್ತಟಾನಿ ಚ ।
ತಸ್ಯ ಮಧ್ಯೇ ಸ್ಥಿತಂ ತೀರ್ಥಂ ಗೋಷ್ಪದೇತಿ ಚ ವಿಶ್ರುತಂ ॥ ೨೧೮ ॥
ತತ್ರ ಪ್ರೇತಶಿಲಾ ಮಧ್ಯೇ ಪ್ರೇತಾನಾಂ ಮುಕ್ತಿದಾಯಿಕಾ ।
ಯತ್ರ ಪ್ರೇತಾಃ ಪುರಾ ಮುಕ್ತಾ ಅಷ್ಟಾವಿಂಶತಿಕೋಟಯಃ ॥ ೨೧೯ ॥
ಪಾಪಿನಾಂ ಮುಕ್ತಿದಂ ತೀರ್ಥಮಾದ್ಯಾ ರುದ್ರಗಯಾ ಸ್ಮೃತಾ ।
ತಮಸ್ಮಿನ್ಗೋಷ್ಪದಂನಾಮ ಕಲೌ ಖ್ಯಾತಂ ಧರಾತಲೇ ॥ ೨೨೦ ॥
ಯದಾ ಕ್ಷೀರೋದಮಥನಾನ್ನಿಃಸೃತಾ ಲೋಕಮಾತರಃ ।
ತದಾ ದೇವೈಃ ಸಮೇತಾಸ್ತು ಆಗತಾಸ್ತೀರ್ಥಸನ್ನಿಧೌ ॥ ೨೨೧ ॥

---

೨೧೫. ಕಲಿಯುಗವು ಪ್ರಾಪ್ತವಾಗಲು ಬ್ರಹ್ಮಾಂಡದಲ್ಲಿರುವ ತೀರ್ಥಗಳೂ ಕ್ಷೇತ್ರಗಳೂ ಪ್ರಭಾಸಕ್ಕೆ ಬರುವುವು.

೨೧೬. ಎಂಟುಕೋಟಿ ಸಾವಿರದ ಎಂಟುಕೋಟಿ ನೂರು ಶಂಕರನ ಗಣಗಳು ಅಲ್ಲಿದ್ದು ಪ್ರಭಾಸಕ್ಷೇತ್ರವನ್ನು ರಕ್ಷಿಸುವುವು.

೨೧೭. ಈ ಸರಸ್ವತೀ ನದಿಯು ಎಲ್ಲೆಡೆಯಲ್ಲಿಯೂ ಇರುವುದು. ಆದರೆ ಪ್ರಭಾಸದಲ್ಲಿರುವ ಐದು ಪ್ರವಾಹವುಳ್ಳ ಸರಸ್ವತೀ ನದಿಯು ದೇವತೆಗಳಿಗೂ ದುರ್ಲಭ ನಾದುದು.

೨೧೮. ಆ ನದಿಯ ಐದನೆಯ ಪ್ರವಾಹ ಮತ್ತು ನ್ಯಂಕುಮತಿಯ ದಡದ ಮಧ್ಯದಲ್ಲಿ ಗೋಷ್ಪದವೆಂಬ ತೀರ್ಥಗಳಿರುವುವು.

೨೧೯. ಅಲ್ಲಿ ಪ್ರೇತಗಳಿಗೆ ಮುಕ್ತಿಯನ್ನೀಯುವ ಪ್ರೇತಶಿಲೆಯಿರುವುದು. ಇಲ್ಲಿ ಹಿಂದೆ ಇಪ್ಪತ್ತೆಂಟು ಕೋಟಿ ಪ್ರೇತಗಳು ಮುಕ್ತಿಯನ್ನು ಪಡೆದಿರುವುವು.

೨೨೦. ಹಿಂದೆ ಮೊದಲಿನ ರುದ್ರಗಯೆಯು ಮೋಕ್ಷವನ್ನೀಯುವುದಾಗಿ ಪ್ರಸಿದ್ಧವಾಗಿದ್ದಿತು. ಈಗ ಕಲಿಯುಗದಲ್ಲಿ ಗೋಷ್ಪದ ತೀರ್ಥವು ಪ್ರಖ್ಯಾತವಾಗಿರುವುದು.

೨೨೧. ಕ್ಷೀರಸಮುದ್ರವನ್ನು ಕಡೆಯುವಾಗ ಹುಟ್ಟಿದ ಲೋಕಮಾತೆಯರು ದೇವತೆಗಳೊಡನೆ ಈ ತೀರ್ಥದ ಸಮೀಪಕ್ಕೆ ಬಂದರು.

ಪದಂ ತತ್ರ ನಿಮಗ್ನಂ ಚ ನಂದಾಯಾಶ್ಚ ಶಿಲಾತಲೇ ।
ಶಿಲಾಂ ಖುರಾಂಕಿತಾಂ ದೃಷ್ಟ್ವಾ ಜಾನುದೇಶಾಂಕಿತಾಂ ತಥಾ ॥ ೨೨೨ ॥
ವಿಸ್ಮಿತಾಃ ಸರ್ವದೇವಾ ವೈ ಪ್ರಪ್ರಚ್ಛುರ್ಗಾಂ ಚ ನಂದಿನೀಂ ।
ಕಿಮೇತದ್ದೃಶ್ಯತೇ ದೇವಿ ಪದಂ ಪ್ರೇತಶಿಲಾತಲೇ ।
ಕಥಂ ತು ಖೇದಃ ಸಂಜಾತಶ್ಚಾಸ್ಮಾಕಂ ಸ್ಖಲನಂ ಕಥಂ ॥ ೨೨೩ ॥

ನಂದಿನ್ಯುವಾಚ :—

ಇದಂ ಮಮ ಪದಂ ದೇವಾಃ ಶಿಲಾಸಂಸ್ಥಂ ವಿರಾಜತೇ ।
ಗಗನಾಂಗಣಭೂಮಿಸ್ಥಂ ಚಂದ್ರಬಿಂಬಮಿವಾಪರಂ ॥ ೨೨೪ ॥
ಅದ್ಯಪ್ರಭೃತಿ ಭೋ ದೇವಾಸ್ತ್ರೈಲೋಕ್ಯೇ ಸಚರಾಚರೇ ।
ಗೋಷ್ಪದಂನಾಮ ವಿಖ್ಯಾತಂ ಲೋಕೇ ಖ್ಯಾತಿಂ ಗಮಿಷ್ಯತಿ ॥ ೨೨೫ ॥
ಅತ್ರಾಗತ್ಯ ನರೋ ಯಸ್ತು ಸ್ನಾನಂ ಶ್ರಾದ್ಧಂ ಕರಿಷ್ಯತಿ ।
ಗಯಾಸಪ್ತಗುಣಂ ತಸ್ಯ ಫಲಂ ದೇವಾ ಭವಿಷ್ಯತಿ ॥ ೨೨೬ ॥
ನ ವಾರೋ ನ ಚ ನಕ್ಷತ್ರಂ ನ ಕಾಲಸ್ತತ್ರ ಕಾರಣಂ ।
ಯದ್ಯೈವ ದೃಶ್ಯತೇ ತೀರ್ಥಂ ತದಾ ಪರ್ವಸಹಸ್ರಕಂ ॥ ೨೨೭ ॥

೨೨೨–೨೨೩. ಆಗ ಅಲ್ಲಿ ಕಲ್ಲಿನಮೇಲೆ ನಂದೆಯ ಕಾಲು ಹೂತಿತು. ಆಗ ಗೊರಸಿನಿಂದಲೂ, ಮೊಣಕಾಲಿನಿಂದಲೂ ಚಿಹ್ನೆಗೊಂಡ ಆ ಶಿಲೆಯನ್ನು ನೋಡಿ ಆಶ್ಚರ್ಯಗೊಂಡ ಸಕಲದೇವತೆಗಳೂ ನಂದಿನಿಯನ್ನು ಕುರಿತು, "ದೇವಿ! ಪ್ರೇತಶಿಲೆಯ ಮೇಲೆ ಕಾಣಿಸುತ್ತಿರುವ ಹೆಜ್ಜೆಯು ಯಾವುದು ? ನಿನಗೆ ಹೇಗೆ ವ್ಯಥೆಯುಂಟಾಯಿತು? ನಾವು ಹೇಗೆ ಜಾರಿದೆವು ? ಎಂದು ಪ್ರಶ್ನಿಸಿದರು.

೨೨೪. ನಂದಿನಿಯು ಹೇಳುತ್ತಾಳೆ :—ದೇವತೆಗಳೆ ! ನನ್ನೀ ಹೆಜ್ಜೆಯು ಶಿಲೆಯಲ್ಲಿ ಆಕಾಶದಲ್ಲಿ ಪ್ರಕಾಶಿಸುವ ಚಂದ್ರಬಿಂಬದಂತೆ ವಿರಾಜಿಸುವುದು.

೨೨೫. ಎಲೈ ದೇವತೆಗಳೆ ! ಇದು ಮೊದಲ್ಗೊಂಡು ಈ ಕ್ಷೇತ್ರವು ಚರಾಚರಾತ್ಮಕವಾದ ಮೂರು ಲೋಕಗಳಲ್ಲಿ ಗೋಷ್ಪದವೆಂದು ಪ್ರಸಿದ್ಧವಾಗುವುದು.

೨೨೬. ದೇವತೆಗಳೆ ! ಮಾನವನು ಇಲ್ಲಿಗೆ ಬಂದು ಮಿಂದು ಶ್ರಾದ್ಧ ಮಾಡಿದರೆ ಅದು ಗಯೆಯಲ್ಲಿ ಮಾಡಿದ ಶ್ರಾದ್ಧಕ್ಕಿಂತ ಏಳರಷ್ಟು ಹೆಚ್ಚಿನ ಫಲವನ್ನೀಯುವುದು.

೨೨೭. ಇಲ್ಲಿ ವಾರ, ನಕ್ಷತ್ರ, ಕಾಲವನ್ನು ನೋಡಬೇಕಾಗಿರುವುದಿಲ್ಲ. ಈ ತೀರ್ಥವನ್ನು ನೋಡಿದ ದಿನವೆ ಇದು ಸಹಸ್ರ ಪರ್ವಕಾಲಕ್ಕೆ ಸಮಾನವಾದುದು.

ಅಥವಾ ಪರ್ವಕಾಂಕ್ಷಾ ಚೇತ್ತಾನಿ ಮೇ ಶೃಣು ಪಾರ್ವತಿ ।
ಅಯನೇ ವಿಷುವೇ ಯುಗ್ಮೇ ಸಾಮಾನ್ಯೇ ಚಾರ್ಕಸಂಕ್ರಮೇ ॥ ೨೨೮ ॥

ಅಮಾವಾಸ್ಯಾಷ್ಟಕಾಯಾಂ ಚ ಕೃಷ್ಣಪಕ್ಷೇ ವಿಶೇಷತಃ ।
ಆರ್ದ್ರಾ ಮಘಾ ರೋಹಿಣೀಷು ದ್ರವ್ಯಬ್ರಾಹ್ಮಣಸಂಗಮೇ ॥ ೨೨೯ ॥

ಗಜಚ್ಛಾಯಾವ್ಯತೀಪಾತೇ ವೈಧೃತೇ ಧೃತಚಾಮರೇ ।
ವೈಶಾಖಸ್ಯ ತೃತೀಯಾಯಾಂ ನವಮ್ಯಾಂ ಕಾರ್ತಿಕಸ್ಯ ತು ॥ ೨೩೦ ॥

ಪಂಚದಶ್ಯಾಂ ಚ ಮಾಘಸ್ಯ ನಭಸ್ಯೇ ಚ ತ್ರಯೋದಶೀಂ ।
ಯುಗಾದಯಃ ಸ್ಮೃತಾ ಹ್ಯೇತಾಸ್ತಸ್ಮಿನ್ಕಾಲೇ ಚ ವಾ ಪುನಃ ॥ ೨೩೧ ॥

ಮನ್ವಂತರಾದೌ ಕಾರ್ಯಂ ಚ ತತ್ರ ಶ್ರಾದ್ಧಂ ವಿಜಾನತಾ ।
ಆಶ್ವಯುಕ್ಶುಕ್ಲನವಮೀ ದ್ವಾದಶೀ ಕಾರ್ತಿಕೇ ತಥಾ ॥ ೨೩೨ ॥

ತೃತೀಯಾ ಚೈತ್ರಮಾಸಸ್ಯ ತಥಾ ಭಾದ್ರಪದಸ್ಯ ಚ ।
ಫಾಲ್ಗುನಸ್ಯ ತ್ವಮಾವಾಸ್ಯಾ ಪೌಷಸ್ಯೈಕಾದಶೀ ತಥಾ ॥ ೨೩೩ ॥

ಆಷಾಢಸ್ಯಾಪಿ ದಶಮೀ ಮಾಘಮಾಸಸ್ಯ ಸಪ್ತಮೀ ।
ಶ್ರಾವಣಸ್ಯಾಷ್ಟಮೀ ಕೃಷ್ಣಾ ತಥಾಷಾಢೀ ಚ ಪೂರ್ಣಿಮಾ ॥ ೨೩೪ ॥

ಕಾರ್ತಿಕೀ ಫಾಲ್ಗುನೀ ಚೈವ ಜ್ಯೈಷ್ಠೀ ಪಂಚದಶೀ ತಥಾ ।
ಮನ್ವಂತರಾದಯಶ್ಚೈತಾ ದತ್ತಸ್ಯಾಕ್ಷಯಕಾರಿಕಾಃ ॥ ೨೩೫ ॥

೨೨೮—೨೩೫. ಓ ಪಾರ್ವತಿ ! ಅಥವಾ ಪರ್ವಕಾಲದ ಅಪೇಕ್ಷೆಯಿದ್ದರೆ ಅವುಗಳನ್ನು ಕೇಳು. ಆಯನ ಸಂಕ್ರಾಂತಿ. ಯುಗಾದಿ. ಸಾಮಾನ್ಯ ಸಂಕ್ರಾಂತಿ, ಅಮಾವಾಸ್ಯೆ ಕೃಷ್ಣ ಪಕ್ಷದಲ್ಲಿ ಅಷ್ಟಕ, ಆರ್ದ್ರಾ, ಮಘಾ ರೋಹಿಣೀ ನಕ್ಷತ್ರಗಳು, ದ್ರವ್ಯ ಬ್ರಾಹ್ಮಣರ ಸೇರುವಿಕೆ, ಗಜಚ್ಛಾಯಾ, ವ್ಯತೀಪಾತ, ವೈಧೃತಿ, ಧೃತಚಾಮರ, ವೈಶಾಖಮಾಸದ ತದಿಗೆ. ಕಾರ್ತಿಕಮಾಸದ ನವಮೀ, ಮಾಘಶುದ್ಧ ಪೂರ್ಣಿಮಾ, ಭಾದ್ರಪದಮಾಸದ ತ್ರಯೋದಶೀ, ಮನ್ವಂತರಾದಿ ಇವುಗಳನ್ನರಿತು ಶ್ರಾದ್ಧ ಮಾಡಬೇಕು. ಆಶ್ವೀಜಶುದ್ಧ ನವಮೀ, ಕಾರ್ತಿಕಮಾಸದ ದ್ವಾದಶೀ, ಚೈತ್ರ, ಭಾದ್ರಪದಮಾಸ ತದಿಗೆಗಳು, ಫಾಲ್ಗುನಮಾಸದ ಅಮಾವಾಸ್ಯೆ, ಪುಷ್ಯಮಾಸದ ಏಕಾದಶೀ, ಆಷಾಢಮಾಸದ ದಶಮೀ, ಮಾಘಮಾಸದ ಸಪ್ತಮೀ. ಶ್ರಾವಣಮಾಸದ ಕೃಷ್ಣಾಷ್ಟಮೀ, ಆಷಾಢಶುದ್ಧ ಹುಣ್ಣಿಮೆ, ಕಾರ್ತಿಕ, ಫಾಲ್ಗುನ, ಜ್ಯೇಷ್ಠಮಾಸದ ಹುಣ್ಣಿಮೆಗಳು, ಮನ್ವಂತರ ಮನ್ವಾದಿಗಳು ಇವುಗಳಲ್ಲಿ ದಾನಮಾಡಿದುದು ಅಕ್ಷಯವಾಗುವುದು.

ವೈಶಾಖಸ್ಯ ತೃತೀಯಾಯಾಂ ಕೃಷ್ಣಾಯಾಂ ಫಾಲ್ಗುನಸ್ಯ ಚ ।
ಪಂಚಮೀ ಚೈತ್ರಮಾಸಸ್ಯ ತಸ್ಯೈವಾಂತ್ಯಾ ತಥಾ ಪರಾ ॥ ೨೩೬ ॥
ಶುಕ್ಲಾ ತ್ರಯೋದಶೀ ಮಾಘೇ ಕಾರ್ತಿಕಸ್ಯ ತು ಸಪ್ತಮೀ ।
ನವಮೀ ಮಾರ್ಗಶೀರ್ಷಸ್ಯ ಸಪ್ತೈತಾಃ ಕಲ್ಪಕಾದಿಮಾಃ ॥ ೨೩೭ ॥
ಕಲ್ಪತೃಪ್ತಿರ್ಭವೇಚ್ಛ್ರಾದ್ಧೇ ಕಲ್ಪಾದೌ ತು ಕೃತೇ ಪುರಾ ।
ಇತ್ಯೇವಮುಕ್ತ್ವಾ ಸಾ ನಂದಾ ದೇವಾನಾಂ ಪ್ರತಿ ನಂದಿನೀ ।
ಅಂತರ್ಧಾನಂ ಜಗಾಮಾಶು ದೀಪೋ ವಾತಹತೋ ಯಥಾ ॥ ೨೩೮ ॥
ಇತೀದಂ ಕೌತುಕಂ ದೃಷ್ಟ್ವಾ ಸರ್ವೇ ದೇವಾಃ ಸವಾಸವಾಃ ।
ಬ್ರಹ್ಮರ್ಷಯೋ ದೇವರ್ಷಯಃ ಶ್ಲೋಕಂ ಪೌರಾಣಿಕಂ ಜಗುಃ ॥ ೨೩೯ ॥
ಅಹೋ ತೀರ್ಥಸ್ಯ ಮಾಹಾತ್ಮ್ಯಂ ನಂದಾಯಾಸ್ತಪಸೋ ಬಲಂ ।
ಸಕೃಚ್ಛ್ರಾದ್ಧೇನ ದತ್ತೇನ ಗಯಾಸಪ್ತಗುಣಂ ಫಲಂ ॥ ೨೪೦ ॥
ಏವಮುಕ್ತ್ವಾ ತತೋ ದೇವಾಶ್ಚಕ್ರುಃ ಶ್ರಾದ್ಧಾದಿಕಾಂ ಕ್ರಿಯಾಂ ।
ಯಥೋಕ್ತಂ ಫಲಮಾಪುಸ್ತೇ ನಂದಿನ್ಯಾ ಪೂರ್ವಭಾಷಿತಂ ॥ ೨೪೧ ॥

---

೨೩೬. ವೈಶಾಖ ಶುದ್ಧ ತದಿಗೆ, ಫಾಲ್ಗುನ ಕೃಷ್ಣ ತದಿಗೆ, ಚೈತ್ರಮಾಸದ ಪಂಚಮೀ, ಮತ್ತು ಹುಣ್ಣಿಮೆ, ಮಾಘಶುದ್ಧ ತ್ರಯೋದಶೀ, ಕಾರ್ತಿಕ ಸಪ್ತಮೀ ಮಾರ್ಗಶೀರ್ಷ ನವಮೀ ಇವೇಳೂ ಕಲ್ಪಾದಿಗಳು.

೨೩೭–೨೩೮. ಕಲ್ಪಾದಿಗಳಲ್ಲಿ ಮಾಡಿದ ಶ್ರಾದ್ಧದಿಂದ ಕಲ್ಪಾಂತ್ಯದವರೆಗೆ ತೃಪ್ತಿ ಯುಂಟಾಗುವುದು. ದೇವತೆಗಳಿಗೆ ಸಂತೋಷವನ್ನುಂಟುಮಾಡುವ ನಂದಿನಿಯು ಹೀಗೆ ಹೇಳಿ ಗಾಳಿಯಿಂದ ದೀಪವು ಆರಿಹೋಗುವಂತೆ ಅಡಗಿ ಹೋದಳು.

೨೩೯. ಈ ಕುತೂಹಲವನ್ನುಂಟುಮಾಡುವ ವಿಷಯವನ್ನು ನೋಡಿ ಇಂದ್ರ ಸಹಿತರಾದ ಸಕಲ ದೇವತೆಗಳೂ, ಬ್ರಹ್ಮರ್ಷಿ ದೇವರ್ಷಿಗಳೂ ಪೌರಾಣಿಕ ಶ್ಲೋಕ ವನ್ನು ಗಾನಮಾಡಿದರು

೨೪೦. ಈ ತೀರ್ಥದ ಮಾಹಾತ್ಮ್ಯವೂ, ನಂದಿನಿಯ ತಪಸ್ಸಿನ ಸಾಮರ್ಥ್ಯವೂ ಆಶ್ಚರ್ಯಕರವಾದುದು. ಇಲ್ಲಿ ಒಂದಾವೃತ್ತಿ ಶ್ರಾದ್ಧ ಮಾಡುವುದರಿಂದ ಗಯಾಶ್ರಾದ್ಧದ ಏಳರಷ್ಟು ಫಲವುಂಟಾಗುವುದು.

೨೪೧. ದೇವತೆಗಳು ಹೀಗೆಂದು ಶ್ರಾದ್ಧ ಮೊದಲಾದುವುಗಳನ್ನು ಮಾಡಿ ನಂದಿನಿಯು ಹಿಂದೆ ಹೇಳಿದ ಫಲವನ್ನು ಹೊಂದಿದರು.

ಇತ್ಥಂ ತ್ವಮಪಿ ರಾಜೇಂದ್ರ ಗಚ್ಛ ಶೀಘ್ರಂ ಹಿ ಗೋಷ್ಪದಂ ।
ತತ್ರ ಶ್ರಾದ್ಧಾದಿಕಂ ಕೃತ್ವಾ ಲಪ್ಸ್ಯಸೇ ಫಲಮೀಪ್ಸಿತಂ ॥ ೨೪೨ ॥
ಅಯಂ ತೇ ಜನಕೋ ರಾಜನ್ಪಾಪಿನಾಂ ಪ್ರವರಃ ಸ್ಮೃತಃ ।
ನಾನ್ಯೈಸ್ತೀರ್ಥಶತೈಃ ಶಕ್ಯಃ ಪ್ರೋದ್ಧರ್ತುಂ ಗೋಷ್ಪದಂ ವಿನಾ ॥ ೨೪೩ ॥
ತಸ್ಮಾದ್ವ್ರಜ ಮಹಾರಾಜ ಮಾ ಕಾರ್ಷೀಸ್ತ್ವಂ ವಿಲಂಬನಂ ।
ಏವಂ ಶ್ರುತ್ವಾ ತದಾ ರಾಜಾ ಪ್ರಭಾಸಂ ಕ್ಷೇತ್ರಮಾಗತಃ ॥ ೨೪೪ ॥
ತತ್ರ ಸ್ಥಾನಸ್ಥಿತಾನ್ವಿಪ್ರಾಂಸ್ತೀರ್ಥಮಾಹಾತ್ಮ್ಯ ಕೋವಿದಾನ್ ।
ಅಗ್ರೇಕೃತ್ಯ ಮಹಾರಾಜೋ ಯಯೌ ನ್ಯಂಕುಮತೀಂ ನದೀಂ ॥ ೨೪೫ ॥
ತೈ ರಾಜ್ಞೋ ದರ್ಶಿತಂ ತೀರ್ಥಂ ಪದಂ ಪ್ರೇತಶಿಲಾಸ್ಥಿತಂ ।
ತದ್ದೃಷ್ಟ್ವಾ ವಿಮಲಂ ತೀರ್ಥಂ ವಿಸ್ಮಯೋತ್ಫುಲ್ಲಲೋಚನಃ ।
ಚಕ್ರೇ ಕುಂಡಾನಿ ವೇದೀಶ್ಚ ಮಂಡಪಾನ್ಯಜ್ಞಸಿದ್ಧಯೇ ॥ ೨೪೬ ॥
ತತೋ ಯಜ್ಞಃ ಸಮಾರಬ್ಧೋ ವಿಧಿವದ್ಭೂರಿದಕ್ಷಿಣಃ ।
ಪ್ರತ್ಯಕ್ಷಂ ಪಿತರಸ್ತಸ್ಯ ಬಭೂವುರ್ಜ್ವಲನಪ್ರಭಾಃ ॥ ೨೪೭ ॥
ತತಃ ಶ್ರದ್ಧಾಂ ಸಮಾಸ್ಥಾಯ ಶ್ರಾದ್ಧೈರ್ಯಜ್ಞೈರ್ಮಹೋದಯಂ ।
ತೇ ಚಾಬ್ರುವನ್ವಚಸ್ತುಷ್ಟಾಃ ಪಿತರೋ ರಾಜಸತ್ತಮಂ ॥ ೨೪೮ ॥

---

೨೪೨. ದೊರೆಯೇ ! ನೀನೂ ಹೀಗೆಯೇ ಶೀಘ್ರವಾಗಿ ಗೋಷ್ಪದ ತೀರ್ಥಕ್ಕೆ ಹೋಗಿ ಅಲ್ಲಿ ಶ್ರಾದ್ಧಾದಿಗಳನ್ನು ಮಾಡಿ ಅಭೀಷ್ಟ ಫಲವನ್ನು ಪಡೆಯುವೆ.

೨೪೩. ಪಾಪಿಗಳಲ್ಲಿ ಅಗ್ರಗಣ್ಯನಾದ ನಿನ್ನೀ ತಂದೆಯನ್ನು ಗೋಷ್ಪದ ತೀರ್ಥವನ್ನು ಬಿಟ್ಟರೆ ಇತರ ಅನೇಕ ತೀರ್ಥಗಳಿಂದಲೂ ಉದ್ಧರಿಸಲು ಸಾಧ್ಯವಿಲ್ಲ.

೨೪೪. ಮಹಾರಾಜ ! ಆದ್ದರಿಂದ ನೀನಲ್ಲಿಗೆ ಹೋಗು, ವಿಳಂಬ ಮಾಡಬೇಡ, ಎನ್ನಲು ದೊರೆಯು ಅದನ್ನು ಕೇಳಿ ಪ್ರಭಾಸಕ್ಷೇತ್ರಕ್ಕೆ ಬಂದನು.

೨೪೫. ಅವನು ಅಲ್ಲಿರುವ ತೀರ್ಥಮಾಹಾತ್ಮ್ಯವನ್ನರಿತವರಲ್ಲಿ ನಿಪುಣರಾದ ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ನ್ಯಂಕುಮತೀ ನದಿಯನ್ನು ಕುರಿತು ಹೋದನು.

೨೪೬. ಆ ಬ್ರಾಹ್ಮಣರು ಆ ವೈನ್ಯನಿಗೆ ಪ್ರೇತಶಿಲೆಯಲ್ಲಿರುವ ಗೋಷ್ಪದ ತೀರ್ಥವನ್ನುತೋರಿಸಲು ಅವನು ಆ ನಿರ್ಮಲ ತೀರ್ಥವನ್ನು ಕಂಡು ಆಶ್ಚರ್ಯಗೊಂಡವನಾಗಿ ಯಜ್ಞಕ್ಕಾಗಿ ಕುಂಡಗಳನ್ನೂ, ವೇದಿಗಳನ್ನೂ, ಮಂಡಪಗಳನ್ನೂ ಮಾಡಿಸಿದನು.

೨೪೭. ತರುವಾಯ ಅಧಿಕ ದಕ್ಷಿಣೆಯುಳ್ಳ ಯಜ್ಞವು ಆರಂಭಿಸಲ್ಪಡಲು ಅಗ್ನಿಯಂತೆ ಜ್ವಲಿಸುತ್ತಿರುವ ಪಿತೃಗಳು ಅವನಿಗೆ ಪ್ರತ್ಯಕ್ಷರಾದರು.

೨೪೮. ಅನಂತರ ಶ್ರದ್ಧೆಯಿಂತೆ ಯಜ್ಞಮಾಡುತ್ತಿರುವ ರಾಜನನ್ನು ಕುರಿತು ಸಂತುಷ್ಟರಾದ ಪಿತೃಗಳು ಇಂತೆಂದರು.

ಧನ್ಯೋಽಸಿ ರಾಜನ್ಪುಣ್ಯೋಽಸಿ ವಯಂ ಧನ್ಯತರಾಸ್ತ್ವಯಾ ।
ಯದತ್ರ ತೀರ್ಥೇ ಶ್ರಾದ್ಧೇನ ಉದ್ಧೃತಾ ಭವತಾ ವಯಮ್ ॥ ೨೪೯ ॥
ಏವಮುಕ್ತ್ವಾ ತತಃ ಸರ್ವೇ ವೇನೇನ ಪಿತರಃ ಸಹ ।
ವಿಮಾನವರಸಂಸ್ಥಾಶ್ಚ ಜಗ್ಮುಸ್ತೇ ತ್ರಿದಿವಾಲಯಮ್ ॥ ೨೫೦ ॥
ಗಚ್ಛನ್ನುವಾಚ ವೇನಸ್ತಂ ರಾಜಾನಂ ಪೃಥುವಕ್ಷಸಮ್ ।
ರಾಜಞ್ಜನ್ಮಾನಿ ಚತ್ವಾರಿ ಅಭೂವಂ ಚಾನ್ಯಜನ್ಮನಿ ॥ ೨೫೧ ॥
ಕುಷ್ಠೀ ಪಾಪೋ ದುರಾಚಾರಶ್ಚಾಂಡಾಲೋಚ್ಛಿಷ್ಟಭುಕ್ತಥಾ ।
ಸೋಽಹಂ ಪಾಪವಿನಿರ್ಮುಕ್ತೋ ಗಚ್ಛಾಮಿ ತ್ರಿದಿವಾಲಯಮ್ ॥ ೨೫೨ ॥
ತದ್ಗಚ್ಛ ತ್ವಂ ಮಹಾಭಾಗ ರಾಜ್ಯಂ ಭುಂಕ್ಷ್ವ ಚಿರಾಯು ಚ ।
ಕೃತಂ ತೇ ಸಕಲಂ ಕಾರ್ಯಂ ಪುತ್ರೇಣ ಕ್ರಿಯತೇ ಚ ಯತ್ ॥ ೨೫೩ ॥
ಏವಂ ಶ್ರುತ್ವಾ ತದಾ ರಾಜಾ ಮುಮುದೇ ಜ್ಞಾತಿಸಂಯುತಃ ।
ಬ್ರಾಹ್ಮಣಾನ್ತರ್ಪಯಾಮಾಸ ದಾನೈರ್ಭೂಕಾಂಚನಾದಿಭಿಃ ॥ ೨೫೪ ॥
ನ ತದಸ್ತಿ ಜಗತ್ಯಸ್ಮಿಂಸ್ತತ್ರ ಯನ್ನ ದದೌ ನೃಪಃ ।
ದೃಷ್ಟ್ವಾ ಪ್ರಭಾವಂ ತೀರ್ಥಸ್ಯ ಪ್ರತ್ಯಕ್ಷಂ ಪಿತೃದರ್ಶನಮ್ ॥ ೨೫೫ ॥

---

೨೪೯. ದೊರೆಯೆ ! ನೀನು ಕೃತಕೃತ್ಯನೂ, ಪುಣ್ಯವಂತನೂ ಆಗಿರುವೆ. ನಿನ್ನಿಂದ ನಾವೂ ಧನ್ಯರಾದೆವು. ನೀನು ಈ ತೀರ್ಥದಲ್ಲಿ ಶ್ರಾದ್ಧಮಾಡಿ ನಮ್ಮನ್ನು ಉದ್ಧರಿಸಿರುವೆ.

೨೫೦. ಅವರು ಹೀಗೆಂದು ಹೇಳಿ ವೇನನೊಡನೆ ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ತೆರಳಿದರು.

೨೫೧–೨೫೨. ವೇನನು ಹೋಗುತ್ತ ಆ ಪೃಥ್ವನನ್ನು ಕುರಿತು "ದೊರೆಯೆ ! ನನಗೆ ನಾಲ್ಕು ಜನ್ಮಗಳಾಗಲೆ ಕಳೆದುವು. ಅವುಗಳಲ್ಲಿ ನಾನು ಕುಷ್ಠರೋಗಿಯೂ, ಪಾಪಿಯೂ, ದುರ್ನಡತೆಯುಳ್ಳವನೂ, ಉಚ್ಛಿಷ್ಟವನ್ನು ತಿನ್ನುವ ಚಂಡಾಲನೂ ಆಗಿದ್ದೆನು. ಈಗ ಪಾಪಮುಕ್ತನಾಗಿ ದೇವಲೋಕಕ್ಕೆ ಹೋಗುತ್ತೇನೆ.

೨೫೩. ಭಾಗ್ಯವಂತನೆ ! ಆದ್ದರಿಂದ ನೀನೀಗ ಹೊರಡು, ಬಹುಕಾಲದವರೆಗೆ ರಾಜ್ಯಭೋಗಗಳನ್ನನುಭವಿಸು. ಪುತ್ರನ ಕರ್ತವ್ಯವನ್ನೆಲ್ಲ ನೀನು ಪೂರಯಿಸಿರುವೆ" ಎಂದನು.

೨೫೪. ಆಗ ವೇನನು ಇದನ್ನು ಕೇಳಿ ಜ್ಞಾತಿಗಳೊಡನೆ ಸಂತೋಷಗೊಂಡು ಬ್ರಾಹ್ಮಣರನ್ನು ಭೂಮಿ, ಸುವರ್ಣ ಮೊದಲಾದ ದಾನಗಳಿಂದ ಸಂತೋಷಗೊಳಿಸಿದನು.

೨೫೫. ಆ ದೊರೆಯು ಆ ತೀರ್ಥದ ಮಾಹಾತ್ಮ್ಯವನ್ನೂ, ಪ್ರತ್ಯಕ್ಷವಾದ ತಂದೆಯನ್ನೂ ನೋಡಿದ ಕೂಡಲೆ ದಾನ ಮಾಡದಿರುವ ವಸ್ತುವು ಪ್ರಪಂಚದಲ್ಲಿ ಯಾವುದೂ ಇರಲಿಲ್ಲ.

ಏವಂ ರಾಜಾ ಸ ಕೃತ್ವಾ ತು ಸ್ವಕೀಯಂ ಸ್ಥಾನಮಾಯಯೌ ।
ಭುಕ್ತ್ವಾ ಭೂಮಿಂ ತು ಸಕಲಾಂ ಪ್ರೇತ್ಯ ಸ್ವರ್ಗಂ ಸಮಾಪ್ತವಾನ್ ॥ ೨೫೬ ॥
ಏವಂಪ್ರಭಾವಂ ತತ್ಕ್ಷೇತ್ರಂ ಪ್ರಭಾಸಂ ಪಾಪನಾಶನಂ ।
ಯಸ್ಮಿನ್ನಾಯಾಂತಿ ತೀರ್ಥಾನಿ ದೇವಾಸ್ತಿಷ್ಠಂತಿ ಕೋಟಿಶಃ ॥ ೨೫೭ ॥
ಪ್ರಭಾಸಂ ಕ್ಷೇತ್ರಮಾಸಾದ್ಯ ಯೋಽನ್ಯತ್ತೀರ್ಥಂ ಹಿ ಮಾರ್ಗತೇ ।
ಸ ಕರಸ್ಥಂ ಸಮುತ್ಸೃಜ್ಯ ಕೂರ್ಪರೇಣ ಸಮಾಲಿಹೇತ್ ॥ ೨೫೮ ॥
ಅಬ್ರುವನ್ಪಿತರಶ್ಚೈನಾಂ ಗಾಥಾಂ ಪೌರಾಣಿಕೀಂ ಪ್ರಿಯೇ ।
ಗಯಾಂ ಗಂತುಂ ನ ಶಕ್ನೋತಿ ಯದಿ ಪುತ್ರಃ ಕಥಂಚನ ।
ತದಾ ಯತ್ನೇನ ಗಂತವ್ಯಂ ಗೋಷ್ಪದಂ ತೀರ್ಥಮುತ್ತಮಂ ॥ ೨೫೯ ॥
ಕಂದೈರ್ಮೂಲೈಃ ಫಲೈರ್ವಾಪಿ ಪಿಣ್ಯಾಕೇಂಗುದಕೇನ ವಾ ।
ಅಪಿ ನಃ ಸ ಕುಲೇ ಭೂಯಾದ್ಯೋಽತ್ರ ಶ್ರಾದ್ಧಂ ಪ್ರದಾಸ್ಯತಿ ॥ ೨೬೦ ॥
ತತ್ರ ಸ್ನಾತ್ವಾ ಪ್ರಯತ್ನೇನ ಬ್ರಾಹ್ಮಣಾನ್ವೇದವಿತ್ತಮಾನ್ ।
ಆಮಂತ್ರ್ಯ ವಿಧಿವಚ್ಛ್ರಾದ್ಧೇ ಭೋಜಯಿತ್ವಾ ಪ್ರಯತ್ನತಃ ।
ಪಿಂಡದಾನಂ ತು ಕರ್ತವ್ಯಂ ಪಿತೄಣಾಂ ತೃಪ್ತಿಮಿಚ್ಛತಾಂ ॥ ೨೬೧ ॥

---

೨೫೬. ಆ ರಾಜನು ಹೀಗೆ ಕಾರ್ಯವನ್ನೆಸಗಿ ತನ್ನ ಸ್ಥಾನಕ್ಕೆ ಬಂದು ಸಂಪೂರ್ಣ ಭೂಮಿಯನ್ನನುಭವಿಸಿ ಮೃತನಾಗಿ ಸ್ವರ್ಗವನ್ನು ಹೊಂದಿದನು.

೨೫೭. ಈ ಪ್ರಭಾಸ ಕ್ಷೇತ್ರವು ಇಂತಹ ಮಾಹಾತ್ಮ್ಯವುಳ್ಳದ್ದು. ಇದಕ್ಕೆ ಅನೇಕ ತೀರ್ಥಗಳು ಬರುವುವು. ಇಲ್ಲಿ ಕೋಟಿ ಸಂಖ್ಯೆಯ ದೇವತೆಗಳು ನೆಲಸಿರುವರು.

೨೫೮. ಪ್ರಭಾಸ ಕ್ಷೇತ್ರವನ್ನು ಹೊಂದಿ ಇತರ ತೀರ್ಥವನ್ನು ಹುಡುಕುವವನು ಕೈಯಲ್ಲಿರುವುದನ್ನು ತ್ಯಜಿಸಿ ಮೊಣಕೈಯಿಂದ ಆಸ್ವಾದಿಸುವನು.

೨೫೯. ಪ್ರಿಯಳೆ! ಪಿತೃಗಳು ಈ ಪೌರಾಣಿಕ ಗಾಥೆಯನ್ನು ಹೇಳಿರುವರು. ಗಯೆಗೆ ಹೋಗಲಶಕ್ತನಾದ ಪುತ್ರನು ಪ್ರಯತ್ನದಿಂದ ಗೋಷ್ಪದ ತೀರ್ಥಕ್ಕೆ ಹೋಗಬೇಕು.

೨೬೦. ನಮ್ಮ ವಂಶದಲ್ಲಿ, ಈ ಕ್ಷೇತ್ರದಲ್ಲಿ ಗಡ್ಡೆ, ಗೆಣಸು, ಫಲ ಅಥವಾ ಹಿಂಡಿ, ಇಂಗಳದ ಹಣ್ಣುಗಳಿಂದ ಶ್ರಾದ್ಧವನ್ನು ಮಾಡುವವನು ಹುಟ್ಟಿಯಾನೊ.

೨೬೧. ಅಲ್ಲಿ ಮಿಂದು ವೇದಜ್ಞರಾದ ಬ್ರಾಹ್ಮಣರನ್ನು ಆಮಂತ್ರಿಸಿ ಶ್ರಾದ್ಧಗೈದು ಭೋಜನ ಮಾಡಿಸಿ ತೃಪ್ತಿಯನ್ನು ಬಯಸುವವನು ಪಿತೃಗಳಿಗೆ ಪಿಂಡಪ್ರದಾನ ಮಾಡಬೇಕು.

ನ ತಿಥಿರ್ನ ಚ ನಕ್ಷತ್ರಂ ಪರ್ವ ಮಾಸಾದಿಕಂ ನ ಹಿ ।
ಸರ್ವದಾ ತತ್ರ ಗಂತವ್ಯಂ ಶ್ರದ್ಧಾಯುಕ್ತೇನ ಚೇತಸಾ ॥ ೨೬೨ ॥
ನ ಕಾಲನಿಯಮಸ್ತತ್ರ ಪ್ರಮಾಣಂ ದರ್ಶನಂ ಯತಃ ।
ತತ್ರಾಕ್ಷಯತೃತೀಯಾಯಾಂ ದುರ್ಲಭಂ ಗಮನಂ ಪ್ರಿಯೇ ॥ ೨೬೩ ॥
ಕಾರ್ತಿಕ್ಯಾಂ ಮಾಘಸಪ್ತಮ್ಯಾಂ ಪದ್ಮಕೇ ನಾಥ ಪರ್ವಣಿ ॥ ೨೬೪ ॥
ಹಿರಣ್ಯದಾನಂ ಗೋದಾನಂ ವಸ್ತ್ರಂ ರೂಪ್ಯಂ ಘೃತಂ ತಿಲಾಃ ।
ದಾತವ್ಯಾಸ್ತತ್ರ ಯುಕ್ತೇನ ಪಿತೄಣಾಂ ತೃಪ್ತಿಮಿಚ್ಛತಾ ॥ ೨೬೫ ॥
ಏವಂ ತೇ ಕಥಿತಂ ದೇವಿ ತೀರ್ಥಗುಹ್ಯಂ ಮಹೋದಯಂ ।
ನ ಕಥ್ಯಂ ದುಷ್ಟಬುದ್ಧೀನಾಂ ಪಾಪಿನಾಂ ಕ್ರೂರಚೇತಸಾಂ ॥ ೨೬೬ ॥
ಶ್ರದ್ಧಾಯುಕ್ತಾಯ ದಾತವ್ಯಂ ಪಿತೃಭಕ್ತಿರತಾಯ ಚ ।
ಶ್ರಾದ್ಧಕಾಲೇ ವಿಶೇಷೇಣ ಪಠೇದ್ಭಕ್ತ್ಯಾ ಪುರಾಣವಿತ್ ॥ ೨೬೭ ॥
ಪಿತೄಣಾಂ ಜಾಯತೇ ತೃಪ್ತಿಸ್ತೇನ ದ್ವಾದಶವರ್ಷಿಕೀ ।
ಶ್ರೋತವ್ಯಂ ಪ್ರಯತ್ನೈರ್ನಿತ್ಯಂ ನರೈರ್ನರಕಭೀರುಭಿಃ ।
ಪಠಿತವ್ಯಂ ಸದಾ ಭಕ್ತ್ಯಾ ವಿಪ್ರಾಣಾಂ ಭುಂಜತಾಂ ಪುರಃ ॥ ೨೬೮ ॥

---

೨೬೨. ತಿಥಿ, ನಕ್ಷತ್ರ, ಮಾಸಾದಿಗಳನ್ನು ನೋಡದೆ ಯಾವಾಗಲೂ ಶ್ರದ್ಧೆಯುಳ್ಳ ಮನಸ್ಸಿನಿಂದ ಅಲ್ಲಿಗೆ ಹೋಗಬೇಕು.

೨೬೩. ಪ್ರಿಯಳೆ! ಅಲ್ಲಿಗೆ ಹೋಗಲು ಕಾಲ ಮತ್ತು ಶಾಸ್ತ್ರ ನಿಯಮವಿಲ್ಲ. ಅಕ್ಷಯತೃತೀಯಾ ದಿನ ಅಲ್ಲಿಯ ಯಾತ್ರೆಯು ದುರ್ಲಭವಾದುದು.

೨೬೪—೨೬೫, ಪಿತೃಗಳಿಗೆ ತೃಪ್ತಿಯನ್ನು ಬಯಸುವವನು ಕಾರ್ತಿಕಮಾಸದ ಹುಣ್ಣಿಮೆ ಮಾಘಮಾಸದ ಸಪ್ತಮಿ, ಪದ್ಮಕಯೋಗ, ಪರ್ವಕಾಲ ಇವುಗಳಲ್ಲಿ ಸುವರ್ಣ, ಗೋವು, ವಸ್ತ್ರ, ಬೆಳ್ಳಿ, ತುಪ್ಪ, ಎಳ್ಳು ಇವುಗಳನ್ನು ದಾನಮಾಡಬೇಕು.

೨೬೬. ದೇವಿ! ಹೀಗೆ ನಿನಗೆ ತೀರ್ಥದ ರಹಸ್ಯವಾದ ಮಾಹಾತ್ಮ್ಯವನ್ನು ಹೇಳಿರುವೆನು. ಇದನ್ನು ದುಷ್ಟಬುದ್ಧಿಯುಳ್ಳ ಕಠಿನರಾದ ಪಾಪಿಗಳಿಗೆ ಹೇಳಕೂಡದು.

೨೬೭. ಇದನ್ನು ಶ್ರದ್ಧೆ, ಪಿತೃಭಕ್ತಿಯುಳ್ಳವರಿಗೆ ಹೇಳಬೇಕು. ಶ್ರಾದ್ಧ ಕಾಲದಲ್ಲಿ ಪೌರಾಣಿಕನು ಇದನ್ನು ಪಠಿಸಬೇಕು.

೨೬೮. ಆದರಿಂದ ಪಿತೃಗಳು ಹನ್ನೆರಡು ವರ್ಷಕಾಲ ತೃಪ್ತರಾಗಿರುವರು. ನರಕದಿಂದ ಭಯಗೊಂಡ ನರರು ಇದನ್ನು ಶುದ್ಧರಾಗಿ ಯಾವಾಗಲೂ ಕೇಳಬೇಕು. ಬ್ರಾಹ್ಮಣರು ಭೋಜನ ಮಾಡುತ್ತಿರುವಾಗ ಇದನ್ನು ಭಕ್ತಿಯಿಂದ ಪಠಿಸಬೇಕು.

ಪಾನೀಯಮಪ್ಯತ್ರ ತಿಲೈರ್ವಿಮಿಶ್ರಂ
ದದ್ಯಾತ್ಪಿತೃಭ್ಯಃ ಪ್ರಯತೋ ಮನುಷ್ಯಃ ।
ಶ್ರಾದ್ಧಂ ಕೃತಂ ತೇನ ಸಮಾಸಹಸ್ರಂ
ರಹಸ್ಯಮೇತತ್ಪಿತರೋ ವದಂತಿ ॥ ೨೬೯ ॥
ಇದಂ ರಹಸ್ಯಂ ಯಶಸೋ ನಿಧಾನ
ಮಿದಂ ಪಿತ್ರೂಣಾಮತಿವಲ್ಲಭಂ ಚ ।
ಇದಂ ಚ ವೇದೇಷ್ವಮೃತಾಯ ನಿತ್ಯ-
ಮಿದಂ ಮಹಾಪಾಪಹರಂ ಚ ಪುಂಸಾಂ ॥ ೨೭೦ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ನ್ಯಂಕುಮತೀನದೀ ಮಾಹಾತ್ಮ್ಯೇಗೋಷ್ಪದತೀರ್ಥಮಾಹಾತ್ಮ್ಯ ವರ್ಣನಂ ನಾಮ ಷಟ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

---

೨೬೯. ಇಲ್ಲಿ ಮನುಷ್ಯನು ಪರಿಶುದ್ಧನಾಗಿ ಪಿತೃಗಳಿಗೆ ತಿಲತರ್ಪಣಮಾಡಬೇಕು. ಅದರಿಂದ ಅವನು ಸಾವಿರ ವರ್ಷಕಾಲ ಶ್ರಾದ್ಧಮಾಡಿದಂತಾಗುವುದು ಈ ರಹಸ್ಯವನ್ನು ಪಿತೃಗಳು ಹೇಳುತ್ತಾರೆ.

೨೭೦. ಇದು ರಹಸ್ಯವೂ, ಯಶಸ್ಸಿಗೆ ಕಾರಣವೂ, ಪಿತೃಗಳಿಗೆ ಅತಿ ಪ್ರಿಯವೂ ಆಗಿರುವುದು. ಮತ್ತು ಇದು ಮೋಕ್ಷಕ್ಕೆ ಸಾಧನವೂ ಪಾಪವನ್ನು ಪರಿಹರಿಸುವುದೂ ಆಗಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ ನ್ಯಂಕುಮತೀನದೀಮಾಹಾತ್ಮ್ಯದಲ್ಲಿಗೋಷ್ಪದೀತೀರ್ಥಮಾಹಾತ್ಮ್ಯ ವರ್ಣನವೆಂಬ ಮುನ್ನೂರಮುವ್ವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತತ್ರಿಂಶದುತ್ತರತ್ರಿಶತತಮೋऽಧ್ಯಾಯಃ

ನಾರಾಯಣಗೃಹಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ನಾರಾಯಣಗೃಹಂ ಪರಂ ।
ಗೋಷ್ಪದಾದ್ದಕ್ಷಿಣೇ ಭಾಗೇ ಸಾಗರಸ್ಯ ತಟೇ ಶುಭೇ ॥ ೧ ॥
ನ್ಯಂಕುಮತ್ಯಾಃ ಸಮೀಪೇ ತು ಸರ್ವಪಾತಕನಾಶನೇ ।
ತತ್ರ ಕಲ್ಪಾಂತರಸ್ಥಾಯೀ ಸ್ವಯಂ ತಿಷ್ಠತಿ ಕೇಶವಃ ॥ ೨ ॥
ಪಿತೄಣಾಮುದ್ಧರಣಾರ್ಥಾಯ ಹ್ಯಸ್ಮಿನ್ರೌದ್ರೇ ಕಲೌ ಯುಗೇ ।
ನಾರಾಯಣಗೃಹಂ ತೇನ ವಿಖ್ಯಾತಂ ಜಗತೀತಲೇ ॥ ೩ ॥
ವಿಶ್ರಾಮಾರ್ಥಂ ತದಾ ತತ್ರ ಗೃಹೇ ತಿಷ್ಠತಿ ನಿತ್ಯಶಃ ।
ನಾರಾಯಣಗೃಹಂ ತೇನ ವಿಖ್ಯಾತಂ ಜಗತೀತಲೇ ॥ ೪ ॥
ಕೃತೇ ಜನಾರ್ದನೋ ನಾಮ ತ್ರೇತಾಯಾಂ ಮಧುಸೂದನಃ ।
ದ್ವಾಪರೇ ಪುಂಡರೀಕಾಕ್ಷಃ ಕಲೌ ನಾರಾಯಣಃ ಸ್ಮೃತಃ ॥ ೫ ॥

ಕನ್ನಡದ ಅನುವಾದ

ನಾರಾಯಣಗೃಹಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಗೋಷ್ಪದದ ದಕ್ಷಿಣದಲ್ಲಿ ಸಮುದ್ರದ ದಡದಲ್ಲಿರುವ ನಾರಾಯಣ ಗೃಹಕ್ಕೆ ಹೋಗಬೇಕು.

೨. ನ್ಯಂಕುಮತಿಯ ಹತ್ತಿರದಲ್ಲಿರುವ ಸಕಲ ಪಾಪವನ್ನು ಪರಿಹರಿಸುವ ಆ ನಾರಾಯಣಗೃಹದಲ್ಲಿ ನಾರಾಯಣನು ನೆಲೆಸಿರುವನು.

೩-೪. ಈ ಭಯಂಕರ ಕಲಿಯುಗದಲ್ಲಿ ನಾರಾಯಣನು ಪಿತೃಗಳ ಉದ್ಧಾರಕ್ಕಾಗಿ ದೈತ್ಯರನ್ನು ಕೊಂದು ವಿಶ್ರಾಂತಿಗಾಗಿ ಆ ದೇವಾಲಯದಲ್ಲಿ ಇರುವನು. ಆದರಿಂದ ನಾರಾಯಣಗೃಹವೆಂದು ಪ್ರಪಂಚದಲ್ಲಿ ಪ್ರಖ್ಯಾತವಾಯಿತು.

೫. ಇವನು ಕೃತಯುಗದಲ್ಲಿ ಜನಾರ್ದನನೆಂದೂ, ತ್ರೇತಾಯುಗದಲ್ಲಿ ಮಧುಸೂದನನೆಂದೂ, ದ್ವಾಪರಯುದಲ್ಲಿ ಪುಂಡರೀಕಾಕ್ಷನೆಂದೂ, ಕಲಿಯುಗದಲ್ಲಿ ನಾರಾಯಣನೆಂದೂ ವಿಖ್ಯಾತನಾದನು.

ಏವಂ ಚತುರ್ಯುಗೇ ಪ್ರಾಪ್ತೇ ಪುನಃಪುನರರಿಂದಮ ।
ಕೃತ್ವಾ ಧರ್ಮವ್ಯವಸ್ಥಾನಂ ತತ್ಸ್ಥಾನಂ ಪ್ರತಿಪದ್ಯತೇ ॥ ೬ ॥
ಏಕಾದಶ್ಯಾಂ ನಿರಾಹಾರೋ ಯಸ್ತಂ ದೇವಂ ಪ್ರಪಶ್ಯತಿ ।
ಸ ಪಶ್ಯತಿ ಧ್ರುವಂ ಸ್ಥಾನೇ ಪ್ರೇತ್ಯಾನಂತಂ ಹರೇಃ ಪದಂ ॥ ೭ ॥
ತೇನ ಪೀತಾನಿ ವಸ್ತ್ರಾಣಿ ದೇಯಾನಿ ದ್ವಿಜಪುಂಗವೇ ।
ಸ್ನಾನಂ ಶ್ರಾದ್ಧಂ ಚ ಕರ್ತವ್ಯಂ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೮ ॥
ಇತಿ ತೇ ಕಥಿತಂ ಮಹಾಪ್ರಭಾವಂ
ಹರಿಸಂಕೇತ ನಿಕೇತನೋದ್ಭವಂ ।
ಶೃಣುತೇ ವಾ ಪ್ರಯತಸ್ತು ಯಃ ಸುಧೀಃ
ಪಠತೇ ವಾ ಲಭತೇ ಸ ಸದ್ಗತಿಂ ॥ ೯ ॥

ಇತಿ ಶ್ರೀ ಸ್ಕಾಂದಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ನ್ಯಂಕುಮತೀನದೀಮಾಹಾತ್ಮ್ಯೇನಾರಾಯಣಗೃಹಮಾಹಾತ್ಮ್ಯವರ್ಣನಂ ನಾಮ ಸಪ್ತತ್ರಿಂಶದುತ್ತರತ್ರಿಶತತಮೋಽಧ್ಯಾಯಃ

---

೬. ಹೀಗೆ ನಾಲ್ಕು ಯುಗಗಳು ಕಳೆಯಲು ಮರಳಿ ವಿಷ್ಣುವು ಧರ್ಮ ವ್ಯವಸ್ಥೆಗಾಗಿ ಆ ಸ್ಥಳವನ್ನು ಹೊಂದುವನು.

೭. ಏಕಾದಶೀದಿನ ನಿರಾಹಾರನಾಗಿ ಅವನ ದರ್ಶನವನ್ನು ಮಾಡುವವನು ನಿಶ್ಚಯವಾಗಿಯೂ ಮರಣಾನಂತರ ವೈಕುಂಠವನ್ನು ಸೇರುವನು.

೮. ಯಾತ್ರಾಫಲವನ್ನಿಚ್ಛಿಸುವವನು ಅಲ್ಲಿ ಹಳದಿ ಬಣ್ಣದ ವಸ್ತ್ರಗಳನ್ನು ಬ್ರಾಹ್ಮಣನಿಗೆ ದಾನಮಾಡಬೇಕು. ಮಿಂದು ಶ್ರಾದ್ಧವನ್ನೂ ಮಾಡಬೇಕು.

೯. ನಿನಗೆ ನಾರಾಯಣ ಗೃಹದ ಮಾಹಾತ್ಮ್ಯವನ್ನು ಹೇಳಿದ್ದೇನೆ. ಇದನ್ನು ಶುದ್ಧನಾಗಿ ಕೇಳುವವನು ಅಥವಾ ಪಠಿಸುವವನು ಸದ್ಗತಿಯನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯವಲ್ಲಿ ನಾರಾಯಣಗೃಹಮಾಹಾತ್ಮ್ಯವರ್ಣನವೆಂಬ ಮುನ್ನೂರಮುವ್ವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ಜಾಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಿಕಾತಟಸಂಸ್ಥಿತಂ ।
ಜಾಲೇಶ್ವರೇತಿ ವಿಖ್ಯಾತಂ ಸುರಾಸುರನಮಸ್ಕೃತಂ ॥ ೧ ॥
ಮನ್ವಂತರೇ ಚಾಕ್ಷುಷೇ ಚ ಸಂಪ್ರಾಪ್ತೇ ದ್ವಾಪರೇ ಯುಗೇ ।
ನಾಮ್ನಾ ಜಾಲೇಶ್ವರಂ ಲಿಂಗಂ ದೇವಿಕಾತಟಸಂಸ್ಥಿತಂ ॥ ೨ ॥
ಪೂಜ್ಯತೇ ನಾಗಕನ್ಯಾಭಿರ್ನ ತತ್ಪಶ್ಯಂತಿ ಮಾನವಾಃ ।
ಮಹಾತೇಜೋಮಣಿಮಯಂ ಚಂದ್ರಬಿಂಬಸಮಪ್ರಭಂ ।
ಸ್ಮರಣಾತ್ತಸ್ಯ ದೇವಸ್ಯ ಬ್ರಹ್ಮಹತ್ಯಾ ಪ್ರಣಶ್ಯತಿ ॥ ೩ ॥

ದೇವ್ಯುವಾಚ :—

ಕಥಂ ಜಾಲೇಶ್ವರಂ ನಾಮ ಕಸ್ಮಿನ್ಕಾಲೇ ಬಭೂವ ತತ್ ॥ ೪ ॥
ಸಾಧುಭಿಃ ಸಹ ಸಂವಾಸಾತ್ಕೇ ಗುಣಾಃ ಪರಿಕೀರ್ತಿತಾಃ ।
ಕೇ ಲೋಕಾಃ ಕಾನಿ ಪುಣ್ಯಾನಿ ತತ್ಸರ್ವಂ ಶಂಸ ಮೇ ಪ್ರಭೋ ॥ ೫ ॥

ಕನ್ನಡದ ಅನುವಾದ

ಜಾಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ದೇವಿಕಾತಟದಲ್ಲಿರುವ ದೇವದಾನವರು ನಮಸ್ಕರಿಸುವ ಜಾಲೇಶ್ವರನೆಡೆಗೆ ಹೋಗಬೇಕು.

೨–೩. ಚಾಕ್ಷುಷಮನ್ವಂತರದಲ್ಲಿ ದ್ವಾಪರಯುಗವು ಬರಲು ದೇವಿಕಾ ದಡದಲ್ಲಿರುವ ಈ ಜಾಲೇಶ್ವರ ಲಿಂಗವನ್ನು ನಾಗಕನ್ಯೆಯರು ಪೂಜಿಸುವರು. ಅದನ್ನು ಮಾನವರು ನೋಡುವುದಿಲ್ಲ. ಅತ್ಯಂತ ತೇಜಸ್ಸುಳ್ಳ ಚಂದ್ರಬಿಂಬದಂತಿರುವ ಈ ಜಾಲೇಶ್ವರನ ಸ್ಮರಣೆಯಿಂದ ಬ್ರಹ್ಮಹತ್ಯೆಯು ನಾಶವಾಗುವುದು.

೪–೫. ಜಾಲೇಶ್ವರ ಲಿಂಗವು ಯಾವಾಗ ಹೇಗೆ ಉದ್ಭವಿಸಿತು? ಸಾಧುಗಳ ಸಹವಾಸದಿಂದ ಯಾವ ಗುಣಗಳೂ ಯಾವ ಲೋಕಗಳೂ, ಯಾವ ಪುಣ್ಯವೂ ಉಂಟಾಗುವುವು? ಅದನ್ನೆಲ್ಲ ನನಗೆ ಹೇಳು.

ಈಶ್ವರ ಉವಾಚ :—

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಂ ।
ನಾಭಾಗಸ್ಯ ಚ ಸಂವಾದಮಾಪಸ್ತಂಬತಪೋನಿಧೇಃ ॥ ೬ ॥
ಮಹರ್ಷಿರಾತ್ಮವಾನ್ಪೂರ್ವಮಾಪಸ್ತಂಬೋ ದ್ವಿಜಾಗ್ರಣೀಃ ।
ಉಪಾವಸನ್ನದಾರಂಭೋ ಬಭೂವ ಭಗವಾಂಸ್ತದಾ ॥ ೭ ॥
ನಿತ್ಯಂ ಕ್ರೋಧಂ ಚ ಲೋಭಂ ಚ ಮೋಹಂ ದ್ರೋಹಂ ವಿಸೃಜ್ಯ ಸಃ ।
ದೇವಿಕಾಸರಿತೋ ಮಧ್ಯೇ ವಿವೇಶ ಸಲಿಲಾಶಯೇ ॥ ೮ ॥
ಕ್ಷೇತ್ರೇ ಪ್ರಾಭಾಸಿಕೇ ರಮ್ಯೇ ಸಮ್ಯಗ್ಜ್ಞಾತ್ವಾ ಶಿವಪ್ರಿಯೇ ।
ತತ್ರಾಸ್ಯ ವಸತಃ ಕಾಲಃ ಸಮತೀತೋ ಮಹಾಂಸ್ತದಾ ॥ ೯ ॥
ಪರೇಣ ಧ್ಯಾನಯೋಗೇನ ಸ್ಥಾಣುಭೂತಸ್ಯ ತಿಷ್ಠತಃ ।
ತತಃ ಕದಾಚಿದಾಗತ್ಯ ತಂ ದೇಶಂ ಮತ್ಸ್ಯಜೀವಿನಃ ॥ ೧೦ ॥
ಪ್ರಸಾರ್ಯ ಸುಮಹಜ್ಜಾಲಂ ಸರ್ವೇ ಚಾಕರ್ಷಯನ್ಬಲಾತ್ ।
ಅಥ ತಂ ಚ ಮಹಾಮತ್ಸ್ಯಂ ನಿಷಾದಾ ಬಲದರ್ಪಿತಾಃ ॥ ೧೧ ॥
ತಸ್ಮಾದುತ್ತಾರಯಾಮಾಸುಃ ಸಲಿಲಾದ್ಬ್ರಹ್ಮನಂದನಂ ।
ತಂ ದೃಷ್ಟ್ವಾ ತಪಸಾ ದೀಪ್ತಂ ಕೈವರ್ತಾ ಭಯವಿಹ್ವಲಾಃ ।
ಶಿರೋಭಿಃ ಪ್ರಣಿಪತ್ಯೋಚ್ಚೈರಿದಂ ವಚನಮಬ್ರುವನ್ ॥ ೧೨ ॥

---

೬. ಈಶ್ವರನು ಹೇಳುತ್ತಾನೆ :—ಇಲ್ಲಿ ನಾಭಾಗ ಮತ್ತು ಆಪಸ್ತಂಬ ಮುನಿಗಳ ಸಂಭಾಷಣಾರೂಪವಾದ ಪುರಾತನೇತಿಹಾಸವನ್ನು ಹೇಳುತ್ತಾರೆ.

೭. ಆತ್ಮಜ್ಞಾನಿಯೂ, ದ್ವಿಜವರ್ಯನೂ, ಸತ್ಕಾರವನ್ನಾಚರಿಸುವವನೂ ಆದ ಆಪಸ್ತಂಬನಿದ್ದನು.

೮–೧೨. ಅವನು ನಿತ್ಯವೂ ಕೋಪ, ಲೋಭ, ಮೋಹ, ದ್ರೋಹಗಳನ್ನು ಬಿಟ್ಟು ಶಿವಪ್ರಿಯವಾದ ಪ್ರಾಭಾಸಿಕ ಕ್ಷೇತ್ರದಲ್ಲಿ ದೇವಿಕಾನದಿಯ ಮಧ್ಯದಲ್ಲಿರುವ ಜಲಾಶಯವನ್ನು ಹೊಕ್ಕನು. ಅಲ್ಲಿ ಇವನು ಸ್ಥಾಣುವಾಗಿ ಧ್ಯಾನಯೋಗದಿಂದ ವಾಸಿಸುತ್ತಿರಲು ಬಹಳ ಕಾಲವು ಕಳೆಯಿತು. ಅನಂತರ ಒಂದಾನೊಂದು ವೇಳೆ ಬೆಸ್ತರು ಆ ಸ್ಥಳಕ್ಕೆ ಬಂದು ಅಹಂಕಾರದಿಂದ ದೊಡ್ಡ ಬಲೆಯನ್ನು ಬೀಸಿ ಮತ್ಸ್ಯವಾಗಿರುವ ಬ್ರಹ್ಮಪುತ್ರನಾದ ಆಪಸ್ತಂಬನನ್ನು ನೀರಿನಿಂದ ಮೇಲಕ್ಕೆಳದು ನೋಡಿ ಭಯಗೊಂಡು ತಲೆಬಾಗಿ ವಂದಿಸಿ ಇಂತೆಂದರು.

ನಿಷಾದಾ ಊಚುಃ :—

ಅಜ್ಞಾನಾತ್ಕೃತಪಾಪಾನಾಮಸ್ಮಾಕಂ ಕ್ಷಂತುಮರ್ಹಸಿ ।
ಕಿಂ ವಾ ಕಾರ್ಯಂ ಪ್ರಿಯಂ ತೇಽದ್ಯ ತದಾಜ್ಞಾಪಯ ಸುವ್ರತ ॥ ೧೩ ॥
ಸ ಮುನಿಸ್ತನ್ಮಹದ್ದೃಷ್ಟ್ವಾ ಮತ್ಸ್ಯಾನಾಂ ಕದನಂ ಕೃತಂ ।
ಕೃಪಯಾ ಪರಯಾವಿಷ್ಟೋ ದಾಶಾನ್ಪ್ರೋವಾಚ ದುಃಖಿತಃ ॥ ೧೪ ॥
ಕೇನ ಮೇ ಸ್ಯಾದುಪಾಯೋ ಹಿ ಸರ್ವೇ ಸ್ವಾರ್ಥೇ ಬತ ಸ್ಥಿತಾಃ ।
ಜ್ಞಾನಿನಾಮಪಿ ಯಚ್ಚೇತಃ ಕೇವಲಾನ್ಮಹಿತೇ ರತಂ ॥ ೧೫ ॥
ಜ್ಞಾನಿನೋಽಪಿ ಯದಾ ಸ್ವಾರ್ಥಮಾಶ್ರಿತ್ಯ ಧ್ಯಾನಮಾಸ್ಥಿತಾಃ ।
ದುಃಖಾರ್ತಾನೀಹ ಸತ್ತ್ವಾನಿ ಕ್ವ ಯಾಸ್ಯಂತಿ ಸುಖಂ ತತಃ ॥ ೧೬ ॥
ಯೋಽಭಿವಾಂಛತಿ ಭೋಕ್ತುಂ ವೈ ದುಃಖಾನ್ಯೇಕಾಂತತೋ ಜನಃ ।
ಪಾಪಾತ್ಪಾಪತರಂ ತಂ ಹಿ ಪ್ರವದಂತಿ ಮುಮುಕ್ಷವಃ ॥ ೧೭ ॥
ಕೋ ನು ಮೇ ಸ್ಯಾದುಪಾಯೋ ಹಿ ಯೇನಾಹಂ ದುಃಖಿತಾತ್ಮನಾನ್ ।
ಅಂತಃ ಪ್ರವಿಷ್ಟಃ ಸತ್ತ್ವಾನಾಂ ಭವೇಯಂ ಸರ್ವದುಃಖಭಾಕ್ ॥ ೧೮ ॥

---

೧೩. ಬೆಸ್ತರು ಹೇಳುತ್ತಾರೆ:—ಅಜ್ಞಾನದಿಂದ ನಾವು ಮಾಡಿದ ಪಾಪವನ್ನು ಕ್ಷಮಿಸಿರಿ. ನಿಮಗೆ ಪ್ರಿಯವಾದ ಏನನ್ನು ಮಾಡಲಿ?.

೧೪. ಆ ಮುನಿಯು ಮೀನುಗಳ ಆ ಮಹಾನಾಶವನ್ನು ಕಂಡು ಅತ್ಯಂತ ದಯೆಗೊಂಡು ಬೆಸ್ತರನ್ನು ಕುರಿತು ಇಂತೆಂದನು

೧೫. "ಎಲ್ಲರೂ ಸ್ವಪ್ರಯೋಜನದಲ್ಲಿ ನಿರತರಾಗಿರಲು ಈ ಪ್ರಾಣಿಗಳನ್ನು ಬಿಡಿಸಲು ಉಪಾಯವಾವುದಿರುವುದು. ಜ್ಞಾನಿಗಳ ಮನಸ್ಸೂ ಕೇವಲ ತಮ್ಮ ಹಿತದಲ್ಲಿಯೇ ಆಸಕ್ತವಾಗಿರುವುದು.

೧೬. ಜ್ಞಾನಿಗಳು ಸ್ವಾರ್ಥವನ್ನಾಶ್ರಯಿಸಿ ಧ್ಯಾನಮಗ್ನರಾದರೆ ದುಃಖಗೊಂಡ ಈ ಪ್ರಾಣಿಗಳು ಹೇಗೆ ಸುಖಗೊಳ್ಳುವುವು ?.

೧೭. ಮೋಕ್ಷಾರ್ಥಿಗಳು ಅತ್ಯಂತ ದುಃಖವನ್ನು ಅನುಭವಿಸಲಪೇಕ್ಷಿಸುವ ಮನುಷ್ಯನನ್ನು ಅತಿಪಾಪಿಯೆನ್ನುವರು.

೧೮. ದುಃಖಗೊಂಡ ನಾನು ಪ್ರಾಣಿಗಳ ಮನಸ್ಸನ್ನು ಹೊಕ್ಕು ಹೇಗೆ ಸುಖ ದುಃಖವನ್ನನುಭವಿಸುವೆನು.

ಯನ್ಮಮಾಸ್ತಿ ಶುಭಂ ಕಿಂಚಿತ್ತದೇನಾನುಪಗಚ್ಛತು ।
ಯತ್ಕೃತಂ ದುಷ್ಕೃತಂ ತೈಶ್ಚ ತದಶೇಷಮುಪೈತು ಮಾಂ ॥ ೧೯ ॥
ದೃಷ್ಟ್ವಾಂಧಾನ್ಕೃಪಣಾನ್ವ್ಯಂಗಾನನಾಥಾನ್ರೋಗಿಣಸ್ತಥಾ ।
ದಯಾ ನ ಜಾಯತೇ ಯಸ್ಯ ಸ ರಕ್ಷ ಇತಿ ಮೇ ಮತಿಃ ॥ ೨೦ ॥
ಪ್ರಾಣಸಂಶಯಮಾಪನ್ನಾನ್ಪ್ರಾಣಿನೋ ಭಯವಿಹ್ವಲಾನ್ ।
ಯೋ ನ ರಕ್ಷತಿ ಶಕ್ತೋಽಪಿ ಸ ತತ್ಪಾಪಂ ಸಮಶ್ನುತೇ ॥ ೨೧ ॥
ಆರ್ತಾನಾಮಾರ್ತಿನಾಶೇನ ಸುಖಂ ಯದುಪಜಾಯತೇ ।
ತಸ್ಯ ಸ್ವರ್ಗೋಽಪವರ್ಗೋ ವಾ ಕಲಾಂ ನಾರ್ಹತಿ ಷೋಡಶೀಂ ॥ ೨೨ ॥
ತಸ್ಮಾನ್ನೈತಾನಹಂ ದೀನಾಂಸ್ತ್ಯಕ್ತ್ವಾ ಮೀನಾನ್ಸುದುಃಖಿತಾನ್ ।
ಪದಮಾತ್ರಂ ತು ಯಾಸ್ಯಾಮಿ ಕಿಂ ಪುನಸ್ತ್ರಿದಶಾಲಯಂ ॥ ೨೩ ॥

ಈಶ್ವರ ಉವಾಚ :—

ನಿಶಮ್ಯೈತದೃಷೇರ್ವಾಕ್ಯಂ ದಾಶಾಸ್ತೇ ಜಾತಸಂಭ್ರಮಾಃ ।
ಯಥಾವೃತ್ತಂ ತು ತತ್ಸರ್ವಂ ನಾಭಾಗಾಯ ನ್ಯವೇದಯನ್ ॥ ೨೪ ॥
ನಾಭಾಗೋಽಪಿ ತತಃ ಶ್ರುತ್ವಾ ತಂ ದ್ರಷ್ಟುಂ ಬ್ರಹ್ಮನಂದನಂ ।
ತ್ವರಿತಃ ಪ್ರಯಯೌ ತತ್ರ ಸಾಮಾತ್ಯಃ ಸಪುರೋಹಿತಃ ॥ ೨೫ ॥

---

೧೯. ನಾನು ಮಾಡಿದ ಅಲ್ಪ ಪುಣ್ಯವು ಈ ಮೀನುಗಳನ್ನು ಹೊಂದಲಿ ಅವು ಮಾಡಿದ ಪಾಪವು ನನ್ನನ್ನು ಸೇರಲಿ.

೨೦. ಕುರುಡರು, ದೀನರು, ಅಂಗವಿಕಲರು, ಅನಾಥರು, ರೋಗಿಗಳು ಇವರನ್ನು ಕಂಡು ಯಾರಿಗೆ ದಯೆಯುಂಟಾಗುವುದಿಲ್ಲವೋ, ಅವರು ರಾಕ್ಷಸರೆಂದು ನನ್ನ ಭಾವನೆಯು.

೨೧. ತಾನು ಸಮರ್ಥನಾಗಿಯೂ ಸಾಯುತ್ತಿರುವುವೂ ಆಪತ್ತನ್ನು ಹೊಂದಿರುವುವೂ, ಭಯಗೊಂಡುವೂ ಆದ ಪ್ರಾಣಿಗಳನ್ನು ರಕ್ಷಿಸದ ಮಾನವನು ಆ ಪಾಪವನ್ನು ಹೊಂದುವನು.

೨೨. ದುಃಖಗೊಂಡ ಜನರಿಗೆ ಸುಖವನ್ನುಂಟುಮಾಡಿದರೆ ಆ ಸುಖದ ಹದಿನಾರನೆಯ ಒಂದಂಶವನ್ನು ಸ್ವರ್ಗಮೋಕ್ಷಗಳು ಪಡೆಯಲಾರವು.

೨೩. ಆದ್ದರಿಂದ ನಾನು ದುಃಖಗೊಂಡ ಈ ಮೀನುಗಳನ್ನು ತ್ಯಜಿಸಿ ಒಂದು ಹೆಜ್ಜೆಯೂ ಮುಂದೆ ಹೋಗಲಾರೆನು. ದೇವಲೋಕದ ವಿಷಯವೇನು?.

೨೪. ಈಶ್ವರನು ಹೇಳುತ್ತಾನೆ :—ಆ ಬೆಸ್ತರು ಮುನಿಯ ಈ ಮಾತನ್ನು ಕೇಳಿ ವೇಗದಿಂದ ನಾಭಾಗನೆಡೆಗೆ ಹೋಗಿ ನಡೆದ ಸಮಾಚಾರವನ್ನೆಲ್ಲ ತಿಳಿಸಿದರು.

೨೫. ನಾಭಾಗನೂ ಅವರ ಮಾತನ್ನು ಕೇಳಿ ಆಪಸ್ತಂಬನನ್ನು ನೋಡಲೋಸುಗ ಶೀಘ್ರವಾಗಿ ಮಂತ್ರಿಪುರೋಹಿತರೊಡನೆ ಅಲ್ಲಿಗೆ ಹೊರಟು ಬಂದನು.

ಸ ಸಮ್ಯಕ್ಪೂಜಯಿತ್ವಾ ತಂ ದೇವಕಲ್ಪಂ ಮುನಿಂ ನೃಪಃ ।
ಪ್ರೋವಾಚ ಭಗವನ್ಬ್ರೂಹಿ ಕಿಂ ಕರೋಮಿ ತವಾಜ್ಞಯಾ ॥ ೨೬ ॥

ಆಪಸ್ತಂಬ ಉವಾಚ :—

ಶ್ರಮೇಣ ಮಹತಾವಿಷ್ಟಾಃ ಕೈವರ್ತಾ ದುಃಖಜೀವಿನಃ ।
ಮಮ ಮೂಲ್ಯಂ ಪ್ರಯಚ್ಛೇತಿ ಯದ್ಯೋಗ್ಯಂ ಮನ್ಯಸೇ ನೃಪ ॥ ೨೭ ॥

ನಾಭಾಗ ಉವಾಚ :—

ಸಹಸ್ರಾಣಾಂ ಶತಂ ಮೂಲ್ಯಂ ನಿಷಾದೇಭ್ಯೋ ದದಾಮ್ಯಹಂ ।
ನಿಗ್ರಹಾಖ್ಯಸ್ಯ ಭಗವನ್ನಥಾಹ ಬ್ರಹ್ಮನಂದನಃ ॥ ೨೮ ॥

ಆಪಸ್ತಂಬ ಉವಾಚ :—

ನಾಹಂ ಶತಸಹಸ್ರೈಶ್ಚ ನಿಯಮ್ಯಃ ಪಾರ್ಥಿವ ತ್ವಯಾ ।
ಸದೃಶಂ ದೀಯತಾಂ ಮೂಲ್ಯಮಮಾತ್ಯೈಃ ಸಹ ಚಿಂತಯ ॥ ೨೯ ॥

ನಾಭಾಗ ಉವಾಚ :—

ಕೋಟಿಃ ಪ್ರದೀಯತಾಂ ಮೂಲ್ಯಂ ನಿಷಾದೇಭ್ಯೋ ದ್ವಿಜೋತ್ತಮ ।
ಯದ್ಯೇತದಪಿ ತೇ ಮೂಲ್ಯಂ ತತೋ ಭೂಯಃ ಪ್ರದೀಯತೇ ॥ ೩೦ ॥

---

೨೬. ಆ ರಾಜನು ದೇವತೆಯಂತಿರುವ ಆ ಮುನಿಯನ್ನು ಚೆನ್ನಾಗಿ ಪೂಜಿಸಿ "ಪೂಜ್ಯನೆ! ನಿನಗೆ ನಾನು ಯಾವ ಸೇವೆಯನ್ನು ಮಾಡಲಿ. ಅಪ್ಪಣೆಮಾಡು ಎಂದನು.

೨೭. ಆಪಸ್ತಂಬನು ಹೇಳುತ್ತಾನೆ :—ದೊರೆಯೆ! ಕಷ್ಟದಿಂದ ಜೀವಿಸುವ ಈ ಬೆಸ್ತರು ಅತ್ಯಂತ ಆಯಾಸಗೊಂಡಿದ್ದಾರೆ. ಉಚಿತವಾದ ನನ್ನ ಬೆಲೆಯನ್ನು ಇವರಿಗೆ ಕೊಡು.

೨೮. ನಾಭಾಗನು ಹೇಳುತ್ತಾನೆ :—ಪೂಜ್ಯನೆ! ಬ್ರಹ್ಮಪುತ್ರನಾದ ನೀನು ಹೇಳಿದಂತೆ ಈ ಬೆಸ್ತರಿಗೆ ಒಂದು ಲಕ್ಷ ನಾಣ್ಯಗಳನ್ನು ಕೊಡುವೆನು.

೨೯. ಅಪಸ್ತಂಬನು ಹೇಳತ್ತಾನೆ :—ದೊರೆಯೆ ! ನೀನು ಒಂದು ಲಕ್ಷ ನಾಣ್ಯಗಳಿಂದ ನನ್ನನ್ನು ಬಿಡಿಸಿಕೊಳ್ಳಬೇಡ. ನನಗುಚಿತವಾದ ಮೂಲ್ಯವನ್ನು ಕೊಡು. ಇದನ್ನು ಮಂತ್ರಿಗಳೊಡನೆ ಆಲೋಚಿಸು.

೩೦. ನಾಭಾಗನು ಹೇಳುತ್ತಾನೆ:—ದ್ವಿಜವರ್ಯನೆ! ಆ ಬೆಸ್ತರಿಗೆ ಒಂದು ಕೋಟಿ ನಾಣ್ಯವನ್ನು ಕೊಡು. ನಿನ್ನ ಬೆಲೆಯು ಇದಕ್ಕಿಂತ ಹೆಚ್ಚಾದರೂ ಮರಳಿ ಕೊಡುವೆನು.

ಆಪಸ್ತಂಬ ಉವಾಚ :—
ನಾರ್ಹಂ ಮೂಲ್ಯಂ ಚ ಮೇ ಕೋಟಿರಧಿಕಂ ನಾಪಿ ಪಾರ್ಥಿವ ।
ಸದೃಶಂ ದೀಯತಾಂ ಮೂಲ್ಯಂ ಬ್ರಾಹ್ಮಣೈಃ ಸಹ ಚಿಂತಯ ॥ ೩೧ ॥
ನಾಭಾಗ ಉವಾಚ :—
ಅರ್ಧರಾಜ್ಯಂ ಸಮಸ್ತಂ ವಾ ನಿಷಾದೇಭ್ಯಃ ಪ್ರದೀಯತಾಂ ।
ಏತನ್ಮೂಲ್ಯಮಹಂ ಮನ್ಯೇ ಕಿಂ ವಾನ್ಯನ್ಮನ್ಯಸೇ ದ್ವಿಜ ॥ ೩೨ ॥
ಆಪಸ್ತಂಬ ಉವಾಚ :—
ಅರ್ಧರಾಜ್ಯಂ ಸಮಸ್ತಂ ವಾ ನಾಹಾಮರ್ಹಾಮಿ ಪಾರ್ಥಿವ ।
ಸದೃಶಂ ದೀಯತಾಂ ಮೂಲ್ಯಮೃಷಿಭಿಃ ಸಹ ಚಿಂತಯ ॥ ೩೩ ॥
ಮಹರ್ಷೇಸ್ತದ್ವಚಃ ಶ್ರುತ್ವಾ ನಾಭಾಗಃ ಸ ವಿಷಾದವಾನ್ ।
ಚಿಂತಯಾಮಾಸ ದುಃಖಾರ್ತಃ ಸಾಮಾತ್ಯಃ ಸಪುರೋಹಿತಃ ॥ ೩೪ ॥
ತತಃ ಕಶ್ಚಿದೃಷಿಸ್ತತ್ರ ಲೋಮಶಸ್ತು ಮಹಾತಪಾಃ ।
ನಾಭಾಗಮಬ್ರವೀನ್ಮಾಭೈಸ್ತೋಷಯಿಷ್ಯಾಮಿ ತಂ ಮುನಿಂ ॥ ೩೫ ॥

---

೩೧. ಆಪಸ್ತಂಬನು ಹೇಳುತ್ತಾನೆ :—ದೊರೆಯೆ ! ನೀನು ಕೊಟ್ಟಿರುವ ಬೆಲೆಯು ಕೋಟಿಯಾಗಲಿ. ಅದಕ್ಕಿಂತ ಹೆಚ್ಚಾಗಲಿ, ಅದು ನನಗುಚಿತವಾದ ಬೆಲೆಯಲ್ಲ. ನನಗೆ ಸರಿಯಾದ ಬೆಲೆಯನ್ನು ಕೊಡು. ಬ್ರಾಹ್ಮಣರೊಡನೆ ಅದನ್ನು ಆಲೋಚಿಸು.

೩೨. ನಾಭಾಗನು ಹೇಳುತ್ತಾನೆ :—ಈ ಬೆಸ್ತರಿಗೆ ಅರ್ಧರಾಜ್ಯವನ್ನಾಗಲಿ ಸಮಸ್ತ ರಾಜ್ಯವನ್ನಾಗಲಿ ಕೊಡು. ಇದು ನಿನಗೆ ಸರಿಯಾದ ಬೆಲೆಯೆಂದು ತಿಳಿದಿರುವೆನು. ನೀನು ಬೇರೆ ಯಾವುದನ್ನು ಬೆಲೆಯನ್ನಾಗಿ ತಿಳಿಯುತ್ತೀಯೆ.

೩೩. ಆಪಸ್ತಂಬನು ಹೇಳುತ್ತಾನೆ :—ಅರಸ ! ಅರ್ಧರಾಜ್ಯವಾಗಲಿ ಸಮಸ್ತ ರಾಜ್ಯವಾಗಲಿ ಇದು ನನಗರ್ಹವಲ್ಲ. ನನಗುಚಿತವಾದ ಬೆಲೆಯನ್ನು ಬ್ರಾಹ್ಮಣರೊಡನೆ ಆಲೋಚಿಸು.

೩೪. ನಾಭಾಗನು ಮಹರ್ಷಿಯ ಆ ಮಾತನ್ನು ಕೇಳಿ ವಿಷಣ್ಣನಾಗಿ ದುಃಖದಿಂದ ಮಂತ್ರಿ ಪುರೋಹಿತರೊಡನೆ ಆಲೋಚಿಸಿದನು.

೩೫. ಅಲ್ಲಿ ಅತ್ಯಂತ ತಪಸ್ವಿಯಾದ ಲೋಮಶನೆಂಬೊಬ್ಬ ಮುನಿಯು ನಾಭಾಗನನ್ನು ಕುರಿತು ಹೆದರಬೇಡ. ಆ ಮುನಿಯನ್ನು ನಾನು ಸಂತೋಷಗೊಳಿಸುವೆನು. ಎಂದನು.

ನಾಭಾಗ ಉವಾಚ :—
ಬ್ರೂಹಿ ಮೂಲ್ಯಂ ಮಹಾಭಾಗ ಮುನೇರಸ್ಯ ಮಹಾತ್ಮನಃ ।
ಪರಿತ್ರಾಯಸ್ವ ಮಾಮಸ್ಮಾತ್ಸಜ್ಞಾತಿಕುಲಬಾಂಧವಂ ॥ ೩೬ ॥
ನಿರ್ದಹೇದ್ಭಗವಾನ್ಕ್ರುದ್ಧಸ್ತ್ರೈಲೋಕ್ಯಂ ಸಚರಾಚರಂ ।
ಕಿಂ ಪುನರ್ಮಾನುಷಂ ಹೀನಮತ್ಯಂತವಿಷಯಾತ್ಮಕಂ ॥ ೩೭ ॥
ಲೋಮೇಶ ಉವಾಚ :—
ತ್ವಮೀಡ್ಯೋ ಹಿ ಮಹಾರಾಜ ಜಗತ್ಪೂಜ್ಯೋ ದ್ವಿಜೋತ್ತಮಃ ।
ಗಾವಶ್ಚ ದಿವ್ಯಾಸ್ತಸ್ಮಾದ್ಗಾಮೂರ್ಲ್ಯಮಸ್ಮೈ ಪ್ರದೀಯತಾಂ ॥ ೩೮ ॥
ತಚ್ಛ್ರುತ್ವಾ ವಚನಂ ರಾಜಾ ಸಾಮಾತ್ಯಃ ಸಪುರೋಹಿತಃ ।
ಹರ್ಷೇಣ ಮಹತಾವಿಷ್ಟಃ ಪ್ರೋವಾಚೇದಂ ವಚೋ ಮುನಿಂ ॥ ೩೯ ॥
ಉತ್ತಿಷ್ಠೋತ್ತಿಷ್ಠ ಭಗವನ್ಕ್ರೀತ ಏವ ನ ಸಂಶಯಃ ।
ಏತದ್ಯೋಗ್ಯತಮಂ ಮೂಲ್ಯಂ ಭವತೋ ಮುನಿಸತ್ತಮ ॥ ೪೦ ॥
ಆಪಸ್ತಂಬ ಉವಾಚ :—
ಉತ್ತಿಷ್ಠಾಮ್ಯೇಷ ಸುಪ್ರೀತಃ ಸಮ್ಯಕ್ಕ್ರೀತೋಽಸ್ಮಿ ಪಾರ್ಥಿವ ।
ಗೋಭ್ಯೋ ಮೂಲ್ಯಂ ನ ಪಶ್ಯಾಮಿ ಪವಿತ್ರಂ ಪರಮಂ ಭುವಿ ॥ ೪೧ ॥

---

೩೬. ನಾಭಾಗನು ಹೇಳುತ್ತಾನೆ :—ಮಹಾತ್ಮನೆ ! ಈ ಮುನಿಯ ಬೆಲೆಯನ್ನು ನನಗೆ ಹೇಳು. ಬಂಧು ಸಹಿತನಾದ ನನ್ನನ್ನು ಇವನಿಂದ ಕಾಪಾಡು.

೩೭. ಇವನು ಕುಪಿತನಾಗಿ ಚರಾಚರ ಜಗತ್ತನ್ನು ಸುಟ್ಟಾನು. ಅತ್ಯಂತ ವಿಷಯಾಸಕ್ತನೂ ಅಲ್ಪನೂ, ಕೇವಲ ಸಾಮಾನ್ಯಮಾನವನೂ ಆದ ನನ್ನ ವಿಷಯ ವೇನು ?

೩೮. ಲೋಮಶನು ಹೇಳುತ್ತಾನೆ :—ಮಹಾರಾಜ ! ನೀನು ಶ್ಲಾಘ್ಯನು. ಈ ಬ್ರಾಹ್ಮಣೋತ್ತಮನು ಜಗತ್ತಿನಲ್ಲಿಯೇ ಪೂಜ್ಯನು. ಗೋವುಗಳು ದಿವ್ಯವಾದುವು. ಆದ್ದರಿಂದ ಇವನಿಗೆ ಗೋವುಗಳನ್ನೆ ಬೆಲೆಯಾಗಿ ಕೊಡು.

೩೯. ದೊರೆಯು ಮಂತ್ರಿ ಪುರೋಹಿತರೊಡನೆ ಆ ಮಾತನ್ನು ಕೇಳಿ ಅತ್ಯಂತ ಹರ್ಷಗೊಂಡು ಮುನಿಯನ್ನು ಕುರಿತು ಹೀಗೆಂದನು.

೪೦. ಮುನಿವರ್ಯನೆ! ಏಳು ಏಳು. ನಿನ್ನನ್ನು ಕೊಂಡುಕೊಂಡಿರುವೆನು. ಇದು ನಿನಗೆ ಉಚಿತವಾದ ಬೆಲೆಯು.

೪೧. ಆಪಸ್ತಂಬನು ಹೇಳುತ್ತಾನೆ :—ದೊರೆಯೆ ! ಈ ನಾನು ಸಂತುಷ್ಟನಾಗಿ ಮೇಲಕ್ಕೇಳುವೆನು. ನೀನು ನನ್ನನ್ನು ಸರಿಯಾದ ಬೆಲೆಯಿಂದ ಕೊಂಡು ಕೊಂಡಿರುವೆ. ಗೋವುಗಳಿಗಿಂತ ಉತ್ತಮವೂ ಪವಿತ್ರವೂ ಆದ ಬೆಲೆಯನ್ನು ಬೇರೆ ಯಾವುದನ್ನೂ ನಾನು ನೋಡಿರುವುದಿಲ್ಲ.

ಗಾವಃ ಪ್ರದಕ್ಷಿಣೀಕಾರ್ಯಾಃ ಪೂಜನೀಯಾಶ್ಚ ನಿತ್ಯಶಃ ।
ಮಂಗಲಾಯತನಂ ದೇವ್ಯಃ ಸೃಷ್ಟಾ ಹ್ಯೇತಾಃ ಸ್ವಯಂಭುವಾ ॥ ೪೨ ॥
ಅಗ್ನ್ಯಗಾರಾಣಿ ವಿಪ್ರಾಣಾಂ ದೇವತಾಯತನಾನಿ ಚ ।
ಯದ್ಗೋಮಯೇನ ಶುದ್ಧ್ಯಂತಿ ಕಿಂಭೂತಮಧಿಕಂ ತತಃ ॥ ೪೩ ॥
ಗೋಮೂತ್ರಂ ಗೋಮಯಂ ಕ್ಷೀರಂ ದಧಿಸರ್ಪಿಸ್ತಥೈವ ಚ ।
ಗವಾಂ ಪಂಚ ಪವಿತ್ರಾಣಿ ಪುನಂತಿ ಸಕಲಂ ಜಗತ್ ॥ ೪೪ ॥
ಗಾವೋ ಮಮಾಗ್ರತೋ ನಿತ್ಯಂ ಗಾವಃ ಪೃಷ್ಠತ ಏವ ಚ ।
ಗಾವೋ ಮೇ ಹೃದಯೇ ಚೈವ ಗವಾಂ ಮಧ್ಯೇ ವಸಾಮ್ಯಹಂ ॥ ೪೫ ॥
ಏವಂ ಜಪನ್ನರೋ ಮಂತ್ರಂ ತ್ರಿಸಂಧ್ಯಂ ನಿಯತಃ ಶುಚಿಃ ।
ಮುಚ್ಯತೇ ಸರ್ವಪಾಪೇಭ್ಯಃ ಸ್ವರ್ಗಲೋಕಂ ಚ ಗಚ್ಛತಿ ॥ ೪೬ ॥
ತೃಣಾಹಾರಪರಾ ಗಾವಃ ಕರ್ತವ್ಯಾ ಭಕ್ತಿತೋಽನ್ವಹಂ ।
ಅಕೃತ್ವಾ ಸ್ವಯಮಾಹಾರಂ ಕುರ್ವನ್ನಾಪ್ನೋತಿ ದುರ್ಗತಿಂ ॥ ೪೭ ॥
ತೇನಾಗ್ನಯೋ ಹುತಾಃ ಸಮ್ಯಕ್ಪಿತರಶ್ಚಾಪಿ ತರ್ಪಿತಾಃ ।
ದೇವಾಶ್ಚ ಪೂಜಿತಾಸ್ತೇನ ಯೋ ದದಾತಿ ಗವಾಹ್ನಿಕಂ ॥ ೪೮ ॥

---

೪೨. ಯಾವಾಗಲೂ ಗೋವುಗಳನ್ನು ಪ್ರದಕ್ಷಿಣೆಮಾಡಿ ಪೂಜಿಸಬೇಕು. ಮಂಗಳಕ್ಕೆ ಆಶ್ರಯವಾದ ಇವುಗಳನ್ನು ಬ್ರಹ್ಮನು ಸೃಷ್ಟಿಸಿರುವನು.

೪೩. ಈ ಗೋವುಗಳ ಗೋಮಯದಿಂದ ಬ್ರಾಹ್ಮಣರ ಯಜ್ಞಶಾಲೆಯೂ, ದೇವಾಲಯಗಳೂ ಶುದ್ಧವಾಗುವುವು. ಇದಕ್ಕಿಂತ ಉತ್ತಮವಾದುದು ಯಾವುದಿದೆ?

೪೪. ಗೋವುಗಳ ಮೂತ್ರ, ಸಗಣಿ, ಹಾಲು, ಮೊಸರು, ತುಪ್ಪ ಈ ಐದೂ ಪವಿತ್ರ ವಸ್ತುಗಳು. ಸಮಸ್ತ ಜಗತ್ತುಗಳನ್ನು ಶುದ್ಧಿಗೊಳಿಸುವುವು.

೪೫. "ಗೋವುಗಳು ನನ್ನ ಮುಂದೆಯೂ, ಹಿಂದೆಯೂ, ಹೃದಯದಲ್ಲಿಯೂ ಇರುವುವು. ನಾನು ಗೋವುಗಳ ನಡುವೆ ವಾಸಿಸುವೆನು."

೪೬. ಈ ಮಂತ್ರವನ್ನು ತ್ರಿಕಾಲದಲ್ಲಿಯೂ ಶುದ್ಧನಾಗಿ ಜಪಿಸುವ ಮನುಷ್ಯನು ಸಕಲ ಪಾಪಮುಕ್ತನಾಗಿ ಸ್ವರ್ಗಲೋಕಕ್ಕೆ ತೆರಳುವನು.

೪೭. ನಿತ್ಯವೂ ಭಕ್ತಿಯಿಂದ ಗೋವುಗಳಿಗೆ ಹುಲ್ಲನ್ನು ಹಾಕಬೇಕು. ಹಾಗೆ ಮಾಡದೆ ತಾನು ಭುಂಜಿಸುವ ಮಾನವನು ದುರವಸ್ಥೆಗೀಡಾಗುವನು.

೪೮. ಗೋವುಗಳಿಗೆ ಆಹಾರವನ್ನಿತ್ತವನು ಅಗ್ನಿಯಲ್ಲಿ ಹೋಮಿಸಿದವನಂತೆಯೂ, ಪಿತೃಗಳನ್ನು ಸಂತೋಷಗೊಳಿಸಿದವನಂತೆಯೂ, ದೇವತೆಗಳನ್ನು ಪೂಜಿಸಿದವನಂತೆಯೂ ಆಗುವನು.

ಮಂತ್ರಃ

ಸೌರಭೇಯಿಮಾ ಜಗತ್ಪೂಜ್ಯಾ ದೇವೀ ವಿಷ್ಣುಪದೇ ಸ್ಥಿತಾ ।
ಸರ್ವಮೇವ ಮಯಾ ದತ್ತಂ ಪ್ರತೀಚ್ಛತು ಸುತೋಷಿತಾ ॥ ೪೯ ॥
ರಕ್ಷಣಾದ್ಬಾಲಪುತ್ರಾಣಾಂ ಗವಾಂ ಕಂಡೂಯನಾತ್ತಥಾ ।
ಕ್ಷೀಣಾರ್ತರಕ್ಷಣಾಚ್ಚೈವ ನರಃ ಸ್ವರ್ಗೇ ಮಹೀಯತೇ ॥ ೫೦ ॥
ಆದಿರ್ಗಾವೋ ಹಿ ಮರ್ತ್ಯಸ್ಯ ಮಧ್ಯೇ ಚಾಂತೇ ಪ್ರಕೀರ್ತಿತಾಃ ।
ರಕ್ಷಂತಿ ತಾಸ್ತು ದೇವಾನಾಂ ಕ್ಷೀರಾಜ್ಯಮಮೃತಂ ಸದಾ ॥ ೫೧ ॥
ತಸ್ಮಾದ್ಗಾವಃ ಪ್ರದಾತವ್ಯಾಃ ಪೂಜನೀಯಾಶ್ಚ ನಿತ್ಯಶಃ ।
ಸ್ವರ್ಗಸ್ಯ ಸಂಗಮಾ ಹ್ಯೇತಾಃ ಸೋಪಾನಮಿವ ನಿರ್ಮಿತಾಃ ॥ ೫೨ ॥
ಏತಚ್ಛ್ರುತ್ವಾ ನಿಷಾದಾಸ್ತೇ ಗವಾಂ ಮಾಹಾತ್ಮ್ಯಮುತ್ತಮಂ ।
ಪ್ರಣಿಪತ್ಯ ಮಹಾತ್ಮಾನಮಾಪಸ್ತಂಬಮಥಾಬ್ರುವನ್ ॥ ೫೩ ॥

ನಿಷಾದಾ ಊಚು :—

ಸಂಭಾಷೋ ದರ್ಶನಂ ಸ್ಪರ್ಶಃ ಕೀರ್ತನಂ ಸ್ಮರಣಂ ತಥಾ ।
ಪಾವನಾನಿ ಕಿಲೈತಾನಿ ಸಾಧೂನಾಮಿತಿ ಚ ಶ್ರುತಂ ॥ ೫೪ ॥

---

೪೯. ಮಂತ್ರವು :—ಜಗತ್ಪೂಜ್ಯಳೂ, ವಿಷ್ಣುಪಾದಗಳ್ಲಿರುವವಳೂ ಆದ ಗೋಮಾತೆಯು ನಾನಿತ್ತುದನ್ನು ಸ್ವೀಕರಿಸಿ ತೃಪ್ತಿಗೊಳ್ಳಲಿ.

೫೦. ಗೋವುಗಳ ಕರುವನ್ನು ಪೊರೆಯುವುದರಿಂದಲೂ, ತುರಿಸುವಿಕೆಯಿಂದಲೂ, ದುಃಖಗೊಂಡವನ್ನು ಕಾಪಾಡುವುದರಿಂದಲೂ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜ್ಯನಾಗುವನು.

೫೧. ಗೋವುಗಳು ಮನುಷ್ಯನನ್ನು ಆದಿ, ಮಧ್ಯ, ಅವಸಾನಗಳಲ್ಲಿ ಕಾಪಾಡುವವು. ಅವು ದೇವತೆಗಳಿಗೆ ಬೇಕಾದ ಹಾಲು, ತುಪ್ಪ, ಅಮೃತಗಳನ್ನು ಕಾಪಾಡುವುವು.

೫೨. ಆದುದರಿಂದ ನಿತ್ಯವೂ ಗೋವುಗಳನ್ನು ದಾನಮಾಡಬೇಕು. ಪೂಜಿಸಬೇಕು. ಇವು ಸ್ವರ್ಗವನ್ನು ಸೇರಿಸುವ ಮೆಟ್ಟಲುಗಳಂತಿರುವುವು.

೫೩. ಆ ಬೆಸ್ತರು ಗೋವುಗಳ ಇಂಥ ಮಹಾತ್ಮ್ಯೆಯನ್ನು ಕೇಳಿ ಮಹಾತ್ಮರಾದ ಆಪಸ್ತಂಬರನ್ನು ವಂದಿಸಿ ಇಂತೆಂದರು.

೫೪. ಬೆಸ್ತರು ಹೇಳುತ್ತಾರೆ :—ಸಜ್ಜನರೊಡನೆ ಸಂಭಾಷಣೆ, ಅವರ ದರ್ಶನ, ಸ್ಪರ್ಶ, ಹೊಗಳುವಿಕೆ ಸ್ಮರಣೆ ಇವು ಪವಿತ್ರವಾದುವೆಂದು ನಾವು ಕೇಳಿದ್ದೇವೆ.

ಸಂಭಾಷೋ ದರ್ಶನಂ ಚೈವ ಸಹಾಸ್ಮಾಭಿಃ ಕೃತಂ ತ್ವಯಾ ।
ಕುರುಷ್ವಾನುಗ್ರಹಂ ತಸ್ಮಾದ್ಗಾ ರೇಷಾ ಪ್ರತಿಗೃಹ್ಯತಾಂ ॥ ೫೫ ॥

ಆಪಸ್ತಂಬ ಉವಾಚ :—

ಏತಾಂ ವಃ ಪ್ರತಿಗೃಹ್ಣಾಮಿ ಗಾಂ ಯೂಯಂ ಮುಕ್ತಕಿಲ್ಬಿಷಾಃ ।
ನಿಷಾದಾ ಗಚ್ಛತ ಸ್ವರ್ಗಂ ಸಹ ಮತ್ಸ್ಯೈರ್ಜಲೋದ್ಧೃತೈಃ ॥ ೫೬ ॥
ಪ್ರಾಣಿನಾಂ ಪ್ರೀತಿಮುತ್ಪಾದ್ಯ ನಿಂದಿತೇನಾಪಿ ಕರ್ಮಣಾ ।
ನರಕಂ ಯದಿ ಪಶ್ಯಾಮಿ ವತ್ಸ್ಯಾಮಿ ಸ್ವರ್ಗ ಏವ ತತ್ ॥ ೫೭ ॥
ಯನ್ಮಯಾ ಸುಕೃತಂ ಕಿಂಚಿನ್ಮನೋವಾಕ್ಕಾಯಕರ್ಮಭಿಃ ।
ಕೃತಂ ತ್ವಾತ್ತೇನ ದುಃಖಾರ್ತಾಃ ಸರ್ವೇ ಯಾಂತು ಶುಭಾಂ ಗತಿಂ ॥ ೫೮ ॥
ತತಸ್ತಸ್ಯ ಪ್ರಸಾದೇನ ಮಹರ್ಷೇರ್ಭಾವಿತಾತ್ಮನಃ ।
ನಿಷಾದಾಸ್ತೇನ ವಾಕ್ಯೇನ ಸಹ ಮತ್ಸ್ಯೈರ್ದಿವಂ ಗತಾಃ ॥ ೫೯ ॥
ತಾನ್ದೃಷ್ಟ್ವಾ ವ್ರಜತಃ ಸ್ವರ್ಗಂ ಸಮತ್ಸ್ಯಾನ್ಮತ್ಸ್ಯಜೀವಿನಃ ।
ಸಾಮಾತ್ಯಭೃತ್ಯೋ ನೃಪತಿರ್ವಿಸ್ಮಯಾದಿದಮಬ್ರವೀತ್ ॥ ೬೦ ॥
ಸೇವ್ಯಾಃ ಶ್ರೇಯೋಽರ್ಥಿಭಿಃ ಸಂತಃ ಪುಣ್ಯತೀರ್ಥೇ ಜಲೋಪಮಾಃ ।
ಕ್ಷಣೋಪಾಸನಮಪ್ಯತ್ರ ನ ಯೇಷಾಂ ನಿಷ್ಫಲಂ ಭವೇತ್ ॥ ೬೧ ॥

---

೫೫. ನೀನು ನಮ್ಮೊಡನೆ ಮಾತಾಡಿರುವೆ. ನಾವು ನಿನ್ನನ್ನು ದರ್ಶನ ಮಾಡಿರುವೆವು. ಆದುದರಿಂದ ನಮ್ಮನ್ನು ಅನುಗ್ರಹಿಸು. ಈ ಗೋವನ್ನು ತೆಗೆದುಕೊ.

೫೬. ಆಪಸ್ತಂಬನು ಹೇಳುತ್ತಾನೆ :—ಬೆಸ್ತರೆ ! ನಾನು ನಿಮ್ಮ ಗೋವುಗಳನ್ನು ತೆಗೆದುಕೊಳ್ಳುತ್ತೇನೆ. ನಿಮ್ಮ ಪಾಪವು ಪರಿಹಾರವಾಯಿತು. ನೀವು ನೀರಿನಿಂದ ಹಿಡಿದು ತಂದ ಈ ಮೀನುಗಳೊಡನೆ ಸ್ವರ್ಗಕ್ಕೆ ಹೋಗಿರಿ.

೫೭. ಲೋಕನಿಂದ್ಯವಾದ ಕಾರ್ಯದಿಂದ ಪ್ರಾಣಿಗಳಿಗೆ ಪ್ರೀತಿಯನ್ನುಂಡುಮಾಡಿ ನರಕವನ್ನು ಕಂಡರೂ ಅದು ನನಗೆ ಸ್ವರ್ಗವೇ.

೫೮. ನಾನು ಮನಸ್ಸು, ಮಾತು, ಕಾರ್ಯಗಳಕರ್ಮಗಳಿಂದ ಸ್ವಲ್ಪ ಪುಣ್ಯವನ್ನಾದರೂ ಮಾಡಿದ್ದರೆ ದುಃಖಗೊಂಡ ಈ ಮೀನುಗಳೆಲ್ಲ ಉತ್ತಮಗತಿಯನ್ನು ಪಡೆಯಲಿ.

೫೯. ಬಳಿಕ ಜ್ಞಾನಿಯಾದ ಆ ಮುನಿಯ ಅನುಗ್ರಹದಿಂದಲೂ, ಮಾತಿನಿಂದಲೂ ಬೆಸ್ತರು ಮೀನುಗಳೊಡನೆ ದೇವಲೋಕಕ್ಕೆ ಹೋದರು.

೬೦. ದೊರೆಯು ಮಂತ್ರಿ ಮತ್ತು ಸೇವಕರೊಡನೆ ಸ್ವರ್ಗಕ್ಕೆ ಹೋಗುತ್ತಿರುವ ಬೆಸ್ತರನ್ನೂ, ಮೀನುಗಳನ್ನೂ ಕಂಡು ಆಶ್ಚರ್ಯದಿಂದ ಹೀಗೆಂದನು.

೬೧. ಶ್ರೇಯಸ್ಸನ್ನು ಬಯಸುವವರು ಪುಣ್ಯತೀರ್ಥದಲ್ಲಿರುವ ನೀರಿನಂತಿರುವ ಸಜ್ಜನರನ್ನು ಸೇವಿಸಬೇಕು. ಇಲ್ಲಿ ಸಜ್ಜನರ ಕ್ಷಣಕಾಲ ಸೇವೆಯೂ ನಿಷ್ಫಲವಾಗಲಾರದು.

ಸದ್ಭಿಃ ಸಹ ಸದಾಸೀತ ಸದ್ಭಿಃ ಕುರ್ವೀತ ಸತ್ಕಥಾಂ ।
ಸತಾಂ ವ್ರತೇನ ವರ್ತೇತ ನಾಸದ್ಭಿಃ ಕಿಂಚಿದಾಚರೇತ್ ॥ ೬೨ ॥
ಸತಾಂ ಸಮಾಗಮಾದೇತೇ ಸಮತ್ಸ್ಯಾ ಮತ್ಸ್ಯಜೀವಿನಃ ।
ತ್ರಿವಿಷ್ಟಪಮನುಪ್ರಾಪ್ತಾ ನರಾಃ ಪುಣ್ಯಕೃತೋ ಯಥಾ ॥ ೬೩ ॥
ಆಪಸ್ತಂಬೋ ಮುನಿಸ್ತತ್ರ ಲೋಮಶಶ್ಚ ಮಹಾಮುನಿಃ ।
ವರೈಸ್ತಂ ವಿವಿಧೈರಿಷ್ಟೈಶ್ಛಂದಯಾಮಾಸತುರ್ನೃಪಂ ॥ ೬೪ ॥
ತತಃ ಸ ವರಯಾಮಾಸ ಧರ್ಮಬುದ್ಧಿಂ ಸುದುರ್ಲಭಾಂ ।
ತಥೇತಿ ಚೋಕ್ತ್ವಾ ತೌ ಪ್ರೀತ್ಯಾ ತಂ ನೃಪಂ ವೈ ಶಶಂಸತುಃ ॥ ೬೫ ॥
ಅಹೋ ಧನ್ಯೋಽಸಿ ರಾಜೇಂದ್ರ ಯತ್ತೇ ಧರ್ಮಪರಾ ಮತಿಃ ।
ಧರ್ಮಃ ಸುದುರ್ಲಭಃ ಪುಂಸಾಂ ವಿಶೇಷೇಣ ಮಹೀಕ್ಷಿತಾಂ ॥ ೬೬ ॥
ಯದಿ ರಾಜಾ ಮದಾವಿಷ್ಟಃ ಸ್ವಧರ್ಮಂ ನ ಪರಿತ್ಯಜೇತ್ ।
ತತೋ ಜಗತಿ ಕಸ್ತಸ್ಮಾತ್ಪುಮಾನಭ್ಯಧಿಕೋ ಭವೇತ್ ॥ ೬೭ ॥
ಧ್ರುವಂ ಜನ್ಮ ಸದಾ ರಾಜ್ಞಾಂ ಮೋಹಶ್ಚಾಪಿ ಸದಾ ಧ್ರುವಃ ।
ಮೋಹಾದ್ಧ್ರುವಶ್ಚ ನರಕೋ ರಾಜ್ಯಂ ನಿಂದಂತ್ಯತೋ ಬುಧಾಃ ॥ ೬೮ ॥

---

೬೨. ಸಜ್ಜನರೊಡನೆ ಕುಳಿತುಕೊಳ್ಳಬೇಕು. ಸಂಭಾಷಣೆ ಮಾಡಬೇಕು. ಸಜ್ಜನರ ನಡತೆಯನ್ನು ಅನುಸರಿಸಬೇಕು. ಅಸಜ್ಜನರೊಡನೆ ಏನನ್ನೂ ಮಾಡಕೂಡದು.

೬೩. ಸಜ್ಜನರ ಸಹವಾಸದಿಂದ ಈ ಬೆಸ್ತರು ಮತ್ಸ್ಯಗಳೊಡನೆ ಪುಣ್ಯಮಾಡಿದ ಮನುಷ್ಯರಂತೆ ದೇವಲೋಕವನ್ನು ಹೊಂದಿದರು.

೬೪. ಅಲ್ಲಿ ಆಪಸ್ತಂಬ, ಲೋಮಶ ಮುನಿಗಳು ಆ ನಾಭಾಗ ರಾಜನನ್ನು ನಾನಾ ವಿಧ ವರಗಳಿಂದ ಸಂತೋಷಗೊಳಿಸಿದರು.

೬೫. ತರುವಾಯ ಆ ರಾಜನು ದುರ್ಲಭವಾದ ಧರ್ಮಬುದ್ಧಿಯನ್ನು ವರಿಸಿದನು. ಆ ಮುನಿಗಳು ಹಾಗೆಯೇ ಆಗಲೆಂದು ಸಂತೋಷದಿಂದ ನೃಪನನ್ನು ಹೊಗಳಿದರು.

೬೬. "ಎಲೈ ದೊರೆಯೆ ! ನೀನು ಧರ್ಮಬುದ್ಧಿಯುಳ್ಳವನಾದ್ದರಿಂದ ಧನ್ಯನಾಗಿರುವೆ. ಮನುಷ್ಯರಲ್ಲಿ ಧರ್ಮಬುದ್ಧಿಯಿರುವುದು ದುರ್ಲಭ. ಅದರಲ್ಲಿಯೂ, ದೊರೆಗಳಲ್ಲಿ ಅದು ಅತಿದುರ್ಲಭ.

೬೭. ರಾಜನು ಮತ್ತನಾಗಿ ತನ್ನ ಧರ್ಮವನ್ನು ತ್ಯಜಿಸದಿದ್ದರೆ ಪ್ರಪಂಚದಲ್ಲಿ ಅವನಿಗಿಂತ ಅಧಿಕನಾದವನಾರು ?

೬೮. ರಾಜರಿಗೆ ಜನ್ಮವೂ, ಮೋಹವೂ, ಮೋಹದಿಂದ ನರಕವೂ ನಿಶ್ಚಿತವಾಗಿರುವುದು. ಆದ್ದರಿಂದ ಜ್ಞಾನಿಗಳು ರಾಜ್ಯವನ್ನು ನಿಂದಿಸುತ್ತಾರೆ.

ರಾಜ್ಯಂ ಹಿ ಬಹು ಮನ್ಯಂತೇ ನರಾ ವಿಷಯಲೋಲುಪಾಃ ।
ಮನೀಷಿಣಸ್ತು ಪಶ್ಯಂತಿ ತದೇವ ನರಕೋಪಮಂ ॥ ೬೯ ॥
ತಸ್ಮಾಲ್ಲೋಕದ್ವಯಧ್ವಂಸೀ ನ ಕರ್ತವ್ಯೋ ಮದಸ್ತ್ವಯಾ ।
ಯದೀಚ್ಛಸಿ ಮಹಾರಾಜ ಶಾಶ್ವತೀಂ ಗತಿಮಾತ್ಮನಃ ॥ ೭೦ ॥

ಈಶ್ವರ ಉವಾಚ :—

ಇತ್ಯುಕ್ತ್ವಾ ತೌ ಮಹಾತ್ಮಾನೌ ಜಗ್ಮತುಃ ಸ್ವಂ ಸ್ವಮಾಶ್ರಮಂ ।
ನಾಭಾಗೋಽಪಿ ವರಂ ಲಬ್ಧ್ವಾ ಪ್ರಹೃಷ್ಟಃ ಪ್ರಾವಿಶತ್ಪುರಂ ॥ ೭೧ ॥
ಏತತ್ತೇ ಕಥಿತಂ ದೇವಿ ಪ್ರಭಾವಂ ದೇವಿಕೋದ್ಭವಂ ।
ಋಷಿಣಾ ಸ್ಥಾಪಿತಶ್ಚಾಪಿ ಭವೋ ಜಾಲೇಶ್ವರಸ್ತದಾ ॥ ೭೨ ॥
ಜಾಲೇ ನಿಪತಿತೋ ಯಸ್ಮಾದ್ಧಾಶಾನಾಮೃಷಿಸತ್ತಮಃ ।
ಜಾಲೇಶ್ವರೇತಿ ನಾಮಾಸೌ ವಿಖ್ಯಾತಃ ಪೃಥಿವೀತಲೇ ॥ ೭೩ ॥
ತತ್ರ ಸ್ನಾತ್ವಾ ಮಹಾದೇವಿ ಜಾಲೇಶ್ವರಸಮರ್ಚನಾತ್ ।
ಆಪಸ್ತಂಬಶ್ಚ ನಾಭಾಗೋ ನಿಷಾದಾ ಮತ್ಸ್ಯಜೀವಿನಃ ॥ ೭೪ ॥
ಮತ್ಸ್ಯೈಃ ಸಹ ಗತಾಃ ಸ್ವರ್ಗಂ ದೇವಿಕಾಯಾಃ ಪ್ರಭಾವತಃ ।
ಚೈತ್ರಸ್ಯೈವ ತು ಮಾಸಸ್ಯ ಶುಕ್ಲಪಕ್ಷೇ ತ್ರಯೋದಶೀಂ ॥ ೭೫ ॥

---

೬೯. ವಿಷಯಾಸಕ್ತರಾದ ಮಾನವರು ರಾಜ್ಯವನ್ನು ಅಧಿಕವನ್ನಾಗಿ ತಿಳಿಯುತ್ತಾರೆ. ಜ್ಞಾನಿಗಳು ಅದನ್ನೇ ನರಕಕ್ಕೆ ಸಮಾನವನ್ನಾಗಿ ಅರಿಯುವರು.

೭೦. ದೊರೆಯೆ! ನೀನು ನಿನಗೆ ಶಾಶ್ವತವಾದ ಮೋಕ್ಷವನ್ನು ಬಯಸುವುದಾದರೆ ಉಭಯ ಲೋಕಗಳನ್ನು ನಾಶಗೊಳಿಸುವ ಮದವನ್ನು ಆಶ್ರಯಿಸಬೇಡ.

೭೧. ಈಶ್ವರನು ಹೇಳುತ್ತಾನೆ! ಮಹಾತ್ಮರಾದ ಆ ಇಬ್ಬರು ಮುನಿಗಳು ಹೀಗೆ ಹೇಳಿ ತಮ್ಮ ಆಶ್ರಮಕ್ಕೆ ತೆರಳಿದರು. ನಾಭಾಗನೂ ವರವನ್ನು ಪಡೆದು ಸಂತೋಷಗೊಂಡು ತನ್ನ ಪಟ್ಟಣವನ್ನು ಹೊಕ್ಕನು.

೭೨. ದೇವಿ! ನಿನಗೆ ಈ ದೇವಿಕಾ ನದಿಯ ಮಾಹಾತ್ಮ್ಯವನ್ನು ಹೇಳಿರುವೆನು. ಆಗ ಆಪಸ್ತಂಬ ಮುನಿಯು ಜಾಲೇಶ್ವರನನ್ನು ಪ್ರತಿಷ್ಠೆ ಮಾಡಿದನು.

೭೩. ಮುನಿವರ್ಯನಾದ ಅಗಸ್ತ್ಯನು ಜಾಲದಲ್ಲಿ ಬಿದ್ದದ್ದರಿಂದ ಜಾಲನೆಂದೂ, ಅವನು ಪ್ರತಿಷ್ಠೆ ಮಾಡಿದ್ದರಿಂದ ಜಾಲೇಶ್ವರನೆಂದೂ ಮಹೇಶ್ವರನು ಅಲ್ಲಿ ಪ್ರಸಿದ್ಧನಾದನು.

೭೪—೭೬. ಮಹಾದೇವಿ! ಆಪಸ್ತಂಬ, ನಾಭಾಗ, ಬೆಸ್ತರು ಇವರು ಅಲ್ಲಿ ಮಿಂದು ಜಾಲೇಶ್ವರನನ್ನು ಪೂಜಿಸಿದ್ದರಿಂದ ದೇವಿಕಾ ನದಿಯ ಪ್ರಭಾವದಿಂದ ಮತ್ಸ್ಯಗಳೊಡನೆ ಸ್ವರ್ಗಕ್ಕೆ ತೆರಳಿದರು. ಚೈತ್ರಮಾಸದ ಶುಕ್ಲಪಕ್ಷದ ತ್ರಯೋದಶೀ

अष्टत्रिंशदुत्तरत्रिशततमोऽध्यायः

ದದ್ಯಾತ್ಪಿಂಡಂ ಪಿತೃಭ್ಯೋ ಯಸ್ತಸ್ಯಾಂತೋ ನೈವ ವಿದ್ಯತೇ ।
ಗೋದಾನಂ ತತ್ರ ದೇಯಂ ತು ಬ್ರಾಹ್ಮಣೇ ವೇದಪಾರಗೇ ।
ಶ್ರೋತವ್ಯಂ ಚೈವ ಮಾಹಾತ್ಮ್ಯಂ ದ್ರಷ್ಟವ್ಯೋ ಜಾಲಕೇಶ್ವರಃ ॥ ೭೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜಾಲೇಶ್ವರಮಾಹಾತ್ಮ್ಯವರ್ಣನಂ
ಅಷ್ಟತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ದಿನ ಪಿತೃಗಳಿಗೆ ಪಿಂಡಪ್ರದಾನ ಮಾಡಿದವನಿಗೆ ಅವಸಾನ ಕಾಲವಿರುವುದಿಲ್ಲ. ಅಲ್ಲಿ ವೇದ ಪಾರಂಗತರಾದ ಬ್ರಾಹ್ಮಣರಿಗೆ ಗೋದಾನವನ್ನು ಮಾಡಬೇಕು. ಆ ತೀರ್ಥದ ಮಾಹಾತ್ಮ್ಯವನ್ನು ಕೇಳಬೇಕು. ಜಾಲಕೇಶ್ವರನನ್ನು ದರ್ಶನ ಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜಾಲೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಮುವ್ವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕೋನಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಹುಂಕಾರಕೂಪಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕೂಪಂ ತ್ರೈಲೋಕ್ಯವಿಶ್ರುತಂ ।
ದೇವಿಕಾಯಾಸ್ತಟೇ ರಮ್ಯೇ ಹುಂಕಾರೇಣೈವ ಪೂರ್ಯತೇ ॥ ೧ ॥
ತತೋಽಧಸ್ತಾತ್ಪ್ರಯಾತಿ ಸಲಿಲಂ ತತ್ರ ಭಾಮಿನಿ ।
ಚಂಡೀನಾಮ ಪುರಾ ಪ್ರೋಕ್ತೋ ದೇವಿಕಾತಟಮಾಸ್ಥಿತಃ ॥ ೨ ॥
ತಪಸ್ತೇಪೇ ಮಹಾದೇವಿ ಶಿವಭಕ್ತಿಪರಾಯಣಃ ।
ತಸ್ಯೈವಂ ತಪ್ಯಮಾನಸ್ಯ ತಸ್ಮಿನ್ದೇಶೇ ವರಾನನೇ ॥ ೩ ॥
ಆಜಗಾಮ ಮೃಗೋ ವೃದ್ಧಸ್ತಂ ದೇಶಮಂಧದೃಕ್ಪ್ರಿಯೇ ।
ಸ ಪಪಾತ ಮಹಾಗರ್ತೇ ಅಗಾಧೇ ಜಲವರ್ಜಿತೇ ॥ ೪ ॥
ತಂ ದೃಷ್ಟ್ವಾ ಕೃಪಯಾವಿಷ್ಟಃ ಸ ಮುನಿರ್ಮೌನಮಾಸ್ಥಿತಃ ।
ಹುಂಕಾರಂ ಕುರುತೇ ತತ್ರ ಭೂಯೋಭೂಯಶ್ಚ ಭಾಮಿನಿ ॥ ೫ ॥

ಕನ್ನಡದ ಅನುವಾದ

ಹುಂಕಾರಕೂಪಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಬಳಿಕ ಮಹಾದೇವಿ ! ದೇವಿಕಾತಟದಲ್ಲಿರುವುದೂ, ಮನೋಹರವೂ, ಹುಂಕಾರದಿಂದ ತುಬಿದುದೂ ಆದ ತ್ರೈಲೋಕ್ಯ ಪೂಜ್ಯವಾದ ಕೂಪದೆಡೆಗೆ ಹೋಗಬೇಕು.

೨-೪. ಪ್ರಿಯಳೆ ! ನೀರು ಅಲ್ಲಿ ಕೆಳಮುಖವಾಗಿ ಹೋಗುತ್ತಿರುವುದು. ಅಲ್ಲಿ ಹಿಂದೆ ಶಿವಭಕ್ತನಾದ ಚಂಡನು ತಪಸ್ಸನ್ನು ಮಾಡುತ್ತಿದ್ದನು. ಅವನು ತಪಸ್ಸನ್ನು ಮಾಡುತ್ತಿರುವಾಗ ಒಂದು ಮುದಿ ಜಿಂಕೆಯು ಅಲ್ಲಿಗೆ ಬಂದು ನೀರಿಲ್ಲದ ಆಳವಾದ ಆ ಕುಣಿಯಲ್ಲಿ (ಕೂಪದಲ್ಲಿ) ಬಿದ್ದಿತು.

೫. ಅದನ್ನು ನೋಡಿ ದಯೆಗೊಂಡು ಆ ಮುನಿಯು ಮೌನದಿಂದ ಬಾರಿ ಬಾರಿಗೂ ಹುಂಕಾರವನ್ನು ಮಾಡಿದನು.

ಅಥ ಹುಂಕಾರಶಬ್ದೇನ ತಸ್ಯ ಗರ್ತಃ ಪ್ರಪೂರಿತಃ ।
ತತೋ ಮೃಗೋ ವನಿಷ್ಕ್ರಾಂತಃ ಕೃಚ್ಛ್ರೇಣ ಸಲಿಲಾತ್ತ್ರಿಯೇ ॥ ೬ ॥
ಮಾನುಷಂ ರೂಪಮಾಶ್ರಿತ್ಯ ತಮೃಷಿಂ ಪರ್ಯಪೃಚ್ಛತ ।
ವಿಸ್ಮಯಂ ಪರಮಂ ಗತ್ವಾ ಕಾಮ್ಯದಂ ಕರ್ಮಣಃ ಫಲಂ ॥ ೭ ॥
ಮೃಗತ್ವೇ ಪತಿತಶ್ಚಾತ್ರ ನರೋ ಭೂತ್ವಾ ವಿನಿರ್ಗತಃ ।
ಸೋಽಬ್ರವೀತ್ತಸ್ಯ ಮಾಹಾತ್ಮ್ಯಂ ಸಲಿಲಸ್ಯ ದ್ವಿಜೋತ್ತಮಃ ॥ ೮ ॥
ಅತೋಽಹಂ ನರಕಂ ಪ್ರಾಪ್ತೋ ನಾನ್ಯದಸ್ತೀಹ ಕಾರಣಂ ।
ತತಸ್ತತ್ಸಲಿಲಂ ಭೂಯಃ ಪ್ರವಿಷ್ಟಂ ಧರಣೀತಲೇ ॥ ೯ ॥
ತತೋ ಹುಂಕೃತವಾನ್ಭೂಯಃ ಸ ಋಷಿಃ ಕೌತುಕಾನ್ವಿತಃ ।
ಆಪೂರಿತಃ ಪುನಃ ಕೂಪಃ ಸಲಿಲೇನ ಪುರಾ ಯಥಾ ॥ ೧೦ ॥
ತತಃ ಸ ಕೃತವಾನ್ಸ್ನಾನಂ ತತ್ರಾಥ ಪಿತೃತರ್ಪಣಂ ।
ಮತ್ವಾ ತೀರ್ಥವರಂ ತತ್ರ ತತಃ ಪ್ರಾಪ್ತಃ ಪರಾಂ ಗತಿಂ ॥ ೧೧ ॥
ಅದ್ಯಾಪಿ ಹುಂಕೃತೇ ತಸ್ಮಿನ್ಸಲಿಲೌಘಃ ಪ್ರವರ್ತತೇ ।
ತತ್ರ ಗತ್ವಾ ನರೋ ಭಕ್ತ್ಯಾ ಅಪಿ ಪಾಪರತೋಽಪಿ ಯಃ ॥ ೧೨ ॥

---

೬. ಬಳಿಕ ಆ ಕೂಪವು ಹುಂಕಾರ ಶಬ್ದದಿಂದ ತುಂಬಲು ಆ ಮೃಗವು ಮನುಷ್ಯನಾಗಿ ಕಷ್ಟದಿಂದ ಮೇಲಕ್ಕೆ ಬಂದಿತು.

೭–೯. ಮೃಗವಾಗಿ ಕೂಪದಲ್ಲಿ ಬಿದ್ದು ಮನುಷ್ಯನಾಗಿ ಮೇಲಕ್ಕೆ ಬಂದು ಅದು ಆಶ್ಚರ್ಯಗೊಂಡು ಆ ಮುನಿಯನ್ನು ಕುರಿತು ಕರ್ಮದ ಫಲವನ್ನು ಪ್ರಶ್ನಿಸಿದನು. ಆ ಮುನಿಯು ನೀರಿನ ಮಾಹಾತ್ಮ್ಯದಿಂದ ನೀನು ಮನುಷ್ಯನಾಗಿರುವೆ. ಬೇರೆ ಕಾರಣ ವಿಲ್ಲವೆಂದನು. ಬಳಿಕ ನೀರು ಭೂಮಿಯಲ್ಲಿ ಪ್ರವೇಶಿಸಿತು.

೧೦. ಅನಂತರ ಆ ಮುನಿಯು ಕುತೂಹಲದಿಂದ ಮರಳಿ ಹುಂಕಾರ ಮಾಡಲು ಆ ಬಾವಿಯು ಮೊದಲಿನಂತೆ ನೀರಿನಿಂದ ತುಂಬಿತು.

೧೧. ಬಳಿಕ ಅವನು ಅದು ಉತ್ತಮ ತೀರ್ಥವೆಂದರಿತು ಅಲ್ಲಿ ಮಿಂದು ಪಿತೃ ತರ್ಪಣ ಮಾಡಿ ಉತ್ಕೃಷ್ಟ ಗತಿಯನ್ನು ಪಡೆದನು.

೧೨–೧೪. ಈಗಲೂ ಅಲ್ಲಿ ಹುಂಕಾರಗೈಯಲು ನೀರಿನ ಪ್ರವಾಹವುಂಟಾಗುವುದು. ಮನುಷ್ಯನು ಪಾಪಿಷ್ಠನಾದರೂ ಅಲ್ಲಿಗೆ ಹೋಗಿ ಭಕ್ತಿಯಿಂದ ಮಿಂದು ಶುದ್ಧನಾಗಿ ಶ್ರಾದ್ಧವನ್ನು ಮಾಡಿದರೆ ಮರಳಿ ಭೂಮಿಯಲ್ಲಿ ಜನಿಸುವುದಿಲ್ಲ. ಸಮಸ್ತ ಪಾಪ

ನ ಮಾನುಷ್ಯಂ ಪುನರ್ಜನ್ಮ ಪ್ರಾಪ್ನೋತಿ ಜಗತೀತಲೇ ।
ತತ್ರ ಸ್ನಾತ್ವಾ ಶುಚಿರ್ಭೂತ್ವಾ ಯಃ ಶ್ರಾದ್ಧಂ ಕುರುತೇ ನರಃ ॥ ೧೩ ॥
ಮುಚ್ಯತೇ ಸರ್ವಪಾಪೇಭ್ಯಃ ಪಿತೃಲೋಕೇ ಮಹೀಯತೇ ।
ಕುಲಾನಿ ತಾರಯೇತ್ಸಪ್ತ ಅತೀತಾಗತಾನಿ ಚ ॥ ೧೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಹುಂಕಾರಕೂಪಮಾಹಾತ್ಮ್ಯವರ್ಣನಂನಾಮ
ಏಕೋನಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಗಳಿಂದ ಮುಕ್ತನಾಗಿ ಪಿತೃಲೋಕದಲ್ಲಿ ಪೂಜ್ಯನಾಗುವನು. ಹಿಂದಿನ ಮತ್ತು ಮುಂದಿನ ಏಳು ಕುಲಗಳನ್ನು ಉದ್ಧರಿಸುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಹುಂಕಾರಕೂಪಮಾಹಾತ್ಮ್ಯವರ್ಣನಗವೆಂಬ
ಮುನ್ನೂರಮುವ್ವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ।

ಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಚಂಡೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತತ್ರ ಸ್ಥಾನೇ ತು ಸಂಸ್ಥಿತಂ ।
ಚಂಡೀಶ್ವರಂ ಮಹಾಲಿಂಗಂ ಸರ್ವಪಾತಕನಾಶನಂ ॥ ೧ ॥
ತತ್ರ ಶುಕ್ಲಚತುರ್ದಶ್ಯಾಂ ಕಾರ್ತಿಕೇ ಮಾಸಿ ಭಾಮಿನಿ ।
ಉಪವಾಸಪರೋ ಭೂತ್ವಾ ಯಃ ಕರೋತಿ ಪ್ರಜಾಗರಂ ।
ಸ ಯಾತಿ ಪರಮಂ ಸ್ಥಾನಂ ಯತ್ರ ದೇವೋ ಮಹೇಶ್ವರಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಚಂಡೀಶ್ವರಮಾಹಾತ್ಮ್ಯವರ್ಣನಂ ಚೇತಿ
ಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ॥

ಕನ್ನಡದ ಅನುವಾದ

ಚಂಡೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಬಳಿಕ ಮಹಾದೇವಿ! ಅಲ್ಲಿರುವ ಸಕಲ ಪಾಪಗಳನ್ನೂ ನೀಗಿಸುವ ಚಂಡೀಶ್ವರ ಮಹಾಲಿಂಗದೆಡೆಗೆ ಹೋಗಬೇಕು.

೨. ಅಲ್ಲಿ ಕಾರ್ತಿಕ ಶುಕ್ಲ ಚತುರ್ದಶಿಯ ದಿನ ಉಪವಾಸ ಮಾಡಿ ಜಾಗರಣೆಗೈದವನು ಮಹೇಶ್ವರನ ಸ್ಥಾನವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಚಂಡೀಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತನೆಯ ಅಧ್ಯಾಯವು ಮುಗಿದುದು

|| ಶ್ರೀಃ ||

ಏಕಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಆಶಾಪೂರವಿಘ್ನರಾಜಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ಆಶಾಪೂರಂ ತತೋ ಗಚ್ಛೇದ್ವಿಘ್ನರಾಜಮಕಲ್ಮಷಂ ।
ಶಶಿಭೂಷಣವಾಯವ್ಯೇ ಸಂಸ್ಥಿತಂ ವಿಘ್ನನಾಶನಂ ।
ಆಶಾಂ ಪೂರಯತೇ ಯಸ್ಮಾತ್ತೇನಾಶಾಪೂರಕಃ ಸ್ಮೃತಃ ॥ ೧ ॥
ಯತ್ರ ರಾಮೇಣ ದೇವೇಶಿ ಸೀತಯಾ ಲಕ್ಷ್ಮಣೇನ ಚ ।
ಸಮಾರಾಧ್ಯ ಚ ವಿಘ್ನೇಶಂ ಪ್ರಾಪ್ತಂ ಕಾಮಮಭೀಪ್ಸಿತಂ ॥ ೨ ॥
ಯತ್ರ ಚಂದ್ರಮಸಾ ದೇವಿ ಸಮಾರಾಧ್ಯ ಗಣಾಧಿಪಂ ।
ಲಬ್ಧಂ ತದ್ವಾಂಛಿತಂ ಪೂರ್ವಂ ಸರ್ವಕುಷ್ಠವಿನಾಶನಂ ॥ ೩ ॥
ಚತುರ್ಥ್ಯಾಂ ಶುಕ್ಲಪಕ್ಷೇ ಚ ಮಾಸಿ ಭಾದ್ರಪದೇ ತಥಾ ।
ತತ್ರ ಸಂಪೂಜ್ಯ ದೇವೇಶಂ ಮೋದಕೈರ್ಭೋಜಯೇದ್ದ್ವಿಜಾನ್ ॥ ೪ ॥

ಕನ್ನಡದ ಅನುವಾದ

ಆಶಾಪೂರವಿಘ್ನರಾಜಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಅನಂತರ ಶಶಿಭೂಷಣನ ವಾಯುವ್ಯ ದಿಕ್ಕಿನಲ್ಲಿರುವ ವಿಘ್ನಗಳನ್ನು ಪರಿಹರಿಸುವ ಆಶಾಪೂರವಿಘ್ನರಾಜನೆಡೆಗೆ ಹೋಗಬೇಕು. ಅವನು ಆಶೆಯನ್ನು ಪೂರ್ತಿ ಮಾಡುವುದರಿಂದ ಆಶಾಪೂರಕನೆಂದು ಪ್ರಸಿದ್ಧನಾಗಿರುವನು.

೨. ದೇವೇಶಿ ! ಇಲ್ಲಿ ಸೀತಾ, ರಾಮಲಕ್ಷ್ಮಣರು ವಿಘ್ನೇಶ್ವರನನ್ನು ಪೂಜಿಸಿ ಇಷ್ಟಾರ್ಥವನ್ನು ಪಡೆದಿರುವರು.

೩. ಇಲ್ಲಿಯೇ ಚಂದ್ರನು ಗಣೇಶನನ್ನು ಪೂಜಿಸಿ ಸಮಸ್ತ ಕುಷ್ಠನಾಶ ರೂಪವಾದ ಇಷ್ಟಾರ್ಥವನ್ನು ಪಡೆದಿರುವನು.

೪-೬. ಭಾದ್ರಪದ ಶುಕ್ಲ ಚತುರ್ಥೀ ದಿನ ವಿಘ್ನರಾಜನನ್ನು ಪೂಜಿಸಿ ಬ್ರಾಹ್ಮಣರಿಗೆ ಮೋದಕಗಳಿಂದ ಭೋಜನ ಮಾಡಿಸಬೇಕು. ಅದರಿಂದ ವಿಘ್ನರಾಜನ ಪ್ರಸಾದವನ್ನು ಪಡೆದು ಇಷ್ಟಾರ್ಥ ಸಿದ್ಧಿಯನ್ನು ಹೊಂದುವರು. ಮಹಾದೇವಿ ! ನಾನು ಈ

ವಾಂಛಿತಾಂ ಲಭತೇ ಸಿದ್ಧಿಂ ವಿಘ್ನರಾಜಪ್ರಸಾದತಃ ।
ಕ್ಷೇತ್ರಸ್ಯಾಸ್ಯ ಮಹಾದೇವಿ ರಕ್ಷಾರ್ಥಂ ತು ಮಯಾ ಪುರಾ ॥ ೫ ॥
ತತೋ ನಿಯುಕ್ತೋ ದೇವೇಶಿ ಯಾಯಿನಾಂ ವಿಘ್ನನಾಶನಃ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ
ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಆಶಾಪೂರವಿಘ್ನರಾಜಮಾಹಾತ್ಮ್ಯವರ್ಣನಂ ನಾಮ
॥ ಏಕಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಕ್ಷೇತ್ರವನ್ನು ರಕ್ಷಿಸುವುದಕ್ಕಾಗಿ ಪಾಪಿಗಳ ವಿಘ್ನಗಳನ್ನು ಪರಿಹರಿಸುವ ವಿಘ್ನರಾಜನನ್ನು ಸ್ಥಾಪಿಸಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಆಶಾಪೂರವಿಘ್ನರಾಜಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಚತ್ವಾರಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕಲಕುಂಡಾತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಯ ದಕ್ಷಿಣನೈರ್ಋತ್ಯೇ ನಾತಿದೂರೇ ವ್ಯವಸ್ಥಿತಂ ।
ಲಿಂಗಂ ಪಾಪಹರಂ ದೇವಿ ಸ್ವಯಂ ಸೋಮಪ್ರತಿಷ್ಠಿತಂ ॥ ೧ ॥
ತತ್ರೈವಾಮೃತಕುಂಡಂ ತು ಕಲಾಕುಂಡಂ ತು ತತ್ಸ್ಮೃತಂ ।
ತತ್ರ ಸ್ನಾತ್ವಾ ತು ಚಂದ್ರೇಶಂ ಯೋ ನರಃ ಪೂಜಯಿಷ್ಯತಿ · ॥ ೨ ॥
ಸ ತು ವರ್ಷಸಹಸ್ರಸ್ಯ ತಪಃಫಲಮವಾಪ್ಸ್ಯತಿ ।
ತತ್ರೈವ ಸಂಸ್ಥಿತಂ ದೇವಿ ತಡಾಗಂ ಚಂದ್ರನಿರ್ಮಿತಂ ॥ ೩ ॥
ಧನುಃಷೋಡಶವಿಸ್ತಾರಂ ಚಂದ್ರೇಶಾತ್ಪೂರ್ವಪಶ್ಚಿಮೇ ।
ತತ್ಪೂರ್ವಂ ತೇ ಸಮಾಖ್ಯಾತಂ ಮುಕ್ತಿದಾನಾದಿಪೂರ್ವಕಂ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಲಕುಂಡಾತೀರ್ಥಮಾಹಾತ್ಮ್ಯವರ್ಣನಂ ನಾಮ
॥ ಏಕವಿಂಶ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕಲಕುಂಡಾತೀರ್ಥಮಾಹಾತ್ಮ್ಯವರ್ಣನ

೧. ಆ ಆಶಾಪೂರವಿಘ್ನರಾಜನ ದಕ್ಷಿಣ ನೈಋತ್ಯದಲ್ಲಿ ಸಮೀಪದಲ್ಲಿಯೇ ಸೋಮನು ಪ್ರತಿಷ್ಠೆಮಾಡಿರುವ ಪಾಪವನ್ನು ಪರಿಹರಿಸುವ ಲಿಂಗವಿರುವುದು.

೨–೪. ಅಲ್ಲಿಯೇ ಕಲಕುಂಡವೆಂದು ಪ್ರಸಿದ್ಧವಾದ ಅಮೃತ ಕುಂಡವಿರುವುದು. ಅಲ್ಲಿ ಮಿಂದು ಚಂದ್ರೇಶ್ವರನನ್ನು ಪೂಜಿಸಿದ ಮನುಷ್ಯನು ಸಾವಿರ ವರ್ಷದ ಫಲವನ್ನು ಹೊಂದುವನು. ಆ ಚಂದ್ರೇಶ್ವರನ ಪೂರ್ವ ಪಶ್ಚಿಮದಲ್ಲಿ ಹದಿನಾರು ಬಿಲ್ಲಿನ ವಿಸ್ತೀರ್ಣವಾದ ಚಂದ್ರ ನಿರ್ಮಿತ ತಡಾಗವಿರುವುದು. ಅದರ ವಿಷಯವನ್ನು ನಾನು ನಿನಗೆ ಹಿಂದೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕಲಕುಂಡಾತೀರ್ಥಮಾಹಾತ್ಮ್ಯವರ್ಣನವೆಂಬ
ಮುನ್ನೂರನಲತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ತ್ರಿಚತ್ವಾರಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಕಪಿಲಾಷಷ್ಠೀವ್ರತವಿಧಾನಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕಪಿಲೇಶ್ವರಮುತ್ತಮಂ ।
ಶಶಿಭೂಷಣಪೂರ್ವೇಣ ಕೋಟಿತೀರ್ಥಾಚ್ಚ ಪಶ್ಚಿಮೇ ॥ ೧ ॥
ಜರದ್ಗವೇಶಾದ್ದಕ್ಷಿಣೇ ಸಮುದ್ರೋತ್ತರತಸ್ತಥಾ ।
ಏತದ್ಧಿ ಕಾಪಿಲಂ ಕ್ಷೇತ್ರಂ ನಾಪುಣ್ಯೈಃ ಪ್ರಾಪ್ಯತೇ ನರೈಃ ॥ ೨ ॥
ಕಪಿಲೇನ ಪುರಾ ದೇವಿ ಯತ್ರ ತಪ್ತಂ ತಪೋ ಮಹತ್ ।
ವರ್ಷಾಣಾಮಯುತಂ ಸಾಗ್ರಂ ಪ್ರತಿಷ್ಠಾಪ್ಯ ಮಹೇಶ್ವರಂ ॥ ೩ ॥
ಸಮಾಹೂತಾ ತತ್ರ ದೇವೀ ಕಪಿಲಧಾರಾ ಮಹಾನದೀ ।
ಸಮುದ್ರಮಧ್ಯೇ ಸಾದ್ಯಾಪಿ ಪುಣ್ಯವದ್ಭಿಃ ಪ್ರದೃಶ್ಯತೇ ॥ ೪ ॥
ತತ್ರ ಸ್ನಾತ್ವಾ ಮಹಾದೇವಿ ಕಪಿಲಾಷಷ್ಠ್ಯಾಂ ವಿಶೇಷತಃ ।
ಕಪಿಲಾಂ ದಾಪಯೇತ್ತತ್ರ ಗೋಕೋಟಿಫಲಭಾಗ್ಭವೇತ್ ॥ ೫ ॥

ಕನ್ನಡದ ಅನುವಾದ

ಕಪಿಲಾಷಷ್ಠೀವ್ರತವಿಧಾನಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಶಶಿಭೂಷಣನ ಪೂರ್ವದಲ್ಲಿಯೂ, ಕೋಟಿತೀರ್ಥದ ಪಶ್ಚಿಮದಲ್ಲಿಯೂ ಇರುವ ಕಪಿಲೇಶ್ವರನೆಡೆಗೆ ಹೋಗಬೇಕು. ಜರದ್ಗವೇಶನ ದಕ್ಷಿಣದಲ್ಲಿ ಸಮುದ್ರದ ಉತ್ತರದಲ್ಲಿರುವ ಕಾಪಿಲ ಕ್ಷೇತ್ರವನ್ನು ಪಾಪಿಗಳಾದ ಮನುಷ್ಯರು ಹೊಂದಲಾರರು.

೩–೪. ಇಲ್ಲಿ ಹಿಂದೆ ಕಪಿಲ ಮುನಿಯು ಮಹೇಶ್ವರನನ್ನು ಪ್ರತಿಷ್ಠೆಮಾಡಿ ಹತ್ತು ಸಾವಿರ ವರ್ಷಕಾಲ ಮಹಾ ತಪಸ್ಸನ್ನು ಮಾಡಿದನು. ಅವನು ಕರೆಯಿಸಿದ ಕಪಿಲ ಧಾರಾ ಮಹಾನದಿಯನ್ನು ಈಗಲೂ ಸಮುದ್ರ ಮಧ್ಯದಲ್ಲಿ ಪುಣ್ಯವಂತರು ನೋಡುತ್ತಾರೆ.

೫. ಮಹಾದೇವಿ ! ಮಾನವನು ಕಪಿಲಾ ಷಷ್ಠಿಯ ದಿನ ಅಲ್ಲಿ ಮಿಂದು ಕಪಿಲ ಧೇನುವನ್ನು ದಾನಮಾಡಿದರೆ ಕೋಟಿ ಗೋವುಗಳನ್ನು ದಾನ ಮಾಡಿದ ಫಲವು ಲಭಿಸುವುದು.

ಸರ್ವೇಷಾಂ ಚೈವ ಪಾಪಾನಾಂ ಪ್ರಾಯಶ್ಚಿತ್ತಮಿದಂ ಸ್ಮೃತಂ ।
ಕಪಿಲೇಶ್ವರಂ ತು ಸಂಪೂಜ್ಯ ಕನ್ಯಾಕೋಟಿಫಲಂ ಲಭೇತ್ ॥ ೬ ॥

ದೇವ್ಯುವಾಚ :—

ಆಶ್ಚರ್ಯಂ ಮಮ ದೇವೇಶ ಕಪಿಲಷಷ್ಠ್ಯಾ ಮಹೇಶ್ವರ ।
ವಿಧಾನಂ ಶ್ರೋತುಮಿಚ್ಛಾಮಿ ದಾನಮಂತ್ರಾದಿ ಪೂರ್ವಕಂ ॥ ೭ ॥

ಈಶ್ವರ ಉವಾಚ :—

ಜನ್ಮಜೀವಿತಮಧ್ಯೇ ತು ಯದ್ಯೇಕಾ ಲಭ್ಯತೇ ನರೈಃ ।
ಸಂಯೋಗಯುಕ್ತಾ ಸಾ ಷಷ್ಠೀ ತತ್ಕಿಂ ದೇವಿ ಬ್ರವೀಮ್ಯಹಂ ॥ ೮ ॥
ಪ್ರೌಷ್ಠಪದ್ಯಸಿತೇ ಪಕ್ಷೇ ಷಷ್ಠ್ಯಾಮಂಗಾರಕೋ ಯದಿ ।
ವ್ಯತೀಪಾತಶ್ಚ ರೋಹಿಣ್ಯಾಂ ಸಾ ಷಷ್ಠೀ ಕಪಿಲಾ ಸ್ಮೃತಾ ॥ ೯ ॥
ತತ್ರ ಕ್ಷೇತ್ರೇ ನರಃ ಸ್ನಾತ್ವಾ ಅಥವಾರ್ಕಸ್ಥಲೇ ಶುಭೇ ।
ಮೃದಾ ಶುಕ್ಲತಿಲೈಶ್ಚೈವ ಕಪಿಲಾಸಂಗಮೇ ಶುಭೇ ॥ ೧೦ ॥
ಕೃತದಾನಜಪಃ ಪಶ್ಚಾತ್ಸೂರ್ಯಾಯಾರ್ಘ್ಯಂ ನಿವೇದಯೇತ್ ।
ರಕ್ತಚಂದನತೋಯೇನ ಕರವೀರಯುತೇನ ಚ ।
ಕೃತ್ವಾರ್ಘಪಾತ್ರಂ ಶಿರಸಿ ಮಂತ್ರೇಣಾನೇನ ದಾಪಯೇತ್ ॥ ೧೧ ॥

---

೬. ಸಕಲ ಪಾಪಗಳಿಗೆ ಇದು ಪ್ರಾಯಶ್ಚಿತ್ತ ರೂಪವಾಗಿರುವುದು. ಕಪಿಲೇಶ್ವರನನ್ನು ಪೂಜಿಸಿದವನು ನೂರು ಕೋಟಿ ಕನ್ಯೆಯರನ್ನು ದಾನಮಾಡಿದ ಫಲವನ್ನು ಪಡೆಯುವನು.

೭. ದೇವಿಯು ಹೇಳುತ್ತಾಳೆ :—ಮಹೇಶ್ವರ ! ಕಪಿಲ ಷಷ್ಠಿಯ ಆಶ್ಚರ್ಯಕರವಾದ ದಾನ ಮಂತ್ರಾದಿ ವಿಧಿಯನ್ನು ಕೇಳಲು ಕೇಳಲು ಬಯಸುವೆನು.

೮. ಈಶ್ವರನು ಹೇಳುತ್ತಾನೆ :—ಮಾನವರಿಗೆ ಜೀವಿತ ಕಾಲದಲ್ಲಿ ಕಪಿಲಾ ಷಷ್ಠಿಯು ಲಭಿಸಿದರೆ ಅದರ ವಿಷಯವನ್ನು ಏನೆಂದು ಹೇಳಲಿ.

೯. ಭಾದ್ರಪದ ಕೃಷ್ಣಪಕ್ಷ ಷಷ್ಠೀದಿನ ಮಂಗಳವಾರ, ವ್ಯತೀಪಾತ, ರೋಹಿಣೀ ನಕ್ಷತ್ರಗಳು ಸೇರಿದರೆ ಅದು ಕಪಿಲಾಷಷ್ಠಿಯೆನ್ನಿಸಿಕೊಳ್ಳುವುದು,

೧೦–೧೧. ನರನು ಆ ಕ್ಷೇತ್ರದಲ್ಲಾಗಲಿ, ಅರ್ಕಸ್ಥಳದಲ್ಲಾಗಲಿ ಕಪಿಲಾಷಷ್ಠೀ ದಿನ ಮೃತ್ತಿಕೆ, ಬಿಳಿ ಎಳ್ಳು ಇವುಗಳಿಂದ ಮಿಂದು ಜಪಿಸಿ ಕರವೀರ ಪುಷ್ಪದಿಂದ ಸಹಿತವಾದ ರಕ್ತ ಚಂದನದ ಜಲವುಳ್ಳ ಅರ್ಘ್ಯಪಾತ್ರೆಯನ್ನು ತಲೆಯಲ್ಲಿ ಧರಿಸಿ ಈ ಮಂತ್ರದಿಂದ ಸೂರ್ಯನಿಗೆ ಅರ್ಘ್ಯವನ್ನೀಯಬೇಕು.

ನಮಸ್ತ್ರೈಲೋಕ್ಯನಾಥಾಯ ಉದ್ಭಾಸಿತಜಗತ್ತ್ರಯ ।
ವೇದರಶ್ಮೇ ನಮಸ್ತುಭ್ಯಂ ಗೃಹಾಣಾರ್ಘ್ಯಂ ನಮೋಽಸ್ತು ತೇ ॥ ೧೨ ॥
ಸೂರ್ಯಂ ಪ್ರದಕ್ಷಿಣೀಕೃತ್ಯ ಸಂಪೂಜ್ಯ ಕಪಿಲೇಶ್ವರಂ ।
ಉಪಲಿಪ್ತೇ ಶುಭೇ ದೇಶೇ ಪುಷ್ಪಾಕ್ಷತವಿಭೂಷಿತೇ ॥ ೧೩ ॥
ಸ್ಥಾಪಯೇದವ್ರಣಂ ಕುಂಭಂ ಚಂದನೋದಕಪೂರಿತಂ ।
ಪಂಚರತ್ನಸಮಾಯುಕ್ತಂ ದೂರ್ವಾಪುಷ್ಪಾಕ್ಷತಾನ್ವಿತಂ ॥ ೧೪ ॥
ರಕ್ತವಸ್ತ್ರಯುಗಛನ್ನಂ ತಾಮ್ರಪಾತ್ರೇಣ ಸಂಯುತಂ ।
ರಥೋ ರುಕ್ಮಫಲಸ್ಯೈವ ಏಕಚಿತ್ರವಿಚಿತ್ರಿತಃ ॥ ೧೫ ॥
ಸೌವರ್ಣಫಲಸಂಯುಕ್ತಾಃ ಮೂರ್ತಿಂ ಸೂರ್ಯಸ್ಯ ಕಾರಯೇತ್ ।
ಕುಂಭಸ್ಯೋಪರಿ ಸಂಸ್ಥಾಪ್ಯ ಗಂಧಪುಷ್ಪೈಃ ಸಮರ್ಚಯೇತ್ ॥ ೧೬ ॥
ಕಪಿಲೇಶ್ವರಸಾನ್ನಿಧ್ಯೇ ಮಂಡಪೇ ಹೋಮಸಂಸ್ಕೃತೇ ।
ಅದಿತ್ಯಂ ಪೂಜಯೇದ್ದೇವಂ ನಾಮಭಿಃ ಸ್ವೈರ್ಯಥೋದಿತೈಃ ॥ ೧೭ ॥
ಆದಿತ್ಯ ಭಾಸ್ಕರ ರವೇ ಭಾನೋ ಸ್ವಯಂ ದಿವಾಕರ ।
ಪ್ರಭಾಕರ ನಮಸ್ತುಭ್ಯಂ ಸಂಸಾರಾನ್ಮಾಂ ಸಮುದ್ಧರ ॥ ೧೮ ॥
ಭುಕ್ತಿಮುಕ್ತಿಪ್ರದೋ ಯಸ್ಮಾತ್ತಸ್ಮಾಚ್ಛಾಂತಿಂ ಪ್ರಯಚ್ಛ ನಃ ॥ ೧೯ ॥

---

೧೨. ಮೂರು ಲೋಕಗಳೊಡೆಯನೂ, ಮೂರು ಲೋಕಗಳನ್ನು ಪ್ರಕಾಶಗೊಳಿಸಿದವನೂ, ವೇದವೇ ಕಿರಣವಾಗುಳ್ಳವನೂ ಆದ ಸೂರ್ಯ ನಿನಗೆ ನಮಸ್ಕಾರವು. ಅರ್ಘ್ಯವನ್ನು ಸ್ವೀಕರಿಸು.

೧೩–೧೬. ಸೂರ್ಯನನ್ನು ಪ್ರದಕ್ಷಿಣೆಗೈದು ಕಪಿಲೇಶ್ವರನನ್ನು ಪೂಜಿಸಿ ಗೋಮಯದಿಂದ ಲಿಪ್ತವಾಗಿ ಪುಷ್ಪಾಕ್ಷತಗಳಿಂದ ಅಲಂಕಾರಗೊಂಡ ಸ್ಥಳದಲ್ಲಿ ಗಂಧೋದಕ ಪೂರ್ಣವೂ, ಪಂಚರತ್ನವುಳ್ಳದೂ, ಗರಿಕೆ, ಹೂವು, ಅಕ್ಷರಗಳುಳ್ಳದೂ, ಕೆಂಪು ವಸ್ತ್ರವನ್ನು ಹೊದ್ದಿಸಿರುವುದೂ ಆದ ತಾಮ್ರ ಕುಂಭವನ್ನು ರಥದಂತೆ ಸ್ಥಾಪಿಸಿ ಅದರ ಮೇಲೆ ಚಿನ್ನದ ಫಲದಿಂದ ಸಹಿತವಾದ ಸೂರ್ಯನ ಪ್ರತಿಮೆಯನ್ನಿಟ್ಟು ಗಂಧ ಪುಷ್ಪಗಳಿಂದ ಅರ್ಚಿಸಬೇಕು.

೧೭. ಕಪಿಲೇಶ್ವರನ ಹತ್ತಿರ ಹೋಮದಿಂದ ಸಂಸ್ಕಾರಗೊಂಡ ಮಂಡಪದಲ್ಲಿ ಈ ನಾಮಗಳಿಂದ ಭಾಸ್ಕರನನ್ನು ಪೂಜಿಸಬೇಕು.

೮. ಆದಿತ್ಯ, ಭಾಸ್ಕರ, ರವಿ, ಭಾನು, ದಿವಾಕರ, ಪ್ರಭಾಕರ, ನನ್ನನ್ನು ಸಂಸಾರದಿಂದ ಉದ್ಧರಿಸು.

೧೯. ನೀನು ಭುಕ್ತಿ ಮುಕ್ತಿಗಳನ್ನೀಯುವನಾದ್ದರಿಂದ ನಮಗೆ ಶಾಂತಿಯನ್ನು ಕೊಡು.

ಪ್ರಾರ್ಥನಾಮಂತ್ರಃ

ನಮೋ ನಮಸ್ತೇ ವರದ ಋಕ್ಸಾಮ ಯಜುಷಾಂ ಪತೇ ।
ನಮೋಽಸ್ತು ವಿಶ್ವರೂಪಾಯ ವಿಶ್ವಧಾಮ್ನೇ ನಮೋಽಸ್ತು ತೇ ॥ ೨೦ ॥
ಅಮೃತಂ ದೇವಿ ತೇ ಕ್ಷೀರಂ ಪವಿತ್ರಮಿಹ ಪುಷ್ಟಿದಂ ।
ತತ್ಪ್ರಸಾದಾತ್ಪ್ರಮುಚ್ಯಂತೇ ಮನುಜಾಃ ಸರ್ವಪಾತಕೈಃ ॥ ೨೧ ॥
ಬ್ರಹ್ಮಣೋತ್ಪಾದಿತೇ ದೇವಿ ವಹ್ನಿಕುಂಡಾನ್ಮಹಾಪ್ರಭೇ ।
ನಮಸ್ತೇ ಕಪಿಲೇ ಪುಣ್ಯೇ ಸರ್ವದೇವನಮಸ್ಕೃತೇ ॥ ೨೨ ॥
ಸರ್ವದೇವಮಯೇ ದೇವಿ ಸರ್ವತೀರ್ಥಮಯೇ ಶುಭೇ ।
ದಾತಾರಂ ಪೂಜಯಾನಂ ಮಾಂ ಬ್ರಹ್ಮಲೋಕಂ ನಯ ಸ್ವಯಂ ॥ ೨೩ ॥

ಪೂಜಾಮಂತ್ರಃ

ಏವಂ ಸಂಪೂಜ್ಯ ಕಪಿಲಾಂ ಕುಂಭಸ್ಥಂ ಚ ದಿವಾಕರಂ ।
ಬ್ರಾಹ್ಮಣೇ ವೇದವಿದುಷ ಉಭಯಂ ಪ್ರತಿಪಾದಯೇತ್ ॥ ೨೪ ॥
ವ್ಯಾಸಾಯ ಸೂರ್ಯಭಕ್ತಾಯ ಮಂತ್ರೇಣಾನೇನ ದಾಪಯೇತ್ ॥ ೨೫ ॥

---

೨೦. ಪ್ರಾರ್ಥನೆಯ ಮಂತ್ರ :—ವರವನ್ನೀಯುವವನೂ, ಋಕ್, ಸಾಮ, ಯಜುರ್ವೇದಗಳಿಗೆ ಒಡೆಯನೂ ಆದ ನಿನಗೆ ನಮಸ್ಕಾರವು. ವಿಶ್ವರೂಪನೂ, ಪ್ರಪಂಚಕ್ಕೆ ಆಶ್ರಯನೂ ಆದ ಓ ಭಾಸ್ಕರ ! ನಿನಗೆ ನಮಸ್ಕಾರವು.

೨೧. ದೇವಿ ! ನಿನ್ನ ಪವಿತ್ರವಾದ ಹಾಲು ಅಮೃತದಂತೆ ಪುಷ್ಟಿಕರವಾದುದು ನಿನ್ನ ಅನುಗ್ರಹದಿಂದ ಮನುಷ್ಯರು ಸಕಲ ಪಾಪಗಳಿಂದ ಮುಕ್ತರಾಗುವರು.

೨೨. ಬ್ರಹ್ಮನು ನಿನ್ನನ್ನು ವಹ್ನಿಕುಂಡದಿಂದ ಉಂಟುಮಾಡಿರುವನು. ಸಮಸ್ತ ದೇವತೆಗಳಿಂದ ವಂದಿತಳೂ, ಪುಣ್ಯಕರಳೂ ಆದ ಕಪಿಲೆಯೆ ! ನಿನಗೆ ನಮಸ್ಕಾರವು.

೨೩. ಸಕಲ ದೇವತಾಸ್ವರೂಪಳೂ, ಸಮಸ್ತ ತೀರ್ಥ ರೂಪಳೂ ಆದ ದೇವಿಯೆ! ದಾನಮಾಡುವವನೂ, ಪೂಜಿಸುವವನೂ, ಆದ ನನ್ನನ್ನು ಬ್ರಹ್ಮಲೋಕವನ್ನು ಹೊಂದಿಸು.

೨೪—೨೫. ಹೀಗೆ ಕಪಿಲೆಯನ್ನೂ, ಕುಂಭದಲ್ಲಿರುವ ಸೂರ್ಯನನ್ನೂ ವೇದವನ್ನರಿತ ವ್ಯಾಸರೂಪನೂ, ಸೂರ್ಯಭಕ್ತನೂ ಆದ ಬ್ರಾಹ್ಮಣನಿಗೆ ದಾನಮಾಡಬೇಕು.

ದಿವ್ಯಮೂರ್ತಿರ್ಜಗಚ್ಚಕ್ಷುರ್ದ್ವಾದಶಾತ್ಮಾ ದಿವಾಕರಃ ।
ಕಪಿಲಾಸಹಿತೋ ದೇವೋ ಮಮ ಮುಕ್ತಿಂ ಪ್ರಯಚ್ಛತು ॥ ೨೬ ॥
ಯಸ್ಮಾತ್ತ್ವಂ ಕಪಿಲೇ ಪುಣ್ಯಾ ಸರ್ವಲೋಕಸ್ಯ ಪಾವನೀ ।
ಪ್ರದತ್ತಾ ಸಹ ಸೂರ್ಯೇಣ ಮಮ ಮುಕ್ತಿಪ್ರದಾ ಭವ ॥ ೨೭ ॥
ಫಲೇನ ದಕ್ಷಿಣಾ ಕಾರ್ಯಾ ತದರ್ಧಾರ್ಧೇನ ವಾ ಪುನಃ ।
ಶಕ್ತಿತೋ ದಕ್ಷಿಣಾಯುಕ್ತಾಂ ತಾಂ ಧೇನುಂ ಪ್ರತಿಪಾದಯೇತ್ ॥ ೨೮ ॥
ಯೋಽನೇನ ವಿಧಿನಾ ಕುರ್ಯಾತ್ಷಷ್ಠೀಂ ಕಪಿಲಸಂಜ್ಞಿತಾಂ ।
ಸೋಽಶ್ವಮೇಧಸಹಸ್ರಸ್ಯ ಫಲಂ ಪ್ರಾಪ್ನೋತಿ ಮಾನವಃ ॥ ೨೯ ॥
ಯತ್ಫಲಂ ಸರ್ವತೀರ್ಥೇಷು ಸರ್ವದಾನೇಷು ಯತ್ಫಲಂ ।
ತತ್ಫಲಂ ಸರ್ವಮಾಪ್ನೋತಿ ಯಃ ಷಷ್ಠೀಂ ಕಪಿಲಾಂ ಚರೇತ್ ॥ ೩೦ ॥
ಕಪಿಲಾಕೋಟಿಸಹಸ್ರಾಣಿ ಕಪಿಲಾಕೋಟಿಶತಾನಿಚ ।
ಸೂರ್ಯಪರ್ವಣಿ ಯದ್ದತ್ವಾ ತತ್ಫಲಂ ಕೋಟಿಶೋ ಭವೇತ್ ॥ ೩೧ ॥
ಕೋಟಿಗೋರೋಮಸಂಖ್ಯಾನಿ ವರ್ಷಾಣಿ ವರವರ್ಣಿನಿ ।
ತಾವತ್ಸ ವಸತೇ ಸ್ವರ್ಗೇ ಯಃ ಷಷ್ಠೀಂ ಕಪಿಲಾಂ ಚರೇತ್ ॥ ೩೨ ॥

---

೨೬. ದಿವ್ಯ ಶರೀರನೂ, ಜಗತ್ತಿಗೆ ಕಣ್ಣೆನಿಸುತಿರುವವನೂ, ಹನ್ನೆರಡು ರೂಪವುಳ್ಳವನೂ, ಕಪಿಲಾಸಹಿತನೂ ಆದ ಸೂರ್ಯನು ನನಗೆ ಮುಕ್ತಿಯನ್ನೀಯಲಿ.

೨೭. ಕಪಿಲೆಯೆ ! ಪುಣ್ಯಕರಳೂ, ಸಕಲ ಲೋಕಗಳನ್ನು ಪವಿತ್ರಗೊಳಿಸುವವಳೂ ಆದ ನೀನು ಸೂರ್ಯನೊಡನೆ ದಾನಮಾಡಲ್ಪಟ್ಟವಳಾಗಿ ನನಗೆ ಮುಕ್ತಿಯನ್ನು ಕೊಡು.

೨೮. ಶಕ್ತ್ಯನುಸಾರವಾಗಿ ಒಂದು ಪಲ ಅಥವಾ ಅರ್ಧ ಪಲ ದಕ್ಷಿಣೆಯನ್ನಿಟ್ಟು ಧೇನುವನ್ನು ದಾನಮಾಡಬೇಕು.

೨೯. ಈ ಕ್ರಮದಿಂದ ಕಪಿಲಾ ಷಷ್ಠಿಯನ್ನು ಆಚರಿಸಿದವನು ಸಾವಿರ ಅಶ್ವಮೇಧದ ಫಲವನ್ನು ಪಡೆಯುವನು.

೩೦. ಕಪಿಲಾ ಷಷ್ಠಿಯನ್ನು ಆಚರಿಸಿದವನು ಸಕಲ ತೀರ್ಥ ಮತ್ತು ಸಕಲ ದಾನಗಳ ಫಲವನ್ನು ಪಡೆಯುವನು.

೩೧. ಸೂರ್ಯ ಪರ್ವಕಾಲದಲ್ಲಿ ಕಪಿಲಾ ಮತ್ತು ಭಾಸ್ಕರನನ್ನು ದಾನಮಾಡಿದವನು ಸಾವಿರದನೂರು ಕೋಟಿ ಕಪಿಲ ಗೋವುಗಳನ್ನು ದಾನ ಮಾಡಿದ ಫಲವನ್ನು ಪಡೆಯುವನು.

೩೨. ಕಪಿಲಾ ಷಷ್ಠಿಯನ್ನಾಚರಿಸಿದವನು ಕೋಟಿ ಗೋವುಗಳ ರೋಮ ಸಂಖ್ಯೆಯಷ್ಟು ವರ್ಷಕಾಲ ಸ್ವರ್ಗದಲ್ಲಿ ವಾಸಿಸುವನು.

ಜ್ಞಾನತೋಽಜ್ಞಾನತೋ ವಾಪಿ ಯತ್ಪಾಪಂ ಪೂರ್ವಸಂಚಿತಂ ।
ತತ್ಸರ್ವಂ ನಾಶಮಾಯಾತಿ ಇತ್ಯಾಹ ಕಪಿಲೋ ಮುನಿಃ ॥ ೩೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕಪಿಲಾಷಷ್ಠೀವ್ರತವಿಧಾನಮಾಹಾತ್ಮ್ಯವರ್ಣನಂ
ನಾಮ ತ್ರಿಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

---

೩೩. ಹಿಂದೆ ಜ್ಞಾನಾಜ್ಞಾನಗಳಿಂದ ಮಾಡಿದ ಪಾಪಗಳೆಲ್ಲ ನಾಶವಾಗುವುವೆಂದು ಕಪಿಲ ಮುನಿಯು ಹೇಳಿರುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕಪಿಲಾಷಷ್ಠೀವ್ರತವಿಧಾನಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ

ಜರದ್ಗವೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ಪಾಪಪ್ರಣಾಶನಂ ।
ಕಪಿಲೇಶ್ವರಸ್ಯೈಶಾನ್ಯಾಮುತ್ತರೇಣ ವ್ಯವಸ್ಥಿತಂ ॥ ೧ ॥
ಜರದ್ಗವೇಶ್ವರಂನಾಮ ಜರದ್ಗವಪ್ರತಿಷ್ಠಿತಂ ।
ಬ್ರಹ್ಮಹತ್ಯಾದಿ ಪಾಪಾನಾಂ ನಾಶನಂ ನಾತ್ರ ಸಂಶಯಃ ॥ ೨ ॥
ತತ್ರೈವ ಸಂಸ್ಥಿತಾ ದೇವಿ ದಿವ್ಯಾ ಅಂಶುಮತೀ ನದೀ ।
ತತ್ರ ಸ್ನಾತ್ವಾ ವಿಧಾನೇನ ಪಿಂಡದಾನಂ ತು ದಾಪಯೇತ್ ॥ ೩ ॥
ವರ್ಷಕೋಟಿಶತಂ ಸಾಗ್ರಂ ಪಿತೄಣಾಂ ತೃಪ್ತಿಮಾವಹೇತ್ ।
ವೃಷಭಸ್ತತ್ರ ದಾತವ್ಯೋ ಬ್ರಾಹ್ಮಣೇ ವೇದಪಾರಗೇ ॥ ೪ ॥
ತತಸ್ತು ಪೂಜಯೇದ್ದೇವಂ ಗಂಧಪುಷ್ಪೈರ್ಜರದ್ಗವಂ ।
ಪಂಚಾಮೃತರಸೇನೈವ ತಥಾ ಗುಗ್ಗುಲುಧೂಪನೈಃ ॥ ೫ ॥

ಕನ್ನಡದ ಅನುವಾದ

ಜರದ್ಗವೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಪಾಪವನ್ನು ಪರಿಹರಿಸುವವನೂ, ಕಪಿಲೇಶ್ವರನ ಈಶಾನ್ಯೋತ್ತರದಲ್ಲಿರುವವನೂ, ಜರದ್ಗವನಿಂದ ಪ್ರತಿಷ್ಠೆ ಮಾಡಲ್ಪಟ್ಟವನೂ ಆದ ಜರದ್ಗವೇಶ್ವರನೆಡೆಗೆ ಹೋಗಬೇಕು. ಅಲ್ಲಿ ನಿಶ್ಚಯವಾಗಿಯೂ ಬ್ರಹ್ಮಹತ್ಯಾದಿ ಪಾಪಗಳು ನಾಶವಾಗುವುವು.

೩–೪. ಅಲ್ಲಿಯೇ ದಿವ್ಯವಾದ ಅಂಶುಮತೀ ನದಿಯಿರುವುದು. ಅಲ್ಲಿ ವಿಧಿಯಿಂದ ಮಿಂದು ಪಿಂಡಪ್ರದಾನ ಮಾಡಿದರೆ ಪಿತೃಗಳು ನೂರುಕೋಟಿ ವರ್ಷಗಳ ಕಾಲ ತೃಪ್ತರಾಗಿರುವರು. ಅಲ್ಲಿ ವೇದ ಪಾರಂಗತನಾದ ಬ್ರಾಹ್ಮಣನಿಗೆ ವೃಷಭವನ್ನು ದಾನಮಾಡಬೇಕು.

೫–೬. ಬಳಿಕ ಗಂಧ ಪುಷ್ಪಗಳಿಂದಲೂ, ಪಂಚಾಮೃತದಿಂದಲೂ, ಗುಗ್ಗುಲು ಧೂಪದಿಂದಲೂ, ಸ್ತೋತ್ರ, ಸಾಷ್ಟಾಂಗ ನಮಸ್ಕಾರಗಳಿಂದಲೂ, ಪ್ರತಿದಿನ ಪ್ರದಕ್ಷಿಣೆ

ಸ್ತುತಿದಂಡನಮಸ್ಕಾರೈಃ ಪ್ರದಕ್ಷಿಣೈರಹರ್ನಿಶಂ ।
ಬ್ರಾಹ್ಮಣಾನ್ಭೋಜಯೇತ್ತತ್ರ ಭಕ್ಷ್ಯಭೋಜ್ಯೈಃ ಪೃಥಗ್ವಿಧೈಃ ॥
ಏಕೇನ ಭೋಜಿತೇನೈವ ಕೋಟಿರ್ಭವತಿ ಭೋಜಿತಾ ॥ ೬ ॥
ಕೃತೇ ಸಿದ್ಧೋದಕಂ ನಾಮ ತತ್ತೀರ್ಥಂ ಪರಿಕೀರ್ತಿತಂ ।
ಜರದ್ಗವೇಶ್ವರಂ ತೀರ್ಥಂ ಕಲೌ ತು ಪರಿಕೀರ್ತ್ಯತೇ ॥ ೭ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಜರದ್ಗವೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಸ್ತ್ರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಗಳಿಂದಲೂ ಜರದ್ಗವೇಶ್ವರನನ್ನು ಪೂಜಿಸಬೇಕು. ನಾನಾ ಬಗೆಯ ಭಕ್ಷ್ಯ ಭೋಜ್ಯಗಳಿಂದ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಅಲ್ಲಿ ಒಬ್ಬನಿಗೆ ಭೋಜನ ಮಾಡಿಸಿದರೆ ಕೋಟಿ ಮಂದಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದಂತಾಗುವುದು.

೭. ಆ ತೀರ್ಥವು ಕೃತಯುಗದಲ್ಲಿ ಸಿದ್ಧೋದಕವೆಂದೂ, ಕಲಿಯುಗದಲ್ಲಿ ಜರದ್ಗವೇಶ್ವರವೆಂದೂ ಹೇಳಿಸಿಕೊಳ್ಳುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಜರದ್ಗೇಶ್ವರಮಾಹಾತ್ಮ್ಯ ವರ್ಣನವೆಂಬ
ಮುನ್ನೂರನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ನಲೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ವೈ ಹಾಟಕೇಶ್ವರಂ ।
ಜರದ್ಗವಾತ್ಪೂರ್ವಭಾಗೇ ಧನುಷಾಂ ಷಷ್ಟಿಭಿಸ್ತ್ರಿಭಿಃ ॥ ೧ ॥
ನಾಮ್ನಾ ನಲೇಶ್ವರಂ ದೇವಿ ಸ್ಥಾಪಿತಂ ತು ನಲೇನ ವೈ ॥
ದಮಯಂತೀಯುತೇನೈವ ಜ್ಞಾತ್ವಾ ಕ್ಷೇತ್ರಂ ತದುತ್ತಮಂ ॥ ೨ ॥
ತಂ ದೃಷ್ಟ್ವಾ ಮಾನವೋ ದೇವಿ ಪೂಜಯಿತ್ವಾ ವಿಧಾನತಃ ।
ಕಲಿಭಿರ್ಮುಚ್ಯತೇ ಜಂತುರ್ದ್ಯೂತೇ ಚ ವಿಜಯೀ ಭವೇತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಲೇಶ್ವರಮಾಹಾತ್ಮ್ಯವರ್ಣನಂನಾಮ
॥ ಪಂಚಚತ್ವಾರಿಂಶತ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ನಲೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಜರದ್ಗವನ ಪೂರ್ವ ಭಾಗದಲ್ಲಿ ಅರುವತ್ತು ಬಿಲ್ಲುಗಳ ದೂರದಲ್ಲಿರುವ ಹಾಟಕೇಶ್ವರ ಲಿಂಗದೆಡೆಗೆ ಹೋಗಬೇಕು.

೨. ನಳನು ದಮಯಂತಿಯೊಡನೆ ಅದು ಉತ್ತಮ ಕ್ಷೇತ್ರವೆಂದರಿತು ಅಲ್ಲಿ ನಳೇಶ್ವರನನ್ನು ಸ್ಥಾಪಿಸಿರುವನು.

೩. ದೇವಿ ! ಮಾನವನು ಅವನನ್ನು ನೋಡಿ ವಿಧಿಯಿಂದ ಪೂಜಿಸಿದರೆ ಕಲಿಮುಕ್ತನಾಗಿ ಜೂಜಿನಲ್ಲಿ ಜಯಶಾಲಿಯಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಲೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್ಚತ್ವಾರಿಂದುತ್ತರತ್ರಿಶತತಮೋಽಧ್ಯಾಯಃ

ಕರ್ಕೋಟಕಾರ್ಕಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದಾಗ್ನೇಯದಿಗ್ಭಾಗೇ ಸ್ಥಿತಃ ಕರ್ಕೋಟಕೋ ರವಿಃ ।
ಪೂರ್ವಕಲ್ಪೇ ಮಹಾದೇವಿ ಸ್ಮೃತಃ ಕರ್ಕೋಟಕಾನ್ವಿತಃ ॥ ೧ ॥
ತಸ್ಯ ದರ್ಶನಮಾತ್ರೇಣ ಪ್ರೀತಾಃ ಸ್ಯುಃ ಸರ್ವದೇವತಾಃ ।
ಸಪ್ತಮ್ಯಾಂ ರವಿವಾರೇಣ ಧೂಪಗಂಧಾನುಲೇಪನೈಃ ।
ಪೂಜಯೇದ್ಯೋ ವಿಧಾನೇನ ಮುಚ್ಯತೇ ಸರ್ವಕಿಲ್ಬಿಷೈಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕರ್ಕೋಟಕಾರ್ಕಮಾಹಾತ್ಮ್ಯವರ್ಣನಂನಾಮ
। ಷಟ್ಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಕರ್ಕೋಟಕಾರ್ಕಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಆ ನಲೇಶ್ವರನ ಆಗ್ನೇಯ ದಿಕ್ಕಿನಲ್ಲಿ ಹಿಂದಿನ ಕಲ್ಪದಲ್ಲಿ ಕರ್ಕೋಟಕನಿಂದ ಸಹಿತನಾದ ಕರ್ಕೋಟಕ ರವಿಯು ಇರುವನು.

೨. ಅವನ ದರ್ಶನ ಮಾತ್ರದಿಂದ ಸಕಲ ದೇವತೆಗಳೂ ತೃಪ್ತಿಗೊಳ್ಳುವರು. ಸಪ್ತಮೀ ಭಾನುವಾರದ ದಿನ ಅವನನ್ನು ಧೂಪ, ಗಂಧಾನುಲೇಪನಗಳಿಂದ ವಿಧಿಯಂತೆ ಪೂಜಿಸಿದ ಮಾನವನು ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕರ್ಕೋಟಕಾರ್ಕಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್‌ಚತ್ವಾರಿಂಶತ್ಯುತ್ತರತ್ರಿಶತತಮೋಽಧ್ಯಾಯಃ

ಹಾಟಕೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಲಿಂಗಂ ವೈ ಹಾಟಕೇಶ್ವರಂ ।
ನಲೇಶ್ವರಾತ್ಪೂರ್ವಭಾಗೇ ಶತಧನ್ವಂತರದ್ವಯೇ ॥ ೧ ॥
ಆಗಸ್ತ್ಯಮ್ರವನಂ ನಾಮ ತತ್ರ ಸ್ಥಾನೇ ತು ಸಂಸ್ಥಿತಂ ।
ಚಿಂತಾಮಣೇಸ್ತು ಪೂರ್ವೇಣ ಈಶಾನೇ ತ್ರಿಶತಂ ಧನುಃ ।
ತತ್ರ ಪೂರ್ವಂ ತಪಸ್ತಪ್ತಮಗಸ್ತ್ಯೇನ ಮಹಾತ್ಮನಾ ॥ ೨ ॥

ದೇವ್ಯುವಾಚ :—

ಕಸ್ಮಿನ್ಕಾಲೇ ಮಹಾದೇವ ಸರ್ವಂ ವಿಸ್ತರತೋ ವದ ॥ ೩ ॥

ಈಶ್ವರ ಉವಾಚ :—

ಪುರಾ ದೈತ್ಯಗಣಾ ರೌದ್ರಾ ಬಭೂವುರ್ವರವರ್ಣಿನಿ ।
ಕಾಲಕೇಯಾ ಇತಿ ಖ್ಯಾತಾಸ್ತ್ರೈಲೋಕ್ಯೋಚ್ಛೇದಕಾರಕಾಃ ॥ ೪ ॥

ಕನ್ನಡದ ಅನುವಾದ

ಹಾಟಕೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ನಳೇಶ್ವರನ ಪೂರ್ವಭಾಗದಲ್ಲಿ ನೂರು ಬಿಲ್ಲುಗಳ ದೂರದಲ್ಲಿರುವ ಹಾಟಕೇಶ್ವರನೆಡೆಗೆ ಹೋಗಬೇಕು.

೨. ಅಲ್ಲಿ ಚಿಂತಾಮಣಿಯ ಪೂರ್ವದಲ್ಲಿ ಮುನ್ನೂರು ಬಿಲ್ಲುಗಳ ದೂರದಲ್ಲಿ ಅಗಸ್ತ್ಯಮ್ರ ವನವಿರುವುದು. ಅಲ್ಲಿ ಹಿಂದೆ ಅಗಸ್ತ್ಯ ಮುನಿಯು ತಪಸ್ಸನ್ನು ಮಾಡಿರುವನು.

೩. ದೇವಿಯು ಹೇಳುತ್ತಾಳೆ :—ಮಹಾದೇವ ! ಆ ಮುನಿಯು ಯಾವಾಗ ತಪಸ್ಸನ್ನು ಮಾಡಿದನು ? ಅದನ್ನೆಲ್ಲ ವಿಸ್ತಾರವಾಗಿ ಹೇಳು.

೪. ಈಶ್ವನು ಹೇಳುತ್ತಾನೆ :—ಪ್ರಿಯಳೆ ! ಹಿಂದೆ ಭಯಂಕರರೂ, ಮೂರು ಲೋಕಗಳನ್ನು ನಾಶಗೊಳಿಸುವವರೂ ಆದ ಕಾಲಕೇಯರೆಂಬ ದೈತ್ಯರಿದ್ದರು.

ಅಥ ತೇ ನಿಹತಾಃ ಸರ್ವೇ ವಿಷ್ಣುನಾ ಪ್ರಭವಿಷ್ಣುನಾ ।
ದೈತ್ಯಸೂದನನಾಮ್ನಾ ತು ಪ್ರಭಾಸಕ್ಷೇತ್ರವಾಸಿನಾ ॥ ೫ ॥
ಕೃತ್ವಾ ವ್ಯಾಘ್ರಸ್ಯ ರೂಪಂ ತು ನಾಮ್ನಾ ಚಕ್ರಮುಖೀತಿ ಚ ।
ಹತಾ ವೈ ತೇನ ರೂಪೇಣ ತತೋಽಭೂದ್ದೈತ್ಯಸೂದನಃ ॥ ೬ ॥
ಹತಶೇಷಾಃ ಸಮುದ್ರಾಂತೇ ಪ್ರವಿಷ್ಟಾ ಭಯವಿಹ್ವಲಾಃ ।
ತತಸ್ತೇ ಮಂತ್ರಯಾಮಾಸುಃ ಪೀಡ್ಯಂತೇ ದೇವತಾಃ ಕಥಂ ॥ ೭ ॥
ಹನ್ಯಂತಾಂ ಧರ್ಮಿಣೋ ಯೇಽತ್ರ ವಿದ್ಯಂತೇ ಧರಣೀತಲೇ ।
ತಪಃಸ್ವಾಧ್ಯಾಯನಿರತಾ ಯಜ್ಞದಾನರತಾಶ್ಚ ಯೇ ॥ ೮ ॥
ಅಥ ತೇ ಸಮಯಂ ಕೃತ್ವಾ ರಾತ್ರೌ ನಿಷ್ಕ್ರಮ್ಯ ಸಾಗರಾತ್ ।
ನಿರ್ಜಘ್ನುಸ್ತಾಪಸಾಂಸ್ತತ್ರ ಯಜ್ಞದಾನರತಾನ್ಪ್ರಿಯೇ ॥ ೯ ॥
ಪ್ರಭಾಸೇ ತು ಮಹಾದೇವಿ ತತ್ರ ದ್ವಾದಶಯೋಜನೇ ।
ವಸಿಷ್ಠಸ್ಯಾಶ್ರಮೇ ತತ್ರ ಮಹರ್ಷೀಣಾಂ ಮಹಾತ್ಮನಾ ॥ ೧೦ ॥
ಭಕ್ಷಿತಾನಿ ಸಹಸ್ರಾಣಿ ಪಂಚ ಸಪ್ತ ಚ ತಾಪಸಾನ್ ।
ಶತಾನಿ ಪಂಚ ರೈಭ್ಯಸ್ಯ ವಿಶ್ವಾಮಿತ್ರಸ್ಯ ಷೋಡಶ ॥ ೧೧ ॥

೫-೬. ಅವರನ್ನು ಪ್ರಭಾಸ ಕ್ಷೇತ್ರವಾಸಿಯಾದ ವಿಷ್ಣುವು ವ್ಯಾಘ್ರ ರೂಪವನ್ನು ಧರಿಸಿ ಚಕ್ರಮುಖಿಯೆಂಬ ಹೆಸರಿನಿಂದ ಪ್ರಸಿದ್ಧನಾಗಿ ಕೊಂದನು. ಅದರಿಂದವನು ದೈತ್ಯಸೂದನನೆಂದು ಪ್ರಸಿದ್ಧನಾದನು.

೭. ಮೃತರಾಗಿ ಉಳಿದ ದೈತ್ಯರು ಭಯಗೊಂಡು ಸಮುದ್ರವನ್ನು ಪ್ರವೇಶಿಸಿ "ನಾವು ದೇವತೆಗಳನ್ನು ಪೀಡಿಸುವುದು ಹೇಗೆ ?" ಎಂದು ಆಲೋಚಿಸಿದರು.

೮. "ಭೂಮಿಯಲ್ಲಿ ತಪಸ್ಸು ಮತ್ತು ವೇದಾಧ್ಯಯನಗಳಲ್ಲಿ ಆಸಕ್ತರೂ, ಯಜ್ಞ ದಾನಗಳಲ್ಲಿ ನಿರತರೂ ಆದ ಧರ್ಮಿಷ್ಠರನ್ನು ಕೊಲ್ಲಬೇಕು".

೯. ಅನಂತರ ಅವರು ಸಂಕೇತವನ್ನು ಮಾಡಿಕೊಂಡು ರಾತ್ರಿ ಸಮುದ್ರದಿಂದ ಹೊರಟು ಯಜ್ಞ, ದಾನಗಳಲ್ಲಿ ಆಸಕ್ತರಾದ ಮುನಿಗಳನ್ನು ಕೊಂದರು.

೧೦-೧೨. ಮಹಾದೇವಿ ! ಅವರು ಹನ್ನೆರಡು ಗಾವುದ ವಿಸ್ತೀರ್ಣವಾದ ಪ್ರಭಾಸ ಕ್ಷೇತ್ರದಲ್ಲಿ ವಸಿಷ್ಠನ ಆಶ್ರಮದಲ್ಲಿರುವ ಮಹಾತ್ಮರಾದ ಹನ್ನೆರಡು ಸಾವಿರ ಮಂದಿ ಮುನಿಗಳನ್ನೂ, ರೈಭ್ಯನ ಆಶ್ರಮದಲ್ಲಿ ಐನೂರುಮಂದಿಗಳನ್ನೂ, ವಿಶ್ವಾಮಿತ್ರನ ಆಶ್ರಮದಲ್ಲಿ ಸಾವಿರದನಾನೂರು ಮಂದಿಗಳನ್ನೂ, ಚ್ಯವನನ ಆಶ್ರಮದಲ್ಲಿ ಏಳುನೂರು ಮಂದಿ

ಚ್ಯವನಸ್ಯ ಚ ಸಪ್ತೈವ ಜಾಬಾಲೇರ್ದ್ವಿಶತಂ ಮುನೇಃ ।
ವಾಲಖಿಲ್ಯಾಶ್ರಮೇ ಪುಣ್ಯೇ ಷಟ್ಛತಾನಿ ದುರಾತ್ಮಭಿಃ ॥ ೧೨ ॥
ಯತ್ರ ಕ್ವಚಿದ್ಭವೇದ್ಯಜ್ಞಸ್ತತ್ರ ಗತ್ವಾ ನಿಶಾಗಮೇ ।
ಯಜ್ಞದಾನಸಮಾಯುಕ್ತಾನೃತ್ವಿಜೋ ಭಕ್ಷಯಂತಿ ಚ ॥ ೧೩ ॥
ತತೋ ಭಯಾಕುಲಾಃ ಸರ್ವೇ ಬಭೂವುರ್ಜಗತೀತಲೇ ।
ನ ಚ ಕಶ್ಚಿದ್ವಿಜಾನಾತಿ ದೈತ್ಯಾನಾಂ ತು ವಿಚೇಷ್ಟಿತಂ ॥ ೧೪ ॥
ರಾತ್ರೌ ಸ್ವಪಂತಿ ಮುನಯಃ ಸುಖಶಯ್ಯಾಗತಾಶ್ಚ ಯೇ ।
ಪ್ರಭಾತೇ ತ್ವಧ್ವರೇ ತೇಷಾಮಸ್ಥಿಸಂಘಶ್ಚ ಕೇವಲಂ ॥ ೧೫ ॥
ತತೋ ಧರ್ಮಕ್ರಿಯಾಸ್ತ್ಯಕ್ತ್ವಾ ಭೂತಲೇ ಸರ್ವಮಾನವೈಃ ।
ನಿಃಸ್ವಾಧ್ಯಾಯವಷಟ್ಕಾರಂ ಭೂತಲಂ ಸಮಪದ್ಯತ ॥ ೧೬ ॥
ಅಥಾನ್ಯೇ ತಾಪಸಾ ರಾತ್ರೌ ಸಂಯುತಾಶ್ಚ ಧೃತಾಯುಧಾಃ ।
ಅಥೋಚ್ಛೇದಂ ಗತೇ ಧರ್ಮೇ ಪೀಡಿತಾಸ್ತ್ರಿದಿವಾಕಸಃ ॥ ೧೭ ॥
ಕಿಮೇತದಿತಿ ಜಲ್ಪಂತೋ ಬ್ರಹ್ಮಾಣಂ ಶರಣಂ ಗತಾಃ ।
ಭಗವಂಸ್ತಾಪಸಾಃ ಸರ್ವೇ ತಥಾ ಯೇ ಜ್ಞಾನಶೀಲಿನಃ ॥ ೧೮ ॥

ಗಳನ್ನೂ, ಜಾಬಾಲಮುನಿಯ ಆಶ್ರಮದಲ್ಲಿ ಇನ್ನೂರು ಮಂದಿಗಳನ್ನೂ, ಪುಣ್ಯಕರವಾದ ವಾಲಖಿಲ್ಯಾಶ್ರಮದಲ್ಲಿ ಆರನೂರು ಮಂದಿ ಮುನಿಗಳನ್ನೂ ಕೊಂದರು.

೧೩. ರಾತ್ರಿಯಾಗಲು ಯಜ್ಞವು ನಡೆಯುತ್ತಿರುವ ಸ್ಥಳಕ್ಕೆ ಹೋಗಿ ಯಜ್ಞ, ದಾನಗಳಲ್ಲಿ ಆಸಕ್ತರಾದ ಋತ್ವಿಜರನ್ನು ತಿನ್ನುವರು.

೧೪. ತರುವಾಯ ಪ್ರಪಂಚದ ಜನರೆಲ್ಲ ಭಯಗೊಂಡರು. ಅವರ ಒಬ್ಬನೂ ದೈತ್ಯರ ಕಾರ್ಯವನ್ನರಿಯಲಿಲ್ಲ.

೧೫. ರಾತ್ರಿಯಲ್ಲಿ ಸುಖಶಯ್ಯೆಯಲ್ಲಿ ಮಲಗಿರುರ ಮುನಿಗಳ ಮೂಳೆಗಳು ಬೆಳಿಗ್ಗೆ ಯಜ್ಞಶಾಲೆಯಲ್ಲಿ ಕಾಣುತ್ತಿದ್ದುವು.

೧೬. ಅನಂತರ ಸಕಲ ಮಾನವರೂ ಧರ್ಮಕಾರ್ಯಗಳನ್ನೂ ತ್ಯಜಿಸಿದರು. ಪ್ರಪಂಚದಲ್ಲಿ ವೇದಾಧ್ಯಯನ ವಷಟ್ಕಾರಗಳೇ ಇರಲಿಲ್ಲ.

೧೭–೧೮. ತರುವಾಯ ಧರ್ಮವು ಹಾಳಾಗಲು ಇತರ ಮುನಿಗಳು ಆಯುಧಗಳನ್ನು ಹಿಡಿದು ಪೀಡಿತರಾದ ದೇವತೆಗಳೊಡನೆ ಇದೇನೆಂದು ಮಾತಾಡುತ್ತ ಬ್ರಹ್ಮನನ್ನು ಮರೆಹೊಕ್ಕು ಇಂತೆಂದರು: "ಪೂಜ್ಯನೆ ! ಮುನಿಗಳೂ, ಜ್ಞಾನಿಗಳೂ ರಾತ್ರಿಯಲ್ಲಿ

ಭಕ್ಷ್ಯಂತೇ ಕೇನಚಿದ್ರಾತ್ರೌ ಮೃತ್ಯುಮೇವ ಪ್ರಯಾಂತಿ ಚ ।
ನಷ್ಟಧರ್ಮಕ್ರಿಯಾಃ ಸರ್ವೇ ಭೂತಲೇ ಪ್ರಪಿತಾಮಹ ॥ ೧೯ ॥
ಯೋ ಧರ್ಮಮಾಚರೇದಹ್ನಿ ಸ ರಾತ್ರೌ ಮೃತ್ಯುಮೇತಿ ಚ ।
ನ ಸ್ವಾಧ್ಯಾಯವಷಟ್ಕಾರಂ ಸಮಸ್ತೇ ಭೂತಲೇ ವಿಭೋ । ॥ ೨೦ ॥
ಧರ್ಮಾಭಾವಾದ್ವಯಂ ಸರ್ವೇ ಸಂದೇಹಂ ಪರಮಂ ಗತಾಃ ।
ತೇಷಾಂ ತದ್ವಚನಂ ಶ್ರುತ್ವಾ ಧ್ಯಾತ್ವಾ ದೇವಃ ಪಿತಾಮಹಃ ।
ಅಬ್ರವೀತ್ತ್ರಿದಶಾನ್ಸರ್ವಾನ್ಸಂದೇಹಂ ಪರಮಂ ಗತಾನ್ ॥ ೨೧ ॥
ಕಾಲೇಯಾ ಇತಿ ವಿಖ್ಯಾತಾ ದಾನವಾ ರೌದ್ರಕಾರಿಣಃ ।
ತೇ ಸಮುದ್ರಂ ಸಮಾಸಾದ್ಯ ತಾಪಸಾನ್ಭಕ್ಷಯಂತಿ ಚ ॥ ೨೨ ॥
ಯುಷ್ಮಾಕಂ ಚ ವಿನಾಶಾಯ ತೇನ ಶಕ್ಯಾ ನಿಷೂದಿತುಂ ।
ಯತಧ್ವಮೇಷಾಂ ನಾಶಾಯ ನೋ ಚೇನ್ನಾಶೋ ಭವಿಷ್ಯತಿ ॥ ೨೩ ॥
ವ್ರಜಧ್ವಂ ಭೂತಲೇ ಶೀಘ್ರಮಗಸ್ತ್ಯೋ ಯತ್ರ ತಿಷ್ಠತಿ ।
ವ್ರತಚರ್ಯಾರತೋ ನಿತ್ಯಂ ಪ್ರಭಾಸೇ ಕ್ಷೇತ್ರ ಉತ್ತಮೇ ॥ ೨೪ ॥
ಸ ಶಕ್ತಃ ಸಾಗರಂ ಪಾತುಂ ಮಿತ್ರಾವರುಣಸಂಭವಃ ।
ಪ್ರಸಾದ್ಯಶ್ಚ ಸ ಯುಷ್ಮಾಭಿಃ ಸಮುದ್ರಂ ಪಿಬ ಸತ್ತಮ ॥ ೨೫ ॥

ಯಾರಿಂದಲೋ ಭಕ್ಷಿಸಲ್ಪಟ್ಟು ಮೃತರಾಗುತ್ತಿದ್ದಾರೆ. ಪಿತಾಮಹ ! ಭೂಮಿಯಲ್ಲೆಲ್ಲರೂ ಧರ್ಮಕ್ರಿಯಾಭ್ರಷ್ಟರಾಗಿದ್ದಾರೆ.

೨೦. ಹಗಲು ಧರ್ಮವನ್ನಾಚರಿಸುವವನು ರಾತ್ರಿ ಮೃತನಾಗುವನು. ಸಕಲ ಪ್ರಪಂಚದಲ್ಲಿ ವೇದಾಧ್ಯಯನ ವಷಟ್ಕಾರಗಳು ಮಾಯವಾದುವು.

೨೧. ಧರ್ಮವಿಲ್ಲದ್ದರಿಂದ ನಾವೆಲ್ಲರೂ ಅತ್ಯಂತ ಸಂದೇಹವನ್ನು ಹೊಂದಿದ್ದೇವೆ. ಬ್ರಹ್ಮನು ಅವರ ನುಡಿಯನ್ನು ಕೇಳಿ ಆಲೋಚಿಸಿ ಸಂದೇಹವನ್ನು ಹೊಂದಿದ ಆ ದೇವತೆಗಳನ್ನು ಕುರಿತು ಹೀಗೆಂದನು.

೨೨. "ಭಯಂಕರ ಕಾರ್ಯ ನಿರತರಾದ ಕಾಲಕೇಯರೆಂಬ ದಾನವರು ಸಮುದ್ರವನ್ನಾಶ್ರಯಿಸಿ ಮುನಿಗಳನ್ನು ಭಕ್ಷಿಸುತ್ತಿರುವರು.

೨೩. ನಿಮ್ಮನ್ನು ನಾಶಗೊಳಿಸುವ ಅವರನ್ನು ಕೊಲ್ಲಲು ಸಾಧ್ಯವಿಲ್ಲ. ಇವರ ನಾಶಕ್ಕಾಗಿ ಪ್ರಯತ್ನಿಸಿರಿ. ಇಲ್ಲದಿದ್ದರೆ ನೀವು ನಾಶಗೊಳ್ಳುವಿರಿ.

೨೪. ಶೀಘ್ರವಾಗಿ ಭೂಮಿಗೆ ತೆರಳಿರಿ. ಅಲ್ಲಿರುವ ಪ್ರಭಾಸ ಕ್ಷೇತ್ರದಲ್ಲಿ ವ್ರತಾನುಷ್ಠಾನ ನಿರತನಾದ ಅಗಸ್ತ್ಯ ಮುನಿಯಿರುವನು.

೨೫. ಮಿತ್ರಾವರುಣನಿಂದ ಜನಿಸಿದ ಆ ಅಗಸ್ತ್ಯನು ಸಮುದ್ರವನ್ನು ಕುಡಿಯಲು ಶಕ್ತನು. ನೀವು ಅವನನ್ನು ಸಂತೋಷಗೊಳಿಸಿ ಸಮುದ್ರವನ್ನು ಕುಡಿಯುವಂತೆ ಬೇಡಿಕೊಳ್ಳಿರಿ.

ತತಸ್ತಥಾಕೃತೇ ತೇನ ತೇ ಸರ್ವೇ ದಾನವಾಧಮಾಃ ।
ವಧ್ಯಾ ಯುಷ್ಮಾಕಂ ಭವಿಷ್ಯಂತಿ ಏವಂ ಚ ತ್ರಿದಿವೇಶ್ವರಾಃ ॥ ೨೬ ॥

ಈಶ್ವರ ಉವಾಚ :—

ಏವಮುಕ್ತಾಃ ಸುರಾಃ ಸರ್ವೇ ಬ್ರಹ್ಮಣಾ ಲೋಕಕಾರಿಣಾ ।
ಪ್ರಭಾಸಂ ಕ್ಷೇತ್ರಮಾಸಾದ್ಯ ಅಗಸ್ತ್ಯಂ ಶರಣಂ ಗತಾಃ ॥ ೨೭ ॥

ದೇವಾ ಊಚುಃ :—

ರಕ್ಷ ರಕ್ಷ ದ್ವಿಜಶ್ರೇಷ್ಠ ತ್ರೈಲೋಕ್ಯಂ ಸಂಶಯಂ ಗತಂ ।
ಕಾಲಕೇಯೈಃ ಪ್ರತಿಧ್ವಸ್ತಂ ಸಮುದ್ರಂ ಸಮುಪಾಶ್ರಿತೈಃ ॥ ೨೮ ॥
ತಂ ಶೋಷಯ ದ್ವಿಜಶ್ರೇಷ್ಠ ಹಿತಾರ್ಥಂ ತ್ರಿದಿವೌಕಸಂ ।
ನಾನ್ಯಃ ಶಕ್ತಃ ಪುಮಾನ್ಕಶ್ಚಿತ್ಕರ್ತುಮೀದೃಕ್ಕ್ರಿಯಾಂ ವಿಭೋ ॥ ೨೯ ॥

ಈಶ್ವರ ಉವಾಚ :—

ಏವಮುಕ್ತಃ ಸುರಗಣೈರಗಸ್ತ್ಯೋ ಮುನಿಪುಂಗವಃ ।
ಜಗಾಮ ತ್ರಿದಶೈಃ ಸಾರ್ಧಂ ಸಮುದ್ರಂ ಪ್ರತಿ ಹರ್ಷಿತಃ ॥ ೩೦ ॥
ಗೀಯಮಾನಸ್ತು ಗಂಧರ್ವೈಃ ಸ್ತೂಯಮಾನಸ್ತು ಕಿನ್ನರೈಃ ॥
ಶ್ಲಾಘ್ಯಮಾನಸ್ತು ವಿಬುಧೈರ್ವಾಕ್ಯಮೇತದುವಾಚ ಹ ॥ ೩೧ ॥

---

೨೬. ಅವನು ನಿಮ್ಮ ಪ್ರಾರ್ಥನೆಯಂತೆ ಹಾಗೆ ಮಾಡಲು ಸಮಸ್ತ ದಾನವರೂ ನಿಮಗೆ ವಧ್ಯರಾಗುವರು".

೨೭. ಈಶ್ವರನು ಹೇಳುತ್ತಾನೆ :—ಲೋಕಗಳನ್ನು ಸೃಷ್ಟಿಮಾಡುವ ಬ್ರಹ್ಮನು ಹೀಗೆನ್ನಲು ಸಕಲ ದೇವತೆಗಳೂ ಪ್ರಭಾಸ ಕ್ಷೇತ್ರಕ್ಕೆ ಹೋಗಿ ಅಗಸ್ತ್ಯನನ್ನು ಮರೆಹೊಕ್ಕರು.

೨೮. ದೇವತೆಗಳು ಹೇಳುತ್ತಾರೆ :—ದ್ವಿಜವರ್ಯನೆ! ಸಮುದ್ರದಲ್ಲಿ ಅಡಗಿಕೊಂಡಿರುವ ಕಾಲಕೇಯ ದಾನವರು ನಾಶಗೊಳಿಸುತ್ತಿರುವ ಸಂಶಯಗ್ರಸ್ತವಾದ ಮೂರು ಲೋಕಗಳನ್ನು ರಕ್ಷಿಸು.

೨೯. ಆ ಸಮುದ್ರವನ್ನು ದೇವತೆಗಳ ಹಿತಕ್ಕಾಗಿ ಒಣಗಿಸು. ಈ ಕೆಲಸವನ್ನು ಮಾಡಲು ಇತರರಾರೂ ಶಕ್ತರಲ್ಲ.

೩೦. ಈಶ್ವರನು ಹೇಳುತ್ತಾನೆ :—ದೇವತೆಗಳು ಹೀಗೆನ್ನಲು ಮುನಿವರ್ಯನಾದ ಅಗಸ್ತ್ಯನು ಸಂತೋಷದಿಂದ ದೇವತೆಗಳೊಡನೆ ಸಮುದ್ರಕ್ಕೆ ಹೋದನು.

೩೧. ಅವನನ್ನು ಕುರಿತು ಗಂಧರ್ವರು ಹಾಡುತ್ತಿರಲು, ಕಿನ್ನರರು ಸ್ತುತಿಸುತ್ತಿರಲು, ದೇವತೆಗಳು ಹೊಗಳುತ್ತಿರಲು ಇಂತೆಂದನು.

ಏಷ ತ್ರೈಲೋಕ್ಯರಕ್ಷಾರ್ಥಂ ಶೋಷಯಾಮಿ ಮಹಾರ್ಣವಂ ।
ದ್ರಕ್ಷ್ಯಧ್ವಂ ಕೌತುಕಂ ದೇವಾಃ ಸಮೀನಮಕರೈರ್ಮಹತ್ ॥ ೩೨ ॥
ಏವಮುಕ್ತ್ವಾ ದ್ವಿಜಶ್ರೇಷ್ಠೋ ಹ್ಯಗಸ್ತ್ಯೋ ಭಗವಾನ್ಮುನಿಃ ।
ಗಂಡೂಷಮಕರೋತ್ಸರ್ವಂ ಸಾಗರಂ ಸರಿತಾಂಪತಿಂ ॥ ೩೩ ॥
ಪೀತೇ ತತ್ರ ಮಹಾಸಿಂಧಾವಗಸ್ತ್ಯೇನ ಮಹಾತ್ಮನಾ ।
ದಾನವಾ ಭಯಸಂತ್ರಸ್ತಾ ಇತಶ್ಚೇತಶ್ಚ ಬಭ್ರಮುಃ ॥ ೩೪ ॥
ವಧ್ಯಮಾನಾಃ ಸುರೈಸ್ತತ್ರ ಶಸ್ತ್ರೈಃ ಸುನಿಶಿತೈಸ್ತಥಾ ।
ಕಾಂತಾರಮನ್ಯೇ ಗಚ್ಛಂತಃ ಪಲಾಯನಪರಾಯಣಾಃ ॥ ೩೫ ॥
ಹತಶೇಷೇಷು ದೈತ್ಯೇಷು ವಿದಾರ್ಯ ಧರಣೀತಲಂ ।
ಪಾತಾಲಂ ವಿವಿಶುಸ್ತೂರ್ಣಂ ರುಧಿರೇಣ ಪರಿಪ್ಲುತಾಃ ॥ ೩೬ ॥
ಅಥೋಚುಸ್ತ್ರಿದಶಾ ಹೃಷ್ಟಾ ಅಗಸ್ತ್ಯಂ ಮುನಿಸತ್ತಮಂ ।
ಸಿದ್ಧಂ ನೋ ವಾಂಛಿತಂ ಸರ್ವಂ ಪೂರ್ಯತಾಂ ಸಾಗರಃ ಪುನಃ ॥ ೩೭ ॥

ಅಗಸ್ತ್ಯ ಉವಾಚ :—

ಜೀರ್ಣತೋಯಂ ಮಯಾ ದೇವಾಸ್ತಥೈವಾಮೇಧ್ಯತಾಂ ಗತಂ ।
ಉತ್ಪತ್ಸ್ಯತಿ ರಘೂಣಾಂ ಹಿ ಕುಲೇ ನೃಪತಿಸತ್ತಮಃ ॥ ೩೮ ॥

---

೩೨. "ದೇವತೆಗಳೆ ! ಈಗ ನಾನು ತ್ರೈಲೋಕ್ಯ ರಕ್ಷಣೆಗಾಗಿ ಮೀನು, ಮೊಸಳೆಗಳುಳ್ಳ ಈ ಮಹಾಸಾಗರವನ್ನು ಒಣಗಿಸುವೆನು. ನೀವು ಈ ಕೌತುಕವನ್ನು ನೋಡಿರಿ."

೩೩. ದ್ವಿಜೋತ್ತಮನಾದ ಅಗಸ್ತ್ಯನು ಹೀಗೆ ಹೇಳಿ ಸಂಪೂರ್ಣ ಸಮುದ್ರವನ್ನು ಗಂಡೂಷ ಮಾಡಿದನು. (ಕುಡಿದನು)

೩೪. ಮಹಾತ್ಮನಾದ ಆ ಅಗಸ್ತ್ಯನು ಹೀಗೆ ಸಮುದ್ರವನ್ನು ಕುಡಿಯಲು ದಾನವರು ಭಯಗೊಂಡು ಈ ಕಡೆ ಆ ಕಡೆ ಓಡಿದರು.

೩೫. ಆಗ ದೇವತೆಗಳು ಅವರನ್ನು ಹರಿತವಾದ ಶಸ್ತ್ರಗಳಿಂದ ಕೊಲ್ಲುತ್ತಿರಲು ಕೆಲವರು ಕಾಡಿಗೆ ಓಡಿಹೋದರು.

೩೬. ಹತಶೇಷರಾದ ದೈತ್ಯರು ರಕ್ತಸಿಕ್ತರಾಗಿ ಭೂಮಿಯನ್ನು ಸೀಳಿಕೊಂಡು ಪಾತಾಳವನ್ನು ಸೇರಿದರು.

೩೭. ತರುವಾಯ ಸಂತೋಷಗೊಂಡ ಸುರರು ಅಗಸ್ತ್ಯ ಮುನಿವರ್ಯನನ್ನು ಕುರಿತು, "ನಮ್ಮ ಇಷ್ಟಾರ್ಥವು ಕೈಗೂಡಿತು. ಮರಳಿ ಸಮುದ್ರವನ್ನು ತುಂಬು". ಎಂದರು.

೩೮–೩೯. ಅಗಸ್ತ್ಯನು ಹೇಳುತ್ತಾನೆ :—ದೇವತೆಗಳೆ ! ನೀರೆಲ್ಲ ನನ್ನ ದೇಹದಲ್ಲಿ ಜೀರ್ಣವಾಗಿ ಅಮೇಧ್ಯವಾಗಿದೆ. ರಘುವಂಶದಲ್ಲಿ ಭಗೀರಥನೆಂದು ಪ್ರಸಿದ್ಧನೂ,

ಭಗೀರಥೇತಿ ವಿಖ್ಯಾತಃ ಸರ್ವಶಸ್ತ್ರಭೃತಾಂ ವರಃ ।
ಸ ಜ್ಞಾತಿಕಾರಣಾದೇವ ಗಂಗಾಂ ತತ್ರಾನಯಿಷ್ಯತಿ ॥ ೩೯ ॥
ಬ್ರಹ್ಮಲೋಕಾತ್ಸರಿಚ್ಛ್ರೇಷ್ಠಾಂ ತಯಾ ಪೂರ್ಣೋ ಭವಿಷ್ಯತಿ ।
ಏವಮುಕ್ತ್ವಾ ಸುರೈಃ ಸಾರ್ಧಂ ಸ್ವಸ್ಥಾನಂ ಚಾಗಮನ್ಮುನಿಃ ॥ ೪೦ ॥
ತತಃ ಸ್ವಮಾಶ್ರಮಂ ಪ್ರಾಪ್ತಂ ದೇವಾ ವಾಕ್ಯಮಥಾಬ್ರುವನ್ ।
ಅನೇನ ಕರ್ಮಣಾ ಬ್ರಹ್ಮನ್ಪರಿತುಷ್ಟಾ ವಯಂ ಮುನೇ ॥ ೪೧ ॥
ಕಿಂ ಕುರ್ಮೋ ಬ್ರೂಹಿ ತೇಽಭೀಷ್ಟಂ ಯದ್ಯಪಿ ಸ್ಯಾತ್ಸುದುರ್ಲಭಂ ॥ ೪೨ ॥

ಅಗಸ್ತ್ಯ ಉವಾಚ :—

ಯಾವದ್ಬ್ರಹ್ಮಸಹಸ್ರಾಣಿ ಪಂಚವಿಂಶತಿಕೋಟಯಃ ।
ವೈಮಾನಿಕೋ ಭವಿಷ್ಯಾಮಿ ದಕ್ಷಿಣಾಂಬರಮೂರ್ಧನಿ ॥ ೪೩ ॥
ಅತ್ರಾಗತ್ಯ ನರೋ ಯಸ್ತು ಮಮಾಶ್ರಮಪದೇ ಶುಭೇ ।
ಹಾಟಕೇಶ್ವರಸಾನ್ನಿಧ್ಯೇ ಪ್ರಭಾಸಕ್ಷೇತ್ರ ಉತ್ತಮೇ ॥ ೪೪ ॥
ಸ್ನಾನಮಾಚರತೇ ಸಮ್ಯಕ್ಸ ಯಾತು ಪರಮಾಂ ಗತಿಂ ।
ಪಾತಾಲಾದವತೀರ್ಣಂ ತಂ ಲಿಂಗರೂಪಂ ಮಹೇಶ್ವರಂ ॥ ೪೫ ॥

ಧಾನುಷ್ಕನೂ ಆದ ನೃಪವರ್ಯನು ಹುಟ್ಟುವನು. ಅವನು ತನ್ನ ಪಿತೃಗಳಿಗಾಗಿ ಗಂಗೆಯನ್ನು ಇಲ್ಲಿಗೆ ತರುವನು.

೪೦. ಬ್ರಹ್ಮಲೋಕದಿಂದ ತಂದ ಆ ನದಿಯಿಂದ ಸಮುದ್ರವು ಪೂರ್ಣವಾಗುವುದು." ಮುನಿಯು ಹೀಗೆ ಹೇಳಿ ದೇವತೆಗಳೊಡನೆ ತನ್ನ ಸ್ಥಳಕ್ಕೆ ತೆರಳಿದನು.

೪೧. ಬಳಿಕ ತನ್ನ ಆಶ್ರಮವನ್ನು ಹೊಂದಿದ ದೇವತೆಗಳು ಹೀಗೆಂದರು. "ಮಹರ್ಷಿಯೆ ! ನಾವು ನಿನ್ನೀ ಕಾರ್ಯದಿಂದ ಸಂತುಷ್ಟರಾಗಿದ್ದೇವೆ.

೪೨. ನಿನಗೆ ಯಾವ ಇಷ್ಟಾರ್ಥವನ್ನು ಕೊಡಬೇಕು. ಅದು ದುರ್ಲಭವಾಗಿದ್ದರೂ ಸಂಪಾದಿಸಿಕೊಡುವೆವು".

೪೩. ಅಗಸ್ತ್ಯನು ಹೇಳುತ್ತಾನೆ :—ಇಪ್ಪತ್ತೈದುಕೋಟಿ ಸಾವಿರ ಬ್ರಹ್ಮರ ಕಾಲದವರೆಗೆ ನಾನು ದಕ್ಷಿಣ ದಿಕ್ಕಿನ ಆಕಾಶದ ಮೇಲ್ಭಾಗದಲ್ಲಿ ದೇವತೆಯಾಗಿರುವೆನು.

೪೪–೪೬. ಪ್ರಭಾಸಕ್ಷೇತ್ರದಲ್ಲಿರುವ ನನ್ನೀ ಆಶ್ರಮಕ್ಕೆ ಬಂದು ಹಾಟಕೇಶ್ವರನ ಸಮೀಪದಲ್ಲಿ ಸ್ನಾನಮಾಡಿದ ಮಾನವನು ಉತ್ತಮ ಗತಿಯನ್ನು ಪಡೆಯಲಿ. ನಾನು ತಪಸ್ಸಿನ ಸಾಮರ್ಥ್ಯದಿಂದ ಪ್ರತಿಷ್ಠೆ ಮಾಡಿ ಪಾತಾಳದಿಂದ ಮೇಲಕ್ಕೆ ಬಂದಿರುವ

ಮಯಾ ತಪಃಪ್ರಭಾವೇನ ಸ್ಥಾಪಿತಂ ಯಃ ಪ್ರಪೂಜಯೇತ್ ।
ದಿನೇದಿನೇ ಭವೇತ್ತಸ್ಯ ಗೋಶತಸ್ಯ ಫಲಂ ಧ್ರುವಮ್ ॥ ೪೬ ॥
ಲೋಪಾಮುದ್ರಾಸಹಾಯಂ ಮಾಂ ಯೋ ಮರ್ತ್ಯಃ ಸಂಪ್ರಪೂಜಯೇತ್ ।
ಅರ್ಘ್ಯಂ ದದ್ಯಾದ್ವಿಧಾನೇನ ಕಾಶಪುಷ್ಪೈಃ ಸಮಾಹಿತಃ ॥ ೪೭ ॥
ಪ್ರಾಪ್ತೇ ಶರದಿ ಕಾಲೇ ಚ ಸ ಯಾತು ಪರಮಾಂ ಗತಿಮ್ ।
ಲೋಪಾಮುದ್ರಾಸಹಾಯಂ ಮಾಂ ಹಾಟಕೇಶ್ವರಸಂಯುತಮ್ ॥ ೪೮ ॥
ಅಯನೇ ಚೋತ್ತರೇ ಪೂಜ್ಯ ಗೋಲಕ್ಷಫಲಮಾಪ್ನುಯಾತ್ ।
ಯಃ ಶ್ರಾದ್ಧಂ ಕುರುತೇ ಚಾತ್ರ ಅಯನೇ ಚೋತ್ತರೇ ದ್ವಿಜಃ ।
ಭೂಯಾತ್ತಸ್ಯ ಫಲಂ ಕೃತ್ಸ್ನಂ ಗಯಾಶ್ರಾದ್ಧಸ್ಯ ಸತ್ತಮಾಃ ॥ ೪೯ ॥

ಈಶ್ವರ ಉವಾಚ :—

ಬಾಢಮಿತ್ಯೇವ ತೇ ಚೋಕ್ತ್ವಾ ಸರ್ವೇ ದೇವಾಃ ಸವಾಸವಾಃ ।
ಸ್ವಸ್ಥಾನಂ ತು ಗತಾಃ ಸರ್ವೇ ಸಂಹೃಷ್ಟಮನಸಸ್ತದಾ ॥ ೫೦ ॥
ತಸ್ಮಾತ್ಸರ್ವಪ್ರಯತ್ನೇನ ಪ್ರಾಪ್ತೇ ಶರದಿ ಮಾನವಃ ।
ಅಗಸ್ತ್ಯಸ್ಯಾಶ್ರಮೇ ಗತ್ವಾ ಹಾಟಕೇಶಂ ಪ್ರಪೂಜಯೇತ್ ॥ ೫೧ ॥

ಲಿಂಗರೂಪಿಯಾದ ಮಹೇಶ್ವರನನ್ನು ಪೂಜಿಸಿದವರಿಗೆ ಪ್ರತಿದಿನವೂ ನೂರು ಗೋವುಗಳನ್ನು ದಾನಮಾಡಿದ ಫಲವು ಲಭಿಸಲಿ.

೪೭–೪೯. ಶರತ್ಕಾಲದಲ್ಲಿ ಲೋಪಾಮುದ್ರಾ ಸಹಿತನಾದ ನನ್ನನ್ನು ಕಾಶ ಪುಷ್ಪಗಳೊಡನೆ ಅರ್ಘ್ಯವನ್ನಿತ್ತು ಪೂಜಿಸಿದ ಮಾನವನು ಉತ್ತಮ ಗತಿಯನ್ನು ಹೊಂದಲಿ. ಉತ್ತರಾಯಣದಲ್ಲಿ ಲೋಪಾಮುದ್ರಾ ಸಹಿತನಾದ ನನ್ನನ್ನು ಹಾಟಕೇಶ್ವರನೊಡನೆ ಪೂಜಿಸಿದವನು ಲಕ್ಷ ಗೋವುಗಳನ್ನು ದಾನಮಾಡಿದ ಫಲವನ್ನು ಪಡೆಯಲಿ. ಇಲ್ಲಿ ಉತ್ತರಾಯಣದಲ್ಲಿ ಶ್ರಾದ್ಧಗೈದ ದ್ವಿಜನಿಗೆ ಗಯಾಶ್ರಾದ್ಧದ ಸಂಪೂರ್ಣ ಫಲವು ಲಭಿಸಲಿ.

೫೦. ಈಶ್ವರನು ಹೇಳುತ್ತಾನೆ :—ಸಕಲ ದೇವತೆಗಳು ಇಂದ್ರನೊಡನೆ ಹಾಗೆಯೇ ಆಗಲೆಂದು ಸಂತುಷ್ಟ ಮನಸ್ಕರಾಗಿ ತಮ್ಮ ಸ್ಥಳಕ್ಕೆ ತೆರಳಿದರು.

೫೧–೫೨. ಆದ್ದರಿಂದ ಶರತ್ಕಾಲವು ಬರಲು ಮಾನವನು ಅಗಸ್ತ್ಯಾಶ್ರಮಕ್ಕೆ ಹೋಗಿ ಅಗಸ್ತ್ಯೇಶ್ವರ ನಾಮಕನಾದ ಹಾಟಕೇಶ್ವರ ಲಿಂಗವನ್ನು ಪೂಜಿಸಬೇಕು. ಆ

ಅಗಸ್ತ್ಯೇಶ್ವರನಾಮಾನಂ ಕಲ್ಪಲಿಂಗಂ ಸುರಪ್ರಿಯಂ ।
ಯಶ್ಚೈತಚ್ಛೃಣುಯಾದ್ಭಕ್ತ್ಯಾ ಋಷೇಸ್ತಸ್ಯ ವಿಚೇಷ್ಟಿತಂ ।
ಅಹೋರಾತ್ರಕೃತಾತ್ಪಾಪಾತ್ತತ್ಕ್ಷಣಾದೇವ ಮುಚ್ಯತೇ ॥ ೫೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಹಾಟಕೇಶ್ವರಮಾಹಾತ್ಮ್ಯವರ್ಣನಂ ನಾಮ
ಷಟ್‌ಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಅಗಸ್ತ್ಯನ ಈ ಮಹಾತ್ಮ್ಯೆಯನ್ನು ಭಕ್ತಿಯಿಂದ ಕೇಳಿದವನು ಅಹೋರಾತ್ರಗಳಲ್ಲಿ ಮಾಡಿದ ಪಾಪಗಳಿಂದ ಕೂಡಲೆ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಹಾಟಕೇಶ್ವರಮಾಹಾತ್ಮ್ಯ ವರ್ಣನವೆಂಬ
ಮುನ್ನೂರನಲವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ನಾರದೇಶ್ವರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಪಶ್ಚಿಮೇ ನಾರದೇಶ್ವರೀಂ ।
ನಾರದೇಶ್ವರಸಾನ್ನಿಧ್ಯೇ ಸರ್ವದೌರ್ಭಾಗ್ಯನಾಶನೀಂ ॥ ೧॥
ಯಾ ನಾರೀ ಪೂಜಯೇದ್ದೇವೀಂ ತೃತೀಯಾಯಾಂ ಸಮಾಹಿತಾ ।
ತದನ್ವಯೇ ನ ದೌರ್ಭಾಗ್ಯಯುಕ್ತಾ ನಾರೀ ಭವಿಷ್ಯತಿ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾರದೇಶ್ವರೀಮಾಹಾತ್ಮ್ಯವರ್ಣನಂನಾಮ
॥ ಸಪ್ತಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ನಾರದೇಶ್ವರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಹಾಟಕೇಶ್ವರನ ಪಶ್ಚಿಮದಲ್ಲಿ, ನಾರದೇಶ್ವರನ ಹತ್ತಿರವಿರುವ ಸಕಲ ದೌರ್ಭಾಗ್ಯವನ್ನು ಪರಿಹರಿಸುವ ನಾರದೇಶ್ವರಿಯ ಸನ್ನಿಧಿಗೆ ಹೋಗಬೇಕು.

೨. ತದಿಗೆ ದಿನ ಆ ದೇವಿಯನ್ನು ಸಾವಧಾನ ಮನಸ್ಸಿನಿಂದ ಪೂಜಿಸಿದ ಹೆಂಗಸಿನ ವಂಶದಲ್ಲಿ ದೌರ್ಭಾಗ್ಯವುಳ್ಳ ಹೆಂಗಸು ಜನಿಸುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾರದೇಶ್ವರೀಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ

ಮಂತ್ರವಿಭೂಷಣಾಗೌರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—
ತತೋ ಗಚ್ಛೇನ್ಮಹಾದೇವಿ ದೇವೀಂ ಮಂತ್ರವಿಭೂಷಣಾಂ ।
ಭೀಮೇಶ್ವರಸ್ಯ ಸಾನ್ನಿಧ್ಯೇ ಸೋಮೇನಾರಾಧಿತಾಂ ಪುರಾ ॥ ೧ ॥
ಶ್ರಾವಣೇ ಮಾಸಿ ವಿಧಿನಾ ಯಾ ನಾರೀ ತಾಂ ಪ್ರಪೂಜಯೇತ್ ।
ತೃತೀಯಾಯಾಂ ಶುಕ್ಲಪಕ್ಷೇ ಸಾ ದುಃಖೈರ್ಮುಚ್ಯತೇಽಖಿಲೈಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಂತ್ರವಿಭೂಷಣಾಗೌರೀಮಾಹಾತ್ಮ್ಯವರ್ಣನಂನಾಮ
॥ ಅಷ್ಟಚತ್ವಾರಿಂಶದುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಮಂತ್ರವಿಭೂಷಣಾಗೌರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಭೀಮೇಶ್ವರನ ಹತ್ತಿರದಲ್ಲಿಯೇ ಸೋಮನು ಪೂಜಿಸಿರುವ ಮಂತ್ರವಿಭೂಷಣಾ ದೇವಿಯೆಡೆಗೆ ಹೋಗಬೇಕು.

೨. ಶ್ರಾವಣ ಶುಕ್ಲಪಕ್ಷ ತದಿಗೆಯ ದಿನ ವಿಧಿಯಂತೆ ಆ ದೇವಿಯನ್ನು ಪೂಜಿಸಿದವನು ಸಮಸ್ತ ದುಃಖಗಳಿಂದಲೂ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಂತ್ರವಿಭೂಷಣಾಗೌರೀಮಾಹಾತ್ಮ್ಯವರ್ಣನವೆಂಬ
ಮುನ್ನೂರನಲವತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕೋನಪಂಚಾಶದುತ್ತರತ್ರಿಶತತಮೋಽಧ್ಯಾಯಃ

ದುರ್ಗಕೂಟಗಣಪತಿಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ವಿಘ್ನೇಶಂ ದುರ್ಗಕೂಟಕಂ ।
ಭಲ್ಲತೀರ್ಥಸ್ಯ ಪೂರ್ವೇಣ ಯೋಗಿನೀಚಕ್ರದಕ್ಷಿಣೇ ॥ ೧ ॥
ಆರಾಧಿತೋಽಸೌ ಭೀಮೇನ ಸರ್ವಕಾಮಪ್ರದೋಽಭವತ್ ।
ಫಾಲ್ಗುನಸ್ಯ ಚತುರ್ಥ್ಯಾಂ ತು ಶುಕ್ಲಪಕ್ಷೇ ವಿಧಾನತಃ ॥ ೨ ॥
ಯಸ್ತಂ ಪೂಜಯತೇ ದೇವಂ ಗಂಧಪುಷ್ಪೈಃ ಸಮೋದಕೈಃ ।
ನಿರ್ವಿಘ್ನಂ ಜಾಯತೇ ತಸ್ಯ ವರ್ಷಮೇಕಂ ನ ಸಂಶಯಃ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ದುರ್ಗಕೂಟಗಣಪತಿಮಾಹಾತ್ಮ್ಯವರ್ಣನಂ ನಾಮ
ಏಕೋನಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ದುರ್ಗಕೂಟಗಣಪತಿಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಭಲ್ಲತೀರ್ಥದ ಪೂರ್ವದಲ್ಲಿ ಯೋಗಿನೀಚಕ್ರದ ದಕ್ಷಿಣದಲ್ಲಿರುವ ದುರ್ಗಕೂಟ ವಿಘ್ನೇಶ್ವರನೆಡೆಗೆ ಹೋಗಬೇಕು.

೨. ಇವನು ಭೀಮನಿಂದ ಆರಾಧಿಸಲ್ಪಟ್ಟವನಾಗಿ ಸಕಲೇಷ್ಟಾರ್ಥಗಳನ್ನು ಕೊಟ್ಟನು. ಫಾಲ್ಗುನ ಶುಕ್ಲ ಚತುರ್ಥೀ ದಿನ ಅವನನ್ನು ಗಂಧ, ಪುಷ್ಪ, ಮೋದಕಗಳಿಂದ ಪೂಜಿಸಿದವನಿಗೆ ಒಂದು ವರ್ಷಕಾಲ ವಿಘ್ನವುಂಟಾಗುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ದುರ್ಗಕೂಟಗಣಪತಿಮಾಹಾತ್ಮ್ಯವರ್ಣನವೆಂಬ
ಮುನ್ನೂರ ಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕೌರವೇಶ್ವರೀಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತಸ್ಮಾದ್ದೇವೀಂ ಕೌರವೇಶ್ವರೀಂ ।
ಯಸ್ಯ ನಾಮ್ನಾ ಕುರುಕ್ಷೇತ್ರಂ ತೇನ ಸಾರಾಧಿತಾ ಪುರಾ ॥ ೧ ॥
ಆರಾಧಿತಾಸೌ ಭೀಮೇನ ಕೃತ್ವಾ ಕ್ಷೇತ್ರಸ್ಯ ರಕ್ಷಣಂ ।
ಮಹಾನವಮ್ಯಾಂ ಯತ್ನೇನ ಯಸ್ತಾಂ ಪೂಜಯತೇ ನರಃ ।
ತಂ ಪುತ್ರಮಿವ ಕಲ್ಯಾಣೀ ರಕ್ಷತೇ ನಾತ್ರ ಸಂಶಯಃ ॥ ೨ ॥
ಭೋಜನಂ ತತ್ರ ದಾತವ್ಯಂ ದಂಪತೀನಾಂ ನ ಸಂಶಯಃ ।
ದಿವ್ಯೈರ್ಭಕ್ಷ್ಯೈಃ ಸುಮಿಷ್ಟಾನ್ನೈಃ ಸಾ ತುಷ್ಯತಿ ತತಃ ಸ್ತುತಾ ॥ ೩ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕೌರವೇಶ್ವರೀಮಾಹಾತ್ಮ್ಯವರ್ಣನಂ ನಾಮ
ಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕೌರವೇಶ್ವರೀಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಕೌರವೇಶ್ವರಿಯೆಡೆಗೆ ಹೋಗಬೇಕು. ಪೂರ್ವದಲ್ಲಿ ಕುರುಕ್ಷೇತ್ರವೆಂಬ ಹೆಸರಿಗೆ ಕಾರಣನಾದ ಕುರುರಾಜನು ಇವಳನ್ನು ಪೂಜಿಸಿರುವನು.

೨. ಕುರುಕ್ಷೇತ್ರ ರಕ್ಷಕನಾದ ಭೀಮಸೇನನು ಇವಳನ್ನು ರಕ್ಷಿಸಿರುವನು. ಮಹಾನವಮೀ ದಿನ ಇವಳನ್ನು ಪೂಜಿಸಿದ ಮಾನವನನ್ನು ಆ ದೇವಿಯು ಮಗನಂತೆ ಕಾಪಾಡುವಳು. ಇದರಲ್ಲಿ ಸಂದೇಹವಿಲ್ಲ.

೩. ಇಲ್ಲಿ ದಂಪತಿಗಳಿಗೆ ದಿವ್ಯ ಭಕ್ಷ್ಯಗಳಿಂದಲೂ, ಮೃಷ್ಟಾನ್ನಗಳಿಂದಲೂ ಭೋಜನ ಮಾಡಿಸಿ ಆ ದೇವಿಯನ್ನು ಸ್ತುತಿಸಿದರೆ ಅವಳು ಸಂತುಷ್ಟಳಾಗುವಳು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಕೌರವೇಶ್ವರೀಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಸುಪರ್ಣೇಲಾಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸುಪರ್ಣೇಲಾಂ ಚ ಭೈರವೀಂ ।
ದುರ್ಗಾಕೂಟಾದ್ದಕ್ಷಿಣತೋ ಧನುಃಪಂಚಶತಾಂತರೇ ॥ ೧ ॥
ಸುಪರ್ಣೇನ ಪುರಾ ದೇವಿ ಪಾತಾಲಾದಮೃತಂ ಹೃತಂ ।
ಗೃಹೀತ್ವಾ ತತ್ರ ಮುಕ್ತಂ ತು ನಾಗಾನಾಂ ಪಶ್ಯತಾಂ ಕಿಲ ॥ ೨ ॥
ತತೋ ದೇವ್ಯಾ ತದಾ ದೃಷ್ಟ್ವಾ ರಕ್ಷಿತಂ ನಾಗಪಾರ್ಶ್ವತಃ ।
ತತಃ ಸುಪರ್ಣೇಲೇತ್ಯೇವಂ ಖ್ಯಾತಾ ಸಾ ವಸುಧಾತಲೇ ॥ ೩ ॥
ಇಲಾ ತು ಕಥ್ಯತೇ ಭೂಮಿಃ ಸುಪರ್ಣೇನ ಪ್ರತಿಷ್ಠಿತಾ ।
ತತಃ ಸುಪರ್ಣೆಲೇತ್ಯೇವಂ ನಾಮ್ನಾ ಪಾತಕನಾಶಿನೀ ॥ ೪ ॥

ಕನ್ನಡದ ಅನುವಾದ

ಸುಪರ್ಣೇಲಾಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ದೇವಿ ! ಬಳಿಕ ದುರ್ಗಕೂಟದ ದಕ್ಷಿಣದಲ್ಲಿ ಐನೂರು ಬಿಲ್ಲುಗಳ ದೂರದಲ್ಲಿರುವ ಸುಪರ್ಣೇಲಾಭೈರವಿಯೆಡೆಗೆ ಹೋಗಬೇಕು.

೨. ದೇವಿ ! ಹಿಂದೆ ಗರುಡನು ಅಮೃತವನ್ನು ಪಾತಾಳದಿಂದ ತಂದು ನಾಗಗಳು ನೋಡುತ್ತಿರುವಾಗಲೇ ಅಲ್ಲಿ ಇಟ್ಟನು.

೩. ಬಳಿಕ ದೇವಿಯು ಆ ಅಮೃತವನ್ನು ನಾಗಗಳಿಂದ ರಕ್ಷಿಸಿದ್ದರಿಂದ ಅವಳು ಪ್ರಪಂಚದಲ್ಲಿ ಸುಪರ್ಣೇಲಾ ಎಂದು ಪ್ರಖ್ಯಾತಳಾದಳು.

೪. ಗರುಡನು ಅಮೃತವನ್ನು ಅಲ್ಲಿಟ್ಟಿರುವುದರಿಂದ ಆ ಭೂಮಿಯು ಇಲಾ ಎಂದೂ, ಆ ದೇವಿಯು ಸುರ್ಪಣೇಲಾ ಎಂದೂ ವಿಖ್ಯಾತರಾದರು.

ಸುಪರ್ಣಕುಂಡೇ ತತ್ರೈವ ಸ್ನಾತ್ವಾ ತಾಂ ಪೂಜಯೇನ್ನರಃ ।
ವಿಪ್ರೇಭ್ಯೋ ಭೋಜನಂ ದದ್ಯಾನ್ನಾಪದ್ಭಿರ್ಮ್ರಿಯತೇ ನರಃ ।
ಜೀವವತ್ಸಾ ಭವೇನ್ನಾರೀ ಆತ್ಮಜೈಶ್ಚಾಪ್ಯಲಂಕೃತಾ ॥ ೫ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸುಪರ್ಣೇಲಾಮಾಹಾತ್ಮ್ಯವರ್ಣನಂ ನಾಮ
ಏಕಪಂಚಾಶದುತ್ತರತ್ರಿಶತತಮೋಽಧ್ಯಾಯಃ

---

೫. ಅಲ್ಲಿರುವ ಸರ್ಪಕುಂಡದಲ್ಲಿ ಮಿಂದು ಆ ದೇವಿಯನ್ನು ಪೂಜಿಸಿ ಬ್ರಾಹ್ಮಣರಿಗೆ ಭೋಜವನ್ನಿತ್ತವನು ಆಪತ್ತಿನಿಂದ ಮಡಿಯುವುದಿಲ್ಲ. ನಾರಿಯು ದೀರ್ಘಾಯುಷ್ಯವುಳ್ಳ ಮಕ್ಕಳುಳ್ಳವಳಾಗುವಳು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸುಪರ್ಣೇಲಾಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ದ್ವಿಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಭಲ್ಲತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಭಲ್ಲತೀರ್ಥಮನುತ್ತಮಂ ।
ತಸ್ಯಾಶ್ಚ ಪಶ್ಚಿಮೇ ಭಾಗೇ ಯತ್ರ ವಿಷ್ಣುಶ್ಚತುರ್ಭುಜಃ ॥ ೧ ॥
ಯತ್ರ ತ್ಯಕ್ತಂ ಶರೀರಂ ತು ವಿಷ್ಣುನಾ ಪ್ರಭುವಿಷ್ಣುನಾ ।
ತಸ್ಮಿನ್ಮಿತ್ರವನೇ ರಮ್ಯೇ ಯೋಜನಾರ್ಧಾರ್ಧವಿಸ್ತೃತೇ ॥ ೨ ॥
ಯುಗೇ ಯುಗೇ ಮಹಾದೇವಿ ಕಲ್ಪಮನ್ವಂತರಾದಿಷು ।
ತತ್ರೈವ ಸಂಸ್ಥಿತಿರ್ವಿಷ್ಣೋರ್ನಾನ್ಯತ್ರ ಚ ರತಿರ್ಭವೇತ್ ॥ ೩ ॥
ಕ್ಷೇತ್ರಾಣಾಮಾದಿಕ್ಷೇತ್ರಂ ತು ವೈಷ್ಣವಂ ತದ್ವಿದುರ್ಬುಧಾಃ ।
ತಿಸ್ರಃ ಕೋಟ್ಯೋಽರ್ಧಕೋಟಿಶ್ಚ ತೀರ್ಥಾನಾಂ ಪ್ರವರಾಣಿ ಚ ॥ ೪ ॥
ದಿವಿ ಭುವ್ಯಂತರಿಕ್ಷೇ ಚ ತಾನಿ ತತ್ರೈವ ಭಾಮಿನಿ ।
ತತ್ರ ಮೂರ್ತಿಮತೀ ಗಂಗಾ ಸ್ವಯಮೇವ ವ್ಯವಸ್ಥಿತಾ ॥ ೫ ॥

ಕನ್ನಡದ ಅನುವಾದ

ಭಲ್ಲತೀರ್ಥಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಆ ಸುಪರ್ಣೆಯ ಪಶ್ಚಿಮಭಾಗದಲ್ಲಿ ಚತುರ್ಭುಜನಾದ ವಿಷ್ಣುವು ನೆಲೆಸಿರುವ ಭಲ್ಲತೀರ್ಥಕ್ಕೆ ಹೋಗಬೇಕು.

೨. ಅಲ್ಲಿರುವ ಮನೋಹರವೂ, ಮೂರು ಮೈಲಿ ವಿಸ್ತೀರ್ಣವೂ ಆಗಿರುವ ಮಿತ್ರವನದಲ್ಲಿ ವಿಷ್ಣುವು ತನ್ನ ಶರೀರವನ್ನು ತ್ಯಜಿಸಿರುವನು.

೩. ಮಹಾದೇವಿ! ಪ್ರತಿ ಯುಗದಲ್ಲಿಯೂ, ಮನ್ವಂತರಗಳಲ್ಲಿಯೂ ವಿಷ್ಣುವು ಅಲ್ಲಿ ಪ್ರೀತಿಯಿಂದ ವಾಸಿಸುವನು.

೪–೫. ಜ್ಞಾನಿಗಳು ಅದನ್ನು ಕ್ಷೇತ್ರಗಳಲ್ಲಿ ಮೊದಲಿನ ವಿಷ್ಣುಕ್ಷೇತ್ರವನ್ನಾಗಿ ತಿಳಿದಿರುವರು. ಸ್ವರ್ಗ, ಅಂತರಿಕ್ಷ, ಭೂಮಿಗಳಲ್ಲಿರುವ ಮೂರುವರೆ ಕೋಟಿ ತೀರ್ಥಗಳು ಅಲ್ಲಿರುವುವು. ಅಲ್ಲಿ ಗಂಗೆಯು ದೇಹವನ್ನು ಧರಿಸಿ ನೆಲಸಿರುವಳು.

ವಿಷ್ಣೋಃ ಸಂಪ್ಲವನಾರ್ಥಾಯ ಪ್ರಾಣಿನಾಂ ಚ ಹಿತಾಯ ವೈ ।
ಗಂಗಾ ಗಯಾ ಕುರುಕ್ಷೇತ್ರಂ ನೈಮಿಷಂ ಪುಷ್ಕರಾಣಿ ಚ ॥ ೬ ॥
ಪುರೀಂ ದ್ವಾರವತೀಂ ತ್ಯಕ್ತ್ವಾ ಅತ್ರೈವ ವಸತೇ ಹರಿಃ ।
ತಸ್ಯೌರ್ಧ್ವದೈಹಿಕಂ ದೇವಿ ಪ್ರಕರೋಮಿ ಯುಗೇಯುಗೇ ॥ ೭ ॥
ನಭಸ್ಯೇ ದ್ವಾದಶೀಯೋಗೇ ತತ್ರ ಗತ್ವಾ ಸ್ವಯಂ ಪ್ರಿಯೇ ।
ಕರೋಮಿ ತದ್ವಿಧಾನೇನ ತತ್ರ ಬ್ರಾಹ್ಮಣಪುಂಗವೈಃ ॥ ೮ ॥
ತತ್ರ ದತ್ವಾ ತು ದಾನಾನಿ ವಿಧಿವದ್ವೇದಪಾರಗೇ ।
ತತ್ರೈವ ದ್ವಾದಶೀಯೋಗೇ ಸ್ನಾತ್ವಾ ಚೈವ ವಿಧಾನತಃ ॥ ೯ ॥
ಸಂತರ್ಪ್ಯ ಚ ಪಿತೄನ್ಭಕ್ತ್ಯಾ ಮುಚ್ಯತೇ ಸರ್ವಪಾತಕೈಃ ।
ತತ್ರ ವಿಷ್ಣುಂ ತು ಸಂಪೂಜ್ಯ ಕೃತ್ವಾ ಜಾಗರಣಂ ನಿಶಿ ॥ ೧೦ ॥
ದೀಪಾದಿದಾನಂ ಕೃತ್ವಾ ತು ಕೃತಕೃತ್ಯೋಽಭಿಜಾಯತೇ ॥ ೧೧ ॥
ಅಥ ತಸ್ಯ ಪ್ರವಕ್ಷ್ಯಾಮಿ ಪುರಾವೃತ್ತಮಹಂ ಪ್ರಿಯೇ ।
ಸಂಹೃತ್ಯ ಯಾದವಾನ್ಸರ್ವಾನ್ವಾಸುದೇವಃ ಪ್ರತಾಪವಾನ್ ॥ ೧೨ ॥

---

೬. ಗಂಗೆ, ಗಯೆ, ಕುರುಕ್ಷೇತ್ರ, ನೈಮಿಷ, ಪುಷ್ಕರ ಕ್ಷೇತ್ರಗಳು ವಿಷ್ಣುವಿನ ಸ್ನಾನಕ್ಕಾಗಿಯೂ, ಪ್ರಾಣಿಗಳ ಹಿತಕ್ಕಾಗಿಯೂ ಅಲ್ಲಿ ನೆಲಸಿರುವುವು.

೭–೮. ಶ್ರೀವಿಷ್ಣುವು ದ್ವಾರವತಿಯನ್ನು ತ್ಯಜಿಸಿ ಇಲ್ಲಿಯೇ ವಾಸಿಸುವನು. ಪ್ರಿಯಳೆ! ನಾನು ಭಾದ್ರಪದ ಮಾಸದ ದ್ವಾದಶೀ ದಿನ ಅಲ್ಲಿಗೆ ಹೋಗಿ ವಿಧಿಯುಂತೆ ಬ್ರಾಹ್ಮಣೋತ್ತಮರಿಂದ ಪ್ರತಿ ಯುಗದಲ್ಲಿಯೂ ಆ ವಿಷ್ಣುವಿನ ಔರ್ಧ್ವದೈಹಿಕ ಕ್ರಿಯೆಯನ್ನು ಮಾಡುವೆನು.

೯–೧೦. ಅಲ್ಲಿ ವಿಧಿಯುಂತೆ ವೇದಪಾರಂಗತನಾದ ಬ್ರಾಹ್ಮಣನಿಗೆ ದಾನಮಾಡಿದವನೂ, ದ್ವಾದಶೀ ದಿನ ವಿಧಿಯುಂತೆ ಮಿಂದು ಭಕ್ತಿಯಿಂದ ಪಿತೃಗಳಿಗೆ ತರ್ಪಣ ಮಾಡಿದವನೂ ಸಕಲ ಪಾಪಗಳಿಂದ ಮುಕ್ತನಾಗುವನು. ಅಲ್ಲಿ ವಿಷ್ಣುವನ್ನು ಪೂಜಿಸಿ ರಾತ್ರಿ ಜಾಗರಣೆ ಮಾಡಿ ದೀಪಾದಿಗಳನ್ನು ದಾನ ಮಾಡಿದವನು ಧನ್ಯನಾಗುವನು.

೧೨–೧೪. ಪ್ರಿಯಳೆ! ಈಗ ನಾನು ಆ ವಿಷ್ಣುವಿನ ಕಥೆಯನ್ನು ಹೇಳುವೆನು. ಕೇಳು ಪರಾಕ್ರಮಶಾಲಿಯಾದ ಕೃಷ್ಣನು ಸಮಸ್ತ ಯಾದವರನ್ನು ಸಂಹರಿಸಿ ಅಂಗಾ

ದುರ್ವಾಸಸಾನುಲಿಪ್ತೇನ ಪಾಯಸೇನ ಪದಸ್ಥಲೇ ।
ವಜ್ರಾಂಗಭೂತದೇಹಸ್ತು ಸರ್ವವ್ಯಾಪೀ ಜನಾರ್ದನಃ । ॥ ೧೩ ॥
ಗತ್ವಾ ತೀರಂ ಸಮುದ್ರಸ್ಯ ಸಮಾಧಿಸ್ಥೋ ಬಭೂವ ಹ ।
ಸರ್ವಸ್ರೋತಾಂಸಿ ಸಂಯಮ್ಯ ನಿವೇಶ್ಯಾತ್ಮಾನಮಾತ್ಮನಿ ॥ ೧೪ ॥
ಏತಸ್ಮಿನ್ನಂತರೇ ಪ್ರಾಪ್ತೋ ಬಾಣಹಸ್ತೋ ಜರಾಭಿಧಃ ।
ದಾಶಪುತ್ರೋಽತಿಕೃಷ್ಣಾಂಗೋ ಮತ್ಸ್ಯಘಾತೀ ಚ ಪಾಪಕೃತ್ ॥ ೧೫ ॥
ತೇನ ದೃಷ್ಟಸ್ತತೋ ದೂರಾನ್ನಿಷಾದಾತ್ಮಸಮುದ್ಭವಃ ।
ವಿಷ್ಣೋಃ ಪದಂ ಮೃಗಂ ಮತ್ವಾ ಶರಂ ತಸ್ಯ ಮುಮೋಚ ಹ ॥ ೧೬ ॥
ತತೋಽಸೌ ಪಶ್ಯತೇ ಯಾವದ್ಗತ್ವಾ ತಸ್ಯ ಚ ಸನ್ನಿಧೌ ।
ಚತುರ್ಬಾಹುಂ ಮಹಾಕಾಯಂ ಶಂಖಚಕ್ರಗದಾಧರಂ ॥ ೧೭ ॥
ಪುರುಷಂ ನೀಲಮೇಘಾಭಂ ಪುಂಡರೀಕನಿಭೇಕ್ಷಣಂ ।
ತಂ ದೃಷ್ಟ್ವಾ ಭಯಭೀತಸ್ತು ವೇಪಮಾನಃ ಕೃತಾಂಜಲಿಃ ।
ಅಬ್ರವೀನ್ನ ಮಯಾ ಜ್ಞಾತಸ್ತ್ವಂ ವಿಭೋ ದಿವ್ಯರೂಪಧೃಕ್ ॥ ೧೮ ॥

ಲಿನಲ್ಲಿ ದುರ್ವಾಸಮುನಿಯು ಲೇಪಿಸಿದ ಪಾಯಸದಿಂದ ವಜ್ರವಾದ ಶರೀರವುಳ್ಳವನಾಗಿ ಸಮುದ್ರದ ದಡವನ್ನು ಸೇರಿ ಸರ್ವ ನಾಡಿಗಳನ್ನು ತಡೆದು ಮನಸ್ಸನ್ನು ಪರಮಾತ್ಮನಲ್ಲಿ ರಿಸಿ ಸಮಾಧಿನಿರತನಾದನು.

೧೫. ಇಷ್ಟರಲ್ಲಿ ಅತ್ಯಂತ ಕಪ್ಪಾದ ಶರೀರವುಳ್ಳ ಮೀನುಗಳನ್ನು ಕೊಲ್ಲುವ ಜರನೆಂಬ ಪಾಪಿ ಬೆಸ್ತನು ಅಲ್ಲಿಗೆ ಬಂದನು.

೧೬. ಅವನು ಕೃಷ್ಣನ ಕಾಲನ್ನು ನೋಡಿ ಮೃಗವೆಂದರಿತು ಬಾಣವನ್ನು ಬಿಟ್ಟನು.

೧೭-೧೮. ಬಳಿಕ ಅವನು ಹತ್ತಿರ ಹೋಗಿ ನಾಲ್ಕು ತೋಳುಗಳುಳ್ಳವನೂ, ಮಹಾಕಾಯನೂ, ಶಂಖ ಚಕ್ರ ಗದೆಗಳನ್ನು ಧರಿಸಿದವನೂ, ನೀಲಮೇಘದಂತೆ ಕಾಂತಿಯುಳ್ಳವನೂ, ಕಮಲದಂತೆ ಕಣ್ಣುಗಳುಳ್ಳವನೂ ಆದ ಪುರುಷೋತ್ತಮನನ್ನು ಕಂಡು ಭಯದಿಂದ ನಡುಗುತ್ತ ಕೈ ಮುಗಿದುಕೊಂಡು ಇಂತೆಂದನು. "ಸ್ವಾಮಿ ! ದಿವ್ಯರೂಪವನ್ನು ಧರಿಸಿದ ನಿನ್ನನ್ನು ನಾನು ಅರಿಯಲಿಲ್ಲ.

ಅಜ್ಞಾನಾತ್ತ್ವಂ ಮಯಾ ವಿದ್ಧಸ್ತ್ವತ್ಪದಾಗ್ರೇ ಸುರೋತ್ತಮ ।
ಕ್ಷಂತುಮರ್ಹಸಿ ಮೇ ನಾಥ ನ ತ್ವಂ ಕ್ರೋದ್ಧುಮಿಹಾರ್ಹಸಿ ॥ ೧೯ ॥

ವಿಷ್ಣುರುವಾಚ :—

ಶಾಪಸ್ಯಾಂತೋಽದ್ಯ ಮೇ ಭದ್ರ ಶರಪಾತಾತ್ಕೃತಸ್ತ್ವಯಾ ।
ತಸ್ಮಾತ್ತ್ವಂ ಮತ್ಪ್ರಸಾದೇನ ಸ್ವರ್ಗಂ ಗಚ್ಛ ಮಹಾದ್ಯುತೇ ॥ ೨೦ ॥
ಯೇ ಚಾನ್ಯೇ ಮಾಮಿಹಾಗತ್ಯ ದ್ರಕ್ಷ್ಯಂತಿ ಹಿ ನರೋತ್ತಮಾಃ ।
ತೇ ಯಾಸ್ಯಂತಿ ಪರಂ ಸ್ಥಾನಂ ಯತ್ರಾಹಂ ನಿತ್ಯಸಂಸ್ಥಿತಃ ॥ ೨೧ ॥
ಭಲ್ಲೇನಾಹಂ ಯತೋ ವಿದ್ಧಸ್ತ್ವಯಾ ಪಾದತಲೇ ಶುಭೇ ।
ಭಲ್ಲತೀರ್ಥಮಿತಿ ಖ್ಯಾತಂ ತತೋ ಹ್ಯೇತದ್ಭವಿಷ್ಯತಿ ॥ ೨೨ ॥
ಹರಿಕ್ಷೇತ್ರಮಿತಿ ಪ್ರೋಕ್ತಂ ಪೂರ್ವಂ ಸ್ವಾಯಂಭುವೇಽನ್ತರೇ ॥ ೨೩ ॥

ಈಶ್ವರ ಉವಾಚ :—

ಇತ್ಯುಕ್ತ್ವಾಂತರ್ದಧೇ ವಿಷ್ಣುರ್ಲುಬ್ಧಕೋಽಪಿ ದಿವಂ ಗತಃ ।
ಯೇಽತ್ರ ಸ್ನಾನಂ ಕರಿಷ್ಯಂತಿ ಭಕ್ತ್ಯಾ ಪರಮಯಾ ಯುತಾಃ ।
ವಿಷ್ಣುಲೋಕಂ ಗಮಿಷ್ಯಂತಿ ಪ್ರೀತ್ಯಾ ತೇ ಮತ್ಪ್ರಸಾದತಃ ॥ ೨೪ ॥
ಯೇಽತ್ರ ಶ್ರಾದ್ಧಂ ಕರಿಷ್ಯಂತಿ ಪಿತೃಭಕ್ತಿಪರಾಯಣಾಃ ।
ತೃಪ್ತಿಂ ತೇಷಾಂ ಗಮಿಷ್ಯಂತಿ ಪಿತರಶ್ಚೈವ ತರ್ಪಿತಾಃ ॥ ೨೫ ॥

---

೧೯. ನಾಥ ! ಅರಿಯದೆ ನಾನು ನಿನ್ನ ಕಾಲಿನ ಕೊನೆಗೆ ಹೊಡೆದೆನು. ಅದನ್ನು ನೀನು ಸಿಟ್ಟಾಗದೆ ಕ್ಷಮಿಸು".

೨೦. ವಿಷ್ಣುವು ಹೇಳುತ್ತಾನೆ :—ಮಂಗಳಕರನೆ ! ನೀನು ಬಾಣವನ್ನು ಪ್ರಯೋಗಿಸಿ ನನ್ನ ಶಾಪವನ್ನು ಕೊನೆಗಾಣಿಸಿದೆ. ಎಲೈ ತೇಜಸ್ವಿಯೇ ನೀನು ನನ್ನ ಅನುಗ್ರಹದಿಂದ ಸ್ವರ್ಗಕ್ಕೆ ತೆರಳು.

೨೧. ಇಲ್ಲಿಗೆ ಬಂದು ನನ್ನನ್ನು ನೋಡುವ ಮಾನವರು ನನ್ನ ಸ್ಥಾನವನ್ನು ಸೇರುವರು.

೨೨. ನೀನು ನನ್ನ ಅಂಗಾಲನ್ನು ಬಾಣದಿಂದ ಹೊಡೆದುದರಿಂದ ಇದು ಭಲ್ಲ ತೀರ್ಥವೆಂದು ವಿಖ್ಯಾತವಾಗುವುದು.

೨೩. ಹಿಂದೆ ಸ್ವಾಯಂಭುವ ಮನ್ವಂತರದಲ್ಲಿ ಇದೇ ಹರಿಕ್ಷೇತ್ರವೆಂದು ಪ್ರಸಿದ್ಧ ವಾಗಿದ್ದಿತು.

೨೪. ಶ್ರೀಕೃಷ್ಣನು ಹೀಗೆಂದು ಹೇಳಿ ಅದೃಶ್ಯನಾದನು. ಬೇಡನೂ ಸ್ವರ್ಗಕ್ಕೆ ತೆರಳಿದನು. ಇಲ್ಲಿ ಅತಿಶಯ ಭಕ್ತಿಯಿಂದ ಮಿಂದವರು ನನ್ನ ಅನುಗ್ರಹದಿಂದ ವಿಷ್ಣುಲೋಕವನ್ನು ಹೊಂದುವರು.

೨೫. ಇಲ್ಲಿ ಭಕ್ತಿಯಿಂದ ಶ್ರಾದ್ಧ ಮಾಡಿದವರ ಪಿತೃಗಳು ತೃಪ್ತಿಗೊಳ್ಳುವರು.

ತಸ್ಮಾತ್ಸರ್ವಪ್ರಯತ್ನೇನ ಪ್ರಾಪ್ಯ ತತ್ಕ್ಷೇತ್ರಮುತ್ತಮಂ ।
ದೃಶ್ಯೋ ದೇವಶ್ಚತುರ್ಬಾಹುಃ ಸ್ನಾತ್ವಾ ತೀರ್ಥೇ ತು ಭಲ್ಲಕೇ ॥ ೨೬ ॥
ಮದ್ಭಕ್ತಿಬಲದರ್ಪಿಷ್ಠಾ ಮತ್ಪ್ರಿಯಂ ನ ನಮಂತಿ ಯೇ ।
ವಾಸುದೇವಂ ನ ತೇ ಜ್ಞೇಯಾ ಮದ್ಭಕ್ತಾಃ ಪಾಪಿನೋ ಹಿ ತೇ ॥ ೨೭ ॥
ಮದ್ಭಕ್ತೋಽಪಿ ಹಿ ಯೋ ಭೂತ್ವಾ ಭುಂಕ್ತ ಏಕಾದಶೀದಿನೇ ।
ಮಲ್ಲಿಂಗಸ್ಯಾರ್ಚನಂ ಕಾರ್ಯಂ ನ ತೇನ ಪಾಪಬುದ್ಧಿನಾ ॥ ೨೮ ॥
ಯಾ ತಿಥಿರ್ದಯಿತಾ ವಿಷ್ಣೋಃ ಸ ತಿಥಿರ್ಮಮ ವಲ್ಲಭಾ ।
ನ ತಾಂ ಚೋಪೋಷಯೇದ್ಯಸ್ತು ಸ ಪಾಪಿಷ್ಠತರಾಧಿಕಃ ॥ ೨೯ ॥
ತದ್ವತ್ಸ ದ್ವಾದಶೀಯೋಗೇ ಭಲ್ಲತೀರ್ಥಸ್ಯ ಸನ್ನಿಧೌ ।
ಯಸ್ತು ಮಾಂ ಪೂಜಯೇದ್ಭಕ್ತ್ಯಾ ನಾರೀಂ ವಾಪಿ ನರೋಽಪಿ ವಾ॥ ೩೩ ॥
ಇತ್ಯೇತತ್ಕಥಿತಂ ದೇವಿ ಮಾಹಾತ್ಮ್ಯಂ ಪಾಪನಾಶನಂ ।
ಭಲ್ಲತೀರ್ಥಸ್ಯ ವಿಷ್ಣೋಸ್ತು ಸರ್ವಪಾತಕನಾಶನಂ ॥ ೩೧ ॥
ತತ್ರ ವಿಷ್ಣೋಸ್ತು ಸಾನ್ನಿಧ್ಯೇ ವಾಯವ್ಯೇ ಕುಂಭಮುತ್ತಮಂ ।
ಭಲ್ಲತೀರ್ಥಂ ತು ವಿಖ್ಯಾತಂ ಯತ್ರ ಭಲ್ಲಹತೋ ಹರಿಃ ॥ ೩೨ ॥

---

೨೬. ಆದ್ದರಿಂದ ಮಾನವನು ಪ್ರಯತ್ನಿಸಿ ಆ ಕ್ಷೇತ್ರವನ್ನು ಹೊಂದಿ ಭಲ್ಲಕ ತೀರ್ಥದಲ್ಲಿ ಮಿಂದು ವಿಷ್ಣುವನ್ನು ದರ್ಶನಮಾಡಬೇಕು.

೨೭. ನನ್ನಲ್ಲಿರುವ ಭಕ್ತಿಯ ಬಲದಿಂದ ಅಹಂಕಾರಗೊಂಡು ನನಗೆ ಪ್ರಿಯನಾದ ವಿಷ್ಣುವನ್ನು ನಮಸ್ಕರಿಸದ ಪಾಪಿಷ್ಠ ಮಾನವರು ನನ್ನ ಭಕ್ತರಲ್ಲವೆಂದು ಮೊದಲು ತಿಳಿಯಬೇಕು.

೨೮. ನನ್ನ ಭಕ್ತನಾಗಿ ಏಕಾದಶೀ ದಿನ ಉಪವಾಸ ಮಾಡದವನು ನನ್ನ ಲಿಂಗ ವನ್ನು ಪೂಜಿಸಬಾರದು.

೨೯. ವಿಷ್ಣುವಿಗೆ ಪ್ರಿಯವಾದ ತಿಥಿಯು ನನಗೆ ಪ್ರಿಯವಾದುದು. ಆ ವಿಷ್ಣು ವಿನ ತಿಥಿಯಾದ ಏಕಾದಶೀ ದಿನ ಉಪವಾಸ ಮಾಡದವನು ಅತ್ಯಂತ ಪಾಪಿಷ್ಠನು.

೩೦. ಆದ್ದರಿಂದ ದ್ವಾದಶೀ ದಿನ ಭಲ್ಲ ತೀರ್ಥದ ಬಳಿ ಭಕ್ತಿಯಿಂದ ನನ್ನನ್ನು ಪೂಜಿಸಿದ ಹೆಂಗಸಿಗಾಗಲಿ, ಗಂಡಸಿಗಾಗಲಿ ಸಾವಿರ ಜನ್ಮಗಳವರೆಗೆ ಗೃಹಭಂಗವುಂಟಾ ಗುವುದಿಲ್ಲ.

೩೧. ದೇವಿ ! ಹೀಗೆ ಭಲ್ಲತೀರ್ಥದ ಮತ್ತು ಅಲ್ಲಿರುವ ಮಹಾ ವಿಷ್ಣುವಿನ ಸಕಲ ಪಾಪವನ್ನು ಪರಿಹರಿಸುವ ಮಾಹಾತ್ಮ್ಯವನ್ನು ಹೇಳಿರುವೆನು.

೩೨. ಅಲ್ಲಿ ವಿಷ್ಣುವಿನ ಸಮೀಪದಲ್ಲಿ ವಾಯುವ್ಯ ದಿಕ್ಕಿನಲ್ಲಿರುವ ಕುಂಡವು ಭಲ್ಲ ತೀರ್ಥವೆಂದು ಪ್ರಸಿದ್ಧವಾಗಿದೆ. ಅಲ್ಲಿ ವಿಷ್ಣುವಿನ ಪಾದವನ್ನು ಭಲ್ಲವ್ಯಾಧನು ಹೊಡೆ ದಿರುವನು.

ತತ್ರ ದೇಯಾನಿ ವಾಸಾಂಸಿ ಪದಂ ಗಾವೋ ವಿಧಾನತಃ ।
ದೇಯಾನಿ ವಿಪ್ರಮುಖ್ಯೇಭ್ಯಃ ಸಮ್ಯಗ್ಯಾತ್ರಾಫಲೇಪ್ಸುಭಿಃ ॥ ೩೩ ॥

ಇತಿ ಶ್ರೀ ಸ್ಕಾಂದಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಭಲ್ಲತೀರ್ಥಮಾಹಾತ್ಮ್ಯವರ್ಣನಂ ನಾಮ
ದ್ವಿಪಂಚಾಶದುತ್ತರತ್ರಿಶತತಮೋಽಧ್ಯಾಯಃ

---

೩೩. ಅಲ್ಲಿ ಯಾತ್ರಾಫಲವನ್ನು ಬಯಸುವರು ಬಟ್ಟೆ, ಪಾದರಕ್ಷೆ, ಗೋವುಗಳನ್ನು ಬ್ರಾಹ್ಮಣೋತ್ತಮರಿಗೆ ದಾನಮಾಡಬೇಕು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಭಲ್ಲತೀರ್ಥಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತೆರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ತ್ರಿಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕರ್ದಮಾಲಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಕರ್ದಮಾಲಮನುತ್ತಮಂ ।
ತೀರ್ಥಂ ತ್ರೈಲೋಕ್ಯವಿಖ್ಯಾತಂ ಸರ್ವಪಾತಕನಾಶನಂ ॥ ೧ ॥
ತಸ್ಮಿನ್ನೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ ।
ಚಂದ್ರಾರ್ಕತಪನೇ ನಷ್ಟೇ ಜ್ಯೋತಿಷಿ ಪ್ರಲಯಂ ಗತೇ ॥ ೨ ॥
ರಸಾತಲಗತಾಮುರ್ವೀಂ ದೃಷ್ಟ್ವಾ ದೇವೋ ಜನಾರ್ದನಃ ।
ವಾರಾಹಂ ರೂಪಮಾಸ್ಥಾಯ ದಂಷ್ಟ್ರಾಗ್ರೇಣ ವರಾನನೇ ।
ಉತ್ಕ್ಷಿಪ್ಯ ಧರಣೀಂ ಮೂರ್ಧ್ನಾ ಸ್ವಸ್ಥಾನೇ ಸನ್ನ್ಯವೇಶಯತ್ ॥ ೩ ॥
ಉದ್ಧೃತ್ಯ ಭಗವಾನ್ವಿಷ್ಣುರ್ವಾಕ್ಯಮೇತದುವಾಚ ಹ ॥ ೪ ॥
ಅತ್ರ ಸ್ಥಾನೇ ಸ್ಥಿತೇನೈವ ಮಯಾ ತ್ವಂ ದೇವಿ ಚೋದ್ಧೃತಾ ।
ಮಮಾತ್ರ ನಿಯತಂ ವಾಸಃ ಸದೈವಾಯಂ ಭವಿಷ್ಯತಿ ॥ ೫ ॥

ಕನ್ನಡದ ಅನುವಾದ

ಕರ್ದಮಾಲಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಮೂರುಲೋಕಗಳಲ್ಲಿ ಪ್ರಸಿದ್ಧವಾದ ಸಕಲ ಪಾಪಗಳನ್ನು ಪರಿಹರಿಸುವ ಕರ್ದಮಾಲತೀರ್ಥದೆಡೆಗೆ ಹೋಗಬೇಕು.

೨-೪. ಪ್ರಳಯಕಾಲದಲ್ಲಿ ಜಲಮಯವಾದ ಪ್ರಪಂಚದಲ್ಲಿ ಸ್ಥಾವರ ಜಂಗಮಗಳೂ, ಚಂದ್ರ ಸೂರ್ಯರೂ, ನಕ್ಷತ್ರಗಳೂ ನಷ್ಟವಾಗಲು ಶ್ರೀವಿಷ್ಣುವು ಪಾತಾಳಕ್ಕೆ ಹೋದ ಭೂಮಿಯನ್ನು ಕಂಡು ವರಾಹರೂಪವನ್ನು ಧರಿಸಿ ಕೋರೆಹಲ್ಲಿನ ಕೊನೆಯಿಂದ ಆ ಭೂಮಿಯನ್ನು ಎತ್ತಿ ತಲೆಯಿಂದ ಹೊತ್ತು ಅದರ ಸ್ಥಳದಲ್ಲಿಟ್ಟು, ಹೀಗೆಂದನು:—

೫. "ದೇವಿ! ಇಲ್ಲಿ ನಾನು ನಿನ್ನನ್ನು ಉದ್ಧಾರಮಾಡಿದ್ದರಿಂದ ನಾನು ಇಲ್ಲಿ ಯಾವಾಗಲೂ ವಾಸಿಸುವೆನು.

ಯೇ ಪಿತೄಂಸ್ತರ್ಪಯಿಷ್ಯಂತಿ ಕರ್ದಮಾಲೇ ವರಾನನೇ ।
ಆಕಲ್ಪಂ ತರ್ಪಿತಾಸ್ತೇನ ಭವಿಷ್ಯಂತಿ ನ ಸಂಶಯಃ ॥ ೬ ॥
ತತ್ರ ಶ್ರಾದ್ಧಂ ಕರಿಷ್ಯಂತಿ ಶಾಕೈರ್ಮೂಲಫಲೇನ ವಾ ।
ಭವಿಷ್ಯತಿ ಕೃತಂ ಶ್ರಾದ್ಧಂ ಸರ್ವತೀರ್ಥೇಷು ವೈ ಶುಭೇ ॥ ೭ ॥
ಅತ್ರ ತೀರ್ಥೇ ನರಃ ಸ್ನಾತ್ವಾ ಯೋ ಮಾಂ ಪಶ್ಯತಿ ಮಾನವಃ ।
ಅಪಿ ಕೀಟಪತಂಗಾ ಯೇ ನಿಧನಂ ಯಾಂತಿ ಮಾನವಾಃ ।
ತೇ ಮೃತಾಸ್ತ್ರಿದಿವಂ ಯಾಂತಿ ಸುಕೃತೇನ ಯಥಾ ದ್ವಿಜಾಃ ॥ ೮ ॥
ತತೋ ದ್ವೀಪೇಷು ಜಾಯಂತೇ ಧನಾಢ್ಯಾಶ್ಚೋತ್ತಮೇ ಕುಲೇ ।
ದಂಷ್ಟ್ರಾಭೇದೇನ ಯತ್ತೋಯಂ ನಿರ್ಗತಂ ತೇ ಶರೀರತಃ! ॥ ೯ ॥
ತತ್ರ ಸ್ನಾತ್ವಾ ನರೋ ದೇವಿ ತಿರ್ಯಗ್ಯೋನೌ ನ ಜಾಯತೇ ॥ ೧೦ ॥

ಈಶ್ವರ ಉವಾಚ :—

ಶೃಣು ದೇವಿ ಯಥಾವೃತ್ತಮಾಶ್ಚರ್ಯಂ ತತ್ರ ವೈ ಪುರಾ ।
ಮೃಗಯೂಥಂ ಸುಸಂತ್ರಸ್ತಂ ಲುಬ್ಧಕೈಃ ಪರಿಪೀಡಿತಂ ।
ಪ್ರವಿಷ್ಟಂ ಕರ್ದಮಾಲೇ ತು ಸದ್ಯೋ ಮಾನುಷತಾಂ ಗತಂ ॥ ೧೧ ॥
ಅಥ ತೇ ಲುಬ್ಧಕಾ ದೃಷ್ಟ್ವಾ ವಿಸ್ಮಯೋತ್ಫುಲ್ಲಲೋಚನಾಃ ।
ಅಪೃಚ್ಛಂತ ಚ ಸಂಭ್ರಾಂತಾಸ್ತಾನ್ಮರ್ತ್ಯಾನ್ಸ್ವರವರ್ಣಿನಿ ॥ ೧೨ ॥

---

೬. ಈ ಕರ್ದಮಾಲ ತೀರ್ಥದಲ್ಲಿ ಪಿತೃಗಳಿಗೆ ತರ್ಪಣವಿತ್ತರೂ, ಕಲ್ಪಾಂತ್ಯದ ವರೆಗೆ ಪಿತೃಗಳಿಗೆ ತರ್ಪಣ ಮಾಡಿದಂತಾಗುವುದು.

೮. ಇಲ್ಲಿ ಮಿಂದು ನನ್ನನ್ನು ದರ್ಶನ ಮಾಡಿದವರೂ, ಮೃತರಾದ ಕೀಟ ಪತಂಗ, ಮಾನವರೂ, ಪುಣ್ಯವನ್ನು ಮಾಡಿದ ಬ್ರಾಹ್ಮಣರಂತೆ ಸ್ವರ್ಗಕ್ಕೆ ತೆರಳುವರು.

೯–೧೦. ಅನಂತರ ದ್ವೀಪಗಳಲ್ಲಿ ಉತ್ತಮ ವಂಶದಲ್ಲಿ ಹುಟ್ಟುತ್ತಾರೆ. ನನ ಹಲ್ಲಿನಿಂದ ನಿನ್ನಿಂದ ಹೊರಟ ನೀರಿನಲ್ಲಿ ಮಿಂದ ಮಾನವನು ತಿರ್ಯಗ್ಯೋನಿಯಲ್ಲಿ ಹುಟ್ಟುವುದಿಲ್ಲ.

೧೧. ಈಶ್ವರನು ಹೇಳುತ್ತಾನೆ:—ದೇವಿ! ಅಲ್ಲಿ ನಡೆದ ಆಶ್ಚರ್ಯಕರವಾದ ವಿಷಯವೊಂದನ್ನು ಕೇಳು, ಬೇಡರಿಂದ ಪೀಡೆಗೊಂಡ ಜಿಂಕೆಗಳ ಹಿಂಡು ಕರ್ದಮಾಲವನ್ನು ಪ್ರವೇಶಿಸಲು ಅದು ಕೂಡಲೆ ಮನುಷ್ಯತ್ವವನ್ನು ಹೊಂದಿತು.

೧೨. ಸುಂದರಿ ! ಅನಂತರ ಬೇಡರು ಆಶ್ಚರ್ಯದಿಂದ ಅರಳಿದ ಕಣ್ಣುಗಳುಳ್ಳವರಾಗಿ ಸಂಭ್ರಮದಿಂದ ಆ ಮನುಷ್ಯರನ್ನು ಹೀಗೆ ಪ್ರಶ್ನೆಮಾಡಿದರು.

ಮೃಗಯೂಥಮನುಪ್ರಾಪ್ತಂ ಕೇನ ಮಾರ್ಗೇಣ ನಿರ್ಗತಂ ।
ಅಥೋಚುಸ್ತೇ ವಯಂ ಪ್ರಾಪ್ತಾ ಮಾನುಷಂ ಮೃಗರೂಪಿಣಃ ॥ ೧೩ ॥
ಏತತ್ತೀರ್ಥಪ್ರಭಾವೋಽಯಂ ನ ವಿದ್ಮೋ ಹ್ಯಾತ್ಮಕಾರಣಂ ।
ತತಸ್ತೇ ಲುಬ್ಧಕಾಸ್ತ್ಯಕ್ತ್ವಾ ಧನೂಂಷಿ ಸಶರಾಣಿ ಚ ।
ತತ್ರ ಸ್ನಾತ್ವಾ ಮಹಾಭಾಗೇ ಮುಕ್ತಾಶ್ಚ ಸರ್ವಪಾತಕೈಃ ॥ ೧೪ ॥

ಪಾರ್ವತ್ಯುವಾಚ :—

ಭಗವನ್ವಿಸ್ತರಂ ಬ್ರೂಹಿ ಕರ್ದಮಾಲಮಹೋದಯಂ ।
ಉತ್ಪತ್ತಿಂ ಚ ವಿಧಾನಂ ಚ ಕ್ಷೇತ್ರಸೀಮಾದಿಕಂ ಕ್ರಮಾತ್ ॥ ೧೫ ॥

ಈಶ್ವರ ಉವಾಚ :—

ಶೃಣು ದೇವಿ ರಹಸ್ಯಂ ತು ಕರ್ದಮಾಲಸಮುದ್ಭವಂ ।
ಗೂಢಂ ಬ್ರಹರ್ಷಿಸರ್ವಸ್ವಂ ನ ದೇಯಂ ಕಸ್ಯಚಿತ್ತ್ವಯಾ ॥ ೧೬ ॥
ಪೂರ್ವಮೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ ।
ಚಂದ್ರಾರ್ಕಪವನೇ ನಷ್ಟೇ ಜ್ಯೋತಿಷಿ ಪ್ರಲಯಂ ಗತೇ ॥ ೧೭ ॥
ಏಕಾರ್ಣವಂ ಜಗದಿದಂ ಬ್ರಹ್ಮಾಪಶ್ಯದಶೇಷತಃ ।
ತಸ್ಮಿನ್ವಸುಮತೀ ಮಗ್ನಾ ಪಾತಾಲತಲಮಾಗತಾ ॥ ೧೮ ॥

೧೩–೧೪. "ಇಲ್ಲಿ ಪ್ರವೇಶಿಸಿದ ಜಿಂಕೆಗಳ ಹಿಂಡು ಯಾವದಾರಿಯಿಂದ ಹೊರಗೆ ಹೊರಟು ಹೋಯಿತು? ಅದಕ್ಕೆ ಆ ಮನುಷ್ಯರು ಮೃಗಗಳಾಗಿದ್ದ ನಾವು ಇಲ್ಲಿಗೆ ಬಂದು ಕೂಡಲೆ ಮನುಷ್ಯರಾದೆವು. ಇದು ಈ ತೀರ್ಥದಮಾಹಾತ್ಮ್ಯವೇ ಹೊರತುನಮ್ಮಿಂದಾದುದಲ್ಲ". ಎನ್ನಲು ಆ ಬೇಡರು ಬಿಲ್ಲು ಬಾಣಗಳನ್ನು ತ್ಯಜಿಸಿ ಅಲ್ಲಿ ಮಿಂದು ಸಕಲ ಪಾಪಗಳಿಂದ ಮುಕ್ತರಾದರು.

೧೫. ಪಾರ್ವತಿಯು ಹೇಳುತ್ತಾಳೆ :—ಪೂಜ್ಯನೆ ! ಕರ್ದಮಾಲ ಕ್ಷೇತ್ರದ ಮಾಹಾತ್ಮ್ಯವನ್ನೂ, ಉತ್ಪತ್ತಿಯನ್ನೂ, ಕ್ರಮವನ್ನೂ, ಎಲ್ಲೆ ಮೊದಲಾದುವುಗಳನ್ನೂ ಹೇಳು.

೧೬. ಈಶ್ವರನು ಹೇಳುತ್ತಾನೆ :—ದೇವಿ ! ಬ್ರಹ್ಮರ್ಷಿಗಳ ಸರ್ವ ಸ್ವರೂಪವಾದ ಕರ್ದಮಾಲದ ರಹಸ್ಯವನ್ನು ಹೇಳುವೆನುಕೇಳು. ನೀನು ಇದನ್ನು ಯಾರಿಗೂ ಹೇಳಕೂಡದು.

೧೭–೧೮. ಹಿಂದೆ ಪ್ರಳಯಕಾಲದಲ್ಲಿ ಜಲಮಯವಾದ ಪ್ರಪಂಚದಲ್ಲಿ ಸ್ಥಾವರ ಜಂಗಮಗಳೂ, ಚಂದ್ರ, ಸೂರ್ಯ, ಗಾಳಿಗಳೂ, ನಕ್ಷತ್ರಗಳು, ನಷ್ಟವಾಗಲು ಅದನ್ನು ಬ್ರಹ್ಮನು ನೋಡಿದನು. ಅದರಲ್ಲಿ ಭೂಮಿಯು ಮುಳುಗಿ ಪಾತಾಳವನ್ನು ಹೊಂದಿತು.

ತತೋ ಯಜ್ಞವರಾಹೋಽಸೌ ಕೃತ್ವಾ ಯಜ್ಞಮಯಂ ವಪುಃ ।
ಉದ್ದಧಾರ ಮಹೀಂ ಕೃತ್ಸ್ನಾಂ ದಂಷ್ಟ್ರಾಗ್ರೇಣ ವರಾನನೇ ॥ ೧೯ ॥
ವೇದಪಾದೋ ಯೂಪದಂಷ್ಟ್ರಃ ಕ್ರತುದಂತಃ ಸ್ರುಚೀಮುಖಃ ।
ಅಗ್ನಿಜಿಹ್ವೋ ದರ್ಭರೋಮಾ ಬ್ರಹ್ಮಶೀರ್ಷಾ ಮಹಾತಪಾಃ ॥ ೨೦ ॥
ಅಹೋರಾತ್ರೇಕ್ಷಣಪರೋ ವೇದಾಂಗಶ್ರುತಿಭೂಷಣಃ ।
ಆಜ್ಯನಾಸಃ ಸ್ರುವತುಂಡಃ ಸಾಮಘೋಷಸ್ವನೋ ಮಹಾನ್ ॥ ೨೧ ॥
ಪ್ರಾಗ್ವಂಶಕಾಯೋ ದ್ಯುತಿಮಾನ್ಮಾತ್ರಾದೀಕ್ಷಾಭಿರಾವೃತಃ ।
ದಕ್ಷಿಣಾಹೃದಯೋ ಯೋಗೀ ಮಹಾಸತ್ರಮಹೋ ಮಹಾನ್ ॥ ೨೨ ॥
ಉಪಾಕರ್ಮೋಷ್ಠರುಚಕಃ ಪ್ರವರ್ಗ್ಯಾವರ್ತಭೂಷಣಃ ।
ನಾನಾಚ್ಛಂದೋಗತಿಪಥೋ ಬ್ರಹ್ಮೋಕ್ತಕ್ರಮವಿಕ್ರಮಃ ॥ ೨೩ ॥
ಭೂತ್ವಾ ಯಜ್ಞವರಾಹೋಽಸಾವುದ್ದಧಾರ ಮಹೀಂ ತತಃ ।
ತಸ್ಯೋದ್ಧೃತವತಃ ಪೃಥ್ವೀಂ ದಂಷ್ಟ್ರಾಗ್ರಂ ನಿರ್ಗತಂ ಬಹಿಃ ॥ ೨೪ ॥
ತಸ್ಮಿನ್ಪ್ರಾಭಾಸಿಕೇ ಕ್ಷೇತ್ರೇ ಕರ್ದಮೇನ ವಿಲೇಪಿತಂ ।
ತದ್ದಂಷ್ಟ್ರಾಗ್ರಂ ಯತೋ ದೇವಿ ಕರ್ದಮಾಲಂ ತತಃ ಸ್ಮೃತಂ ॥ ೨೫ ॥

---

೧೯. ಸುಂದರಿ! ಆತನು ತರುವಾಯ ಯಜ್ಞರೂಪವಾದ ಶರೀರವನ್ನು ಧರಿಸಿ ತನ್ನ ಹಲ್ಲಿನ ಕೊನೆಯಿಂದ ಸಂಪೂರ್ಣಭೂಮಿಯನ್ನು ಉದ್ಧಾರಮಾಡಿದನು.

೨೦–೨೫. ಅವನು ವೇದಪಾದನೂ, ಯೂಪಸ್ತಂಭವೇ ದಾಡೆಯಾಗುಳ್ಳವನೂ, ಯಜ್ಞವೇ ದಂತವಾಗುಳ್ಳವನೂ, ಸ್ರುಕ್ಕೇ ಮುಖವಾಗುಳ್ಳವನೂ, ಅಗ್ನಿಯೇ ನಾಲಿಗೆಯಾಗುಳ್ಳವನೂ, ದರ್ಭೆಗಳೇ ಮೈಗೂದಲಾಗುಳ್ಳವನೂ, ವೇದಮಸ್ತಕನೂ, ಅತ್ಯಂತ ತಪಸ್ವಿಯೂ, ಹಗಲು ರಾತ್ರಿಗಳೇ ಕಣ್ಣಾಗುಳ್ಳವನೂ, ವೇದಾಂಗಗಳೆ ಕಿವಿಯ ಒಡವೆಯಾಗುಳ್ಳವನೂ, ತುಪ್ಪವೇ ಮೂಗಾಗುಳ್ಳವನೂ, ಸ್ರುವವೇ ಮುಖವಾಗುಳ್ಳವನೂ. ಸಾಮವೇದಧ್ವನಿಯೆ ಸ್ವರವಾಗುಳ್ಳವನೂ, ಹವಿರ್ಗೇಹವೇ ಶರೀರವಾಗುಳ್ಳವನೂ, ಅತಿಶಯ ಕಾಂತಿಯುಳ್ಳವನೂ, ಮಾತ್ರಾದೀಕ್ಷೆಯುಳ್ಳವನೂ, ದಕ್ಷಿಣೆಯೆಹೃದಯವಾಗುಳ್ಳವನೂ, ಯೋಗಿಯೂ, ಮಹಾಸತ್ರವೆಂಬ ಉತ್ಸವವುಳ್ಳವನೂ, ಉಪಾಕರ್ಮವೆಂಬ ತುಟಿಯಕಾಂತಿಯುಳ್ಳವನೂ, ಪ್ರವರ್ಗ್ಯವೆಂಬ ಒಡವೆಯುಳ್ಳವನೂ, ನಾನಾ ಬಗೆಯ ಛಂದಸ್ಸೇ ದಾರಿಯಾಗುಳ್ಳವನೂ, ವೇದೋಕ್ತ ಕ್ರಮವೇ ಹೆಜ್ಜೆಯಾಗುಳ್ಳವನೂ ಆಗಿ ಭೂಮಿಯನ್ನು ಉದ್ಧರಿಸಿದನು. ಹೀಗೆ ಅವನು ಭೂಮಿಯನ್ನು ಎತ್ತುವಾಗ ಅವನ ದಾಡೆಯ ಕೊನೆಯು ಭೂಮಿಯಿಂದಹೊರಹೊರಟು ಪ್ರಾಭಾಸಿಕಕ್ಷೇತ್ರದಲ್ಲಿ ಕೆಸರಿನಿಂದ ಲಿಪ್ತವಾಯಿತು. ಆದರಿಂದ ಆ ಕ್ಷೇತ್ರವು ಕರ್ದಮಾಲವೆಂದು ವಿಖ್ಯಾತವಾಯಿತು.

ದಂಡೋದ್ಭೇದಂ ಮಹಾತುಂಡಂ ಯತ್ರ ದಂಷ್ಟ್ರಾ ಸುಸಂಸ್ಥಿತಾ ।
ತದ್ದಂಷ್ಟ್ರಯೋದ್ಧೃತಂ ತೋಯಂ ಕೋಟಿಗಂಗಾಭಿಷೇಕವತ್ ॥ ೨೬ ॥
ತತ್ರ ಗವ್ಯೂತಿಮಾತ್ರಂ ತು ವಿಷ್ಣುಕ್ಷೇತ್ರಂ ಸನಾತನಂ ।
ದೇಶಾಂತರಂ ಗತಾ ಯೇ ಚ ದಂಡೋದ್ಭೇದೇ ಮ್ರಿಯಂತಿ ವೈ ।
ಯಾವತ್ಕಲ್ಪಸಹಸ್ರಾಣಿ ವಿಷ್ಣುಲೋಕಂ ವ್ರಜಂತಿ ಯೇ ॥ ೨೭ ॥
ಯಸ್ತು ಪಶ್ಯೇನ್ಮಹಾದೇವಿ ಕರ್ದಮಾಲೇ ತು ಸೂಕರಂ ।
ಕೋಟಿಹಿಂಸಾಯುತೋ ವಾಪಿ ಸ ಪ್ರಾಪ್ಸ್ಯತಿ ಪರಾಂ ಗತಿಂ ॥ ೨೮ ॥
ದಶಜನ್ಮಕೃತಂ ಪಾಪಂ ನಶ್ಯೇತ್ತದ್ದರ್ಶನಾತ್ಪ್ರಿಯೇ ।
ಜನ್ಮಾಂತರಸಹಸ್ರೇಷು ಯತ್ಕೃತಂ ಪಾಪಸಂಚಯಂ ॥ ೨೯ ॥
ಕರ್ದಮಾಲೇ ತು ವಾರಾಹಂ ದೃಷ್ಟ್ವಾ ತನ್ನಾಶಮೇಷ್ಯತಿ ।
ಹೇಮಕೋಟಿಸಹಸ್ರಾಣಿ ಗವಾಂ ಕೋಟಿಶತಾನಿ ಚ ॥ ೩೦ ॥
ದತ್ವಾ ಯಲ್ಲಭತೇ ಪುಣ್ಯಂ ಸಕೃದ್ವಾರಾಹದರ್ಶನಾತ್ ।
ಕಲೌ ಯುಗೇ ಮಹಾರೌದ್ರೇ ಪ್ರಾಣಿನಾಂ ಚ ಭಯಾವಹೇ ।
ನಾನ್ಯತ್ರ ಜಾಯತೇ ಮುಕ್ತಿರ್ಮುಕ್ತ್ವಾ ಕ್ಷೇತ್ರಂ ತು ಸೌಕರಂ ॥ ೩೧ ॥

---

೨೬. ಆ ದಾಡೆಯು ಪ್ರವೇಶಿಸಿದ ಕುಂಡವು ದಂಡೋದ್ಭೇದವೆಂದಾಯಿತು. ಅವನ ದಾಡೆಯಿಂದ ಎತ್ತಿದ ನೀರು ಕೋಟಿ ಗಂಗಾಭಿಷೇಕದ ನೀರಿನಂತಾಯಿತು।

೨೭. ಅನಾದಿಯಾದ ಆ ವಿಷ್ಣುಕ್ಷೇತ್ರವು ನಾಲ್ಕು ಮೈಲಿಗಳ ವಿಸ್ತೀರ್ಣವಾಗಿರುವುದು. ದೇಶಾಂತರಕ್ಕೆ ಹೋಗಿ ದಂಡೋದ್ಭೇದದಲ್ಲಿ ಮೃತರಾದವರು ಸಾವಿರಕಲ್ಪಗಳವರೆಗೆ ವಿಷ್ಣುಲೋಕವಾಸಿಗಳಾಗುವರು.

೨೮ ಮಹಾದೇವಿ! ಕರ್ದಮಾಲ ವರಾಹನನ್ನು ಕಂಡವನು ಕೋಟಿ ಹಿಂಸೆಗಳನ್ನು ಮಾಡಿದ್ದರೂ ಉತ್ತಮಗತಿಯನ್ನು ಪಡೆಯುವನು.

೨೯-೩೧. ಪ್ರಿಯಳೆ! ಅವನನ್ನು ನೋಡಿದವನ ಹತ್ತು ಜನಗಳ ಪಾಪವು ಪರಿಹಾರವಾಗುವುದು. ಅನೇಕ ಜನ್ಮಗಳ ಪಾಪವೂ ನಾಶವಾಗುವುದು. ಒಂದು ಸಾರಿ ಅವನನ್ನು ನೋಡುವುದರಿಂದ ಸಾವಿರ ಕೋಟಿ ಸುವರ್ಣಗಳನ್ನೂ, ನೂರು ಕೋಟಿ ಗೋವುಗಳನ್ನೂ ದಾನಮಾಡಿದ ಪುಣ್ಯವು ಲಭಿಸುವುದು. ಪ್ರಾಣಿಗಳಿಗೆ ಭಯಂಕರವಾದ ಈ ಕಲಿಯುಗದಲ್ಲಿ ವರಾಹಕ್ಷೇತ್ರವನ್ನು ಬಿಟ್ಟರೆ ಇತರ ಕಡೆಯಲ್ಲಿ ಮೋಕ್ಷವಾಗುವುದಿಲ್ಲ.

ಏತತ್ಸಾರತರಂ ದೇವಿ ಪ್ರೋಕ್ತಮುದ್ದೇಶತಸ್ತವ ।
ಕರ್ದಮಾಲಸ್ಯ ಮಾಹಾತ್ಮ್ಯಂ ಸರ್ವಪಾತಕನಾಶನಮ್ ॥ ೩೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಕರ್ದಮಾಲಮಾಹಾತ್ಮ್ಯವರ್ಣನಂ ನಾಮ
ತ್ರಿಪಂಚಾಶದುತ್ತರತ್ರಿಶತತಮೋಽಧ್ಯಾಯಃ

---

೩೨. ದೇವಿ! ಹೀಗೆ ಸಕಲ ಪಾಪಗಳನ್ನೂ ಪರಿಹರಿಸುವ ಉತ್ಕೃಷ್ಟವಾದ ಕರ್ದಮಾಲದ ಮಾಹಾತ್ಮ್ಯವನ್ನು ನಿನಗೆ ಹೇಳಿರುವೆನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಕರ್ದಮಾಲಮಾಹಾತ್ಮ್ಯ ವರ್ಣನವೆಂಬ
ಮುನ್ನೂರಐವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಷ್ಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಗುಪ್ತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಗುಪ್ತೇಶ್ವರಂ ಪ್ರಿಯೇ ।
ತತ್ರ ಪಶ್ಚಿಮವಾಯವ್ಯೇ ಯತ್ರ ಸೋಮೋಽಕರೋತ್ತಪಃ ॥ ೧ ॥
ಗುಪ್ತೋ ಭೂತ್ವಾ ಕುಷ್ಠರೋಗಾಲ್ಲಜ್ಜಯಾಧೋಮುಖಃ ಸ್ಥಿತಃ ।
ದಿವ್ಯಂ ವರ್ಷಸಹಸ್ರಂ ತು ಪ್ರಭಾಸಕ್ಷೇತ್ರ ಉತ್ತಮೇ ॥ ೨ ॥
ತತಃ ಪ್ರತ್ಯಕ್ಷತಾಂ ಯಾತಃ ಸರ್ವದೇವಪತಿಃ ಶಿವಃ ।
ತುಷ್ಟೋ ಬಭೂವ ಚಂದ್ರಸ್ಯ ಕ್ಷಯನಾಶಂ ತಥಾಕರೋತ್ ॥ ೩ ॥
ಕ್ಷಯರೋಗವಿನಿರ್ಮುಕ್ತಸ್ತತೋಽಭೂನ್ಮೃಗಲಾಂಛನಃ ।
ಪ್ರತಿಷ್ಠಾಪ್ಯ ಮಹಾಲಿಂಗಂ ಸುರಾಸುರನಮಸ್ಕೃತಂ ॥ ೪ ॥
ಗುಪ್ತಸ್ತೇಪೇ ತಪೋ ಯಸ್ಮಾತ್ತಸ್ಮಾದ್ಗುಪ್ತೇಶ್ವರಃ ಸ್ಮೃತಃ ।
ಸರ್ವಕುಷ್ಠಹರೋ ದೇವೋ ದರ್ಶನಾತ್ಸ್ಪರ್ಶನಾದಪಿ ॥ ೫ ॥

ಕನ್ನಡದ ಅನುವಾದ

ಗುಪ್ತೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರ ಹೇಳುತ್ತಾನೆ:—ಮಹಾದೇವಿ! ತರುವಾಯ ಆ ಕರ್ದಮಾಲ ಕ್ಷೇತ್ರದ ಪಶ್ಚಿಮವಾಯವ್ಯ ದಿಕ್ಕಿನಲ್ಲಿರುವ ಗುಪ್ತೇಶ್ವರನೆಡೆಗೆ ಹೋಗಬೇಕು. ಕುಷ್ಠರೋಗಿಯಾದ ಚಂದ್ರನು ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡು ರಹಸ್ಯವಾಗಿ ಸಾವಿರ ದಿವ್ಯವರ್ಷಕಾಲ ತಪಸ್ಸನ್ನು ಮಾಡಿದನು.

೩. ಬಳಿಕ ಸಮಸ್ತ ದೇವತೆಗಳಿಗೆ ಒಡೆಯನಾದ ಶಿವನು ಪ್ರತ್ಯಕ್ಷನಾಗಿ ಸಂತೋಷದಿಂದ ಚಂದ್ರನ ಕ್ಷಯರೋಗವನ್ನು ಪರಿಹರಿಸಿದನು.

೪–೫. ಬಳಿಕ ಕ್ಷಯರೋಗದಿಂದ ಮುಕ್ತನಾದ ಚಂದ್ರನು ದೇವದಾನವರಿಂದ ನಮಸ್ಕರಿಸಲ್ಪಟ್ಟ ಮಹೇಶ್ವರ ಲಿಂಗವನ್ನು ಪ್ರತಿಷ್ಠೆಮಾಡಿ ಗುಪ್ತನಾಗಿ ತಪಸ್ಸನ್ನಾಚರಿಸಿದನು. ಆದರಿಂದ ಗುಪ್ತೇಶ್ವರನೆಂದು ಪ್ರಸಿದ್ಧನಾದ ಆ ಮಹೇಶ್ವರನು ದರ್ಶನ ಸ್ಪರ್ಶಗಳಿಂದ ಸಕಲ ವಿಧಕುಷ್ಠರೋಗಗಳನ್ನು ಪರಿಹರಿಸುವನು.

ಸೋಮವಾರೇ ವಿಶೇಷೇಣ ಯಸ್ತಲ್ಲಿಂಗಂ ಪ್ರಪೂಜಯೇತ್ ।
ತಸ್ಯಾನ್ವಯೇಽಪಿ ದೇವೇಶಿ ಕುಷ್ಠೀ ಕಶ್ಚಿನ್ನ ಜಾಯತೇ ॥ ೬ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಗುಪ್ತೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಚತುಷ್ಪಂಚಾಶದುತ್ತರತ್ರಿಶತತಮೋಽಧ್ಯಾಯಃ ॥

---

೬. ಸೋಮವಾರದದಿನ ವಿಶೇಷವಾಗಿ ಆ ಲಿಂಗವನ್ನು ಪೂಜಿಸಿದವನ ವಂಶದಲ್ಲಿ ಒಬ್ಬ ಕುಷ್ಠರೋಗಿಯೂ ಜನಿಸುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರ ಮಾಹಾತ್ಮ್ಯದಲ್ಲಿ
ಗುಪ್ತೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ।

ಪಂಚಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಸುವರ್ಣೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ದೇವಂ ಬಹುಸುವರ್ಣಕಂ ।
ಹಿರಣ್ಯಾಪೂರ್ವದಿಗ್ಭಾಗೇ ಸ್ಥಾನೇ ಬಹುಸುವರ್ಣಕೇ ॥ ೧ ॥
ಧರ್ಮಪುತ್ರೇಣ ಯತ್ರೈವ ಕೃತೋ ಯಜ್ಞಃ ಸುದುಷ್ಕರಃ ।
ನಾಮ್ನಾ ಬಹುಸುವರ್ಣೇತಿ ಸ್ಥಾಪ್ಯ ಲಿಂಗಂ ಮಹಾಪ್ರಭಂ ॥ ೨ ॥
ಸರ್ವಕ್ರತೂನಾಂ ಫಲದಂ ನಾಮ್ನಾ ಸರ್ವೇಶ್ವರಂ ವಿದುಃ ।
ತತ್ರೈವ ಸಂಸ್ಥಿತಂ ಲಿಂಗಂ ಪೂರ್ಣಂ ಸಾರಸ್ವತೈರ್ಜಲೈಃ ॥ ೩ ॥
ಸ್ನಾತ್ವಾ ತತ್ರ ವರಾರೋಹೇ ಪಿಂಡದಾನಂ ದದಾತಿ ಯಃ ।
ಕುಲಕೋಟಿಂ ಸಮುದ್ಧೃತ್ಯ ರುದ್ರಲೋಕೇ ಮಹೀಯತೇ ॥ ೪ ॥

ಕನ್ನಡದ ಅನುವಾದ

ಸುವರ್ಣೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಅನಂತರ ಹಿರಣ್ಯಾನದಿಯ ಪೂರ್ವದಿಕ್ಕಿನಲ್ಲಿ ಬಹುಸುವರ್ಣಕಸ್ಥಾನದಲ್ಲಿರುವ ಬಹುಸುವರ್ಣಕೇಶ್ವರನೆಡೆಗೆ ಹೋಗಬೇಕು.

೨. ಧರ್ಮರಾಜನು ಅಲ್ಲಿ ಬಹುಸುವರ್ಣವೆಂಬ ಲಿಂಗವನ್ನು ಪ್ರತಿಷ್ಠೆಮಾಡಿ ದುಷ್ಕರವಾದ ಯಜ್ಞವನ್ನು ಮಾಡಿರುವನು

೩. ಸರಸ್ವತೀ ಆ ನದಿಯ ನೀರಿನಿಂದ ತುಂಬಿರುವ ಆ ಲಿಂಗವನ್ನು ಸಕಲ ಯಜ್ಞಗಳ ಫಲವನ್ನೀಯುವ ಸರ್ವೇಶ್ವರನೆಂದು ಹೇಳುವರು.

೪. ಪ್ರಿಯಳೆ! ಅಲ್ಲಿ ಮಿಂದು ಪಿಂಡಪ್ರದಾನಮಾಡಿದವನು ಕೋಟಿಕುಲಗಳನ್ನು ಉದ್ಧರಿಸಿ ರುದ್ರಲೋಕದಲ್ಲಿ ಪೂಜ್ಯನಾಗುವನು.

ಯಸ್ತಂ ಪೂಜಯತೇ ಭಕ್ತ್ಯಾ ಗಂಧಪುಷ್ಪೈರ್ವಿಧಾನತಃ ।
ಕೋಟಿಪೂಜಾಫಲಂ ತಸ್ಯ ತಥೇತ್ಯಾಹ ಸದಾಶಿವಃ ॥ ೫ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಽಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಬಹುಸುವರ್ಣೇಶ್ವರಮಾಹಾತ್ಮ್ಯವರ್ಣನಂನಾಮ
ಪಂಚಪಂಚಾಶದುತ್ತರತ್ರಿಶತತಮೋಽಧ್ಯಾಯಃ

---

೫. ಆ ಶಿವನನ್ನು ಗಂಧಪುಷ್ಪಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದವನು ಕೋಟಿಪೂಜಾ ಫಲವನ್ನು ಹೊಂದುವನೆಂದು ಮಹೇಶ್ವರನು ಹೇಳುತ್ತಾನೆ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದ ಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಬಹುಸುವರ್ಣೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಟ್‌ಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಶೃಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಶೃಂಗೇಶ್ವರಮನುತ್ತಮಂ ।
ಶುಕಸ್ಥಾನಸ್ಯ ಸಾನ್ನಿಧ್ಯೇ ಸರ್ವಪಾತಕನಾಶನಂ ॥ ೧ ॥
ಸ್ನಾತ್ವಾ ತತ್ರೈವ ವಿಧಿವಚ್ಛೃಂಗೇಶಂ ಪೂಜಯೇನ್ನರಃ ।
ಮುಕ್ತಃ ಸ್ಯಾತ್ಪಾತಕೈಃ ಸರ್ವೈರೃಷ್ಯಶೃಂಗೋ ಯಥಾ ಪುರಾ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಶೃಂಗೇಶ್ವರಮಾಹಾತ್ಮ್ಯವರ್ಣನಂನಾಮ ॥ಷಟ್ ಪಂಚಾಶದುತ್ತರತ್ರಿಶತತಮೋಽಧ್ಯಾಯಃ।

ಕನ್ನಡದ ಅನುವಾದ

ಶೃಂಗೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ತರುವಾಯ ಶುಕಸ್ಥಾನದ ಸಮೀಪದಲ್ಲಿರುವ ಸಕಲ ಪಾಪಗಳನ್ನು ಪರಿಹರಿಸುವ ಶೃಂಗೇಶ್ವರನೆಡೆಗೆ ಹೋಗಬೇಕು.

೨. ಅಲ್ಲಿ ವಿಧಿಯಂತೆ ಮಿಂದು ಶೃಂಗೇಶ್ವರನನ್ನು ಪೂಜಿಸಿದ ಮನುಷ್ಯನು ಋಷ್ಯಶೃಂಗಮುನಿಯಂತೆ ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಶಂಗೇಶ್ವರಮಾಹಾತ್ಮ್ಯವರ್ಣನವೆಂಬ ಮುನ್ನೂರಐವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಸಪ್ತಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕೋಟೀಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತಸ್ಮಾದೀಶಾನದಿಗ್ಭಾಗೇ ತತ್ಕೋಟಿನಗರಂ ಸ್ಮೃತಂ ।
ತಸ್ಯ ದಕ್ಷಿಣದಿಗ್ಭಾಗೇ ಸ್ಥಿತಂ ಯೋಜನಮಾತ್ರಕಂ ।
ಕೋಟೀಶ್ವರಂ ಮಹಾಲಿಂಗಂ ಕೋಟಿಯಜ್ಞಫಲಪ್ರದಂ ॥ ೧ ॥
ಸ್ನಾತ್ವಾ ತತ್ರ ವಿಧಾನೇನ ಯಸ್ತಲ್ಲಿಂಗಂ ಪ್ರಪೂಜಯೇತ್ ।
ಸ ಮುಕ್ತಃ ಪಾತಕೈಃ ಸರ್ವೈಃ ಕೋಟಿಯಜ್ಞಫಲಂ ಲಭೇತ್ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ ಕೋಟೀಶ್ವರಮಾಹಾತ್ಮ್ಯವರ್ಣನಂ ನಾಮ ಸಪ್ತಪಂಚಾಶದುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಕೋಟೀಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಆ ಶೃಂಗೇಶ್ವರನ ಈಶಾನ್ಯದಿಕ್ಕಿನಲ್ಲಿ ಕೋಟಿ ನಗರವಿರುವುದು. ಅದರ ದಕ್ಷಿಣ ದಿಕ್ಕಿನಲ್ಲಿ ಒಂದು ಯೋಜನ ವಿಸ್ತೀರ್ಣವಾದ ಕೋಟಿಯಜ್ಞಗಳ ಫಲವನ್ನೀಯುವ ಕೋಟೀಶ್ವರ ಲಿಂಗವಿರುವುದು.

೨. ಅಲ್ಲಿ ಮಿಂದು ವಿಧಿಯಂತೆ ಆ ಲಿಂಗವನ್ನು ಪೂಜಿಸಿದವನು ಸಕಲ ಪಾಪ ಮುಕ್ತನಾಗಿ ಕೋಟಿಯಜ್ಞಗಳ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ ಕೋಟೀಶ್ವರಮಾಹಾತ್ಮ್ಯ ವರ್ಣನವೆಂಬ ಮುನ್ನೂರಐವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಅಷ್ಟಪಂಚಾಶದುತ್ತರತ್ರಿಶತತಮೋऽಧ್ಯಾಯಃ

ನಾರಾಯಣತೀರ್ಥಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ತೀರ್ಥಂ ನಾರಾಯಣಾಭಿಧಂ ।
ತಸ್ಯೈವೇಶಾನದಿಗ್ಭಾಗೇ ವಾಪೀ ಶಾಂಡಿಲ್ಯಕೀರ್ತಿತಾ ॥ ೧ ॥
ಸ್ನಾತ್ವಾ ತತ್ರೈವ ವಿಧಿನಾ ನಾರೀ ಚೈವ ಪತಿವ್ರತಾ ।
ಸ್ಪೃಷ್ಟ್ವಾಸ್ಪೃಷ್ಟ್ವಾ ವಿಮುಚ್ಯೇತ ರಜೋದೋಷಭಯಾದ್ಧ್ರುವಂ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ನಾರಾಯತೀರ್ಥಮಾಹಾತ್ಮ್ಯವರ್ಣನಂನಾಮ
॥ ಅಷ್ಟಪಂಚಾಶದುತ್ತರತ್ರಿಶತತಮೋऽಧ್ಯಾಯಃ ॥

ಕನ್ನಡದ ಅನುವಾದ

ನಾರಾಯಣತೀರ್ಥಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ನಾರಾಯಣ ತೀರ್ಥಕ್ಕೆ ಹೋಗಬೇಕು. ಅದರ ಈಶಾನ್ಯ ದಿಕ್ಕಿನಲ್ಲಿ ಶಾಂಡಿಲ್ಯವೆಂಬ ವಾಪಿಯಿರುವುದು.

೨. ಅಲ್ಲಿ ಪತಿವ್ರತೆಯಾದ ಹೆಂಗಸು ಋಷಿಪಂಚಮೀ ದಿನ ಮಿಂದು ವಿಧಿಯಂತೆ ಶಾಂಡಿಲ್ಯನನ್ನು ಪೂಜಿಸಿದರೆ ರಜಸ್ವಲಾದೋಷದಿಂದ ಮುಕ್ತಳಾಗುವಳು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ನಾರಾಣತೀರ್ಥಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಏಕೋನಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಶೃಂಗಾರೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸ್ಥಾನಂ ಶೃಂಗಸರೋಽಭಿಧಂ ॥ ೧ ॥
ಶೃಂಗಾರೇಶ್ವರನಾಮಾ ಚ ತತ್ರ ದೇವಃ ಪ್ರತಿಷ್ಠಿತಃ ।
ಶೃಂಗಾರಂ ವಿಧಿವಚ್ಚಕ್ರೇ ಯತ್ರ ಗೋಪೀಯುತೋ ಹರಿಃ ॥ ೨ ॥
ಶೃಂಗಾರೇಶ್ವರನಾಮಾ ಚ ತೇನ ಪಾಪೌಘನಾಶನಃ ।
ಪೂಜಯೇದ್ಯೋ ವಿಧಾನೇನ ತತ್ರ ಸ್ಥಾನೇ ಸ್ಥಿತಂ ಭವಂ ।
ದಾರಿದ್ರ್ಯದುಃಖಸಂಯುಕ್ತೋ ನ ಸ ಭೂಯಾದ್ಭವೇ ಕ್ವಚಿತ್ ॥ ೩ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶೃಂಗಾರೇಶ್ವರಮಾಹಾತ್ಮ್ಯವರ್ಣನಂ ನಾಮ
॥ ಏಕೋನಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಶೃಂಗಾರೇಶ್ವರಮಾಹಾತ್ಮ್ಯವರ್ಣನ

೧–೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಶೃಂಗಸರಸ್ಸೆಂಬ ಸ್ಥಾನಕ್ಕೆ ಹೋಗಬೇಕು. ಅಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ಶೃಂಗಾರೇಶ್ವರನನ್ನು ಪ್ರತಿಷ್ಠೆಮಾಡಿರುವನು.

೩. ಆದರಿಂದ ಅಲ್ಲಿರುವ ಪಾಪವನ್ನು ಪರಿಹರಿಸುವ ಶೃಂಗಾರೇಶ್ವರನನ್ನು ಪೂಜಿಸಿದವನು ದಾರಿದ್ರ್ಯವಿಲ್ಲದವನಾಗಿ ಮರಳಿ ಈ ಲೋಕದಲ್ಲಿ ಜನಿಸುವುದಿಲ್ಲ.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶೃಂಗಾರೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಐವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಮಾರ್ಕಂಡೇಶ್ವರಮಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯಾತಟಸಂಸ್ಥಿತಂ ।
ಘಟಿಕಾಸ್ಥಾನಮಿತಿ ಚ ಯತ್ರ ಸಿದ್ಧಃ ಪುರಾ ಋಷಿಃ ॥ ೧ ॥
ನಾಡ್ಯೈಕಯಾ ಮೃಕಂಡಸ್ತು ಧ್ಯಾನಯೋಗಾದ್ವರಾನನೇ ।
ತತ್ರೈವ ಸ್ಥಾಪಿತಂ ಲಿಂಗಂ ಮಾರ್ಕಂಡೇಶ್ವರನಾಮತಃ ।
ಸರ್ವಪಾಪೋಪಶಮನಂ ದರ್ಶನಾತ್ಪೂಜನಾದಪಿ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಮಾರ್ಕಂಡೇಶ್ವರಮಾಹಾತ್ಮ್ಯವರ್ಣನಂನಾಮ
ಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಕನ್ನಡದ ಅನುವಾದ

ಮಾರ್ಕಂಡೇಶ್ವರಮಾಹಾತ್ಮ್ಯವರ್ಣನ

೧-೨. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಅನಂತರ ಹಿರಣ್ಯಾ ನದಿಯದಡದಲ್ಲಿರುವ ಘಟಿಕಾಸ್ಥಾನಕ್ಕೆ ಹೋಗಬೇಕು. ಇಲ್ಲಿ ಹಿಂದೆ ಮೃಕಂಡನೆಂಬ ಮುನಿಯು ದರ್ಶನ ಪೂಜೆಗಳಿಂದ ಸಕಲ ಪಾಪಗಳನ್ನೂ ನೀಗಿಸುವ ಮಾರ್ಕಂಡೇಶ್ವರನನ್ನು ಪ್ರತಿಷ್ಠೆಮಾಡಿ ಒಂದು ಘಳಿಗೆ ಧ್ಯಾನಿಸಿ ಸಿದ್ಧಿಯನ್ನು ಹೊಂದಿದನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಮಾರ್ಕಂಡೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಅರುವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಏಕಷಷ್ಟ್ಯುತ್ತರಶ್ರಿಶತತಮೋಽಧ್ಯಾಯಃ

ಶೃಂಗೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಮಂಡೂಕೇಶ್ವರಮಿತ್ಯಪಿ ।
ಮಾಂಡುಕ್ಯಾಯನನಾಮ್ನಾ ವೈ ಲಿಂಗಂ ತತ್ರ ಪ್ರತಿಷ್ಠಿತಂ ॥ ೧ ॥

ತತ್ರ ಕೋಟಿಹ್ರದೋ ದೇವಿ ತಥಾ ಕೋಟೀಶ್ವರಃ ಶಿವಃ ।
ತತ್ರ ಮಾತೃಗಣಶ್ಚೈವ ಸ್ಥಿತಃ ಕಾಮಫಲಪ್ರದಃ ॥ ೨ ॥

ಸ್ನಾತ್ವಾ ಕೋಟಿಹ್ರದೇ ತೀರ್ಥೇ ತಲ್ಲಿಂಗಂ ಯಃ ಪ್ರಪೂಜಯೇತ್ ।
ಮಾತೄಸ್ತತ್ರೈವ ಸಂಪೂಜ್ಯ ದುಃಖಶೋಕಾದ್ವಿಮುಚ್ಯತೇ ॥ ೩ ॥

ಕನ್ನಡದ ಅನುವಾದ

ಶೃಂಗೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ ! ಬಳಿಕ ಮಾಂಡೂಕ್ಯಾಯನನು ಪ್ರತಿಷ್ಠೆಮಾಡಿರುವ ಮಂಡೂಕೇಶ್ವರನೆಡೆಗೆ ಹೋಗಬೇಕು.

೨. ಅಲ್ಲಿ ಕೋಟಿಹ್ರದವೂ, ಕೋಟೀಶ್ವರನೂ, ಇಷ್ಟಾರ್ಥಗಳನ್ನೀಯುವ ಮಾತೃಗಣಗಳೂ ಇರುವರು.

೩. ಕೋಟಿಹ್ರದ ತೀರ್ಥದಲ್ಲಿ ಮಿಂದು ಆ ಲಿಂಗವನ್ನೂ, ಮಾತೃಗಣಗಳನ್ನೂ ಪೂಜಿಸಿದವನು ದುಃಖಗಳಿಂದ ಮುಕ್ತನಾಗುವನು.

ತಸ್ಮಾತ್ಪೂರ್ವೇಣ ದೇವೇಶಿ ಯೋಜನೈಕೇನ ನಿರ್ಮಲಂ ।
ತ್ರಿತಕೂಪೇತಿ ವಿಖ್ಯಾತಂ ಸರ್ವಪಾತಕನಾಶನಂ ।
ಸರ್ವೇಷಾಂ ದೇವಿ ತೀರ್ಥಾನಾಂ ಯತ್ರತ್ರೈವ ವ್ಯವಸ್ಥಿತಿಃ ॥ ೪ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಶೃಂಗೇಶ್ವರಮಾಹಾತ್ಮ್ಯವರ್ಣನಂ ನಾಮ
ಏಕಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ॥

---

೪. ದೇವೇಶಿ ! ಅದರ ಪೂರ್ವದಲ್ಲಿ ಒಂದು ಯೋಜನ ದೂರದಲ್ಲಿ ನಿರ್ಮಲವಾದ ಸಕಲ ಪಾಪಗಳನ್ನು ಪರಿಹರಿಸುವ ತ್ರಿತಕೂಪವಿರುವುದು. ಅಲ್ಲಿ ಸಕಲ ತೀರ್ಥಗಳಿರುವುವು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಶೃಂಗೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಅರವತ್ತೊಂದನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ದ್ವಿಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಏಕಾದಶರುದ್ರಲಿಂಗಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಗೋಷ್ಪದಸ್ಯೋತ್ತರೇ ಸ್ಥಿತಂ ।
ಗವ್ಯೂತಿದ್ವಿತಯೇನೈವ ವಲಾಯು ಇತಿ ವಿಶ್ರುತಂ ॥ ೧ ॥
ತತ್ರೈಕಾದಶರುದ್ರಾಣಾಂ ಸ್ಥಾನಲಿಂಗಾನ್ಯಪಿ ಪ್ರಿಯೇ ।
ಅಜೈಕಪಾದಹಿರ್ಬುಧ್ನ್ಯಃ ಸಂತೀತ್ಯಾದೀನಿ ನಾಮತಃ ।
ಪೂಜಯೇತ್ತಾನಿ ವಿಧಿವನ್ಮುಚ್ಯತೇ ಸರ್ವಪಾತಕೈಃ ॥ ೨ ॥

ಇತಿ ಶ್ರೀ ಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಏಕಾದಶರುದ್ರಲಿಂಗಮಾಹಾತ್ಮ್ಯವರ್ಣನಂನಾಮ
॥ ದ್ವಿಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಏಕಾದಶರುದ್ರಲಿಂಗಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ತರುವಾಯ ಗೋಷ್ಪದದ ಉತ್ತರದಲ್ಲಿ ನಾಲ್ಕು ಮೈಲಿಗಳ ದೂರದಲ್ಲಿರುವ ವಲಾಯುವೆಂಬ ಕ್ಷೇತ್ರಕ್ಕೆ ಹೋಗಬೇಕು.

೨. ಪ್ರಿಯಳೆ! ಅಲ್ಲಿ ಏಕಾದಶರುದ್ರರ ಅಜೈಕಪಾತ್ ಇತ್ಯಾದಿ ಹೆಸರುಳ್ಳ ಲಿಂಗಗಳಿರುವುವು. ಅವುಗಳನ್ನು ವಿಧಿಯಂತೆ ಪೂಜಿಸಿದವನು ಸಕಲ ಪಾಪಗಳಿಂದ ಮುಕ್ತನಾಗುವನು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀ ಸ್ಕಾಂದಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಏಕಾದಶರುದ್ರಲಿಂಗಮಾಹಾತ್ಮ್ಯವರ್ಣನವೆಂಬ
ಮುನ್ನೂರಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ।

ತ್ರಿಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಹಿರಣ್ಯಾತುಂಡಪುರಘರ್ಘರಹ್ರದಕಂದೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯಾತಟಸಂಸ್ಥಿತಂ ।
ಸ್ಥಾನಂ ತುಂಡಪುರಂ ನಾಮ ಯತ್ರಾಽಸೌ ಘರ್ಘರೋ ಹ್ರದಃ ॥ ೧ ॥
ತತ್ರ ಕಂದೇಶ್ವರೋ ದೇವೋ ಯತ್ರ ಬದ್ಧಾ ಜಟಾ ಮಯಾ ।
ತತ್ರ ಸ್ನಾತ್ವಾ ನರಃ ಸಮ್ಯಕ್ತಂ ದೇವಂ ಯಃ ಪ್ರಪೂಜಯೇತ್ ।
ಸ ಮುಕ್ತಃ ಪಾತಕೈರ್ಘೋರೈಃ ಪ್ರಾಪ್ನುಯಾಚ್ಛಾಸನಂ ಶುಭಂ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಹಿರಣ್ಯಾತುಂಡಪುರಘರ್ಘರಹ್ರದಕಂದೇಶ್ವರಮಾಹಾತ್ಮ್ಯವರ್ಣನಂನಾಮ
ತ್ರಿಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಹಿರಣ್ಯಾತುಂಡಪುರಘರ್ಘರಹ್ರದಕಂದೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ :—ಮಹಾದೇವಿ! ಬಳಿಕ ಹಿರಣ್ಯಾತಟದಲ್ಲಿರುವ ತುಂಡಪುರವೆಂಬ ಸ್ಥಾನಕ್ಕೆ ಹೋಗಬೇಕು. ಅಲ್ಲಿ ಘರ್ಘರವೆಂಬ ಮಡುವಿರುವುದು.

೨. ಅಲ್ಲಿ ಕಂದೇಶ್ವರನು ನೆಲಸಿರುವನು. ನಾನು ಅಲ್ಲಿ ಜಟೆಯನ್ನು ಕಟ್ಟಿರುವೆನು. ಮನುಷ್ಯನು ಅಲ್ಲಿಮಿಂದು ಆ ಕಂದೇಶ್ವರನನ್ನು ಪೂಜಿಸಿದರೆ ಘೋರ ಪಾಪಗಳಿಂದ ಮುಕ್ತನಾಗುವನೆಂದು ಶಿವನಾಜ್ಞೆಯಿರುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಶ್ರೀಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಹಿರಣ್ಯಾತುಂಡಪುರಘರ್ಘರಹ್ರದಕಂದೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರಅರುವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಚತುಃಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಸಂವರ್ತೇಶ್ವರಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಸಂವರ್ತೇಶ್ವರಮುತ್ತಮಂ ।
ಇಂದ್ರೇಶ್ವರಾತ್ಪಶ್ಚಿಮತಃ ಪೂರ್ವತಶ್ಚಾರ್ಕಭಾಸ್ಕರಾತ್ ॥ ೧ ॥
ತಂ ದೃಷ್ಟ್ವಾ ತು ಮಹಾದೇವಂ ಸ್ನಾತ್ವಾ ಪುಷ್ಕರಿಣೀಜಲೇ ।
ದಶಾನಾಮಶ್ವಮೇಧಾನಾಂ ಫಲಮಾಪ್ನೋತಿ ಮಾನವಃ ॥ ೨ ॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಸಂವರ್ತೇಶ್ವರಮಾಹಾತ್ಮ್ಯವರ್ಣನಂನಾಮ
॥ ಚತುಃಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ ॥

ಕನ್ನಡದ ಅನುವಾದ

ಸಂವರ್ತೇಶ್ವರಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ತರುವಾಯ ಇಂದ್ರೇಶ್ವರನ ಪಶ್ಚಿಮದಲ್ಲಿಯೂ, ಅರ್ಕಭಾಸ್ಕರನ ಪೂರ್ವದಲ್ಲಿಯೂ ಇರುವ ಸಂವರ್ತೇಶ್ವರನೆಡೆಗೆ ಹೋಗಬೇಕು.

೨. ಮಾನವನು ಆ ಮಹಾದೇವನನ್ನು ಕಂಡು ಪುಷ್ಕರಿಣೀ ನೀರಿನಲ್ಲಿ ಮಿಂದರೆ ಹತ್ತು ಅಶ್ವಮೇಧಯಾಗಗಳ ಫಲವನ್ನು ಪಡೆಯುವನು.

ಇಲ್ಲಿಗೆ ಎಂಬತ್ತೊಂದು ಸಾವಿರ ಗ್ರಂಥಗಳುಳ್ಳ ಶ್ರೀ ಸ್ಕಾಂದ ಮಹಾಪುರಾಣದ
ಏಳನೆಯ ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಸಂವರ್ತೇಶ್ವರಮಾಹಾತ್ಮ್ಯವರ್ಣನವೆಂಬ
ಮುನ್ನೂರ ಅರುವತ್ತನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಪಂಚಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ

ಪ್ರಕೀರ್ಣಸ್ಥಾನಲಿಂಗಮಾಹಾತ್ಮ್ಯವರ್ಣನಂ

ಈಶ್ವರ ಉವಾಚ :—

ತತೋ ಗಚ್ಛೇನ್ಮಹಾದೇವಿ ಹಿರಣ್ಯಾಯಾಶ್ಚ ಉತ್ತರೇ ।
ಸಿದ್ಧಿಸ್ಥಾನಾನಿ ದಿವ್ಯಾನಿ ಯತ್ರ ಸಿದ್ಧಾ ಮಹರ್ಷಯಃ ॥ ೧ ॥
ತತ್ರ ಲಿಂಗಾನ್ಯನೇಕಾನಿ ಶಕ್ಯಂತೇ ಕಥಿತುಂ ನ ಹಿ ।
ಸಾಗ್ರಂ ಶತಂ ಪುನಸ್ತತ್ರ ಲಿಂಗಾನಾಂ ಪ್ರವರಂ ಸ್ಮೃತಂ ॥ ೨ ॥
ವಜ್ರಿಣ್ಯಾಸ್ತು ತಟೇ ದೇವಿ ಲಿಂಗಾನ್ಯೇಕೋನವಿಂಶತಿಃ ।
ನ್ಯಂಕುಮತ್ಯಾಸ್ತಟೇ ದೇವಿ ಸಹಸ್ರಂ ದ್ವಿಶತಾಧಿಕಂ ॥ ೩ ॥
ಪ್ರಾಧಾನ್ಯೇನ ವರಾರೋಹೇ ಪೂರ್ವೇ ಸ್ವಾಯಂಭುವೇಽನ್ತರೇ ।
ಕಪಿಲಾಯಾಸ್ತಟೇ ದೇವಿ ಲಿಂಗಾನಾಂ ಷಷ್ಟಿರುತ್ತಮಾ ॥ ೪ ॥
ಸರಸ್ವತ್ಯಾಂ ಪುನಸ್ತತ್ರ ಲಿಂಗಸಂಖ್ಯಾ ನ ವಿದ್ಯತೇ ।
ಏವಂ ಪಂಚಮುಖಾ ದೇವಿ ಲಿಂಗಮಾಲಾ ವಿಭೂಷಿತಾ ॥ ೫ ॥

ಕನ್ನಡದ ಅನುವಾದ

ಪ್ರಕೀರ್ಣಸ್ಥಾನಲಿಂಗಮಾಹಾತ್ಮ್ಯವರ್ಣನ

೧. ಈಶ್ವರನು ಹೇಳುತ್ತಾನೆ:—ಮಹಾದೇವಿ! ಬಳಿಕ ಹಿರಣ್ಯಾನದಿಯ ಉತ್ತರವಲ್ಲಿ ಮಹರ್ಷಿಗಳು ಸಿದ್ಧಿಯನ್ನು ಪಡೆದಿರುವ ದಿವ್ಯಸಿದ್ಧಿ ಸ್ಥಾನಗಳಿಗೆ ಹೋಗಬೇಕು.

೨. ಅಲ್ಲಿ ಅನೇಕಲಿಂಗಗಳಿರುವುವು. ಅವುಗಳನ್ನು ಹೇಳಲು ಸಾಧ್ಯವಿಲ್ಲ. ಅಲ್ಲಿ ನೂರಕ್ಕಿಂತಲೂ ಹೆಚ್ಚಾದ ಉತ್ತಮ ಲಿಂಗಗಳಿರುವುವು.

೩–೪. ದೇವಿ! ಸ್ವಾಯಂಭುವ ಮನ್ವಂತರದಲ್ಲಿ ವಜ್ರಿಣಿಯ ದಡದಲ್ಲಿ ಹತ್ತೊಂಬತ್ತು ಲಿಂಗಗಳೂ, ನ್ಯಂಕುಮತಿಯ ದಡದಲ್ಲಿ ಸಾವಿರದ ಇನ್ನೂರು ಲಿಂಗಗಳೂ, ಕಪಿಲಾತಟದಲ್ಲಿ ಅರುವತ್ತು ಲಿಂಗಗಳೂ ಇರುವುವು.

೫–೬. ಅಲ್ಲಿರುವ ಸರಸ್ವತಿಯ ದಡದಲ್ಲಿರುವ ಲಿಂಗಗಳ ಸಂಖ್ಯೆಯನ್ನು ಹೇಳಲು ಸಾಧ್ಯವಿಲ್ಲ. ದೇವಿ! ಹೀಗೆ ಪ್ರಭಾಸದಲ್ಲಿರುವ ಲಿಂಗಗಳ ಸಾಲುಗಳಿಂದ

ಪ್ರಭಾಸೇ ಕಥಿತಾ ದೇವಿ ಪಂಚಸ್ರೋತಾಃ ಸರಸ್ವತೀ ।
ಯಸ್ಯಾಃ ಪ್ರವಾಹೈಃ ಸಂಭಿನ್ನಂ ಕ್ಷೇತ್ರಂ ದ್ವಾದಶಯೋಜನಂ ॥ ೬ ॥
ತತ್ರ ವಾಪೀಷು ಕೂಪೇಷು ಯತ್ರ ತತ್ರೋದ್ಭವಂ ಜಲಂ ।
ಸಾರಸ್ವತಂ ತು ತಜ್ಜ್ಞೇಯಂ ತೇ ಧನ್ಯಾ ಯೇ ಪಿಬಂತಿ ತತ್ ॥ ೭ ॥
ಯತ್ರ ತತ್ರ ನರಃ ಸ್ನಾತ್ವಾ ಸಮ್ಯಕ್ ಶ್ರದ್ಧಾಸಮನ್ವಿತಃ ।
ಸಾರಸ್ವತಸ್ನಾನಫಲಂ ಲಭತೇ ನಾತ್ರ ಸಂಶಯಃ ॥ ೮ ॥
ಯತ್ಪ್ರೋಕ್ತಂ ಸ್ಪರ್ಶಲಿಂಗಂ ತು ಶ್ರೀಸೋಮೇಶೇತಿ ವಿಶ್ರುತಂ ।
ಪ್ರಭಾಸಕ್ಷೇತ್ರಲಿಂಗಾನಾಂ ಕಲಾ ತಸ್ಯೈವ ಶಾಂಕರೀ ॥ ೯ ॥
ಯದ್ವಾ ತದ್ವಾ ಪೂಜಯಿತ್ವಾ ಲಿಂಗಂ ಕ್ಷೇತ್ರಸ್ಯ ಮಧ್ಯಗಂ ।
ಶ್ರೀಸೋಮೇಶಮಿತಿ ಜ್ಞಾತ್ವಾ ಸೋಮೇಶಃ ಪೂಜಿತೋ ಭವೇತ್ ॥೧೦॥

ಇತಿ ಶ್ರೀಸ್ಕಾಂದೇ ಮಹಾಪುರಾಣ ಏಕಾಶೀತಿತಸಾಹಸ್ರ್ಯಾಂ ಸಂಹಿತಾಯಾಂ ಸಪ್ತಮೇ
ಪ್ರಭಾಸಖಂಡೇ ಪ್ರಥಮೇ ಪ್ರಭಾಸಕ್ಷೇತ್ರಮಾಹಾತ್ಮ್ಯೇ
ಪ್ರಕೀರ್ಣಸ್ಥಾನಲಿಂಗಮಾಹಾತ್ಮ್ಯವರ್ಣನಂನಾಮ
॥ ಪಂಚಷಷ್ಟ್ಯುತ್ತರತ್ರಿಶತತಮೋಽಧ್ಯಾಯಃ ॥

ಅಲಂಕಾರಗೊಂಡ ಪಂಚಮುಖಗಳುಳ್ಳ ಸರಸ್ವತಿಯನ್ನು ಹೇಳಿರುವೆನು. ಇವಳ ಪ್ರವಾಹಗಳಿಂದ ಕೂಡಿದ ಕ್ಷೇತ್ರವು ಹನ್ನೆರಡು ಯೋಜನ ವಿಸ್ತೀರ್ಣವಾಗಿರುವುದು.

೭. ಆ ಪ್ರಭಾಸದಲ್ಲಿ ಎಲ್ಲಿಯಾದರೂ ವಾಪಿ ಕೂಪಗಳಲ್ಲಿರುವ ನೀರನು ಸರಸ್ವತಿಯ ಜಲವನ್ನಾಗಿ ತಿಳಿಯಬೇಕು. ಅದನ್ನು ಕುಡಿದ ಮಾನವರು ಧನ್ಯರು.

೮. ಮನುಷ್ಯನು ಅಲ್ಲಿ ಎಲ್ಲಿಯಾದರೂ ಶ್ರದ್ಧೆಯಿಂದ ಮಿಂದರೆ ಸರಸ್ವತೀ ಸ್ನಾನದ ಫಲವನ್ನು ಪಡೆಯುವನು.

೯. ಪ್ರಭಾಸ ಕ್ಷೇತ್ರದಲ್ಲಿರುವ ಲಿಂಗಗಳಲ್ಲಿ ಹಿಂದೆ ಹೇಳಿರುವ ಸ್ಪರ್ಶಲಿಂಗವಾದ ಶ್ರೀ ಸೋಮೇಶನ ಕಲೆಯೇ ಇರುವುದು.

೧೦. ಆ ಪ್ರಭಾಸ ಕ್ಷೇತ್ರದಲ್ಲಿರುವ ಲಿಂಗಗಳನ್ನು ಶ್ರೀ ಸೋಮೇಶನೆಂದೇ ತಿಳಿದು ಹೇಗಾದರೂ ಪೂಜಿಸಿದರೆ ಸೋಮೇಶನನ್ನು ಪೂಜಿಸಿದಂತೆಯೇ ಆಗುವುದು.

ಇಲ್ಲಿಗೆ ಎಂಬತ್ತೊಂದು ಸಾವಿರಗ್ರಂಥಗಳುಳ್ಳ ಸ್ಕಾಂದಮಹಾಪುರಾಣದ ಏಳನೆಯ
ಪ್ರಭಾಸಖಂಡದ ಮೊದಲನೆಯ ಪ್ರಭಾಸಕ್ಷೇತ್ರಮಾಹಾತ್ಮ್ಯದಲ್ಲಿ
ಪ್ರಕೀರ್ಣಸ್ಥಾನಲಿಂಗಮಾಹಾತ್ಮ್ಯವರ್ಣನವೆಂಬ
ಮುನ್ನೂರಅರುವತ್ತೈದನೆಯ ಅಧ್ಯಾಯವು ಮುಗಿದುದು.

ಪ್ರಭಾಸಕ್ಷೇತ್ರ ಮಾಹಾತ್ಮ್ಯಂ ಸಂಪೂರ್ಣಂ